॥ ಶ್ರೀಃ ॥

ಶ್ರೀ ಆನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತ

ಶ್ರೀ ಸರ್ವಮೂಲ ಗ್ರಂಥಗಳು

(ಕನ್ನಡ ಅನುವಾದ ವಿವರಣೆ ಸಹಿತ)

ಸಂಪುಟ -೨೦

ಶ್ರೀಮದ್ಭಾಗವತ ತಾತ್ಪರ್ಯನಿರ್ಣಯ

ಭಾಗ - ೮

(ಏಕಾದಶ ಸ್ಕಂಧ ಪೂರ್ವಾರ್ಧ)

ಅನುವಾದಕರು
ವಿದ್ವಾನ್ ಕೆ.ಹಯವದನ ಪುರಾಣಿಕ, ಎಮ್.ಎ.

ಪ್ರಕಾಶಕರು
ಅಖಿಲ ಭಾರತ ಮಾಧ್ವ ಮಹಾ ಮಂಡಲ (ರಿ), ಉಡುಪಿ
ಪೂರ್ಣಪ್ರಜ್ಞ ವಿದ್ಯಾಪೀಠ
ಬೆಂಗಳೂರು - 560 028

Kannada Sarvamoola Vol 20- SRIMADBHAGAVATHA TATPARYA NIRNAYA (Part VIII) Ekadashaa Skanda Poorvardha)
with kannada translation and notes
Published by **Akhila Bharata Madhwa Maha Mandala(R) Udupi,**
Poornaprajna Vidyapeetha, Bangalore-560028

ಅಖಿಲ ಭಾರತ ಮಾಧ್ವ ಮಹಾಮಂಡಲದ 'ವಜ್ರ ಮಹೋತ್ಸವ'ವು ಡಿಸೆಂಬರ್ 2013ರಲ್ಲಿ ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ನಡೆದ ಸಂದರ್ಭದಲ್ಲಿ ಮಂಡಲದ ಸಂರಕ್ಷಕರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು, ಪೇಜಾವರ ಮಠ, ಉಡುಪಿ ಇವರು ಬಿಡುಗಡೆಗೊಳಿಸಿದರು.

ಪುಟಗಳು : 588

ಮೊದಲನೆ ಮುದ್ರಣ 2013 ಪ್ರತಿ ಬೆಲೆ : ರೂ.300/-

ಪ್ರತಿಗಳು : 2000

ಗ್ರಂಥಗಳು ದೊರೆಯುವ ಸ್ಥಳ

ಅಖಿಲ ಭಾರತ ಮಾಧ್ವ ಮಹಾ ಮಂಡಲದ ಕಾರ್ಯಾಲಯ

ಪೂರ್ಣಪ್ರಜ್ಞ ವಿದ್ಯಾಪೀಠ, ಪೂರ್ಣಪ್ರಜ್ಞನಗರ, ಬೆಂಗಳೂರು-28

ಮುಖಪುಟ ವಿನ್ಯಾಸ : **ಶ್ರೀ ಹೆಚ್.ಎನ್. ನಾರಾಯಣ ರಾವ್**

ಅಕ್ಷರ ಜೋಡಣೆ : **ಪ್ರೇಮ್‌ಕುಮಾರ್**

ಮುದ್ರಣ : **ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್, ನ್ಯೂತರಗು ಪೇಟೆ, ಬೆಂಗಳೂರು.**

ಅನುಗ್ರಹ ಸಂದೇಶ

ಶ್ರೀಮದ್ಭಾಗವತವು ಯದ್ ವೈಷ್ಣವಾನಾಂ ಧನಮ್ - ವೈಷ್ಣವರ ದೊಡ್ಡ ಆಸ್ತಿ. ಮಹಾಭಾರತ ಹಾಗೂ ಇತರ ಪುರಾಣಗಳನ್ನು ರಚಿಸಿದ ವೇದವ್ಯಾಸರು ಅತೃಪ್ತರಂತೆ ನಟಿಸಿ ಈ ಪುರಾಣವನ್ನು ರಚಿಸಿದ್ದಾರೆ. ಅಲ್ಲದೆ, ಇತರ ಪುರಾಣಗಳನ್ನು ರೋಮಹರ್ಷಣ ಸೂತರಿಗೆ ಪ್ರಚಾರಕ್ಕಾಗಿ ನೀಡಿದರೆ, ಭಾಗವತವನ್ನು ತಮ್ಮ ಮಗನಾದ ಶುಕಾ ಚಾರ್ಯರಿಗೇ ನೀಡಿದ್ದಾರೆ. ಹೀಗೆ ಶ್ರೀ ವೇದವ್ಯಾಸರು ~~ಕಲಿಕಾಲದ ಸಜ್ಜನರ ಶ್ರೇಯಸ್ಸಿಗಾಗಿಯೇ ರಚಿಸಿರುವ ಪುರಾಣ ಭಾಗವತ.~~

ಶ್ರೀ ಮಧ್ವಾಚಾರ್ಯರು ಭಾಗವತ ಪುರಾಣದ ಅರ್ಥನಿರ್ಣಯ ಕ್ಕಾಗಿಯೇ ಗ್ರಂಥವೊಂದನ್ನು ರಚಿಸಿದ್ದಾರೆ. ಬಾಲ್ಯದಿಂದಲೇ ಭಾಗವತ ಗ್ರಂಥವನ್ನು ಮುಖೋದ್ಗತವಾಗಿ ಹೇಳಿ ಗುರುಗಳಿಗೆ ಅಚ್ಚರಿಪಡಿಸಿದ್ದಲ್ಲದೆ ತಮ್ಮ ಶಿಷ್ಯರಾದ ಶ್ರೀ ಹೃಷೀಕೇಶತೀರ್ಥರಿಂದ ರಾಗಬದ್ಧವಾಗಿ ಭಾಗವತದ ಶ್ಲೋಕಗಳನ್ನು ಹಾಡಿಸಿ ತಾವು ಅದರ ವಿವರಣೆಯನ್ನು ಸಾರ್ವಜನಿಕ ಸಭೆಗಳಲ್ಲಿ ನಿರೂಪಿಸುತ್ತಿದ್ದರು. ಹೀಗೆ ಆಚಾರ್ಯರಿಗೂ ಅತ್ಯಂತ ಪ್ರಿಯವಾದ ಪುರಾಣ ಶ್ರೀಮದ್ಭಾಗವತ.

ಶ್ರೀಮದಾಚಾರ್ಯರು ಭಾಗವತದ ಅರ್ಥನಿರ್ಣಯಕ್ಕಾಗಿ ಬರೆದಿರುವ ಈ ಗ್ರಂಥ ಭಾಗವತದ ಅಧ್ಯಯನಕ್ಕೆ ಅತ್ಯಂತ ಅವಶ್ಯಕವಾದ ಒಂದು ಕೈಪಿಡಿ. ಮಹಾಭಾರತ ಮತ್ತು ಭಾಗವತಗಳಿಗೆ ವಿರೋಧ ಬಂದಾಗ ಶ್ರೀ ವೇದವ್ಯಾಸರೇ ರಚಿಸಿದ ಇತರ ಪುರಾಣಗಳ ಆಧಾರವನ್ನು ಕೊಟ್ಟು ವಿರೋಧವನ್ನು ಪರಿಹರಿಸಿರುವುದು ಆಚಾರ್ಯರಿಗೆ ಪುರಾಣ ಸಾಹಿತ್ಯದಲ್ಲಿದ್ದ ಸಂಶೋಧಕ ದೃಷ್ಟಿಯನ್ನು ಈ ಗ್ರಂಥ ಸ್ಪಷ್ಟಪಡಿಸುತ್ತದೆ. ಭಾಗವತದಲ್ಲಿ ಬರುವ ಅನೇಕ ಕ್ಲಿಷ್ಟವಾದ, ಅಪಾರ್ಥವಾಗುವ ಶ್ಲೋಕಗಳಿಗೆ ಪ್ರಮಾಣಬದ್ಧವಾದ ವಿವರಣೆಯೂ ಈ ಗ್ರಂಥದಲ್ಲಿದೆ. ಇತರ ವ್ಯಾಖ್ಯಾನಕಾರರು ಹಿಡಿದಿರುವ ಪಾಠಗಳಿಗಿಂತ

ಉತ್ತಮವಾದ, ವೇದವ್ಯಾಸರಿಗೆ, ಶ್ರುತಿಗಳಿಗೆ ಸಮ್ಮತವಾದ ಅಪೂರ್ವ ಪಾಠಗಳನ್ನು ಆಚಾರ್ಯರು ತೋರಿಸಿಕೊಟ್ಟಿದ್ದಾರೆ. ಹೀಗೆ ಭಾಗವತದ ವಸ್ತುನಿಷ್ಠ ಅಧ್ಯಯನಕ್ಕೆ ಅನಿವಾರ್ಯವಾದ ಗ್ರಂಥ ಇದು.

ನಮ್ಮ ಪ್ರಿಯಶಿಷ್ಯರಾದ ಶ್ರೀ ಹಯವದನ ಪುರಾಣಿಕರು ಭಾಗವತದ ತಾತ್ಪರ್ಯದ ಪ್ರಥಮ, ದ್ವಿತೀಯ, ತೃತಿಯ, ಚತುರ್ಥ, ಪಂಚಮ, ಷಷ್ಠಮ, ಸಪ್ತಮ, ಅಷ್ಟಮ, ನವಮ, ದಶಮ ಸ್ಕಂಧದ ಕನ್ನಡಾನುವಾದವನ್ನು ಮಾಡಿದ್ದು, ಏಳು ಸಂಪುಟಗಳಲ್ಲಿ ಬಿಡುಗಡೆ ಹೊಂದಿದೆ. ಕನ್ನಡ ಸರ್ವಮೂಲ ಗ್ರಂಥಗಳಲ್ಲಿ ಈಗಾಗಲೇ ಮಹಾಭಾರತ ತಾತ್ಪರ್ಯ ನಿರ್ಣಯದ ಸಮಗ್ರ ಕನ್ನಡ ಅನುವಾಧವನ್ನು ಮಾಡಿರುವ ಪುರಾಣಿಕರು ಈಗಾಗಲೇ ಜನರ ಅಭಿಮಾನ ಗಳಿಸಿರುತ್ತಾರೆ. ನ್ಯಾಯ, ವೇದಾಂತಗಳಲ್ಲಿ ಉತ್ತಮ ಪಾಂಡಿತ್ಯವಿದ್ದರೆ ಮಾತ್ರ ಭಾಗವತ ತಾತ್ಪರ್ಯದ ಸರಿಯಾದ ಅನುವಾದ ಮಾಡಲು ಸಾಧ್ಯ. ಅಂತಹ ~~ಅರ್ಹತೆ ಹಯವದನ ಪುರಾಣಿಕರಿಗೆ ಇದೆ. ಪ್ರಕೃತ ಶ್ರೀಯುತರು ಇದರ ಏಕಾದಶ~~ ಸ್ಕಂಧದ ಪೂರ್ವಾರ್ಧದ ಕನ್ನಡಾನುವಾದವನ್ನು (ಸರ್ವ ಮೂಲ ೨೦ನೇ ಸಂಪುಟ) ಮಾಡಿದ್ದು ಬಿಡುಗಡೆಗೆ ಸಿದ್ಧವಾಗಿದೆ. ಆದ್ದರಿಂದ ನಿರ್ದಿಷ್ಟವಾದ ಈ ಅನುವಾದದ ಉಪಯೋಗವನ್ನು ಜಿಜ್ಞಾಸುಗಳು ಪಡೆದು, ಶ್ರೀಹರಿಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ನಾವು ಅಪೇಕ್ಷಿಸುತ್ತೇವೆ.

ಶ್ರೀ ವಿಶ್ವೇಶತೀರ್ಥಶ್ರೀಪಾದರು
ಶ್ರೀ ಪೇಜಾವರ ಅಧೋಕ್ಷಜ ಮಠ
ಉಡುಪಿ

ಬೆಂಗಳೂರು
ತಾ|| 1.12.2013

ಸಂಪಾದಕ ಮಂಡಳಿಯ ನಿವೇದನೆ

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಚತುರ್ಥ ಪರ್ಯಾಯದ ಶ್ರೀ ಮಧ್ವನವಮಿಯ ಶುಭ ಅವಸರದಲ್ಲಿ ಉಡುಪಿಯಲ್ಲಿ ಪ್ರಕಟಗೊಂಡಿತು. ನಂತರ ೨೦೦೩ ರಲ್ಲಿ ಶ್ರೀಮದನುವ್ಯಾಖ್ಯಾನ ಭಾಗ ೧, (ಮೊದಲಿನ ಐದು ಸೂತ್ರಗಳನ್ನು ಒಳಗೊಂಡ ಸರ್ವಮೂಲ ಸಂಪುಟ ಕ್ರಮಸಂಖ್ಯೆ ೧೨) ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಹಾಗೂ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಂದ ನಡೆಸಲ್ಪಟ್ಟ ೨೫ನೇ ಅನುವ್ಯಾಖ್ಯಾನ ನ್ಯಾಯಸುಧಾ ಮಂಗಳ ಮಹೋತ್ಸವದ ಸಂದರ್ಭದಲ್ಲಿ ಬಿಡುಗಡೆಗೊಂಡಿತು.

ಪ್ರಕೃತ, ಪುರಾಣಗಳಲ್ಲಿ ಒಂದಾದ ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ಮೊದಲನೇ ಭಾಗದ (ಸರ್ವಮೂಲ ಕ್ರಮಸಂಖ್ಯೆ ೧೩, ಪ್ರಥಮ ಹಾಗೂ ದ್ವಿತೀಯ ಸ್ಕಂಧ) ಕನ್ನಡ ಅನುವಾದ, ನಾಡಿನ ಹಿರಿಯ ವಿದ್ವಾಂಸರಾದ ವಿದ್ವಾನ್ ಶ್ರೀ ಕೆ. ಹಯವದನ ಪುರಾಣಿಕರಿಂದ ಅನುವಾದಿತ ಈ ಗ್ರಂಥವು ೨೩ನೇ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಹಾಗೂ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ನಡೆಸಿದ ತಮ್ಮ ೨೬ನೇ ಶ್ರೀ ಅನುವ್ಯಾಖ್ಯಾನ ನ್ಯಾಯಸುಧಾ ಮಂಗಳ ಮಹೋತ್ಸವದ ಸಂದರ್ಭದಲ್ಲಿ, ೨೦೦೪ನೇ ಜನವರಿ ೨೦ ರಂದು ಧಾರವಾಡದಲ್ಲಿ ಪ್ರಕಟಗೊಂಡಿತು. ನಂತರ ಇವರಿಂದಲೇ ಅನುವಾದಿತವಾದ ಈ ಗ್ರಂಥದ ೩ನೇ ಸ್ಕಂಧವು (ಸರ್ವಮೂಲ ಕ್ರಮಸಂಖ್ಯೆ ೧೪) ೨೦೦೬ ರಲ್ಲಿ, ಚೆನ್ನೈ ನಗರದ ೨೫ನೇ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನದಲ್ಲಿ ಬಿಡುಗಡೆಗೊಂಡಿತು. ಇದೇ ಗ್ರಂಥದ ಚತುರ್ಥಸ್ಕಂಧದ ಕನ್ನಡ ಅನುವಾದವು (ಸರ್ವಮೂಲ ಕ್ರಮಸಂಖ್ಯೆ ೧೫) ೨೦೦೭ನೇ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಬಿಡುಗಡೆಗೊಂಡಿತು. ನಂತರ ಸರ್ವಮೂಲ ಕ್ರಮಸಂಖ್ಯೆ ೧೬ (ಪಂಚಮ ಹಾಗೂ ಷಷ್ಠ ಸ್ಕಂಧದ) ಕನ್ನಡ ಅನುವಾದವು ಮೈಸೂರಿನಲ್ಲಿ ನಡೆದ ಅಖಿಲ ಭಾರತ ಮಾಧ್ವ ಮಹಾ ಮಂಡಲದ ೨೬ನೇ ತತ್ವಜ್ಞಾನ ಸಮ್ಮೇಳನದಲ್ಲಿ

ಮಾರ್ಚ್ ೧೬, ೨೦೦೮ರಂದು ಬಿಡುಗಡೆಗೊಂಡಿತು. ಸಪ್ತಮ, ಅಷ್ಟಮ ಹಾಗೂ ನವಮ ಸ್ಕಂಧದ ಕನ್ನಡ ಅನುವಾದವು ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ದಶಮಸ್ಕಂಧ (ಪೂರ್ವಾರ್ಧ, ರುಕ್ಮಿಣಿ ಕಲ್ಯಾಣ ಮಹೋತ್ಸವವನ್ನೊಳಗೊಂಡ ೫೪ನೇ ಅಧ್ಯಾಯ (ಸರ್ವಮೂಲ ಕ್ರಮಸಂಖ್ಯೆ - ೧೮) ವಿದ್ವಾನ್ ಶ್ರೀ ಕೆ.ಹಯವದನ ಪುರಾಣಿಕರು ಅನುವಾದಿಸಿದ ಗ್ರಂಥವು ತಾ|| ೨೪-೦೬-೨೦೧೧ ರಂದು ಬಿಡುಗಡೆಗೊಂಡಿತು.

ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ದಶಮಸ್ಕಂಧ (ಉತ್ತರಾರ್ಧ ಸಂಪೂರ್ಣ) (ಸರ್ವಮೂಲ ಕ್ರಮಸಂಖ್ಯೆ - ೧೯) ವಿದ್ವಾನ್ ಶ್ರೀ ಕೆ.ಹಯವದನ ಪುರಾಣಿಕರು ಅನುವಾದಿಸಿದ ಗ್ರಂಥವು ತಾ|| ೨೨-೦೬-೨೦೧೨ರಂದು ಬಿಡುಗೊಡೆಗೊಂಡಿತು.

ಪ್ರಸ್ತುತ, ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ಏಕಾದಶ ಸ್ಕಂಧ (ಪೂರ್ವಾರ್ಧ) (ಸರ್ವಮೂಲ ಕ್ರಮಸಂಖ್ಯೆ - ೨೦) ವಿದ್ವಾನ್ ಶ್ರೀ ಕೆ.ಹಯವದನ ಪುರಾಣಿಕರು ಅನುವಾದಿಸಿದ ಗ್ರಂಥವು ತಾ|| ೧೫-೧೨-೨೦೧೩ ರಂದು ಅಖಿಲ ಭಾರತ ಮಾಧ್ವ ಮಹಾಮಂಡಲದ ವಜ್ರಮಹೋತ್ಸವದ ಶುಭ ಸಂದರ್ಭದಲ್ಲಿ ಬಿಡುಗೊಡೆಗೊಳ್ಳುತ್ತಿದೆ.

ಈ ಸಂಪುಟದ ಕನ್ನಡ ಅಕ್ಷರ ಜೋಡಣೆಯ ಕಾರ್ಯವನ್ನು ಶ್ರೀ ಆರ್.ಎಸ್. ಪ್ರೇಮ್‌ಕುಮಾರ್ ಹಾಗೂ ಆಂಗ್ಲಭಾಷಾ ಅಕ್ಷರ ಜೋಡಣೆಯನ್ನು ಎಂ.ಫಣಿ ಆವರು ವಹಿಸಿಕೊಂಡು ಅಂದವಾಗಿ ಮಾಡಿಕೊಟ್ಟಿದ್ದಾರೆ. ಮುಖಪುಟವಿನ್ಯಾಸ, ಇತರೇ ಕಾರ್ಯಗಳಿಗೆ ಹಾಗೂ ಈ ಸಂಪುಟದ ಪ್ರಕಟಣೆಗೆ - ಎಲ್ಲಾ ಹಂತದಲ್ಲಿ ಶ್ರಮಿಸಿದ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹೆಚ್.ಎನ್. ನಾರಾಯಣ ರಾವ್ ಇವರಿಗೂ ಹಾಗೂ ಇತರೇ ಮಂಡಲದ ಸಿಬ್ಬಂದಿಗಳಿಗೂ ಅಭಿನಂದನೆಗಳು. ಈ ಸಂಪುಟದ ಮುದ್ರಣದ ಕಾರ್ಯವನ್ನು ನಿರ್ವಹಿಸಿದ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೂ ಅಭಿನಂದನೆಗಳು.

ಬೆಂಗಳೂರು
1-12-2013

ಮಹಾ ಮಹೋಪಾಧ್ಯಾಯ
ಪ್ರೊ|| ಕೆ.ಟಿ. ಪಾಂಡುರಂಗಿ
ಕಾರ್ಯಾಧ್ಯಕ್ಷರು
ಸಂಪಾದಕ ಮಂಡಳಿ

ಪ್ರಕಾಶಕರ ನುಡಿ

ಅಖಿಲ ಭಾರತ ಮಾಧ್ವ ಮಹಾ ಮಂಡಲವು ಕ್ರಿ.ಶ. ೧೯೮೬ ನೇ ವರ್ಷದಲ್ಲಿ ಸರ್ವಮೂಲದ ಕನ್ನಡ ಅನುವಾದದ ಆವೃತ್ತಿಗಳನ್ನು ಹೊರತರುವ ನಿರ್ಧಾರವನ್ನು ಕೈಗೊಂಡಿತು. ಸುಮಾರು ೨೩ ವರ್ಷಗಳಲ್ಲಿ ಹದಿನಾರು ಸಂಪುಟಗಳನ್ನು ತರಲಾಗಿದೆ. ಗೀತಾಪ್ರಸ್ಥಾನ (ಗೀತಾಭಾಷ್ಯ ಹಾಗೂ ಗೀತಾ ತಾತ್ಪರ್ಯ ನಿರ್ಣಯ), ಉಪನಿಷತ್ ಪ್ರಸ್ಥಾನ ಹತ್ತು ಉಪನಿಷತ್ (೩ ಸಂಪುಟಗಳಲ್ಲಿ), ಸಂಕೀರ್ಣ ಗ್ರಂಥ ತಂತ್ರಸಾರ ಮತ್ತು ಸ್ತೋತ್ರಗಳು (ಒಂದು ಸಂಪುಟದಲ್ಲಿ), ಪುರಾಣದಲ್ಲಿ ಒಂದಾದ ೩೨ ಅಧ್ಯಾಯಗಳನ್ನು ಒಳಗೊಂಡ ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೪ ಸಂಪುಟಗಳಲ್ಲಿ) ಹಾಗೂ ಸೂತ್ರ ಪ್ರಸ್ಥಾನದಲ್ಲಿ ಸೇರಿದ ಬ್ರಹ್ಮಸೂತ್ರಭಾಷ್ಯ ೧ನೇ ಅಧ್ಯಾಯ ಹಾಗೂ ಶ್ರೀಮದುನುವ್ಯಾಖ್ಯಾನ ಭಾಗ ೧.(ಮೊದಲಿನ ಐದು ಸೂತ್ರಗಳು) ಈ ಎರಡು (ಪ್ರತ್ಯೇಕ ಸಂಪುಟಗಳಲ್ಲಿ) ಪ್ರಕಟಗೊಂಡು ಜಿಜ್ಞಾಸುಗಳ ಕೈ ಸೇರಿತು. ಇದಲ್ಲದೆ ಹಿಂದೆ ಪ್ರಕಟಗೊಂಡಿದ್ದ ಸರ್ವಮೂಲ ಗ್ರಂಥಗಳ ಪುನರ್ಮುದ್ರಣ ಅತ್ಯಗತ್ಯವಾಗಿದ್ದು , ಅದರಲ್ಲಿ ಗೀತಾಪ್ರಸ್ಥಾನ (೩ನೇ ಆವೃತ್ತಿ), ಉಪನಿಷತ್ ಪ್ರಸ್ಥಾನ ೮ ಉಪನಿಷತ್‌ಗಳು (೩ನೇ ಆವೃತ್ತಿ), ಛಾಂದೋಗ್ಯ (ಎರಡನೇ ಆವೃತ್ತಿ), ಬೃಹದಾರಣ್ಯಕ (ಎರಡನೇ ಆವೃತ್ತಿ), ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ ಭಾಗ ೧ (೨ನೇ ಆವೃತ್ತಿ), ಸಂಕೀರ್ಣ ಗ್ರಂಥ ತಂತ್ರಸಾರ ಮತ್ತು ಸ್ತೋತ್ರಗಳು (೨ನೇ ಆವೃತ್ತಿ), ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ ಭಾಗ ೨ (೨ನೇ ಆವೃತ್ತಿ), ಹಾಗೂ ದಶಪ್ರಕರಣ (೪ನೇ ಆವೃತ್ತಿ), ಪ್ರಕಟಗೊಂಡು ಜಿಜ್ಞಾಸುಗಳಿಗೆ ಲಭ್ಯವಾಗಿರುತ್ತದೆ.

ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ಪ್ರಥಮ, ದ್ವಿತೀಯ ಸ್ಕಂಧ (ಸರ್ವಮೂಲ ಕ್ರಮಸಂಖ್ಯೆ ೧೩), ೨೦೦೪ ಧಾರವಾಡದಲ್ಲಿ ಹಾಗೂ ತೃತೀಯ ಸ್ಕಂಧ (ಸರ್ವಮೂಲ ಕ್ರಮಸಂಖ್ಯೆ ೧೪) ೨೦೦೬ ಚನ್ನೈ ನಗರದಲ್ಲಿ ಹಾಗೂ ಚತುರ್ಥ ಸ್ಕಂಧದ (ಸರ್ವಮೂಲ ಕ್ರಮ ಸಂಖ್ಯೆ ೧೫) ಏಪ್ರಿಲ್ ತಿಂಗಳ ೨೦೦೭ರಲ್ಲಿ ಬೆಂಗಳೂರಿನಲ್ಲಿ ಬಿಡುಗಡೆಗೊಂಡಿತು. ಇದೇ ಗ್ರಂಥದ ಪಂಚಮ ಹಾಗೂ ಷಷ್ಠ ಸ್ಕಂಧಗಳ (ಕನ್ನಡ ಸರ್ವಮೂಲ ಕ್ರಮಸಂಖ್ಯೆ ೧೬) ನಾಡಿನ ಸಾಂಸ್ಕೃತಿಕ ರಾಜಧಾನಿಯಾದ ಮೈಸೂರಿನಲ್ಲಿ ಫೆಬ್ರುವರಿ ೨೦೦೮ರಲ್ಲಿ ನಡೆದ ೨೬ನೇ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ, ಶ್ರೀ ಮಧ್ವ ನವಮಿ ಹಾಗೂ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಸುಧಾ ಮಂಗಳ ಮಹೋತ್ಸವದ ಶುಭ ಮುಹೂರ್ತ ದಲ್ಲಿ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಅಮೃತ ಹಸ್ತದಿಂದ ಬಿಡುಗಡೆಗೊಂಡಿತು. ಇದೇ ಗ್ರಂಥದ ೭, ೮ ಮತ್ತು ೯ನೇ ಸ್ಕಂಧ (ಸರ್ವಮೂಲ ಕ್ರಮಸಂಖ್ಯೆ ೧೭) ಫೆಬ್ರವರಿ ೨೦೦೯ರಂದು ಬೆಂಗಳೂರಿನಲ್ಲಿ ಬಿಡುಗಡೆಗೊಂಡಿತು.

ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ದಶಮಸ್ಕಂಧ (ಪೂರ್ವಾರ್ಧ, ರುಕ್ಮಿಣಿ ಕಲ್ಯಾಣ ಮಹೋತ್ಸವವನ್ನೊಳಗೊಂಡ ೫೫ನೇ ಅಧ್ಯಾಯ (ಸರ್ವಮೂಲ ಕ್ರಮಸಂಖ್ಯೆ - ೧೮) ವಿದ್ವಾನ್ ಶ್ರೀ ಕೆ.ಹಯವದನ ಪುರಾಣಿಕರು ಅನುವಾದಿಸಿದ ಗ್ರಂಥವು ತಾ|| ೨೪-೦೬-೨೦೧೧ ರಂದು ಬಿಡುಗಡೆಗೊಂಡಿತು.

ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ದಶಮಸ್ಕಂಧ (ಉತ್ತರಾರ್ಧ ಸಂಪೂರ್ಣ) (ಸರ್ವಮೂಲ ಕ್ರಮಸಂಖ್ಯೆ - ೧೯) ವಿದ್ವಾನ್ ಶ್ರೀ ಕೆ.ಹಯವದನ ಪುರಾಣಿಕರು ಅನುವಾದಿಸಿದ ಗ್ರಂಥವು ತಾ|| ೨೨-೦೬-೨೦೧೨ರಂದು ಬಿಡುಗೊಡೆ ಗೊಂಡಿತು

ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ಏಕಾದಶ ಸ್ಕಂಧ (ಪೂರ್ವಾರ್ಧ) (ಸರ್ವಮೂಲ ಕ್ರಮಸಂಖ್ಯೆ - ೨೦) ವಿದ್ವಾನ್ ಶ್ರೀ ಕೆ.ಹಯವದನ ಪುರಾಣಿಕರು ಅನುವಾದಿಸಿದ ಗ್ರಂಥವು ತಾ|| ೧೫-೧೨-೨೦೧೩ರಂದು ಅಖಿಲ ಭಾರತ ಮಾಧ್ವ ಮಹಾಮಂಡಲದ ವಜ್ರಮಹೋತ್ಸವದ ಶುಭ ಸಂದರ್ಭದಲ್ಲಿ ಬಿಡುಗೊಡೆಗೊಳ್ಳುತ್ತಿದೆ

ಈ ಗ್ರಂಥದ ಭಾವವನ್ನು ಆಂಗ್ಲಾ ಭಾಷೆಯಲ್ಲಿ ನೀಡಿರುವ ಮಹಾಮಹೋಪಾಧ್ಯಾಯ ಪ್ರೊ|| ಕೆ.ಟಿ. ಪಾಂಡುರಂಗಿ ಇವರಿಗೆ ಅನಂತ ವಂದನೆಗಳು.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ಆರ್.ಎಸ್. ಪ್ರೇಮಕುಮಾರ್ ಅವರು ಅಂದವಾಗಿ ಮಾಡಿಕೊಟ್ಟಿದ್ದಾರೆ. ಇವರಿಗೆ ಮಂಡಲದ ಅಭಿನಂದನೆಗಳು. ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಓಂಕಾರ್ ಅಫ್‌ಸೆಟ್ ಪ್ರಿಂಟರ್ಸ್ ಅವರಿಗೂ, ಮುಖಪುಟ, ವಿನ್ಯಾಸ ಹಾಗೂ ಈ ಸಂಪುಟ ಬಿಡುಗಡೆಗೆ ಹಾಗೂ ಇತರೇ ಕಾರ್ಯಗಳಿಗೆ ವಿವಿಧ ಹಂತದಲ್ಲಿ ಶ್ರಮಿಸಿದ ಮಂಡಲದ ಪ್ರಧಾನ ಕಾರ್ಯದರ್ಶಿ ಹೆಚ್.ಎನ್. ನಾರಾಯಣರಾವ್ ಹಾಗೂ ಮಂಡಲದ ಇತರ ಸಿಬ್ಬಂದಿವರ್ಗದವರಿಗೂ ಅಭಿನಂದನೆಗಳು.

ಸಹೃದಯ ವಾಚಕರು ವಿಳಂಬಕ್ಕೆ ಬೇಸರಿಸದೆ ಆತ್ಮೀಯತೆಯಿಂದ ಈ ಸಂಪುಟವನ್ನು ಬರಮಾಡಿಕೊಳ್ಳುವರೆಂದು ನಂಬಿದ್ದೇವೆ.

ಕೆ.ವಿಷ್ಣುಮೂರ್ತಿ ಎರ್ಕಾಡಿತ್ತಾಯ
ಅಧ್ಯಕ್ಷರು
ಅ.ಭಾ.ಮಾ.ಮ.ಮಂ.ಪಬ್ಲಿಕೇಶನ್ ಟ್ರಸ್ಟ್
ಅಖಿಲ ಭಾರತ ಮಾಧ್ವ ಮಹಾಮಂಡಲ (ರಿ.)
ಬೆಂಗಳೂರು.

ಬೆಂಗಳೂರು.
1-12-2013

ಅಖಿಲ ಭಾರತ ಮಾಧ್ವ ಮಹಾಮಂಡಲ(ರಿ) ಮುಖೇನ ಪ್ರಕಟನೆಗೊಳ್ಳುತ್ತಿರುವ ಶ್ರೀಮದ್ ಭಾಗವತ ತಾತ್ಪರ್ಯನಿರ್ಣಯ ಕನ್ನಡಾನುವಾದದ ವೈಶಿಷ್ಟ್ಯ

ಅನುವಾದಕರು : ವಿ|| ಕೆ. ಹಯವದನ ಪುರಾಣಿಕ

ಶ್ರೀ ಸರ್ವಮೂಲ ಗ್ರಂಥಗಳ ಕನ್ನಡಾನುವಾದ ಯೋಜನೆಯ ಅಡಿಯಲ್ಲಿ ಶ್ರೀಮದ್ಭಾಗವತ ತಾತ್ಪರ್ಯನಿರ್ಣಯದ ಕನ್ನಡಾನುವಾದ ಕೃತಿಗಳು ಇದೀಗ ~~ದಶಮಸ್ಕಂಧದವರೆಗೆ ಏಳು ಭಾಗಗಳಾಗಿ ಬಂದಿವೆ. ಪ್ರಕೃತ, ೮ನೇ ಭಾಗ ಏಕಾದಶ~~ ಸ್ಕಂದ ಪೂರ್ವಾರ್ಧವು ಅಖಿಲ ಭಾರತ ಮಾಧ್ವ ಮಹಾಮಂಡಲದ ವಜ್ರ ಮಹೋತ್ಸವ ಸಂದರ್ಭದಲ್ಲಿ ಬಿಡುಗಡೆವಾಗುತ್ತಿದೆ. **ಅನುವಾದಕರು ವಿದ್ವಾನ್ ಕೆ. ಹಯವದನ ಪುರಾಣಿಕರು. ಪ್ರಕಾಶಕರು: ಅಖಿಲ ಭಾರತ ಮಾಧ್ವಮಹಾಮಂಡಲ, ಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು.**

ಶ್ರೀಮದ್ ಭಾಗವತಕ್ಕೆ ಅದ್ವೈತ, ವಿಶಿಷ್ಟಾದ್ವೈತ, ಶುದ್ಧಾದ್ವೈತ ಮುಂತಾದ ಎಲ್ಲ ದಾರ್ಶನಿಕರ ವ್ಯಾಖ್ಯಾನಗಳಿವೆ. ಶ್ರೀಧರಸ್ವಾಮಿಗಳ ಭಾಗವತಾರ್ಥದೀಪಿಕಾ ವ್ಯಾಖ್ಯಾನ ಬಹಳ ಪ್ರಸಿದ್ಧವಾಗಿದ್ದು ಅದ್ವೈತ ಮತಾನುಸಾರಿಯಾಗಿದೆ. ಈ ಟೀಕೆಗೆ ಅನೇಕ ಟಿಪ್ಪಣಿಗಳಿವೆ. ವೀರರಾಘವಾಚಾರ್ಯರ ಭಾಗವತಚಂದ್ರಚಂದ್ರಿಕಾ, ಸುದರ್ಶನಸೂರಿಗಳ ಶುಕಪಕ್ಷೀಯಾ, ಶ್ರೀನಿವಾಸಸೂರಿಗಳ ತತ್ವದೀಪಿಕಾ, ಯೋಗಿರಾಮಾನುಜಾಚಾರ್ಯರ ಸರಲಾವ್ಯಾಖ್ಯಾ ಮುಂತಾದವು ವಿಶಿಷ್ಟಾದ್ವೈತಾನುಸಾರಿಯಾಗಿವೆ. ಶುಕದೇವಾಚಾರ್ಯರ ಸಿದ್ಧಾಂತಪ್ರದೀಪವು ನಿಂಬಾರ್ಕರ ಸ್ವಾಭಾವಿಕ ಭೇದಾಭೇದವಾದಾನುಸಾರಿ. ವಲ್ಲಭಾಚಾರ್ಯರ ಸುಬೋಧಿನಿ ಮುಂತಾದವು ಶುದ್ಧಾದ್ವೈತಪರವಾಗಿವೆ. ವಿಶ್ವನಾಥಚಕ್ರವರ್ತಿಗಳ ಸಾರಾರ್ಥದರ್ಶಿನಿ, ಜೀವಗೋಸ್ವಾಮಿಗಳ ಕ್ರಮಸಂದರ್ಭ, ವೈಷ್ಣವತೋಷಿಣಿ ಮುಂತಾದ ಅನೇಕ ವ್ಯಾಖ್ಯಾನಗಳು ಗೌಡೀಯ ಚೈತನ್ಯ ಸಂಪ್ರದಾಯದ ಅಚಿಂತ್ಯ

ಭೇದಾಭೇದ ಮತಾನುಸಾರಿಗಳಾಗಿವೆ. ಇವು ಯಾವುವೂ ಶ್ರೀಮದ್ ಭಾಗವತದ ನಿಜವಾದ ಅಭಿಪ್ರಾಯವನ್ನು ತೆರೆದಿಡುವಲ್ಲಿ ವಿಫಲವಾಗಿವೆ. ಭಾಗವತಕ್ಕೇ ಅವು ಹೊಂದಿಕೆಯಾಗಲಾರವು, ಭಾಗವತಕ್ಕೆ ಹೊಂದಿಕೆಯಾದರೆ ಅವರ ಮತಕ್ಕೇ ಹೊಂದಿಕೆಯಾಗಲಾರವು. ಇದನ್ನು ಸರ್ವಜ್ಞರಾದ ಶ್ರೀಮನ್ಮಧ್ವಾಚಾರ್ಯರು ಅಂದೇ ತಮ್ಮ ಕಾಲದ, ಮತ್ತು ಹಿಂದಿನ ಮುಂದಿನ ಎಲ್ಲ ವ್ಯಾಖ್ಯಾನ ಸಂಪ್ರದಾಯಗಳನ್ನು ವಿಮರ್ಶಿಸಿ ಬಾದರಾಯಣರಿಗೆ ಸಮ್ಮತವಾದ ಭಾಗವತದ ನಿಜವಾದ ಅಭಿಪ್ರಾಯವನ್ನೂ ಜೊತೆಗೆ ಶುದ್ಧಪಾಠವನ್ನೂ ತಿಳಿಸುವ ಅದ್ಭುತವಾದ ತಾತ್ಪರ್ಯನಿರ್ಣಯ ಗ್ರಂಥವನ್ನು ರಚಿಸಿಕೊಟ್ಟಿದ್ದಾರೆ. ಇದನ್ನು ಜಿಜ್ಞಾಸುಗಳಿಗೆ ತಿಳಿಸುವ ಉದ್ದೇಶದಿಂದ ಹೊರಟಿರುವ ಕನ್ನಡಾನುವಾದಗಳಿವು, ಬರಿ ಅನುವಾದವಾಗಿರದೆ, ಪರಮಪೂಜ್ಯ ಶ್ರೀ ೧೦೮ ಶ್ರೀ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಅನುಗ್ರಹ ಬಲದಿಂದ, ಮೇಲೆ ಹೇಳಿದ ಎಲ್ಲ ಪರಮತೀಯ ವ್ಯಾಖ್ಯಾನಗಳ ತುಲನಾತ್ಮಕವಾದ ವಿದ್ವತ್ಪೂರ್ಣವಾದ ವಿಶಿಷ್ಟ ಅಧ್ಯಯನ ಗ್ರಂಥರೂಪವಾಗಿ ಹೊರಹೊಮ್ಮಿದೆ. ಪ್ರೊ. ಕೆ. ಟಿ. ಪಾಂಡುರಂಗಿ ಅವರ ಆಂಗ್ಲ ಉಪೋದ್ಘಾತದಿಂದ ಕೂಡಿದೆ. ಪಾರಾಯಣಕ್ಕೆ ಅನುಕೂಲವಾಗುವಂತೆ ವಿಜಯಧ್ವಜೀಯಾನುಸಾರಿಯಾದ ಭಾಗವತ ಶುದ್ಧಪಾಠವನ್ನು ಕೊಡಲಾಗಿದೆ. ತಿಳಿಗನ್ನಡದಲ್ಲಿ ಪ್ರತಿ ಅಧ್ಯಾಯದ ಸಾರಾಂಶವನ್ನು ಒಳಗೊಂಡಿದೆ. ವಿಷಯಾನುಕ್ರಮಣಿಕೆಯ ರೂಪದಲ್ಲಿ ಸಮಗ್ರ ತಾತ್ಪರ್ಯನಿರ್ಣಯದ ಸಂಕ್ಷಿಪ್ತ ಸಾರಾಂಶವನ್ನೂ ಒಳಗೊಂಡಿದೆ. ಹೀಗೆ ಸರ್ವಾಂಗ ಸುಂದರವಾಗಿ ಮೂಡಿಬಂದಿರುವ ಈ ಗ್ರಂಥಗಳು ಜಿಜ್ಞಾಸು ವೃಂದಕ್ಕೆ ಅವಶ್ಯ ಸಂಗ್ರಾಹ್ಯವಾಗಿವೆ.

ಸಂಪಾದಕ ಮಂಡಳಿ ಹಾಗೂ ಆಡಳಿತ ಮಂಡಳಿ

ವಿಷಯಾನುಕ್ರಮಣಿಕೆ

ಏಕಾದಶ ಸ್ಕಂಧ (ಪೂರ್ವಾರ್ಧ)

೨.೪೧ ಆಕಾಶ ಮುಂತಾದುದು ಹರಿಯ ಶರೀರವಲ್ಲ, ಅವನಿಗೆ ಅಭಿನ್ನವೂ ಅಲ್ಲ. ಅಧೀನವಾಗಿ ಶರೀರದಂತಿದೆ. ಅನ್ಯರಿಗೆ ಅಧೀನವಾಗದೆ ಹರಿಗೆ ಅಧೀನವಾದ್ದರಿಂದ ಅಭಿನ್ನದಂತೆಯೂ ಇದೆ. **85**

೨.೪೫,೪೬ ತತ್ವಾಭಿಮಾನಿ ದೇವತೆಗಳು ಅತ್ಯುತ್ತಮ ರೀತಿಯಲ್ಲಿ ಭಕ್ತಿಯೋಗದಿಂದ ಹರಿಯಲ್ಲಿ ಭಕ್ತಿ ಮಾಡುವವರು, ಅನಾದಿಯೋಗಿಗಳು. 'ಗುಣಪೂರ್ಣನಾದ ಹರಿ ಸರ್ವಾಂತರ್ಯಾಮಿ. ರಮಾಬ್ರಹ್ಮಾದಿಗಳೆಲ್ಲರೂ ಅವನ ಅಧೀನರು ಭಕ್ತರು, ಅವನೇ ತಮಗೆ ತನ್ನಲ್ಲಿ ಭಕ್ತಿಯನ್ನೂ ಭಕ್ತರಲ್ಲಿ ಸ್ನೇಹವನ್ನೂ ಅಜ್ಞಾನಿಗಳಲ್ಲಿ ಅನುಕಂಪೆಯನ್ನೂ ದ್ವೇಷಿಗಳಲ್ಲಿ ದ್ವೇಷವನ್ನೂ ಹುಟ್ಟಿಸುವವನೆಂ'ದು ತಿಳಿದು ಆರಾಧಿಸುತ್ತಾರೆ. ಅದಕ್ಕೆ ಫಲ ಸಾಯುಜ್ಯಮೋಕ್ಷ. ಋಷಿ ಗಂಧರ್ವಾದಿಗಳು ಮಧ್ಯಮ ರೀತಿಯಲ್ಲಿ ಭಕ್ತಿ ಮಾಡುವವರು, ಅಂದರೆ, ಮೊದಲಿಗೆ ಇವರು ಜ್ಞಾನಿಗಳ ಉಪದೇಶ ದೊರಕದಿದ್ದಾಗ, ಹರಿ ಸ್ವರ್ಗಸುಖ ನೀಡುವವನೆಂದು ತಿಳಿದು ~~ಪ್ರೀತಿಯಿಂದ ಆರಾಧಿಸುತ್ತಾರೆ. ದೇವತೆಗಳಲ್ಲಿ ತಾರತಮ್ಯವನ್ನು~~ ತಿಳಿದಿರುವುದಿಲ್ಲ. 'ರಾಜನಂತೆ ಶ್ರೀಹರಿ ಎಲ್ಲರನ್ನೂ ಆಳುತ್ತಾನೆ. ದೇವತೆಗಳು ಅವನಿಗೆ ಆಪ್ತರು. ಮನುಷ್ಯರು ಪ್ರಜೆಗಳು. ದೈತ್ಯರು ಶತ್ರುಗಳು. ಅದರಿಂದ ನನಗೆ ದೇವತೆಗಳಲ್ಲಿ ಸ್ನೇಹ, ಮನುಷ್ಯರಲ್ಲಿ ಜೊತೆಗಾರರೆಂದು ಅನುಕಂಪೆ, ದೈತ್ಯರಲ್ಲಿ ಹರಿಯ ಶತ್ರುಗಳೆಂದು ದ್ವೇಷ ಸ್ವಾಭಾವಿಕವಾಗಿ ಮೂಡಿದೆ' ಎಂದು ತಿಳಿಯುತ್ತಾರೆ. ಇದು ಮಧ್ಯಮಭಕ್ತಿ. ಇವರು ಮೋಕ್ಷಯೋಗ್ಯ ರಾದ್ದರಿಂದ ಹರಿ ಇವರನ್ನು ಜ್ಞಾನಿಗಳ ಕುಲದಲ್ಲಿ ಹುಟ್ಟಿಸಿ ಉಪದೇಶ ಕೊಡಿಸಿ ಜ್ಞಾನಯೋಗದಿಂದ ಮೋಕ್ಷಸಾಧನೆ ಮಾಡಿಸುತ್ತಾನೆ. ಅದರಿಂದ ಇವರು ಸಾದಿಯೋಗಿಗಳು. ಇವರಿಗೆ ಸಾಮೀಪ್ಯಾದಿ ಮೋಕ್ಷವು ಫಲ. **87**

೨.೪೭ ಮನುಷ್ಯೋತ್ತಮರು ಮೊದಲಿಗೆ ಜ್ಞಾನಿಗಳ ಉಪದೇಶ ದೊರಕದಿದ್ದಾಗ ಅಧಮರೀತಿಯ ಭಕ್ತಿ ಮಾಡುತ್ತಾರೆ. ಜಡವಾದ ಪ್ರತಿಮೆಗಳನ್ನು ಮಾತ್ರ ಪೂಜಿಸುತ್ತಾರೆ. ಚಲಪ್ರತಿಮೆಗಳಾದ ದೇವತೆಗಳನ್ನು ಆದರಿಸುವುದಿಲ್ಲ. ದೇವತೆಗಳು ತತ್ವಾಭಿಮಾನಿಗಳು ಬುದ್ಧಿಪ್ರೇರಕರು ಗುರುಗಳೆನ್ನುವ ಪರಿಜ್ಞಾನವಿರುವುದಿಲ್ಲ. ಅವರ ಉಪಕಾರವನ್ನು ಸ್ಮರಿಸುವುದಿಲ್ಲ. ಮುಕ್ತಿಯೋಗ್ಯರಾದ್ದರಿಂದ ಹರಿ

ಮೂರು ಬಗೆ. ಎಲ್ಲ ಜೀವರಿಗೂ ಬ್ರಹ್ಮಶೇಷರು ಉತ್ತಮ ಅಭಿಮಾನಿಗಳು. ಮಧ್ಯಮ ಜೀವರಿಗೆ ಬ್ರಹ್ಮಶೇಷರೂ ಪುರಂಜನನೂ ಉತ್ತಮಾಭಿಮಾನಿಗಳು. ಆಯಾ ಜೀವನು ಮಧ್ಯಮಾಭಿಮಾನಿ. ಅಧಮಜೀವರಿಗೆ ಕಲಿ ಅಧಮಾಭಿಮಾನಿ. ದೇಹಕ್ಕೆ ಬರುವ ಉತ್ಪತ್ತಿನಾಶಾದಿ ದುಃಖ ದೇಹಮಾನಿ ಅಸುರನಿಗೇ ಹೆಚ್ಚು, ಜೀವನಿಗೆ ಕಡಿಮೆ. ಹಾಗೇ ಇಂದ್ರಿಯಗಳಿಗೆ ಬರುವ ಸ್ವಪ್ನ ಮೂರ್ಛಾದಿ ದುಃಖ ಇಂದ್ರಿಯಾಭಿಮಾನಿ ಅಸುರನಿಗೆ. ಹಸಿವಿನಿಂದಾಗುವ ದುಃಖ ಪ್ರಾಣಾಭಿಮಾನಿ ಅಸುರನಿಗೆ. ಭಯ ಆಕಾಂಕ್ಷೆ ಮುಂತಾದ ದುಃಖ ಮನೋಭಿಮಾನಿ ಅಸುರನಿಗೆ. ಇಷ್ಟವಿಯೋಗಾದಿ ಮನಃಕ್ಷೋಭ ದುಃಖ ಬುದ್ಧ್ಯಭಿಮಾನಿ ಅಸುರನಿಗೆ. ಅಭಿಮಾನಕ್ಕೆ ಪೆಟ್ಟುಬಿದ್ದಾಗ ಉಂಟಾಗುವ ದುಃಖ ಅಹಂಕಾರಾಭಿಮಾನಿ ಅಸುರನಿಗೆ. ಹಿಂದಿನ ಕಹಿ ನೆನಪಿನ ದುಃಖ ಚಿತ್ತಾಭಿಮಾನಿ ಅಸುರನಿಗೆ. ಜೀವಾಭಿಮಾನಿ ಅಸುರನಿಗೆ ದೇಹ ಇಂದ್ರಿಯ ಪ್ರಾಣ ಮುಂತಾದ ಎಲ್ಲವುಗಳ ಮೇಲೂ ಅಭಿಮಾನವಿರುವುದರಿಂದ ಈ ಎಲ್ಲ ದುಃಖಗಳು ಅವನಿಗೆ ಇದ್ದೇ ಇರುತ್ತವೆ. ದೇಹಾದಿಗಳ ಮೇಲಿನ ಅಭಿಮಾನದಿಂದ ಅಸುರರಿಗೆ ದುಃಖ ಮಾತ್ರ ಬರುತ್ತದೆ ಹೊರತು ಸುಖವಿಲ್ಲ, ಸುಖವು ಅಭಿಮಾನಿ ದೇವತೆಗಳಿಗೆ ಹೋಗುತ್ತದೆ. ಆಯಾ ಜೀವರಿಗೆ ಆಯಾ ಅಸುರರಿಗೆ ಅಧರ್ಮಕಾರ್ಯಗಳಿಂದ ಸುಖವಾಗುತ್ತದೆ. ಆದರೆ ಅದು ದೇವಾವೇಶದಿಂದ ಬರುವುದರಿಂದ ವಾಸ್ತವದಲ್ಲಿ ದೇವತೆಗಳಿಗೇ ಆ ಸುಖ. ಹಾಗೇ ದೇವತೆಗಳಿಗೆ ಅಧರ್ಮ ಕಾರ್ಯಗಳಿಂದ ದುಃಖ ಅವರಲ್ಲಿ ಆವಿಷ್ಟರಾದ ಅಸುರರಿಗೇ ಬಂದಿರುತ್ತದೆ. ಋಜುಯೋಗಿಗಳಿಗೂ ಅವರ ಪತ್ನಿಯರಿಗೂ ಅಸುರಾವೇಶವಿಲ್ಲದಿರುವುದರಿಂದ ಎಂದೂ ದುಃಖವಿಲ್ಲ. ದೇಹಾದ್ಯಭಿಮಾನಿಗಳಾಗಿ ದೇವತೆಗಳು ಅಧರ್ಮಕಾರ್ಯಗಳನ್ನು ಪ್ರೇರಿಸುವಾಗ ಅದು ಹರಿಯ ಆಜ್ಞಾಪಾಲನ ರೂಪವಾಗಿದ್ದು ಹರಿಗೆ ಪ್ರಿಯವೇ ಆದ್ದರಿಂದ ದುಃಖ ಬರುವುದಿಲ್ಲ, ಸುಖವೇ ಬರುತ್ತದೆ. **100**

೨.೫೨ 'ಚಿತ್ತ' ಎಂದರೆ ಜಡಮನಸ್ಸಿರುವ ಸಂಸಾರಾವಸ್ಥೆ. 'ಸ್ವಾತ್ಮ' ಎಂದರೆ ಸ್ವರೂಪಭೂತ ದೇಹಾದಿಗಳು ಮಾತ್ರವಿರುವ ಮೋಕ್ಷಾವಸ್ಥೆ. ಈ

ಸನಕಾದಿ ಯೋಗಿಗಳು ಮಾತ್ರ ಸನ್ಯಾಸಿಗಳಾಗಿ ಮೋಕ್ಷ ಹೊಂದುತ್ತಾರೆ. ಮನುಷ್ಯೋತ್ತಮರು ಎರಡೂ ಬಗೆಯವವರಿರುತ್ತಾರೆ. ಯೋಗ್ಯತೆಗೆ ಅನುಗುಣವಾಗಿಯೇ ಸಾಧನೆ ಮಾಡಬೇಕು ಹೊರತು ವ್ಯತ್ಯಾಸ ಮಾಡಲಾಗದು ಎಂದು ಸಂದೃಶ್ಯ ಎಂಬ ಗ್ರಂಥದಲ್ಲಿ ಹೇಳಿದೆ. **136**

೩.೨೧ ಮಂಡಲವರ್ತಿಗಳೆಂದರೆ ಇಲ್ಲಿ ಭೂಮಂಡಲದಲ್ಲಿರುವವರೆಂದರ್ಥವಲ್ಲ. ರಣರಂಗದಲ್ಲಿ ಕಾದುತ್ತಿರುವವರೆಂದರ್ಥ. **137**

೩.೨೪ ಮನುಷ್ಯೋತ್ತಮರ ಸಹವಾಸ ಉತ್ತಮ. ಅವಶ್ಯ ಮಾಡಬೇಕು. ಋಷಿಗಳ ಸಹವಾಸ ಇನ್ನೂ ಉತ್ತಮ. ದೇವತೆಗಳ ಸಹವಾಸ ಅತ್ಯುತ್ತಮ. ಮನುಷ್ಯೋತ್ತಮರ ಸಹವಾಸ ಉತ್ತಮರ ಸಂಗಲಾಭಕ್ಕೆ ಕಾರಣವಾಗುವುದರಿಂದ ಬೇಕು. ಕಾರಣವಾಗದೆ ಅಡ್ಡಿಯಾಗುವಂತಿದ್ದರೆ ಅದನ್ನು ಬಿಡಬೇಕು. ಬಿಡಲಾಗದಿದ್ದರೆ ಅವರನ್ನೇ ದಾರಿಗೆ ತರಲು ಯತ್ನಿಸಬೇಕು. ಯತ್ನ ಫಲಿಸದಿದ್ದರೆ ಬಿಡಲೇಬೇಕು. ಅದರಿಂದ ದೋಷವಿಲ್ಲ. ದೇವತೆಗಳ ಋಷಿಗಳ ಸಹವಾಸ ಅವಶ್ಯಬೇಕು. ಇಲ್ಲದಿದ್ದರೆ ಏಳಿಗೆಯಾಗದು. ದೇವತೆಗಳು ಋಷಿಗಳು ಕೂಡ ಮನುಷ್ಯರ ಸಹವಾಸ ಮಾಡಬೇಕು. ಒಡನಾಟ ಮಾಡಿ ಅವರಿಗೆ ತತ್ವಜ್ಞಾನ ನೀಡಬೇಕು. ಅದರಿಂದ ಅವರಿಗೆ ಮೋಕ್ಷದಲ್ಲಿ ಆನಂದವೃದ್ಧಿ. ಸತಿಸುತರ ಸಹವಾಸ ಶರೀರಸ್ವಾಸ್ಥ್ಯ ದೃಷ್ಟಿಯಿಂದ ಜ್ಞಾನಸಾಧನೆಯಲ್ಲಿ ಉಪಯುಕ್ತವಾದ್ದರಿಂದ ಬೇಕು. ಜ್ಞಾನಸಾಧನೆಯಾಯಿತೆಂದರೆ ಬಳಿಕ ಬಿಡಬಹುದು. ದೇವತೆಗಳ ಋಷಿಗಳ ಸಹವಾಸ ಜ್ಞಾನಸಾಧನೆಯಾದ ಬಳಿಕವೂ ಬಿಡುವಂತಿಲ್ಲ. ಬಿಟ್ಟರೆ ಮೋಕ್ಷ ಲಾಭವಾಗದು ಎಂದು ಗರುಡಪುರಾಣದಲ್ಲಿಯೂ ಭವಿಷ್ಯತ್‌ಪರ್ವದಲ್ಲಿಯೂ ಉಕ್ತವಾಗಿದೆ. **140**

೩.೨೭ ಜ್ಯೋತಿಷ್ಯ ಸಂಗೀತ ವೈದ್ಯಶಾಸ್ತ್ರಗಳಲ್ಲಿ ಅಭ್ಯಾಸ ಮಾಡಿದರೆ ಭಕ್ತಿಶಾಸ್ತ್ರಾಧ್ಯಯನಕ್ಕೆ ಜ್ಞಾನಸಾಧನೆಗೆ ಪೋಷಕವಾಗುವುದರಿಂದ ಅದು ಹೇಯವಲ್ಲ. ಹಣ ಕೀರ್ತಿ ಪ್ರತಿಷ್ಠೆಗಳಿಗಾಗಿ ಮಾಡಬಾರದು. ಭಕ್ತಿಶಾಸ್ತ್ರಜ್ಞಾನವಿಲ್ಲದಿರುವಾಗಲಂತೂ ಅದು ಸರ್ವಥಾ ಹೇಯ. ಭಕ್ತಿಶಾಸ್ತ್ರಾಧ್ಯಯನಕ್ಕೆ ಅಡ್ಡಿಯಾದೀತು. ಭಕ್ತಿಶಾಸ್ತ್ರಕ್ಕೆ ವಿರೋಧಿ

ನನ್ನನ್ನು ಜೀವನೆನ್ನಕೂಡದು ಎಂದು ಮೋಕ್ಷಧರ್ಮದಲ್ಲಿ ಭಗವಂತನ ವಚನವೂ ಇದೆ. **158**

೩.೩೯ ಇಂದ್ರಿಯಗಳಲ್ಲಿ ಮುಖ್ಯಪ್ರಾಣ ಹೇಗೆ ಆಯಾ ಇಂದ್ರಿಯಗಳಿಗೆ ಆಯಾ ಶಕ್ತಿಪ್ರದನಾಗಿರುವನೋ ಹಾಗೇ ಪರಮಾತ್ಮ ಸಕಲ ಪದಾರ್ಥಗಳಲ್ಲಿರುತ್ತಾನೆ. ಮುಖ್ಯಪ್ರಾಣನಿಗೂ ಅವನೇ ಶಕ್ತಿದಾಯಕ ಎಂದು ಹರಿವಂಶದಲ್ಲಿದೆ. **162**

೩.೪೦ ಪೇಶ ಶಬ್ದಕ್ಕೆ ಜರಾಯು ಗರ್ಭಕೋಶ, ಬಂಗಾರ, ಮಿದುವಾದ ವಸ್ತು, ಮಂಗಳಕರ ಎಂದು ಅನೇಕ ಅರ್ಥಗಳು ಅಭಿಧಾನಕೋಶದಲ್ಲಿವೆ. ಪ್ರಕೃತದಲ್ಲಿ ಪೇಶಿಗಳೆಂದರೆ ಗರ್ಭಕೋಶದಿಂದ ಹುಟ್ಟುವ ಜರಾಯುಜಗಳೆಂದರ್ಥ. ಅವನಿಸ್ಥಿತ ಎಂದರೆ ಹೆಚ್ಚಾಗಿ ಭೂಮಿಯ ತೇವಾಂಶದಿಂದ ಹುಟ್ಟುವ ಇರುವೆ ಮುಂತಾದುವು 'ಕೂಟಸ್ಥ ಆಸ' ಎಂದರೆ ನಿರ್ವಿಕಾರನಾದ ಪರಮಾತ್ಮನಲ್ಲಿ ಸುಪ್ತಜೀವನಿರುತ್ತಾನೆ ಎಂದರ್ಥ. ಜೀವನು ಮರಣದಲ್ಲಿ ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಹೋಗುವಾಗ ಮುಖ್ಯಪ್ರಾಣನನ್ನು ಪ್ರವೇಶಿಸುತ್ತಾನೆ ಮುಖ್ಯಪ್ರಾಣ ಪರಮಾತ್ಮನನ್ನು ಪ್ರವೇಶಿಸುತ್ತಾನೆ. ಸುಷುಪ್ತಿಯಲ್ಲಿಯೂ ಹೀಗೇ ನಡೆಯುತ್ತದೆ. ಬೇರೆ ತತ್ವಾಭಿಮಾನಿ ದೇವತೆಗಳು ಮುಖ್ಯಪ್ರಾಣನ ಅಧೀನದಲ್ಲಿದ್ದು ಸ್ವಲ್ಪ ನಿದ್ದೆಗೆ ಜಾರಿದಂತಿರುತ್ತಾರೆ. ಇಂದ್ರಿಯಗಳ ಚಟುವಟಿಕೆಗಳನ್ನು ನಿಲ್ಲಿಸಿಬಿಡುತ್ತಾರೆ. ಅವರು ಮನುಷ್ಯರಾಗಿ ಅವತರಿಸಿದಾಗಲೂ ಸ್ವಲ್ಪವೇ ಅಜ್ಞಾನವಿರುತ್ತದೆ. ಹರಿಯೇ ಎಲ್ಲ ಅವಸ್ಥೆಗಳಿಗೆ ನಿಯಾಮಕ. ಅವನಿಲ್ಲದೆ ಮರಣ ನಿದ್ರೆ ಸ್ವಪ್ನ ಎಚ್ಚರಗಳು ಯಾವುವೂ ಇಲ್ಲ. ನಿದ್ರೆಯ ಸ್ಮರಣೆಯೂ ಅವನಿಲ್ಲದೆ ಇಲ್ಲ ಎಂದು ಹರಿವಂಶದಲ್ಲಿ ಹೇಳಿದೆ. **164**

೩.೪೪ ಸನಕಾದಿಗಳು ಕರ್ಮಯೋಗರಹಸ್ಯವನ್ನು ತಿಳಿದವರೇ ಆದರೂ ಜ್ಞಾನಿಗಳಿಗೂ ತಿಳಿಯದಷ್ಟು ಅದು ನಿಗೂಢವೆಂದು ತಿಳಿಸುವ ಉದ್ದೇಶದಿಂದ ನಿಮಿರಾಜನಿಗೆ ಅದನ್ನು ಹೇಳದೆ ಬಿಟ್ಟರು ಎಂದು ತಂತ್ರಭಾಗವತದಲ್ಲಿ ಹೇಳಿದೆ. ವೇದವು 'ಈಶ್ವರಾತ್ಮ' ಎಂದರೆ ಭಗವತ್‌ಸ್ವರೂಪವಲ್ಲ, ಭಗವದ್‌ವಿಷಯಕ ಎಂದರ್ಥ.

೩.೪೬,೪೭ 'ನಾಚರೇತ್' ಎಂಬಲ್ಲಿ 'ನಾ ಆಚರೇತ್' ಎಂದು ಬಿಡಿಸಬೇಕು. ಅಜ್ಞನಾದ 'ನಾ' ನರನು ಕರ್ಮವನ್ನು ಭಗವಂತನಿಗೆ ಅರ್ಪಿಸಬೇಕೆನ್ನುವುದನ್ನು ಅರಿಯದೆ ಆಚರಿಸಿದರೆ ಅದು ದುಷ್ಕರ್ಮವೆನಿಸುವುದರಿಂದ ನರಕ ಭಾಗಿಯಾಗುತ್ತಾನೆ ಎಂದರ್ಥ. ಕರ್ಮತಂತ್ರ ಎಂಬ ಗ್ರಂಥದಲ್ಲಿ ಕರ್ಮ ಮಾಡುವವನಿಗೆ ಮನಸಿನಲ್ಲಿ ಈ ಹತ್ತು ದೋಷಗಳಿರಕೂಡದು ಎಂದಿದೆ—ಹಿರಿಯರಲ್ಲಿ ತಾರತಮ್ಯಾನುಸಾರ ಭಕ್ತಿ ಮಾಡದಿರುವುದು, ದುರ್ಜನರಲ್ಲಿ ಭಕ್ತಿ ಸ್ನೇಹ ಆದರಗಳನ್ನು ಮಾಡುವುದು, ಹಿರಿಯರ ಹಿತಸಾಧನೆಯನ್ನು ಕೈಬಿಟ್ಟು ತನ್ನ ಹಿತಸಾಧನೆ ಮಾಡಿಕೊಳ್ಳಲು ಬಯಸುವುದು, ಹಿರಿಯರಲ್ಲಿ ತಾರತಮ್ಯಕ್ಕೆ ವ್ಯತಿರಿಕ್ತವಾಗಿ ಭಕ್ತಿ ಮಾಡುವುದು, ಹಿರಿಯರಲ್ಲಿ ತನ್ನಲ್ಲಿ ಸಮಾನಪ್ರೀತಿ ಮಾಡುವುದು, ಸ್ವಾರ್ಥ ಸಾಧನೆಯ ಉದ್ದೇಶದಿಂದ ಹಿರಿಯರಲ್ಲಿ ಆದರ ತೋರುವುದು, ಹಿರಿಯರಿಗೆ ತಾನೇನು ಕಡಿಮೆಯವನಲ್ಲ, ಸಮಾನನೆಂದುಕೊಳ್ಳು ~~ವುದು, ಹಿರಿಯರಿಗಿಂತ ತಾನು ಮೇಲು ಎಂದುಕೊಳ್ಳುವುದು.~~ ಹಿರಿಯರ ಕೆಲಸ ಮಾಡಿಕೊಡುವುದರಲ್ಲಿ ತಾನು ಅಶಕ್ತನೆಂದು ತೋರಿಕೊಳ್ಳುವುದು, ಶಕ್ತಿ ಇದ್ದೂ ಅಶಕ್ತನಂತೆ ಕರ್ಮಮಾಡುವುದು ಎಂದು. **170**

೩.೪೯ ಗುರು ಶಿಷ್ಯನನ್ನು ಪರೀಕ್ಷಿಸಿಯೇ ಉಪದೇಶ ನೀಡಬೇಕು. ಅಯೋಗ್ಯರಿಗೆ ಉಪದೇಶ ನೀಡಿದರೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುವುದು. ಶಿಷ್ಯನೂ ಗುರುವನ್ನು ಪರೀಕ್ಷಿಸಿ ವಿಷ್ಣುಭಕ್ತನೆಂದು ತಿಳಿದೇ ಶಿಷ್ಯತ್ವ ವಹಿಸಬೇಕು. ಇಲ್ಲದಿದ್ದರೆ ಅಭಕ್ತನಿಂದ ಮಿಥ್ಯಾಜ್ಞಾನೋಪದೇಶವನ್ನು ಹೊಂದಿ ನರಕಭಾಗಿಯಾದಾನೆಂದು ಕರ್ಮತಂತ್ರ ಗ್ರಂಥದಲ್ಲಿ ಹೇಳಿದೆ. **174**

೩.೫೧ ದ್ರವ್ಯಲಿಂಗಗಳೆಂದರೆ ಶಿಲೆ ಲೋಹ ಮರ ಮುಂತಾದವುಗಳಿಂದ ಮಾಡಿದ ವಿಗ್ರಹಗಳು. ಆತ್ಮಲಿಂಗವೆಂದರೆ ಮನಸಿನಲ್ಲಿ ಮಾಡಿಕೊಂಡ ಮೂರ್ತಿ. ಕ್ಷಿತಿಲಿಂಗವೆಂದರೆ ಸ್ಥಂಡಿಲದಲ್ಲಿ ಬರೆದ ಚಕ್ರಾಬ್ಜಾದಿ ಮಂಡಲಗಳೆಂದು ಕರ್ಮತಂತ್ರ ಎಂಬ ಗ್ರಂಥದಲ್ಲಿ ಹೇಳಿದೆ. **176**

೩.೫೫ 'ಆತ್ಮಾನಂ ತನ್ಮಯಂ ಧ್ಯಾಯೇತ್' ಎಂದರೆ ತನ್ನನ್ನು ಭಗವತ್

ಸ್ವರೂಪನೆಂದು ಧ್ಯಾನಿಸುವುದಲ್ಲ. 'ತನ್ಮಯ' ಎಂದರೆ ಅವನ ಅಧೀನ, ದಾಸ. ಹಾಗೇ ಧ್ಯಾನಿಸಬೇಕೆಂದು ಕರ್ಮತಂತ್ರಗ್ರಂಥ ದಲ್ಲಿದೆ. ಸ್ವಮಾತ್ಮಾನಂ ಅರ್ಚಯೇತ್ ಎಂದರೂ 'ಸ್ವಆತ್ಮ' ಎಂದರೆ ತನ್ನನ್ನು ಭಕ್ತನೆಂದು ಸ್ವೀಕರಿಸುವವನೆಂದರ್ಥ. ಇದು ಶಬ್ದನಿರ್ಣಯ ಗ್ರಂಥದಲ್ಲಿದೆ. **178**

೪.೩ ವಿಷ್ಣುವಿನ 'ಪುರುಷ' ಎಂಬ ರೂಪಗಳು ಮೂರು. ಮಹತ್ತತ್ತ್ವವನ್ನು ಸೃಜಿಸಿ ಅದರೊಳಗೆ ಪ್ರವೇಶಿಸಿದ ರೂಪ. ಬ್ರಹ್ಮಾಂಡವನ್ನು ಸೃಜಿಸಿ ಅದರೊಳಗೆ ಪ್ರವೇಶಿಸಿದ ರೂಪ ಮತ್ತು ಬ್ರಹ್ಮಾಂಡದಲ್ಲಿ ಜೀವರ ಶರೀರಗಳನ್ನು ನಿರ್ಮಿಸಿ ಅವುಗಳೊಳಗೆ ಪ್ರವೇಶಿಸಿರುವ ರೂಪ ಎಂದು. ಇದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿದೆ. **183**

೪.೫ ಬ್ರಹ್ಮನಲ್ಲಿರುವ 'ಬ್ರಹ್ಮ' ಎಂಬ ರೂಪದಿಂದ ಸೃಷ್ಟಿಯನ್ನೂ ರುದ್ರನಲ್ಲಿರುವ 'ರುದ್ರ' ಎಂಬ ರೂಪದಿಂದ ಲಯವನ್ನೂ ಪ್ರತ್ಯೇಕ ಇರುವ 'ವಿಷ್ಣು' ಎಂಬ ರೂಪದಿಂದ ಪಾಲನವನ್ನೂ ಹರಿ ಮಾಡುತ್ತಾನೆ ಎಂದು ಬ್ರಹ್ಮಪುರಾಣದಲ್ಲಿದೆ. **185**

೪.೬ ಸ್ವತಪಃ ಪ್ರಭಾವನೆಂದರೆ ಶ್ರೀಹರಿ 'ಸ್ವ' ಸ್ವವಿಷಯಕ 'ತಪಃ' ಜ್ಞಾನಸ್ವರೂಪನಾಗಿದ್ದಾನೆ ಮತ್ತು 'ಪ್ರಭಾವ' ಪ್ರಭುತ್ವ, ಸಾಮರ್ಥ್ಯ ಸ್ವರೂಪನಾಗಿದ್ದಾನೆ ಎಂದರ್ಥ. **188**

೪.೭ ಮುಖ್ಯಪ್ರಾಣನಿಗೆ ಹೊರತು ಬೇರೆ ದೇವತೆಗಳಿಗೆ ಕೆಲವೊಮ್ಮೆ ಅಸುರಾವೇಶ ವಾಗುವುದುಂಟು. ಅಸುರಾವೇಶದಿಂದ, ಜ್ಞಾನಸ್ವರೂಪರಾದ ಅವರಿಗೂ, ಅಜ್ಞಾನ ಬರುವುದು ಸಹಜ ಎಂದು ದೇವತತ್ವವೆಂಬ ಗ್ರಂಥದಲ್ಲಿದೆ. ಎಲ್ಲ ದೇವತೆಗಳೊಳಗೂ ಅಸುರರು ಪ್ರವೇಶಿಸಿ ಪಾಪದಿಂದ ಕಲುಷಗೊಳಿಸಿದರು. ಮುಖ್ಯಪ್ರಾಣನನ್ನು ಪ್ರವೇಶಿಸಲು ಯತ್ನಿಸಿದಾಗ ಮಣ್ಣು ಹೆಂಟೆಯನ್ನು ಕಲ್ಲುಬಂಡೆಗೆ ಎಸೆದಂತೆ ಅಸುರರು ತಾವೇ ನಾಶವಾದರೆಂದು ಮುಂತಾಗಿ ಶ್ರುತಿಗಳು ಹೇಳುತ್ತವೆ. **189**

೪.೧೦ ಪೂಜೆಯನ್ನು ನಿನಗೆ ಅರ್ಪಿಸುವೆನೆಂದು ಸಂಕಲ್ಪಿಸಿದರೆ ಅದಕ್ಕೆ ಬರಬಹುದಾದ ವಿಘ್ನಗಳನ್ನು ಹರಿ ತಾನೇ ನಿವಾರಿಸಿ ಪೂಜೆಯನ್ನು ಸಾಂಗವಾಗಿ ನೆರವೇರಿಸಿ ಸ್ವೀಕರಿಸುತ್ತಾನೆ. ಆಗ ಪೂಜೆ ಅಸುರರ

ಪಿತೃದೇವತೆಗಳಿಗೆ ಶ್ರಾದ್ಧದಲ್ಲಿ ಅರ್ಪಿಸುವುದು ಪಿತೃಯಜ್ಞವೆನಿಸುವುದು. ಅಗ್ನಿಯಲ್ಲಿ ಆಹುತಿರೂಪದಿಂದ ಮಾಂಸವನ್ನು ದೇವತೆಗಳಿಗೆ ಅರ್ಪಿಸುವುದು ಪಶುಯಜ್ಞವೆನಿಸುವುದು ಕ್ಷತ್ರಿಯರು ಮುಂತಾದವರು ವಾಮದೇವ ಯಜ್ಞದ ಅಂಗವಾಗಿ ಮಾಡುವ ಮದ್ಯಪಾನ ಸೋಮಾಹುತಿ ರೂಪವಾಗುವುದು. ಎಲ್ಲ ವರ್ಣದವರೂ 'ಸೌತ್ರಾಮಣಿ' ಎಂಬ ಯಾಗದಲ್ಲಿ ಯಜ್ಞಶೇಷವಾದ ಮದ್ಯವನ್ನು ಮೂಸಿನೋಡಿ ಬಿಡ ಬೇಕೆಂದು ವಿಧಿಯಿದೆ. ಮದ್ಯಪಾನ ನಿಷಿದ್ಧ. ಕ್ಷತ್ರಿಯರಿಗೆ ಮಾತ್ರ ಅದು ದೋಷಕರವಲ್ಲ. ಯಜ್ಞದಲ್ಲಿ ಪಶುವಧೆ ಹರಿಪೂಜಾರೂಪವಾಗಿ ಮಾಡಿದಾಗ ದೋಷಕರವಾಗುವುದಿಲ್ಲ. ಪಶುವಿಗೆ ಸದ್ಗತಿಯಾಗುವುದರಿಂದ ಅದನ್ನು 'ಪಶ್ವಾಲಂಭ' ಎಂದು ಕರೆಯುತ್ತಾರೆ ಹೊರತು ಪಶುಹಿಂಸೆ ಎನ್ನುವುದಿಲ್ಲ ಎಂದು ಕ್ರಿಯಾವಿಧಾನ ಎಂಬ ಗ್ರಂಥದಲ್ಲಿ ಹೇಳಿದೆ. **205**

೫.೧೫ ಶ್ರೀಹರಿ ಎಲ್ಲರಿಗೂ ಸ್ವಾತ್ಮನೆನಿಸುವುದು ತನ್ನೊಳಗೇ ಇರುವುದರಿಂದ ಹೊರತು ತಾನೇ ಆಗಿರುವುದರಿಂದ ಅಲ್ಲ. ತಾನೇ ಹರಿ ಎನ್ನುವವರು ಅಸುರರು ಎಂದು ಹರಿವಂಶದಲ್ಲಿದೆ. **213**

೫.೩೫ ಮುಮುಕ್ಷು ತಾನು ಉಪಾಸನೆ ಮಾಡಲು ಯೋಗ್ಯವಾದ ಭಗವದ್ರೂಪವನ್ನು ಗುರೂಪದೇಶದಿಂದ ತಿಳಿದು ಉಪಾಸನೆ ಮಾಡಬೇಕು. ಅದರಿಂದಲೇ ಮೋಕ್ಷ. ಆ ಉಪಾಸನೆಯಲ್ಲಿ ವಿಘ್ನಗಳನ್ನು ಪರಿಹರಿಸಿಕೊಳ್ಳಲು ಆಯಾ ಯುಗದಲ್ಲಿ ಅಥವಾ ಅದರ ಹಿಂದಿನ ಯುಗದಲ್ಲಿ ಅವತರಿಸಿದ ಮೂರ್ತಿಯನ್ನೂ ಉಪಾಸನೆ ಮಾಡಬೇಕು. ನರಸಿಂಹಮೂರ್ತಿಯನ್ನಾಗಲಿ ಗುರು ಹೇಳುವಂತೆ ಬೇರೆ ಯಾವುದೇ ಒಂದು ಮೂರ್ತಿಯನ್ನಾಗಲಿ ಆರಾಧಿಸಬಹುದು ಎಂದು ಸ್ವಾಭಾವ್ಯ ಎಂಬ ಗ್ರಂಥದಲ್ಲಿದೆ. **214**

೫.೪೨,೪೩ ಚತುರ್ಮುಖನಿಂದ ತೊಡಗಿ ಅಗ್ನಿದೇವನ ಪರ್ಯಂತ ಎಲ್ಲ ತತ್ತ್ವದೇವತೆಗಳು 'ಸರ್ವಾತ್ಮನಾ ಭಕ್ತ'ರು. ಉಳಿದ ದೇವತೆಗಳು 'ಸರ್ವಥಾ ಭಕ್ತ'ರು. ಋಷಿ ಗಂಧರ್ವಾದಿ ಗಳು 'ಭಕ್ತ'ರು. ಈ ಮೂರು ಬಗೆಯ ಹರಿಭಕ್ತರಲ್ಲಿ ಸರ್ವಾತ್ಮನಾಭಕ್ತರು ಮಾತ್ರ ದೇವ ಋಷಿ ಮುಂತಾದವರಿಗೆ ಋಣಿಗಳಲ್ಲ ಮತ್ತು ಅಧೀನರಲ್ಲ.

ಋಣ ಎರಡು ರೀತಿ ಇರುತ್ತದೆ. ಕೊಟ್ಟು ತೀರಿಸಬಹುದಾದ ಲೌಕಿಕ ಋಣ ಮತ್ತು ಏನು ಕೊಟ್ಟರು ತೀರದ ಜ್ಞಾನಭಕ್ತ್ಯಾದಿ ಋಣ ಎಂದು. ಸ್ವೋತ್ತಮರು ತತ್ವಾಭಿಮಾನಿಗಳು ಬಿಂಬರಾಗಿ ಪ್ರೇರಣೆ ನೀಡುವುದರಿಂದ, ಜ್ಞಾನಮೋಕ್ಷಗಳಿಗೆ ಕಾರಣರಾಗುವುದರಿಂದ ಅವರ ಋಣ ಮೋಕ್ಷದಲ್ಲಿಯೂ ಇದ್ದು ಎಂದೂ ತೀರಿಸಲಾಗದುದು ಎಂದು ಜೀವನಿರ್ಣಯ ಎಂಬ ಗ್ರಂಥದಲ್ಲಿದೆ.

ದೇವತೆಗಳು ಮುಂತಾದವರು ಮಳೆಬೆಳೆ ಮುಂತಾದುವನ್ನು ಕೊಡುವುದರಿಂದ ಆ ಋಣ ಪರಿಹಾರಕ್ಕೆ ದೇವ ಋಷಿ ಪಿತೃಗಳನ್ನು ಪೂಜಿಸಲೇಬೇಕು. ಯಜ್ಞಾಧಿಕಾರವಿಲ್ಲದ ಯತಿಗಳೂ ಕೂಡ ಜಲತರ್ಪಣ ಸ್ತೋತ್ರ ನಮಸ್ಕಾರ ಧ್ಯಾನಗಳಿಂದ ದೇವತೆಗಳನ್ನು ಪೂಜಿಸಲೇಬೇಕು. ಎಂದು ಸಮಯಾಚಾರಗ್ರಂಥದಲ್ಲಿದೆ. ಪ್ರಧಾನವಾದ ಹರಿಪೂಜೆಯಲ್ಲಿ ಅನುಪಯುಕ್ತವಾದ ಅನ್ಯದೇವತಾ ರಾಧನೆಯನ್ನು ಮಾಡಬಾರದು. ಎಂದು ಹರಿಸಂಹಿತೆಯಲ್ಲಿ ಹೇಳಿದೆ. **216**

೫.೪೯ ಶಿಶುಪಾಲ ಮುಂತಾದವರು ಜೀವದ್ವಯಾವೇಶ ಪ್ರಯುಕ್ತ ವೈರ ಯುಕ್ತವಾದ ಭಕ್ತಿಯನ್ನು ಮಾಡಿದರು. ಭಕ್ತಿಯಿಂದ ಅವರಲ್ಲಿದ್ದ ದೇವಜೀವನಿಗೆ ಸದ್ಗತಿಯೂ ವೈರದಿಂದ ಅಸುರಜೀವನಿಗೆ ತಮಸ್ಸೂ ಆಯಿತೆಂದು ಅಂಶವಿವೇಕವೆಂಬ ಗ್ರಂಥದಲ್ಲಿ ಹೇಳಿದೆ. **220**

೬.೧೦ ಮೂರು ಬಾರಿ 'ಯಃ' ಶಬ್ದಗಳು ಬಂದಿವೆ, ಎರಡು 'ಯಃ' ಶಬ್ದಗಳಿಗೆ ಅನ್ವಯ ಕಾಣುತ್ತದೆ. ಮೂರನೆಯದಕ್ಕೆ ಪ್ರಕಾಶರೂಪ ನೆಂದು ಅರ್ಥವಿಟ್ಟುಕೊಂಡು ಅಂಘ್ರಿಗೆ ವಿಶೇಷಣವಾಗಿ ಅನ್ವಯಿಸ ಬೇಕು. **226**

೬.೧೨ 'ಆಪಾದಲಂಬಿನೀ ಮಾಲಾ ವನಮಾಲಾ' ಎಂದಿರುವುದರಿಂದ, ಎದೆಯಲ್ಲಿರುವ ವನಮಾಲೆ ಪಾದಗಳನ್ನೂ ಸ್ಪರ್ಶಿಸುವುದರಿಂದ, ಎದೆಯಲ್ಲಿರುವ ಲಕ್ಷ್ಮಿ ಪಾದಸೇವೆ ಮಾಡಿದರೆ ಅದು ವನಮಾಲೆ ಯೊಡನೆ ಸ್ಪರ್ಧೆ ಇರಬಹುದೆಂದು ಉತ್ಪ್ರೇಕ್ಷೆ ಹೊರತು, ಲಕ್ಷ್ಮಿಯಲ್ಲಿ ಸ್ಪರ್ಧಾಮನೋಭಾವದಂಥ ದೋಷ ಯಾವುದೂ ಇಲ್ಲ ಎಂದು ವಾಮನಪುರಾಣದಲ್ಲಿದೆ. **228**

೬.೧೪ 'ರಜ್ಯಮಾನಾಃ' ಎಂದು ಏಕವಚನಾಂತಶಬ್ದ. 'ರಜ್ಯಮಾನ ಅ' ಜೀವರ ಶರೀರದಲ್ಲಿ ಅವರೊಂದಿಗೇ ಇದ್ದೂ ಶರೀರಾಭಿಮಾನಾದಿ ದೋಷರಹಿತನಾಗಿದ್ದಾನೆ ಶ್ರೀಹರಿ ಎಂದರ್ಥ. ಭಾರತದಲ್ಲಿ ಹೇಳಿದೆ– 'ಶರೀರದಲ್ಲಿ ಹರಿ ಇರುವಷ್ಟು ಕಾಲವೇ ಆಯುಷ್ಯ. ಅವನು ತೊಲಗಿದರೆ ಅದು ಹೆಣವಾಗುವುದು' ಎಂದು. **230**

೬.೧೫ ಸೃಷ್ಟಿ ಲಯಗಳಿಗಾಗಿ ಶ್ರೀಹರಿ ಸೃಷ್ಟಿಕಾಲದಲ್ಲಿ ಮಾತ್ರವಲ್ಲದೆ ಲಯಕಾಲದಲ್ಲಿಯೂ ಶುದ್ಧ ಪ್ರಕೃತ್ಯಂಶಗಳಿಂದ ಕಾಲಪ್ರವಾಹವನ್ನು ಸೃಷ್ಟಿ ಮಾಡುವವನು 'ಕಾಲ-ಮಾತ್ರ' ಎನಿಸುತ್ತಾನೆ. ಕಾಲಾಭಿಮಾನಿ ಲಕ್ಷ್ಮಿಗೂ ಒಂದು ಬಗೆಯ ಸೃಷ್ಟಿ ಮಾಡುತ್ತಾನೆ ಎಂದ ಮೇಲೆ ಕಾಲಸೃಷ್ಟಿ ಮಾಡುವನೆಂದು ಬೇರೇನು ಹೇಳಬೇಕು. ಅದರಿಂದ ಮಹಾಭಾರತ ಹೇಳುತ್ತದೆ, 'ಕಾಲ ಜೀವ ಅವ್ಯಕ್ತ ಮಹತ್ತತ್ತ್ವಗಳಿಗಿಂತಲೂ ಅವುಗಳ ಅಭಿಮಾನಿಗಳಿಗಿಂತಲೂ ಹರಿ ಉತ್ತಮನಾದ್ದರಿಂದ ಪುರುಷೋತ್ತಮನೆನಿಸಿದ್ದಾನೆ' ಎಂದು. **232**

೬.೧೬ ಶ್ರೀಹರಿ ಪ್ರಳಯಕಾಲದಲ್ಲಿ ನಾರಾಯಣರೂಪದಿಂದ ಮಲಗಿ ಪುರುಷನಾಮಕ ವಾಸುದೇವರೂಪದಿಂದ ಮಾಯಾನಾಮಕ ಲಕ್ಷ್ಮಿಯಲ್ಲಿ ಪುರುಷನಾಮಕ ಬ್ರಹ್ಮನನ್ನೂ ಪ್ರದ್ಯುಮ್ನರೂಪದಿಂದ ಕೃತಿನಾಮಕ ಲಕ್ಷ್ಮಿಯಲ್ಲಿ ಪ್ರಧಾನನಾಮಕ ಗಾಯತ್ರಿಯನ್ನೂ ಸೃಜಿಸಿದ. ಬ್ರಹ್ಮ ಗಾಯತ್ರಿಯಲ್ಲಿ ಮಹಾನ್‌ನಾಮದಿಂದ ತನ್ನನ್ನೂ ಶ್ರದ್ಧಾನಾಮದಿಂದ ಗಾಯತ್ರಿಯನ್ನೂ ಸೃಜಿಸಿದ. ಈ ಮಹಾನ್ ಶ್ರದ್ಧಾದಂಪತಿಗಳಿಂದ ಶೇಷದೇವ ಜನಿಸಿದನೆಂದು ಸೃಷ್ಟಿವಿಕ್ಷೇಪ ಗ್ರಂಥದಲ್ಲಿ ಹೇಳಿದೆ. **238**

೬.೧೭ ಜ್ಞಾನಿಗಳು ಹರಿಯ ಅನುಗ್ರಹದಿಂದ ವಿಷಯಾಸೆಯನ್ನು ತಾವೇ ಪರಿಹರಿಸಿಕೊಂಡಿದ್ದರೂ ತಿರುಗಿ ಅದು ಪೀಡಿಸಬಹುದೆಂದು ಭಯಪಡುತ್ತಾರೆ. ಶ್ರೀಹರಿ ಜೀವರ ಶರೀರದಲ್ಲಿದ್ದು ವಿಷಯಭೋಗವನ್ನು ಮಾಡುತ್ತಿದ್ದರೂ ಭಯಪಡುವುದಿಲ್ಲ. ಅವನಿಗೆ ವಿಷಯ ಲೇಪವೆಲ್ಲಿ? **239**

೬.೧೯ 'ಬಿಭ್ರತ್ತ್ವ' ಎಂದರೆ 'ಎಲ್ಲವನ್ನೂ ಹೊರುವ ಪೋಷಿಸುವ ನಿನ್ನ' ಎಂದರ್ಥ. **241**

೬.೨೪,೨೫ 'ಶ್ರೀಕೃಷ್ಣ ನೀನು ಅವತಾರಮಾಡಿ ಇಂದಿಗೆ ವರ್ಷಗಳು ನೂರರ ಮೇಲೆ ಇಪ್ಪತ್ತೈದು ಕಳೆದುವು' ಎಂದು ಬ್ರಹ್ಮಾದಿದೇವತೆಗಳು ಕೃಷ್ಣನ ಮುಂದೆ ಹೇಳುತ್ತಾರೆ. ಇಲ್ಲಿ ಇಪ್ಪತ್ತೈದೆಂದರೆ ಇಪ್ಪತ್ತೈದು ವರ್ಷಗಳಲ್ಲ, ಋತುಗಳೆಂದು ಅಭಿಪ್ರಾಯ. ಏಕೆಂದರೆ ಭವಿಷ್ಯತ್ ಪುರಾಣದಲ್ಲಿ 'ಪರಂಧಾಮಕ್ಕೆ ಹಿಂತಿರುಗಲು ಕೃಷ್ಣನಲ್ಲಿ ದೇವತೆಗಳು ಕೇಳಿಕೊಳ್ಳುವಾಗ, ನೂರು ವರ್ಷಗಳು ಮತ್ತು ಇಪ್ಪತ್ತೈದು ಋತುಗಳು ಶ್ರೀಕೃಷ್ಣನಿಗೆ ವಯಸ್ಸಾಗಿತ್ತು, ಅಂದರೆ, ಒಂದು ನೂರಾ ನಾಲ್ಕು ವರ್ಷ ಎರಡು ತಿಂಗಳು ಕಳೆದಿದ್ದುವು. ನಂತರ ಎರಡುವರ್ಷ ನಾಲ್ಕು ತಿಂಗಳು ಭೂಮಿಯಲ್ಲಿ ಇದ್ದು ಪರಂಧಾಮಕ್ಕೆ ತೆರಳಿದನೆಂ'ದು ಹೇಳಿದೆ. **242**

೬.೩೦ ಯಾದವರು ದುರ್ಜನರೆಂದು ಭೂಭಾರಹರಣ ಮಾಡಲು ಶ್ರೀಕೃಷ್ಣ ಸಂಕಲ್ಪ ಮಾಡಲಿಲ್ಲ. ಅವರು ದೇವಾಂಶ ಸಂಭೂತರು, ಸಜ್ಜನರು. ಭೂಮಿಯಲ್ಲಿ ತಾನಿಲ್ಲದಿದ್ದಾಗ ಕಲಿಕಾಲ ಬಲದಿಂದ ಅವರ ಮನಸ್ಸು ಹಾಳಾದೀತು, ಪಾಪಮಾಡಬಹುದೆಂದು ಕರುಣೆಯಿಂದ ವಿಪ್ರಶಾಪದ ನೆಪದಿಂದ ಅವರನ್ನು ಸಂಹರಿಸಲು ಸಂಕಲ್ಪಿಸಿದ. ತಾನು ಅವತಾರ ಸಮಾಪ್ತಿ ಮಾಡುವಾಗ ಜೊತೆಗೇ ಶರೀರತ್ಯಾಗ ಮಾಡಿದರೆ ಅವರಿಗೆ ಪುಣ್ಯವೂ ಬರುವುದು ಎನ್ನುವುದೂ ಶ್ರೀಕೃಷ್ಣನ ಅಭಿಪ್ರಾಯವಾಗಿತ್ತೆಂದು ಭವಿಷ್ಯತ್‌ಪುರಾಣ ಹೇಳಿದೆ. **243**

೬.೪೯ ನಾವಿನ್ನೂ ಸಂಸಾರದಲ್ಲಿ ಸುತ್ತುತ್ತಿರುವ ಅಜ್ಞಾನಿಗಳಾಗಿದ್ದೇವೆ ಎಂದು ಉದ್ಧವ ಹೇಳುತ್ತಿದ್ದರೂ ವಸ್ತುತಃ ಅವನು ಜ್ಞಾನಿ, ಸಾಕ್ಷಾತ್ ಬೃಹಸ್ಪತಿಯ ಅವತಾರ. 'ಜ್ಞಾನಿಗಳು ತಮ್ಮನ್ನು ಅಜ್ಞಾನಿಗಳೆಂದೇ ಹೇಳಿಕೊಳ್ಳುತ್ತಾರೆ. ಪ್ರೀತಿಯ ಶಿಷ್ಯರಿಗೆ ಮಾತ್ರ ಏಕಾಂತದಲ್ಲಿ ತಮ್ಮ ನಿಜರೂಪವನ್ನು ಹೇಳುತ್ತಾರೆ' ಎಂದು ನಾರದಪುರಾಣದಲ್ಲಿದೆ. **246**

೭.೭ 'ಜಗತ್ತು ಮಾಯೆ, ಅವಾಸ್ತವ, ನಿನ್ನ ಮನಸಿನ ಕಲ್ಪನೆ' ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಿಲ್ಲ. ಮಾಯೆ ಎಂದರೆ ಜಡಪ್ರಕೃತಿಯ ಅಭಿಮಾನಿನಿ ಲಕ್ಷ್ಮೀದೇವಿ ಅವಳು ಕೃಷ್ಣನ ಅಧಿ ೕನಳಾಗಿದ್ದು ಕೃಷ್ಣನ ಮನಃಸಂಕಲ್ಪದಂತೆಯೇ ಪ್ರಕೃತಿಯಿಂದ ಜಗತ್ತನ್ನು ಸೃಜಿಸುತ್ತಾಳೆ. ಪ್ರಪಂಚ ನಿಯಾಮಕಳು ಅವಳಾದ್ದರಿಂದ ಅವಳನ್ನೇ ಪ್ರಪಂಚವೆಂದು ಹೊಗಳುವುದುಂಟೆಂದು

ಮೋಕ್ಷಧರ್ಮದಲ್ಲಿದೆ. 253

೭.೮ 'ತಾನೇ ಸ್ವತಂತ್ರಕರ್ತನೆಂಬ ಭ್ರಮೆಯಿಂದ ಜೀವನಿಗೆ ಸಂಸಾರ. ಪರಮಾತ್ಮನೇ ಸ್ವತಂತ್ರಕರ್ತನೆಂಬ ಅರಿವು ಉಂಟಾದರೆ ಸಂಸಾರ ನಿವೃತ್ತಿಯಾಗುವುದು' ಎಂದು ಭಾರತ ಹೇಳಿದೆ. 'ಈ ಕರ್ಮವನ್ನು ಮಾಡುವುದು ಬಿಡುವುದು ಅಥವಾ ವ್ಯತ್ಯಾಸವಾಗಿ ಮಾಡುವುದು ನನ್ನ ಇಚ್ಛಾಧೀನ ಎನ್ನುವ ಭ್ರಮೆ ಜೀವನಿಗೆ ಇರುತ್ತದೆ, ಇದು ರಜಸ್ತಮೋಗುಣಗಳ ಪ್ರಭಾವ' ಎಂದೂ ಭಾರತ ಹೇಳಿದೆ. 256

೭.೯ 'ಆತ್ಮ' ಎಂದು ಚತುರ್ಮುಖನ ನಾಮ. 'ಪರಮಾತ್ಮ' ಎಂದು ಹರಿಯ ನಾಮ. ಅದರಿಂದ 'ಆತ್ಮನಿ ಈಕ್ಷಸ್ವ' ಎಂದರೆ 'ಜಗತ್ತನ್ನು ಚತುರ್ಮುಖನಲ್ಲಿ, ಚತುರ್ಮುಖನನ್ನು ಶ್ರೀಕೃಷ್ಣನಲ್ಲಿ ಕಾಣು' ಎಂದರ್ಥ. ಇದು ಕಾಲಸಂಹಿತಾಗ್ರಂಥದಲ್ಲಿದೆ. 258

೭.೧೦ 'ಆತ್ಮಭೂತಃ' ಎಂದರೆ ತನ್ನಂತೆ ಪರರನ್ನು ಕಾಣುವವನು. ಅವನೇ ಯೋಗಿ ಎನ್ನುವುದು ಗೀತೆ (೬.೩೨) ಯಲ್ಲಿದೆ. 260

೭.೧೧ ಜ್ಞಾನಿಯು ತನ್ನಲ್ಲಿ ಸ್ವತಂತ್ರಕರ್ತೃತ್ವವನ್ನು ಆರೋಪಿಸಿಕೊಳ್ಳುವುದಿಲ್ಲ. ಅದರಿಂದ ಅವನು ನಿಷಿದ್ಧಕರ್ಮದಿಂದ ದೂರವಿರುವುದು ಪಾಪಭಯದಿಂದಲ್ಲ. ವಿಹಿತಕರ್ಮಮಾಡುವುದೂ ಪುಣ್ಯದಾಸೆ ಯಿಂದಲ್ಲ. ಹರಿಯೇ ವಿಹಿತ ನಿಷಿದ್ಧಗಳನ್ನು ಮಾಡಲು ಬಿಡಲು ಪ್ರೇರಿಸುತ್ತಿದ್ದಾನೆ. ಹೀಗಾಗಿ ನನಗೆ ಸ್ವರ್ಗನರಕಗಳು ಇಲ್ಲ ಎಂದು ತಿಳಿದೇ ಜ್ಞಾನಿಯು ಪ್ರವೃತ್ತಿ ನಿವೃತ್ತಿಕರ್ಮ ಗಳನ್ನು ಮಾಡುತ್ತಾನೆ ಎಂದು ಬೋದ್ಧವ್ಯ ಎಂಬ ಗ್ರಂಥದಲ್ಲಿದೆ. 261

೭.೧೪ 'ಯೋಗ ವಿನ್ಯಾಸ'ನೆಂದರೆ ಜ್ಞಾನ ಮತ್ತು ಜ್ಞಾನಸಾಧನಗಳನ್ನು ದೇವತೆಗಳಲ್ಲಿ ಇರಿಸಿದವನು ಭಗವಂತ. ಏಕೆಂದರೆ ಯೋಗ ಶಬ್ದಕ್ಕೆ ದತ್ತಾತ್ರೇಯ ಯೋಗಶಾಸ್ತ್ರದಲ್ಲಿ ಮೂರು ಅರ್ಥಗಳು ಉಕ್ತವಾಗಿವೆ. ಜ್ಞಾನವೆಂದು ಒಂದು ಅರ್ಥ. ಏಕೆಂದರೆ ಅದು ಸುಖಕ್ಕೆ ಸಾಧನ ವಾಗಿದೆ. ಸಾಧನ ಎಂಬ ಅರ್ಥದಲ್ಲಿಯೂ ಕೆಲವೆಡೆ ಯೋಗ ಶಬ್ದವಿದೆ. ಚಿತ್ತನಿರೋಧ ಮೂರನೇ ಅರ್ಥ ಎಂದು. 265

೭.೧೭ ಶ್ರೀಹರಿ ಸದಾ ಪೂರ್ಣಾನಂದ. ಪ್ರಾಕೃತಶರೀರಿಯಲ್ಲ. ಸೃಷ್ಟ್ಯಾದಿ ಗಳಿಗಾಗಿ ಅವನು ಪ್ರಾಕೃತ ಪದಾರ್ಥಗಳನ್ನು ಬಯಸುವುದು ಲೀಲೆ.

ಕೃಷ್ಣಾದಿ ಅವತಾರಗಳಲ್ಲಿ ಸ್ತ್ರೀಕಾಮನೆಯೂ ಲೀಲೆಯೆ.

ಬ್ರಹ್ಮಸರಸ್ವತಿಯರು ಪ್ರಾಕೃತ ಶರೀರಿಗಳಾದರೂ ಅವರಿಗೆ ಶರೀರಾಭಿಮಾನವಿಲ್ಲ. ಆದರಿಂದ ಅವರನ್ನು ಅಶರೀರಿಗಳೆನ್ನುತ್ತಾರೆ. ಹರಿಯ ಆರಾಧನೆಗೆ ಬೇಡದ ಪ್ರಾಕೃತವಸ್ತುವಿನಲ್ಲಿ ಅವರಿಗೆ ಮೋಹವಿಲ್ಲ. ಪ್ರಾಕೃತಶರೀರಿಗಳಾದ್ದರಿಂದ ಮೋಹಉಳ್ಳವರೆನಿಸುತ್ತಾರೆ. ಬೇರೆ ದೇವತೆಗಳಿಗೆ ಪ್ರಾಕೃತಶರೀರಾಭಿಮಾನವಿದೆ. ಕೆಲವೊಮ್ಮೆ ಅನ್ಯಥಾಜ್ಞಾನ ಬರುವುದಿದೆ. ರುದ್ರನಿಗೆ ಶರೀರಾಭಿಮಾನವಿಲ್ಲದಿದ್ದರೂ ಅಸುರಾವೇಶದಿಂದ ಅನ್ಯಥಾಜ್ಞಾನ ಬರುವುದುಂಟು.

ಋಜುಯೋಗಿಗಳಿಗೆ ಋಜು ಪದವೀಪ್ರಾಪ್ತಿಗೆ ಪೂರ್ವದಲ್ಲಿ ಅಪರೋಕ್ಷ ವಿಲ್ಲದಿರುವುದೇ ಮೋಹವೆನಿಸುತ್ತದೆ. ವಾಯು ಭಾರತಿಯರಿಗೆ ಅವತಾರರೂಪಗಳಲ್ಲಿ ಸದಾ ಅಪರೋಕ್ಷವಿಲ್ಲ ~~ದಿರುವುದೂ ಮೋಹವೆನಿಸುತ್ತದೆ. ಬ್ರಹ್ಮಸರಸ್ವತಿಯರಿಗೆ ಅವತಾರ~~ ವಿಲ್ಲ. ಬ್ರಹ್ಮಪದವಿಗೆ ಹಿಂದಿನ ನೂರನೇಕಲ್ಪದಲ್ಲಿ ಬ್ರಹ್ಮಸರಸ್ವತಿಯರಿಗೆ ಯೋಗ್ಯಾಪರೋಕ್ಷ ಬರುವುದು. ಮುಂದೆ ನೂರು ಕಲ್ಪಗಳಲ್ಲಿ ಕ್ರಮೇಣ ವಿಶೇಷ ಅಪರೋಕ್ಷಗಳಾಗುತ್ತವೆ. ಸದಾ ಸರ್ವಜ್ಞರೆಂದು ಅವರನ್ನು ಹೇಳುವುದು ಅವರ ಪರೋಕ್ಷಜ್ಞಾನ ಸದಾ ಸರ್ವವಿಷಯಕ ಎನ್ನುವ ಅಭಿಪ್ರಾಯದಿಂದ. ಭಾರತೀ ದೇವಿಗೆ ನೂರು ಕಲ್ಪಗಳಲ್ಲಿ ಅವತಾರಗಳಲ್ಲಿ ಮಾತ್ರವಲ್ಲದೆ ಮೂಲರೂಪದಲ್ಲಿಯೂ ಕೆಲವೊಮ್ಮೆ ಅಪರೋಕ್ಷ ಮರೆಯಾಗುವುದುಂಟು ಎಂದು ಶಕ್ತಿವಿವೇಕ ಎಂಬ ಗ್ರಂಥದಲ್ಲಿದೆ. 'ವಾಯು ಲಕ್ಷ್ಮಿ ಭಾರತಿ ವಿಷ್ಣು ಇವರು ನಾಲ್ವರು ಶರೀರಾಭಿಮಾನ ರಹಿತರೆಂದು ಶ್ರುತಿ ಹೇಳುತ್ತದೆ' ಎಂದು ಉಭಯನಿರುಕ್ತಿ ಗ್ರಂಥದಲ್ಲಿದೆ. **267**

೨.೧೮ ವಿಷ್ಣು ವಾಯು ಶೇಷರೆಂದು ಮೂರು ಅಂಶಗಳಿಂದ ಕೂಡಿದುದು ನರ ಋಷಿಯವತಾರ. ಶೇಷನ ಅವತಾರ, ವಿಷ್ಣು ವಾಯುಗಳ ಆವೇಶ. ಅರ್ಜುನ ಇಂದ್ರಾವತಾರ. ಅವನಲ್ಲಿ ನರಾವೇಶ, ಅಂದರೆ ವಿಷ್ಣು ವಾಯು ಶೇಷರ ಆವೇಶಗಳಿದ್ದುದರಿಂದ ಒಟ್ಟು ನಾಲ್ಕು ಅಂಶಗಳಿದ್ದುವು. ಜೊತೆಗೆ, ಮೂಲರೂಪಿ ಹರಿಯ ಆವೇಶವೂ ಇದ್ದಿತು. ಬಲರಾಮ ಲಕ್ಷ್ಮಣರು ಶೇಷಾವತಾರರು, ವಿಷ್ಣುವಿನ

ಆವೇಶಯುಕ್ತರಾದ್ದರಿಂದ ಎರಡು ಅಂಶಗಳಿದ್ದುವು ಎಂದು ಅಂಶವಿವೇಕಗ್ರಂಥದಲ್ಲಿದೆ. ಅರ್ಜುನಸಖನಾದ ಕೃಷ್ಣನನ್ನು ನರಸಖನೆನ್ನುವುದು ಅರ್ಜುನ ನರಾವೇಶಯುಕ್ತನಾದ್ದರಿಂದ. **272**

೭.೧೯ ಲೋಕತತ್ವದಲ್ಲಿ ವಿಚಕ್ಷಣರೆನಿಸಿದರೆ ಸಾಲದು, ಪರತತ್ವದಲ್ಲಿಯೂ ವಿಚಕ್ಷಣನಾಗಬೇಕು. ಲೋಕತತ್ವದ ಅನುಭವದ ಮೂಲಕ ಪರತತ್ವವನ್ನರಿತು ಅದನ್ನೂ ಅನುಭವದಿಂದ ಕಾಣಬೇಕು. ಅದರಲ್ಲಿ ದೃಢವಾದ ಭಕ್ತಿ ಶ್ರದ್ಧೆಗಳನ್ನು ಹೊಂದಬೇಕು. ಅದಕ್ಕೆ ವಿರೋಧಿ ಯಾದ ನಾಸ್ತಿಕ್ಯದ ಬಗ್ಗೆ ದ್ವೇಷವನ್ನೂ ಬೆಳೆಸಿಕೊಳ್ಳಬೇಕು. ಹೀಗೆ ಮಾಡದೆ ಲೌಕಿಕದಂತೆ ವೇದಾಂತವೂ ಒಂದು ದರ್ಶನ ಎಂದುಕೊಂಡರೆ,

'ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ'

ಎಂದು ಈಶೋಪನಿಷತ್ತು ಹೇಳುವಂತೆ ತಮಃ ಪ್ರಾಪ್ತಿ ನಿಶ್ಚಿತ. ಪರಾಪರತತ್ವಗಳೆರಡರ ವಿಷಯದಲ್ಲಿಯೂ ಆಳವಾದ ಪಾಂಡಿತ್ಯ ವಿದ್ದರೂ ಭಕ್ತಿವೈರಾಗ್ಯಗಳಿಲ್ಲದೆ ಸಾಕ್ಷಾತ್ಕಾರವಿಲ್ಲ ಮೋಕ್ಷವಿಲ್ಲ ಎಂದು ಷಾಡ್ಗುಣ್ಯವೆಂಬ ಗ್ರಂಥ ಎಚ್ಚರಿಕೆ ನೀಡಿದೆ. **273**

೭.೨೦ ಅವಧೂತ ಮುನಿ 'ಕೇವಲಾತ್ಮ'ನಾಗಿದ್ದಾನೆ ಎಂದರೆ ಹೆಂಡತಿಮಕ್ಕಳು ಮನೆಮಠಗಳನ್ನು ತೊರೆದಿದ್ದಾನೆ ಎಂದರ್ಥವಲ್ಲ. 'ಸ್ಪರ್ಶವಿಹೀನ' ನೆಂದು ಇದನ್ನೇ ಹೇಳಿರುವುದರಿಂದ ಪುನರುಕ್ತಿಯಾದೀತು. ಅದರಿಂದ ಕೇವಲ ಶರೀರವನ್ನು ಅದು ಮೋಕ್ಷಸಾಧನವೆಂದು ಇಟ್ಟುಕೊಂಡಿದ್ದಾನೆ. ಶರೀರದಿಂದಾಗುವ ವಿಷಯಸುಖಾನುಭವ ವನ್ನು ತೊರೆದಿದ್ದಾನೆ ಎಂದರ್ಥ. **274**

೭.೨೮ 'ಪರಾರ್ಥ್ಯೈಕಾಂತ ಸಂಭವ'ವೆಂದರೆ, ಸಂಭವ, ಸಂಪತ್‌ಸಮೃದ್ಧಿ, ತನ್ನಲ್ಲಿರುವ ಐಹಿಕ ಪಾರತ್ರಿಕ ಸುಖಸಂಪತ್ತೆಲ್ಲವೂ ಕೇವಲ ಹರಿಗುರುಗಳ ಸಜ್ಜನರ ಉಪಯೋಗಕ್ಕಾಗಿ ಹೊರತು ತನ್ನ ಉಪಯೋಗಕ್ಕಾಗಿ ಅಲ್ಲ ಎನ್ನುವ ವೈರಾಗ್ಯಭಾವ ಬೇಕೆಂದು ಷಾಡ್ಗುಣ್ಯ ಗ್ರಂಥದಲ್ಲಿದೆ. **275**

೭.೪೨ ಬ್ರಹ್ಮಾತ್ಮ ಭಾವವೆಂದರೆ ಬ್ರಹ್ಮಾತ್ಮೈಕ್ಯವಲ್ಲ. ಇಲ್ಲಿ ಬ್ರಹ್ಮ ಎಂದರೆ

ಹೊರಗೆ ವ್ಯಾಪ್ತವಾದ ಭಗವದ್ರೂಪ, ಆತ್ಮವೆಂದರೆ ಒಳಗೆ ಅಂತರ್ಯಾಮಿಯಾಗಿರುವ ಭಗವದ್ರೂಪ. ಇವೆರಡಕ್ಕೆ ಐಕ್ಯ ಚಿಂತನೆ ಮಾಡಬೇಕು. ಅಂತರ್ಯಾಮಿ ಕೇವಲ ಶರೀರದೊಳಗೆ ವಿಷಯಭೋಗ ಮಾಡುವನೆಂದು ತಿಳಿಯಬಾರದು. ಅವನೇ ಹೊರಗೂ ಆಕಾಶದಂತೆ ಅಸಂಗನಾಗಿ ವ್ಯಾಪಿಸಿದ್ದಾನೆ ಎಂದೂ ತಿಳಿಯಬೇಕೆಂದು ತಂತ್ರಭಾಗವತದಲ್ಲಿದೆ. **277**

೭.೪೩ ಆಕಾಶಾದಿಗಳಲ್ಲಿರುವ ನಿರ್ವಿಕಾರತ್ವಾದಿ ಗುಣಗಳನ್ನು ಮಾತ್ರ ಜೀವ ತನ್ನಲ್ಲಿ ಬೆಳೆಸಿಕೊಳ್ಳಬೇಕು ಹೊರತು ಅಲ್ಲಿರುವ ವ್ಯಾಪ್ತ್ಯಾದಿಗುಣ ಗಳನ್ನು ಸಾಧಿಸಿಕೊಳ್ಳಲಾಗದು. ಅವು ಪರಮಾತ್ಮನಲ್ಲಿ ಸ್ವಾಭಾವಿಕ ನಿತ್ಯಸಿದ್ಧವಾಗಿವೆ ಎಂದು ತಿಳಿಯಬೇಕು. ಹೀಗೆ ಲೋಕದಲ್ಲಿ ಕಂಡುಬರುವ ಗುಣಗಳನ್ನು ಬೇರೆಬೇರೆಯಾಗಿ ವಿವೇಚನ ಮಾಡಿ ತಿಳಿಯಬೇಕೆಂದು ಲೋಕತಂತ್ರವೆಂಬ ಗ್ರಂಥದಲ್ಲಿದೆ. **280**

~~೭.೪೪ ನೀರಿನ ಮಾಧುರ್ಯಗುಣ ಜ್ಞಾನಿಯಲ್ಲಿಯೂ ಇರಬೇಕು. ತನ್ನ ನಡೆ~~
ನುಡಿಗಳಿಂದ ಸಜ್ಜನರಿಗೆ ಸುಖಕರನಾಗಿರಬೇಕು ಅದಕ್ಕೆ ಸುಖಕರ ನಾದ ಪರಮಾತ್ಮನ ಉಪಾಸನೆ ಮಾಡಬೇಕು. ಇದನ್ನು ಶಬ್ದನಿರ್ಣಯ ಹೀಗೆ ಹೇಳುತ್ತದೆ—'ಮಧು–ರ ಎಂದರೆ ಸುಖ ದಾಯಕ. ಮಾಧುರ್ಯವೆಂದರೆ ಸುಖಕರ ಸ್ವಭಾವ. ಸುಖಸ್ವರೂಪನಾದ ಪರಮಾತ್ಮನಲ್ಲಿ ಆಸಕ್ತಿಯೂ ಮಾಧುರ್ಯ ವೆನಿಸುತ್ತದೆ' ಎಂದು. **281**

೭.೪೫ ಬೆಂಕಿ 'ದೂರಭಾಜನ' ದೂರದಲ್ಲಿ ಕುಳಿತು ಮೈಕಾಯಿಸಿ ಕೊಳ್ಳಬೇಕೇ ಹೊರತು ಮುಟ್ಟಲಾಗದು. ಬೆಂಕಿ 'ದುರ್ಧರ್ಷ' ಧರ್ಷಣಕ್ಕೆ ಬಲಾತ್ಕಾರಕ್ಕೆ ಒಳಗಾಗದು. ಕಾಲಿಂದ ತುಳಿದು ಅವಮಾನಿಸಲಾಗದು. ಗುರುಹಿರಿಯರು ಬೆಂಕಿಯಂತೆ ಎಂದು ತಿಳಿಯಬೇಕು. ಷಾಡ್ಗುಣ್ಯಗ್ರಂಥದಲ್ಲಿ ಹೇಳಿದೆ—'ಧರ್ಷಣವೆಂದರೆ ಪರಾಭವಗೊಳಿಸುವುದು ಅಥವಾ ತಿರಸ್ಕಾರ ಮಾಡುವುದು ಗುರುಹಿರಿಯರಲ್ಲಿ ಇದನ್ನು ಮಾಡಬಾರದು. ಅವರೊಡನೆ ಒಂದೇ ಆಸನದಲ್ಲಿ ಹಾಸಿಗೆಯಲ್ಲಿ ಇದ್ದರೂ ಅವರಿಗೆ ಅವಮಾನ ಮಾಡಿದಂತಾಗುವುದು' ಎಂದು. **282**

೭.೪೬,೪೭ ಜ್ಞಾನಿಯು ಬೂದಿಮುಚ್ಚಿದ ಕೆಂಡದಂತಿರಬೇಕು. ಯೋಗ್ಯಜಿಜ್ಞಾಸುಗಳು ಬಂದಾಗ ಮಾತ್ರ ಪ್ರಕಟನಾಗಬೇಕು. ಪರಮಾತ್ಮ ಬೆಂಕಿಯಂತೆ ವಸ್ತುಗಳ ಒಳಗೆ ಪ್ರವೇಶಿಸಬಲ್ಲ, ಜ್ಞಾನಿ ಹಾಗೆ ಮಾಡಲಾರ. ಹೀಗೆ ಬೆಂಕಿಯ ಕೆಲವು ಗುಣಗಳನ್ನು ತನ್ನಲ್ಲಿ ಬೆಳೆಸಿಕೊಳ್ಳಬೇಕು, ಎಲ್ಲ ಗುಣ ಪರಮಾತ್ಮನಲ್ಲಿವೆ ಎಂದು ತಿಳಿಯಬೇಕು. ಬೆಂಕಿ ಸಣ್ಣ ಕಟ್ಟಿಗೆಯಲ್ಲಿ ಸಣ್ಣದಾಗಿ ದೊಡ್ಡ ಕಟ್ಟಿಗೆಯಲ್ಲಿ ದೊಡ್ಡದಾಗಿರುವಂತೆ ಪರಮಾತ್ಮ ಅಣುವಿನಲ್ಲಿ ಅಣುವಾಗಿ ಮಹತ್ತಿನಲ್ಲಿ ಮಹತ್ತಾಗಿ ಪ್ರಾದುರ್ಭವಿಸುವನು ಎಂದು ವೈಭವ ಎಂಬ ಗ್ರಂಥದಲ್ಲಿದೆ. **284**

೭.೪೯ ಅವಯವ–ಅವಯವಿ, ಗುಣ–ಗುಣಿ. ಶಕ್ತಿ–ಶಕ್ತಿಮಾನ್, ಕ್ರಿಯಾ–ಕ್ರಿಯಾವಾನ್, ಸ್ವರೂಪಾಂಶ–ಅಂಶಿಗಳಿಗೆ ಪರಮಾತ್ಮ ಲಕ್ಷ್ಮೀ ಜೀವ ಸ್ವರೂಪಗಳಲ್ಲಿ ಅತ್ಯಂತಾಭೇದವಿದೆ. ಅದರಿಂದಲೆ ಪರಮಾತ್ಮ ಲಕ್ಷ್ಮೀ ಜೀವಸ್ವರೂಪಗಳು ನಿರವಯವ ನಿರ್ಗುಣ ನಿರಂಶ ಎಂದು ಮುಂತಾಗಿ ವ್ಯವಹಾರವಿದೆ. ಭಿನ್ನವಾದ ಗುಣಾದಿಗಳು ಇಲ್ಲ, ಆದರೂ ಭೇದ ಪ್ರತಿನಿಧಿಯಾದ ವಿಶೇಷವಿರುವುದರಿಂದ 'ಗುಣಾದಿಗಳು ಅವರಲ್ಲಿ ಇವೆ' ಎಂದು ವ್ಯವಹಾರ ಕೂಡುತ್ತದೆ. ಸಕಲ ಪದಾರ್ಥಗಳಲ್ಲಿಯೂ ಇರುವ ಈ ವಿಶೇಷವು ಪದಾರ್ಥಗಳಿಂದ ಅಭಿನ್ನವೇ ಆದರೂ 'ಪದಾರ್ಥಗಳಲ್ಲಿ ವಿಶೇಷ' ಎಂದು ವ್ಯವಹಾರಕ್ಕೆ ಇನ್ನೊಂದು ವಿಶೇಷ ಬೇಕಾಗಿಲ್ಲ, ತನಗೆ ತಾನೇ ಅದು ವ್ಯವಹಾರವನ್ನು ಕೂಡಿಸಬಲ್ಲುದು. ಅದಕ್ಕೆ ಈ ಶಕ್ತಿ ಭಗವಂತನ ಅಚಿಂತ್ಯಶಕ್ತಿಯಿಂದ ಬಂದಿದೆ.

ಜಡಪದಾರ್ಥಗಳಲ್ಲಿ ಈ ಅವಯವ ಗುಣ ಕ್ರಿಯಾದಿಗಳು ಆಗಾಗ ಉತ್ಪತ್ತಿ ನಾಶಗಳನ್ನು ಹೊಂದುವುದರಿಂದ, ಪದಾರ್ಥಗಳು ಮಾತ್ರ ಹಾಗೇ ಇರುವುದರಿಂದ ಅತ್ಯಂತಾಭೇದ ವನ್ನು ಹೇಳಲಾಗದು. ಸ್ಪಷ್ಟವಾಗಿ ಭೇದ ಕಾಣದಿರುವುದರಿಂದ ಅತ್ಯಂತ ಭೇದವನ್ನೂ ಕೂಡ ಹೇಳಲಾಗದು. ಹೀಗಾಗಿ ಭೇದಾಭೇದವನ್ನು ಒಪ್ಪಬೇಕು ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ವಿಷ್ಣುವಿನಲ್ಲಿ ಅಚಿಂತ್ಯಶಕ್ತಿ ಇದೆ ಎನ್ನುವುದು 'ಆತ್ಮನಿ ಚೈವಂ ವಿಚಿತ್ರಾಶ್ಚ ಹಿ' ಎಂದು ಮುಂತಾಗಿ ಬ್ರಹ್ಮಸೂತ್ರಗಳಲ್ಲಿ ಉಕ್ತವಾಗಿದೆ. **286**

೭.೫೧ ಶರೀರದಲ್ಲಿ ಜೀವನೊಂದಿಗೇ ಇರುವ ಅಂತರ್ಯಾಮಿಯನ್ನು

ಜೀವನಂತೆಯೇ ಸುಖದುಃಖ ಭಾಗಿ ಎಂದು ಅಜ್ಞಾನಿಗಳು ತಪ್ಪಾಗಿ ತಿಳಿಯುತ್ತಾರೆ. ಇದಕ್ಕೆ ಸೂರ್ಯದೇವ ಮತ್ತು ನೀರಲ್ಲಿ ಕಾಣುವ ಸೂರ್ಯಪ್ರತಿಬಿಂಬಗಳನ್ನು ದೃಷ್ಟಾಂತವಾಗಿ ಭಾಗವತ ಕೊಟ್ಟಿದೆ. ಪ್ರಭಾಸಕ ಎಂಬ ಗ್ರಂಥದಲ್ಲಿ ಇದರ ವಿವರಣೆ ಇದೆ. **289**

೮.೭ 'ಮಾನವನು ದೇವ ಋಷಿ ಪತ್ನಿಯರನ್ನು ಬಯಸಿದರೆ ಅಂಧಂತಮಸ್ಸಾಗುವುದು. ಬೇರೆ ಪರಸ್ತ್ರೀಕಾಮನೆಯಿಂದ ನರಕ. ಕೆಲವೊಮ್ಮೆ ದೇವ ಋಷಿಗಳೆ ವ್ಯಭಿಚಾರ ಮಾಡಿದಾಗ ಅವರಿಗೆ ಅಪಕೀರ್ತಿ ಮುಂತಾದ ಅನಿಷ್ಟವಾಗುತ್ತದೆ ಹೊರತು ನರಕವಿಲ್ಲ.' ಎಂದು ಧರ್ಮಸಂಹಿತೆಯಲ್ಲಿದೆ.

'ಹೆಣ್ಣು ಮಾಯೆ ಎಂದರೆ ಸುಖದ ಭ್ರಾಂತಿಗೆ ಕಾರಣಳು ಎಂದರ್ಥ. ಏಕೆಂದರೆ ಮಾಯೆ ಎನಿಸುವ ಭಗವಂತನ ಇಚ್ಛೆಯಿಂದ ಸುಖಭ್ರಾಂತಿ ಕಾರಣವಾದ ಕಾಮಿನೀಕಾಂಚನಗಳ ನಿರ್ಮಾಣ ವಾಗಿರುತ್ತದೆ' ಎಂದು ತಂತ್ರನಿರುಕ್ತ ಗ್ರಂಥದಲ್ಲಿದೆ. 'ಮಾಯೆ ಎಂದರೆ ಭಗವಂತನ ಬುದ್ಧಿಶಕ್ತಿ. ಅದಕ್ಕೆ ವಶವಲ್ಲದುದು ಅನಾದಿ ಕಾಲದಿಂದಲೂ ಯಾವುದೂ ಇಲ್ಲ. ಎಲ್ಲವೂ ಅದಕ್ಕೇ ವಶ. ಆದರಿಂದ ಎಲ್ಲವೂ ಮಾಯಾ ಮಯ' ಎಂದು ಮಾಯಾವೈಭವ ಎಂಬ ಗ್ರಂಥದಲ್ಲಿದೆ.

'ಸ್ವತಂತ್ರನಾದ ಪರಮಾತ್ಮನೊಬ್ಬನೇ ನಿಜವಾಗಿ 'ಇದ್ದಾನೆ'. ಅಸ್ವತಂತ್ರರು ಇದ್ದೂ ಇಲ್ಲದಂತೆ. ಆದರಿಂದ ಪ್ರಪಂಚ ಅವಿದ್ಯಮಾನ ಎನಿಸುತ್ತದೆ. ಅದು ನಶ್ವರವಾದ್ದರಿಂದ 'ನಿವರ್ತೇತ' ಎಂದು ನಿವೃತ್ತಿಯನ್ನು ಉಪನಿಷತ್ತು ಹೇಳುತ್ತದೆ.

ಪರಮಾತ್ಮ ಏಕಮೇವಾದ್ವಿತೀಯನೆಂದರೆ ಅವನಿಗೆ ಸಮಾನರಿಲ್ಲ ಎಂದರ್ಥ ಹೊರತು ಪ್ರಪಂಚ ಮಿಥ್ಯೆ ಎಂದಲ್ಲ. 'ಪ್ರಪಂಚೋ ಯದಿ ವಿದ್ಯೇತ' ಎಂಬ ಉಪನಿಷತ್ತು 'ಯದಿ' ಶಬ್ದವನ್ನು ಬಳಸಿದ್ದು 'ಪ್ರಪಂಚ ಸದಾ ಅಸ್ತಿತ್ವದಲ್ಲಿರಲು ಅಶಕ್ತ' ಎನ್ನುವ ಅಭಿಪ್ರಾಯ ದಿಂದ. ಅಶಕ್ತವಾದ್ದರಿಂದಲೇ 'ನಿವರ್ತೇತ' ನಿಶ್ಚಯವಾಗಿ ನಾಶಹೊಂದುತ್ತದೆ ಎಂದರ್ಥ. 'ಯದಿ' ಶಬ್ದಕ್ಕೆ ಅಶಕ್ತ ಎಂಬ ಅರ್ಥ ಶಬ್ದನಿರ್ಣಯ ಗ್ರಂಥಕ್ಕೆ ಸಮ್ಮತವಾಗಿದೆ. 'ಯದಿ ಶಬ್ದವು

ಅವಸ್ತು ಅಸ್ವತಂತ್ರ ಸಂಶಯ ಎಂಬ ಅರ್ಥಗಳಲ್ಲಿದೆ. ಅವಸ್ತು ಎಂದರೆ ಅಶಕ್ತ ಅಲ್ಪಶಕ್ತ' ಎಂದು ಅಲ್ಲಿ ಹೇಳಿದೆ. **295**

೮.೩೪ ಅಪ್ಸರೆಯರಲ್ಲಿ ಕೆಲವರಿಗೆ ರಮಾವೇಶದಿಂದ ಭಗವಂತನ ಪತ್ನಿಯರಾಗುವ ಯೋಗ್ಯತೆ ಇದೆ. ಅವರಲ್ಲಿ ಒಬ್ಬಳು ಪಿಂಗಳೆ. ಬೇರೆ ಸ್ತ್ರೀಯರು ಭಗವಂತನ ಪತ್ನಿಯರಾಗಲು ಬಯಸಿದರೆ ಅನರ್ಥವಿದೆ ಎಂದು ಸ್ವಾಭಾವ್ಯಗ್ರಂಥದಲ್ಲಿ ಹೇಳಿದೆ. **300**

೯.೧೦ ದುರ್ಜನರೊಡನಾಟವನ್ನು ಸರ್ವಥಾ ಮಾಡಕೂಡದು. ಸಜ್ಜನರೊಂದಿಗೆ ಎಷ್ಟೆಷ್ಟು ಸಾಧ್ಯವೋ ಅಷ್ಟು ಒಡನಾಟ ಮಾಡಬೇಕು. ಅದು ಮೋಕ್ಷಕ್ಕೆ ಕಾರಣವಾಗುವುದು ಎಂದು ಷಾಡ್ಗುಣ್ಯದಲ್ಲಿ ಹೇಳಿದೆ. **304**

೯.೧೨ ಮುಕ್ತಿಯಲ್ಲಿ ಜೀವನಿಗೆ ಸ್ವರೂಪಭೂತ ಚಿನ್ಮಯ ಅಂತಃಕರಣ ಮಾತ್ರವಿರುತ್ತದೆ. ಬಾಹ್ಯ ಜಡ ಅಂತಃಕರಣ ನಾಶವಾಗಿರುತ್ತದೆ. ~~ಅದರಿಂದ ಸ್ವರೂಪಾಂತಃಕರಣದಿಂದಲೇ ಮುಕ್ತಿಯಲ್ಲಿ ಎಲ್ಲ~~ ಸುಖಗಳನ್ನು ಅನುಭವಿಸುತ್ತಾನೆ ಎಂದು ಮುಕ್ತಿತತ್ವದಲ್ಲಿದೆ. **306**

೯.೧೬,೧೭ ಪ್ರಳಯಕಾಲದಲ್ಲಿ ಕಾಲ ಪ್ರಕೃತಿ ಜೀವ ಮುಂತಾದವುಗಳು ಇದ್ದರೂ ಅವುಗಳಿಂದ ಏನೂ ಸೃಷ್ಟಿಕಾರ್ಯ ನಡೆಯುವುದಿಲ್ಲ, ಅದರಿಂದ ಅವು ಇದ್ದೂ ಇಲ್ಲದಂತೆ. ಹೀಗಾಗಿ ವಿಷ್ಣು ಒಬ್ಬನೇ ಆಗ ಇದ್ದನೆಂದು ಉಪನಿಷತ್ತು ಹೇಳುತ್ತಿದೆ. ವಿಷ್ಣುವೂ ಲಯಕಾಲದಲ್ಲಿ ಏನೂ ಕಾರ್ಯ ಮಾಡದಿರುವುದರಿಂದ ಅವನೂ ಇದ್ದೂ ಇಲ್ಲದಂತೆಯೇ ಎನ್ನಬಾರದು. ಅವನು ಆಗಲೂ ಕಾಲಾದಿಗಳನ್ನು ನಿಯಮನ ಮಾಡುತ್ತಾನೆ ಎಂದು ತತ್ವಲಯದಲ್ಲಿದೆ. ವಿಷ್ಣುಶಕ್ತಿಗಳೆಂದರೆ ಪ್ರಕೃತಿ ಮತ್ತು ಸತ್ವಾದಿಗುಣಗಳು. ವಿಷ್ಣುವಿನ ನಿಯಂತ್ರಣಕ್ಕೆ ಒಳಪಟ್ಟಿರುವುದರಿಂದ ಶಕ್ತಿಗಳೆನಿಸಿವೆ. ಅವುಗಳಿಗೆ ಪ್ರಳಯಕಾಲ ದಲ್ಲಿ ಸಾಮ್ಯಾವಸ್ಥೆ ಬರುತ್ತದೆ. ವಿಷ್ಣುವಿನ ಸ್ವರೂಪಶಕ್ತಿ ಎಲ್ಲಕ್ಕೂ ನಿಯಾಮಕವೇ ಹೊರತತು ಯಾವುದಕ್ಕೂ ನಿಯಮ್ಯವಲ್ಲ, ಅದಕ್ಕೆ ಎಂದೂ ಸಾಮ್ಯಾವಸ್ಥೆ ಎಂಬುದಿಲ್ಲ ಎಂದು ಶಕ್ತಿತತ್ವಗ್ರಂಥದಲ್ಲಿದೆ. **308**

೯.೨೨,೨೩ ಭಯಯುಕ್ತವಾದ ಭಕ್ತಿಯಿಂದ ಹರಿಯನ್ನು ಚಿಂತಿಸುವವನು ಭಕ್ತಿಸಾರೂಪ್ಯವನ್ನು ಹೊಂದುತ್ತಾನೆ. ಏಕೆಂದರೆ ಭಕ್ತಿ ಎಂದರೆ

ಭಗವಂತನಲ್ಲಿ ಮಾಹಾತ್ಮ್ಯಜ್ಞಾನಪೂರ್ವಕವಾದ ಪ್ರೇಮ. ಇದು ಯೋಗ್ಯಜೀವರ ಸ್ವರೂಪಭೂತವೇ ಆಗಿದೆ. ಅದರಿಂದ ಮೋಕ್ಷದಲ್ಲಿ ವ್ಯಕ್ತವಾಗುತ್ತದೆ. ಇದೇ ಭಕ್ತಿಸಾರೂಪ್ಯರೂಪವಾದ ಮೋಕ್ಷ. ದ್ವೇಷದಿಂದ ಭಗವಂತನನ್ನು ನೆನೆಯುವವನು ಕೊನೆಯಲ್ಲಿ ದ್ವೇಷಸಾರೂಪ್ಯವನ್ನು ಹೊಂದುತ್ತಾನೆ. ದ್ವೇಷವೆಂದರೆ ಪರಮಾತ್ಮನಲ್ಲಿ ಗುಣಗಳನ್ನು ಅಲ್ಲಗಳೆದು ದೋಷವನ್ನು ಚಿಂತಿಸುವುದು. ದ್ವೇಷಿಯು ಹರಿ ಸುಖಸ್ವರೂಪನಾಗಿದ್ದರೂ ಅದನ್ನು ಒಪ್ಪದೆ ವಿಪರೀತವಾಗಿ ದುಃಖರೂಪತ್ವವನ್ನು ಚಿಂತಿಸುತ್ತಾನೆ. ದುಃಖ ಅವನ ಸ್ವರೂಪಭೂತವಾದ್ದರಿಂದ ತಮಸಿನಲ್ಲಿ ವ್ಯಕ್ತವಾಗುತ್ತದೆ. ಇದೇ ದುಃಖರೂಪತ್ವ ಚಿಂತನರೂಪವಾದ ದ್ವೇಷಸಾರೂಪ್ಯ. ಹಿರಣ್ಯಕಶಿಪು ಸಾಯುವ ಕ್ಷಣದಲ್ಲಿ ನರಸಿಂಹನನ್ನು ದ್ವೇಷದಿಂದ ಈತ ಪರಮಾತ್ಮನಲ್ಲ ಯಾವುದೋ ಭೂತ ರಾಕ್ಷಸನಿರಬೇಕೆಂದು ಚಿಂತಿಸಿದ್ದರಿಂದ ರಾವಣನೆಂಬ ರಾಕ್ಷಸನಾಗಿ ಜನಿಸಿದ. ಬಳಿಕ ಶ್ರೀರಾಮನನ್ನೂ ರಾಜಕುಮಾರನಾದ ಒಬ್ಬ ಮಾನವನೆಂದು ಚಿಂತಿಸಿದ್ದರಿಂದ ಶಿಶುಪಾಲನೆಂಬ ರಾಜಕುಮಾರನಾಗಿ ಜನಿಸಿದ. ಶಿಶುಪಾಲ ಶ್ರೀಕೃಷ್ಣನನ್ನು ಸದಾ ದ್ವೇಷದಿಂದ ಚಿಂತಿಸಿದರೂ ಸಾಯುವಾಗ ದ್ವೇಷಿಜೀವ ತಮಸಿಗೆ ಹೋಗುತ್ತಿದ್ದಂತೆ ಸಜ್ಜೀವ ಸ್ವಾಭಾವಿಕ ಭಕ್ತಿಯಿಂದಲೇ ಚಿಂತಿಸಿ ಸದ್ಗತಿ ಪಡೆದ ಎಂದು ಭಾಗವತತಂತ್ರದಲ್ಲಿ ಉಕ್ತವಾಗಿದೆ. ಭಗವಂತನನ್ನು ಗುಣಪೂರ್ಣನೆಂದು ಚಿಂತಿಸಿ ದೇವತೆಗಳು ಮುಕ್ತಿಯಲ್ಲಿ ಸ್ವಯೋಗ್ಯಗುಣಪೂರ್ಣರಾಗುತ್ತಾರೆ. ಅಸುರರು ದುಃಖಪೂರ್ಣನೆಂದು ಚಿಂತಿಸಿ ತಮಸಿನಲ್ಲಿ ದುಃಖಪೂರ್ಣರಾಗುತ್ತಾರೆ ಎಂದು ಉಪನಿಷತ್ತು ಹೇಳಿದೆ. ಕುರಡಿಕುಠಾರ ಹುಳುವು ಕೀಟವನ್ನು ಮೊದಲಿಗೆ ದ್ವೇಷಿಸಿದರೂ ತನಗೆ ಆಹಾರವನ್ನು ಕೊಡುವುದರಿಂದ ಕೀಟವನ್ನು ಪ್ರೀತಿಸಿ ಕೀಟಸ್ವರೂಪ ಚಿಂತನೆಯಿಂದ ಕೀಟಸಾರೂಪ್ಯವನ್ನು ಹೊಂದುತ್ತದೆ ಎಂದು ಸ್ವಾತಂತ್ರ್ಯವಿವೇಕವೆಂಬ ಗ್ರಂಥದಲ್ಲಿ ಹೇಳಿದೆ. **310**

೯.೨೫ ‘ಸತ್ವನಿಧನ’ ಎಂದರೆ ಬಲಜ್ಞಾನರೂಪವಾದ ಸತ್ವಕ್ಕೆ ನಿಧಿ, ಆಶ್ರಯನಾಗಿರುವ ಶ್ರೀಹರಿ. ‘ಸತತಾತ್ಯುದರ್ಕ’ ಎಂದರೆ ಸದಾ ಉತ್ತಮನೇ ಆಗಿರುವ ಕೇವಲ ಸುಖರೂಪನಾಗಿರುವ ಶ್ರೀಹರಿ. **315**

೯.೨೬ 'ಸ್ವಬೀಜಂ ಸೃಷ್ಟ್ವಾ' ಎಂದರೆ 'ತನ್ನ ಪುನರ್ಜನ್ಮಕ್ಕೆ ಬೀಜವೆನಿಸಬಲ್ಲ ಕರ್ಮವನ್ನು ಮಾಡಿ' ಎಂದರ್ಥ. **318**

೯.೩೨ ಒಬ್ಬನೇ ಗುರುವಿನಿಂದ ವಿದ್ಯೆ ಪೂರ್ಣವಾಗಿ ಲಭಿಸುವುದಿಲ್ಲ, ಬಹುಜನರಿಂದ ವಿದ್ಯೆಯನ್ನು ಕಲಿಯಬೇಕು. ಬಹುಜನರಿಂದ ಕಲಿತರೂ ಚತುರ್ಮುಖನ ಉಪದೇಶವಿಲ್ಲದೆ ಮುಕ್ತಿ ಲಭ್ಯವಾಗುವುದಿಲ್ಲ. ಸಾಕ್ಷಾತ್ ಶ್ರೀಹರಿಯಿಂದ ಉಪದೇಶ ಪಡೆದರೂ ಮತ್ತೆ ಚತುರ್ಮುಖ ನಿಂದ ಉಪದೇಶ ಪಡೆಯಲೇ ಬೇಕು. ಏಕೆಂದರೆ ಶ್ರೀಹರಿ ಚತುರ್ಮುಖನಿಂದ ಉಪದೇಶ ಕೊಡಿಸಿಯೇ ಮುಕ್ತಿನೀಡುತ್ತಾನೆ. ಋಜುಗಳಿಗೆ ತಾನೇ ಉಪದೇಶ ನೀಡುತ್ತಾನೆ. ತಾನು ಯಾರಿಂದಲೂ ಉಪದೇಶ ಪಡೆಯುವುದಿಲ್ಲ ಎಂದು ಗುರುವಿವೇಕ ಎಂಬ ಗ್ರಂಥದಲ್ಲಿದೆ. **319**

೧೦.೩ ಜೀವನಿಗೆ ಭಕ್ತಿಜ್ಞಾನಾದಿಗಳ ಬಯಕೆ ಸ್ವರೂಪಭೂತವಾಗಿರುತ್ತದೆ. ಕಾಮಕ್ರೋಧಾದಿಗಳು ಬಾಹ್ಯಅಂತಃಕರಣದಲ್ಲಿ ಮೂಡುವ ವಿಕಾರಗಳು. ಅವುಗಳನ್ನು ಸಜ್ಜೀವರ ಸ್ವರೂಪಭೂತ ವೆಂದು ತಪ್ಪಾಗಿ ತಿಳಿಯುವುದು ನಾನಾತ್ವ ಕಲ್ಪನೆ, ಅದು ವಿಫಲ. ಸದಾ ಹೇಯ ಎಂದು ವಿವೇಕ ಎಂಬ ಗ್ರಂಥದಲ್ಲಿದೆ. **325**

೧೦.೪ ಜ್ಞಾನಪೂರ್ವಕವಾದ ನಿಷ್ಕಾಮಕರ್ಮ ನಿವೃತ್ತಕರ್ಮವೆನಿಸುವುದು. ನಿವೃತ್ತಕರ್ಮದಿಂದ ಪರಮಾತ್ಮನ ಆರಾಧನೆ ಮಾಡುವವನಿಗೆ ಪರಮಾತ್ಮ ಪ್ರಾಪ್ತಿಯಾಗುವುದೆಂದು ಮಹಾಭಾರತದಲ್ಲಿ ಹೇಳಿದೆ. **328**

೧೦.೫ ನನ್ನನ್ನೇ ಸದಾ ಧ್ಯಾನಿಸುವವನು ಮದಾತ್ಮನೆನಿಸುವನೆಂದು ಭಾರತದಲ್ಲಿ ಹರಿಯ ಮಾತು. **331**

೧೦.೯ ದೇಹಸಂಬಂಧ ಪ್ರಯುಕ್ತವಾದ ಜನನ ಮರಣಾದಿ ದುಃಖ ಜೀವನಿಗೆ ಸ್ವತಃ ಇಲ್ಲ, ದೇಹಾಭಿಮಾನ ನಿಮಿತ್ತವಾಗಿ ಬರುತ್ತದೆ. ಅದೂ ಕೂಡ ಪರಮಾತ್ಮನಿಗೆ ಇಲ್ಲ, ಇರುವಂತೆ ತೋರಿಕೊಳ್ಳುತ್ತಾನೆ. ಜೀವನಿಗೆ ಮೋಕ್ಷಪರ್ಯಂತ ಶರೀರಾಭಿಮಾನವಿದ್ದೇ ಇರುತ್ತದೆ ಎಂದು ವಿಷ್ಣುಸಂಹಿತೆಯಲ್ಲಿ ಇದೆ. **331**

೧೦.೧೧ ಜೀವನಲ್ಲಿ ವಸ್ತುಬುದ್ಧಿಯನ್ನು ಬಿಡಬೇಕು. 'ಅವಸ್ತು ಎಂದರೆ ಅಶಕ್ತ, ವಸ್ತು ಎಂದರೆ ಶಕ್ತ, ಪರಮಾತ್ಮನೊಬ್ಬನೇ ಶಕ್ತ' ಎಂದು ಲಕ್ಷಣ

ಎಂಬ ಗ್ರಂಥದಲ್ಲಿ ಹೇಳಿದೆ. ಅದರಿಂದ ಜೀವನನ್ನು ಪರಮಾತ್ಮನಂತೆ ಸರ್ವಶಕ್ತನೆಂದು ತಿಳಿಯಬಾರದೆಂದರ್ಥ. **331**

೧೦.೧೩ ಪರಮಾತ್ಮನ ಅಪರೋಕ್ಷವು ಮಾಯೆಯನ್ನು ಕಳೆಯುತ್ತದೆ ಎಂದರೆ ಪ್ರಕೃತಿಯನ್ನಾಗಲಿ, ಭಗವಂತನ ಇಚ್ಛೆಯನ್ನಾಗಲಿ ನಾಶಮಾಡುತ್ತದೆ ಎಂದಲ್ಲ, ಅನಾದಿಕಾಲದಿಂದ ಜೀವನಲ್ಲಿ ಜೀವಾಚ್ಛಾದಿಕಾ ಮತ್ತು ಪರಮಾಚ್ಛಾದಿಕಾ ಎಂದು ಎರಡು ಮಾಯೆಯ ಆವರಕಗಳಿವೆ. ಪಿಶಾಚಿಯಂತೆ ದುಃಖ ಉಂಟುಮಾಡುತ್ತವೆ. ಅಹಂಕಾರ ಮಮಕಾರಗಳನ್ನು ಹುಟ್ಟಿಸಿ ಭಗವಂತನನ್ನು ಮರೆಮಾಡುತ್ತವೆ. ಪರಮಾತ್ಮಾಪರೋಕ್ಷಜ್ಞಾನದಿಂದ ಅವು ನಾಶ ಹೊಂದುತ್ತವೆ ಎಂದು ವೈಭವ ಎಂಬ ಗ್ರಂಥದಲ್ಲಿದೆ.

'ಯದಾತ್ಮ್ಯಮೇತತ್' ಮಾಯೆಯೆ ಸಂಸಾರಕ್ಕೆ ಮೂಲ ಎಂದು ಭಾಗವತ ಹೇಳುತ್ತಿದೆ. 'ಏತತ್ ಶಬ್ದವು ಸಾಕ್ಷಿಪ್ರತ್ಯಕ್ಷಸಿದ್ಧವಾದ ದುಃಖಾದಿ ರೂಪವಾದ ಸಂಸಾರವನ್ನು ಹೇಳುತ್ತದೆ. ಕೆಲವೆಡೆ ಪ್ರಪಂಚವನ್ನೂ ಕೆಲವೆಡೆ ಪರಬ್ರಹ್ಮನನ್ನೂ ಇನ್ನೂ ಕೆಲವೆಡೆ ಮಿಥ್ಯಾಜ್ಞಾನಾದಿ ಹೇಯವಸ್ತುವನ್ನು ಹೇಳುತ್ತದೆ ಎಂದು ತಂತ್ರನಿರುಕ್ತ ಎಂಬ ಗ್ರಂಥ ಹೇಳಿದೆ. ಅದರಿಂದ ಭಾಗವತದಲ್ಲಿ ಏತತ್ ಶಬ್ದವು ಸಂಸಾರವನ್ನು ಹೇಳುತ್ತದೆ.

ಅಪರೋಕ್ಷಜ್ಞಾನವು ಮಾಯೆಯನ್ನು ಕಳೆದ ಬಳಿಕ ತಾನೂ ನಾಶವಾಗುತ್ತದೆ ಎಂದರೆ 'ಬಾಹ್ಯಅಂತಃಕರಣಜನ್ಯವಾದ ಜ್ಞಾನವು ಮುಕ್ತಿಯಲ್ಲಿ ನಾಶವಾಗಿರುತ್ತದೆ. ಸ್ವರೂಪಭೂತವಾದ ಜ್ಞಾನದಿಂದಲೇ ಮುಕ್ತಿಯಲ್ಲಿ ಸುಖಭೋಗಗಳು' ಎಂದು ಮುಕ್ತಿತತ್ವಗ್ರಂಥ ವಿವರಣೆ ನೀಡಿದೆ. **335**

೧೦.೧೪,೧೫,೧೬ ದೇಹದ ಉತ್ಪತ್ತಿ ನಾಶಗಳನ್ನು ನೋಡಿ ಜೀವನ ಉತ್ಪತ್ತಿನಾಶಗಳೆನ್ನುತ್ತಾರೆ. ಜೀವರು ಅನಾದಿನಿತ್ಯರು. ಅವರಲ್ಲಿ ಉತ್ತಮರು ಸುಖರೂಪರು, ಅಧಮರು ನಿತ್ಯದುಃಖಿಗಳು ಎಂದು ಜೀವತತ್ವ ಎಂಬ ಗ್ರಂಥದಲ್ಲಿದೆ. **340**

೧೦.೧೭ 'ವಿವಶರಾದವರಿಗೆ ಏನು ಪುರುಷಾರ್ಥ ಸಿಕ್ಕೀತು?' ಎನ್ನುವುದರ ಅಭಿಪ್ರಾಯ ಜೀವತತ್ವ ಗ್ರಂಥದಲ್ಲಿ ಹೀಗಿದೆ—'ಗುರುಹಿರಿಯರ

ವಶದಲ್ಲಿದ್ದರೆ ಪರಮಸುಖವೆ. ನೀಚರ ವಶದ ಲ್ಲಿದ್ದರೆ ಏನು ಸುಖ? ಗುರುಹಿರಿಯರ ವಶದಲ್ಲಿರುವುದು ಕೂಡ ಅವರಲ್ಲಿ ಭಕ್ತಿಪ್ರೀತಿಗಳಿದ್ದರೆ ಮಾತ್ರ ಸುಖಕರ. ಇಲ್ಲದಿದ್ದರೆ ದುಃಖವೆ. ಗುರುಹಿರಿಯಲ್ಲಿ ಭಕ್ತಿಪ್ರೀತಿಗಳು ಬೇಕು.' **341**

೧೦.೧೮,೧೯ ಜ್ಞಾನಿಗಳೆಂದೆನಿಸಿಕೊಂಡವರುಗಳಿಗೂ ಕೂಡ ದೇಹಾಭಿಮಾನ ದುಃಖಕರ ಎಂದಮೇಲೆ ಅಜ್ಞಾನಿಗಳ ಪಾಡೇನು? ಎಂದು ಭಾಗವತ ಹೇಳುತ್ತಿದೆ. ಇಲ್ಲಿ 'ತಥಾ' ಶಬ್ದವು 'ಕಿಂಪುನಃ' ಇನ್ನೇನು ಎನ್ನುವ ಕೈಮುತ್ಯನ್ಯಾಯವನ್ನು ಹೇಳುತ್ತದೆ. ಶಾಬ್ದ ಎಂಬ ಗ್ರಂಥದಲ್ಲಿ ತಥಾಶಬ್ದಕ್ಕೆ 'ಪುನಃ' ಎಂದೂ 'ಪ್ರಸ್ತುತ' ಎಂದೂ ಅರ್ಥಗಳು ಉಕ್ತವಾಗಿವೆ.

'ದುಃಖಮೂಢ'ರೆಂದರೆ ದುಃಖದಿಂದ ಚಿತ್ತಸ್ಥೈರ್ಯ ಕಳೆದು ಕೊಂಡವರು. 'ಅಹಂಕಾರಿ' ಗಳೆಂದರೆ ತಮ್ಮಲ್ಲಿಲ್ಲದ ಗುಣಗಳನ್ನು ಇವೆ ಎಂದು ಅಭಿಮಾನಪಡುವವರು. **344**

೧೦.೩೧,೩೨,೩೩,೩೪ 'ಪ್ರಪಂಚವಿರುವಷ್ಟು ಕಾಲ ಮಾತ್ರ ಜೀವರಲ್ಲಿ ಭೇದ. ಭೇದವಿರುವಷ್ಟು ಕಾಲ ಮಾತ್ರ ಜೀವರಿಗೆ ಪಾರತಂತ್ರ್ಯ ಹಾಗೂ ಪರಮಾತ್ಮನಿಂದ ಭಯ. ಅದ್ವೈತಜ್ಞಾನದಿಂದ ಎಲ್ಲವೂ ನಿವೃತ್ತಿಯಾದರೆ ಭಯವಿಲ್ಲ' ಎಂದು ೩೨ನೇ ಶ್ಲೋಕದಲ್ಲಿ ಹೇಳಿದೆ. ೩೩ನೇ ಶ್ಲೋಕದಲ್ಲಿ 'ಈ ಮತ ತಮಸ್ಸಿಗೆ ಕಾರಣ' ಎಂದರೆ ಅದ್ವೈತಮತ ನಿಂದೆ ಎನ್ನುವುದು ಸ್ಪಷ್ಟ. ಏಕೆಂದರೆ, ಜೀವನು ಗುಣಬದ್ಧನಾದ್ದರಿಂದ ಕರ್ಮಫಲವನ್ನು ಉಣ್ಣುತ್ತಾನೆ ಎಂದು ೩೧ನೇ ಶ್ಲೋಕದಲ್ಲಿ ದ್ವೈತಸಮರ್ಥನೆಯಿದೆ. **351**

೩೨, ೩೩, ೩೪ನೇ ಶ್ಲೋಕಗಳನ್ನು ತಂತ್ರಭಾಗವತದಲ್ಲಿ ಹೀಗೆ ವ್ಯಾಖ್ಯಾನಿಸಲಾಗಿದೆ— 'ಮುಕ್ತರು ಪರಮಾತ್ಮನನ್ನು 'ಕಾಲ' ಅಂದರೆ ಸರ್ವಗುಣ ಪೂರ್ಣ, 'ಆತ್ಮ' ವ್ಯಾಪ್ತ 'ಆಗಮ' ಸರ್ವಜ್ಞ, 'ಲೋಕ' ಜ್ಞಾನಸ್ವರೂಪ, 'ಸ್ವಭಾವ' ಸ್ವತಂತ್ರ, 'ಧರ್ಮ' ಜಗದ್ಧಾರಕ ಎಂದು ಉಪಾಸನ ಮಾಡುತ್ತಾರೆ. ಅಜ್ಞರಾದ ದುರ್ಮತಿಗಳು ಪ್ರಪಂಚವಿರುವಷ್ಟು ಕಾಲ ಮಾತ್ರ ಜೀವರಲ್ಲಿ ಭೇದ, ಪಾರತಂತ್ರ್ಯ, ಪರಮಾತ್ಮನ ಭಯಗಳು ಎನ್ನುತ್ತಾರೆ. ಈ

ಮತವನ್ನು ಉಪಾಸನೆ ಮಾಡುವವರು ನಿತ್ಯ ಪರಮದುಃಖಿಗಳಾಗುತ್ತಾರೆ. ಭೇದಪಾರತಂತ್ರ್ಯಗಳು ಮೋಕ್ಷದಲ್ಲಿಯೂ ಇರುವುದರಿಂದ ನಿತ್ಯವೆಂದು ತಿಳಿಯಬೇಕು. ಆಗಲೇ ಪರಮಸುಖಿಗಳಾಗುತ್ತಾರೆ' ಎಂದು.

೧೦.೩೫,೩೬,೩೭ 'ಪರಮಾತ್ಮ ಬದ್ಧನೆನ್ನುವುದಾದರೆ, ಅದೇಹಿ ದೇಹವಿಲ್ಲದವನು ಹೇಗೆ ದೇಹಬದ್ಧನಾಗುತ್ತಾನೆ?' ಎಂದು ಉದ್ಧವನ ಪ್ರಶ್ನೆ. 'ಒಬ್ಬನೇ ಜೀವ. ಅವನೇ ನಿತ್ಯಬದ್ಧ, ಅವನೇ ನಿತ್ಯಮುಕ್ತ ಎಂದು ನನ್ನ ಅಭಿಪ್ರಾಯ' ಎಂದು ಉದ್ಧವ ಅದ್ವೈತಿಗಳ ಏಕಜೀವವಾದಿ ಮತವನ್ನು ಹೇಳುತ್ತಿದ್ದಾನೆ.

'ಗುರುವಿನ ಬಳಿಯಲ್ಲಿ ಶಿಷ್ಯ ಪೂರ್ವಪಕ್ಷಿಯ ವಾದವನ್ನು ಹೇಳಿ ಅದನ್ನು ತನ್ನ ಮತವೆಂದು ಹೇಳಿಕೊಂಡರೆ ಸುಳ್ಳಾಡಿದ ಪಾಪ ಬರುವುದಿಲ್ಲ. ಪೂರ್ವಪಕ್ಷಿಯ ವಾದ ಏಕೆ ಸರಿಯಲ್ಲವೆಂದು ತಿಳಿದು ಸಿದ್ಧಾಂತದಲ್ಲಿ ದಾರ್ಢ್ಯ ಸಂಪಾದಿಸುವುದು ಅದರ ಉದ್ದೇಶವಿರುತ್ತದೆ' ಎಂದು ವಿಕ್ಷೇಪ ಎಂಬ ಗ್ರಂಥದಲ್ಲಿ ಹೇಳಿದೆ. **353**

೧೧.೧ 'ನನಗೆ ತ್ರಿಗುಣಗಳಿಂದ ಬಂಧಮೋಕ್ಷಗಳೆಂ'ದು ಶ್ರೀಕೃಷ್ಣ ಹೇಳುತ್ತಿಲ್ಲ. 'ನನ್ನ ಅಧೀನವಾದ ತ್ರಿಗುಣಗಳಿಂದ ಜೀವರಿಗೆ ಬಂಧಮೋಕ್ಷಗಳು' ಎನ್ನುತ್ತಿದ್ದಾನೆ. ಸ್ವಾಭಾವ್ಯ ಎಂಬ ಗ್ರಂಥದಲ್ಲಿ ಹೀಗೆ ಭಗವಂತ ಹೇಳುತ್ತಾನೆ—'ನಾನು ನಿರ್ಗುಣ. ನನಗೆ ಬಂಧವಾಗಲಿ ಮೋಕ್ಷವಾಗಲಿ ಇಲ್ಲ. ನನ್ನ ಅಧೀನನಾದ ಜೀವನಿಗೇ ಅವು ಇರುತ್ತವೆ' ಎಂದು. **363**

೧೧.೨ ಸಂಸಾರ 'ವಾಸ್ತವವಲ್ಲ' ಎಂದರೆ ಸ್ವಾಭಾವಿಕವಲ್ಲ ಎಂದರ್ಥ. 'ಕೆಟ್ಟ ಕನಸು ಕಾಣುತ್ತಿರುವವನು ಅದನ್ನು ಕನಸೆಂದು ತಿಳಿಯದ ಪ್ರಯುಕ್ತ ದುಃಖಪಡುವಂತೆ ಜಾಗರದಲ್ಲಿ ತನ್ನ ಮತ್ತು ಭಗವಂತನ ಸ್ವರೂಪ ತಿಳಿಯದಿರುವುದರಿಂದ ಸಂಸಾರದುಃಖವನ್ನು ಅನುಭವಿಸುತ್ತಾನೆ. ಅದರಿಂದ ಇದು ಅಜ್ಞಾನಪ್ರಯುಕ್ತವೇ ಹೊರತು ಸ್ವಾಭಾವಿಕವಲ್ಲ' ಎಂದು ಲೋಕಸಂಹಿತೆಯಲ್ಲಿ ಹೇಳಿದೆ. **366**

೧೧.೩ ಜ್ಞಾನ ಅಜ್ಞಾನಗಳು ನನಗೆ ಪ್ರತಿಮೆಯಂತೆ ಇರುವುದರಿಂದ ನನ್ನ ಶರೀರವೆನಿಸಿಕೊಳ್ಳುವುವು. ನಿತ್ಯ ಜ್ಞಾನಾನಂದ ಸ್ವರೂಪನಾದ

ನಾನು ಅವುಗಳಿಗಿಂತ ಭಿನ್ನ. ಅವು ನನ್ನ ಅಧೀನ. ಹೀಗಾಗಿ ಅವುಗಳಿಂದಾಗುವ ಪರಿಣಾಮ ನನಗೆ ಅಂಟಿಕೊಳ್ಳುವುದಿಲ್ಲ. ಜ್ಞಾನ ಅಜ್ಞಾನ ಸತ್ವಾದಿಗುಣಗಳು ದೇಹೋತ್ಪತ್ತಿ ಸುಖದುಃಖವೆಲ್ಲವೂ ನನ್ನಿಚ್ಛೆಯಂತೆಯೇ ಆಗುವುದರಿಂದ ನಾನು ಬಂಧಮೋಕ್ಷ ರಹಿತ. ಎಂದೂ ಬಂಧವಿಲ್ಲದವನಾದ್ದರಿಂದ ನಾನು ಮುಕ್ತನೇ ಹೊರತು ಬಂಧನಾಶಉಳ್ಳವನಾದ್ದರಿಂದಲ್ಲ' ಎಂದು ಕಾಲಸಂಹಿತೆಯಲ್ಲಿ ಭಗವಂತನ ಮಾತು. 'ಜ್ಞಾನಕ್ಕೆ ಶ್ರೀದೇವಿಯೂ ಅಜ್ಞಾನಕ್ಕೆ ದುರ್ಗಾದೇವಿಯೂ ಅಭಿಮಾನಿನಿಯರು ಅದರಿಂದ ಅವು ಹರಿಗೆ ಅನಾದಿ ಪ್ರತಿಮೆಗಳೆನಿಸಿವೆ' ಎಂದು ಮಾಯಾವೈಭವದಲ್ಲಿದೆ. **368**

೧೧.೪ 'ನನ್ನ ಭಿನ್ನಾಂಶನಾದ ಜೀವನಿಗೆ ಬಂಧಮೋಕ್ಷಗಳು ಹೊರತು ನನಗೆ ಅವು ಎಂದೂ ಇಲ್ಲ ಅಗ್ನಿಗೆ ಪ್ರಳಯಾಗ್ನಿಯಂತೆ ನನಗೆ ಮತ್ಸ್ಯಾದಿಗಳು ಅಭಿನ್ನಾಂಶಗಳು. ಸೂರ್ಯನಿಗೆ ಮಿಂಚಿನ ಹುಳದಂತೆ ಜೀವರು ಭಿನ್ನಾಂಶರು' ಎಂದು ವೈಲಕ್ಷಣ್ಯ ಎಂಬ ಗ್ರಂಥದಲ್ಲಿ ಹೇಳಿದೆ. **370**

'ನನಗೆ ಎಂದೂ ಬಂಧವಿಲ್ಲದಿರುವುದರಿಂದ ಬಂಧನಾಶರೂಪವಾದ ಮೋಕ್ಷವೂ ಇಲ್ಲ. ನಿತ್ಯಮುಕ್ತನಾಗಿದ್ದೇನೆ. ನನ್ನ ಅನುಗ್ರಹದಿಂದ ಬಂಧನಾಶವಾದರೆ ಜೀವ ಮುಕ್ತನೆನಿಸುತ್ತಾನೆ. ಬೆಳಕು ಬಿದ್ದು ಅಂಧಕಾರ ತೊಲಗಿದರೆ ಮಾತ್ರ ಮರಗಳು ಬೆಳಗುತ್ತವೆ. ಸೂರ್ಯ ಹಾಗಲ್ಲ. ಸದಾ ಬೆಳಗುತ್ತಾನೆ ಎಂದು ತತ್ತ್ವೋದಯ ಗ್ರಂಥದಲ್ಲಿದೆ.

೧೧.೫ ಮುಕ್ತ ಎಂಬುದೊಂದು ಹರಿನಾಮ. ದೈವೀಮೀಮಾಂಸಾ ಸೂತ್ರದಲ್ಲಿ ಹಾಗೇ ಹೇಳಿದೆ. 'ನಿತ್ಯ ಶುದ್ಧ ಬುದ್ಧ ಮುಕ್ತ ಸತ್ಯ ಸುಖ ಅದ್ವಯ ಪ್ರತ್ಯಕ್ ಏಕ ಪೂರ್ಣ ಇವೆಲ್ಲವೂ ಹರಿಯ ನಾಮಗಳು. ಏಕೆಂದರೆ ಅವುಗಳ ಅರ್ಥ ಮುಖ್ಯವಾಗಿ ಹರಿಯಲ್ಲಿಯೇ ಕೂಡುತ್ತದೆ' ಎಂದು. 'ಬದ್ಧ ಎಂದು ಜೀವನಾಮ. ಏಕೆಂದರೆ ಮುಕ್ತಜೀವನೂ ಕೂಡ ಹಿಂದೆ ಬದ್ಧನಾಗಿದ್ದರಿಂದ ಅವನೂ ಬದ್ಧನೆನಿಸುತ್ತಾನೆ. ಸೂರ್ಯ ಸದಾ ಬೆಳಗುವಂತೆ ಹರಿ ನಿತ್ಯಮುಕ್ತನಾದ್ದರಿಂದ, ಬಂಧನಾಶವಿಲ್ಲದವನಾದರೂ ಮುಕ್ತನಾಮದಿಂದ ಸದಾ ಕರೆಸಿಕೊಳ್ಳುತ್ತಾನೆ' ಎಂದು ಬ್ರಹ್ಮಸಂಹಿತೆಯಲ್ಲಿ ಹೇಳಿದೆ. **372**

೧೧.೬ ಅಶುಭರಸವನ್ನು ಉಣದಿರುವುದರಿಂದ ಪರಮಾತ್ಮ ಉಣದ ಹಕ್ಕಿ ಎನಿಸುತ್ತಾನೆ. ಸದಾ ಸ್ವರೂಪಾನಂದ ತೃಪ್ತನಾದ್ದರಿಂದ ತೃಪ್ತಿಗಾಗಿ ಉಣದವನಾದ್ದರಿಂದಲೂ ಉಣದ ಹಕ್ಕಿ. ಸ್ವತಂತ್ರನಾಗಿ ಅಶುಭವನ್ನು ಬಿಟ್ಟು ಶುಭವನ್ನೇ ಉಣ್ಣುವುದರಿಂದ ಉಣುವವನೆಂದೂ ಕರೆಸಿಕೊಳ್ಳುತ್ತಾನೆ. ಜೀವನು 'ಸ್ವಾದ್ವತ್ತಿ' 'ಸ್ವಾದುರಸವನ್ನು ಉಣುತ್ತಾನೆ' ಎಂದು ಶ್ರುತಿಯಲ್ಲಿ ಹೇಳಿದರೂ ಅಸ್ವತಂತ್ರನಾದ್ದರಿಂದ ಅಸ್ವಾದುವನ್ನು ಸ್ವಾದುವೆಂದು ಭ್ರಮಿಸಿ ಉಣುವನೆಂದು ಅದಕ್ಕೆ ಅರ್ಥ, ಎಂದು ಭೋಗನಿರ್ಣಯ ಎಂಬ ಗ್ರಂಥದಲ್ಲಿದೆ. ಪರಭೋಗ ಎಂಬ ಗ್ರಂಥದಲ್ಲಿಯೂ ಹೀಗೇ ಉಕ್ತವಾಗಿದೆ. **374**

'ಸಾಶನಾನಶನೇ ಅಭಿ' ಎಂದು ಪುರುಷಸೂಕ್ತದಲ್ಲಿ ಉಣದಿದ್ದರೆ ಸೊರಗುವ ಮಾನವರನ್ನು ಉಣುವವರೆಂದೂ ಉಣದಿದ್ದರೂ ಬಲಿಷ್ಠರಾಗಿರುವ ದೇವತೆಗಳನ್ನು ಉಣದವರೆಂದೂ ಕರೆಯಲಾಗಿದೆ. ಅದರಂತೆ ಉಣದಿದ್ದರೆ ಸೊರಗುವ ಜೀವನನ್ನು ಉಣ್ಣುವ ಹಕ್ಕಿ ಎಂದೂ ಸದಾ ಬಲಿಷ್ಠನಾದ ಪರಮಾತ್ಮನನ್ನು ಉಣದಹಕ್ಕಿ ಎಂದೂ ಕರೆದಿದೆ ಎಂದು ಸ್ವಾಭಾವ್ಯ ಎಂಬ ಗ್ರಂಥದಲ್ಲಿದೆ. ಋಗ್ವೇದದಲ್ಲಿ 'ದ್ವಾಸುಪರ್ಣಾ' ಮಂತ್ರವಾದ ಬಳಿಕ 'ಯತ್ರಾ ಸುಪರ್ಣಾ' 'ಯಸ್ಮಿನ್‌ವೃಕ್ಷೇ' ಎಂದು ಮಂತ್ರಗಳು 'ಸ್ವಾದ್ವತ್ತಿ' ಎನ್ನುವುದರ ಹಾರ್ದವನ್ನು ತೆರೆದು ತೋರಿಸುತ್ತವೆ. ಕೂರ್ಮಸಂಹಿತೆಯಲ್ಲಿ ಈ ಮಂತ್ರಗಳ ವಿವರಣೆ ಬಂದಿದೆ. 'ಸರ್ವಂ ವಾ ಅತ್ತಿ' 'ಯಸ್ಯ ಬ್ರಹ್ಮ ಚ ಕ್ಷತ್ರಂ ಚ' ಎಂದು ಉಪನಿಷತ್ತಿನಲ್ಲಿ, 'ಅತ್ತಾ ಚರಾಚರಗ್ರಹಣಾತ್' ಎಂದು ಸೂತ್ರದಲ್ಲಿ 'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ' ಎಂದು ಗೀತೆಯಲ್ಲಿ ವಿವರಣೆಗಳಿವೆ.

೧೧.೭ ಜೀವ ಅಜ್ಞಾನಾಂಧನಾಗಿದ್ದಾನೆ. ಮುಕ್ತಿಯಲ್ಲಿಯೂ ಅವನು ಅಲ್ಪಜ್ಞನೆಂದೂ, ಪರಮಾತ್ಮ ಸದಾ ಸರ್ವಜ್ಞನೇ ಎಂದೂ ವಿನಿರ್ಣಯಗ್ರಂಥದಲ್ಲಿ ಮತ್ತು ವೈಶೇಷ್ಯಗ್ರಂಥದಲ್ಲಿ ಹೇಳಿದೆ. 'ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ' ಎಂದು ಗೀತೆಯಲ್ಲಿಯೂ ಹೇಳಿದೆ. 'ಜೀವರು ಯೋಗ್ಯರಾಗಿದ್ದು ಯತ್ನ ಮಾಡಿದರೆ ಅನಾದಿ ಅಜ್ಞಾನಾಂಧತ್ವವನ್ನು ಕಳೆದುಕೊಳ್ಳುತ್ತಾರೆ. ಅಯೋಗ್ಯರಾಗಿದ್ದರೆ ಅಂಧತ್ವವು ಶಾಶ್ವತವೆ. ಮುಕ್ತನೂ ಕೂಡ

ಹರಿಯ ಅಧೀನ ನಾಗಿರುವುದರಿಂದ ಬದ್ಧನೆನಿಸುತ್ತಾನೆ. ಹೀಗಾಗಿ ಅವನು ನಿತ್ಯಬದ್ಧ. ದುಃಖದಿಂದ ಬಿಡುಗಡೆ ಹೊಂದಿರುವುದರಿಂದ ಮುಕ್ತನೂ ಹೌದು. ಶ್ರೀಹರಿಯೊಬ್ಬನೆ ಸ್ವತಂತ್ರನಾದ್ದರಿಂದ ನಿತ್ಯಮುಕ್ತ ಎಂದು ಮುಕ್ತಿವಿವೇಕಗ್ರಂಥದಲ್ಲಿದೆ. **379**

'ಉತ್ತಮ ಜೀವರ ಗಣಗಳು ಹದಿನಾಲ್ಕು ಲಕ್ಷ ಇವೆ. ಒಂದೊಂದು ಗಣದಲ್ಲಿಯೂ ಅಸಂಖ್ಯ ಜೀವರಿರುವರು. ಅವರು ಸ್ವರ್ಗ ಮೋಕ್ಷಗಳಿಗೆ ಏರುವುದು, ಸಾಯುಜ್ಯಮೋಕ್ಷದಲ್ಲಿ ಹರಿಯ ಶರೀರವನ್ನು ಹೊಕ್ಕು ಹೊರಗೆ ಬರುವುದು ಇತ್ಯಾದಿ ಎಲ್ಲವೂ ಹರಿಯ ಅಧೀನ. ಮುಕ್ತರಿಗೂ ಹರಿ ಪೂಜ್ಯ, ಅವನೇ ಮುಕ್ತರಿಗೆ ಆಶ್ರಯ' ಇತ್ಯಾದಿಯಾಗಿ ಭಾರತದಲ್ಲಿ ಹೇಳಿದೆ. ಲಿಂಗಭಂಗ ಹೊಂದಿ ಶ್ವೇತದ್ವೀಪಾದಿಗಳಲ್ಲಿ ವಾಸಿಸುವವರು ಮುಕ್ತರು, ಹರಿಯ ಅಧೀನರು, ಸ್ವೋತ್ತಮರಿಗೂ ಅಧೀನರು. ಅವರಿಗೆ ಹಾಗೆ ಇರುವುದಕ್ಕಿಂತ ಹೆಚ್ಚಿನ ಸುಖ ಬೇರೆ ಇಲ್ಲ. ನಿತ್ಯಮುಕ್ತನು ಸ್ವತಂತ್ರ ನಾದ ಹರಿಯೊಬ್ಬನೆ ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿದೆ.

೧೧.೮ ಜೀವ ಅಜ್ಞಾನಿಯಾದ್ದರಿಂದ ಶರೀರದಲ್ಲಿ ಬಂಧಿತನಾಗಿದ್ದಾನೆ, ಆದರೆ ಹರಿ ಅಜ್ಞಾನಿಯಲ್ಲದ್ದರಿಂದ ಬಂಧಿತನಾಗಿಲ್ಲ. ಕನಸು ಕಾಣುತ್ತಿರುವನಂತೆ ಜೀವ, ಎಚ್ಚೆತ್ತವನಂತೆ ಹರಿ. ಹರಿ ಎಚ್ಚೆತ್ತವನಂತೆ ಎಂದರೆ ಅವನಿಗೆ ಹಿಂದೆ ಅಜ್ಞಾನವಿತ್ತೆಂದು ಅಭಿಪ್ರಾಯವಲ್ಲ. ಅವನಿಗೆ ಎಂದೂ ಅಜ್ಞಾನವಿಲ್ಲ. ದೃಷ್ಟಾಂತದಲ್ಲಿ ಎಲ್ಲ ಸಾಮ್ಯ ಇರಬೇಕೆಂದಿಲ್ಲ ಎಂದು ವಿವೇಕ ಎಂಬ ಗ್ರಂಥದಲ್ಲಿದೆ. **383**

೧೧.೯ ಅಜ್ಞನಾದ ಜೀವ ಅಸ್ವತಂತ್ರನಾಗಿದ್ದು ಇಂದ್ರಿಯಗಳಿಂದ ಬರುವ ಸುಖದುಃಖಗಳನ್ನು ತನ್ನವೆಂದು ಅಭಿಮಾನ ಪಡುತ್ತಾನೆ. ಹರಿ ಅವುಗಳನ್ನು ಹಾಗೆ ತಿಳಿಯುವುದಿಲ್ಲ. ಅವನು ಸ್ವತಂತ್ರ ಸರ್ವಜ್ಞ ಎಂದು ಸ್ವಾತಂತ್ರ್ಯ ಎಂಬ ಗ್ರಂಥದಲ್ಲಿದೆ. **384**

೧೧.೧೦ ಜೀವರು ಮಾಡುವ ಕರ್ಮ 'ಗುಣಭಾವ್ಯ'ವಾಗಿರಬೇಕು, ಅಂದರೆ 'ಈ ಕರ್ಮ ಮಾಡುವಲ್ಲಿ ನಾನು 'ಗುಣ' ಪರಾಧೀನ ಹೊರತು ಸ್ವತಂತ್ರಕರ್ತನಲ್ಲ' ಎಂದು ಭಾವಿಸಬೇಕು. ತಾನೇ ಸ್ವತಂತ್ರ ನೆಂದು ಭಾವಿಸಿದರೆ, ಸೇವಕನು ತನ್ನನ್ನು ರಾಜನೆಂದು ಭಾವಿಸಿದರೆ ರಾಜ

ಸಿಟ್ಟಾಗುವಂತೆ, ಸ್ವತಂತ್ರನಾದ ಹರಿ ಸಿಟ್ಟಾಗುತ್ತಾನೆ ಎಂದು ಸ್ವಾತಂತ್ರ್ಯ ಎಂಬ ಗ್ರಂಥದಲ್ಲಿ ಹೇಳಿದೆ. **385**

೧೧.೧೧,೧೨ ಬದ್ಧನಾದ ತಾನು ನಿತ್ಯಮುಕ್ತನಾದ ಹರಿಯ ವಶದಲ್ಲಿರುವೆನೆಂದು ತಿಳಿದರೆ ಅವನು ಸಂಸಾರದಲ್ಲಿದ್ದರೂ ಬೇರೆ ಅಜ್ಞ ಜೀವರಂತೆ ದುಃಖಿಯಾಗುವುದಿಲ್ಲ. ಎಂದಮೇಲೆ, ಮುಕ್ತಿಯಲ್ಲಿಯೇ ಇರುವವನು ದುಃಖಿಯಾಗುವುದಿಲ್ಲ ಎಂದು ಇನ್ನೇನು ಹೇಳಬೇಕು ಎಂದು ಪ್ರಾಥಮ್ಯ ಗ್ರಂಥದಲ್ಲಿದೆ. **387**

೧೧.೧೩ ನಾನಾತ್ವವೆಂದು ಮಿಥ್ಯಾಜ್ಞಾನ ಉಕ್ತವಾಗುತ್ತದೆ. ಏಕೆಂದರೆ ನಾನಾತ್ವವೆಂದರೆ ಬೇರೆಯಾಗಿರುವುದು. ವಸ್ತು ಇರುವುದಕ್ಕಿಂತ ಬೇರೆಯಾಗಿ ಮಿಥ್ಯಾಜ್ಞಾನ ಗ್ರಹಿಸುತ್ತದೆ. ಅದರಿಂದ ನಾನಾತ್ವವೆನಿಸುತ್ತದೆ ಎಂದು ವಾಲ್ಲಭ್ಯ ಎಂಬ ಗ್ರಂಥದಲ್ಲಿದೆ. **389**

೧೧.೧೬ ಜ್ಞಾನಿಯು ತನ್ನ ಬಗ್ಗೆ ಪರರ ವರ್ತನೆಯಲ್ಲಿರುವ ಗುಣವನ್ನು ~~ಹೊಗಳುವುದಾಗಲಿ ದೋಷವನ್ನು ತೆಗಳುವುದಾಗಲಿ ಮಾಡುವು~~ ದಿಲ್ಲ, ಎರಡೂ ಹರಿಯ ಅಧೀನ ಎಂದುಕೊಳ್ಳುತ್ತಾನೆ. ಅದರಿಂದ ಮೋಕ್ಷೋಪಯೋಗಿ ಮಹಾಗುಣಶಾಲಿಯಾಗುತ್ತಾನೆ. ದೋಷರಹಿತನಾಗುತ್ತಾನೆ ಎಂದು ಪ್ರಾಥಮ್ಯಗ್ರಂಥದಲ್ಲಿದೆ. **390**

೧೧.೧೯ ಕೇವಲ ಹಾಲಿಗಾಗಿ ಆಕಳನ್ನು ಕಟ್ಟುವವನು ಗೊಡ್ಡು ಹಸುವನ್ನು ಕಟ್ಟಿದರೆ ಅವನಿಗೆ ವ್ಯರ್ಥ ಆಯಾಸ ಹೇಗೋ ಹಾಗೇ ವೇದವನ್ನು ಕೇವಲ ಯಾಗಾದಿಕರ್ಮಪರವೆಂದು ಬಗೆದು ಓದಿದರೆ ಅದೂ ವ್ಯರ್ಥ ಆಯಾಸವೆ ಎಂದು ಹರಿವಂಶ ಹೇಳಿದೆ. **394**

೧೧.೨೦ 'ಸ್ಥಿತಿ–ಉದ್ಭವ–ತ್ರಾಣ–ನಿರೋಧಂ' ಎಂಬಲ್ಲಿ ಸ್ಥಿತಿ ತ್ರಾಣಗಳು ಒಂದೇ, ರಕ್ಷಣೆ ಯಾಗಿರುವುದರಿಂದ ಪುನರುಕ್ತಿಯಾದಂತಿದೆ. ಆದರೆ ಶಬ್ದನಿರ್ಣಯಗ್ರಂಥದಲ್ಲಿ ಸ್ಥಿತಿ ಶಬ್ದಕ್ಕೆ ನಿಯಮ, ಜೀವನ, ನಿಂತಿರುವುದು, ಇರುವುದು ಎಂದು ಅನೇಕ ಅರ್ಥಗಳಿರುವುದರಿಂದ, ಸ್ಥಿತಿ ಎಂದರೆ ಜೀವನ, ತ್ರಾಣ ಎಂದರೆ ರಕ್ಷಣೆ ಎಂದಿಟ್ಟುಕೊಂಡರೆ ಪುನರುಕ್ತಿ ಇಲ್ಲ.

೧೧.೨೧ ಜೀವನನ್ನು ಸ್ವತಂತ್ರ ಪರಮಾತ್ಮನೆನ್ನುವುದು, ಜೀವರೆಲ್ಲ ಒಂದೇ ಬ್ರಹ್ಮಸ್ವರೂಪವೆನ್ನುವುದು, ಪರಮಾತ್ಮನನ್ನು ಸರ್ವೋತ್ತಮನಲ್ಲ

ವೆನ್ನುವುದು, ಜಗತ್ತನ್ನು ಸುಳ್ಳೆನ್ನುವುದು ಇವೆಲ್ಲವೂ ನಾನಾತ್ವಭ್ರಮಗಳೆಂದು ವಿವೇಕ ಎಂಬ ಗ್ರಂಥದಲ್ಲಿದೆ. **396**

೧೧.೨೮ ಶ್ರೀಕೃಷ್ಣ ಅವತಾರಕ್ಕಾಗಿ ಬೇರೆ ಪ್ರಾಕೃತ ಶರೀರವನ್ನು ಸ್ವೀಕರಿಸಿದನೆಂದರೆ ಪ್ರಾಕೃತ ಶರೀರದಿಂದ ಹುಟ್ಟಿದನೆಂದರ್ಥವಲ್ಲ. ಅವನು ಸ್ವೀಕರಿಸಿದುದು ವಸುದೇವ ದೇವಕಿಯರ ಪ್ರಾಕೃತ ಶರೀರಗಳನ್ನು. ಅವತಾರಕ್ಕೆ ಮೊದಲು ಅವರ ಶರೀರಗಳಲ್ಲಿ ಸನ್ನಿಹಿತನಾದ. ಬಳಿಕ ಚಿನ್ಮಯ ಸ್ವರೂಪಶರೀರದಿಂದಲೆ ವ್ಯಕ್ತನಾದ. ಬೇರೆ ಪ್ರಾಕೃತ ಶರೀರದಲ್ಲಿ ಜೀವರಂತೆ ಪ್ರವೇಶಿಸಲಿಲ್ಲ. ಬಲರಾಮಾದಿಗಳ ಪ್ರಾಕೃತ ಶರೀರದಲ್ಲಿ ಹರಿ ಪ್ರವೇಶ ಮಾಡುವುದುಂಟು. ಇದು ಆವೇಶಾವತಾರದಲ್ಲಿ ಮಾತ್ರ. ಇನ್ನೊಬ್ಬ ಜೀವ ಅಭಿಮಾನಿಯಾಗಿ ಇರುವಂಥ ಪ್ರಾಕೃತ ಶರೀರದಲ್ಲಿ ಹರಿ ಆವೇಶಗೊಳ್ಳಬಹುದು. ಸ್ವರೂಪಾವತಾರದಲ್ಲಿ ವಸುದೇವ ದೇವಕಿಯರು ತಮ್ಮನ್ನು ಅವನಿಗೆ ತಂದೆತಾಯಿಗಳೆಂದು ತಿಳಿದರು. ಲೋಕವೂ ಹಾಗೇ ತಿಳಿಯಿತು. ಇದು ಕೇವಲ ಭ್ರಮೆ ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ. **398**

೧೧.೩೩ 'ಜ್ಞಾತ್ವಾಜ್ಞಾತ್ವಾ' ಎಂದರೆ ಭಗವಂತನನ್ನು ಆಗಾಗ ತಿಳಿಯುವುದಲ್ಲ. ಒಮ್ಮೆ ತಿಳಿದುದನ್ನು ಮತ್ತೆಮತ್ತೆ ಉತ್ಸುಕತೆಯಿಂದ ವಿಶೇಷವಾಗಿ ತಿಳಿಯುತ್ತಿರಬೇಕು. ಅದರಿಂದಲೇ ಭಗವತ್ಪ್ರಾಪ್ತಿ ಎಂದು ವಿಜ್ಞಾನ ಎಂಬ ಗ್ರಂಥದಲ್ಲಿದೆ. **400**

೧೧.೪೪ ವಾಯುವನ್ನು ಜೀವೋತ್ತಮನೆಂದು ತಿಳಿಯುವುದಕ್ಕಿಂತ ಹೆಚ್ಚು ಪ್ರಿಯವಾದುದು ಹರಿಗೆ ಇನ್ನೊಂದಿಲ್ಲ. ಹಾಗೇ ಹರಿಯನ್ನು ಸರ್ವೋತ್ತಮನೆಂದು ತಿಳಿಯುವುದಕ್ಕಿಂತ ಹೆಚ್ಚು ಪ್ರಿಯವಾದುದು ವಾಯುವಿಗೆ ಇಲ್ಲ. ಭಾರತಿ ವಾಯು ಲಕ್ಷ್ಮಿ ಹರಿ ಇವರಲ್ಲಿ ಕ್ರಮವಾಗಿ ಸರ್ವೋತ್ತಮತ್ವವನ್ನು ತಿಳಿದರೆ ಹರಿ ಒಲಿಯುತ್ತಾನೆ ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿದೆ. ಎಲ್ಲ ಪ್ರಾಣಿಗಳಿಗೂ ಪ್ರಾಣಭೂತನಾಗಿರುವ ಮುಖ್ಯಪ್ರಾಣ ದೇವದೇವ. ಜೀವೋತ್ತಮ ಎಂದು ಮೋಕ್ಷಧರ್ಮದಲ್ಲಿದೆ.

ಬ್ರಹ್ಮಾಂಡದೊಳಗೆ ಎಲ್ಲ ಇಂದ್ರಿಯಾಭಿಮಾನಿಗಳಿಗೂ, ಹೊರಗೆ

ಎಲ್ಲ ತತ್ವಾಭಿಮಾನಿಗಳಿಗೂ ಮುಖ್ಯಪ್ರಾಣನೇ ನಿಯಾಮಕನಾದ್ದರಿಂದ ಅವನೇ ವ್ಯಷ್ಟಿ ಎಂದೂ ಸಮಷ್ಟಿ ಎಂದೂ ಕರೆಸಿಕೊಳ್ಳುತ್ತಾನೆ ಎಂದೂ ಮೋಕ್ಷಧರ್ಮದಲ್ಲಿ ಹೇಳಿದೆ. ಮುಖ್ಯಪ್ರಾಣನ ವ್ಯಷ್ಟಿ ಸಮಷ್ಟಿ ನಾಮಗಳಿಗೆ ಈ ರೀತಿಯ ವಿವರಣೆ ಪ್ರಭಂಜನ ಎಂಬ ಗ್ರಂಥದಲ್ಲಿಯೂ ಇದೆ. **402**

೧೧.೪೫ ಭಗವಂತನ ಪೂಜೆಯಾದ ಬಳಿಕ ಆ ನೈವೇದ್ಯದಿಂದ ತನ್ನ ಉದರ ಪೂಜೆಯನ್ನೂ ಮಾಡಿಕೊಳ್ಳಲು ವಿಧಿ ಇದೆ. ಆತ್ಮಸಂಹಿತೆ ಎಂಬ ಗ್ರಂಥದಲ್ಲಿ ಹೀಗೆ ಹೇಳಿದೆ— 'ಆತ್ಮನಲ್ಲಿ ಅಂದರೆ, ತನ್ನಲ್ಲಿ ಆತ್ಮನಾಮಕ ಹರಿ ಇದ್ದಾನೆ. ಅವನನ್ನು ಭೋಜನಾದಿಗಳಿಂದ ಪೂಜಿಸಬೇಕು. ಆತ್ಮನಾಮಕನು ಒಳಗಿರುವುದರಿಂದಲೇ ಜೀವನನ್ನು ಆತ್ಮ ಎಂದು ಕರೆಯುತ್ತಾರೆ' ಎಂದು. **405**

೧೨.೧,೨ 'ಎಲ್ಲ ತಪಸ್ಸು ದಾನಯಜ್ಞಗಳಿಗಿಂತಲೂ ಭಕ್ತಿಯೇ ಭಗವಂತನನ್ನು ಒಲಿಸಿಕೊಳ್ಳಲು ಮುಖ್ಯ ಸಾಧನ. ಭಕ್ತಿ ಪಕ್ವವಾದರೆ ಅಪರೋಕ್ಷಕ್ಕೂ, ಅಪರೋಕ್ಷದಿಂದ ಮುಕ್ತಿಗೂ ಕಾರಣವಾಗುವುದು. ಅಪಕ್ವ ಭಕ್ತಿಯೂ ಕೂಡ ಐಹಿಕ ಪಾರತ್ರಿಕ ಸುಖಗಳಿಗೆ ಕಾರಣವಾಗುವುದು' ಎಂದು ದರ್ಶನ ಎಂಬ ಗ್ರಂಥದಲ್ಲಿ ಉಕ್ತವಾಗಿದೆ. **408**

೧೨.೮ ಮೋಕ್ಷಕ್ಕೆ ಜ್ಞಾನ ಕಾರಣವೆನ್ನುವುದು ನಿಜವೆ. ಆದರೆ ಭಕ್ತಿಇಲ್ಲದ ಜ್ಞಾನದಿಂದ ಮೋಕ್ಷವಿಲ್ಲ. ಜ್ಞಾನವಿದ್ದರೂ ಭಕ್ತಿ ಇಲ್ಲದಿದ್ದ ಜರಾಸಂಧ ಮುಂತಾದವರು ತಮೋಭಾಗಿಗಳಾದರು. ಗೋಪೀಜನ್ಮದಲ್ಲಿ ಶಾಸ್ತ್ರಜ್ಞಾನವಿಲ್ಲದಿದ್ದರೂ ಕೇವಲ ಭಕ್ತಿಯಿಂದ ಗೋಪಿಯರು ಮುಂತಾದವರು ಯೋಗ್ಯಾಪರೋಕ್ಷ ಪಡೆದು ಮುಕ್ತಿಗೆ ಹೋದರು. ಕೆಲವರು ಯೋಗ್ಯಾಪರೋಕ್ಷವಾಗುವವರೆಗೆ ಸಾಮಾನ್ಯಾಪರೋಕ್ಷದಿಂದ ಪುಣ್ಯಲೋಕಗಳಲ್ಲಿ ಸುಖ ಅನುಭವಿಸಿದರು ಎಂದು ವ್ಯಕ್ತ ಎಂಬ ಗ್ರಂಥದಲ್ಲಿದೆ. **413**

೧೨.೯ ವೇದೋಕ್ತ ಸಕಲ ಹರಿಗುಣಗಳ ಜ್ಞಾನವಿದ್ದರೂ ಹರಿಯಲ್ಲಿ ಭಕ್ತಿ ಇಲ್ಲದಿದ್ದರೆ ಗುಣಗಳ ಅಪಲಾಪ ಮಾಡಿ ದ್ವೇಷಾಸೂಯೆಗಳಿಂದ ತಮಸ್ಸನ್ನೇ ಪಡೆಯುವರು. ಹರಿಭಕ್ತರಲ್ಲಿ ಭಕ್ತಿ ಇಲ್ಲದಿದ್ದರೆ, ಇದ್ದರೂ

ಅದು ತಾರತಮ್ಯಕ್ಕೆ ವ್ಯತಿರಿಕ್ತವಾಗಿದ್ದರೆ ಶ್ರೀಹರಿ ಭಕ್ತಿಗೇ ವಿಘ್ನ ಉಂಟುಮಾಡಿ ತಮಸ್ಸಿಗೆ ತಳ್ಳುವನು ಎಂದು ಸತ್ಸಂಗ ಎಂಬ ಗ್ರಂಥದಲ್ಲಿದೆ. **413**

೧೨.೧೩ ಜನ್ಮಾಂತರದಲ್ಲಿ ಸಾಮಾನ್ಯ ಅಪರೋಕ್ಷ ಸಂಪಾದಿಸಿದ್ದ ಗೋಪಿಯರು ಮುಂತಾದವರು ಕೃಷ್ಣನಲ್ಲಿ ಕೇವಲ ಭಕ್ತಿ ಮಾಡಿ ಮುಂದೆ ಸ್ವರ್ಗಲೋಕದಲ್ಲಿ ಯೋಗ್ಯಾಪರೋಕ್ಷವನ್ನು ಸಂಪಾದಿಸಿದರು. ಅದರಿಂದ ಪರಮಾತ್ಮನನ್ನು ಹೊಂದಿದರು ಎಂದು ಸತ್ಸಂಗ ಎಂಬ ಗ್ರಂಥದಲ್ಲಿದೆ. **413**

೧೨.೧೪,೧೫ ಕೇಳಬೇಕಾಗಿರುವುದನ್ನೂ ಕೇಳಿದ್ದನ್ನೂ ಹರಿಯಲ್ಲಿ ಅರ್ಪಿಸಬೇಕು, ಅಂದರೆ ಶಾಸ್ತ್ರಶ್ರವಣ ಮಾಡಿದ್ದು ನಿನ್ನ ಪೂಜೆಯಾಗಲಿ ಎಂದು ಸಮರ್ಪಿಸಬೇಕು. ಮುಂದೆ ಮಾಡಬೇಕಾಗಿರುವ ಶಾಸ್ತ್ರ ಶ್ರವಣವನ್ನು ನಿನ್ನ ಪ್ರೀತಿಗಾಗಿ ಮಾಡುವೆನೆಂದು ಸಂಕಲ್ಪಿಸಬೇಕು. ಹೀಗೆ ಎಲ್ಲ ಕರ್ಮಗಳನ್ನೂ ಹರಿಯಲ್ಲಿ 'ಸನ್ಯಾಸ' ಅಂದರೆ ಸಮರ್ಪಣೆ ಮಾಡುವವನೇ ಕರ್ಮಸನ್ಯಾಸಿ. ಹೊರತು, ಬಂಡೆ ಗಲ್ಲಿನಂತೆ ಕರ್ಮ ಮಾಡದಿರುವವನಲ್ಲ ಎಂದು ಕರ್ಮವಿವೇಕ ಎಂಬ ಗ್ರಂಥದಲ್ಲಿದೆ. ನಿವೃತ್ತಿ ಎಂಬ ಗ್ರಂಥದಲ್ಲಿಯೂ ಭಗವದ್ಗೀತೆ ಯಲ್ಲಿಯೂ ಇದು ಉಕ್ತವಾಗಿದೆ. **415**

೧೨.೧೬ ಹಿಂದೆ ೧೧.೪೪ನೇ ಶ್ಲೋಕದಲ್ಲಿ 'ವಾಯೌ ಮುಖ್ಯಧಿಯಾ' ಮುಖ್ಯಪ್ರಾಣನನ್ನು ಭಕ್ತರಲ್ಲಿ ಉತ್ತಮ ಜೀವೋತ್ತಮನೆಂದು ತಿಳಿದು ಅವನಲ್ಲಿ ಹರಿಯನ್ನು ಆರಾಧಿಸುವುದೇ ಹೆಚ್ಚು ಪ್ರೀತಿಕರ ಎಂದು ಶ್ರೀಕೃಷ್ಣ ಹೇಳಿದ್ದಾನೆ. ಆದರೆ ರಾಮೇಣ ಸಾರ್ಧಂ (ಶ್ಲೋ.೧೨.೧೦) ಎಂಬ ಶ್ಲೋಕದಲ್ಲಿ ಗಾಢವಾದ ಭಕ್ತಿ ಉಳ್ಳವರೆಂದರೆ ಗೋಪಿಯರೇ ಎಂದೂ ಪ್ರಶಂಸೆ ಮಾಡುತ್ತಾನೆ. ಅದರಿಂದ ಭಕ್ತರಲ್ಲಿ ಮುಖ್ಯಪ್ರಾಣ ಹೆಚ್ಚೋ ಅಥವಾ ಗೋಪಿಯರೋ ಎಂಬ ಸಂಶಯ ಉದ್ಧವನಿಗೆ ಬಂದಿದೆ. ಅದಕ್ಕೆ ಶ್ರೀಕೃಷ್ಣ ಸಮಾಧಾನ ಹೇಳುತ್ತಾನೆ. 'ಗುಹಾಂ ಪ್ರವಿಷ್ಟಃ' ಎಂದು ಮುಂದಿನ ಶ್ಲೋಕದಲ್ಲಿ, ಗೋಪಿಯರು ಮುಂತಾಗಿ ಎಲ್ಲ ಭಕ್ತರ ಹೃದಯದಲ್ಲಿಯೂ ಅಂತರ್ಯಾಮಿ ಯಾಗಿದ್ದು ಜ್ಞಾನ ಭಕ್ತ್ಯಾದಿ ಪ್ರೇರಣೆ ಮಾಡುವುದ ರಿಂದ ಮುಖ್ಯಪ್ರಾಣನೇ ಹೆಚ್ಚು, ಗೋಪಿಯರೇ ಭಕ್ತಿಯಿಂದ

ಸರ್ವಜ್ಞನಾದ ಬ್ರಹ್ಮನಲ್ಲಿ ಅಜ್ಞಾನವಿರುವುದು ಹೇಗೆ ಸಾಧ್ಯ ಎಂದು ಭಾವವಿವೇಕ ಎಂಬ ಗ್ರಂಥದಲ್ಲಿದೆ. **444**

೧೩.೨೨-೨೪ ಈ ಮೂರು ಶ್ಲೋಕಗಳ ಅಭಿಪ್ರಾಯ ತಂತ್ರಭಾಗವತ ಗ್ರಂಥದಲ್ಲಿ ಸ್ಪಷ್ಟವಿದೆ. **447**

೧೩.೨೫ 'ಮದಾತ್ಮ' ಎಂದರೆ ನನ್ನನ್ನೇ ಧ್ಯಾನಿಸುವವನು. ಅವನಿಗೆ ವಿಷಯಾಸೆ 'ದೇಹೇ' ಅಂದರೆ ಸುಟ್ಟುಹೋಯಿತು ಎಂದರ್ಥ. **461**

೧೩.೨೬ ಈ ಶ್ಲೋಕದ ಅಭಿಪ್ರಾಯ ಸಾಮ್ಯ ಎಂಬ ಗ್ರಂಥದಲ್ಲಿದೆ. **463**

೧೩.೩೦ ನಾನಾರ್ಥಧೀ ಎಂದರೆ ಅನ್ಯಥಾಜ್ಞಾನ. ಅಂದರೆ ಎರಡನ್ನು ಒಂದಾಗಿ ಒಂದನ್ನು ಎರಡಾಗಿ ತಿಳಿಯುವುದು. ವಿಷಯ ಹೇಗಿರುವುದೋ ಅದಕ್ಕೆ ವ್ಯತಿರಿಕ್ತವಾಗಿ ಗ್ರಹಿಸುವುದರಿಂದ ಅದು ಅನ್ಯಥಾಜ್ಞಾನ ಎಂದು ಬ್ರಹ್ಮತರ್ಕಗ್ರಂಥದಲ್ಲಿ ಹೇಳಿದೆ. **468**

~~೧೩.೩೧ 'ಕಿಂಕೃತಾ ಅಭಿದಾ' ಜೀವಪರಮಾತ್ಮರಿಗೆ ಅಭೇದ ಯಾವ~~ ಪ್ರಮಾಣದಿಂದ ಸಿದ್ಧವಾಗಿದೆ? ಎಂದು ಶ್ಲೋಕದ ಅಭಿಪ್ರಾಯ ಶಶ್ವತ್‌ಸಂಹಿತೆಯಲ್ಲಿ ಸ್ಪಷ್ಟವಾಗುತ್ತದೆ. **471**

೧೩.೩೨ ದಕ್ಷಿಣಾಕ್ಷಿಯಲ್ಲಿದ್ದು ಜಾಗರದ ವಿಷಯಪದಾರ್ಥಗಳನ್ನು ಕಂಠದಲ್ಲಿದ್ದು ಸ್ವಾಪ್ನಪದಾರ್ಥಗಳನ್ನು ಹೃದಯದಲ್ಲಿದ್ದು ಜೀವಸ್ವರೂಪಾನಂದವನ್ನು ಸ್ವತಂತ್ರವಾಗಿ ಲೀಲೆಯಿಂದ ಉಂಡು, ಅಸ್ವತಂತ್ರನಾದ ಜೀವನಿಗೆ ಉಣಿಸುವವನು ಒಬ್ಬನೇ, ಸ್ವತಃ ಅವಸ್ಥಾತ್ರಯರಹಿತ ನಾದ ಪುರುಷೋತ್ತಮ ಎಂದು ತತ್ವ ಎಂಬ ಗ್ರಂಥದಲ್ಲಿ ಹೇಳಿದೆ. **474**

ಪ್ರೇರಕರಾಗಿರುತ್ತಾರೆ. ಮುನಿಗಳು ಹೆಚ್ಚಾಗಿ ಜನರು ಕಷ್ಟಪಡುವುದನ್ನು ನೋಡಿ ಸಹಿಸಿಕೊಳ್ಳಲಾಗದೆ ಕರುಣೆಯಿಂದ ಸುಖವನ್ನು ಬಯಸುತ್ತಾರೆ. ಹಾಗಿದ್ದರೂ ತತ್ತ್ವಾಭಿಮಾನಿಗಳಾದ್ದರಿಂದ ಹರಿಪ್ರಿಯರಾಗಿರುವ ದೇವತೆಗಳೇ ಮುನಿಗಳಿಗಿಂತ ಉತ್ತಮರು ಎಂದು ಉದ್ದಾಮಸಂಹಿತೆಯಲ್ಲಿ ಉಕ್ತವಾಗಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಕವಿ ಮಹಾಮುನಿ ವಿಷಯಾಸಕ್ತಿಯನ್ನು ಬಿಡುವ ಬಗೆಯನ್ನು ಹೇಳುತ್ತಾರೆ.

ಅವಿದ್ಯಮಾನೋಽಪ್ಯವಭಾತಿ ಹಿ ದ್ವಯೋ
ಧ್ಯಾತುರ್ಧಿಯಾ ಸ್ವಪ್ನಮನೋರಥೋ ಯಥಾ ।
ತತ್ಕರ್ಮ ಸಂಕಲ್ಪವಿಕಲ್ಪಕಂ ಮನೋ
ಬುಧೋ ನಿದಧ್ಯಾದಭಯಂ ತತಃ ಸ್ಯಾತ್ ॥ ೩೮ ॥

ಕನಸು ಹಗಲುಗನಸುಗಳು ಹೇಗೆ ಎಚ್ಚರದಂತೇ ಭಾಸವಾಗುವುವೋ ಹಾಗೇ, ಮನಸ್ಸಿನಿಂದ ವಿಷಯಸುಖವನ್ನೇ ಆಲೋಚಿಸುವವನಿಗೆ ತನ್ನದಲ್ಲದ ದೇಹಗೇಹಾದಿ ವಿಷಯಪದಾರ್ಥ ತನ್ನ ವಶದಲ್ಲಿರುವಂತೆ ಭಾಸವಾಗುವುದು. ಅದರಿಂದ ವಿಷಯ ಸುಖದ ಕಡೆಗೇ ಓಡುವ ಮನಸ್ಸನ್ನು ಅದರ ಸಂಕಲ್ಪ ವಿಕಲ್ಪಗಳೊಂದಿಗೆ ಹರಿಯಲ್ಲಿ ತಂದು ನಿಲ್ಲಿಸಬೇಕು. ಅದರಿಂದ ಮೋಕ್ಷ ಲಭಿಸುವುದು.

ನಾನಿದನ್ನು ಮಾಡಬಲ್ಲೆ, ಮಾಡಬೇಕು ಎನಿಸುವುದು ಮನಸ್ಸಿನ ಸಂಕಲ್ಪ, ಬಿಡಬಲ್ಲೆ, ಬಿಡಬೇಕೆನಿಸುವುದು ಮನಸಿನ ವಿಕಲ್ಪ. ಎರಡನ್ನೂ ಹರಿಯಾರಾಧನೆ ಯಾಗಿಸಬೇಕು, ಹರಿಯನ್ನು ಭಜಿಸಬಲ್ಲೆ, ಭಜಿಸ ಬೇಕು. ವಿಷಯಾಸೆ ಬಿಡಬಲ್ಲೆ, ಬಿಡಬೇಕು ಎಂದು. ಹೀಗೆ ಮಾಡದಿದ್ದರೆ ಜ್ಞಾನವಿಲ್ಲ, ಮೋಕ್ಷವಿಲ್ಲ.

ಬೇರೆ ವ್ಯಾಖ್ಯಾನಕಾರರು ಈ ಶ್ಲೋಕದಲ್ಲಿ 'ಬುಧೋ ನಿರುಂಧ್ಯಾತ್' ಎಂದು ಪಾಠವಿಟ್ಟುಕೊಂಡಿದ್ದಾರೆ.

[1]'ಮನಸ್ಸಿನಲ್ಲಿ ವಿಷಯಾಸಕ್ತಿ ತುಂಬಿಕೊಂಡಿದ್ದರೆ ಸ್ಥಿರವಾದ ಭಕ್ತಿ ಹೇಗೆ ಉಂಟಾದೀತು. ಮೋಕ್ಷ ಹೇಗೆ ಲಭಿಸೀತು ಎನ್ನಬಾರದು. ವಿಷಯ ಎಂಬುದು ವಾಸ್ತವವಲ್ಲ, ಮನಸಿನ ಕಲ್ಪನೆ ಮಾತ್ರವಾಗಿದೆ. ಅದಕ್ಕೆ ಮನಸ್ಸು ಸ್ವಪ್ನ ಮನೋ

1. ನನು ವಿಷಯವಿಕ್ಷಿಪ್ತಚಿತ್ತಸ್ಯ ಕುತೋಽವ್ಯಭಿಚಾರಿಣೀ ಭಕ್ತಿಃ ಸಂಭವತಿ ಕುತಸ್ತರಾಮಭಯಂ । ತತ್ರ ನ ತಾವದ್ವಿಷಯೋ ನಾಮ ವಾಸ್ತವೋಽಸ್ತಿ । ಕಿಂತು ಮನೋವಿಲಾಸಮಾತ್ರಮತೋ

ರಥಗಳಲ್ಲಿ ಹೇಗೋ ಹಾಗೆ ಜಾಗರದಲ್ಲಿ ಇಲ್ಲದ ವಿಷಯಪ್ರಪಂಚವನ್ನು ಕಲ್ಪಿಸಿಕೊಳ್ಳದಂತೆ ತಡೆದರೆ ಸ್ಥಿರವಾದ ಭಕ್ತಿ ಸಾಧ್ಯವಾಗುತ್ತದೆ' ಎಂದು ಶ್ರೀಧರಸ್ವಾಮಿ ವ್ಯಾಖ್ಯಾನ ಹೇಳುತ್ತದೆ.

ಆದರೆ ಶ್ಲೋಕದಲ್ಲಿ 'ವಿಷಯ ಎಂಬುದು ವಾಸ್ತವವಲ್ಲ, ಮನಸಿನ ಕಲ್ಪನೆ ಮಾತ್ರವಾಗಿದೆ' ಎಂದು ಹೇಳಿಯೆ ಇಲ್ಲ. 'ಅವಿದ್ಯಮಾನ' ಇಲ್ಲದ್ದು ಎಂದ ಮಾತ್ರಕ್ಕೆ ಮಿಥ್ಯೆ ಎಂದಾಗುವುದಿಲ್ಲ. [2]ವೀರರಾಘವವ್ಯಾಖ್ಯಾನ ಹೇಳುವಂತೆ ಸ್ವತಂತ್ರವಾಗಿ ಇಲ್ಲದ್ದು ಎಂದಾಗಬಹುದು, ವಿಶ್ವನಾಥಚಕ್ರವರ್ತಿವ್ಯಾಖ್ಯಾನ ಹೇಳುವಂತೆ ದಾರಿದ್ರ್ಯ ಪ್ರಯುಕ್ತವಾಗಿಯೋ ವೈರಾಗ್ಯದಿಂದ ಪರಿತ್ಯಾಗ ಮಾಡಿದ್ದರಿಂದಲೋ ತನಗೆ ವಿಷಯ ಪದಾರ್ಥವಿಲ್ಲದಿರಬಹುದು. ಶ್ರೀಮದಾಚಾರ್ಯರು ಹೇಳುವಂತೆ ಪ್ರಪಂಚವೆಲ್ಲವೂ ಹರಿಯ ಅಧೀನ, ಅವನದೇ ಆಗಿರುವುದರಿಂದ ತನ್ನದಾಗಿ ಇಲ್ಲದಿರಬಹುದು. 'ಮಿಥ್ಯೆ' ಬರಿ ಮನಸಿನ ಕಲ್ಪನೆ ಎಂದೇಕೆ ಹೇಳಬೇಕು?

'ಮನಸಿನ ಕಲ್ಪನೆ ಎಂದಾದರೆ ಮನಸಿನ ನಿಗ್ರಹದಿಂದ ವಿಷಯಾಸಕ್ತಿಯನ್ನು ದೂರ ಮಾಡಿಕೊಳ್ಳಬಹುದೆಂ'ದು ಶ್ರೀಧರವ್ಯಾಖ್ಯಾನ ಹೇಳಬಹುದು. ಆದರೆ ವಿಷಯ ಪದಾರ್ಥ ಎಲ್ಲವೂ ಹರಿಯದು, ಹರಿಯ ಆರಾಧನೆಗಾಗಿಯೇ ಇರುವುದೆಂದು ಭಕ್ತಿಯಿಂದ ಅವನಿಗೆ ಅರ್ಪಿಸದಿದ್ದರೆ, ತನ್ನದೆಂದು ಅಭಿಮಾನಪಟ್ಟರೆ ಅದರ ಮೇಲಿನ ಆಸಕ್ತಿ ಸರ್ವಥಾ ಹೋಗಲಾರದು. ವಿಶ್ವನಾಥಚಕ್ರವರ್ತಿವ್ಯಾಖ್ಯಾನ ಹೇಳುವಂತೆ, ಶ್ರುತಿಗೀತೆಯಲ್ಲಿ ಶ್ರೀಧರೀ ಪಾಠ ಪ್ರಕಾರ ಇದು ಸ್ಪಷ್ಟವಾಗಿ ಉಕ್ತವಾಗಿದೆ—

ಮನೋನಿಯಮೇನ ಭಜನಾಥಭಯಂ ಸ್ಯಾದಿತ್ಯಾಹ ಅವಿದ್ಯಮಾನೋಽಪೀತಿ। ದ್ವಯಃ ದ್ವೈತ ಪ್ರಪಂಚಃ । ಸ್ವಪ್ನಶ್ಚ ಮನೋರಥಶ್ಚ ಯಥೇತ್ಯರ್ಥಃ ತತ್ ತಸ್ಮಾತ್‌ಕರ್ಮಾಣಿ ಸಂಕಲ್ಪಯತಿ ವಿಕಲ್ಪಯತಿ ಚ ಯನ್ಮನಸ್ತನ್ನಿರುಂಧ್ಯಾನ್ನಿಯಚ್ಛೇತ್ ತತಶ್ಚೈಕಯಾ ಭಕ್ತ್ಯಾ ಭಜನಾದಭಯಂ ಸ್ಯಾದಿತ್ಯರ್ಥಃ। -ಶ್ರೀಧರಸ್ವಾಮೀ

2. ಅಬ್ರಹ್ಮಾತ್ಮಕ ಸ್ವತಂತ್ರವಸ್ತ್ವಭಿಮಾನೋ ದ್ವಿತೀಯಾಭಿನಿವೇಶಃ। ...ಆತ್ಮತಯಾ ಸ್ವತಂತ್ರತಯಾ ಚಾವಿದ್ಯಮನೋಽಪಿ ದೇಹ ಆತ್ಮಾ ಚ ಧ್ಯಾತುರ್ಧಿಯಾ ಮನಸಾ ದ್ವಯೋ ದ್ವಯತ್ವೇನಾವಭಾತಿ ಆತ್ಮತಯಾ ಸ್ವತಂತ್ರತಯಾ ಚ ಪ್ರತೀಯತ ಇತ್ಯರ್ಥಃ। ಯಥಾ ಸ್ವಪ್ನ ಮನೋರಥಃ ಯಥಾಽಸ್ಥಿರೋಽಪಿ ಸ್ಥಿರತ್ವೇನಾವಭಾಸತೇ ತದ್ವದಿತ್ಯರ್ಥಃ। ಹಿ ಯಸ್ಮಾದೇವಂ ತಸ್ಮಾತ್ ಕರ್ಮಸಂಕಲ್ಪವಿಕಲ್ಪಕಂ ಕರ್ಮಣಾ ನಿಮಿತ್ತಭೂತೇನ ಸಂಕಲ್ಪಯತಿ ವಿಕಲ್ಪಯತೀತಿ ತಥಾ । ತನ್ಮನೋ ನಿರುಂಧ್ಯಾತ್ 'ಏಷಾ ತೇಽಭಿಹಿತಾ ಸಾಂಖ್ಯೇ' ಇತ್ಯುಕ್ತಯಾ ಬುದ್ಧ್ಯಾ ದೇಹಾತ್ಮ ಯಾಥಾತ್ಮ್ಯ ನಿಶ್ಚಯಾತ್ಮಿಕಯಾ ನಿರುಂಧ್ಯಾನ್ನಿಯಚ್ಛೇದಿತ್ಯರ್ಥಃ । ತತೋ ಮನೋನಿರೋಧಾದಭಯಂ ಸ್ಯಾನ್ಮೋಕ್ಷಃ ಸ್ಯಾತ್ । -ವೀರರಾಘವಃ

ವಿಜಿತ ಹೃಷೀಕ ವಾಯುಭಿರದಾಂತ ಮನಸ್ತುರಗಂ
ಯಇಹ ಯತಂತಿ ಯಂತುಮತಿಲೋಲ–
ಮುಪಾಯಖಿದಃ ವ್ಯಸನ ಶತಾನ್ವಿತಾಃ...।

'ಇಂದ್ರಿಯನಿಗ್ರಹ ಮತ್ತು ಪ್ರಾಣಾಯಾಮಗಳಿಂದಲೂ ನಿಗ್ರಹಿಸಲಾಗದುದು ಮನಸ್ಸೆಂಬ ಕುದುರೆ, ಬಹಳ ಚಂಚಲ. ಗುರುಚರಣ ಭಕ್ತಿಯಿಲ್ಲದೆ ಅದನ್ನು ನಿಗ್ರಹಿಸಲು ಯತ್ನಿಸುವವರು ಸೋತು ನೂರಾರು ದುಃಖಭರಿತರಾಗುತ್ತಾರೆ.'

ಅದರಿಂದ ಪ್ರಕೃತ ಶ್ಲೋಕದಲ್ಲಿ ಶ್ರೀಧರೀಯ ಪಾಠ 'ಬುಧೋ ನಿರುಂಧ್ಯಾತ್' 'ಜಗನ್ಮಿಥ್ಯಾತ್ವಜ್ಞಾನಿಯಾಗಿ ಮನಸ್ಸನ್ನು ನಿಗ್ರಹಿಸಿಕೊಳ್ಳಬೇಕು' ಎನ್ನುವುದು ಸರಿಯಲ್ಲ. 'ಬುಧೋ ನಿದಧ್ಯಾತ್ ಅಭಯಂ' ಎಂದೇ ಸರಿಯಾದ ಪಾಠ. 'ಹರಿಯೇ ಸ್ವತಂತ್ರ, ಅವನದೇ ವಿಷಯಪದಾರ್ಥವೆಂದು ತಿಳಿದವನಾಗಿ ವಿಷಯಾಸಕ್ತವಾದ ಮನಸ್ಸನ್ನು ಅಭಯದಾಯಕನಾದ ಹರಿಯಕಡೆಗೇ ಒಯ್ದು ಅವನಲ್ಲಿ ಸ್ಥಿರವಾಗಿ ನಿಲ್ಲಿಸಬೇಕು. ಅವನ ಅನುಗ್ರಹದಿಂದ ಮನಸ್ಸು ತನ್ನ ನಿಯಂತ್ರಣಕ್ಕೆ ಬರುತ್ತದೆ' ಎಂದೇ ಶ್ಲೋಕದ ಅಭಿಪ್ರಾಯವನ್ನು ಗ್ರಹಿಸಬೇಕು. ಆಗ ಶ್ರೀಮದಾಚಾರ್ಯರು ತೋರಿಸಿರುವ ಹರಿವಂಶ ವಚನಕ್ಕೆ ಅನುಗುಣವೂ ಆಗುವುದು. 'ಅವಿದ್ಯಮಾನೋ ಹ್ಯವಭಾತಿ' ಎನ್ನುವುದನ್ನು ಹರಿವಂಶವು,

'ಅವಿದ್ಯಮಾನಂ ಜೀವಸ್ಯ ಪ್ರತಿಭಾತಿ ತದೀಯವತ್'

'ತನ್ನದಾಗಿ ಇಲ್ಲದ್ದು ತನ್ನದೆಂದು ತೋರುತ್ತದೆ' ಎಂದು ವ್ಯಾಖ್ಯಾನಮಾಡಿದೆ. 'ಅವಭಾತಿ' ಎಂಬಲ್ಲಿ 'ಭಾತಿ' ಎಂದಿದ್ದರೆ ಸಾಕಾಗುತ್ತಿತ್ತು. 'ಅವ' ಎಂದರೆ ಅವಮ, ಅಧೀನ. ಅಧೀನತಯಾ ಭಾತ ಜ್ಞಾತ, ಅವಜ್ಞಾತ. ಅಧೀನವಾಗಿ ತಿಳಿಯಲ್ಪಟ್ಟದ್ದು ಅಂದರೆ ತನ್ನದಲ್ಲದುದು ತನ್ನದೆಂಬಂತೆ ತಿಳಿದದ್ದು. ಅಮರಕೋಶದಲ್ಲಿ ಹೇಳಿದೆ—

'ಅವಗಣಿತಮವಮತಾವಜ್ಞಾತೇಽವ–
ಮಾನಿತಂ ಚ ಪರಿಭೂತೇ'

ತನ್ನದು, ತನ್ನ ಭೋಗಕ್ಕಾಗಿ ಇರುವುದು ಎಂದು 'ಅವ ಭಾತಿ' ಮನಸಿಗೆ ತೋರುವುದು, ಅದನ್ನು 'ಅಭಯಂ ಪ್ರತಿ' ಸಂಸಾರಭಯ ಪರಿಹಾರಕನಾದ ಹರಿಯ ಅಧೀನ, ಅವನ ಪೂಜೆಗಾಗಿ ಇದೆ ಎಂದು ಅವನಲ್ಲಿಯೆ 'ನಿದಧ್ಯಾತ್' ಅರ್ಪಿಸಬೇಕು.

ಹರಿವಂಶ ವಚನ ಹೀಗೇ ಹೇಳುತ್ತದೆ ಎನ್ನುತ್ತಾರೆ ಶ್ರೀಮದಾಚಾರ್ಯರು.

ಆತ್ಮನೋ ದೇಹಗೇಹಾದಿ ದ್ವಯಶಬ್ದೇನ ಭಣ್ಯತೇ ।
ಅವಿದ್ಯಮಾನಂ ಜೀವಸ್ಯ ಪ್ರತಿಭಾತಿ ತದೀಯವತ್ ।
ಜಾಗ್ರದ್ವತ್ತು ಯಥಾ ಸ್ವಪ್ನಃ ಪ್ರತಿಭಾತಿ ಮನೋರಥಃ ।
ವಿದ್ಯಮಾನವದೇವೈತದ್ ದೇಹಾದೀಶವಶೇ ಸ್ಥಿತಂ ।
ವಿಭಾತಿ ಸ್ವವಶತ್ವೇನ ಸೈಷಾ ಸಂಸೃತಿರುಚ್ಯತೇ ।
ತಸ್ಮಾದ್ ತದ್‌ವಿಷಯಂ ತ್ಯಕ್ತ್ವಾ ಮನೋ ವಿಷ್ಣೌ ನಿವೇಶಯೇತ್ ॥
ಇತಿ ಹರಿವಂಶೇಷು ॥

'ದ್ವಯ' ಶಬ್ದದಿಂದ ತನ್ನ ಶರೀರ ಮನೆಮಠ ಮುಂತಾದುದು ಉಕ್ತವಾಗುವುದು. ಅದು ಜೀವನ ಅಧೀನವಾಗಿಲ್ಲ. ಪರಮಾತ್ಮನ ಅಧೀನವಾಗಿಯೇ ಇದೆ. ಆದರೂ ಜೀವನ ಅಧೀನವಾಗಿರುವಂತೆ ಮನಸ್ಸಿಗೆ ತೋರುತ್ತದೆ. ಕನಸಿನಲ್ಲಿ ಕಾಣುವ ಪದಾರ್ಥ ಜಾಗರದ ಪದಾರ್ಥದಂತೆ ಭ್ರಾಂತಿಯಲ್ಲಿ ತೋರುತ್ತದೆ. ಹಗಲು ಗನಸಿನಲ್ಲಿ ಕಾಣುವುದೂ ಕೂಡ ಹೊರಗಿನ ಪದಾರ್ಥದಂತೆ ತೋರುವುದು. ಹಾಗೆಯೇ ಈ ಶರೀರ ಮುಂತಾದುದು ಪರಮಾತ್ಮನ ವಶದಲ್ಲಿರುವುದಾಗಿದ್ದರೂ ತನ್ನ ವಶದಲ್ಲಿರುವಂತೆಯೇ ತೋರುತ್ತದೆ. ಇದುವೇ ಸಂಸಾರ ಕಾರಣವೆನಿಸುತ್ತದೆ. ಆದರಿಂದ ಮನಸ್ಸನ್ನು ದೇಹಾದಿ ವಿಷಯಕವಾಗದಂತೆ, ಪರಮಾತ್ಮ ವಿಷಯಕವಾಗುವಂತೆ ಮಾಡಿ ಪರಮಾತ್ಮನಲ್ಲಿಯೇ ನಿಲ್ಲಿಸಬೇಕು' ಎಂದು ಹರಿವಂಶದಲ್ಲಿ ಹೇಳಿದೆ.

'ಅವಿದ್ಯಮಾನ' ಎನ್ನುವುದಕ್ಕೆ ಎರಡು ಅರ್ಥ. ನ ವಿದ್ಯಮಾನ, ತನ್ನದಾಗಿ ಇಲ್ಲದಿರುವುದು, ಅ ನಾಮಕ ಹರಿಯ ವಶದಲ್ಲಿಯೇ ಸದಾ ವಿದ್ಯಮಾನವಾಗಿರುವುದು. ಅದನ್ನು ತನ್ನದು, ತನಗಾಗಿ ಇರುವುದೆಂದು ಅಭಿಮಾನ ಪಡುವುದೇ ವಿಷಯಾಸಕ್ತಿ, ಪಾಪಕರ, ಬಂಧಕ, ಸಂಸಾರಕ್ಕೆ ಕಾರಣ ಎಂದು ಭಾಗವತ ಹೇಳುತ್ತಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿ ರಾಜನಿಗೆ ಕವಿ ಮಹಾಮುನಿ ಶ್ರವಣಾದಿಗಳನ್ನು ನಡೆಸುವ ಭಕ್ತ ಹೇಗೆ ಇರುತ್ತಾನೆ ಎಂದು ಹೇಳುತ್ತಾರೆ.

ಏವಂವ್ರತಶ್ಚ ಪ್ರಿಯನಾಮಕೀರ್ತ್ಯಾ
ಜಾತಾನುರಾಗೋ ದ್ರುತಚಿತ್ತ ಉಚ್ಚೈಃ ।
ಹಸತ್ಯಥೋ ರೋದಿತಿ ರೌತಿ ಗಾಯ-
ತ್ಯುನ್ಮಾದವನ್ನೃತ್ಯತಿ ಲೋಕಬಾಹ್ಯಃ ॥ ೪೦ ॥

ವಿಷಯದಲ್ಲಿ ಆದರ ಬಿಟ್ಟು ಸದಾ ಶ್ರವಣಾದಿ ವ್ರತನಿಷ್ಠನಾಗಿರುವವನು ಪ್ರಿಯಕರನಾದ ಹರಿಯ ನಾಮಸಂಕೀರ್ತನದಿಂದ ಅವನಲ್ಲಿ ಅನುರಾಗ ಹೊಂದುವನು. ಮನಸಿನಿಂದ ಹರಿಯ ಬಳಿಗೋಡುವನು. ಭಗವಂತನ ಸಾನ್ನಿಧ್ಯದ ಅನುಭವದಿಂದ ಮನಕರಗಿ ಬೇರೆಲ್ಲವನ್ನೂ ಮರೆತು ಗಟ್ಟಿಯಾಗಿ ನಗುವನು ಆನಂದದ ಬಾಷ್ಪ ಸುರಿಸುವನು. 'ಹರೇ' ಎಂದು ಉತ್ಕಂಠೆಯಿಂದ ಕೂಗಿಕೊಳ್ಳುವನು. ಆನಂದೋದ್ರೇಕದಿಂದ ಹಾಡುವನು ಕುಣಿಯುವನು. ಅಜ್ಞ ಜನರಿಗಿಂತ ವಿಲಕ್ಷಣನಾಗಿ ಹುಚ್ಚುಹಿಡಿದವನಂತೆ ಓಡಾಡುವುದೂ ಉಂಟು.

ಭಕ್ತರು ಸಾಮಾನ್ಯ ಜನರಂತೆ ಇರುವುದಿಲ್ಲ. ಭೂತಾವೇಶಕ್ಕೊಳಗಾದವರಂತೆ ಪರವಶರಾಗಿ ನಗುವುದು ಅಳುವುದು ಮುಂತಾದುವನ್ನು ಮಾಡುತ್ತಾರೆ. ಇದು ಪ್ರದರ್ಶನಕ್ಕಾಗಿ ಅಲ್ಲ, ಜನರು ಅವರಿಗೆ ಪ್ರಶಂಸೆ ಮಾಡಲಿ, ಸಂಮಾನ ಮಾಡಲಿ ಹಾಸ್ಯಮಾಡಲಿ ಅವನ್ನು ಗಮನಿಸುವುದಿಲ್ಲ. ಇದು ಭಕ್ತರ ಲಕ್ಷಣ ಎಂದು ಭಾಗವತ ಹೇಳುತ್ತಿರುವಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಹಾಗೇ ಅಭಿಪ್ರಾಯ ಪಡುತ್ತಾರೆ.

ಆದರೆ ಇದು ಸರಿಯಲ್ಲ. ಪ್ರಹ್ಲಾದನೂ ಭಕ್ತ, ಧ್ರುವನೂ ಭಕ್ತ. ಪ್ರಹ್ಲಾದ 'ಕೃಷ್ಣಗ್ರಹಗೃಹೀತಾತ್ಮ' ಭೂತಾವೇಶಗೊಂಡವನಂತೆ ಇರುತ್ತಿದ್ದ. ಧ್ರುವ ಹಾಗೆ ಇರಲಿಲ್ಲ. ಅದರಿಂದ ಇದು ಭಕ್ತರ ಲಕ್ಷಣವೆನ್ನುವಂತಿಲ್ಲ. ಅದು ಇದ್ದರೆ ಭಕ್ತನೆನ್ನ ಬಹುದು, ಇಲ್ಲದಿದ್ದರೆ ಭಕ್ತನಲ್ಲ ಎಂದು ಮಾತ್ರ ಹೇಳಲಾಗದು. ಶ್ರೀಮದಾ ಚಾರ್ಯರು ವರಾಹ ಪುರಾಣವಚನವನ್ನು ತೋರಿಸಿ ಈ ವಿಷಯದಲ್ಲಿ ನಿರ್ಣಯ ವನ್ನು ಹೇಳುತ್ತಾರೆ—

ಕೇಚಿದುನ್ಮಾದವದ್ ಭಕ್ತಾ ಬಾಹ್ಯಲಿಂಗಪ್ರದರ್ಶಕಾಃ ।
ಕೇಚಿದಾಂತರಭಕ್ತಾಃ ಸ್ಯುಃ ಕೇಚಿಚ್ಚೈವೋಭಯಾತ್ಮಕಾಃ ।
ಮುಖಪ್ರಸಾದಾದ್ ದಾರ್ಢ್ಯಾಚ್ಚ ಭಕ್ತಿರ್ಜ್ಞೇಯಾ ನ ಚಾನ್ಯತಃ ॥
ಇತಿ ವಾರಾಹೇ ॥

'ಕೆಲವು ಭಕ್ತರು ಹುಚ್ಚರಂತೆ ಭಕ್ತಿಯ ಬಾಹ್ಯಚಿಹ್ನೆಗಳನ್ನು ಪ್ರದರ್ಶಿಸುವವರು. ಕೆಲವರು ಆಂತರಿಕಭಕ್ತರು. ಇನ್ನು ಕೆಲವರು ಎರಡೂರೀತಿ ಇರುತ್ತಾರೆ. ಅದರಿಂದ ಮುಖದಲ್ಲಿ ಪ್ರಸನ್ನತೆ, ಎಂಥ ಆಪತ್ತಿನಲ್ಲಿಯೂ ಭಗವಂತನನ್ನು ಮರೆಯದಿರುವ ದಾರ್ಢ್ಯ ಇವೇ ಭಕ್ತನೆನ್ನಲು ಆವಶ್ಯಕವಾಗಿರುವ ಲಕ್ಷಣಗಳು' ಎಂದು

ವರಾಹಪುರಾಣದಲ್ಲಿ ಉಕ್ತವಾಗಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಕವಿ ಮಹಾಮುನಿ ಜಗತ್ತಿನಲ್ಲಿ ಎಲ್ಲ ಪದಾರ್ಥಗಳೂ ಭಗವಂತನ ಉಪಾಸನೆಗೆ ಅಧಿಷ್ಠಾನವಾಗಬಲ್ಲವು ಎನ್ನುತ್ತಾರೆ.

ಖಂ ವಾಯುಮಗ್ನಿಂ ಸಲಿಲಂ ಮಹೀಂ ಚ
ಜ್ಯೋತೀಂಷಿ ಸತ್ವಾನಿ ದಿಶೋ ದ್ರುಮಾದೀನ್ ।
ಸರಿತ್ಸಮುದ್ರಾಂಶ್ಚ ಹರೇಃ ಶರೀರಂ
ಯತ್ಕಿಂಚ ಭೂತಂ ಪ್ರಣಮೇದನನ್ಯಮ್ ॥ ೪೧ ॥

ಆಕಾಶ ವಾಯು ಅಗ್ನಿ ಜಲ ಪೃಥಿವಿ ಸೂರ್ಯಾದಿ ಜ್ಯೋತಿಗಳು ಸಕಲಪ್ರಾಣಿಗಳು ದಿಕ್ಕುಗಳು ವೃಕ್ಷಾದಿಗಳು ನದೀಸಮುದ್ರಗಳು ದೇವಮಾನವಾದಿ ಗಳು ಎಲ್ಲವೂ ವಿಷ್ಣುವಿನ ಅಧೀನ ಹೊರತು ಅವುಗಳಿಗೆ ಇನ್ನೊಬ್ಬ ಅಧಿಪತಿ ಇಲ್ಲ. ಅದರಿಂದ ಅವುಗಳನ್ನು ಶರೀರದಂತೆ ಪ್ರತಿಮೆಯಂತೆ ಅವನ ಅಧಿಷ್ಠಾನವೆಂದು ತಿಳಿದು ನಮಿಸಬೇಕು.

---

[1]ಎಲ್ಲ ಪದಾರ್ಥಗಳೂ ಭಗವಂತನ ಶರೀರವೆಂಬ ಭಾವನೆಯಿಂದ ಭಕ್ತರು ಎಲ್ಲಕ್ಕೂ ನಮಿಸುವದು ಉಂಟೆಂದು ಶ್ರೀಧರವ್ಯಾಖ್ಯಾನ ಹೇಳಿದೆ. [2]'ಅನನ್ಯಃ' ಎಂದಿರುವುದರಿಂದ ತಾನೂ ಸ್ವತಂತ್ರನಲ್ಲ, ಭಗವಂತನ ಶರೀರವಾಗಿದ್ದೇನೆ ಎಂದು ಭಾವಿಸಿ ಎಲ್ಲಕ್ಕೂ ನಮಿಸಬೇಕೆಂದು ವೀರರಾಘವ ವ್ಯಾಖ್ಯಾನ ಹೇಳಿದೆ. 'ಅನನ್ಯಃ' ಎಂದು ಇವರ ಪಾಠ.

ಆದರೆ ಜಗತ್ತು ಭಗವಂತನ ವಾಸಸ್ಥಾನ, ಅವನ ಉಪಾಸನೆಗೆ ಅಧಿಷ್ಠಾನವೆ ಹೊರತು ಅವನ ಶರೀರವಲ್ಲ. ಶರೀರವೆಂದರೆ, ಜಗತ್ತಿಗೆ ಉತ್ಪತ್ತಿ ಪ್ರಳಯಗಳಾಗುವು ದರಿಂದ, ಭಗವಂತನಿಗೆ ಜನನಮರಣಗಳಾಗುತ್ತವೆ ಎಂದಂತಾಗುತ್ತದೆ. 'ಹರೇಃ ಶರೀರಂ' ಎಂದು ಭಾಗವತ ಹೇಳಿದರೂ ಹರಿವಂಶವಚನಾನುಸಾರವಾಗಿ, ಹರಿಯ ಅಧೀನವಾದ್ದರಿಂದ ಜಗತ್ತು ಅವನಿಗೆ ಶರೀರದಂತೆ ಎಂದು ಅಭಿಪ್ರಾಯವನ್ನು ಗ್ರಹಿಸಬೇಕು. 'ಸಂಭಾವನಾಯಾಂ ಲಿಙ್' ಎಂದು ಶ್ರೀಧರವ್ಯಾಖ್ಯಾನ ಹೇಳಿದ್ದೂ ಮುಂದೆ 43ನೇ ಶ್ಲೋಕದಲ್ಲಿ 'ಇತ್ಯಚ್ಯುತಾಂಘ್ರಿಂ ಭಜತಃ' 'ಹೀಗೆ ಹರಿಪಾದವನ್ನು

1. ಹರೇಃ ಶರೀರಮಿತಿ ಮತ್ವಾ ಪ್ರಣಮೇತ್ ಸಂಭಾವನಾಯಾಂ ಲಿಙ್ । -ಶ್ರೀಧರಃ
2. ಅನನ್ಯಃ ಸ್ವಯಮಪ್ಯಪೃಥಕ್‌ಸಿದ್ಧಃ । ಸ್ವಾತ್ಮನ್ಯಪಿ ಭಗವಚ್ಛರೀರತಾಂ ಭಾವಯನ್ನಿತ್ಯರ್ಥಃ ।
-ವೀರರಾಘವಃ

ಉಪಾಸನೆ ಮಾಡಬೇಕೆಂ'ದು ಹೇಳಿದ್ದಕ್ಕೆ ವ್ಯತಿರಿಕ್ತವಾಗುವುದು. ನಮಿಸುವುದೂ ಒಂದು ಬಗೆಯ ಉಪಾಸನೆಯೆ. ಅದರ ಸಂಭವ ಮಾತ್ರ ಉಂಟೆನ್ನಬಾರದು. ನಮನರೂಪವಾದ ಉಪಾಸನೆಯನ್ನು ಮಾಡಬೇಕೆಂದು ವಿಧಿ ಲಿಜರ್ಥ.

[3]ಜೀವಗೋಸ್ವಾಮಿ [4]ರಾಧಾರಮಣದಾಸ ವ್ಯಾಖ್ಯಾನಗಳ ಪ್ರಕಾರ ಭಕ್ತನಿಗೆ ಹರಿಯ ಮೇಲಿನ ಗಾಢವಾದ ಅನುರಾಗದಿಂದ ಅವನ ಶ್ಯಾಮ ಸುಂದರ ಪಿತಾಂಬರಧಾರಿ ರೂಪವೇ ಎಲ್ಲಕಡೆ ಗೋಚರವಾಗುತ್ತದೆ. 'ಯಾ ನಿಶಾ ಸರ್ವಭೂತಾನಾಂ' ಎಂದು ಭಗವದ್ಗೀತೆ ಹೇಳುವಂತೆ. ಲೋಭಿಗಳಿಗೆ ಎಲ್ಲೆಡೆ ಹಣವೇ ಕಾಣುವಂತೆ, ಕಾಮುಕರಿಗೆ ಎಲ್ಲೆಡೆ ಕಾಮಿನಿಯೇ ಗೋಚರಿಸುವಂತೆ. ಆಗ ಭಕ್ತ ಪ್ರಣಾಮ ಮಾಡುತ್ತಾನೆ, ಅಂದರೆ ವಿನಮ್ರಭಾವದಿಂದಿರುತ್ತಾನೆ ಎನ್ನುತ್ತಾರೆ.

ಆದರೆ ಇದೂ ಕೂಡ 'ಸಂಭಾವನಾಯಾಂ ಲಿಜ್' ಎಂಬ ಅಭಿಪ್ರಾಯದಿಂದ ಸಂಭಾವಿತವೆಂದಾಗುವುದು. 'ಇತ್ಯಚ್ಯುತಾಂಘ್ರಿಂ ಭಜತಃ' ಎಂದು ಹೇಳಿದ್ದರಿಂದ, ಉಪಾಸನಾ ಮಾಡಬೇಕೆಂದು ವಿಧಾನ ಮಾಡಿದ್ದಕ್ಕೆ ವಿರುದ್ಧವಾಗುವುದು. ಅದರಿಂದ ~~ಜಗತ್ತು ಭಗವಂತನ ಅಧೀನವಾದ್ದರಿಂದ ಶರೀರದಂತಿದ್ದು ಉಪಾಸನೆಗೆ ಅಧಿಷ್ಠಾನ~~ ವಾಗುವುದೆಂದೇ ಭಾಗವತದ ಅಭಿಪ್ರಾಯವನ್ನು ಗ್ರಹಿಸಬೇಕು. ಶ್ರೀಮದಾಚಾರ್ಯರು ಹೇಳುತ್ತಾರೆ—

ಸರ್ವಂ ಹರೇರ್ವಶತ್ವೇನ ಶರೀರಂ ತಸ್ಯ ಭಣ್ಯತೇ ।
ಅನನ್ಯಾಧಿಪತಿತ್ವಾಚ್ಚ ತದನನ್ಯಮುದೀರ್ಯತೇ ।
ನ ಚಾಪ್ಯಭೇದೋ ಜಗತಾ ವಿಷ್ಣೋಃ ಪೂರ್ಣಗುಣಸ್ಯ ತು ॥
ಇತಿ ಹರಿವಂಶೇಷು ॥

'ಜಗತ್ತಿನಲ್ಲಿ ಎಲ್ಲ ಪದಾರ್ಥವು ಭಗವಂತನ ಅಧೀನವಾದ್ದರಿಂದ ಅವನ

---

3. ನಾರಾಯಣಮಯಂ ಧೀರಾಃ ಪಶ್ಯಂತಿ ಪರಮಾರ್ಥಿನಃ ।
ಜಗದ್ಧನಮಯಂ ಲುಬ್ಧಾಃ ಕಾಮುಕಾಃ ಕಾಮಿನೀಮಯಂ ॥
ಇತಿವತ್ ಹರೇಃ ಶರೀರಂ ಶ್ಯಾಮಸುಂದರ ಪೀತವಸನಾದಿರೂಪಮೇವ ಪಶ್ಯನ್ ಪ್ರಣಮೇತ್ । ತತ್ರ ತತ್ರ ಭಕ್ತ್ಯಾ ನಮ್ರಾತ್ಮಾ ಭವತೀತ್ಯರ್ಥಃ । ತತ್ರ ಹೇತುಃ ಅನನ್ಯಃ ಸ್ಫೂರ್ತ್ಯಂತರ ರಹಿತ ಇತ್ಯರ್ಥಃ ಯಾ ನಿಶಾ ಸರ್ವಭೂತಾನಾಮಿತ್ಯಾದೇಃ ॥ - ಜೀವಗೋಸ್ವಾಮೀ

4. ಶರೀರಂ ಶ್ಯಾಮಸುಂದರಪೀತವಸನಾದಿರೂಪಂ । ಸಂಭಾವನಾಯಾಂ ಲಿಜಿತಿ ಅನುರಾಗೇಣ ಸರ್ವತ್ರ ತತ್ಸ್ಫೂರ್ತೌ ತತ್ಪ್ರಣಾಮಃ ಸಂಭವತ್ಯೇವೇತ್ಯರ್ಥಃ । - ರಾಧಾರಮಣದಾಸಃ

ಶರೀರವೆಂದು ಹೇಳುವುದುಂಟು ಹೊರತು, ಅದು ಶರೀರವೇ ಎಂದಲ್ಲ. ಅದಕ್ಕೆ ಹರಿಯೇ ಹೊರತು ಇನ್ನೊಬ್ಬ ಅಧಿಪತಿ ಇಲ್ಲದ್ದರಿಂದ ಅದು ಅನನ್ಯವೆನಿಸುತ್ತದೆ, ಹೊರತು ಪೂರ್ಣಗುಣನಾದ ವಿಷ್ಣುವಿಗೆ ಜಗತ್ತಿನಿಂದ ಅಭೇದವಿರುವುದಿಲ್ಲ' ಎಂದು ಹರಿವಂಶದಲ್ಲಿ ಉಕ್ತವಾಗಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಹರಿಮಹಾಮುನಿ ಭಗವದ್ಭಕ್ತರಲ್ಲಿ ಉತ್ತಮ ಮಧ್ಯಮ ಅಧಮರೆಂದು ಮೂರು ಬಗೆಯವವರಿತ್ತಾರೆ ಎನ್ನುತ್ತಾರೆ.

ಸರ್ವಭೂತೇಷು ಯಃ ಪಶ್ಯೇದ್ಭಗವದ್ಭಾವಮಾತ್ಮನಃ ।
ಭೂತಾನಿ ಭಗವತ್ಯಾತ್ಮನ್ನೇಷ ಭಾಗವತೋತ್ತಮಃ ॥ ೪೫ ॥

ಪರಮಾತ್ಮನ ಜ್ಞಾನಿ ಅಜ್ಞಾನಿ ದ್ವೇಷಿಗಳೆಂದು ಎಲ್ಲ ಮೂರು ವರ್ಗದ ಜನರಲ್ಲಿಯೂ ಪರಮಾತ್ಮನಿಂದಲೇ ಜ್ಞಾನ ಅಜ್ಞಾನ ದ್ವೇಷಗಳುಂಟಾಗುತ್ತವೆ. ತನಗೆ ಆ ಜನರಲ್ಲಿ ಪ್ರೀತಿ ಅನುಕಂಪೆ ಅನಾದರಗಳುಂಟಾಗುವುದೂ ಭಗವಂತನಿಂದಲೇ. ಎಲ್ಲ ಜನರೂ ಗುಣಪೂರ್ಣನಾದ ಭಗವಂತನ ವಶದಲ್ಲಿಯೇ ಇರುತ್ತಾರೆ ಎಂದು ತಿಳಿದು ಅದರಂತೆ ನಡೆಯುವವನು ಉತ್ತಮಭಕ್ತ, ತತ್ತ್ವಾಭಿಮಾನಿ ದೇವತೆಗಳು ಉತ್ತಮ ಭಕ್ತರು.

ಈಶ್ವರೇ ತದಧೀನೇಷು ಬಾಲಿಶೇಷು ದ್ವಿಷತ್ಸು ಚ ।
ಪ್ರೇಮಮೈತ್ರೀಕೃಪೋಪೇಕ್ಷಾ ಯಃ ಕರೋತಿ ಸ ಮಧ್ಯಮಃ ॥ ೪೬ ॥

ಋಷಿಗಂಧರ್ವರು ಮಧ್ಯಮ ಭಕ್ತರು ಇವರು ಭಗವಂತನಲ್ಲಿ ಮತ್ತು ಅವನ ಭಕ್ತರಲ್ಲಿ ಪ್ರೀತಿಯನ್ನೂ ಸ್ನೇಹವನ್ನೂ ಅಜ್ಞರಲ್ಲಿ ಅನುಕಂಪೆಯನ್ನೂ ದ್ವೇಷಿಗಳಲ್ಲಿ ಅನಾದರಭಾವವನ್ನೂ ಹೊಂದಿರುತ್ತಾರೆ. ಆದರೆ ಅಪರೋಕ್ಷಕ್ಕಿಂತ ಪೂರ್ವದಲ್ಲಿ, 'ಎಲ್ಲ ವರ್ಗದ ಜನರೂ ಭಗವಂತನ ಪ್ರೇರಣೆಗೊಳಪಡುವವರೆಂ'ಬುದನ್ನು ಅರಿತಿರುವುದಿಲ್ಲ.

ಅರ್ಚಾಯಾಮೇವ ಹರಯೇ ಪೂಜಾಂ ಯಃ ಶ್ರದ್ಧಯೇಹತೇ ।
ನ ತದ್ಭಕ್ತೇಷು ಚಾನ್ಯೇಷು ಸ ಭಕ್ತಃ ಪ್ರಾಕೃತಃ ಸ್ಮೃತಃ ॥ ೪೭ ॥

ತಾಮಸರಾದ ಅಧಮಭಕ್ತರು ಪ್ರತಿಮೆಯಲ್ಲಿ ಮಾತ್ರವೇ ಶ್ರದ್ಧೆಯಿಂದ ಹರಿಗೆ ಪೂಜೆ ಸಲ್ಲಿಸುತ್ತಾರೆ. ಭಕ್ತರಲ್ಲಿ ಅವನಿಗೆ ಪೂಜೆ ಸಲ್ಲಿಸುವುದಿಲ್ಲ. ಭಕ್ತರಲ್ಲಿ ಭಕ್ತಿ

ತಾರತಮ್ಯವನ್ನು ಅರಿತುಕೊಳ್ಳುವುದಿಲ್ಲ. ಭಗವಂತನ ದ್ವೇಷಿಗಳಲ್ಲಿ ಅವರು ಮಾಡುವ ದ್ವೇಷಪ್ರಕಾರವನ್ನು ತಿಳಿಯುವುದಿಲ್ಲ. ಅದರಲ್ಲಿ ಅನಾದರ ತೋರುವುದಿಲ್ಲ.

[1]'ತಾನು ಬ್ರಹ್ಮನೇ ಎಂಬ ಭಾವನೆಯಿಂದ ಕಲ್ಪಿತವಾದ ಎಲ್ಲ ವಸ್ತುಗಳಲ್ಲಿ ಅಧಿಷ್ಠಾನ ರೂಪದಿಂದ ತಾನಿರುವೆಂದು, ತನ್ನಲ್ಲಿಯೇ ಎಲ್ಲವೂ ಕಲ್ಪಿತವಾಗಿದೆ ಎಂದು ತಿಳಿಯುವವನು ಉತ್ತಮಭಕ್ತ' ಎಂದು ಶ್ರೀಧರವ್ಯಾಖ್ಯಾನದಲ್ಲಿ ಹೇಳಿದೆ. [2]ಈ ವ್ಯಾಖ್ಯಾನಕ್ಕೆ ವಿವರಣೆ ನೀಡುತ್ತ ರಾಧಾರಮಣದಾಸ ವ್ಯಾಖ್ಯಾನ ಹೇಳುತ್ತದೆ, 'ಉತ್ತಮ ಭಕ್ತನು ಯಾರು ಹೇಳು ಎಂದರೆ ಜಗನ್ಮಿಥ್ಯಾತ್ಮವನ್ನು ತಿಳಿದಿರುವವನು ಎಂದು ಉತ್ತರವನ್ನು ಇಲ್ಲಿ ಹೇಳಲಾಗಿದೆ. ಇದು ಮಾವಿನ ಗಿಡವನ್ನು ತೋರಿಸೆಂದರೆ ಬೇವಿನಗಿಡವನ್ನು ತೋರಿಸಿದಂತಾಯಿತು ಅಸಂಗತವಾಯಿತೆಂದು 'ಯದ್ವಾ' ಎಂದು ಇನ್ನೊಂದು ಬಗೆಯಿಂದ ವ್ಯಾಖ್ಯಾನ ಮಾಡುತ್ತಾರೆ' ಎಂದು.

[3]ಜೀವಗೋಸ್ವಾಮಿ ವ್ಯಾಖ್ಯಾನ ಹೇಳುತ್ತದೆ. 'ಇಲ್ಲಿ ಬ್ರಹ್ಮಾತ್ಮೈಕ್ಯಜ್ಞಾನವನ್ನು ಭಾಗವತದಲ್ಲಿ ಹೇಳಿಲ್ಲ. ಅದು ಭಗವದ್ಭಕ್ತರ ಲಕ್ಷಣವಲ್ಲ. ಅವರಿಗೆ ಆ ಜ್ಞಾನವಾಗಲಿ

---

1. ಆತ್ಮನಃ ಸ್ವಸ್ಯ ಸರ್ವಭೂತೇಷು ಬ್ರಹ್ಮಭಾವೇನ ಸಮನ್ವಯಂ ಪಶ್ಯೇತ್ । ತಥಾ ಬ್ರಹ್ಮರೂಪೇ ಆತ್ಮನಿ ಅಧಿಷ್ಠಾನೇ ಭೂತಾನಿ ಚ ಯಃ ಪಶ್ಯೇತ್ । ಯದ್ವಾ ಆತ್ಮನೋ ಹರೇಃ ಸರ್ವಭೂತೇಷು ಮಶಕಾದಿಷ್ವಪಿ ನಿಯಂತೃತ್ವೇನ ವರ್ತಮಾನಸ್ಯ ಭಗವದ್‌ಭಾವಂ ನಿರತಿಶಯೈಶ್ವರ್ಯಮೇವ ಯಃ ಪಶ್ಯೇತ್, ನ ತು ತಸ್ಯ ತಾರತಮ್ಯಂ, ತಥಾ ಆತ್ಮನಿ ಹರಾವೇವ ಭೂತಾನಿ ಚ ಯಃ ಪಶ್ಯೇತ್ । ಕಥಂಭೂತೇ ಭಗವತಿ? ಅಪ್ರಚ್ಯುತೈಶ್ವರ್ಯಾದಿರೂಪೇ । ಸರ್ವತ್ರ ಪರಿಪೂರ್ಣಂ ಭಗವತತ್ತ್ವಂ ಪಶ್ಯನ್ ಭಾಗವತೋತ್ತಮ ಇತ್ಯರ್ಥಃ ॥ ಪ್ರೇಮ ಚ ಮೈತ್ರೀ ಚ ಕೃಪಾಚ ಉಪೇಕ್ಷಾ ಚ ತಾ ಈಶ್ವರಾದಿಷು ಚತುರ್ಷು ಯಃ ಕರೋತಿ ಸ ಮಧ್ಯಮೋ ಭಾಗವತಃ ಏವಂ ಭೂತಸ್ಯ ಭೇದಸ್ಯ ದರ್ಶನಾತ್ । ಅರ್ಚಾಯಾಂ ಪ್ರತಿಮಾಯಾಂ ಪೂಜಾಮೀಹತೇ ಕರೋತಿ ನ ತದ್‌ಭಕ್ತೇಷ್ವನ್ಯೇಷು ಚ ಸುತರಾಂ ನ ಕರೋತಿ ಪ್ರಾಕೃತಃ ಪ್ರಕೃತಪ್ರಾರಂಭಃ । ಅಧುನೈವ ಪ್ರಾರಬ್ಧಭಕ್ತಿಃ ಶನೈರುತ್ತಮೋ ಭವಿಷ್ಯತೀತ್ಯರ್ಥಃ । -ಶ್ರೀಧರಃ

2. ಸ್ವಸ್ಯ ತ್ವಂಪದಾರ್ಥಸ್ಯ ಬ್ರಹ್ಮಭಾವೇನ ಬ್ರಹ್ಮಾಸ್ಮೀತಿ ಭಾವನಯಾ ಸರ್ವಭೂತೇಷು ಕಲ್ಪಿತೇಷು ಅಧಿಷ್ಠಾನತ್ವೇನ ಸಮನ್ವಯಮನುಸ್ಯೂತತ್ವಂ । ಅಧಿಷ್ಠಾನೇ ಕಲ್ಪಿತಾನಿ ನ ತು ವಾಸ್ತವಾನೀತಿ ಯಃ ಪಶ್ಯೇತ್ ಸ ಭಾಗವತೋತ್ತಮ ಇತ್ಯರ್ಥಃ । ಪೂರ್ವಾರ್ಥೇ ಬ್ರಹ್ಮಜ್ಞಾನಿಲಕ್ಷಣಮುಕ್ತಂ, ನ ತು ಭಾಗವತಲಕ್ಷಣಮಿತಿ ಆಮ್ರನಿಂಬಪ್ರಶ್ನೋತ್ತರನ್ಯಾಯಾಪತ್ತಿರಿತ್ಯರುಚೌ ಯದ್ವೇತಿ । ಸ್ವಸ್ಯ ದ್ವಿಷತ್ಸು ಉಪೇಕ್ಷಾಂ ಚಿತ್ತಾಕ್ಷೋಭೇಣೌದಾಸೀನ್ಯಂ । ಭಕ್ತ ಭಗವದ್‌ದ್ವೇಷಿಷು ತು ಚಿತ್ತಕ್ಷೋಭಸ್ಯ ಆವಶ್ಯಕತ್ವಾದುಪೇಕ್ಷಾಂ ತತ್‌ಸಾಮೀಪ್ಯತ್ಯಾಗಂ । ಮೈತ್ರೀಕೃಪೋಪೇಕ್ಷಾರೂಪಸ್ಯ ಭೇದಸ್ಯ ದರ್ಶನಾತ್ । ನ ತು ಪೂರ್ವವತ್ ಸರ್ವತ್ರ ತತ್‌ಸ್ಫೂರ್ತಿರಿತಿ ।

-ರಾಧಾರಮಣದಾಸಃ

3. ಅತ್ರ ನ ಬ್ರಹ್ಮಜ್ಞಾನಮಭಿಧೀಯತೇ । ಭಾಗವತೈಸ್ತಜ್‌ಜ್ಞಾನಸ್ಯ ತತ್‌ಫಲಸ್ಯ ಚ ಹೇಯತ್ವೇನ

ಅದರ ಫಲವಾಗಲಿ ಹೇಯವಾಗಿದೆ. ಮತ್ತು ಭಾಗವತವೇ ಇಲ್ಲಿಯೇ ಕೊನೆಯಲ್ಲಿ 'ಪ್ರಣಯರಶನಯಾ ಧೃತಾಂಘ್ರಿಪದ್ಮೇ' (ಶ್ಲೋ.55) ಎಂದು ಸಾಕಾರವನ್ನು ಹೇಳುತ್ತಿರುವುದ ರಿಂದ ನಿರಾಕಾರ ಜ್ಞಾನ ವಿವಕ್ಷಿತವಲ್ಲವೆಂದೂ ತಿಳಿಯುತ್ತದೆ.'

ಶ್ರೀಧರವ್ಯಾಖ್ಯಾನದಲ್ಲಿ 'ಯದ್ವಾ' ಎಂದು ಎರಡನೇ ಲಕ್ಷಣ ಹೇಳಿದ್ದು ಅಯುಕ್ತವಲ್ಲ. ಆದರೆ ಉತ್ತಮಭಕ್ತನ ಲಕ್ಷಣ ಪೂರ್ತಿಯಾಗಿ ಅದರಲ್ಲಿ ಬರಲಿಲ್ಲ. 'ಭಗವದ್ ಭಾವ' ಎಂದರೆ ಭಗವಂತನ ಲಕ್ಷಣವಾದ ಗುಣಪೂರ್ಣತ್ವ ಮಾತ್ರವೇ ವಿವಕ್ಷಿತವಲ್ಲ. ಎಲ್ಲೆಡೆ ನಿಯಾಮಕನಾಗಿ ಅವನಿರುವುದು ಮಾತ್ರವೂ ವಿವಕ್ಷಿತವಲ್ಲ. ಜೊತೆಗೆ 'ಭಗವತಃ ಭಾವಃ' ಭಗವಂತನಿಂದ ಭಕ್ತನಲ್ಲಿ ಉಂಟಾಗುವ ಭಕ್ತಿಭಾವ, ದ್ವೇಷಿಯಲ್ಲಿ ಉಂಟಾಗುವ ದ್ವೇಷಭಾವ, ಉದಾಸೀನನಲ್ಲಿ ಉಂಟಾಗುವ ಉದಾಸೀನ ಭಾವ ಮತ್ತು ತನಗೆ ಭಗವಂತನಲ್ಲಿ ಭಗವದ್‌ಭಕ್ತರಲ್ಲಿ ಉದಿಸುವ ಪ್ರೇಮಸ್ನೇಹಗಳು, ಅಜ್ಞರಲ್ಲಿ ಕೃಪೆ, ದ್ವೇಷಿಗಳಲ್ಲಿ ಅಸಮಾಧಾನ ಭಾವನೆಗಳು ಭಗವಂತನಿಂದಲೇ ಎನ್ನುವ ಭಾವನೆ ಇವೂ ವಿವಕ್ಷಿತವಾಗಿವೆ. ಇವೆಲ್ಲ ಇದ್ದರೆ ಮಾತ್ರ ಭಕ್ತ ಉತ್ತಮ ~~ಭಕ್ತನೆನಿಸುತ್ತಾನೆ. ಮಧ್ಯಮ ಭಕ್ತನಿಗೆ ಭಗವಂತ ಭಕ್ತ ಅಜ್ಞ ಮತ್ತು ದ್ವೇಷಿಗಳಲ್ಲಿ~~ ಕ್ರಮವಾಗಿ ಪ್ರೇಮ ಸ್ನೇಹ ಕೃಪೆ ಅಸಮಾಧಾನ ಭಾವನೆಗಳಿರುತ್ತವೆ, ಆದರೆ ಅವು ಭಗವಂತನೇ ಮಾಡಿದ ಅನುಗ್ರಹ ಎಂಬ ಭಾವನೆ ಇರುವುದಿಲ್ಲ. ತಮಗೆ ತಾವೇ ನನ್ನಲ್ಲಿ ಸ್ವಾಭಾವಿಕವಾಗಿ ಬಂದಿವೆ ಎಂದುಕೊಳ್ಳುತ್ತಾನೆ.

[4]'ಭಗವಂತನೆಲ್ಲೆಡೆ ಇದ್ದಾನೆ, ಎಲ್ಲಕ್ಕೂ ಆಧಾರವಾಗಿದ್ದಾನೆ ಎನ್ನುವ ಜ್ಞಾನ ಮಧ್ಯಮಭಕ್ತನಲ್ಲಿಯೂ ಇರುವುದರಿಂದ ಅದನ್ನು ಉತ್ತಮಭಕ್ತನ ಲಕ್ಷಣವೆನ್ನು ವಂತಿಲ್ಲ' ಎಂದು ವಿಶ್ವನಾಥಚಕ್ರವರ್ತಿ ವ್ಯಾಖ್ಯಾನದಲ್ಲಿ ಹೇಳಿದ್ದು ಸರಿಯಲ್ಲ. ಈ ಜ್ಞಾನ ಮಾತ್ರವೇ ಉತ್ತಮ ಭಕ್ತನ ಲಕ್ಷಣವೆಂದಿದ್ದರೆ ಈ ಆಕ್ಷೇಪ ಕೂಡುತ್ತಿತ್ತು. ಭಗವಂತನ ಅನುಗ್ರಹದಿಂದ ಈ ಜ್ಞಾನ ನನಗೆ ಲಭಿಸಿದೆ ಎಂದು ಉತ್ತಮಭಕ್ತ ತಿಳಿದಿರುತ್ತಾನೆ ಎಂದೂ ಭಾಗವತ 'ಭಗವದ್‌ಭಾವಮಾತ್ಮನಃ' ಎಂಬ ಮಾತಿನಿಂದ ಹೇಳುತ್ತಿದೆ. ಅದರಿಂದ ಆಕ್ಷೇಪಕ್ಕೆ ಅವಕಾಶವಿಲ್ಲ.

ಜೀವಭಗವದ್‌ವಿಭಾಗಾಭಾವೇನ ಚ ಭಾಗವತತ್ವ ವಿರೋಧಾತ್। ನ ಚ ನಿರಾಕಾರೇಶ್ವರ ಜ್ಞಾನಂ। ಪ್ರಣಯರಶನಯಾ ಧೃತಾಂಘ್ರಿಪದ್ಮ ಇತ್ಯುಪಸಂಹಾರಗತಲಕ್ಷಣ ಪರಮಕಾಷ್ಠಾ-ವಿರೋಧಾದೇವೇತಿ ವಿವೇಚನೀಯಂ। -ಜೀವಗೋಸ್ವಾಮೀ

4. ಅತ್ರ ದೃಶೇ ರ್ಜ್ಞಾನಾರ್ಥತ್ವೇ ವ್ಯಾಖ್ಯಾತೇ ಭಗವತಃ ಸರ್ವಭೂತಾಧೇಯತ್ವಾಧಾರತ್ವ ಜ್ಞಾನವತಃ ಶಾಸ್ತ್ರಜ್ಞಮಾತ್ರಸ್ಯೈವ ಭಾಗವತೋತ್ತಮತ್ವಂ ಸ್ಯಾದಿತಿ ತನ್ನ ವ್ಯಾಖ್ಯಾತಂ। -ವಿಶ್ವನಾಥಃ

ಮಧ್ಯಮಭಕ್ತನಿಗೆ ಭಗವದ್‌ದ್ವೇಷಿಗಳಲ್ಲಿ ಉದಾಸೀನಭಾವವೆಂದರೆ ಅವರಿಗೆ ಉಪಕಾರವನ್ನಾಗಲಿ ನಿಂದೆಯನ್ನಾಗಲಿ ಮಾಡದೆ ದೂರ ಹೋಗುವುದಲ್ಲ. ನಿಂದೆ ಮಾಡದಿದ್ದರೆ ಅವನು ದ್ವೇಷಿಯೆನಿಸುತ್ತಾನೆ. ಏಕೆಂದರೆ ತಾನೂ ಭಗವಂತನಲ್ಲಿ ದ್ವೇಷ ಮಾಡುತ್ತಿದ್ದರೆ ದ್ವೇಷಿಯನ್ನು ನಿಂದೆ ಮಾಡದಿರುವುದು, ಸಹಜ ತಾನೆ? ಅದರಿಂದ ಈಶಾವಾಸ್ಯಭಾಷ್ಯದಲ್ಲಿ ಹೇಳಿದಂತೆ ತಮಸ್ಸಾಗಬೇಕಾದೀತು.

'ತತೋಽಧಿಕಮಿವ ವ್ಯಕ್ತಂ ಯಾಂತಿ ತೇಷಾಮನಿಂದಕಾಃ'

'ಭಗವಂತನ ದ್ವೇಷಿಗಳನ್ನು ನಿಂದಿಸದವರು ದ್ವೇಷಿಗಳಿಗಿಂತ ಹೆಚ್ಚಿನ ನರಕ ವನ್ನು ಹೊಂದುತ್ತಾರೆ.'

ರಾಧಾರಮಣದಾಸ ವ್ಯಾಖ್ಯಾನದಲ್ಲಿ 'ಉದಾಸೀನಭಾವವೆಂದರೆ, ಭಗವಂತನ ದ್ವೇಷಿಗಳನ್ನು ಕಂಡಾಗ ಮನಸಿನಲ್ಲಿ ಉದ್ವೇಗವಾಗದಿರುವುದಲ್ಲ, ಉದ್ವೇಗವಾಗ ಬೇಕು, ಅದಕ್ಕೆ ಅವರ ಸಹವಾಸ ಬಿಟ್ಟು ಆಚೆ ತೊಲಗಬೇಕು' ಎಂದಿದ್ದಾರೆ. ಆದರೆ ಇದು ಅಶಕ್ತನಾಗಿದ್ದ ಪಕ್ಷದಲ್ಲಿ, ಸಶಕ್ತನಾಗಿದ್ದರೆ ದ್ವೇಷಿಗಳಿಗೆ ಶಿಕ್ಷೆ ಮಾಡಬೇಕು, ಸುಮ್ಮನೆ ಬಿಡಬಾರದು. ಬಿಟ್ಟು ದೂರಹೋಗಬಾರದು.

ಮಧ್ಯಮಭಕ್ತ ಭಗವಂತನಲ್ಲಿ ಪ್ರೀತಿಯನ್ನು, ಭಕ್ತರಲ್ಲಿ ಸ್ನೇಹವನ್ನು ಅಜ್ಞರಲ್ಲಿ ಕೃಪೆಯನ್ನು, ದ್ವೇಷಿಗಳಲ್ಲಿ ಉದಾಸೀನಭಾವವನ್ನು ತೋರುತ್ತಾನೆ. ಇದು ಮಧ್ಯಮ ಭಕ್ತನ ಲಕ್ಷಣ ಎನ್ನುವುದೇಕೆಂದರೆ ಈ ಪ್ರೀತಿ ಸ್ನೇಹ ಮುಂತಾದುವು ಭಗವಂತನ ಪ್ರೇರಣೆಯಿಂದಲೇ ತನ್ನಲ್ಲಿ ಉದಿಸಿವೆ ಎಂದು ಆತ ತಿಳಿಯಬೇಕು. ಆದರೆ ತಿಳಿದಿರುವುದಿಲ್ಲ.

ಶ್ರೀಧರವ್ಯಾಖ್ಯಾನದಲ್ಲಿ ಬೇರೆಯೇ ಕಾರಣವನ್ನು ಹೇಳುತ್ತಾರೆ— 'ಏವಂ ಭೂತಸ್ಯ ಭೇದಸ್ಯ ದರ್ಶನಾತ್' 'ಭಗವಂತನಲ್ಲಿ ಪ್ರೀತಿ, ಭಕ್ತನಲ್ಲಿ ಸ್ನೇಹ' ಎಂದು ಮುಂತಾಗಿ ಭೇದವನ್ನು ತಾರತಮ್ಯವನ್ನು ತಿಳಿಯುತ್ತಾನೆ, ಮಧ್ಯಮಭಕ್ತ' ಎಂದು. ಇದು ಮಾವಿನಗಿಡವನ್ನು ಕೇಳಿದರೆ ಬೇವಿನಗಿಡವನ್ನು ತೋರಿಸುವಂತೆಯೇ ಅಸಂಗತ. ಏಕೆಂದರೆ ಭೇದ, ತಾರತಮ್ಯಗಳು ಅದ್ವೈತಕ್ಕೆ ವಿರೋಧಿ, ಹೊರತು ಭಕ್ತಿಗೆ ಅಲ್ಲ.

'ಅಧಮ ಭಕ್ತ ಭಗವಂತನ ಆರಾಧನೆಯನ್ನು ಜಡಪ್ರತಿಮೆಗಳಲ್ಲಿ ನಡೆಸುತ್ತಾನೆ, ಭಕ್ತರಿಂದ ದೂರವಿರುತ್ತಾನೆ. ಇದು ಅವನ ಲಕ್ಷಣ. ಅವನನ್ನು ಪ್ರಾಕೃತ ಭಕ್ತನೆಂದು ಭಾಗವತ ಕರೆದಿದೆ. 'ಪ್ರಾಕೃತ ಎಂದರೆ ಭಕ್ತಿ ಮಾಡಲು ಪ್ರಾರಂಭಿಸಿದ್ದಾನಷ್ಟೆ. ಮುಂದೆ

ಉತ್ತಮಭಕ್ತನಾಗುತ್ತಾನೆ', ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ.

ಆದರೆ ಇಂಥ ಪ್ರಾಕೃತ ಭಕ್ತರು ಮೂರು ಬಗೆ ಇರುತ್ತಾರೆ. ಭಕ್ತರನ್ನು ಏಕೆ ಆರಾಧಿಸಬೇಕೆಂದು ತಿಳಿಯದವರು, ಆರಾಧಿಸಬೇಕು ಏಕೆ ಎಂದು ಆಕ್ಷೇಪಿಸುವವರು, ಮತ್ತು ಆರಾಧಿಸಕೂಡದೆಂದು ಆಗ್ರಹಪಡುವವರು ಎಂದು. ಅವರಲ್ಲಿ ತಿಳಿಯದವರು ಮನುಷ್ಯೋತ್ತಮರು ಯೋಗ್ಯ ಗುರುಗಳಿಂದ ತಿಳಿದು ಭಕ್ತರನ್ನು ಆರಾಧಿಸಿ ಭಗವಂತನ ಅನುಗ್ರಹದಿಂದ ಉತ್ತಮ ಭಕ್ತರಾಗಲು ಅವಕಾಶವಿದೆ. ಭಕ್ತರನ್ನು ಏಕೆ ಆರಾಧಿಸಬೇಕೆಂದು ಆಕ್ಷೇಪಿಸುವ ನಿತ್ಯಸಂಸಾರಿಗಳು ಮತ್ತು ಆರಾಧಿಸಕೂಡದೆನ್ನುವ ತಾಮಸರು ಈ ಅವಕಾಶವನ್ನು ತಾವಾಗಿಯೇ ಕಳೆದುಕೊಳ್ಳುತ್ತಾರೆ. ಭಕ್ತರ ಕೋಪಕ್ಕೆ ತುತ್ತಾಗಿ ಇದ್ದ ಅಲ್ಪ ಭಗವದ್ಭಕ್ತಿಯನ್ನು ಕಳೆದುಕೊಂಡು ಅನರ್ಥಭಾಗಿಗಳಾಗುತ್ತಾರೆ. ಈ ವಿಶೇಷ ವಿಚಾರ ಬೇರೆ ವ್ಯಾಖ್ಯಾನಕಾರರಿಗೆ ತಿಳಿದಿಲ್ಲ, ಅದನ್ನು ಅವರು ಒಪ್ಪುವುದೂ ಇಲ್ಲ.

ಶ್ರೀಮದಾಚಾರ್ಯರು ಪರಿಷ್ಕೃತವಾದ ನಿರ್ದುಷ್ಟವಾದ ತ್ರಿವಿಧಭಕ್ತರ ಲಕ್ಷಣಗಳನ್ನು ಪ್ರಮಾಣದ ಆಧಾರದೊಂದಿಗೆ ಹೇಳುತ್ತಾರೆ.

ಪೂರ್ಣತ್ವಾದಾತ್ಮಶಬ್ದೋಕ್ತಃ ಕಶ್ಚಿತ್ ಸರ್ವ ನರೋತ್ತಮಃ ।
ಸೋಽಪಿ ನಾರಾಯಣೋ ನಾನ್ಯಃ ಸ ಚ ಸರ್ವೇಷು ಸಂಸ್ಥಿತಃ ।
ತದ್ವಶಾ ಇತರೇ ಸರ್ವೇ ಶ್ರೀಬ್ರಹ್ಮೇಶಪುರಃಸರಾಃ ।
ಸ ಏವ ತು ಸ್ವಭಕ್ತೇಷು ಸ್ಥಿತ್ವಾಽನುಗ್ರಹಕಾರಕಃ ।
ಅಜ್ಞೇಷ್ವಜ್ಞಾನಯಂತಾ ಚ ದ್ವಿಷತ್ಸು ದ್ವೇಷಕಾರಕಃ ।
ತತ್ಪ್ರೇರಿತಾಸ್ತದನ್ಯೇ ತು ಪ್ರಿಯದ್ವೇಷಾದಿಕಾರಿಣಃ ।
ಅತಸ್ತತ್ಪ್ರೇರಣಾದೇವ ಪ್ರೇಮಾದ್ಯಾ ಮಮ ಜಜ್ಞಿರೇ ।
ಇತಿ ಪಶ್ಯತಿ ಯೋ ಬುದ್ಧ್ಯಾ ಸ ತು ಭಾಗವತೋತ್ತಮಃ ॥

ಆತ್ಮಶಬ್ದದಿಂದ ಕರೆಸಿಕೊಳ್ಳುವವನು ಸಕಲ ಚೇತನರಲ್ಲಿ ಉತ್ತಮನಾದ ನಾರಾಯಣನೊಬ್ಬನೆ. ಏಕೆಂದರೆ ಅವನೊಬ್ಬನೇ ಗುಣಪೂರ್ಣ. ಆತ್ಮನೆಂದರೂ ನಾರಾಯಣನೆಂದರೂ ಗುಣಪೂರ್ಣ ಎಂದೇ ಅರ್ಥ. ರಮಾಬ್ರಹ್ಮಾದಿಗಳಲ್ಲಿ ಯಾರೊಬ್ಬನೂ ಮುಖ್ಯವಾಗಿ ಆತ್ಮಶಬ್ದದಿಂದ ಕರೆಸಿಕೊಳ್ಳುವುದಿಲ್ಲ. ಆ ನಾರಾಯಣನೆ ಅವರೆಲ್ಲರಲ್ಲಿ ನಿಯಾಮಕನಾಗಿರುವನು. ಎಲ್ಲರೂ ಅವನ ವಶದಲ್ಲಿರುವರು.

ಭಗವದ್ಭಾವ ಎಂದರೆ ಭಗವಂತ ಎಲ್ಲರಲ್ಲಿ ನಿಯಾಮಕನಾಗಿ ಇರುವುದು ಮತ್ತು ಭಗವಂತನ ಲಕ್ಷಣವಾದ ಪೂರ್ಣಗುಣತ್ವ, ಆತ್ಮ ಎಂದರೆ ನಾರಾಯಣ. ಭಗವದ್‌ಭಾವ ಎಂದರೆ ಇನ್ನೊಂದು ಅರ್ಥ—ಆ ನಾರಾಯಣನೆ ಎಲ್ಲ ತ್ರಿವಿಧ ಚೇತನರಲ್ಲಿದ್ದು ಆಯಾ ಭಾವಗಳನ್ನುಂಟು ಮಾಡುವನು. ತನ್ನ ಭಕ್ತರಲ್ಲಿದ್ದು ಜ್ಞಾನಾದಿ ಗುಣಗಳನ್ನು ಅನುಗ್ರಹಿಸುವನು. ಅಜ್ಞರಲ್ಲಿದ್ದು ಅಜ್ಞಾನವನ್ನು ನಿಯಂತ್ರಿಸುವನು. ದ್ವೇಷಿಗಳಲ್ಲಿದ್ದು ದ್ವೇಷ ಉಂಟು ಮಾಡುವನು. ಭಗವಂತನಿಂದ ಪ್ರೇರಿತರಾಗಿಯೇ ಬೇರೆ ರಮಾ ಬ್ರಹ್ಮಾದಿ ಚೇತನರು ಭಕ್ತರಲ್ಲಿ ಭಕ್ತಿಯನ್ನು ದ್ವೇಷಿಗಳಲ್ಲಿ ದ್ವೇಷವನ್ನು ಅಜ್ಞರಲ್ಲಿ ಅಜ್ಞಾನವನ್ನು ಉಂಟುಮಾಡುವರು. ಅದರಿಂದ ಭಗವಂತನ ಮತ್ತು ರಮಾಬ್ರಹ್ಮಾದಿಗಳ ಪ್ರೇರಣೆಯಿಂದಲೆ ನನಗೆ ಭಕ್ತರಲ್ಲಿ ಭಕ್ತಿ ದ್ವೇಷಿಗಳಲ್ಲಿ ದ್ವೇಷ, ಅಜ್ಞರಲ್ಲಿ ಕೃಪೆ ಎಂಬ ಭಾವನೆಗಳು ಉಂಟಾಗಿವೆ. ಹೀಗೆ ಯಾರು ವಿವೇಕಬುದ್ಧಿಯಿಂದ ತಿಳಿಯುವನೋ ಅವನು ಭಗವದ್ಭಕ್ತರಲ್ಲಿ ಉತ್ತಮ. (ತತ್ವಾಭಿಮಾನಿ ದೇವತೆಗಳು ಇಂಥ ಉತ್ತಮ ಭಕ್ತರು.)

ಸರ್ವಾಧಿಕಂ ಪೃಥಗ್ ವಿಷ್ಣುಂ ಕ್ಷೀರಸಾಗರವಾಸಿನಂ ।
ಜ್ಞಾತ್ವಾ ತತ್ರ ಪ್ರೇಮಯುಕ್ತಸ್ತದ್‌ಭಕ್ತೇಷು ಚ ಮೈತ್ರಯುಕ್ ।
ಕೃಪಾವಾಂಶ್ಚ ತದಜ್ಞೇಷು ತದ್‌ದ್ವೇಷೀಣಾಮುಪೇಕ್ಷಕಃ ।
ತದ್ವಶತ್ವಂ ನ ಜಾನಾತಿ ಸರ್ವಸ್ಯ ಜಗತೋಽಪಿ ತು ।
ತಮಾಹುರ್ಮಧ್ಯಮಂ ಭಕ್ತಂ ।

ವಿಷ್ಣು ಲೋಕವಿಲಕ್ಷಣ ಸರ್ವೋತ್ತಮನಾದರೂ ಸರ್ವವ್ಯಾಪಿಯಾದರೂ ಕೇವಲ ಕ್ಷೀರಸಾಗರ ವಾಸಿಯೆಂದು ಮಧ್ಯಮಭಕ್ತನು ತಿಳಿದು, ಅವನಲ್ಲಿ ಪ್ರೇಮ, ಅವನ ಭಕ್ತರಲ್ಲಿ ಸ್ನೇಹ, ಅವನ ಬಗ್ಗೆ ಅಜ್ಞರಾಗಿರುವವರಲ್ಲಿ ಅವರು ಯೋಗ್ಯರಿರಲಿ ಅಯೋಗ್ಯರಿರಲಿ ತಿಳಿಯದೆ ಸಮಾನವಾಗಿ ಕೃಪೆ, ಅವನ ದ್ವೇಷಿಗಳಲ್ಲಿ ಉಪೇಕ್ಷೆ, ಅವರಿಗೆ ಯಾವ ಕಾಲದಲ್ಲಿಯೂ ಯಾವ ಉಪಕಾರವನ್ನೂ ಮಾಡದಿರುವುದು ಈ ರೀತಿ ಇರುತ್ತಾನೆ. ಉತ್ತಮ ಭಕ್ತನೂ ಕೂಡ ಈ ರೀತಿ ಇರುತ್ತಾನೆ. ಆದರೆ ತಾನು ಹಾಗೆ ಇರುವುದು ಭಗವಂತನ ಅಧೀನವೆಂದು ತಿಳಿಯುತ್ತಾನೆ, ಮಧ್ಯಮಭಕ್ತನು ಹಾಗೆ ತಿಳಿಯುವುದಿಲ್ಲ, ಎಲ್ಲ ಜಗತ್ತು ಭಗವಂತನ ಅಧೀನವೆಂದೂ ಮಧ್ಯಮಭಕ್ತನು ತಿಳಿಯುವುದಿಲ್ಲ. ಅಂಥವನನ್ನು ಮಧ್ಯಮಭಕ್ತನೆಂದು ಕರೆಯುತ್ತಾರೆ. (ಅಪರೋಕ್ಷ ಜ್ಞಾನಕ್ಕಿಂತ ಪೂರ್ವ ದಲ್ಲಿ ಋಷಿಗಳು ಗಂಧರ್ವರು ಮುಂತಾದವರು ಹೀಗೆ ಮಧ್ಯಮಭಕ್ತರಾಗಿರುತ್ತಾರೆ.)

.....ಅರ್ಚಾಯಾಮೇವ ಸಂಸ್ಥಿತಂ ।
ವಿಷ್ಣುಂ ಜ್ಞಾತ್ವಾ ತದನ್ಯತ್ರ ನೈವ ಜಾನಾತಿ ಯಃ ಪುಮಾನ್ ।
ತಾರತಮ್ಯಂ ಚ ತದ್ ಭಕ್ತೇ ನ ಜಾನಾತಿ ಕಥಂಚನ ।
ಅವಜಾನಂಶ್ಚ ತದ್ ಭಕ್ತಾನ್ ಆತ್ಮನೋ ಭಕ್ತಿದರ್ಪಿತಃ ।
ಉಪೇಕ್ಷಕೋಽಪಿ ವಾ ತೇಷು ನ ಸ್ಮರೇದಥವಾಽಪಿ ತಾನ್ ।
ಮಾನುಷೇಷು ಯಥಾ ಕಶ್ಚಿತ್ ಕಿಂಚಿದುಚ್ಚಃ ಪ್ರದೃಶ್ಯತೇ
ಏವಮೇವೋಚ್ಚತಾಂ ವಿಷ್ಣೋರಲ್ಪಾಂ ಪಶ್ಯತಿ ಚಾನ್ಯತಃ ।
ತೇ ತು ಭಕ್ತಾಧಮಾಃ ಪ್ರೋಕ್ತಾಃ ಸ್ವರ್ಗಾದಿಫಲಭೋಗಿನಃ ॥

ಅಧಮಭಕ್ತರು ವಿಷ್ಣು ಕೇವಲ ಪ್ರತಿಮೆಗಳಲ್ಲಿರುತ್ತಾನೆ ಎಂದು ತಿಳಿಯುತ್ತಾರೆ. ಬೇರೆ ಕಡೆ, ಭಕ್ತರಲ್ಲಿ ಇರುವನೆಂದು ತಿಳಿಯುವುದಿಲ್ಲ. ಈ ಅಧಮರಲ್ಲಿಯೂ ಅಧಮರು ಭಕ್ತರಾದ ದೇವತೆಗಳಲ್ಲಿ ತಾರತಮ್ಯವಿದೆ ಎಂದು ಸರ್ವಥಾ ಒಪ್ಪುವು ದಿಲ್ಲ. ಉತ್ತಮಭಕ್ತರು ತಾವೇ ಎಂದು ದರ್ಪದಿಂದ ಭಕ್ತರನ್ನು ಅವಮಾನಿಸುತ್ತಾರೆ. ~~ಅಧಮರಲ್ಲಿ ಮಧ್ಯಮರು ಭಕ್ತರಾದ ದೇವತೆಗಳನ್ನು ಉಪೇಕ್ಷಿಸುತ್ತಾರೆ. ಅಧಮರಲ್ಲಿ~~ ಉತ್ತಮರು ದೇವತೆಗಳನ್ನು ಸ್ಮರಿಸುವುದಿಲ್ಲ. ಈ ಮೂರು ಬಗೆಯ ಅಧಮರೂ ಕೂಡ ಮಾನವರಲ್ಲಿ ಕೆಲವರು ಉಳಿದವರಿಗಿಂತ ಸ್ವಲ್ಪ ಮೇಲೆನಿಸುವಂತೆ ದೇವತೆಗಳಲ್ಲಿ ವಿಷ್ಣು ಉಳಿದವರಿಗಿಂತ ಸ್ವಲ್ಪ ಮೇಲೆಂದು ಮಾತ್ರ ತಿಳಿಯುತ್ತಾರೆ. ಈ ಅಧಮಭಕ್ತರು ಸ್ವರ್ಗ ನರಕ ತಮಸ್ಸೆಂಬ ಫಲಗಳಿಗೆ ಭಾಗಿಗಳೆನಿಸುತ್ತಾರೆ.

ತೈರ್ವಿಘ್ನಿತಾ ಅಧೋ ಯಾಂತಿ ತದ್ಭಕ್ತಾನಾಮುಪೇಕ್ಷಕಾಃ ।
ಕುರ್ಯುರ್ವಿಷ್ಣಾವಪಿ ದ್ವೇಷಂ ದೇವಾ ದೇವಾವಮಾನಿನಃ ।
ಪೂಜಿತಾ ವಿಷ್ಣುಭಕ್ತಿಂ ಚ ನಾವಜ್ಞೇಯಾಸ್ತತಃ ಸುರಾಃ ।
ಉಪೇಕ್ಷಕೇಷು ದೇವಾನಾಂ ಭಕ್ತಿನಾಶಂ ಸ್ವಯಂ ಹರಿಃ ।
ಕರೋತಿ ತೇನ ವಿಭ್ರಷ್ಟಾಃ ಸಂಸರಂತಿ ಪುನಃ ಪುನಃ ।
ಅಧೋ ವಾ ಯಾಂತಿ ವಿದ್ವೇಷಾತ್ ಪೂಜ್ಯಾ ದೇವಾಸ್ತತಃ ಸದಾ ॥

ದೇವತೆಗಳಲ್ಲಿ ಉಪೇಕ್ಷೆಮಾಡುವ ಅಧಮಭಕ್ತರಿಗೆ ವಿಷ್ಣುಭಕ್ತಿಯಲ್ಲಿ ಅವರು ವಿಘ್ನ ಉಂಟುಮಾಡುವುದರಿಂದ ಅಧೋಗತಿ ಉಂಟಾಗುತ್ತದೆ. ದೇವತೆಗಳನ್ನು ಅವಮಾನಿಸುವವರಿಂದ ದೇವತೆಗಳು ವಿಷ್ಣುವಿನಲ್ಲಿಯೂ ದ್ವೇಷ ಮಾಡಿಸುತ್ತಾರೆ. ತಮ್ಮನ್ನು ಪೂಜಿಸಿದರೆ ಅವರೇ ವಿಷ್ಣುಭಕ್ತಿಯನ್ನು ಪ್ರಚೋದಿಸುತ್ತಾರೆ. ಅದರಿಂದ ದೇವತೆಗಳನ್ನು ಅವಮಾನಿಸಬಾರದು. ದೇವತೆಗಳಿಗೆ ಈ ಸಾಮರ್ಥ್ಯ ಹೇಗೆ

ಎಂದರೆ, ದೇವತೆಗಳನ್ನು ಉಪೇಕ್ಷಿಸುವವರಲ್ಲಿ ಸ್ವತಃ ಹರಿಯೇ ಭಕ್ತಿ ನಾಶ ಮಾಡುತ್ತಾನೆ. ಭಕ್ತಿನಾಶದಿಂದ ನಿತ್ಯಸಂಸಾರ ಯೋಗ್ಯರು ನಿತ್ಯಸಂಸಾರವನ್ನೇ ಹೊಂದುತ್ತಾರೆ. ದ್ವೇಷದಿಂದ ತಮೋಯೋಗ್ಯರು ತಮಸ್ಸನ್ನೇ ಹೊಂದುತ್ತಾರೆ. ಆದರಿಂದ ಸದಾ ದೇವತೆಗಳನ್ನು ಪೂಜಿಸಲೇಬೇಕು.

ಯಸ್ತಾನ್ ದ್ವೇಷ್ಟಿ ಸ ತಂ ದ್ವೇಷ್ಟಿ ಯಸ್ತಾನನು ಸ ಚಾನು ತಂ ।
ಐಕಾತ್ಮ್ಯಮಾಗತಂ ವಿದ್ಧಿ ದೇವೈಸ್ತದ್ಭಕ್ತಿ ಪೂರಿತೈಃ ।
ಉಪೇಕ್ಷಕಸ್ತು ದೇವಾನಾಂ ಯದ್ಯೈವ ನಿರಯೋಪಗಃ ।
ತದಾ ತು ಕಿಮು ವಕ್ತವ್ಯಮುಪೇಕ್ಷಾಯಾಂ ಜನಾರ್ದನೇ ।
ವಿಷ್ಣೋರುಪೇಕ್ಷಕಂ ಸರ್ವೇ ವಿದ್ವಿಷಂತ್ಯಧಿಕಂ ಸುರಾಃ ।
ಪತತ್ಯವಶ್ಯಂ ತಮಸಿ ಹರಿಣಾ ತೈಶ್ಚ ಪಾತಿತಃ ॥

ದೇವವಿರೋಧಿಗಳಿಗೆ ಹರಿ ವಿರೋಧಿಯಾಗುತ್ತಾನೆ, ದೇವಾನುಕೂಲರಿಗೆ ಹರಿಯೂ ಅನುಕೂಲನಾಗುತ್ತಾನೆ. ಏಕೆಂದರೆ ಹರಿಭಕ್ತಿಪೂರ್ಣರಾದ ದೇವತೆ ಗಳೊಂದಿಗೆ ಹರಿಗೆ ಏಕಾಭಿಪ್ರಾಯವೇ ಇರುತ್ತದೆ. ಹೀಗಾಗಿ ದೇವತೆಗಳನ್ನು ಉಪೇಕ್ಷಿಸಿದರೆ ನರಕ ಎಂದಮೇಲೆ ಹರಿಯನ್ನು ಉಪೇಕ್ಷಿಸಿದನೆಂದು ಅವನಲ್ಲಿ ಇನ್ನೇನು ಹೇಳಬೇಕು? ಏಕೆಂದರೆ ಹರಿಯನ್ನು ಉಪೇಕ್ಷಿಸಿದರೆ ದೇವತೆಗಳೆಲ್ಲರೂ ಅಧಿಕವಾಗಿ ದ್ವೇಷ ಮಾಡುತ್ತಾರೆ. ಹರಿಯು ಮಾತ್ರವಲ್ಲದೆ ದೇವತೆಗಳೂ ಅವನನ್ನು ತಮಸಿನಲ್ಲಿ ತಳ್ಳುತ್ತಾರೆ. ಅವನು ಅವಶ್ಯವಾಗಿ ತಮಸ್ಸಿನಲ್ಲಿ ಬೀಳುತ್ತಾನೆ.

ಭುಂಕ್ತೇ ಸ್ವರ್ಗಫಲಂ ನಿತ್ಯಂ ನಿರಯಂ ನೈವ ಗಚ್ಛತಿ ।
ವಿಷ್ಣೋಸ್ತು ಮಧ್ಯಮೋ ಭಕ್ತೋ ಜಾಯತೇ ಮಾನುಷೇಷು ಚ ।
ಅಸ್ಮರನ್ ದೇವತಾ ಯಸ್ತು ಭಜತೇ ಪುರುಷೋತ್ತಮಂ ।
ಯೋಗ್ಯಃ ಸಂಸ್ಮರತೇ ದೇವಾನಯೋಗ್ಯೋ ದ್ವೇಷ್ಟಿ ಕೇಶವಂ ॥
ಯಸ್ತೂತ್ತಮೋ ಭಾಗವತಃ ಸ ಮುಕ್ತಿಂ ಪರಮಾಂ ವ್ರಜೇತ್
ವಿಷ್ಣುನಾ ಸರ್ವದೇವೈಶ್ಚ ಮೋದತೇ ಸಹ ನಿತ್ಯದಾ ॥ ಇತಿ ಚ ॥

'ಮಧ್ಯಮಭಕ್ತರು ನಿಯಮೇನ ಸ್ವರ್ಗಫಲವನ್ನು ಹೊಂದುವರು ಹೊರತು ನರಕವನ್ನು ಸರ್ವಥಾ ಹೊಂದುವುದಿಲ್ಲ, ಜ್ಞಾನಿಗಳಾದ ಮನುಷ್ಯಕುಲದಲ್ಲಿ ಹುಟ್ಟುವುದೂ ಉಂಟು. ದೇವತೆಗಳನ್ನು ಸ್ಮರಿಸದೆ ಕೇವಲ ಪ್ರತಿಮೆಗಳಲ್ಲಿ ಹರಿಪೂಜೆ ಮಾಡುವ ಅಧಮಭಕ್ತನು ಮುಕ್ತಿಯೋಗ್ಯನೇ ಆಗಿದ್ದರೆ ಕ್ರಮೇಣ ಗುರೂಪದೇಶದಿಂದ ದೇವತೆಗಳನ್ನು ಸ್ಮರಿಸುತ್ತಾನೆ. ಮೋಕ್ಷಭಾಗಿಯಾಗುತ್ತಾನೆ.

ಮುಕ್ತಿಯೋಗ್ಯನಲ್ಲದಿದ್ದರೆ ಹರಿಯನ್ನು ದ್ವೇಷಿಸುತ್ತಾನೆ. ತಮೋಭಾಗಿಯಾಗುತ್ತಾನೆ. ಉತ್ತಮಭಕ್ತನು ಸಾಯುಜ್ಯವೆಂಬ ಪರಮ ಮುಕ್ತಿಯನ್ನು ಹೊಂದುತ್ತಾನೆ, ವಿಷ್ಣುವಿನೊಂದಿಗೆ ಸಕಲ ದೇವತೆಗಳೊಂದಿಗೆ ಸದಾ ಸುಖಿಸುತ್ತಾನೆ' ಎಂದೂ ಹರಿವಂಶದಲ್ಲಿ ಉಕ್ತವಾಗಿದೆ.

ಇಲ್ಲಿ ನಿಷ್ಕರ್ಷ ಹೀಗೆ—

ತತ್ತ್ವಾಭಿಮಾನಿ ದೇವತೆಗಳು ಅತ್ಯುತ್ತಮ ರೀತಿಯಲ್ಲಿ ಭಕ್ತಿಯೋಗದಿಂದ ಸದಾ ಹರಿಯಲ್ಲಿ ಭಕ್ತಿ ಮಾಡುವವರು, ಅನಾದಿಯೋಗಿಗಳು. 'ಗುಣಪೂರ್ಣನಾದ ಹರಿ ಸರ್ವಾಂತರ್ಯಾಮಿ. ರಮಾಬ್ರಹ್ಮಾದಿಗಳೆಲ್ಲರೂ ಅವನ ಅಧೀನರು- ಭಕ್ತರು, ಅವನೇ ತಮಗೆ ತನ್ನಲ್ಲಿ ಭಕ್ತಿಯನ್ನೂ ಭಕ್ತರಲ್ಲಿ ಸ್ನೇಹವನ್ನೂ ಅಜ್ಞಾನಿಗಳಲ್ಲಿ ಅನುಕಂಪೆಯನ್ನೂ ದ್ವೇಷಿಗಳಲ್ಲಿ ದ್ವೇಷವನ್ನೂ ಹುಟ್ಟಿಸುವವನೆಂ'ದು ತಿಳಿದು ಆರಾಧಿಸುತ್ತಾರೆ. ಅದಕ್ಕೆ ಫಲ ಸಾಯುಜ್ಯಮೋಕ್ಷ.

ಋಷಿ ಗಂಧರ್ವಾದಿಗಳು ಮಧ್ಯಮ ರೀತಿಯಲ್ಲಿ ಭಕ್ತಿ ಮಾಡುವವರು, ಅಂದರೆ, ಮೊದಲಿಗೆ ಇವರು ಜ್ಞಾನಿಗಳ ಉಪದೇಶ ದೊರಕದಿದ್ದಾಗ, ಹರಿ ಸ್ವರ್ಗಸುಖ ನೀಡುವವನೆಂದು ತಿಳಿದು ಪ್ರೀತಿಯಿಂದ ಆರಾಧಿಸುತ್ತಾರೆ. ದೇವತೆಗಳಲ್ಲಿ ತಾರತಮ್ಯವನ್ನು ತಿಳಿದಿರುವುದಿಲ್ಲ. 'ರಾಜನಂತೆ ಶ್ರೀಹರಿ ಎಲ್ಲರನ್ನೂ ಆಳುತ್ತಾನೆ. ದೇವತೆಗಳು ಅವನಿಗೆ ಆಪ್ತರು. ಮನುಷ್ಯರು ಪ್ರಜೆಗಳು. ದೈತ್ಯರು ಶತ್ರುಗಳು. ಅದರಿಂದ ನನಗೆ ದೇವತೆಗಳಲ್ಲಿ ಸ್ನೇಹ, ಮನುಷ್ಯರಲ್ಲಿ ಜೊತೆಗಾರರೆಂದು ಅನುಕಂಪೆ, ದೈತ್ಯರಲ್ಲಿ ಹರಿಯ ಶತ್ರುಗಳೆಂದು ದ್ವೇಷ ಸ್ವಾಭಾವಿಕವಾಗಿ ಮೂಡಿದೆ' ಎಂದು ತಿಳಿಯುತ್ತಾರೆ. ಇದು ಮಧ್ಯಮಭಕ್ತಿ. ಇವರು ಮೋಕ್ಷಯೋಗ್ಯರಾದ್ದರಿಂದ ಹರಿ ಇವರನ್ನು ಜ್ಞಾನಿಗಳ ಕುಲದಲ್ಲಿ ಹುಟ್ಟಿಸಿ ಉಪದೇಶ ಕೊಡಿಸಿ ಜ್ಞಾನಯೋಗದಿಂದ ಮೋಕ್ಷಸಾಧನೆ ಮಾಡಿಸುತ್ತಾನೆ. ಅದರಿಂದ ಇವರು ಸಾದಿ ಯೋಗಿಗಳು. ಇವರಿಗೆ ಸಾಮೀಪ್ಯಾದಿ ಮೋಕ್ಷವು ಫಲ.

ಮನುಷ್ಯೋತ್ತಮರು ಮೊದಲಿಗೆ ಜ್ಞಾನಿಗಳ ಉಪದೇಶ ದೊರಕದಿದ್ದಾಗ ಅಧಮರೀತಿಯ ಭಕ್ತಿ ಮಾಡುತ್ತಾರೆ. ಜಡವಾದ ಪ್ರತಿಮೆಗಳನ್ನು ಮಾತ್ರ ಪೂಜಿಸುತ್ತಾರೆ. ಚಲಪ್ರತಿಮೆಗಳಾದ ದೇವತೆಗಳನ್ನು ಆದರಿಸುವುದಿಲ್ಲ. ಅವರಿಗೆ ದೇವತೆಗಳು ತತ್ತ್ವಾಭಿಮಾನಿಗಳು ಬುದ್ಧಿಪ್ರೇರಕರು ಗುರುಗಳೆನ್ನುವ ಪರಿಜ್ಞಾನವಿರುವುದಿಲ್ಲ. ಅವರ ಉಪಕಾರವನ್ನು ಸ್ಮರಿಸುವುದಿಲ್ಲ. ಮುಕ್ತಿಯೋಗ್ಯರಾದ್ದರಿಂದ ಹರಿ ಇವರನ್ನು ದೂರಮಾಡದೆ ಜ್ಞಾನಿಗಳ ಸಂಗದಲ್ಲಿ ತಂದಿರಿಸುತ್ತಾನೆ. ಅದರಿಂದ ಕ್ರಮವಾಗಿ

ಜ್ಞಾನಭಕ್ತಿಗಳನ್ನು ಸಂಪಾದಿಸಿ ಕರ್ಮಯೋಗದಿಂದ ಭಗವಂತನನ್ನು ಆರಾಧಿಸುತ್ತಾರೆ. ಇವರೂ ಸಾಮೀಪ್ಯಾದಿ ಮುಕ್ತಿಭಾಗಿಗಳು, ಅಧಮಭಕ್ತರಲ್ಲಿ ಉತ್ತಮರು.

ರಾಜಸ ಜೀವರು ಅಧಮಭಕ್ತರಲ್ಲಿ ಮಧ್ಯಮರು. ಹರಿಯ ಬಗ್ಗೆ ಸ್ವಲ್ಪ ತಿಳಿದು ಭಕ್ತಿಮಾಡಿದರೂ ದೇವತೆಗಳನ್ನು ತಿರಸ್ಕರಿಸುತ್ತಾರೆ. ನಾನೇ ತಿಳಿದವನಾಗಿರುವಾಗ ಇವರು ನನಗೆ ಉಪದೇಶ ಕೊಡಬೇಕಾಗಿಲ್ಲ ಎನ್ನುತ್ತಾರೆ. ಇದರ ಫಲವಾಗಿ ಶ್ರೀಹರಿ ದೇವತೆಗಳ ಮೂಲಕ ತನ್ನ ಭಕ್ತಿಯನ್ನು ನಾಶಪಡಿಸಿ ತನ್ನಲ್ಲಿ ಉಪೇಕ್ಷೆ ಉಂಟು ಮಾಡಿಸುತ್ತಾನೆ. ಅದರ ಫಲ ನಿತ್ಯ ಸಂಸಾರ.

ತಾಮಸ ಜೀವರು ಅಧಮಭಕ್ತರಲ್ಲಿ ಅಧಮರು. ಸಜ್ಜನ ಸಂಪರ್ಕದಿಂದ ಮೊದಲಿಗೆ ಹರಿಯಲ್ಲಿ ಸ್ವಲ್ಪ ಭಕ್ತಿ ಮಾಡುತ್ತಾರೆ. ಆದರೆ ದೇವತೆಗಳನ್ನು ದ್ವೇಷಿಸುತ್ತಾರೆ. ಅವರಿಗಿಂತ ತಾವೇ ಹೆಚ್ಚಿನ ಭಕ್ತರೆಂದುಕೊಳ್ಳುತ್ತಾರೆ. ಅವರನ್ನು ಅವಮಾನಿಸುತ್ತಾರೆ. ಶ್ರೀಹರಿ ದೇವತೆಗಳ ಮೂಲಕ ಇವರ ಆ ಅಲ್ಪಭಕ್ತಿಯನ್ನು ಪೂರ್ತಿನಾಶಪಡಿಸಿ ದ್ವೇಷ ಉಂಟು ಮಾಡಿಸಿ ತಮಸ್ಸಿಗೆ ತಳ್ಳುತ್ತಾನೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಹರಿಮಹಾಮುನಿ ಭಗವದ್ಭಕ್ತರ ವಿಷಯಸೇವನ ಪ್ರವೃತ್ತಿ ಯಾವ ರೀತಿಯಾಗಿರುತ್ತದೆ ಎನ್ನುತ್ತಾರೆ.

ಗೃಹೀತ್ವಾಪೀಂದ್ರಿಯೈರರ್ಥಾನ್ ಯೋ ನ ದ್ವೇಷ್ಟಿ ನ ಹೃಷ್ಯತಿ ।
ವಿಷ್ಣೋರ್ಮಾಯಾಮಿಮಾಂ ಪಶ್ಯನ್ ಸ ವೈ ಭಾಗವತೋತ್ತಮಃ ॥ ೪೮ ॥

ಈ ಜಗತ್ತೆಲ್ಲ ಹರೀಚ್ಛಾಧೀನವೆಂದು ಕಂಡು, ಇಂದ್ರಿಯಗಳಿಂದ ವಿಷಯಾನು ಭವ ಮಾಡಿಕೊಳ್ಳುವಾಗ ವಿಷಯಗಳಲ್ಲಿ ವಿಹಿತ ನಿಷಿದ್ಧ, ಯೋಗ್ಯ ಅಯೋಗ್ಯ ಎಂಬ ವಿವೇಕವನ್ನು ಮರೆಯದವನು ಮರೆತು ರಾಗದ್ವೇಷಗಳನ್ನು ಮಾಡದವನು, ಇಂದ್ರಿಯಗಳಿಂದ ಜೀವಿಗಳ ಸುಖದುಃಖಗಳನ್ನು ತಿಳಿದುಕೊಳ್ಳುವಾಗ ಅವು ಅವರ ಯೋಗ್ಯತಾನುಸಾರ ಹರಿಯಿಂದಾದುವುಗಳೆಂದು ಬಗೆದು, ಯೋಗ್ಯತೆಗೆ ಅನನುಗುಣವಾಗಿ ಹಿಗ್ಗದೆ ಕುಗ್ಗದೆ ಇರುವವನು ಭಕ್ತರಲ್ಲಿ ಉತ್ತಮನೆನಿಸುತ್ತಾನೆ.

'ಉತ್ತಮಭಕ್ತನು ಭಗವಂತನಲ್ಲಿಯೇ ಮನಸ್ಸಿಡುವುದರಿಂದ ಇಂದ್ರಿಯಗಳಿಂದ ವಿಷಯ ಪದಾರ್ಥಗಳನ್ನು ಅನುಭವಿಸುವುದೆ ಇಲ್ಲ, ಅನುಭವಿಸಿದರೂ ಮಾಯಿಕವಾದ್ದರಿಂದ ಹೇಯವೆಂದು ಮನಗಂಡು ಹರ್ಷವನ್ನಾಗಲಿ ದ್ವೇಷವನ್ನಾಗಲಿ ಮಾಡದೇ ಇರುತ್ತಾನೆ' 'ಈ ಇಷ್ಟ ಅನಿಷ್ಟ ವಿಷಯಗಳೆಲ್ಲವೂ ಪ್ರಕೃತಿ

ಪರಿಣಾಮವಾಗಿರುವುದರಿಂದ ಅನಿಷ್ಟ ವಿಷಯದಂತೆ ಇಷ್ಟ ವಿಷಯವೂ ಕೂಡ ಬಂಧಕವಾಗಿದ್ದು ಹೇಯವೆನಿಸುವುದರಿಂದ ಅವುಗಳನ್ನು ಪ್ರೀತಿಸುವುದೂ ಇಲ್ಲ, ದ್ವೇಷಿಸುವುದೂ ಇಲ್ಲ' ಎಂದು ಶ್ರೀಧರಸ್ವಾಮಿ ಮತ್ತು ವೀರರಾಘವ ವ್ಯಾಖ್ಯಾನಗಳು ವಿವರಣೆ ನೀಡುತ್ತವೆ.[1]

ಆದರೆ ವಿಷಯಪದಾರ್ಥ ವಿಷ್ಣುಮಾಯೆಯಿಂದ ಕಲ್ಪಿತವಾದುದು, ಹೇಯ, ಎಂದು ಅದನ್ನು ನಿರಾಕಾರವಾದಿ ಬಿಡಲಿ, ಸತ್ಯಜಗತ್ತಿಗೆ ಜನ್ಮಾದಿ ಕಾರಣನಾದ ಭಗವಂತ ಪ್ರೀತಿಯಿಂದ ಸೃಷ್ಟಿ ಮಾಡಿಕೊಟ್ಟಿದ್ದನ್ನು ಭಕ್ತನೇಕೆ ಬಿಡುತ್ತಾನೆ? ನಿರಾಕಾರದ ಸಾಕ್ಷಾತ್ಕಾರ ಪಡೆದವನೂ ಕೂಡ ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡುತ್ತಾನೆ ಎಂದ ಮೇಲೆ ಸಾಕಾರವಾದಿ ಏಕೆ ಬಿಡುತ್ತಾನೆ?

ಹೇಯವೆಂದುಕೊಂಡು 'ನ ಹೃಷ್ಯತಿ' ಸಂತಸಪಡುವುದಿಲ್ಲ ಎನ್ನೋಣ. 'ನ ದ್ವೇಷ್ಟಿ' ದ್ವೇಷಿಸುವುದಿಲ್ಲ, ಏಕೆ? ದ್ವೇಷಿಸಬೇಕು ತಾನೆ? ಹರ್ಷಿಸದಿದ್ದರೂ ಬದುಕಲಿಕ್ಕಾಗಿ ಉಣ್ಣುವುದಾದರೆ ದ್ವೇಷಿಸುತ್ತಲೇ ಉಣಲಿ, ದ್ವೇಷಿಸುವುದಿಲ್ಲ ಏಕೆ? ~~ಅನಿಷ್ಟದಂತೆ ಇಷ್ಟವೂ ಬಂಧಕವಾದ್ದರಿಂದ ದ್ವೇಷಿಸುವುದಿಲ್ಲ ಎನ್ನುವುದು ವ್ಯಾಹತ.~~

ವಸ್ತುತಃ ಭಕ್ತ ಅಮೃತದಂತಿರುವ ವಿಷಯಪದಾರ್ಥವನ್ನು ತನಗೆ ಸುಖ ದಾಯಕವೆಂದು ಅತಿಯಾಗಿ ಪ್ರೀತಿಸುವುದೂ ಇಲ್ಲ, ವಿಷಾನ್ನವನ್ನು ತನಗೆ ಮರಣ ಕಾರಣವೆಂದು ಅತಿಯಾಗಿ ದ್ವೇಷಿಸುವುದೂ ಇಲ್ಲ. ಒಳ್ಳೆಯ ವಿಷಯವನ್ನು ಅದು ಹರಿಯಾರಾಧನೆಗೆ ಸಲ್ಲುವುದೆಂದು ಪ್ರೀತಿಸುತ್ತಾನೆ, ವಿಷವನ್ನು ಹರಿಯಾರಾಧನೆಗೆ ಸಲ್ಲದುದೆಂದು ದ್ವೇಷಿಸುತ್ತಾನೆ. ಹರಿಯಾರಾಧನೆಗೆಂದು ಭಿಕ್ಷೆ ಬೇಡುತ್ತಾನೆ, ಬದುಕು ತ್ತಾನೆ.

ಭಕ್ತ ಸಜ್ಜನಬಂಧುಗಳನ್ನು ಪ್ರೀತಿಸಬೇಕು, ದುರ್ಜನಬಂಧುಗಳನ್ನು ದ್ವೇಷಿಸ ಬೇಕು. ಅವರವರ ಯೋಗ್ಯತೆಗನುಗುಣವಾಗಿ ಪ್ರೀತಿ ದ್ವೇಷಗಳಿರಬೇಕು, ಅನನು ಗುಣವಾಗಿರಬಾರದು. ಭಕ್ತರಲ್ಲಿ ಕೆಳಗಿನವರನ್ನೂ ಮೇಲಿನವರನ್ನೂ ಪ್ರೀತಿಸಬೇಕು,

---

1. ಶ್ರೀವಾಸುದೇವಾವಿಷ್ಟಚೇತಾ ನ ಗೃಹ್ಣಾತಿ ತಾವದಿಂದ್ರಿಯೈರರ್ಥಾನ್, ಗೃಹೀತ್ವಾಪೀತ್ಯಪಿ ಶಬ್ದಾರ್ಥಃ। -ಶ್ರೀಧರಃ

ಮಾಯಿಕತ್ವಾದ್ಧೇಯಂ ಪಶ್ಯನ್ ಜಾನನ್। -ರಾಧಾರಮಣದಾಸಃ

ಇದಮಿಷ್ಟಾನಿಷ್ಟಜಾತಂ ವಿಷ್ಣೋರ್ಮಾಯಾಂ ಪ್ರಕೃತಿ ಪರಿಣಾಮಾತ್ಮಕಂ ಪಶ್ಯನ್ ಅನಿಷ್ಟವಿಷಯವದಿಷ್ಟವಿಷಯಸ್ಯಾಪಿ ಬಂಧಕತ್ವೇನ ತಸ್ಯ ಹೇಯತ್ವಾದಿತಿ ಭಾವಃ ॥

-ವೀರರಾಘವಃ

ಆದರೆ ಕೆಳಗಿನವರನ್ನು ಮೇಲಿನವರಿಗೆ ಸಮನಾಗಿ ಅಥವಾ ಹೆಚ್ಚಾಗಿ ಪ್ರೀತಿಸಬಾರದು. ವಿಷ್ಣುದ್ವೇಷಿಗಳಲ್ಲಿ ಕೆಳಗಿನವರನ್ನು ಮೇಲಿನವರಿಗಿಂತ ಹೆಚ್ಚಾಗಿ ಅಥವಾ ಸಮನಾಗಿ ದ್ವೇಷಿಸಲೂ ಕೂಡದು. ಅದರಿಂದ 'ನ ಹೃಷ್ಯತಿ ನ ದ್ವೇಷ್ಟಿ' ಎಂಬಲ್ಲಿ 'ಯೋಗ್ಯತೆಗೆ ತಾರತಮ್ಯಕ್ಕೆ ಅನನುಗುಣವಾಗಿ' ಎಂಬ ಅಂಶವನ್ನು ಸೇರಿಸಿ ಓದಬೇಕು. ಪ್ರೀತಿಗೆ ಯೋಗ್ಯರು ಸಜ್ಜನರು, ಅವರನ್ನು ಪ್ರೀತಿಸಬೇಕು. ದ್ವೇಷಕ್ಕೆ ಯೋಗ್ಯರು ದುರ್ಜನರು, ಅವರನ್ನು ದ್ವೇಷಿಸಬೇಕು. ಈ ಪ್ರೀತಿ ದ್ವೇಷಗಳನ್ನು ಯೋಗ್ಯತಾ ತಾರತಮ್ಯಾನುಗುಣ ವಾಗಿಯೇ ಮಾಡಬೇಕು. ಇದು ಭಗವಂತನ ಇಚ್ಛಾಧೀನ. ಅವನೇ ವ್ಯವಸ್ಥೆ ಮಾಡಿಕೊಟ್ಟಿರುವ ಮೂಲಧರ್ಮ ಎಂದು ಭಾಗವತ ಹೇಳುತ್ತದೆ.

ಪ್ರೀತಿ ದ್ವೇಷಗಳನ್ನು ಮಾಡದಿರುವುದು ಧರ್ಮವಲ್ಲ. ಭಾಗವತ ಹಾಗೆ ಹೇಳುತ್ತಿಲ್ಲ. 'ಗೃಹೀತ್ವಾಽಪೀಂದ್ರಿಯೈರರ್ಥಾನ್' ಎಂಬಲ್ಲಿ 'ಅರ್ಥ' ಶಬ್ದದಿಂದ ವಿಷಯಪದಾರ್ಥವನ್ನು ಮಾತ್ರವಲ್ಲದೆ ವಿಷಯಪದಾರ್ಥಗಳಂತೆ ಸುಖದುಃಖ ಕಾರಣರಾದ ಸಜ್ಜನ ದುರ್ಜನರನ್ನೂ ಗ್ರಹಿಸಬೇಕು. ಸಜ್ಜನರನ್ನು ಪ್ರೀತಿಸಬೇಕು, ಅವರ ಸುಖವನ್ನೂ ಪ್ರೀತಿಸಬೇಕು. ದುರ್ಜನರನ್ನು ದ್ವೇಷಿಸಬೇಕು, ಅವರ ಏಳಿಗೆಯನ್ನೂ ದ್ವೇಷಿಸಬೇಕು. 'ಸಜ್ಜನಾಃ ಸಂತು ನಿರ್ಭಯಾಃ' ಎಂದು ಮಾತ್ರ ಭಗವಂತನಲ್ಲಿ ಬೇಡಬೇಕು. ಇದು ಮೂಲಧರ್ಮ. ಅದಕ್ಕಾಗಿ ಎಲ್ಲ ಸದಾಚಾರಗಳು ವಿಹಿತವಾಗಿವೆ, ದುರಾಚಾರಗಳು ನಿಷಿದ್ಧವಾಗಿವೆ.

'ಯೋ ನ ದ್ವೇಷ್ಟಿ ನ ಹೃಷ್ಯತಿ' ಯೋಗ್ಯತೆಗನನುಗುಣವಾಗಿ ದ್ವೇಷ ಪ್ರೀತಿ ಗಳನ್ನು ಮಾಡಬಾರದು' ಎಂದು ಹೇಳುವ ಮೂಲಕ ಭಗವಂತನ ಇಚ್ಛಾನುಸಾರ ವಾಗಿ ಯೋಗ್ಯತೆಗನುಗುಣವಾಗಿ ದ್ವೇಷ ಪ್ರೀತಿಗಳನ್ನು ಮಾಡಬೇಕೆಂದೇ ಭಾಗವತ ಹೇಳುತ್ತಿದೆ.

ವಿಷ್ಣೋರ್ಮಾಯಾಂ ವಿಷ್ಣ್ವಿಚ್ಛಾಧೀನಾಂ ।

ಈ ಜಗತ್ತಿನ ಎಲ್ಲ ವ್ಯವಹಾರವೂ ಹರಿಯ ಇಚ್ಛಾಧೀನವಾದ್ದರಿಂದ ಅದನ್ನು ಭಾಗವತ 'ವಿಷ್ಣುಮಾಯೆ' ಎಂದು ಕರೆದಿದೆ.

ವಿಷ್ಣೋರಿಚ್ಛಾನುಸಾರ್ಯೇತಜ್ಜ್ಞಾತ್ವಾ ಯೋಗ್ಯಾನ್ನ ಚಾಧಿಕಂ ।
ಹೃಷ್ಯತಿ ದ್ವೇಷ್ಟಿ ವಾ ಯಸ್ತು ಸ ವೈ ಭಾಗವತೋತ್ತಮಃ । ಇತಿ ಚ ॥
ಸತಾಂ ವೃದ್ಧಿಕರೋ ಧರ್ಮಸ್ತ್ವಸತಾಂ ಹ್ರಾಸಕಾರಕಃ ।
ಅಯಂ ತು ನಿಶ್ಚಿತೋ ಧರ್ಮೋ ಹ್ಯಧರ್ಮೋಽನ್ಯೋ ವಿನಿಶ್ಚಿತಃ ॥

ಹರ್ಷಃ ಸತ್ಸು ತಥಾऽಸತ್ಸು ಧರ್ಮೋ ಧರ್ಮವಿಪರ್ಯಯಃ ।
ತೇಷಾಂ ವೃದ್ಧೌ ತಥಾ ಹಾನೌ ಸರ್ವಂ ಜ್ಞೇಯಮಶೇಷತಃ ।
ಏತದರ್ಥಂ ಚ ಧರ್ಮಾಣಾಂ ಮರ್ಯಾದಾ ವೈದಿಕಾದಿಕಾ ।
ಮೂಲಧರ್ಮವಿರುದ್ಧಾ ತು ಸಾ ನ ಗ್ರಾಹ್ಯಾ ಕಥಂಚನ ॥ ಇತಿ ಚ ॥

ಜಗತ್ತಿನ ಎಲ್ಲ ವ್ಯವಹಾರವೂ ಹರೀಚ್ಛಾನುಸಾರವಾಗಿಯೇ ನಡೆಯುತ್ತಿದೆ ಎಂದು ತಿಳಿದು ಯಾವ ವಸ್ತುವನ್ನೂ ಯಾವ ವ್ಯಕ್ತಿಯನ್ನೂ ಯೋಗ್ಯತಾನುಗುಣವಲ್ಲದೆ ಅದಕ್ಕಿಂತ ಹೆಚ್ಚಾಗಿ ಯಾರು ಪ್ರೀತಿಸುವುದಿಲ್ಲವೋ ಅಥವಾ ದ್ವೇಷಿಸುವುದಿಲ್ಲವೋ ಅವನೇ ಉತ್ತಮ ಭಗವದ್‌ಭಕ್ತ ಎಂದು ಹರಿವಂಶದಲ್ಲಿ ಹೇಳಿದೆ.

ಸಜ್ಜನರಿಗೆ ಒಳ್ಳೆಯದಾಗುವಂತೆ ಮಾಡುವುದೂ ದುರ್ಜನರಿಗೆ ಕೇಡಾಗುವಂತೆ ಮಾಡುವುದೂ ಧರ್ಮವೆಂದು ತಿಳಿಯಬೇಕು. ಏಕೆಂದರೆ ಇದೇ ಮುಖ್ಯವಾದ ಧರ್ಮವೆನ್ನುವುದೂ ಇದಕ್ಕೆ ವ್ಯತಿರಿಕ್ತವಾದುದು ಮುಖ್ಯ ಅಧರ್ಮ ಎನ್ನುವುದೂ ಶಾಸ್ತ್ರಗಳಲ್ಲಿ ನಿಶ್ಚಿತವಾಗಿದೆ. ಸಜ್ಜನರಲ್ಲಿ ಸುಖವನ್ನೂ ದುರ್ಜನರಲ್ಲಿ ದುಃಖವನ್ನೂ ಕಂಡಾಗ ಹರ್ಷಪಡುವುದೂ ಧರ್ಮವೆ. ಸಜ್ಜನರ ದುಃಖವನ್ನೂ ದುರ್ಜನರ ಸುಖವನ್ನೂ ಕಂಡಾಗ ಹರ್ಷಪಡುವುದೂ ಅಧರ್ಮವೆ. ಹೀಗೇ ಎಲ್ಲ ಆಚಾರವಿಚಾರಗಳನ್ನೂ ಸಜ್ಜನರಿಗೆ ಹಿತಕರ ದುರ್ಜನರಿಗೆ ಅಹಿತಕರಗಳಾಗಿದ್ದರೆ ಧರ್ಮವೆಂದೂ ಇದಕ್ಕೆ ವಿಪರೀತವಾಗಿದ್ದರೆ ಅಧರ್ಮವೆಂದೂ ತಿಳಿಯಬೇಕು.

ವೇದಶಾಸ್ತ್ರಗಳಲ್ಲಿ ಅಶ್ವಮೇಧಾದಿಗಳನ್ನು ಧರ್ಮವೆಂದೂ ಬ್ರಹ್ಮಹತ್ಯಾದಿಗಳನ್ನು ಅಧರ್ಮವೆಂದೂ ಹೇಳಿದ್ದರೆ ಅದು, ಯಾಗದಿಂದ ದೇವತೆಗಳಿಗೆ ಸಂತೋಷ, ಬ್ರಹ್ಮಹತ್ಯೆಯಿಂದ ಅಸುರರಿಗೆ ಸಂತೋಷವಾಗುವುದರಿಂದ ಅವು ಧರ್ಮ ಅಧರ್ಮಗಳೆಂದು ವ್ಯವಸ್ಥೆ ಮಾಡುವುದಕ್ಕಾಗಿ, ಹೊರತು ಸಜ್ಜನರ ಸುಖ ದುರ್ಜನರ ದುಃಖಗಳಿಗೆ ಕಾರಣವಾಗುವಂಥ ಮೂಲಧರ್ಮಕ್ಕೆ ಅವು ವಿರೋಧವಾಗುವಂತಿದ್ದರೆ ಆ ಯಾಗಾದಿಗಳನ್ನು ಧರ್ಮವೆಂದು ಆ ಬ್ರಹ್ಮಹತ್ಯಾದಿಗಳನ್ನು ಅಧರ್ಮವೆಂದು ಸರ್ವಥಾ ಒಪ್ಪಲಾಗದು ಎಂದೂ ಹರಿವಂಶದಲ್ಲಿ ಹೇಳಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಹರಿಮಹಾಮುನಿ ಭಗವದ್ಭಕ್ತನು 'ಕಲ್ಲಾಗಿ ಇರಬೇಕು ಕಠಿನ ಭವತೆರೆಯೊಳಗೆ' ಎಂಬಂತೆ ಧೀರನಾಗಿರಬೇಕೆನ್ನುತ್ತಾರೆ.

ದೇಹೇಂದ್ರಿಯಪ್ರಾಣಮನೋಧಿಯಾಂ ಯೋ
ಜನ್ಮಾಪ್ಯಯಕ್ಷುದ್ಭಯತರ್ಷಕೃಚ್ಛ್ರೈಃ।
ಸಂಸಾರಧರ್ಮೈರವಿಮುಹ್ಯಮಾನಃ
ಸ್ಮೃತ್ಯಾ ಹರೇರ್ಭಾಗವತಪ್ರಧಾನಃ ॥ ೪೯ ॥

ದೇಹ ಇಂದ್ರಿಯ ಪ್ರಾಣ ಮನಸ್ಸು ಬುದ್ಧಿಗಳ ಅಭಿಮಾನಿಗಳಿಗೂ ತನಗೂ ಹರೀಚ್ಛೆಯಿಂದ ಉಂಟಾಗುವ ಉತ್ಪತ್ತಿ ಅಶಕ್ತಿ ಹಸಿವುಬಾಯಾರಿಕೆ ಭಯ ವಿಷಯಾಸೆ ಗಳೆಂಬ ಕ್ಲೇಶಗಳನ್ನು ತಾನು ಹರಿಸ್ಮರಣಪೂರ್ವಕ ದೇಹಾದ್ಯಭಿಮಾನ ತ್ಯಾಗದಿಂದ ತಡೆದುಕೊಳ್ಳಬೇಕು, ಆ ಕ್ಲೇಶಗಳು ತನಗೆ ಮಾತ್ರವಲ್ಲದೆ ತತ್ವಾಭಿಮಾನಿ ದೈತ್ಯರಿಗೂ ಸಂಬಂಧಿಸಿವೆ ಎಂದು ಅನುಸಂಧಾನ ಮಾಡಬೇಕು. ಹೀಗೆ ಮಾಡುವವನು ಹರಿಭಕ್ತರಲ್ಲಿ ಉತ್ತಮನೆನಿಸುತ್ತಾನೆ.

ಜನನ ಮರಣಗಳು ಹಸಿವು ಬಾಯಾರಿಕೆಗಳು ವಿಷಯಾಸೆ ಆಯಾಸಗಳು ಸಂಸಾರದಲ್ಲಿ ಸಹಜವಾಗಿ ಒದಗುವ ದುಃಖಗಳು. ಹರಿಸ್ಮರಣ ಬಲದಿಂದ ಜೀವಾತ್ಮ ಅವನ್ನು ತಡೆದುಕೊಳ್ಳಬೇಕು ಎನ್ನುವುದು ಶ್ಲೋಕಾಭಿಪ್ರಾಯವೆಂದು ಎಲ್ಲ ವ್ಯಾಖ್ಯಾನ ಕಾರರಿಗೂ ಸಮ್ಮತ. ಆದರೆ ಹರಿಸ್ಮರಣ ಪಾಪಪರಿಹಾರ ಮಾಡುವುದರಿಂದ, ಸಂಸಾರದುಃಖದಿಂದ ಉದ್ವೇಗ ಉಂಟಾಗುವುದಿಲ್ಲ ಎಂದು ಮಾತ್ರ ಅಭಿಪ್ರಾಯ ಪಡುತ್ತಾರೆ.[1]

ಶ್ರೀಮದಾಚಾರ್ಯರ ಅಭಿಪ್ರಾಯದಲ್ಲಿ ಹರಿಸ್ಮರಣೆ ಎಂದರೆ ಪ್ರಕೃತದಲ್ಲಿ— 'ಶ್ರೀಹರಿ ಬ್ರಹ್ಮಾದಿ ಸರ್ವಪ್ರೇರಕ. ದೇಹಇಂದ್ರಿಯಾದಿಗಳೆಲ್ಲ ಅವನ ಅಧೀನ, ನನ್ನ ಅಧೀನವಲ್ಲ. ಆದರೆ ನನ್ನವೆಂದು ನನಗೆ ಅಭಿಮಾನವಿದೆ. ಅವುಗಳಿಂದಾಗುವ ಸುಖದುಃಖಗಳು ತತ್ವಾಭಿಮಾನಿ ದೇವತೆಗಳಿಂದಲೂ ಅಸುರರಿಂದಲೂ ಉಂಟಾಗು ತ್ತವೆ. ಏಕೆಂದರೆ ನನ್ನ ದೇಹೇಂದ್ರಿಯಾದಿಗಳಿಗೆ ಈ ದೇವತೆಗಳೂ ಅಭಿಮಾನಿಗಳು, ಅಸುರರೂ ಅಭಿಮಾನಿಗಳಾಗಿದ್ದಾರೆ. ಹೀಗಾಗಿ ದೇಹೇಂದ್ರಿಯಾದಿಗಳಿಂದಾಗುವ ಸುಖದಲ್ಲಿ ಸಿಂಹಪಾಲು ದೇವತೆಗಳಿಗೇ ಹೋಗುತ್ತದೆ. ದುಃಖದಲ್ಲಿ ಸಿಂಹಪಾಲು ಅಸುರರಿಗೆ ಹೋಗುತ್ತದೆ. ನನಗೆ ಸಿಗುವ ಸುಖದುಃಖಗಳು ಅತ್ಯಲ್ಪ. ಇದು ಶ್ರೀಹರಿಯೇ ಅವರವರ ಯೋಗ್ಯತಾನುಸಾರವಾಗಿ ಮಾಡಿರುವ ವ್ಯವಸ್ಥೆ. ಅದರಿಂದ ಅಲ್ಪಸುಖ ಅಲ್ಪದುಃಖಗಳನ್ನು ಮಾತ್ರ ಅನುಭವಿಸುವವನು ನಾನು ಹಿಗ್ಗಬಾರದು ಕುಗ್ಗಬಾರದು, ಉದ್ವಿಗ್ನತೆಗಳೊಗಾಗಬಾರದು, ಹರಿಯನ್ನೇ ಆರಾಧಿಸಬೇಕು'.—ಈ

1. ಹರೇಃ ಸ್ಮೃತ್ಯಾ ಸರ್ವಮೋಹಧ್ವಾಂತ ಚಂದ್ರಿಕಯಾಽವಿಮುಹ್ಯಮಾನಃ। -ಶುಕದೇವಃ

ರೀತಿಯ ಹರಿಸ್ಮರಣೆ 'ಸ್ಮೃತ್ವಾ ಹರೇಃ' ಎಂಬಲ್ಲಿ ಶ್ಲೋಕದಲ್ಲಿ ವಿವಕ್ಷಿತವಾಗಿದೆ. ಈ ರೀತಿಯ ಸ್ಮರಣೆಯಿಂದಲೆ ಸಂಸಾರದಲ್ಲಿ ಬರುವ ಕಠಿಣಭವತೆರೆಗಳಿಗೆ ವಿಚಲಿತನಾಗದೆ ಕಲ್ಲಾಗುವ ಧೈರ್ಯ ಸಾಮರ್ಥ್ಯ ಭಾಗವತೋತ್ತಮನಿಗೆ ಲಭಿಸುವುದೆಂದು ಭಾಗವತ ಹೇಳುತ್ತಿದೆ.

ದೇಹೇಂದ್ರಿಯ ಪ್ರಾಣಧಿಯಾಂ ತ್ರಿಧೈವ ಹ್ಯಭಿಮಾನಿನಃ ।
ತತ್ರೋತ್ತಮಾ ದೇವತಾಸ್ತಾಃ ಸರ್ವದೋಷವಿವರ್ಜಿತಾಃ ।
ಗುಣೈಃ ಸರ್ವೈಃ ಸುಸಂಪನ್ನಾ ವಿರಿಂಚಾದೋತ್ತರೋತ್ತರಂ ।
ಮಧ್ಯಮಾ ಗುಣದೋಷೇತಾ ಅಧಮಾ ಅಸುರಾ ಮತಾಃ ।
ತೇ ಸರ್ವೇ ದೋಷಸಂಯುಕ್ತಾ ಆ ಚಿತ್ತಾದುತ್ತರೋತ್ತರಂ ।
ತೇಭ್ಯೋಽನ್ಯೋ ಮಾನುಷೋ ಜೀವಸ್ತಾಭ್ಯಾಂ ದೇವಾಸುರಾವಪಿ ।
ಜೀವಾಭಿಮಾನಿನಶ್ಚೈವ ತ್ರಿವಿಧಾಃ ಸಂಪ್ರಕೀರ್ತಿತಾಃ ।

ದೇಹ ಇಂದ್ರಿಯ ಪ್ರಾಣ ಬುದ್ಧಿ ಮತ್ತು ಮನಸ್ಸು ಇವುಗಳಿಗೆ ಅಭಿಮಾನಿಗಳು ಮೂರು ಬಗೆಯವರಿರುತ್ತಾರೆ. ಅವರಲ್ಲಿ ಉತ್ತಮರೆಂದರೆ ದೇವತೆಗಳು. ಅವರು ಸರ್ವದೋಷರಹಿತರು. ಬ್ರಹ್ಮದೇವರ ಪರ್ಯಂತ ತಾರತಮ್ಯದಿಂದ ಸಕಲಗುಣಸಂಪನ್ನರು. ಮಧ್ಯಮರೆಂದರೆ ಆಯಾ ಶರೀರಿಜೀವಾತ್ಮರು ಮತ್ತು ಮನುಷ್ಯಜೀವಾಭಿಮಾನಿಯಾದ ಪುರಂಜನ ಮತ್ತು ಅವನ ಭಾರ್ಯೆ ಮುಂತಾದವರು. ಇವರು ಗುಣದೋಷಗಳಿಂದ ಕೂಡಿದವರು. ಅಧಮರೆಂದರೆ ಅಸುರರು. ಅವರೆಲ್ಲರೂ ಚಿತ್ತಾಭಿಮಾನಿ ಕಲಿಪರ್ಯಂತ ತಾರತಮ್ಯದಿಂದ ಸಕಲದೋಷಯುಕ್ತರು. ಮನುಷ್ಯಜೀವನು ದೇವ ಅಸುರ ಪುರಂಜನ ಈ ಮೂವರಿಗಿಂತಲೂ ಭಿನ್ನನಾಗಿದ್ದು ಅವರಿಂದ ಪ್ರೇರಣೆಗೊಳಗಾಗುವವನು. ದೇವಾಸುರರುಗಳಿಂದ ಮನುಷ್ಯಜೀವನು ಮಾತ್ರವಲ್ಲದೆ ದೇವಾಸುರರೂ ಪ್ರೇರಣೆಗೊಳಗಾಗುವರು.

ಹೀಗೇ ಜೀವಾಭಿಮಾನಿಗಳೂ ಕೂಡ ದೇವತೆಗಳು, ಜೀವ, ಅಸುರರೆಂದು ಮೂವರು ಉತ್ತಮ ಮಧ್ಯಮ ಅಧಮರೆಂದು ಮೂರುಬಗೆ.

ಜೀವಮಾನ್ಯುತ್ತಮೋ ಬ್ರಹ್ಮಾ ಮಧ್ಯಮಃ ಸ್ವಯಮೇವ ತು ।
ಅಧಮಃ ಕಲಿರುದ್ದಿಷ್ಟಸ್ತತ್ರ ಮಧ್ಯಮನೀಚಯೋಃ ।
ಮೃತಿಜನ್ಮಕ್ಷುಧಾದುಃಖಪ್ರಭೃತ್ಯಖಿಲಮೇವ ತು ।
ನೋತ್ತಮಸ್ಯ ತು ಜೀವಸ್ಯ ದೇಹಾದೇಶ್ಚ ಕಥಂಚನ ।

ಜೀವಾಭಿಮಾನಿಗಳಲ್ಲಿ ಉತ್ತಮನು ಬ್ರಹ್ಮ. ಮಧ್ಯಮನು ಜೀವ ತನಗೆ ತಾನೇ ಅಭಿಮಾನಿ. ಅಧಮನು ಕಲಿ. ಮಧ್ಯಮ ಮತ್ತು ಅಧಮರಾದ ಜೀವಾಭಿಮಾನಿಗಳಿಗೆ ದೇಹ ಇಂದ್ರಿಯಾದಿಗಳಲ್ಲಿ ಉಂಟಾಗುವ ಮರಣ ಜನ್ಮ ಹಸಿವು ಮುಂತಾದ ದುಃಖಭಯ ಮುಂತಾದುವೆಲ್ಲವೂ ಬರುತ್ತವೆ. ಆದರೆ ಜಡವಾದ ದೇಹಕ್ಕೆ ಹೇಗೋ ಹಾಗೆ ಉತ್ತಮನಾದ ಜೀವಾಭಿಮಾನಿಗೂ ಈ ದುಃಖ ಭಯಾದಿ ಸರ್ವಥಾ ಇರುವುದಿಲ್ಲ.

ಜನ್ಮಾದಿಕೃತ ದುಃಖಂ ತು ದೇಹಮಾನ್ಯಸುರಸ್ಯ ಹ ।
ಸುಪ್ತ್ಯಾದ್ಯಪ್ಯಯಜಂ ದುಃಖಮಸುರೇಂದ್ರಿಯಮಾನಿನಃ ।
ಕ್ಷುನ್ನಿಮಿತ್ತಂ ತು ಯದ್ ದುಃಖಂ ಪ್ರಾಣಮಾನ್ಯಸುರಸ್ಯ ತತ್ ।
ಭಯತರ್ಷಾದಿಜಂ ದುಃಖಂ ಮನೋಮಾನ್ಯಸುರಸ್ಯ ಚ ।
ಕೇವಲಂ ತ್ವಾಂತರಂ ದುಃಖಂ ಬುದ್ಧಿಮಾನ್ಯಸುರಸ್ಯ ತತ್ ।
ನೀಚೋಽಸ್ಮೀತಿ ತು ಯದ್ ದುಃಖಮಹಂಮಾನ್ಯಸುರಸ್ಯ ತತ್ ।
ಅತೀತಾದಿಸ್ಮೃತೇರ್ದುಃಖಂ ಚಿತ್ತಮಾನ್ಯಸುರಸ್ಯ ಚ ।
ಜೀವಮಾನ್ಯಸುರಸ್ಯ ಸ್ಯಾತ್ ಸರ್ವಂ ತತ್ ಸಮುದಾಯತಃ ।

ಜನನ ಮರಣಗಳಿಂದಾಗುವ ದುಃಖವು ದೇಹದಲ್ಲಿ ಜೀವಾತ್ಮನಿಗಿಂತ ಹೆಚ್ಚಾಗಿ ಅವನ ದೇಹಕ್ಕೆ ಅಭಿಮಾನಿಯಾದ ಅಸುರನಿಗೇ ಬರುತ್ತದೆ. ಸುಷುಪ್ತಿ ಸ್ವಪ್ನ ಮನೋರಥ ಮೂರ್ಛೆ ಅಶಕ್ತಿಗಳಿಂದಾಗುವ ದುಃಖವು ಇಂದ್ರಿಯಾಭಿಮಾನಿ ಅಸುರನಿಗೆ ಬರುತ್ತದೆ. ಹಸಿವಿನ ದುಃಖ ಪ್ರಾಣಾಭಿಮಾನಿ ಅಸುರನಿಗೆ, ಭಯ ತೃಷ್ಣೆಗಳಿಂದಾಗುವ ದುಃಖ ಮನೋಭಿಮಾನಿ ಅಸುರನಿಗೆ, ಚಿಂತೆಯಿಂದ ಬರುವ ಮಾನಸಿಕವಾದ ದುಃಖ ಬುದ್ಧ್ಯಭಿಮಾನಿ ಅಸುರನಿಗೆ, ಅಪಮಾನ ಬಂದಾಗ ತಾನು ಸಣ್ಣವನಾದೆನೆಂಬ ದುಃಖ ಅಹಂಕಾರಾಭಿಮಾನಿ ಅಸುರನಿಗೆ, ಅತೀತ ಅನಾಗತ ಅನಿಷ್ಟಗಳ ಸ್ಮರಣೆಯಿಂದಾಗುವ ದುಃಖ ಚಿತ್ತಾಭಿಮಾನಿ ಅಸುರನಿಗೆ ಬರುತ್ತದೆ. ಜೀವಾಭಿಮಾನಿಯಾದ ಕಲಿಗೆ ದೇಹೇಂದ್ರಿಯಾದಿಗಳಿಂದಾಗುವ ಈ ಎಲ್ಲ ದುಃಖಗಳೂ ಒಟ್ಟಿಗೇ ಬರುತ್ತವೆ.

ಏವಮೇವ ಸುಖಂ ದೇವೇಷೂಭಯಂ ಮಧ್ಯಮೇಷು ಚ ।
ಅಸುರಾಣಾಮಧರ್ಮಸ್ಯ ವೃದ್ಧ್ಯಾ ಸುಖಮಪೀಷ್ಯತೇ ।
ದೇವಾನಾಂ ನೈವ ಕೇನಾಪಿ ದುಃಖಂ ಪ್ರೀತಿಸ್ತು ಧರ್ಮತಃ ।
ಅಧರ್ಮೋಽಪಿ ಪ್ರೀತಯೇ ಸ್ಯಾದಸುರಾಣಾಂ ತಮೋಗತೇಃ ।
ದೇವಾನಾಂ ಪುಣ್ಯಪಾಪಾಭ್ಯಾಂ ಸುಖಮೇವೋತ್ತರೋತ್ತರಂ ।

ಹೀಗೆಯೇ ದೇಹಪುಷ್ಟ್ಯಾದಿಗಳಿಂದ ಆಗುವ ಸುಖ ದೇಹಾಭಿಮಾನಿ ಸುರರಿಗೆ, ಇಂದ್ರಿಯಭೋಗದ ಸುಖ ಇಂದ್ರಿಯಾಭಿಮಾನಿ ಸುರರಿಗೆ, ಭೋಜನಸುಖ ಪ್ರಾಣಾಭಿಮಾನಿ ಸುರರಿಗೆ ಧೈರ್ಯಾದಿ ಸುಖ ಮನೋಭಿಮಾನಿಸುರರಿಗೆ ಕೇವಲ ಆಂತರಿಕ ಸುಖ ಬುದ್ಧಿಮಾನಿಸುರರಿಗೆ, ಅತೀತ ಶುಭ ಚಿಂತನದಿಂದಾಗುವ ಸುಖ ಚಿತ್ತಮಾನಿ ಸುರರಿಗೆ, ಈ ಎಲ್ಲ ಸುಖಗಳೂ ಒಟ್ಟಿಗೇ ಜೀವಾಭಿಮಾನಿಗಳಾದ ಬ್ರಹ್ಮಶೇಷರಿಗೆ ಬರುತ್ತವೆ. ಮಧ್ಯಮಾಭಿಮಾನಿಗಳಿಗೆ ದೇಹಾದಿಗಳಿಂದ ಜನನ ಮರಣಾದಿ ದುಃಖ ಮತ್ತು ದೇಹಪುಷ್ಟ್ಯಾದಿ ಸುಖಗಳೆರಡೂ ಬರುತ್ತವೆ. ಅಸುರ ರಿಗೆ ಅವರು ಪಾಪಪ್ರೇರಕರಾದ್ದರಿಂದ ಪಾಪವೃದ್ಧಿಯಾದರೆ ಅದರಿಂದ ಸುಖವಿದೆ. ದೇವತೆಗಳಿಗೆ ಅವರು ಪಾಪಪ್ರೇರಣೆ ಮಾಡಿದರೂ ಅದರಿಂದ ದುಃಖ ಯಾವ ಕಾರಣದಿಂದಲೂ ಉಂಟಾಗುವುದಿಲ್ಲ. ಪುಣ್ಯಪ್ರೇರಕರಾದ್ದರಿಂದ ಪುಣ್ಯವೃದ್ಧಿ ಯಿಂದ ಸುಖವೇ ಉಂಟಾಗುತ್ತದೆ. ಅಸುರರಲ್ಲಿ ಪಾಪಪ್ರೇರಣೆ ಮಾಡಿದಾಗ ಅವರಲ್ಲಿ ಪಾಪವೃದ್ಧಿಯಾಗುವುದರಿಂದ ಪ್ರೇರಕರಾದ ದೇವತೆಗಳಿಗೆ ಸುಖವೇ ಉಂಟಾಗುತ್ತದೆ. ಏಕೆಂದರೆ ಅಸುರರಿಗೆ ತಮಃಸಾಧನೆಯಾಗುತ್ತದೆ. ಅದು ದೇವತೆ ಗಳಿಗೆ ಇಷ್ಟವಾಗಿದೆ. ಹರಿಗೆ ಪ್ರೀತಿಕರವಾಗಿದೆ. ಹೀಗೆ ದೇವತೆಗಳು ಪುಣ್ಯ ಪ್ರೇರಣೆ ಗಳಿಂದಲೂ ಪಾಪ ಪ್ರೇರಣೆಗಳಿಂದಲೂ ಹೆಚ್ಚು ಹೆಚ್ಚು ಸುಖವನ್ನೇ ಹೊಂದುತ್ತಾರೆ.

ತೇಷಾಂ ದುಃಖಾದಿಕಂ ಕಿಂಚಿದಸುರಾವೇಶತೋ ಭವೇತ್ ।
ಪ್ರಾಣಸ್ಯ ನಾಸುರಾವೇಶ ಆಖಣಾಶ್ಮಸಮೋ ಹಿ ಸಃ ।
ಸಂಪೂರ್ಣಾನುಗ್ರಹಾದ್ ವಿಷ್ಣೋಃ ಪ್ರಾಣಃ ಪೂರ್ಣಗುಣೋ ಮತಃ ।
ಅಸುರಾಣಾಂ ಸುಖಾದ್ಯಾಶ್ಚ ದೇವಾವೇಶಾದುದೀರಿತಾಃ ।
ಸ್ವತಸ್ತು ನಿರ್ಗುಣಾಃ ಸರ್ವೇ ಸರ್ವದೋಷಾತ್ಮಕಾ ಮತಾಃ ।

ದೇವತೆಗಳಿಗೆ ಅಸುರರ ಆಕ್ರಮಣಗಳಿಂದ ಕಂಡುಬರುವ ಅಲ್ಪಸ್ವಲ್ಪ ದುಃಖಾದಿಗಳು ಕೂಡ ಅವರಲ್ಲಿ ಅಸುರಾವೇಶವಾದಾಗ ಮಾತ್ರ, ಅದೂ ಕೂಡ ಅವರಲ್ಲಿ ಆವಿಷ್ಟರಾದ ಅಸುರರಿಗೇ ಬಂದಿರುತ್ತದೆ. ಮುಖ್ಯಪ್ರಾಣನಿಗೆ ಈ ಅಸುರಾವೇಶವೂ ಇಲ್ಲ, ಅಸುರರ ಆಕ್ರಮಣದ ಮುಂದೆ ಒಡೆಯಲಾಗದ ಗಟ್ಟಿ ಕಲ್ಲಿನಂತಿರುತ್ತಾನೆ. ಏಕೆಂದರೆ ಹರಿಯ ಪೂರ್ಣಾನುಗ್ರಹದಿಂದ ಬಲಜ್ಞಾನಾದಿ ಸಕಲ ಗುಣ ಪರಿಪೂರ್ಣನೆ ಆಗಿದ್ದಾನೆ. ದುರ್ಯೋಧನನಿಗೆ ರಾಜ್ಯಸುಖ ಬಂದಂತೆ ಅಸುರರಿಗೆ ಸುಖ ಕೀರ್ತಿ ಮುಂತಾದುವು ಬಂದರೆ ಅದು ಅವರಲ್ಲಿ ಆವಿಷ್ಟರಾಗಿರುವ ದೇವತೆಗಳಿಗೇ ಬಂದಿರುತ್ತದೆ. ಸ್ವಭಾವದಿಂದ ಅಸುರರೆಲ್ಲರೂ ಆನಂದಾದಿ ಗುಣಶೂನ್ಯರು ದುಃಖಾದಿ ಸಕಲ ದೋಷಸ್ವರೂಪರು.

ವಿವಿಚ್ಯೈವಂ ಜಗತ್ ಸರ್ವಂ ಸ್ವಾತ್ಮಾನಂ ಚ ಪೃಥಕ್ ಸ್ಥಿತಂ ।
ಸರ್ವತಶ್ಚ ಪೃಥಕ್ ಸಂತಂ ವಿಷ್ಣುಂ ಸರ್ವೋತ್ತಮೋತ್ತಮಂ ।
ಜಾನಂತಿ ಯೇ ಭಾಗವತಾಸ್ತ ಉಕ್ತಾ ಉತ್ತಮಾ ಇತಿ ॥
'ಇತಿ ಬ್ರಹ್ಮತರ್ಕೇ ॥

ಈ ರೀತಿಯಾಗಿ ವಿವೇಚನೆ ಮಾಡಿ ತಿಳಿದು ತಾನು ಪರಮಾತ್ಮನಿಗಿಂತ ವಿಲಕ್ಷಣ ಪರಮಾತ್ಮ ಸರ್ವವಿಲಕ್ಷಣ ಸರ್ವೋತ್ತಮೋತ್ತಮನೆಂದು ಯಾರು ತಿಳಿಯುವರೋ ಅವರು ಉತ್ತಮ ಭಗವದ್ಭಕ್ತರೆನಿಸುತ್ತಾರೆ ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಭಾಗವತದಲ್ಲಿ ದೇಹ ಇಂದ್ರಿಯ ಪ್ರಾಣ ಮನಸ್ಸು ಬುದ್ಧಿಗಳಲ್ಲಿ ಕ್ರಮವಾಗಿ ಜನ್ಮ ಅಪ್ಯಯ ಕ್ಷುತ್ ಭಯ ತರ್ಷದುಃಖಗಳೆಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರೆಲ್ಲರೂ ಹಾಗೆ ವ್ಯಾಖ್ಯಾನವನ್ನೂ ಮಾಡಿದ್ದಾರೆ. ಆದರೆ ಬ್ರಹ್ಮತರ್ಕದಲ್ಲಿ—

ಜನ್ಮಾದಿಕೃತದುಃಖಂ ತು ದೇಹಮಾನ್ಯಸುರಸ್ಯ ಹ ।

ಎಂದು ದೇಹದಲ್ಲಿ ಜನ್ಮದುಃಖ ಮಾತ್ರವಲ್ಲದೆ ಆದಿಶಬ್ದದಿಂದ ಅಪ್ಯಯ ದುಃಖವನ್ನೂ ಹೇಳಿದೆ. ಎರಡಕ್ಕೂ ಸಾಮರಸ್ಯ ತರಬೇಕೆಂದರೆ ದೇಹಕ್ಕೆ ಜನ್ಮ ಮಾತ್ರ ಇಂದ್ರಿಯಗಳಿಗೆ ಅಪ್ಯಯ ಮಾತ್ರ ಎಂಬ ಅಭಿಪ್ರಾಯವಿಟ್ಟುಕೊಳ್ಳದೆ ದೇಹ ಇಂದ್ರಿಯ ಎರಡಕ್ಕೂ ಜನ್ಮ ಅಪ್ಯಯಗಳೆರಡೂ ಉಂಟೆಂದು ಭಾಗವತದ ಅಭಿಪ್ರಾಯವನ್ನು ಗ್ರಹಿಸಬೇಕು. ಇಂದ್ರಿಯಗಳಿಗೆ ಅಪ್ಯಯದುಃಖ ಮಾತ್ರ ಬ್ರಹ್ಮತರ್ಕದಲ್ಲಿ ಉಕ್ತವಾಗಿದ್ದರೂ ಅಲ್ಲಿ ಜನ್ಮದುಃಖವನ್ನೂ ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕು. ಹೀಗೆ ಬ್ರಹ್ಮತರ್ಕ ಮುಂತಾದ ಬೇರೆ ಗ್ರಂಥಗಳಿಗೆ ಅವಿರೋಧವಾಗಿಯೇ ಭಾಗವತಕ್ಕೆ ವ್ಯಾಖ್ಯಾನ ಮಾಡುವುದು ಯುಕ್ತವೆಂದು ಶ್ರೀಮದಾಚಾರ್ಯರು ತಿಳಿಸುತ್ತಾರೆ.

ದೇಹೇಂದ್ರಿಯಯೋರ್ಜನ್ಮಾಪ್ಯಯೌ ॥

ದೇಹ ಇಂದ್ರಿಯಗಳೆರಡಕ್ಕೂ ಜನ್ಮ ಅಪ್ಯಯಗಳೆರಡೂ ಉಂಟೆಂದು ಭಾಗವತ ಬ್ರಹ್ಮತರ್ಕಗಳಿಗೆ ಏಕಾಭಿಪ್ರಾಯವನ್ನು ಗ್ರಹಿಸಬೇಕು.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಹರಿಮಹಾಮುನಿ ಜೀವೇಶ ಭೇದದಲ್ಲಿ ದೇವತಾತಾರತಮ್ಯದಲ್ಲಿ ನಿಷ್ಠೆ ಉಳ್ಳವನೇ ನಿಜವಾದ ಭಕ್ತ ಎನ್ನುತ್ತಾರೆ.

ನ ಯಸ್ಯ ಸ್ವಃ ಪರ ಇತಿ ಚಿತ್ತೇ ಸ್ವಾತ್ಮನಿ ವಾಽಭಿದಾ ।
ಸರ್ವಭೂತಸಮಃ ಶಾಂತಃ ಸ ವೈ ಭಾಗವತೋತ್ತಮಃ ॥ ೫೨ ॥

'ಚಿತ್ತೇ'-ಬಾಹ್ಯ ಅಂತಃಕರಣಯುಕ್ತ ಸಂಸಾರಾವಸ್ಥೆಯಲ್ಲಾಗಲಿ, 'ಸ್ವಾತ್ಮನಿ'-ಆತ್ಮ ಸ್ವರೂಪಾಭಿವ್ಯಕ್ತಿ ಇರುವ ಮೋಕ್ಷದಲ್ಲಾಗಲಿ ಯಾರಿಗೆ ನಾನು ಪರಮಾತ್ಮನಾಗುವೆ ನೆಂಬ ಅಭೇದ ಭಾವನೆ ಇರುವುದಿಲ್ಲವೋ ಎಲ್ಲ ಬ್ರಹ್ಮಾದಿದೇವತೆಗಳನ್ನೂ ಅವರ ತಾರತಮ್ಯಕ್ಕೆ ಸಮನಾಗಿಯೇ ಕಂಡು ಭಗವಂತನಲ್ಲಿ ಸರ್ವೋತ್ತಮನೆಂದು ನಿಷ್ಠೆ ತೋರುವನೋ ಆತನೇ ಉತ್ತಮಭಕ್ತ.

ಇಲ್ಲಿ ಬೇರೆ ವ್ಯಾಖ್ಯಾನಕಾರರು—

'ನ ಯಸ್ಯ ಸ್ವಃ ಪರ ಇತಿ ವಿತ್ತೇಷ್ವಾತ್ಮನಿ ವಾ ಭಿದಾ'

ಎಂದು ಪಾಠವಿಟ್ಟುಕೊಂಡು, 'ಯಾರಿಗೆ ಧನಸಂಪತ್ತಿನ ವಿಷಯದಲ್ಲಿ ತನ್ನದು ಪರರದೆಂದು ಆತ್ಮನ ವಿಷಯದಲ್ಲಿ ತಾನು ಪರನು ಎಂದು ಭೇದಭಾವವಿಲ್ಲವೋ, ಯಾರು ಎಲ್ಲ ಪ್ರಾಣಿಗಳಲ್ಲಿ ಸಮಭಾವದಿಂದಿದ್ದು ಶಾಂತನಾಗಿರುವನೋ ಅವನು ಉತ್ತಮಭಕ್ತ ಎಂದು ವಿವರಣೆ ನೀಡಿದ್ದಾರೆ.[1]

ಆದರೆ ಆತ್ಮನ ವಿಷಯದಲ್ಲಿ ತಾನು ಪರನೆಂಬ ಭೇದಭಾವನೆ ಕೂಡದೆಂದು ಶ್ರೀಧರವ್ಯಾಖ್ಯಾನದಲ್ಲಿ ಹೇಳಿದ್ದನ್ನು ಉಳಿದವರು ಸಹಿಸುವುದಿಲ್ಲ. [2]ವೀರರಾಘವ ವ್ಯಾಖ್ಯಾನ ಹೇಳುತ್ತದೆ—'ಆತ್ಮಭೇದ ನಿಷೇಧ ಮಾಡುವ ಪಕ್ಷದಲ್ಲಿ 'ಸರ್ವಭೂತ ಸಮಃ' ಎಂಬಲ್ಲಿ ಎಲ್ಲ ಜೀವಿಗಳನ್ನು ಸಮಾನವಾಗಿ ಕಾಣಬೇಕೆಂದು ಹೇಳಿದ್ದು ಕೂಡಲಾರದು. ಸರ್ವ ಶಬ್ದದಿಂದ ಜೀವಿಗಳು ಅನೇಕ ಎಂದೂ ಸಮಶಬ್ದದಿಂದ ಅವರಲ್ಲಿ ಸಾಮ್ಯವನ್ನೇ ತಿಳಿಯಬೇಕು ಹೊರತು ಅಭೇದವನ್ನಲ್ಲ ಎಂದು ಹೇಳಿದಂತಾಗಿದೆ. 'ಭೂತ' ಎಂದರೆ ಪಂಚಭೂತಗಳಲ್ಲ, ಅವರನ್ನು ಸಮಾನವಾಗಿ ಕಾಣಬೇಕೆಂದು ಹೇಳುತ್ತಿಲ್ಲ, ಶರೀರಧಾರಿಗಳಾದ ಜೀವಿಗಳೆಂದರ್ಥ' ಎಂದು.

[3]ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿಯೂ 'ವಿತ್ತೇಷು ಆತ್ಮನಿ ವಾ'

---

1. ವಿತ್ತೇಷು ಸ್ವೀಯಂ ಪರಕೀಯಮಿತಿ ಆತ್ಮನಿ ಸ್ವಃ ಪರ ಇತಿ । –ಶ್ರೀಧರಃ
2. ವಿತ್ತೇಷ್ವಾತ್ಮನಿ ಚ ಭಿದಾ ನಾಸ್ತೀತ್ಯನೇನ ಧನ ಶರೀರಾದಾವಪಿ ಕಾಷ್ಠಲೋಷ್ಟಾದಿವತ್ ಪ್ರತಿಪತ್ತಿರಭಿಪ್ರೇತಾ । ನ ತ್ವಾತ್ಮಭೇದ ನಿಷೇಧಃ । ತಥಾಸತಿ ಸರ್ವಭೂತ ಸಮ ಇತ್ಯನಂತರೋಕ್ತಿ ವಿರೋಧಾತ್ । ಭೂತಶಬ್ದೋ ದೇಹವಿಶಿಷ್ಟಾತ್ಮ ಪರಃ । ಸರ್ವಶಬ್ದೇನಾಪಿ ಬಹುತ್ವಮವಗಮ್ಯತೇ । –ವೀರರಾಘವಃ
3. ಅತ್ರ ವಿತ್ತವದಾತ್ಮನಿ ಚ ಸ್ವಪಕ್ಷಪಾತಮಾತ್ರಂ ನಿಷಿಧ್ಯತೇ । ನ ವ್ಯಕ್ತಿಭೇದಃ । –ಜೀವಗೋಸ್ವಾಮೀ

ಎಂಬುದರಿಂದ ವಿತ್ತದಲ್ಲಿ, ಧನ ಸಂಪತ್ತಿನಲ್ಲಿ ಹೇಗೋ ಹಾಗೆ ಆತ್ಮನಲ್ಲಿಯೂ ಪಕ್ಷಪಾತ ಕೂಡದೆಂದೇ ಅಭಿಪ್ರಾಯ ಎಂದು ಹೇಳಿದೆ.

ವೀರರಾಘವ ಜೀವಗೋಸ್ವಾಮಿ ವ್ಯಾಖ್ಯಾನಗಳ ಪ್ರಕಾರ ಭೇದಭಾವ ಕೂಡದು ಎಂದರೆ ಪಕ್ಷಪಾತ ಕೂಡದೆಂದೇ ಭಾಗವತ ಉಪದೇಶಿಸುತ್ತದೆ. ಆದರೆ ಉತ್ತಮ ಭಕ್ತನ ಲಕ್ಷಣವೆಂದು ಇದನ್ನು ಭಾಗವತ ಹೊಗಳುವುದೆ? ಸಾಮಾನ್ಯ ಎಲ್ಲ ಸಜ್ಜನರಿಗೆ ಇರಬೇಕಾದ ಗುಣ ಇದು. ಮತ್ತು ಹಿಂದಿನ ಶ್ಲೋಕದಲ್ಲಿ 'ಯೋ ನ ದ್ವೇಷ್ಟಿ ನ ಹೃಷ್ಯತಿ' ಎನ್ನುವಲ್ಲಿಯೂ ಪಕ್ಷಪಾತವನ್ನೇ ನಿಷೇಧಿಸಿಯಾಗಿದೆ. ಅದರಿಂದ ಪುನರುಕ್ತಿ ಮತ್ತು ಹೀಗೆ ವ್ಯಾಖ್ಯಾನ ಮಾಡಲು ಸರಿಯಾದ ಪ್ರಮಾಣದ ಆಧಾರವನ್ನೂ ಯಾರೂ ತೋರಿಸಿಲ್ಲ. ಉತ್ತಮವಾದ ಪಾಠ, ಉತ್ತಮವಾದ ವ್ಯಾಖ್ಯಾನಗಳನ್ನು ಹರಿವಂಶಾದಿ ಪ್ರಮಾಣಗಳ ಆಧಾರದಿಂದ ಶ್ರೀಮದಾಚಾರ್ಯರು ತೋರಿಸಿದ್ದಾರೆ—

ಚಿತ್ತೇ ವಿದ್ಯಮಾನೇ, ಸ್ವಾತ್ಮನಿ ಕೇವಲಾತ್ಮಭಾವೇ ಮೋಕ್ಷೇ ಚ,
ಯಸ್ಯ ಜೀವಪರಯೋರಭೇದೋ ನಾಸ್ತಿ।

ಬಾಹ್ಯಅಂತಃಕರಣವಿರುವಾಗ ಅಂದರೆ ಸಂಸಾರದ ಅವಸ್ಥೆಯಲ್ಲಿಯೂ, ಕೇವಲ ಆತ್ಮನಿರುವಂಥ ಮೋಕ್ಷಾವಸ್ಥೆಯಲ್ಲಿಯೂ ಯಾರಿಗೆ ಜೀವಪರಮಾತ್ಮರೊಳಗೆ ಅಭೇದ ಜ್ಞಾನವಿರುವುದಿಲ್ಲವೋ ಅವನು ಉತ್ತಮಭಕ್ತ.

ಶ್ಲೋಕದಲ್ಲಿ ಚಿತ್ತೇ ಸ್ವಾತ್ಮನಿ ಎಂದು ಎರಡೂ ಸತಿಸಪ್ತಮಿಗಳು. ಮತ್ತು ಅಭಿದಾ ಎಂದು ಪದವಿಭಾಗ. ಚಿತ್ತ ಎಂದರೆ ಬಾಹ್ಯವಾದ ಜಡ ಅಂತಃಕರಣವಿರುವುದು ಸಂಸಾರದಲ್ಲಿ ಹೊರತು ಮೋಕ್ಷದಲ್ಲಿ ಅದಿಲ್ಲ. ಮೋಕ್ಷದಲ್ಲಿ ಸ್ವರೂಪಭೂತವಾದ ಚಿನ್ಮಯ ಅಂತಃಕರಣದಿಂದಲೆ ಎಲ್ಲ ವ್ಯವಹಾರಗಳು. ಅದರಿಂದ 'ಚಿತ್ತೇ ಸತಿ' ಎಂದರೆ ಸಂಸಾರವಿರುವಾಗ ಎಂದರ್ಥ. 'ಸ್ವಾತ್ಮನಿ' ಎಂಬಲ್ಲಿ 'ಸು ಆತ್ಮ' ಜಡ ಶರೀರಾದಿಗಳಿಲ್ಲದ ಉತ್ತಮವಾದ ಸ್ವರೂಪಭೂತ ಶರೀರಾದಿಗಳುಳ್ಳ ಆತ್ಮನಿರುವಾಗ, ಅಂದರೆ ಮೋಕ್ಷದಲ್ಲಿ ಎಂದರ್ಥ. ಅಥವಾ 'ಸ್ವ ಆತ್ಮ' ತಾನೇ ತನಗೆ ಶರೀರವಾಗಿರುವವನು ಮುಕ್ತ. ಆತ್ಮನು ಹಾಗಿರುವಾಗ ಅಂದರೆ ಮೋಕ್ಷದಲ್ಲಿ ಎಂದರ್ಥ. ಹೀಗೆ ಸಂಸಾರದಲ್ಲಿ ನಾನು ಪರಮಾತ್ಮನೇ ಆಗಿರುವೆನೆಂದಾಗಲಿ, ಮೋಕ್ಷದಲ್ಲಿ ನಾನು ಪರಮಾತ್ಮನೆ ಆಗುವೆನೆಂದಾಗಲಿ ಯಾರು ಅಭೇದವನ್ನು ತಿಳಿಯುವುದಿಲ್ಲವೋ ಅವನು ಉತ್ತಮಭಕ್ತ. 'ಜೀವಾಭೇದೋ ನಿರ್ಗುಣತ್ವಂ' ಎಂಬಂತೆ ನವವಿಧ ದ್ವೇಷಗಳಲ್ಲಿ ಸೇರುವ ಈ ಅಭೇದಭಾವನೆ ಇಲ್ಲದಿದ್ದರೆ ಮಾತ್ರ ಭಕ್ತಿ ನಿರ್ಮಲವಾಗಿದ್ದು ಉತ್ತಮವೆನಿಸುತ್ತದೆ. ಭಕ್ತ ಉತ್ತಮನೆನಿಸುತ್ತಾನೆ ಎಂದು ಶ್ರೀಮದಾಚಾರ್ಯರು

ಹೇಳುತ್ತಿದ್ದಾರೆ. ಇದಕ್ಕೆ ಪ್ರಮಾಣಗಳನ್ನು ಉದಾಹರಿಸುತ್ತಾರೆ. ಹರಿವಂಶವಚನ ಒಂದು ಈ ಭಾಗವತ ಶ್ಲೋಕವನ್ನು ಪೂರ್ತಿಯಾಗಿ ವ್ಯಾಖ್ಯಾನಿಸುವುದು ಕಂಡು ಬರುತ್ತದೆ.

ನ ಕ್ವಾಪಿ ಜೀವಂ ವಿಷ್ಣುತ್ವೇ ಸಂಸೃತೌ ಮೋಕ್ಷ ಏವ ಚ ।
ಯಃ ಪಶ್ಯತಿ ಸುರಾದೀಂಶ್ಚ ಯಥೋತ್ಕರ್ಷಂ ಪ್ರಪಶ್ಯತಿ ।
ಸ ಸರ್ವಭೂತಸಮದೃಗ್ ವಿಷ್ಣುಂ ಸರ್ವೋತ್ತಮಂ ಸ್ಮರನ್ ॥
ಇತಿ ಹರಿವಂಶೇಷು ।

'ನ ಕ್ವಾಪಿ' 'ಎಂದೂ ಕೂಡ', ಅಂದರೆ, ಸಂಸಾರದಲ್ಲಾಗಲಿ ಮೋಕ್ಷದಲ್ಲಾಗಲಿ ಜೀವ ಪರಮಾತ್ಮರಿಗೆ ಅಭೇದವನ್ನು ಯಾರು ಬಯಸುವುದಿಲ್ಲ, ಮತ್ತು ದೇವಋಷಿ ಮುಂತಾದ ಎಲ್ಲ ಜೀವರನ್ನು ತಾರತಮ್ಯಾನುಸಾರವೇ ಕಾಣುತ್ತಾನೆ ಅಂಥ ಸರ್ವಭೂತಸಮದೃಷ್ಟಿ ಉಳ್ಳವನು, ಮತ್ತು ಶಾಂತನಾಗಿ ಅಂದರೆ ವಿಷ್ಣುವನ್ನು ಸರ್ವೋತ್ತಮನೆಂದು ನಿಷ್ಠೆಯಿಂದ ಭಜಿಸುವ ಭಕ್ತನೇ ಉತ್ತಮಭಕ್ತ ಎಂದು ಹರಿವಂಶದಲ್ಲಿದೆ.

ಭಾಗವತದ 'ಸರ್ವಭೂತಸಮಃ' ಎಂಬ ಶಬ್ದಕ್ಕೆ ಹರಿವಂಶದಲ್ಲಿ 'ಯಥೋತ್ಕರ್ಷಂ ಪ್ರಪಶ್ಯತಿ' ಎಂದು ವ್ಯಾಖ್ಯಾನಮಾಡಿದೆ. ತಾರತಮ್ಯಕ್ಕೆ ಅನುಸಾರವಾಗಿ ನೋಡುವುದೇ ಸಮದೃಷ್ಟಿ. ತಾರತಮ್ಯವನ್ನು ಕಡೆಗಣಿಸಿ ಒಂದೇ ರೀತಿ ನೋಡಿದರೆ ಅದು ವೈಷಮ್ಯವೆನಿಸುತ್ತದೆ. 'ಶಾಂತ' ಎಂದರೆ, ಭಾಗವತವೇ 'ಶಮೋ ಮನ್ನಿಷ್ಠತಾ ಬುದ್ಧೇಃ(11.19.36) ಹರಿಯನ್ನು ಸರ್ವೋತ್ತಮನೆಂದು ನಂಬುವುದೇ ಶಮ ಎಂದು ಹೇಳಿರುವುದರಿಂದ ಹಾಗೆ ನಂಬುವವನೇ ಶಾಂತನೆನಿಸು ತ್ತಾನೆ ಎಂದು ಹರಿವಂಶ ಹೇಳುತ್ತಿದೆ.

ನೈವಂ ತ್ವಯಾ ನು ಮಂತವ್ಯಂ ದೃಷ್ಟೋ ಜೀವೋ ಮಯೇತಿ ಹ ।
ಸರ್ವಭೂತಗುಣೈರ್ಯುಕ್ತಂ ದೇವಂ ತ್ವಂ ಜ್ಞಾತುಮರ್ಹಸಿ ॥
ಇತಿ ಚ ಮೋಕ್ಷಧರ್ಮೇಷು ॥
ನೈವಂ ತ್ವಯಾ ನು ಮಂತವ್ಯಂ ಜೀವಾತ್ಮಾಽಹಮಿತಿ ಕ್ವಚಿತ್ ।
ಸರ್ವೈರ್ಗುಣೈಃ ಸುಸಂಪನ್ನಂ ದೈವಂ ಮಾಂ ಜ್ಞಾತುಮರ್ಹಸಿ ॥
ಇತಿ ವಾರಾಹೇ ॥

'ನೀನೀಗ ಒಬ್ಬ ಜೀವನನ್ನು ಕಂಡೆನೆಂದು ಅಂದುಕೊಳ್ಳಕೂಡದು.

ಸರ್ವ=ಪೂರ್ಣವಾದ, ಭೂತ=ಸದಾ ಇರುವ ಗುಣಗಳಿಂದ ಕೂಡಿದ ನಾರಾಯಣದೇವನನ್ನು ನೀನೀಗ ನೋಡುತ್ತಿರುವುದಾಗಿ ತಿಳಿ' ಎಂದು ಮೋಕ್ಷ ಧರ್ಮದಲ್ಲಿ ನಾರಾಯಣನು ಹೇಳುವ ಮಾತು. 'ನಾನೊಬ್ಬ ಜೀವಾತ್ಮನೆಂದು ನನ್ನನ್ನು ಎಂದೂ ತಿಳಿಯಬೇಡ. ಪೂರ್ಣಗುಣಗಳಿಂದ ಪೂರ್ಣನಾಗಿರುವವನು ನಾನೆಂದು ನನ್ನನ್ನು ತಿಳಿ' ಎಂದು ವರಾಹಪುರಾಣದಲ್ಲಿಯೂ ಹರಿಯೇ ಹೇಳಿದ್ದಾನೆ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ದ್ವಿತೀಯೋಽಧ್ಯಾಯಃ ॥

❖❖❖

ಅಧ್ಯಾಯ–೩

ಅಧ್ಯಾಯ ಸಾರಾಂಶ

ಅಂತರಿಕ್ಷ ಮಹಾಮುನಿ ಉಪದೇಶಿಸಿದರು. ನಿಮಿರಾಜ ಶ್ರೀಹರಿಯ ಇಚ್ಛಾಶಕ್ತಿಯನ್ನೂ ಅದಕ್ಕೆ ಅಧೀನವಾದ ಜಡಪ್ರಕೃತಿಯನ್ನೂ ತಿಳಿಯಲು ಬಯಸಿದ. ಮುನಿ ನುಡಿದರು.

'ಶ್ರೀಹರಿ ತನ್ನ ಇಚ್ಛಾಶಕ್ತಿಯಿಂದ ಸೃಷ್ಟಿಯ ಆದಿಯಲ್ಲಿ ಜೀವರಿಗೆ ಪಾಂಚಭೌತಿಕ ಶರೀರವನ್ನು ಸೃಜಿಸಿಕೊಟ್ಟು ತಾನೂ ಒಳಗೆ ನಿಯಾಮಕನಾಗಿ ಪ್ರವೇಶಿಸಿದ. ಶರೀರದಿಂದ ಸಾಧನೆ ಮಾಡಿಸಿ ಜ್ಞಾನ ನೀಡುವುದೇ ಅವನ ಉದ್ದೇಶ. ಅದಕ್ಕೆ ಮನ ಇಂದ್ರಿಯಗಳನ್ನು ವಿಷಯ ಪದಾರ್ಥಗಳ ಕಡೆಗೆ ಪ್ರೇರಿಸಿ ವಿಷಯಸುಖದ ಸಾರವನ್ನು ತಾನುಂಡು ಸ್ಥೂಲವನ್ನು ಜೀವರಿಗೆ ಉಣಿಸುತ್ತಾನೆ.

ಸ್ವತಂತ್ರನಾದ ಆ ಹರಿಯನ್ನು ಮರೆತು ತಾವೇ ಸ್ವತಂತ್ರರೆಂದು ಕೊಂಡರೆ ಅಧಃಪತನವೇ ಸರಿ. ಅವರು ಶುಭ ಅಶುಭ ಎನ್ನದೆ ಎಲ್ಲ ಕರ್ಮಫಲ ಉಂಡು ನಾನಾ ಯೋನಿಗಳಲ್ಲಿ ಸಂಚರಿಸಿ ಪ್ರಳಯ ಪರ್ಯಂತವೂ ಜನನ ಮರಣ ಚಕ್ರದಲ್ಲಿ ಸುತ್ತುತ್ತಾರೆ. ಬಳಿಕ ಅಂಧಂತಮಸಿನಲ್ಲಿ ಬೀಳುತ್ತಾರೆ.

ಪ್ರಳಯಕಾಲ ಬಂದಾಗ ಪ್ರಳಯಕಾರಕನಾದ ಶ್ರೀಹರಿ ಪ್ರಳಯಕ್ಕೆ ಸಂಕಲ್ಪಿಸಿ ಮೊದಲಿಗೆ ನೂರುವರ್ಷಕಾಲ ನಿರಂತರ ಭಯಂಕರ

ಅನಾವೃಷ್ಟಿ ಉಂಟುಮಾಡುತ್ತಾನೆ. ಸುಡುಬಿಸಿಲಿನಿಂದ ಸಮಸ್ತಲೋಕವನ್ನು ಒಣಗಿಸುತ್ತಾನೆ. ಬಳಿಕ ಸಂಕರ್ಷಣನ ಮುಖದಿಂದ ಹೊರಡುವ ಪ್ರಳಯಾಗ್ನಿ ಜ್ವಾಲೆಗಳಿಂದ ಸುಡುತ್ತಾನೆ. ಬಳಿಕ ನೂರುವರ್ಷಕಾಲ ಪ್ರಳಯಕಾಲದ ಮೋಡಗಳಿಂದ ಆನೆಸೊಂಡಿಲ ಗಾತ್ರದ ಜಲಧಾರೆ ಸುರಿಸಿ ಬ್ರಹ್ಮಾಂಡವನ್ನು ಜಲಾವರಣದಲ್ಲಿ ಲಯಗೈಯುತ್ತಾನೆ. ಜಲಾವರಣವನ್ನು ತೇಜಾವರಣದಲ್ಲಿ ಎಂದು ಕ್ರಮವಾಗಿ ಪಂಚಭೂತ ಅಹಂಕಾರ ಬುದ್ಧಿ ಮಹತ್ತತ್ತ್ವ ಪರ್ಯಂತ ಎಲ್ಲ ಆವರಣಗಳನ್ನೂ ಆವರಣ. ದೇವತೆಗಳನ್ನೂ ಲಯಗೊಳಿಸುತ್ತಾನೆ. ಕೊನೆಯಲ್ಲಿ ಮಹತ್ತತ್ತ್ವದೊಂದಿಗೆ ಅದರ ಅಭಿಮಾನಿ ಚತುರ್ಮುಖನೂ ಹರಿಯಲ್ಲಿ ಲಯಹೊಂದುತ್ತಾನೆ.

ಇದು ಹರಿಯ ಇಚ್ಛಾಶಕ್ತಿ. ಅದಕ್ಕೆ ಅಧೀನವಾಗಿ ಚೇತನರು ಸ್ವಯೋಗ್ಯಜ್ಞಾನ ಅಜ್ಞಾನಗಳನ್ನು ಪಡೆಯುತ್ತಾರೆ. ಜಡಪ್ರಕೃತಿಯೂ ಮಹದಾದಿ ತತ್ತ್ವರೂಪದಿಂದ ಜನಿಸಿ ಕೊನೆಯಲ್ಲಿ ಲಯ ಹೊಂದುತ್ತದೆ.

ಮುಂದೆ **ಪ್ರಬುದ್ಧ** ಮಹಾಮುನಿಗಳ ಉಪದೇಶ. ಜೀವರು ಭಗವಂತನ ಬಂಧಕ ಪ್ರಕೃತಿಯನ್ನು ದಾಟುವ ಬಗೆ ಹೇಗೆಂಬುದನ್ನು ಉಪದೇಶಿಸುತ್ತಾರೆ.

'ಧನಸಂಪತ್ತು ಬರುವಾಗ ಇರುವಾಗ ಹೋಗುವಾಗ ಎಲ್ಲ ಕಾಲದಲ್ಲಿಯೂ ದುಃಖವೇ. ಮನಸಿಗೆ ನೆಮ್ಮದಿ ಇರದು. ಸುಖಕ್ಕಾಗಿ ಯತ್ನಿಸಿದರೆ ಬರುವುದು ದುಃಖವೆ. ಸ್ವರ್ಗಾದಿ ಸುಖವೂ ಶಾಶ್ವತವಲ್ಲ. ಪುಣ್ಯ ತೀರಿತೆಂದರೆ ತಿರುಗಿ ಭೂಮಿಗೇ ಬಂದು ಬೀಳಬೇಕು. ಅದರಿಂದ ಮುಮುಕ್ಷುವು ಒಳ್ಳೆಯ ಗುರುವನ್ನು ಮೊರೆಹೊಕ್ಕು ಭಗವಂತನ ಬಗ್ಗೆ, ಭಾಗವತಧರ್ಮಗಳ ಬಗ್ಗೆ ಜ್ಞಾನ ಸಂಪಾದಿಸಬೇಕು. ಜ್ಞಾನಕ್ಕೇ ಹರಿ ಒಲಿಯುತ್ತಾನೆ.

ಜ್ಞಾನಸಾಧನೆಯಲ್ಲಿ ಅನುಪಯುಕ್ತವಾದ ಎಲ್ಲ ವಿಷಯಸುಖವನ್ನೂ ಬಿಡಬೇಕು. ವಿಷಯಸುಖ ಉಣ್ಣುವಾಗ ಅನಾಸಕ್ತಿಯಿಂದಿರುವುದನ್ನು ಕಲಿಯಬೇಕು. ಅದಕ್ಕೆ ಮೊದಲು ಸಜ್ಜನರ ಒಡನಾಟ ಮಾಡಬೇಕು.

ಕಿರಿಯರಲ್ಲಿ ಕರುಣೆ ಸಮಾನಿಕರಲ್ಲಿ ಸ್ನೇಹ ಹಿರಿಯರಲ್ಲಿ ವಿನಯಗಳನ್ನು ರೂಢಿಸಿಕೊಳ್ಳಬೇಕು. ಮಣ್ಣು ನೀರುಗಳಿಂದ ಬಾಹ್ಯಾಂತರ ಶುದ್ಧಿ ಮಾಡಿಕೊಂಡು ಪರಮಾತ್ಮವಿಚಾರ ನಡೆಸಬೇಕು.

ಸಚ್ಛಾಸ್ತ್ರಗಳ ಅಧ್ಯಯನ ಬ್ರಹ್ಮಚರ್ಯ ಅಹಿಂಸೆ ದ್ವಂದ್ವಸಹಿಷ್ಣುತೆ ಎಲ್ಲೆಡೆ ಪರಮಾತ್ಮನ ವೈಭವವನ್ನೇ ಕಾಣುವುದು ಪರಮಾತ್ಮನನ್ನೇ ಆಶ್ರಯನೆಂದು ನಂಬುವುದು ಆಶ್ರಯಕ್ಕಾಗಿ ಮನೆಮಠಗಳನ್ನು ನೆಚ್ಚದಿರುವುದು ದುರ್ಜನರ ಸಹವಾಸದಿಂದ ದೂರವಿರುವುದು ಸಿಕ್ಕಿದ್ದರಲ್ಲಿ ತೃಪ್ತಿಪಟ್ಟುಕೊಳ್ಳುವುದು ವೇದಪಂಚರಾತ್ರಾದಿ ಶಾಸ್ತ್ರಗಳಲ್ಲಿ ನಿಷ್ಠೆಯಿಂದಿರುವುದು ಶಾಸ್ತ್ರಪಾಂಡಿತ್ಯದಿಂದ ಲೌಕಿಕ ಪ್ರಯೋಜನ ವನ್ನು ಬಯಸದಿರುವುದು, ದುಷ್ಟ ಶಾಸ್ತ್ರಗಳಲ್ಲಿ ಆದರ ಮಾಡದಿರುವುದು ಮನೋ ವಾಕ್ ಕಾಯಗಳನ್ನು ಭಗವತ್ಪರ ವಾಗಿರಿಸಿಕೊಳ್ಳುವುದು ಮುಂತಾದುವನ್ನು ಅಭ್ಯಾಸಮಾಡಬೇಕು. ~~ಸದಾ ಹರಿಯ ಬಗ್ಗೆ ಶ್ರವಣ ಕೀರ್ತನ ಧ್ಯಾನಗಳನ್ನು ನಡೆಸುತ್ತ ಎಲ್ಲ~~ ಸತ್ಕರ್ಮವನ್ನೂ ಹರಿಪೂಜಾ ರೂಪವಾಗಿ ಮಾಡಿ ಹರಿಗೆ ಅರ್ಪಿಸಬೇಕು. ಹೆಂಡತಿ ಮಕ್ಕಳು ಮನೆಮಠಗಳು ಪಂಚಪ್ರಾಣಗಳು ಇನ್ನೂ ಏನೇನು ತನಗೆ ಅತ್ಯಂತ ಪ್ರಿಯವೆನಿಸುವುದೋ ಅವೆಲ್ಲವನ್ನೂ ಹರಿಗೆ ಅರ್ಪಿಸಬೇಕು. ನ್ವೋತ್ತಮರಾದ ಮಾನವರಲ್ಲಿಯೂ ದೇವತೆಗಳಲ್ಲಿಯೂ ಭಕ್ತಿಯಿಂದ ನಡೆದುಕೊಳ್ಳಬೇಕು. ಹರಿಭಕ್ತರ ಸಂಗದಲ್ಲಿರಬೇಕು.

ಹರಿಭಕ್ತರೊಂದಿಗೆ ಕಲೆತಾಗ, ಪರಸ್ಪರವಾಗಿ ಹರಿಸ್ಮರಣೆ ಮಾಡಿ ಮಾಡಿಸಿದಾಗ ಭಕ್ತಿ ಉಕ್ಕುತ್ತದೆ. ಆನಂದದಿಂದ ಮೈ ನವಿರೇಳುತ್ತದೆ. ಒಮ್ಮೊಮ್ಮೆ ಹರಿಧ್ಯಾನದಲ್ಲಿ ಭಕ್ತರು ಮೈಮರೆಯುತ್ತಾರೆ. ಆನಂದ ಬಾಷ್ಪ ಸುರಿಸುತ್ತ ನಗುತ್ತಾರೆ. 'ಹರಿ' ಎಂದು ಕೂಗಿಕೊಳ್ಳುತ್ತಾರೆ. ತಮ್ಮೆಲ್ಲ ಪ್ರವೃತ್ತಿಯನ್ನು ಹರಿಪರವಾಗಿಸಿ ಅವನಿಗೆ ಪ್ರಿಯವಾಗಬಲ್ಲ ಪ್ರವೃತ್ತಿಗಳನ್ನೇ ಮಾಡುತ್ತಾರೆ. ಕೆಲವೊಮ್ಮೆ ಧ್ಯಾನದಲ್ಲಿ ಹರಿಯೊಡನೆ ಕೂಡಿ ಸುಮ್ಮನೆ ಕುಳ್ಳಿರುತ್ತಾರೆ. ಈ ಭಾಗವತ ಧರ್ಮಗಳನ್ನು ಕಲಿತು ಹರಿಯನ್ನು ಆರಾಧಿಸಿದರೆ ಅವನ ಬಂಧಕಶಕ್ತಿಯನ್ನು ಚೆನ್ನಾಗಿ ದಾಟಬಹುದು.'

ಮುಂದೆ **ಪಿಪ್ಪಲಾದ** ಮಹಾಮುನಿಗಳ ಉಪದೇಶ—

'ಪರಬ್ರಹ್ಮ ಪರಮಾತ್ಮನಾದ ನಾರಾಯಣ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೂ ಚೇತನರ ಜಾಗರ ಸ್ವಪ್ನ ಸುಷುಪ್ತಿಗಳಿಗೂ ಮುಕ್ತಿಗೂ ದೇಹ ಇಂದ್ರಿಯ ಪ್ರಾಣ ಮನಸುಗಳ ಎಲ್ಲ ಚಟುವಟಿಕೆಗಳಿಗೂ ಪ್ರೇರಕ, ನಿಯಾಮಕ. ಮನವಾಗಾದಿ ಇಂದ್ರಿಯಾಭಿಮಾನಿಗಳಾದ ಬ್ರಹ್ಮಾದಿ ದೇವತೆಗಳಿಗೂ ಅವನನ್ನು ಪೂರ್ತಿ ತಿಳಿಯಲಾಗದು.

ವೇದಗಳೂ ನೇರವಾಗಿ ಅವನನ್ನು ಇಂಥವನೆಂದು ತಿಳಿಸುವುದಿಲ್ಲ. 'ನೇತಿ ನೇತಿ' ಹೀಗಲ್ಲ, ಇಂಥವನಲ್ಲ ಎಂದು, ಲೋಕವು ತಿಳಿದಿರುವ ಯಾವ ಗುಣಸ್ವಭಾವವೂ ಅವನದಲ್ಲ, ಲೋಕವಿಲಕ್ಷಣ, ಅಲೌಕಿಕ ಸ್ವಭಾವದವನು ಆತನೆಂಬುದನ್ನು ನಮ್ಮ ಊಹೆಗೇ ಬಿಟ್ಟುಬಿಡುತ್ತದೆ, ವೇದ. ಅದರಿಂದ ಅಜ್ಞರಾದ ದಾರ್ಶನಿಕರು ಅವನನ್ನು ತ್ರಿಗುಣಾತ್ಮಕ ಪ್ರಕೃತಿಸ್ವರೂಪನೆಂದೂ ಜೀವನೆಂದೂ ಪ್ರಪಂಚದಲ್ಲಿ ಕಾಣುವ ಎಲ್ಲ ~~ವಸ್ತುಸ್ವರೂಪನೆಂದೂ ನಾನಾ ರೀತಿ ವಾದಿಸುತ್ತಾರೆ. ವಸ್ತುತಃ~~ ಪ್ರಪಂಚದ ಎಲ್ಲ ವಸ್ತುಗಳಿಗೆ ಉತ್ಪತ್ತಿ ಬೆಳವಣಿಗೆ ನಾಶಗಳಿರುತ್ತವೆ. ಶ್ರೀಹರಿಗೆ ಅವು ಇಲ್ಲ. ಅವತಾರಗಳಲ್ಲಿ ಶತ್ರುಗಳೊಡನೆ ಕಾದುವಾಗ ಶರೀರದಲ್ಲಿ ಎಂದೂ ಗಾಯವಡೆಯುವುದಿಲ್ಲ. ಎಲ್ಲ ವಸ್ತುಗಳ ಒಳಗಿದ್ದೂ ಅವು ನಾಶವಾಗುವಾಗ ತಾನು ನಾಶಹೊಂದುವುದಿಲ್ಲ. ಏಕೆಂದರೆ ಅವನು ಎಂದೂ ಪ್ರಕೃತಿಬಂಧನದಿಂದ ದೂರವಿದ್ದು ಶುದ್ಧ ಜ್ಞಾನಾನಂದ ಸ್ವರೂಪನಾಗಿಯೇ ಇರುತ್ತಾನೆ. ಎಲ್ಲ ವಸ್ತುಗಳಲ್ಲಿ ಆಯಾ ರೂಪಗಳಿಂದ ಆಯಾ ಶಕ್ತಿಪ್ರದನಾಗಿರುತ್ತಾನೆ.

ಜೀವರು ಜನನ ಕಾಲದಲ್ಲಿ ಮುಖ್ಯಪ್ರಾಣನೊಂದಿಗೆ ಹರಿಯೊಂದಿಗೆ ಶರೀರದಲ್ಲಿ ಪ್ರವೇಶಿಸುತ್ತಾರೆ. ಮರಣಕಾಲದಲ್ಲಿ ಅವರೊಂದಿಗೇ ಹೊರಗೆ ಹೋಗುತ್ತಾರೆ. ಸುಷುಪ್ತ್ಯವಸ್ಥೆಗೆ ಹೋಗುವಾಗಲೂ ಮುಖ್ಯಪ್ರಾಣನಲ್ಲಿ ಪ್ರವೇಶಿಸಿ ಅವನೊಂದಿಗೆ ಹೃದಯದಲ್ಲಿ ಪ್ರಾಜ್ಞನಾಮಕ ಹರಿಯ ಆಲಿಂಗನದಲ್ಲಿ ಇರುತ್ತಾರೆ. ಹರಿಯನ್ನು ಬಿಟ್ಟು ಜೀವರಿಗೆ ಯಾವ ಅವಸ್ಥೆಯೂ ಇಲ್ಲ. ಹರಿಪಾದಕಮಲಧ್ಯಾನದಿಂದ ಅಂತಃಕರಣದಲ್ಲಿ ತ್ರಿಗುಣಜನ್ಯ ಮಲ ತೊಡೆದು ಹೋದಾಗಲೆ ಅಲ್ಲಿ ಅವನ ಸಾಕ್ಷಾತ್ಕಾರ.'

ವಿದೇಹರಾಜ ನುಡಿದ— 'ಕರ್ಮಾನುಷ್ಠಾನದಿಂದಲೆ ಕರ್ಮಬಂಧ ವನ್ನು ತೊಡೆದುಕೊಳ್ಳುವ ಕರ್ಮಯೋಗದ ರಹಸ್ಯವೇನು? ಇದನ್ನು ನಾನು ಹಿಂದೆ ನಮ್ಮ ತಂದೆಯಾದ ಇಕ್ಷ್ವಾಕು ಮಹಾರಾಜನ ಸಂಮುಖದಲ್ಲಿ ಬ್ರಹ್ಮನ ಮಾನಸಪುತ್ರರಾದ ಸನಕಾದಿ ಮುನಿಗಳಲ್ಲಿ ಕೇಳಿದೆ. ಅವರು ಹೇಳಲಿಲ್ಲ, ಇದಕ್ಕೇನು ಕಾರಣ?'

ಆವಿಹೋತ್ರ, ಮಹಾಮುನಿ ನುಡಿದರು—

'ರಾಜನೆ, ವಿಹಿತಕರ್ಮವನ್ನೇ ಮಾಡು. ನಿಷಿದ್ಧಕರ್ಮವನ್ನು ಬಿಡು ಎನ್ನುವುದು ವೇದಪುರುಷನ ಆದೇಶ. ಆದರೆ ಅದು ಲೌಕಿಕಮಾತಲ್ಲ. ಲೌಕಿಕಪುರುಷರಿಗೆ ಅದು ತಿಳಿಯುವುದೂ ಇಲ್ಲ. ವೇದ ಮುಖ್ಯವಾಗಿ ಪರಮಾತ್ಮನ ಬಗ್ಗೆ ಹೇಳುವ ಉದ್ದೇಶದಿಂದ ಹೊರಟಿದೆ. ಅದರಿಂದ ಪರಮಾತ್ಮನ ಅನುಗ್ರಹಕ್ಕಾಗಿ ಅವನಿಗೆ ಇಷ್ಟವಾದ ವಿಹಿತಕರ್ಮ ಮಾಡು ಅವನಿಗೆ ಇಷ್ಟವಾಗದ ನಿಷಿದ್ಧ ಕರ್ಮ ಬಿಡು ಎಂದೇ ಆದೇಶಿಸುತ್ತಿದೆ. ಯಾವ ಕರ್ಮ ಅವನಿಗೆ ಇಷ್ಟ ಯಾವುದು ಇಷ್ಟವಲ್ಲ ಎನ್ನುವುದು ಬಲು ಸೂಕ್ಷ್ಮ ಅವನ ಅನುಗ್ರಹವಿಲ್ಲದೆ ಜ್ಞಾನಿಗಳಿಗೂ ತಿಳಿಯಲಾಗದು. ಇದನ್ನು ತಿಳಿಸುವುದಕ್ಕಾಗಿಯೇ ಸನಕಾದಿ ಮುನಿಗಳು ತಾವು ತಿಳಿದವರೇ ಆದರೂ ಹೇಳಲಿಲ್ಲ.

ಪರಮಾತ್ಮನ ಪ್ರೀತಿಯ ಉದ್ದೇಶದಿಂದಲೆ ಕರ್ಮಮಾಡಲು ವೇದವು ಆದೇಶಿಸುತ್ತಿದೆ. ಇದು ಮೇಲ್ನೋಟಕ್ಕೆ ವೇದದಲ್ಲಿ ಕಾಣಿಸುವುದಿಲ್ಲ. ಮೇಲ್ನೋಟಕ್ಕೆ ಯಾಗಾದಿಕರ್ಮಗಳಿಗೆ ಸ್ವರ್ಗಾದಿಫಲದ ಉದ್ದೇಶವೇ ಕಾಣುತ್ತದೆ. ಯಾಗದಲ್ಲಿ ಆ ಯಾಗದ ದೇವತೆಯ ಪ್ರೀತಿಯನ್ನು ಕೂಡ ಮೀಮಾಂಸಕರು ಒಪ್ಪುವುದಿಲ್ಲ! ವಸ್ತುತಃ ಮಾನವರು ಹರಿಪ್ರೀತಿಗಾಗಿ ನಿಷ್ಕಾಮಕರ್ಮಮಾಡಿ ಅಂತಃಕರಣ ಶುದ್ಧಿಯನ್ನು ಸಂಪಾದಿಸಿ ಹರಿಕೃಪೆಯಿಂದ ದುಷ್ಕರ್ಮಬಂಧನದಿಂದ ಬಿಡುಗಡೆ ಹೊಂದಲಿ ಎಂದೇ ವೇದವು ಕರ್ಮವನ್ನು ವಿಧಿಸುತ್ತಿದೆ.

ಫಲಕಾಮನೆಯಿಂದ ಮಾಡಿದಾಗ ಕರ್ಮವು ಬಂಧಕವಾಗುತ್ತದೆ. ಹರಿಪ್ರೀತಿಗಾಗಿ ಮಾಡಿದಾಗ ಅದೇ ಕರ್ಮ ಮೋಚಕವಾಗುತ್ತದೆ. ಪಾದರಸವನ್ನು ಹಾಗೇ ಸೇವಿಸಿದರೆ ವಿಷ, ಮಾರಕವಾಗುತ್ತದೆ. ರಸೌಷಧಿಯಾಗಿ ಮಾಡಿ ಸೇವಿಸಿದರೆ ಅಮೃತ, ರೋಗನಿವಾರಕ.

'ಸ್ವರ್ಗಕಾಮೋ ಯಜೇತ' ಎಂದು ಯಾಗಕ್ಕೆ ಸ್ವರ್ಗವೆಂಬ ಫಲವನ್ನು ಹೇಳಿದುದು ಮುಕ್ತಿಯೋಗ್ಯನಾಗಿದ್ದೂ ಅಜ್ಞಾನದಿಂದ ಕರ್ಮ ವಿಮುಖನಾಗಿರುವವನಿಗೆ ಕರ್ಮಾಚರಣೆಯಲ್ಲಿ ಆಸಕ್ತಿ ಹುಟ್ಟಿಸುವ ಉದ್ದೇಶದಿಂದ| ಹೊರತು ಕರ್ಮದಿಂದ ಸ್ವರ್ಗಫಲ ಪಡೆಯಲಿ ಎಂದಲ್ಲ. ಅದರಿಂದ ಪರಮಾತ್ಮನ ಅನುಗ್ರಹದಿಂದ ಅಂತಃಕರಣದ ಅಹಂಕಾರ ಮಮಕಾರಗಳೆಂಬ ಮಲವನ್ನು ತೊಡೆದುಕೊಳ್ಳಲು ಬಯಸುವವನು ವೇದ ಪಂಚರಾತ್ರಗಳಲ್ಲಿ ಹೇಳಿದ ವಿಧಾನದಿಂದ ಪರಮಾತ್ಮನನ್ನು ಆರಾಧಿಸಬೇಕು. ಇದೇ ಕರ್ಮಯೋಗ. ಇದಕ್ಕೆ ಮೊದಲಿಗೆ ಬಹಳ ವಿಚಾರ ಮಾಡಿ ಶಿಷ್ಯನು ಗುರುವನ್ನೂ ಗುರುವು ಶಿಷ್ಯನನ್ನೂ ಆರಿಸಿಕೊಳ್ಳಬೇಕಾಗುತ್ತದೆ. ಬಳಿಕ ಶಿಷ್ಯ ಗುರುವಿನ ಮಾರ್ಗದರ್ಶನದಲ್ಲಿ ತನಗೆ ಯೋಗ್ಯವಾದ ಪರಮಾತ್ಮರೂಪವನ್ನು ಆರಾಧಿಸಬೇಕು.

ಮಿಂದು ಶುಚಿಯಾಗಿ ಪ್ರಾಣಾಯಾಮಾದಿಗಳಿಂದ ಶರೀರವನ್ನು ಶೋಧಿಸಿಕೊಂಡು ಮಂತ್ರಾಕ್ಷರಗಳಿಂದ ನ್ಯಾಸದ ಮೂಲಕ ಶರೀರರಕ್ಷೆ ಮಾಡಿಕೊಳ್ಳಬೇಕು. ಪ್ರತಿಮೆ ಸ್ಥಂಡಿಲ ಹೃದಯಾದಿ ಯಾವುದಾದರೊಂದರಲ್ಲಿ ಪರಮಾತ್ಮನಿಗೆ ಮೂಲಮಂತ್ರದಿಂದಲೂ ಆಯಾ ಇಷ್ಟಮಂತ್ರಗಳಿಂದಲೂ ಷೋಡಶೋಪಚಾರಗಳನ್ನು ಸಲ್ಲಿಸಬೇಕು. ಪೀಠದೇವತಾ ಆವರಣದೇವತಾ ಪರಿವಾರ ದೇವತಾ ಗಳಿಂದಲೂ ಭಗವನ್ಮೂರ್ತಿಗಳಿಂದಲೂ ಯುಕ್ತನಾದ ಭಗವಂತನನ್ನು ಅವನ ದಾಸನಾಗಿ ಪೂಜಿಸಬೇಕು. ಪೂಜೆಯಾದ ಬಳಿಕ ಉದ್ವಾಸನ ಮಾಡಿಕೊಂಡು ನಿರ್ಮಾಲ್ಯವನ್ನು ಶಿರದಲ್ಲಿ ಧರಿಸಬೇಕು. ಅಗ್ನಿ ಸೂರ್ಯ ಜಲಾದಿಗಳಲ್ಲಿಯೂ ಹೃದಯದಲ್ಲಿಯೂ ಪೂಜೆ ಮಾಡಿದರೆ ಬೇಗನೆ ಮುಕ್ತಿಯನ್ನು ಪಡೆಯಬಹುದು.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಅಂತರಿಕ್ಷ ಮಹಾಮುನಿ ಪರಮಾತ್ಮನು ಮಾಡುವ ಸೃಷ್ಟಿಯ ಉದ್ದೇಶವನ್ನು ಉಪದೇಶಿಸುತ್ತಾನೆ.

ಏಭಿರ್ಭೂತಾನಿ ಭೂತಾತ್ಮಾ ಮಹಾಭೂತೈರ್ಮಹಾಭುಜ ।
ಸಸರ್ಜೋಚ್ಚಾವಚಾನ್ಯಾದೌ ಸ್ವಯಮಾತ್ಮಪ್ರಸಿದ್ಧಯೇ ॥ ३ ॥

ಶೂರನಾದ ರಾಜನೆ, ಎಲ್ಲ ಚೇತನರಿಗೂ ಪ್ರಭುವಾದ ಶ್ರೀಹರಿ ಸೃಷ್ಟಿಯ ಆದಿಯಲ್ಲಿ ಪಂಚಮಹಾಭೂತಗಳಿಂದ ಎಲ್ಲ ದೊಡ್ಡ ಸಣ್ಣ ಶರೀರದ ಜೀವಿಗಳನ್ನು ಸೃಜಿಸಿದ. ಆ ಶರೀರಗಳಲ್ಲಿ ಅವರಿಗೆ ತನ್ನ ಜ್ಞಾನ ಉಂಟು ಮಾಡುವುದೇ ಅವನ ಸೃಷ್ಟಿಯ ಉದ್ದೇಶವಾಗಿದೆ.

ಇಲ್ಲಿ 'ಸ್ವಯಮಾತ್ಮ ಪ್ರಸಿದ್ಧಯೇ' ಎಂಬುದು ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ 'ಸ್ವಮಾತ್ರಾತ್ಮಪ್ರಸಿದ್ಧಯೇ' ಎಂದಾಗಿದೆ.

'ಪರಮಾತ್ಮನು ತನ್ನನ್ನು ಯಥಾರ್ಥವಾಗಿ ತಿಳಿಯುವ ಉಪಾಸನೆ ಮಾಡುವ ಜೀವನಿಗೆ ಒಳ್ಳೆಯ ಸಿದ್ಧಿಯಾಗಬೇಕೆಂದು ಅಥವಾ ತನ್ನ ಅಂಶಭೂತನಾದ ಜೀವನಿಗೆ ವಿಷಯಭೋಗ ಮತ್ತು ಮೋಕ್ಷಕ್ಕಾಗಿ ಸೃಷ್ಟಿ ಮಾಡುತ್ತಾನೆ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ. [1]ಈ ವ್ಯಾಖ್ಯಾನ ಅದ್ವೈತಕ್ಕೆ ಅನುಗುಣವಾಗಿಲ್ಲ, ನಿರ್ಗುಣ ಬ್ರಹ್ಮ ಪ್ರಮಾಣಕ್ಕೆ ಗೋಚರನಲ್ಲವಾದ್ದರಿಂದ ಅವನನ್ನು ಬಿಟ್ಟು ಪರಮಾತ್ಮನನ್ನು ಸೃಷ್ಟಿಕರ್ತನೆಂದು ಜೀವ ಯಥಾರ್ಥವಾಗಿ ತಿಳಿದರೆ ಸೃಷ್ಟಿ ಸತ್ಯವಾಗಬೇಕಾದೀತು. ಮಿಥ್ಯೆಯಲ್ಲ ಎಂದಾದೀತು.

ಅದಕ್ಕೇ 'ಉಪಾಸನೆ ಮಾಡುವ' ಎಂದು ಅಭಿಪ್ರಾಯ ಹೇಳಿದ್ದಾರೆ. ಏಕೆಂದರೆ ಉಪಾಸನೆ ಧ್ಯಾನಗಳೆಂದರೆ 'ಯೋಷಿತಮಗ್ನಿಂ ಧ್ಯಾಯೇತ' ಸ್ತ್ರೀಯನ್ನು ಬೆಂಕಿ ಎಂದು ಧ್ಯಾನಿಸಬೇಕು ಎಂಬಂತೆ, ಇಲ್ಲದ್ದನ್ನು ಉಪಾಸನೆ ಮಾಡಬಹುದಾದ್ದರಿಂದ ಸೃಷ್ಟಿಯನ್ನು ಧ್ಯಾನ ಮಾಡಿದ ಮಾತ್ರಕ್ಕೆ ಅದು ಸತ್ಯವಾಗುವುದಿಲ್ಲ ಎಂದು ಅದ್ವೈತಮತ ಹೇಳುತ್ತದೆ. ಈಗ ಧ್ಯಾನಕ್ಕೆ ಸೃಷ್ಟಿ ಎಂಬುದು ಸತ್ಯವಾಗಿ ಇರಬೇಕಾಗಿಲ್ಲ. ಸೃಷ್ಟಿ ಮಾಡದಿದ್ದರೂ ಜೀವ ಅದನ್ನು ಕಲ್ಪಿಸಿಕೊಂಡು ಧ್ಯಾನ ಮಾಡಬಹುದು. ಹೀಗಾಗಿ ಉಪಾಸನೆ ಮಾಡುವ ಜೀವನಿಗಾಗಿ ಪರಮಾತ್ಮ ಸೃಷ್ಟಿ ಮಾಡುವನೆಂಬುದು ಕೂಡುವುದಿಲ್ಲ.

ಪ್ರಾಯಃ ಇದೇ ಕಾರಣಕ್ಕೆ 'ಯದ್ವಾ' ಎಂದು ಇನ್ನೊಂದುರೀತಿಯಲ್ಲಿ ಶ್ರೀಧರವ್ಯಾಖ್ಯಾನದಲ್ಲಿ ವಿವರಣೆ ನೀಡಲಾಗಿದೆ. 'ಸ್ವ' ಎಂದರೆ ತನ್ನ ಅಂಶನಾದ

---

1. ಸ್ವಂ ಮಿಮೀತೇ ಪ್ರಮಿಮೀತೇ ಉಪಾಸ್ತೇ ಯಃ ಸ ಸ್ವಮಾತಾ। ತಸ್ಯಾತ್ಮನೋ ಜೀವಸ್ಯ ಪ್ರಕೃಷ್ಟಾಯೈ ಸಿದ್ಧಯೇ । ಯದ್ವಾ ಸ್ವಾಂಶಭೂತಾನಾಂ ಜೀವಾನಾಂ ಮಾತ್ರಾ ಪ್ರಸಿದ್ಧಯೇ ವಿಷಯಭೋಗಾಯ ಆತ್ಮಪ್ರಸಿದ್ಧಯೇ ಮೋಕ್ಷಾಯ ಚೇತ್ಯರ್ಥಃ ತದುಕ್ತಂ ವೇದಸ್ತುತೌ–

ಬುದ್ಧೀಂದ್ರಿಯ ಮನಃಪ್ರಾಣಾನ್ ಜನಾನಾಮಸೃಜತ್ ಪ್ರಭುಃ
ಮಾತ್ರಾರ್ಥಂ ಚ ಭವಾರ್ಥಂ ಚ ಆತ್ಮನೇಽ ಕಲ್ಪನಾಯ ಚ ಇತಿ ॥ -ಶ್ರೀಧರಃ

ಜೀವ. ಅವನಿಗೆ 'ಮಾತ್ರಾಪ್ರಸಿದ್ಧಿ' ಎಂದರೆ ವಿಷಯಭೋಗ. 'ಆತ್ಮಪ್ರಸಿದ್ಧಿ' ಎಂದರೆ ಮೋಕ್ಷ ಎಂದು ವಿವರಣೆ. ಇಲ್ಲಿ ಮಾತ್ರಾ ಎಂದರೆ ವಿಷಯ ಎನ್ನುವುದು—

ಮಾತ್ರಾ ಆಭಿರ್ಮೀಯಂತೇ ಶಬ್ದಾದಯಃ ಶ್ರೋತ್ರಾದೀನೀಂದ್ರಿಯಾಣಿ ।

'ಮಾತ್ರಾ ಎಂದರೆ ಜ್ಞಾನ ಸಾಧನವಾದ ಶ್ರೋತ್ರಾದಿ ಇಂದ್ರಿಯಗಳು' ಎನ್ನುವ ಗೀತಾ ಶಾಂಕರಭಾಷ್ಯಕ್ಕೆ ವಿರುದ್ಧವಾಗುತ್ತದೆ.

ವೀರರಾಘವ ವ್ಯಾಖ್ಯಾನದಲ್ಲಿ ಮಾತ್ರಾ ಎಂದರೆ ಶರೀರ ಎಂದಿದ್ದಾರೆ. [2]ಇದೂ ಅವರ ಭಾಷ್ಯಕ್ಕೆ ವಿರುದ್ಧ. ಭಾಷ್ಯದಲ್ಲಿ ಮಾತ್ರಾ ಅಂದರೆ ವಿಷಯ ಏಕೆಂದರೆ ಅವು ತನ್ಮಾತ್ರಗಳ ಕಾರ್ಯವಾಗಿವೆ ಎಂದಿದೆ.

ಈ ದೋಷಗಳು ಬರಬಹುದೆಂದು ಆಲೋಚಿಸಿ, ಶ್ರೀಧರವ್ಯಾಖ್ಯಾನದಲ್ಲಿ

'ಮಾತ್ರಾರ್ಥಂ ಚ ಭವಾರ್ಥಂ ಚ ಆತ್ಮನೇಽಕಲ್ಪನಾಯ ಚ'

ಎಂದು ಶ್ರುತಿಗೀತೆಯಲ್ಲಿ ತಾವೇ 'ಮಾತ್ರಾ ಎಂದರೆ ವಿಷಯ' ಎಂದು ವ್ಯಾಖ್ಯಾನ ಮಾಡಿದ್ದನ್ನು ಉದಾಹರಣೆಯಾಗಿ ತೋರಿಸುತ್ತಾರೆ.

ವೀರರಾಘವ ವ್ಯಾಖ್ಯಾನ ಇಲ್ಲಿಯೂ ಮಾತ್ರಾ ಎಂದರೆ ಶರೀರವೆಂದೇ ವಿವರಣೆ ನೀಡಿದೆ. ಆದರೆ ಶರೀರ ಎಂಬ ಅರ್ಥದಲ್ಲಿ ಮಾತ್ರಾಶಬ್ದಕ್ಕೆ ಪ್ರಸಿದ್ಧಿಯಿಲ್ಲ, ಭಾಷ್ಯಕಾರರ ಅನುಮತಿಯೂ ಕಂಡುಬರುವುದಿಲ್ಲ.

ಹೀಗಾಗಿ 'ಸ್ವಮಾತ್ರಾತ್ಮಪ್ರಸಿದ್ಧಯೇ' ಎಂಬ ಪಾಠ ಸರಿಯಲ್ಲ. 'ಸ್ವಯಮಾತ್ಮ ಪ್ರಸಿದ್ಧಯೇ' ಎಂದೇ ಸರಿಯಾದ ಪಾಠ. ಅದರಿಂದ 'ಆತ್ಮ ಪ್ರಸಿದ್ಧಿ' ಶಬ್ದಕ್ಕೆ ಮಾತ್ರ ವ್ಯಾಖ್ಯಾನವನ್ನು ಶ್ರೀಮದಾಚಾರ್ಯರು ಮಾಡಿದ್ದಾರೆ.

'ಏಭಿ ರ್ಭೂತಾನಿ ಭೂತಾತ್ಮಾ ಮಹಾಭೂತೈರ್ಮಹಾಭುಜ'

ಎಂದು ಪೂರ್ವಾರ್ಧದಲ್ಲಿದೆ. ಅದರಂತೆ 'ಭೂತಾನಾಂ ಮೋಕ್ಷಸಿದ್ಧಯೇ' ಎಂದೇ ಹೇಳಿದ್ದರೆ ಅದಕ್ಕೆ ಇದು ಹೊಂದಿಕೆಯಾಗುತ್ತಿತ್ತು. ಕ್ಲಿಷ್ಟ ಶಬ್ದದಿಂದ 'ಸ್ವಮಾತ್ರಾತ್ಮ ಪ್ರಸಿದ್ಧಯೇ' ಎನ್ನಬೇಕಾಗಿರಲಿಲ್ಲ.

ಆತ್ಮ ಪ್ರಸಿದ್ಧಯೇ ಭೂತಾನಾಂ ಭಗವಜ್ಜ್ಞಾನಾರ್ಥಂ ।

---

2. ಸ್ವಸ್ಯ ಮಾತ್ರಾಭೂತಾನಾಂ ಶರೀರಭೂತಾನಾಂ ಆತ್ಮನಾಂ ಜೀವಾನಾಂ ಪ್ರಸಿದ್ಧಯೇ ಪುರುಷಾರ್ಥ ಸಿದ್ಧಯೇ । -ವೀರರಾಘವಃ

'ಆತ್ಮಪ್ರಸಿದ್ಧಯೇ' ಎಂದರೆ ಜೀವರಿಗೆ ಭಗವಂತನ ಜ್ಞಾನ ಉಂಟಾಗುವ ಉದ್ದೇಶದಿಂದ ಭಗವಂತ ಸೃಷ್ಟಿ ಮಾಡಿದ್ದಾನೆ ಎಂದರ್ಥ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಅಂತರಿಕ್ಷ ಮಹಾಮುನಿ ಜೀವಶರೀರದಲ್ಲಿ ಪರಮಾತ್ಮನೇ ವಿಷಯವನ್ನು ಉಂಡು ಉಣಿಸುತ್ತಾನೆ, ಜೀವನು ಸ್ವತಂತ್ರನಲ್ಲ ಎನ್ನುತ್ತಾರೆ.

ಏವಂ ಸೃಷ್ಟ್ವಾ ಸ ಭೂತಾನಿ ಸ್ಥವಿಷ್ಠೈಃ ಪಂಚಧಾತುಭಿಃ ।
ಏಕಧಾ ದಶಧಾऽऽತ್ಮಾನಂ ವಿಭಜನ್ ಜುಷತೇ ಗುಣಾನ್ ॥ ೪ ॥

ಸ್ಥೂಲವಾದ ಪಂಚಭೂತಗಳಿಂದ ಜೀವಿಗಳನ್ನು ಸೃಜಿಸಿ ಆ ಶರೀರಗಳಲ್ಲಿ ಆ ಜೀವರೊಂದಿಗೆ ನಿಯಾಮಕನಾಗಿ ಪರಮಾತ್ಮ ತಾನೂ ಪ್ರವೇಶಿಸಿ ಮನೋ ನಿಯಮನಕ್ಕೆ ಒಂದು ರೂಪವನ್ನೂ ಇಂದ್ರಿಯನಿಯಮನಕ್ಕೆ ಹತ್ತು ರೂಪಗಳನ್ನೂ ತನ್ನ ಮೂಲರೂಪದಿಂದ ಬೇರ್ಪಡಿಸಿ ಅವುಗಳಿಂದ ಶಬ್ದಾದಿ ವಿಷಯಗಳ ಸಾರವನ್ನು ಮಾತ್ರ ತಾನು ಉಣ್ಣುತ್ತಾನೆ.

ಗುಣೈರ್ಗುಣಾನ್ ಸ ಭುಂಜಾನ ಆತ್ಮಪ್ರದ್ಯೋತಿತೈಃ ಪ್ರಭುಃ ।
ಮನ್ಯಮಾನ ಇದಂ ಸೃಷ್ಟಮಾತ್ಮಾನಮಿಹ ಸಜ್ಜತೇ ॥ ೫ ॥

ಪರಮಾತ್ಮ ಜೀವನ ಮನ ಇಂದ್ರಿಯಗಳನ್ನು ವಿಷಯಗಳ ಕಡೆಗೆ ಪ್ರೇರಿಸಿ ಅವುಗಳಿಂದ ವಿಷಯಸುಖಸಾರವನ್ನು ಮಾತ್ರ ತಾನುಂಡು ಸ್ಥೂಲವಾದ ಶುಭ ಅಶುಭಗಳನ್ನು ಜೀವನಿಗೇ ಉಣಿಸುತ್ತಾನೆ. ಅದಕ್ಕೆಂದೇ ಶರೀರೇಂದ್ರಿಯಗಳಿಂದ ಜೀವನನ್ನು ಸೃಷ್ಟಿ ಮಾಡಿರುತ್ತಾನೆ. ಹೀಗೆ ಸೃಷ್ಟನಾದ ಈ ಜೀವನನ್ನು ಸೃಷ್ಟಿಕರ್ತನಾದ ಪರಮಾತ್ಮನೆಂದು ತಪ್ಪಾಗಿ ತಿಳಿದರೆ ಅಧಃಪತನವೇ ಸರಿ.

ಇಲ್ಲಿ 'ಪ್ರಭು' ಎಂದರೆ ಹಿಂದಿನ ಶ್ಲೋಕದಲ್ಲಿ 'ಸಸರ್ಜ' ಎಂದು ಉಕ್ತನಾಗಿರುವ ಸಮಸ್ತಲೋಕಕ್ಕೆ ಸೃಷ್ಟಿಕರ್ತ ಪ್ರಭುವಾದ ಸರ್ವಶಕ್ತನಾದ ಪರಮಾತ್ಮನೆಂಬ ಅರ್ಥವಿಟ್ಟುಕೊಂಡು, 'ಪರಮಕರುಣಾಸಿಂಧು ಶಾಶ್ವತ ಮನವೆ ಮೊದಲಾದಿಂದ್ರಿಯ ಗಳೊಳಗಿದ್ದು ಭೋಗಿಸುತಿಹನು ವಿಷಯಗಳ' ಎಂಬಂತೆ—

'ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ।'

ಎಂಬಂತೆ, ಸ್ವತಂತ್ರವಾಗಿ ವಿಷಯಗಳಲ್ಲಿರುವ ಸ್ವಾಖ್ಯರಸವನ್ನು ಪರಮಾತ್ಮ ಲೀಲೆಯಿಂದ ಉಣ್ಣುತ್ತಾನೆ ಎಂದು ಪರಮಾತ್ಮನನ್ನು ಕೊಂಡಾಡಲು ಬರುವಾಗ 'ಪ್ರಭು' ಎಂದರೆ, 'ಪರಮಾತ್ಮನ ಅಲ್ಪಾಂಶನಾದ ನಾನಾಯೋನಿಗಳಲ್ಲಿ ಜನಿಸುವ ಶರೀರಧಾರಿಯಾದ ಜೀವ'ನೆಂದು ಅರ್ಥವಿಟ್ಟುಕೊಂಡು ಅವನು ಸಂಸಾರದಲ್ಲಿ ಬದ್ಧನಾಗುತ್ತಾನೆ ಎಂದು ಕಷ್ಟದಿಂದ ವಿವರಣೆ ನೀಡುವುದು ಉಚಿತವಲ್ಲ. ಆದರೂ ಶ್ರೀಧರ [1]ವೀರರಾಘವ [2]ಜೀವಗೋಸ್ವಾಮಿ [3]ವಿಶ್ವನಾಥ [4]ಶುಕದೇವ ವ್ಯಾಖ್ಯಾನ ಗಳೆಲ್ಲವೂ ಪ್ರಭು ಶಬ್ದವನ್ನು ಕಷ್ಟದಿಂದ ಜೀವನೆಂಬ ಅರ್ಥದಲ್ಲಿಯೇ ಕೂಡಿಸುತ್ತಾರೆ.

ಶ್ರೀಮದಾಚಾರ್ಯರು ವರಾಹಪುರಾಣ ವಚನದ ಆಧಾರ ತೋರಿಸುತ್ತ 'ಪ್ರಭು' ಶಬ್ದಕ್ಕೆ ಭಗವಂತನೆಂಬ ಅರ್ಥವೇ ಯುಕ್ತ ಎನ್ನುತ್ತಾರೆ.

ಬೇರೆ ವ್ಯಾಖ್ಯಾನಕಾರರು ಇಲ್ಲಿ ಜೀವ ಎಂಬ ಅರ್ಥವಿಟ್ಟುಕೊಂಡು ಎರಡು ಶ್ಲೋಕಗಳಿಗೆ ವಿವರಣೆ ನೀಡುತ್ತಾರೆ—

'ಏವಂ ಸೃಷ್ಟಾನಿ ಭೂತಾನಿ ಪ್ರವಿಷ್ಟಃ ಪಂಚಧಾತುಭಿಃ' ಎಂದು ಪಾಠ.

~~[5]ಭಗವಂತನು ಜೀವನಿಗೆ ಭೋಗಸಾಧನೆಗಾಗಿ ತಾನು ಸೃಜಿಸಿದ ಪಾಂಚಭೌತಿಕ~~ ಶರೀರಗಳಲ್ಲಿ ತಾನು ಅಂತರ್ಯಾಮಿಯಾಗಿ ಪ್ರವೇಶಿಸಿ, ಒಂದು ಅಂತಃಕರಣದಲ್ಲಿ

---

1. ಸ ಪ್ರಭುರ್ಜೀವಃ। -ವೀರರಾಘವಃ
2. ಸ ತು ಜೀವಃ ಪ್ರಭುಃ ಪ್ರಭ್ವಂಶತ್ವಾತ್ ಯತ್‌ಕಿಂಚಿದ್ ಜ್ಞಾನಾದಿ ಶಕ್ತಿಯುಕ್ತೋಽಪೀತ್ಯರ್ಥಃ। -ಜೀವಗೋಸ್ವಾಮೀ
3. ಪ್ರಭುಃ ಪ್ರಕರ್ಷೇಣ ದೇವತಿರ್ಯಗಾದಿಷು ಭವತೀತಿ। -ವಿಶ್ವನಾಥಃ
4. ಪ್ರಭುಃ ಶರೀರಸ್ವಾಮೀ। -ಶುಕದೇವಃ
5. ಏವಂ ಜೀವೋಪಕರಣಾರ್ಥಂ ಪಂಚಧಾತುಭಿರ್ಮಹಾಭೂತೈಃ ಸೃಷ್ಟಾನಿ ಭೂತಾನಿ ಅಂತರ್ಯಾಮಿರೂಪೇಣ ಪ್ರವಿಷ್ಟ ಏಕಧಾ ಮನಸಾ ದಶಧಾ ಬಾಹ್ಯೇಂದ್ರಿಯ ರೂಪೇಣ ಆತ್ಮಾನಂ ವಿಭಜನ್ ಗುಣಾಂಸ್ತತ್ತದ್ ವಿಷಯಾನ್ ಜುಷತೇ ಜೋಷಯತೀತ್ಯರ್ಥಃ। ಯದ್ವಾ ತಮಾತ್ಮಾನಂ ಪ್ರತಿ ಗುಣಾನ್ ವಿಭಜನ್ ಜುಷತೇ ಪ್ರೀಯತ ಇತ್ಯರ್ಥಃ। ಸ ಚ ಜೀವ ಆತ್ಮನಾಽಂತರ್ಯಾಮಿಣಾ ಪ್ರದ್ಯೋತಿತೈರ್ಗುಣೈರಿಂದ್ರಿಯೈರ್ಗುಣಾನ್ ವಿಷಯಾನ್ ಭುಂಜಾನ ಇದಂ ಶರೀರಮಾತ್ಮಾನಂ ಮನ್ಯಮಾನ ಇಹ ಶರೀರಾದೌ ಸಜ್ಜತೇ ಅತ ಏವ ಸಂಸರತೀತಿ ಭಾವಃ। -ಶ್ರೀಧರ ಸ್ವಾಮೀ

   ಜೀವೋಪಕರಣಾರ್ಥಂ ಜೀವಭೋಗ ಸಾಧನಾರ್ಥಂ ಭೂತಾನಿ ಶರೀರಾಣಿ ಆತ್ಮಾನಂ ಜೀವಂ ಮನ ಆದಿತಾದಾತ್ಮ್ಯಾಧ್ಯಾಸೇನ ತತ್ತದ್ರೂಪತ್ವೇನ ವಿಭಜನ್ ಭೇದವಿಶಿಷ್ಟಂ ಕುರ್ವನ್ ತತ್ತದ್ ವಿಷಯಾನ್ ಸುಖದುಃಖ ಶಬ್ದಸ್ಪರ್ಶಾದೀನ್ ಜೋಷಯತಿ ಭೋಜಯತಿ ।

ಮತ್ತು ಹತ್ತು ಇಂದ್ರಿಯಗಳಲ್ಲಿ, ಅವೆಲ್ಲವೂ ತಾನೇ ಎನ್ನುವ ತಾದಾತ್ಮ್ಯಭ್ರಮದಿಂದ ಜೀವನಲ್ಲಿ ಭೇದ ಉಂಟುಮಾಡುವ ಮೂಲಕ ಅವನನ್ನು ಒಂದಾಗಿ ಹತ್ತಾಗಿ ವಿಭಾಗಮಾಡಿ ವಿಷಯಭೋಗವನ್ನು ಉಣಿಸುತ್ತಾನೆ. ಅಥವಾ ವಿಷಯಪದಾರ್ಥಗಳನ್ನು ವಿಭಾಗಮಾಡಿಕೊಟ್ಟು ತೃಪ್ತನಾಗುತ್ತಾನೆ. ಪ್ರಭುವಾದ ಪರಮಾತ್ಮನ ಅಂಶನಾದ್ದರಿಂದ ಕಿಂಚಿತ್ ಜ್ಞಾನಾದಿ ಶಕ್ತಿಉಳ್ಳವನಾದರೂ ಜೀವನು ವಿಷಯಾಸಕ್ತಿಯಿಂದ ಸಂಸಾರದಲ್ಲಿ ಸುತ್ತುತ್ತಾನೆ' ಎಂದು ಶ್ರೀಧರಸ್ವಾಮಿವ್ಯಾಖ್ಯಾನವಿದೆ.

[1]'ಜೀವಾತ್ಮನು ಪಾಂಚಭೌತಿಕ ಶರೀರದಲ್ಲಿ ಪ್ರವೇಶಿಸಿ ತನ್ನ ಜ್ಞಾನವನ್ನು ಅಂತಃಕರಣ ಇಂದ್ರಿಯಗಳಿಂದ ಒಂದಾಗಿ ಹತ್ತಾಗಿ ವಿಭಾಗ ಮಾಡಿಕೊಂಡು ಕೇವಲ ವಿಷಯಭೋಗದಲ್ಲಿ ನಿರತನಾಗುತ್ತಾನೆ, ಪರಮಾತ್ಮನ ಆರಾಧನೆ ಮಾಡದೆ ಸಂಸಾರದಲ್ಲಿ ಸುತ್ತುತ್ತಾನೆ' ಎಂದು ವೀರರಾಘವ ವ್ಯಾಖ್ಯಾನವಿದೆ.

ಆದರೆ 'ಆತ್ಮಾನಂ ದಶಧಾ ವಿಭಜನ್' ಎಂಬ ಮಾತಿಗೆ ಈ ವ್ಯಾಖ್ಯಾನಗಳಲ್ಲಿ ತೃಪ್ತಿಕರವಾದ ವಿವರಣೆ ಸಿಗುವುದಿಲ್ಲ. ಕಣ್ಣು ಕಿವಿ ಮುಂತಾದ ಇಂದ್ರಿಯಗಳು ಹತ್ತು ಇವೆ. ಇವೆಲ್ಲಕ್ಕೂ ಜೀವೈಕ್ಯ ಭ್ರಮದಿಂದ ಒಬ್ಬನೇ ಜೀವನ ಅಭೇದ ಬಂದುಬಿಟ್ಟರೆ ಇದು ಕಣ್ಣು ಬೇರೆ, ಇದು ಕಿವಿ ಬೇರೆ ಎಂದು ಮುಂತಾಗಿ ಮೊದಲು ಇದ್ದು ವಿಭಾಗ ಈಗ ಇಲ್ಲವಾಗುವುದು. ಅದರಿಂದ ಅದು ಕಾಣಬಾರದು, ಆದರೂ ಕಾಣುತ್ತದೆ, ಹೇಗೆ?

ಆದರೂ ಶ್ರೀಧರಸ್ವಾಮಿ ವ್ಯಾಖ್ಯಾನ ಪ್ರಕಾರ ಇಂದ್ರಿಯಗಳಲ್ಲಿ ಜೀವೈಕ್ಯ ಭ್ರಮದಿಂದ ಕಣ್ಣಿನ ಸ್ವರೂಪದ ಜೀವ ಬೇರೆ, ಕಿವಿಯ ಸ್ವರೂಪದ ಜೀವ ಬೇರೆ, ಎಂದು ಮುಂತಾಗಿ ಒಬ್ಬನೇ ಜೀವನಲ್ಲಿ ಹತ್ತು ಬಗೆಯಾಗಿ ವಿಭಾಗ ಉಂಟಾಗುತ್ತದೆ ಎನ್ನುತ್ತಾರೆ! 'ಜೀವನಿಗೆ ತಾನು ಇಂದ್ರಿಯ ಸ್ವರೂಪನೆ'ನ್ನುವ ಭ್ರಮೆಯಿಂದ ಜೀವನಲ್ಲಿ

ಪೂರ್ವಾರ್ಥೇ ಅಂತರ್ಭೂತ ಣಿಜರ್ಥ ಕಲ್ಪನಾಗೌರವಮತೋ ಯದ್ವೇತಿ । ತಂ ಮನೋಬಾಹ್ಯೇಂದ್ರಿಯ ರೂಪೇಣೈಕಧಾ ದಶಧಾ ಸಂತಂ ಆತ್ಮಾನಂ ಜೀವಂ ಪ್ರತಿ ಗುಣಾನ್ ಸುಖದುಃಖ ಶಬ್ದಾದಿ ವಿಷಯಾನ್ ವಿಭಜನ್ ದದತ್ ಪ್ರೀಯತೇ ಪ್ರಸನ್ನೋ ಭವತೀತ್ಯರ್ಥಃ। ಸ ಚ ಸ ತು ಜೀವಃ ಪ್ರಭುಃ ಪ್ರಭ್ವಂಶತ್ವಾತ್ ಯತ್‌ಕಿಂಚಿದ್‌ಜ್ಞಾನಾದಿ ಶಕ್ತಿಯುಕ್ತೋऽಪಿ ಅತ ಏವಾಶಕ್ತತ್ವಾದೇವ ಸಂಸರತಿ ಜನ್ಮಮರಣಾದಿನಾ ಭ್ರಮತಿ । -ರಾಧಾರಮಣದಾಸ

1. ಭೂತಾನಿ ಶರೀರಾಣಿ ಪ್ರವಿಷ್ಟಃ ಪ್ರತ್ಯಗಾತ್ಮಾ ಏಕಧಾ ದಶಧಾ ಆತ್ಮಾನಂ ವಿಭಜನ್ ಜ್ಞಾನ ಕರ್ಮೇಂದ್ರಿಯಾಂತಃಕರಣೈರಾತ್ಮಾನಂ ಜ್ಞಾನಂ ವಿಭಜನ್ ಗುಣಾನ್ ಶಬ್ದಾದಿ ವಿಷಯಾನೇವ ಭುಂಕ್ತೇ ನ ತು ಪರಮ ಪುರುಷಮಾರಾಧಯತೀತಿ ಭಾವಃ । -ವೀರರಾಘವಃ

ವಿಭಾಗವಾಗುವುದು ಒಂದು ಚೋದ್ಯವೇ ಸರಿ. ಅದರಿಂದಲೇ ಈ ವಿವರಣೆ ಬೇಡವೆಂದು ಶ್ರೀಧರವ್ಯಾಖ್ಯಾನದ ಇನ್ನೊಂದು ವಿವರಣೆಯಲ್ಲಿ 'ಜೀವನಿಗೆ ಅಂತರ್ಯಾಮಿಯು 'ಗುಣಾನ್ ವಿಭಜನ್' ವಿಷಯಪದಾರ್ಥಗಳನ್ನು ಕೊಟ್ಟು ತೃಪ್ತಿಪಡುತ್ತಾನೆ ಎಂದಿದ್ದಾರೆ.

ಅಂತರ್ಯಾಮಿಯು ಜೀವನಲ್ಲಿ ಹೀಗೆ ಭ್ರಮೆ ಹುಟ್ಟಿಸುವ ಮೂಲಕ ಅವನಲ್ಲಿ ವಿಭಾಗವನ್ನು ಉಂಟುಮಾಡುತ್ತಾನೆ ಎಂದು ಶ್ರೀಧರವ್ಯಾಖ್ಯಾನ ಹೇಳುತ್ತಿದ್ದರೂ ವೀರರಾಘವ ವ್ಯಾಖ್ಯಾನ 'ಜೀವಾತ್ಮ ತಾನೇ ತನ್ನ ಜ್ಞಾನವನ್ನು ಇಂದ್ರಿಯಗಳಿಂದ ಬೇರೆಬೇರೆಯಾಗಿ ಚಾಕ್ಷುಷ ಮುಂತಾಗಿ ಹತ್ತಾಗಿ ವಿಭಾಗಮಾಡಿಕೊಳ್ಳುತ್ತಾನೆ' ಎನ್ನುತ್ತಿದೆ. ಅವರ ಮತದಲ್ಲಿ ಜ್ಞಾನವು ದ್ರವ್ಯ. ಜೀವನ ಪಾಪಪುಣ್ಯಾನುಸಾರವಾಗಿ ಸಂಕೋಚ ವಿಸ್ತಾರರೂಪ ಪರಿಣಾಮಗಳನ್ನು ಚಾಕ್ಷುಷ ರಾಸನ ಎಂದು ಮುಂತಾಗಿ ವಿಭಾಗಗಳನ್ನು ಹೊಂದುವಂಥದ್ದು ಎನ್ನುತ್ತಾರೆ. ಆದರೆ [1]ಸುದರ್ಶನಸೂರಿಕೃತ ಶುಕಪಕ್ಷೀಯ ವ್ಯಾಖ್ಯಾನ ಇಲ್ಲಿ ಸ್ವಲ್ಪ ಬೇರೆ ತೆರನಾಗಿದೆ—

'ಪಾಂಚಭೌತಿಕವಾದ ಜೀವಶರೀರವನ್ನು ಪರಮಾತ್ಮ ಪ್ರವೇಶಿಸಿ ಏಕಾದಶ ಇಂದ್ರಿಯರೂಪದಿಂದ ಜ್ಞಾನಸಹಿತನಾದ ಜೀವನನ್ನು ಒಂದಾಗಿ ಹತ್ತಾಗಿ ವಿಭಾಗ ಮಾಡಿ ವಿಭಕ್ತನಾದ ಆತನನ್ನು ಪುಣ್ಯಪಾಪಕರ್ಮಗಳ ಮೂಲಕ ದೇವದಾನವಾದಿ ಜನ್ಮವಿತ್ತು ವಿಭಾಗ ಮಾಡಿ ಜೀವನನ್ನು ಸಂತೋಷಗೊಳಿಸುತ್ತಾನೆ' ಎಂದು.

'ಏಕಧಾ ದಶಧಾ ವಿಭಜನ್' ಎಂಬ ಮಾತಿಗೆ ಈ ಎರಡು ವಿವರಣೆಗಳೂ ಸಮರ್ಪಕವಾಗಿಲ್ಲ, ಶ್ರೀಮದಾಚಾರ್ಯರು ಹೀಗೆ ವಿವರಣೆ ನೀಡುತ್ತಾರೆ—'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್ ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್' ಎಂದು ಉಪನಿಷತ್ತಿನಲ್ಲಿ ಹೇಳಿದಂತೆ, ಮತ್ತು

ಯದಾದಿತ್ಯಗತಂ ತೇಜೋ ಜಗದ್ ಭಾಸಯತೇಽಖಿಲಂ
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಂ

ಎಂದು ಗೀತೆಯಲ್ಲಿ ಹೇಳಿದಂತೆ ಪರಮಾತ್ಮ ತಾನು ಎಲ್ಲ ಪದಾರ್ಥಗಳನ್ನು ಸೃಷ್ಟಿಮಾಡಿ ಅವುಗಳನ್ನು ಕಾಪಾಡುವುದಕ್ಕಾಗಿ ತಾನೆ ಅವುಗಳೊಳಗೆ ಪ್ರವೇಶಿಸಿ ಅವುಗಳ

---

1. ಪಂಚಧಾತುಭಿಃ ಸೃಷ್ಟಾನಿ ಭೂತಾನಿ ಸಜೀವಶರೀರಾಣಿ ಪ್ರವಿಷ್ಟಃ ಸನ್ ಏಕಧಾ ದಶಧಾ ಏಕಾದಶೇಂದ್ರಿಯ ರೂಪೇಣ ಆತ್ಮಾನಂ ಜೀವಂ ಸಧರ್ಮಭೂತಜ್ಞಾನಂ ವಿಭಜನ್ ವಿಭಕ್ತಂ ದೇವಾದಿರೂಪಂ ಕರ್ಮಭಿಃ ಕುರ್ವನ್ ಜುಷತೇ ಜೀವಂ ಜೋಷಯತೀತಿ ।

-ಸುದರ್ಶನಸೂರಿಃ

ಆಕಾರದಲ್ಲಿ ನಾನಾ ರೂಪಗಳನ್ನು ತಾಳುತ್ತಾನೆ. ಹಾಗೇ ಜೀವಶರೀರಗಳಲ್ಲಿ ಏಕಾದಶ ಇಂದ್ರಿಯಗಳಲ್ಲಿ ಏಕಾದಶ ರೂಪಗಳನ್ನು ತಳೆದು, ತನ್ನನ್ನೇ ತಾನು ವಿಭಾಗ ಮಾಡಿಕೊಳ್ಳುತ್ತಾನೆ. ಇದು ಅವನ ಅಚಿಂತ್ಯಶಕ್ತಿ.

ಏನೂ ಶಕ್ತಿ ಇಲ್ಲದ ಜೀವಾತ್ಮ ತಾನು ಏಕಾದಶ ಇಂದ್ರಿಯ ಸ್ವರೂಪನೆಂದು ಭ್ರಮಿಸಿದ ಮಾತ್ರಕ್ಕೆ ಏಕಾದಶ ರೂಪಗಳನ್ನು ತಾಳುವುದು ಅಸಂಭಾವಿತ. ಎಲ್ಲ ಶರೀರಗಳಲ್ಲಿಯೂ ಜೀವ ಅಣುರೂಪನೆ ಇರುತ್ತಾನೆ. ಅವನಲ್ಲಿ ವಿಭಾಗ ಸಂಭವವಿಲ್ಲ. ಅವನ ಧರ್ಮಿಭೂತಜ್ಞಾನವು ಚಾಕ್ಷುಷ ಮುಂತಾಗಿ ಅನೇಕ ರೂಪವನ್ನು ತಳೆದರೂ ಅದು ಜ್ಞಾನದಲ್ಲಿ ವಿಭಾಗವಾಯಿತು ಹೊರತು ಆತ್ಮನಲ್ಲಿ ಅಲ್ಲ. ಅವರ ಮತದಲ್ಲಿ ಆತ್ಮ ಬೇರೆ, ಅವನ ಧರ್ಮಿಭೂತಜ್ಞಾನ ಬೇರೆ. ಜ್ಞಾನದಲ್ಲಿ ವಿಭಾಗವಾಯಿತೆಂದರೆ ಜ್ಞಾನ ವಿಶಿಷ್ಟ ಆತ್ಮನಲ್ಲಿ ವಿಭಾಗವಾಯಿತೆನ್ನುವುದು ಬರಿ ಶಬ್ದ ಮಾತ್ರ.

'ವಿಭಜನ್ ಸ ಪ್ರಭುಃ ಭುಂಜಾನಃ' ಎನ್ನುವ ಮಾತಿಗೂ ಸರಿಯಾದ ವಿವರಣೆ ಶ್ರೀಮದಾಚಾರ್ಯರ ಪ್ರಕಾರ ಹೀಗೆ— ಪರಮಾತ್ಮ ಜೀವನ ಮನಸಿನಲ್ಲಿ ಒಂದು, ಇಂದ್ರಿಯಗಳಲ್ಲಿ ಹತ್ತು ಎಂದು ಹನ್ನೊಂದು ರೂಪಗಳಿಂದ ತನ್ನನ್ನು ವಿಭಾಗಮಾಡಿಕೊಂಡು 'ಸಃ ಪ್ರಭುಃ' ಸರ್ವಶಕ್ತನಾದ ಆ ಪರಮಾತ್ಮನೆ ಆ ಮನ ಇಂದ್ರಿಯಗಳಲ್ಲಿದ್ದು ಕೇವಲ ಸುಖವನ್ನು 'ಭುಂಜಾನಃ' ಅನುಭವಿಸುತ್ತಾನೆ, ಜೀವನಿಗೆ ಸುಖದುಃಖಗಳೆರಡನ್ನೂ ಉಣಿಸುತ್ತಾನೆ. ಶ್ಲೋಕದ ಕೊನೆಯಲ್ಲಿ 'ಇಹ ಸಜ್ಜತೇ' ಸಂಸಾರದಲ್ಲಿ ನರಕದಲ್ಲಿ ಬೀಳುತ್ತಾನೆ ಎಂದುದು ಪರಮಾತ್ಮನ ಬಗ್ಗೆ ಅಲ್ಲ, ಜೀವನ ಬಗ್ಗೆ. ಜೀವನು ನರಕದಲ್ಲಿ ಏಕೆ ಬೀಳುತ್ತಾನೆ ಎಂದರೆ, 'ಆತ್ಮಾನಂ ಇದಂ ಸೃಷ್ಟಂ ಮನ್ಯಮಾನಃ' ಹಿಂದಿನ ಶ್ಲೋಕದಲ್ಲಿ ಸೃಷ್ಟಿಕರ್ತನೆಂದು, ಜೀವಶರೀರಗಳಲ್ಲಿ ಮನಇಂದ್ರಿಯಾದಿಗಳಲ್ಲಿ ನಾನಾ ರೂಪಗಳಿಂದ ನಿಯಾಮಕನಾಗಿದ್ದು ಕೇವಲ ಸುಖವನ್ನು ಉಣ್ಣುವವನೆಂದು 'ಪ್ರಭು' ಅಚಿಂತ್ಯ ಸರ್ವಶಕ್ತಿಪೂರ್ಣನೆಂದು ಉಕ್ತನಾಗಿರುವ 'ಆತ್ಮ'ನನ್ನು ಪರಮಾತ್ಮನನ್ನು ಸೃಷ್ಟವಾದ ಅಶಕ್ತವಾದ ಈ ಜೀವಚೈತನ್ಯವೇ ಹೊರತು ಬೇರೆ ಅಲ್ಲ ಎಂದು 'ಮನ್ಯಮಾನಃ' ತಿಳಿಯುತ್ತಾನೆ. ಇದು ಮಹಾ ಅಪರಾಧ. ಅದರಿಂದ ಮೊದಲಿಗೆ ಸಂಸಾರದುಃಖದಲ್ಲಿ ಬೀಳುತ್ತಾನೆ, ಮರಣಾನಂತರ ನಿತ್ಯನರಕ ದುಃಖದಲ್ಲಿ ಬೀಳುತ್ತಾನೆ. ಇದು ವರಾಹಪುರಾಣದಲ್ಲಿ ಬಾದರಾಯಣರೇ ಮಾಡಿರುವ ಭಾಗವತ ಶ್ಲೋಕದ ನೇರ ವ್ಯಾಖ್ಯಾನ. ಬಹಳ ಮನೋಜ್ಞವೂ ಆಗಿದೆ.

ಏವಂ ಗುಣಾನ್ ಭುಂಜಾನೋ ಭಗವಾನ್ ।
ತಂ ಸೃಷ್ಟಂ ಮನ್ಯಮಾನೋ ಜೀವ ಇಹ ಸಜ್ಜತೇ ॥

'ಏವಂ ಸೃಷ್ಟ್ವಾ' ಎಂಬಲ್ಲಿಂದ 'ಆತ್ಮಪ್ರದ್ಯೋತಿತೈಃ ಪ್ರಭುಃ' ಎಂಬಲ್ಲಿವರೆಗೆ ಭಗವಂತನ ಬಗ್ಗೆ ಹೇಳಿದೆ. 'ಹೀಗೆ ವಿಷಯಗಳಲ್ಲಿರುವ ಸ್ವಾಖ್ಯ ರಸವನ್ನೇ ಸರ್ವಶಕ್ತನಾದ ಭಗವಂತ ಉಣ್ಣುತ್ತಾನೆ' ಎಂದರ್ಥ. 'ಮನ್ಯಮಾನ ಇದಂ ಸೃಷ್ಟಮಾತ್ಮಾನಮಿಹ ಸಜ್ಜತೇ' ಎನ್ನುವುದಕ್ಕೆ ಆ ಪರಮಾತ್ಮನನ್ನು ದೇಹದಲ್ಲಿ ಸೃಷ್ಟನಾದ ಜೀವಚೈತನ್ಯನೆಂದು ತಿಳಿಯುವವನು, ಪರಮಾತ್ಮನೇ ಜೀವನಾಗಿ ಹುಟ್ಟಿ ಸಂಸಾರದಲ್ಲಿ ನರಕದಲ್ಲಿ ದುಃಖವನ್ನು ಅನುಭವಿಸುವನು ಎಂದು ಜೀವಬ್ರಹ್ಮೈಕ್ಯವನ್ನು ತಿಳಿಯುವವನು ಈ ನಿತ್ಯನರಕದಲ್ಲಿಯೇ ಬೀಳುತ್ತಾನೆ ಎಂದರ್ಥ.

ಭಾಗವತಕ್ಕೆ ಹೀಗೆ ವ್ಯಾಖ್ಯಾನಮಾಡಲು ವರಾಹಪುರಾಣ ವಚನವು ಆಧಾರವಾಗಿದೆ.

ಶರೀರೇ ದೋಷಹಾನೇನ ಗುಣಭೋಕ್ತಾರಮೀಶ್ವರಂ ।
ಶರೀರಸ್ಥತಯಾ ಜೀವಂ ಮನ್ಯಮಾನಃ ಪತತ್ಯಧಃ ।
ತತ್ಸೃಷ್ಟಾ ಹಿ ಸದಾ ಜೀವಾ ದೇಹಾದೇರ್ಜನಿಮತ್ತ್ವತಃ ।
ನಿತ್ಯಾನಂದೈಕದೇಹೋಽಸೌ ವಿಷ್ಣುಸ್ತತ್ ಕ್ವೈಕತಾಽನಯೋಃ ।
ಇತಿ ಚ ॥

'ಶರೀರದಲ್ಲಿ ನಿಯಾಮಕನಾಗಿದ್ದು ದೋಷಗಳನ್ನು ಬಿಟ್ಟು ಗುಣಗಳನ್ನು ಮಾತ್ರ ಅನುಭವಿಸುವ ಸರ್ವಶಕ್ತನಾದ ಪರಮಾತ್ಮನನ್ನು ಅವನು ಶರೀರದಲ್ಲಿದ್ದ ಮಾತ್ರಕ್ಕೆ ಜೀವನೇ ಎಂದು ತಿಳಿಯುವವನು ಅಧೋಗತಿಯನ್ನು ಹೊಂದುವನು. ಏಕೆಂದರೆ ಜೀವರು ಯಾವಾಗಲೂ ಪರಮಾತ್ಮನಿಂದ ಸೃಷ್ಟರಾಗುವವರು. ಅವರ ದೇಹಾದಿಗಳಿಗೆ ಉತ್ಪತ್ತಿ ಇರುವುದರಿಂದ ಅವರಿಗೆ ಅದರಿಂದ ಕಿಂಚಿದ್ ವಿಕಾರವಿದ್ದೇ ಇದೆ. ಆದರೆ ವಿಷ್ಣು ನಿತ್ಯವೂ ಆನಂದ ಮಾತ್ರ ಸ್ವರೂಪವಾದ ದೇಹಉಳ್ಳವನು. ಅದರಿಂದ ಅವರಿಬ್ಬರಿಗೆ ಐಕ್ಯವೆಲ್ಲಿಯದು?' ಎಂದು.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಅಂತರಿಕ್ಷ ಮಹಾಮುನಿ ಜೀವಬ್ರಹ್ಮೈಕ್ಯ ಉಪಾಸನೆಯಿಂದ ಅನರ್ಥ ಉಂಟಾಗುವುದೆನ್ನುತ್ತಾರೆ—

ಇತ್ಥಂ ಕರ್ಮಗತೀರ್ಗಚ್ಛನ್ ಬಹ್ವಭದ್ರಾವಹಃ ಪುಮಾನ್ ।
ಆಭೂತಸಂಪ್ಲವಾತ್ಸರ್ಗಪ್ರಲಯಾವಶ್ನುತೇಽವಶಃ ॥ ೭ ॥

ಇಂಥ ಜೀವನಿಂದ ಪರಮಾತ್ಮನಿಗೆ ಅಭೇದವನ್ನು ತಿಳಿಯುವ ಜೀವನು ಕರ್ಮಾನುಸಾರ ಬಲು ದುಃಖಮಯವಾದ ನಾನಾ ಶರೀರಗಳನ್ನು ಜಗತ್‌ಪ್ರಳಯ ಪರ್ಯಂತ ಪಡೆಯುತ್ತ ಪರವಶತೆಯಿಂದ ಜನನ ಮರಣಗಳನ್ನು ಹೊಂದುತ್ತಾನೆ. ಕೊನೆಯಲ್ಲಿ ಪರವಶತೆಯಿಂದ ಅಂಧಂತಮಸ್ಸಿನಲ್ಲಿ ಬೀಳುತ್ತಾನೆ.

[1]'ಹೀಗೆ ಜೀವನು ಕರ್ಮಾಧೀನವಾಗಿ ಅನೇಕ ಅಮಂಗಳ ಗತಿಗಳನ್ನು ಹೊಂದುತ್ತ ಮಹಾಪ್ರಳಯದವರೆಗೂ ಪ್ರಕೃತಿಗೆ ವಶನಾಗಿ ಜನನ ಮರಣಗಳನ್ನು ಹೊಂದುತ್ತಾನೆ'–ಇದು ಬೇರೆ ವ್ಯಾಖ್ಯಾನಕಾರರು ನೀಡುವ ವಿವರಣೆ.

ಹಿಂದೆ ಗುಣೈರ್ಗುಣಾನ್ ಎಂಬ ಶ್ಲೋಕದಲ್ಲಿ ಜೀವಬ್ರಹ್ಮೈಕ್ಯ ವಾದಿಯು 'ಇಹ ಸಜ್ಜತೇ' ನರಕದಲ್ಲಿ ಬೀಳುತ್ತಾನೆ, ಎಂದಿದೆ. ಬಳಿಕ ಕರ್ಮಾಣಿ ಕರ್ಮಭಿಃ ಎಂಬ ಶ್ಲೋಕದಲ್ಲಿ 'ಭ್ರಮತೀಹ ಸುಖೇತರಂ' ಅಂದರೆ, ವಿಜಯಧ್ವಜೀಯದಲ್ಲಿ ಹೇಳುವಂತೆ, 'ಸುಖೇತರಂ ದುಃಖಂ ಭ್ರಮತಿ' ದುಃಖವನ್ನು ಉಣಲೆಂದೇ ಸಂಸಾರದಲ್ಲಿ ಸುತ್ತುತ್ತಾನೆ, ವೀರರಾಘವವ್ಯಾಖ್ಯಾನದಲ್ಲಿ ಹೇಳಿದಂತೆ, 'ದುಃಖೋದರ್ಕಂ ಯಥಾ ಭವತಿ ತಥಾ ಭ್ರಮತಿ' ದುಃಖಫಲವೇ ಉಂಟಾಗುವಂತೆ ನಾನೇ ಸ್ವತಂತ್ರ ಪರಮಾತ್ಮನೆಂಬ ಉಪಾಸನರೂಪ ಭ್ರಮೆಯಲ್ಲಿ ಮುಳುಗುತ್ತಾನೆ ಎಂದಿದೆ. ಇದೀಗ 'ಬಹು ಅಭದ್ರ ಆವಹ'ನಾಗಿ ಪರವಶನಾಗಿ ಅಸಹಾಯಕತೆಯಿಂದಲೇ ಮಹಾಪ್ರಳಯ ಪರ್ಯಂತವೂ ಜನನಮರಣಗಳಿಗೊಳಗಾಗಿ ಕೊನೆಯಲ್ಲಿ ಅವಶನಾಗಿಯೇ ತಮಸಿನಲ್ಲಿ ಬೀಳುತ್ತಾನೆ ಎಂದಿದೆ.

ಈ ಮೂರು ಶ್ಲೋಕಗಳ ಶಬ್ದಪ್ರಯೋಗ ಸ್ವಾರಸ್ಯವನ್ನು ಉದ್ದೇಶಪೂರ್ವಕವಾಗಿ ಬೇರೆ ವ್ಯಾಖ್ಯಾನಕಾರರು ಕಡೆಗಣಿಸಿದಂತೆ ಕಾಣುತ್ತದೆ. 'ಇಹ ಸಜ್ಜತೇ' ಸಂಸಾರದಲ್ಲಿಯೇ ಮುಳುಗುತ್ತಾನೆ ಮೋಕ್ಷ ಪಡೆಯುವುದಿಲ್ಲ ಎಂದಿದ್ದಾರೆ.

---

1. ಕಥಂಭೂತಂ ಕರ್ಮಫಲಂ ಸುಖೇತರಂ ಸುಖದುಃಖಾತ್ಮಕಂ । ಕಿಯಂತಂ ಕಾಲಂ ಭ್ರಮತಿ ತದಾಹ ಇತ್ಥಮಿತಿ। ಬಹೂನ್ಯಭದ್ರಾಣಿ ವಹಂತೀತಿ ತಥಾ ತಾಃ ಸರ್ಗಪ್ರಲಯಾವುತ್ಪತ್ತಿ-ಮರಣೇ। -ಶ್ರೀಧರಃ

ಅವಶಃ ಪ್ರಕೃತ್ಯಧೀನಃ। -ರಾಧಾರಮಣದಾಸ

ಕರ್ಮಾಣಿ ಪುಣ್ಯಪಾಪಾತ್ಮಕಾನಿ। ಸುಖೇತರಂ ದುಃಖೋದರ್ಕಂ ಯಥಾ ಭವತಿ ತಥಾ ಭ್ರಮತಿ। -ವೀರರಾಘವಃ

ಸುಖೇತರಂ ಸುಖದುಃಖಾತ್ಮಕಂ ಕರ್ಮಫಲಂ ಪ್ರಾಪ್ನುವನ್ ರಮತ ಇತಿ ನಾರಕಯೋನಾವಪಿ ರಮಣದರ್ಶನಾತ್ । -ವಿಶ್ವನಾಥಃ

ಸಂಸಾರದಲ್ಲಿಯೂ 'ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ' 'ಚಕ್ರಾರಪಂಕ್ತಿರಿವ ಗಚ್ಛತಿ ಭಾಗ್ಯಪಂಕ್ತಿಃ' ಎನ್ನುವಂತೆ ದುಃಖದ ನಡುವೆ ಸುಖವೂ ಇದೆ. ನರಕದಲ್ಲಿಯೂ ಸುಖವಿಲ್ಲದಿಲ್ಲ. 'ಕರ್ಮಫಲಂ ಪ್ರಾಪ್ನುವನ್ ರಮತೇ' ಎಂದು ವಿಶ್ವನಾಥ ವ್ಯಾಖ್ಯಾನದಲ್ಲಿದೆ. ಪ್ರಾಯಃ ಈ ವ್ಯಾಖ್ಯಾನ ಪ್ರಕಾರ 'ಭ್ರಮತೀಹ' ಎಂಬಲ್ಲಿ 'ರಮತೀಹ' ಎಂದು ಪಾಠವಿರಬಹುದು. ಪರಸ್ಮೈಪದವನ್ನು ಆರ್ಷ ಎಂದು ಗ್ರಹಿಸಿರಬಹುದು. 'ಅವಶಃ' ಎಂಬುದಕ್ಕೆ 'ಪ್ರಕೃತಿಗೆ ವಶನಾಗಿ' ಎಂದು ವಿವರಣೆ ನೀಡಿದ್ದಾರೆ. ಆದರೆ ಸಂಸಾರದಲ್ಲಿ ಪ್ರಕೃತಿಗೆ ವಶನಾಗಿ ಸುಖದುಃಖಗಳನ್ನು ಅನುಭವಿಸುವುದು ಸಹಜವೆ. ಜನನ ಮರಣಗಳೂ ಇಷ್ಟವಾಗಬಹುದು.

ಇಷ್ಟ್ವೇಹ ದೇವತಾ ಯಜ್ಞೈರ್ಗತ್ವಾ ರಂಸ್ಯಾಮಹೇ ದಿವಿ
ತಸ್ಯಾಂತ ಇಹ ಭೂಯಾಸ್ಮ ಮಹಾಶಾಲಾ ಮಹಾಕುಲಾಃ (ಭಾಗ.11.21.33)

'ನಾವುಗಳು ಈ ಲೋಕದಲ್ಲಿ ಯಜ್ಞಮಾಡಿ ಸ್ವರ್ಗಕ್ಕೆ ಹೋಗೋಣ. ಅಲ್ಲಿ ಸುಖ ಅನುಭವಿಸಿದ ಬಳಿಕ ತಿರುಗಿ ಪುಣ್ಯಶೇಷದಿಂದ ಭೂಮಿಯಲ್ಲಿ ಆಗರ್ಭ ಶ್ರೀಮಂತರಾಗಿ ಜನಿಸಿ ದೊಡ್ಡ ದೊಡ್ಡ ಯಾಗವನ್ನು ಮಾಡೋಣ' ಎಂದು ಹಗಲುಗನಸು ಕಾಣುತ್ತ, ಜನನ ಮರಣಗಳು ಪ್ರಕೃತಿವಶದಿಂದ ಬರುತ್ತಿದ್ದರೂ ಅವುಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. 'ಬಹು ಅಭದ್ರಾವಹ' ಎಂದರೂ ಅನೇಕ ದುಃಖಗಳನ್ನೂ ಈ ಜನ್ಮ ಮರಣಗಳಲ್ಲಿ ಅನುಭವಿಸುವುದು ಇದ್ದೇ ಇದೆ ಎಂದು ಕಡೆಗಣಿಸುತ್ತಾರೆ. ಆದರಿಂದ ಅದ್ವೈತ ಉಪಾಸನೆಯ ಮಹಾಅಪರಾಧಕ್ಕೆ ಸಂಸಾರದಲ್ಲಿ ಭ್ರಮಣ ಶಿಕ್ಷೆಯೆನಿಸಲಾರದು.

ವಸ್ತುತಃ 'ಅವಶಃ' ಪರಮಾತ್ಮನ ಅಧೀನನಾಗಿ 'ಬಹು ಅಭದ್ರಾವಹ' ಅನಂತ ದುಃಖವನ್ನೇ ತಾಮಸಪ್ರಕೃತಿಯು ಅನುಭವಿಸುತ್ತಾನೆ, ಅಸಹಾಯಕತೆಯಿಂದ ಆ ದುಃಖವನ್ನು ದ್ವೇಷಿಸುತ್ತಾನೆ. ಹತಾಶನಾಗಿ ಇದು ಅನ್ಯಾಯ ಎನ್ನುತ್ತಾನೆ. ಉದಾಹರಣೆಗೆ, ದುರ್ಯೋಧನ ರಣರಂಗದಲ್ಲಿ ತೊಡೆ ಮುರಿದು ಬಿದ್ದಾಗ, ಕೈಗಳಿಂದ ನೆಲವನ್ನು ಆಧರಿಸಿ ಪೃಷ್ಠ ಊರಿ, ಅರ್ಧವೇ ಎತ್ತಿದ ಶರೀರ, ಹುಬ್ಬು ಗಂಟಿಕ್ಕಿದ ಕ್ರೂರದೃಷ್ಟಿಯಿಂದ ಕೃಷ್ಣನ ಕಡೆಗೆ ನೋಡುತ್ತ ಬಾಲಕಡಿದ ಕ್ರುದ್ಧಸರ್ಪನಂತೆ ಪ್ರಾಣಾಂತಕಾರಿಯಾದ ಘೋರವೇದನೆಯನ್ನೂ ಸಹಿಸಲಾರದೆ ಕೃಷ್ಣನನ್ನು ಆಕ್ಷೇಪಿಸುತ್ತಾನೆ, 'ಪಾಪಿ, ಪಾಪಕ್ಕೆ ಹೇಸದವನು, ಲಜ್ಜೆಗೆಟ್ಟವನು, ಸ್ವಧರ್ಮನಿಷ್ಠರಾದ ನಮ್ಮನ್ನೆಲ್ಲ ಮೋಸದಿಂದ ಕೊಲ್ಲಿಸಿರುವೆ' ಎನ್ನುತ್ತಾನೆ. ಅದಕ್ಕೆ ಶ್ರೀಕೃಷ್ಣ ಒಂದೇ ಮಾತನ್ನಾಡುತ್ತಾನೆ, 'ಪಾಪಿ! ಪಾಪದ ಫಲ ಉಣ್ಣುವೆ' ಎಂದು. (ಶಲ್ಯ ಪರ್ವ 62.58)

ಭಾಗವತ ಶ್ಲೋಕದಲ್ಲಿ 'ಆಭೂತ ಸಂಪ್ಲವಾತ್ ಸ್ವರ್ಗ' ಎನ್ನುವ ಮೂರನೇ ಪಾದ ವರಾಹಪುರಾಣದ-

ಆಭೂತಸಂಪ್ಲವಾಜ್ಜನ್ಮ ಜೀವೇಶತ್ವಂ ವಿಜಾನತಃ

ಎಂಬ ಮಾತನ್ನು ನೆನಪಿಸುವ ಮೂಲಕ ವರಾಹಪುರಾಣದ ಅಭಿಪ್ರಾಯವೇ ತನ್ನ ಅಭಿಪ್ರಾಯವೆಂದು ಸೂಚಿಸುತ್ತಿದೆ.

ಆಭೂತ ಸಂಪ್ಲವಾಜ್ಜನ್ಮ ಜೀವೇಶತ್ವಂ ವಿಜಾನತಃ ।
ತತಃ ಪತತ್ಯಧೋ ಯಸ್ಮಾದುತ್ಥಾನಂ ನೈವ ತು ಕ್ವಚಿತ್ ॥ ಇತಿ ಚ ॥

ಜೀವನನ್ನು ಈಶನೆಂದು ಉಪಾಸನ ಮಾಡುವವನಿಗೆ ಮಹಾಪ್ರಳಯದವರೆಗೆ ಜನ್ಮ ಮರಣಗಳಿರುತ್ತವೆ. ಬಳಿಕ ಅವನು ತಮಸಿನಲ್ಲಿ ಬೀಳುವನು. ಅಲ್ಲಿಂದ ಎಂದೂ ಬಿಡುಗಡೆ ಇರುವುದೇ ಇಲ್ಲ ಎಂದೂ ವರಾಹಪುರಾಣದಲ್ಲಿದೆ.

❖ ❖ ❖

~~ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಅಂತರಿಕ್ಷ ಮಹಾಮುನಿ~~ ಭಗವಂತನು ನಡೆಸುವ ಮಹಾಪ್ರಳಯವನ್ನು ಸಂಕ್ಷೇಪವಾಗಿ ಹೇಳುತ್ತಾರೆ.

ಧಾತೂಪಪ್ಲವ ಆಸನ್ನೇ ವ್ಯಕ್ತಂ ದ್ರವ್ಯಗುಣಾತ್ಮಕಮ್ ।
ಅನಾದಿನಿಧನಃ ಕಾಲೋ ಹ್ಯವ್ಯಕ್ತಾಯ ವಿಕರ್ಷತಿ ॥ ೮ ॥

ಉತ್ಪತ್ತಿ ನಾಶರಹಿತನಾದ ಪ್ರಳಯಕಾರಕನಾದ ಕಾಲನಾಮಕ ಶ್ರೀಹರಿ ಪಂಚ ಭೂತ ಲಯಕಾಲ ಬಂದಾಗ ಪಂಚಭೂತದ್ರವ್ಯ ಮತ್ತು ಶಬ್ದಾದಿ ಗುಣಮಯವಾದ ವ್ಯಕ್ತವಾದ ಬ್ರಹ್ಮಾಂಡವನ್ನು ಅವ್ಯಕ್ತಾವಸ್ಥೆಗೆ ಸೆಳೆಯಲು ಸಂಕಲ್ಪಿಸುತ್ತಾನೆ.

ಮಾಯಾಮಯವಾದ ಸೃಷ್ಟಿಯನ್ನು ಹೇಳಿ ಮುಂದೆ ಮಾಯಾಮಯವಾದ ಪ್ರಳಯವನ್ನು ಹೇಳುತ್ತಿದ್ದಾರೆ ಎಂದು ಶ್ರೀಧರವ್ಯಾಖ್ಯಾನ ಹೇಳುತ್ತಿದೆ. ಆದರೆ ಭಾಗವತದಲ್ಲಿ 'ಅನಾದಿನಿಧನ' ಆದ್ಯಂತಶೂನ್ಯವಾದ ಕಾಲವು ಲಯ ಮಾಡುತ್ತದೆ ಎಂದು ಹೇಳುತ್ತಿದೆ. ಕಾಲವು ಮಾಡುವ ಸೃಷ್ಟಿಲಯಗಳು ಮಾಯಾಮಯವೆನಿಸುವುದು ಹೇಗೆ ಎಂದು ಶ್ರೀಧರವ್ಯಾಖ್ಯಾನ ಹೇಳಿಲ್ಲ, ಬೇರೆ ವ್ಯಾಖ್ಯಾನಗಳೂ ಹೇಳಿಲ್ಲ.[1]

---

1. ಅನಾದಿನಿಧನಃ ಆದ್ಯಂತ ಶೂನ್ಯಃ ಕಾಲಃ । -ಶುಕದೇವ
ಅನಾದಿನಿಧನಃ ಆದ್ಯಂತಶೂನ್ಯಃ ಕಾಲಃ ಕಾಲಶರೀರಕಃ ಪರಮಪುರುಷಃ । -ವೀರರಾಘವ
ಏವಂ ಮಾಯಾಮಯೀಂ ಸೃಷ್ಟಿಮುಕ್ತ್ವಾ ತನ್ಮಯಂ ಪ್ರಲಯಮಾಹ । -ಶ್ರೀಧರಸ್ವಾಮಿ

ಮಾಯೆ ಎಂದರೆ ಭಗವಂತನ ಇಚ್ಛೆ ಎಂದಿಟ್ಟುಕೊಂಡರೆ, 'ಕಾಲಃ ಕಾಲಶರೀರಕಃ ಪರಮಪುರುಷಃ' ಎಂದು ವೀರರಾಘವ ವ್ಯಾಖ್ಯಾನ ಹೇಳುವಂತೆ ಕಾಲಶರೀರಕನಾದ ಪರಮಾತ್ಮನೇ ಲಯಮಾಡುತ್ತಾನೆ ಎಂದಾಗುವುದರಿಂದ ಭಗವದಿಚ್ಛೆಯಿಂದಾಗುವ ಲಯ ಮಾಯಾಮಯವಾಗಬಹುದು. ಆದರೆ ಆದ್ಯಂತ ಉಳ್ಳ ಕಾಲ ಶರೀರಕನಾದ ಪರಮಾತ್ಮ ಆದ್ಯಂತ ಶೂನ್ಯನೆನಿಸುವುದು ಹೇಗೆ ಎಂಬ ಪ್ರಶ್ನೆ ಬರುತ್ತದೆ. 'ಸರ್ವೇ ನಿಮೇಷಾ ಜಜ್ಞಿರೇ' ಇತ್ಯಾದಿ ಶ್ರುತಿ ಇರುವುದರಿಂದ ನಿಮೇಷ ಕ್ಷಣ ದಿನ ಸಂವತ್ಸರ ಯುಗಾದಿ ಸರ್ವಕಾಲವೂ ಆದಿಅಂತ್ಯಗಳುಳ್ಳದೇ ಆಗಿರುವಾಗ ತಚ್ಛರೀರಕನಾದ ಪರಮಾತ್ಮನೂ ಆದ್ಯಂತ ಉಳ್ಳವನೆ ತಾನೆ? ಜೀವರು ಸ್ವರೂಪದಿಂದ ಆದ್ಯಂತ ರಹಿತರಾದರೂ ಅವರ ಶರೀರಗಳು ಆದ್ಯಂತ ಉಳ್ಳವುಗಳಾದ್ದರಿಂದ ತಾನೇ ಅವರು ಆದ್ಯಂತ ಉಳ್ಳವರು?

ಬೇರೆ ವ್ಯಾಖ್ಯಾನಕಾರರ ಪ್ರಕಾರ ಬೇರೆ ಆದ್ಯಂತಶೂನ್ಯವಾದ ಮಹಾಕಾಲ ವೆಂಬುದಿದೆ. ಆದರೆ ಸೃಷ್ಟಿಸ್ಥಿತಿಲಯಗಳಿಗೆ ಈ ಮಹಾಕಾಲ ಕಾರಣವೆನ್ನಲಾಗುವುದಿಲ್ಲ, ಅದು ಸದಾ ಇರುವುದರಿಂದ ಸೃಷ್ಟ್ಯಾದಿಗಳೂ ಸದಾ ಆಗುವ ಪ್ರಸಂಗ ಬರುತ್ತದೆ. ಅದ್ವೈತದಲ್ಲಿ ಪರಬ್ರಹ್ಮ ಹೊರತು ಬೇರೆ ಎಲ್ಲವೂ ಮಿಥ್ಯಾ, ಆದ್ಯಂತ ಉಳ್ಳದ್ದೇ ಆಗಿರುವುದರಿಂದ ಮಹಾಕಾಲವೂ ಆದ್ಯಂತ ಶೂನ್ಯವಾಗಲಾರದು.

ಹೀಗಾಗಿ ಲಯವು ಆದ್ಯಂತ ಶೂನ್ಯವಾದ ಕಾಲದಿಂದಾಗುವುದು ಹೇಗೆ? ಮಾಯಾಮಯ ವೆನಿಸುವುದು ಹೇಗೆ? ಎನ್ನುವ ಸಮಸ್ಯೆಗೆ ಪರಿಹಾರವನ್ನು ಶ್ರೀಮದಾಚಾರ್ಯರು ಹೇಳುತ್ತಾರೆ.

ಮಾಯೆ ಎಂದರೆ ಭಗವಂತನ ಇಚ್ಛೆ. ಅದರ ಸಾಮರ್ಥ್ಯವನ್ನು ತಿಳಿಯಲು ಬಯಸಿದ ನಿಮಿರಾಜ ಹೇಳುತ್ತಾನೆ, 'ಮಾಯಾಂ ವೇದಿತುಮಿಚ್ಛಾಮಃ' ಎಂದು. ಅದಕ್ಕೆ ಅಂತರಿಕ್ಷಮುನಿ ಭಗವಂತನು ಮಾಡುವ ಸೃಷ್ಟಿ ಸ್ಥಿತಿಲಯಗಳನ್ನು ವರ್ಣಿಸಿ ಕೊನೆಯಲ್ಲಿ ಈ ಸೃಷ್ಟಿಸ್ಥಿತಿಲಯಗಳಿಗೆ ಕಾರಣ ಮಾಯೆ, ಭಗವಂತನ ಇಚ್ಛೆ. 'ಏಷಾ ಮಾಯಾ ಭಗವತಃ ಸರ್ಗಸ್ಥಿತ್ಯಂತಕಾರಿಣೀ' ಎಂದು ಉಪಸಂಹಾರ ಮಾಡುತ್ತಾರೆ. ಅದ್ದರಿಂದ ಪ್ರಕೃತದಲ್ಲಿ ಲಯಕಾರಣವಾದ ಅನಾದಿನಿಧನಕಾಲ ವೆಂದರೆ ಭಗವಂತನೇ ಹೊರತು ಜಡವಾದ ಕಾಲವಲ್ಲ, ಜಡಕಾಲ ನಿಮಿತ್ತ ಮಾತ್ರ. ಲಯ ಕರ್ತನು ಕಾಲನಾಮಕನಾದ ಕಾಲನಿಯಾಮಕನಾದ ಭಗವಂತನೆ. ಕಾಲನವೆಂದರೆ ಪ್ರಳಯ. ಪ್ರಳಯಕಾರಿಯಾದ್ದರಿಂದ ಭಗವಂತ ಕಾಲನಾಮಕ. ಅವನ ಸನ್ನಿಧಾನ ದಿಂದ ಜಡಕಾಲ ಕಾಲವೆನಿಸುತ್ತದೆ. ಜಡಕಾಲ ಆದ್ಯಂತ ಉಳ್ಳದ್ದಾದರೂ ಅದಕ್ಕೆ

ನಿಯಾಮಕನಾದ ಕಾಲನಾಮಕ ಪರಮಾತ್ಮ ಆದ್ಯಂತ ಶೂನ್ಯನೆ. ಅವನು ಕಾಲ ಶರೀರಕನಲ್ಲ, ಅದರಿಂದ ಶರೀರದ ಉತ್ಪತ್ತಿನಾಶಗಳಿಂದ ಶರೀರಿಯಾದ ಭಗವಂತನಿಗೆ ಉತ್ಪತ್ತಿನಾಶವನ್ನು ಹೇಳಲು ಬರುವುದಿಲ್ಲ, ಲಯಕಾರಕನಾದ್ದರಿಂದ ಅವನು ಕಾಲನಾಮಕನೆನ್ನುವುದು ವರಾಹಪುರಾಣದಲ್ಲಿ ಉಕ್ತವಾಗಿದೆ.

ಕಾಲಾಖ್ಯಃ ಕಾಲನಾದ್ ವಿಷ್ಣುರ್ವ್ಯಕ್ತಮವ್ಯಕ್ತತಾಂ ನಯನ್ ॥

ಇತಿ ಚ ॥

ಪಂಚಭೂತಾತ್ಮಕವಾದ ಬ್ರಹ್ಮಾಂಡವನ್ನು ಪ್ರಕೃತಿಯಲ್ಲಿ ಲಯಗೊಳಿಸುವ ವಿಷ್ಣುವೆ ಪ್ರಳಯ ಮಾಡುವುದರಿಂದ ಕಾಲನಾಮಕನೆನಿಸುತ್ತಾನೆ ಎಂದು ವರಾಹಪುರಾಣದಲ್ಲಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಅಂತರಿಕ್ಷ ಮಹಾಮುನಿ ಮಹಾಪ್ರಳಯದಲ್ಲಿ ನಡೆಯುವ ಬ್ರಹ್ಮಾಂಡಲಯವನ್ನು ಹೇಳುತ್ತಾರೆ.

ತತೋ ವಿರಾಜಮುತ್ಸೃಜ್ಯ ವೈರಾಜಃ ಪುರುಷೋ ನೃಪ ।
ಅವ್ಯಕ್ತಂ ವಿಶತೇ ಸೂಕ್ಷ್ಮಂ ನಿರಿಂಧನ ಇವಾನಲಃ ॥ ೧೨ ॥

ರಾಜನೆ, ಬ್ರಹ್ಮಾಂಡಾಂತರ್ಗತನಾದ ಪುರುಷನಾಮಕ ಬ್ರಹ್ಮ ನೀರಲ್ಲಿ ಮುಳುಗಿದ ಬ್ರಹ್ಮಾಂಡವೆಂಬ ತನ್ನ ಶರೀರವನ್ನು ಬಿಟ್ಟು ಸೂಕ್ಷ್ಮ ಅವ್ಯಕ್ತನಾದ ಪರಬ್ರಹ್ಮ ನಾರಾಯಣನನ್ನು ಪ್ರವೇಶಿಸುತ್ತಾನೆ. ಕಟ್ಟಿಗೆ ಉರಿದು ಹೋದ ಬಳಿಕ ಅಲ್ಲಿದ್ದ ಬೆಂಕಿ ಸೂಕ್ಷ್ಮ ಅವ್ಯಕ್ತವಾದ ಪ್ರಧಾನಾಗ್ನಿಯನ್ನು ಸೇರುವಂತೆ.

ಈ ಮೊದಲನೇ ಶ್ಲೋಕದಲ್ಲಿ ಬ್ರಹ್ಮಾಂಡಲಯವನ್ನೂ ಚತುರ್ಮುಖನು ಪರಮಾತ್ಮನನ್ನು ಪ್ರವೇಶಿಸುವುದನ್ನೂ ಸಂಕ್ಷೇಪವಾಗಿ ಹೇಳಿದೆ. ಮುಂದೆ ನಾಲ್ಕು ಶ್ಲೋಕಗಳಲ್ಲಿ ಇದರದೇ ವಿವರಣೆ.

ಆದರೆ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ, ಈ ಶ್ಲೋಕದಲ್ಲಿ ಚೇತನ ಲಯವನ್ನೂ ಮುಂದಿನ ನಾಲ್ಕು ಶ್ಲೋಕಗಳಲ್ಲಿ ಜಡಲಯವನ್ನೂ ಹೇಳಿದೆ ಎಂದು. ಆಯಾ ಅಭಿಮಾನಿಗಳೊಂದಿಗೇ ಜಡಗಳಿಗೆ ಸೃಷ್ಟಿಲಯಗಳಾಗುವುದರಿಂದ ಇದನ್ನು ಒಪ್ಪಲಾಗದು.

ಚೇತನಲಯವೂ ಜಡಲಯದಂತೆಯೇ ಜಡಪ್ರಕೃತಿಯಲ್ಲಿ ಎಂದು ಬೇರೆ

ವ್ಯಾಖ್ಯಾನಕಾರರು ಹೇಳುತ್ತಿದ್ದಾರೆ. ಅಜ್ಞಾನಿಗಳಂತೆ ಜ್ಞಾನಿಗಳೂ ಜಡಪ್ರಕೃತಿಯಲ್ಲಿ ಲಯ ಹೊಂದಿದರೆ ಮುಂದೆ ಸೃಷ್ಟಿಯಲ್ಲಿ ಅವರೂ ಸಂಸಾರದಲ್ಲಿ ಹುಟ್ಟಬೇಕಾಗುವುದರಿಂದ ಇದನ್ನೂ ಒಪ್ಪಲಾಗದು.

'ಬ್ರಹ್ಮಾಂಡವು ಪ್ರಳಯ ಸಮುದ್ರದಲ್ಲಿ ಮುಳುಗಿದಾಗ ಉಪಾಧಿಲಯ ಹೊಂದಿದ ಬ್ರಹ್ಮ ಸೌದೆಯಿಲ್ಲದ ಬೆಂಕಿಯಂತಾಗಿ ಸೂಕ್ಷ್ಮ ಪ್ರಕೃತಿಯಲ್ಲಿ ಲಯ ಹೊಂದುತ್ತಾನೆ' ಎಂದು ಶ್ರೀಧರವ್ಯಾಖ್ಯಾನದಲ್ಲಿ ಹೇಳಿದೆ. ತ್ರಿಮೂರ್ತಿಗಳು ತ್ರಿಗುಣಗಳಿಂದಾಗಿರುವ ಪರಮಾತ್ಮನ ಮೂರು ರೂಪಗಳೆಂದು ಹೇಳುವ ಮತದಲ್ಲಿ ಬ್ರಹ್ಮನಿಗೆ ಲಯವನ್ನು ಒಪ್ಪಲಾಗದು.

ವೀರರಾಘವವ್ಯಾಖ್ಯಾನ ಪ್ರಕಾರ 'ಚತುರ್ಮುಖನು ಸಮಷ್ಟಿ ಜೀವನಾಗಿರುವುದರಿಂದ ಜೀವವರ್ಗಗಳೆಲ್ಲವೂ ಪ್ರಳಯ ಜಲದಲ್ಲಿ ಮುಳುಗಿದ ಬ್ರಹ್ಮಾಂಡವನ್ನು ಬಿಟ್ಟು ಸೌದೆಯಿಲ್ಲದ ಬೆಂಕಿಯಂತೆ ಜ್ಞಾನಸಂಕೋಚದಿಂದ ಶಾಂತವಾಗಿ ಸೂಕ್ಷ್ಮಾವಸ್ಥೆಯಿಂದ ಮೂಲಪ್ರಕೃತಿಯಲ್ಲಿ ಅಡಗಿ ಹೋಗುವುವು'. ಆದರೆ ಇದು ಸರಿಯಲ್ಲ.

ತೇ ಬ್ರಹ್ಮಲೋಕೇ ತು ಪರಾಂತಕಾಲೇ
ಪರಾಮೃತಾತ್ ಪರಿಮುಚ್ಯಂತಿ ಸರ್ವೇ ॥

'ಅಪರೋಕ್ಷಜ್ಞಾನಿಗಳು ಪರನಾಮಕ ಬ್ರಹ್ಮಾಯುಷ್ಯದ ಕೊನೆಯಲ್ಲಿ ನಿತ್ಯಮುಕ್ತನಾದ ಹರಿಯನ್ನು ಪ್ರವೇಶಿಸಿ ಮುಕ್ತರಾಗುತ್ತಾರೆ' ಎಂದು ಹೇಳುವ ಮಹಾನಾರಾಯಣೋಪನಿಷತ್ತಿನ ವಿರೋಧವಿರುವುದರಿಂದ ಇದನ್ನು ಒಪ್ಪಲಾಗದು.

[1]ಶ್ರೀಧರವ್ಯಾಖ್ಯಾನದಲ್ಲಿ ಇಲ್ಲಿ ತಾವೇ ಪ್ರಶ್ನೆ ಮಾಡಿಕೊಂಡು ಸಮಾಧಾನಗಳನ್ನು ಹೇಳಿದ್ದಾರೆ– ಪರಾಂತಕಾಲದಲ್ಲಿ ಜ್ಞಾನಿಗಳು ಪರಮಾತ್ಮನಲ್ಲಿ ಪ್ರವೇಶ ಮಾಡುವುದು,

---

1. ತತ ಉಪಾಧಿಲಯಾತ್ ವೈರಾಜಃ ಪುರುಷೋಽವ್ಯಕ್ತಂ ಕಾರಣಂ ಪ್ರವಿಶತಿ। ನನು, ಬ್ರಹ್ಮಣಾ ಸಹ ತೇ ಸರ್ವೇ ಸಂಪ್ರಾಪ್ತೇ ಪ್ರತಿಸಂಚರೇ । ಪರಸ್ಯಾಂತೇ ಕೃತಾತ್ಮಾನಃ ಪ್ರವಿಶಂತಿ ಪರಂ ಪದಂ ಇತಿ ಸ್ಮೃತೇಃ ಯಾವದಧಿಕಾರಮವಸ್ಥಿತಿರಾಧಿಕಾರಿಕಾಣಾಂ ಇತಿ ನ್ಯಾಯಾಚ್ಚ ವೈರಾಜ ಶಬ್ದಾಭಿಧೇಯಸ್ಯ ಬ್ರಹ್ಮಣಃ ಪರಮ ಭಾಗವತತ್ವಾನ್ಮೋಕ್ಷ ಏವ ಸಂಗಚ್ಛತೇ। ನಾನ್ಯೇಷಾಮಿವ ಕಾರಣ ಮಾತ್ರ ಪ್ರವೇಶಃ। ಸತ್ಯಂ। ಅಶ್ವಮೇಧಾದಿನಾ ಸತ್ಯಲೋಕಂ ಗತಾನಾಮಪ್ಯಭಕ್ತಾನಾಮಾವೃತ್ತಿಶ್ರವಣಾದಭಕತ್ತ್ವೇ ಚ ಬ್ರಹ್ಮಣೋಽಪಿ ಪ್ರಕೃತೌ ಲಯಃ ಪುನರುತ್ಪತ್ತಿಶ್ಚೇತಿ ಮೋಕ್ಷ ದೌರ್ಲಭ್ಯ ಸೂಚನಾಯೈವಮುಕ್ತಮಿತ್ಯವಿರೋಧಃ । ಯದ್ವಾ ಕೇನಾಪಿ ಪ್ರಮಾಣೇನ ನ ವ್ಯಜ್ಯತೇ ಇತ್ಯವ್ಯಕ್ತಂ ಬ್ರಹ್ಮೈವ। ತತ್‌ಪ್ರವೇಶೇನ ಚ ಮೋಕ್ಷ ಏವೋಕ್ತ ಇತಿ ದ್ರಷ್ಟವ್ಯಂ॥
-ಶ್ರೀಧರಃ

ಸ್ಮೃತಿಯಲ್ಲಿಯೂ 'ಯಾವದಧಿಕಾರಂ' ಎಂಬ ಸೂತ್ರದಲ್ಲಿಯೂ ಹೇಳಿರುವುದರಿಂದ, ಜಡಪ್ರಕೃತಿಯಲ್ಲಿ ಲಯ ಹೊಂದುವರೆನ್ನಲಾಗದು. ಬ್ರಹ್ಮನೂ ಜ್ಞಾನಿ, ಪರಮ ಭಗವದ್ಭಕ್ತ, ಅವನಿಗೆ ಮೋಕ್ಷವೇ ಯುಕ್ತ, ಪ್ರಕೃತಿಯಲ್ಲಿ ಲಯವೆಂದು ಭಾಗವತ ಹೇಳುವುದು ಯುಕ್ತವಾಗಲಾರದು ಎನ್ನುವ ಪ್ರಶ್ನೆಗೆ ಸಮಾಧಾನ ಹೀಗೆ ಅಶ್ವಮೇಧಾದಿಕರ್ಮಗಳಿಂದ ಸತ್ಯಲೋಕಕ್ಕೆ ಹೋದವರೂ ತಿರುಗಿ ಬರುವುದು ಕಂಡಿರುವುದರಿಂದ ಬ್ರಹ್ಮನೂ ಭಕ್ತನಾಗದಿದ್ದರೆ ಅವರಂತೇ ಹಿಂತಿರುಗಿ ಬರಬೇಕಾದೀತು ಎಂದು, ಮೋಕ್ಷ ದುರ್ಲಭ ಎಂದು ಹೇಳುವುದು ಭಾಗವತದ ಅಭಿಪ್ರಾಯ, ಅಥವಾ ಭಾಗವತದಲ್ಲಿ 'ಸೂಕ್ಷ್ಮ ಅವ್ಯಕ್ತ'ವೆಂದರೆ ಯಾವ ಪ್ರಮಾಣಗಳಿಗೂ ನಿಲುಕದ ಸೂಕ್ಷ್ಮ ಪರಮಾತ್ಮ. ಅವನನ್ನು ಬ್ರಹ್ಮ ಸೇರುತ್ತಾನೆ ಎಂದರ್ಥ ಎಂದು.

ವಿಶ್ವನಾಥಚಕ್ರವರ್ತಿ ಶುಕದೇವ ಮುಂತಾದ ವ್ಯಾಖ್ಯಾನಕಾರರು ಶ್ರೀಧರೀಯದಲ್ಲಿ ಹೇಳಿದ ಮೊದಲನೇ ಸಮಾಧಾನವನ್ನೇ ಒಪ್ಪಿಕೊಂಡು ಬೇರೆ ರೀತಿಯಲ್ಲಿ ಸಮರ್ಥನೆ ಮಾಡಿದ್ದಾರೆ—

[2]ಬ್ರಹ್ಮನೂ ಕರ್ಮಿ ಜ್ಞಾನಿ ಭಕ್ತನೆಂದು ಮೂರು ಬಗೆಯವನಿರಬಹುದು. ಕರ್ಮಿ ತಿರುಗಿ ಸಂಸಾರಕ್ಕೆ ಬರುತ್ತಾನೆ, ಜ್ಞಾನಿ ಮುಕ್ತಿ ಪಡೆಯುತ್ತಾನೆ, ಭಕ್ತ ಹರಿಗೆ ಪ್ರೀತಿಯ ಸೇವಕನಾಗುತ್ತಾನೆ ಎಂದು ವಿಶ್ವನಾಥವ್ಯಾಖ್ಯಾನ ಹೇಳಿದೆ.

[3]ಚತುರ್ಮುಖನು ಪರಮಾತ್ಮನ ಪುತ್ರನಾದ್ದರಿಂದ ಮೋಕ್ಷಯೋಗ್ಯನೇ ಆದರೂ ಪ್ರಪಂಚಸೃಷ್ಟಿಕಾರ್ಯಕ್ಕೆ ಅವನಂಥ ಇನ್ನೊಬ್ಬನು ಸಿಗುವವರೆಗೂ ಅವನೇ ಪುನಃಪುನಃ ಹುಟ್ಟಿಬರಬೇಕಾಗುತ್ತದೆ. ಅದರಿಂದಲೇ ದ್ವಿತೀಯಸ್ಕಂಧದಲ್ಲಿ ಬ್ರಹ್ಮ ಹಿಂದೆ ಮಾಡಿದ್ದ ಸೃಷ್ಟಿಯ ವೈಖರಿಯನ್ನು ಮರೆತಿದ್ದರಿಂದ ಪರಮಾತ್ಮನ ಅನುಗ್ರಹ

2. ಬ್ರಹ್ಮಣೋಽಪಿ ಕರ್ಮಿ ಜ್ಞಾನಿ ಭಕ್ತತ್ವೇನ ತ್ರೈವಿಧ್ಯಾತ್ ಕಸ್ಯಚಿತ್ ಪುನರಾವೃತ್ತಿಃ, ಕಸ್ಯಚಿನ್ಮುಕ್ತಿಃ, ಕಸ್ಯಚಿತ್ ಪ್ರೇಮವತ್ ಪಾರ್ಷದತ್ವ ಪ್ರಾಪ್ತಿಶ್ಚೇತಿ ದ್ರಷ್ಟವ್ಯಂ।
'ಆ ಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ' ಇತಿ,
'ವಿಪರ್ಯಯಶ್ಚ ಭವತಿ ಬ್ರಹ್ಮತ್ವ ಸ್ಥಾವರತ್ವಯೋಃ' ಇತಿ,
'ಬ್ರಹ್ಮಣಾ ಸಹ ತೇ ಸರ್ವೇ ಸಂಪ್ರಾಪ್ತೇ ಪ್ರತಿಸಂಚರೇ'
'ಪರಸ್ಯಾಂತೇ ಕೃತಾತ್ಮಾನಃ ಪ್ರವಿಶಂತಿ ಪರಂ ಪದಂ' ಇತ್ಯಾದಿ ವಚನೇಭ್ಯಃ ॥
- ವಿಶ್ವನಾಥಚಕ್ರವರ್ತೀ

3. ತಸ್ಯ ಭಗವತ್‌ಪುತ್ರತ್ವೇನ ಮುಕ್ತ್ಯಧಿಕಾರಿತ್ವೇಽಪಿ ಯಾವತ್ ತಾದೃಶೋಽನ್ಯೋ ನೋಪಲಭ್ಯತೇ ತಾವತ್ ಸ ಏವ ಪುನಃ ಪುನಃ ಸೃಷ್ಟ್ಯರ್ಥಮುತ್ಪತ್ತಿ ಸಂಹಾರೌ ಭಜತೇ ಇತಿ ಭಾವಃ। ಅತ ಏವ ದ್ವಿತೀಯೇ ಸ್ಕಂಧೇ–

ದಿಂದ ಸ್ಮರಣೆಗೆ ತಂದುಕೊಂಡು ಸೃಷ್ಟಿಮಾಡಿದನೆಂದಿದೆ. ಇದರಿಂದ ಸೃಷ್ಟಿಕಾರ್ಯಕ್ಕೆ ಯೋಗ್ಯನಾದ ವ್ಯಕ್ತಿ ಸಿಗದಿದ್ದುದು ಸ್ಪಷ್ಟವಾಗುತ್ತದೆ ಯೋಗ್ಯವ್ಯಕ್ತಿ ಸಿಕ್ಕಿದನೆಂದರೆ ಪರಾಂತಕಾಲದಲ್ಲಿ ಬ್ರಹ್ಮ ಪರಮಾತ್ಮನಲ್ಲಿ ಪ್ರವೇಶಿಸುತ್ತಾನೆ ಎನ್ನುವ ಸ್ಮೃತಿಯ ಅನುಸಾರ ಬ್ರಹ್ಮನಿಗೆ ಮೋಕ್ಷವೇ ಲಭಿಸುತ್ತದೆ, ಎಂದು ಶುಕದೇವ ವ್ಯಾಖ್ಯಾನ ಹೇಳಿದೆ.

'ಭೇದದೃಷ್ಟ್ಯಾಭಿಮಾನೇನ'(ಭಾಗ 3.33.12) ಎಂಬ ಶ್ಲೋಕದಲ್ಲಿ 'ಬ್ರಹ್ಮನು ಭಕ್ತನಾಗಿದ್ದರೂ ತಾನು ಸ್ವತಂತ್ರನೆಂದು ಅಥವಾ ಹರಿಗೆ ಸಮಾನನೆಂದು ಭೇದದೃಷ್ಟಿ ಅಭಿಮಾನಗಳಿಂದ ಕೂಡಿದವನಾದ್ದರಿಂದ ಲಯದಲ್ಲಿ ಪರಮಾತ್ಮನನ್ನು ಸೇರಿದರೂ ಪುನಃ ಸೃಷ್ಟಿಕಾಲ ಬಂದಾಗ 'ಯಥಾಪೂರ್ವಂ ಪ್ರಜಾಯತೇ' ಹಿಂದಿನಂತೆ ಜನ್ಮ ತಳೆಯುತ್ತಾನೆ, ಬ್ರಹ್ಮಪದವಿಗೆ ಏರುತ್ತಾನೆ', ಎಂದಿದೆ ಎಂದು ಕೃಷ್ಣಪ್ರಜ್ಞಾಸಂಘದ ಭಾಗವತ ಅನುವಾದದಲ್ಲಿ ಹೇಳಿದ್ದಾರೆ. ಗೀತೆಯಲ್ಲಿ (18.24) ರಾಜಸ ಕರ್ಮ ವಿವರಣೆಯಲ್ಲಿ ಹೇಳಿದಂತೆ ಬ್ರಹ್ಮನ ಕರ್ಮವೂ ಅಹಂಕಾರದಿಂದ ಬಹುಶ್ರಮದಿಂದ ಮಾಡುವ ಕಾಮ್ಯಕರ್ಮವಾಗಿದೆ. ಅದು ವ್ಯರ್ಥ. ಅದನ್ನು ಬಿಡಬೇಕೆಂದು 'ಸರ್ವಧರ್ಮಾನ್ ಪರಿತ್ಯಜ್ಯ' ಎಂದು ಕೃಷ್ಣನೇ ಹೇಳಿದ್ದಾನೆ ಎಂದಿದ್ದಾರೆ.

ಶ್ರೀಮದಾಚಾರ್ಯರ ಭಾಗವತ ತಾತ್ಪರ್ಯನಿರ್ಣಯವನ್ನು ಬದಿಗಿಟ್ಟು ನೋಡಿದರೆ ಭಾಗವತ ಎಷ್ಟು ವಿರೂಪವಾಗಿ ಕಾಣಬಹುದೆನ್ನಲು ಈ ವ್ಯಾಖ್ಯಾನಗಳು ಸಾಕ್ಷಿಯಾಗುವುವು.

ಮಹರ್ಲೋಕದಿಂದ ಸತ್ಯಲೋಕದವರೆಗೂ ಎಲ್ಲ ಲೋಕಗಳಲ್ಲಿ ವಾಸ ಮಾಡಲು ಭಕ್ತಿ ಬೇಕು. ಭಕ್ತಿ ಹೆಚ್ಚಿದಂತೆಲ್ಲ ಮೇಲು ಮೇಲಿನ ಲೋಕಗಳು ಪ್ರಾಪ್ತವಾಗುವುವು. ಭಕ್ತಿಯೊಂದಿಗೆ ಜ್ಞಾನವೂ ಬೇಕು. ಪ್ರತಿನಿತ್ಯ ಧ್ಯಾನದಲ್ಲಿ ಒಂದು

ಏವಂ ಪುರಾ ಧಾರಣಯಾಽತ್ಮಯೋನಿ
ರ್ನಷ್ಟಾಂ ಸ್ಮೃತಿಂ ಪ್ರತ್ಯವರುಧ್ಯ ತುಷ್ಟಾತ್
ತಥಾ ಸಸರ್ಜೇದಮಮೋಘದೃಷ್ಟಿ
ರ್ಯಥಾಪ್ಯಯಾತ್ಪ್ರಾಗ್ ವ್ಯವಸಾಯಬುದ್ಧಿಃ ॥ (2.2.1)

ಇತಿ ಶುಕೇನೋಕ್ತಂ । ಅನೇನ ತಾದೃಶಪುರುಷಸ್ಯ ದೌರ್ಲಭ್ಯಮುಕ್ತಂ । ತಾದೃಶಪುರುಷ ಪ್ರಾಪ್ತೌ ತು—

ಬ್ರಹ್ಮಣಾ ಸಹ ತೇ ಸರ್ವೇ ಸಂಪ್ರಾಪ್ತೇ ಪ್ರತಿಸಂಚರೇ ।
ಪರಸ್ಯಾಂತೇ ಕೃತಾತ್ಮಾನಃ ಪ್ರವಿಶಂತಿ ಪರಂ ಪದಂ ॥

ಇತಿ ಸ್ಮೃತ್ಯುಕ್ತಶ್ಚತುರಾನನಮೋಕ್ಷಃ ಸಂಗಚ್ಛತೇ । -ಶುಕದೇವಃ

ಮುಹೂರ್ತಕಾಲ ಪರಮಾತ್ಮನನ್ನು ಪ್ರತ್ಯಕ್ಷ ಕಾಣಬಲ್ಲವನೇ ಸತ್ಯಲೋಕವಾಸಕ್ಕೆ ಅರ್ಹನೆನಿಸುತ್ತಾನೆ. ಇದು, ಭಾಗವತದಲ್ಲಿಯೇ,

ಯೋಗಸ್ಯ ತಪಸಶ್ಚೈವ ಜ್ಞಾನಸ್ಯ ಗತಯೋಽಮಲಾಃ ।
ಮಹರ್ಜನಸ್ತಪಃ ಸತ್ಯಂ ಭಕ್ತಿಯೋಗಸ್ಯ ಮದ್ಗತಿಃ ॥(11.24.14)

ಎಂಬಲ್ಲಿ ಉಕ್ತವಾಗಿದೆ. ಭಕ್ತಿಯೋಗವಿಲ್ಲದವನು ಕೇವಲ ಅಶ್ವಮೇಧಾದಿ ಕರ್ಮ ಮಾಡಿದ ಮಾತ್ರಕ್ಕೆ ಸತ್ಯಲೋಕಪ್ರಾಪ್ತಿಗೆ ಅರ್ಹನೆನಿಸುವುದಿಲ್ಲ. ಬ್ರಹ್ಮನಾಗಿ ಸತ್ಯಲೋಕಾಧಿಪತ್ಯ ಪಡೆಯಲು ನೂರು ಬ್ರಹ್ಮಕಲ್ಪ ಜ್ಞಾನಭಕ್ತಿಗಳನ್ನು ಸಾಧನೆ ಮಾಡಬೇಕು. ಅದರಿಂದ 'ಬ್ರಹ್ಮನೂ ಭಕ್ತನಾಗಿರದಿದ್ದರೆ' ಎಂದು ಮುಂತಾಗಿ ಶ್ರೀಧರೀಯದಲ್ಲಿ ಹೇಳುವುದು ಹಾಸ್ಯಾಸ್ಪದ. ಅವರು ಮೊದಲಿಗೆ 'ಬ್ರಹ್ಮನಿಗೆ ಮೋಕ್ಷವಿಲ್ಲ' ಎಂದು ಹೇಳಿ, ಮೋಕ್ಷವಿಲ್ಲದಾದೀತೆಂದು ಅಭಿಪ್ರಾಯವನ್ನು ಹೇಳುವುದು ಬರಿ ಕುಚೋದ್ಯವಾಗುವುದು.

ವಿಶ್ವನಾಥ ವ್ಯಾಖ್ಯಾನದಲ್ಲಿ ಬ್ರಹ್ಮತ್ರೈವಿಧ್ಯವನ್ನು ಹೇಳಿದ್ದು ಇನ್ನೂ ಹೆಚ್ಚು ~~ಹಾಸ್ಯಾಸ್ಪದವಾಗಿದೆ. ಶುಕದೇವ ವ್ಯಾಖ್ಯಾನದಲ್ಲಿ ಹೇಳಿದಂತೆ ಬ್ರಹ್ಮನಿಗೆ ಮೋಕ್ಷ~~ವಾಗಲು ಅವನಂಥವ ನಿನ್ನೊಬ್ಬ ಸಿಕ್ಕಿದರೆ ಮಾತ್ರ ಶಕ್ಯವಿದೆ ಎನ್ನುವುದು ಪರಮಾತ್ಮನಿಗೆ ವೈಷಮ್ಯನೈರ್ಘೃಣ್ಯ ದೋಷಕಾರಣವಾಗುವುದು. ಸಾಧನಪೂರ್ತಿಯಾದರೂ ಬ್ರಹ್ಮನಿಗೆ ಮೋಕ್ಷಫಲ ಕೊಡದಿರುವುದು ಪರಮಾತ್ಮನಲ್ಲಿ ದೊಡ್ಡ ದೋಷವಾಗುವುದು. 'ತಸ್ಯ ತಾವದೇವ ಚಿರಂ' ಎಂಬ ಶ್ರುತಿಯ ವಿರೋಧವೂ ಬರುವುದು.

ಕೃಷ್ಣಪ್ರಜ್ಞಾ ಸಂಘದವರು 'ಭೇದದೃಷ್ಟ್ಯಾಭಿಮಾನೇನ' ಎನ್ನುವ ಭಾಗವತ ಶ್ಲೋಕವನ್ನು ತಪ್ಪಾಗಿ ತಿಳಿದಿದ್ದಾರೆ. ಪರಮಸಾತ್ವಿಕನೆಂದು ಸರ್ವಸಮ್ಮತನಾದ ಬ್ರಹ್ಮನ ಸೃಷ್ಟಿಕಾರ್ಯವನ್ನು ಕಾಮ್ಯಕರ್ಮವೆಂದು ರಾಜಸವೆಂದು ತೀರ್ಮಾನಿಸುವುದಂತೂ ಅತ್ಯಂತ ಅನುಚಿತ.

ಕಾರ್ಯಾತ್ಯಯೇ ತದಧ್ಯಕ್ಷೇಣ ಸಹಾತಃ ಪರಮಭಿಧಾನಾತ್
(ಬ್ರ.ಸೂ.4.3.10)

'ಸ ಏನಾನ್ ಬ್ರಹ್ಮ ಗಮಯತಿ'

ಎಂದು ಶ್ರುತಿಸೂತ್ರಗಳಲ್ಲಿ ಹೇಳಿದಂತೆ ಭಕ್ತರಾದ ಎಲ್ಲರನ್ನು ಮೋಕ್ಷಕ್ಕೆ ಕರೆದೊಯ್ಯುವ ಭಕ್ತಿಸ್ವರೂಪನಾದ ಬ್ರಹ್ಮನಿಗೇ ಮೋಕ್ಷವಿದೆ-ಇಲ್ಲ ಎಂದು ಚರ್ಚೆ ಮಾಡಿದ್ದಾರೆ ಬೇರೆ ವ್ಯಾಖ್ಯಾನಕಾರರು.

ಅವ್ಯಕ್ತನಾದ ಪರಮಾತ್ಮನನ್ನು ಬ್ರಹ್ಮನು ಪ್ರವೇಶಿಸುವನೆಂದು ಹೇಳುತ್ತ

ಶ್ರೀಧರವ್ಯಾಖ್ಯಾನದಲ್ಲಿ 'ಅವ್ಯಕ್ತ' ಎಂದರೆ ಯಾವ ಪ್ರಮಾಣಕ್ಕೂ ಗೋಚರನಾಗದವನೆಂದು ವಿವರಣೆ ನೀಡಿದ್ದಾರೆ. ಪ್ರಮಾಣಕ್ಕೆ ಅಗೋಚರವೆಂದರೆ ಮೊಲದ ಕೊಂಬೂ ಆಗಬಹುದು. ವಸ್ತುತಃ ಭಕ್ತನ ಭಕ್ತಿಪೂರ್ವಕ ಶ್ರವಣಾದಿಗಳಿಗೆ ಹೊರತು ಇನ್ನಾವುದೇ ಪ್ರಯತ್ನಕ್ಕೆ ಅವ್ಯಕ್ತಸ್ವಭಾವದ ಅವನು ವ್ಯಕ್ತನಾಗುವುದಿಲ್ಲ ಎಂಬುದನ್ನು 'ತದವ್ಯಕ್ತಮಾಹ ಹಿ' (ಬ್ರ.ಸೂ.3.2.23) ಎಂದು ಬ್ರಹ್ಮಸೂತ್ರ ಹೇಳಿದ್ದನ್ನೇ ಭಾಗವತ ನೆನಪಿಸುತ್ತಿದೆ.

ಅವ್ಯಕ್ತಂ ವಿಶತೀತ್ಯುಕ್ತ್ವಾ ತಸ್ಯ ವಿಸ್ತಾರೋ ವಾರಿಣಾ
ಹೃತಗಂಧೇತ್ಯಾದಿ ।
ಸಂಕ್ಷೇಪವಿಸ್ತರಾಭ್ಯಾಂ ತು ಕಥಯಂತಿ ಮನೀಷಿಣಃ ।
ಬಹುವಾರ ಸ್ಮೃತೇಸ್ತಸ್ಯ ಫಲಬಾಹುಲ್ಯಕಾರಣಾತ್ ॥
ಇತಿ ಶಬ್ದನಿರ್ಣಯೇ ॥

'ಅವ್ಯಕ್ತಂ ವಿಶತಿ' ಮಹಾಪ್ರಳಯದಲ್ಲಿ ಚತುರ್ಮುಖನು ಅವ್ಯಕ್ತನಾದ ಹರಿಯನ್ನು ಪ್ರವೇಶಿಸುವನೆಂದು ಸಂಕ್ಷೇಪವಾಗಿ ಪ್ರಳಯವನ್ನು ಹೇಳಿ, 'ವಾರಿಣಾ ಹೃತಗಂಧಾ' ಎಂದು ಮುಂತಾಗಿ ಅದೇ ಪ್ರಳಯವನ್ನು ವಿಸ್ತಾರವಾಗಿ ಭಾಗವತ ಹೇಳುತ್ತಿದೆ.

ಶಬ್ದನಿರ್ಣಯದಲ್ಲಿ ಹೀಗೆ ಹೇಳಿದೆ—'ಭಗವಂತನ ಲಯಶಕ್ತಿಯನ್ನು ಸಂಕ್ಷೇಪವಾಗಿ ಒಮ್ಮೆ, ವಿಸ್ತಾರವಾಗಿ ಇನ್ನೊಮ್ಮೆ ಎಂದು ಅನೇಕ ಬಾರಿ ಸ್ಮರಣೆಗೆ ತಂದುಕೊಂಡರೆ ಅಧಿಕಫಲ ಎಂಬ ಕಾರಣಕ್ಕೆ ಸಂಕ್ಷೇಪ ಹಾಗೂ ವಿಸ್ತಾರಗಳೆಂದು ಎರಡು ಬಗೆಯಾಗಿ ಜ್ಞಾನಿಗಳು ನಿರೂಪಣೆ ಮಾಡುತ್ತಾರೆ' ಎಂದು.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಅಂತರಿಕ್ಷ ಮಹಾಮುನಿ ಮಹಾಪ್ರಳಯವನ್ನು ವಿಸ್ತಾರವಾಗಿ ಹೇಳುತ್ತಾರೆ.

ವಾರಿಣಾ ಹೃತಗಂಧಾ ಭೂಃ ಸಲಿಲತ್ವಾಯ ಕಲ್ಪತೇ ।
ಸಲಿಲಂ ತದ್ಧೃತರಸಂ ಜ್ಯೋತಿಷ್ಟ್ವಾಯೋಪಕಲ್ಪತೇ ॥ ೧೩ ॥

ಹೃತರೂಪಂ ತು ತಮಸಾ ವಾಯೌ ಜ್ಯೋತಿಃ ಪ್ರಲೀಯತೇ ।
ಹೃತಸ್ಪರ್ಶೋಽವಕಾಶೇನ ವಾಯುರ್ನಭಸಿ ಲೀಯತೇ ॥ ೧೪ ॥

ಕಾಲಾತ್ಮನಾ ಹೃತಗುಣಂ ನಭ ಆತ್ಮನಿ ಲೀಯತೇ ॥ ೧೫ ॥

ಇದಕ್ಕೆ ಮೊದಲು ಪೃಥಿವಿಯ ಗಂಧಗುಣವನ್ನು ಜಲ ತನ್ನೊಳಗೆ ಸೆಳೆದುಕೊಂಡಾಗ ಪೃಥಿವಿ ಜಲದಲ್ಲಿ ಲೀನವಾಗುತ್ತದೆ. ಜಲದ ರಸಗುಣವನ್ನು ತೇಜ ಸೆಳೆದುಕೊಂಡಾಗ ಜಲ ತೇಜದಲ್ಲಿ ಲಯ ಹೊಂದುವುದು. ತೇಜದ ರೂಪವನ್ನು ತಮೋಗುಣಭರಿತವಾದ ವಾಯು ಸೆಳೆದುಕೊಂಡಾಗ ತೇಜ ವಾಯುವಿನಲ್ಲಿ ಲೀನವಾಗುವುದು. ವಾಯುವಿನ ಸ್ಪರ್ಶವನ್ನು ಆಕಾಶ ಸೆಳೆದುಕೊಂಡಾಗ ವಾಯು ಆಕಾಶದಲ್ಲಿ ಲೀನವಾಗುವುದು. ಆಕಾಶದ ಶಬ್ದಗುಣವನ್ನು ಅಹಂಕಾರಾದಿ ತತ್ವದ್ವಾರಾ ಪ್ರಳಯಮೂರ್ತಿ ಪರಮಾತ್ಮ ಸೆಳೆದುಕೊಂಡಾಗ ಆಕಾಶ ಬುದ್ಧಿತತ್ವದಲ್ಲಿ ಲೀನವಾಗುವುದು.

ಇಂದ್ರಿಯಾಣಿ ಮನೋ ಬುದ್ಧಿಃ ಸಹ ವೈಕಾರಿಕೈರ್ನೃಪ ।
ಪ್ರವಿಶಂತಿ ಹ್ಯಹಂಕಾರಂ ಸ್ವಗುಣೈರಹಮಾತ್ಮನಿ ॥ ೧೬ ॥

ಅದೇ ಕಾಲದಲ್ಲಿ ತೈಜಸಾಹಂಕಾರಕಾರ್ಯವಾದ ಇಂದ್ರಿಯಗಳು ಬುದ್ಧಿತತ್ವದಲ್ಲಿಯೂ ಬುದ್ಧಿ ತೈಜಸಾಹಂಕಾರದಲ್ಲಿಯೂ ವೈಕಾರಿಕಾಹಂಕಾರ ಕಾರ್ಯವಾದ ಇಂದ್ರಿಯ ದೇವತೆಗಳು ಮತ್ತು ಮನಸ್ಸು ವೈಕಾರಿಕಾಹಂಕಾರದಲ್ಲಿಯೂ ಲೀನವಾಗುವರು. ಆ ತ್ರಿವಿಧ ಅಹಂಕಾರಗಳು ತಮ್ಮ ಕಾರ್ಯಗಳೊಂದಿಗೆ ಮಹತ್ತತ್ವಾಭಿಮಾನಿ ಬ್ರಹ್ಮನಲ್ಲಿಯೂ ಬ್ರಹ್ಮನು ವ್ಯಾಪ್ತನಾದ ಹರಿಯಲ್ಲಿಯೂ ಪ್ರವೇಶಿಸುವರು.

ವೈಕಾರಿಕ ತೈಜಸ ಭೂತಾದಿ ಎಂದು ತ್ರಿವಿಧ ಅಹಂಕಾರಗಳಲ್ಲಿ ಶಿವ ತ್ರಿರೂಪನಾಗಿ ನಿಯಾಕಮನಾಗಿದ್ದಾನೆ. ಹಾಗೇ ವೈಕಾರಿಕ ತೈಜಸ ಭೂತಾದಿ ಎಂದು ತ್ರಿವಿಧ ಬುದ್ಧಿಗಳಲ್ಲಿ ಉಮೆಯೂ ತ್ರಿರೂಪಳಾಗಿದ್ದಾಳೆ. ವೈಕಾರಿಕಾಹಂಕಾರದಲ್ಲಿರುವ ವೈಕಾರಿಕ ಶಿವನಿಂದ ವೈಕಾರಿಕ ಬುದ್ಧಿಯಲ್ಲಿರುವ ವೈಕಾರಿಕ ಉಮೆಯಲ್ಲಿ ಮನಸು ಮತ್ತು ಇಂದ್ರಿಯದೇವತೆಗಳು ಜನಿಸಿದರು. ತೈಜಸಾಹಂಕಾರದಲ್ಲಿರುವ ತೈಜಸ ಶಿವನಿಂದ ತೈಜಸಬುದ್ಧಿಯಲ್ಲಿರುವ ತೈಜಸ ಉಮೆಯಲ್ಲಿ ಇಂದ್ರಿಯಗಳು ಜನಿಸಿದುವು. ಭೂತಾದಿ ಅಹಂಕಾರದಲ್ಲಿರುವ ಭೂತಾದಿ ಶಿವನಿಂದ ಭೂತಾದಿ ಬುದ್ಧಿಯಲ್ಲಿರುವ ಭೂತಾದಿ ಉಮೆಯಲ್ಲಿ ಆಕಾಶಾದಿಭೂತಗಳು ಜನಿಸಿದುವು. ಪ್ರಳಯಕಾಲದಲ್ಲಿ ಆಕಾಶವು ಬುದ್ಧಿಯಲ್ಲಿ ಲೀನವಾಗುವುದೆಂದು 'ನಭ ಆತ್ಮನಿ ಲೀಯತೇ' ಎಂದ ಬಳಿಕ ಬುದ್ಧಿಯಲ್ಲಿ ಆಕಾಶದೊಂದಿಗೇ ಜನಿಸಿರುವ ಇಂದ್ರಿಯ, ಮನ, ಇಂದ್ರಿಯ ದೇವತೆಗಳೂ ಬುದ್ಧಿಯಲ್ಲಿ ಲಯಹೊಂದುವುವೆಂದು ಬೇರೆ ಹೇಳಬೇಕಾಗಿಲ್ಲ, ಅರ್ಥಾತ್ ಸಿದ್ಧವೇ ಆಗಿರುತ್ತದೆ. ಆದರೂ ಇದು ಸಂಕ್ಷೇಪವಾಗಿ ಹೇಳಿದಂತಾಗಿರುವುದರಿಂದ, ವಿಸ್ತಾರಕ್ಕಾಗಿ ಪುನಃ 'ಇಂದ್ರಿಯ ಮನಸ್ಸುಗಳು ವೈಕಾರಿಕ ದೇವತೆಗಳೊಂದಿಗೆ ಬುದ್ಧಿಯಲ್ಲಿ ಲಯ ಹೊಂದುವುವು' ಎಂದು ಹೇಳಿದೆ, ಎನ್ನಬೇಕು.

ಇಲ್ಲದಿದ್ದರೆ ಅರ್ಥಾತ್ ಸಿದ್ಧವಾಗಿರುವುದನ್ನು ಪುನಃ ಹೇಳಬೇಕಾಗಿರಲಿಲ್ಲ. ಸಂಕ್ಷೇಪವಾಗಿ ಒಮ್ಮೆ ವಿಸ್ತಾರವಾಗಿ ಇನ್ನೊಮ್ಮೆ ಹೀಗೆ ಅನೇಕಬಾರಿ ಸ್ಮರಣ ಮಾಡುವುದರಿಂದ ಅಧಿಕ ಪುಣ್ಯ ಬರಲಿ ಎಂದು ವಿಸ್ತಾರದೃಷ್ಟಿಯಿಂದ 'ಇಂದ್ರಿಯಾಣಿ ಮನೋ ಬುದ್ಧಿಃ ಸಹ ವೈಕಾರಿಕೈರ್ನೃಪ ಪ್ರವಿಶಂತಿ' ಎಂದು ಪುನಃ ಹೇಳಲಾಗಿದೆ.

'ನಭಃ ಆತ್ಮನಿ ಲೀಯತೇ' ಆಕಾಶವು ಬುದ್ಧಿತತ್ವದಲ್ಲಿ ಲಯಹೊಂದುವುದು. ಆಗಲೇ 'ಇಂದ್ರಿಯಾಣಿ ಮನಶ್ಚ ವೈಕಾರಿಕೈಃ ಸಹ ಬುದ್ಧೌ ಪ್ರವಿಶಂತಿ' ಇಂದ್ರಿಯ ಮನಸುಗಳು ವೈಕಾರಿಕರಾದ ಇಂದ್ರಿಯದೇವತೆಗಳೊಂದಿಗೆ ಬುದ್ಧಿಯಲ್ಲಿ (ಬುದ್ಧೌ ಎಂದು ಅಧ್ಯಾಹಾರ) ಪ್ರವೇಶಿಸುತ್ತವೆ. ಬಳಿಕ ತ್ರಿವಿಧ ಬುದ್ಧಿಗಳು ತ್ರಿವಿಧ ಅಹಂಕಾರಗಳಲ್ಲಿ ಪ್ರವೇಶಿಸುವವು. ತ್ರಿವಿಧ ಅಹಂಕಾರಗಳು ತಮ್ಮ ಕಾರ್ಯಗಳೊಂದಿಗೆ 'ಆತ್ಮನಿ' ಮಹತ್ತತ್ವದಲ್ಲಿ ಲಯಹೊಂದುವುವು. ಮಹತ್ತತ್ತ್ವವೂ 'ಆತ್ಮನಿ' ವ್ಯಾಪ್ತನಾದ ಪರಮಾತ್ಮನಲ್ಲಿ ಲಯಹೊಂದುವುದು ('ಆತ್ಮನಿ' ಎಂಬುದನ್ನು ಆವೃತ್ತಿ ಮಾಡಿಕೊಳ್ಳಬೇಕು, ಆತ್ಮಾ ಆತ್ಮನಿ ಲೀಯತೇ)

'ನಭ ಆತ್ಮನಿ ಲೀಯತೇ' ಎಂಬಲ್ಲಿ ಆಕಾಶವು ಬುದ್ಧಿಯಲ್ಲಿ ಲೀನವಾಗುತ್ತದೆ ಎನ್ನುವ ಅಭಿಪ್ರಾಯವಿರುವುದರಿಂದ 'ಆತ್ಮನಿ' ಎಂದರೆ ಬುದ್ಧೌ ಎಂದು ಗ್ರಹಿಸಬೇಕು.

ನಭ ಆತ್ಮನಿ ಲೀಯತ ಇತ್ಯುಕ್ತ್ವಾ ಇಂದ್ರಿಯಾಣೀತ್ಯಾದ್ಯಪಿ ವಿಸ್ತಾರಾಯ । ಆತ್ಮನಿ ಬುದ್ಧೌ ।

'ನಭ ಆತ್ಮನಿ ಲೀಯತೇ' ಎಂಬುದರಿಂದ ಆಕಾಶವು ಬುದ್ಧಿಯಲ್ಲಿ ಲೀನವಾಗುವುದೆಂದು ಹೇಳಿದಾಗ, ಇಂದ್ರಿಯ ಮನಸು ಇಂದ್ರಿಯದೇವತೆಗಳು ಬುದ್ಧಿಯಲ್ಲಿ ಲೀನವಾಗುವರೆಂದು ಅರ್ಥಾತ್ ಸಿದ್ಧವಾಗುತ್ತಿದ್ದರೂ ಅದು ಸಂಕ್ಷೇಪವಾದ್ದರಿಂದ ವಿಸ್ತಾರಕ್ಕಾಗಿ ಪುನಃ ಇಂದ್ರಿಯಾಣಿ ಮನೋಬುದ್ಧಿಃ ಎಂದು ಮುಂತಾಗಿ ಹೇಳಿದೆ. 'ನಭ ಆತ್ಮನಿ' ಎಂಬಲ್ಲಿ ಆತ್ಮನಿ ಎಂದರೆ ಬುದ್ಧಿಯಲ್ಲಿ ಎಂದರ್ಥ.

ಅಥವಾ 'ನಭ ಆತ್ಮನಿ ಲೀಯತೇ' ಎಂದರೆ ಆಕಾಶವು ಪರಮಾತ್ಮನಲ್ಲಿ ಲಯಹೊಂದುವುದೆಂದರ್ಥ. ಇಂದ್ರಿಯಾದಿಗಳೂ ಹಾಗೇ ಪರಮಾತ್ಮನಲ್ಲಿ ಲಯಹೊಂದುವುದರಿಂದ ಅದೂ ಅರ್ಥಾತ್ ಸಿದ್ಧವಾಯಿತು. ವಿಸ್ತಾರಕ್ಕಾಗಿ ಇಂದ್ರಿಯಾದಿಗಳ ಲಯ ಉಕ್ತವಾಗಿದೆ. 'ಅಹಮಾತ್ಮನಿ' ಎಂಬಲ್ಲಿ

ಅಹಂಕಾರಾಭಿಮಾನಿ ಶಿವ ಶೇಷ ಗರುಡರಿಗೆ ನೇರವಾಗಿ ಚತುರ್ಮುಖನಲ್ಲಿ ಲಯವಿಲ್ಲದಿದ್ದರಿಂದ 'ಆತ್ಮನಿ' ಎಂದರೆ ಚತುರ್ಮುಖನಲ್ಲಿ ಎನ್ನಲಾಗದು ಅದಕ್ಕೆ ಇಲ್ಲಿ 'ಆತ್ಮನಿ ಬುದ್ಧೌ' ಆತ್ಮಶಬ್ದದಿಂದ ಬುದ್ಧ್ಯಭಿಮಾನಿನಿ ಸರಸ್ವತಿಯನ್ನಿಟ್ಟು ಕೊಳ್ಳಬೇಕು ಎಂಬ ಅಭಿಪ್ರಾಯದಿಂದ 'ಆತ್ಮನಿ, ಬುದ್ಧೌ' ಎಂದು ತಾತ್ಪರ್ಯವಚನ.

'ಆತ್ಮನಿ ಮಹತ್ತತ್ತ್ವೇ' ಎಂದೂ ತಾತ್ಪರ್ಯಪಾಠವಿದೆ. ಆಗ ಅಹಂಕಾರವು, ಸರಸ್ವತ್ಯಭಿಮನ್ಯಮಾನವಾದ ಬುದ್ಧಿತತ್ವದ್ವಾರಾ, ಆತ್ಮನಲ್ಲಿ ಅಂದರೆ ಮಹತ್ತತ್ವದಲ್ಲಿ ಲಯಹೊಂದುವುದೆಂದರ್ಥ.

ಆಕಾಶವೂ ಉಮಾಭಿಮನ್ಯಮಾನ ಬುದ್ಧಿತತ್ವದಲ್ಲಿ ಲಯಹೊಂದುವುದು. ಹಾಗೇ ಅಹಂಕಾರವೂ ಸರಸ್ವತ್ಯಭಿಮಾನ್ಯಮಾನ ಬುದ್ಧಿತತ್ವದಲ್ಲಿ ಲಯಹೊಂದುವು ದೆಂದು ತಿಳಿಸುವ ಅಭಿಪ್ರಾಯದಿಂದ 'ನಭ ಆತ್ಮನಿ' 'ಅಹಮಾತ್ಮನಿ' ಎಂದು ಎರಡೂ ಕಡೆಯಲ್ಲಿ 'ಆತ್ಮನಿ' ಎಂದರೆ 'ಬುದ್ಧೌ' ಎಂದು ತಿಳಿಸಲು 'ಆತ್ಮನಿ ಬುದ್ಧೌ' ಎಂದು ಸಾಮಾನ್ಯವಾಗಿ ತಾತ್ಪರ್ಯವಚನವಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಅಂತರಿಕ್ಷ ಮಹಾಮುನಿ ಮಾಯೆಯ ಬಗ್ಗೆ ಉಪದೇಶನೀಡಿ ಮುಂದೆ ಇನ್ನೇನಾದರೂ ಕೇಳಬೇಕಾಗಿದ್ದರೆ ಕೇಳು ಎನ್ನುತ್ತಾರೆ. ಮಾಯೆಯನ್ನು ದಾಟುವುದು ಹೇಗೆಂದು ರಾಜ ಕೇಳುತ್ತಾನೆ.

ಏಷಾ ಮಾಯಾ ಭಗವತಃ ಸೃಷ್ಟಿಸ್ಥಿತ್ಯಂತಕಾರಿಣೇ ।
ತ್ರಿವರ್ಣಾ ವರ್ಣಿತಾಽಸ್ಮಾಭಿಃ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೭ ॥

ಪ್ರಪಂಚ ಸೃಷ್ಟಿಸ್ಥಿತಿಲಯಕಾರಿಣಿಯಾದ ತ್ರಿಗುಣ ನಿಯಾಮಕವಾದ ಭಗವಂತನ ಇಚ್ಛಾಶಕ್ತಿಯನ್ನೂ ತ್ರಿಗುಣಾತ್ಮಕ ಜಡಪ್ರಕೃತಿಯನ್ನೂ ನಾವು ಹೀಗೆ ವರ್ಣಿಸಿದ್ದೇವೆ. ರಾಜನೆ, ಇನ್ನೇನು ಕೇಳಲು ಬಯಸುವೆ?

ಯಥೈತಾಮೈಶ್ವರೀಂ ಮಾಯಾಂ ದುಸ್ತರಾಮಕೃತಾತ್ಮಭಿಃ ।
ತರಂತ್ಯಂಜಃ ಸ್ಥೂಲಧಿಯೋ ಮಹರ್ಷ ಇದಮುಚ್ಯತಾಮ್ ॥ ೧೮ ॥

ಶಾಸ್ತ್ರಜ್ಞಾನವನ್ನು ಸಂಪಾದಿಸದವರಿಗೆ ಭಗವಂತನ ಈ 'ಮಾಯೆ' ಬಂಧಕಪ್ರಕೃತಿ ದಾಟಲು ಅಸಾಧ್ಯ. ಅದನ್ನು ಪಾಮರರು ಮಂದಮತಿಗಳು ಕೂಡ ಹೇಗೆ ಚೆನ್ನಾಗಿ ದಾಟಬಲ್ಲರು? ಮುನಿಯೆ, ಇದನ್ನು ಹೇಳಿರಿ.

ಇಲ್ಲಿ 'ತ್ರಿವರ್ಣಾ ಮಾಯಾ ವರ್ಣಿತಾ' 'ತ್ರಿಗುಣಾತ್ಮಕ ಪ್ರಕೃತಿಯನ್ನು ವರ್ಣಿಸಿದ್ದೇವೆ' ಎಂಬ ಮಾತಿನಿಂದ ಬಂಧಕಪ್ರಕೃತಿಯನ್ನು ಮಾತ್ರ ಉಪದೇಶಿಸಿದಂತೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು ತಿಳಿದಿದ್ದಾರೆ. ಆದರೆ ಕೇವಲ ಬಂಧಕ ಪ್ರಕೃತಿಯ ಸ್ವರೂಪವನ್ನು ತಿಳಿದಮಾತ್ರಕ್ಕೆ ಅದರಿಂದ ಮುಕ್ತಿಯನ್ನು ಪಡೆಯಲಾಗದು. ಮುಕ್ತಿನೀಡುವ ಭಗವಂತನ ಸಾಮರ್ಥ್ಯವನ್ನೂ ತಿಳಿದು ಉಪಾಸನೆ ಮಾಡಬೇಕು. ಅದೂ ಕೂಡ ಮಾಯೆ ಎನಿಸುತ್ತದೆ. ಅದು ತ್ರಿವರ್ಣವೂ ಹೌದು. ಹೇಗೆಂದರೆ ತ್ರಿಗುಣಗಳನ್ನು ವರಣ ಮಾಡುತ್ತದೆ, ತನ್ನ ವಶದಲ್ಲಿಟ್ಟುಕೊಳ್ಳುತ್ತದೆ. ಬಿಳಿ ಕೆಂಪು ಕಪ್ಪು ಬಣ್ಣಗಳ ತ್ರಿಗುಣಗಳನ್ನು ವರಣ ಮಾಡಿಕೊಂಡಿದ್ದರಿಂದ, ತನ್ನಲ್ಲಿ ಅವುಗಳನ್ನು ಸ್ವರೂಪವಾಗಿಟ್ಟುಕೊಂಡಿದ್ದರಿಂದ ಬಂಧಕಪ್ರಕೃತಿಯೂ ತ್ರಿವರ್ಣ, ಮೂರುಗುಣ ಗಳನ್ನು ಆಳುವುದರಿಂದ ಭಗವಂತನ ಸಾಮರ್ಥ್ಯವೂ ತ್ರಿವರ್ಣ. ಎರಡನ್ನೂ ತಿಳಿದರೆ ಸಂಸಾರಬಂಧನದಿಂದ ಮುಕ್ತಿಯನ್ನು ಸಂಪಾದಿಸಬಹುದೆಂಬ ಅಭಿಪ್ರಾಯದಿಂದ ರಾಜ ಎರಡನ್ನೂ ಕೇಳಿದ್ದಾನೆ. ಬಂಧಕಪ್ರಕೃತಿ ದಾಟಬೇಕಾಗಿರುವ ಮಾಯೆ. ಭಗವಂತನ ಇಚ್ಛಾಸಾಮರ್ಥ್ಯ ದಾಟಿಸುವ ಮಾಯೆ. 'ಮಾಯಾಂ ವೇದಿತುಮಿಚ್ಛಾಮಃ' ಎಂದು ಮೊದಲಿಗೇ ರಾಜ ಎರಡನ್ನೂ ಕೇಳಲು ಬಯಸಿದ್ದ. ಎರಡನ್ನೂ ಅಂತರಿಕ್ಷಮುನಿ ಉಪದೇಶಿಸಿದ್ದರು. ಇದೀಗ ಇನ್ನೇನು ಕೇಳಲು ಬಯಸುವೆ? ಎಂದು ಕೇಳಿದ್ದಕ್ಕೆ ರಾಜ ದಾಟಬೇಕಾಗಿರುವ ಬಂಧಕ ಮಾಯೆಯ ಬಗ್ಗೆ ಅದನ್ನು ಹೇಗೆ ದಾಟಬೇಕೆಂದು ಪ್ರಶ್ನೆ ಮಾಡುತ್ತಿದ್ದಾನೆ.

ಈಗ ಒಂದು ಸಮಸ್ಯೆ ಎದುರಾಗುತ್ತಿದೆ. 'ಏಷಾ ಮಾಯಾ ಭಗವತಃ' 'ಈ ಭಗವಂತನ ಮಾಯೆ' ಎಂದು ದಾಟಬೇಕಾಗಿರುವ ಮಾಯೆ, ದಾಟಿಸುವ ಮಾಯೆ ಇವೆರಡೂ ಪ್ರಸ್ತುತವಾಗಿವೆ. ಆದರೆ ಈಗ 'ಈ ಮಾಯೆ' ಎಂಬ ಶಬ್ದದಿಂದಲೇ 'ಈ ಮಾಯೆಯನ್ನು ಹೇಗೆ ದಾಟಬೇಕೆಂ'ದು ಕೇವಲ ಒಂದು ಮಾಯೆಯನ್ನು ಮಾತ್ರ ರಾಜ ಕೇಳುತ್ತಾನೆ. ಇದು ಲೋಕವ್ಯವಹಾರಕ್ಕೆ ಅಸಂಗತವಾಗುವುದಿಲ್ಲವೆ? ಎಂದು ಶ್ರೀಮದಾಚಾರ್ಯರು ಶಬ್ದನಿರ್ಣಯವಚನದ ಆಧಾರದಿಂದ ಇದು ಲೋಕ ವ್ಯವಹಾರಾನುಗುಣವೆ, ಹೊರತು ಅಸಂಗತವಲ್ಲ ಎಂದು ಸಮಾಧಾನ ನೀಡುತ್ತಾರೆ.

ತ್ರಿವರ್ಣಾ ವರಣಾದುಕ್ತಾ ತ್ರಿಗುಣಾನಾಂ ಹರೇರ್ಮತಿಃ ।
ಗುಣಾತ್ಮಕತ್ವಾತ್ ಪ್ರಕೃತಿ ಸ್ತ್ರಿವರ್ಣೇತಿ ಪ್ರಕೀರ್ತ್ಯತೇ ॥
ತತ್ರ ತು ಪ್ರಕೃತಿಸ್ತಾರ್ಯಾ ತಾರಕಾ ತು ಹರೇರ್ಮತಿಃ ।
ಉಭಯಂ ವಿಷ್ಣುಮಾಯೋಕ್ತಂ ಜ್ಞಾತವ್ಯಮುಭಯಂ ತಥಾ ॥

ಇತಿ ಚ ॥

ಮೂರು ಗುಣಗಳನ್ನು ವಶದಲ್ಲಿರಿಸಿಕೊಂಡಿರುವುದರಿಂದ ಹರಿಯ ಇಚ್ಛೆ ತ್ರಿವರ್ಣ ಎನಿಸುತ್ತದೆ. ತ್ರಿಗುಣವನ್ನು ಸ್ವರೂಪವಾಗಿ ಹೊಂದಿರುವುದರಿಂದ ಪ್ರಕೃತಿಯೂ ತ್ರಿವರ್ಣವೆನಿಸಿದೆ. ಅವುಗಳಲ್ಲಿ ದಾಟಬೇಕಾಗಿರುವ ಮಾಯೆ ಪ್ರಕೃತಿ. ದಾಟಿಸುವ ಮಾಯೆ ಹರೀಚ್ಛೆ. ಎರಡೂ ವಿಷ್ಣುಮಾಯೆ ಎನಿಸಿವೆ. ಎರಡನ್ನೂ ತಿಳಿಯಬೇಕು ಎಂದು ಶಬ್ದನಿರ್ಣಯದಲ್ಲಿದೆ.

ಬಹೂನಾಂ ಸಹ ನಿರ್ದೇಶ ಏಕಯಾಽಭಿಧಯೈವ ತು
ತಯೈವಾಭಿಧಯಾ ತೇಷಾಂ ಪರಾಮೃಶ್ಯೈಕಮುಚ್ಯತೇ
ತಾಮೇತಾಮಾಂತರೀಂ ರೀತಿಂ ವಿದುಃ ಶಬ್ದವಿದೋ ಜನಾಃ ॥
ಇತಿ ಚ ॥

ಒಂದು ಶಬ್ದದಿಂದ ಅನೇಕ ಪದಾರ್ಥಗಳು ಒಮ್ಮೆ ಏಕಕಾಲದಲ್ಲಿ ನಿರ್ದೇಶಿಸಲ್ಪಟ್ಟಿದ್ದರೂ, ಮತ್ತೆ ಅದೇ ಶಬ್ದದಿಂದ ಅವುಗಳಲ್ಲಿ ಬೇಕಾದ ಒಂದನ್ನೇ ಎತ್ತಿಕೊಂಡು ಅದರ ಬಗ್ಗೆ ಹೇಳುವುದುಂಟು. ಇದೊಂದು ಮನ ಮುಟ್ಟುವಂಥ ಮಾತಿನ ರೀತಿ ಎಂದು ಶಬ್ದವ್ಯವಹಾರ ತಜ್ಞರು ಒಪ್ಪಿದ್ದಾರೆ ಎಂದೂ ಶಬ್ದನಿರ್ಣಯದಲ್ಲಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಪ್ರಬುದ್ಧಮಹಾಮುನಿ ಉಪದೇಶಿಸುತ್ತಾರೆ—

ಕರ್ಮಾಣ್ಯಾರಭಮಾಣಾನಾಂ ದುಃಖಹತ್ಯೈ ಸುಖಾಯ ಚ ।
ಪಶ್ಯೇತ್ಪಾಕವಿಪರ್ಯಾಸಂ ಮಿಥುನೀಚಾರಿಣಾಂ ನೃಣಾಮ್ ॥ ೧೯ ॥

ದುಃಖ ಪರಿಹಾರ ಸುಖಪ್ರಾಪ್ತಿಗಳ ಉದ್ದೇಶದಿಂದ ಕರ್ಮ ಮಾಡುತ್ತ ಹೆಣ್ಣು ಗಂಡು ಜೊತೆಯಾಗಿಯೇ ಬಾಳುವ ವಿಷಯಲೋಲುಪರಾದ ನರರ ಕರ್ಮಕ್ಕೆ ವಿಪರೀತ ಫಲ ಉಂಟಾಗುವುದನ್ನು, ದುಃಖಪರಿಹಾರಕ್ಕಾಗಿ ಮಾಡಿದ ಕರ್ಮಕ್ಕೆ ದುಃಖ ಫಲ ಸಿಗುವುದು, ಸುಖಪ್ರಾಪ್ತಿಗೆ ಮಾಡಿದಕರ್ಮಕ್ಕೆ ಸುಖಫಲ ಸಿಗದಿರುವುದು ಎಂಬುದನ್ನು ನೋಡಬೇಕು, ನೋಡಿ ಪಾಠ ಕಲಿಯಬೇಕು.

ನಿತ್ಯಾರ್ತಿದೇನ ವಿತ್ತೇನ ದುರ್ಲಭೇನಾತ್ಮಮೃತ್ಯುನಾ ।
ಗೃಹಾಪತ್ಯಾಪ್ತಪಶುಭಿಃ ಕಾ ಪ್ರೀತಿಃ ಸಾಧಿತೈಶ್ಚಲೈಃ ॥ ೨೦ ॥

ಧನಸಂಪತ್ತು ಬರುವಾಗಲೂ ಇರುವಾಗಲೂ ಹೋಗುವಾಗಲೂ ಎಲ್ಲ

ಕಾಲದಲ್ಲಿಯೂ ದುಃಖದಾಯಕವೆ. ಅದರ ಸಂಪಾದನೆಯೂ ಕಷ್ಟ. ರಕ್ಷಣೆಯೂ ಕಷ್ಟ. ತನ್ನ ಮರಣಕ್ಕೂ ಅದು ಕಾರಣವಾಗಬಹುದು. ಮನೆ ಮಕ್ಕಳು ಆಪ್ತರು ಪಶುಗಳು ಇವು ಕೂಡ ಸ್ಥಿರವಲ್ಲ. ಮನುಷ್ಯ ತಾನೇ ಮೃತ್ಯುವಶನಾಗಿರುವಾಗ ಅವನ್ನು ಸಾಧಿಸಿಕೊಂಡು ಏನು ಸುಖ ಪಡಲು ಸಾಧ್ಯ?

ಏವಂ ಲೋಕಂ ಪರಂ ವಿದ್ಯಾನ್ನಶ್ವರಂ ಕರ್ಮನಿರ್ಮಿತಮ್ ।
ಅತುಲ್ಯಾತಿಶಯಧ್ವಂಸಾದ್ಯಥಾ ಮಂಡಲವರ್ತಿನಾಮ್ ॥ ೨೦ ॥

ಹೀಗೆ ಪುಣ್ಯಕರ್ಮದಿಂದ ಸಂಪಾದಿಸುವ ಪರಲೋಕಸುಖವೂ ಸುಖವಲ್ಲ. ರಣರಂಗದಲ್ಲಿ ಯೋಧನಿಗೆ ಪರಾಕ್ರಮದಲ್ಲಿ ಸರಿಮಿಗಿಲಿಲ್ಲದವನೊಬ್ಬ ಇದಿರಾದರೆ ಬಿದ್ದುಹೋಗುತ್ತಾನೆ. ಹಾಗೇ ಸರಿಮಿಗಿಲಿಲ್ಲದವರು ದೇವತೆಗಳು ಕೆಳಗೆ ತಳ್ಳಿದರೆ ಪರಲೋಕದಲ್ಲಿ ಸುಖಿಸುವವನು ಬೀಳುತ್ತಾನೆ.

'ಅತುಲ್ಯಾತಿಶಯಧ್ವಂಸಾತ್' ಎಂಬಲ್ಲಿ 'ಸತುಲ್ಯಾತಿಶಯಧ್ವಂಸಂ' ಎಂದು ಬೇರೆ ವ್ಯಾಖ್ಯಾನಕಾರರ ಪಾಠವಿದೆ. ಅ-ತುಲ್ಯಾತಿಶಯ-ಧ್ವಂಸವೆಂದರೆ ಸರಿ ಮಿಗಿಲಿಲ್ಲದ ಮಹಾಶೂರನಾದ ಇದಿರಾಳಿಯ ಕೈಯಲ್ಲಿ ಸಾಯುವುದು. ಅದರಿಂದ ರಾಜ್ಯಸುಖ ನಶ್ವರ.

'ಸತುಲ್ಯಾತಿಶಯಧ್ವಂಸ' ಎಂದರೆ ಶ್ರೀಧರವ್ಯಾಖ್ಯಾನ ಪ್ರಕಾರ ತುಲ್ಯರಾಜರನ್ನು ಕಂಡು ಸ್ಪರ್ಧೆ, ಅತಿಶಯ ರಾಜರನ್ನು ಕಂಡು ಮತ್ಸರ, ಧ್ವಂಸದ ಆಲೋಚನೆಯಿಂದ ಭಯ ಇವುಗಳಿಂದ ಕೂಡಿದ್ದು ರಾಜ್ಯಸುಖ. ಹಾಗೆಯೇ ಸ್ವರ್ಗಸುಖವೂ ಕೂಡ ಸ್ಪರ್ಧೆ ಮತ್ಸರ ನಾಶಭಯಗಳಿಂದ ಯುಕ್ತವಾಗಿದೆ ಎನ್ನುತ್ತಾರೆ.

ಆದರೆ ಕರ್ಮ ನಿರ್ಮಿತವಾದರೂ 'ಯನ್ನ ದುಃಖೇನ ಸಂಭಿನ್ನಂ' ಎಂಬಂತೆ ದುಃಖರಹಿತವಾದ ಸ್ವರ್ಗಸುಖ ಯಾಗಾದಿಕರ್ಮದಿಂದ ಸಿಕ್ಕಿದ್ದು. ಕರ್ಮಾನುಸಾರ ವಾಗಿರುವುದರಿಂದ ಸ್ಪರ್ಧೆಗೆ ಅವಕಾಶವೇ ಇಲ್ಲ. ಸ್ಪರ್ಧೆ ಮಾಡಿ ಪ್ರಯೋಜನವೂ ಇಲ್ಲ. ಕರ್ಮಾನುಗುಣ ಸಿಕ್ಕಿದ್ದನ್ನು ಪಾಲಿಗೆ ಬಂದ ಪಂಚಾಮೃತವೆಂದು ಉಣಬೇಕಷ್ಟೆ.

ಮತ್ಸರ ಪಡುವುದಕ್ಕೂ ಅವಕಾಶವಿಲ್ಲ. ಬ್ಯಾಂಕಿನಲ್ಲಿ ಹೆಚ್ಚು ಹಣ ಕೂಡಿಟ್ಟವನು ಹೆಚ್ಚು ಹಣ ಪಡೆಯುತ್ತಾನೆ. ಅದಕ್ಕೆ ಯಾರಿಂದಲೂ ಅಡ್ಡಿ ಆತಂಕ ಭಯಗಳಿಗೆ ಅವಕಾಶವಿಲ್ಲ ಹಾಗೆಯೇ ಭೂಮಿಯಲ್ಲಿ ಹೆಚ್ಚು ಪುಣ್ಯ ಮಾಡಿದವನು ಸ್ವರ್ಗದಲ್ಲಿ ಹೆಚ್ಚು ಸುಖಪಡುತ್ತಾನೆ. ಪುಣ್ಯವಿರುವಷ್ಟು ಕಾಲ ಸುಖಕ್ಕೆ ಧ್ವಂಸವೂ ಇಲ್ಲ. ಪುಣ್ಯ ತೀರಿತೆಂದರೆ ಮುಂದೆ ಸುಖವಿರುವುದೂ ಇಲ್ಲ. ಹೀಗಾಗಿ ಸ್ವರ್ಗದಲ್ಲಿ ಸುಖಕ್ಕೆ

ಸ್ಪರ್ಧೆಯೆ ಕಂಡಿಲ್ಲ. ಭೂಲೋಕದಲ್ಲಿ ಮಾತ್ರ ಸ್ಪರ್ಧೆ ಕಂಡುಬರುತ್ತಿದೆ. ಅದರಿಂದ ಭೂಲೋಕದ ರಾಜ್ಯಸುಖಕ್ಕೆ ಸ್ವರ್ಗಸುಖವನ್ನು ಹೋಲಿಸುವುದು ಯುಕ್ತವಲ್ಲ.

ರಾಜ್ಯ ಸುಖದಂತೆ ಸ್ವರ್ಗಸುಖವೂ ಅನಿತ್ಯ ಎಂಬ ಈ ಒಂದು ಅಂಶದಲ್ಲಿ ಹೋಲಿಕೆ ಇದೆ. ಆದರೆ ಅದನ್ನು 'ಅತುಲ್ಯಾತಿಶಯ ಧ್ವಂಸಾತ್ ಅನಿತ್ಯಂ' ಎಂಬ ಪಾಠವೇ ಚೆನ್ನಾಗಿ ಸಮರ್ಥಿಸುವುದು. ರಾಜ್ಯಸುಖ ರಣರಂಗದಲ್ಲಿ ಸರಿಮಿಗಿಲಿಲ್ಲದ ಶೂರನ ಕೈಯಲ್ಲಿ ಕ್ಷಣದಲ್ಲಿ ಧ್ವಂಸವಾಗುವುದರಿಂದ ಹೇಗೆ ಅನಿತ್ಯವೋ ಹಾಗೇ ಸ್ವರ್ಗಸುಖವೂ ಕೂಡ ಸರಿಮಿಗಿಲಿಲ್ಲದ ದಿವ್ಯಶಕ್ತಿಸಂಪನ್ನರಾದ ದೇವತೆಗಳ ಕೈಯಲ್ಲಿ ಕ್ಷಣದಲ್ಲಿ ಧ್ವಂಸವಾಗುವುದು ಪುಣ್ಯ ತೀರಿದಾಗ ಅವಶ್ಯ ಕಂಡುಬರುತ್ತದೆ.

ಅನಿತ್ಯತ್ವಕ್ಕೆ ಉಪಪಾದಕವಾಗಿ 'ಧ್ವಂಸಾತ್' ಎಂದು ಪಂಚಮ್ಯಂತ ಪದವಿದೆ. ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ 'ಧ್ವಂಸಂ' ಧ್ವಂಸಉಳ್ಳದ್ದು 'ಅನಿತ್ಯಂ' ನಾಶ ಉಳ್ಳದ್ದು ಎಂದು ಪುನರುಕ್ತಿ. ಅದನ್ನು ಪರಿಹರಿಸಲು ಧ್ವಂಸ ಎಂದರೆ ಧ್ವಂಸಭಯ ಎಂದು ವಿವರಣೆ ನೀಡುತ್ತಾರೆ.

'ಮಂಡಲವರ್ತಿನಾಂ' ಎಂದರೆ ಮಂಡಲೇಶ್ವರರಿಗೆ, ರಾಜರಿಗೆ, ರಾಜ್ಯಸುಖ ಹೇಗೆ ಪರಸ್ಪರ ಸ್ಪರ್ಧೆ ಅಸೂಯೆ ನಾಶಭಯಗಳಿಂದ ಕೂಡಿರುತ್ತದೋ ಹಾಗೆ ಕರ್ಮಿಗಳಿಗೆ ಸ್ವರ್ಗಸುಖ ಎನ್ನುತ್ತಾರೆ. ಆದರೆ ಸ್ವರ್ಗಸುಖದಲ್ಲಿ ಸ್ಪರ್ಧೆ ಮುಂತಾದುವು ಇಲ್ಲ. 'ನಶ್ವರಂ ಕರ್ಮನಿರ್ಮಿತಂ' ಎಂದು ಹೇಳಿದಂತೆ ಅದು ನಶ್ವರ ಎಂಬ ಅಂಶದಲ್ಲಿ ರಾಜ್ಯಸುಖಕ್ಕೆ ಸಮಾನ ಎನ್ನಬೇಕು. 'ಮಂಡಲವರ್ತಿನಾಂ' ಎಂಬ ಶಬ್ದಕ್ಕೆ ರಣರಂಗದಲ್ಲಿ ಹೋರಾಡುವ ವೀರರೆಂದು ಅರ್ಥವಿಟ್ಟುಕೊಂಡರೆ ಅವರಿಗೆ ಸರಿಮಿಗಿಲಿಲ್ಲದ ಶೂರನ ಕೈಯಲ್ಲಿ ಮರಣ ನಿಶ್ಚಿತ ಎಂದು ಚೆನ್ನಾಗಿ ಉಪಪಾದನೆ ಮಾಡಲು ಸಾಧ್ಯವಾಗುವುದು.

'ಮಂಡಲವರ್ತಿ' ಶಬ್ದಕ್ಕೆ ಲೋಕದಲ್ಲಿ ಮಂಡಲೇಶ್ವರ, ಮಾಂಡಲಿಕ ರಾಜರೆಂದು ಅರ್ಥವಿದ್ದರೂ, ರಣರಂಗದಲ್ಲಿ ಮಾಡುವ ಒಂದು ಬಗೆಯ ವ್ಯೂಹ ರಚನೆಗೆ ಮಂಡಲ ಎಂದು ಹೆಸರು ಕಾಮಂದಕೀಯನೀತಿ ಶಾಸ್ತ್ರದಲ್ಲಿ ಉಕ್ತವಾಗಿದೆ—

ತಿರ್ಯಗ್‌ವೃತ್ತಿಶ್ಚ ದಂಡಃ ಸ್ಯಾದ್ ಭೋಗೋಽನ್ವಾವೃತ್ತಿರೇವ ಚ
ಮಂಡಲಂ ಸರ್ವತೋವೃತ್ತಿಃ ಪೃಥಗ್‌ವೃತ್ತಿರಸಂಹತಃ ॥

ಅದರಿಂದ 'ಮಂಡಲವರ್ತಿ'ಗಳೆಂದರೆ ರಣರಂಗದಲ್ಲಿ ಮಂಡಲವೆಂಬ ಒಂದು ಬಗೆಯ ವ್ಯೂಹರಚನೆ ಮಾಡಿ ನಿಂತ ವೀರರು ಎಂದರ್ಥ. ಮಹಾಭಾರತದಲ್ಲಿ ಭೀಷ್ಮರು ಮಂಡಲವ್ಯೂಹವನ್ನೂ ಧರ್ಮರಾಜನು ವಜ್ರವ್ಯೂಹವನ್ನೂ ರಚನೆ ಮಾಡಿದರೆಂದಿದೆ. (ಭೀಷ್ಮ 83.23)

'ಮಿಥುನೀಚಾರಿ'ಗಳೆಂದರೆ 'ಸ್ತ್ರೀಭಿರ್ಮಿಥುನೀಭೂಯ ಪ್ರವರ್ತಮಾನ'ರು ಗೃಹಸ್ಥರು. ಗೃಹಸ್ಥಾಶ್ರಮವನ್ನು ಇಲ್ಲಿ ನಿಂದಿಸಿದಂತೆ ಕಾಣುತ್ತದೆ. ಆದರೆ ಅದು ನಿಂದ್ಯವಲ್ಲ, ಬ್ರಹ್ಮಾದಿದೇವತೆಗಳು ಗೃಹಸ್ಥರಾಗಿ ಮೋಕ್ಷಸಾಧನೆ ಮಾಡುತ್ತಾರೆ. ಹೀಗಾಗಿ ಗೃಹಸ್ಥರು ಮಾಡುವ ಯಾಗಾದಿಕರ್ಮವನ್ನು ಭಾಗವತ ನಿಂದಿಸುತ್ತಿಲ್ಲ.

'ಪತ್ನೀ ಸಮೇತರಾಗಿ ಯಾಗಾದಿ ಕರ್ಮ ಮಾಡುವವರು ಎಂದೂ ಮಾಯೆ ಯನ್ನು ದಾಟುವುದಿಲ್ಲ' ಎಂದು [1]ವಿಶ್ವನಾಥವ್ಯಾಖ್ಯಾನದಲ್ಲಿ ಹೇಳಿದ್ದು ಭಾಗವತಕ್ಕೇ ವಿರುದ್ಧವಾಗುವುದು. ಭಾಗವತ (11.3.29)ದಲ್ಲಿ 'ಯಾಗ ದಾನ ಜಪತಪಗಳನ್ನು ಮಾಡಿ ಭಗವಂತನಿಗೆ ಅರ್ಪಿಸಬೇಕು. ಹೆಂಡತಿ ಮಕ್ಕಳು ಮನೆ ಮಠ ಮುಂತಾದುವನ್ನೂ ಅವನಿಗೆ ಅರ್ಪಿಸಬೇಕು. ಅಂದರೆ ಅವನು ನೀಡಿದ ಸೌಭಾಗ್ಯ ವೆಂದು ತಿಳಿದು ಅನುಭವಿಸಬೇಕು. ಅದರಿಂದ ಮಾಯೆಯನ್ನು ದಾಟುವುದು ಶಕ್ಯವಾಗುವುದೆಂ'ದು ಪ್ರಬುದ್ಧ ಮುನಿಯೇ ಮುಂದೆ ಇಲ್ಲಿಯೇ ನಿಮಿರಾಜನಿಗೆ ಉಪದೇಶಿಸುತ್ತಿದ್ದಾರೆ.

~~ಸನಕಾದಿ ಮುನಿಗಳು ಯತಿಗಳಾಗಿ ಮೋಕ್ಷಕ್ಕೆ ಹೋಗುತ್ತಾರೆ ಎಂದ ಮಾತ್ರಕ್ಕೆ~~ ಎಲ್ಲರೂ ಯತಿಗಳಾಗಬೇಕಾಗಿಲ್ಲ. ಸಂದೃಶ್ಯ ಎಂಬ ಗ್ರಂಥದಲ್ಲಿ ಅವರವರ **ಯೋಗ್ಯತಾನುಸಾರವಾಗಿ** ಯತಿಯಾಗಿಯೋ ಗೃಹಸ್ಥನಾಗಿಯೋ ಮೋಕ್ಷಸಾಧನ **ಮಾಡಬಹುದು.** ಯೋಗ್ಯತೆ ಮೀರಿ ಮಾತ್ರ ಪ್ರಯತ್ನ ಮಾಡುವುದು ಸಲ್ಲದು' ಎಂದು **ಹೇಳಿದೆ.**

ಮಂಡಲವರ್ತಿನಃ ಯುದ್ಧರಂಗಸ್ಥಾಃ ॥
ದೇವಾಃ ಸಜಾಯಾ ಮುಚ್ಯಂತೇ ಮಾನುಷಾ ಉಭಯಾತ್ಮಕಾಃ ।
ವಿಜಾಯಾ ಏವ ಯೋಗೇಶಾಸ್ತೇಷಾಂ ಯಾಯೈವ ಯೋಗ್ಯತಾ ।
ತಥಾತಥೈವ ಮುಚ್ಯಂತೇ ನಾನ್ಯಥಾ ತು ಕಥಂಚನ ॥
ಇತಿ ಸಂದೃಶ್ಯೇ ॥

ಮಂಡಲವರ್ತಿಗಳೆಂದರೆ ರಣರಂಗದಲ್ಲಿ ಹೋರಾಡುತ್ತಿರುವವರು.

ದೇವತೆಗಳು ಪತ್ನೀಸಮೇತರಾಗಿಯೇ ಮೋಕ್ಷಸಾಧನ ಮಾಡಿಕೊಳ್ಳುತ್ತಾರೆ. ಮನುಷ್ಯರು ಸ್ವರೂಪದಲ್ಲಿ ಗೃಹಸ್ಥರು ಅಥವಾ ವಾನಪ್ರಸ್ಥರಾಗಿದ್ದರೆ ಪತ್ನೀ ಸಮೇತರಾಗಿಯೂ ಬ್ರಹ್ಮಚಾರಿ ಅಥವಾ ಯತಿಗಳಾಗಿದ್ದಲ್ಲಿ ಪತ್ನೀಸಮೇತ

1. ಕರ್ಮಿಣೋ ನೈವ ಮಾಯಾಂ ತರಂತೀತಿ ಸಾಕ್ಷಾದೇವ ವಿವೇಕೇನ ಪಶ್ಯೇದಿತ್ಯಾಹ ಕರ್ಮಾಣೀತಿ ತ್ರಿಭಿಃ । - ವಿಶ್ವನಾಥಃ

ರಲ್ಲದೆಯೂ ಎರಡು ಬಗೆಯಿಂದ ಮೋಕ್ಷಸಾಧನೆ ಮಾಡಿಕೊಳ್ಳುತ್ತಾರೆ. ಯೋಗೇಶ್ವರರು ಪತ್ನೀರಹಿತರಾಗಿಯೇ ಮೋಕ್ಷಸಾಧನೆ ಮಾಡಿಕೊಳ್ಳುತ್ತಾರೆ. ಯೋಗ್ಯತೆ ಯಾವ ಯಾವ ರೀತಿಯದೋ ಆಯಾ ರೀತಿಯಿಂದಲೇ ಮೋಕ್ಷಸಾಧನೆ ಹೊರತು ಯೋಗ್ಯತೆಯನ್ನು ಮೀರಿದರೆ ಅದು ಸರ್ವಥಾ ಶಕ್ಯವಲ್ಲ ಎಂದು ಸಂದೃಶ್ಯ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಪ್ರಬುದ್ಧಮುನಿ ಮಾಯೆಯನ್ನು ದಾಟುವ ಬಗೆ ಹೇಗೆಂಬುದನ್ನು ಉಪದೇಶಿಸುತ್ತಾರೆ—

ಸರ್ವತೋ ಮನಸೋಽಸಂಗಮಾದೌ ಸಂಗಂ ಚ ಸಾಧುಷು ।
ದಯಾಂ ಮೈತ್ರೀಂ ಪ್ರಶ್ರಯಂ ಚ ಭೂತೇಷ್ವದ್ಧಾ ಯಥೋಚಿತಮ್ ॥ ೨೪ ॥

ಜ್ಞಾನ ಸಾಧನೆಗೆ ಅನುಪಯುಕ್ತವಾದ ಎಲ್ಲ ವಿಷಯ ಸುಖಗಳಲ್ಲಿಯೂ ~~ಅನಾಸಕ್ತಿಯಿಂದಿರುವುದನ್ನು ಕಲಿಯಬೇಕು. ಅದಕ್ಕೆ ಮೊದಲು ಸಜ್ಜನರ~~ ಒಡನಾಟದಲ್ಲಿರುವುದನ್ನು ಕಲಿಯಬೇಕು. ಕಿರಿಯರು ಸಮಾನಿಕರು ಉತ್ತಮರೆಂದು ಮೂರು ಬಗೆಯಾದ ಜನರಲ್ಲಿ ಯಥೋಚಿತವಾಗಿ ದಯೆ ಮೈತ್ರಿ ನಮ್ರತೆಗಳನ್ನು ಚೆನ್ನಾಗಿ ರೂಢಿಸಿಕೊಳ್ಳಬೇಕು.

ಹಣ, ರಕ್ತಸಂಬಂಧ, ವಯಸ್ಸು, ಮಹತ್ಕಾರ್ಯ, ವಿದ್ಯೆ—ಈ ಐದನ್ನು ಆದರಿಸಬೇಕು. ಈ ವಿಷಯಗಳಲ್ಲಿ ಕಿರಿಯರು ಸಮಾನಿಕರು ಹಿರಿಯರೆಂದು ಮೂರು ಬಗೆಯವರಿರುತ್ತಾರೆ. ಅವರಲ್ಲಿ ದಯೆ ಮೈತ್ರಿ ನಮ್ರತೆಗಳನ್ನು ರೂಢಿಸಿಕೊಂಡರೆ ಮಾಯೆಯನ್ನು ದಾಟಬಹುದು ಎಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಈ ಬಗ್ಗೆ ಏನೂ ಹೆಚ್ಚಿನ ವಿವರಣೆ ನೀಡಿಲ್ಲ. ವಸ್ತುತಃ ಮಾಯೆಯನ್ನು ದಾಟಬೇಕಾದರೆ ವಿದ್ಯೆಯಲ್ಲಿ ಮಾನ್ಯರಾದವರಲ್ಲಿ ಸಂಗವನ್ನೂ ಮಾಡಬೇಕು. ಅವರೇ ಸಾಧುಗಳೆಂದು ವಿವಕ್ಷಿತರಾಗಿದ್ದಾರೆ. ಅವರ ಸಂಗವೇ ಸಾಧುಸಂಗ. ಸಾಧುಗಳ ಅನುಗ್ರಹಕ್ಕೆ ಅವರಲ್ಲಿ ವಿನಮ್ರತೆ ಮಾತ್ರವೇ ಸಾಲದು. ಸೇವೆ ಮಾಡಬೇಕು. ಅವರಿಂದ ತತ್ವವಿದ್ಯೆಯನ್ನು ಸಂಪಾದಿಸಬೇಕು. ಅದಕ್ಕೆ ಯಥೋಚಿತವಾದ ಸಂಗ ಏನೆಂದರೆ ಶ್ರೀಮದಾಚಾರ್ಯರು ಹೇಳುತ್ತಾರೆ.

ಸಂತಸ್ತು ತ್ರಿವಿಧಾಃ ಪ್ರೋಕ್ತಾ ಉತ್ತಮಾ ಮಧ್ಯಮಾಧಮಾಃ ।
ಉತ್ತಮಾ ದೇವತಾಸ್ತತ್ರ ಋಷ್ಯಾದ್ಯಾ ಮಧ್ಯಮಾ ಮತಾಃ ।

ಅಧಮಾ ಮಾನುಷೋತ್ಕೃಷ್ಟಾಸ್ತೇ ಚಾಪಿ ತ್ರಿವಿಧಾ ಮತಾಃ ।
ತತ್ರಾಧಮೇಷು ಯೇಷಾಂ ತು ಸಂಗೋ ವಿಘ್ನಾಯ ವೈ ಭವೇತ್ ।
ತೇಷಾಮುತ್ತಮಸಂಗಸ್ಯ ತೇಷಾಂ ಸಂಗಂ ಪರಿತ್ಯಜೇತ್ ।
ಆದೌ ತು ತೇಷಾಮಪಿ ಚ ಸಂಗ ಉತ್ತಮಸಂಗತೇಃ ।
ಸಾಧನತ್ವಾನ್ನ ತು ತ್ಯಾಜ್ಯೋ ಯದಿ ತ್ಯಕ್ತುಂ ನ ಶಕ್ಯತೇ ।
ತದಾ ತೇಽಪಿ ತಥಾ ನೇಯಾ ಯಥಾ ವಿಘ್ನೋ ನ ವೈ ಭವೇತ್ ।
ತದುಚ್ಚಸಂಗತೇಃ ಕ್ವಾಪಿ ತದಾ ದೋಷೋ ನ ಜಾಯತೇ ॥
ಪ್ರಯೋಜನಾಯ ತೇಷಾಂ ತು ಸಂಗಃ ಸರ್ವಾತ್ಮನೇಷ್ಯತೇ ॥

ಸಾಧುಗಳು ಮೂರು ಬಗೆ. ಉತ್ತಮರು ಮಧ್ಯಮರು ಸಣ್ಣವರೆಂದು. ಉತ್ತಮರು ದೇವತೆಗಳು. ಮಧ್ಯಮರು ಋಷಿ ಮುಂತಾದವರು, ಸಣ್ಣವರು ಮನುಷ್ಯೋತ್ತಮರು. ಮನುಷ್ಯೋತ್ತಮರು ಕೂಡ ಮೂರು ಬಗೆ. ಚತುರ್ಗುಣೋಪಾಸಕರು ಉತ್ತಮರು, ಎರಡು ಮೂರು ಗುಣ ಉಪಾಸನ ಮಾಡುವವರು ಮಧ್ಯಮರು, ಏಕಗುಣೋಪಾಸಕರು ಸಣ್ಣವರು. ಇವರಲ್ಲಿ ಸಣ್ಣವರ ಸಂಗ ಅವರಿಗಿಂತ ಉತ್ತಮರಾದವರ ಸಂಗಕ್ಕೆ ವಿಘ್ನಕಾರಿಯಾಗುವಂತಿದ್ದರೆ ಅಂಥವರ ಸಂಗವನ್ನು ಬಿಡಬೇಕು. ಮೊದಲಿಗೆ, ಉತ್ತಮರ ಸಂಗ ಸಿಗದಿದ್ದಾಗ, ಸಣ್ಣವರ ಸಂಗ ಮಾಡಿದ್ದು ಉತ್ತಮರ ಸಂಗ ಸಿಗಲು ಅನುಕೂಲವಾಗಿದ್ದರಿಂದ ಬಿಡಲಾಗದೆನ್ನುವುದಾದರೆ ಬಿಡಬೇಕಾಗಿಲ್ಲ. ಆದರೆ ಉತ್ತಮರ ಸಂಗಕ್ಕೆ ಎಂದೂ ಅಡ್ಡಿಯಾಗದಂತೆ ಸಣ್ಣವರನ್ನು ಸಹ ಅನುಕೂಲರಾಗುವಂತೆ ಮಾಡಿಕೊಳ್ಳಬೇಕು. ಆಗ ದೋಷ ಉಂಟಾಗುವುದಿಲ್ಲ. ಜ್ಞಾನಸಂಪಾದನೆಗಾಗಿ ಅಲ್ಲದಿದ್ದರೂ ಭೋಜನಾದಿಗಳಿಂದ ಶರೀರಪೋಷಣೆಗಾಗಿ ಸಣ್ಣವರ ಒಡನಾಟ ಸರ್ವಥಾ ಅಪೇಕ್ಷಿತವೇ ಆಗಿರುತ್ತದೆ.

ಸರ್ವಥಾ ಚೈವ ದೇವೇಷು ಸಂಗೋ ಮುನಿಗಣೇಷು ಚ ।
ಭಾವ್ಯೋ ಹಿ ತಂ ವಿನಾ ನೈವ ಪುರುಷಾರ್ಥಃ ಕ್ವಚಿದ್ ಭವೇತ್ ।
ವಿಶೇಷತಃ ಸ್ವೋತ್ತಮೇಷು ವಿನಾ ಸಂಗಂ ನ ಮುಚ್ಯತೇ ।
ಸ್ವನೀಚೇಷು ತು ದೇವೇಷು ವಿನಾ ಸಂಗಂ ನ ಪೂರ್ಯತೇ ।
ತಸ್ಮಾತ್ ಸತ್ಸೂತ್ತಮೇಷ್ವೇಷು ಸಂಗಃ ಕಾರ್ಯೋ ವಿಶೇಷತಃ ।
ಅನಾದ್ಯನಂತಕಾಲೇಷು ನ ಚ ಹಾಪ್ಯಃ ಕಥಂಚನ ।
ಸತಾಂ ತದುತ್ತಮೇಶೇಶೇ ಕಿಮು ವಿಷ್ಣೌ ಪರಾತ್ಪರೇ ॥

ಇತಿ ಗಾರುಡೇ ॥

ದೇವತೆಗಳಲ್ಲಿ ಮುನಿಗಣಗಳಲ್ಲಿ ಭಕ್ತಿ ಸರ್ವಥಾ ಇರಲೇಬೇಕು. ಅವರ ಉಪಾಸನೆ ಇಲ್ಲದೆ ಎಂದೂ ಯಾವ ಪುರುಷಾರ್ಥವೂ ಸಿಗಲಾರದು. ದೇವತೆಗಳಲ್ಲಿ ವಿಶೇಷವಾಗಿ ಸ್ವೋತ್ತಮರ ಉಪಾಸನೆ ಇಲ್ಲದೆ ಮೋಕ್ಷವಾಗದು. ಉತ್ತಮರು ಕೂಡ ಕೆಳಗಿನವರ ಒಡನಾಟ ಮಾಡಿ ಅವರಿಂದ ಜ್ಞಾನಸಾಧನ ಮಾಡಿಸದಿದ್ದರೆ ಅದು ಕರ್ತವ್ಯ ಚ್ಯುತಿ ಎನಿಸುವುದರಿಂದ ಮೋಕ್ಷಾನಂದ ಪೂರ್ತಿ ಅಭಿವ್ಯಕ್ತವಾಗದು. ಅದರಿಂದ ಸಜ್ಜನರಲ್ಲಿ ಉತ್ತಮರಾದ ಈ ದೇವತೆಗಳ ಆರಾಧನೆಯನ್ನು ವಿಶೇಷವಾಗಿ ಮಾಡಲೇಬೇಕು. ಅನಾದಿ ಅನಂತಕಾಲಗಳಲ್ಲಿಯೂ ಇವರ ಆರಾಧನೆಯನ್ನು ಸರ್ವಥಾ ಬಿಡಬಾರದು. ಹೀಗೆ ಸಜ್ಜನರಾದ ದೇವತೆಗಳ ಆರಾಧನೆಯೇ ಆವಶ್ಯಕವೆಂದ ಮೇಲೆ ಅವರಿಗೂ ನಿಯಾಮಕನಾದ ಪರಾತ್ಪರನಾದ ಹರಿಯ ಉಪಾಸನೆ ಆವಶ್ಯಕವೆಂದು ಬೇರೇನು ಹೇಳಬೇಕು ಎಂದು ಗರುಡಪುರಾಣದಲ್ಲಿದೆ.

ಬಹ್ವಪೇಕ್ಷೋ ಹಿ ಜಿಜ್ಞಾಸುರತೋ ದೇಹಾದಿವೃತ್ತಯೇ ।
ಕಿಂಚಿತ್‌ಸತ್ಸ್ವಪಿ ಸಂಗೀ ಸ್ಯಾದಶಕ್ಯೇ ಸತಿ ವರ್ತನೇ ।

ಕೃತಕೃತ್ಯಸ್ತ್ಯಜೇತ್ ಸಂಗಂ ಸದಾ ಗುರುಸುರಾದಿಷು ।
ಸಂಗೀ ಸ್ಯಾನ್ನಹಿ ತತ್ಸಂಗಂ ವಿನಾ ತು ಸುಖಭಾಗ್ ಭವೇತ್ ।
ತಸ್ಮಾದನಾದ್ಯನಂತೈವ ಸಕ್ತಿರ್ಗುರುಸುರಾದಿಷು ।
ಅನ್ಯತ್ರ ಕೃತ್ಯಾಪೇಕ್ಷಾ ಸ್ಯಾದಿತಿ ಸಂಗವಿನಿರ್ಣಯಃ ॥

ಇತಿ ಭವಿಷ್ಯತ್‌ಪರ್ವಣಿ ॥

ಜ್ಞಾನಾರ್ಥಿಯು ಶರೀರ ಮುಂತಾದವುಗಳ ಪೋಷಣೆಗಾಗಿ ಅನ್ನವಸ್ತ್ರಾದಿ ಬಹುಪದಾರ್ಥಗಳನ್ನು ಅಪೇಕ್ಷಿಸುವುದರಿಂದ ಸತಿಸುತರು ಧನಿಕರಾದ ಬಂಧುಗಳು ಮುಂತಾದ ಸಾಮಾನ್ಯ ಸಜ್ಜನರಲ್ಲಿಯೂ ಒಡನಾಡಿಯಾಗಿರ ಬೇಕಾಗುತ್ತದೆ. ಇದು ಅವರ ಸಹಾಯವಿಲ್ಲದೆ ಶರೀರಪೋಷಣೆ ಅಶಕ್ಯವಾದಾಗ ಮಾತ್ರ. ಶಕ್ಯವಾದರೆ ಕೃತಕೃತ್ಯನಾಗಿರುವುದರಿಂದ ಅವರ ಸಂಗವನ್ನು ಬಿಡಬೇಕು. ಗುರುಗಳಲ್ಲಿ ದೇವಋಷಿ ಮುಂತಾದವರಲ್ಲಿ ಮಾತ್ರ ಅವರಿಂದ ಜ್ಞಾನಾದಿಗಳನ್ನು ಪಡೆದು ಕೃತಕೃತ್ಯನಾದರೂ ಸದಾ ಭಕ್ತಿ ಮಾಡಲೇಬೇಕು. ಅವರಲ್ಲಿ ಭಕ್ತಿ ಇಲ್ಲದೆ ಮುಕ್ತಿಯನ್ನು ಹೊಂದಲಾರ. ಹೀಗಾಗಿ ಗುರುಗಳಲ್ಲಿ ದೇವರ್ಷ್ಯಾದಿಗಳಲ್ಲಿ ಭಕ್ತಿ ಅನಾದಿ ಅನಂತ ಕಾಲಗಳಲ್ಲಿರಬೇಕು. ಬೇರೆ ಸಜ್ಜನರಲ್ಲಿ ಆವಶ್ಯಕವಿದ್ದಾಗ ಮಾತ್ರ ಒಡನಾಟ ಮಾಡಬೇಕು. ಇದು ಸಾಧುಸಂಗದ ಬಗ್ಗೆ ನಿರ್ಣಯ ಎಂದು ಭವಿಷ್ಯತ್ಪರ್ವದಲ್ಲಿದೆ.

❖ ❖ ❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಪ್ರಬುದ್ಧಮುನಿ ಮಾಯೆಯನ್ನು ದಾಟುವ ಬಗೆಯನ್ನು ಹೇಳುತ್ತಾರೆ—

ಶ್ರದ್ಧಾಂ ಭಾಗವತೇ ಶಾಸ್ತ್ರೇಽನಿಂದಾಮನ್ಯತ್ರ ಚಾಪಿ ಹಿ।
ಮನೋವಾಕ್ಕಾಯದಂಡಂ ಚ ಸತ್ಯಂ ಶಮದಮಾವಪಿ ॥ ೨೭ ॥

ವೇದಪಂಚರಾತ್ರ ಭಾರತಾದಿ ಶಾಸ್ತ್ರಗಳಲ್ಲಿ ಶ್ರದ್ಧೆ ಇರಿಸಬೇಕು. ಅನಿಂದಾಂ–ಸಂಗೀತಜ್ಯೋತಿಷ್ಯಾದಿಗಳನ್ನು ನಿಂದಿಸಬಾರದು, ಅವುಗಳಿಂದ ಲೌಕಿಕ ಪ್ರಯೋಜನ ಪಡೆಯಲೂಬಾರದು. ನಿಂದಾಂ–ವೇದವಿರುದ್ಧವಾದ ಆಗಮಗಳನ್ನು ಸರ್ವಥಾ ನಿರಾಕರಿಸಬೇಕು. ಮನೋವಾಕ್ಕಾಯಗಳನ್ನು ದಂಡಿಸಿ ಅವುಗಳನ್ನು ಭಗವತ್ಪರವಾಗಿಸುವುದು, ಸತ್ಯ ಶಮ ದಮ ಇವೆಲ್ಲವನ್ನೂ ಅಭ್ಯಾಸ ಮಾಡಬೇಕು.

'ಅನ್ಯತ್ರ ಅನಿಂದಾಂ' ಎಂಬಲ್ಲಿ ಅನ್ಯತ್ರ ಎಂದರೆ ಶಿವ ಬ್ರಹ್ಮ ಶಕ್ತಿ ಗಣಪತಿ ಮುಂತಾದವರನ್ನು ಪ್ರತಿಪಾದಿಸುವ ಶೈವಾದಿ ಆಗಮಗಳನ್ನು ನಿಂದಿಸಬಾರದು. ಏಕೆಂದರೆ ವಿಷ್ಣುವೇ ಸದಾ ಆರಾಧ್ಯನಾಗಿದ್ದರೂ ಬೇರೆ ಬ್ರಹ್ಮರುದ್ರಾದಿ ದೇವತೆಗಳನ್ನು ಸರ್ವಥಾ ತಿರಸ್ಕರಿಸಬಾರದು. ಎಂದು [1]ರಾಧಾರಮಣದಾಸ ಮುಂತಾದವರ ವ್ಯಾಖ್ಯಾನ ಹೇಳುತ್ತಿದೆ.

ಆದರೆ ಬ್ರಹ್ಮರುದ್ರಾದಿಗಳನ್ನು ತಿರಸ್ಕರಿಸಬಾರದೆನ್ನುವುದು ನಿಜವೇ ಆದರೂ ಅವರ ಆಗಮಗಳನ್ನು ತಿರಸ್ಕರಿಸಲೇಬೇಕು. ಅವುಗಳನ್ನು ಆದರಿಸಿದರೆ, 'ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ' ಎಂದು ಈಶೋಪನಿಷತ್ತು ಹೇಳುವಂತೆ ತಮಸ್ಸಾಗುವುದು.

ಬ್ರಹ್ಮರುದ್ರಾದಿ ದೇವತೆಗಳನ್ನು ತಿರಸ್ಕರಿಸದಿದ್ದರೆ ಸಾಲದು, ಅವರನ್ನು ಹರಿಯ ಪರಿವಾರವಾಗಿ ಪೂಜಿಸಬೇಕು, ಇಲ್ಲದಿದ್ದರೆ ಮೋಕ್ಷ ಸಿಗಲಾರದು. ದ್ವೇಷಿಸಿದರೆ ತಮಸ್ಸೇ ಆಗುವುದು.

ಅದರಿಂದ 'ಅನ್ಯತ್ರ ಅನಿಂದಾಂ' ಎಂದು ಭಾಗವತ ಸಂಗೀತನಾಟ್ಯಾದಿ ಕಲೆಗಳ ನಿಂದೆ ಕೂಡದೆನ್ನುತ್ತಿದೆ. ಹೀಗೆಂದ ಮಾತ್ರಕ್ಕೆ ಶ್ರದ್ಧೆ ಮಾಡಬೇಕೆಂದು ಅದರ

---

1. ಅನ್ಯತ್ರ ಶಿವಾದಿ ಪ್ರತಿಪಾದಕ ಶಾಸ್ತ್ರಾದೌ। ಆದಿನಾ ತದನ್ಯ ದೇವತಾದಿಪರಿಗ್ರಹಃ। ತದುಕ್ತಂ–
ವಿಷ್ಣುರೇವ ಸದಾಽಽರಾಧ್ಯಃ ಸರ್ವದೇವೇಶ್ವರಃ ಪುಮಾನ್।
ಇತರೇ ಬ್ರಹ್ಮರುದ್ರಾದ್ಯಾ ನಾವಜ್ಞೇಯಾಃ ಕಥಂಚನ ಇತಿ। -ರಾಧಾರಮಣದಾಸಃ

ಅಭಿಪ್ರಾಯವಲ್ಲ. ಶ್ರದ್ಧೆಯೂ ಕೂಡದು. ಶ್ರದ್ಧೆ ಬೇಕೆನ್ನುವ ಅಭಿಪ್ರಾಯವಿರುತ್ತಿದ್ದರೆ 'ಅನಿಂದಾಂ' ಎನ್ನದೆ 'ಶ್ರದ್ಧಾಂ' ಎಂದೇ ಹೇಳುತ್ತಿತ್ತು. ಹೀಗಾಗಿ ಸಂಗೀತಾದಿ ವಿದ್ಯೆಗಳು ಕೂಡ ಭಕ್ತಿ ಪ್ರಚೋದಕವಾಗಬಹುದಾದ್ದರಿಂದ ಅವುಗಳನ್ನು ದುಃಶಾಸ್ತ್ರಗಳಂತೆ ತಿರಸ್ಕರಿಸುವುದು ಬೇಡವೆಂದು ಭಾಗವತ ಹೇಳುತ್ತಿದೆ. ದುಃಶಾಸ್ತ್ರಗಳನ್ನು ತಿರಸ್ಕರಿಸಲೇಬೇಕೆನ್ನುತ್ತಿದೆ. ಅದಕ್ಕೆ 'ನಿಂದಾಮನ್ಯತ್ರ' ಎಂದು ಕೂಡ ಪದವಿಭಾಗ ವಿಟ್ಟುಕೊಳ್ಳಬೇಕು. 'ಅನ್ಯತ್ರ' ಎಂದರೆ ಈಗ, 'ದುಃಶಾಸ್ತ್ರಗಳ ಬಗ್ಗೆ ನಿಂದೆ' ಎಂದರ್ಥ.

'ಶ್ರದ್ಧಾಂ ಭಾಗವತೇ ಶಾಸ್ತ್ರೇ' ಎಂಬಲ್ಲಿ ಭಾಗವತಶಾಸ್ತ್ರವೆಂದರೆ ಈ ಭಾಗವತ ಪುರಾಣ ಮಾತ್ರವೇ ಅಲ್ಲ. ಭಗವಂತನನ್ನು ಪ್ರತಿಪಾದಿಸುವ ವೇದಭಾರತಾದಿ ಸಕಲ ಸಚ್ಛಾಸ್ತ್ರಗಳೂ ಭಾಗವತ ಶಾಸ್ತ್ರವೆಂದು ವಿವಕ್ಷಿತವಾಗಿವೆ ಎಂಬುದು ಬ್ರಹ್ಮಾಂಡ ಪುರಾಣ ವಚನದಿಂದ ತಿಳಿದುಬರುತ್ತದೆ. ಸಂಗೀತಾದಿ ಶಾಸ್ತ್ರಗಳಲ್ಲಿ ದುಃಶಾಸ್ತ್ರಗಳಂತೆ ತಿರಸ್ಕಾರವೂ ಬೇಡ ಸಚ್ಛಾಸ್ತ್ರಗಳಂತೆ ಶ್ರದ್ಧೆಯೂ ಬೇಡ ಎಂದು ಹೇಳುವ ಭಾಗವತದ ಅಭಿಪ್ರಾಯ ಬ್ರಹ್ಮಾಂಡ ಪುರಾಣವಚನದಿಂದಲೆ ಸ್ಪಷ್ಟವಾಗುವುದು— 'ಸಂಗೀತಾದಿ ಶಾಸ್ತ್ರಗಳ ಬಗ್ಗೆ ಅವು ಹೇಳುವುದು ಯಥಾರ್ಥವೇ. ಆದರೆ ಅದರಿಂದ ನನಗೆ ಏನೂ ಪ್ರಯೋಜನವಾಗಬೇಕಾಗಿಲ್ಲ' ಎನ್ನುವ ಮನೋಭಾವವಿರಬೇಕು ಎಂದು–

ಶ್ರದ್ಧಾ ಭಾಗವತೇ ತಂತ್ರೇ ವೇದೇ ಭಾರತ ಪಂಚಮೇ ।
ವಿಷ್ಣೋರವ್ಯವಧಾನೇನ ವಕ್ತೃತ್ವಾತ್ ಸರ್ವಥಾ ಭವೇತ್ ।
ಕಲಾವಿದ್ಯಾಸ್ವನಿಂದಾ ಚ ವ್ಯವಧಾನೇನ ಕೇಶವೇ ।
ಪ್ರವೇಶಾದ್ ಯತಿಭಿಃ ಕಾರ್ಯಾ ಹ್ಯನ್ಯಥಾ ನರಕಂ ವ್ರಜೇತ್ ।
ಶ್ರನ್ನಾಮಾಸ್ತಿಕ್ಯ ಬುದ್ಧಿಃ ಸ್ಯಾತ್ ಸಾ ಚೈವ ದ್ವಿವಿಧಾ ಮತಾ ।
ಅತ್ರೋಕ್ತಮಸ್ತೀತ್ಯೇಕಾಽತ್ರ ಮಮಾತ್ರಾಸ್ತಿ ಪ್ರಯೋಜನಂ ।
ಇತ್ಯನ್ಯಾ ತತ್ರ ಪೂರ್ವಾ ತು ಯತೇಃ ಕಾರ್ಯಾ ಕಲಾಸ್ವಪಿ ।
ದ್ವಿತೀಯಾ ನಹಿ ಕರ್ತವ್ಯಾ ಪಂಚರಾತ್ರವಿರೋಧಿಷು ।
ಸದೈವ ನಿಂದಾ ಸರ್ವೈಶ್ಚ ಬ್ರಹ್ಮಾದಿಸ್ಥಾವರಾಂತಕೈಃ ।
ಸಮ್ಯಕ್‌ಕಾರ್ಯಾ ತದ್ವಿನಾ ಚ ತಮೋ ಯಾಂತಿ ವಿನಿಶ್ಚಯಾತ್ ।
ಕುರ್ವಂತ್ಯೇವ ಸುರಾಸ್ತತ್ರ ತದನ್ಯೇಷಾಂ ತಮೋ ಭವೇತ್ ॥

ಭಗವಂತನನ್ನು ಪ್ರತಿಪಾದಿಸುವ ಪಂಚರಾತ್ರದಲ್ಲಿ ವೇದ ಭಾರತ ಪುರಾಣಗಳಲ್ಲಿ ವಿಷ್ಣುವು ನೇರವಾಗಿ ಪ್ರತಿಪಾದಿತನಾಗುವುದರಿಂದ ಅವುಗಳಲ್ಲಿ ಸರ್ವಥಾ ಶ್ರದ್ಧೆ

ಇಡಬೇಕು. ಸಂಗೀತಾದಿ ಕಲೆಗಳಲ್ಲಿ ಕೇಶವನ ಜ್ಞಾನಕ್ಕೆ ಸಹಾಯಕವಾದ ವಿಷಯಗಳಿರುವುದೆಂದು ಒಪ್ಪಿಕೊಂಡು ಅವುಗಳ ಬಗ್ಗೆ ನಿಂದೆಯನ್ನಾಗಲಿ ಶ್ರದ್ಧೆಯನ್ನಾಗಲಿ ಯತಿಯು ಮಾಡದಿರಬೇಕು. ಇಲ್ಲದಿದ್ದರೆ ನರಕವನ್ನು ಹೊಂದುವನು. ಶ್ರತ್ ಎಂದರೆ ಶಾಸ್ತ್ರಪ್ರಮೇಯ ವಾಸ್ತವದಲ್ಲಿದೆ ಎನ್ನುವ ವಿಶ್ವಾಸ. ಅದನ್ನು ಶಾಸ್ತ್ರದಲ್ಲಿ ಇರಿಸುವುದೇ ಶ್ರದ್ಧೆ. ಅದು ಎರಡು ಬಗೆ. ಶಾಸ್ತ್ರದಲ್ಲಿ ಹೇಳಿದ್ದು ವಾಸ್ತವದಲ್ಲಿದೆ ಎನ್ನುವ ವಿಶ್ವಾಸ ಒಂದು. ಅದರಲ್ಲಿ ನನಗೆ ಬೇಕಾದ ಪ್ರಯೋಜನ ವಿದೆ ಎನ್ನುವುದು ಇನ್ನೊಂದು. ಅವುಗಳಲ್ಲಿ ಮೊದಲನೆಯದು ಕಲೆಗಳಲ್ಲಿಯೂ ಯತಿಗೆ ಕರ್ತವ್ಯವಾಗಿದೆ. ಎರಡನೆಯದು ನಿಷಿದ್ಧವಾಗಿದೆ. ಪಂಚರಾತ್ರಕ್ಕೆ ವಿರೋಧಿಯಾಗಿರುವ ದುಃಶಾಸ್ತ್ರಗಳ ವಿಷಯದಲ್ಲಿ ಬ್ರಹ್ಮಾದಿ ತೃಣಪರ್ಯಂತ ಎಲ್ಲ ಜೀವರೂ ಸದಾ ಚೆನ್ನಾಗಿ ನಿಂದೆ ಮಾಡಲೇಬೇಕು' ಮಾಡದಿದ್ದರೆ ನಿಶ್ಚಯವಾಗಿ ತಮಸಿಗೆ ಹೋಗುತ್ತಾರೆ. ದೇವತೆಗಳು ಮುಕ್ತಿಯೋಗ್ಯರು ನಿಂದೆ ಮಾಡಿಯೇ ತೀರುತ್ತಾರೆ. ಇತರರು ಮಾಡದೆ ತಮಸಿಗೆ ಹೋಗುತ್ತಾರೆ.

ಪಂಚರಾತ್ರಂ ಚ ವೇದಾಶ್ಚ ಮೂಲರಾಮಾಯಣಂ ತಥಾ ।
ಪುರಾಣಂ ಭಾಗವತಂ ಚೈವ ಭಾರತಂ ಚ ನ ಭಿದ್ಯತೇ ।
ಏತೇಷ್ವಪಿ ಯಥಾ ವಿಷ್ಣೋರಾಧಿಕ್ಯ ಪ್ರತಿಪಾದನಂ ।
ತದ್‌ಭಕ್ತಾನಾಂ ಚ ಕ್ರಮಶಃ ಸ ಏವಾರ್ಥೋ ನ ಚಾಪರಃ ।
ಅನ್ಯಥಾ ದೃಶ್ಯಮಾನಂ ತು ಮೋಹಾಯೈವ ವಿನಿರ್ದಿಶೇತ್ ।
ತಸ್ಮಾತ್ ಸರ್ವೇಷು ಶಾಸ್ತ್ರೇಷು ವಿಷ್ಣೋರಾಧಿಕ್ಯಮೇವ ತು ।
ಕ್ರಮೇಣ ಚ ತದೀಯಾನಾಂ ಪ್ರತಿಪಾದ್ಯಂ ನ ಚಾಪರಂ ।
ಇತಿ ಬ್ರಹ್ಮಾಂಡೇ ॥

ಪಂಚರಾತ್ರ ವೇದ ಮೂಲರಾಮಾಯಣ ಭಾಗವತ ಪುರಾಣ ಭಾರತ ಇವುಗಳು ಐಕಮತ್ಯದಿಂದ ವಿಷ್ಣುಸರ್ವೋತ್ತಮತ್ವ ಪ್ರತಿಪಾದಕಗಳಾಗಿವೆ. ಇವುಗಳಲ್ಲಿ ಅಬಿಪ್ರಾಯಭೇದವಿರುವುದಿಲ್ಲ. ಇವುಗಳಲ್ಲಿ ವಿಷ್ಣು ಸರ್ವೋತ್ತಮತ್ವ ಮತ್ತು ಅವನ ಭಕ್ತರ ತಾರತಮ್ಯಗಳನ್ನು ಪ್ರತಿಪಾದನೆ ಮಾಡಿರುವುದು ಯಥಾರ್ಥವೇ ಆಗಿರುವುದರಿಂದ ಅದೇ ಅವುಗಳ ಹಾರ್ದ ಹೊರತು ಅದಕ್ಕೆ ವಿಪರೀತವಾದುದು ವಿವಕ್ಷಿತವಲ್ಲ. ವಿಪರೀತವಾಗಿ ಹೇಳಿದಂತೆ ಕೆಲವೆಡೆ ಕಂಡುಬಂದರೆ ಅದು ಅಯೋಗ್ಯರಿಗೆ ಮೋಹ ಉಂಟುಮಾಡುವ ಸಲುವಾಗಿ ಎಂದು ತಿಳಿಯಬೇಕು. ಅದರಿಂದ ಎಲ್ಲ ಶಾಸ್ತ್ರಗಳಲ್ಲಿ ವಿಷ್ಣು ಸರ್ವೋತ್ತಮತ್ವವೂ ಅವನ ಭಕ್ತರ ಕ್ರಮಿಕ ಉತ್ತಮತ್ವವೂ ಪ್ರತಿಪಾದ್ಯವಾಗಿದೆ ಹೊರತು ಇನ್ನೇನೂ ಅಲ್ಲ ಎಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ.

ಅಂಧಂ ತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ ।
ಇತಿ ಚ ॥

ಗೃಹಿಣೋಽಪ್ಯಲ್ಪಬೋಧಸ್ಯ ನ ಕಲಾಸು ಪ್ರಯೋಜನಂ ।
ಆವರ್ತಯೇದ್ ವೇದತಂತ್ರಂ ಮುಖ್ಯೋಕ್ತೋ ಹರಿರತ್ರ ಹಿ ॥
ಇತಿ ಹರಿವಂಶೇಷು ॥

ದುಃಶಾಸ್ತ್ರವನ್ನು ಆದರದಿಂದ ಅಧ್ಯಯನ ಮಾಡುವವರು ಅಂಧಂತಮಸ್ಸನ್ನು ಹೊಂದುತ್ತಾರೆ. ಸಚ್ಛಾಸ್ತ್ರಅಧ್ಯಯನ ಮಾಡುತ್ತಿದ್ದರೂ ಅದರಲ್ಲಿ ನಿಷ್ಠೆ ಇಲ್ಲದ್ದರಿಂದ ದುಃಶಾಸ್ತ್ರನಿಂದೆ ಮಾಡದವರು ಇನ್ನೂ ಹೆಚ್ಚಿನ ಅಂಧಂತಮಸ್ಸಿನಲ್ಲಿ ಬೀಳುವರು ಎಂದು ಈಶೋಪನಿಷತ್ತು ಹೇಳಿದೆ.

ಗೃಹಸ್ಥನಿಗೂ ಕೂಡ, ಅವನು ಅಲ್ಪಜ್ಞನಾಗಿದ್ದರೆ, ಕಲೆಗಳಲ್ಲಿ ವಿಷ್ಣುಸರ್ವೋತ್ತಮತ್ವ ಜ್ಞಾನರೂಪವಾದ ಪ್ರಯೋಜನ ಲಭ್ಯವಿಲ್ಲ. ಆದರಿಂದ ಅವನು ವೇದಶಾಸ್ತ್ರವನ್ನೇ ಮತ್ತೆಮತ್ತೆ ಅಧ್ಯಯನ ಮಾಡಬೇಕು. ಏಕೆಂದರೆ ಅದರಲ್ಲಿ ನೇರವಾಗಿ ಹರಿಯು ಪ್ರತಿಪಾದಿತನಾಗಿದ್ದಾನೆ. ಹೀಗಾಗಿ ಯತಿಯು ಮಾತ್ರವಲ್ಲದೆ ಅಲ್ಪಜ್ಞನಾದ ಗೃಹಸ್ಥನೂ ಕಲೆಗಳಲ್ಲಿ ಶ್ರದ್ಧೆ ಮಾಡಬಾರದು ಎಂದು ಹರಿವಂಶದಲ್ಲಿ ಹೇಳಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಪ್ರಬುದ್ಧಮುನಿ ಮಾಡುವ ಉಪದೇಶ.

ಏವಂ ಕೃಷ್ಣಾತ್ಮನಾಥೇಷು ಮನುಷ್ಯೇಷು ಚ ಸೌಹೃದಮ್ ।
ಪರಿಚರ್ಯಾಂ ಚೋಭಯತ್ರ ಮಹತ್ಸು ನೃಷು ಸಾಧುಷು ॥ ೩೦ ॥

ಶ್ರೀಹರಿಯನ್ನೆ ಪ್ರಭುವೆಂದು ನಂಬಿರುವ ಸಾಮಾನ್ಯ ಮಾನವರಲ್ಲಿಯೂ ಕೂಡ ಸ್ನೇಹದಿಂದಿರಬೇಕೆಂದಮೇಲೆ ದೇವಋಷ್ಯಾದಿಗಳಲ್ಲಿ ಇನ್ನೇನು ಹೇಳಬೇಕು? ಮಹಾತ್ಮರಾದ ದೇವಾದಿಗಳಲ್ಲಿಯೂ ಸ್ವೋತ್ತಮರಾದ ಮನುಷ್ಯರಲ್ಲಿಯೂ ಸೇವೆಯನ್ನು ಕಲಿಯಬೇಕು.

ಈ ಶ್ಲೋಕದಲ್ಲಿ 'ಕೃಷ್ಣಾತ್ಮನಾಥೇಷು ಮನುಷ್ಯೇಷು ಸೌಹೃದಂ' ಕೃಷ್ಣನನ್ನೇ ನಂಬಿರುವ ಮನುಷ್ಯರಲ್ಲಿ ಸೌಹಾರ್ದವನ್ನು ಮಾಡಬೇಕು ಎಂದು ಹೇಳಿ 'ಮಹತ್ಸು ನೃಷು' ಮಹಾತ್ಮರಾದ ಮನುಷ್ಯರಲ್ಲಿ ಪರಿಚರ್ಯೆ ಮಾಡಬೇಕೆಂದುದು ಪುನರುಕ್ತಿ.

ಕೃಷ್ಣನನ್ನೇ ನಂಬಿದವರು ಮಹಾತ್ಮರೆ ತಾನೆ? 'ಉಭಯತ್ರ' ಎರಡರಲ್ಲಿ ಎಂದರೆ ಯಾವ ಎರಡರಲ್ಲಿ ಎನ್ನುವುದು ತಿಳಿಯುವುದಿಲ್ಲ, ತಿಳಿಸುವ ಶಬ್ದ ಶ್ಲೋಕದಲ್ಲಿಲ್ಲ. ಸಾಧುಸಂಗವನ್ನು ಹೇಳಲು ಹೊರಟಿರುವ ಈ ಶ್ಲೋಕದಲ್ಲಿ 'ಸಾಧುಷು' ಒಳ್ಳೆಯ ಭಕ್ತರಲ್ಲಿ ಸೌಹಾರ್ದವಿಟ್ಟುಕೊಳ್ಳಬೇಕೆಂದು ಹೇಳಿದರೆ ಸಾಕು. ಉಳಿದುದೆಲ್ಲ ವ್ಯರ್ಥ ಪುನರುಕ್ತಿಯಾಗುವುದು, ಅದಕ್ಕೆ [1]ಶ್ರೀಧರವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ—

'ಕೃಷ್ಣನನ್ನೇ ಪ್ರೀತಿಯ ಪ್ರಭು ಎಂದು ನಂಬಿದ ಮನುಷ್ಯರಲ್ಲಿ ಸೌಹಾರ್ದ ಪರಿಚರ್ಯೆ ಮಾಡುವುದನ್ನು ಕಲಿಯಬೇಕು. ಸ್ಥಾವರ ಜಂಗಮಗಳೆರಡರಲ್ಲಿ, ವಿಶೇಷವಾಗಿ ಮನುಷ್ಯರಲ್ಲಿ, ಅವರಲ್ಲಿಯೂ ಸಾಧು ಧಾರ್ಮಿಕ ಜನರಲ್ಲಿ, ಅವರಿಗಿಂತಲೂ ಮಹಾಭಾಗವತರಲ್ಲಿ ಸೌಹಾರ್ದ ಪರಿಚರ್ಯೆಗಳನ್ನು ಮಾಡಬೇಕು'.

ಇಲ್ಲಿ 'ಉಭಯತ್ರ' ಎಂದರೆ ಸ್ಥಾವರಜಂಗಮಗಳೆರಡೆಂದು ಎರಡು ಪ್ರಸಕ್ತವಾಗಿಲ್ಲ, ವಿಶ್ವನಾಥವ್ಯಾಖ್ಯಾನ ಹೇಳುವಂತೆ ಭಗವಂತ–ಭಕ್ತರಿಬ್ಬರೇ ಪ್ರಸಕ್ತರಾಗಿದ್ದಾರೆ. ಸ್ಥಾವರಜಂಗಮಗಳಲ್ಲಿ ವಿಶೇಷವಾಗಿ ಮನುಷ್ಯರಲ್ಲಿ ಪರಿಚರ್ಯೆ ಎನ್ನುವುದು ಸರಿಯಲ್ಲ. ಸ್ಥಾವರಗಳಲ್ಲಿ ಅಶ್ವತ್ಥ ತುಲಸಿ ಧಾತ್ರಿ ಬಿಲ್ವ ಮುಂತಾದವುಗಳ ಪೂಜೆ ವಿಹಿತವಾಗಿದೆ. ಜಂಗಮಗಳಲ್ಲಿಯೂ ಗೋಪೂಜೆ ವಿಶೇಷವಾಗಿ ವಿಹಿತವಾಗಿದೆ. ಅವುಗಳಿಗಿಂತ ಭಗವದ್ಭಕ್ತರ ಪೂಜೆ ಶ್ರೇಷ್ಠ ಎನ್ನುವುದು ನಿಜವೆ. ಆದರೆ ಅದನ್ನು ಮನುಷ್ಯರಲ್ಲಿಯೂ ಸಾಧುಗಳಾದ ಧಾರ್ಮಿಕ ಜನರ ಪೂಜೆ ಶ್ರೇಷ್ಠ ಎಂದು ಬೇರೇ ಹೇಳುತ್ತಾರೆ. ಕೃಷ್ಣನನ್ನೇ ಪ್ರೀತಿಯ ಪ್ರಭು ಎಂದು ನಂಬಿರುವ ಮನುಷ್ಯರ ಪೂಜೆ ಮಾಡಲೇಬೇಕೆಂದು ಹೇಳಿಯಾಗಿದೆ.

'ಸ್ಥಾವರ ಜಂಗಮಗಳಲ್ಲಿ ಮನುಷ್ಯರ ಪೂಜೆ ಶ್ರೇಷ್ಠ' ಎನ್ನುವುದು ಸರಿಯಲ್ಲ. ದುಷ್ಟಮನುಷ್ಯರ ಪೂಜೆಯೂ ಅದರಲ್ಲಿ ಸೇರುವುದರಿಂದ ಅಶ್ವತ್ಥ ತುಲಸಿ ಗೋ ಪೂಜೆಗಳಿಗಿಂತಲೂ ದುಷ್ಟಮನುಷ್ಯರ ಪೂಜೆ ಶ್ರೇಷ್ಠ ಎಂದು ಹೇಳಿದಂತಾಗುವುದು. ಇದು ಬಹಳ ಅಸಂಗತ.

ಕೊನೆಯಲ್ಲಿ ಅತ್ಯಂತ ಶ್ರೇಷ್ಠ ಎಂದು ಹೇಳಿದ್ದು ಮಹಾತ್ಮರ ಮಹಾಭಾಗವತರ ಪೂಜೆ, ಮೊದಲಿಗೇ ಆವಶ್ಯಕವೆಂದು ಹೇಳಿದ್ದು ಕೃಷ್ಣನನ್ನೇ ಪ್ರೀತಿಯ ಪ್ರಭುವೆಂದು ನಂಬಿರುವ ಮನುಷ್ಯರ ಪೂಜೆ— ಇವೆರಡೂ ಒಂದೇ ಆದ್ದರಿಂದ, ಪುನರುಕ್ತಿ.

---

1. ಕೃಷ್ಣ ಏವಾತ್ಮಾ ನಾಥಶ್ಚ ಯೇಷಾಂ ತೇಷು । ಉಭಯತ್ರ ಸ್ಥಾವರೇ ಜಂಗಮೇ ಚ ಯಾ ಪರಿಚರ್ಯಾ ತಾಂ। ವಿಶೇಷತೋ ನೃಷು ತತ್ರಾಪಿ ಸಾಧುಷು ಸ್ವಧರ್ಮಶೀಲೇಷು ತತೋಽಪಿ ಮಹತ್ಸು ಶ್ರೀಭಾಗವತೇಷು । -ಶ್ರೀಧರಃ

ಪುನರುಕ್ತಿಯ ಪರಿಹಾರಕ್ಕೆ [1]ರಾಧಾರಮಣದಾಸ ವ್ಯಾಖ್ಯಾನ ಹೇಳುತ್ತದೆ. ಮಹಾತ್ಮರ ಪೂಜೆ ಎಂದರೆ ಸಾಧನ ಭಕ್ತಿ, ಕೃಷ್ಣನನ್ನೇ ನಂಬಿದ ಮನುಷ್ಯರ ಪೂಜೆ ಸಾಧ್ಯಭಕ್ತಿ ಎಂದು. ಸಾಧನ ಸಾಧ್ಯಭಕ್ತಿಗಳೆಂದರೆ ಏನೆಂದು ಅವರು ಹೇಳಿಲ್ಲ. ವಿಶಿಷ್ಟಾದ್ವೈತದಲ್ಲಿ ಭಕ್ತಿ ಪ್ರಪತ್ತಿಗಳನ್ನೇ ಉಪಾಯಭಕ್ತಿ ಸಾಧ್ಯಭಕ್ತಿಗಳೆಂದು ಕರೆದಿದ್ದಾರೆ. ಭಗವಂತನ ಪ್ರಾಪ್ತಿಗೆ ಭಕ್ತಿಯೇ ಸಾಧನ ಎನ್ನುವುದು ಸಾಧನ ಭಕ್ತಿ, ಭಗವಂತನೇ ಸಾಧನ ಎನ್ನುವುದು ಸಾಧ್ಯಭಕ್ತಿ ಎಂದು ಅವರ, ನಿರ್ವಚನ. ಈ ಎರಡೂ ಭಕ್ತಿಗಳನ್ನು ಭಗವಂತನಲ್ಲಿಯೇ ಮಾಡಬೇಕು ಹೊರತು ಮನುಷ್ಯರಲ್ಲಿ ಮಾಡುವಂಥದ್ದಲ್ಲ. ಮನುಷ್ಯರಲ್ಲಿ ಮಾಡಬೇಕೆಂದು ರಾಧಾರಮಣದಾಸ ವ್ಯಾಖ್ಯಾನ ಹೇಳುವುದು ಯುಕ್ತವಾಗುವುದಿಲ್ಲ.

ಮುಕುಂದ ಭಕ್ತ್ಯೈ ಗುರುಭಕ್ತಿಜಾಯೈ ಎಂದು ಹೇಳಿದಂತೆ ಹರಿಗುರು ಭಕ್ತಿಗಳೇ ಸಾಧ್ಯಸಾಧನ ಭಕ್ತಿಗಳೆಂದಿಟ್ಟುಕೊಂಡರೂ ಸಾಧ್ಯಭಕ್ತಿಯನ್ನು ಮನುಷ್ಯರಲ್ಲಿ ಮಾಡಲಾಗುವುದಿಲ್ಲ.

ಶ್ರೀಮದಾಚಾರ್ಯರು ಪುನರುಕ್ತಿಯಾಗದಂತೆ ಸುಲಭವಾಗಿ ಸುಂದರವಾದ ವ್ಯಾಖ್ಯಾನವನ್ನು ನೀಡುತ್ತಾರೆ. ಮಹಾತ್ಮರಾದ ದೇವತೆಗಳು ಮತ್ತು ಸಾಧು ಮಾನವರೆಂದು ಈ ಇಬ್ಬರಲ್ಲಿ ಎನ್ನುತ್ತಾರೆ.

ಕೃಷ್ಣಾತ್ಮನಾಥೇಷು ಮನುಷ್ಯೇಷ್ವಪಿ ಸೌಹೃದಂ ।
ಕಿಮು ದೇವಾದಿಷು । ಮಹತ್ಸು ದೇವಾದಿಷು ।

ಶ್ರೀಹರಿಯನ್ನೇ ಪ್ರಭುವೆಂದು ನಂಬಿರುವ ಸಾಮಾನ್ಯಮಾನವರಲ್ಲಿಯೂ ಸೌಹಾರ್ದ ಬೇಕೆಂದಮೇಲೆ ದೇವಾದಿಗಳಲ್ಲಿ ಇನ್ನೇನು ಹೇಳಬೇಕು? ಮಹಾತ್ಮರೆಂದರೆ ಇಲ್ಲಿ ದೇವಾದಿಗಳು.

ದೇವಾದಿಗಳಲ್ಲಿ ಮತ್ತು ಸ್ವೋತ್ತಮರಾದ ಮನುಷ್ಯರಲ್ಲಿ, ಹೀಗೆ ಇಬ್ಬರಲ್ಲಿಯೂ 'ಉಭಯತ್ರ' ಪರಿಚರ್ಯೆ ಮಾಡುವುದನ್ನು ಕಲಿಯಬೇಕೆಂದು ಶ್ಲೋಕದ ಅರ್ಥ.

❖❖❖

1. ತತ್ರಾಪಿ ನೃಷ್ವಪಿ ಮಧ್ಯೇ । ತತ್ರಾಪಿ ಸ್ವಧರ್ಮಶೀಲೇಷ್ವಪಿ । ಮಹತ್‌ಕೃಷ್ಣಾತ್ಮನಾಥಯೋಶ್ಚ ಯಥಾಸಂಖ್ಯಂ ಸಾಧನ ಸಾಧ್ಯ ಭಕ್ತಿಮತ್ವೇನ ವಿಶೇಷೋ ಜ್ಞೇಯಃ ಅನ್ಯಥಾ ಪೌನರುಕ್ತ್ಯಾಪತ್ತೇಃ। -ರಾಧಾರಮಣದಾಸಃ

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಪಿಪ್ಪಲಾಯನ ಮುನಿ ಶ್ರೀಹರಿಯ ಸರ್ವೋತ್ತಮತ್ವವನ್ನು ಉಪದೇಶಿಸುತ್ತಾರೆ.

ಸ್ಥಿತ್ಯುದ್ಭವಪ್ರಲಯಹೇತುರಹೇತುರಸ್ಯ
ಯಃ ಸ್ವಪ್ನಜಾಗರಸುಷುಪ್ತಿಷು ಸನ್ಬಹಿಶ್ಚ।
ದೇಹೇಂದ್ರಿಯಾಸುಹೃದಯಾನಿ ಚರಂತಿ ಯೇನ
ಸಂಜೀವಿತಾನಿ ತದವೈಹಿ ಪರಂ ನರೇಂದ್ರ ॥ ೩೬ ॥

ರಾಜನೆ, ಯಾರು ಜಗತ್ತಿನ ಸ್ಥಿತಿ ಉತ್ಪತ್ತಿಲಯಗಳಿಗೆ ಕಾರಣನೊ, ಯಾರಿಗೆ ಸೃಷ್ಟಿಕರ್ತನಿಲ್ಲವೊ, ಯಾರು ಜೀವರಿಗೆ ಸ್ವಪ್ನ ಜಾಗರ ಸುಷುಪ್ತಿಗಳಲ್ಲಿ ಮುಕ್ತಿಯಲ್ಲಿಯೂ ಕೂಡ ನಿಯಾಮಕನಾಗಿರುವನೊ ಯಾರ ಪ್ರೇರಣೆಗಳಿಗೊಳಗಾಗಿಯೇ ದೇಹ ಇಂದ್ರಿಯ ಪ್ರಾಣ ಮನಸ್ಸುಗಳು ತಮ್ಮ ಎಲ್ಲ ಚಟುವಟಿಕೆಗಳನ್ನು ನಡೆಸುವುವೋ ಅವನೇ ಸರ್ವೋತ್ತಮ ನಾರಾಯಣನೆಂಬ ಹೆಸರುಳ್ಳ ಪರಬ್ರಹ್ಮ ಪರಮಾತ್ಮನೆಂದು ತಿಳಿ.

ಇಲ್ಲಿ 'ನಾರಾಯಣಾಭಿದಾನಸ್ಯ ಬ್ರಹ್ಮಣಃ ಪರಮಾತ್ಮನಃ ನಿಷ್ಠಾಮರ್ಹಥ ನೋ ವಕ್ತುಂ' ನಾರಾಯಣನಾಮಕನಾದ ಪರಬ್ರಹ್ಮ ಪರಮಾತ್ಮನ ನಿಷ್ಠೆಯನ್ನು ಅಂದರೆ ಸರ್ವೋತ್ತಮತ್ವನ್ನು ಉಪದೇಶಿಸಿರಿ ಎಂದು ನಿಮಿರಾಜನ ಪ್ರಶ್ನೆಗೆ ಉತ್ತರವಾಗಿ ಈ ಶ್ಲೋಕ ಬಂದಿದೆ.

ನಿಷ್ಠೋತ್ಕರ್ಷೇ ವ್ಯವಸ್ಥಾಯಾಂ ನಾಶೇಽಂತ್ಯೇ ವ್ರತಯಾಂಚಯೋಃ

ಎಂದು ಯಾದವಕೋಶ ಪ್ರಕಾರ ನಿಷ್ಠಾ ಅಂದರೆ ಉತ್ಕರ್ಷ, ಸರ್ವೋತ್ತಮತ್ವ. ಸರ್ವೋತ್ತಮತ್ವವನ್ನೇ ಅವಸ್ಥಾತ್ರಯ ನಿಯಾಮಕತ್ವ ದೇಹೇಂದ್ರಿಯಾದಿ ಪ್ರೇರಕತ್ವಾದಿ ಮಹಿಮೆಗಳಿಂದ ಪಿಪ್ಪಲಾಯನ ಮುನಿ ಸಮರ್ಥನ ಮಾಡುತ್ತಿದ್ದಾರೆ.

ಆದರೆ ಶುಕದೇವ ವ್ಯಾಖ್ಯಾನ ಒಂದು ಹೊರತು ಬೇರೆ ಎಲ್ಲ ವ್ಯಾಖ್ಯಾನಗಳೂ ನಿಷ್ಠೆ ಎಂದರೆ ತತ್ವ, ಸ್ವರೂಪ ಎಂದು ಹೇಳಿ, 'ನಾರಾಯಣ ನಿನ್ನ ಇಷ್ಟ ದೈವವೆಂದ ಮೇಲೆ ಅವನ ಸ್ವರೂಪವನ್ನು ನಿನಗೆ ನಿನ್ನ ಗುರುಗಳು ಹೇಳಿರುತ್ತಾರೆ' ಎಂದು ಮುನಿಗಳು ಹೇಳಿದಾಗ, ರಾಜ ಕೇಳುತ್ತಾನೆ. 'ಬ್ರಹ್ಮ ಪರಮಾತ್ಮ ಭಗವಾನ್' ಎಂದು ಮೂರು ಶಬ್ದಗಳು ಕೇವಲ ಸಮಾನಾರ್ಥಗಳೆ? ಅಥವಾ ಅವುಗಳಿಗೆ ವಿಶೇಷ ಅರ್ಥಗಳಿವೆಯೆ? ಎಂದು ಅದಕ್ಕೆ ಮುನಿ ಆ ಶಬ್ದಗಳಿಗೆ ವಿಶೇಷಾರ್ಥಗಳನ್ನು ಹೇಳುತ್ತಿದ್ದಾರೆ ಎಂದು ವ್ಯಾಖ್ಯಾನ ಮಾಡಿದ್ದಾರೆ.

[1]ಭಾಗವತ ಶ್ಲೋಕದಲ್ಲಿ ರಾಜನ ಈ ಪ್ರಶ್ನೆ ಕಾಣುವುದಿಲ್ಲ. ಏಕೆಂದರೆ ಅಲ್ಲಿ 'ನಾರಾಯಣಾಭಿಧಾನಸ್ಯ' ಎಂದಿದೆ ಹೊರತು ಭಗವದಭಿಧಾನಸ್ಯ ಎಂದಿಲ್ಲ. ಮುನಿಯ ಉತ್ತರವೂ ಕಾಣುವುದಿಲ್ಲ. ಮುನಿ ಬ್ರಹ್ಮ ಪರಮಾತ್ಮ ಭಗವಚ್ಛಬ್ದಗಳ ಅರ್ಥ ಬಿಡಿಸಿ ಹೇಳುವುದಿಲ್ಲ. ಅವಸ್ಥಾತ್ರಯ ನಿಯಾಮಕತ್ವಾದಿ ಮಹಿಮೆಗಳನ್ನು ಹೇಳುತ್ತಾರೆ. ಅದರಿಂದ ಹರಿಯ ಸರ್ವೋತ್ತಮತ್ವ ಮಾತ್ರ ಪ್ರತಿಪಾದನೆಯಾಗುತ್ತದೆ.

ಶ್ಲೋಕದಲ್ಲಿ 'ಅಸ್ಯ ಸ್ಥಿತ್ಯುದ್ಭವ ಪ್ರಲಯಹೇತುಃ ಅಹೇತುಃ' ಎಂದು ವಿರುದ್ಧವಾಗಿ ಹೇಳಿದಂತೆ ಕಾಣುತ್ತದೆ. ಅದಕ್ಕೆ ಜೀವಗೋಸ್ವಾಮಿವ್ಯಾಖ್ಯಾನ ಹೇಳುತ್ತದೆ, [2]'ಭಗವಂತ ತಾನು ಕರ್ತೃತ್ವಶಕ್ತಿ ವಿಲಾಸಮಯನಾದ್ದರಿಂದ ಉದಾಸೀನನಾಗಿದ್ದರೂ ಜೀವಪ್ರವರ್ತಕವಾದ ಪರಮಾತ್ಮ ಎಂಬ ಅಂಶದ ಮೂಲಕ ಸೃಷ್ಟ್ಯಾದಿ ಹೇತುವಾಗುತ್ತಾನೆ. ಪರಮಾತ್ಮನು ಅಂತರ್ಯಾಮಿಯಾಗಿ ಎಲ್ಲ ತತ್ವಗಳಿಗೆ ಪ್ರೇರಕನಾಗುತ್ತಾನೆ. ಒಳಗೆ ಹೊರಗೆ ಸರ್ವತ್ರ ಬ್ರಹ್ಮನು ಇದ್ದು ಪ್ರಪಂಚಾರೋಪಕ್ಕೆ ಅಧಿಷ್ಠಾನಾಗುತ್ತಾನೆ'

---

1. ~~ಬ್ರಹ್ಮೈವ ತಾವನ್ನಾರಾಯಣ ಇತಿ ಭಗವಾನಿತಿ ಪರಮಾತ್ಮೇತಿ ಚೋಚ್ಯತೇ ತದುಕ್ತಂ~~

   ವದಂತಿ ತತ್ ತತ್ವವಿದಸ್ತತ್ವಂ ಯಜ್ ಜ್ಞಾನಮದ್ವಯಂ ।

   ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ । ಇತಿ । ತಥಾ

   ನಾರಾಯಣೇ ಭಗವತಿ ತದಿದಂ ವಿಶ್ವಮಾಹಿತಂ ।

   ಗೃಹೀತಮಾಯೋರುಗುಣಃ ಸರ್ಗಾದಾವಗುಣಃ ಸ್ವತಃ ॥ ಇತ್ಯಾದಿಷು । ತತ್ರ ಕಿಮೇಭಿಃ ಶಬ್ದೈ ರ್ನಿರ್ವಿಶೇಷಂ ತದೇವ ವಸ್ತೂಚ್ಯತೇ? ಅಸ್ತಿ ವಾ ಕೋಽಪಿ ವಿಶೇಷಾಂಶ ಇತಿ ।

   ಅತ್ರೋತ್ತರಂ ಸ್ಥಿತ್ಯುದ್ಭವೇತಿ। ಅಯಮರ್ಥಃ । ಅಸ್ಯ ವಿಶ್ವಸ್ಯ ಸ್ಥಿತ್ಯುದ್ಭವ ಪ್ರಲಯಾನಾಂ ಹೇತುಃ ಸ್ವಯಂ ಚಾಹೇತು ರ್ಹೇತು ರಹಿತಃ ಸ ನಾರಾಯಣ ಇತಿ ಪರಮೇವ ತತ್ವಮವೇಹಿ । ಸ್ವಪ್ನ ಜಾಗರ ಸುಷುಪ್ತಿಷು ಸದ್ ಅನುವರ್ತಮಾನಂ ಯದ್ ವಕ್ಷ್ಯತಿ ಚ ತುರೀಯಂ ತ್ರಿಷು ಸಂತತಮಿತಿ ಬಹಿಶ್ಚ ಸಮಾಧ್ಯಾದೌ ಯತ್ ಸತ್ ತದ್ ಬ್ರಹ್ಮೇತಿ ಪರಮೇವ ತತ್ವಮವೇಹಿ । ದೇಹೇಂದ್ರಿಯ ಪ್ರಾಣ ಮನಾಂಸಿ ಯೇನ ಜೀವಿತಾನಿ ಸಂತಿ ಚರಂತಿ ಪ್ರವರ್ತಂತೇ ತತ್ ಪರಮಾತ್ಮೇತಿ ಪರಮೇವ ತತ್ವಮವೇಹಿ । -ಶ್ರೀಧರಸ್ವಾಮೀ

   ಸ್ವರೂಪಶಕ್ತ್ಯೈಕ ವಿಲಾಸಮಯತ್ವೇನ ಸ್ವಾಂಶದ್ವಾರಾ ಸೃಷ್ಟ್ಯಾದಿಮತ್ತ್ವಂ ಭಗವತ್ತ್ವಂ ನಿರುಪಾಧಿ ವಿಶೇಷ್ಯಮಾತ್ರತ್ವಂ ಬ್ರಹ್ಮತ್ವಂ ಮಾಯಾ ತತ್ಕಾರ್ಯ ಪ್ರೇರಕತ್ವ ಲಕ್ಷಣಾಂತರ್ಯಾಮಿತ್ವಂ ಪರಮಾತ್ಮತ್ವಮಿತ್ಯೇವಂ । -ರಾಧಾರಮಣಃ

2. ಸ್ವಯಮಹೇತುಃ ಸ್ವರೂಪಶಕ್ತ್ಯೈಕವಿಲಾಸಮಯತ್ವೇನ ತತ್ರೋದಾಸೀನಮಪಿ ಪ್ರಕೃತಿ ಜೀವಪ್ರವರ್ತಕಾವಸ್ಥಪರಮಾತ್ಮಾಪರ ಪರ್ಯಾಯ ಸ್ವಾಂಶಲಕ್ಷಣ ಪುರುಷದ್ವಾರಾ ಯದಸ್ಯ ಸರ್ಗಸ್ಥಿತ್ಯಾದಿ ಹೇತುರ್ಭವತಿ ತದ್ ಭಗವದ್ರೂಪಂ ವಿದ್ಧಿ । -ಜೀವಗೋಸ್ವಾಮೀ

ಎಂದು. ಇದರಿಂದ ಪರಮಾತ್ಮನು ಹೇತುವಾದರೂ ಸ್ವರೂಪದಿಂದ ಉದಾಸೀನ ಎಂದು ವಿರೋಧ ಪರಿಹಾರ ಮಾಡಿದಂತಾಯಿತು.

ಆದರೆ ಶ್ರೀಧರವ್ಯಾಖ್ಯಾನದಲ್ಲಿ 'ಸ್ವಯಂ ಚಾಹೇತುರ್ಹೇತು ರಹಿತಃ' 'ತನಗೆ ಇನ್ನೊಬ್ಬನು ಹೇತು ಇಲ್ಲದವನಾದ್ದರಿಂದ 'ಅಹೇತು' ಎನಿಸುತ್ತಾನೆ' ಎಂದು ಬೇರೆ ರೀತಿಯಲ್ಲಿ ವಿರೋಧ ಪರಿಹಾರ ಮಾಡಿದ್ದಾರೆ. ಅದು ಅದ್ವೈತಕ್ಕೆ ಸಮ್ಮತವಲ್ಲ. ಮಾಯೆ ಎಂಬ ಕಾಮಧೇನುವಿನ ಎರಡು ಕರುಗಳು ಒಂದು ಜೀವ ಇನ್ನೊಂದು ಪರಮಾತ್ಮ ಎಂದು ಅದ್ವೈತ ಹೇಳುತ್ತಿದೆ.

ಶ್ರೀಮದಾಚಾರ್ಯರಿಗೆ ಈ ಸಮಸ್ಯೆ ಇಲ್ಲದಿರುವುದರಿಂದ ಹೇಳುತ್ತಾರೆ—

'ಪರಮಾತ್ಮ ಅಹೇತು ಏಕೆಂದರೆ ಅವನಿಗೆ ಇನ್ನೊಬ್ಬ ಜನಕನಿಲ್ಲ' ಎಂದು.

'ಯಃ ಸ್ವಪ್ನಜಾಗರ ಸುಷುಪ್ತಿಷು ಸನ್ ಬಹಿಶ್ಚ' ಎನ್ನುವ ಭಾಗವತಕ್ಕೆ ಶ್ರೀಧರವ್ಯಾಖ್ಯಾನದಲ್ಲಿ 'ಸ್ವಪ್ನ ಜಾಗರ ಸುಷುಪ್ತಿಗಳಲ್ಲಿ ಮಾತ್ರವಲ್ಲದೆ ಸಮಾಧಿ ಮುಂತಾದ ಅವಸ್ಥೆಗಳಲ್ಲಿಯೂ ಪರಮಾತ್ಮ ನಿಯಾಮಕ' ಎಂದು ಹೇಳಿದ್ದಾರೆ. 'ಸಮಾಧಿ ಮುಂತಾದ ಅವಸ್ಥೆ' ಎನ್ನುವುದರಿಂದ ಮುಕ್ತ್ಯವಸ್ಥೆಯನ್ನಿಟ್ಟುಕೊಳ್ಳಬೇಕು' ಎಂದು ರಾಧಾರಮಣದಾಸ ವ್ಯಾಖ್ಯಾನದಲ್ಲಿ ಹೇಳಿದ್ದಾರೆ. ಸಮಾಧಿಯಂತೆಯೇ ಮುಕ್ತಿಯೂ ಒಂದು ಅವಸ್ಥೆ. ಅದರಿಂದಲೇ ಭಾಗವತದಲ್ಲಿ ಸ್ವಪ್ನ ಜಾಗರ ಸುಷುಪ್ತಿ ಅವಸ್ಥೆಗಳನ್ನು ಬೇರೆಬೇರೆಯಾಗಿ ಸ್ಪಷ್ಟವಾಗಿ ಹೇಳಿ ಸಮಾಧಿ ಮುಕ್ತಿ ಅವಸ್ಥೆಗಳನ್ನು 'ಬಹಿಃ' ಎಂಬ ಒಂದು ಮಾತಿನಲ್ಲಿ ಹೇಳಲಾಗಿದೆ ಎಂದು ಅಭಿಪ್ರಾಯ. ಅದರಿಂದ ಭಗವಂತನಲ್ಲಿ ಏನು ವಿಶೇಷ ಮಹಿಮೆಯನ್ನು ಹೇಳಿದಂತಾಯಿತು? ಎನ್ನುವ ಸಮಸ್ಯೆ ಬರುತ್ತದೆ.

'ಶರೀರದೊಳಗೆ ಅವಸ್ಥಾತ್ರಯನಿಯಾಮಕನಾಗಿ ಆಧಾರನಾಗಿರುವಂತೆ ಹೊರಗೂ ಸರ್ವಾಧಾರನಾಗಿ ಆಧಾರನಾಗಿದ್ದಾನೆ' ಎಂದು 'ಬಹಿಃ' ಶಬ್ದಕ್ಕೆ ಶುಕದೇವ ವ್ಯಾಖ್ಯಾನದಲ್ಲಿ ವಿವರಣೆ ಇದೆ. ಇದರಿಂದಲೂ ವಿಶೇಷ ಮಹಿಮೆಯನ್ನು ಹೇಳಿದಂತಾಗುವುದಿಲ್ಲ. ಹೊರಗೆ ನಿಂತು ನಿಯಮನ ಮಾಡುವುದರಲ್ಲಿ ಏನೂ ವಿಶೇಷ ಮಹಿಮೆ ಕಾಣುವುದಿಲ್ಲ. ರಾಜಾದಿಗಳೂ ಹೊರಗೆ ನಿಯಾಮಕರಾಗ ಬಹುದು. ಒಳಗೆ ಅವಸ್ಥಾತ್ರಯ ನಿಯಮನ ಮಾಡುವುದೇ ವಿಶೇಷ ಮಹಿಮೆ. ಅದನ್ನು ಹೇಳಿದ ಬಳಿಕ 'ಬಹಿಶ್ಚ' ಎಂದು ಹೊರಗಿನ ನಿಯಮನವನ್ನು ಬೇರೆ ಏಕೆ ಹೇಳುತ್ತಿದೆ ಭಾಗವತ.

ಶ್ರೀಮದಾಚಾರ್ಯರು ಹೇಳುತ್ತಾರೆ—'ಬಹಿಃ' ಎಂದರೆ ಪ್ರಳಯದಲ್ಲಿ ಮತ್ತು ಮುಕ್ತಿಯಲ್ಲಿ ಕೂಡ ನಿಯಾಮಕ ಎಂದರ್ಥ. ಇದು ವಿಶೇಷ ಮಹಿಮೆ. ಈಗಿನ ನಮ್ಮ ಸುಪ್ತಿ ಜಾಗರ ಸ್ವಪ್ನಗಳೆಲ್ಲವೂ ಅಲ್ಪಕಾಲದವುಗಳು. ಅಲ್ಪಸುಖದಾಯಕಗಳಾಗಿರುತ್ತವೆ. ಸ್ವಲ್ಪಹೊತ್ತು ಸುಖವಾಗಿ ಮಲಗುತ್ತೇವೆ, ಎಚ್ಚರಗೊಳ್ಳುತ್ತೇವೆ. ಹಾಗೇ ಸ್ವಲ್ಪಹೊತ್ತು ಸುಖವಾಗಿ ಓಡಾಡಿ ಸೋತು ಮಲಗುತ್ತೇವೆ. ಆದರೆ ಪ್ರಳಯ ಎನ್ನುವುದು ದೀರ್ಘನಿದ್ರೆ. ಪ್ರಳಯಕಾರಿಯಾದ ಜಗದುದರನಾದ ನಾರಾಯಣನ ಉದರದೊಳಗೆ ಬಹುದೀರ್ಘಕಾಲ ಮಲಗುತ್ತೇವೆ. ಎಷ್ಟು ದೀರ್ಘವೆಂದರೆ, ಒಂದು ಬ್ರಹ್ಮಕಲ್ಪಕಾಲದಷ್ಟು. ಬ್ರಹ್ಮನ ಒಂದು ಹಗಲು ನಮಗೆ ನಾನೂರ ಮೂವತ್ತೆರೆಡು ಕೋಟಿ ವರ್ಷಗಳಷ್ಟಿರುತ್ತದೆ. ಈ ಗಣನೆಯಲ್ಲಿ ಬ್ರಹ್ಮನ ನೂರು ವರ್ಷಗಳು ಒಂದು ಬ್ರಹ್ಮಕಲ್ಪಕಾಲ. ಇಷ್ಟು ದೀರ್ಘಕಾಲದಲ್ಲಿ ಸುಖವಾಗಿ ಪ್ರಳಯದಲ್ಲಿ ನಾವು ಮಲಗುತ್ತೇವೆ.

ಮುಕ್ತಿ ಎನ್ನುವುದು ಒಂದು ಜಾಗರಾವಸ್ಥೆಯೇ. ಮುಕ್ತರು ಸದಾ ವಿಹಾರ ಮಾಡುತ್ತಾರೆ. ಮುಕ್ತನಿಯಾಮಕನಾದ ವಾಸುದೇವ ಅವರಿಗೆ ಅವರ ಸ್ವರೂಪಭೂತವಾದ ಆನಂದವನ್ನು ಪೂರ್ತಿ ಅಭಿವ್ಯಕ್ತಗೊಳಿಸಿ ಅನಂತಕಾಲದ ವರೆಗೂ ಉಣಿಸುತ್ತಾನೆ. ಅದಕ್ಕೆ ಕೊನೆಯೇ ಇಲ್ಲ. ನಮ್ಮ ಈಗಿನ ಸುಪ್ತಿಯಲ್ಲಿ ನಮ್ಮ ಸ್ವರೂಪಸುಖದ ಅಲ್ಪಾಂಶವನ್ನು ಅಲ್ಪಕಾಲ ಮಾತ್ರ ಅಭಿವ್ಯಕ್ತಿಗೊಳಿಸಿ ಸುಷುಪ್ತಿನಿಯಾಮಕ ಪ್ರಾಜ್ಞನು ನಮಗೆ ಉಣಿಸುತ್ತಾನೆ. ಅದರಿಂದ ಈ ವಿಶೇಷ ಮಹಿಮೆಯನ್ನು ಭಾಗವತದಲ್ಲಿ 'ಬಹಿಶ್ಚ' ಸ್ವಪ್ನಜಾಗರಸುಷುಪ್ತಿಗಳಿಗಿಂತ ಆಚೆ ಪ್ರಳಯದಲ್ಲಿಯೂ ಮುಕ್ತಿಯಲ್ಲಿಯೂ ಬಹುಕಾಲ ಬಹುಸುಖ ಉಣಿಸುತ್ತಾನೆ ಎಂದು ಪಿಪ್ಪಲಾಯನ ಮುನಿ ಉಪದೇಶಿಸುತ್ತಾರೆ.

ಅಹೇತುಃ ಸ್ವಸ್ಯ ಹೇತುರನ್ಯೋ ನಾಸ್ತಿ।
ಬಹಿಃ ಪ್ರಲಯೇ ಮುಕ್ತೌ ಚ।

ಪರಮಾತ್ಮನು 'ಅಹೇತು' ಏಕೆಂದರೆ ಅವನಿಗೆ ಇನ್ನೊಬ್ಬನು ಜನಕನಿಲ್ಲ. 'ಬಹಿಶ್ಚ' ಎಂದರೆ ಪ್ರಳಯದಲ್ಲಿಯೂ ಮುಕ್ತಿಯಲ್ಲಿಯೂ ಅವನೇ ನಿಯಾಮಕನು.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಪಿಪ್ಪಲಾಯನ ಮುನಿ ಹರಿಸರ್ವೋತ್ತಮತ್ವವನ್ನು ವರ್ಣಿಸುತ್ತಾರೆ.

ನೈನಂ ಮನೋ ವಿಶತಿ ವಾಗುತ ಚಕ್ಷುರಾತ್ಮಾ
ಪ್ರಾಣೇಂದ್ರಿಯಾಣಿ ಚ ಯಥಾಽನಲಮರ್ಚಿಷಃ ಸ್ವಾಃ ।
ಶಬ್ದೋಽಪ್ಯಬೋಧಕನಿಷೇಧತಯಾಽಽತ್ಮಮೂಲ-
ಮರ್ಥೋಕ್ತಮಾಹ ಯದೃತೇ ನ ನಿಷೇಧ್ಯಸಿದ್ಧಿಃ ॥ ೩೭ ॥

ಮನಸ್ಸು ವಾಕ್ ಚಕ್ಷು ಆತ್ಮ ಪ್ರಾಣ ಇಂದ್ರಿಯಗಳಿಗೆ ಅಭಿಮಾನಿಗಳಾದ ರುದ್ರ ಸರಸ್ವತಿ ಸೂರ್ಯ ಬ್ರಹ್ಮ ಪಂಚಪ್ರಾಣರು ಇಂದ್ರಿಯದೇವತೆಗಳು ಇವರೂ ಯಾರೂ ಈ ಪರಮಾತ್ಮನನ್ನು ಪೂರ್ತಿ ತಿಳಿಯರು. ಅವನ ಅನುಗ್ರಹದಿಂದಲೇ ಸ್ವಯೋಗ್ಯತಾನುಸಾರ ಅಲ್ಪವೇ ತಿಳಿಯಬಲ್ಲರು. ಅಗ್ನಿಯ ಜ್ವಾಲೆಗಳಿಗೆ ಅಭಿಮಾನಿಗಳಾದ ಅಗ್ನಿಪುತ್ರರು ಅಗ್ನಿಯನ್ನು ಹೇಗೆ ಪೂರ್ತಿಯಾಗಿ ತಿಳಿಯರೋ ಹಾಗೆ. ವೇದಗಳಿಂದಲೂ ಯಾರಿಗೂ ಅವನ ಅಲೌಕಿಕ ಗುಣಗಳನ್ನು ತಿಳಿಯಲಾಗದು. ಏಕೆಂದರೆ ವೇದಾಭಿಮಾನಿನಿ ರಮಾದೇವಿ ವೇದದಲ್ಲಿ ಅಲೌಕಿಕ ಜ್ಞಾನಾನಂದಾದಿ ಸ್ವರೂಪನಾದ ಶ್ರೀಹರಿಯಲ್ಲಿ 'ನೇತಿ ನೇತಿ' ಎಂದು ಲೌಕಿಕ ಜ್ಞಾನಾನಂದಾದಿ ಗುಣಗಳನ್ನು ನಿಷೇಧಿಸುತ್ತ ಅರ್ಥಾತ್ ~~ಅಲೌಕಿಕ ಜ್ಞಾನಾನಂದಾದಿಗುಣಗಳಿವೆ ಎನ್ನುತ್ತಾಳೆ ಹೊರತು ನೇರವಾಗಿ ಸ್ಪಷ್ಟವಾಗಿ~~ ಅಲೌಕಿಕ ಗುಣಗಳಿವೆ ಎಂದು ಹೇಳುವುದಿಲ್ಲ. ತನಗೂ ಮೂಲಕಾರಣನಾದ ಶ್ರೀಹರಿಯಲ್ಲಿ ಲೌಕಿಕ ಗುಣನಿಷೇಧದ ಮೂಲಕ ಅಲೌಕಿಕ ಅನಂತಗುಣಗಳನ್ನು ಹೇಳುತ್ತಾಳೆ.

[1]ಬೆಂಕಿಯನ್ನು ಅದರ ಜ್ಯೋತಿ ಕಿಡಿಗಳು ಬೆಳಗಿಸುವುದಿಲ್ಲ ಸುಡುವುದಿಲ್ಲ. ಹಾಗೇ ಮನೋವೃತ್ತಿಗಳನ್ನು ಬ್ರಹ್ಮನೆ ಪ್ರಕಾಶಗೊಳಿಸುತ್ತಾನೆ ಹೊರತು ಮನೋವೃತ್ತಿಗಳು ಬ್ರಹ್ಮನನ್ನು ಪ್ರಕಾಶಗೊಳಿಸುವುದಿಲ್ಲ ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ.

ಇದು ಮುಂದೆ (11.7.51) ಭಾಗವತ ಶ್ಲೋಕ ವ್ಯಾಖ್ಯಾನದಲ್ಲಿ ತಾವೇ ಹೇಳುವ ಪ್ರಮೇಯಕ್ಕೆ ವ್ಯತಿರಿಕ್ತವಾಗಿದೆ. ಅಲ್ಲಿ ಪ್ರತಿಬಿಂಬವು ಉಪಾಧಿಯಲ್ಲಿ ಬೀಳುತ್ತದೆ. ನೀರಿನಲ್ಲಿ ಸೂರ್ಯನ ಪ್ರತಿಬಿಂಬ ಬೀಳುವಂತೆ. ಆಗ ಉಪಾಧಿ ಸೂರ್ಯನನ್ನು ವ್ಯಕ್ತಗೊಳಿಸುವುದರಿಂದಲೆ 'ವ್ಯಕ್ತಿ' ಎನಿಸುತ್ತದೆ. ಅದರಿಂದ ಭಾಗವತವೆ ಉಪಾಧಿಯನ್ನು ವ್ಯಕ್ತಿ ಎಂದು ಕರೆದಿದೆ ಎಂದು ಶ್ರೀಧರವ್ಯಾಖ್ಯಾನದಲ್ಲಿ ಉಕ್ತವಾಗಿದೆ-'ಅಭಿವ್ಯನಕ್ತೀತಿ ವ್ಯಕ್ತಿರುಪಾಧಿಃ। ವ್ಯಕ್ತಿಸ್ಥ ಉಪಾಧೌ ಪ್ರತಿಬಿಂಬಿತಃ।'

1. ಯಥಾಽನಲಂ ಸ್ವಾಃ ಸ್ವಾಂಶಭೂತಾ ಅರ್ಚಿಷೋ ವಿಸ್ಫುಲಿಂಗಾದಯೋ ನ ಪ್ರಕಾಶಯಂತಿ ನ ದಹಂತಿ ಚ ತಥಾ ಜಡಾಸು ಮನ ಆದಿವೃತ್ತಿಷು ಅಬಿವ್ಯಜ್ಯಮಾನಸ್ಯಾತ್ಮ ಪ್ರಕಾಶಸ್ಯ ತತ್ತದ್‌ವೃತ್ತಿ ಪ್ರಕಾಶಕಸ್ಯ ನ ತತ್ ಪ್ರಕಾಶವಿಷಯತ್ವಂ। -ಶ್ರೀಧರಃ

ಎಂದು. ಪ್ರಕೃತ ಶ್ಲೋಕ ವ್ಯಾಖ್ಯಾನದಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಚೈತನ್ಯ ಪ್ರತಿಬಿಂಬವು ಮನೋವೃತ್ತಿಯಲ್ಲಿ ಬೀಳುವುದರಿಂದ ಮನೋವೃತ್ತಿಯು ಚೈತನ್ಯಕ್ಕೆ ಅಭಿವ್ಯಂಜಕ, ಪ್ರಕಾಶಕವಾಗಿದ್ದರೂ 'ಪ್ರಕಾಶಕವಲ್ಲ' ಎಂದು ಹೇಳುತ್ತಿದ್ದಾರೆ.

ಮನೋವೃತ್ತಿ ಹೊರತು ಇನ್ನಾವುದು ಘಟಾದಿ ಪದಾರ್ಥ ಚೈತನ್ಯ ಪ್ರತಿಫಲನ ಸಮರ್ಥವಾಗಿದೆ? ಅದರಿಂದ ಅದೇ ಪ್ರಕಾಶಕ. ಶುದ್ಧ ಚೈತನ್ಯದಲ್ಲಿ ಇರುವ ಅಜ್ಞಾನವನ್ನು ವೇದಾಂತಜನ್ಯ ಮನೋವೃತ್ತಿಯಲ್ಲಿ ಅಭಿವ್ಯಕ್ತವಾದ ಶುದ್ಧ ಚೈತನ್ಯವೇ ಕಳೆಯಬೇಕೆಂದು ಅದ್ವೈತಮತವಿರುವುದರಿಂದ ಮನೋವೃತ್ತಿಯನ್ನು ಚೈತನ್ಯಕ್ಕೆ ಪ್ರಕಾಶಕ ಎಂದು ಒಪ್ಪಲೇಬೇಕು. ಮನೋವೃತ್ತಿಯಲ್ಲಿ ಚೈತನ್ಯ ಪ್ರತಿಫಲನವಾಗದಿದ್ದರೆ ಅಜ್ಞಾನ ನಾಶವಾಗದು. ಕೇವಲ ವೃತ್ತಿ ಅಜ್ಞಾನನಾಶಕವಲ್ಲ, ಕೇವಲ ಚೈತನ್ಯವೂ ಅಜ್ಞಾನ ನಾಶಕವಲ್ಲ, ವೃತ್ತಿಯಲ್ಲಿ ಅಭಿವ್ಯಕ್ತವಾದಾಗಲೇ ಅದು ಅಜ್ಞಾನನಾಶ ಮಾಡುತ್ತದೆ. ಇದಕ್ಕೆ ಅದ್ವೈತದಲ್ಲಿಯೇ ಉದಾಹರಣೆ ಹೀಗೆ ಉಕ್ತವಾಗಿದೆ. ಸೂರ್ಯಕಿರಣ ಹುಲ್ಲುಕಡ್ಡಿಯನ್ನು ಅಭಿವ್ಯಕ್ತ ಮಾಡುತ್ತದೆ ಹೊರತು ಅದನ್ನು ಸುಡುವುದಿಲ್ಲ, ಕೇವಲ ಮಣಿಯೂ ಅದನ್ನು ಸುಡುವುದಿಲ್ಲ ಮಣಿಯ ಮೂಲಕ ಕಿರಣವನ್ನು ಹಾಯಿಸಿದಾಗ ಕಿರಣ ಹುಲ್ಲುಕಡ್ಡಿಯನ್ನು ಸುಡುತ್ತದೆ ಎಂದು.

ಮನೋವೃತ್ತಿಯು ಬ್ರಹ್ಮನನ್ನು ವಿಷಯೀಕರಿಸದಿದ್ದರೂ ಬ್ರಹ್ಮನ ಅಜ್ಞಾನವನ್ನು ನಾಶಗೊಳಿಸುತ್ತದೆ. ಏಕೆಂದರೆ ಬ್ರಹ್ಮನಿಗಿಂತ ಬೇರೆ ಏನನ್ನೂ ವಿಷಯೀಕರಿಸುತ್ತಿಲ್ಲ ಎಂದು ವಾದಿಸುವುದುಂಟು. ಇದಕ್ಕೆ ಹೇಳಬೇಕು ವೃತ್ತಿಯು ಬ್ರಹ್ಮನನ್ನಾಗಲಿ ಬೇರೇನನ್ನಾಗಲಿ ವಿಷಯೀಕರಿಸದಿದ್ದರೆ ಅದು ಜ್ಞಾನವೇ ಆಗಲಾರದು. ಜ್ಞಾನವೇ ಅಜ್ಞಾನ ನಿವರ್ತಕವಾದ್ದರಿಂದ ಅಜ್ಞಾನಕ್ಕೆ ನಿವೃತ್ತಿಯೇ ಇಲ್ಲವೆಂದಾದೀತು ಎಂದು.

ಸ್ವಪ್ರಕಾಶಜ್ಞಾನರೂಪವಾದ ಚೈತನ್ಯವನ್ನು ಮನೋವೃತ್ತಿ ಪ್ರಕಾಶಗೊಳಿಸುವುದಿಲ್ಲ ಎನ್ನಲು ಸ್ವಪ್ರಕಾಶವಾದ ಬೆಂಕಿಯನ್ನು ಜ್ವಾಲೆ ಕಿಡಿಗಳು ಪ್ರಕಾಶಗೊಳಿಸುವುದಿಲ್ಲ ಹೇಗೋ ಹಾಗೆ ಎಂದು ಉದಾಹರಣೆಯನ್ನು 'ಯಥಾನಲಮರ್ಚಿಷಃ' ಎಂದು ಭಾಗವತವೆ ಕೊಟ್ಟಿದೆ ಎನ್ನುತ್ತದೆ ಶ್ರೀಧರವ್ಯಾಖ್ಯಾನ. ಆದರೆ, ಜ್ವಾಲೆಯೂ ಇಲ್ಲ ಕಿಡಿಯೂ ಇಲ್ಲವೆಂದರೆ ಬೆಂಕಿ ಕಾಣಿಸುವುದಿಲ್ಲ, ಕಂಡರೂ ಸ್ಪಷ್ಟ ಕಾಣಿಸುವುದಿಲ್ಲ, ನೆಲ, ನೀರು, ಗಾಳಿಗಳು ಬಿಸಿಯಾದಾಗ ಅವುಗಳಲ್ಲಿರುವ ಬೆಂಕಿ ಕಾಣಿಸುವುದಿಲ್ಲ, ಒಲೆಯ ಬೆಂಕಿಯೂ ಜ್ವಾಲೆ ಕಿಡಿಗಳಿದ್ದರೇ ಹೆಚ್ಚು ಬೆಳಗುತ್ತದೆ, ಇಲ್ಲದಿದ್ದರೆ ಮಂಕಾಗಿರುತ್ತದೆ. ಅದರಿಂದ ಉದಾಹರಣೆ ಯುಕ್ತವಲ್ಲ.

ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಶ್ಲೋಕದ ಉತ್ತರಾರ್ಧ ಹೀಗಿದೆ—

ಶಬ್ದೋಽಪಿ ಬೋಧಕ ನಿಷೇಧತಯಾಽಽತ್ಮಮೂಲ-
ಮರ್ಥೋಕ್ತಮಾಹ ಯದೃತೇ ನ ನಿಷೇಧ ಸಿದ್ಧಿಃ ।

[1]ಶ್ರೀಧರವ್ಯಾಖ್ಯಾನ ಪ್ರಕಾರ ಇದರ ಅಭಿಪ್ರಾಯ—

'ಮನಸ್ಸು ಮಾತು ಮುಂತಾದುವು ಬ್ರಹ್ಮವನ್ನು ತಿಳಿಸಲಾರವು, ಬ್ರಹ್ಮಬೋಧಕವಾಗಲಾರವು ಎಂದು ಬೋಧಕ ನಿಷೇಧವನ್ನು 'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂಬ ಶ್ರುತಿಯೇ ಮಾಡುತ್ತಿದೆ. 'ಮನಸು ಮಾತುಗಳಿಂದ ಬ್ರಹ್ಮನ ಅರಿವಾಗದು' ಎಂದು ಶ್ರುತಿಯು ಹೇಳುವಾಗ 'ಅರಿವಾಗದು' ಎನ್ನುವ ನಿಷೇಧ ಸಿದ್ಧವಾಗುವುದು. 'ಯಾವುದರ ಅರಿವಾಗದು?' ಎಂದರೆ 'ಬ್ರಹ್ಮನ ಅರಿವಾಗದು' ಎಂದು, 'ಬ್ರಹ್ಮ' ಸಿದ್ಧವಾಗುವುದು. ಬ್ರಹ್ಮನ ಸಿದ್ಧಿಯಾಗದೆ 'ಬ್ರಹ್ಮನ ಅರಿವಾಗದು' ಎನ್ನುವ ನಿಷೇಧ ಸಿದ್ಧವಾಗದು ತಾನೆ? ಹೀಗೆ ಶ್ರುತಿಯು ಪರ್ಯಾಯವಾಗಿ ಕಷ್ಟದಿಂದ ಬ್ರಹ್ಮನ ಬಗ್ಗೆ ಅರಿವು ನೀಡುತ್ತದೆ. ನೇರವಾಗಿ ಸುಲಭವಾಗಿ ಬೋಧಿಸುವುದಿಲ್ಲ' ಎಂದು.

ಶ್ರುತಿಯು ಬ್ರಹ್ಮನ ಅರಿವನ್ನು ನಿಷೇಧಿಸುತ್ತಲೇ ಪರ್ಯಾಯವಾಗಿ ಬ್ರಹ್ಮನ ಅರಿವನ್ನು ಉಂಟುಮಾಡುತ್ತದೆ. ಹೊರತು ನೇರವಾಗಿ ಬ್ರಹ್ಮನನ್ನು ಬೋಧಿಸುವುದಿಲ್ಲ ಎಂದು ಶ್ರೀಧರವ್ಯಾಖ್ಯಾನದಲ್ಲಿ ಹೇಳಿದ್ದು ಸರ್ವಥಾ ಅನುಚಿತ. 'ಯತೋ ವಾಚೋ ನಿವರ್ತಂತೇ' ಎನ್ನುವ ಒಂದು ನಿಷೇಧ ವಾಕ್ಯವನ್ನು ಮಾತ್ರ ತೆಗೆದುಕೊಂಡು ಅದು ನೇರವಾಗಿ ಬ್ರಹ್ಮನನ್ನು ಬೋಧಿಸುವುದಿಲ್ಲ ಎಂದ ಮಾತ್ರಕ್ಕೆ ಯಾವ ಶ್ರುತಿಯು ನೇರವಾಗಿ ಬೋಧಿಸುವುದೇ ಇಲ್ಲವೆನ್ನಲಾದೀತೇ? ಅವರೇ ಹೇಳುವಂತೆ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಮುಂತಾದ ಅನೇಕ ಶ್ರುತಿವಾಕ್ಯಗಳು ನಿಷೇಧ ಮಾಡದೆ ನೇರವಾಗಿ ಬ್ರಹ್ಮನ ಅರಿವನ್ನು ಉಂಟುಮಾಡುತ್ತವೆ.

[2]ವೀರರಾಘವ ವ್ಯಾಖ್ಯಾನದಲ್ಲಿ ಈ ಆಕ್ಷೇಪವನ್ನು ಎತ್ತಿಕೊಂಡು, 'ನಿಜ, ನಿಷೇಧ

---

1. ನನು ತಂ ತ್ವೌಪನಿಷದಂ ಪುರುಷಂ ಪೃಚ್ಛಾಮೀತಿ ಶ್ರುತೇಃ ಶಬ್ದಗೋಚರತ್ವಂ ಪ್ರತೀಯತೇ ತತ್ರಾಹ ಶಬ್ದೋಽಪೀತಿ । ಶಬ್ದೋಽಪ್ಯಾತ್ಮ ಮೂಲಮಾತ್ಮನಿ ಪ್ರಮಾಣಂ ಸತ್ ಅರ್ಥೋಕ್ತಮರ್ಥಾದುಕ್ತಂ ಯಥಾ ಭವತಿ ತಥಾಹ, ನ ಸಾಕ್ಷಾತ್। ಕುತಃ ಬೋಧಕ ನಿಷೇಧತಯಾ ಸ್ವಸ್ಯೈವ ಭೋದಕತ್ವ ನಿಷೇಧ ರೂಪತ್ವಾತ್ ಯತೋ ವಾಚೋ ನಿವರ್ತಂತ ಇತಿ। ನನು ತರ್ಹಿನ್ನೈವಾಹ ಶ್ರುತಿಃ ತತ್ರಾಹ ಯತೋ ವಾಚಇತಿ ನಿಷೇಧಸ್ಯ ಯದವಧಿಭೂತಂ ಬ್ರಹ್ಮ ಋತೇ ಸಿದ್ಧಿರ್ನಾಸ್ತಿ ಸರ್ವಸ್ಯ ನಿಷೇಧಸ್ಯ ಸಾವಧಿತ್ವಾತ್ । -ಶ್ರೀಧರಃ

2. ಯದ್ಯಪಿ ಸತ್ಯಂ ಜ್ಞಾನಮನಂತಮಿತ್ಯಾದಯೋ ಬಹವಃ ಶಬ್ದಾಃ ಸಾಕ್ಷಾದ್ ಬ್ರಹ್ಮಪ್ರತಿಪಾದಕಾಃ ಸಂತ್ಯೇವ। ತಥಾಪಿ ಯೋ ಗ್ರಾಹಕಾಂತರ ನಿಷೇಧ ಪರಃ ಶಬ್ದಃ ತಸ್ಯೈವ ಬ್ರಹ್ಮಪ್ರಮಾಪಕತ್ವಂ ಪರ್ಯವಸಾಯಯಿತುಂ ಅರ್ಥೋಕ್ತಮಾತ್ಮ ಮೂಲಮಾಹೇತ್ಯುಕ್ತಂ। -ವೀರರಾಘವಃ

ವಾಕ್ಯವು ನೇರವಾಗಿ ಬ್ರಹ್ಮಬೋಧಕವಾಗದಿದ್ದರೂ ಸತ್ಯಜ್ಞಾನಾದಿ ವಾಕ್ಯಗಳು ನೇರವಾಗಿಯೇ ಬ್ರಹ್ಮಬೋಧಕವಾಗುತ್ತವೆ. ಆದರೆ ಸತ್ಯಜ್ಞಾನಾದಿ ವಾಕ್ಯ ನೇರವಾಗಿ ಬೋಧಿಸಿದರೂ ನಿಷೇಧವಾಕ್ಯ ನೇರವಾಗಿ ಬೋಧಿಸುವುದಿಲ್ಲ ಎನ್ನುವುದು ಭಾಗವತದ ಅಭಿಪ್ರಾಯ' ಎಂದು.

ವಾಸ್ತವದಲ್ಲಿ 'ಶಬ್ದೋಽಪಿ' ಎಲ್ಲ ವೇದವೂ ಕೂಡ 'ಅರ್ಥೋಕ್ತಮಾಹ' ಪರ್ಯಾಯವಾಗಿಯೇ ಹೇಳುತ್ತದೆ ನೇರವಾಗಿ ಅಲ್ಲ ಎಂದು ಸಾಮಾನ್ಯವಾಗಿ ಎಲ್ಲ ವೇದವನ್ನೂ ಬ್ರಹ್ಮನ ವಿಷಯದಲ್ಲಿ ಸ್ಪಷ್ಟಬೋಧಕವಲ್ಲ ಎನ್ನುತ್ತಿದೆ. ಇದು ಹೇಗೆ? ಮತ್ತು ಅತ್ತ ನಿಷೇಧವಾಕ್ಯ ಪರ್ಯಾಯವಾಗಿಯೇ ಹೇಳುತ್ತಿದ್ದರೆ ಏನು ಅನಿಷ್ಟ? ಇತ್ತ ಸತ್ಯಜ್ಞಾನಾದಿ ವಾಕ್ಯ ನೇರವಾಗಿಯೇ ಹೇಳುತ್ತಿದೆ ತಾನೆ? ಎನ್ನುವ ಪ್ರಶ್ನೆಗೆ ಉತ್ತರವಿಲ್ಲ.

'ತದವೇಹಿ ಪರಂ ನರೇಂದ್ರ' ಎಂದು ಬ್ರಹ್ಮನಿಗೆ ಮನೋಗೋಚರತ್ವವನ್ನು ಹಿಂದಿನ ಶ್ಲೋಕದಲ್ಲಿ ಹೇಳಿದೆ. ಒಡನೆ ಅದಕ್ಕೆ ವಿರುದ್ಧವಾಗಿ ಈ ಶ್ಲೋಕದಲ್ಲಿ 'ನೈತನ್ಮನೋ ವಿಶತಿ' ಮನೋಗೋಚರತ್ವವಿಲ್ಲ ಎಂದಿದೆ. ಜೊತೆಗೆ 'ಆತ್ಮಮೂಲಂ' ಎಂದು ಬ್ರಹ್ಮನಿಗೆ ಪ್ರಮಾಣಗೋಚರತ್ವವನ್ನೂ ಹೇಳಿದೆ. ಪ್ರಮಾಣಗೋಚರತ್ವ ವಿಲ್ಲವೆನ್ನಲು 'ಯಥಾನಲಮರ್ಚಿಷಃ' ಎಂದು ಲೋಕವಿರುದ್ಧವಾದ ಬೆಂಕಿ ಜ್ವಾಲೆಗಳ ನಿದರ್ಶನ ನೀಡಿದೆ. 'ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ' ಬ್ರಹ್ಮವು ತತ್ವಮಸಿ ಮುಂತಾದ ಶಬ್ದದಿಂದ ಅಪರೋಕ್ಷವಾಗುತ್ತದೆ ಎನ್ನುವ ಶ್ರುತಿಗೆ ವಿರುದ್ಧವಾಗಿ 'ಶಬ್ದೋಽಪಿ ಬೋದಕ ನಿಷೇಧತಯಾ' 'ಶಬ್ದಕ್ಕೆ ಬ್ರಹ್ಮ ಗೋಚರವಾಗುವುದಿಲ್ಲ' ಎಂದಿದೆ. ಸತ್ಯಜ್ಞಾನಾದಿ ವಾಕ್ಯಗಳು ನೇರವಾಗಿ ಬ್ರಹ್ಮಬೋಧಕವಾಗಿರುವಾಗ, 'ಶಬ್ದೋಽಪಿ ಅರ್ಥೋಕ್ತಮಾಹ' ಎಂದು ಎಲ್ಲ ಶಬ್ದಗಳೂ ಪರ್ಯಾಯವಾಗಿಯೇ ಬ್ರಹ್ಮಬೋಧಕ ವಾಗಿವೆ ಎಂದಿದೆ. ಸ್ವಪ್ರಕಾಶವೆಂದು ಒಪ್ಪಿರುವ ಬ್ರಹ್ಮನಿಗೆ ಶಬ್ದವು ಪರ್ಯಾಯ ವಾಗಿಯಾದರೂ ಪ್ರಕಾಶಕವಾಗುವುದೆಂದು ಹೇಳಿದೆ. ಈ ಎಲ್ಲ ವ್ಯಾಹತಿಗಳು ಅವಿದ್ಯೆಯ ಚಮತ್ಕಾರವೆಂದು ಅದ್ವೈತಮತ ತಾನು ಸಮಾಧಾನ ಪಟ್ಟುಕೊಳ್ಳ ಬಹುದು. ಭಾಗವತ ಹಾಗೆ ಮಾಡಲಾರದು.

'ಯತೋ ವಾಚೋ ನಿವರ್ತಂತೇ' 'ಮಾತಿಗೆ ಮನಸಿಗೆ ಪೂರ್ತಿಯಾಗಿ ನಿಲುಕದ ಅನಂತ ಮಹಿಮೆಉಳ್ಳವನು ಪರಮಾತ್ಮ' ಎಂದು ಶ್ರುತಿಯು ಹೇಳುತ್ತಿದ್ದರೆ ಪರಮಾತ್ಮ ಯಾವ ಪ್ರಮಾಣಕ್ಕೂ ಗೋಚರನಾಗದವನೆಂದು ಅಪಾರ್ಥ ಮಾಡಿಕೊಂಡು ಭಾಗವತ ಶ್ಲೋಕಕ್ಕೆ ವ್ಯಾಖ್ಯಾನ ಮಾಡಬಾರದು. ಮನಸು ಮಾತು ಮುಂತಾದವುಗಳ ಅಭಿಮಾನಿಗಳು ಪರಮಾತ್ಮನನ್ನು ಪೂರ್ತಿ ತಿಳಿಯಲಾರರು, ಹೇಳಲಾರರು. ಸ್ವತಃ ವೇದಾಭಿಮಾನಿ ಮಹಾಲಕ್ಷ್ಮಿಯೂ ನೇರವಾಗಿ ಅವನ

ಅಲೌಕಿಕ ಗುಣಗಳನ್ನು ಶಬ್ದಗಳಿಂದ ಹೇಳಲಾರರು. ಅಲೌಕಿಕ ಗುಣಗಳನ್ನು ಹೇಳುವ ಶಬ್ದ ಲೋಕದಲ್ಲಿಲ್ಲ ಎಂದು ಭಾಗವತದ ಅಭಿಪ್ರಾಯ. ಇದನ್ನು ಶ್ರೀಮದಾಚಾರ್ಯರು ಬ್ರಹ್ಮತರ್ಕವಚನದ ಆಧಾರವನ್ನು ತೋರಿಸಿ ಸ್ಪಷ್ಟಗೊಳಿಸುತ್ತಾರೆ.

ಬ್ರಹ್ಮಾದ್ಯಾ ಯಂ ನ ಜಾನಂತಿ ಕರಣಾದ್ಯಭಿಮಾನಿನಃ।
ಜಾನಂತ್ಯನುಗ್ರಹಾಚ್ಚಾಸ್ಯ ಪ್ರಧಾನಾಗ್ನಿಂ ಯಥಾಽರ್ಚಿಷಃ।
ಅಗ್ನಿಪುತ್ರಾ ನಮಸ್ತಸ್ಮೈ ಯಮಾಹ ಶ್ರೀಶ್ಚ ನ ಸ್ಫುಟಂ।
ವೇದರೂಪಾ ಪರಂ ದೇವಂ ವೈಲಕ್ಷಣ್ಯಾತ್ ಸಮಸ್ತತಃ।
ಆನಂದೋ ನೇದೃಶಾನಂದ ಇತ್ಯುಕ್ತೇ ಲೋಕತಃ ಪರಃ।
ಪ್ರತಿಭಾತಿ ನ ಚಾಭಾತಿ ಯಥಾವದ್ ದರ್ಶನಂ ವಿನಾ।
ಇತಿ ಬ್ರಹ್ಮತರ್ಕೇ॥

ದೇಹೇಂದ್ರಿಯಾಭಿಮಾನಿಗಳಾದ ಬ್ರಹ್ಮರುದ್ರಾದಿ ದೇವತೆಗಳು ಶ್ರೀಹರಿಯನ್ನು ಅವನ ಅನುಗ್ರಹವಿಲ್ಲದೆ ತಿಳಿಯಲಾರರು. ಅನುಗ್ರಹದಿಂದಲೇ ಸ್ವಲ್ಪವೇ ತಿಳಿಯುವರು, ಅಗ್ನಿಪುತ್ರರು ಅಗ್ನಿಯನ್ನು ಹೇಗೋ ಹಾಗೆ. ಅಂಥ ಹರಿಗಿದೋ ನಮಸ್ಕಾರ. ವೇದಾಭಿಮಾನಿನಿ ರಮೆಯೂ ಕೂಡ ತನಗೂ ಕಾರಣನಾದ ಆ ದೇವನನ್ನು ವೇದದಲ್ಲಿ ಸ್ಫುಟವಾಗಿ ಜನರಿಗೆ ತಿಳಿಯುವಂತೆ ಹೇಳುವುದಿಲ್ಲ. ಏಕೆಂದರೆ ಅವನು ಲೋಕದ ಎಲ್ಲ ವಸ್ತುಗಳಿಗಿಂತಲೂ ವಿಲಕ್ಷಣ. ಅದರಿಂದ ಭಗವಂತ ಆನಂದರೂಪನೇ, ಆದರೆ ಲೋಕದಲ್ಲಿ ಕಾಣುವಂಥ ಆನಂದರೂಪನಲ್ಲ, 'ನೇತಿ ನೇತಿ' ಎಂದು ಹೇಳಿದಾಗ ಲೋಕಕ್ಕಿಂತ ವಿಲಕ್ಷಣವಾದ ಆನಂದವು ತಿಳಿದುಬರುತ್ತದೆ. ಸಾಕ್ಷಾತ್ಕಾರವಾಗದೆ ಅದು ಸ್ಫುಟವಾಗಿ ಕಂಡುಬರುವುದಿಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಬೋಧಕಃ ಪರಮೇಶ್ವರಃ। ಈದೃಶಾನಂದೋ ನ ಭವತೀತಿ ನಿಷೇಧವಚನಾರ್ಥ ಏವ ನ ಸಿಧ್ಯತಿ ವಿಲಕ್ಷಣಾನಂದಾಭಾವೇ ಇತ್ಯರ್ಥತಃ ಸಿದ್ಧಿಃ।

ಬೋಧಕ ಎಂದರೆ 'ಬೋಧ-ಕ' ಅಲೌಕಿಕ ಜ್ಞಾನಾನಂದ ಸ್ವರೂಪನಾದ ಪರಮಾತ್ಮ. ಅವನು ಲೌಕಿಕಾನಂದ ಸ್ವರೂಪನಲ್ಲ ಎಂದು ನಿಷೇಧ ಮಾಡುವ 'ನೇತಿ ನೇತಿ' ಎಂಬ ವಚನದ ಅರ್ಥವೇ ಅವನಲ್ಲಿ ಅಲೌಕಿಕಾನಂದವಿಲ್ಲದಿದ್ದರೆ ಸಿದ್ಧವಾಗುವುದಿಲ್ಲ ಎಂದು ಅರ್ಥಾಪತ್ತಿ ಪ್ರಮಾಣದಿಂದ ಅಲೌಕಿಕಾನಂದ ಸಿದ್ಧವಾಗುವುದು.

'ಅಬೋಧಕನಿಷೇಧ' ಎಂದರೆ 'ಅ-ಬೋಧಕ' 'ಅಲೌಕಿಕ ಜ್ಞಾನಾನಂದ ಸ್ವರೂಪನಲ್ಲ, ಲೌಕಿಕ ಜ್ಞಾನಾನಂದಸ್ವರೂಪನೇ' ಎನ್ನುವುದರ 'ನಿಷೇಧ' ನೇತಿನೇತಿ ಎಂಬ ವಾಕ್ಯ. 'ನಿಷೇಧ್ಯ' ಎಂದರೆ, ಈ ನಿಷೇಧವಾಕ್ಯದ ಅರ್ಥ. ಅಲೌಕಿಕ ಜ್ಞಾನಾನಂದ ಸ್ವರೂಪತ್ವವಿದೆ ಎಂದೇ ಹೇಳುತ್ತದೆ. ಇದೇ ಅದರ ಅರ್ಥ. ಅರ್ಥಾತ್ ಅಲೌಕಿಕ ಜ್ಞಾನಾನಂದ ಸ್ವರೂಪತ್ವ ವಿಲ್ಲದಿದ್ದಲ್ಲಿ, ಲೌಕಿಕ ಜ್ಞಾನಾನಂದವೇ ಇರುವ ಪಕ್ಷದಲ್ಲಿ, ಲೌಕಿಕ ಜ್ಞಾನಾನಂದ ಸ್ವರೂಪತ್ವವನ್ನು ನಿಷೇಧಿಸುವ ವಾಕ್ಯಕ್ಕೆ ಅರ್ಥವಿಲ್ಲ ಎಂದಾಗುವುದು, ಬಾಧಿತವಾಗುವುದು. ವೇದವು 'ವಿಜ್ಞಾನಮಾನಂದಂ ಬ್ರಹ್ಮ' ಎಂದು ಮುಂತಾಗಿ ಸಾಮಾನ್ಯವಾಗಿ ಆನಂದರೂಪತ್ವವನ್ನು ಹೇಳಿ, ಲೌಕಿಕಾನಂದ ರೂಪತ್ವವನ್ನು 'ನೇತಿ ನೇತಿ' ಎಂದು ನಿಷೇಧಮಾಡಿದರೆ ಅರ್ಥಾಪತ್ತಿ ಪ್ರಮಾಣದಿಂದ ಅಲೌಕಿಕಾನಂದ ರೂಪತ್ವ ಸಿದ್ಧವಾಗುವುದರಿಂದ 'ನಿಷೇಧ್ಯ' ಎಂದರೆ ನಿಷೇಧ ವಾಕ್ಯಕ್ಕೆ ಅರ್ಥ ವಿರುತ್ತದೆ. ಇಲ್ಲದಿದ್ದರೆ ಅದು ಅರ್ಥಹೀನವಾಗುತ್ತದೆ ಬಾಧಿತವಾಗುತ್ತದೆ ಎಂದರ್ಥ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಪಿಪ್ಪಲಾಯನ ಮುನಿ ಸರ್ವಶಕ್ತನಾದ ಪರಮಾತ್ಮ ಅಜ್ಞಾನಿಗಳಿಗೆ ಕಾಣುವ ರೀತಿಯನ್ನು ಹೇಳುತ್ತಾರೆ.

ಸತ್ತ್ವಂ ರಜಸ್ತಮ ಇತಿ ತ್ರಿವೃದೇಕಮಾದೌ
ಸೂತ್ರಂ ಮಹಾನಹಮಿತಿ ಪ್ರವದಂತಿ ಜೀವಮ್ ।
ಜ್ಞಾನಕ್ರಿಯಾರ್ಥಫಲರೂಪತಯೋರುಶಕ್ತಿ
ಬ್ರಹ್ಮೈವ ಭಾತಿ ಸದಸಚ್ಚ ತಯೋಃ ಪರಂ ಯತ್ ॥ ೩೮ ॥

ಸೃಷ್ಟಿಗೆ ಆದಿಯಲ್ಲಿದ್ದ ಸರ್ವೋತ್ತಮನಾದ ನಾರಾಯಣನನ್ನು ಸತ್ವರಜಸ್ತಮ ಸ್ಸಂಬ ಗುಣತ್ರಯರೂಪನೆಂದೂ ತ್ರಿಗುಣಾತ್ಮಕ ಪ್ರಕೃತಿಯೆಂದೂ ಸೂತ್ರ ವಾಯು ಮಹದಹಂಕಾರ ರೂಪನೆಂದೂ ಜೀವನೆಂದೂ ಜ್ಞಾನೇಂದ್ರಿಯ ಕರ್ಮೇಂದ್ರಿಯ ವಿಷಯಪದಾರ್ಥಗಳ ರೂಪದಲ್ಲಿ ಮತ್ತು ಅವುಗಳಿಂದ ಸಿಗುವ ಸುಖದುಃಖಫಲಗಳ ರೂಪದಲ್ಲಿ ಕಾಣುವ ಬಹಳ ವಿಚಿತ್ರಶಕ್ತಿಯುಳ್ಳ ಬ್ರಹ್ಮ ಅವನೇ ಎಂದೂ ಎಲ್ಲ ಕಾರ್ಯಕಾರಣ ವಸ್ತುರೂಪದಿಂದ ಅವಿದ್ಯೆಯಿಂದ ಅವನೇ ಕಾಣಿಸಿಕೊಳ್ಳುತ್ತಾನೆ ಎಂದೂ ಅಜ್ಞಾನಿಗಳು ಆಯಾ ಶ್ರುತಿಗಳನ್ನು ತಪ್ಪಾಗಿ ತಿಳಿದು ಬಹಳ ವಾದಿಸುತ್ತಾರೆ. ಆದರೆ ಬ್ರಹ್ಮ ಈ ಎಲ್ಲ ಕಾರ್ಯಕಾರಣರೂಪವಾದ ಜಡಕ್ಕಿಂತ ಅತ್ಯಂತ ವಿಲಕ್ಷಣ. ಸರ್ವನಿಯಾಮಕನಾಗಿರುವ ಸರ್ವಶಕ್ತಿ ಉಳ್ಳ ಬ್ರಹ್ಮ ಅಜ್ಞಾನಿಗಳಿಗೆ ಅವರ ಸ್ವರೂಪ

ಯೋಗ್ಯತಾನುಸಾರ ಸರ್ವವಸ್ತುಸ್ವರೂಪದಿಂದ ಕಂಡುಬರುತ್ತಾನೆ. ಅದರಿಂದಲೆ ನಾನಾ ಪ್ರವಾದಗಳು ಪ್ರಚಲಿತವಾಗಿವೆ.

[1]ಹಿಂದಿನ ಶ್ಲೋಕದಲ್ಲಿ ಬ್ರಹ್ಮ ಪ್ರಮಾಣಗಳಿಗೆ ಗೋಚರನಾಗುವುದಿಲ್ಲ ಎಂದಿದೆ. ಇದರ ಮೇಲೆ, 'ಬ್ರಹ್ಮ ಪ್ರಮಾಣಗಳಿಂದ ಸಿದ್ಧನಾಗದಿದ್ದರೆ ಅವನು ಇಲ್ಲ ಎಂದೇ ಆಗುತ್ತದೆ' ಎಂಬ ಸಮಸ್ಯೆ ಬರುತ್ತದೆ. ಅದಕ್ಕೆ ಈ ಶ್ಲೋಕದಲ್ಲಿ ಸಮಾಧಾನ ಹೀಗಿದೆ—'ಬಹುಶಕ್ತಿ ಉಳ್ಳ ಮಾಯೆಯ ಬಲದಿಂದ ಒಬ್ಬನೇ ಬ್ರಹ್ಮ ನಾನಾ ವಿಚಿತ್ರ ಪದಾರ್ಥಗಳಿಗೆ ಆರೋಪಾಧಿಷ್ಠಾನವಾಗಿ ಸ್ವತಃ ಸಿದ್ಧನಾಗಿರುವುದರಿಂದ ಅವನಿಲ್ಲ ಎಂದಾಗುವುದಿಲ್ಲ' ಎಂದು.

ಆದರೆ 'ಯಾವ ಪ್ರಮಾಣಕ್ಕೂ ಗೋಚರವಾಗದಂಥ ಮೊಲದ ಕೊಂಬು ಮುಂತಾದ ವಸ್ತು ಇಲ್ಲ' ಎನ್ನುವುದು ಸಿದ್ಧಾಂತ. ಅದರಿಂದ ಬ್ರಹ್ಮವು ಪ್ರಮಾಣ ಗೋಚರವಾಗದಿದ್ದರೆ ಇಲ್ಲ ಎಂದಾಗುವುದು ಅನಿವಾರ್ಯ. ಬ್ರಹ್ಮವು ಸ್ವಪ್ರಕಾಶವಾಗಿ ಸಿದ್ಧವಾಗುವುದು ಎಂದು ಅದ್ವೈತಮತದಲ್ಲಿ ಹೇಳಿದರೂ ಆ ಮಾತಿಗೆ ಅರ್ಥವಿಲ್ಲ. ಒಂದು ಕ್ರಿಯೆಯಲ್ಲಿ ಕರ್ತೃ ಮತ್ತು ಕರ್ಮ ಒಂದೇ ಆಗಿರಲು ಶಕ್ಯವಿಲ್ಲ, ಯಾರೂ ತನ್ನ ಹೆಗಲ ಮೇಲೆ ತಾನು ಏರಲಾರ. ಅದರಿಂದ ಪ್ರಕಾಶಕ್ರಿಯೆಯಲ್ಲಿ ತಾನು ಕರ್ತನೆಂದಮೇಲೆ ತಾನೇ ಕರ್ಮವಾಗದಿರುವುದರಿಂದ 'ಸ್ವಪ್ರಕಾಶತ್ವ' ಎಂದರೆ ಅವೇದ್ಯತ್ವವೆಂದು ಅದ್ವೈತ ಸಿದ್ಧಾಂತವಿದೆ. ಅದರಿಂದ ಪ್ರಮಾಣಕ್ಕೆ ಗೋಚರ ವಾಗದ ಬ್ರಹ್ಮ ಸ್ವಪ್ರಕಾಶವೇದ್ಯವಾಗುತ್ತದೆ ಎನ್ನುವುದು ಅದ್ವೈತಮತದಲ್ಲಿಲ್ಲ, ಈ ಶ್ಲೋಕದಲ್ಲಿಯೂ ಅದರ ಉಲ್ಲೇಖವಿಲ್ಲ. ಅಜ್ಞಾನಿಗಳಿಗೆ ಭ್ರಾಂತಿಯಲ್ಲಿ ಬ್ರಹ್ಮ ಸರ್ವಸ್ವರೂಪನಾಗಿ ಕಾಣುತ್ತಾನೆ ಎಂದು ಮಾತ್ರ ಹೇಳಿದೆ.

ಈ ಪ್ರಪಂಚವನ್ನು ಮಾಡಿದವನು ಆದಿಯಲ್ಲಿ ಒಬ್ಬ ಪರಮಾತ್ಮನಿರಬೇಕೆಂದು ಅನುಮಾನದಿಂದ ಪರಮಾತ್ಮ ಸಿದ್ಧನಾಗುತ್ತಾನೆ. ಅವನು ಸರ್ವವಿಲಕ್ಷಣನಾದರೂ ಸರ್ವಸ್ವರೂಪನಾಗಿ ಅಜ್ಞಾನಿಗಳಿಗೆ ಕಾಣುತ್ತಾನೆ ಎಂದು ಶ್ಲೋಕವು ಹೇಳುತ್ತಿದೆ. ಹೀಗಿದ್ದರೂ, ಪರಮಾತ್ಮ ಸ್ವತಃ ಭಾಸಮಾನನಾಗಿದ್ದಾನೆ ಎಂದು ಶ್ಲೋಕದಲ್ಲಿ ಹೇಳದಿದ್ದರೂ ಹೇಳಿದೆ ಎಂದಿಟ್ಟುಕೊಂಡು ಪ್ರಮಾಣಾಗೋಚರತ್ವವನ್ನು ಸರಿ ಎಂದು ಸಮರ್ಥಿಸಿಕೊಳ್ಳುವುದು ಯುಕ್ತವಲ್ಲ, ಶ್ರೀಮದಾಚಾರ್ಯರು ಹೇಳುತ್ತಾರೆ—

---

1. ನನು ತರ್ಹಿ ಪ್ರಮಾಣಾವಿಷಯತ್ವಾನ್ನಾಸ್ತಿ ಬ್ರಹ್ಮೇತಿ ಪ್ರಸಜ್ಜೇತ ಅತ ಆಹ ಸತ್ವಮಿತಿ। ನ ಹಿ ಸರ್ವಸ್ವರೂಪೇಣ ಸ್ವತೋ ಭಾಸಮಾನಸ್ಯ ಬ್ರಹ್ಮಣಃ ಸ್ವಸಿದ್ಧೌ ಪ್ರಮಾಣಾಪೇಕ್ಷೇತಿ ಭಾವಃ।
-ಶ್ರೀಧರಃ

ತ್ರಿಗುಣಾತ್ಮಕಂ ಪ್ರಧಾನಂ ಚ ರಜಃ ಸತ್ವಂ ತಮಸ್ತಥಾ ।
ಪ್ರಾಣೋ ಮಹಾನಹಂಕಾರೋ ಜೀವಾಸ್ತದಭಿಮಾನಿನಃ ।
ಜ್ಞಾನಾತ್ಮಕಾನೀಂದ್ರಿಯಾಣಿ ತಥಾ ಕರ್ಮಾತ್ಮಕಾನಿ ಚ ।
ಶಬ್ದಾದ್ಯರ್ಥಾಃ ಸುಖಂ ದುಃಖಮಿತಿ ಪ್ರೋಕ್ತಂ ದ್ವಿಧಾ ಫಲಂ ।
ಏತತ್ ಸರ್ವಂ ಹರೇ ರೂಪಮಿತ್ಯಾಹುರ್ಜ್ಞಾನದುರ್ಬಲಾಃ ।
ಸ ಏವ ಬಹುಶಕ್ತಿತ್ವಾದ್ ಭಾತಿ ತೇಷಾಂ ತಥಾತಥಾ ।
ಏವಂ ಕಾರಣಕಾರ್ಯಾಖ್ಯಂ ಸಮಸ್ತಂ ಹರಿಮೇವ ತು ।
ಕೇಚಿತ್ ಪಶ್ಯಂತಿ ಚ ವ್ಯಸ್ತಂ ಕೇಚಿದಾಹುರಪಂಡಿತಾಃ ।
ಏವಂ ಕಾರಣಕಾರ್ಯೇಭ್ಯಃ ಪರಮಾನಂದರೂಪಿಣಂ ।
ಅಜ್ಞಾನಾದ್ ಬಹುಧಾ ಪ್ರಾಹುರೇಕಂ ಸಂತಂ ಸುದುರ್ಜನಾಃ ॥

ಸತ್ವ ರಜ ತಮ ಎಂದು ತ್ರಿಗುಣಾತ್ಮಕವಾದ ಪ್ರಧಾನ, ಪ್ರಾಣ, ಮಹತ್ತತ್ವ ಅಹಂಕಾರ ಅವುಗಳಿಗೆ ಅಭಿಮಾನಿಗಳಾದ ಜೀವರು ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಶಬ್ದಾದಿ ವಿಷಯಗಳು ಸುಖ ದುಃಖಗಳೆಂಬ ಎರಡು ಫಲಗಳು ಈ ಎಲ್ಲವನ್ನೂ ಮಿಥ್ಯಾಜ್ಞಾನಿಗಳು ಹರಿಯ ರೂಪವೆನ್ನುವರು. ಹರಿಯೆ, ಬಹುಶಕ್ತಿಶಾಲಿಯಾದ್ದರಿಂದ ಅಜ್ಞಾನಿಗಳಿಗೆ ಹಾಗೆ ಹಾಗೇ ತೋರುತ್ತಾನೆ. ಹೀಗೇ ಕಾರಣಕಾರ್ಯರೂಪವಾದ ಸಮಸ್ತ ಪ್ರಪಂಚವನ್ನು ಹರಿಯೆಂದು ಕೆಲವರು, ಸೂರ್ಯನೇ ಪರಮಾತ್ಮ ಸ್ಕಂದನೇ ಪರಮಾತ್ಮ ಶಿವನೇ ಪರಮಾತ್ಮ ಎಂದು ಮುಂತಾಗಿ ಒಬ್ಬೊಬ್ಬರನ್ನೇ ಪರಮಾತ್ಮರೆಂದು ಕೆಲವರು ಹೇಳುತ್ತಾರೆ. ಹೀಗೇ ಕಾರಣಕಾರ್ಯಗಳಿಂದ ವಿಲಕ್ಷಣನಾದ ಆನಂದರೂಪಿಯಾದ ಒಬ್ಬ ಪರಮಾತ್ಮನನ್ನು ದುರ್ಜನರು ಅಜ್ಞಾನದಿಂದ ಬಹುರೂಪಿಯಾಗಿರುವವನೆಂದು ಹೇಳುತ್ತಾರೆ.

ರೂಪ್ಯತ್ವಾತ್ ತದ್ವಶತ್ವಾಚ್ಚ ತದ್ರೂಪಂ ಚೈತದೀರ್ಯತೇ ।
ನ ತು ತಸ್ಯ ಸ್ವರೂಪತ್ವಾನ್ನಿರ್ದೋಷಾನಂದ ರೂಪಿಣಃ ।
ಕಥಂ ಜಡಾಜಡೈಕ್ಯಂ ಸ್ಯಾತ್ ಕುತಃ ಪೂರ್ಣಾಲ್ಪಮೋದಯೋಃ ।
ಪೂರ್ಣಾಲ್ಪ ಜ್ಞಾನಯೋಶ್ಚೈವ ಪೂರ್ಣಶಕ್ತ್ಯಲ್ಪಶಕ್ತಯೋಃ ।
ನಿರ್ದುಃಖ ದುಃಖಾನ್ವಿತಯೋಃ ಸ್ವತಂತ್ರ ಪರತಂತ್ರಯೋಃ ।
ಅತಃ ಸರ್ವಗುಣೈರ್ಯುಕ್ತಂ ಸರ್ವದೋಷವಿವರ್ಜಿತಂ ।
ಅನ್ಯಾಭೇದೇನ ವಿಜ್ಞಾಯ ತಮ ಏವ ಪ್ರಪದ್ಯತೇ ।

ನಿಷ್ಕೃಷ್ಟಂ ಸರ್ವತೋ ವಿಷ್ಣುಂ ಸರ್ವತಶ್ಚ ವಿಲಕ್ಷಣಂ ।
ಜ್ಞಾತ್ವಾ ಪೂರ್ಣಗುಣಂ ಯಾಂತಿ ಮುಕ್ತಿಂ ನಾಸ್ತ್ಯತ್ರ ಸಂಶಯಃ ॥
ಇತಿ ತಂತ್ರಭಾಗವತೇ ॥

'ದ್ವೇ ವಾವ ಬ್ರಹ್ಮಣೋ ರೂಪೇ' ಇತ್ಯಾದಿ ಶ್ರುತಿಯು ಜಗತ್ತನ್ನು ಹರಿಯ ರೂಪವೆನ್ನುವುದು ಜಗತ್ತು ಹರಿಪ್ರೇರಣೆಗೊಳಗಾಗಿರುವುದರಿಂದ ಹರಿಯ ಅಧೀನವಾಗಿರುವುದರಿಂದ ಹೊರತು ಜಗತ್ತು ದೋಷರಹಿತನಾದ ಆನಂದ ರೂಪಿಯಾದ ಹರಿಯ ಸ್ವರೂಪವಾಗಿದೆ ಎಂದಲ್ಲ. ಚೇತನ ಅಚೇತನಗಳಿಗೆ ಐಕ್ಯ ಹೇಗೆ ಇದ್ದೀತು? ಪೂರ್ಣಾನಂದ—ಅಲ್ಪಾನಂದ, ಪೂರ್ಣಜ್ಞಾನ—ಅಲ್ಪಜ್ಞಾನ, ಪೂರ್ಣಶಕ್ತಿ—ಅಲ್ಪಶಕ್ತಿ ದುಃಖಾಭಾವ—ದುಃಖಗಳುಳ್ಳ ಸ್ವತಂತ್ರ—ಪರತಂತ್ರರಾದ ಪರಮಾತ್ಮ ಜೀವಾತ್ಮರಿಗೆ ಐಕ್ಯ ಹೇಗೆ? ಅದರಿಂದ ಸರ್ವಗುಣಪೂರ್ಣನಾದ ಸರ್ವದೋಷರಹಿತನಾದ ಹರಿಯನ್ನು ಇತರ ಜೀವಜಡಗಳಿಂದ ಅಭಿನ್ನನೆಂದು ತಿಳಿಯುವವನು ತಮಸ್ಸನ್ನೇ ಹೊಂದುತ್ತಾನೆ. ಗುಣಪೂರ್ಣನಾದ ವಿಷ್ಣುವನ್ನು ಎಲ್ಲಕ್ಕಿಂತ ಬೇರೆ ಎಂದು ಎಲ್ಲಕ್ಕಿಂತ ವಿಲಕ್ಷಣನೆಂದು ತಿಳಿದರೆ ಮುಕ್ತಿಯನ್ನು ಹೊಂದುತ್ತಾನೆ ಇದರಲ್ಲಿ ಸಂಶಯವಿಲ್ಲ ಎಂದು ತಂತ್ರಭಾಗವತದಲ್ಲಿ ಉಕ್ತವಾಗಿದೆ.

ಅಹಂ ಹಿ ಜೀವಸಂಜ್ಞೋ ವೈ ಮಯಿ ಜೀವಃ ಸನಾತನಃ ।
ಮೈವಂ ತ್ವಯಾ ನು ಮಂತವ್ಯಂ ದೃಷ್ಟೋ ಜೀವೋ ಮಯೇತಿ ಹ ।
ಅಹಂ ಶ್ರೇಯೋ ವಿಧಾಸ್ಯಾಮಿ ಯಥಾಧೀಕಾರಮೀಶ್ವರಃ ॥
ಇತಿ ಮೋಕ್ಷಧರ್ಮೇಷು

ಮೋಕ್ಷಧರ್ಮಪರ್ವದಲ್ಲಿ ಕೃಷ್ಣನ ಮಾತುಗಳು—'ಜೀವಾಭಿಮಾನಿಯಾದ ನಿತ್ಯನಾದ ಮುಖ್ಯಪ್ರಾಣ ನನ್ನಲ್ಲಿ ಆಶ್ರಯಿಸಿರುವುದರಿಂದ ಪ್ರಾಣಧಾರಣ ಮಾಡುವ ನಾನು ಜೀವನೆನಿಸಿದ್ದೇನೆ. 'ಜೀವಾದ್ ಭವಂತಿ ಭೂತಾನಿ' ಎಂದು ಮುಂತಾಗಿ ಶ್ರುತಿಗಳಲ್ಲಿ ಪ್ರಸಿದ್ಧನಾಗಿದ್ದೇನೆ. ನನ್ನನ್ನು ಕಂಡು ಒಬ್ಬ ಸಂಸಾರಿ ಜೀವನನ್ನು ಕಂಡೆನೆಂದುಕೊಳ್ಳಬೇಡ. ನಾನು ಪರಮಾತ್ಮ, ಎಲ್ಲರಿಗೂ ಅವರವರ ಯೋಗ್ಯತೆಗನುಸಾರವಾಗಿ ಶ್ರೇಯಸ್ಸನ್ನು ಉಂಟುಮಾಡುತ್ತೇನೆ' ಎಂದು.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಪಿಪ್ಪಲಾಯನಮುನಿ ನಿತ್ಯನಾದ ಪರಮಾತ್ಮ ಅನಿತ್ಯವಾದ ಪ್ರಪಂಚಕ್ಕಿಂತ ವಿಲಕ್ಷಣ ಎನ್ನುತ್ತಾರೆ.

ನಾಸೌ ಜಜಾನ ನ ಮರಿಷ್ಯತಿ ನೈಧತೇಽಸೌ
ನ ಕ್ಷೀಯತೇ ನ ಚ ಸ ವಿಧ್ಯತಿ ಚಾರಿಣಾ ಹಿ ।
ಸರ್ವತ್ರ ಶಶ್ವದನಪಾಯ್ಯುಪಲಬ್ಧಿಮಾತ್ರಂ
ಪ್ರಾಣೋ ಯಥೇಂದ್ರಿಯಬಲೇನ ವಿಕಲ್ಪಿತಂ ಸತ್ ॥ ೩೯ ॥

ಪರಮಾತ್ಮ ಕಾರ್ಯಕಾರಣ ವಸ್ತುರೂಪನಲ್ಲ. ಏಕೆಂದರೆ ಅವನು ಎಂದೂ ಹುಟ್ಟುವುದಿಲ್ಲ ಸಾಯುವುದಿಲ್ಲ ಬೆಳೆಯುವುದಿಲ್ಲ ಕ್ಷಯಿಸುವುದಿಲ್ಲ. ಅವತಾರಗಳಲ್ಲಿ ಯುದ್ಧ ಮಾಡುವಾಗ ಶತ್ರುವಿನಿಂದ ಶರೀರದಲ್ಲಿ ಗಾಯವಡೆಯುವುದಿಲ್ಲ. ಎಲ್ಲ ವಸ್ತುಗಳಲ್ಲಿ ಅಂತರ್ಗತನಾಗಿದ್ದರೂ ಅವಿಕಾರಿಯಾಗಿರುತ್ತಾನೆ. ನಾಶಹೊಂದದೆ ಇರುತ್ತಾನೆ. ಏಕೆಂದರೆ ಪ್ರಕೃತಿಬಂಧನವಿಲ್ಲದ. ಶುದ್ಧಜ್ಞಾನಾನಂದ ಸ್ವರೂಪನಾಗಿರು ತ್ತಾನೆ. ಮುಖ್ಯಪ್ರಾಣ ಆಯಾ ಇಂದ್ರಿಯಗಳಲ್ಲಿ ಆಯಾ ದರ್ಶನ ಸ್ಪರ್ಶನಾದಿ ಶಕ್ತಿ ಪ್ರದನಾಗಿ ನಾನಾ ರೂಪಗಳಿಂದ ಕಾಣಿಸಿಕೊಳ್ಳುವಂತೆ ಪರಮಾತ್ಮ ಅಗ್ನಿ ಸೂರ್ಯಾದಿ ಸಮಸ್ತ ವಸ್ತುಗಳಲ್ಲಿ ಶಕ್ತಿಪ್ರದನಾಗಿ ನಾನಾ ರೂಪನಾಗಿರುತ್ತಾನೆ.

~~ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಶ್ಲೋಕದ ಪೂರ್ವಾರ್ಧ ಹೀಗಿದೆ—~~

ನಾತ್ಮಾ ಜಜಾನ ನ ಮರಿಷ್ಯತಿ ನೈಧತೇಽಸೌ
ನ ಕ್ಷೀಯತೇ ಸವನವಿದ್ ವ್ಯಭಿಚಾರಿಣಾಂ ಹಿ ॥

[1]'ಹಿಂದಿನ ಶ್ಲೋಕದಲ್ಲಿ ಹೇಳಿದಂತೆ ಬ್ರಹ್ಮನು ಸರ್ವಾತ್ಮಕನೆಂದಾದರೆ ಸರ್ವವು ಅನಿತ್ಯವಾಗಿದ್ದು ಜನನ ಮರಣಾದಿ ವಿಕಾರ ಹೊಂದುವುದರಿಂದ ಬ್ರಹ್ಮನಿಗೂ ಆ ವಿಕಾರಗಳಾಗಬೇಕಾಗುವುದು ಎಂಬ ಶಂಕೆಗೆ ಈ ಶ್ಲೋಕ ಸಮಾಧಾನ ನೀಡುತ್ತಿದೆ. ಒಬ್ಬನೇ ಆತ್ಮನಿಗೆ ಬಾಲ್ಯ ಯೌವನ ಮುಂತಾದ ಅವಸ್ಥೆಗಳಲ್ಲಿ ಆಗಮಾಪಾಯಿಯಾದ ನಾನಾ ಶರೀರಗಳು ಬಂದು ಹೋಗುತ್ತಿದ್ದರೂ ಅವುಗಳ ಕಾಲವನ್ನು ನೋಡುವ

1. ನನು ಸರ್ವಾತ್ಮಕಂ ಚೇದ್ ಬ್ರಹ್ಮ ತರ್ಹಿ ಸರ್ವಸ್ಯ ಕಾರ್ಯಸ್ಯ ಜನ್ಮಾದಿ ವಿಕಾರವತ್ತ್ವಾತ್ ಬ್ರಹ್ಮಣೋಽಪಿ ತತ್ಪ್ರಸಂಗಃ ಸ್ಯಾತ್ ಅತ ಆಹ ನಾತ್ಮೇತಿ। ಆತ್ಮಾ ಬ್ರಹ್ಮ ನ ಜಜಾನ ನ ಜಾತಃ ಕುತಃ ಹಿ ಯಸ್ಮಾತ್ ವ್ಯಭಿಚಾರಿಣಾಮಾಗಮಾಪಾಯಿನಾಂ ಬಾಲಯುವಾದಿ ದೇಹಾನಾಂ ಸವನವಿತ್ ತತ್ತತ್‌ಕಾಲ ದ್ರಷ್ಟಾ ನ ಹ್ಯವಸ್ಥಾವತಾಂ ದ್ರಷ್ಟಾ ತದವಸ್ಥೋ ಭವತೀತ್ಯರ್ಥಃ। ನನು ನಿರವಸ್ಥಃ ಕೋಽಸಾವಾತ್ಮಾ ಅತ ಆಹ ಉಪಲಬ್ಧಿಮಾತ್ರಮಿತಿ। ನನು ನೀಲಜ್ಞಾನಂ ಜಾತಂ ಪೀತಜ್ಞಾನಂ ನಷ್ಟಮಿತಿ ಪ್ರತೀತೇ ರ್ನ ಜ್ಞಾನಸ್ಯಾನಪಾಯಿತ್ವಮತ ಆಹ ಇಂದ್ರಿಯ ಬಲೇನೇತಿ। ಸದೇವ ಜ್ಞಾನಮಿಂದ್ರಿಯ ಬಲೇನ ವಿವಿಧಂ ಕಲ್ಪಿತಂ। ನೀಲಾದ್ಯಾಕಾರ ವೃತ್ತಯ ಏವ ಜಾಯಂತೇ ನಶ್ಯಂತಿ ಚ। ನ ಜ್ಞಾನಮಿತಿ ಭಾವಃ। ವ್ಯಭಿಚಾರಿಷ್ವವ್ಯಭಿಚಾರೇ ದೃಷ್ಟಾಂತಃ ಪ್ರಾಣೋ ಯಥೇತಿ। -ಶ್ರೀಧರಃ

ಸಾಕ್ಷಿಯಾದ ಆತ್ಮನು ಪ್ರಾಣನಂತೆ ಒಬ್ಬನೆ ಇರುತ್ತಾನೆ. ಅವನಿಗೆ ಬಾಲ್ಯಾದಿ ಅವಸ್ಥೆಗಳಿಲ್ಲ. ಅವನು ನಿತ್ಯಜ್ಞಾನಸ್ವರೂಪ. ಇಂದ್ರಿಯಗಳಿಂದ ಆ ಒಂದೇ ಜ್ಞಾನವು ನಾನಾವಿಧವಾಗಿ ಭ್ರಾಂತಿಯಲ್ಲಿ ಕಾಣುತ್ತದೆ ಹೊರತು ನಾನಾವಿಧ ಜ್ಞಾನಗಳ ಉತ್ಪತ್ತಿಯಾಗುವುದಿಲ್ಲ ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ.

ಆದರೆ ಹಿಂದಿನ ಶ್ಲೋಕದಲ್ಲಿ ಬ್ರಹ್ಮನಲ್ಲಿ ಸರ್ವವೂ ಆರೋಪಿತವಾಗಿ ಭ್ರಾಂತಿಯಲ್ಲಿ ಕಾಣುತ್ತದೆ ಎಂದಿದೆ ಹೊರತು ಬ್ರಹ್ಮ ಸರ್ವಾತ್ಮಕ ಎಂದು ಹೇಳಿಯೇ ಇಲ್ಲ. ಶ್ರೀಧರ ವ್ಯಾಖ್ಯಾನದಲ್ಲಿಯೂ 'ಸರ್ವಸ್ವರೂಪೇಣ ಸ್ವತೋ ಭಾಸಮಾನ ಬ್ರಹ್ಮ' ಎಂದಿದೆ. ಹೊರತು 'ಬ್ರಹ್ಮ ಸರ್ವಸ್ವರೂಪವಾಗಿದೆ' ಎಂದಿಲ್ಲ. ಅದರಿಂದ ಸರ್ವ ಪದಾರ್ಥಗಳಿಗೆ ಉಂಟಾಗುವ ಉತ್ಪತ್ತಿನಾಶಾದಿ ವಿಕಾರ ಬ್ರಹ್ಮನಲ್ಲಿ ಬಂದೀತೆಂದು ಶಂಕೆಗೆ ಅವಕಾಶವೇ ಇಲ್ಲ.

'ಬಾಲ್ಯಾದಿ ಅವಸ್ಥೆಗಳು ಆತ್ಮನಿಗಲ್ಲ, ಶರೀರಕ್ಕೇ' ಎಂದು ಹೇಳಿದ್ದೂ ಕೂಡುವುದಿಲ್ಲ. ಅಸ್ತಿ ಜಾಯತೇ ವರ್ಧತೇ ಪರಿಣಮತೇ ಅಪಕ್ಷೀಯತೇ ನಶ್ಯತಿ ಎಂಬ ಆರು ಅವಸ್ಥೆಗಳು ಒಬ್ಬನೇ ಆತ್ಮನಿಗೆ ಬರಬೇಕು ಹೊರತು ಒಂದು ಶರೀರಕ್ಕೆ ಅಲ್ಲ. ಒಂದು ಅವಸ್ಥೆಯಲ್ಲಿ ಒಂದು ಶರೀರವಿರುತ್ತದೆ. ಅದರ ಮುಂದಿನ ಅವಸ್ಥೆಯಲ್ಲಿ ಆ ಶರೀರವಿರುವುದಿಲ್ಲ, ಬೇರೆ ಶರೀರ ಬಂದಿರುತ್ತದೆ. ಒಂದೇ ಶರೀರಕ್ಕೆ ಆರೂ ಅವಸ್ಥೆಗಳೆನ್ನುವುದಾದರೆ ಶರೀರ ನಿತ್ಯವೆಂದಾಗುವುದು. ಅದೇರೀತಿ ಸರ್ವವೂ ನಿತ್ಯವಾದರೆ ಬ್ರಹ್ಮನಿಗೆ ಸರ್ವಾತ್ಮಕತ್ವವಿದ್ದ ಮಾತ್ರಕ್ಕೆ ಅನಿತ್ಯತ್ವ ಪ್ರಸಕ್ತಿಯೂ ಇಲ್ಲ.

ವಸ್ತುತಃ ಹಿಂದಿನ ಶ್ಲೋಕದಲ್ಲಿ ಶ್ರೀಹರಿ ಸರ್ವಭಿನ್ನ ಸರ್ವವಿಲಕ್ಷಣ ಎಂದಿದೆ. ಅದರ ಉಪಪಾದನೆಗಾಗಿ 'ಶ್ರೀಹರಿ ಸರ್ವಸ್ವರೂಪನೆಂದರೆ ಅವನಿಗೂ ಜನನ ಮರಣಾದಿ ವಿಕಾರಗಳು ಬರಬೇಕಾಗುವುದು ಅವಿಲ್ಲವಾದ್ದರಿಂದ ಅವನು ಸರ್ವವಿಲಕ್ಷಣ' ಎಂದು ಈ ಶ್ಲೋಕದಲ್ಲಿ ಹೇಳುತ್ತಾರೆ. ಮತ್ತು ಮುಖ್ಯಪ್ರಾಣ ಆಯಾ ಇಂದ್ರಿಯಗಳಲ್ಲಿ ಆಯಾ ಶಕ್ತಿಪ್ರದನಾಗಿ ಇರುವಂತೆ ಶ್ರೀಹರಿ ಎಲ್ಲ ವಸ್ತುಗಳಲ್ಲಿಯೂ ಆಯಾ ಶಕ್ತಿಪ್ರದನಾಗಿಯೇ ಇರುವುದರಿಂದ, ಮನೆ ಉರಿಯುತ್ತಿದ್ದರೂ ಅದರೊಳಗೆ ಅಗ್ನಿಸ್ತಂಭ ಮಾಡಿಕೊಂಡು ಕುಳಿತಿರುವ ಯೋಗಿ ಸುಟ್ಟುಹೋಗದಿರುವಂತೆ, ಸರ್ವಶಕ್ತನಾದ ಹರಿ ಸರ್ವಕ್ಕೆ ನಾಶ ಉಂಟುಮಾಡಿದರೂ ಅದರೊಳಗಿರುವ ತಾನು ನಾಶವಾಗದಿರುತ್ತಾನೆ ಎಂದೂ ಈ ಶ್ಲೋಕ ಹೇಳುತ್ತಿದೆ.

ಯಥೇಂದ್ರಿಯಗತಃ ಪ್ರಾಣಸ್ತೇಷಾಂ ಶಕ್ತ್ಯಾ ವಿಕಲ್ಪ್ಯತೇ ।
ದೃಷ್ಟಿದಃ ಶ್ರುತಿದಶ್ಚೇತಿ ಮತಿದೋ ಜ್ಞಾನದಸ್ತಥಾ ।

ಇತ್ಯಾದಿಭೇದತೋ ವಾಚ್ಯ ಏಕ ಏವ ಮಹಾಬಲಃ ।
ದೃಷ್ಟ್ಯಾದಿಶಕ್ತಿಸ್ತಸ್ಯೈವ ತತೋ ನಾನ್ಯಸ್ಯ ಕಸ್ಯಚಿತ್ ।
ಏವಂ ಸದ್ರೂಪಕಂ ಬ್ರಹ್ಮ ತತ್ತಚ್ಛಕ್ತ್ಯಾ ವಿಕಲ್ಪ್ಯತೇ ।
ಏಕಮೇವ ಮಹಾಶಕ್ತಿ ಪ್ರಾಣಸ್ಯಾಪಿ ಬಲಪ್ರದಂ ॥

ಇತಿ ಹರಿವಂಶೇಷು ॥

ಇಂದ್ರಿಯಗಳಲ್ಲಿ ಪ್ರೇರಕನಾಗಿ ನೆಲೆಸಿರುವ ಮುಖ್ಯಪ್ರಾಣ ಆಯಾ ಇಂದ್ರಿಯಗಳ ಶಕ್ತ್ಯಾನುಸಾರವಾಗಿ ಚಕ್ಷುರಿಂದ್ರಿಯದಲ್ಲಿ ದರ್ಶನಶಕ್ತಿಪ್ರದನೆಂದು, ಶ್ರೋತ್ರದಲ್ಲಿ ಶ್ರವಣಶಕ್ತಿಪ್ರದನೆಂದು ಮನಸಿನಲ್ಲಿ ಮನನಶಕ್ತಿ ಪ್ರತಿಭಾಜ್ಞಾನಶಕ್ತಿಪ್ರದನೆಂದು ಬೇರೆಬೇರೆಯಾಗಿ ಹೇಳಲ್ಪಡುವಂತೆ ನಿತ್ಯಸತ್ಯನಾದ ಪರಬ್ರಹ್ಮ ನಾರಾಯಣನೂ ಸೂರ್ಯಚಂದ್ರಅಗ್ನಿ ಮುಂತಾದವರಲ್ಲಿ ಆಯಾ ಶಕ್ತಿಪ್ರದನಾಗಿ ಬೇರೆಬೇರೆಯಾಗಿ ಹೇಳಲ್ಪಡುತ್ತಾನೆ. ಎಲ್ಲ ಇಂದ್ರಿಯಗಳಲ್ಲಿ ಮಹಾಬಲಶಾಲಿ ಪ್ರಾಣನೊಬ್ಬನೆ ಆಯಾ ರೂಪಗಳಿಂದಿರುತ್ತಾನೆ. ದರ್ಶನಾದಿಶಕ್ತಿ ಅವನದೇ. ಸೂರ್ಯಾದಿ ಬೇರೆ ಇಂದ್ರಿಯಾಭಿಮಾನಿಗಳಿಗೆ ಯಾರಿಗೂ ಅಂಥ ಶಕ್ತಿ ಸ್ವತಃ ಇಲ್ಲ. ಆದರೂ ಅವನು ಶ್ರೀಹರಿಗೆ ಸಮನಲ್ಲ. ಶ್ರೀಹರಿಯೊಬ್ಬನೇ ಮುಖ್ಯಪ್ರಾಣನಿಗೂ ಬಲಪ್ರದ ನಾಗಿರುವ ಮಹಾಶಕ್ತಿಶಾಲಿ ಎಂದು ಹರಿವಂಶದಲ್ಲಿ ಹೇಳಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಪಿಪ್ಪಲಾಯನ ಮುನಿ ಶ್ರೀಹರಿ ಜೀವರಿಗಿಂತಲೂ ಮುಖ್ಯಪ್ರಾಣನಿಗಿಂತಲೂ ಭಿನ್ನನಾಗಿ ಸರ್ವೋತ್ತಮನಾಗಿರುವನು ಎನ್ನುತ್ತಾರೆ—

ಅಂಡೇಷು ಪೇಶಿಷು ತರುಷ್ವವನಿಸ್ಥಿತೇಷು
ಪ್ರಾಣೇನ ಜೀವ ಉಪಧಾವತಿ ತತ್ರ ತತ್ರ ।
ಛನ್ನೇ ಮತೀಂದ್ರಿಯಗಣೇಽಹಮಿ ಚ ಪ್ರಸುಪ್ತೇ
ಕೂಟಸ್ಥ ಆಸ ಯಮೃತೇ ತದನುಸ್ಮೃತಿರ್ನ ॥ ೪೦ ॥

ಅಂಡಜ ಜರಾಯುಜ ಉದ್ಭಿಜ ಸ್ವೇದಜ ಶರೀರಗಳನ್ನು ಜೀವನು ಪ್ರವೇಶಿಸು ವಾಗ ಮೊದಲಿಗೆ ಹಿಂದಿನ ಶರೀರದಿಂದ ಹೊರಗೆ ಬರುತ್ತ ಮುಖ್ಯಪ್ರಾಣನಲ್ಲಿ ಪ್ರವೇಶಿಸುತ್ತಾನೆ. ಮುಖ್ಯಪ್ರಾಣ ನಿರ್ವಿಕಾರನಾದ ಹರಿಯಲ್ಲಿ ಪ್ರವೇಶಿಸುತ್ತಾನೆ. ಹೀಗೆ ಹರಿಯೊಂದಿಗೆ ಪ್ರಾಣನೊಂದಿಗೇ ಜೀವನು ಅಂಡಜಾದಿ ಆಯಾ ಶರೀರವನ್ನು ಪ್ರವೇಶಿಸುತ್ತಾನೆ. ಜ್ಞಾನೇಂದ್ರಿಯ ಮನಸ್ಸುಗಳು ನಿಷ್ಕ್ರಿಯವಾಗಿ ದೇಹಾಭಿಮಾನವೂ

ಇಲ್ಲದಿರುವ ಸುಷುಪ್ತ್ಯವಸ್ಥೆಗೆ ಹೋಗುವಾಗಲು ಜೀವನು ಪ್ರಾಣನನ್ನು ಪ್ರವೇಶಿಸಿ ಅವನೊಂದಿಗೆ ಹೃದಯದಲ್ಲಿರುವ ನಿರ್ವಿಕಾರನಾದ ಹರಿಯಲ್ಲಿ ಇರುತ್ತಾನೆ. ಹರಿಯನ್ನು ಬಿಟ್ಟು ಜೀವನಿಗೆ ಸುಷುಪ್ತ್ಯವಸ್ಥೆ ಇಲ್ಲ. ಹರಿಯ ಪ್ರೇರಣೆ ಇಲ್ಲದೆ ಎಚ್ಚೆತ್ತ ಜೀವನಿಗೆ ಇಷ್ಟುಕಾಲ ಸುಖವಾಗಿ ಮಲಗಿದ್ದೆನೆನ್ನುವ ಸ್ಮರಣೆಯೂ ಇಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಬೇರೆ ಇದೆ—

ಅಂಡೇಷು ಪೇಶಿಷು ತರುಷ್ವವಿನಿಶ್ಚಿತೇಷು
ಪ್ರಾಣೋ ಹಿ ಜೀವಮುಪಧಾವತಿ ತತ್ರ ತತ್ರ
ಸನ್ನೇ ಯದಿಂದ್ರಿಯಗಣೇಽಹಮಿ ಚ ಪ್ರಸುಪ್ತೇ
ಕೂಟಸ್ಥ ಆಶಯಮೃತೇ ತದನುಸ್ಮೃತಿರ್ನಃ ||

ಅಂಡಜ ಜರಾಯುಜ ಉದ್ಭಿಜ್ಜ ಸ್ವೇದಜ ಈ ನಾಲ್ಕು ಶರೀರಗಳಲ್ಲಿ ಪ್ರಾಣವು ಉಪಾಧಿಯಾಗಿ ಜೀವನ ಜೊತೆ ಜೊತೆಗೆ ಹೋಗುತ್ತದೆ ಜೀವನು ಮಲಗಿದ್ದಾಗ ಇಂದ್ರಿಯಗಳೂ ಅಹಂಕಾರವೂ ನಿಶ್ಚೇಷ್ಟವಾದಾಗ ಸಾಕ್ಷಿರೂಪನಾದ ಆತ್ಮನಿಗೆ ಅಸ್ಪಷ್ಟವಾಗಿ ಅಜ್ಞಾನ ಸಾಕ್ಷಿಸುಖಗಳ ಅನುಭವ ಮಾತ್ರವಿರುತ್ತದೆ. ಲಿಂಗಶರೀರ ಹೊರತಾಗಿ ಬೇರೆ ವಿಷಯ ದೇಹ ಇಂದ್ರಿಯ ಮುಂತಾಗಿ ಉಪಾಧಿಗಳಿರುವುದಿಲ್ಲ. ಅದರಿಂದ ಆತ್ಮ ಒಂದೇ ಆಗಿರುತ್ತದೆ. ಬೇರೆಯಾಗಿರುವುದಿಲ್ಲ. ಹಾಗೇ ನಮಗೆ ಅನುಸ್ಮೃತಿ ಬರುತ್ತದೆ ಎಂದು ಶ್ರೀಧರವ್ಯಾಖ್ಯಾನದಲ್ಲಿ ವಿವರಣೆ ಇದೆ.

ಆದರೆ ನಾನಾಶರೀರಗಳು ಬಂದು ಹೋಗುತ್ತಿದ್ದರೂ ಜೀವ ನಿತ್ಯನಾಗಿ ಒಬ್ಬನೆ ಇರುತ್ತಾನೆ, ಎಂದು ಹಿಂದಿನ ಶ್ಲೋಕದಲ್ಲಿ ಹೇಳುತ್ತ 'ಪ್ರಾಣೋ ಯಥಾ' ಎಂದು ದೃಷ್ಟಾಂತವಾಗಿ ಹೇಳಿದ್ದೇ ಸರಿಯಲ್ಲ. ಜೀವನೆಂದರೆ ಪ್ರಾಣ ಸಂಬಂಧದಿಂದಲೆ ಬೇರ್ಪಟ್ಟ ಬ್ರಹ್ಮನ ಒಂದು ಅಂಶ. ಅದು ನಿತ್ಯವೆಂದ ಬಳಿಕ ಅದಕ್ಕೆ ಉದಾಹರಣೆ ಯಾಗಿ ಪ್ರಾಣವನ್ನು ತೋರಿಸುವುದು ಅಸಂಗತ. ಅದನ್ನು ಈ ಶ್ಲೋಕದಲ್ಲಿ ವಿವರಿಸುತ್ತ ಪ್ರಾಣ ಪ್ರಾಣಯುಕ್ತನಾದ ಆತ್ಮನನ್ನು 'ಉಪಧಾವತಿ' ಹಿಂಬಾಲಿಸುತ್ತದೆ ಎನ್ನುವುದೂ ಅಸಂಗತ 'ಜೀವಂ' ಎಂದರೆ ಪ್ರಾಣಯುಕ್ತನಾದ ಆತ್ಮನನ್ನು ಎಂದರ್ಥ ತಾನೆ? ಜೀವ ನೆಂದರೆ ಅವಿದ್ಯೆಯ ಸಂಬಂಧದಿಂದ ಬೇರ್ಪಟ್ಟ ಬ್ರಹ್ಮನ ಅಂಶ ಎನ್ನುವ ಮತವೂ ಇದೆ. ಆ ಮತದಲ್ಲಿ ಸುಷುಪ್ತಿ ಮರಣಗಳಲ್ಲಿ ಪ್ರಾಣವನ್ನು ಒಪ್ಪಲೇ ಇಲ್ಲ. ಹೀಗಾಗಿ ಪ್ರಾಣವು ಜೀವನ ಜೊತೆಗೆ ಹೋಗುವುದು ಹಿಂಬಾಲಿಸುವುದು ಶಕ್ಯವೇ ಇಲ್ಲ.

ವಸ್ತುತಃ ನಮ್ಮ ಪಾಠದಲ್ಲಿ ಈ ಶ್ಲೋಕ ಸುಂದರವಾಗಿ ಹರಿಸರ್ವೋತ್ತಮತ್ವ ವಾಯುಜೀವೋತ್ತಮತ್ವಗಳನ್ನು ವರ್ಣಿಸುತ್ತದೆ.

ಪೇಶೋ ಜರಾಯುರುದ್ದಿಷ್ಟಃ ಸುವರ್ಣಂ ಪೇಶ ಉಚ್ಯತೇ ।
ಮೃದುಪಿಂಡಶ್ಚ ಪೇಶಂ ಸ್ಯಾತ್ ಕ್ವಚಿದ್‌ಭದ್ರಮಪೀಷ್ಯತೇ ॥
ಇತ್ಯಭಿಧಾನಂ ॥

ಅವನಿಸ್ಥಿತೇಷು ಸ್ವೇದಜೇಷು । ಭೂಸ್ವೇದೇನ ಹಿ ಪ್ರಾಯೋ
ಜಾಯಂತೇ । ತದಾ ಕೂಟಸ್ಥೇ ಪರಮಾತ್ಮನ್ಯಾಸ ಜೀವಃ ।
ಯಂ ಪರಮಾತ್ಮಾನಮೃತೇ ಸುಪ್ತ್ಯನುಸ್ಮೃತಿರೇವ ನ ।

'ಪೇಶಃ' ಎಂದರೆ ಜರಾಯು, ಗರ್ಭಚೀಲ, ಮಾಸು. ಬಂಗಾರವೂ ಕೂಡ 'ಪೇಶಃ' ಎನಿಸುತ್ತದೆ. ಮಿದುವಾದ ಮುದ್ದೆಯೂ ಪೇಶವೆನಿಸುತ್ತದೆ. ಮಂಗಳಕರವೂ ಪೇಶವೆನಿಸುತ್ತದೆ ಎಂದು ಅಭಿಧಾನದಲ್ಲಿದೆ.

'ಅವನಿಸ್ಥಿತೇಷು' ಎಂದರೆ ಸ್ವೇದಜವೆನಿಸುವ ಕೃಮಿಕೀಟ ಶರೀರಗಳಲ್ಲಿ ಎಂದರ್ಥ. ಏಕೆಂದರೆ ಕೃಮಿಕೀಟಗಳು ಸ್ವೇದದಿಂದ, ಅಂದರೆ ಮಣ್ಣಿನ ತೇವಾಂಶದಿಂದ, ಶಾಖವಿರುವಾಗ ಹುಟ್ಟುವುದು ಸಾಮಾನ್ಯವಾಗಿ ಕಂಡಿದೆ. 'ಕೂಟಸ್ಥ ಆಸ' ಎಂದರೆ ಕೂಟಸ್ಥನಾದ ನಿರ್ವಿಕಾರನಾದ ಪರಮಾತ್ಮನಲ್ಲಿ ಜೀವನಿರುತ್ತಾನೆ ಎಂದರ್ಥ. 'ಯಂ ಋತೇ ತದನುಸ್ಮೃತಿಃ ನ' ಎಂದರೆ ಹರಿಪ್ರೇರಣೆ ಇಲ್ಲದೆ ಜೀವನಿಗೆ 'ಇಷ್ಟುಕಾಲ ಸುಖವಾಗಿ ಮಲಗಿದ್ದೆ' ಎನ್ನುವ ಸುಷುಪ್ತಿಯ ಸ್ಮರಣೆಯೆ ಇಲ್ಲ ಎಂದರ್ಥ.

ದೇಹಾದ್ ದೇಹಾಂತರಗತೌ ಪ್ರವಿಶೇತ್ ಪ್ರಾಣಮೇವ ತು ।
ಜೀವಃ ಪ್ರಾಣಃ ಪರಾತ್ಮಾನಮೇವಂ ಸುಪ್ತಾವಪಿ ಸ್ಫುಟಂ ।
ತದನ್ಯಾ ದೇವತಾಃ ಸರ್ವಾಃ ಪ್ರಾಣಸ್ಯೈವ ವಶೇ ಸ್ಥಿತಾಃ ।
ಈಷಚ್ಚ ಸುಪ್ತವದ್ ಯಾಂತಿ ನೈವ ಮಾನುಷಜೀವವತ್ ।
ಸ್ವರ್ಗಸ್ಥಾನಾಂ ನ ತು ಸ್ವಾಪಃ ಪ್ರಾಯೋ ದೇಹೇಽಪಿ ನಾಜ್ಞತಾ ।
ಮೃತಿ ಸುಪ್ತಿ ಪ್ರಬೋಧಾದೇ ರ್ನಿಯಂತಾ ಹರಿರೇಕರಾಟ್ ।
ತಮೃತೇ ನೈವ ಚಾವಸ್ಥಾ ನಾವಸ್ಥಾವಾನ್ ನಚ ಸ್ಮೃತಿಃ ।
ತತಸ್ತು ದೇವದೇವೇಶಃ ಪ್ರಾಣಃ ಪ್ರಾಣೇಶ್ವರೋ ಹರಿಃ ।
ನ ಹರೇರೀಶಿತಾ ತ್ವನ್ಯಃ ಸ ಹಿ ಸರ್ವಾಧಿಕೋ ಮತಃ ॥
ಇತಿ ಹರಿವಂಶೇಷು ॥

ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಹೋಗುವಾಗ ಜೀವನು ಮುಖ್ಯ

ಪ್ರಾಣನನ್ನೇ ಪ್ರವೇಶಿಸುತ್ತಾನೆ. ಮುಖ್ಯಪ್ರಾಣ ಪರಮಾತ್ಮನನ್ನು ಪ್ರವೇಶಿಸುತ್ತಾನೆ. ಹೀಗೇ ಸುಪ್ತಿಯಲ್ಲಿಯೂ ಎಂಬುದು ಶ್ರುತಿ ಸೂತ್ರಗಳಲ್ಲಿ ಸ್ಫುಟವಾಗಿ ಉಕ್ತವಾಗಿದೆ. ಬೇರೆ ತಾತ್ವಿಕ ದೇವತೆಗಳು ಎಲ್ಲರೂ ಮುಖ್ಯಪ್ರಾಣನ ವಶದಲ್ಲಿಯೇ ಇರುವುದರಿಂದ ಸುಪ್ತಿಕಾಲದಲ್ಲಿ ಅವರು ಸ್ವಲ್ಪ ನಿದ್ದೆಗೆ ಜಾರುವಂತೆ ಕಾಣುತ್ತಾರೆ, ಇಂದ್ರಿಯಗಳಿಗೆ ಪ್ರೇರಣೆ ಮಾಡದಿರುತ್ತಾರೆ. ಹೊರತು ಮನುಷ್ಯ ಜೀವರಂತೆ ನಿದ್ದೆ ಮಾಡುವುದೇ ಇಲ್ಲ. ಈ ದೇವತೆಗಳಿಗೆ ಸ್ವರ್ಗದಲ್ಲಿರುವ ದಿವ್ಯ ದೇಹಗಳಲ್ಲಿ ನಿದ್ದೆ ಇಲ್ಲ. ಅವರಿಗೆ ಅವತಾರಗಳಲ್ಲಿ ಮನುಷ್ಯ ದೇಹ ಬಂದಾಗಲೂ ಪ್ರಾಯಃ ನಿದ್ದೆ ಇರುವುದಿಲ್ಲ. ಮರಣ ನಿದ್ರೆ ಎಚ್ಚರ ಮುಂತಾದವುಗಳಿಗೆ ಸರ್ವೇಶನಾದ ಹರಿಯೇ ನಿಯಾಮಕ. ಅವನ ಪ್ರೇರಣೆ ಇಲ್ಲದೆ ಅವಸ್ಥೆಗಳಿಲ್ಲ. ಅವಸ್ಥೆಗಳನ್ನು ಹೊಂದುವವನೂ ಇಲ್ಲ. ಅವಸ್ಥೆಗಳ ಸ್ಮರಣೆಯೂ ಇರುವುದಿಲ್ಲ. ಅದರಿಂದ ದೇವದೇವೇಶನು ಮುಖ್ಯ ಪ್ರಾಣನೆ. ಮುಖ್ಯಪ್ರಾಣನಿಗೆ ನಿಯಾಮಕನು ಹರಿಯೇ. ಹರಿಗೆ ನಿಯಾಮಕನು ಇನ್ನೊಬ್ಬನಿಲ್ಲ. ಅವನೇ ಸರ್ವೋತ್ತಮ ಎಂದು ಹರಿವಂಶದಲ್ಲಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜ ಕೇಳಿದ ಪ್ರಶ್ನೆಗೆ ಆವಿರ್ಹೋತ್ರ ಮುನಿ ಉತ್ತರಿಸುತ್ತಾರೆ—

ಏತತ್ಪ್ರಶ್ನಮೃಷೀನ್ ಪೂರ್ವಮಪೃಚ್ಛಂ ಪಿತುರಂತಿಕೇ ।
ನಾಬ್ರುವನ್ ಬ್ರಹ್ಮಣಃ ಪುತ್ರಾಸ್ತತ್ರ ಕಾರಣಮುಚ್ಯತಾಮ್ ॥ ೪೩ ॥

ನಾನು ಈ ಪ್ರಶ್ನೆಯನ್ನು ಹಿಂದೆ ನಮ್ಮ ತಂದೆ ಇಕ್ಷ್ವಾಕು ಮಹಾರಾಜರ ಸಂಮುಖದಲ್ಲಿ ಬ್ರಹ್ಮನ ಮಾನಸ ಪುತ್ರರಾದ ಸನಕಾದಿ ಮುನಿಗಳಲ್ಲಿ ಕೇಳಿದ್ದೆ. ಆದರೆ ಅವರು ಹೇಳಲಿಲ್ಲ. ಇದಕ್ಕೆ ಕಾರಣವನ್ನು ಹೇಳಿರಿ.

ಕರ್ಮಾಕರ್ಮ ವಿಕರ್ಮೇತಿ ವೇದವಾದೋ ನ ಲೌಕಿಕಃ ।
ವೇದಸ್ಯ ಚೇಶ್ವರಾತ್ಮತ್ವಾತ್ತತ್ರ ಮುಹ್ಯಂತಿ ಸೂರಯಃ ॥ ೪೪ ॥

ವಿಹಿತಕರ್ಮವನ್ನು ಮಾಡು ನಿಷಿದ್ಧ ಕರ್ಮವನ್ನು ಬಿಡು ಎನ್ನುವುದು ವೇದಪುರುಷನ ಆದೇಶ. ಅದು ಲೌಕಿಕವಲ್ಲ. ಲೌಕಿಕರಿಗೆ ಅದು ತಿಳಿಯುವುದಿಲ್ಲ. ವೇದವೂ ಕೂಡ ಮುಖ್ಯವಾಗಿ ಪರಮಾತ್ಮನ ಬಗ್ಗೆಯೆ ಹೇಳಲು ಹೊರಟಿರುವುದ ರಿಂದ ಅದಕ್ಕೆ ವಿರೋಧವಾಗದಂತೆ, ಪರಮಾತ್ಮನ ಅನುಗ್ರಹಕ್ಕಾಗಿ ಅವನಿಗೆ ಇಷ್ಟವಾದ ವಿಹಿತಕರ್ಮ ಮಾಡು, ಅವನಿಗಿಷ್ಟವಲ್ಲದ ನಿಷಿದ್ಧಕರ್ಮವನ್ನು ಬಿಡು ಎಂದು

ಆದೇಶಿಸುತ್ತಿದೆ. ಯಾವ ಕರ್ಮ ಪರಮಾತ್ಮನಿಗೆ ಇಷ್ಟ ಯಾವುದು ಇಷ್ಟವಲ್ಲ ಎನ್ನುವುದು ಅವನ ಅನುಗ್ರಹವಿಲ್ಲದೆ ಜ್ಞಾನಿಗಳಿಗೂ ತಿಳಿಯುವುದು ಶಕ್ಯವಲ್ಲ. ಅವರೂ ಮೋಹಗೊಳ್ಳುತ್ತಾರೆ ಎನ್ನುವುದನ್ನು ತಿಳಿಸುವುದಕ್ಕಾಗಿ ಸನಕಾದಿ ಮುನಿಗಳು ತಾವು ತಿಳಿದವರೇ ಆದರೂ ನಿನಗೆ ಹೇಳಲಿಲ್ಲ.

ಇಲ್ಲಿ 'ವೇದಸ್ಯ ಚೇಶ್ವರಾತ್ಮತ್ವಾತ್ ತತ್ರ ಮುಹ್ಯಂತಿ ಸೂರಯಃ' ಎಂಬ ಮಾತಿಗೆ ಬೇರೆ ವ್ಯಾಖ್ಯಾನಕಾರರು ನೀಡಿರುವ ವಿವರಣೆಗಳು— ವೇದವು 'ಈಶ್ವರಾತ್ಮ' ಪರಮಾತ್ಮನಿಂದ ಉದ್ಭವಿಸಿದ್ದು, ಅಪೌರುಷೇಯ. ಪೌರುಷೇಯವಾಗಿದ್ದರೆ ಗ್ರಂಥ ಕರ್ತನನ್ನು ಕೇಳಿ ಅಭಿಪ್ರಾಯವನ್ನು ತಿಳಿಯಬಹುದಾಗಿತ್ತು. ಅಪೌರುಷೇಯ ವಾಗಿರುವುದರಿಂದ ಯಾವುದೇ ವಾಕ್ಯದ ಹಿಂದುಮುಂದು ನೋಡಿಯೇ ಅಭಿಪ್ರಾಯವನ್ನು ತಿಳಿಯಬೇಕಾಗಿದೆ. ಅದರಿಂದ ಅರ್ಥಜ್ಞಾನ ಅಸಾಧ್ಯವಾದ್ದರಿಂದ ವಿದ್ವಾಂಸರೂ ಮೋಹಗೊಳ್ಳುವರು. ಹೀಗಾಗಿ ಬಾಲಕನಾಗಿದ್ದ ನಿಮಿರಾಜನಿಗೆ ಸನಕಾದಿಗಳು ಹೇಳಲಿಲ್ಲ—ಇದು ಶ್ರೀಧರ ವ್ಯಾಖ್ಯಾನ.

[1]ವೇದವು ಈಶ್ವರಾತ್ಮ. 'ವೇದೋ ನಾರಾಯಣಃ ಸಾಕ್ಷಾತ್' ಎಂಬಂತೆ ಈಶ್ವರನ ವಾಙ್ಮಯ ಅವತಾರ. ಅದರಿಂದ ಶಬ್ದಬ್ರಹ್ಮ ಎನಿಸಿದೆ. ತಂದೆಯ ಮಡಿಲಲ್ಲಿದ್ದ ಬಾಲಕ ನಿಮಿ ಅದನ್ನು ಕೇಳಲು ಯೋಗ್ಯನಾಗಿರಲಿಲ್ಲ ಎಂದು ಜೀವಗೋಸ್ವಾಮಿ ವ್ಯಾಖ್ಯಾನ.

[2]ವೇದವು 'ಈಶ್ವರಾತ್ಮಕ' ಎಂದರೆ ಈಶ್ವರ ಪ್ರತಿಪಾದಕ. ಅದರಲ್ಲಿ ಅಕ್ಷಯ್ಯಂ ಹ ವೈ ಚಾತುರ್ಮಾಸ್ಯ ಯಾಜಿನಃ ಸುಕೃತಂ ಭವತಿ ಇತ್ಯಾದಿ ವಾಕ್ಯದಿಂದ ಕರ್ಮವು

---

1. ಪಿತುರಂತಿಕೇ ಇತ್ಯುಕ್ತ್ಯಾ ಬಾಲತ್ವಾದ್ ಭವತಃ ಖಲ್ವಯೋಗ್ಯತ್ವಮೇವ। ವೇದಸ್ಯೇಶ್ವರಾತ್ಮತ್ವಾತ್। ಶಬ್ದರೂಪೇಣ ತದಾವಿರ್ಭಾವ ವಿಶೇಷರೂಪತ್ವಾದಿತ್ಯರ್ಥಃ।

   ಶಬ್ದಬ್ರಹ್ಮ ಪರಬ್ರಹ್ಮ ಮಮೋಭೇ ಶಾಶ್ವತೇ ತನೂ।
   ವೇದೋ ನಾರಾಯಣಃ ಸಾಕ್ಷಾತ್ ಸ್ವಯಂಭೂರಿತಿ ಶುಶ್ರಮ ॥
   ಇತ್ಯಾದ್ಯುಕ್ತೇಃ। ಅಪೌರುಷೇಯತ್ವಂ ತ್ವಜೀವ ಜಾತತ್ವಮೇವ। - ಜೀವಗೋಸ್ವಾಮೀ

2. ತೇ ತುಬ್ರಹ್ಮಣಃ ಪುತ್ರಾಃ ಪ್ರಜಾಪತಯ ಇಕ್ಷ್ವಾಕು ಯಾಜಕಾಃ ಕರ್ಮಯೋಗಂ ನಾಬ್ರುವನ್। ನೈಷ್ಕರ್ಮ್ಯೋಪಯೋಗಿತ್ವೇನ ನೋಕ್ತವಂತಃ। ತತ್ರಾವಚನೇ ಕಾರಣಂ ನಿಮಿತ್ತ ಮುಚ್ಯತಾಂ। ಈಶ್ವರಾರ್ಪಿತೇನ ನಿಷ್ಕಾಮಕರ್ಮಾನುಷ್ಠಾನೇನ ನೈಷ್ಕರ್ಮ್ಯಂ ಜಾಯತೇ ಇತಿ ವಕ್ತುಂ ಈಶ್ವರಜ್ಞಾನವರ್ಜಿತಾಃ ಇಕ್ಷ್ವಾಕುಯಾಜಕಾಃ ನ ಜಾನಂತೀತ್ಯಾಹ ಕರ್ಮೇತಿ। ಅಕ್ಷಯ್ಯಂ ಹವೈ ಚಾತುರ್ಮಾಸ್ಯ ಯಾಜಿನ ಇತ್ಯಾದಿವೇದಃ ಕರ್ಮಫಲಮಕ್ಷಯಮಾಹ। ಅತೋ ವೇದಃ ಕರ್ಮೈಕ ವಿಷಯ ಇತ್ಯೇವಂ ಮೋಹಂ ಪ್ರಾಪ್ನುವಂತಿ। ತತ್ರ ಹೇತುಮಾಹ ವೇದಸ್ಯ

ಮೋಕ್ಷರೂಪ ಅಕ್ಷಯಫಲಪ್ರದವೆಂದು ಹೇಳುವ ಅಭಿಪ್ರಾಯ ಕಾಣುತ್ತದೆ. ಆದರಿಂದ ವೇದವೆಲ್ಲವೂ ಕರ್ಮಪರ ಎಂದಂತಾಗುತ್ತದೆ. ವಸ್ತುತಃ ಕರ್ಮಫಲವಾದ ಸ್ವರ್ಗವನ್ನು ಅನಿತ್ಯ ಅಸಾರವೆಂದು ತಿಳಿದು ವೈರಾಗ್ಯ ಹೊಂದಿ ಬ್ರಹ್ಮವಿಚಾರಕ್ಕೆ ತೊಡ ಬೇಕೆಂದೇ ವೇದ ಹೇಳುತ್ತಿದೆ. ಈ ರಹಸ್ಯ ಪ್ರಜಾಪತಿಗಳಾದ ಮರೀಚಿ ಕರ್ದಮ ಮುಂತಾದ ಬ್ರಹ್ಮಪುತ್ರರಿಗೆ ತಿಳಿದಿರಲಿಲ್ಲ. ಅವರು ನಿಮಿರಾಜನ ತಂದೆಯಾದ ಇಕ್ಷ್ವಾಕು ರಾಜನ ಯಜ್ಞದಲ್ಲಿ ಪೌರೋಹಿತ್ಯ ಮಾಡಲು ಬಂದವರು. ಅವರಲ್ಲಿ ನಿಮಿರಾಜ ನಿಜವಾದ ಕರ್ಮಯೋಗವನ್ನು ಕೇಳಿದರೆ ಏನು ಹೇಳಬಲ್ಲರು? ಹೀಗಾಗಿ ಅವರು ಹೇಳಲಿಲ್ಲ ಎಂದು ಆವಿರ್ಹೋತ್ರಮುನಿ ನಿಮಿರಾಜನಿಗೆ ಹೇಳುತ್ತಾರೆ ಎನ್ನುತ್ತದೆ ಶುಕದೇವ ವ್ಯಾಖ್ಯಾನ.

ಮರೀಚಿ ಕರ್ದಮ ಭೃಗು ವಸಿಷ್ಠಾದಿ ಮಹಾಮುನಿಗಳು ಅರ್ಥಜ್ಞಾನವಿಲ್ಲದೆ ವೇದವನ್ನು ಹೇಳಿ ಪೌರೋಹಿತ್ಯ ನಡೆಸುವವರು ಎಂದಂತಾಯಿತು. ಇಂಥ ವ್ಯಾಖ್ಯಾನಕಾರರು ಭಾಗವತಕ್ಕೆ ವ್ಯಾಖ್ಯಾನ ಮಾಡಲು ಹೊರಟಿದ್ದು ಒಂದು ~~ವಿಪರ್ಯಾಸವೆ ಸರಿ.~~

ಜಾನಂತೋಽಪಿ ಹಿ ದುರ್ಜ್ಞೇಯಃ ಪ್ರಶ್ನೋಽಯಂ ಜ್ಞಾನಿನಾಮಪಿ ।
ಇತಿ ವೇದಯಿತುಂ ಬ್ರಹ್ಮಪುತ್ರಾ ನೋಚುರ್ನಿಮೇಃ ಪುರಾ ॥
ಇತಿ ತಂತ್ರಭಾಗವತೇ ॥

ಈಶ್ವರಾತ್ಮತ್ವಾತ್ ಈಶ್ವರವಿಷಯತ್ವಾತ್ ।

ಹಿಂದೆ ಸನಕಾದಿಗಳು ತಿಳಿದವರಾದರೂ ನಿಮಿರಾಜನು ಕೇಳಿದ ಕರ್ಮಯೋಗವು ಜ್ಞಾನಿಗಳಿಗೂ ತಿಳಿಯುವುದು ಕಷ್ಟ ಎಂದು ತಿಳಿಸಲು, ನಿಮಿರಾಜನಿಗೆ ಹೇಳಲಿಲ್ಲ ಎಂದು ತಂತ್ರಭಾಗವತದಲ್ಲಿದೆ.

'ಈಶ್ವರಾತ್ಮತ್ವಾತ್' ಎಂದರೆ ಈಶ್ವರ ಪ್ರತಿಪಾದಕವಾದ್ದರಿಂದ ಎಂದರ್ಥ.

❖❖❖

ಚೇಶ್ವರಾತ್ಮತ್ವಾದಿತಿ । ಈಶ್ವರಃ ಸರ್ವೇಶ್ವರಃ ಆತ್ಮಾ ಆಶ್ರಯಃ ಮುಖ್ಯೋ ವಿಷಯೋ ಯಸ್ಯ ಸ ತಥಾ ತಸ್ಯಭಾವಸ್ತತ್ತ್ವಂ ತಸ್ಮಾತ್ ಏವಂಭೂತ ವೇದಾರ್ಥಜ್ಞಾನಾಭಾವಾತ್ ತಮೇತಂ ವೇದಾನುವಚನೇನೇತ್ಯಾದ್ಯುಕ್ತರೀತ್ಯಾ ತದ್ ವಿವಿದಿಷೋತ್ಪಾದನ ದ್ವಾರಾ ಕರ್ಮಣಾಂ ನೈಷ್ಕರ್ಮ್ಯ ಸಾಧನತ್ವಮನವಧಾರ್ಯ ಇಕ್ಷ್ವಾಕು ಯಾಜಕಾ ಭವತ್ ಪ್ರಷ್ಟವ್ಯಮರ್ಥಂ ನೈವಾಬ್ರುವನ್ನಿತಿ ಫಲಿತೋಽರ್ಥಃ । -ಶುಕದೇವಃ

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಆವಿಹೋರ್ತ್ರಮುನಿ ಕರ್ಮವನ್ನು ಭಗವಂತನ ಪ್ರೀತಿಯ ಉದ್ದೇಶವಿಲ್ಲದೆ ಮಾಡಿದರೆ ಅನರ್ಥ ಉಂಟಾಗುತ್ತದೆ ಎನ್ನುತ್ತಾರೆ.

ನಾಽಽಚರೇದ್ಯಸ್ತು ವೇದೋಕ್ತಂ ಸ್ವಯಮಜ್ಞೋಽಜಿತೇಂದ್ರಿಯಃ।
ವಿಕರ್ಮಣಾ ಹ್ಯಧರ್ಮೇಣ ಮೃತ್ಯೋರ್ಮೃತ್ಯುಮುಪೈತಿ ಸಃ ॥ ೪೬ ॥

ವೇದೋಕ್ತವಾದ ಕರ್ಮ ಭಗವಂತನ ಪ್ರೀತಿಗಾಗಿ ವಿಹಿತವಾಗಿದೆ ಎಂಬುದನ್ನು ಅರಿಯದ 'ನಾ'-ನರನು ಇಂದ್ರಿಯ ನಿಗ್ರಹವಿಲ್ಲದೆ ವಿಷಯಕಾಮನೆಯಿಂದ ಕರ್ಮ ಮಾಡಿದಾಗ ಅದು ವಿಕರ್ಮವೆನಿಸುತ್ತದೆ, ಅಧರ್ಮವೆನಿಸುತ್ತದೆ, ನಿಷಿದ್ಧವೆನಿಸಿ ಧರ್ಮವಿರುದ್ಧವಾಗುತ್ತದೆ. ಅದರಿಂದ ಆ ಕರ್ಮ ಮಾಡುವವನು ಅತೀವ ದುಃಖ ಭಾಗಿಯಾಗುತ್ತಾನೆ.

ಈ ಶ್ಲೋಕ ಮೇಲುನೋಟಕ್ಕೆ ವಿಪರೀತ ಅರ್ಥಕೊಡುತ್ತದೆ. 'ನ ಆಚರೇತ್' ಎಂದು ಪದವಿಭಾಗದಿಂದ ವೇದೋಕ್ತ ಕರ್ಮ ಮಾಡದವನು ವಿಕರ್ಮದಿಂದ ಅಂದರೆ ನಿಷಿದ್ಧಕರ್ಮದಿಂದ ಅನರ್ಥಭಾಗಿಯಾಗುವನು ಎಂದು ಹೇಳಿದಂತೆ ಕಾಣುತ್ತದೆ. ಆದರೆ ಹಿಂದಿನ ಶ್ಲೋಕದಲ್ಲಿ 'ಕರ್ಮಾಕರ್ಮ ವಿಕರ್ಮೇತಿ' ಕರ್ಮ ಅಕರ್ಮ ವಿಕರ್ಮ ಎಂದು ಮೂರು ಪ್ರಸ್ತುತವಾಗಿದೆ. ವೇದೋಕ್ತ ಕರ್ಮಮಾಡಿದರೆ ಅದು 'ಕರ್ಮ' ಪುಣ್ಯಕರ. ಮಾಡದಿದ್ದರೆ ಅದು 'ಅಕರ್ಮ' ಪಾಪಕರ. ನಿಷಿದ್ಧಕರ್ಮಮಾಡಿದರೆ ಅದು 'ವಿಕರ್ಮ' ಅನರ್ಥಕರ. ಪ್ರಕೃತ ಶ್ಲೋಕದಲ್ಲಿ 'ನ ಆಚರೇತ್' ಎಂದು ಅಕರ್ಮಕ್ಕೆ ವಿಕರ್ಮದ ಅನರ್ಥಫಲ ಉಕ್ತವಾಗಿದೆ ಏಕೆ?

[1]ಈ ಪ್ರಶ್ನೆಗೆ ಶ್ರೀಧರವ್ಯಾಖ್ಯಾನ ಸಮಾಧಾನ ಹೇಳುತ್ತದೆ— ಇಲ್ಲಿ ವಿಕರ್ಮ ಎಂದರೆ ಅಕರ್ಮವೆ ವಿವಕ್ಷಿತ ಎಂದು. ಇದು ತೃಪ್ತಿಕರವಾದ ಸಮಾಧಾನ ವಾಗುವುದಿಲ್ಲ. ಹಿಂದಿನ ಶ್ಲೋಕದಲ್ಲಿ ನಿಷಿದ್ಧ ಕರ್ಮಮಾಡುವುದನ್ನು ವಿಕರ್ಮ ಎಂದು ಹೇಳಿ ಇಲ್ಲಿ ವಿಹಿತಕರ್ಮ ಮಾಡದಿರುವುದನ್ನು ವಿಕರ್ಮ ಎನ್ನುವುದು ಗೊಂದಲಕ್ಕೆ ಕಾರಣವಾಗುವುದು.

[2]ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ— ಅಕರ್ಮವಿರುವಲ್ಲಿ ವಿಕರ್ಮವಿದ್ದೇ

1. ಅಜಿತೇಂದ್ರಿಯತ್ವಾದಜ್ಞಃ ಸ್ವಯಂ ಯದಿ ನಾಚರೇತ್ ತರ್ಹಿ ವಿಕರ್ಮಣಾ ಕರ್ಮಾನಾಚರಣ ಲಕ್ಷಣೇನಾಧರ್ಮೇಣ ಮೃತ್ಯೋರನಂತರಂ ಮೃತ್ಯುಮೇವ ಪ್ರಾಪ್ನೋತಿ। -ಶ್ರೀಧರಃ
2. ಯದಿ ವೇದೋಕ್ತಂ ಕರ್ಮನಾಚರೇತ್ತದಾ ನಹಿಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃದಿತಿ

ಇರುತ್ತದೆ. 'ನಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್' ಎಂದು ಗೀತೆ ಹೇಳುವಂತೆ ಏನೂ ಕರ್ಮಮಾಡದೆ ಯಾರಿಗೂ ಸುಮ್ಮನೆ ಕುಳಿತಿರಲಾಗುವುದಿಲ್ಲ. ಅದರಿಂದ ವಿಹಿತಕರ್ಮ ಮಾಡದವನು ನಿಷಿದ್ಧಕರ್ಮ ಮಾಡುತ್ತಾನೆ. ಆ ವಿಕರ್ಮಕ್ಕೆ ಅನರ್ಥ ಫಲ ಇಲ್ಲಿ ಉಕ್ತವಾಗಿದೆ' ಎಂದು. ಆದರೆ ವಿಕರ್ಮಕ್ಕೆ ಮಾತ್ರ ಫಲ ಏಕೆ ಉಕ್ತವಾಗಿದೆ? ಅಕರ್ಮಕ್ಕೆ ಫಲವಿಲ್ಲವೆ? ನಿತ್ಯಕರ್ಮ ಮಾಡದಿದ್ದರೆ ಪಾಪವಿದೆ ತಾನೆ?

[3]ವೀರರಾಘವ ವ್ಯಾಖ್ಯಾನ ಹೇಳುತ್ತದೆ— ಶ್ಲೋಕದಲ್ಲಿ ಅಕರ್ಮವನ್ನು ಮಾತ್ರ ಹೇಳಿದ್ದರೂ ಜೊತೆಗೆ ವಿಕರ್ಮವೂ ಇರುವುದರಿಂದ ಅದನ್ನು ಅಧ್ಯಾಹಾರ ಮಾಡಿ ಇಟ್ಟುಕೊಳ್ಳಬೇಕು. ವಿಕರ್ಮಕ್ಕೆ ಮಾತ್ರ ಫಲ ಹೇಳಿದ್ದರೂ ಅಕರ್ಮಕ್ಕೆ ಫಲವಿದೆ ಎಂದೂ ಅಧ್ಯಾಹಾರಮಾಡಿಟ್ಟುಕೊಳ್ಳಬೇಕು ಎಂದು. ಆದರೆ ಹೀಗೆ ಇಲ್ಲದ ಶಬ್ದ ಗಳನ್ನು ನಾವೇ ತಂದ ಸೇರಿಸಿ ಭರ್ತಿ ಮಾಡುವುದರಿಂದ ಶ್ಲೋಕಕ್ಕೆ ಹಿಂಸೆ ಅನ್ಯಾಯ ಮಾಡಿದಂತಾಗುವುದು. ಬೇರೆ ಗತಿ ಇಲ್ಲದಿದ್ದರೆ ಇದು ಸರಿ. ಬೇರೆಗತಿ ಇಲ್ಲವೆ?

ಶ್ರೀಮದಾಚಾರ್ಯರು 'ನಾ ಆಚರೇತ್' ಎಂದು ಪದವಿಭಾಗ ಎನ್ನುತ್ತಾರೆ. ಆದರೆ ಆಗಲೂ 'ನಾ' ಅಜ್ಞನಾದ ಮಾನವನು 'ಕರ್ಮಮಾಡಿದರೆ ವಿಕರ್ಮಫಲ ಅನರ್ಥ' ಎಂದಂತಾಗುವುದರಿಂದ ಅಸಂಗತವಾಗುವುದು ಎಂಬ ಶಂಕೆ ಬರುವುದು. ಶ್ರೀಮದಾಚಾರ್ಯರು ಹೇಳುತ್ತಾರೆ–'ಅಜ್ಞಃ ಸನ್ನಾಚರನ್ ನಾ' ಅಜ್ಞನಾಗಿ ಕರ್ಮ ಮಾಡುವ ಮಾನವನಿಗೇ ಕರ್ಮಕ್ಕೇ ವಿಕರ್ಮಫಲ ಏಕೆಂದರೆ 'ಸ್ವಯಮಜ್ಞೋಽಜಿತೇಂದ್ರಿಯಃ' ಎಂದಿದೆ ಶ್ಲೋಕದಲ್ಲಿ.

ಯತ್ಕರೋಷಿ ಯದಶ್ನಾಸಿ..ತತ್ ಕುರುಷ್ವ ಮದರ್ಪಣಂ ಎಂದು ಗೀತೆಯಲ್ಲಿ ಭಗವಂತನ ಪ್ರೀತಿಯ ಉದ್ದೇಶದಿಂದ ಕರ್ಮಮಾಡಿ ಭಗವಂತನಿಗೆ ಅರ್ಪಿಸ ಬೇಕೆಂದು ವಿಧಿ ಇದೆ. 'ಮಾ ಕರ್ಮಫಲಹೇತುರ್ಭೂಃ' ಎಂದು ಅಲ್ಲಿಯೇ ಕಾಮ್ಯ ಕರ್ಮ ನಿಷೇಧವಿದೆ. ಅಜ್ಞಾನಿಯಾದ ಮಾನವ ಇಂದ್ರಿಯನಿಗ್ರಹ ಮಾಡಿಕೊಳ್ಳದೆ

ಭಗವದುಕ್ತೇರಿಂದ್ರಿಯಜಯಾಭಾವಾತ್ ಪಶುರಿವ ಪ್ರಾತರಾರಭ್ಯ ಅನಿಯತ ಭೋಜನಸ್ತ್ರೀಸಂಗಾದಿ ವಿವಿಧ ಪಾಪ ನಿರತ ಏವ ಸ್ಯಾತ್ । ತತಶ್ಚ ವಿಕರ್ಮಣಾ ನಿಷಿದ್ಧಾಚರಣ ಲಕ್ಷಣಾಧರ್ಮೇಣ ನರಕಮೇವ ಪ್ರಾಪ್ನೋತಿ । -ವಿಶ್ವನಾಥಃ

3. ವೇದೋಕ್ತಂ ವೇದವಿಹಿತಂ ಯದಿ ನಾಚರೇತ್ ತಥಾ ವಿಕರ್ಮಾಣ್ಯಾಚರೇತ್ ತೇನ ವಿಕರ್ಮಣಾ ವೇದವಿರುದ್ಧ ಕರ್ಮಾನುಷ್ಠಾನರೂಪೇಣ ಆವಶ್ಯಕಾನನುಷ್ಠಾನ ರೂಪೇಣ ಚಾಧರ್ಮೇಣ ಮೃತ್ಯೋಃ ಸಕಾಶಾನ್ಮೃತ್ಯುಮೇವೋಪೈತಿ । -ವೀರರಾಘವಃ

ಕಾಮ್ಯಫಲದ ಉದ್ದೇಶದಿಂದ ಕರ್ಮಮಾಡುತ್ತಾನೆ, ಭಗವಂತನಿಗೆ ಅರ್ಪಿಸುವುದಿಲ್ಲ. ಹೀಗೆ ವಿಧಿ ನಿಷೇಧಗಳನ್ನು ಅತಿಕ್ರಮಿಸುತ್ತ ಮಾಡುವ ಕರ್ಮವೇ ವಿಕರ್ಮವೆನಿಸಿ ಅನರ್ಥಫಲಕ್ಕೇ ಕಾರಣವಾಗುತ್ತದೆ. ಈಗ ಶ್ಲೋಕದಲ್ಲಿ ಬೇರೆ ಯಾವ ಶಬ್ದವನ್ನೂ ತಂದು ಸೇರಿಸಬೇಕಾಗಿಲ್ಲ. 'ವಿಕರ್ಮ' ಶಬ್ದಕ್ಕೆ ಅಕರ್ಮ ಎಂದಾಗಲಿ ಕರ್ಮ ಎಂದಾಗಲಿ ಬೇರೆ ಅರ್ಥವನ್ನೂ ಹೇಳಬೇಕಾಗಿಲ್ಲ. ಏನೂ ವಿರುದ್ಧಾರ್ಥ ಕೊಡದೆ ಅಪೂರ್ವವಾದ ಸುಂದರವಾದ ಅರ್ಥಕೊಡುತ್ತದೆ ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ.

ಅಜ್ಞಃ ಸನ್ನಾಚರನ್ ನಾ ವಿಕರ್ಮಣಾ ಮೃತ್ಯೋರ್ಮೃತ್ಯುಮುಪೈತಿ ।

ಅಜ್ಞಾನಿಯಾಗಿ ಕರ್ಮ ಮಾಡುವ ಮಾನವನು ನಿಷಿದ್ಧಕರ್ಮಾಚರಣದಿಂದ ಮರಣಾನಂತರ ನರಕವನ್ನು ಹೊಂದುತ್ತಾನೆ.

❖❖❖

~~ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಆವಿರ್ಹೋತ್ರ ಮುನಿ~~ ನಿರ್ಮಲ ಅಂತಃಕರಣದಿಂದ ಕರ್ಮಮಾಡಿ ಭಗವಂತನಿಗೆ ಅರ್ಪಿಸಬೇಕೆನ್ನುತ್ತಾರೆ—

ವೇದೋಕ್ತಮೇವ ಕುರ್ವಾಣೋ ನಿಃಸಂಗೋಽರ್ಪಿತಮೀಶ್ವರೇ ।
ನೈಷ್ಕರ್ಮ್ಯಂ ಲಭತೇ ಸಿದ್ಧಿಂ ರೋಚನಾರ್ಥಂ ಫಲಶ್ರುತಿಃ ॥ ೪೭ ॥

ಅದೇ ಕರ್ಮವನ್ನು ಫಲದಾಸೆ ಇಲ್ಲದೆ ಮಾಡಿ ಭಗವಂತನಿಗೆ ಅರ್ಪಿಸಿದರೆ ದುಃಖಕಾರಣವಾಗುವುದಿಲ್ಲ. ಕರ್ಮದಿಂದ ಸಾಧ್ಯವಲ್ಲದ ಮೋಕ್ಷಫಲವನ್ನು ಕರ್ಮದಿಂದ ಹೊಂದುತ್ತಾನೆ. 'ಸ್ವರ್ಗಕಾಮೋ ಯಜೇತ' ಎಂದು ಸ್ವರ್ಗಫಲವನ್ನು ಹೇಳುವುದು ಮುಕ್ತಿಯೋಗ್ಯನಾಗಿದ್ದೂ ಅಜ್ಞಾನದಿಂದ ಕರ್ಮ ವಿಮುಖನಾಗಿರುವವನನ್ನು ಕರುಣೆಯಿಂದ ನಿಷ್ಕಾಮಕರ್ಮ ಮಾರ್ಗಕ್ಕೆ ತರಲು ಕರ್ಮಾಚರಣೆಯಲ್ಲಿ ರುಚಿ ಉಂಟುಮಾಡುವ ಉದ್ದೇಶದಿಂದ, ಹೊರತು ಸ್ವರ್ಗಾದಿ ಫಲವನ್ನು ಪಡೆಯಲಿ ಎಂದಲ್ಲ.

ಶ್ಲೋಕದಲ್ಲಿ ನಿಃಸಂಗ ಶಬ್ದದಿಂದ ಫಲಕಾಮನೆಯನ್ನು ಬಿಡಬೇಕೆಂದು ಹೇಳಿದೆ. ಫಲಕಾಮನೆ ಇದ್ದರೆ ಮಾತ್ರ ಆ ಫಲಕ್ಕೆ ಸಾಧನವಾದ ಕರ್ಮಮಾಡಿ ಫಲವನ್ನು ಹೊಂದುತ್ತಾನೆ. ಆಗ ಆ ಫಲದಲ್ಲಿಯೂ ಕರ್ಮದಲ್ಲಿಯೂ ಆಸಕ್ತಿ ಹುಟ್ಟುತ್ತದೆ ಹೊರತು ಕರ್ಮ ಮತ್ತು ಫಲಗಳಲ್ಲಿ ಅನಾಸಕ್ತಿ ಉಂಟಾಗುವುದಿಲ್ಲ.

ಜ್ಞಾನಸಾಧನೆಯಾಗುವುದಿಲ್ಲ ಎಂದು ಅಭಿಪ್ರಾಯ ಕಾಣುತ್ತದೆ. [1]ಶ್ರೀಧರವ್ಯಾಖ್ಯಾನ ಹಾಗೇ ಹೇಳಿದೆ.

ಆದರೆ ಫಲಾಸಕ್ತಿ ಯನ್ನು ಮಾತ್ರ ಬಿಟ್ಟರೆ ಸಾಲದು. ಮನೋದೋಷಗಳನ್ನೂ ಎಲ್ಲವನ್ನೂ ಬಿಡಬೇಕು. ಕರ್ಮತಂತ್ರದಲ್ಲಿ ಹತ್ತು ಬಗೆಯ ಮನೋದೋಷಗಳು ಉಕ್ತವಾಗಿವೆ. ಅವುಗಳನ್ನು ಪರಿಹಾರ ಮಾಡಿಕೊಳ್ಳದೆ ಕೇವಲ ಫಲಾಸಕ್ತಿ ತ್ಯಾಗಮಾತ್ರದಿಂದ ಕರ್ಮಾನುಷ್ಠಾನ ಮಾಡಿದರೆ ಅದು ಜ್ಞಾನಸಾಧನವಾಗಲಾರದು. ಶ್ಲೋಕದಲ್ಲಿ ನಿಃಸಂಗ ಶಬ್ದ ಈ ಎಲ್ಲ ದೋಷಗಳನ್ನು ಬಿಡಬೇಕೆನ್ನುತ್ತದೆ.

ಸ ಏವೇಶ್ವರಾರ್ಪಿತಂ ಕುರ್ವಾಣಃ ಸಿದ್ಧಿಂ ಲಭತೇ ।

ಅವನೇ ಕರ್ಮವನ್ನು ಭಗವಂತನಿಗೆ ಅರ್ಪಿತವಾಗಿ ಮಾಡಿದರೆ ಮೋಕ್ಷವನ್ನು ಹೊಂದುತ್ತಾನೆ.

ಅಜ್ಞಾತ್ವಾ ಕುರ್ವತಃ ಕರ್ಮ ಸ್ಖಲನಾತ್ ಪಾಪಕಾರಣಂ ।
~~ತದೇವಾರ್ಪಯತೋ ವಿಷ್ಣೌ ನೈವ ಪಾಪಾಯ ತದ್ಭವೇತ್ ।~~
ಮನೋದೋಷವಿಹೀನಸ್ಯ ನ ತು ದೋಷವತಃ ಕ್ವಚಿತ್ ।
ಸತ್ಸು ಕೇಶವ ಪೂರ್ವೇಷು ಕ್ರಮಶೋ ಭಕ್ತಿ ಹೀನತಾ ।
ಅಸದ್ಭಕ್ತಿಸ್ತಥಾ ಸ್ನೇಹೋ ಬಹುಮಾನ ಮಥಾಪಿ ವಾ ।
ಸ್ವೋತ್ತಮಾನಾಂ ಪ್ರಿಯತ್ಯಾಗಾದ್ ಆತ್ಮಪ್ರಿಯ ಚಿಕೀರ್ಷುತಾ ।
ಅಧಿಕೇಷ್ವೇವ ನೀಚೋಚ್ಚ ಭಕ್ತಿವ್ಯತ್ಯಾಸ ಏವ ವಾ ।
ಸ್ವೋತ್ತಮಸ್ಯಾತ್ಮನಶ್ಚೈವ ಸಮಸ್ನೇಹೋಽಥವಾ ಭವೇತ್ ।
ಕಾರ್ಯೇಷು ಬಹುಮಾನೋ ವಾ ಸ್ವಾತ್ಮನಃ ಸಮತಾಽಪಿವಾ ।
ಆಧಿಕ್ಯೇ ಕಿಮು ವಕ್ತವ್ಯಮಾತ್ಮನಃ ಶಕ್ತಿಹಾಪನಂ ।
ಶಕ್ತಸ್ಯಾಶಕ್ತವತ್ ಕರ್ಮ ಮನೋದೋಷಾ ಇತೀರಿತಾಃ ।।
ಇತಿ ಕರ್ಮತಂತ್ರೇ ।।

---

1. ನನು ಕರ್ಮಣಿ ಕ್ರಿಯಮಾಣೇ ತಸ್ಮಿಂಸ್ತತ್ಫಲೇ ಚಾಸಕ್ತಿಸ್ತತ್ಫಲಂ ಚ ಸ್ಯಾತ್ ನ ತು ನೈಷ್ಕರ್ಮ್ಯರೂಪಾ ಸಿದ್ಧಿರತ ಆಹ । ವಿವಿದಿಷಂತಿ ಬ್ರಹ್ಮಚರ್ಯೇಣ ತಪಸಾ ಶ್ರದ್ಧಯಾ ಯಜ್ಞೇನೇತಿ ಯಜ್ಞಾದೀನಾಂ ಜ್ಞಾನಶೇಷತಾಮವಧಾರ್ಯ ನಿಷ್ಕಾಮೇ ಕರ್ಮಣಿ ಪ್ರವರ್ತತೇ। ತತಶ್ಚ ಸ್ವರ್ಗಕಾಮೋ ಯಜೇತೇತ್ಯಾದಿಭಿಃ ಕಾಮಿತಸ್ಯೈವ ಸ್ವರ್ಗಾದೇಃ ಫಲತ್ವೇನಾವಗಮಾತ್ ಅಕಾಮಿತೋಽಸೌ ನ ಭವತೀತಿ ನೈಷ್ಕರ್ಮ್ಯ ಸಿದ್ಧಿರ್ಭವೇದಿತಿ ಭಾವಃ ।
-ಶ್ರೀಧರಃ

ಭಗವಂತನ ಆರಾಧನೆ ಎನ್ನುವ ಅರಿವಿಲ್ಲದೆ ಕರ್ಮ ಮಾಡುವವನಿಗೆ ಭಗವದರ್ಪಣವೆಂಬ ಅಂಗವೈಕಲ್ಯದಿಂದ ಕರ್ಮವೇ ಪಾಪಕಾರಣವಾಗುತ್ತದೆ. ಮನೋದೋಷ ರಹಿತನಾಗಿ ಅದೇ ಕರ್ಮವನ್ನು ವಿಷ್ಣುವಿನಲ್ಲಿ ಅರ್ಪಿಸುವವನಿಗೆ ಮಾತ್ರ ಅದು ಪಾಪಕಾರಣವಾಗುವುದಿಲ್ಲ. ಮನೋದೋಷ ಉಳ್ಳವನು ಹರಿಗೆ ಅರ್ಪಿಸಿದರೂ ಕೂಡ ಅದು ಸರಿಯಾದ ಅರ್ಪಣೆಯಾಗದಿರುವುದರಿಂದ ಕರ್ಮ ಎಂದೂ ಪಾಪಕಾರಣವಾಗದಿರುವುದಿಲ್ಲ. ಮನೋದೋಷಗಳು ಇವು—

ಹರಿಭಕ್ತರಾದ ಬ್ರಹ್ಮಾದಿಗಳಲ್ಲಿ ತಾರತಮ್ಯಾನುಸಾರಿಯಾದ ಭಕ್ತಿ ಇಲ್ಲದಿರುವುದು,

ದುರ್ಜನರಲ್ಲಿ ಭಕ್ತಿ ಸ್ನೇಹ ಅಥವಾ ಆದರ ಭಾವನೆ ಮಾಡುವುದು,

ತನ್ನ ಕೆಲಸದೊಂದಿಗೆ ಸ್ವೋತ್ತಮರ ಕೆಲಸವೂ ಪ್ರಸಕ್ತವಾದಾಗ ಸ್ವೋತ್ತಮರ ಇಷ್ಟವಾದ ಕೆಲಸವನ್ನು ಬಿಟ್ಟು ತನ್ನ ಇಷ್ಟವಾದ ಕೆಲಸ ಮಾಡಲು ಬಯಸುವುದು,

ಸ್ವೋತ್ತಮರಲ್ಲಿಯೇ ಕಿರಿಯರು ಹಿರಿಯರುಗಳಲ್ಲಿ ಭಕ್ತಿ ವ್ಯತ್ಯಾಸ ಮಾಡುವುದು,

ಸ್ವೋತ್ತಮರಲ್ಲಿಯೂ ತನ್ನಲ್ಲಿಯೂ ಸಮಾನವಾಗಿ ಮಮತೆ ತೋರುವುದು,

~~ತನ್ನ ಕೆಲಸಗಳಾಗಬೇಕಾದರೆ ಹಿರಿಯರಲ್ಲಿ ಆದರ ತೋರುವುದು,~~

ಹಿರಿಯರಿಗೆ ತನ್ನನ್ನು ಸಮಾನನೆಂದು ತಿಳಿಯುವುದು,

ಹಿರಿಯರಿಗಿಂತ ತಾನೇ ಮೇಲೆಂದು ತಿಳಿದರೆ ಇನ್ನೇನು ಹೇಳಬೇಕು,

ಹಿರಿಯರ ಕೆಲಸವಾಗಬೇಕಾಗಿರುವಾಗ ತನ್ನನ್ನು ಅಶಕ್ತನೆಂದು ತೋರಿಕೊಂಡು ಸುಮ್ಮನಿರುವುದು,

ಅವರ ಕೆಲಸಕ್ಕೆ ತೊಡಗಿದರೂ ಅಶಕ್ತನಂತೆ ಕೆಲಸ ಮಾಡುವುದು

—ಇವು ಹತ್ತು ಮನೋದೋಷಗಳೆನಿಸುವುವು ಎಂದು ಕರ್ಮತಂತ್ರದಲ್ಲಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಆವಿರ್ಹೋತ್ರ ಮುನಿ ಭಗವಂತನ ಆರಾಧನೆಯ ಕ್ರಮವನ್ನು ತಿಳಿಯಲು ಒಳ್ಳೆಯ ಗುರುವನ್ನು ಹೊಂದಬೇಕು ಎನ್ನುತ್ತಾರೆ—

ಲಬ್ಧ್ವಾಽಽಚಾವ್ಯಗ್ರಮಾಚಾರ್ಯಂ ತೇನ ಸಂದರ್ಶಿತಾಗಮಃ ।
ಮಹಾಪುರುಷಮಭ್ಯರ್ಚೇನ್ಮೂರ್ತ್ಯಾಽಭಿಮತಯಾಽಽತ್ಮನಃ ॥ ೪೯ ॥

ಮೊದಲಿಗೆ, ಅವಸರದ ತೀರ್ಮಾನ ಮಾಡದೆ, ಮತ್ತೆ ಪಶ್ಚಾತ್ತಾಪಕ್ಕೆ ಅವಕಾಶ

ವಿಲ್ಲದಂತೆ, ಚೆನ್ನಾಗಿ ಪರೀಕ್ಷಿಸಿ, ಗುರು ಶಿಷ್ಯನನ್ನು ಶಿಷ್ಯ ಗುರುವನ್ನು ಸ್ವೀಕರಿಸಬೇಕು. ಗುರು ತೋರಿದ ಮಾರ್ಗದಿಂದ ಶಿಷ್ಯ ತನಗಿಷ್ಟವಾದ ಪುರುಷೋತ್ತಮನ ರೂಪವನ್ನು ಆರಾಧಿಸಬೇಕು.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ 'ಲಬ್ಧಾನುಗ್ರಹ ಆಚಾರ್ಯಾತ್' 'ಆಚಾರ್ಯನ ಅನುಗ್ರಹ ಸಂಪಾದಿಸಬೇಕು' ಎಂದು. ಆದರೆ ಅಯೋಗ್ಯನಾದ ಆಚಾರ್ಯನನ್ನು ತಿಳಿಯದೆ ಸ್ವೀಕರಿಸಿ ಸೇವೆ ಮಾಡಿ ಅವನ ಅನುಗ್ರಹಪಡೆದರೂ ಶಿಷ್ಯನಿಗೆ ನರಕವಾಗುತ್ತದೆ. ಅದಕ್ಕೆ ಮೊದಲಿಗೇ ಗುರುವನ್ನು ನಿಧಾನವಾಗಿ ತ್ವರೆಯಿಲ್ಲದೆ ಚೆನ್ನಾಗಿ ಪರೀಕ್ಷಿಸಿ ನೋಡಿ ಯೋಗ್ಯನಾಗಿದ್ದರೆ ಮಾತ್ರ ಸ್ವೀಕರಿಸಬೇಕು. ಅದರಿಂದ ಈ ಪಾಠ ಸರಿಯಲ್ಲ. ಈ ಪಾಠದಲ್ಲಿ ಅತ್ಯಂತ ಆವಶ್ಯಕವಾದ ಆಚಾರ್ಯ ಪರೀಕ್ಷೆಯನ್ನು ಹೇಳದಿರುವುದರಿಂದ ನ್ಯೂನತೆ ಬರುತ್ತದೆ. ಚರಕ ಸಂಹಿತೆ ಎಂಬ ವೈದ್ಯಗ್ರಂಥದಲ್ಲಿ ಕೂಡ (ವಿಮಾನಸ್ಥಾನ ಎಂಟನೇ ಅಧ್ಯಾಯ) ವೈದ್ಯಶಾಸ್ತ್ರಕಲಿಯುವ ವಿದ್ಯಾರ್ಥಿ ಮೊದಲಿಗೆ ಗುರುವನ್ನು ಯಾವ ರೀತಿ ಪರೀಕ್ಷಿಸಬೇಕೆಂದು ಹೇಳಿದ್ದಾರೆ. ~~ವೈದ್ಯಶಾಸ್ತ್ರಾಧ್ಯಯನಕ್ಕೇ ಆಚಾರ್ಯಪರೀಕ್ಷೆ ಆವಶ್ಯಕವಾಗಿರುವಾಗ ಅಧ್ಯಾತ್ಮವಿದ್ಯೆಗೆ~~ ಇನ್ನೇನು ಹೇಳಬೇಕು.

ಇಲ್ಲಿ ಭಾಗವತವು ಶಿಷ್ಯನು ಮಾಡುವ ಆಚಾರ್ಯಪರೀಕ್ಷೆಯನ್ನು ಮಾತ್ರ ಹೇಳಿದೆ. ವಸ್ತುತಃ ಗುರುವೂ ಶಿಷ್ಯನನ್ನು ಪರೀಕ್ಷೆ ಮಾಡಬೇಕಾಗುತ್ತದೆ. ಅಯೋಗ್ಯ ಶಿಷ್ಯನಿಗೆ ಉಪದೇಶ ಮಾಡಿದರೆ ವಿದ್ಯೆಯ ಸಾಮರ್ಥ್ಯ ಕ್ಷೀಣಿಸುವುದು ಮತ್ತು ಗುರುವಿಗೆ ಸ್ವರ್ಗ ಪ್ರಾಪ್ತಿಯಾಗದೆ ಹೋಗುವುದು. ಅದಕ್ಕೆ ಅವನು ನೂರುಬಾರಿ ಮಹಾವ್ರತಸ್ತೋತ್ರ ಎಂಬ ವೇದಭಾಗವನ್ನು ಜಪಿಸಬೇಕಾಗುತ್ತದೆ. ಇಲ್ಲಿ ಆವಿರ್ಹೋತ್ರ ಮುನಿ ಶಿಷ್ಯನಾದ ನಿಮಿರಾಜನಿಗೆ ಉಪದೇಶಿಸುತ್ತಿರುವುದರಿಂದ ಶಿಷ್ಯನ ಕರ್ತವ್ಯವನ್ನು ಮಾತ್ರ ಉಪದೇಶಿಸುತ್ತಿದ್ದಾರೆ. ಗುರುವಿನ ಕರ್ತವ್ಯವೂ ಕರ್ಮತಂತ್ರ ಗ್ರಂಥದಲ್ಲಿದೆ ಎಂದು ಅವರ ಅಭಿಪ್ರಾಯ.

ಇದನ್ನು ಶ್ರೀಮದಾಚಾರ್ಯರು ಸ್ಪಷ್ಟಪಡಿಸುತ್ತಿದ್ದಾರೆ ಮತ್ತು 'ಲಬ್ಧ್ವಾಚಾವ್ಯಗ್ರಮಾಚಾರ್ಯಂ' ಎಂದರೆ ವ್ಯಗ್ರತೆಯಿಲ್ಲದೆ ನಿಧಾನವಾಗಿ ಉಪದೇಶಿಸುವ ಆಚಾರ್ಯನನ್ನು ಹೊಂದಬೇಕು ಎಂದು ತಿಳಿಯುವ ಸಂಭವವಿರುತ್ತದೆ. ಆದರೆ ನಿಧಾನವಾಗಿ ಉಪದೇಶಿಸುವುದೊಂದೇ ಅಲ್ಲ. ಬೇರೆ ವೈಷ್ಣವದೀಕ್ಷೆ ಮುಂತಾದ ಯೋಗ್ಯತೆಯೂ ಮುಖ್ಯವಾಗಿ ಆಚಾರ್ಯನಲ್ಲಿರಬೇಕು. ಅದೆಲ್ಲವನ್ನೂ ನಿಧಾನವಾಗಿ ಚೆನ್ನಾಗಿ ಪರೀಕ್ಷಿಸಿ ಶಿಷ್ಯ ಆಚಾರ್ಯನನ್ನು ಪರಿಗ್ರಹಿಸಬೇಕು. ಅದರಿಂದ ಅವ್ಯಗ್ರ ಎಂದು ಆಚಾರ್ಯನಿಗೆ ವಿಶೇಷಣವಲ್ಲ. ಆಚಾರ್ಯಪರೀಕ್ಷಾ ವಿಧಾನ ಕ್ರಿಯಾಕ್ಕೇ

ವಿಶೇಷಣ ಎಂದು ತಿಳಿಸಲು ಶ್ರೀಮದಾಚಾರ್ಯರು 'ಅವ್ಯಗ್ರತ್ವೇನ ಲಬ್ಧ್ವಾ' ಎಂದು ವ್ಯಾಖ್ಯಾನಿಸಿದ್ದಾರೆ.

ಅವ್ಯಗ್ರತ್ವೇನ ಆಚಾರ್ಯಂ ಲಬ್ಧ್ವಾ।
ಪರೀಕ್ಷ್ಯೈವ ಗುರುಃ ಶಿಷ್ಯಂ ಶಿಷ್ಯೋಽಪಿ ಗುರುಮಾವ್ರಜೇತ್ ।
ಅನ್ಯಥಾ ನರಕಾಯೈವ ಪ್ರಾಯಶ್ಚಿತ್ತಂ ಗುರೋಸ್ತಥಾ ॥
ಇತಿ ಚ ॥

'ಏನೂ ತ್ವರೆಯಿಲ್ಲದೆ ನಿಧಾನವಾಗಿ ಪರೀಕ್ಷಿಸಿ ಆಚಾರ್ಯನನ್ನು ಹೊಂದಿ' ಎಂದು 'ಲಬ್ಧ್ವಾ ಚಾವ್ಯಗ್ರಮಾಚಾರ್ಯಂ' ಎನ್ನುವುದಕ್ಕೆ ಅರ್ಥ.
ಪರೀಕ್ಷೆ ಮಾಡಿಯೇ ಗುರುವು ಶಿಷ್ಯನನ್ನು ಶಿಷ್ಯನೂ ಕೂಡ ಗುರುವನ್ನು ಸ್ವೀಕರಿಸಬೇಕು. ಇಲ್ಲದಿದ್ದರೆ ಶಿಷ್ಯನಿಗೆ ಅದು ನರಕಕ್ಕೇ ಕಾರಣವಾದೀತು. ಗುರುವಿಗೂ ಪ್ರಾಯಶ್ಚಿತ್ತ ಮಾಡಬೇಕಾಗುವ ಪ್ರಸಂಗವಿರುತ್ತದೆ ಎಂದು ಕರ್ಮತಂತ್ರದಲ್ಲಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಆವಿರ್ಹೋತ್ರ ಮುನಿ ಭಗವತ್ಪೂಜೆಗೆ ಪ್ರತೀಕಗಳನ್ನು ಹೇಳುತ್ತಾರೆ.

ಅರ್ಚಾದೌ ಹೃದಯೇ ವಾಽಪಿ ಯಥಾಲಬ್ಧೋಪಚಾರಕೈಃ।
ದ್ರವ್ಯಕ್ಷಿತ್ಯಾತ್ಮಲಿಂಗಾನಿ ನಿಷ್ಪಾದ್ಯ ಪ್ರೋಕ್ಷ್ಯ ಚಾಸನಮ್ ॥ ೫೧ ॥

ಪ್ರತಿಮಾ ಸಾಲಗ್ರಾಮಾದಿಗಳಲ್ಲಾಗಲಿ ಹೃದಯದಲ್ಲಾಗಲಿ ತನಗೆ ಲಭಿಸಿರುವ ಪೂಜಾಸಾಧನಗಳಿಂದ ಹರಿಯನ್ನು ಆರಾಧಿಸಬಹುದು. ಅಂದರೆ ಶಿಲೆ ಮಣ್ಣು ಚಿನ್ನ ಬೆಳ್ಳಿಗಳ ವಿಗ್ರಹದಲ್ಲಾಗಲಿ, ನೆಲದ ಮೇಲೆ ಬರೆದ ಚಕ್ರಾಬ್ಜ ಮಂಡಲದಲ್ಲಾಗಲಿ, ಹೃದಯದಲ್ಲಿ ಮಾಡಿಕೊಳ್ಳುವ ವಾಸನಾಮಯ ಮೂರ್ತಿಯಲ್ಲಾಗಲಿ, ಭಗವಂತ ನನ್ನು ಆರಾಧಿಸಬಹುದು. ಆರಾಧನೆ ಮಾಡಲು ಆಸನವನ್ನು ಪ್ರೋಕ್ಷಿಸಿ ಶುದ್ಧಿಮಾಡ ಬೇಕು.

[1]'ಮೊದಲಿಗೆ ಪುಷ್ಪಾದಿ 'ದ್ರವ್ಯ'ಗಳನ್ನು ಕ್ರಿಮೀಕೀಟಾದಿ ಶೋಧನದಿಂದ, ಪೂಜಾ ಸ್ಥಲವನ್ನು 'ಕ್ಷಿತಿ'ಯನ್ನು ಸಮ್ಮಾರ್ಜನಾದಿಗಳಿಂದ, ತನ್ನ 'ಆತ್ಮ' ಮನಸ್ಸನ್ನು

---

1. ಆದಾವೇವ ದ್ರವ್ಯಾಣಿ ಪುಷ್ಪಾದೀನಿ ಜಂತ್ವಾದಿಶೋಧನೇನ, ಕ್ಷಿತಿಂ ಸಮ್ಮಾರ್ಜನಾದಿನಾ ಆತ್ಮಾನಮವ್ಯಗ್ರತಯಾ ಲಿಂಗಂ ಮೂರ್ತಿಮನುಲೇಪ ಪ್ರಕ್ಷಾಲನಾದಿನಾ ನಿಷ್ಪಾದ್ಯ ಯೋಗ್ಯಾನಿ ಕೃತ್ವಾ। -ಶ್ರೀಧರಃ

ಅವ್ಯಗ್ರತೆಯಿಂದ, 'ಲಿಂಗ' ಮೂರ್ತಿಯನ್ನು ಅನುಲೇಪಪ್ರಕ್ಷಾಲನದಿಂದ ಯೋಗ್ಯವಾಗುವಂತೆ ಸಿದ್ಧಪಡಿಸಿಕೊಳ್ಳಬೇಕು' ಎಂದು ಬೇರೆ ವ್ಯಾಖ್ಯಾನಕಾರರು ವಿವರಣೆ ನೀಡಿದ್ದಾರೆ.

ಆದರೆ 'ದ್ರವ್ಯಕ್ಷಿತ್ಯಾತ್ಮಲಿಂಗ' ಎಂಬ ಶಬ್ದಕ್ಕೆ ಕರ್ಮತಂತ್ರ ಗ್ರಂಥದಲ್ಲಿರುವ ಶಾಸ್ತ್ರಪ್ರಸಿದ್ಧವಾದ ಅರ್ಥವನ್ನು ಬಿಟ್ಟು ಲೋಕಪ್ರಸಿದ್ಧವಾದ ಅರ್ಥವನ್ನು ಹೇಳಿದ್ದಾರೆ. ಭಾಗವತಶಾಸ್ತ್ರದಲ್ಲಿ ಪಂಚರಾತ್ರಶಾಸ್ತ್ರೋಕ್ತ ಭಗವತ್ಪೂಜಾವಿಧಾನವನ್ನು ಹೇಳುವಾಗ ಪಂಚರಾತ್ರಾಂತರ್ಗತವಾದ ಕರ್ಮತಂತ್ರದಲ್ಲಿ ಹೇಳಿರುವ ವಿಧಾನವನ್ನೇ ಹೇಳಬೇಕು. ಅದನ್ನು ಬಿಡಲು ಕಾರಣವಿಲ್ಲ, ಶ್ರೀಮದಾಚಾರ್ಯರು ಅದನ್ನು ತೋರಿಸಿದ್ದಾರೆ. ಪ್ರಕೃತ ಶ್ಲೋಕಕ್ಕೆ ಅದು ಬಹಳ ಸಂಗತವೂ ಆಗಿದೆ.

ಲೋಕಪ್ರಸಿದ್ಧ ಅರ್ಥವನ್ನು ಇಟ್ಟುಕೊಳ್ಳುವುದು ಹೆಚ್ಚು ಸಮಂಜಸವಾಗಿಯೂ ಕಾಣುವುದಿಲ್ಲ. ಪೂಜೆಗೆ ಮೊದಲು, ದ್ರವ್ಯಶುದ್ಧಿ ಸ್ಥಲಶುದ್ಧಿ ಮಾಡುವುದಕ್ಕೂ ~~ಮೊದಲು ಮನಃಶುದ್ಧಿ ಅಂತರಂಗಶುದ್ಧಿ ಮಾಡಿಕೊಳ್ಳಬೇಕು. ಅದಕ್ಕೆ~~ ಸಂಧ್ಯಾವಂದನಾದಿ ಕರ್ಮಮಾಡಬೇಕು. ಇಲ್ಲದಿದ್ದರೆ ಪೂಜಾಧಿಕಾರ ಸಿದ್ಧಿಸುವುದಿಲ್ಲ. ಹೀಗಾಗಿ ದ್ರವ್ಯಕ್ಷಿತಿ ಶುದ್ಧಿಗಳಿಗಿಂತ ಮೊದಲು ಆತ್ಮಶುದ್ಧಿಯನ್ನು ಹೇಳಬೇಕಾಗಿತ್ತು. ಕ್ರಮವಿವಕ್ಷೆ ಮಾಡಿಲ್ಲ ಎನ್ನುವುದು ಬೇರೆ ಗತಿ ಇಲ್ಲದಿದ್ದಾಗ ಸರಿಯಾದೀತು.

ಹಿಂದಿನ ಶ್ಲೋಕದಲ್ಲಿ ಈಗಾಗಲೇ ಅದನ್ನು ವಿವರವಾಗಿ ಹೇಳಿರುವುದರಿಂದ ಈ ಶ್ಲೋಕದಲ್ಲಿ ಪುನಃ ಹೇಳುವುದು ಪುನರುಕ್ತಿಯೂ ಆಗುವುದು.

ದ್ರವ್ಯಲಿಂಗಂ ಶಿಲಾದ್ಯಂ ಸ್ಯಾದ್ ಆತ್ಮಲಿಂಗಂ ಮನೋಮಯಂ ।
ಅಥವಾ ಸ್ಥಂಡಿಲಂ ಚೈವ ವಿಷ್ಣೋರ್ಲಿಂಗಂ ಪ್ರಕೀರ್ತಿತಂ ॥
ಇತಿ ಚ ॥

ದ್ರವ್ಯಲಿಂಗವೆಂದರೆ ಶಿಲೆ ಮಣ್ಣು ಚಿನ್ನ ಬೆಳ್ಳಿ ಮುಂತಾದ ಲೋಹ ರತ್ನವಿಗ್ರಹಗಳು. ಆತ್ಮಲಿಂಗವೆಂದರೆ ಮನಸ್ಸಿನೊಳಗೇ ಮಾಡಿಕೊಳ್ಳುವ ವಾಸನಾಮಯ ಮೂರ್ತಿ. ಕ್ಷಿತಿಲಿಂಗವೆಂದರೆ ನೆಲದ ಮೇಲೆ ಬರೆದ ಚಕ್ರಾಬ್ಜಾದಿಮಂಡಲ ಎಂದೂ ಕರ್ಮತಂತ್ರದಲ್ಲಿ ಉಕ್ತವಾಗಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಆವಿರ್ಹೋತ್ರ ಮುನಿ

ಭಗವಂತನ ಪೂಜೆ ಮಾಡುವವನು ತನ್ನನ್ನು ಹರಿಯ ದಾಸನೆಂದು ನೆನೆಯುತ್ತ ಪೂಜೆಮಾಡಬೇಕು ಎನ್ನುತ್ತಾರೆ.

ಆತ್ಮಾನಂ ತನ್ಮಯಂ ಧ್ಯಾಯನ್ ಮೂರ್ತಿಂ ಸಂಪೂಜಯೇದ್ಧರೇಃ।
ಶೇಷಮಾಧಾಯ ಶಿರಸಿ ಸ್ವಧಾಮ್ನ್ಯುದ್ವಾಸ್ಯ ಸತ್ಕೃತಮ್ ॥ ೫೫ ॥

ತನ್ನನ್ನು ಹರಿದಾಸನೆಂದು ನೆನೆಯುತ್ತ ಹರಿಮೂರ್ತಿಯನ್ನು ಪೂಜಿಸಬೇಕು. ಪೂಜೆಯಾದ ಬಳಿಕ ಹರಿಯನ್ನು ಸ್ವಸ್ಥಾನದಲ್ಲಿ ಹೃದಯದಲ್ಲಿ ಉದ್ವಾಸನ ಮಾಡ ಬೇಕು. ನಿರ್ಮಾಲ್ಯವನ್ನು ಶಿರದಲ್ಲಿ ಧರಿಸಬೇಕು.

[1]'ತನ್ಮಯ'ನೆಂದು ತನ್ನನ್ನು ಚಿಂತಿಸಬೇಕೆಂದರೆ 'ಭಗವಂತನು ತಾನೆಂ'ದು ಉಪಾಸನೆ ಮಾಡಬೇಕೆಂದರ್ಥ ಎಂದು ವಿಶ್ವನಾಥ ವ್ಯಾಖ್ಯಾನವಿದೆ. ಈ ಅಹಂ ಗ್ರಹೋಪಾಸನೆ ನಿಷಿದ್ಧ, ಅನರ್ಥಕರ.

ಶ್ರೀಮದಾಚಾರ್ಯರು ಹೇಳುತ್ತಾರೆ. ತನ್ಮಯ ಎಂದರೆ ಭಗವನ್ಮಯ, ಹರಿದಾಸ ಎಂದರ್ಥ ಎಂದು ಕರ್ಮತಂತ್ರದಲ್ಲಿ ಹೇಳಿದೆ ಎಂದು.

ತನ್ಮಯಂ ತತ್ಪ್ರಧಾನಂ।
ವಿಷ್ಣೋರ್ಭೃತ್ಯೋಽಹಮಿತ್ಯೇವ ಸದಾ ಸ್ಯಾದ್ ಭಗವನ್ಮಯಃ।
ನೈವಾಹಂ ವಿಷ್ಣುರಸ್ಮೀತಿ ವಿಷ್ಣುಃ ಸರ್ವೇಶ್ವರೋ ಹ್ಯಜಃ ॥
ಇತಿ ಚ ॥

'ತನ್ಮಯಂ' ಎಂದರೆ ಉಪಾಸಕನು ತನ್ನನ್ನು ಭಗವನ್ಮಯನೆಂದು, ಅಂದರೆ ಭಗವಂತನ ದಾಸನೆಂದು ಸದಾ ನೆನೆಯುತ್ತಿರಬೇಕೆಂದರ್ಥ.

ಕರ್ಮತಂತ್ರದಲ್ಲಿ ಹೇಳಿದೆ–

'ಹರಿಯ ದಾಸನು ನಾನೆಂದು ಸದಾ ಭಗವನ್ಮಯನಾಗಿರಬೇಕು ಹೊರತು ನಾನು ಭಗವಂತನಾಗಿರುವೆನೆಂದು ತಿಳಿಯಬಾರದು. ಜನನಾದಿ ರಹಿತನಾದ ವಿಷ್ಣು ಎಲ್ಲರಿಗೂ ಪ್ರಭು ಎನ್ನುವುದು ಸಕಲ ಶಾಸ್ತ್ರಗಳಲ್ಲಿ ಪ್ರಸಿದ್ಧ' ಎಂದು.

❖ ❖ ❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಆವಿರ್ಹೋತ್ರ ಮುನಿ ಮುಮುಕ್ಷುವು ಯಜ್ಞೇಶ್ವರನಾದ ಪರಮಾತ್ಮನನ್ನು ಪೂಜಿಸಬೇಕೆನ್ನುತ್ತಾರೆ.

---

1. ತನ್ಮಯಂ ಉಪಾಸ್ಯ ಭಗವದಾಕಾರಮಿತ್ಯಹಂಗ್ರಹೋಪಾಸನೋಕ್ತಾ। -ವಿಶ್ವನಾಥಃ

ಏವಮಗ್ನ್ಯರ್ಕತೋಯಾದಾವರ್ಚಯೇದ್ಧೃದಯೇ ಚ ಯಃ ।
ಯಜ್ಞೇಶ್ವರಂ ಸ್ವಮಾತ್ಮಾನಮಚಿರಾನ್ಮುಚ್ಯತೇ ಹಿ ಸಃ ॥ ೫೬ ॥

ತನ್ನನ್ನು ತನ್ನವನೆಂದು ಸ್ವೀಕರಿಸಿ ಸ್ವತಂತ್ರನಾಗಿ ತನ್ನೊಳಗೆ ವ್ಯಾಪ್ತನಾಗಿರುವ ಯಜ್ಞೇಶ್ವರನನ್ನು ಹೀಗೆ ಅಗ್ನಿ ಸೂರ್ಯ ಜಲಾದಿಗಳಲ್ಲಿಯೂ ಹೃದಯದಲ್ಲಿಯೂ ಆರಾಧಿಸುವವನು ಬೇಗನೆ ಮುಕ್ತಿಯನ್ನು ಪಡೆಯುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ—

ಏವಮಗ್ನ್ಯರ್ಕ ತೋಯಾದಾವತಿಥೌ ಹೃದಯೇ ಚ ಯಃ ।
ಯಜತೀಶ್ವರಮಾತ್ಮಾನಮಚಿರಾನ್ಮುಚ್ಯತೇ ಹಿ ಸಃ ॥

[1]"ಹಿಂದೆ ಹೇಳಿದ ಯಜ್ಞಾದಿ ಕರ್ಮಯೋಗಕ್ಕಿಂತ ಅಹಂಗ್ರಹೋಪಾಸನೆ ಮತ್ತು ಭಕ್ತಿಗಳಿಂದ ಕೂಡಿದ ಈ ತಾಂತ್ರಿಕ ಕರ್ಮಯೋಗ ಶ್ರೇಷ್ಠ. ಆದರೆ 'ಯೇ ವೈ ಭಗವತಾ ಪ್ರೋಕ್ತಾಃ' (2.34) ಎಂದು ಮುಂತಾಗಿಯೂ 'ತತ್ರ ಭಾಗವತಾನ್ ಧರ್ಮಾನ್ ಶಿಕ್ಷೇತ್' (3.23) ಎಂದು ಮುಂತಾಗಿಯೂ ಶುದ್ಧವಾದ ಭಕ್ತಿಯೋಗ ~~ಉಕ್ತವಾಗಿದೆ ಎಂದು ತಿಳಿಯಬೇಕು' ಎಂದು ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ.~~

ವೈದಿಕ ಯಜ್ಞಾದಿಕರ್ಮಯೋಗ ಅಶುದ್ಧವೆಂದೂ ಅದಕ್ಕಿಂತ ಅಹಂಗ್ರಹೋಪಾಸನೆ ಮತ್ತು ಭಕ್ತಿಗಳಿಂದ ಕೂಡಿದ ಪಂಚರಾತ್ರೋಕ್ತವಾದ ಈ ಕರ್ಮಯೋಗ ಶ್ರೇಷ್ಠವೆಂದೂ, ಅದಕ್ಕಿಂತಲೂ ಶ್ರೇಷ್ಠ ಹಿಂದೆ ಹೇಳಿದ ಶುದ್ಧವಾದ ಭಕ್ತಿಯೋಗವೆಂದೂ ಅವರ ಅಭಿಪ್ರಾಯವಿದೆ. ವಸ್ತುತಃ 'ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ । ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ' ಎನ್ನುವಂತೆ ವೇದ ಪಂಚರಾತ್ರ ಭಾಗವತ ಇವು ಮೂರೂ ಸಾತ್ವಿಕ ಶುದ್ಧಭಕ್ತಿ ಶಾಸ್ತ್ರವಾಗಿದೆ. ಅದರಲ್ಲಿ ತಾರತಮ್ಯವೆಣಿಸುವುದು ಸರಿಯಲ್ಲ. ಭಾಗವತದಲ್ಲಿ ಅಹಂಗ್ರಹೋಪಾಸನೆ ತಂತ್ರೋಕ್ತವಾಗಿರುವುದರ ಅನುವಾದ ಎನ್ನುವ ಅಭಿಪ್ರಾಯವೂ ಸರಿಯಲ್ಲ. ಯಜತೀಶ್ವರಮಾತ್ಮಾನಂ ಎಂದರೆ 'ಪರಮಾತ್ಮನನ್ನು ಆತ್ಮರೂಪದಿಂದ ಪೂಜಿಸಬೇಕು' ಎಂದರ್ಥವಲ್ಲ. ಪರಮಾತ್ಮನನ್ನು ಸ್ವಾಮಿಯೆಂದು ಪೂಜಿಸಬೇಕೆಂದೇ ಅರ್ಥ. ಆತ್ಮ ಎಂದರೆ ಸ್ವಾಮಿ. ಅದರಿಂದ ಇದೂ ಶುದ್ಧವಾದ ಭಕ್ತಿಯೋಗವೇ ಆಗಿದೆ. 'ಯಜತೀಶ್ವರಮಾತ್ಮಾನಂ' ಎಂಬ ಪಾಠ ಮಾತ್ರ ಅಪಪಾಠ.

1. ಪೂರ್ವೋಕ್ತಾತ್ ಕರ್ಮಯೋಗಾತ್ ಅಯಮಹಂಗ್ರಹೋಪಾಸನಾಭಕ್ತಿಮಯಸ್ತಾಂತ್ರಿಕಃ ಕರ್ಮಯೋಗಃ ಶ್ರೇಷ್ಠಃ । ಕಿಂತು ಯೇ ವೈ ಭಗವತಾ ಪ್ರೋಕ್ತಾ ಇತ್ಯನಂತರಂ ತತ್ರಭಾಗವತಾನ್ ಧರ್ಮಾನ್ ಶಿಕ್ಷೇದಿತ್ಯನಂತರಂ ಚ ಶುದ್ಧ ಏವ ಭಕ್ತಿಯೋಗಃ ಪ್ರೋಕ್ತೋ ಜ್ಞೇಯಃ । -ವಿಶ್ವನಾಥಃ

ಸ್ವಾದಾನಾತ್ ಸ್ವಾತ್ಮನೋ ವ್ಯಾಪ್ತ್ಯಾ ವಿಷ್ಣುಃ ಸ್ವಾತ್ಮೇತಿ ಕಥ್ಯತೇ ।
ನ ತು ಜೀವಸ್ವರೂಪತ್ವಾತ್ ಸ ಹಿ ಜೀವೇಶ್ವರಃ ಪ್ರಭುಃ ॥
ಇತಿ ಶಬ್ದನಿರ್ಣಯೇ ॥

'ವಿಷ್ಣುವು 'ಸ್ವಾದಾನಾತ್ ಸ್ವಾತ್ಮಾ' ಜೀವನನ್ನು ಆದಾನ ಮಾಡುವುದರಿಂದ, ತನ್ನ ಅಧೀನದಲ್ಲಿಟ್ಟುಕೊಂಡು ರಕ್ಷಿಸುವುದರಿಂದ, ಸ್ವಾತ್ಮಾ ಎನಿಸುತ್ತಾನೆ. ಮತ್ತು 'ಸ್ವಾತ್ಮನೋ ವ್ಯಾಪ್ತ್ಯಾ ಸ್ವಾತ್ಮಾ' ಜೀವನನ್ನು ಅವನು ಅಂತರ್ಯಾಮಿಯಾಗಿ ವ್ಯಾಪಿಸುವುದರಿಂದಲೂ ಸ್ವಾತ್ಮಾ ಎನಿಸುತ್ತಾನೆ, ಹೊರತು ಜೀವಸ್ವರೂಪನಾಗಿರುವುದರಿಂದ ಅಲ್ಲ. ಏಕೆಂದರೆ ಅವನು ಸರ್ವಶಕ್ತ, ಜೀವರನ್ನು ಆಳುವವನು' ಎಂದು ಶಬ್ದನಿರ್ಣಯದಲ್ಲಿದೆ.

'ಸ್ವಾತ್ಮನಃ' ಎಂಬುದು ಕರ್ಮಾರ್ಥದಲ್ಲಿ ಷಷ್ಠೀ ವಿಭಕ್ತಿ. ಜೀವಕರ್ಮಕ ವ್ಯಾಪ್ತಿ ಜೀವನನ್ನು ಅಂತರ್ಯಾಮಿಯಾಗಿ ವ್ಯಾಪಿಸಿದ್ದಾನೆ ಹರಿ ಎಂದರ್ಥ. ಅದರಿಂದ ಭಾಗವತದಲ್ಲಿಯೂ 'ಸ್ವಂ ಆತ್ಮಾನಂ' ಎಂದರೆ 'ಸ್ವಂ' ಉಪಾಸಕನಾದ ಜೀವನನ್ನು 'ಆತ್ಮಾನಂ' ತನ್ನವನೆಂದು ಸ್ವೀಕರಿಸುತ್ತಾನೆ, ಅವನಲ್ಲಿ ವ್ಯಾಪಿಸುತ್ತಾನೆ ಎಂದರ್ಥ. ಕರ್ಮಾರ್ಥದಲ್ಲಿ ದ್ವಿತೀಯಾವಿಭಕ್ತಿಯೇ ಇದೆ. ಷಷ್ಠಿ ಬಂದಿಲ್ಲ. ಅದು ಜೀವನು ರಕ್ಷಣೆಗೂ ವ್ಯಾಪ್ತಿಗೂ ಕರ್ಮ ಎಂದು ಸ್ಪಷ್ಟವಾಗಿ ತಿಳಿಸುವುದಕ್ಕಾಗಿ.

'ಸ್ವಾತಂತ್ರ್ಯಾತ್ ಸ್ವಾತ್ಮನೋ ವ್ಯಾಪ್ತ್ಯಾ' ಎಂದು ಇನ್ನೊಂದು ಪಾಠವಿದೆ. ಈ ಪಾಠದಲ್ಲಿ ಸ್ವಾತಂತ್ರ್ಯಗುಣನಿಮಿತ್ತವಾಗಿ 'ಸ್ವ' ಎನಿಸುತ್ತಾನೆ, ಸ್ವಾತ್ಮನಲ್ಲಿ, ತನ್ನಲ್ಲಿ ತಾನು ವ್ಯಾಪ್ತನಾದ್ದರಿಂದ 'ಆತ್ಮ' ಎನಿಸುತ್ತಾನೆ. ಹೀಗೆ ಸ್ವ ಎಂದೂ ಆತ್ಮಾ ಎಂದೂ ಕರೆಸಿಕೊಳ್ಳುವುದರಿಂದ ಭಾಗವತದಲ್ಲಿ 'ಸ್ವಂ ಆತ್ಮಾನಂ' ಎಂದಿದೆ. ಸ್ವಾತ್ಮನಲ್ಲಿ ಅಂದರೆ ತನ್ನಲ್ಲಿ ತಾನು ವ್ಯಾಪಿಸುವುದು ಹರಿಯ ಅಚಿಂತ್ಯಶಕ್ತಿ.

ಈ ಅಚಿಂತ್ಯ ಶಕ್ತಿ ಆಕಾಶಾದಿಗಳಲ್ಲಿ ಇಲ್ಲ. ಅದರಿಂದ ಅವು ವ್ಯಾಪಿಸಿದ್ದರೂ ಆತ್ಮ ಎನಿಸುವುದಿಲ್ಲ. 'ವಿಷ್ಣುಃ ಸ್ವಾತ್ಮೇತಿ ಕಥ್ಯತೇ' ಎಂದರೆ ವಿಷ್ಣು ಸ್ವ ಎಂದೂ ಆತ್ಮ ಎಂದೂ ಕರೆಸಿಕೊಳ್ಳುತ್ತಾನೆ ಎಂದು ಈ ಎರಡನೇ ಪಾಠದಲ್ಲಿ ಅರ್ಥ. ಮೊದಲನೇ ಪಾಠದಲ್ಲಿ 'ಸ್ವ' ಎಂದರೆ ಉಪಾಸಕನಾದ ಜೀವ, ಅವನನ್ನು ಆದಾನ ಮಾಡುವುದರಿಂದಲೂ ವ್ಯಾಪಿಸುವುದರಿಂದಲೂ 'ಸ್ವಾತ್ಮ' ಎನಿಸುತ್ತಾನೆ ಎಂದರ್ಥ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್ ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ತೃತೀಯೋऽಧ್ಯಾಯಃ ॥

❖❖❖

ಅಧ್ಯಾಯ—೪

ಅಧ್ಯಾಯ ಸಾರಾಂಶ

ಮುಂದೆ **ದ್ರುಮಿಲ** ಮಹಾಮುನಿಯ ಉಪದೇಶ—

'ಅನಂತನ ಗುಣ ಕರ್ಮ ಅವತಾರಗಳೆಲ್ಲವೂ ಅನಂತವೆ. ಅವನ್ನು ಪೂರ್ತಿ ಎಣಿಸಿ ಹೇಳಲು ಹೊರಡುವವನು ಬುದ್ಧಿ ಇಲ್ಲದ ಬಾಲಕನೆ ಸರಿ. ನೆಲದ ಮೇಲಿನ ದೂಳಿನ ಕಣಗಳನ್ನು ಯಾರಿಂದಲೂ ಎಣಿಸಲಾಗದು. ಹಾಗೇ ಹರಿಯ ಅವತಾರಗಳನ್ನೂ ಎಣಿಸಲಾಗದು.

ಶ್ರೀಹರಿ ಮೊದಲಿಗೆ ಮಹದಾದಿ ಸೃಷ್ಟಿಗಾಗಿ ಪುರುಷಾವತಾರ ತಾಳಿದ. ಬ್ರಹ್ಮಾಂಡವನ್ನು ಸೃಜಿಸಿ ಅದರೊಳಗೆ ಪ್ರವೇಶಿಸಲು ಇನ್ನೊಂದು ಪುರುಷಾವತಾರ ತಾಳಿದ. ಬಳಿಕ ಜೀವಶರೀರಗಳೊಳಗೆ ಪ್ರವೇಶಿಸಲು ಬೇರೆ ಪುರುಷಾವತಾರಗಳನ್ನೂ ತಾಳಿದ. ಶರೀರದಲ್ಲಿ ಹೃದಯದಲ್ಲಿ ನೆಲೆಸಿದ ಪುರುಷರೂಪನಾದ ಹರಿಯ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಂದಲೇ ಜೀವಶರೀರದ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಪ್ರೇರಣೆ.

ಸೃಷ್ಟಿಕಾರ್ಯಕ್ಕಾಗಿ ರಜೋಗುಣದಿಂದ ಬ್ರಹ್ಮನನ್ನು ಹುಟ್ಟಿಸಿ ಬ್ರಹ್ಮಾಂತರ್ಯಾಮಿಯಾಗಲು ಬ್ರಹ್ಮಾವತಾರ ತಾಳಿದ. ಲಯ ಕಾರ್ಯಕ್ಕಾಗಿ ತಮೋಗುಣದಿಂದ ರುದ್ರನನ್ನು ಹುಟ್ಟಿಸಿ ರುದ್ರಾಂತರ್ಯಾಮಿಯಾಗಲು ರುದ್ರಾವತಾರ ತಾಳಿದ. ಸ್ಥಿತಿ ಕಾರ್ಯಕ್ಕಾಗಿ ವರ್ಣಾಶ್ರಮ ಧರ್ಮರಕ್ಷಕನಾಗಲು ವಿಷ್ಣು ಎಂಬ ಅವತಾರವನ್ನು ತಳೆದ.

ಧರ್ಮಪ್ರಜಾಪತಿಯಿಂದ ದಕ್ಷಪ್ರಜಾಪತಿಯ ಮಗಳಾದ ಮೂರ್ತಿ ದೇವಿಯಲ್ಲಿ ನರ ಮತ್ತು ನಾರಾಯಣ ಎಂಬ ರೂಪಗಳಿಂದ ಅವತರಿಸಿದ. ಕರ್ಮಯೋಗವನ್ನು ಲೋಕಕ್ಕೆ ಬೋಧಿಸಿ ಅನುಷ್ಠಾನದಲ್ಲಿಯೂ ತೋರಿಸಿದ. ಇಂದಿಗೂ ಲೋಕಾನುಗ್ರಹಕ್ಕಾಗಿ ಬದರಿಕಾಶ್ರಮದಲ್ಲಿ ತಪಗೈಯುತ್ತ ಮಹಾಮಹಾಮುನಿಗಳಿಂದ ಪಾದಸೇವೆ ಕೈಗೊಳ್ಳುತ್ತಿದ್ದಾನೆ. ಅವನ ತಪಸ್ಸನ್ನು ಕಂಡು ಇಂದ್ರನಿಗೆ ಭಯವಾಯಿತು. ತಪಸ್ಸಿನಿಂದ ತನ್ನ ಸ್ವರ್ಗಸಾಮ್ರಾಜ್ಯವನ್ನು

ಅಪಹರಿಸುವನೋ ಎಂದು. ಅದಕ್ಕೆ ತಪೋವಿಘ್ನ ಮಾಡೆಂದು ಮನ್ಮಥನನ್ನು ಕಳಿಸಿದ.

ಮನ್ಮಥನೂ ಮುನಿಯ ಮಹಿಮೆಯನ್ನರಿಯದೆ ಅಪ್ಸರೆಯರೊಂದಿಗೆ ವಸಂತ ಮಂದಮಾರುತಗಳೊಂದಿಗೆ ಆಶ್ರಮಕ್ಕೆ ಬಂದು ಸ್ತ್ರೀಯರ ಕಡೆಗಣ್ಣ ನೋಟಗಳಿಂದಲೂ ಹೂಬಾಣಗಳಿಂದಲೂ ಮುನಿಯ ಎದೆಗೆ ಹೊಡೆದ. ಆದಿದೇವನೊಂದಿಷ್ಟೂ ಚಕಿತನಾಗದೆ ನಕ್ಕುಬಿಟ್ಟ. ಅದಕ್ಕೆ ಮನ್ಮಥ ಭಯದಿಂದ ನಡುಗಿಹೋದ. ಮುನಿ ನುಡಿದ, 'ಭಯಪಡಬೇಡಿರಿ, ನಮ್ಮ ಅತಿಥಿಸತ್ಕಾರವನ್ನು ಸ್ವೀಕರಿಸಿರಿ.' ದೇವತೆಗಳು ನಾಚಿ ತಲೆತಗ್ಗಿಸಿ ನಿಂತು ಸ್ತುತಿಸಿದರು—

'ಪ್ರಭು, ನಿನ್ನ ಪಾದಗಳಿಗೆ ಮಣಿವವರೇ ಸದಾ ಸ್ವರೂಪಾನಂದ ತೃಪ್ತರಾಗಿದ್ದು ನಮ್ಮ ಆಕ್ರಮಣಕ್ಕೆ ಸೊಪ್ಪುಹಾಕದೆ ಧೈರ್ಯದಿಂದ ಸ್ಥಿರವಾಗಿ ನಿಲ್ಲುತ್ತಾರೆ ಎಂದ ಮೇಲೆ ನಿನ್ನ ಬಗ್ಗೆ ಏನು ಹೇಳಬೇಕು? ಯದ್ಯಪಿ ನಾವು ನಿನ್ನ ಪೂಜೆಗೆ ವಿಘ್ನ ಮಾಡಿದೆವೆಂದರೆ ಯಾರೂ ಸ್ವಶಕ್ತಿಯಿಂದ ಅದನ್ನು ದಾಟಲಾರರು. ಆದರೂ ಯಜ್ಞರಕ್ಷಕನಾದ ನೀನು ಒಲಿದು ಅವರ ವಿಘ್ನಗಳನ್ನು ಮೆಟ್ಟಿ ಪೂಜೆಯನ್ನು ನೆರವೇರಿಸಿಕೊಳ್ಳುವಿ. ಇಲ್ಲದಿದ್ದರೆ ಆ ಪೂಜೆ ನಿಂತು ಹೋದೀತು, ಇಲ್ಲವೆ ಅಸುರರ ಪಾಲಾದೀತು. ಏಕೆಂದರೆ ನಿನ್ನೊಲಿಮೆ ಇಲ್ಲದೇ ಹೋದರೆ, ಹಸಿವು ಬಾಯಾರಿಕೆ ಇಂದ್ರಿಯ ಚಾಪಲ್ಯ ಮುಂತಾದುವನ್ನು ಕಷ್ಟದಿಂದ ತಡೆದುಕೊಂಡು ಕಠಿಣ ತಪಸ್ಸು ಮಾಡಿಯೂ ಕೂಡ ಕೇವಲ ಕ್ಷುದ್ರಕೋಪಕ್ಕೆ ವಶರಾಗಿ ಎಲ್ಲ ತಪಸ್ಸನ್ನೂ ಕಳೆದುಕೊಳ್ಳುತ್ತಾರೆ. ನೀನು ಕೋಪವನ್ನು ಲೀಲೆಯಿಂದಲೇ ಗೆದ್ದು ನಗುತ್ತಿರುವೆ.'

ದೇವತೆಗಳು ಹೀಗೆ ಸ್ತುತಿಸಿದಾಗ ಭಗವಂತ ತನ್ನ ಶುಶ್ರೂಷೆ ಮಾಡುತ್ತಿದ್ದ ಸ್ತ್ರೀಯರಲ್ಲಿ ಒಬ್ಬಳಾದ ಉರ್ವಶಿ ಎಂಬ ಅಪ್ಸರೆಯನ್ನು ಕೊಟ್ಟು ಅವರನ್ನು ಅನುಗ್ರಹಿಸಿದ. ಅವಳನ್ನು ಮುಂದೆ ಮಾಡಿಕೊಂಡು ದೇವತೆಗಳು ಸ್ವರ್ಗಕ್ಕೆ ಹಿಂತಿರುಗಿದರು. ದೇವೇಂದ್ರ ಎಲ್ಲವನ್ನೂ ತಿಳಿದು ಅಚ್ಚರಿಗೊಂಡ.

ಶ್ರೀಹರಿ ಇದೇರೀತಿ ಹಂಸ ದತ್ತ ಕುಮಾರ ಋಷಭ ಹಯಗ್ರೀವ

ಮತ್ಸ್ಯ ಕೂರ್ಮ ವರಾಹ ತಾಪಸ ಮುಂತಾದ ಅದ್ಭುತ ಅವತಾರಗಳನ್ನು ತಳೆದ. ಮುನಿಗಳ ಪ್ರಾರ್ಥನೆಯಂತೆ ವ್ಯಾಸಾವತಾರ ಮಾಡಿ ಅವರನ್ನು ಕರ್ಮಬಂಧನದಿಂದ ಬಿಡಿಸಿದ. ದೇವೇಂದ್ರನ ಬ್ರಹ್ಮಹತ್ಯೆಯನ್ನು ನರಸಿಂಹ ಸ್ಮರಣಮಾತ್ರದಿಂದಲೇ ಪರಿಹರಿಸಿದ. ಹಿರಣ್ಯಕಶಿಪುವಿನ ಮನೆಯಲ್ಲಿ ಬಂಧಿತರಾಗಿದ್ದ ಅಪ್ಸರೆಯರನ್ನು ನರಸಿಂಹನೇ ಮುಕ್ತಗೊಳಿಸಿದ, ಹಿರಣ್ಯಕನನ್ನೂ ಅವನೇ ಕೊಂದ.

ಉಪೇಂದ್ರಾವತಾರ ಮಾಡಿ ಪ್ರತಿ ಮನ್ವಂತರದಲ್ಲಿ ದೇವಾಸುರ ಯುದ್ಧದಲ್ಲಿ ಭಾಗವಹಿಸಿ ದೇವತೆಗಳಿಗಾಗಿ ಅಸುರರನ್ನು ಸಂಹರಿಸಿದ. ವಾಮನನಾಗಿ ಬಲಿಯಿಂದ ಭೂಮಿಯನ್ನು ಕಸಿದು ದೇವತೆಗಳಿಗಿತ್ತ. ಪರಶುರಾಮನಾಗಿ ಕಾರ್ತವೀರ್ಯನ ವಂಶವನ್ನು ನಾಶಮಾಡಿ ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆಗೈದು ದುಷ್ಟಕ್ಷತ್ರಿಯರನ್ನು ಸಂಹರಿಸಿದ. ಶ್ರೀರಾಮನಾಗಿ ಅವತರಿಸಿ ಲಂಕೆಯನ್ನು ಗೆದ್ದ. ಸಮುದ್ರಕ್ಕೆ ಸೇತುವೆ ಕಟ್ಟಿ ರಾವಣನನ್ನು ಸಂಹರಿಸಿದ.

ಮುಂದೆ ಶ್ರೀಕೃಷ್ಣನಾಗಿ ಅವತರಿಸಿ ಭೂಭಾರವನ್ನು ಕಳೆಯುವನು. ಬುದ್ಧನಾಗಿ, ಯಜ್ಞಮಾಡಲು ಅಯೋಗ್ಯರಾದ ಅಸುರರನ್ನು ಬೌದ್ಧವಾದಗಳಿಂದ ಮೋಹಗೊಳಿಸುವನು. ಕಲಿಯುಗದ ಕೊನೆಯಲ್ಲಿ ಕಲ್ಕಿಯಾಗಿ ಶೂದ್ರರಾಜರನ್ನು ಸಂಹರಿಸುವನು. ಹೀಗೇ ಅನಂತ ಅವತಾರಗಳಿಂದ ಅಪಾರಕೀರ್ತಿಯನ್ನು ಹಬ್ಬಿಸುವನು.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ದ್ರುಮಿಲ ಮುನಿ ಪರಮಾತ್ಮನ ಪುರುಷಾವತಾರಗಳನ್ನು ವರ್ಣಿಸುತ್ತಾರೆ.

ಭೂತೈರ್ಯದಾ ಪಂಚಭಿರಾತ್ಮಸೃಷ್ಟೈಃ
ಪುರಂ ವಿರಾಜಂ ವಿರಚಯ್ಯ ತಸ್ಮಿನ್ ।
ಸ್ವಾಂಶೇನ ವಿಷ್ಟಃ ಪುರುಷಾಭಿಧಾನ-
ಮವಾಪ ನಾರಾಯಣ ಆದಿದೇವಃ ॥ ૩ ॥

ಆದಿದೇವನಾದ ನಾರಾಯಣ ಮೊದಲಿಗೆ ವಿರಾಜಮಾನ: ಪುರವೆನಿಸಿದ ಮಹದಹಂಕಾರ ಭೂತಗಳನ್ನು ಸೃಷ್ಟಿ ಮಾಡುವಾಗ ಪುರುಷ ನಾಮಕನೆನಿಸಿದ. ಬಳಿಕ ಆ

ಮಹದಾದಿಗಳಿಂದ ವಿರಾಜಮಾನ ಬ್ರಹ್ಮಾಂಡವೆಂಬ ಪುರನಿರ್ಮಾಣ ಮಾಡಿ ಅದರೊಳಗೆ ಅಂಶದಿಂದ ಪ್ರವೇಶಿಸುವಾಗ ಇನ್ನೊಮ್ಮೆ ಪುರುಷನಾಮಕನಾದ. ಬ್ರಹ್ಮಾಂಡದೊಳಗೆ ಜೀವಶರೀರವೆಂಬ ಪುರನಿರ್ಮಾಣಮಾಡಿ ಅದರೊಳಗೆ ನಿಯಾಮಕನಾಗಿ ಪ್ರವೇಶಿಸುವಾಗ ಮತ್ತೆ ಪುರುಷನಾಮಕನಾದ. ಹೀಗೆ ಮೊದಲಿಗೆ ಪುರುಷರೂಪತ್ರಯನೆನಿಸಿದ.

ಇಲ್ಲಿ ಶ್ರೀಹರಿ ಬ್ರಹ್ಮಾಂಡ ಸೃಷ್ಟಿಮಾಡಿ ಅದರೊಳಗೆ ಪ್ರವೇಶಿಸಿದಾಗ ಪುರುಷನೆನಿಸಿದನೆಂದು ಒಂದೇ ಪುರುಷಾವತಾರ ಕಾಣುತ್ತದೆ. ಬೇರೆ ವ್ಯಾಖ್ಯಾನ ಕಾರರು ಹಾಗೇ ಗ್ರಹಿಸಿದ್ದಾರೆ. ವಸ್ತುತಃ ಬ್ರಹ್ಮಾಂಡ ಸೃಷ್ಟಿಮಾಡುವಾಗ ಒಮ್ಮೆ, ಸೃಷ್ಟಿ ಮಾಡಿದ ಬಳಿಕ ಒಳಗೆ ಪ್ರವೇಶಿಸಿದಾಗ ಇನ್ನೊಮ್ಮೆ ಪುರುಷಾವತಾರ ಮಾಡಿದ್ದಾನೆ. ವಿರಾಜಮಾನಪುರವೆಂದರೆ ಬ್ರಹ್ಮಾಂಡ ಮಾತ್ರವಲ್ಲ, ಬ್ರಹ್ಮಾಂಡದೊಳಗೆ ಕೂಡ ಜೀವ ಶರೀರಗಳೆಂಬ ವಿರಾಜಮಾನಪುರಗಳಿವೆ. ಅವುಗಳಲ್ಲಿ ಪ್ರವೇಶ ಮಾಡಿದಾಗಲೂ ಪುರುಷನೆನಿಸಿದ್ದಾನೆ ಎಂದು ಮಾಹಾತ್ಮ್ಯ ಎಂಬ ಗ್ರಂಥದಿಂದ ತಿಳಿದು ಬರುತ್ತದೆ. ಈ ಮೂರು ಪುರುಷಾವತಾರಗಳನ್ನೂ ಮುಮುಕ್ಷುಗಳು ತಿಳಿಯಬೇಕೆಂದೂ ಅಲ್ಲಿ ಹೇಳಿದೆ.

ವಿಷ್ಣೋಸ್ತು ಪುರುಷಾಖ್ಯಾನಿ ತ್ರೀಣಿ ರೂಪಾಣ್ಯಥೋ ವಿದುಃ ।
ಪ್ರಥಮಂ ಮಹತಃ ಸ್ರಷ್ಟೃ ದ್ವಿತೀಯಂ ತ್ವಂಡ ಸಂಸ್ಥಿತಂ ।
ತೃತೀಯಂ ದೇಹಿನಾಂ ದೇಹೇ ತಾನಿ ಜ್ಞಾತ್ವಾ ವಿಮುಚ್ಯತೇ ॥
ಇತಿ ಮಾಹಾತ್ಮ್ಯೇ ॥

ವಿಷ್ಣುವಿನ ಪುರುಷನಾಮಕ ರೂಪಗಳು ಮೂರೆಂದು ಜ್ಞಾನಿಗಳು ತಿಳಿಯುತ್ತಾರೆ. ಮೊದಲನೆಯದು ಮಹತ್ತತ್ತ್ವವನ್ನು ಸೃಜಿಸಿದ ಪುರುಷರೂಪ. ಎರಡನೆಯದು ಬ್ರಹ್ಮಾಂಡವನ್ನು ಪ್ರವೇಶಿಸಿರುವ ರೂಪ. ಮೂರನೆಯದು ದೇಹಿಗಳ ದೇಹದಲ್ಲಿರುವ ರೂಪ. ಇವುಗಳನ್ನು ತಿಳಿದರೆ ಮುಕ್ತನಾಗುತ್ತಾನೆ ಎಂದು ಮಾಹಾತ್ಮ್ಯದಲ್ಲಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ದ್ರುಮಿಲ ಮಹಾಮುನಿ ಪುರುಷರೂಪಿ ಹರಿ ಹೇಗೆ ಮೂಲೋಕವನ್ನು ಧರಿಸುತ್ತಾನೆ ಎನ್ನುವುದನ್ನು ವರ್ಣಿಸುತ್ತಾರೆ.

ಯತ್ಕಾಯ ಏಷ ಭುವನತ್ರಯಸನ್ನಿವೇಶೋ
ಯಸ್ಯೇಂದ್ರಿಯೈಸ್ತನುಭೃತಾಮುಭಯೇಂದ್ರಿಯಾಣಿ।
ಜ್ಞಾನಾಂಶಕೇನ ವಿಶತಾ ಬಲಮೋಜ ಈಹಾ
ಸತ್ವಾದಿಭಿಃ ಸ್ಥಿತಿಲಯೋದ್ಭವ ಆದಿಕರ್ತಾ ॥ ೪ ॥

ಶ್ರೀಹರಿಯ ಬ್ರಹ್ಮಾಂಡಾಂತರ್ಗತ ಪುರುಷರೂಪದ ಅವಯವಗಳಲ್ಲಿಯೇ ಮೂಲೋಕಗಳು ಆಧರಿಸಿ ನಿಂತಿವೆ. ಜೀವರ ಹೃದಯದಲ್ಲಿರುವ ಪುರುಷರೂಪದ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಂದಲೇ ಜೀವರ ಜ್ಞಾನಕರ್ಮೇಂದ್ರಿಯಗಳಿಗೆ ಪ್ರೇರಣೆ. ಪುರುಷನು ಜ್ಞಾನರೂಪದಿಂದ ಜೀವರ ಇಂದ್ರಿಯಗಳಲ್ಲಿರುವುದರಿಂದ ಆಯಾ ಇಂದ್ರಿಯಗಳಿಂದ ಶ್ರವಣಾದಿ ಜ್ಞಾನ ಮಾತ್ರವಲ್ಲದೆ ಬಲ ಓಜಸ್ಸು ಪ್ರವೃತ್ತಿಗಳೂ ಉಂಟಾಗುವುವು. ಸತ್ವಾದಿಗುಣಗಳ ಮೂಲಕ ಸ್ಥಿತಿ ಉತ್ಪತ್ತಿಲಯಗಳನ್ನು ನಡೆಸುವುದರಿಂದ ಅವನೆ ಆದಿಕರ್ತ.

ಈ ಶ್ಲೋಕದಲ್ಲಿ 'ಯತ್ಕಾಯಃ' ಎಂದು ಪದವಿಭಾಗ ಮಾಡಿ ಮೂಲೋಕವು ~~ಪರಮಾತ್ಮನ ಶರೀರವಾಗಿದೆ ಎಂದು ತಿಳಿಯುವ ಸಂಭವವಿದೆ. ವೀರರಾಘವ~~ ವ್ಯಾಖ್ಯಾನ ಹಾಗೇ ಗ್ರಹಿಸಿದೆ. ವಸ್ತುತಃ ಮೂಲೋಕ ಪರಮಾತ್ಮನಿಗಿಂತ ಭಿನ್ನವಾಗಿದ್ದು ಪರಮಾತ್ಮನ ಶರೀರದಲ್ಲಿ ಆಶ್ರಯ ಪಡೆದಿದೆ. ಅದರಿಂದ 'ಯತ್ಕಾಯೇ' ಎಂದು ಪದವಿಭಾಗವೆ ಯುಕ್ತ.

'ಯತ್ಕಾಯೇ'

'ಯತ್‌ಕಾಯ ಏಷಃ' ಎಂಬಲ್ಲಿ 'ಯತ್‌ಕಾಯೇ ಏಷಃ' ಎಂದು ಪದವಿಭಾಗ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ದ್ರುಮಿಲ ಮುನಿ ಪರಮಾತ್ಮನ ಬ್ರಹ್ಮ ವಿಷ್ಣು ರುದ್ರ ರೂಪಗಳನ್ನು ಹೇಳುತ್ತಾರೆ—

ಆದಾವಭೂಚ್ಛತಧೃತೀ ರಜಸಾಽಸ್ಯ ಸರ್ಗೇ
ವಿಷ್ಣುಃ ಸ್ಥಿತೌ ಕ್ರತುಪತಿರ್ದ್ವಿಜಧರ್ಮಸೇತುಃ।
ರುದ್ರೋಽಪ್ಯಯಾಯ ತಮಸಾ ಪುರುಷಃ ಸ ಆದ್ಯ
ಇತ್ಯುದ್ಭವಸ್ಥಿತಿಲಯಾಃ ಸತತಂ ಪ್ರಜಾಸು ॥ ೫ ॥

ಜಗತ್ತಿನ ಸೃಷ್ಟಿಗಾಗಿ ರಜೋಗುಣದಿಂದ ಬ್ರಹ್ಮನನ್ನೂ ಲಯಕ್ಕಾಗಿ ತಮೋಗುಣ ದಿಂದ ರುದ್ರನನ್ನೂ ಸೃಜಿಸಿದ ಶ್ರೀಹರಿ ಬ್ರಹ್ಮಾಂತರ್ಯಾಮಿಯಾಗಿ ಬ್ರಹ್ಮನೆನಿಸಿದ.

ರುದ್ರಾಂತರ್ಯಾಮಿಯಾಗಿ ರುದ್ರನೆನಿಸಿದ. ಸ್ಥಿತಿಗಾಗಿ ಯಜ್ಞಪತಿಯು ಬ್ರಾಹ್ಮಣರ ಮತ್ತು ವರ್ಣಾಶ್ರಮ ಧರ್ಮಗಳ ರಕ್ಷಕನಾಗಿ ವಿಷ್ಣು ಎಂದೆನಿಸಿದ. ಅದರಿಂದ ಆದಿಪುರುಷನಾದ ಹರಿಯೊಬ್ಬನೆ ಮೂರು ರೂಪಗಳಿಂದ ಮೂರು ಕಾರ್ಯಗಳನ್ನು ನಡೆಸುತ್ತ ಪುರುಷನಾಮಕನೂ ಆದ. ಕಾಲಕಾಲಕ್ಕೆ ಮೂರು ಕಾರ್ಯಗಳನ್ನು ಒಬ್ಬನೇ ಹೀಗೆ ನಡೆಸುತ್ತಿದ್ದಾನೆ.

ಪರಮಾತ್ಮ ರಜೋಗುಣಾತ್ಮಕ ಶರೀರದಿಂದ ಬ್ರಹ್ಮನಾಗಿ ಸೃಷ್ಟಿಕಾರ್ಯಕ್ಕಾಗಿ ಜನಿಸಿದ, ತಮೋಗುಣಾತ್ಮಕ ಶರೀರದಿಂದ ರುದ್ರನಾಗಿ ಲಯಕಾರ್ಯಕ್ಕಾಗಿ ಜನಿಸಿದ, ಸತ್ವಗುಣಾತ್ಮಕ ಶರೀರದಿಂದ ವಿಷ್ಣುವಾಗಿ ಸ್ಥಿತಿಕಾರ್ಯಕ್ಕಾಗಿ ಜನಿಸಿದ ಎಂದು ಶ್ಲೋಕದಲ್ಲಿ ಹೇಳಿದಂತೆ ಕಾಣುತ್ತದೆ. ಹಾಗೇ ಶ್ರೀಧರಸ್ವಾಮಿ ವ್ಯಾಖ್ಯಾನ ಒಪ್ಪುತ್ತದೆ. ಆದರೆ ಪರಮಾತ್ಮನು ಬ್ರಹ್ಮ-ರುದ್ರರಲ್ಲಿ ಬ್ರಹ್ಮ-ರುದ್ರ ರೂಪದಿಂದ ಅಂತರ್ಯಾಮಿಯಾಗಿದ್ದಾನೆ ಹೊರತು, ಬ್ರಹ್ಮರುದ್ರರು ಜೀವರು, ಅವರ ಅಭೇದ ಪರಮಾತ್ಮನಿಗಿಲ್ಲ.

[1]ರಜೋಗುಣಾತ್ಮಕ ಶರೀರದಿಂದ ಬ್ರಹ್ಮನಂತೆ ಮತ್ತು ತಮೋಗುಣಾತ್ಮಕ ~~ಶರೀರದಿಂದ ರುದ್ರನಂತೆ ಸತ್ವಗುಣಾತ್ಮಕ ಶರೀರದಿಂದ ವಿಷ್ಣು ಜನಿಸಿದನೆಂದು~~ ವೀರರಾಘವ ವ್ಯಾಖ್ಯಾನ ಹೇಳುತ್ತದೆ. ಆದರೆ ವಿಷ್ಣುವಿಗೆ ಚಿನ್ಮಯವಾದ ಸ್ವರೂಪ ಶರೀರವಿದೆ ಹೊರತು ಬೇರೆ ಜಡಶರೀರವಿಲ್ಲ. ಮತ್ತು ಭಾಗವತ ರಜಸಾ ತಮಸಾ ಎಂದು ಹೇಳಿದಂತೆ ಸತ್ವೇನ ಎಂದು ಹೇಳಿಲ್ಲ. ಹೇಳದಿದ್ದರೂ ಅಧ್ಯಾಹಾರ ಮಾಡಿ ಇಟ್ಟುಕೊಳ್ಳಬೇಕೆನ್ನುತ್ತಿದೆ ವೀರರಾಘವ ವ್ಯಾಖ್ಯಾನ. ಅದು ಸರಿಯಲ್ಲ.

ಹಾಗಾದರೆ ಭಾಗವತ ಸತ್ವೇನ ಎಂದು ಏಕೆ ಹೇಳಲಿಲ್ಲ? ಎಂದರೆ ಸತ್ವಗುಣಾತ್ಮಕ ಶರೀರ ವಿಷ್ಣುವಿಗೆ ಇಲ್ಲದ್ದರಿಂದ ಎಂದು ಉತ್ತರ. ಹಾಗಾದರೆ ವಿಷ್ಣು ಸ್ಥಿತಿಕಾರ್ಯವನ್ನು ಹೇಗೆ ಮಾಡುತ್ತಾನೆ? ಸ್ಥಿತಿಕಾರ್ಯಕ್ಕೆ ಸತ್ವಗುಣ ಬೇಕು ತಾನೆ? ಎಂದರೆ, ನಿಜ, ಸ್ಥಿತಿಕಾರ್ಯಕ್ಕೆ ಸತ್ವಗುಣ ಬೇಕು. ಆದರೆ ಸತ್ವಗುಣಾತ್ಮಕ ಶರೀರ ಬೇಡ. ಶರೀರ ಬೇಕೆಂದು ವೀರರಾಘವ ವ್ಯಾಖ್ಯಾನ ಹೇಳಿದರೂ ಬೇಕಾಗಿಲ್ಲವೆಂದು ಜೀವಗೋಸ್ವಾಮಿ ವ್ಯಾಖ್ಯಾನ ಹೇಳುತ್ತದೆ.[2] ವಿಷ್ಣು ಶುದ್ಧ ಸ್ವರೂಪನೇ ಆಗಿರುತ್ತಾನೆ,

---

1 ಅಸ್ಯಜಗತಃ ಸರ್ಗೇ ನಿಮಿತ್ತೇ ರಜಸೋಪಲಕ್ಷಿತಃ ಶತಧೃತಿರಭೂತ್ । ಸ್ಥಿತೌ ನಿಮಿತ್ತಭೂತಾಯಾಂ ವಿಷ್ಣುರಿತ್ಯಸ್ಯ ಸತ್ವೇನೇತ್ಯಾದಿಃ । ವಿಷ್ಣುಃ ಸ್ಥಿತ್ಯರ್ಥಂ ಶುದ್ಧಸತ್ವೋಪಲಕ್ಷಿತ ಸ್ವಾವತಾರಾತ್ಮಕ ವಿಷ್ಣುರೂಪೋऽಭೂದಿತ್ಯರ್ಥಃ । -ವೀರರಾಘವಃ

2. ವಿಷ್ಣುಃ ಸತ್ವೇನೇತ್ಯನುಕ್ತಿಸ್ತು ತಸ್ಯ ಶುದ್ಧಸ್ವರೂಪತ್ವಾತ್ । ಸಾನ್ನಿಧ್ಯೇನೈವ ಸತ್ವಗುಣೋಪಕಾರಕತ್ವಾಚ್ಚ । –ಜೀವಗೋಸ್ವಾಮೀ

ಜಡಶರೀರಿಯಾಗುವುದಿಲ್ಲ, ಸತ್ವಗುಣಕ್ಕೆ ಸನ್ನಿಧಿಮಾತ್ರದಿಂದ ಪ್ರೇರಣೆ ನೀಡಿ ಅದರ ಮೂಲಕ ಸ್ಥಿತಿಕಾರ್ಯವನ್ನು ನಡೆಸುತ್ತಾನೆ ಎಂದು ಜೀವಗೋಸ್ವಾಮಿ ವ್ಯಾಖ್ಯಾನ ಹೇಳುತ್ತದೆ.

ರಜೋಗುಣ ತಮೋಗುಣಗಳಿಗೂ ಹೀಗೇ ಸನ್ನಿಧಿ ಮಾತ್ರದಿಂದಲೆ ಪ್ರೇರಣೆ ಮಾಡಿ ಅವುಗಳ ಮೂಲಕ ಸೃಷ್ಟಿ ಲಯಕಾರ್ಯಗಳನ್ನು ನಡೆಸಲು ವಿಷ್ಣುವಿಗೆ ಶಕ್ಯವಿತ್ತು. ಆದರೂ ಬ್ರಹ್ಮರುದ್ರರಿಂದ ಸೃಷ್ಟಿಲಯಕಾರ್ಯ ಮಾಡಿಸಿ ಮೋಕ್ಷದಲ್ಲಿ ಅವರಿಗೆ ಅಧಿಕ ಆನಂದ ವ್ಯಕ್ತ ಮಾಡಬೇಕೆಂದು ಪ್ರೀತಿಯಿಂದಲೇ ಅವರಿಗೆ ರಜೋಗುಣ ತಮೋಗುಣಗಳಿಂದ ಶರೀರ ನಿರ್ಮಿಸಿ ನೀಡುತ್ತಾನೆ ಶ್ರೀಹರಿ. ಆ ಶರೀರದಲ್ಲಿ ಅವರಿಗೆ ರಜೋಗುಣದಿಂದ ಸೃಷ್ಟಿಗಾಗಿ ರಾಗವನ್ನೂ ತಮೋಗುಣದಿಂದ ಲಯಕ್ಕಾಗಿ ಕ್ರೋಧವನ್ನೂ ಉಂಟುಮಾಡುತ್ತಾನೆ. ಹೀಗೆ ಬ್ರಹ್ಮನಲ್ಲಿ ಬ್ರಹ್ಮರೂಪ ದಿಂದಿದ್ದು ಅವನ ಮೂಲಕ ಜಗತ್ತನ್ನು ಸೃಜಿಸುತ್ತಾನೆ. ರುದ್ರನಲ್ಲಿ ರುದ್ರರೂಪದಿಂದಿದ್ದು ಅವನ ಮೂಲಕ ಲಯ ಮಾಡುತ್ತಾನೆ. ಸತ್ವಗುಣಕ್ಕೆ ಪ್ರೇರಣೆ ನೀಡಿ ಸ್ವತಃ ಸ್ಥಿತಿಕಾರ್ಯ ನಡೆಸುತ್ತಾನೆ.

ಬ್ರಹ್ಮಣಿಸ್ಥೋऽಸೃಜದ್ ವಿಷ್ಣುಃ ಸ್ಥಿತ್ವಾ ರುದ್ರೇ ತ್ವಭಕ್ಷಯತ್ ।
ಪೃಥಕ್ ಸ್ಥಿತ್ವಾ ಜಗತ್ ಪಾತಿ ತದ್‌ಬ್ರಹ್ಮಾದ್ಯಾಹ್ವಯೋ ಹರಿಃ ॥
ಇತಿ ಬ್ರಾಹ್ಮೇ ॥

ರಜಸಾ ತಮಸಾ ಚ ಬ್ರಹ್ಮರುದ್ರದೇಹ ಸೃಷ್ಟೇಃ ।
ರಾಗ ಕ್ರೋಧ ಕಾರಣತ್ವಾಚ್ಚ ॥

ವಿಷ್ಣುವೇ ಬ್ರಹ್ಮರೂಪದಿಂದ ಬ್ರಹ್ಮನಲ್ಲಿ ಪ್ರವೇಶಿಸಿ ಅವನ ಮೂಲಕ ಜಗತ್ತಿನ ಸೃಷ್ಟಿ ಮಾಡುತ್ತಾನೆ. ರುದ್ರನಲ್ಲಿ ರುದ್ರ ರೂಪದಿಂದಿದ್ದು ಅವನ ಮೂಲಕ ಲಯಕಾರ್ಯ ನಡೆಸುತ್ತಾನೆ. ಬೇರೆಯಾಗಿದ್ದು ವಿಷ್ಣುರೂಪದಿಂದ ಜಗತ್ತನ್ನು ಪಾಲಿಸುತ್ತಾನೆ. ಅದರಿಂದ ಹರಿಯೊಬ್ಬನೇ ಬ್ರಹ್ಮರುದ್ರವಿಷ್ಣು ನಾಮಕನಾಗಿದ್ದಾನೆ ಎಂದು ಬ್ರಹ್ಮಪುರಾಣ ಹೇಳಿದೆ.

ರಜೋಗುಣ ತಮೋಗುಣಗಳಿಂದಲೆ ಬ್ರಹ್ಮರುದ್ರರ ಶರೀರಗಳನ್ನು ಶ್ರೀಹರಿ ಸೃಜಿಸುತ್ತಾನೆ. ಮತ್ತು ಈ ರಜೋಗುಣ ತಮೋಗುಣಗಳು ಬ್ರಹ್ಮರುದ್ರರ ಶರೀರಗಳಲ್ಲಿ ಸೃಷ್ಟಿಗೆ ರಾಗ, ಲಯಕ್ಕೆ ಕ್ರೋಧಗಳು ಉದಿಸಲು ಕಾರಣವಾಗುತ್ತವೆ.

❖ ❖ ❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗ ದ್ರುಮಿಲಮುನಿ ಪರಮಾತ್ಮನ ನರ ನಾರಾಯಣಾವತಾರವನ್ನು ಹೇಳುತ್ತಾರೆ—

ಧರ್ಮಸ್ಯ ದಕ್ಷದುಹಿತರ್ಯಜನಿ ಸ್ವಮೂರ್ತ್ಯಾ
ನಾರಾಯಣೋ ನರ ಸಖಃ ಸ್ವತಪಃಪ್ರಭಾವಃ ।
ನೈಷ್ಕರ್ಮ್ಯಲಕ್ಷಣಮುವಾಚ ಚಚಾರ ಯೋಗಂ
ಯೋಽದ್ಯಾಪಿ ಚಾಸ್ತ ಋಷಿವರ್ಯನಿಷೇವಿತಾಂಘ್ರಿಃ ॥ ೬ ॥

ಧರ್ಮಪ್ರಜಾಪತಿಯಿಂದ ದಕ್ಷಪ್ರಜಾಪತಿಯ ಮಗಳಾದ ಮೂರ್ತಿದೇವಿಯಲ್ಲಿ ಶ್ರೀಹರಿ ನರಮಹರ್ಷಿಯೊಂದಿಗೆ ಸ್ವರೂಪದಿಂದ ನಾರಾಯಣ ಮಹರ್ಷಿಯಾಗಿ ಅವತರಿಸಿದ. ಮೋಕ್ಷ ಸಾಧನವಾದ ನಿಷ್ಕಾಮಕರ್ಮವನ್ನು ಲೋಕಕ್ಕೆ ಬೋಧಿಸಿದ. ಲೋಕಶಿಕ್ಷಣಕ್ಕಾಗಿ ಅದನ್ನು ಅನುಷ್ಠಾನ ಮಾಡಿಯೂ ತೋರಿದ. ಸ್ವವಿಷಯಜ್ಞಾನ ಸ್ವರೂಪನೂ ಶಕ್ತಿಸ್ವರೂಪನೂ ಆದ ಈತ ಪ್ರಪಂಚದ ಸ್ಥಿತಿಗಾಗಿ ಹೀಗೆ ಅವತಾರಕಾರ್ಯ ಮಾಡಿ ಮುಗಿಸಿದ ಬಳಿಕವೂ ಲೋಕಾನುಗ್ರಹ ಕಾತರತೆಯಿಂದ ಇಂದಿಗೂ ಬದರಿಕಾಶ್ರಮ ದಲ್ಲಿ ಮಹಾಮಹಾಮುನಿಗಳಿಂದ ಪಾದಸೇವೆ ಕೈಗೊಳ್ಳುತ್ತ ವಾಸಮಾಡುತ್ತಿದ್ದಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು,

ನಾರಾಯಣೋ ನರಋಷಿಪ್ರವರಃ ಪ್ರಶಾಂತಃ ।

ಎಂದು ಪಾಠವಿಟ್ಟುಕೊಂಡಿದ್ದಾರೆ. ನಮ್ಮ ಪಾಠದಲ್ಲಿ ಸ್ವತಪಃ ಪ್ರಭಾವಃ 'ತನ್ನ ತಪಸ್ಸಿನಿಂದ ಸಾಮರ್ಥ್ಯವನ್ನು ಸಂಪಾದಿಸಿಕೊಂಡವನು' ಎಂದು ಹೇಳಿದಂತಾಗುತ್ತದೆ. ಇದು ನಾರಾಯಣನಿಗೆ ಕೂಡುವುದಿಲ್ಲ. ಅವನ ಗುಣಗಳೆಲ್ಲವೂ ಶಕ್ತಿಸಾಮರ್ಥ್ಯವೆಲ್ಲವೂ ಅವನ ಸ್ವರೂಪಭೂತವೇ ಆಗಿದ್ದು ಅನಾದಿ ನಿತ್ಯವಾಗಿರುತ್ತದೆ. ಹೊಸದಾಗಿ ಸಂಪಾದಿಸಿಕೊಳ್ಳುವಂಥವು ಅಲ್ಲ. ಅದರಿಂದ 'ಸ್ವತಪಃ ಪ್ರಭಾವಃ' ಎಂದರೆ—

ಸ್ವವಿಷಯ ಜ್ಞಾನರೂಪಃ ಪ್ರಭಾವರೂಪಶ್ಚ ।

ನಾರಾಯಣನು 'ಸ್ವತಪಃ' ಸ್ವವಿಷಯ ಜ್ಞಾನರೂಪನಾಗಿದ್ದಾನೆ ಮತ್ತು 'ಪ್ರಭಾವಃ' ಸಾಮರ್ಥ್ಯರೂಪನಾಗಿದ್ದಾನೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ದ್ರುಮಿಲ ಮಹಾಮುನಿ ದೇವತೆಗಳಿಗೆ ಅಸುರಾವೇಶದಿಂದ ಅಜ್ಞಾನಾದಿಗಳು ಬರುವುದುಂಟು ಎನ್ನುತ್ತಾರೆ.

ಇಂದ್ರೋಽಪಿ ನಾಕ್ಯಸುಖಮೇಷ ಜಿಘೃಕ್ಷತೀತಿ
ಕಾಮಂ ನ್ಯಯುಂಕ್ತ ಸಗಣಂ ಸ ಬದರ್ಯುಪಾಖ್ಯಮ್ ।
ಗತ್ವಾಽ ಪ್ಸರೋಗಣವಸಂತಸುಮಂದವಾತೈಃ
ಸ್ತ್ರೀಪ್ರೇಕ್ಷಣೇಷುಭಿರವಿಧ್ಯದತನ್ಮಹಿಜ್ಞಃ ॥ ೭ ॥

'ಈ ನಾರಾಯಣಮಹರ್ಷಿ ತಪಸ್ಸಿನಿಂದ ತನ್ನ ಸ್ವರ್ಗ ಸಾಮ್ರಾಜ್ಯವನ್ನು ಅಪಹರಿಸಲು ಬಯಸಿದ್ದಾನೆ' ಎಂದು ಅಸುರಾವೇಶಕ್ಕೊಳಗಾದ ದೇವೇಂದ್ರ ಆಲೋಚಿಸಿ ಮನ್ಮಥನಿಗೆ ಆಜ್ಞೆ ಮಾಡಿದ. ಮನ್ಮಥನೂ ಮುನಿಯ ಮಹಿಮೆಯನ್ನು ಅರಿಯದೆ ತಪಸ್ಸಿಗೆ ವಿಘ್ನ ಮಾಡಲು ಬದರಿಕಾಶ್ರಮಕ್ಕೆ ನಡೆದ. ಅಪ್ಸರೆಯರ ಗುಂಪುಗಳೊಂದಿಗೆ ವಸಂತ ಮಂದಮಾರುತಗಳೊಂದಿಗೆ ಹೋಗಿ ಸ್ತ್ರೀಯರ ಕಡೆಗಣ್ಣನೋಟಗಳಿಂದಲೂ ಹೂಬಾಣಗಳಿಂದಲೂ ಹೊಡೆದ.

[1]ಪರಮಾತ್ಮನಲ್ಲಿ ಅಪರಾಧವೆಸಗುವುದು ದೇವತೆಗಳ ಸ್ವಭಾವವೆಂದು ದೇವತೆಗಳೇ ಹೇಳಿಕೊಳ್ಳುತ್ತಾರೆ ಎನ್ನುತ್ತದೆ ಶ್ರೀಧರ ವ್ಯಾಖ್ಯಾನ. ಆದರೆ ಇದನ್ನು ಒಪ್ಪಿದರೆ ದೇವದಾನವರೊಳಗೆ ಸ್ವಭಾವ ಭೇದವಿಲ್ಲವೆಂದಂತಾಗುವುದು.

[2]ವಲ್ಲಭವ್ಯಾಖ್ಯಾನ ಹೇಳುವಂತೆ 'ದೇವತೆಗಳು ಮತ್ಸರಿಗಳು. ತಮ್ಮ ಸೇವೆಯನ್ನು ಬಿಟ್ಟು ಪರಮಾತ್ಮನ ಸೇವೆ ಮಾಡುವವರಿಗೆ ವಿಘ್ನ ಮಾಡುತ್ತಾರೆ'. ಆದರೆ ಮತ್ಸರವೂ ದೇವ ಸ್ವಭಾವವಲ್ಲ, ಅಸುರ ಸ್ವಭಾವ.

ವಸ್ತುತಃ ದೇವತೆಗಳು ದಿವ್ಯ ಸ್ವಭಾವದವರು. ವಿಷ್ಣುವಿನಲ್ಲಿ ವಿಷ್ಣುಭಕ್ತರಲ್ಲಿ ಪ್ರೀತಿ ಮಾಡುವವರು. ತಮ್ಮ ಸೇವೆ ಮಾಡದೆ ವಿಷ್ಣುಸೇವೆ ಮಾಡಿದರೆ ವಿಷ್ಣುವಿಗೇ ಅದು ಪ್ರಿಯವಾಗುವುದಿಲ್ಲವೆಂದು ಅಂಥ ವಿಷ್ಣುಸೇವೆಗೆ ವಿಘ್ನ ಮಾಡುತ್ತಾರೆ, ಹೊರತು ಅದು ಈರ್ಷ್ಯೆಯಿಂದಲ್ಲ, ಮುಗ್ಧ ಶಿಶುವಿನಿಂದ ತಂದೆತಾಯಿಗಳು ನಮಸ್ಕಾರ ಮಾಡಿಸಿಕೊಂಡು ಹರಸುವಂತೆ ದೇವತೆಗಳು ಮುಗ್ಧರಾದ ವಿಷ್ಣುಭಕ್ತರಿಂದ ಸೇವೆ ಮಾಡಿಸಿಕೊಳ್ಳುತ್ತಾರೆ, ಆಶೀರ್ವದಿಸುತ್ತಾರೆ.

ಕೆಲವೊಮ್ಮೆ ದೇವತೆಗಳು ಗೋವರ್ಧನೋದ್ಧಾರದಂಥ ಪ್ರಸಂಗಗಳಲ್ಲಿ

---

1. ಅಸ್ಮಾಕಂ ಚಾಪರಾಧಾಚರಣಂ ಸ್ವಭಾವತ್ವಾನ್ನ ಚಿತ್ರ ಮಿತ್ಯಾಹುಃ । -ಶ್ರೀಧರಃ
2. ದೇವಾಃ ಸೇರ್ಷ್ಯಾಃ ಸ್ವಸೇವಾಪರಿತ್ಯಾಗೇನ ಭಗವತ್ಸೇವಾಪರಾಣಾಂ ಪ್ರವಾಹಮರ್ಯಾದಯೋರ್ವಿಘ್ನಂ ಕುರ್ವಂತಿ । ಅತಃ ಪ್ರವಾಹ ಮರ್ಯಾದಯೋಃ ಪದಮಲಬ್ಧ್ವಾ ದೀನಾ ಭವಂತಿ । -ವಲ್ಲಭಃ

ಪರಮಾತ್ಮನನ್ನು ವಿರೋಧಿಸುವುದೂ ಇಲ್ಲದಿಲ್ಲ. ಆದರೆ ಅದು ಅವರ ಸ್ವಭಾವವಲ್ಲ. ಅಸುರಾವೇಶದಿಂದ ಅಸ್ವಾಭಾವಿಕವಾಗಿ ಕಂಡು ಬರುವ ವರ್ತನೆಯಾಗಿರುತ್ತದೆ.

ಪ್ರಕೃತದಲ್ಲಿಯೂ ನಾರಾಯಣಮುನಿ ಒಬ್ಬ ಮನುಷ್ಯನೆಂದೂ ತಪಸ್ಸು ಮಾಡಿ ದೇವೇಂದ್ರನ ಸಿಂಹಾಸನವನ್ನು ಅಪಹರಿಸುವನೆಂದೂ ಅಸುರಾವೇಶದಿಂದ ಭ್ರಮಿಸಿ ದೇವೇಂದ್ರ ಭೀತನಾಗಿ ಪರಮಾತ್ಮನ ಬಳಿಗೆ ಮನ್ಮಥನನ್ನು ಅಪ್ಸರೆಯರೊಂದಿಗೆ ಕಳಿಸಿದ್ದಾನೆ. ಮುನಿ ಸಾಕ್ಷಾತ್ ಪರಮಾತ್ಮನೆಂದು ತಿಳಿದಾಗ ಪಶ್ಚಾತ್ತಾಪ ಪಟ್ಟಿದ್ದಾನೆ. ವಸ್ತುತಃ ಅಭಿವ್ಯಕ್ತ ಜ್ಞಾನಸ್ವರೂಪನೇ ದೇವೇಂದ್ರ. ಮನ್ಮಥನೂ ಜ್ಞಾನಿಯೆ. ಮಂದಮಾರುತನೂ ಹಾಗೆಯೇ. ಈ ಮಂದಮಾರುತನು ಮುಖ್ಯವಾಯುವಲ್ಲ. ಭೂತವಾಯು, ಅದರಿಂದ ಅಸುರಾವೇಶ ಹೊಂದಿದ್ದಾನೆ. ಮುಖ್ಯವಾಯುವಿಗೆ ಅಸುರಾವೇಶವಿಲ್ಲ.

ಜ್ಞಾನರೂಪಾನಪಿ ಸುರಾನ್ ವಿನಾ ಪ್ರಾಣಂ ಕ್ವಚಿತ್ ಪರೇ ।
ಆವಿಶಂತಿ ಹ್ಯತಸ್ತೇಷಾಮಜ್ಞಾನಾದಿ ನ ತು ಸ್ವತಃ ।

ಇತಿ ದೇವತತ್ತ್ವೇ ।

'ಅಥೈನಮೇವ ನಾಪ್ನೋದ್ ಯೋಽಯಂ ಮಧ್ಯಮಃ ಪ್ರಾಣಃ।'
'ಏವಮೇತಾ ದೇವತಾಃ ಪಾಪ್ಮನಾ ವಿದ್ಧಾಃ ।'
'ತಂ ಹಾಸುರಾ ಋತ್ವಾ ವಿದಧ್ವಸುರ್ಯಥಾಽಶ್ಮಾನಮಾಖಣಮೃತ್ವಾ ವಿಧ್ವಂಸತೈವಂ ಹೈವ ವಿಧ್ವಂಸಮಾನಾ ವಿಷ್ವಂಚೋ ವಿನೇಶುಃ ।
ಸಾ ವಾ ಏಷಾ ದೇವತೈತಾಸಾಂ ದೇವತಾನಾಂ ಪಾಪ್ಮಾನಂ ಮೃತ್ಯುಮಪಹತ್ಯಾಥೈನಾ ಮೃತ್ಯುಮತ್ಯವಹತ್ । ಸಾ ಯದಾ ಮೃತ್ಯುಮತ್ಯಮುಚ್ಯತ ಸೋಽಗ್ನಿರಭವತ್ ।

-ಇತ್ಯಾದಿ ಶ್ರುತಿಶ್ಚ ।

ಮುಖ್ಯಪ್ರಾಣನೊಬ್ಬನನ್ನು ಬಿಟ್ಟು, ಜ್ಞಾನಸ್ವರೂಪರಾದ ದೇವತೆಗಳನ್ನೂ ಕೂಡ ಕೆಲವೊಮ್ಮೆ ಶತ್ರುಗಳಾದ ಅಸುರರು ಆವೇಶಮಾಡುವುದುಂಟು. ಅದರಿಂದಲೆ ಅವರಿಗೆ ಅಜ್ಞಾನ ಮುಂತಾದುವು, ಹೊರತು, ಅವು ಅವರಲ್ಲಿ ಸ್ವಾಭಾವಿಕವಲ್ಲ ಎಂದು ದೇವತತ್ತ್ವಗ್ರಂಥದಲ್ಲಿ ಹೇಳಿದೆ.

'ಎಲ್ಲ ದೇವತೆಗಳನ್ನು ಆವೇಶಮಾಡಿದ ಬಳಿಕ ಅಸುರಸಮೂಹವು ಮಧ್ಯಮ ಪ್ರಾಣನನ್ನು ಮಾತ್ರ ಪ್ರವೇಶ ಮಾಡಲು ಶಕ್ತವಾಗಲಿಲ್ಲ' 'ಹೀಗೆ ಎಲ್ಲ

ಇಂದ್ರಿಯದೇವತೆಗಳನ್ನೂ ಅಸುರರು ಪ್ರವೇಶಿಸಿ ಪಾಪಯುಕ್ತರನ್ನಾಗಿ ಮಾಡಿದರು' ಆದರೆ 'ಮುಖ್ಯಪ್ರಾಣನ ಮೇಲೆ ಅಸುರರು ದಾಳಿ ಮಾಡಿ, ಕಲ್ಲಿನ ಮೇಲೆ ಬಿದ್ದ ಮಣ್ಣಿನ ಹೆಂಟೆ ಪುಡಿಯಾಗುವಂತೆ, ತಾವೇ ಗಾಯಗೊಂಡರು. ಹೀಗೆ ಗಾಯಗೊಂಡ ಅಸುರರು ಬೇರೆ ಬೇರೆ ಕಡೆಗೆ ಓಡಿ ತಲೆಮರೆಸಿಕೊಂಡರು' 'ಈ ಮುಖ್ಯಪ್ರಾಣನು ದೇವತೆಗಳ ಪಾಪರೂಪವಾದ ಮೃತ್ಯುವನ್ನು ನಾಶಮಾಡಿ ಬಳಿಕ ಅವರನ್ನು ಮೃತ್ಯುವಿನ ಉಪದ್ರವವಿಲ್ಲದ ತಮ್ಮತಮ್ಮ ಊರ್ಧ್ವ ಲೋಕಗಳಿಗೆ ಒಯ್ದನು. ಹೀಗೆ ವಾಗಭಿಮಾನಿ ಅಗ್ನಿದೇವನು ಮೃತ್ಯುವಿನಿಂದ ಬಿಡುಗಡೆ ಹೊಂದಿದಾಗ ಅವನು ಅಗ್ನಿಲೋಕಾಧಿಪತಿಯಾದನು'. ಎಂದು ಮುಂತಾಗಿ ಬೃಹದಾರಣ್ಯಕ ಮುಂತಾದ ಶ್ರುತಿಗಳಲ್ಲಿ ಉಕ್ತವಾಗಿದೆ.

❖❖❖

ಜಾಯಂತೋಯೋಪಾಖ್ಯಾನದಲ್ಲಿ ನಿಮಿರಾಜನಿಗೆ ದ್ರುಮಿಲ ಮಹಾಮುನಿ ಹರಿಭಕ್ತರಿಗೆ ಬರುವ ಹರಿಪೂಜಾ ವಿಘ್ನಗಳನ್ನು ಹರಿಯೇ ಪರಿಹರಿಸುತ್ತಾನೆ ಎನ್ನುತ್ತಾರೆ.

ತ್ವಾಂ ಸುನ್ವತಾಂ ಸುರಕೃತಾ ಬಹುವೋಽಂತರಾಯಾಃ
ಕಸ್ತಾನ್ ವಿಲಂಘ್ಯ ಪರಮಂ ವ್ರಜತಾತ್ ಪದಂ ತೇ ।
ನಾನ್ಯಸ್ಯ ಬರ್ಹಿಷಿ ಬಲಿರ್ದದತಃ ಸ್ವಭಾಗಂ
ಧತ್ತೇ ಪದಂ ತ್ವಮವಿತಾ ಯದಿ ವಿಘ್ನಮೂರ್ಧ್ನಿ ॥ ೧೦ ॥

ನಿನ್ನ ಆರಾಧನೆ ಮಾಡುವವರಿಗೆ ದೇವತೆಗಳು ನಾವು ಬಹಳ ವಿಘ್ನ ಮಾಡಿದೆವೆಂದರೆ ಯಾರು ತಾನೆ ಸ್ವಶಕ್ತಿಯಿಂದ ಅದನ್ನು ದಾಟಿ ನಿನ್ನ ಪರಮಪದವನ್ನು ಹೊಂದಬಲ್ಲ? ಆದರೆ ಯಜ್ಞದಲ್ಲಿ ನಿನಗೆ ಪೂಜೆಯರ್ಪಿಸುವವನ ವಿಘ್ನದ ತಲೆಯಮೇಲೆ ನೀನು ಮೆಟ್ಟಿದರೆ ಆ ಪೂಜೆ ಇನ್ನೊಬ್ಬರ ಪಾಲಾಗುವುದಿಲ್ಲ, ನಿನಗೇ ಸೇರುವುದು. ನೀ ಮೆಟ್ಟದಿದ್ದರೆ ಮಾತ್ರ ಆ ಪೂಜೆ ಅಸುರರ ಪಾಲಾಗುವುದು. ಅದರಿಂದ ನೀನೇ ಯಜ್ಞರಕ್ಷಕ.

ಈ ಶ್ಲೋಕದಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ—

'ಸ್ವೌಕೋ ವಿಲಂಘ್ಯ ಪರಮಂ ವ್ರಜತಾಂ ಪದಂ ತೇ' ಎಂದಿದೆ.

[1]ನಿನ್ನ ಪೂಜೆ ಮಾಡುವವರು ನಮ್ಮ ಸ್ವರ್ಗಲೋಕವನ್ನು ದಾಟಿ ಆಚೆಗೆ ಇರುವ ನಿನ್ನ ಪರಮಪದವನ್ನು ಸೇರುತ್ತಾರೆ. ಅದರಿಂದ ಅವರಿಗೆ ಮಾತ್ರ ನಾವು ವಿಘ್ನ

---

1. ತ್ವಾಂ ಸೇವಮಾನಾನಾಂ ಸುರೈರಿಂದ್ರಾದಿಭಿಃ ಕೃತಾ ಅಂತರಾಯಾ ವಿಘ್ನಾ ಭವಂತಿ। ಕಸ್ಮಾದಿತ್ಯತ

ಮಾಡುತ್ತೇವೆ. ನಿನ್ನ ಪೂಜೆ ಮಾಡದವರು ನಮಗೆ ಯಜ್ಞಗಳಲ್ಲಿ ಆಹುತಿ ಕೊಡುವುದರಿಂದ ಅವರಿಗೆ ನಾವು ವಿಘ್ನ ಮಾಡುವುದಿಲ್ಲ. ಆದರೆ ನಿನ್ನ ಭಕ್ತರು ನಾವು ಮಾಡುವ ವಿಘ್ನಗಳನ್ನು ತಾವೇ ಪರಿಹರಿಸಿಕೊಳ್ಳುತ್ತಾರೆ. ನಿನ್ನ ಭಕ್ತರಿಗೇ ವಿಘ್ನ ಭಯವಿಲ್ಲವೆಂದ ಮೇಲೆ ನಿನಗೆಲ್ಲಿಯ ವಿಘ್ನ ಭಯ? ಎಂದು ಶ್ರೀಧರ ವ್ಯಾಖ್ಯಾನದಲ್ಲಿ ಶ್ಲೋಕಕ್ಕೆ ವಿವರಣೆ ಇದೆ.

ಹರಿಭಕ್ತರಿಗೆ ಮಾತ್ರ ದೇವತೆಗಳು ವಿಘ್ನ ಮಾಡುತ್ತಾರೆ ಎನ್ನುವುದು ತೀರ ವಿಪರ್ಯಾಸ. ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಂ' 'ದೇವತೆಗಳು ಬರಲಿ ರಾಕ್ಷಸರು ತೊಲಗಲಿ, ನಿರ್ವಿಘ್ನವಾಗಿ ಹರಿಪೂಜೆ ನಡೆಯಲಿ' ಎಂದು ಘಂಟಾನಾದ ಮಾಡುತ್ತೇವೆ.

'ದುಷ್ಟಾನಾಂ ವಿಘಕರ್ತಾ ಸುಚರಿತಸುಜನಸ್ತೋಮವಿಘ್ನಾಪಹರ್ತಾ'

ದುಷ್ಟರಿಗೆ ಮಾತ್ರ ಗಣೇಶ ವಿಘ್ನಕಾರಿ. ಸಜ್ಜನರಿಗೆ ವಿಘ್ನ ಕಳೆವವನು ಅದಕ್ಕೆಂದೇ ಆದೌ ಗುರು ಗಣೇಶಪೂಜೆ ಮಾಡುತ್ತೇವೆ.

ಹರಿಪೂಜೆಗೆ ವಿಘ್ನ ಮಾಡುವವರು ದೇವತೆಗಳಲ್ಲ, ಹರಿಗುಣಗಳನ್ನು ತಮ್ಮವೆಂದು ಹೇಳುತ್ತ ಕದಿವ ಕಳ್ಳರು ಅಸುರರು ವಿಘ್ನ ಮಾಡುವವರು.

ಕೊಲ್ಲು ಬೇಗ ಕಳ್ಳರ ಸಿರಿನಲ್ಲ ಮಧ್ವವಲ್ಲಭ...
ಎಲ್ಲ ಕೂಡಿ ನಿನ್ನ ಪೂಜೆಗೆ ಕಲ್ಲುಹಾಕುತಿರುವರು...

ಎಂದು ವಾದಿರಾಜರು ಹಾಡಿದ್ದಾರೆ.

ಕೆಲವೊಮ್ಮೆ ದೇವತೆಗಳೂ ಹರಿಪೂಜೆಗೆ ಕಲ್ಲುಹಾಕಿದರೆ ಅದು ಅಸುರಾವೇಶದಿಂದ ಎಂದು ಹಿಂದೆಯೇ ಹೇಳಿದೆ ಭಾಗವತ.

'ನಿನ್ನ ಪೂಜೆ ಮಾಡದವರು ದೇವತೆಗಳಿಗೆ ಯಜ್ಞಾಹುತಿ ನೀಡಿದರೆ ದೇವತೆಗಳು ವಿಘ್ನ ಮಾಡುವುದಿಲ್ಲ' ಎಂದುದು ನಿಜವೆ, ಏಕೆಂದರೆ ಹರಿಪೂಜೆ ಮಾಡದವರು

ಆಹುಃ ಸ್ವೌಕ ಇತಿ। ಸ್ವಸ್ಥಾನಂ ಸ್ವರ್ಗಮತಿಕ್ರಮ್ಯ ಪರಮಂ ತವ ಸ್ಥಾನಂ ವ್ರಜತಾಂ। ನಾನ್ಯಸ್ಯ ತ್ವಾಮಸೇವಮಾನಸ್ಯ। ಕುತಃ। ಬರ್ಹಿಷಿ ಯಜ್ಞೇ ಸ್ವಭಾಗಾನ್ ಪುರೋಡಾಶಾದೀನ್ ಬಲೀನ್ ಕರಾನ್ ಕೃಷಿಕ ಇವ ರಾಜ್ಞೇ ಇಂದ್ರಾದಿಭ್ಯೋ ದದತಃ । ತರ್ಹಿ ಕಿಂ ಮದ್ಭಕ್ತೋ ವಿಘ್ನೈರ್ಭ್ರಶ್ಯತಿ ನೇತ್ಯಾಹ। ಯದೀತಿ ನಿಶ್ಚಯೇ। ಯತಸ್ತ್ವಂ ಸರ್ವ ಸುರಾಧೀಶ್ವರೋಽವಿತಾ ರಕ್ಷಕೋಽತೋಽಸೌ ವಿಘ್ನಾನಾಂ ಮೂರ್ಧ್ನಿ ಪದಮಂಘ್ರಿಂ ಧತ್ತೇ । ಕುತಃ ಪುನಸ್ತ್ವಯಿ ವಿಘ್ನಶಂಕೇತಿ ಭಾವಃ।
-ಶ್ರೀಧರಃ

ಮಾಡುವ ದೇವಪೂಜೆಯನ್ನು ದೇವತೆಗಳೆ ಒಲ್ಲರು. ಅದರಿಂದ ಅದು ನಿರ್ವಿಘ್ನವಾಗಿ ನಡೆಯಲಿ, ಅಸುರರ ಪಾಲಾಗಲಿ ಎಂದು ಅವರು ಬಿಟ್ಟುಬಿಡುತ್ತಾರೆ, ವಿಘ್ನ ಮಾಡುವುದಿಲ್ಲ. ಹರಿಪೂಜೆ ಮಾಡುವವನೆ ಅಜ್ಞಾನದಿಂದ ದೇವಪೂಜೆ ಮಾಡದಿದ್ದರೆ ಅವನು ಮಾಡುವ ಹರಿಪೂಜೆ ಹರಿಗೆ ಪ್ರಿಯವಲ್ಲದ್ದರಿಂದ ಅದಕ್ಕೆ ದೇವತೆಗಳು ವಿಘ್ನ ಮಾಡುವುದೂ ಉಂಟು. ಆಗ ಹರಿಭಕ್ತನಿಗೆ ಹರಿಯೆ ದಯೆಯಿಂದ ವಿಘ್ನ ಪರಿಹಾರ ಮಾಡುತ್ತಾನೆ, ದೇವತೆಗಳ ಮೇಲಿನ ತಿರಸ್ಕಾರದಿಂದ ಹರಿಪೂಜೆ ಮಾಡಿದರೆ ಮಾತ್ರ ದೇವತೆಗಳು ಬಹಳ ವಿಘ್ನ ಮಾಡುತ್ತಾರೆ. ಅದನ್ನು ಹರಿ ಪರಿಹರಿಸುವುದಿಲ್ಲ, ಬೇರೆ ಯಾರೂ ಪರಿಹರಿಸಲು ಶಕ್ತರಾಗುವುದಿಲ್ಲ ಎಂದು ದೇವತೆಗಳು ಹರಿಗೆ ತಮ್ಮ ಮೇಲಿರುವ ಪ್ರೀತಿಯನ್ನು ಹೇಳಿಕೊಳ್ಳುತ್ತಾರೆ. ಅಸುರಾವೇಶದಿಂದ ತಾವು ಮಾಡುವ ತಪ್ಪಿಗೆ ಪಶ್ಚಾತ್ತಾಪದಿಂದ ನುಡಿಯುತ್ತಾರೆ.

ಶ್ಲೋಕದಲ್ಲಿ ಉತ್ತರಾರ್ಧಕ್ಕೆ ಸರಿಯಾದ ವಿವರಣೆಯನ್ನು ಶ್ರೀಮದಾಚಾರ್ಯರೇ ನೀಡುತ್ತಾರೆ. ಅವರೇ ನೀಡಬೇಕು.

ಸ್ವಭಾಗಂ ಬಲಿಂ ದದತೋ ವಿಘ್ನಮೂರ್ಧ್ನಿ ಯದಿ ಭವಾನ್
ಪದಂ ಧತ್ತೇ ತರ್ಹಿ ನಾನ್ಯಸ್ಯ ಬಲಿಃ ॥

'ನಿನ್ನ ಭಾಗವಾದ ಪೂಜೆಯನ್ನು ನಿನಗೆ ಅರ್ಪಿಸುವ ಭಕ್ತನ ವಿಘ್ನಗಳ ತಲೆಯ ಮೇಲೆ ನೀನು ನಿನ್ನ ಪಾದವನ್ನಿಟ್ಟರೆ ಆ ಪೂಜೆ ನಿನಗೇ ಸೇರುವುದು ಹೊರತು ಅಸುರರ ಪಾಲಾಗುವುದಿಲ್ಲ'.

'ನಿನಗೆ ಪ್ರಿಯರಾದ ನಮ್ಮನ್ನು ತಿರಸ್ಕರಿಸಿ ನಿನಗೆ ಪೂಜೆ ಸಲ್ಲಿಸುವ ದುರ್ಜನರು ನಿನ್ನ ಪೂಜೆಗೆ ಅಹಂಕಾರದಿಂದ ತೊಡಗಿದಾಗ ನೀನು ಅವರ ವಿಘ್ನಗಳ ಮೇಲೆ ಪಾದವನ್ನಿಡುವುದಿಲ್ಲ. ನಾವು ಮಾಡುವ ಆ ವಿಘ್ನಗಳನ್ನು ಪರಿಹರಿಸಲು ಯಾರೂ ಸಮರ್ಥರಾಗುವುದಿಲ್ಲ' ಎಂದು ಪೂರ್ವಾರ್ಧಕ್ಕೆ ವಿವರಣೆ ಸುಲಭ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ದ್ರುಮಿಲ ಮುನಿ ಭಗವಂತನ ಕೆಲವು ಅವತಾರಗಳನ್ನು ಉಪದೇಶಿಸುತ್ತಾರೆ.

ಹಂಸಸ್ವರೂಪ್ಯವದದಚ್ಯುತ ಆತ್ಮಯೋಗಂ
ದತ್ತಃ ಕುಮಾರ ಋಷಭೋ ಭಗವಾನ್ ಪಿತಾ ನಃ ।

ವಿಷ್ಣುಃ ಶಿವಾಯ ಜಗತಾಂ ಕಲಯಾಽವತೀರ್ಣ-
ಸ್ತೇನಾಹೃತಾ ಮಧುಭಿದಾ ಶ್ರುತಯೋ ಹಯಾಸ್ಯೇ ॥ ೧೭ ॥

ಅಚ್ಯುತನೆನಿಸಿದ ವಿಷ್ಣು ಜಗತ್ತಿನ ಕಲ್ಯಾಣಕ್ಕಾಗಿ ಅಂಶದಿಂದ ಇನ್ನೂ ಅನೇಕ ಅವತಾರ ತಳೆದ. ಹಂಸ ದತ್ತಾತ್ರೇಯ ಸನತ್ಕುಮಾರ. ನಮ್ಮ ತಂದೆ ಭಗವಾನ್ ಋಷಭದೇವ ಇವರೆಲ್ಲರೂ ಪರಮಾತ್ಮ ತತ್ವಜ್ಞಾನವನ್ನು ಉಪದೇಶಿಸಿದರು. ಹಯಗ್ರೀವಾವತಾರದಲ್ಲಿ ಮಧುದಾನವನನ್ನು ಸಂಹರಿಸಿ ಅವನು ಅಪಹರಿಸಿದ್ದ ವೇದವನ್ನು ಬ್ರಹ್ಮನಿಗೆ ತಂದಿತ್ತ.

[1]'ಕುಮಾರನೆಂದರೆ ಸನಕಾದಿಗಳಲ್ಲಿ ಸೇರಿದ ಸನತ್ಕುಮಾರನೆ. ಅವನೂ ಋಷಭನೂ ವಿಷ್ಣುವಿನ ಅಂಶಾವತಾರರು' ಎಂದು ಶ್ರೀಧರವ್ಯಾಖ್ಯಾನ.

[2]'ಕುಮಾರನಲ್ಲಿ ಭಗವಂತನ ಆವೇಶವಿರುವುದರಿಂದ ಅವತಾರತುಲ್ಯನೆಂ'ದು ವಲ್ಲಭವ್ಯಾಖ್ಯಾನ.

[3]'ಹಂಸನು ಸನಕಾದಿಗಳಿಗೂ, ದತ್ತನು ಯದು ಪ್ರಹ್ಲಾದಾದಿಗಳಿಗೂ, ಕುಮಾರ ನಾರದರಿಗೂ, ಋಷಭ ಜಾಯಂತೇಯರಿಗೂ ಉಪದೇಶಿಸಿದರೆಂ'ದು ರಾಧಾರಮಣದಾಸ ವ್ಯಾಖ್ಯಾನ.

ಇವೆಲ್ಲವೂ ಸ್ಕಾಂದ ಪುರಾಣ ಪ್ರಕಾಶಸಂಹಿತೆಗಳಿಗೆ ವ್ಯತಿರಿಕ್ತವಾಗಿ ಹೇಳುತ್ತಿವೆ.

ಕುಮಾರನಾಮಾ ತು ಹರಿರ್ಬ್ರಹ್ಮಚಾರಿವಪುಃ ಸ್ವಯಂ ।
ಸನತ್ಕುಮಾರಾಯ ಪರಂ ಪ್ರೋವಾಚ ಜಗದೀಶ್ವರಃ ।
ಇತಿ ಸ್ಕಾಂದೇ ॥

ವಿಷ್ಣೋಃ ಸನತ್ಕುಮಾರಾಖ್ಯಾಚ್ಛುಶ್ರುವುರ್ಜ್ಞಾನಮುತ್ತಮಂ ।
ಸನತ್ಕುಮಾರ ಪ್ರಮುಖಾ ಯೋಗೇಶಾಃ ಪರಮೇಶ್ವರಾತ್ ॥
ಇತಿ ಪ್ರಕಾಶ ಸಂಹಿತಾಯಾಂ ॥

ಕುಮಾರನಾಮಕನಾದ ಬ್ರಹ್ಮಚಾರಿಶರೀರಿಯಾದ ಜಗದೀಶ್ವರ ಹರಿ ತಾನೇ ಸನತ್ಕುಮಾರನಿಗೆ ಪರತತ್ವವನ್ನು ಉಪದೇಶಿಸಿದನೆಂದು ಸ್ಕಾಂದ ಪುರಾಣದಲ್ಲಿದೆ.

---

1. ಕುಮಾರಃ ಸನಕಾದಿಃ ನಃ ಪಿತಾ ಋಷಭಶ್ಚ ವಿಷ್ಣುರೇವ ಕಲಯಾಽವತೀರ್ಣಃ । -ಶ್ರೀಧರಃ
2. ಕುಮಾರಸ್ಯಾವೇಶೇಽಪ್ಯವತಾರ ತುಲ್ಯತ್ವಂ । -ವಲ್ಲಭಃ
3. ಹಂಸಃ ಸನಕಾದಿಭ್ಯಃ, ದತ್ತೋ ಯದುಪ್ರಹ್ಲಾದಾದಿಭ್ಯಃ ಕುಮಾರೋ ನಾರದಾಯ ಋಷಭಶ್ಚಾಸ್ಮಭ್ಯಂ ಜ್ಞಾನಯೋಗಮವದದಿತಿ ಜ್ಞೇಯಂ । -ರಾಧಾರಮಣದಾಸಃ

ಸನತ್ಕುಮಾರನಾಮಕನಾದ ಪರಮೇಶ್ವರನಾದ ವಿಷ್ಣುವಿನಿಂದ ಸನತ್ಕುಮಾರ ಮುಂತಾದ ಯೋಗೇಶ್ವರರು ಉತ್ತಮವಾದ ಜ್ಞಾನೋಪದೇಶವನ್ನು ಪಡೆದರು ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ದ್ರುಮಿಲ ಮಹಾಮುನಿ ವ್ಯಾಸಾವತಾರವನ್ನೂ ನೃಸಿಂಹಾವತಾರವನ್ನೂ ತಿಳಿಸುತ್ತಿದ್ದಾರೆ.

ಸಂಸ್ತುನ್ವತೋಽಬ್ಧಿಪತಿತಾನ್ ಶ್ರಮಣಾನೃಷೀಂಶ್ಚ
ಶಕ್ರಂ ಚ ವೃತ್ರವಧತಸ್ತಮಸಿ ಪ್ರವಿಷ್ಟಮ್ ।
ದೇವಸ್ತ್ರಿಯೋಽಸುರಗೃಹೇ ಪಿಹಿತಾ ಅನಾಥಾ
ಜಘ್ನೇ ಸುರೇಂದ್ರಮಭಯಾಯ ಸತಾಂ ನೃಸಿಂಹೇ ॥ ೧೯ ॥

ಸಂಸಾರಸಾಗರದಲ್ಲಿ ಬಿದ್ದಿದ್ದ ಸಂಗರಹಿತರಾದ ಮುನಿಗಳು ಪ್ರಾರ್ಥನೆ ~~ಮಾಡಿದಾಗ ವ್ಯಾಸಾವತಾರದಲ್ಲಿ ಅವರನ್ನು ಕರ್ಮಬಂಧನದಿಂದ ಬಿಡಿಸಿದ.~~ ವೃತ್ರವಧ ಸೂಚಿತ ಬ್ರಹ್ಮಹತ್ಯಾಪ್ರಾರಬ್ಧದಲ್ಲಿ ಮುಳುಗಿದ್ದ ದೇವೇಂದ್ರನನ್ನು ನರಸಿಂಹ ತನ್ನ ಸ್ಮರಣೆಯಿಂದ ಪಾಪಮುಕ್ತಗೊಳಿಸಿದ. ಹಿರಣ್ಯಕಶಿಪುವಿನ ಮನೆಯಲ್ಲಿ ಬಂಧಿತ ರಾಗಿದ್ದ ಅನಾಥರಾದ ಅಪ್ಸರೆಯರನ್ನೂ ನರಸಿಂಹ ಬಿಡಿಸಿದ, ಸಜ್ಜನರಿಗೆ ಅಭಯ ನೀಡುವುದಕ್ಕಾಗಿ ಅಸುರೇಂದ್ರನಾದ ಹಿರಣ್ಯಕಶಿಪುವನ್ನೂ ಸಂಹರಿಸಿದ.

[1]'ಕಶ್ಯಪರ ಯಜ್ಞಕ್ಕೆ ದೇವತೆಗಳೂ ಋಷಿಗಳೂ ಸಮಿಧೆಗಳನ್ನು ತಂದರು. ವಾಲಖಿಲ್ಯರು ಹೆಬ್ಬೆಟ್ಟು ಗಾತ್ರದ ಶರೀರದವರು ಪಲಾಶದ ಎಲೆಯ ತೊಟ್ಟುಗಳನ್ನು ಹೊತ್ತು ತರುವಾಗ ದಾರಿಯಲ್ಲಿ ಹಸುವಿನ ಹೆಜ್ಜೆಯಿಂದಾದ ಹಳ್ಳದಲ್ಲಿ ಬಿದ್ದುದನ್ನು ಕಂಡು ದೇವೇಂದ್ರ ಹಾಸ್ಯ ಮಾಡಿದ. ಅವರು ಪರಮಾತ್ಮನನ್ನು ಸ್ತುತಿಸಿದಾಗ ಅವನು ಬಂದು ಹಳ್ಳದಿಂದ ಎತ್ತಿದ' ಎಂದು ಶ್ರೀಧರವ್ಯಾಖ್ಯಾನ ಶುಕದೇವ ವ್ಯಾಖ್ಯಾನಗಳು ಹೇಳಿವೆ.

---

1. ಸಂಸ್ತುನ್ವತಃ ಸ್ತುತಿಂ ಕುರ್ವಾಣಾನ್ ಋಷೀನ್ ವಾಲಖಿಲ್ಯಾನ್ ಕಶ್ಯಪಾರ್ಥಂ ಸಮಿದಾಹರಣೇ ಗೋಷ್ಪದೇ ಮಗ್ನಾನ್ ಇಂದ್ರೇಣೋಪಹಸಿತಾನ್ ಉದ್ಧೃತ್ಯಾಪದೋಽಮೋಚಯತ್ ।
-ಶ್ರೀಧರಃ

ಗರುಡೋಪಾಖ್ಯಾನ ಪ್ರಸಿದ್ಧಾನ್ ಶ್ರಮಣಾನ್ ತಪಸಾಽತಿಕ್ಷೀಣಾನ್ ಕಶ್ಯಪಾಜ್ಞಯಾ ಸಮಿದಾಹರಣೇ ಪಲಾಶಪತ್ರಮೂಲಯಷ್ಟಿಕಾಮೇಕೈಕಾಂ ಗೃಹೀತ್ವಾ ಸೂಕ್ಷ್ಮಶರೀರತ್ವೇನ ಗೋಷ್ಪದೇ ಪತಿತಾನ್ ಮಹದ್ಧ್ವಾರವತಾ ಇಂದ್ರೇಣ ಉಪಹಸಿತಾನ್, ಸಂಸ್ತುನ್ವತಃ ಸ್ತುತಿಂ ಕುರ್ವಾಣಾನ್ । ವಾಲಖಿಲ್ಯಾನುದ್ಧೃತ್ಯಾಮುಂಚತ್ । -ಶುಕದೇವಃ

[2] ವಲ್ಲಭ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ– ಋಷಿಗಳು ಸಮುದ್ರದಲ್ಲಿ ಬಿದ್ದ ಕಥೆ ಕಲ್ಪಾಂತರಕ್ಕೆ ಸಂಬಂಧಿಸಿದ್ದು. ಅದರಿಂದ ಅದರ ವಿವರ ತಿಳಿದು ಬರುವುದಿಲ್ಲ. ಕೆಲವರು ಹೇಳುತ್ತಾರೆ, ಕಶ್ಯಪರಿಗಾಗಿ ಸಮಿಧೆಗಳನ್ನು ತರುವಾಗ ವಾಲಖಿಲ್ಯರು ಗೋಮೂತ್ರದಲ್ಲಿ ಬಿದ್ದರೆಂದು. ಅಥವಾ ಗರುಡನು ಒಯ್ಯುತ್ತಿದ್ದ ಆಲದ ಕೊಂಬೆಯಲ್ಲಿ ಅವರು ತಪಸ್ಸು ಮಾಡುತ್ತಿದ್ದರು, ಆಗ ಸಮುದ್ರದಲ್ಲಿ ಬಿದ್ದರು. ಅವರ ಸ್ತೋತ್ರವನ್ನು ಕೇಳಿ ಭಗವಂತ ಅವರನ್ನು ಉದ್ಧರಿಸಿದ' ಎಂದು.

ಈ ಕಥೆಗಳಿಗೆ ಆಧಾರವಿಲ್ಲ. ಗರುಡೋಪಾಖ್ಯಾನದಲ್ಲಿ ಗರುಡನು ಆಲದ ಕೊಂಬೆಯನ್ನು ಎಲ್ಲಿಯೂ ಕೆಳಗೆ ಬೀಳಿಸದೆ ಗಂಧಮಾದನ ಪರ್ವತಕ್ಕೆ ಒಯ್ದು ಮುನಿಗಳನ್ನು ಅಲ್ಲಿ ಕ್ಷೇಮವಾಗಿ ಕೆಳಗೆ ಇಳಿಸಿದ್ದು, ಮುನಿಗಳು ಬಳಿಕ ಹಿಮಾಲಯಕ್ಕೆ ತಪಸ್ಸಿಗೆ ಹೋದುದು ಮಹಾಭಾರತದಲ್ಲಿ ಸ್ಪಷ್ಟವಿದೆ. ಸಮುದ್ರದಲ್ಲಿ ಬಿದ್ದ ಕತೆ ಕೇವಲ ಕಾಲ್ಪನಿಕ. ಗೋ ಪಾದದ ಹಳ್ಳದಲ್ಲಾಗಲಿ ಗೋ ಮೂತ್ರದಲ್ಲಾಗಲಿ ಬಿದ್ದಂತೆ ಕತೆಯೂ ಇಲ್ಲ. ಸ್ತೋತ್ರವನ್ನು ಕೇಳಿ ಭಗವಂತ ಅವರನ್ನು ಉದ್ಧರಿಸಿದ್ದೂ ಇಲ್ಲ. ಅವತಾರಗಳನ್ನು ಹೇಳುವ ಈ ಸಂದರ್ಭದಲ್ಲಿ ಮುನಿಗಳನ್ನು ಉದ್ಧರಿಸಿದ ಅವತಾರ ಯಾವುದೆಂದೂ ಈ ವ್ಯಾಖ್ಯಾನಕಾರರು ಯಾರೂ ಹೇಳಿಲ್ಲ. ವಲ್ಲಭವ್ಯಾಖ್ಯಾನವಂತೂ ಕಲ್ಪಾಂತರದ ಕಥೆ ಎಂದಿದೆ, ಅದಕ್ಕೂ ಆಧಾರವನ್ನು ತೋರಿಸಿಲ್ಲ. ಶ್ರೀಮದಾಚಾರ್ಯರು ಇದು ವ್ಯಾಸಾವತಾರವೆನ್ನುತ್ತ ಅದಕ್ಕೆ ವೇದಮಂತ್ರವನ್ನೂ ವ್ಯಾಸತಂತ್ರವಚನವನ್ನೂ ಆಧಾರವಾಗಿ ತೋರಿಸಿದ್ದಾರೆ.

ಸುಪರ್ಣಾ ಋಷಯೋ ವ್ಯಾಸಂ ನಾಥಮಾನಾ ಯಯುಃ ಸದಾ ।
ಧ್ವಾಂತಂ ನಿವಾರಯಾಸ್ಮಾಕಂ ಮುಮುಗ್ಧೀತಿ ಚ ವಾದಿನಃ ॥
ಇತಿ ವ್ಯಾಸತಂತ್ರೇ ॥

ಸ್ಮರಣಾತ್ತು ನೃಸಿಂಹಸ್ಯ ಶಕ್ರೋ ಮುಕ್ತೋ ಬೃಹದ್ವಧಾತ್ ।
ಹಿರಣ್ಯಕ ಹೃತಾಶ್ಚಾಪಿ ತಥೈವಾಪ್ಸರಸಾಂ ಗಣಾಃ ॥
ಇತಿ ಭಯಭಂಜನೇ ॥

'ಭಕ್ತಿ ಜ್ಞಾನಾದಿಪೂರ್ಣರಾದ ಋಷಿಗಳು ವ್ಯಾಸರನ್ನು ಸದಾ ನಮ್ಮ ಅಜ್ಞಾನದ ಕತ್ತಲನ್ನು ನಾಶಮಾಡು ಎಂದು ಬೇಡುತ್ತ ಸಂಸಾರದಿಂದ ಮೋಚನ ಮಾಡೆಂದು

---

2. ಅಬ್ಧಿಪತಿತಾನಿತಿ ಕಲ್ಪಾಂತರತ್ವಾತ್ತಿರೋಹಿತಂ । ಕಶ್ಯಪೇಧ್ಮಾಹರಣ ಸಮಯೇ ಗೋಮೂತ್ರ ಪತಿತಾನಿತಿ ಕೇಚಿತ್ । ಗಜೇಂದ್ರಸ್ಯೇವ ತೇಷಾಮವಸ್ಥಾ ಗರುಡೇನ ನೀಯಮಾನಾನಾಂ ವಾ ಸಮುದ್ರೇ ಪಾತಃ । -ವಲ್ಲಭಃ

ಹೇಳುತ್ತ ಅವರ ಬಳಿಗೆ ಹೋದರು' ಎಂದು ವ್ಯಾಸತಂತ್ರದಲ್ಲಿ ವೇದಮಂತ್ರಕ್ಕೆ ವ್ಯಾಖ್ಯಾನವಿದೆ.

ನೃಸಿಂಹನ ಸ್ಮರಣದಿಂದ ದೇವೇಂದ್ರನು ಬ್ರಹ್ಮಹತ್ಯೆಯಿಂದ ಪಾರಾದ. ಹಾಗೇ ಹಿರಣ್ಯಕಶಿಪು ಅಪಹರಿಸಿದ್ದ ಅಪ್ಸರೆಯರ ಸಮೂಹಗಳೂ ಬಿಡುಗಡೆ ಹೊಂದಿದುವು ಎಂದು ಭಯಭಂಜನ ಗ್ರಂಥದಲ್ಲಿದೆ.

ವ್ಯಾಸತಂತ್ರದಲ್ಲಿ ವ್ಯಾಖ್ಯಾನ ಮಾಡಿದ ವೇದ ಮಂತ್ರ ಇದು–

ವಯಃ ಸುಪರ್ಣಾ ಉಪ ಸೇದುರಿಂದ್ರಂ
ಪ್ರಿಯಮೇಧಾ ಋಷಯೋ ನಾಧಮಾನಾಃ ।
ಉಪ ಧ್ವಾಂತಮೂರ್ಣುಹಿ ಪೂರ್ಧಿ ಚಕ್ಷು
ರ್ಮುಮುಗ್ಧ್ಯಸ್ಮಾನ್ ನಿಧಯೇವ ಬದ್ಧಾನ್ ॥

(ಋಗ್ವೇದ 10.73.11)

'ಒಳ್ಳೆಯ ರೆಕ್ಕೆಗಳಿಂದ ಕೂಡಿದ ಹಕ್ಕಿಗಳಂಥವರು, ಜ್ಞಾನಾದಿ ಗುಣಪೂರ್ಣರಾಗಿದ್ದೂ ಸಂಸಾರದಲ್ಲಿ ಬದ್ಧರಾಗಿದ್ದವರು ಜ್ಞಾನಯೋಗಿಗಳಾದ ಋಷಿಗಳು 'ನಮ್ಮ ಅಜ್ಞಾನದ ಕತ್ತಲನ್ನು ತೆಗೆ, ಜ್ಞಾನದಿಂದ ನಮ್ಮನ್ನು ತುಂಬು, ಪಾಶದಲ್ಲಿ ಸಿಲುಕಿದ ಹಕ್ಕಿಗಳಂತೆ, 'ನಿಧಾ' ಅಂದರೆ ನಿಧಾನ, ಪೆಟ್ಟಿಗೆ, ಅದರಿಂದ ಬಂಧಿತವಾಗುವ ರತ್ನಾಭರಣದಂತೆ, ಪ್ರಕೃತಿಯಲ್ಲಿ ಬಂಧಿತರಾದ ನಮ್ಮನ್ನು ಮೋಚನ ಮಾಡು' ಎಂದು ಬೇಡುತ್ತ ವೇದವ್ಯಾಸರ ಬಳಿಗೆ ಹೋದರು'.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ದ್ರುಮಿಲ ಮಹಾಮುನಿ ಉಪೇಂದ್ರಾವತಾರಗಳನ್ನು ಹೇಳುತ್ತಾರೆ.

ದೇವಾಸುರೇ ಯುಧಿ ಸ ದೈತ್ಯಪತೀನ್ ಸುರಾರ್ಥೇ
ಹತ್ವಾಽಂತರೇಷು ಭುವನಾನ್ಯದಧಾತ್ಕಲಾಭಿಃ ।
ಭೂತ್ವಾಽಥ ವಾಮನ ಇಮಾಮಹರದ್ಬಲೇಃ ಕ್ಷ್ಮಾಂ
ಯಾಂಚಾಚ್ಛಲೇನ ಸಮದಾದದಿತೇಃ ಸುತೇಭ್ಯಃ ॥ ೨೦ ॥

ಉಪೇಂದ್ರಾವತಾರಿ ಶ್ರೀಹರಿ ಪ್ರತಿಮನ್ವಂತರದಲ್ಲಿಯೂ ದೇವಾಸುರ ಯುದ್ಧ ದಲ್ಲಿ ದೇವತೆಗಳಿಗಾಗಿ ಮಹಾದೈತ್ಯರನ್ನು ಕೊಂದು ಲೋಕಗಳನ್ನು ಕಾಪಾಡಿದ. ವಾಮನನಾಗಿ ಅವತರಿಸಿ ಭೂಮಿಬೇಡುವ ನೆಪದಿಂದ ಬಲಿಯಿಂದ ಭೂಮಿಯನ್ನು ಅಪಹರಿಸಿ ದೇವತೆಗಳಿಗೆ ನೀಡಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಈ ಶ್ಲೋಕದಲ್ಲಿ ವಾಮನಾವತಾರವನ್ನು ಉಲ್ಲೇಖಮಾಡಿದ್ದಾರೆ. ವಾಮನಾವತಾರ ಈ ವೈವಸ್ವತ ಮನ್ವಂತರದಲ್ಲಿ ನಡೆಯಿತು. ಬೇರೆ ಮನ್ವಂತರಗಳಲ್ಲಿ ಬೇರೆ ಅನೇಕ ಅವತಾರಗಳು ಎಂದಿದ್ದಾರೆ. ವಸ್ತುತಃ ಇಂದ್ರನಿಗೆ ಅಸುರರಿಂದ ರಕ್ಷಣೆ ಕೊಡಲು ಪ್ರತಿ ಮನ್ವಂತರದಲ್ಲಿ ಉಪೇಂದ್ರಾವತಾರ ಗಳನ್ನು ಮಾಡುತ್ತಾನೆ. ಈ ಮನ್ವಂತರದ ವಾಮನನೂ ಉಪೇಂದ್ರಾವತಾರನೆ. ಆದರೆ ಈ ಮನ್ವಂತರದವನೆಂದು ಬೇರೆಯಾಗಿ ಉಕ್ತನಾಗಿದ್ದಾನೆ.

ಹದಿನಾಲ್ಕು ಮನ್ವಂತರಗಳಲ್ಲಿ ಉಪೇಂದ್ರಾವತಾರಗಳು ಹನ್ನೆರಡು. ಏಕೆಂದರೆ ಮೊದಲನೆಯ ಸ್ವಾಯಂಭುವ ಮನ್ವಂತರದಲ್ಲಿ ಶ್ರೀಹರಿ ತಾನೆ ಯಜ್ಞನಾಮಕ ಇಂದ್ರನಾಗಿದ್ದ. ಅವನಿಗೊಬ್ಬ ಉಪೇಂದ್ರ ಬೇಕಾಗಿರಲಿಲ್ಲ. ಹಾಗೇ ತಾಪಸ ಮನ್ವಂತರದಲ್ಲಿ ತಾನೇ ತಾಪಸಮನುವಾಗಿದ್ದ. ಆಗಲೂ ಉಪೇಂದ್ರಾವತಾರ ವಾಗಲಿಲ್ಲ. ಉಳಿದ ಹನ್ನೆರಡು ಮನ್ವಂತರಗಳಲ್ಲಿ ವಿಭು ಸತ್ಯಸೇನ ವೈಕುಂಠ ಅಜಿತ ವಾಮನ ಪ್ರಭು ಋಷಭ ಶ್ರೀಮೂರ್ತಿ ಧರ್ಮಸೇತು ವೈಕುಂಠ ಸ್ವಧಾಮ ಯೋಗೇಶ್ವರ ಬೃಹದ್ಭಾನು ಎಂದು ಹನ್ನೆರಡು ಉಪೇಂದ್ರಾವತಾರಗಳು. ಈ ಅಭಿಪ್ರಾಯದಿಂದ 'ಉಪೇಂದ್ರಾವತಾರಿ ಭಗವಂತ ಪ್ರತಿ ಮನ್ವಂತರದಲ್ಲಿಯೂ ಅಸುರರನ್ನು ವಧಿಸುವನು' ಎಂದು ಶ್ರೀಮದಾಚಾರ್ಯರು ವಾಮನಪುರಾಣದ ಆಧಾರವನ್ನು ತೋರಿಸುತ್ತಾರೆ.

ಉಪೇಂದ್ರರೂಪೀ ಭಗವಾನ್ ಪ್ರತಿಮನ್ವಂತರಂ ವಿಭುಃ ।
ಅಸುರಾನ್ ಹಂತಿ ನಿಯತಂ ಶ್ರಾದ್ಧದೇವೇ ಚ ವಾಮನಃ ।
ಇತಿ ವಾಮನೇ ॥

ಉಪೇಂದ್ರಾವತಾರಿ ಭಗವಂತ ಪ್ರತಿ ಮನ್ವಂತರದಲ್ಲಿ ತಪ್ಪದೆ ಅಸುರರನ್ನು ವಧಿಸುತ್ತಾನೆ. ವೈವಸ್ವತ ಮನ್ವಂತರದಲ್ಲಿ ವಾಮನ ಬಲಿಯನ್ನು ನಿಗ್ರಹಿಸುತ್ತಾನೆ. ಎಂದು ವಾಮನ ಪುರಾಣದಲ್ಲಿದೆ.

ವಾಮನನೂ ಒಬ್ಬ ಉಪೇಂದ್ರನೇ ಎಂಬುದನ್ನು ದಶಮಸ್ಕಂಧದಲ್ಲಿ ಶ್ರೀಕೃಷ್ಣ ವಸುದೇವ ದೇವಕಿಯರ ಮುಂದೆ ಹೇಳುತ್ತಾನೆ.

ತಯೋರ್ವಾಂ ಪುನರೇವಾಹಮದಿತ್ಯಾಮಾಸ ಕಶ್ಯಪಾತ್
ಉಪೇಂದ್ರ ಇತಿ ವಿಖ್ಯಾತೋ ವಾಮನತ್ವಾಚ್ಚ ವಾಮನಃ ॥

ಹಿಂದೆ ಪೃಶ್ನಿ ಸುತಪ ದಂಪತಿಗಳಾಗಿದ್ದ ನಿಮಗೆ ಅದಿತಿ ಕಶ್ಯಪಜನ್ಮದಲ್ಲಿ ಪುನಃ

ಮಗನಾಗಿ ಅವತರಿಸಿದೆ. ಉಪೇಂದ್ರನೆಂದು ಪ್ರಸಿದ್ಧನಾದೆ. ಮತ್ತು ಸುಂದರನೂ ಸಣ್ಣವನೂ ಆದ್ದರಿಂದ ವಾಮನನೆಂದೂ ಪ್ರಸಿದ್ಧನಾದೆ ಎಂದು.

|| ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್‌ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ಚತುರ್ಥೋಽಧ್ಯಾಯಃ ||

❖❖❖

ಅಧ್ಯಾಯ-೫

ಅಧ್ಯಾಯ ಸಾರಾಂಶ

'ಹರಿಭಜನೆ ಮಾಡದೆ, ಮನಸ್ಸಿನಲ್ಲಿ ವಿಷಯಾಸಕ್ತಿಯನ್ನು ತುಂಬಿಕೊಂಡು ಇಂದ್ರಿಯನಿಗ್ರಹ ಮಾಡಿಕೊಳ್ಳದವರ ಗತಿ ಏನು?' ಎಂದು ವಿದೇಹರಾಜ ಕೇಳಿದ. **ಚಮಸ**ಮಹಾಮುನಿ ನುಡಿದರು—

ಶ್ರೀಹರಿಯ ಮುಖ ಬಾಹು ಊರು ಪಾದಗಳಿಂದ ಬ್ರಾಹ್ಮಣಾದಿ ನಾಲ್ಕು ವರ್ಣದವರೂ ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳೂ ಉತ್ಪನ್ನವಾದುವು. ಈ ನಾಲ್ಕು ವರ್ಣಾಶ್ರಮದವರು ಜನ್ಮದಾತನಾದ ಹರಿಯನ್ನು ಭಜಿಸದಿದ್ದರೆ ಪತಿತರಾಗುವರು.

ವೇದಾಧಿಕಾರವಿಲ್ಲದ, ಹರಿಕಥಾಶ್ರವಣ ನಾಮಸಂಕೀರ್ತನಗಳಿಂದಲೂ ದೂರವಿರುವ ಸ್ತ್ರೀಶೂದ್ರಾದಿಗಳನ್ನು ನಿಮ್ಮಂಥವರು ಅನುಕಂಪೆಯಿಂದ ಕಂಡು ಮಾರ್ಗದರ್ಶನ ನೀಡಬೇಕು. ವೇದಾಧಿಕಾರವಿದ್ದೂ ಹರಿಭಜನೆಯನ್ನು ಒಲ್ಲದವರು ಅನುಕಂಪೆಗೆ ಯೋಗ್ಯರಲ್ಲ. ಅವರು ಮೂರ್ಖರು. ತಮ್ಮನ್ನು ತಾವೇ ಪಂಡಿತರೆಂದುಕೊಳ್ಳುತ್ತಾರೆ. ಭಗವತ್‌ಪ್ರೀತಿಗಾಗಿ ಕರ್ಮಮಾಡಬೇಕೆನ್ನುವ ವೇದದ ರಹಸ್ಯವನ್ನು ಅರಿತಿರುವುದಿಲ್ಲ. ಅರಿತವರನ್ನು ಕೇಳಿ ತಿಳಿಯುವುದೂ ಇಲ್ಲ.

'ಅಕ್ಷಯ್ಯಂ ಹ ವೈ' ಮುಂತಾದ ವೇದವಾಕ್ಯಗಳನ್ನು ಕಂಡು ಯಾಗದಿಂದ ಶಾಶ್ವತವಾದ ಮೋಕ್ಷಸುಖ ಸಿಗುವುದೆಂದು ಭ್ರಮಿಸಿ ಅಜ್ಞಾನಿಗಳು ಮೋಸಹೋಗುತ್ತಾರೆ. ತಮ್ಮ ಸುಖಕ್ಕಾಗಿ ಪ್ರಾಣಿಗಳನ್ನು ಬಲಿಕೊಡುತ್ತಾರೆ. 'ಅದು ಸರಿಯಲ್ಲ' ಎಂದರೆ ರೇಗುತ್ತಾರೆ. ಸಂಪತ್ತು

ಗಳಿಸುವುದು ಉದರಪೂಜೆಗೇ ಹೊರತು ನಿಮ್ಮ ಹರಿಪೂಜೆಗೆ ಅಲ್ಲ ಎನ್ನುತ್ತಾರೆ. ಅವರ ಮಾತುಕತೆಯೆಲ್ಲವೂ ಧನಸಂಪಾದನೆಯ ಬಗ್ಗೇ ಇರುತ್ತದೆ. ಹೊಗಳಿಕೆ ಸನ್ಮಾನವೆಲ್ಲವೂ ಶ್ರೀಮಂತಿಕೆಗೆ ಸಲ್ಲುತ್ತದೆ. ಹರಿದಾಸರನ್ನು ಗೇಲಿ ಮಾಡುತ್ತಾರೆ.

ಸರ್ವಾಭೀಷ್ಟದಾಯಕ ಹರಿಯೇ ಹೊರತು ಯಾಗವಲ್ಲ ಎಂದು ವೇದವು ಹೇಳುತ್ತಿದ್ದರೂ ಈ ಮೂರ್ಖರು ಅದನ್ನು ತಿಳಿಯುವುದಿಲ್ಲ. ಮದ್ಯಪಾನ ಸ್ತ್ರೀಸಂಗ ಮುಂತಾದವುಗಳು ವೇದದಲ್ಲಿ ವಿಹಿತವಾಗಿರುವುದು ಹರಿಯ ಆರಾಧನೆಗಾಗಿ ಎಂದು ಇವರು ಒಪ್ಪುವುದಿಲ್ಲ. ವಸ್ತುತಃ ವಿಷಯಭೋಗಕ್ಕಾಗಿ ಅವುಗಳನ್ನು ವೇದವು ವಿಧಿಸಬೇಕಾಗಿಲ್ಲ. ವೇದವಿಧಿ ಇಲ್ಲದೆಯೇ ಸಹಜವಾಗಿಯೇ ಅದರಲ್ಲಿ ಪ್ರವೃತ್ತಿ ಉಂಟಾಗುತ್ತದೆ. ಹರಿಪೂಜೆ ಎಂಬ ಭಾವನೆಯಿಲ್ಲದೆ ಪ್ರವೃತ್ತಿ ಮಾಡುವುದನ್ನು ವೇದವು ನಿಷೇಧಿಸುತ್ತದೆ. ಅದನ್ನು ಅಲಕ್ಷ್ಯಮಾಡಿ ಸ್ವಚ್ಛಂದವಾಗಿ ವರ್ತಿಸುವುದು ಅಸುರ ಸ್ವಭಾವದ ಆ ಅಜ್ಞಾನಿಗಳಿಗೆ ಚಟವಾಗಿದೆ.

ದೇವಯಜ್ಞದಲ್ಲಿ ಮದ್ಯಪಾನವೆಂದರೆ ಮದ್ಯವನ್ನು ಮೂಸಿನೋಡಿ ಬಿಡುವುದೇ ಹೊರತು ಕುಡಿಯುವುದಲ್ಲ. ವಾಮದೇವಯಜ್ಞದಲ್ಲಿ ಸ್ತ್ರೀಸಂಗ ಸಂತತಿಗಾಗಿ ಹೊರತು ಇಂದ್ರಿಯಸುಖಕ್ಕಾಗಿ ಅಲ್ಲ. ಪಶುಯಜ್ಞದಲ್ಲಿ ಪಶುವಧೆ 'ಆ ಲಭನ' ಪಶುವಿಗೆ ಸ್ವರ್ಗವನ್ನು ದೊರಕಿಸುವ ಪ್ರಕ್ರಿಯೆಯೆ ಹೊರತು ಹಿಂಸೆಯಲ್ಲ. ಇಂಥ ನಿರ್ಮಲವಾದ ಧರ್ಮಾಚರಣೆಯನ್ನು ಮೂರ್ಖರು ತಿಳಿಯುವುದಿಲ್ಲ.

ಧನಸಂಪಾದನೆ ಧರ್ಮಸಾಧನೆಯ ಮೂಲಕ ಅಂತಃಕರಣ ಶುದ್ಧಿಗಾಗಿ ಜ್ಞಾನಮೋಕ್ಷಗಳಿಗಾಗಿ ವಿಹಿತವಾಗಿದೆ. ಎಂದಾದರೂ ನಶಿಸಿಹೋಗುವ ಶರೀರದ ಪೂಜೆಗಾಗಿ ಅಲ್ಲ. ಶರೀರಪೂಜೆಗಾಗಿ ಪಶುಬಲಿ ಎನ್ನುವವರು ಮುಂದೆ ನರಕದಲ್ಲಿ ಈ ಪಶುಗಳೇ ಇವರ ಶರೀರವನ್ನು ಕಚ್ಚಿ ಸೀಳಿ ತಿನ್ನುವುದನ್ನು ತಿಳಿಯುವುದಿಲ್ಲ. ತಮ್ಮ ಶರೀರದಲ್ಲಿ ನಿಯಾಮಕನೊಬ್ಬನನ್ನು ಒಪ್ಪದೆ ತಾವೇ ಸ್ವತಂತ್ರರೆಂದು ತಿಳಿಯುವವರು ಶರೀರಮೋಹಬಂಧನದಲ್ಲಿ ಸಿಲುಕಿ ತಾವಾಗಿ ಅಧಃಪತನ ಹೊಂದುತ್ತಾರೆ. ಸಾಧನ ಶರೀರವನ್ನು ಪಡೆದೂ ಮೋಕ್ಷ ಸಾಧಿಸಿಕೊಳ್ಳದ ಈ ಮೂರ್ಖರು ಶೋಚನೀಯರೆ ಸರಿ.

ಹರಿಯನ್ನು ಅಂತರ್ಯಾಮಿ ಎಂದು ತಿಳಿಯದೆ ದೇವೋತ್ತಮ ನೆಂದು ಮಾತ್ರ ತಿಳಿಯುವ ರಾಜಸ ಸ್ವಭಾವದವರು ಕರ್ಮದಿಂದ ಸ್ವರ್ಗಸುಖವನ್ನು ಸಂಪಾದಿಸುತ್ತಾರೆ, ಆದರೆ ಪುಣ್ಯ ತೀರಿದಾಗ ತಿರುಗಿ ಭೂಮಿಗೇ ಬಂದು ಬೀಳುತ್ತಾರೆ. ತಾಮಸ ಸ್ವಭಾವದವರು ತಾವು ದೇವರಾಗುವ ಹಗಲುಗನಸು ಕಾಣುತ್ತಲೇ ಇರುತ್ತಾರೆ. ಕಾಲ ನಿಯಾಮಕ ಪರಮಾತ್ಮ ಅವರ ಕನಸನ್ನು ನುಚ್ಚುನೂರು ಮಾಡಿ ಅವರನ್ನು ತಮಸಿನಲ್ಲಿ ಹಾಕುತ್ತಾನೆ.

ಮುಂದೆ **ಕರಭಾಜನ** ಮಹಾಮುನಿಯ ಉಪದೇಶ. ಯಾವ ಯುಗದವರು ಯಾವ ಅವತಾರರೂಪವನ್ನು ಹೇಗೆ ಆರಾಧಿಸುತ್ತಾರೆ ಎಂಬುದನ್ನು ಅವರು ಉಪದೇಶಿಸುತ್ತಾರೆ.

ಕೃತಯುಗದ ಜನರು ಹೆಚ್ಚಾಗಿ ಶುಕ್ಲವರ್ಣದ, ಜಟಾಧಾರಿಯಾದ, ನಾರುಡೆಉಟ್ಟು ಕೃಷ್ಣಾಜಿನ ಉಪವೀತ ಅಕ್ಷಮಾಲೆ ದಂಡ ಕಮಂಡಲುಗಳನ್ನು ಧರಿಸಿದ, ಚತುರ್ಭುಜ ಭಗವನ್ಮೂರ್ತಿಯನ್ನು ಧ್ಯಾನದಿಂದ ಆರಾಧಿಸುತ್ತಾರೆ. ಅವನೊಬ್ಬನೇ ದೇವ. ರಮಾ ಬ್ರಹ್ಮಾದಿಗಳೆಲ್ಲರೂ ಅವನ ಭಕ್ತರು ಎಂದು ಹಂಸ ಸುಪರ್ಣ ವೈಕುಂಠಾದಿ ನಾಮಗಳಿಂದ ಭಜಿಸುತ್ತಾರೆ.

ತ್ರೇತಾಯುಗದ ಜನರು ಹೆಚ್ಚಾಗಿ ರಕ್ತವರ್ಣದ, ಬಂಗಾರದಂಥ ಕೂದಲು ಧರಿಸಿದ, ನಾಲ್ಕು ಕೈಗಳಲ್ಲಿ ಸ್ರುಕ್‌ಸ್ರುವ ಮುಂತಾದುವನ್ನು ಹಿಡಿದ ಯಜ್ಞಪುರುಷ ಭಗವಂತನನ್ನು ವೇದತ್ರಯ ಪ್ರತಿಪಾದ್ಯನೆಂದು, ವೇದೋಕ್ತ ದೇವತೆಗಳೊಳಗೆ ಅಂತರ್ಗತನಾಗಿರುವನೆಂದು, ಆ ದೇವತೆಗಳೊಂದಿಗೆ ಯಜ್ಞಗಳಿಂದ ಆರಾಧಿಸುತ್ತಾರೆ. ವಿಷ್ಣು ಯಜ್ಞ ಪ್ರಶ್ನಿಗರ್ಭ ಮುಂತಾದ ನಾಮಗಳಿಂದ ಕೊಂಡಾಡುತ್ತಾರೆ.

ದ್ವಾಪರ ಯುಗದಲ್ಲಿ ಶ್ಯಾಮವರ್ಣದ ದ್ವಾತ್ರಿಂಶಲ್ಲಕ್ಷಣ ಭರಿತ ಪೀತಾಂಬರಧಾರಿ ಸುಂದರ ಶರೀರದಲ್ಲಿ ಚಕ್ರಾದಿ ಆಯುಧಗಳನ್ನೂ ಶ್ರೀವತ್ಸಾದಿ ಚಿಹ್ನೆಗಳನ್ನೂ ಧರಿಸಿದ ಭಗವನ್ಮೂರ್ತಿಯನ್ನು ವೇದ ಪಂಚರಾತ್ರಗಳಿಗನುಸಾರವಾಗಿ ಅರ್ಚಿಸುತ್ತಾರೆ. ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ನಾರಾಯಣ ಋಷಿ ಪುರುಷ ಮುಂತಾದ ನಾಮಗಳನ್ನು ಜಪಿಸುತ್ತಾರೆ.

ಕಲಿಯುಗದಲ್ಲಿ ಸರ್ವಾಂಗ ಕೌಸ್ತುಭಾದಿಗಳಿಂದ ಅಲಂಕೃತನಾದ ಗರುಡ ವಿಷ್ವಕ್ಸೇನಾದಿ ಪರಿವಾರದಿಂದ ಕೂಡಿದ ಕೃಷ್ಣವರ್ಣದ ಕೃಷ್ಣನನ್ನು ನಾಮಸಂಕೀರ್ತನ ಯಜ್ಞಗಳಿಂದ ಆರಾಧಿಸುತ್ತಾರೆ.

'ನಮಗೆ ಸದಾ ಧ್ಯಾನಗೋಚರವಾಗಿ ಸಕಲಾನಿಷ್ಟಗಳನ್ನು ಪರಿಹರಿಸುತ್ತ ಸಕಲಾಭೀಷ್ಟ ನೀಡುತ್ತ ಭವಸಾಗರ ದಾಟಿಸುವಲ್ಲಿ ನೌಕೆಯಂತಿರುವುದು, ಶಿವಬ್ರಹ್ಮಾದಿ ವಂದ್ಯವಾದ ಶ್ರೀಹರಿಯ ಚರಣಾರವಿಂದ. ಗಂಗಾದಿ ಸಕಲ ತೀರ್ಥಗಳು ಅದರಲ್ಲಿಯೇ ಇವೆ. ಪಿತೃವಾಕ್ಯ ಪರಿಪಾಲನೆಗಾಗಿ, ದೇವತೆಗಳೂ ಅಪೇಕ್ಷಿಸಬಹುದಾದ ಸಾಮ್ರಾಜ್ಯ ಸಂಪತ್ತನ್ನು ತೊರೆದು ಗುಡ್ಡಗಾಡುಗಳಲ್ಲಿ ಓಡಾಡಿ ಪ್ರಿಯೆಯಾದ ಸೀತಾದೇವಿಗೆ ಬೇಕೆನಿಸಿದ ಮಾಯಾಜಿಂಕೆಯನ್ನು ಬೆನ್ನಟ್ಟಿ ಧಾವಿಸಿತು ಆ ಹರಿಯ ಚರಣ' ಎಂದು ಸಂಕೀರ್ತನ ಮಾಡುತ್ತಾರೆ.

ಗುಣಗ್ರಾಹಿಗಳು ಕಲಿಯುಗದಲ್ಲಿಯೂ ಒಂದು ದೊಡ್ಡ ಗುಣವನ್ನು ಕಂಡಿದ್ದಾರೆ. ಅದೇನೆಂದರೆ ಕಲಿಯುಗದಲ್ಲಿ ನಾಮಸಂಕೀರ್ತನೆಯಿಂದಲೆ ಎಲ್ಲ ಅಭೀಷ್ಟ ದೊರಕುವುದು. ಅದರಿಂದ ಬೇರೆ ಯುಗದ ಜನರೂ ಕಲಿಯುಗದಲ್ಲಿ ಜನಿಸಲು ಬಯಸುತ್ತಾರೆ.

ಕಲಿಯುಗದಲ್ಲೂ ಪರಮ ಭಗವದ್ಭಕ್ತರು ಅಲ್ಲಲ್ಲಿ, ವಿಶೇಷವಾಗಿ ದ್ರಾವಿಡ ದೇಶದಲ್ಲಿ, ತಾಮ್ರಪರ್ಣೀ ಕೃತಮಾಲಾ ಪಯಸ್ವಿನೀ ಕಾವೇರಿ ನೇತ್ರವತಿ ಮುಂತಾದ ನದೀತೀರದಲ್ಲಿ ಕಂಡುಬರುತ್ತಾರೆ. ಈ ನದಿಗಳ ನೀರು ಕುಡಿಯುವ ಮಾನವರು ನಿರ್ಮಲ ಅಂತಃಕರಣದವರಾಗಿ ವಾಸುದೇವನ ಪರಮ ಭಕ್ತರಾಗುತ್ತಾರೆ.

ವಾಸುದೇವನ ಭಕ್ತರಾಗಿದ್ದು ಸರ್ವಾತ್ಮನಾ ಅವನನ್ನು ಮೊರೆಹೊಕ್ಕ ಬ್ರಹ್ಮಾದಿ ಉತ್ತಮ ದೇವತೆಗಳು ಬೇರೆ ದೇವತೆಗಳಿಗೆ ಋಷಿ ಮನುಷ್ಯಾದಿಗಳಿಗೆ ಸೇವಕರು ಋಣಿಗಳೆನಿಸುವುದಿಲ್ಲ. ಸ್ವೋತ್ತಮ ರಿಗೆ ಮಾತ್ರ ಅಧೀನರಾಗಿರುತ್ತಾರೆ.

ಹರಿಯ ಏಕಾಂತ ಭಕ್ತನು ಪ್ರಾರಬ್ಧವಶದಿಂದ ನಿಷಿದ್ಧಕರ್ಮ ಮಾಡಿದರೂ ಅದರಿಂದ ಅವನಿಗೆ ಲೇಪವಾಗದಂತೆ ಹರಿಯೇ ನೋಡಿಕೊಳ್ಳುತ್ತಾನೆ.'

ಹೀಗೆ ಋಷಭದೇವನಿಂದ ಜಯಂತೀದೇವಿಯಲ್ಲಿ ಜನಿಸಿ

ಜಾಯಂತೇಯರೆಂದು ಪ್ರಸಿದ್ಧರಾದ ಕವಿ ಮುಂತಾದ ಒಂಬತ್ತು ಮಂದಿ ಮುನಿಗಳು ವಿದೇಹರಾಜನಿಗೆ ಭಾಗವತ ಧರ್ಮಗಳನ್ನು ಉಪದೇಶಿಸಿದರು. ರಾಜ ಸಂತುಷ್ಟನಾಗಿ ಅವರನ್ನು ಸತ್ಕರಿಸಿದ.

ಎಲ್ಲರೂ ನೋಡುತ್ತಿದ್ದಂತೆಯೇ ಮುನಿಗಳು ಅಂತರ್ಧಾನರಾದರು. ರಾಜ ಭಾಗವತ ಧರ್ಮಗಳನ್ನು ಚೆನ್ನಾಗಿ ಅನುಷ್ಠಾನಮಾಡಿ ಪರಗತಿಯನ್ನು ಪಡೆದುಕೊಂಡ.'

ನಾರದರು ನುಡಿದರು, 'ವಸುದೇವ, ನೀನೂ ಹಾಗೇ ಮಾಡು. ನೀವು ದಂಪತಿಗಳು ಒಳ್ಳೆಯ ಕೀರ್ತಿಯಿಂದ ಜಗತ್ತನ್ನೇ ತುಂಬಿರುವಿರಿ. ಏಕೆಂದರೆ ಸರ್ವಶಕ್ತನಾದ ಭಗವಂತ ಶ್ರೀಕೃಷ್ಣನಾಗಿ ನಿಮ್ಮಲ್ಲಿ ಅವತರಿಸಿದ್ದಾನೆ. ಅವನನ್ನು ಮುದ್ದುಮಾಡಿದ ನಿಮ್ಮ ಆತ್ಮಗಳು ಪಾವನವಾದುವು. ಶಿಶುಪಾಲ ಪೌಂಡ್ರಕ ಸಾಲ್ವ ಮುಂತಾದವರು ಅಸುರಾವೇಶ ಪ್ರಯುಕ್ತ ದ್ವೇಷಯುಕ್ತವಾದ ಭಕ್ತಿಯನ್ನು ಮಾಡಿದರೂ ಮೋಕ್ಷ ಹೊಂದಿದರೆಂದಮೇಲೆ ನಿರ್ಮಲವಾದ ಭಕ್ತಿಮಾಡಿದ ನಿಮ್ಮ ಬಗ್ಗೆ ಬೇರೇನು ಹೇಳಬೇಕು? ಆದರೂ ಸರ್ವಶಕ್ತನಾದ ಕೃಷ್ಣ ಸ್ವೇಚ್ಛೆಯಿಂದ ತನ್ನ ಅಚಿಂತ್ಯಶಕ್ತಿಯನ್ನು ಮರೆಮಾಡಿಕೊಳ್ಳುತ್ತಾನೆ. ನೀವು ಮೋಸಹೋಗಬೇಡಿರಿ, ಅವನನ್ನು ಮಗನೆಂದು ತಿಳಿಯಬೇಡಿರಿ.'

ಮಹಾಭಾಗ್ಯಶಾಲಿಯಾದ ವಸುದೇವನೂ ದೇವಕಿಯೂ ಇದನ್ನು ಕೇಳಿ ಆಶ್ಚರ್ಯಗೊಂಡರು, ಬುದ್ಧಿಮೋಹವನ್ನು ದೂರವಾಗಿಸಿಕೊಂಡರು.

ಪುಣ್ಯಕರವಾದ ಈ ಜಾಯಂತೇಯೋಪಾಖ್ಯಾನವನ್ನು ಆದರದಿಂದ ಕೇಳಿ ಹೃದಯದಲ್ಲಿ ತುಂಬಿಕೊಳ್ಳುವವನು ಪಾಪಮುಕ್ತನಾಗುವನು, ಮುಕ್ತಿಯಲ್ಲಿ ಸ್ವಯೋಗ್ಯಪೂರ್ಣಾನಂದ ಭರಿತನಾಗುವನು.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಚಮಸ ಮಹಾಮುನಿ ವಿಷಯಾಸಕ್ತರಾದ ಮಾನವರ ವರ್ತನೆಯನ್ನು ವರ್ಣಿಸುತ್ತಾರೆ.

ವದಂತಿ ತೇಽನ್ಯೋನ್ಯಮುಪಾಸಿತಸ್ತ್ರಿಯೋ
ಗೃಹೇಷು ಮೈಥುನ್ಯಪರೇಷು ಚಾಶಿಷಃ ।

ಯಜಂತ್ಯಸೃಷ್ಟಾನ್ನವಿಧಾನದಕ್ಷಿಣಾ
ವೃತ್ತ್ಯೈ ಪರಂ ಘ್ನಂತಿ ಪಶೂನತದ್ವಿದಃ ॥ ೮ ॥

ಹರಿಯನ್ನು ಬಿಟ್ಟು ಕೇವಲ ಲಕ್ಷ್ಮಿಯನ್ನು ಉಪಾಸನೆ ಮಾಡುತ್ತಾರೆ. ಅವರ ಮನೆ ಭಗವತ್ಪೂಜಾದಿಗಳಿಗಾಗಿ ಅಲ್ಲ, ಕೇವಲ ಸ್ತ್ರೀಸುಖಭೋಗಕ್ಕಾಗಿ ಇರುತ್ತದೆ. ಇಂಥ ಮನೆಗಳಲ್ಲಿ ಅವರು ಪರಸ್ಪರವಾಗಿ ಕೇವಲ ಹಣ ಸಂಪಾದನೆಯ ಕೌಶಲ್ಯದ ವಿಷಯದಲ್ಲಿಯೇ ಹೊಗಳುತ್ತಾರೆ. ಯಾಗ ಮಾಡುತ್ತಾರೆ, ಆದರೆ ಅದರಲ್ಲಿ ಅನ್ನದಾನ ವಿಲ್ಲ. ಪುರೋಹಿತರಿಗೆ ಯೋಗ್ಯಸಂಭಾವನೆ ಕೊಡುವುದಿಲ್ಲ. ಪಶುವಧೆಯನ್ನು ಯಾಗದ ಹೆಸರಿನಲ್ಲಿ ತಮ್ಮ ಉದರಪೂರ್ತಿಗಾಗಿ ಮಾಡುತ್ತಾರೆ, ಇಂಥ ಪಶುಹಿಂಸೆ ಯಿಂದ ಬರುವ ಪಾಪದ ಬಗ್ಗೆ ಇವರಿಗೆ ಅರಿವಿರುವುದಿಲ್ಲ.

'ಉಪಾಸಿತ ಸ್ತ್ರಿಯಃ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. ಇದು ಸಮಂಜಸ ವಲ್ಲ. ಸ್ತ್ರೀಲಂಪಟರು ಸ್ತ್ರೀಯನ್ನು ಉಪಾಸನೆ ಮಾಡುವುದಿಲ್ಲ. ಆದರದಿಂದಲೂ ಕಾಣುವುದಿಲ್ಲ. ಭೋಗವಸ್ತುವೆಂದೇ ಕಾಣುತ್ತಾರೆ. 'ಉಪಾಸಿತ ಶ್ರಿಯಃ' ಎಂಬ ಪಾಠ ಸಮಂಜಸವಾಗಿದೆ. ಐಶ್ವರ್ಯ ಪ್ರಾಪ್ತಿಯ ಉದ್ದೇಶದಿಂದ ವಿಷಯಾಸಕ್ತರು ಶ್ರೀದೇವಿಯ ಉಪಾಸನೆ ಮಾಡುತ್ತಾರೆ. ಹರಿಯ ಉಪಾಸನೆ ಮಾಡುವುದಿಲ್ಲ. ಹರಿಯನ್ನು ಬಿಟ್ಟು ದೇವಿಯ ಉಪಾಸನೆ ಮಾಡಿದರೆ ಅನರ್ಥವೆಂದು ಭಾಗವತದ ಅಭಿಪ್ರಾಯ. ಅದಕ್ಕೆ ಶ್ರೀಮದಾ ಚಾರ್ಯರು ಪ್ರವೃತ್ತಿ ಸಂಹಿತೆಯ ಆಧಾರವನ್ನು ಕೊಡುತ್ತಾರೆ.

ಯೇ ತು ವಿಷ್ಣುಮವಿಜ್ಞಾಯ ಶ್ರಿಯಮೇವ ಹ್ಯುಪಾಸತೇ ।
ಉಪೇಕ್ಷ್ಯ ವಾ ಹರಿಂ ಯೇ ತು ಯಾಜ್ಯಾ ಭೂತ್ವಾ ಪತಂತ್ಯಧಃ ॥
ಇತಿ ಪ್ರವೃತ್ತಿ ಸಂಹಿತಾಯಾಂ ॥

ಯಾರು ಶ್ರೀಹರಿಯನ್ನು ತಿಳಿಯದೆ ಅಥವಾ ಅವನನ್ನು ಉಪೇಕ್ಷಿಸಿ ಶ್ರೀದೇವಿಯನ್ನೇ ಉಪಾಸನೆ ಮಾಡುತ್ತಾರೆ ಮತ್ತು ಅವಿಹಿತವಾದ ಯಜ್ಞಗಳನ್ನು ಮಾಡುತ್ತಾರೆ ಅವರು ಹೀನಯೋನಿಯಲ್ಲಿ ಜನಿಸಿ ಕೊನೆಯಲ್ಲಿ ನರಕದಲ್ಲಿ ಬೀಳುತ್ತಾರೆ ಎಂದು ಪ್ರವೃತ್ತಿ ಸಂಹಿತೆಯಲ್ಲಿ ಹೇಳಿದೆ.

❖❖❖

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಚಮಸಮುನಿ ಸ್ತ್ರೀ ಮಾಂಸ ಮದ್ಯಸೇವನೆಗಳನ್ನು ಯಜ್ಞಾಂಗವಾಗಿಯೇ ಮಾಡಬೇಕೆಂದು ವಿಧಿ ಇದೆ ಎನ್ನುತ್ತಾರೆ.

ಲೋಕೇ ವ್ಯವಾಯಾಮಿಷಮದ್ಯಸೇವಾ
ನಿತ್ಯಾಸ್ತು ಜಂತೋರ್ನಹಿ ತತ್ರ ಚೋದನಾ ।
ವ್ಯವಸ್ಥಿತಿಸ್ತೇಷು ವಿಹಾಯ ಯಜ್ಞಾನ್
ಸುರಾಗ್ರಹೈರಾಸುರವೃತ್ತಿರಿಷ್ಟಾ ॥ ೧೧ ॥

ಲೋಕದಲ್ಲಿ ಶರೀರಿಗೆ ಸ್ತ್ರೀ ಮಾಂಸ ಮದ್ಯ ಸೇವನೆಯಲ್ಲಿ ಪ್ರವೃತ್ತಿ ಸ್ವೇಚ್ಛೆಯಿಂದಲೆ ಯಾರ ಪ್ರೇರಣೆ ಇಲ್ಲದೇ ಬರುತ್ತದೆ. ಅದರಿಂದ 'ಅದು ಭಗವದಾರಾಧನೆ' ಎಂಬ ಭಾವನೆ ಇಲ್ಲದಿದ್ದರೆ ಅದನ್ನು ವೇದ ವಿಧಿಸುವುದಿಲ್ಲ, ಮಾತ್ರವಲ್ಲ, ನಿಷೇಧಿಸುತ್ತದೆ. 'ವ್ಯವಸ್ಥಿತಿ' ಇದನ್ನು ಅರಿತುಕೊಳ್ಳದೆ ಸ್ವಚ್ಛಂದವಾಗಿ ವರ್ತಿಸುವುದು ಅಸುರ ಸ್ವಭಾವದವರ ರೀತಿ, ಮದ್ಯವ್ಯಸನಿಗಳಿಗೆ ಇಷ್ಟವಾಗುತ್ತದೆ.

ಯದ್‌ಘ್ರಾಣಭಕ್ಷೋ ವಿಹಿತಃ ಸುರಾಯಾ-
ಸ್ತಥಾ ಪಶೋರಾಲಭನಂ ನ ಹಿಂಸಾ ।
ಏವಂ ವ್ಯವಾಯಃ ಪ್ರಜಯಾ ನ ರತ್ಯೈ
ಇಮಂ ವಿಶುದ್ಧಂ ನ ವಿದುಃ ಸ್ವಧರ್ಮಮ್ ॥ ೧೨ ॥

ದೇವಯಜ್ಞದಲ್ಲಿ ಕೆಲವೆಡೆ ಅಂದರೆ, ಸೌತ್ರಾಮಣಿ ಎಂಬ ಒಂದು ಯಾಗದಲ್ಲಿ ಮದ್ಯ ವಿಹಿತವಾಗಿದೆ. ಆದರೆ ಅದು ಮೂಸಿ ವಾಸನೆಯನ್ನು ತಿಳಿಯುವುದು ಮಾತ್ರವೇ ಹೊರತು ಕುಡಿಯುವುದಿಲ್ಲ. ಪಶುವಧೆ ವಿಹಿತವಾದರೂ ಅದು ವಧೆಯಲ್ಲ, 'ಆಲಭನ.' ಅಂದರೆ ಪಶುವಿಗೂ ಕೂಡ ಸ್ವರ್ಗ ಲಾಭವಾಗಲೆಂಬ ಉದ್ದೇಶದಿಂದ ವಧಿಸುತ್ತಾರೆ. ಸ್ತ್ರೀಸಂಗವೂ ಕೂಡ ಸಂತಾನ ಪ್ರಾಪ್ತಿಗಾಗಿ ವಿಹಿತ ಹೊರತು ಕೇವಲ ಇಂದ್ರಿಯ ಸುಖಕ್ಕಾಗಿ ಅಲ್ಲ. ಇಂಥ ಶುದ್ಧವಾದ ಸ್ವಧರ್ಮವನ್ನು ಅಜ್ಞಾನಿಗಳು ತಿಳಿಯುವುದಿಲ್ಲ.

ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಶ್ಲೋಕದ ಉತ್ತರಾರ್ಧ—
ವ್ಯವಸ್ಥಿತಿಸ್ತೇಷು ವಿವಾಹಯಜ್ಞ
ಸುರಾಗ್ರಹೈರಾಸು ನಿವೃತ್ತಿರಿಷ್ಟಾ ॥

[1]ಶ್ರೀಧರವ್ಯಾಖ್ಯಾನ ಪ್ರಕಾರ ಇಲ್ಲಿಯ ಅಭಿಪ್ರಾಯ ಹೀಗಿದೆ—

---

1. ನನು ಋತಾವುಪೇಯಾದಿತ್ಯಾದಿನಾ ವಿಧಿರ್ದರ್ಶಿತಃ । ಸತ್ಯಂ । ನ ತ್ವಯ ಮಪೂರ್ವವಿಧಿಃ । ರಾಗತಃ ಪ್ರಾಪ್ತತ್ವಾತ್ । ಕಿಂತು ನಿಯಮ ವಿಧಿರೂಪೇಣ ರಾಗಿಣಾಮಭ್ಯನುಜ್ಞಾ ಮಾತ್ರಂ ಕ್ರಿಯತೇ । ತದಾಹ ವ್ಯವಸ್ಥಿತಿರಿತಿ । ತೇಷು ವ್ಯವಾಯಾದಿಷು । ಕೈಃ ವಿವಾಹ ಯಜ್ಞ

ಋತುಕಾಲದಲ್ಲಿ ಸ್ತ್ರೀಸಂಗ ಮಾಡಬೇಕೆಂದು ವಿಧಿ ಇರುವಾಗ ಸ್ತ್ರೀಸಂಗವನ್ನು ಭಾಗವತ ಏಕೆ ನಿಂದಿಸುತ್ತದೆ ಎಂದರೆ ಭಾಗವತದ ಅಭಿಪ್ರಾಯದಲ್ಲಿ ಋತುಗಮನಕ್ಕೆ 'ಋತೌ ಭಾರ್ಯಾಮುಪೇಯಾತ್' ಎಂದು ಅಪೂರ್ವವಿಧಿಯಲ್ಲ. ಸಹಜವಾಗಿ ಪ್ರವೃತ್ತಿ ಇರುವುದರಿಂದ ಅದಕ್ಕೆ ವಿಧಿ ಬೇಕಾಗಿಲ್ಲ. ಸ್ತ್ರೀಸಂಗ ಮಾಡಬೇಕೆಂದರೆ ವಿವಾಹಿತ ಸ್ತ್ರೀಯಲ್ಲಿ ಋತುಕಾಲದಲ್ಲಿ ಮಾತ್ರ ಮಾಡಬೇಕೆಂದು ನಿಯಮಮಾಡಿ ಆ ಮೂಲಕ 'ವ್ಯವಸ್ಥಿತಿ'ಯನ್ನು ಮಾಡಿ ಅನುಮತಿ ನೀಡಿದೆ.

ನಿಯಮವೆಂದ ಮೇಲೆ ಆವಶ್ಯಕವಾಗಿದೆ ಎಂದರ್ಥ. ಆಗ ಅದನ್ನು ಭಾಗವತ ಏಕೆ ನಿಂದಿಸುತ್ತದೆ? ಎಂದರೆ, ಇದು ನಿಯಮವಿಧಿಯೂ ಅಲ್ಲ. ಏಕೆಂದರೆ ನಿತ್ಯಪ್ರಾಪ್ತವಾಗಿದೆ. ಪಾಕ್ಷಿಕವಾಗಿ ಅಲ್ಲ. ಅದರಿಂದ ವಸ್ತುತಃ ಇದನ್ನು ಪರಿಸಂಖ್ಯಾ ವಿಧಿ ಯೆನ್ನಬೇಕು. ಅನೃತುಗಮನ ನಿಷೇಧವನ್ನು ಮಾತ್ರ ಹೇಳುತ್ತದೆ ಈ ವಾಕ್ಯ.

ಹಾಗಾದರೆ 'ವ್ಯವಸ್ಥಿತಿ' ನಿಯಮವಿಲ್ಲವೆಂದಾಯಿತು. 'ನಿವೃತ್ತಿ' ಕೇವಲ

ಸುರಾಗ್ರಹ್ಯೇ। ವಿವಾಹ ವಿಷಯ ಏವ ವ್ಯವಾಯಃ ಕಾರ್ಯಃ। ಯಜ್ಞ ಏವಾಮಿಷಸೇವಾ। ಸೌತ್ರಾಮಣ್ಯಾಂ ಸುರಾಗ್ರಹಾನ್ ಗೃಹ್ಣಾತೀತಿ ಶ್ರುತೇಃ ತತ್ರೈವ ಮದ್ಯಸೇವೇತಿ ನಿಯಮಃ ಕ್ರಿಯತೇ। ನನು ನಿಯಮಪಕ್ಷೇऽಪಿ ಆವಶ್ಯಕತ್ವಾನ್ನ ನಿಂದಾ ಯುಕ್ತಾ। ಅತ ಆಹ ಆಸು ನಿವೃತ್ತಿರಿಷ್ಟೇತಿ। ಆಸು ವ್ಯವಾಯಾಮಿಷ ಮದ್ಯಸೇವಾಸು ನಿವೃತ್ತಿರಿಷ್ಟಾ। ಅಯಂ ಭಾವಃ। ನಾಯಂ ನಿಯಮ ವಿಧಿರಪಿ ನಿತ್ಯಪ್ರಾಪ್ತತ್ವಾತ್। ಅತೋ ನಿವೃತ್ತಿಃ ಪರಿಸಂಖ್ಯೈವ। ಕಥಂ ತರ್ಹಿ ವ್ಯವಸ್ಥಿತಿರಿತ್ಯುಕ್ತಂ? ಉಚ್ಯತೇ। ನ ತಾವತ್ ಪರಿಸಂಖ್ಯಾವಿಧಿನಾ ಶ್ರುತ್ಯಾ ನಿವೃತ್ತಿರುಚ್ಯತೇ। ತಥಾ ಸತಿ ಸ್ವಾರ್ಥತ್ಯಾಗಃ ಪರಾರ್ಥಕಲ್ಪನಾ ಪ್ರಾಪ್ತಬಾಧಶ್ಚೇತಿ ದೋಷ ತ್ರಯಂ ಸ್ಯಾತ್। ಅತಃ ಕ್ವಚಿತ್ ಪ್ರಾಪ್ಸ್ಯತೋऽಪ್ಯರ್ಥಸ್ಯ ಪ್ರಾಪಣಮನರ್ಥಕಮಿತ್ಯ ಪೂರ್ವವಿಧಿದ್ವಾರಾऽನ್ಯನಿವೃತ್ತಿಃ ಫಲತೋ ಭವತಿ। ತದ್ಯಥಾ ಇಮಾಮಗೃಭ್ಣನ್ ರಶನಾಮೃತಸ್ಯೇತ್ಯಶ್ವಾಭಿಧಾನೀಮಾದತ್ತ ಇತ್ಯತ್ರ ರಶನಾಲಿಂಗತೋ ಗರ್ದಭಾಶ್ವಾಭಿಧಾನೀ ರಶನಾದ್ವಯೇ ಪ್ರಾಪ್ಸ್ಯತೋ ಮಂತ್ರಸ್ಯಾಪೂರ್ವವಿಧಿದ್ವಾರಾ ಪರಿಸಂಖ್ಯೋಚ್ಯತೇ। ಕ್ವಚಿತ್ತು ರಾಗತೋ ನಿತ್ಯಪ್ರಾಪ್ತಸ್ಯಾಪ್ರಾಪ್ತಾಂಶ ಪೂರಣಲಕ್ಷಣಸ್ಯ ನಿಯಮಫಲಸ್ಯಾಪ್ಯಭಾವಾತ್ ನಿಯಮವಿಧಿ ದ್ವಾರಾ ಫಲತಃ ಪರಿಸಂಖ್ಯಾ ಭವತಿ। ಯಥಾ ಪಂಚಪಂಚನಖಾ ಭಕ್ಷ್ಯಾ ಇತಿ। ತಥಾ ರಾಗತೋ ನಿತ್ಯವತ್ ಪ್ರಾಪ್ತಸ್ಯ ವ್ಯವಾಯಾದೇರ್ವಿವಾಹಾದಿನಿಯಮೇನಾಭ್ಯನುಜ್ಞಾ-ದ್ವಾರಾ ಪರಿಸಂಖ್ಯೈವೇತಿ।

ನನು ಯದ್ಯಭ್ಯಾನುಜ್ಞಾಮಾತ್ರಮೇತದ್ ಭವೇತ್ತರ್ಹಿ ಋತುಸ್ನಾತಾಂ ತು ಯೋ ಭಾರ್ಯಾಂ ಸನ್ನಿಧೌ ನೋಪಗಚ್ಛತಿ। ಘೋರಾಯಾಂ ಭ್ರೂಣಹತ್ಯಾಯಾಂ ಪಚ್ಯತೇ ನಾತ್ರ ಸಂಶಯ ಇತ್ಯಾದಿ ದೋಷಶ್ರವಣಂ ನ ಸ್ಯಾತ್। ನೈಷ ದೋಷಃ। ಮನಸಿ ಕಾಮೇ ಸತ್ಯಪಿ ತಸ್ಯಾಮರುಚ್ಯಾ ದ್ವೇಷಾದಿನಾ ವಾ ತಾಮನುಪಗಚ್ಛತೋ ದೋಷ ಶ್ರವಣೋಪಪತ್ತೇಃ। ಇತಿ ಸರ್ವಮನವದ್ಯಂ।

-ಶ್ರೀಧರಃ

'ಪರಿಸಂಖ್ಯೆ'ಯೇ ಎಂದಂತಾಯಿತು. 'ವ್ಯವಸ್ಥಿತಿ' ಎಂದೇಕೆ ಹೇಳಿದೆ ಭಾಗವತ? ಎಂದರೆ, ಪರಿಸಂಖ್ಯೆ ನೇರವಾಗಿ ಅನೃತುಗಮನವನ್ನು ನಿಷೇಧ ಮಾಡುತ್ತಿಲ್ಲ. ಮಾಡಿದರೆ ಋತುಗಮನ ಮಾಡಬೇಕೆಂದು ಸ್ಪಷ್ಟ ಹೇಳಿದ್ದನ್ನು ಬಿಟ್ಟು, ಹೇಳದಿದ್ದ ಅನೃತು ಗಮನ ನಿಷೇಧವನ್ನು ಒಪ್ಪಿಕೊಂಡು, ರಾಗ ಪ್ರಾಪ್ತವಾದ ಅನೃತು ಗಮನವನ್ನು ನಿಷೇಧಿಸುವುದು ಎಂದು ಮೂರು ದೋಷಗಳು ಬರುತ್ತವೆ. ಅದರಿಂದ 'ಋತೌ ಭಾರ್ಯಾಮುಪೇಯಾತ್'' ಎಂದು ಸಹಜವಾಗಿ ಪ್ರಾಪ್ತವಾದ ಋತುಗಮನವನ್ನೇ ಪುನಃ ವಿಧಿಸುತ್ತದೆ. ಯದ್ಯಪಿ ಪ್ರಾಪ್ತವಾದುದನ್ನು ಪುನಃ ವಿಧಿಸುವುದು ವ್ಯರ್ಥ. ಆದರೆ, ಈ ವೈಯರ್ಥ್ಯ ಪರಿಹಾರಕ್ಕಾಗಿ ಅನೃತುಗಮನ ನಿಷೇಧಾಭಿಪ್ರಾಯವನ್ನು ಊಹಿಸಿಕೊಳ್ಳಬೇಕು. ಅಪೂರ್ವವಿಧಿದ್ವಾರಾ ಅನ್ಯನಿವೃತ್ತಿಯನ್ನು ಬೋಧಿಸುತ್ತದೆ ಎಂದು ತಿಳಿಯಬೇಕು. ಇದಕ್ಕೆ ಉದಾಹರಣೆ—

'ಇಮಾಮಗೃಭ್ಣನ್ ರಶನಾಮೃತಸ್ಯೇತ್ಯಶ್ವಾಭಿಧಾನೀಮಾದತ್ತೇ' ಎಂಬ ವಿಧಿ. 'ಇಮಾಮಗೃಭ್ಣನ್‌ರಶನಾಮೃತಸ್ಯ' ಎಂಬ ಮಂತ್ರದಿಂದ ಅಶ್ವರಶನಾಗ್ರಹಣ ~~ಮಾಡಬೇಕೆಂದು ವಿಹಿತವಾಗಿದೆ. ಮಂತ್ರದಲ್ಲಿ ಸಾಮಾನ್ಯವಾಗಿ ರಶನಾಗ್ರಹಣ~~ ಉಕ್ತವಾದ್ದರಿಂದ ಗರ್ದಭರಶನಾಗ್ರಹಣವೂ ಪ್ರಾಪ್ತವಾಗುತ್ತಿದೆ. ಜೊತೆಗೇ ಅಶ್ವರಶನಾಗ್ರಹಣವೂ ಪ್ರಾಪ್ತವಾಗುತ್ತಿದೆ. ಪ್ರಾಪ್ತವಾದ ಅಶ್ವರಶನಾಗ್ರಹಣವನ್ನು ಮಾತ್ರ ವಿಧಿವಾಕ್ಯ ಪುನಃ ವಿಧಿಸುತ್ತದೆ. ಅದರಿಂದ ಗರ್ದಭರಶನಾಗ್ರಹಣ ನಿವೃತ್ತಿ ಅರ್ಥಾತ್ ಸಿದ್ಧವಾಗುತ್ತದೆ.

'ಪಂಚ ಪಂಚನಖಾ ಭಕ್ಷ್ಯಾಃ' ಎಂಬಲ್ಲಿಯೂ ಹೀಗೇ. ಪಂಚಪಂಚನಖ ಭಕ್ಷಣ ಸ್ವತಃ ಪ್ರಾಪ್ತವಾದ್ದರಿಂದ, ಪಕ್ಷೇಽಪ್ರಾಪ್ತಿ ಪ್ರಸಂಗವಿಲ್ಲದ್ದರಿಂದ, ಪ್ರಾಪ್ತಿಯನ್ನು ಹೇಳುವ ಆವಶ್ಯಕತೆ ಇಲ್ಲದಿದ್ದರೂ ಹೇಳಿ, ಅರ್ಥಾತ್ ಅಪಂಚನಖಭಕ್ಷಣ ನಿವೃತ್ತಿಯನ್ನು ಬೋಧಿಸುತ್ತದೆ.

ಪ್ರಕೃತದಲ್ಲಿಯೂ ನಿತ್ಯಪ್ರಾಪ್ತವಾದ ಋತುಗಮನಕ್ಕೇ ಪುನಃ ವ್ಯವಸ್ಥಿತಿಯನ್ನು ಹೇಳಿ, ಅರ್ಥಾತ್ 'ನಿವೃತ್ತಿ'ಯನ್ನು ಅನೃತುಗಮನ ನಿಷೇಧವನ್ನು ವಾಕ್ಯವು ಬೋಧಿಸುತ್ತದೆ. ಋತುಗಮನಕ್ಕೆ ಅಭ್ಯನುಜ್ಞಾ ನೀಡುತ್ತದೆ.

ಋತುಗಮನಕ್ಕೆ ಅಭ್ಯನುಜ್ಞಾಮಾತ್ರವೆಂದಾದರೆ ಅಕರಣೇ ಪ್ರತ್ಯವಾಯ ಏಕೆ?

'ಋತು ಸ್ನಾತಾಂ ತು ಯೋ ಭಾರ್ಯಾಂ ಸನ್ನಿಧೌ ನೋಪಗಚ್ಛತಿ ।
ಘೋರಾಯಾಂ ಭ್ರೂಣಹತ್ಯಾಯಾಂ ಪಚ್ಯತೇ ನಾತ್ರ ಸಂಶಯಃ ॥'

'ಋತುಸ್ನಾತಳಾದ ಭಾರ್ಯೆ ಸಮೀಪದಲ್ಲಿರುವಾಗ ಗಮನ ಮಾಡದಿದ್ದರೆ

ಘೋರವಾದ ಭ್ರೂಣಹತ್ಯೆಯ ಪಾಪಕ್ಕೀಡಾಗುವನು' ಎಂದು ಪ್ರತ್ಯವಾಯ ಉಕ್ತವಾಗಿದೆ ತಾನೆ? ಇದು ಹೇಗೆ ಕೂಡುತ್ತದೆ? ಎಂದರೆ, ಋತು ಕಾಲದಲ್ಲಿ ಗಮನೇಚ್ಛೆ ಇದ್ದರೂ ವಿರಸದಿಂದ ವೈಮನಸ್ಯ ಮನಸ್ತಾಪಗಳಿಂದ ದೂರವಿದ್ದರೆ ಈ ದೋಷವಿದೆ ಎಂದು ಅಭಿಪ್ರಾಯ'.

ಶ್ರೀಧರವ್ಯಾಖ್ಯಾನ ಹೀಗೆ ಹೇಳುವುದು ಸಮಂಜಸವಾಗಿ ಕಾಣುವುದಿಲ್ಲ. ವಿರಸ ವೈಮನಸ್ಯ ಮನಸ್ತಾಪಗಳಿಂದ ಋತುಗಮನ ಪಾಕ್ಷಿಕವಾಗಿ ಅಪ್ರಾಪ್ತವಾಗುವುದೆಂದು ಅವರೇ ಒಪ್ಪಿಕೊಂಡಿದ್ದಾರೆ ಎಂದಮೇಲೆ ಅಪ್ರಾಪ್ತ ಭಾಗ ಪರಿಪೂರಣ ರೂಪವಾದ ನಿಯಮವಿಧಿಯನ್ನು ಅವರು ಇಲ್ಲಿ ಏಕೆ ಒಪ್ಪುವುದಿಲ್ಲ? ಅಕರಣೇ ಪ್ರತ್ಯವಾಯವನ್ನು ಹೇಳಿರುವುದರಿಂದ, ಕೇವಲ ಅಭ್ಯನುಜ್ಞಾವಿಧಿ ಎಂದು ಹೇಳುವುದೂ ಸಮಂಜಸ ವಲ್ಲ. ನಿಯಮವಿಧಿ ಎಂದೇ ಒಪ್ಪಬೇಕು.

ವಸ್ತುತಃ ಗೃಹಸ್ಥಾಶ್ರಮಿಗೆ ಋತುಗಮನವು ಆಶ್ರಮ ಧರ್ಮವಾಗಿ ವಿಹಿತವೇ ಆಗಿದೆ. ಬಿಡುವುದು ನಿಷಿದ್ಧವಾಗಿದೆ. ಬಿಡುವುದು ಕಲಿಯುಗದ ಧರ್ಮ. 'ಭಿಕ್ಷವಶ್ಚ ಕುಟುಂಬಿನಃ' 'ಯತಿಗಳು ಗೃಹಸ್ಥರಾಗಿರುತ್ತಾರೆ, ಗೃಹಸ್ಥರು ಯತಿಗಳಾಗಿರುತ್ತಾರೆ, ಕಲಿಯುಗದಲ್ಲಿ ಇದು ಸಾಮಾನ್ಯ' (ಭಾಗ.12.3.33) ಎಂದು ಭಾಗವತವೇ ನಿಂದೆ ಮಾಡಿದೆ. ಸ್ತ್ರೀಸಂಗದಲ್ಲಿ ಪ್ರವೃತ್ತಿ ಸ್ವಾಭಾವಿಕವಾಗಿ ಇದೆ ನಿಜ. ಆದರೆ ಅದನ್ನು ಶಾಸ್ತ್ರ ವಿಧಿಸುತ್ತಿಲ್ಲ. ಗೃಹಸ್ಥಧರ್ಮಾಚರಣೆಗೆ ಅಂಗವಾದ, ಅದೃಷ್ಟಜನಕವಾದ, ಪುತ್ರೋತ್ಪತ್ತಿದ್ವಾರಾ ಪಿತೃಋಣಪರಿಹಾರಕವಾದ (ಭಾಗ.10.72.37) ವಾಮದೇವ ಯಜ್ಞರೂಪವಾದ ಸ್ವಸ್ತ್ರೀಸಂಗ ಸ್ವಾಭಾವಿಕವಾಗಿ ಪ್ರಾಪ್ತವಾಗಿಲ್ಲ. ಅದಕ್ಕೆ ಶಾಸ್ತ್ರವಿಧಿ ಬೇಕು. ಆದರಿಂದ ಇದು ಅಪೂರ್ವವಿಧಿಯೇ ಆಗಿದೆ.

ಶ್ರೀಧರವ್ಯಾಖ್ಯಾನದಲ್ಲಿ ಕೇವಲ ಅಭ್ಯನುಜ್ಞಾ ಎಂದು ಹೇಳಿ ಅದಕ್ಕೆ ವಿರುದ್ಧವಾಗಿ ಅಕರಣೇ ಪ್ರತ್ಯವಾಯವನ್ನೂ ಒಪ್ಪಿ ವಿರೋಧವನ್ನು ಸರಿಯಾಗಿ ಪರಿಹಾರ ಮಾಡದೆ ಅನಾವಶ್ಯಕವಾಗಿ ಋತುಗಮನವಿಧಿಯು ಅಪೂರ್ವವಿಧಿಯೂ ಅಲ್ಲ, ನಿಯಮವಿಧಿಯೂ ಅಲ್ಲ, ಪರಿಸಂಖ್ಯಾವಿಧಿಯೂ ಅಲ್ಲ, ಪ್ರಾಪ್ತವಾದದ್ದನ್ನೇ ವಿಧಿ ಸುತ್ತ ಅಪೂರ್ವವಿಧಿಯಂತೇ ಕಾಣುವ ಅಪೂರ್ವವಾದ ವಿಧಿ! ವ್ಯರ್ಥವಾದುದು! ಆದರೂ ವೈಯರ್ಥ್ಯಾನ್ಯಥಾನುಪಪತ್ತಿಯಿಂದ ಅರ್ಥಾತ್ ಅಭ್ಯನುಜ್ಞಾವನ್ನು ನೀಡುವಂಥದ್ದು ಎಂದು ಚರ್ಚೆಯನ್ನು ಅನಾವಶ್ಯಕವಾಗಿ ಬೆಳೆಸಿದ್ದಾರೆ.

'ನಹಿ ತತ್ರ ಚೋದನಾ' ಎಂದು ಭಾಗವತವೇ 'ವಿಧಿ ಇಲ್ಲ' ಎನ್ನುತ್ತಿದೆ ನಿಜ. ಆದರೆ 'ಆಹಾರ ನಿದ್ರಾ ಭಯ ಮೈಥುನಾನಿ ಸಾಮಾನ್ಯಮೇತತ್ ಪಶುಭಿರ್ನರಾಣಾಂ'

ಎನ್ನುವಂತೆ ಪಶುಗಳಂತೆ ಕೇವಲ ಸಂಗಸುಖಕ್ಕಾಗಿ ಮಾಡುವ ಋತು ಗಮನ ಪ್ರವೃತ್ತಿಯನ್ನು ಶಾಸ್ತ್ರ ವಿಧಿಸುವುದಿಲ್ಲ, ಗೃಹಸ್ಥಾಶ್ರಮಿಗೆ ಆ ಆಶ್ರಮದಲ್ಲಿ ಅವಶ್ಯಕರ್ತವ್ಯ ವಾಗಿರುವ ಭಗವದಾರಾಧನರೂಪವಾದ ಋತುಗಮನವನ್ನೇ ಶಾಸ್ತ್ರವು ವಿಧಿಸುತ್ತದೆ. ಅಕರಣೇ ಪ್ರತ್ಯವಾಯವನ್ನೂ ಹೇಳುತ್ತದೆ. ಭಗವಂತನೇ ಶ್ರುತಿಸ್ಮೃತಿಗಳ ಮೂಲಕ ವಿಧಿಸಿದ್ದಾನೆ ಎಂದು ಭಕ್ತಿಯಿಂದ, ಭಗವದಾರಾಧನೆ ಎಂಬ ಭಾವದಿಂದ, ಭಗವಂತನ ತುಷ್ಟಿಗಾಗಿಯೇ ಶಾಸ್ತ್ರೋಕ್ತ ಕ್ರಮದಿಂದ ಮಾಡುವ ಮದ್ಯಮಾಂಸ ಮಾನಿನೀ ಸೇವನ ಮಾತ್ರವೇ ವೇದಗಳಲ್ಲಿ ವಿಹಿತವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ 'ವ್ಯವಸ್ಥಿತಿಃ' 'ವಿ-ಅವಸ್ಥಿತಿ' ಅಂದರೆ ವಿಪರೀತವಾದ ವರ್ತನೆಯು ಆಸುರೀವೃತ್ತಿ ಎನಿಸುತ್ತದೆ. 'ಸುರಾಗ್ರಹೈಃ' ಮದ್ಯವ್ಯಸನಿಗಳಿಂದ ಮಾತ್ರ ಅದು ಅನುಸರಿಸಲ್ಪಡುತ್ತದೆ ಎಂದು ಭಾಗವತ ನಿಂದಿಸಿದೆ. 'ನಹಿ ತತ್ರ ಚೋದನಾ' 'ವಿಧಿ ಇಲ್ಲ' ಎಂದು ಎಚ್ಚರಿಸಿದೆ.

ಮದ್ಯಮಾಂಸ ಮಾನಿನೀ ಸೇವನೆ ಎಲ್ಲಿ ವಿಹಿತವಾಗಿದೆ, ಯಜ್ಞದಲ್ಲಿ ಪಶುಹಿಂಸೆ ~~ಏಕೆ ಪಾಪವಲ್ಲ ಎಂದು ಮುಂತಾದುವನ್ನು 'ಕ್ರಿಯಾವಿಧಾನ' ಎಂಬ ಗ್ರಂಥದ ಆಧಾರ~~ ಸಮೇತವಾಗಿ ಶ್ರೀಮದಾಚಾರ್ಯರು ಸ್ಪಷ್ಟಪಡಿಸುತ್ತಾರೆ.

ವ್ಯವಾಯಾಮಿಷಮದ್ಯಾನಿ ಹರೇಃ ಪೂಜಾರ್ಥಮೇವ ತು ।
ವಾಮದೇವ್ಯೋ ನಾಮ ಯಜ್ಞೋ ವ್ಯವಾಯೋ ಹರಿಪೂಜನಂ ।
ಪಿತೃಯಜ್ಞೋ ದೇವಯಜ್ಞೋ ಮಾಂಸೇನ ಹರಿಪೂಜನಂ ।
ವ್ಯವಾಯಯಜ್ಞೇ ಮದ್ಯಂ ತು ಸೋಮಾತ್ಮಕತಯೇಷ್ಯತೇ ।
ಕ್ಷತ್ರಿಯಾದೇ ರ್ನ ವಿಪ್ರಾಣಾಂ ವಿಪ್ರೋ ದೋಷೇಣ ಲಿಪ್ಯತೇ ।
ಅರಾಗತಃ ಪ್ರವೃತ್ತಿಃ ಸ್ಯಾದ್ ರಾಗೋ ದೋಷಸ್ಯ ಕಾರಣಂ ॥

ಸ್ತ್ರೀಸಂಗ ಮಾಂಸಸೇವನೆ ಮದ್ಯಪಾನಗಳನ್ನು ಹರಿಪೂಜೆಗಾಗಿ ಮಾತ್ರ ಮಾಡಬೇಕು. ಸ್ತ್ರೀಸಂಗವನ್ನು ಹರಿಪೂಜಾರೂಪವಾದ ವಾಮದೇವ್ಯ ಯಜ್ಞ ವೆಂದು ಮಾಡಬೇಕು. ಮಾಂಸದಿಂದ ಪಿತೃಕಾರ್ಯ ದೇವಕಾರ್ಯಗಳನ್ನು ನಡೆಸು ವುದೂ ಹರಿಪೂಜಾರೂಪವಾಗಿರಬೇಕು. ವಾಮದೇವ್ಯಯಜ್ಞದಲ್ಲಿ ಮದ್ಯಪಾನ ಸೋಮಪಾನದಂತೆ ಕ್ಷತ್ರಿಯಾದಿಗಳಿಗೆ ವಿಹಿತವಾಗಿದೆ. ವಿಪ್ರರಿಗಲ್ಲ, ವಿಪ್ರರಿಗೆ ಅದು ದೋಷಕರವಾಗಿದೆ. ಕ್ಷತ್ರಿಯಾದಿಗಳೂ ಕೂಡ ಇಂದ್ರಿಯ ತೃಪ್ತಿಯ ಉದ್ದೇಶ ದಿಂದ ಇವನ್ನು ಮಾಡಬಾರದು. ಮಾಡಿದರೆ ಅದು ಪಾಪಕರವಾಗುವುದು.

ಘ್ರಾಣಭಕ್ಷೋಽಥವಾ ಯಜ್ಞೇ ದೈವೇ ಸರ್ವಸ್ಯ ಚೇಷ್ಯತೇ ।
ಪೈಷ್ಟಮದ್ಯಸ್ಯ ಮಾಧ್ವ್ಯಾದಿ ಕ್ಷತ್ರಿಯಸ್ಯ ನ ದುಷ್ಯತಿ ।
ದೈವೇ ರತ್ಯೈವ ಚ ಪ್ರೀತಿ ರ್ವಿಷ್ಣೋಃ ಪುತ್ರಾತ್ತು ಮಾನುಷೇ ।
ತಸ್ಮಾದ್ ವಿಹಿತ ಮಾತ್ರೇಷು ರಾಗಂ ಮುಕ್ತ್ವಾ ಯಥಾವಿಧಿ ।
ಸಮಾಹಿತೋ ಹರಿಂ ಸ್ಮೃತ್ವಾ ವರ್ತನ್ ಯಾಜೀ ಹರೇರ್ಭವೇತ್ ।
ಇತಿ ಕ್ರಿಯಾವಿಧಾನೇ ।

ಯಜ್ಞಾನ್ ವಿಹಾಯ ನ ಚೋದನಾ ॥

ಅಥವಾ ಸೌತ್ರಾಮಣಿ ಮುಂತಾದ ದೈವಯಜ್ಞದಲ್ಲಿ ಮಾತ್ರವೇ ಅನ್ನದಿಂದಾದ ಮದ್ಯದ ಆಘ್ರಾಣನ ಮಾತ್ರವೇ ಎಲ್ಲ ಮೂರು ವರ್ಣದವರಿಗೂ ವಿಹಿತವಾಗಿದೆ. ಹಿಪ್ಪೆ ಹೂವಿನಿಂದ, ಬೆಲ್ಲದಿಂದಾದ ಮದ್ಯಗಳನ್ನು ಕ್ಷತ್ರಿಯನು ಪಾನ ಮಾಡುವುದು ಪಾಪಕರವಲ್ಲ. ದೇವತೆಗಳು ಮಾಡುವ ಸ್ತ್ರೀಸಂಗದಲ್ಲಿ ಅವರ ರತಿಸುಖದಿಂದಲೇ ವಿಷ್ಣುವಿಗೆ ಪ್ರೀತಿ. ಪುತ್ರೋತ್ಪತ್ತಿ ನಿಯಮವಿಲ್ಲ. ಮಾನವರ ಸ್ತ್ರೀಸಂಗದಲ್ಲಿ ~~ಪುತ್ರೋತ್ಪತ್ತಿಯಿಂದಲೇ ಪ್ರೀತಿ. ಹೀಗಾಗಿ ವಿಹಿತವಾದ ಕರ್ಮಗಳಲ್ಲಿಯೇ~~ ಇಂದ್ರಿಯ ಸುಖದಾಸೆಯನ್ನು ತೊರೆದು ಪ್ರವೃತ್ತಿ ಮಾಡುತ್ತ ವಿಧ್ಯುಕ್ತ ರೀತಿಯಿಂದ ಹರಿಸ್ಮರಣ ಪೂರ್ವಕವಾಗಿ ಏಕಾಗ್ರತೆಯಿಂದ ಹರಿಪೂಜೆ ಮಾಡಬೇಕು ಎಂದು ಕ್ರಿಯಾವಿಧಾನ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

'ನಹಿ ತತ್ರ ಚೋದನಾ' ಎಂದರೆ, ಮದ್ಯ ಮಾಂಸ ಮಾನಿನೀ ಸೇವನೆಯಲ್ಲಿ ಭಗವದಾರಾಧನೆ ಎಂಬ ಭಾವನೆ ಇಲ್ಲದಿದ್ದರೆ ಅದನ್ನು ವೇದವು ವಿಧಿಸುವುದಿಲ್ಲ, ಮಾತ್ರವಲ್ಲ ನಿಷೇಧಿಸುತ್ತದೆ ಎಂದರ್ಥ.

ಯಜ್ಞೇಷ್ವಾಲಭನಂ ಪ್ರೋಕ್ತಂ ದೇವತೋದ್ದೇಶತಃ ಪಶೋಃ ।
ಹಿಂಸಾ ನಾಮ ತದನ್ಯತ್ರ ತಸ್ಮಾತ್ ತಾಂ ನಾಚರೇದ್ ಬುಧಃ ।
ಯತೋ ಯಜ್ಞೇ ಮೃತಾ ಊರ್ಧ್ವಂ ಯಾಂತಿ ದೈವೇ ಚ ಪೈತೃಕೇ ।
ಅತೋ ಲಾಭಾದಾಲಭನಂ ಸ್ವರ್ಗಸ್ಯ ನ ತು ಮಾರಣಂ ॥
ಇತಿ ಚ ॥

ದೇವತಾಪ್ರೀತಿಯ ಉದ್ದೇಶದಿಂದ ಯಜ್ಞಗಳಲ್ಲಿ ಮಾಡುವ ಪಶುವಧೆಯು ಆಲಭನವೆನಿಸುತ್ತದೆ. ಬೇರೆ ಕಾರಣಕ್ಕೆ ಮಾಡುವ ಪಶುವಧೆ ಹಿಂಸೆ ಎನಿಸುತ್ತದೆ. ಅದರಿಂದ ವಿವೇಕಿಯಾದವನು ಹಿಂಸೆಯನ್ನು ಮಾಡಬಾರದು. ಏಕೆಂದರೆ ದೈವ ಪೈತೃಕ ಯಜ್ಞಗಳಲ್ಲಿ ಮೃತವಾಗುವ ಪಶುಗಳು ಊರ್ಧ್ವಲೋಕವನ್ನು

ಹೊಂದುವುದರಿಂದ ಸ್ವರ್ಗದ ಲಾಭಕ್ಕೆ ಕಾರಣವಾಗುವುದಿರಂದ ಆ ವಧೆಯು 'ಆ-ಲಭನ'ವೆನಿಸುತ್ತದೆ ಹೊರತು 'ಹಿಂಸೆ' ಎನಿಸುವುದಿಲ್ಲ ಎಂದೂ ಕ್ರಿಯಾವಿಧಾನದಲ್ಲಿ ಹೇಳಿದೆ.

ಪಾನಸಂ ದ್ರಾಕ್ಷಂ ಮಾಧೂಕಂ ಖಾರ್ಜೂರಂ ತಾಲಮೈಕ್ಷವಂ ।
ಮಧೂತ್ಥಂ ಸೈರಮಾರಿಷ್ಟಂ ಮೈರೇಯಂ ನಾಲಿಕೇರಜಂ ।
ಸಮಾನಾನಿ ವಿಜಾನೀಯಾನ್ಮದ್ಯಾನ್ಯೇಕಾದಶೈವ ತು
ದ್ವಾದಶಂ ತು ಸುರಾಮದ್ಯಂ ಸರ್ವೇಷಾಮಧಮಂ ಸ್ಮೃತಂ ।
-ಪುಲಸ್ತ್ಯಸ್ಮೃತಿ

ರಾಕ್ಷಸರ ಪಿಶಾಚಿಗಳ ಆಹಾರ ಮದ್ಯ, ಸುರಾ, ಆಸವ ಮತ್ತು ಮಾಂಸಗಳು. ಮದ್ಯವೆಂದರೆ ಹಲಸು ಖರ್ಜೂರ ದ್ರಾಕ್ಷಿ ಮುಂತಾದವುಗಳಿಂದ ಮಾಡಿದ ಹೆಂಡ. ಸುರಾ ಎಂದರೆ ಅನ್ನದ ಹೆಂಡ, ಬೆಲ್ಲದ ಹೆಂಡ, ಹಿಪ್ಪೆ ಅತಿಮಧುರ ಅರೆಹೂ ಮುಂತಾದವುಗಳಿಂದ ತಯಾರಿಸಿದ ಹೆಂಡಗಳು. ಆಸವ ಎಂದರೆ ಕಬ್ಬಿನ ರಸದಿಂದ ~~ತಯಾರಿಸಿದ್ದು. ಕಬ್ಬಿನ ರಸವನ್ನು ಕುದಿಸಿ ತಯಾರಿಸಿದರೆ ಸೀಧು ಎನಿಸುತ್ತದೆ. ಹೀಗೇ~~ ತಾಳವೃಕ್ಷಾದಿಗಳಿಂದ ಮಾಡಿದ ಹೆಂಡಗಳಿವೆ. ಒಟ್ಟು ಹನ್ನೆರಡು ಬಗೆ ಇವೆ ಎನ್ನುತ್ತದೆ ಪುಲಸ್ತ್ಯಸ್ಮೃತಿ. ಅವುಗಳಲ್ಲಿ ಅನ್ನದ ಹೆಂಡ ಪೈಷ್ಟೀ ಮೂರು ವರ್ಣದವರಿಗೂ ಕೂಡ ನಿಷಿದ್ಧ. ಅದರಿಂದ ಸೌತ್ರಾಮಣಿಯಲ್ಲಿ ಅದನ್ನು ಉಪಯೋಗಿಸುವಾಗ ಯಜ್ಞ ಶೇಷವಾದ ಆ ಮದ್ಯವನ್ನು ಮೂರು ವರ್ಣದವರೂ ಕೇವಲ ವಾಸನೆನೋಡಿ ಬಿಟ್ಟುಬಿಡಬೇಕು, ಪಾನ ಮಾಡಬಾರದು. ಉಳಿದ ಮದ್ಯಗಳನ್ನು ಉಳಿದವರು ಪಾನ ಮಾಡಬಹುದು.

[1]ವೀರರಾಘವ ಪಾಠದಲ್ಲಿ—

ಸ್ವಪ್ರಾಣಭಕ್ಷೋ ವಿಹಿತಃ ಸುರಾಯಾಃ

ಎಂದು ಪಾಠ. ಅದರಂತೆ 'ಸ್ವ-ಪ್ರಾಣ' ತನ್ನ ಅಂತರ್ಯಾಮಿಯಾದ ಪರಮಾತ್ಮನೇ ಉಣ್ಣುತ್ತಾನೆ ಎಂಬ ಭಾವನೆಯಿಂದ ಸುರಾಪಾನ ಮಾಂಸಭಕ್ಷಣ ಎರಡೂ

1. ಸ್ವಪ್ರಾಣ ಭಕ್ಷೋ ವಿಹಿತಃ ಪ್ರಾಣಃ ಪರಮಾತ್ಮಾ ಪ್ರಾಣನಹೇತುತ್ವಾತ್ । ಪ್ರಾಣ ಶರೀರ ಕತ್ವಾದ್ವಾ। ಸ್ವಪ್ರಾಣ ಶರೀರಕಸ್ಯ ಪರಮಾತ್ಮನೋ ಭಕ್ಷಣತಯಾ ವಿಹಿತಃ । ಸ್ವ ಯಜ್ಞ ಸಾದ್ಗುಣ್ಯಾರ್ಥಂ ಸ್ವಪ್ರಾಣಶರೀರಕ ಪರಮಾತ್ಮನೋ ಭಕ್ಷಣತಯಾ ಯಜ್ಞೀಯ ಸುರಾಮಿಷಸೇವಾ ವಿಹಿತೇತ್ಯರ್ಥಃ। ಯದ್‌ಘ್ರಾಣಭಕ್ಷ ಇತಿ ಪಾಠೇऽವಘ್ರಾಣಾತ್ಮಕೋ ಭಕ್ಷಃ ನತು ಪಾನಾದನಾತ್ಮಕ ಇತ್ಯರ್ಥಃ। -ವೀರರಾಘವಃ

ವಿಹಿತವಾಗಿದೆ ಅಂದಿದ್ದಾರೆ. ಬಳಿಕ 'ಯದ್ ಘ್ರಾಣಭಕ್ಷೋ ವಿಹಿತಃ' ಎಂಬ ಪಾಠವೂ ಇದೆ, ಅದರಂತೆ ಸುರೆ ಮಾಂಸ ಎರಡನ್ನೂ ಆಘ್ರಾಣನ ಮಾಡಬೇಕು ಹೊರತು ಸೇವನೆ ಮಾಡಬಾರದೆಂದಿದ್ದಾರೆ. ಈ ಎರಡು ವಿಷಯಗಳಲ್ಲಿ ಯಾವುದು ಸರಿ ಎಂದಾಗಲಿ ಪಾಠಗಳಲ್ಲಿ ಯಾವುದು ಯುಕ್ತವೆಂದಾಗಲಿ ವಿಮರ್ಶೆ ಮಾಡಿಲ್ಲ.

[2]ಯಜ್ಞದಲ್ಲಿ ಪಶುವಿನ ಅಂಗಗಳನ್ನು ಕಿತ್ತರೂ ಅದು ಹಿಂಸೆಯಲ್ಲ, ಅದು ಆಲಭನ. ಎರಡಕ್ಕೆ ಏನು ವ್ಯತ್ಯಾಸವೆಂದರೆ ದೇವತೋದ್ದೇಶದಿಂದ ಅಂಗಗಳನ್ನು ಕಿತ್ತರೆ ಅದು ಆಲಭನ, ಹೊಟ್ಟೆ ತುಂಬಿಸಿಕೊಳ್ಳುವ ಉದ್ದೇಶದಿಂದ ಹಾಗೆ ಮಾಡಿದರೆ ಅದು ಹಿಂಸೆ. ಅದರಿಂದಲೇ ವೇದದಲ್ಲಿ ಪಶುವನ್ನು ವಧಿಸಬೇಕೆಂದು ಹೇಳದೆ ಆಲಭನ ಮಾಡಬೇಕೆಂದೇ ಹೇಳಿದೆ' ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ.

ಆದರೆ 'ಆಲಭೇತ' ಎಂದು ಆಲಭನವನ್ನು ಹೇಳುವ ಶಬ್ದಕ್ಕೆ ವಧಿಸಬೇಕೆಂದು ಅರ್ಥತಾನೆ? ಹೀಗಾಗಿ ಒಂದು ವಸ್ತುವನ್ನು ಎರಡು ಬೇರೆ ಶಬ್ದಗಳಿಂದ ಹೇಳಿದ ಮಾತ್ರಕ್ಕೇ ವಸ್ತು ಎರಡಾಗುವುದಿಲ್ಲ.

ಅದರಿಂದ 'ಆಲಭೇತ' ಎನ್ನುವುದಕ್ಕೆ ವಧಿಸಬೇಕೆಂದು ಅರ್ಥವಲ್ಲ. ಇನ್ನೇನು ಎಂದರೆ ಶ್ರೀಮದಾಚಾರ್ಯರು ಹೇಳುತ್ತಾರೆ 'ಆ-ಲಭನ' ಸ್ವರ್ಗಲೋಕವನ್ನು ಹೊಂದುವುದು, ಸ್ವರ್ಗಲಾಭ ಹೊರತು ವಧೆಯಲ್ಲ. 'ಪಶುಂ ಆಲಭೇತ' ಎನ್ನುವುದಕ್ಕೆ 'ಪಶುವನ್ನು ಹೊಂದಬೇಕು' ಎಂದರ್ಥವಲ್ಲ. 'ಅಂತರ್ನೀತಣಿಚ್' ಇಟ್ಟುಕೊಂಡು, 'ಪಶುವಿಗೆ ಸ್ವರ್ಗವನ್ನು ಹೊಂದಿಸಬೇಕು' ಎಂದರ್ಥ. ಯಜ್ಞದಲ್ಲಿ ಮಾಡುವ ವಧೆಯನ್ನು ವಧೆ ಎನ್ನಬಾರದು ಏಕೆಂದರೆ ಅದು ಪಶುವಿಗೆ ಸ್ವರ್ಗವನ್ನು ಹೊಂದಿಸುವ ಕ್ರಿಯೆ. ವೈದ್ಯನು ಶಸ್ತ್ರದಿಂದ ರೋಗಿಯ ಅಂಗವನ್ನು ಕೊಯ್ದರೆ ಕಿತ್ತರೆ, ಅದು ಶಸ್ತ್ರವಧೆಯಲ್ಲ ಶಸ್ತ್ರಚಿಕಿತ್ಸೆ ಎನಿಸುತ್ತದೆ. ಅದರಿಂದ 'ಪಶುಂ ಆಲಭೇತ' ಎಂದರೆ ಪಶುವನ್ನು ವಧಿಸಬೇಕೆಂದು ಅರ್ಥವನ್ನು ಹೇಳಬಾರದು. ಹೆಸರು ಬೇರೆ ಕೊಟ್ಟ ಮಾತ್ರಕ್ಕೆ ವಸ್ತು ಬೇರೆಯಾಗುವುದಿಲ್ಲ, ವಸ್ತು ಬೇರೆಯಾದ್ದರಿಂದ ಹೆಸರು ಬೇರೆ ಕೊಡುತ್ತಿದೆ ವೇದ ಎಂದು ತಿಳಿಯಬೇಕು.

❖❖❖

2. ಪಶೋರಾಲಭನಂ ವೈಧಹಿಂಸಾ ಕಿಂಚಿದಂಗಚ್ಛೇದನಮೇವ ನತು ಹಿಂಸಾ ವಧಃ ।

-ವಿಶ್ವನಾಥಃ

ದೇವತೋದ್ದೇಶೇನ ಯತ್ ಪಶುಹನನಂ ತದಾಲಭನಂ । ವಾಯವ್ಯಂ ಶ್ವೇತಮಾಲಭೇತೇತ್ಯಾದಿಶ್ರುತೇಃ । ನ ತು ಹಿಂಸಾ । 'ಯಾ ವೇದವಿಹಿತಾ ಹಿಂಸಾ ನ ಸಾ ಹಿಂಸೇತಿ ಕೀರ್ತ್ಯತೇ' ಇತಿ ವಚನಾತ್ ।

-ಶ್ರೀಧರಃ

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಚಮಸ ಮಹಾಮುನಿ ತನ್ನೊಳಗಿರುವ ಪರಮಾತ್ಮನನ್ನು ತಾನೇ ಎಂದು ತಿಳಿಯಬಾರದು ಎನ್ನುತ್ತಾರೆ.

ದ್ವಿಷಂತಃ ಪರಕಾಯೇಷು ಸ್ವಾತ್ಮಾನಂ ಹರಿಮೀಶ್ವರಮ್ ।
ಮೃತಕೇ ಸಾನುಬಂಧೇऽಸ್ಮಿನ್ ಬದ್ಧಸ್ನೇಹಾಃ ಪತಂತ್ಯಧಃ ॥ ೧೫ ॥

ಇವರು ತಮ್ಮ ಶರೀರಗಳಲ್ಲಿಯೂ ಪರರ ಶರೀರಗಳಲ್ಲಿಯೂ ವ್ಯಾಪಿಸಿ ನಿಯಾಮಕನಾಗಿರುವ ಸರ್ವಶಕ್ತನಾದ ಶ್ರೀಹರಿಯನ್ನು 'ನಾನೇ ಅವನು. ನನಗಿಂತ ಬೇರೆಯಲ್ಲ' ಎನ್ನುತ್ತ ದ್ವೇಷಿಸುತ್ತಾರೆ. ಮೃತ್ಯುಗ್ರಸ್ತವಾದ ಶರೀರದಲ್ಲಿ ಶರೀರ ಸಂಬಂಧಿಗಳಲ್ಲಿ ಮೋಹದ ಬಂಧನಕ್ಕೊಳಗಾಗಿ ಅಧಃಪತನ ಹೊಂದುತ್ತಾರೆ.

[1]'ತನ್ನ ಸ್ವರೂಪನೇ ಆದ ಪರಮಾತ್ಮ ಪರಶರೀರದಲ್ಲಿಯೂ ಇದ್ದಾನೆ. ಅವನನ್ನು ಅಲ್ಲಿ ಅಭಿಚಾರಾದಿಗಳಿಂದ ಹಿಂಸಿಸುವವನು ಅಧಃಪತನ ಹೊಂದುತ್ತಾನೆ' ಎಂದು ಶ್ರೀಧರಸ್ವಾಮಿ ರಾಧಾರಮಣಗೋಸ್ವಾಮಿ ವ್ಯಾಖ್ಯಾನಗಳು ಹೇಳುತ್ತಿವೆ. ಆದರೆ ಅಭಿಚಾರಾದಿಗಳಿಂದ ಪರಶರೀರಗಳಲ್ಲಿರುವ ಜೀವಾತ್ಮರನ್ನು ಹಿಂಸಿಸಬಹುದು. ಆದರೆ ಅಲ್ಲಿರುವ ಪರಮಾತ್ಮನನ್ನು ಹಿಂಸಿಸಲಾಗುವುದಿಲ್ಲ. ಮೂಲೋಕವೇ ಪ್ರಳಯದಲ್ಲಿ ನಾಶಹೊಂದಿದರೂ ಒಳಗೆ ಅಂತರ್ಯಾಮಿಯಾಗಿರುವ ಪರಮಾತ್ಮನಿಗೆ ಏನೂ ಅಪಾಯವಾಗುವುದಿಲ್ಲ ಎಂದು ಭಗವದ್ಗೀತೆ ಹೇಳುತ್ತಿದೆ—

ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ।

ಅದರಿಂದ ಪರಶರೀರದಲ್ಲಿಯೂ ತನ್ನಲ್ಲಿಯೂ ಅಂತರ್ಯಾಮಿಯಾಗಿರುವ ಪರಮಾತ್ಮನನ್ನು ಜೀವಾಭಿನ್ನನೆಂದು ತಿಳಿಯುವುದೇ ಇಲ್ಲಿ ಹೇಳುವ ದ್ವೇಷ ಹಿಂಸೆಗಳು ಅವುಗಳಿಗೇ ತಮಸ್ಸು ಫಲ ಎನ್ನಬೇಕು. 'ಸ್ವಾತ್ಮಾನಂ' ಎಂದರೆ ತನ್ನೊಳಗೆ ನಿಯಾಮಕನಾಗಿ ವ್ಯಾಪಿಸಿರುವ ಪರಮಾತ್ಮನನ್ನು ಎಂದರ್ಥ. ಅವನನ್ನು 'ದ್ವಿಷಂತಿ' ಎಂದರೆ ಅಭಿನ್ನನೆಂದು ತಿಳಿಯುವವರು ಅಧಃಪತನವನ್ನು ಹೊಂದುವರು. 'ಜೀವಾಭೇದೋ ನಿರ್ಗುಣತ್ವಂ ಅಪೂರ್ಣ ಗುಣತಾ ತಥಾ' ಎಂದು ಮುಂತಾಗಿ ನವವಿಧ ದ್ವೇಷಗಳನ್ನು ಹೇಳುವಾಗ ಅಭೇದ ಚಿಂತನೆಯನ್ನೆ ಮೊದಲನೇ ದ್ವೇಷವೆಂದು ಹೇಳಲಾಗಿದೆ.

ಸ್ವಾತ್ಮಾನಂ ಸ್ವಸ್ಮಿನ್ನಾಪ್ತಂ ಚ ।

---

1. ಸ್ವಾತ್ಮಾನಮೇವ ಪರಕಾಯೇಷ್ವಪಿ ವಸಂತಮೀಶ್ವರಂ ದ್ವಿಷಂತಃ । ಕೇನ ಅಭಿಚಾರಾದಿನಾ ।
- ರಾಧಾರಮಣದಾಸಃ

ಪರಶರೀರಗಳಲ್ಲಿ ಮಾತ್ರವಲ್ಲದೆ ತನ್ನಲ್ಲಿಯೂ ಅಂತರ್ಯಾಮಿಯಾಗಿ ಇರುವವನು ಪರಮಾತ್ಮನಾದ್ದರಿಂದ ಅವನನ್ನು 'ಸ್ವಾತ್ಮ'ನೆಂದು ಭಾಗವತ ಕರೆದಿದೆ.

ಆಪ್ತತ್ವಾದಾತ್ಮಶಬ್ದೋಕ್ತಂ ಸ್ವಸ್ಮಿನ್ನಪಿ ಪರೇಷು ಚ ।
ಜೀವಾದನ್ಯಂ ನ ಪಶ್ಯಂತಿ ಶ್ರುತ್ವೈವಂ ವಿದ್ವಿಷಂತಿ ಚ ।
ಏತಾಂಸ್ತ್ವಮಾಸುರಾನ್ ವಿದ್ಧಿ ಲಕ್ಷಣೈಃ ಪುರುಷಾಧಮಾನ್ ।
ಇತಿ ಹರಿವಂಶೇಷು ॥

ಪರಶರೀರದಲ್ಲಿ ಮಾತ್ರವಲ್ಲದೆ ತನ್ನಲ್ಲಿಯೂ ನಿಯಾಮಕನಾಗಿ ಇರುವುದರಿಂದ ಸ್ವಾತ್ಮನೆನಿಸಿರುವ ಹರಿಯನ್ನು ತನ್ನಿಂದಲೂ ಬೇರೆ ಜೀವರಿಂದಲೂ ಬೇರೆ ವಿಲಕ್ಷಣನೆಂದು ಒಪ್ಪುವುದಿಲ್ಲ. ದ್ವಾಸುಪರ್ಣಾದಿ ಶ್ರುತಿಗಳಲ್ಲಿ ಹಾಗೆ ಉಕ್ತನಾಗಿರುವುದನ್ನು ನೋಡಿಯೂ ಕೂಡ ಅಭೇದಚಿಂತನ ರೂಪವಾದ ದ್ವೇಷವನ್ನೇ ಮಾಡುತ್ತಾರೆ. ಇಂಥ ಮನುಷ್ಯಾಧಮರನ್ನು ಇಂಥ ಲಕ್ಷಣಗಳಿಂದ ಅಸುರಸ್ವಭಾವದವರೆಂದು ತಿಳಿ ಎಂದು ಹರಿವಂಶದಲ್ಲಿ ಉಕ್ತವಾಗಿದೆ.

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಕರಭಾಜನ ಮುನಿಗಳು ಭಗವಂತನ ಅವತಾರಗಳ ಬಗ್ಗೆ ಉಪದೇಶ ನೀಡುತ್ತಾರೆ.

ಏವಂ ಯುಗಾನುರೂಪೋಽಸೌ ಭಗವಾನ್ ಯುಗವರ್ತಿಭಿಃ ।
ಮನುಜೈರಿಜ್ಯತೇ ರಾಜನ್ ಶ್ರೇಯಸಾಮೀಶ್ವರೋ ಹರಿಃ ॥ ೩೫ ॥

ರಾಜನೆ, ಹೀಗೆ ಆಯಾ ಯುಗಾನುಸಾರವಾಗಿ ವರ್ಣಆಕಾರಗಳನ್ನು ತಳೆವ ಈ ಭಗವಂತನನ್ನು ಆಯಾ ಯುಗದ ಜನರು ಆರಾಧಿಸುತ್ತಾರೆ. ಭಗವಂತ ಅವರಿಗೆ ಅಭೀಷ್ಟವಾದ ಮೋಕ್ಷಾದಿ ಪುರುಷಾರ್ಥಗಳನ್ನು ನೀಡುತ್ತಾನೆ.

ಇಲ್ಲಿ 'ಏವಂ ಯುಗಾನುರೂಪಾಭ್ಯಾಂ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. 'ನಾಮರೂಪಾಭ್ಯಾಂ' ಎಂದು ಶ್ರೀಧರ ವ್ಯಾಖ್ಯಾನದಲ್ಲಿ ಅಧ್ಯಾಹಾರ ಮಾಡಿದ್ದಾರೆ. ಆಯಾ ಯುಗಾನುಸಾರಿಯಾದ ನಾಮರೂಪಗಳಿಂದ ಯುಕ್ತನಾದ ಭಗವಂತನನ್ನು ಆಯಾ ಯುಗದ ಜನರು ಭಜಿಸುತ್ತಾರೆ' ಎಂದು ವಿವರಣೆ ನೀಡುತ್ತಾರೆ. ವಸ್ತುತಃ ಎಲ್ಲ ಕಾಲದಲ್ಲಿಯೂ ಭಗವಂತನ ಎಲ್ಲ ರೂಪಗಳನ್ನೂ ಯಥಾಶಕ್ತಿ ಆರಾಧಿಸುತ್ತಾರೆ. ಇಲ್ಲದಿದ್ದರೆ ಕಲಿಯುಗದಲ್ಲಿ ಅವತಾರವಿಲ್ಲದಿದ್ದರಿಂದ ಭಗವಂತನ ಆರಾಧನೆ ಇಲ್ಲವಾದೀತು.

[1]ಆಯಾ ಯುಗಾನುಸಾರಿಯಾದ ವೇದ ಪಂಚರಾತ್ರೋಕ್ತ ಪ್ರಕಾರಗಳಿಂದ ಭಗವಂತನನ್ನು ಆರಾಧಿಸುತ್ತಾರೆ' ಎಂದು ಶುಕದೇವ ವ್ಯಾಖ್ಯಾನವಿದೆ. 'ವೇದ ಪಂಚರಾತ್ರೋಕ್ತ ಪ್ರಕಾರಗಳಿಂದ' ಎಂದು ಅಧ್ಯಾಹಾರ ಮಾಡಿಕೊಂಡಿದ್ದಾರೆ. ಆದರೆ 'ವೇದತಂತ್ರಾಭ್ಯಾಂ', ಎಂದು 28ನೇ ಶ್ಲೋಕದಲ್ಲಿ ಹೇಳಿಯಾಗಿದೆ. ಅಲ್ಲಿ ದ್ವಾಪರ ಯುಗದ ಜನರ ಬಗ್ಗೆ ಹೇಳಿದೆ. ಇಲ್ಲಿ ಎಲ್ಲ ಯುಗಗಳ ಜನರ ಬಗ್ಗೆ ಎನ್ನುವುದಾದರೆ ಇಲ್ಲಿಯೇ ಹೇಳಬೇಕಿತ್ತು. ಅಲ್ಲಿ ಹೇಳಿದ್ದು ಕೂಡಲಾರದು. ಅಧ್ಯಾಹಾರ ಕ್ಲೇಶವೂ ಈ ಪಾಠದಲ್ಲಿ ದೋಷ.

'ಏವಂ ಯುಗಾನುರೂಪೋಽಸೌ' ಹೀಗೆ ಯುಗಾನುಸಾರಿಯಾಗಿರುತ್ತದೆ ಭಗವಂತನ ಅವತಾರ ಎನ್ನುವಾಗ ಯಾವ ಅಧ್ಯಾಹಾರವೂ ಬೇಕಾಗಿಲ್ಲ. ಆದರೆ ಮೋಕ್ಷಕ್ಕೆ ಅವತಾರೋಪಾಸನೆಯನ್ನೇ ಮಾಡಬೇಕಾಗಿಲ್ಲ. ಗುರೂಪದೇಶಾನುಸಾರ ಬೇರೆ ರೂಪಗಳನ್ನು ಉಪಾಸನೆ ಮಾಡಬಹುದು. ಆ ಉಪಾಸನೆಯಲ್ಲಿ ಬರಬಹುದಾದ ವಿಘ್ನಗಳ ಪರಿಹಾರಕ್ಕಾಗಿ ಆಯಾ ಯುಗದ ಅಥವಾ ಅದರ ಹಿಂದಿನ ಯುಗದ ಅವತಾರರೂಪಗಳ ಉಪಾಸನೆ ಮಾಡಬಹುದು. ಈ ವಿವರಗಳನ್ನು ಸ್ವಾಭಾವ್ಯ ಎಂಬ ಗ್ರಂಥದಲ್ಲಿ ಕಾಣಬಹುದು. ಅದು ಭಾಗವತಕ್ಕೆ ವಿವಕ್ಷಿತವೇ ಆಗಿದೆ. ಸಂಕ್ಷೇಪದೃಷ್ಟಿಯಿಂದ ಹೇಳಿಲ್ಲ.

ಧ್ರುವಂ ತಯೈವ ಮುಚ್ಯಂತೇ ಯಾಂ ಮೂರ್ತಿಂ ಪ್ರದಿಶೇದ್ ಗುರುಃ।
ಶಿಷ್ಯಾಣಾಂ ಯೋಗ್ಯತಾಭಿಜ್ಞೋ ವಿಘ್ನಹಾನಿಸ್ತು ತದ್ಯುಗೇ ।
ಅವತೀರ್ಣಹರೇರ್ಮೂರ್ತ್ಯಾ ತತ್ಪೂರ್ವಯುಗಜೇನ ಚ ।
ನೃಸಿಂಹಮೂರ್ತ್ಯಾ ಚ ತಥಾ ಯಾಂ ಚಾನ್ಯಾಂ ಪ್ರದಿಶೇದ್ ಗುರುಃ ॥
ಇತಿ ಸ್ವಾಭಾವ್ಯೇ ॥

ಶಿಷ್ಯರ ಯೋಗ್ಯತೆಯರಿತ ಗುರು ಭಗವಂತನ ಯಾವ ರೂಪವನ್ನು ಉಪದೇಶಿಸುವನೋ ಆ ರೂಪದ ಉಪಾಸನೆಯಿಂದಲೇ ನಿಶ್ಚಯವಾಗಿ ಮುಕ್ತಿ ಲಭಿಸುತ್ತದೆ. ಆದರೆ ಆ ಯುಗದಲ್ಲಿ ಅವತರಿಸಿದ ಅಥವಾ ಅದಕ್ಕೆ ಹಿಂದಿನ ಯುಗದಲ್ಲಿ ಅವತರಿಸಿದ್ದ ರೂಪದಿಂದಲೂ, ನರಸಿಂಹರೂಪದಿಂದಲೂ ಗುರು ಉಪದೇಶಿಸುವ ಬೇರೆ ರೂಪದಿಂದಲೂ ಮೋಕ್ಷಮಾರ್ಗದ ವಿಘ್ನಗಳ ಪರಿಹಾರ ಸಾಧ್ಯವಿದೆ ಎಂದು ಸ್ವಾಭಾವ್ಯ ಗ್ರಂಥದಲ್ಲಿದೆ.

❖❖❖

---

1. ಯುಗಾನುರೂಪಾಭ್ಯಾಂ ಯುಗಾನುಸಾರೇಣ ಪ್ರವೃತ್ತಾಭ್ಯಾಂ ವೇದ ತಂತ್ರೋಕ್ತ ಪ್ರಕಾರಾಭ್ಯಾಂ। -ಶುಕದೇವಃ

ಜಾಯಂತೇಯೋಪಾಖ್ಯಾನದಲ್ಲಿ ನಿಮಿರಾಜನಿಗೆ ಕರಭಾಜನ ಮುನಿ ಪರಮಾತ್ಮನ ಏಕಾಂತ ಭಕ್ತರು ಅನ್ಯರಿಗೆ ಋಣಿಯಾಗಿರುವುದಿಲ್ಲ ಎನ್ನುತ್ತಾರೆ—

ದೇವರ್ಷಿಭೂತಾಪ್ತನೃಣಾಂ ಪಿತೄಣಾಂ
ನ ಕಿಂಕರೋ ನಾಯಮೃಣೀ ಚ ರಾಜನ್ ।
ಸರ್ವಾತ್ಮನಾ ಯಃ ಶರಣಂ ಶರಣ್ಯಂ
ಗತೋ ಮುಕುಂದಂ ಪರಿಚರ್ಯಯಾ ಚ ॥ ೪೨ ॥

ರಾಜನೆ, ಸರ್ವರಕ್ಷಕನಾದ ಶ್ರೀಹರಿಯನ್ನು ಸರ್ವಾತ್ಮನಾ ಮೊರೆಹೊಕ್ಕಿರುವ ಬ್ರಹ್ಮಾದಿ ತತ್ವದೇವತೆಗಳಲ್ಲಿ ಸೇರಿರುವ ಭಕ್ತನು ಅನ್ಯದೇವತೆಗಳ ಋಷಿ ಭೂತ ಆಪ್ತ ಮನುಷ್ಯ ಪಿತೃಗಳ ಕಿಂಕರನೆನಿಸುವುದಿಲ್ಲ. ಋಣಿ ಎನಿಸುವುದಿಲ್ಲ. ಸ್ವೋತ್ತಮರಿಗೆ ಮಾತ್ರ ಕಿಂಕರ ಋಣಿ ಎನಿಸುತ್ತಾನೆ.

ಸ್ವಪಾದಮೂಲಂ ಭಜತಃ ಪ್ರಿಯಸ್ಯ
ತ್ಯಕ್ತಾನ್ಯಭಾವಸ್ಯ ಹರಿಃ ಪರೇಶಃ ।
ವಿಕರ್ಮ ಯಚ್ಚೋತ್ಪತಿತಂ ಕಥಂಚಿದ್
ಧುನೋತಿ ಸರ್ವಂ ಹೃದಿ ಸನ್ನಿವಿಷ್ಟಃ ॥ ೪೩ ॥

ಹರಿಪಾದ ಮೂಲವನ್ನೇ ಆಶ್ರಯಿಸಿ ಅನ್ಯದೇವತೆಗಳನ್ನು ಭಜಿಸದಿರುವ ಪ್ರಿಯನಾದ ಭಕ್ತ ವಿಷಯಾಸಕ್ತಿ ಇಲ್ಲದೆ ಕೇವಲ ಪ್ರಾರಬ್ಧ ಪರವಶನಾಗಿ ನಿಷಿದ್ಧಕರ್ಮ ಮಾಡಿದರೆ ಪರಮೇಶ್ವರನಾದ ಶ್ರೀಹರಿ ಅವನ ಹೃದಯದಲ್ಲಿ ಕುಳಿತು ನಿಷಿದ್ಧಕರ್ಮ ಲೇಪವಾಗದಂತೆ ಮಾಡುತ್ತಾನೆ.

ಮೇಲುನೋಟಕ್ಕೆ ಏಕಾಂತ ಭಕ್ತನು ದೇವ ಋಷಿ ಪಿತೃ ಭೂತ ಮನುಷ್ಯರಿಗೆ ಮಾಡಬೇಕಾಗಿರುವ ಪಂಚಯಜ್ಞಗಳನ್ನು ಮಾಡುವುದು ಬೇಡ, ಅವರಿಗೆ ಈತ ಋಣಿಯಲ್ಲ, ಸೇವಕನಲ್ಲ ಎಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರೆಲ್ಲರೂ ಹಾಗೇ ವಿವರಣೆ ನೀಡಿದ್ದಾರೆ. ಆದರೆ—

ಅರ್ಚಾಯಾಮೇವ ಹರಯೇ ಪೂಜಾಂ ಯಃ ಶ್ರದ್ಧಯೇಹತೇ
ನ ತದ್ಭಕ್ತೇಷು ಚಾನ್ಯೇಷು ಸ ಭಕ್ತಃ ಪ್ರಾಕೃತಃ ಸ್ಮೃತಃ (142.47)

ಎಂದು ಭಕ್ತರನ್ನು ಪೂಜಿಸದವನು ಉತ್ತಮ ಭಕ್ತನಲ್ಲ ಎನ್ನುತ್ತ ಭಕ್ತನು ಭಕ್ತರನ್ನು ಪೂಜಿಸಲೇಬೇಕು, ಅವರ ಕಿಂಕರನಾಗಿರಲೇಬೇಕೆಂದು ಭಾಗವತವೇ ಹೇಳಿದೆ.

'ಇದು ಭಕ್ತನ ಬಗ್ಗೆ ಹೇಳಿದ್ದು ಹೊರತು ಪ್ರಪನ್ನನ ಬಗ್ಗೆ ಅಲ್ಲ. ಪ್ರಪನ್ನ

ಯಾರನ್ನೂ ಪೂಜಿಸುವುದು ಬೇಡ' ಎಂದು ವೀರರಾಘವ ವ್ಯಾಖ್ಯಾನದಲ್ಲಿ ಹೇಳಿದೆ. ಆದರೆ,

ಭಕ್ತಿಃ ಪರೇ ಸ್ವೇಽನುಭವೋ ವಿರಕ್ತಿ
ರನ್ಯತ್ರ ಚೈಷ ತ್ರಿಕ ಏಕಕಾಲಃ ।
ಪ್ರಪದ್ಯಮಾನಸ್ಯ ಯಥಾಶ್ನತಃ ಸ್ಯು
ಸ್ತುಷ್ಟಿಃ ಪುಷ್ಟಿಃ ಕ್ಷುದಪಾಯೋಽನುಘಾಸಂ ॥ (11.2.42)

ಎಂದು 'ಪ್ರಪದ್ಯಮಾನ'ನ ಪ್ರಪನ್ನನ ಬಗ್ಗೆ ಕೇಳಿ ತಿಳಿದ ರಾಜ ಅಂಥ ಪ್ರಪನ್ನನ ಲಕ್ಷಣಗಳನ್ನೇ ಕೇಳಲು ಬಯಸಿದಾಗ ಹೇಳುವ ಮಾತು ಇದು.

ಏವಂ ಕೃಷ್ಣಾತ್ಮನಾಥೇಷು ಮನುಷ್ಯೇಷು ಚ ಸೌಹೃದಂ
ಪರಿಚರ್ಯಾಂ ಚೋಭಯತ್ರ ಮಹತ್ಸು ನೃಷು ಸಾಧುಷು ॥ (11.3.30)

ಎಂಬಲ್ಲಿಯೂ ಶ್ರೀಧರವ್ಯಾಖ್ಯಾನ ಪ್ರಕಾರ ಭಕ್ತನು ಸ್ಥಾವರಜಂಗಮಗಳೆಲ್ಲವನ್ನೂ ಸಾಮಾನ್ಯ ಜನರನ್ನೂ ಸಂತ ಮಹಾತ್ಮರನ್ನೂ ಸೇವಿಸಬೇಕು, ಪರಿಚರ್ಯೆ ಮಾಡಬೇಕೆಂದು ಹೇಳಿದೆ. ಆದರಿಂದ ಭಕ್ತನಿಗೆ ಯಾರ ಸೇವೆಯಲ್ಲಿಯೂ ಅಧಿಕಾರವಿಲ್ಲ ಎನ್ನಕೂಡದು. ದೇವರ್ಷಿಪಿತೃತರ್ಪಣಾದಿ ಕರ್ಮಗಳಲ್ಲಿಯೂ ಅಧಿಕಾರವಿಲ್ಲ ಎನ್ನಕೂಡದು. ಅದು ಭಾಗವತಕ್ಕೆ ಸಮ್ಮತವಲ್ಲ. ಹಾಗಾದರೆ 43ನೇ ಶ್ಲೋಕದಲ್ಲಿ 'ತ್ಯಕ್ತಾನ್ಯ ಭಾವಸ್ಯ' 'ಬೇರೆ ದೇವತೆಗಳ ಕೈಂಕರ್ಯವನ್ನು ಬಿಡುವವನೆ ಭಕ್ತ' ಎಂದು ಹೇಳಿದ್ದು ಹೇಗೆ? ಎಂದರೆ 'ಎಲ್ಲ ದೇವತೆಗಳೂ ಪರಮಾತ್ಮನಂತೇ ಸ್ವತಂತ್ರರು ಪೂಜ್ಯರು ಎಂಬ ಭಾವನೆಯನ್ನು ಬಿಟ್ಟವನೇ ಭಕ್ತ' ಎಂದಿದೆ ಹೊರತು ದೇವತೆಗಳಲ್ಲಿ ಪೂಜ್ಯತಾಭಾವನೆಯನ್ನು ಸರ್ವಾತ್ಮನಾ ಬಿಟ್ಟವನು ಸರ್ವಥಾ ಭಕ್ತನೆನಿಸುವುದಿಲ್ಲ.

ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇಃ । (5.5.2)

ಎಂದು ಋಷಭೋಪದೇಶದಲ್ಲಿ ಭಗವಾನ್ ಋಷಭನೇ ಮಹಾತ್ಮರ ಸೇವೆ ಮಾಡದೆ ಮುಕ್ತಿ ಇಲ್ಲ ಎಂದಿದ್ದಾನೆ. ಆದರಿಂದ,

ಅಯಂ ದೇವೋ ಮುನಿರ್ವಂದ್ಯ ಏಷ ಬ್ರಹ್ಮಾ ಬೃಹಸ್ಪತಿಃ
ಇತ್ಯಾಖ್ಯಾ ಜಾಯತೇ ತಾವದ್ಯಾವನ್ನಾರ್ಚಯತೇ ಹರಿಂ ॥

'ಇವನು ದೇವಮುನಿ, ವಂದ್ಯ, ಇವನು ಬ್ರಹ್ಮ, ವಂದ್ಯ, ಇವನು ಬೃಹಸ್ಪತಿ, ವಂದ್ಯ ಎನ್ನುವುದೆಲ್ಲವೂ ಹರಿಪೂಜೆ ಮಾಡದ ತನಕ, ಮಾಡಿದಾಗ ಇವರಾರೂ ವಂದ್ಯರಲ್ಲ' ಎಂದು ಜೀವಗೋಸ್ವಾಮಿ ಹೇಳುವುದು ಯುಕ್ತವಲ್ಲ. ಹಿರಿಯರಾದ ಬ್ರಹ್ಮಾದಿ ಭಗವದ್ಭಕ್ತರನ್ನು ಮುಕ್ತರು ಮುಕ್ತಿಯಲ್ಲಿಯೂ ವಂದಿಸುತ್ತಾರೆ.

ಶ್ರೀಮದಾಚಾರ್ಯರು ಹೇಳುತ್ತಾರೆ—

ಸರ್ವಾತ್ಮನಾ ಹರೇರ್ಭಕ್ತಾ ದೇವೇಶಾ ಏವ ಕೇವಲಂ ।
ದೇವಾಸ್ತು ಸರ್ವಥಾ ಭಕ್ತಾ ಭಕ್ತಾ ಏವೇತರೇ ಸ್ಮೃತಾಃ ।
ಹರಿಭಕ್ತ್ಯಾಽಧಿಕೇಷ್ವೇವ ಕಿಂಕರಶ್ಚಾಪ್ಯೃಣೀ ತಥಾ ।
ಹರಿಭಕ್ತೋ ನೇತರೇಷಾಂ ವಾಸುದೇವ ವ್ಯಪಾಶ್ರಯಾತ್ ।
ದ್ವಿಧೈವ ಸ್ವೋತ್ತಮರ್ಣಾನಿ ದಾತವ್ಯಾನೀತರಾಣಿ ಚ ।
ದಾತವ್ಯೇಭ್ಯೋ ವಿಮುಚ್ಯೇತ ನೇತರೇಭ್ಯಃ ಕಥಂಚನ ।
ಕಥಂ ಹಿ ದೇವಾದ್ಯನುಪಕೃತೋ ಮೋಕ್ಷೇಽಪಿ ವರ್ತಯೇತ್ ।
ಬಿಂಬತ್ವಾತ್ ತದಧೀನಂ ಹಿ ಸ್ವರೂಪಂ ಸರ್ವಶೋ ಯತಃ ॥

ಇತಿ ಜೀವನಿರ್ಣಯೇ ॥

ಹರಿಯ ಸರ್ವಾತ್ಮನಾಭಕ್ತರೆಂದರೆ ಕೇವಲ ದೇವೋತ್ತಮರೆ, ಸಾಮಾನ್ಯ ದೇವತೆಗಳು ಸರ್ವಥಾಭಕ್ತರು. ಋಷ್ಯಾದಿಗಳು ಭಕ್ತರು ಮಾತ್ರ. ಹರಿಭಕ್ತನು ಹರಿಭಕ್ತಿಯಲ್ಲಿ ತನಗಿಂತ ಉತ್ತಮರಾಗಿರುವವರಿಗೆ ಮಾತ್ರ ಕಿಂಕರ, ಋಣಿಯಾಗಿರುತ್ತಾನೆ. ಅನ್ಯರಿಗಲ್ಲ. ಏಕೆಂದರೆ ಅವನು ವಾಸುದೇವನಲ್ಲಿ ಆಶ್ರಯ ಪಡೆದಿರುತ್ತಾನೆ. ಋಣ ಎರಡು ಬಗೆಯಾಗಿರುತ್ತದೆ. ಮೋಕ್ಷ ಮಾರ್ಗದಲ್ಲಿ ಸಹಾಯ ಮಾಡಿದ ಕಿರಿಯರಿಗೂ ಸಮಾನಿಕರಿಗೂ ಕೊಟ್ಟು ತೀರಿಸಬಹುದಾದುದು, ಮತ್ತು ಹಿರಿಯರಿಗೆ ಕೊಟ್ಟು ತೀರಿಸಲಾಗದುದು ಎಂದು. ತೀರಿಸಬಹುದಾದ ಋಣದಿಂದ ಭಕ್ತ ಮುಕ್ತನಾಗಿರುತ್ತಾನೆ. ತೀರಿಸಲಾಗದ ಋಣಗಳಿಂದ ಸರ್ವಥಾ ಮುಕ್ತಿಯಲ್ಲೂ ಮುಕ್ತಿ ಸಾಧ್ಯವಿಲ್ಲ. ಏಕೆಂದರೆ ದೇವಾದಿಗಳ ಅನುಗ್ರಹವಿಲ್ಲದವನು ಮೋಕ್ಷಮಾರ್ಗದಲ್ಲಿ ಹೇಗೆ ನಡೆಯಬಲ್ಲ? ಏಕೆಂದರೆ ಅವರು ಬಿಂಬರು. ತನ್ನ ಸ್ವರೂಪ ಸರ್ವಾತ್ಮನಾ ಅವರ ಅಧೀನವೇ ಇರುತ್ತದೆ ಎಂದು ಜೀವನಿರ್ಣಯದಲ್ಲಿದೆ.

ಉದಕೈಶ್ಚ ನಮಸ್ಕಾರೈಃ ಸ್ತುತಿಭಿರ್ಮನಸಾ ತಥಾ ।
ಯತಿಭಿಶ್ಚಾಪಿ ಸಂಪೂಜ್ಯಾ ದೇವಾ ಮೋಕ್ಷಂ ಯಿಯಾಸುಭಿಃ ।
ಮಧ್ಯೇ ವಿಷ್ಣುಮನುಸ್ಮೃತ್ಯ ನಾನ್ಯಥಾ ತು ಕಥಂಚನ ॥

ಇತಿ ಸಮಯಾಚಾರೇ ॥

ಮೋಕ್ಷವನ್ನು ಪಡೆಯಲು ಬಯಸುವವರು ಹಿರಿಯರಿಗೆ ಋಣಿ, ಕಿಂಕರರಾದ್ದರಿಂದ ಯತಿಗಳಾಗಿದ್ದರೂ ಜಲ ತರ್ಪಣ ನಮಸ್ಕಾರ ಸ್ತೋತ್ರ ಧ್ಯಾನಗಳಿಂದ ದೇವಋಷಿ

ಪಿತೃಗಳನ್ನು ಪೂಜಿಸಲೇಬೇಕು. ದೇವಾದಿಗಳ ಮಧ್ಯದಲ್ಲಿ ಅವರ ಹೃದಯ ಮಧ್ಯದಲ್ಲಿ ಹರಿಯನ್ನು ಚಿಂತನೆ ಮಾಡಲೇಬೇಕು. ಹೀಗೆ ಮಾಡದೆ ಮೋಕ್ಷ ಸಾಧನೆ ಶಕ್ಯವಿಲ್ಲ ಎಂದು ಸಮಯಾಚಾರ ಗ್ರಂಥದಲ್ಲಿದೆ.

ಪ್ರಾಧಾನ್ಯೇನ ಹರಿರ್ಧ್ಯೇಯಸ್ತತ್‌ಸಂಬಂಧಾತ್ ಸುರಾದಯಃ ।
ಧ್ಯೇಯಾ ನಾನ್ಯತ್ ಕ್ವಚಿದ್ ಧ್ಯಾಯೇದ್ ಹರಾವನುಪಯೋಗಿ ಯತ್ ॥
ಇತಿ ಹರಿಸಂಹಿತಾಯಾಂ ॥

ಸರ್ವೋತ್ತಮನೆಂಬ ಭಾವದಿಂದ ಹರಿಯನ್ನು ಚಿಂತಿಸಬೇಕು. ಅವನ ಪರಿವಾರದವರೆಂದು ದೇವಋಷಿ ಪಿತೃ ಮುಂತಾದ ಹಿರಿಯರನ್ನು ಚಿಂತಿಸಬೇಕು. ಹರಿಧ್ಯಾನಕ್ಕೆ ಉಪಯೋಗಿಯಾಗದ ಬೇರೆ ನಿಷಿದ್ಧ ವಿಷಯಗಳಾವುದನ್ನೂ ಚಿಂತಿಸಬಾರದು ಎಂದು ಹರಿಸಂಹಿತೆಯಲ್ಲಿ ಹೇಳಿದೆ.

'ಅದಾತವ್ಯ' ಅಂದರೆ ಕೊಟ್ಟು ತೀರಿಸಲಾಗದ, ಅದರಿಂದಲೇ ತೀರಿಸ ಬೇಕಾಗಿಲ್ಲದ ಋಣ ದೇವ ಋಷಿ ಪಿತೃ ಮುಂತಾದವರದು. ಅದರಿಂದ, 'ಕೊಟ್ಟು ಋಣ ಪರಿಹಾರ ಮಾಡಿಕೊಳ್ಳುತ್ತಿದ್ದೇನೆ' ಎನ್ನುವ ಅಹಂಕಾರವನ್ನು ಬಿಟ್ಟು ಕೇವಲ ಸಾಂಕೇತಿಕವಾಗಿ ದೇವಾದಿಗಳಿಗೆ ತರ್ಪಣಾದಿಗಳನ್ನು ನಡೆಸಬೇಕು, ಸಂಸಾರದಲ್ಲಿ ಮಾತ್ರವಲ್ಲದೆ ಮುಕ್ತಿಯಲ್ಲಿಯೂ ಇದು ಮುಂದುವರಿಯಬೇಕು ಎಂದು ಜೀವನಿರ್ಣಯದ ಅಭಿಪ್ರಾಯ.

ಪೂರೈಸಿ ಕೊಡುವುದಕೆ ಕಡೆಯಿಲ್ಲದ ಋಣ ಸಾ
ಸೀರ ಕೊಂಡು ಕೊಟ್ಟು ತಿದ್ದುವಂತೆ ।
ಮಾರುತಗೆ ಬ್ರಹ್ಮಪದವಿತ್ತು ಮತ್ತವಗೆ ತ
ನ್ನಾರೋಗಣೆಯಲರ್ಧವನ್ನೀವ ॥ -ವೈಕುಂಠವರ್ಣನೆ

ಆರು ತಿಂಗಳು ಜಪ ಮಾಡಿದ ಧ್ರುವನಿಗೆ ಧ್ರುವಲೋಕವನ್ನೇ ನೀಡಿದ ಶ್ರೀಹರಿ ಬ್ರಹ್ಮಮಾನದ ನೂರುವರ್ಷವೂ ಬಿಡದೆ ಹಂಸಮಂತ್ರ ಜಪಿಸಿದ ಭಕ್ತನಾದ ವಾಯುದೇವನಿಗೆ ಅವನ ಸೇವೆಗೆ ತಕ್ಕ ಪ್ರತಿಫಲ ಏನು ಕೊಟ್ಟರೂ ಸಾಕಾಗದೆಂದುಕೊಂಡ. ಅದರಿಂದ ಅಪರಿಮಿತವಾದ ಸಾಲ ನೀಡಿದವನಿಗೆ ಸಾವಿರಕ್ಕೊಂದು ಹಿಂತಿರುಗಿಸಿ ಕೊಟ್ಟು ತೀರಿಸುವಂತೆ ಮುಖ್ಯಪ್ರಾಣನಿಗೆ ಬ್ರಹ್ಮಪದವಿಯಲ್ಲಿ ಸಹಭೋಗ ನೀಡಿದ. ತಾನುಣ್ಣುವಾಗ ಅರ್ಧವನ್ನು ಅವನಿಗೆ ನೀಡಿದ. ಇದು ಸಾಲದ ಮರುಪಾವತಿಯಲ್ಲ, ಕೇವಲ ಕೃತಜ್ಞತೆಯನ್ನು ತೋರುವ ಪರಿ. ಇದೇ ರೀತಿ ತನಗೆ ಬಿಂಬರಾದ ಬ್ರಹ್ಮಾದಿ ದೇವತೆಗಳು ಮಾಡಿದ ಉಪಕಾರಕ್ಕೆ

ಕೃತಜ್ಞತಾಸಮರ್ಪಣದ ಮನೋಭಾವದಿಂದ ದೇವಷ್ಯಾದಿತರ್ಪಣವನ್ನು ನಮಸ್ಕಾರ ಸ್ತೋತ್ರ ಧ್ಯಾನಾದಿಗಳನ್ನು ನಡೆಸಬೇಕೆಂದು ಸಮಯಾಚಾರ ಗ್ರಂಥದಲ್ಲಿ ಹೇಳಿದೆ. ಭಾಗವತ 'ನಾಯಮೃಣೀ' ಎಂದು ಹರಿಭಕ್ತನು ಸಮಾನಿಕರಿಗೆ ಕಿರಿಯರಿಗೆ ಅವರು ಮಾಡಿದ ಸಹಾಯಕ್ಕೆ ಋಣಿಯಾಗುವುದಿಲ್ಲ, ಆಗಬಾರದು ಎಂದು ಹೇಳುತ್ತಿದೆ. 'ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಂ' ಹರಿಯೇ ಕೊಡುವವನು. ಅನ್ಯರನ್ನು ಬೇಡಬಾರದು, ಅನ್ಯರು ಕೊಟ್ಟರೆ ಅದು ತನಗೆಂದು ತಿಳಿಯಬಾರದು, ತಿಳಿದರೆ ಅವರಿಗೆ ಋಣಿಯಾಗುತ್ತಾನೆ, ಹಾಗಾಗಬಾರದು ಎಂದು ಭಾಗವತ ಹೇಳುತ್ತಿದೆ. ಇದನ್ನು 'ತ್ಯಕ್ತಾನ್ಯಭಾವಃ' ಎಂದೂ ಪುನಃ ಹೇಳಿದೆ.

❖❖❖

ಶಿಶುಪಾಲ ಮುಂತಾದವರ ದ್ವೇಷಯುಕ್ತ ಭಕ್ತಿಗೂ ಒಲಿದ ಭಗವಂತ ನಿಮ್ಮ ನಿರ್ಮಲಭಕ್ತಿಗೆ ಒಲಿಯದಿರುವನೆ? ಎಂದು ನಾರದರು ವಸುದೇವನಿಗೆ ಹೇಳುತ್ತಾರೆ.

~~ವೈರೇಣ ಯಂ ನೃಪತಯಃ ಶಿಶುಪಾಲಪೌಂಡ್ರ-~~
ಸಾಲ್ವಾದಯೋ ಗತಿವಿಲಾಸವಿಲೋಕನಾದ್ಯೈಃ ।
ಧ್ಯಾಯಂತ ಆಕೃತಧಿಯಃ ಶಯನಾಸನಾದೌ
ತತ್ಸಾಮ್ಯಮಾಪುರನುರಕ್ತಧಿಯಃ ಪುನಃ ಕಿಮ್ ॥ ೪೯ ॥

ಶಿಶುಪಾಲ ಪೌಂಡ್ರಕ ಸಾಲ್ವ ಮುಂತಾದ ರಾಜರು ಮಲಗುವಾಗ ಕುಳಿತಿರು ವಾಗ ಓಡಾಡುವಾಗಲೆಲ್ಲ ಶ್ರೀಕೃಷ್ಣನ ನಡೆ ವಿಲಾಸನೋಟ ಮುಂತಾದುವನ್ನೇ ಸದಾ ವೈರದಿಂದ ಧ್ಯಾನಿಸಿದರು. ಚಿತ್ತದಲ್ಲಿ ಅವನ ಆಕಾರವನ್ನೇ ತುಂಬಿಕೊಂಡು ಕೊನೆಯಲ್ಲಿ ಅವನ ಸಾರೂಪ್ಯವನ್ನು ಪಡೆದರು. ಅವರು ತಮ್ಮಲ್ಲಿ ಅವಿಷ್ಟರಾದ ಅಸುರರ ಪ್ರಭಾವದಿಂದ ವೈರಮಿಶ್ರಿತ ಭಕ್ತಿಯನ್ನು ಮಾಡಿದರೂ ಮೋಕ್ಷ ಹೊಂದಿದರೆಂದ ಮೇಲೆ ನಿರ್ಮಲ ಭಕ್ತಿಉಳ್ಳ ನಿಮ್ಮಂಥವರಿಗೆ ಮೋಕ್ಷ ಸಿಗುವುದೆಂದು ಬೇರೇನು ಹೇಳಬೇಕು.

ಇಲ್ಲಿ ಮೇಲುನೋಟಕ್ಕೆ ದ್ವೇಷಯುಕ್ತ ಭಕ್ತಿಗೂ ಭಗವಂತ ಒಲಿಯುತ್ತಾನೆ. ಹೀಗಿರುವಾಗ ಪುತ್ರವಾತ್ಸಲ್ಯ ಭಕ್ತಿಗೆ ಒಲಿಯದಿರುವನೆ? ಎಂದು ಕೈಮುತ್ಯನ್ಯಾಯ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು ವಿವರಣೆ ನೀಡಿದ್ದಾರೆ. ಆದರೆ ಭಗವಂತ ವೈರಯುಕ್ತ ಭಕ್ತಿಗೂ ಒಲಿಯುವುದಿಲ್ಲ, ವಾತ್ಸಲ್ಯಯುಕ್ತ ಭಕ್ತಿಗೂ ಒಲಿಯುವುದಿಲ್ಲ, ವೈರ ವಾತ್ಸಲ್ಯಗಳೆರಡೂ ದೋಷಗಳೇ. ಜೀವಸ್ವಭಾವದಲ್ಲಿ ಅವು

ಇದ್ದರೆ ಸರ್ವಥಾ ಹರಿ ಒಲಿಯುವುದಿಲ್ಲ. ನಿರ್ಮಲಭಕ್ತಿಗೆ ಮಾತ್ರ ಒಲಿಯುತ್ತಾನೆ. ದ್ವೇಷವಾತ್ಸಲ್ಯಾದಿ ದೋಷಗಳು ಕಾರಣಾಂತರದಿಂದ ಕಂಡುಬಂದರೂ, ಸ್ವಭಾವದಲ್ಲಿರುವ ನಿರ್ಮಲ ಭಕ್ತಿಯನ್ನೇ ಕಂಡು ಕರುಣೆಯಿಂದ ಒಲಿಯುತ್ತಾನೆ.

ವೈರ ದ್ವೇಷಗಳು ದೋಷವಾಗಲಿ, ವಾತ್ಸಲ್ಯವೂ ಅದರಂತೇ ದೋಷ ಹೇಗಾಗುವುದು? ಎಂದರೆ, ಮುಂದೆ ನಾರದರೆ ಹೇಳುತ್ತಾರೆ—

ಮಾಪತ್ಯಬುದ್ಧಿಮಕೃಥಾಃ ಕೃಷ್ಣೇ ಸರ್ವಾತ್ಮನೀಶ್ವರೇ

'ಸರ್ವೇಶ್ವರನಾದ ಭಗವಂತನನ್ನು ತನ್ನ ಮಗನೆಂದು ತಿಳಿಯಬೇಡ' ಎಂದು. ಹಾಗೆ ತಿಳಿಯುವುದು ಮಹಾ ಅಪರಾಧ. ದ್ವೇಷಕ್ಕೆ ಸಮಾನ. ಹೀಗಾಗಿ ಕೈಮುತ್ಯನ್ಯಾಯಕ್ಕೆ ಇಲ್ಲಿ ಅವಕಾಶವಿಲ್ಲ.

ವಿಶ್ವನಾಥವ್ಯಾಖ್ಯಾನ ಇದನ್ನು ಒಪ್ಪುವುದಿಲ್ಲ. ದ್ವೇಷಕ್ಕೇ ಒಲಿಯುತ್ತಾನೆ ಎಂದಮೇಲೆ ಪ್ರೀತಿಗೆ ವಾತ್ಸಲ್ಯಕ್ಕೆ ಏಕೆ ಒಲಿಯುವುದಿಲ್ಲ ಎನ್ನುತ್ತಾರೆ. ಇದು 'ಮಾಪತ್ಯಬುದ್ಧಿಮಕೃಥಾಃ' ಎನ್ನುವ ನಾರದರ ಮಾತಿಗೆ ವಿರುದ್ಧವಾಗುವುದು. ಅದರಿಂದ ದ್ವೇಷವನ್ನು ಕಡೆಗಣಿಸಿ ಸ್ವಾಭಾವಿಕವಾದ ಭಕ್ತಿಗೆ ಒಲಿದ ಭಗವಂತ ಪುತ್ರವಾತ್ಸಲ್ಯವನ್ನು ಕಡೆಗಣಿಸಿ ಸ್ವಾಭಾವಿಕ ಭಕ್ತಿಗೆ ಒಲಿಯದಿರುವನೆ? ಎನ್ನಬೇಕು. ವಸ್ತುತಃ ಶಿಶುಪಾಲಾದಿಗಳಲ್ಲಿ ದ್ವೇಷವನ್ನು ಕಡೆಗಣಿಸಿರಲಿಲ್ಲ ಶ್ರೀಕೃಷ್ಣ. ದ್ವೇಷಕ್ಕೆ ಅವರಲ್ಲಿ ಆವಿಷ್ಟನಾಗಿದ್ದ ಅಸುರನಿಗೆ ತಮಸ್ಸನ್ನಿತ್ತ. ಅವರಲ್ಲಿ ಸ್ವಾಭಾವಿಕವಾಗಿದ್ದ ಭಕ್ತಿಗೆ ತನ್ನ ಲೋಕವನ್ನಿತ್ತ.

ಪೌಂಡ್ರಕಾದಿಷು ದೈತ್ಯೇಷು ಸುರಾಂಶಾಃ ಸಂತಿ ಸರ್ವಶಃ ।
ಬಹುಮಾನಫಲಂ ವಿಷ್ಣೋಸ್ತೇ ಯಾಂತ್ಯಾದಾಯ ಸದ್ಗತಿಂ ॥
ವಿದ್ವೇಷಸ್ಯ ಫಲಂ ಯತ್ತು ತದಾದಾಯಾಸುರಾಸ್ತಮಃ ।
ಯಾಂತ್ಯತೋ ನೈವ ವಿದ್ವೇಷೋ ವಿಷ್ಣೋಃ ಕಾರ್ಯಃ ಕಥಂಚನ ॥
ಇತ್ಯಂಶವಿವೇಕೇ ॥

ಪೌಂಡ್ರಕವಾಸುದೇವ ಮುಂತಾದ ದೈತ್ಯರಲ್ಲಿ ಎಲ್ಲರಲ್ಲಿಯೂ ದೇವಾಂಶರಿರುತ್ತಾರೆ. ವಿಷ್ಣುಭಕ್ತಿಯ ಫಲವಾದ ಪುಣ್ಯವನ್ನು ಸ್ವೀಕರಿಸಿ ಆ ದೇವತೆಗಳು ಸದ್ಗತಿಯನ್ನು ಹೊಂದುತ್ತಾರೆ. ವಿಷ್ಣುದ್ವೇಷದ ಫಲವಾಗಿ ಏನು ಪಾಪ ಬರುವುದೋ ಅದನ್ನು ಅಸುರರು ಹೊಂದಿ ತಮಸ್ಸಿಗೆ ಹೋಗುತ್ತಾರೆ. ಅದರಿಂದ

ವಿಷ್ಣುದ್ವೇಷವನ್ನು ಸರ್ವಥಾ ಮಾಡಬಾರದು ಎಂದು ಅಂಶವಿವೇಕದಲ್ಲಿ ಉಕ್ತವಾಗಿದೆ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್ ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ಪಂಚಮೋऽಧ್ಯಾಯಃ ॥

❖❖❖

ಅಧ್ಯಾಯ-೬

ಅಧ್ಯಾಯ ಸಾರಾಂಶ

ನಾರದರು ವಸುದೇವನಿಗೆ ಉಪದೇಶಮಾಡಿ ಹೋದ ಬಳಿಕ ಒಂದುದಿನ ಬ್ರಹ್ಮಾದಿ ದೇವತೆಗಳು ಋಷಿಗಳು ಮುಂತಾದವರು ದ್ವಾರಕೆಗೆ ಬಂದು ಶ್ರೀಕೃಷ್ಣನನ್ನು ಸ್ತುತಿಸಿದರು—

ಶ್ರೀಹರಿ, ಕರ್ಮಬಂಧನದಿಂದ ಬಿಡುಗಡೆ ಬಯಸುವವರೆಲ್ಲರೂ ನಿನ್ನ ಪಾದಕಮಲವನ್ನೇ ಧ್ಯಾನಿಸುವರು. ತ್ರಿಗುಣಾತ್ಮಕ ಪ್ರಕೃತಿಯಿಂದ ಬ್ರಹ್ಮಾಂಡದ ಸೃಷ್ಟಿಸ್ಥಿತಿಲಯ ಕಾರ್ಯಗಳನ್ನು ನಡೆಸುವವನು ನೀನು. ಆದರೂ ನಿನಗೆ ಕರ್ಮಲೇಪವಿಲ್ಲ, ಏಕೆಂದರೆ ನೀನು ಜ್ಞಾನಪ್ರಕಾಶ ರೂಪ. ನಿತ್ಯಾಭಿವ್ಯಕ್ತಸ್ವರೂಪ. ಸ್ವರೂಪಾನಂದದಲ್ಲಿಯೇ ಮುಳುಗಿರುವವನು. ನಿನ್ನ ಕೀರ್ತಿಯ ಶ್ರವಣ ಮಾತ್ರದಿಂದಲೆ ಸಾತ್ವಿಕರಿಗೆ ಲಭಿಸುವ ಅಂತಃಕರಣಶುದ್ಧಿ ರಾಜಸ ತಾಮಸರಿಗೆ ಅಖಂಡ ವೇದಾಧ್ಯಯನ ತಪಸ್ಸು ಪ್ರಾಯಶ್ಚಿತ್ತ ಕರ್ಮಗಳಿಂದಲೂ ಸಿಗಲಾರದು.

ದಿವ್ಯಪ್ರಕಾಶರೂಪವಾದ ನಿನ್ನ ಪಾದಕಮಲ ನಮ್ಮ ಹೃದಯದಲ್ಲಿ ನಿಂತು ವಿಷಯಾಸೆಯನ್ನು ಸುಡುವ ಧೂಮಕೇತುವಿನಂತಾಗಲಿ.

ಯಾಜ್ಞಿಕರು ಆಹುತಿ ನೀಡುವಾಗ ಅಗ್ನಿಯಲ್ಲಿ ನಿನ್ನನ್ನೇ ಧ್ಯಾನಿಸುತ್ತಾರೆ. ಯೋಗಿಗಳೂ ಹೃದಯದಲ್ಲಿ ನಿನ್ನನ್ನೇ ಕಾಣುತ್ತಾರೆ. ನಿನ್ನೆದೆಯಲ್ಲಿ ಮೆರೆವ ಆಪಾದಲಂಬಿಯಾದ ವನಮಾಲೆಯೊಡನೆ ಸ್ಪರ್ಧಿಸುವಂತೆ ಶ್ರೀದೇವಿ ನಿನ್ನ ಪಾದಪೂಜೆಗೆ ಹೂತುಳಸಿಗಳನ್ನೇರಿಸಿದರೆ ಪಾದ ತಾನೇ ಅದನ್ನೆತ್ತಿಕೊಳ್ಳುತ್ತದೆ. ಅಂದರೆ ಪಾದವೆ ಹಸ್ತದ ಕ್ರಿಯೆಯನ್ನು

ನಡೆಸುತ್ತದೆ. ಇಂಥ ಲೋಕವಿಲಕ್ಷಣವಾದ ನಿನ್ನ ಪಾದ ನಮ್ಮ ವಿಷಯಾಸೆಯನ್ನು ಧೂಮಕೇತುವಿನಂತೆ ಸುಡಲಿ. ಅಂದು ನೀನು ತ್ರಿವಿಕ್ರಮನಾಗಿ ಮೇಲೆತ್ತಿದ ಪಾದ ಮೂರು ವೇದಗಳೆಂಬ ಪತಾಕೆಯನ್ನು ಹಾರಿಸುವ ಧ್ವಜಸ್ತಂಭವಾಯಿತು. ಅಸುರಸೇನೆಗೆ ಭಯವಿತ್ತು ದೇವಸೇನೆಗೆ ಅಭಯ ನೀಡಿತು. ಕುಜನರಿಗೆ ನರಕ, ಸುಜನರಿಗೆ ಸ್ವರ್ಗ ನೀಡಿತು.

ಇಂದ್ರಿಯ ದೇವತೆಗಳು ಮೂಗುದಾರ ಹಾಕಿದ ಎತ್ತುಗಳಂತೆ ನಿನ್ನ ಅಧೀನದಲ್ಲಿದ್ದು ಶರೀರಿಗಳಿಗೆ ವಿಷಯಜನ್ಯ ಸುಖದುಃಖಗಳನ್ನು ನೀಡುತ್ತಾರೆ. ಕಾಲನಿಯಾಮಕನಾದ ನೀನು ಎಲ್ಲರ ಶರೀರಗಳಲ್ಲಿ ಇದ್ದು ಅವರ ಆಯುಷ್ಯವನ್ನು ನಿಯಂತ್ರಿಸುವೆ.

ಪ್ರಪಂಚಕ್ಕೆ ಮಾತ್ರವಲ್ಲದೆ ಅದಕ್ಕೆ ಮೂಲಕಾರಣವಾದ ಅವ್ಯಕ್ತ ತತ್ವ ಮಹತ್ತತ್ವ ಜೀವತತ್ವಗಳಿಗೂ ಸೃಷ್ಟಿ ಸ್ಥಿತಿ ಲಯಕಾರಿ ನೀನೆ. ಅಚಿಂತ್ಯ ~~ವೇಗದಿಂದ ಉರುಳುವ ಕಾಲಚಕ್ರವನ್ನು ನಿರ್ಮಿಸುವವನು ನೀನೆ.~~ ಇದೀಗ ಆ ಕಾಲಚಕ್ರ ಉರುಳುತ್ತ ಯಾದವ ಕುಲದ ನಾಶಕ್ಕೆ ಉದ್ಯುಕ್ತವಾಗಿದೆ. ಕಾಲ-ಜೀವ ತತ್ವಗಳಿಗಿಂತಲೂ ಅವ್ಯಕ್ತ-ಮಹತ್ತತ್ವಗಳಿಗಿಂತಲೂ ಉತ್ತಮ ಪುರುಷನಾದ ನೀನು ಪುರುಷೋತ್ತಮನೆನಿಸಿರುವುದು ಯುಕ್ತವೆ.

ನಿನ್ನಿಂದ ನೀನೇ ಮೊದಲಿಗೆ ಪುರುಷರೂಪದಿಂದ ಜನಿಸಿ ಪ್ರಕೃತ್ಯಭಿಮಾನಿನಿ ರಮೆಯಲ್ಲಿ ಪುರುಷಾಭಿಮಾನಿ ಚತುರ್ಮುಖನನ್ನು ಸೃಜಿಸುವಿ. ಆ ಪುರುಷನಾಮಕ ಬ್ರಹ್ಮ ಪ್ರಕೃತಿನಾಮಕ ಸರಸ್ವತಿಯಲ್ಲಿ ಮಹತ್ತತ್ವಾಭಿಮಾನಿಯಾಗಿ ತಾನೇ ಜನಿಸುತ್ತಾನೆ. ಜೊತೆಗೆ ಶ್ರದ್ಧಾನಾಮಕ ಸರಸ್ವತಿಯನ್ನು ಹುಟ್ಟಿಸುತ್ತಾನೆ. ಮಹತ್ತತ್ವಾಭಿಮಾನಿ ಶ್ರದ್ಧೆಯಲ್ಲಿ ಅಹಂಕಾರಾಭಿಮಾನಿಯಾದ ಶೇಷನನ್ನು ಸೃಜಿಸುತ್ತಾನೆ. ಬಳಿಕ ಪುರುಷನಾಮಕ ಬ್ರಹ್ಮ ನಿನ್ನ ಆವೇಶಬಲದಿಂದ ನವಾವರಣ ಸಹಿತ ಬ್ರಹ್ಮಾಂಡವನ್ನು ಸೃಜಿಸುತ್ತಾನೆ.

ಎಲ್ಲರ ಒಳಗೆ ಅವರ ಇಂದ್ರಿಯಗಳಲ್ಲಿದ್ದು ವಿಷಯಗಳನ್ನು ಭೋಗಿಸುವವನು ನೀನು. ಆದರೂ ನಿನಗೆ ಲೇಪವಿಲ್ಲ. ನಿನ್ನ ಅನುಗ್ರಹ ಪಡೆದ ಜ್ಞಾನಿಗಳಿಗೂ ಲೇಪವಿಲ್ಲ. ಆದರೆ ಅವರು ವಿಷಯ

ಭೋಗಕ್ಕೆ ಅಂಜುತ್ತಾರೆ. ನಿನಗೆ ಅಂಜಿಕೆ ಇಲ್ಲ. ಹದಿನಾರು ಸಾವಿರ ಪತ್ನಿಯರೂ ಕೂಡ ನಿನ್ನ ಇಂದ್ರಿಯಗಳನ್ನು ವಿಚಲಿತಗೊಳಿಸಲಾರದೆ ಹೋದರು.

ನಿನ್ನ ಕಥಾಮೃತ ಪ್ರವಾಹದಿಂದ ತುಂಬಿ ಹರಿವ ಶಾಸ್ತ್ರಗಂಗೆಯೂ ನಿನ್ನ ಪಾದೋದಕ ಪ್ರವಾಹದಿಂದ ತುಂಬಿ ಹರಿವ ದೇವಗಂಗೆಯೂ ಮೂಲೋಕವನ್ನು ಪಾವನಗೊಳಿಸುವ ತೀರ್ಥವಾಗಿವೆ.

ಹೀಗೆ ಬ್ರಹ್ಮಾದಿ ದೇವತೆಗಳು ಆಕಾಶದಲ್ಲಿ ನಿಂತು ಶ್ರೀಕೃಷ್ಣನನ್ನು ಸ್ತುತಿಸಿದರು. ಅರಿಕೆ ಮಾಡಿಕೊಂಡರು—

'ಪ್ರಭು, ಸರ್ವೇಶ್ವರ, ನಾವು ಹಿಂದೆ ನಿನ್ನಲ್ಲಿ ಭೂಭಾರ ಇಳಿಸೆಂದು ಕೇಳಿಕೊಂಡಿದ್ದೆವು. ಆ ಕಾರ್ಯವನ್ನು ನೀನು ನಡೆಸಿಕೊಟ್ಟಿರುವೆ. ಧರ್ಮಸ್ಥಾಪನ ಕಾರ್ಯವನ್ನೂ ನಡೆಸಿಕೊಟ್ಟಿರುವೆ. ನಯನ ಮನೋಹರವಾದ ಸುಂದರರೂಪದಿಂದ ಅದ್ಭುತ ಲೀಲೆಗಳನ್ನು ಮಾಡಿ ಶ್ರವಣಮಾತ್ರದಿಂದ ಪಾಪ ಕಳೆವ ಕೀರ್ತಿಯನ್ನು ಹಬ್ಬಿಸಿರುವೆ. ಕಲಿಯುಗದಲ್ಲಿ ನಿನ್ನ ಈ ಲೀಲೆಗಳನ್ನು ಕೇಳುತ್ತ ಹಾಡುತ್ತ ಸಜ್ಜನರು ಅಜ್ಞಾನಮುಕ್ತರಾಗುತ್ತಾರೆ.

ಪ್ರಭು, ನೀನು ಅವತರಿಸಿ ಇಂದಿಗೆ ನೂರನಾಲ್ಕು ವರ್ಷಗಳೂ ಎರಡು ತಿಂಗಳೂ ಕಳೆದಿವೆ. ಇನ್ನು ನೀನು ಮಾಡಬೇಕಾಗಿರುವ ದೇವಕಾರ್ಯ ಯಾವುದೂ ಬಾಕಿ ಉಳಿದಿಲ್ಲ. ಯಾದವಕುಲವೂ ಸದ್ಯದಲ್ಲಿಯೇ ವಿಪ್ರಶಾಪದಿಂದ ಹೆಚ್ಚುಕಡಿಮೆ ನಾಶವಾದಂತೆಯೇ. ಅದರಿಂದ ನಿನಗೆ ಸರಿ ಎನಿಸಿದರೆ ನಮ್ಮ ಅಪೇಕ್ಷೆಯಂತೆ ಪರಂಧಾಮಕ್ಕೆ ಹಿಂತಿರುಗು.'

ಬ್ರಹ್ಮನ ಪ್ರಾರ್ಥನೆಯನ್ನು ಕೇಳಿ ಶ್ರೀಕೃಷ್ಣನೆಂದ, 'ನೀವು ಹೇಳಿದಂತೆ ಮಾಡಲು ನಾನು ಈಗಾಗಲೆ ಸಂಕಲ್ಪಿಸಿದ್ದೇನೆ. ಆದರೆ ನಾನು ಹೋದ ಬಳಿಕವೂ ಯಾದವ ಕುಲ ಭೂಮಿಯ ಮೇಲಿದ್ದರೆ ಕಲಿಕಾಲವಶದಿಂದ ಕೊಬ್ಬಿ ಲೋಕವನ್ನು ನಾಶ ಮಾಡೀತು. ಅದರಿಂದ ಕುಲನಾಶ ಮಾಡಿಯೇ ಪರಂಧಾಮಕ್ಕೆ ನಾನು ಹಿಂತಿರುಗುವೆನು.'

ದೇವತೆಗಳು ನಮಿಸಿ ಹಿಂತಿರುಗಿದರು. ಬಳಿಕ ದ್ವಾರಕೆಯಲ್ಲಿ ಉತ್ಪಾತಗಳು ತಲೆದೋರಿದವು. ಅವನ್ನು ಕಂಡ ಹಿರಿಯ ಯಾದವರಿಗೆ ಶ್ರೀಕೃಷ್ಣನೆಂದ, 'ಈ ಉತ್ಪಾತಗಳಿಗೆ ಕಾರಣ ನಮ್ಮ ಕುಲದ

ಮೇಲೆರಗಿದ ಬ್ರಾಹ್ಮಣಶಾಪ. ಅದರಿಂದ ನಾವು ಇಂದೇ ಪ್ರಭಾಸಕ್ಷೇತ್ರಕ್ಕೆ ಹೋಗೋಣ. ದಕ್ಷಶಾಪದಿಂದ ಕ್ಷಯರೋಗಕ್ಕೆ ತುತ್ತಾದ ಚಂದ್ರ ಈ ಕ್ಷೇತ್ರದಲ್ಲಿ ಸ್ನಾನ ಮಾಡಿ ಶಾಪಮುಕ್ತನಾದ. ನಾವೂ ಅಲ್ಲಿ ಸ್ನಾನ ಮಾಡಿ ಪಿತೃದೇವತೆಗಳಿಗೆ ತರ್ಪಣ ನೀಡಿ ಅಗ್ನಿಗಳನ್ನು ಬ್ರಾಹ್ಮಣರನ್ನು ಆರಾಧಿಸಿ ಪಾಪಮುಕ್ತರಾಗೋಣ.'

ಭಗವಂತನ ಆದೇಶದಂತೆ ಯಾದವರು ಪ್ರಭಾಸಕ್ಷೇತ್ರಕ್ಕೆ ಹೊರಟರು.

ಉದ್ಧವ ಶ್ರೀಕೃಷ್ಣನ ಪಾದಗಳಿಗೆರಗಿ ಕೈಮುಗಿದು ಕೇಳಿಕೊಂಡ –

'ದೇವದೇವ, ನೀನು ನಿಶ್ಚಯವಾಗಿ ಯದುಕುಲವನ್ನು ನಾಶಮಾಡಿ ಭೂಲೋಕವನ್ನು ತೊರೆದು ಹೋಗುವೆ. ಏಕೆಂದರೆ ಶಕ್ತನಾಗಿದ್ದರೂ ವಿಪ್ರಶಾಪವನ್ನು ನೀನು ಪರಿಹರಿಸಲಿಲ್ಲ. ನಾನು ನಿನ್ನನ್ನು ಅರೆಕ್ಷಣವೂ ಬಿಟ್ಟಿರಲಾರೆ. ನನ್ನನ್ನೂ ನಿನ್ನ ಲೋಕಕ್ಕೆ ಕರೆದೊಯ್ಯು.

ನಿನ್ನ ಮಂಗಳಕರವಾದ ಲೀಲೆ ಕಿವಿಗೆ ಇಂಪಾಗಿರುತ್ತದೆ. ಕೇಳಿದವರೆಲ್ಲರೂ ವಿಷಯಾಸೆಯನ್ನೇ ತೊರೆಯುತ್ತಾರೆ. ನೀನು ಮಲಗಿದರೆ ಓಡಾಡಿದರೆ ಕುಳಿತರೆ ನಿಂತರೆ ಎಲ್ಲ ಕಾಲಗಳಲ್ಲಿ ನಿನ್ನ ಜೊತೆಗೆ ಇರುವ ನಾವು ಭಕ್ತರು ಭಗವಂತನಾದ ನಿನ್ನನ್ನು ಹೇಗೆ ಬಿಟ್ಟಿರಬಲ್ಲೆವು?

ನೀನು ಉಪಯೋಗಿಸಿ ಬಿಟ್ಟ ಗಂಧ ಮಾಲ್ಯ ವಸ್ತ್ರಾಭರಣಗಳಿಂದ ನಮ್ಮನ್ನು ನಾವು ಅಲಂಕರಿಸಿಕೊಳ್ಳುತ್ತೇವೆ. ನೀನುಂಡು ಉಳಿದ ಅನ್ನ ಉಣ್ಣುತ್ತೇವೆ. ನಿನ್ನ ಬಂಧಕ ಮಾಯೆಯನ್ನು ದಾಟುತ್ತೇವೆ.

ಊರ್ಧ್ವರೇತಸರಾದ ಯತಿಗಳು ನಿನ್ನಲ್ಲಿಯೇ ಮನಸಿಟ್ಟು ನಿನ್ನ ಪರಂಧಾಮವನ್ನು ಹೊಂದುತ್ತಿದ್ದಾರೆ. ನಾವಿನ್ನೂ ಕರ್ಮಜನ್ಯವಾದ ಶರೀರಗಳಲ್ಲಿ ಹುಟ್ಟಿ ಸಾಯುತ್ತಲೇ ಇದ್ದೇವೆ. ಮುಂದೆ ನಿನ್ನ ಭಕ್ತರ ಸಂಗದಲ್ಲಿ ನಿನ್ನ ಲೀಲಾಶ್ರವಣದಿಂದ ಅಜ್ಞಾನವನ್ನು ದಾಟಬೇಕಾಗಿದೆ. ಅದರಿಂದ ಲೋಕವಿಡಂಬನಗೈವ ನಿನ್ನ ಲೀಲೆಗಳನ್ನು ಸದಾ ನೆನೆದು ಕೊಂಡಾಡುತ್ತಿದ್ದೇವೆ.

ಹೀಗೆ ಉದ್ಧವ ಬೇಡಿಕೊಂಡಾಗ ಶ್ರೀಕೃಷ್ಣ ಉಪದೇಶ ನೀಡಿದ.

❖❖❖

ಶ್ರೀಕೃಷ್ಣ ತನ್ನ ಅವತಾರವನ್ನು ಸಮಾಪ್ತಿಗೊಳಿಸಿ ಪರಂಧಾಮಕ್ಕೆ ಹೋಗಲಿ ಎಂದು ಬಯಸಿ ಬ್ರಹ್ಮಾದಿದೇವತೆಗಳು ದ್ವಾರಕೆಗೆ ಬಂದು ಅವನ ಸ್ತೋತ್ರ ಮಾಡುತ್ತಾರೆ.

ತ್ವಂ ಮಾಯಯಾ ತ್ರಿಗುಣಯಾಽಽತ್ಮನಿ ದುರ್ವಿಭಾವ್ಯಂ
ವ್ಯಕ್ತಂ ಸೃಜಸ್ಯವಸಿ ಲುಂಪಸಿ ತದ್ಗುಣಸ್ಥಃ ।
ನೈತೈರ್ಭವಾನಜಿತ ಕರ್ಮಭಿರಜ್ಯತೇ ವೈ
ಯಃ ಸ್ವೇ ಸುಖೇಽವ್ಯವಹಿತೇಽಭಿರತೋಽನವದ್ಯಃ ॥ ೯ ॥

ಹೇ ಅಜಿತ, ಅನ್ಯರಿಂದ ಸೃಷ್ಟಿಮಾಡಲು ಅಶಕ್ಯವಾದ ಬ್ರಹ್ಮಾಂಡವನ್ನು ನೀನು ನಿನ್ನಲ್ಲಿಯೆ ತ್ರಿಗುಣಾತ್ಮಕ ಪ್ರಕೃತಿಯಿಂದ ಸೃಷ್ಟಿಮಾಡುವಿ. ರಕ್ಷಿಸುವಿ ಲಯ ಮಾಡುವಿ. ಅದಕ್ಕಾಗಿ ತ್ರಿಗುಣಗಳಲ್ಲಿ ನಿಯಾಮಕನಾಗಿ ಪ್ರವೇಶಿಸುವಿ. ಈ ಸೃಷ್ಟಿ ಮುಂತಾದ ಕರ್ಮಗಳಿಂದ ನೀನು ಲೇಪ ಹೊಂದುವುದಿಲ್ಲ, ದುಃಖಾನುಭವಕ್ಕೊಳಗಾಗುವುದಿಲ್ಲ. ಏಕೆಂದರೆ ನೀನು ಜ್ಞಾನಪ್ರಕಾಶರೂಪ, ನಿತ್ಯಾಭಿವ್ಯಕ್ತವಾದ ಸ್ವರೂಪಾನಂದದಲ್ಲಿಯೇ ಮಗ್ನನಾಗಿರುವೆ, ನಿರ್ದೋಷನಾಗಿರುವೆ.

ಸ್ಯಾನ್ನಸ್ತವಾಂಘ್ರಿರಶುಭಾಶಯಧೂಮಕೇತುಃ
ಕ್ಷೇಮಾಯ ನೋ ಮುನಿಭಿರಾರ್ದ್ರಹೃದೋಹ್ಯಮಾನಃ ।
ಯಃ ಸಾತ್ವಿಕೈಃ ಸಮವಿಭೂತಿಭಿರಾತ್ಮವಿದ್ಭಿ
ರ್ವ್ಯೂಹ್ಯಾರ್ಚಿತಃ ಸವನಶಃ ಸಮವಿಕ್ರಮೈಶ್ಚ ॥ ೧೦ ॥

ನಿನ್ನ ಪಾದವನ್ನು ಮುನಿಗಳು ಭಕ್ತಿರಸದಿಂದ ತೊಯ್ದು ಅಂತಃಕರಣದಲ್ಲಿ ಹೊತ್ತುಕೊಳ್ಳುತ್ತಾರೆ. ನಿನ್ನ ಸ್ವರೂಪವನ್ನು ಕಂಡ ಭಕ್ತರು ಅದನ್ನು ಸಮಾನಐಶ್ವರ್ಯ ಸಮಾನ ಬಲಪರಾಕ್ರಮಉಳ್ಳ ವಾಸುದೇವಾದಿ ಚತುರ್ವ್ಯೂಹರೂಪದಲ್ಲಿ ತ್ರಿಕಾಲದಲ್ಲಿ ಪೂಜಿಸುತ್ತಾರೆ. ಅಂಥ ದಿವ್ಯಪ್ರಕಾಶರೂಪವಾದ ನಿನ್ನ ಪಾದ ನಮ್ಮ ವಿಷಯವಾಸನೆಯನ್ನು ಸುಡುವ ಧೂಮಕೇತುವಿನಂತೆ ಅಂತಃಕರಣದಲ್ಲಿ ಉದಿಸಿ ನಮಗೆ ಕ್ಷೇಮ ಉಂಟುಮಾಡಲಿ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ 10ನೇ ಶ್ಲೋಕದ ಉತ್ತರಾರ್ಧಪಾಠ ಹೀಗಿದೆ—

ಯಃ ಸಾತ್ವತೈಃ ಸಮವಿಭೂತಯ ಆತ್ಮವಿದ್ಭಿಃ ।
ವ್ಯೂಹೇಽರ್ಚಿತಃ ಸವನಶಃ ಸ್ವರತಿಕ್ರಮಾಯ ॥

'ಸ್ವರ್ಗವನ್ನು ಅತಿಕ್ರಮಿಸಿ ನಿನ್ನ ನಿತ್ಯಲೋಕವನ್ನು ಸೇರಿ ನಿನಗೆ ಸಮಾನವಾದ ಐಶ್ವರ್ಯವನ್ನು ಪಡೆಯುವುದಕ್ಕಾಗಿ ವಾಸುದೇವಾದಿ ವ್ಯೂಹಗಳನ್ನು ಅರ್ಚಿಸುತ್ತಾರೆ, ಸಾತ್ವತರು' ಎಂದು ವಿವರಣೆ.

ಆದರೆ 'ಸ್ವರತಿಕ್ರಮಾಯ' ಎನ್ನುವುದು ಸರಿಯಾದ ಪಾಠವಲ್ಲ. 'ಸಮವಿಕ್ರಮ್ಯೈಶ್ವರ್ಯೈಃ' ಎಂದೇ ಸರಿಯಾದ ಪಾಠ. ಏಕೆಂದರೆ 'ಸ್ವರತಿಕ್ರಮ' ಎಂದು ಮೋಕ್ಷವನ್ನು, ವೈಕುಂಠಲೋಕವನ್ನು ಕರೆಯುವುದು ಉಚಿತವಲ್ಲ. ಸಂಸಾರಸಾಗರದ ಪಾರ, ಆಚೆ ದಡ ಎಂದೇ ವಿಷ್ಣುಲೋಕ ಪ್ರಸಿದ್ಧ, ಸ್ವರ್ಗದಾಚೆಯ ಪ್ರದೇಶವೆಂದಲ್ಲ. ಮತ್ತು ಸ್ವರ್ಗದಾಚೆ ಇರುವುದೆಲ್ಲ ನಿತ್ಯಲೋಕವೂ ಅಲ್ಲ. 'ತೇ ಹ ನಾಕಂ ಮಹಿಮಾನಃ ಸಚಂತೇ' ಎಂದು ಮುಂತಾಗಿ ವೈಕುಂಠವನ್ನು ನಾಕ, ಸ್ವರ್ಗವೆಂದೇ ಮಂತ್ರಗಳು ಹೇಳುತ್ತಿವೆ. ಮೂಲೋಕ ವಿವಕ್ಷೆಯಲ್ಲಿ ಭೂಮಿಯಲ್ಲಿ ಪಾತಾಳ ಸೇರುವಂತೆ ಸ್ವರ್ಗದಲ್ಲಿ ವೈಕುಂಠ ಸೇರುತ್ತದೆ. ಸಪ್ತಲೋಕ ವಿವಕ್ಷೆಯಲ್ಲಿಯೂ ಸತ್ಯಲೋಕದಲ್ಲಿ ಸೇರುತ್ತದೆ. ಎಲ್ಲಿಯೂ ಸ್ವರ್ಗದಾಚೆ ವೈಕುಂಠ ಎಂದು ವ್ಯವಹಾರ ಕಾಣುವುದಿಲ್ಲ. ಸ್ವರ್ಗದಾಚೆ ಎಂದು ಹೇಳಿ ವಿಶೇಷವೇನೂ ಹೇಳಿದಂತೆಯೂ ಆಗುವುದಿಲ್ಲ.

ಯದ್ಯಪಿ 'ಸಮವಿಕ್ರಮ್ಯೈಶ್ವರ್ಯೈಃ' ಎಂಬಲ್ಲಿ 'ಸಮವಿಕ್ರಮ್ಯೈಶ್ಚ' ಎಂದೂ ಪಾಠವಿದೆ. ಆದರೆ ಅದು ಪ್ರಮೇಯಚಂದ್ರಿಕಾ ವ್ಯಾಖ್ಯಾನಕ್ಕೆ ಸಮ್ಮತವಲ್ಲ. ತಾತ್ಪರ್ಯ ದೀಪಿಕಾವ್ಯಾಖ್ಯಾನಕ್ಕೂ ಸಮ್ಮತವಲ್ಲ.

ಎಂಟನೇ ಪದ್ಯದಲ್ಲಿ 'ಯಃ ಸ್ವೇ ಸುಖೇಽವ್ಯವಹಿತೇ' ಎಂದು ಪಾಠ. 'ಯತ್ಸ್ವೇ' ಎಂದಲ್ಲ. ಇದನ್ನು ಎಲ್ಲ ವ್ಯಾಖ್ಯಾನಕಾರರೂ ಅಂಗೀಕರಿಸಿದ್ದಾರೆ. ಶ್ರೀಧರಸ್ವಾಮಿ ಮುಂತಾದವರೂ ಕೂಡ ತಮ್ಮ ವ್ಯಾಖ್ಯಾನಗಳಲ್ಲಿ 'ಯಃ' ಎಂದೇ ಪ್ರತೀಕ ಹಿಡಿಯುತ್ತಾರೆ. 'ಯತ್' ಎಂದಲ್ಲ. ಹೀಗೆ, ಹತ್ತನೇ ಪದ್ಯದಲ್ಲಿ 'ಯಃ' ಎಂದು ಮೂರುಬಾರಿ ಬಂದರೂ ವಾಕ್ಯಗಳು ಎರಡೇ ಇವೆ. ಅದರಿಂದ ಮೂರನೇ ಬಾರಿ ಬರುವ 'ಯಃ' ಎಂಬ ಶಬ್ದ ಸರ್ವನಾಮವಲ್ಲ. ಅಕಾರಾಂತವಾದ ಜ್ಞಾನವಾಚಕಶಬ್ದ ಎನ್ನಬೇಕು. ಇಲ್ಲದಿದ್ದರೆ ಅನ್ವಯವಿಲ್ಲದಂತಾಗುವುದು.

ಎಂಟನೇ ಶ್ಲೋಕದಲ್ಲಿ 'ತ್ವಂ ಸೃಜಸಿ' 'ಭವಾನ್ ನ ಕರ್ಮಭಿರಜ್ಯತೇ' ಎಂದು ಎರಡೇ ವಾಕ್ಯಗಳಿರುವುದರಿಂದ 'ಯಃ' ಎಂಬುದಕ್ಕೆ ಅನ್ವಯವಿಲ್ಲ. ಅದರಿಂದ ಅದೂ ಅಕಾರಾಂತ ಜ್ಞಾನವಾಚಕಶಬ್ದ ಎಂದಿಟ್ಟುಕೊಳ್ಳಬೇಕು. ವಿಜಯಧ್ವಜೀಯದಲ್ಲಿ ಹಾಗೇ ಹೇಳಿದ್ದಾರೆ. ಅದರಿಂದ ಶ್ರೀಮದಾಚಾರ್ಯರು 'ಯಃ' ಎಂದರೆ 'ಪ್ರಕಾಶರೂಪ' ಎಂದು ಅರ್ಥಹೇಳಿದ್ದಾರೆ, ಜ್ಞಾನ ಪ್ರಕಾಶರೂಪ ಎಂದರ್ಥ.

ಯಃ ಪ್ರಕಾಶರೂಪಃ ।

ಅಕಾರಾಂತವಾದ 'ಯ' ಶಬ್ದ ಬಂದಲ್ಲಿ ಅದಕ್ಕೆ ಜ್ಞಾನಪ್ರಕಾಶರೂಪನೆಂದು ಅರ್ಥವನ್ನಿಟ್ಟುಕೊಳ್ಳಬೇಕು.

ವಿಜಯಧ್ವಜೀಯದಲ್ಲಿ ಮುಂದೆ ಹನ್ನೆರಡನೇ ಪದ್ಯದಲ್ಲಿಯೂ

'ಯಃ ಸುಪ್ರಣೀತಮಮುಯಾ'

ಎಂಬಲ್ಲಿ 'ಯಃ ಪ್ರಕಾಶರೂಪಃ' ಎಂದು ವ್ಯಾಖ್ಯಾನ ಮಾಡಿದ್ದಾರೆ. ಅದು ವಿಶೇಷಾರ್ಥ ಲಾಭದೃಷ್ಟಿಯಿಂದ ಪ್ರಶಸ್ತವಾಗಿದೆ.

❖❖❖

ಶ್ರೀಕೃಷ್ಣನ ಪರಂಧಾಮ ಪ್ರವೇಶವನ್ನು ಬಯಸಿ ಬ್ರಹ್ಮಾದಿ ದೇವತೆಗಳು ದ್ವಾರಕೆಗೆ ಬಂದು ಅವನನ್ನು ಸ್ತೋತ್ರ ಮಾಡುತ್ತಾರೆ.

ಪರ್ಯುಷ್ಟಯಾ ಪತಿತಯಾ ವನಮಾಲಯೇಯಂ
ಸಂಸ್ಪರ್ಧಿನೀ ಭಗವತೀ ಪ್ರತಿಪಕ್ಷವಚ್ಛ್ರೀಃ ।
ಯಃ ಸುಪ್ರಣೀತಮಮುಯಾऽರ್ಹಣಮಾದದಾನೋ
ಭೂಯಾತ್ಸದಾऽಙ್ಘ್ರಿರಶುಭಾಶಯಧೂಮಕೇತುಃ ॥ ೧೨ ॥

ಭಗವತಿ ಶ್ರೀದೇವಿ ನಿನ್ನ ಕೊರಳಲ್ಲಿ ಆಪಾದಲಂಬಿಯಾಗಿ ಒಪ್ಪುವ ಎಂದೆಂದೂ ಬಾಡದ ವನಮಾಲೆಯೊಡನೆ ಪ್ರತಿಸ್ಪರ್ಧಿಯಂತೆ ಸ್ಪರ್ಧಿಸುತ್ತ ಪಾದಪೂಜೆಗೆ ಹೂತುಳಸಿಗಳನ್ನು ತಂದರೆ ಅವುಗಳನ್ನು ನಿನ್ನ ಪಾದ ತಾನೇ ಎತ್ತಿಕೊಳ್ಳುತ್ತದೆ! ಪಾದಕ್ಕೆ ಕೈ ಇಲ್ಲ ತಾನೆ? ಆದರೂ ಲೋಕ ವಿಲಕ್ಷಣ 'ಯಃ' ಪ್ರಕಾಶರೂಪವಾದ್ದರಿಂದ ಕಾಲು ಕೈಯ ಕೆಲಸವನ್ನೂ ಮಾಡಬಲ್ಲುದು! ಅಂಥ ನಿನ್ನ ಪಾದ ನಮ್ಮ ನಿಷಿದ್ಧವಿಷಯ ವಾಸನೆಯನ್ನು ಸುಡುವಲ್ಲಿ ಸದಾ ಧೂಮಕೇತುವಿನಂತಾಗಲಿ.

[1]ಶ್ರೀಧರ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ. 'ಈ ವನಮಾಲೆ ಬಾಡಿದ್ದರೂ ಕೂಡ ನಾನಿರುವ ವಕ್ಷಃಸ್ಥಲದಲ್ಲಿಯೇ ಇರುತ್ತದೆ ಎಂದು ಅಸಹನೆಯಿಂದ ಶ್ರೀದೇವಿ

1. ಅಹಂ ಯತ್ರ ವಸಾಮಿ ತತ್ರೈವ ವಕ್ಷಸಿ ಪರ್ಯುಷಿತಾऽಪೀಯಂ ವಸತೀತಿ ಪ್ರತಿಪತ್ನೀವತ್ ಸಂಸ್ಪರ್ಧಮಾನಾಂ ಶ್ರಿಯಮನಾದೃತ್ಯ ಯೋ ಭವಾನ್ ಪರ್ಯುಷಿತಯಾऽಪಿ ಅಮುಯಾ ವನಮಾಲಯಾ ಭಕ್ತೈರರ್ಪಿತೇಯಮಿತಿ ಪ್ರೀತ್ಯಾ ಸುಪ್ರಣೀತಂ ಸುಷ್ಠು ಸಂಪಾದಿತಂ ಯಥಾ ಭವತಿ ತಥಾऽರ್ಹಣಂ ಪೂಜಾಮಾದದಾತ್ ಸ್ವೀಕೃತವಾನ್ । -ಶ್ರೀಧರಃ

ಸ್ಪರ್ಧಿಸುತ್ತಾಳೆ'. ಶ್ರೀಹರಿ ಅವಳನ್ನು ಅನಾದರದಿಂದ ಕಂಡು, ವನಮಾಲೆ ಬಾಡಿದ್ದರೂ ಕೂಡ ಭಕ್ತರು ಕೊಟ್ಟಿದ್ದೆಂದು ಪ್ರೀತಿಯಿಂದ ಚೆನ್ನಾಗಿ ಧರಿಸಿಕೊಂಡೇ ಇರುತ್ತಾನೆ' ಎಂದು.

ಇಲ್ಲಿ ಅನೇಕ ಸಮಸ್ಯೆಗಳು ಬರುತ್ತವೆ, ವನಮಾಲೆ ಹರಿಯ ಎದೆಯಲ್ಲಿ ಬಾಡುವುದುಂಟೆ? ಬಾಡಿದ ವನಮಾಲೆಯೊಂದಿಗೆ ಲಕ್ಷ್ಮಿ ಸ್ಪರ್ಧಿಸುವಳೆ? ಲಕ್ಷ್ಮಿ ಸ್ಪರ್ಧಿಸುವುದನ್ನು ಕಂಡಾಗ ಹರಿ ಅವಳನ್ನು ಅನಾದರದಿಂದ ಕಾಣುವನೆ? ಲಕ್ಷ್ಮಿಗಿಂತಲೂ ಭಕ್ತರೇ ಭಗವಂತನಿಗೆ ಹೆಚ್ಚೇ? ಅವರು ಕೊಟ್ಟ ವನಮಾಲೆಯೆ ಹೆಚ್ಚೇ? ಹಾಗಾದರೆ ಅವಳನ್ನು ಎದೆಯಲ್ಲಿ ಏಕೆ ಧರಿಸುತ್ತಾನೆ? ಈ ಯಾವ ಪ್ರಶ್ನೆಗಳಿಗೂ ಬೇರೆ ವ್ಯಾಖ್ಯಾನಕಾರರಲ್ಲಿ ಸಮಂಜಸವಾದ ಉತ್ತರವಿಲ್ಲ.

ವಸ್ತುತಃ ಶ್ಲೋಕದಲ್ಲಿ ವನಮಾಲೆ ಬಾಡಿದೆ ಎಂದಿಲ್ಲ. 'ಪರ್ಯುಷ್ಟಾ' ಎಂಬಲ್ಲಿ 'ಅಪಪರೀ ವರ್ಜನೇ' ಎಂದು ಪಾಣಿನಿಸೂತ್ರ ಹೇಳುವಂತೆ 'ಪರಿ' ಎಂಬುದು ನಿಷೇಧ ವಾಚಕಶಬ್ದ. ಬಾಡಿದ್ದಲ್ಲ ಎಂದರ್ಥ. ಹೀಗಾಗಿ ಭಗವಂತನಿಗೆ ಭಕ್ತರು ಬಾಡಿದ ವನಮಾಲೆಯನ್ನು ಅರ್ಪಿಸುವುದೂ ಇಲ್ಲ, ಅದು ಬಾಡುವುದೂ ಇಲ್ಲ, ಬಾಡಿದ ವನಮಾಲೆಯೊಂದಿಗೆ ಲಕ್ಷ್ಮಿ ಸ್ಪರ್ಧಿಸುವುದೂ ಇಲ್ಲ. ಆದರಿಂದ ಹರಿ ಅವಳನ್ನು ಅನಾದರದಿಂದ ಕಾಣುವ ಪ್ರಮೇಯವೇ ಇಲ್ಲ.

ಬಾಡದ ವನಮಾಲೆಯೊಂದಿಗೆ ಲಕ್ಷ್ಮಿ ಸ್ಪರ್ಧಿಸುವಂತೆ ಕಾಣುತ್ತಾಳೆ. ಏಕೆಂದರೆ,

ಆಜಾನುಲಂಬಿನೀ ಮಾಲಾ ಸರ್ವರ್ತುಕುಸುಮೋಜ್ವಲಾ ।
ಮಧ್ಯೇ ಸ್ಥೂಲಕದಂಬಾಢ್ಯಾ ವನಮಾಲೇತಿ ಕೀರ್ತಿತಾ ॥

'ಎಲ್ಲ ಋತುಗಳಲ್ಲಿ ಅರಳುವ ಹೂಗಳಿಂದ ಕೂಡಿದ್ದು ಮಧ್ಯದಲ್ಲಿ ದೊಡ್ಡ ಗೊಂಚಲಿನಿಂದಲೂ ಕೂಡಿದ್ದು ಮೊಣಕಾಲಿಂದಲೂ ಕೆಳಗೆ ತೂಗುವಂಥ ಹೂಮಾಲೆ ವನಮಾಲೆ ಎನಿಸುತ್ತದೆ' ಅದು ವಕ್ಷಃಸ್ಥಳದಲ್ಲಿದ್ದು ಕೆಳಗೆ ತೂಗುತ್ತಾ ಪಾದಸೇವೆಯನ್ನೂ ಕೂಡ ಮಾಡುವುದರಿಂದ ಕೇವಲ ವಕ್ಷಃಸ್ಥಳವನ್ನು ಅಲಂಕರಿಸುವ ಲಕ್ಷ್ಮಿಗಿಂತಲೂ ಮೇಲೆನಿಸಿದಂತಾಯಿತು. ಅದಕ್ಕೇ ಲಕ್ಷ್ಮಿ ಇನ್ನೊಂದು ರೂಪದಿಂದ ಕೆಳಗೆ ಇಳಿದು ಬಂದು ಪಾದಸೇವೆಯನ್ನೂ ಮಾಡುತ್ತಾಳೆ. ಇದೇ ಅವಳು ಮಾಡುವ ಸ್ಪರ್ಧೆ.

ಅವಳು ಹೂತುಲಸಿಗಳಿಂದ ಪಾದಪೂಜೆ ಮಾಡಿದರೆ ಆ ಪಾದವು ಪ್ರೀತಿಯಿಂದ ಅದನ್ನು ತಾನೇ ಅವಳ ಕೈಯಿಂದ ಎತ್ತಿಕೊಳ್ಳುತ್ತದೆ. ಎತ್ತಿಕೊಳ್ಳುವುದು

'ಅರ್ಹಣಮಾದದಾನಃ' ಎಂಬುದು, ಹಸ್ತದ ಕಾರ್ಯ. ಪಾದವು ಹಸ್ತದ ಕಾರ್ಯ ಮಾಡುವುದು ಹೇಗೆ ಸಾಧ್ಯ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ. 'ಯಃ ಆದದಾನಃ' ಎಂದು ಯ ಶಬ್ದವಿದೆ. ಯ ಎಂದರೆ ಚಿನ್ಮಯಪ್ರಕಾಶರೂಪವಾದ ಪಾದ. ಜಡವಾದ ಪ್ರಾಕೃತವಾದ ಪಾದವಲ್ಲ. ಅದರಿಂದ ಅಚಿಂತ್ಯಶಕ್ತಿ ಉಳ್ಳುದು, ಹಸ್ತದ ಕಾರ್ಯವನ್ನು ಪಾದವೂ ಮಾಡುತ್ತದೆ. ಭಗವಂತನ ಎಲ್ಲ ಅಂಗಗಳೂ ಹೀಗೇ ಎಲ್ಲ ಅಂಗಗಳ ಕಾರ್ಯಮಾಡುತ್ತವೆ. ಅದರಿಂದ ಇದೇನೂ ಆಶ್ಚರ್ಯವಲ್ಲ.

ಆದರೆ ಲಕ್ಷ್ಮಿ ವನಮಾಲೆಯಂತೆ ಪಾದ ಸೇವೆ ಮಾಡಿದ ಮಾತ್ರಕ್ಕೆ ಅದನ್ನು ಸ್ಪರ್ಧೆ ಎನ್ನಬಹುದೆ? ಸ್ಪರ್ಧೆ ಒಂದು ದೋಷವಲ್ಲವೆ? ಎಂದರೆ ಈ ಸ್ಪರ್ಧೆ ವಾಸ್ತವ ವಲ್ಲ ಕೇವಲ ಉತ್ಪ್ರೇಕ್ಷೆ ಎಂದು ವಾಮನಪುರಾಣ ಹೇಳಿದೆ ಎನ್ನುತ್ತಾರೆ ಶ್ರೀಮದಾಚಾರ್ಯರು.

ಅದರಿಂದ ಲಕ್ಷ್ಮಿ ಸ್ಪರ್ಧಿಸುವುದು, ಭಗವಂತ ಅವಳನ್ನು ಅನಾದರದಿಂದ ಕಾಣುವುದು, ಅವಳಿಗಿಂತಲೂ ಭಕ್ತರನ್ನೇ ಹೆಚ್ಚು ಆದರಿಸುವುದು ಎಂದೆಲ್ಲವೂ ಅಸಂಗತವಾದ ವಿವರಣೆ. ಭಾಗವತಕ್ಕೆ ಸಮ್ಮತವಲ್ಲ ಎಂದಂತಾಯಿತು.

ಅಸ್ಪರ್ಧಿನೀ ಸ್ಪರ್ಧಿನೀವ ಶ್ರೀರಾಸ್ತೇ ವನಮಾಲಯಾ ।
ನ ಹಿ ಸ್ಪರ್ಧಾದಯೋ ದೋಷಾಃ ಸಂವಿದ್ರೂಪಾಂ ಸ್ಪೃಶಂತಿ ತಾಂ ॥
ಇತಿ ವಾಮನೇ ॥

ಲಕ್ಷ್ಮಿ ವನಮಾಲೆಯೊಂದಿಗೆ ಸ್ಪರ್ಧಿಸದಿದ್ದರೂ ಸ್ಪರ್ಧಿಸುವಂತೆ ಕಾಣುತ್ತಾಳೆ. ವಾಸ್ತವದಲ್ಲಿ ಸ್ಪರ್ಧಾದಿದೋಷಗಳು ಯಾವುವೂ ಚಿನ್ಮಯ ಸ್ವರೂಪಳಾದ ದೇವಿಯಲ್ಲಿ ಲೇಶವೂ ಇರುವುದಿಲ್ಲ ಎಂದು ವಾಮನಪುರಾಣದಲ್ಲಿ ಹೇಳಿದೆ.

❖❖❖

ಶ್ರೀಕೃಷ್ಣ ಪರಂಧಾಮವನ್ನು ಪ್ರವೇಶಿಸಲಿ ಎಂದು ಬಯಸಿ ಬ್ರಹ್ಮಾದಿ ದೇವತೆಗಳು ದ್ವಾರಕೆಗೆ ಬಂದು ಅವನನ್ನು ಸ್ತೋತ್ರಮಾಡುತ್ತಾರೆ—

ನಸ್ಯೋತಗಾವ ಇವ ಯಸ್ಯ ವಶೇ ಭವಂತಿ
ದೇವಾಶ್ಚ ಯಸ್ತನುಭೃದಾಯುಷಿ ರಜ್ಯಮಾನಾಃ ।
ಕಾಲಸ್ಯ ತೇ ಪ್ರಕೃತಿಪೂರುಷಯೋಃ ಪರಸ್ಯ
ಶಂ ನಸ್ತನೋತು ಚರಣಃ ಪುರುಷೋತ್ತಮಸ್ಯ ॥ ೧೪ ॥

ಇಂದ್ರಿಯ ದೇವತೆಗಳು ಕೂಡ ಮೂಗುದಾರ ಹಾಕಿದ ಎತ್ತುಗಳಂತೆ ನಿನ್ನ ಅಧೀನದಲ್ಲಿದ್ದು ದೇಹಿಗಳಿಗೆ ವಿಷಯಜನ್ಯ ಸುಖದುಃಖಗಳನ್ನು ನೀಡುತ್ತಾರೆ. ನೀನು ಎಲ್ಲ ದೇಹಿಗಳ ಆಯುಸ್ಸಿಗೆ ನಿಯಾಮಕನಾಗಿ 'ರಜ್ಯಮಾನ' ಅವರ ದೇಹದಲ್ಲಿದ್ದು 'ಅ' ಅಭಿಮಾನವಿಲ್ಲದವನಾಗಿರುವೆ. ಪ್ರಕೃತಿಪುರುಷರಿಗಿಂತ ಉತ್ತಮನಾಗಿದ್ದು ಪುರುಷೋತ್ತಮನೆನಿಸಿರುವವನು ಕಾಲನಿಯಾಮಕನು ನೀನು. ಅಂಥ ನಿನ್ನ ಪಾದ ನಮಗೆ ಸುಖ ನೀಡಲಿ.

[1]'ಮೂಗುದಾರ ಹಾಕಿ ಕಟ್ಟಿದ ಎತ್ತುಗಳಂತೆ ದೇವತೆಗಳು ನಿನ್ನ ವಶದಲ್ಲಿರುತ್ತಾರೆ. ಪರಸ್ಪರ ಹೋರಾಟಗಳಲ್ಲಿ ಪೀಡಿತರಾಗುತ್ತಾರೆ ಹೊರತು ಜಯದಲ್ಲಾಗಲಿ ಪರಾಜಯದಲ್ಲಾಗಲಿ ಅವರಿಗೆ ಸ್ವಾತಂತ್ರ್ಯವಿಲ್ಲ' ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. ಶ್ಲೋಕದಲ್ಲಿ ಎರಡನೇ ಸಾಲು ಅವರಲ್ಲಿ–

'ಬ್ರಹ್ಮಾದಯಸ್ತನುಭೃತೋ ಮಿಥುರರ್ದ್ಯಮಾನಾಃ ॥'

ಎಂದಿದೆ. ಬ್ರಹ್ಮಾದಿಗಳು, ಅಂದರೆ ಬ್ರಹ್ಮರುದ್ರರೂ ಕೂಡ ಪರಸ್ಪರ ಯುದ್ಧ ಮಾಡಿ ಪೀಡಿತರಾಗುತ್ತಾರೆ ಎನ್ನಲಾದೀತೆ? ಇಂದ್ರಾದಿ ಪದವಿಗಳಿಗೆ ಅಸುರರ ಆಕ್ರಮಣಭೀತಿ ಇದ್ದರೂ ಬ್ರಹ್ಮರುದ್ರರ ಪದವಿಗೆ ಆ ಭೀತಿ ಇಲ್ಲ. ಇಂದ್ರಾದಿ ದೇವತೆಗಳೂ ಕೂಡ ಪರಸ್ಪರ ಯುದ್ಧ ಮಾಡುವುದು ಎಲ್ಲೂ ಕಂಡಿಲ್ಲ.

ದೇವಾಸುರರು ಪರಸ್ಪರ ಯುದ್ಧಮಾಡುವುದು ನಿಜವೆ. ಅದರಿಂದ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಬ್ರಹ್ಮಾದಯಃ' ಎಂದರೆ ದೇವಾಸುರರೆಂದು ವ್ಯಾಖ್ಯಾನ ಮಾಡಿದ್ದಾರೆ. ಆದರೆ ಶುಕದೇವ ವ್ಯಾಖ್ಯಾನದಲ್ಲಿ–

'ಮಿಥುರ್ಮಿಥಃ ಅರ್ದ್ಯಮಾನಾಃ ಪೀಡ್ಯಮಾನಾ ಬ್ರಹ್ಮಾದಯೋ ವಯಂ' 'ಪರಸ್ಪರ ಹಿಂಸೆಯಿಂದ ಕ್ಲೇಶಪಡುವ ನಾವು ಬ್ರಹ್ಮಾದಿಗಳು' ಎಂದು ಕೃಷ್ಣನಲ್ಲಿ ಪ್ರಾರ್ಥನೆ ಮಾಡಲು ಬಂದ ದೇವತೆಗಳು ತಮ್ಮ ಬಗ್ಗೆ ಹೇಳಿಕೊಳ್ಳುತ್ತಿದ್ದಾರೆ. ಅಸುರರು ಅಲ್ಲಿಗೆ ಬಂದಿರಲಿಲ್ಲ. ಅದರಿಂದ ನಾವು ಎಂದರೆ ಕೇವಲ ದೇವತೆಗಳು. ಅವರು ಪರಸ್ಪರ ಹಿಂಸೆ ಮಾಡಿಕೊಳ್ಳುವುದಿಲ್ಲ.

ವಸ್ತುತಃ 'ಬ್ರಹ್ಮಾದಯಃ' ಎಂಬ ಪಾಠವೇ ತಪ್ಪು. ದೇವಾಶ್ಚ ಯ

1. ಮಿಥುರ್ಮಿಥೋಽರ್ದ್ಯಮಾನಾ ಯುದ್ಧಾದಿಭಿಃ ಪೀಡ್ಯಮಾನಾ ಬ್ರಹ್ಮಾದಯೋಽಪಿ ಯಸ್ಯ ತವ ವಶೇ ಭವಂತಿ ನ ತು ಜಯೇ ಪರಾಜಯೇ ವಾ ಸ್ವತಂತ್ರಾಃ । ಕೇ ಇವ । ನಸಿ ನಾಸಾಮಾವಿಧ್ಯ ಬದ್ಧಗಾವೋ ಬಲೀವರ್ದಾ ಇವ । -ಶ್ರೀಧರಃ

ಸ್ತನುಭೃದಾಯುಷಿ ರಜ್ಯಮಾನಾಃ ಎಂದೇ ಪಾಠ ಎಂದು ಶ್ರೀಮದಾಚಾರ್ಯರು ಹೇಳುತ್ತಿದ್ದಾರೆ.

ಇಲ್ಲಿ 'ರಜ್ಯಮಾನಾಃ' ಎಂಬುದು ಆಕಾರಾಂತ ಏಕವಚನಶಬ್ದ, ಬಹುವಚನವಲ್ಲ. 'ರಜ್ಯಮಾನ ಅ' ಎಂದು ಬಿಡಿಸಬೇಕು. 'ರಜ್ಯಮಾನ' ಜೀವಶರೀರದಲ್ಲಿ ಜೀವರೊಂದಿಗೇ ಇದ್ದಾನೆ. ಆದರೆ 'ಅ' ದೋಷರಹಿತನಾಗಿದ್ದಾನೆ. ಜೀವರಂತೆ ಶರೀರಾಭಿಮಾನದಿಂದ ಕರ್ಮಫಲ ಉಣ್ಣುವುದಿಲ್ಲ. ಜೀವರ ಆಯುಷ್ಯಕ್ಕೆ, ಶರೀರ ಸಂಬಂಧಕ್ಕೆ ನಿಯಾಮಕನಾಗಿ ಇರುತ್ತಾನೆ.

ತನುಭೃದಾಯುಷಿ ಸಂಬದ್ಧಃ ಅಶ್ಚೇತಿ
ತನುಭೃದಾಯುಷಿ ರಜ್ಯಮಾನಾಃ ॥
ಬ್ರಹ್ಮಣಾ ಸಂಪರಿತ್ಯಕ್ತೋ ಮೃತ ಇತ್ಯುಚ್ಯತೇ ನರಃ ॥
ಇತಿ ಭಾರತೇ ॥

'ತನುಭೃದಾಯುಷಿ ರಜ್ಯಮಾನಾಃ' ಎಂದೇ ಪಾಠ. 'ರಜ್ಯಮಾನ ಅ' ಎಂದು ಬಿಡಿಸಬೇಕು. 'ತನುಭೃದಾಯುಷಿ ರಜ್ಯಮಾನಃ' ಶರೀರಿಗಳ ಆಯುಷ್ಯದಲ್ಲಿ ನಿಯಾಮಕನಾಗಿ ಸಂಬದ್ಧನಾಗಿದ್ದಾನೆ ಮತ್ತು 'ಅಃ' ದೋಷರಹಿತನಾಗಿದ್ದಾನೆ ಎಂದರ್ಥ.

ಪರಮಾತ್ಮ ಜೀವಶರೀರವನ್ನು ತ್ಯಾಗ ಮಾಡಿದಾಗ ಜೀವ ಮೃತನೆನಿಸುತ್ತಾನೆ ಎಂದು ಭಾರತದಲ್ಲಿದೆ. ಆದರಿಂದ ಪರಮಾತ್ಮ ಆಯುಷ್ಯನಿಯಾಮಕನೆಂದು ಭಾಗವತವೂ ಹೇಳುತ್ತಿದೆ.

❖❖❖

ಶ್ರೀಕೃಷ್ಣನ ಪರಂಧಾಮ ಪ್ರವೇಶವನ್ನು ಬಯಸಿ ಬ್ರಹ್ಮಾದಿ ದೇವತೆಗಳು ದ್ವಾರಕೆಗೆ ಬಂದು ಸ್ತೋತ್ರ ಮಾಡುತ್ತಾರೆ—

ಅಸ್ಯಾಸಿ ಹೇತುರುದಯಸ್ಥಿತಿಸಂಯಮಾನಾ-
ಮವ್ಯಕ್ತಜೀವಮಹತಾಮಪಿ ಕಾಲಮಾತ್ರಃ।
ಸೋಽಯಂ ತ್ರಿಣಾಭಿರಖಿಲಾಪಚಯೇ ಪ್ರವೃತ್ತಃ
ಕಾಲೋ ಗಭೀರರಯ ಉತ್ತಮಪೂರುಷಸ್ತ್ವಮ್ ॥ ೧೫ ॥

ಈ ಪ್ರಪಂಚಕ್ಕೆ ಮಾತ್ರವಲ್ಲದೆ ಅದಕ್ಕೆ ಮೂಲವಾದ ಅವ್ಯಕ್ತತತ್ತ್ವ ಜೀವತತ್ತ್ವ

ಮಹತ್ತತ್ವಗಳಿಗೂ ಸೃಷ್ಟಿಸ್ಥಿತಿಲಯಗೈವ ಕರ್ತ ನೀನು. ಅವುಗಳಿಗೆ ಕಾರಣವಾದ ಕಾಲಕ್ಕೂ ನೀನೆ ಕರ್ತ, ಅವೆಲ್ಲವನ್ನೂ ಬಲ್ಲವನು ನಿತ್ಯನಾದ ನೀನೇ ಆಗಿರುವೆ. ಅದರಿಂದ ಕಾಲನೆನಿಸಿರುವೆ. ಶೀತ ಉಷ್ಣ ವರ್ಷಕಾಲಗಳೆಂದು ಮೂರು ನಾಭಿಗಳಿಂದ ಅಚಿಂತ್ಯವೇಗದಿಂದ ಉರುಳುವ ಕಾಲಚಕ್ರವನ್ನು ನೀನೇ ನಿರ್ಮಿಸಿರುವೆ. ಇದೀಗ ಆ ಕಾಲಚಕ್ರ ಸಮಸ್ತ ಯಾದವ ಕುಲನಾಶಕ್ಕೆ ತೊಡಗಿದೆ. ಹೀಗೆ ಕಾಲಕ್ಕಿಂತಲೂ ಅವ್ಯಕ್ತಾದಿ ತತ್ವಗಳಿಗಿಂತಲೂ ಉತ್ತಮ ಪುರುಷನಾದ ನೀನು ಪುರುಷೋತ್ತಮನೆನಿಸಿರುವೆ.

[1]'ಹಿಂದಿನ ಶ್ಲೋಕದಲ್ಲಿ 'ಕಾಲಸ್ಯ ತೇ ಪ್ರಕೃತಿ ಪೂರುಷಯೋಃ ಪರಸ್ಯ' 'ನೀನು ಪ್ರಕೃತಿ ಪುರುಷರಿಗಿಂತ ಉತ್ತಮ' ಎಂದುದನ್ನು ಈ ಶ್ಲೋಕದಲ್ಲಿ ಉಪಪಾದನೆ ಮಾಡುತ್ತಾರೆ, 'ನೀನು ಪ್ರಕೃತಿ ಪುರುಷ ಮಹತ್ತತ್ವಗಳಿಗೆ ನಿಯಾಮಕನಾದ್ದರಿಂದ, ಸಂವತ್ಸರಾತ್ಮಕ ಕಾಲವೂ ನೀನೇ ಆದ್ದರಿಂದ, ಪ್ರಕೃತಿ ಪುರುಷರಿಗಿಂತ ಉತ್ತಮ. ಇದು 'ಯಸ್ಮಾತ್ ಕ್ಷರಮತೀತೋಽಹಂ' ಎಂದು ಗೀತೆಯಲ್ಲಿ ಸ್ಪಷ್ಟವಿದೆ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ. ಇದು ಅಸಂಗತ.

ಹಿಂದೆ ಹದಿನಾಲ್ಕನೇ ಶ್ಲೋಕದಲ್ಲಿ 'ಕಾಲಸ್ಯ ಕಲಯಿತುಃ ಪ್ರವರ್ತಕಸ್ಯ । ತದೇವ ಕುತಃ। ಪ್ರಕೃತಿಪುರುಷಯೋರಪಿ ಪರಸ್ಯ।' 'ನೀನು ನಿಯಾಮಕ ಏಕೆಂದರೆ ಪ್ರಕೃತಿ ಪುರುಷರಿಗಿಂತಲೂ ಉತ್ತಮನಾಗಿರುವಿ' ಎಂದುಹೇಳಿ, ಈ ಹದಿನೈದನೇ ಶ್ಲೋಕದಲ್ಲಿ 'ಪ್ರಕೃತಿ ಪುರುಷರಿಗಿಂತಲೂ ಉತ್ತಮ ಏಕೆಂದರೆ ನಿಯಾಮಕನಾಗಿರುವಿ' ಎಂದಿದೆ! ಜೊತೆಗೆ, ಸಂವತ್ಸರಾತ್ಮಕ ಕಾಲ ಸ್ವರೂಪನಾಗಿರುವಿ. ಅದರಿಂದಲೂ ಉತ್ತಮನಾಗಿರುವಿ ಎಂದಿದೆ. ಅನ್ಯೋನ್ಯಾಶ್ರಯ ದೋಷ ಸ್ಪಷ್ಟ.

ಮತ್ತು ಕಾಲಸ್ವರೂಪತ್ವ ಉತ್ತಮತ್ವಕ್ಕೆ ಹೇಗೆ ಪ್ರಯೋಜಕ ಎನ್ನುವುದನ್ನು ಹೇಳಿಲ್ಲ, ಕಾಲ ಉತ್ತಮವಾದರೆ ತಾನೆ ಕಾಲಸ್ವರೂಪನಾದ ಪರಮಾತ್ಮ ಉತ್ತಮನೆನಿಸು ತ್ತಾನೆ? ಜಡವಾದ ಕಾಲ ಪ್ರಕೃತಿಪುರುಷರಿಗಿಂತ ಉತ್ತಮವೆನಿಸಲು ಶಕ್ಯವಿಲ್ಲ, ಕಡಿಮೆ ಎನಿಸಬೇಕು. ಏಕೆಂದರೆ ರಮಾಬ್ರಹ್ಮಾದಿ ಪುರುಷರೇ ಕಾಲಕ್ಕೆ ಅಭಿಮಾನಿಗಳು. ಕಾಲಕ್ಕೆ ಆ ಅಭಿಮಾನಿದೇವತೆಗಳಿಂದಲೇ ಶಕ್ತಿ ಸಾಮರ್ಥ್ಯಗಳು.

1. ಪ್ರಕೃತಿ ಪುರುಷಾಭ್ಯಾಂ ಪರತ್ವಮುಪಪಾದಯಂತಃ ಕಾಲತ್ವೇನ ಪುರುಷೋತ್ತಮತ್ವಮಾಹುಃ ಆಸ್ಯೇತಿ । ಅಸ್ಯ ಜಗತ ಉದಯಾದೀನಾಂ ಹೇತುರಸಿ । ಕುತಃ । ಅವ್ಯಕ್ತಂ ಪ್ರಕೃತಿರ್ಜೀವಃ ಪುರುಷೋ ಮಹಾನ್ ಮಹತ್ತತ್ತ್ವಂ ತೇಷಾಂ ಕಾಲಂ ನಿಯಂತಾರಂ ತ್ವಾಮಾಹುಃ । ಕಿಂ ಚಾಯಂ ಸಂವತ್ಸರಾತ್ಮಕೋ ಯಃಕಾಲಃ ಸೋಽಪಿ ತ್ವಮೇವ ಅತಸ್ತ್ವಮುತ್ತಮಃ ಪುರುಷ ಇತಿ। ತಥಾ ಚ ಗೀತಾಸು ಯಸ್ಮಾತ್ಕ್ಷರಮತೀತೋಹಮಿತಿ। -ಶ್ರೀಧರಃ

ಕಾಲ ಸ್ವರೂಪತ್ವದಿಂದ ಪರಮಾತ್ಮನಿಗೆ ಉತ್ತಮತ್ವವನ್ನು ಹೇಳಿ ಅದಕ್ಕೆ ಆಧಾರವಾಗಿ 'ಯಸ್ಮಾತ್ ಕ್ಷರಮತೀತೋಽಹಂ' ಎಂಬ ಗೀತಾವಚನವನ್ನು ಉದಾಹರಿಸುತ್ತಾರೆ. ಆ ವಚನದಲ್ಲಿ ಈಶ್ವರನಾದ ಶ್ರೀಕೃಷ್ಣ ತಾನು ಉತ್ತಮ ಎಂದಿದ್ದಾನೆ. ಸ್ವತಃ ಈಶ್ವರನು ಉತ್ತಮ ಎಂದು ಅಭಿಪ್ರಾಯ. ಭಾಗವತದಲ್ಲಿ 'ಕಾಲ ಉತ್ತಮವಾಗಿದೆ, ಹೀಗಾಗಿ ಕಾಲ ಸ್ವರೂಪನಾದ್ದರಿಂದ ಈಶ್ವರ ಉತ್ತಮ' ಎಂದು ಹೇಳಲು ಸಾಧ್ಯವೆ? ಪರಮಚೇತನನಾದ ಪರಮೇಶ್ವರನನ್ನು ಜಡಕಾಲಸ್ವರೂಪನೆಂದು ಹೇಳಲು ಸಾಧ್ಯವೆ? 'ಕಾಲಸ್ತ್ವಂ' ಎಂದು ಹೇಳಿಲ್ಲ, 'ಉತ್ತಮಪೂರುಷಸ್ತ್ವಂ' ಎಂದು ಮಾತ್ರ ಹೇಳಿದೆ.

ಶ್ರೀಮದಾಚಾರ್ಯರು ಹೇಳುತ್ತಾರೆ ಪ್ರಕೃತಿ ಪುರುಷ ಮಹತ್ತತ್ವಗಳಿಗಿಂತ ಮಾತ್ರವಲ್ಲದೆ ಕಾಲಕ್ಕಿಂತಲೂ ಉತ್ತಮನಾದ್ದರಿಂದ ಶ್ರೀಹರಿ ಪುರುಷೋತ್ತಮ ಎಂದು. ಭಾರತವಚನವನ್ನೂ ಉದಾಹರಿಸುತ್ತಾರೆ. ಗೀತೆಯಲ್ಲಿ ಕ್ಷರ ಅಕ್ಷರಗಳಿಬ್ಬರೂ ಪುರುಷರು. ಜಡವರ್ಗವನ್ನು ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕು. ಅದರಿಂದ ಪ್ರಕೃತಿ ಮಹತ್ತತ್ವಕಾಲಗಳೆಂದು ಜಡಗಳನ್ನೂ ಸೇರಿಸಿ ಸಕಲ ಚೇತನಾಚೇತನ ಪ್ರಪಂಚಕ್ಕಿಂತ ಉತ್ತಮ ಶ್ರೀಹರಿ ಎಂದು ಸ್ಪಷ್ಟವಾಗಿ ಈ ಭಾರತವಚನ ಹೇಳುತ್ತಿದೆ.

'ಕಾಲಮಾತ್ರಃ' ಎಂದು ಭಾಗವತ ಜಡಕಾಲಸ್ವರೂಪತ್ವವನ್ನು ಭಗವಂತನಿಗೆ ಹೇಳುತ್ತಿದೆ. ಅದಕ್ಕೆ ಶ್ರೀಮದಾಚಾರ್ಯರು ನೀಡುವ ವಿವರಣೆ ಏನು ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ 'ಕಾಲಮಾತ್ರ' ಶಬ್ದ ಭಗವಂತನಿಗೆ ಕಾಲಸ್ವರೂಪತ್ವವನ್ನು ಹೇಳುತ್ತಿಲ್ಲ, 'ಕಾಲನಿರ್ಮಾಣ ಮಾಡುವವನು, ಕಾಲವನ್ನು ತಿಳಿಯುವವನು' ಎನ್ನುತ್ತಿದೆ ಎಂದು ಸಮಾಧಾನ. 'ಮಾತ್ರ' ಶಬ್ದದಲ್ಲಿ ಮಾ ಧಾತುವಿಗೆ ನಿರ್ಮಾಣ, ಜ್ಞಾನ ಎಂದು ಎರಡೂ ಅರ್ಥಗಳು ವಿವಕ್ಷಿತವಾಗಿವೆ. 'ಕಾಲಸ್ಯ ಮಾತ್ರಃ' ಎಂದು ವಿಗ್ರಹ. 'ಕಾಲ ಏವ ಕಾಲಮಾತ್ರಃ' ಎಂದಲ್ಲ.

ಅವ್ಯಕ್ತ ಜೀವ ಮಹತುಗಳಿಗೂ ಕೂಡ ಉದಯ ಸ್ಥಿತಿ ಸಂಯಮಕರ್ತನು ನೀನು. ಹೇಗೆ ಎಂದರೆ ಅವುಗಳಿಗೆ ಕಾರಣವಾದ ಸೃಷ್ಟ್ಯಾದಿಕಾಲಗಳನ್ನು ನಿರ್ಮಾಣ ಮಾಡುವಿ, ಅವುಗಳನ್ನು ನಿಮಿತ್ತವಾಗಿ ಮಾಡಿಕೊಂಡು, 'ಸೃಷ್ಟ್ಯಾದಿಕಾಲಗಳು ಬಂದಿವೆ' ಎಂದು ತಿಳಿದು ಸೃಷ್ಟ್ಯಾದಿಕಾರ್ಯಗಳನ್ನು ನಡೆಸುವಿ. ಅದರಿಂದ ಕಾಲವನ್ನು ನಿರ್ಮಾಣ ಮಾಡುವವನೂ ಅದನ್ನು ತಿಳಿಯುವವನೂ ಭಗವಂತನೆ.

'ಕಾಲಪ್ರವಾಹ ನಿತ್ಯ. ಎಲ್ಲವನ್ನೂ ಲಯಮಾಡುವ ಪ್ರಳಯಕಾಲದಲ್ಲಿಯೂ ಆ

ಪ್ರಳಯಕಾಲವಿದೆ ತಾನೆ? ಅದರಿಂದ ಕಾಲನಿರ್ಮಾಣ ಹೇಗೆ ಸಾಧ್ಯ? ಎಂದರೆ ಕಾಲಪ್ರವಾಹ ನಿತ್ಯವಾದರೂ ಅದರಲ್ಲಿ ಸೇರುವ ಎಲ್ಲ ಕಾಲಗಳನ್ನೂ ನಿತ್ಯವೂ ಸೃಷ್ಟಿ ಮಾಡುವುದರಿಂದಲೇ ಅದು ನಿತ್ಯವಾಗಿದೆ. ಹೀಗಾಗಿ ಕಾಲಪ್ರವಾಹಕ್ಕೆ ನಿತ್ಯತ್ವೇನ ನಿರ್ಮಾಪಕನು ಶ್ರೀಹರಿ ಎನ್ನುವುದು ಯುಕ್ತವೆ. ಮತ್ತು ಕಾಲಾಭಿಮಾನಿನಿ ಅವ್ಯಕ್ತನಾಮಕಳಾದ ರಮಾದೇವಿ ನಿತ್ಯಳು. ಅವಳಿಗೆ ಜನನ ಮರಣಗಳಿಲ್ಲ. ಅವಳ ನಿತ್ಯತ್ವವು ಭಗವಂತನ ಇಚ್ಛಾಧೀನ. ಅವಳಿಗೂ ಪ್ರಪಂಚ ಸೃಷ್ಟೀಚ್ಛೆ ಉಂಟು ಮಾಡುವವನು ಭಗವಂತ. ಇದು ಪರಾಧೀನ ವಿಶೇಷಾವಾಪ್ತಿರೂಪವಾದ ಒಂದು ಬಗೆಯ ಸೃಷ್ಟಿಯೆ. ಹೀಗೆ ರಮೆಗೂ ಸೃಷ್ಟಿಕರ್ತನಾದ ಹರಿ ಅವಳ ಅಭಿಮಾನ ಪಾತ್ರವಾದ ಕಾಲಕ್ಕೆ ಸೃಷ್ಟಿಕರ್ತನೆಂದು ಬೇರೆ ಹೇಳಬೇಕಾಗಿಲ್ಲ.

ಶ್ಲೋಕದಲ್ಲಿ 'ಕಾಲೋ ಗಭೀರರಯಃ' 'ಉತ್ತಮಪೂರುಷಸ್ತ್ವಂ' ಎಂದು ಎರಡು ವಾಕ್ಯಗಳನ್ನು ಒಂದುಮಾಡಿ 'ಕಾಲಸ್ತ್ವಂ' ಎನ್ನಬಾರದು. 'ಕಾಲವು ಮಹಾ ವೇಗ ಉಳ್ಳದ್ದು. ಅದಕ್ಕಿಂತಲೂ ಉತ್ತಮಪುರುಷನು ನೀನು, ಏಕೆಂದರೆ ನೀನು ~~ಕಾಲಮಾತ್ರನು, ನಿತ್ಯವಾಗಿ ಕಾಲಪ್ರವಾಹಕ್ಕೆ ನಿರ್ಮಾಪಕನಾಗಿರುವೆ' ಎಂದು~~ ಅನ್ವಯವನ್ನಿಟ್ಟುಕೊಳ್ಳಬೇಕು.

ನಿತ್ಯವಾಗಿ ಕಾಲಪ್ರವಾಹ ನಿರ್ಮಾಣ ಮಾಡುವುದೆಂದರೆ ಸೃಷ್ಟಿ ಕಾಲದಲ್ಲಿ ಮಾತ್ರವಲ್ಲದೆ ಪ್ರಳಯಕಾಲದಲ್ಲಿಯೂ ಕಾಲನಿರ್ಮಾಣ ಮಾಡುತ್ತಾನೆ ಎಂದರ್ಥ. ಪ್ರಳಯಕಾಲದಲ್ಲಿಯೂ ಕಾಲಪ್ರವಾಹ ಮುಂದುವರಿಯುತ್ತಲೇ ಇರುತ್ತದೆ. ಶುದ್ಧ ಪ್ರಕೃತಿಯಿಂದ ಹರಿ ಕಾಲನಿರ್ಮಾಣ ಮಾಡುತ್ತಲೇ ಇರುತ್ತಾನೆ. ಜಗದುಪಾದಾನ ವಾದ ಪ್ರಕೃತಿ ಬೇರೆ, ಕಾಲೋಪಾದಾನ ಪ್ರಕೃತಿಯೇ ಬೇರೆ. ಜಗದುಪಾದಾನವು ಲಯಕಾಲದಲ್ಲಿ ಸಾಮ್ಯಾವಸ್ಥೆಯಲ್ಲಿದ್ದು ಜಗನ್ನಿರ್ಮಾಣ ಮಾಡದಿದ್ದರೂ, ಕಾಲೋಪಾದಾನವಾದ ಪ್ರಕೃತಿಯು ಆಗಲೂ ವಿಷಮಾವಸ್ಥೆಯಲ್ಲಿಯೇ ಇರುತ್ತದೆ. ಅದರಿಂದ ಶ್ರೀಹರಿ ಕಾಲನಿರ್ಮಾಣ ಮಾಡುತ್ತಾನೆ.

ಕಾಲಮಾತ್ರಃ ಕಾಲನಿರ್ಮಾತಾ ಜ್ಞಾತಾ ಚ ಸೃಷ್ಟಿಲಯಾದ್ಯರ್ಥಂ ।

ಕಾಲಮಾತ್ರನೆಂದರೆ ಕಾಲನಿರ್ಮಾಪಕನೂ ಕಾಲಜ್ಞನೂ ಆಗಿದ್ದಾನೆ ಭಗವಂತನೆಂದರ್ಥ. ಅವನು ಕಾಲನಿರ್ಮಾಣ ಮಾಡುವುದೂ ಅದನ್ನು ತಿಳಿಯುವುದೂ ಪ್ರಪಂಚ ಸೃಷ್ಟಿ ಲಯ ಮುಂತಾದವುಗಳಿಗಾಗಿ.

ನಿತ್ಯತ್ವೇನ ಚ ।

ಕಾಲಪ್ರವಾಹವನ್ನು ನಿತ್ಯವಾಗಿ ಪ್ರಳಯಕಾಲದಲ್ಲಿಯೂ ಹರಿ ನಿರ್ಮಿಸುತ್ತಾನೆ.

ಅವ್ಯಕ್ತಸ್ಯಾಪಿ ಸ್ರಷ್ಟೃತ್ವಾತ್ ।

ನಿತ್ಯವಾದ ಚೇತನ ಪ್ರಕೃತಿ ಅಚೇತನ ಪ್ರಕೃತಿಗಳಿಗೂ ಹರಿ ಸೃಷ್ಟಿಕರ್ತನೆಂದಮೇಲೆ ನಿತ್ಯವಾದ ಕಾಲಪ್ರವಾಹಕ್ಕೆ ಸೃಷ್ಟಿಕರ್ತನೆನ್ನುವುದು ಅಶಕ್ಯವೇನಲ್ಲ.

ಕಾಲ ಏವಂಭೂತಃ । ತಸ್ಮಾದಪ್ಯುತ್ತಮಸ್ತ್ವಂ ।

ನೀನು ನಿರ್ಮಿಸುವ ಕಾಲ ಬಲುವೇಗದಿಂದ ಉರುಳುತ್ತ ಸರ್ವಲಯಕಾರಿಯಾಗಿದೆ, ಎಂದಮೇಲೆ, ಅದಕ್ಕಿಂತಲೂ ಉತ್ತಮನಾದ ಪುರುಷನು ನೀನು ಎನ್ನುವುದು ಯುಕ್ತವೆ.

ಕಾಲಾಜ್ಜೀವಾತ್ ತಥಾಽವ್ಯಕ್ತಾನ್ಮಹತಶ್ಚೋತ್ತಮೋ ಯತಃ ।
ಉತ್ತಮಃ ಪುರುಷಸ್ತಸ್ಮಾದ್ ಭಗವಾನ್ ವಿಷ್ಣುರುಚ್ಯತೇ ॥ ಇತಿ ಚ ॥

ಕಾಲಕ್ಕಿಂತ, ಜೀವಾಭಿಮಾನಿ ಮುಖ್ಯಪ್ರಾಣನಿಗಿಂತ, ಅವ್ಯಕ್ತಾಭಿಮಾನಿ ರಮೆಗಿಂತ, ಮಹತ್ತತ್ತ್ವಾಭಿಮಾನಿ ಚತುರ್ಮುಖನಿಗಿಂತ ಉತ್ತಮನಾದ್ದರಿಂದ ಭಗವಾನ್ ವಿಷ್ಣು ಉತ್ತಮ ಪುರುಷನೆನಿಸುತ್ತಾನೆ ಎಂದೂ ಭಾರತದಲ್ಲಿ ಹೇಳಿದೆ.

❖❖❖

ಶ್ರೀಕೃಷ್ಣನ ಪರಂಧಾಮ ಪ್ರವೇಶವನ್ನು ಬಯಸಿ ಬ್ರಹ್ಮಾದಿ ದೇವತೆಗಳು ದ್ವಾರಕೆಗೆ ಬಂದು ಸ್ತೋತ್ರ ಮಾಡುತ್ತಾರೆ—

ತ್ವತ್ತಃ ಪ್ರಧಾನಮಧಿಕೃತ್ಯ ಪುಮಾನ್ ಸ್ವವೀರ್ಯಂ
ಧತ್ತೇ ಮಹಾಂತಮಿವ ಗರ್ಭಮಮೋಘವೀರ್ಯಃ ।
ಸೋಽಯಂ ತ್ವಯಾಽನುಗತ ಆತ್ಮನ ಆಂಡಕೋಶಂ
ಹೈಮಂ ಸಸರ್ಜ ಬಹಿರಾವರಣೈರುಪೇತಮ್ ॥ ೧೬ ॥

ನೀನು ಮಾಡುವ ಸೃಷ್ಟಿಯನ್ನು ನೀನು ಪ್ರಕೃತಿಯಲ್ಲಿಯೇ ಮಾಡುವೆ. ಮೊದಲಿಗೆ ನಿನ್ನಿಂದ ನೀನೇ ಪುರುಷರೂಪದಿಂದ ಅವತರಿಸಿ ಪ್ರಕೃತಿಯ ಅಭಿಮಾನಿನಿಯಾದ ರಮೆಯಲ್ಲಿ ಪುರುಷನಾಮಕ ಚತುರ್ಮುಖನನ್ನೂ ಪ್ರಕೃತಿನಾಮಕ ಸರಸ್ವತಿಯನ್ನೂ ಸೃಜಿಸುವೆ, ಅಮೋಘವೀರ್ಯನು ನೀನು. ಬಳಿಕ ಆ ಚತುರ್ಮುಖನೂ ಕೂಡ ಅಮೋಘವೀರ್ಯನಾಗಿದ್ದು ಪ್ರಕೃತಿನಾಮಕ ಸರಸ್ವತಿಯಲ್ಲಿ ಮಹಾನ್‌ನಾಮಕವಾದ ತನ್ನ ಇನ್ನೊಂದು ರೂಪದೊಂದಿಗೆ ಶ್ರದ್ಧಾನಾಮಕ ಸರಸ್ವತೀರೂಪವನ್ನು ಸೃಜಿಸುತ್ತಾನೆ. ಆ

ಮಹಾನ್ನಾಮಕ ಚತುರ್ಮುಖನೂ ಅಮೋಘವೀರ್ಯನಾಗಿದ್ದು ಶ್ರದ್ಧಾನಾಮಕ ಸರಸ್ವತಿಯಲ್ಲಿ ಅಹಂಕಾರಾಭಿಮಾನಿ ಅಹಂಕಾರನಾಮಕ ಶೇಷದೇವನನ್ನು ಹುಟ್ಟಿಸುತ್ತಾನೆ. ಬಳಿಕ ಪುರುಷನಾಮಕ ಚತುರ್ಮುಖ ತನ್ನಲ್ಲಿ ಆವಿಷ್ಟನಾದ ನಿನ್ನ ಅನುಗ್ರಹದಿಂದ ಬಾಹ್ಯನವಾವರಣಸಹಿತವಾದ ಬ್ರಹ್ಮಾಂಡವನ್ನು ಸೃಜಿಸುತ್ತಾನೆ.

ಇಲ್ಲಿ ಶ್ಲೋಕದ ಮೊದಲನೇ ಸಾಲು ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಹೀಗಿದೆ—

'ತ್ವತ್ತಃ ಪುಮಾನ್ ಸಮಧಿಗಮ್ಯ ಯಯಾऽಸ್ಯವೀರ್ಯಂ' ಎಂದು.

[1]'ಪುರುಷನು ನಿನ್ನಿಂದಲೇ ಶಕ್ತಿಯನ್ನು ಪಡೆದು ಅಮೋಘವೀರ್ಯನಾಗಿ, ಮಾಯೆಯಲ್ಲಿ ಜಗತ್ತಿನ ಗರ್ಭದಂತಿರುವ ಮಹತ್ತತ್ತ್ವವನ್ನು ಆಧಾನಮಾಡಿದ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ. ಅನಿರುದ್ಧನೆಂಬ ಪುರುಷನು ಸೃಷ್ಟಿಕಾರ್ಯಕ್ಕೆ ನಿನ್ನಿಂದ ನಿಯುಕ್ತನಾಗಿ, [2]ಪುರುಷನು ಸ್ತ್ರೀಯಲ್ಲಿ ಗರ್ಭಾಧಾನ ಮಾಡುವಂತೆ ಪ್ರಕೃತಿಯಲ್ಲಿ ~~ಮಹತ್ತತ್ತ್ವವನ್ನು ಆಧಾನ ಮಾಡಿದನೆಂದು ವೀರರಾಘವ ವ್ಯಾಖ್ಯಾನ ಹೇಳಿದೆ.~~

'ಧತ್ತೇ ಮಹಾಂತಮೀವ ಗರ್ಭಂ ಅಮೋಘವೀರ್ಯಃ' ಎಂದು ಭಾಗವತವು ಪುರುಷನು ಪ್ರಕೃತಿಯಲ್ಲಿ ಮಹತ್ತತ್ತ್ವವೆಂಬ ಗರ್ಭಾಧಾನ ಮಾಡುವುದನ್ನು ವರ್ಣಿಸುತ್ತದೆ. ಬೇರೆ ವ್ಯಾಖ್ಯಾನಕಾರರ ಪ್ರಕಾರ ಇವ ಶಬ್ದದಿಂದ ಪುರುಷನು ಸ್ತ್ರೀಯಲ್ಲಿ ಮಾಡುವ ಗರ್ಭಾಧಾನದಂತೆ ಎಂದು ಉಪಮಾಲಂಕಾರಗರ್ಭಿತವಾಗಿ ಸೃಷ್ಟಿಕಾರ್ಯವನ್ನು ಹೇಳುವುದರ ಔಚಿತ್ಯವೇನು? ಇದನ್ನು ಬೇರೆ ವ್ಯಾಖ್ಯಾನಕಾರರು ವಿಚಾರ ಮಾಡಿಲ್ಲ. ಉಪಮಾದಿ ಅಲಂಕಾರ ಲೌಕಿಕ ಕಾವ್ಯದಲ್ಲಿ ಉಚಿತ. ಭಾಗವತಶಾಸ್ತ್ರದಲ್ಲಿ ಅದು ಉಚಿತವಲ್ಲ. ಜಗದ್ವೃಕ್ಷವರ್ಣನೆ, ದ್ವಾಸುಪರ್ಣಾ

---

1. ತ್ವತ್ತಃ ಪುರುಷೋ ವೀರ್ಯಂ ಶಕ್ತಿಂ ಸಮಧಿಗಮ್ಯ ಪ್ರಾಪ್ಯ ಯಯಾ ಮಾಯಯಾ ಸಹ ಮಹಾಂತಂ ಧತ್ತೇ । ಕಮಿವ । ಅಸ್ಯ ವಿಶ್ವಸ್ಯ ಗರ್ಭಮಿವ । ಸೋऽಯಂ ಮಹಾನ್ ತಸ್ಯೈವ ಮಾಯಯಾऽನುಗತಃ ಸನ್ನಾತ್ಮನಃ ಸಕಾಶಾದಾಂಡಕೋಶಂ ಸಸರ್ಜ । -ಶ್ರೀಧರಃ

   ಯಯಾ ಮಾಯಯಾ ಸಹ ಯಸ್ಯಾಂ ಮಾಯಾಯಾಮಿತ್ಯರ್ಥಃ । ಅನುಗತಃ ವ್ಯಾಪ್ತಃ ಸನ್ ಆತ್ಮನಃ ಸ್ವಸ್ಮಾತ್ ಸಕಾಶಾತ್ । -ರಾಧಾರಮಣದಾಸಃ

2. ಪುಮಾನನಿರುದ್ಧಾಖ್ಯಃ ಸ ಜಗದ್ವ್ಯಾಪಾರೇऽಧಿಕೃತಃ ಯಯಾ ಪ್ರಕೃತ್ಯಾ ಮಹಾಂತಂ ಮಹತ್ತತ್ತ್ವಾಖ್ಯಂ ವೀರ್ಯಂ ಧತ್ತೇ ಆಧತ್ತೇ ಕಮಿವ ಗರ್ಭಮಿವ । ಪುರುಷೋ ಯೋಷಿತಿ ಗರ್ಭಮಿವ । ಪ್ರಕೃತೌ ಮಹತತ್ತ್ವಮುತ್ಪಾದಯಾಮಾಸೇತ್ಯರ್ಥಃ । ಅತ್ರ ಸೋऽಯಮಿತ್ಯನೇನ ಭಗವದಾತ್ಮಕೋ ಮಹಾನ್ ವಿವಕ್ಷಿತಃ । -ವೀರರಾಘವಃ

ಇತ್ಯಾದಿ ಸ್ಥಳಗಳಲ್ಲಿ ಅಗತಿಕಾಗತಿ ಎಂದು ಕೆಲವುಕಡೆ ಅದನ್ನು ಸಹನೆ ಮಾಡಿಕೊಳ್ಳ ಬೇಕಾಗುತ್ತದೆ. ಪ್ರಕೃತದಲ್ಲಿ ಹಾಗೆ ಇಲ್ಲ, ವ್ಯರ್ಥ. ಅದರಿಂದ ಉಪಮಾಲಂಕಾರ ವೆಂದು ಹೇಳುವ ಬೇರೆ ವ್ಯಾಖ್ಯಾನಕಾರರು ಅಪವ್ಯಾಖ್ಯಾನ ಮಾಡಿದಂತಾಯಿತು.

ವಸ್ತುತಃ ಇದು ಉಪಮೇಯೇ ಅಲ್ಲ. ಪುರುಷನಾಮಕನಾದ ಬ್ರಹ್ಮನು ಗಾಯತ್ರೀದೇವಿಯಲ್ಲಿ ತಾನೇ ತನ್ನನ್ನು ಗರ್ಭವಾಗಿ ಇಡುತ್ತಾನೆ. ಆದರೆ 'ಮಹಾಂತಮಿವ' 'ಗರ್ಭಮಿವ' 'ಧತ್ತೇ ಇವ' ಎಂದು ಇವ ಶಬ್ದವು ಮಹತ್ತ್ವ ಗರ್ಭತ್ವ ಆಧಾನಗಳು ಮೂರೂ ಮುಖ್ಯವಾದವುಗಳಲ್ಲ, ಗೌಣವಾಗಿವೆ ಎಂದು ಹೇಳುತ್ತಿದೆ. ಮಹಾನ್ ಎಂದರೆ ಉತ್ತಮ, ಸರ್ವೋತ್ತಮ. ಮಹತ್ತತ್ತ್ವಾಭಿಮಾನಿ ಯಾದ ಬ್ರಹ್ಮನನ್ನು 'ಮಹಾನ್' ಎನ್ನುವುದು ಇತರ ಜೀವರಿಗಿಂತ ಬ್ರಹ್ಮ ಉತ್ತಮ ಎಂಬ ಅಭಿಪ್ರಾಯದಿಂದ, ಮಹತ್ತತ್ತ್ವವನ್ನು ಮಹತ್ತೆನ್ನುವುದೂ ಉಳಿದ ಅಹಂಕಾರಾದಿ ತತ್ತ್ವಗಳಿಂದ ಉತ್ತಮ ಎಂಬ ಅಭಿಪ್ರಾಯದಿಂದ ಗೌಣಪ್ರಯೋಗ. ಪುರುಷನಾಮಕನಾದ ಬ್ರಹ್ಮನು ಗಾಯತ್ರೀ ದೇವಿಯಲ್ಲಿ ತಾನೇ ತನ್ನನ್ನು ಗರ್ಭವಾಗಿ ~~ಇರಿಸಿ ಹುಟ್ಟುವುದು ಗೌಣಗರ್ಭ. ಗರ್ಭದಿಂದ ತನ್ನಿಂದ ತಾನೇ ಹುಟ್ಟುವುದು~~ ಮುಖ್ಯವಾದ ಹುಟ್ಟು ಎನಿಸಲಾರದು. ಗೌಣವಾದುದರಿಂದ 'ಗರ್ಭಮಿವ' ಎಂದು ಇವ ಶಬ್ದವಿದೆ. ಬ್ರಹ್ಮನು ಗಾಯತ್ರೀದೇವಿಯಲ್ಲಿ ವಾಸ್ತವದಲ್ಲಿ ಗರ್ಭಾಧಾನ ಮಾಡುತ್ತಾನೆ. ಅದು ಬರಿ ಉಪಮೆಯಲ್ಲ. ಆದರೂ ಆ ಕ್ರಿಯೆಯಲ್ಲಿ ಬ್ರಹ್ಮನಿಗೆ ಪೂರ್ಣಸ್ವಾತಂತ್ರ್ಯವಿಲ್ಲ. ಪೂರ್ಣಸ್ವಾತಂತ್ರ್ಯ ಹರಿಗೊಬ್ಬನಿಗೇ ಇರುತ್ತದೆ. 'ತ್ವತ್ತಃ' ನಿನ್ನ ಪ್ರೇರಣೆಯಿಂದ ಎಂದು ಶ್ಲೋಕದಲ್ಲಿ ಹೇಳುವಂತೆ ಹರಿಪ್ರೇರಣೆಯಿಂದ ಅವನಿಗ ಧೀನನಾಗಿ ಮಾಡುವ ಈ ಗರ್ಭಾಧಾನ ಕ್ರಿಯೆ ಸ್ವತಂತ್ರವಾದುದಲ್ಲ ಎಂದು ಇವ ಶಬ್ದವು ಹೇಳುತ್ತದೆ 'ಧತ್ತೇ ಇವ' ಎಂದು.

ನಾರಾಯಣಾಖ್ಯಃ ಪರಮಃ ಶೇತೇ ಲಕ್ಷ್ಮ್ಯಾಽನ್ವಿತೋ ಲಯೇ ।
ಸ ಏವ ಪುರುಷಾಖ್ಯಂ ತು ದ್ವಿತೀಯಂ ರೂಪಮಾತ್ಮನಃ ।
ಕೃತ್ವಾ ರಮಾಯಾಂ ಪುರುಷನಾಮಾನಂ ತು ಚತುರ್ಮುಖಂ ।
ಪ್ರಧಾನಾಖ್ಯಾಂ ಚ ಗಾಯತ್ರೀಂ ಸಸರ್ಜ ಪುರುಷಾತ್ಮಕಃ ।
ಚತುರ್ಮುಖಃ ಸ ಪುರುಷೋ ಮಹತ್ತತ್ತ್ವಾಭಿಧಂ ಪುನಃ ।
ಪ್ರಧಾನನಾಮ್ನ್ಯಾಂ ಗಾಯತ್ರ್ಯಾಂ ಸಸರ್ಜಾತ್ಮಾನಮೇವ ತು ।
ಶ್ರದ್ಧಾಭಿಧಾಂ ಚ ಗಾಯತ್ರೀಂ ತಾಭ್ಯಾಂ ಶೇಷೋಽನ್ವಜಾಯತ ॥
ಇತ್ಯಾದಿ ಸೃಷ್ಟಿವಿಕ್ಷೇಪೇ ॥

ನಾರಾಯಣ ನಾಮಕನಾದ ಪರಮಪುರುಷನು ಲಕ್ಷ್ಮೀ ಸಮೇತನಾಗಿ ಪ್ರಳಯ ಕಾಲದಲ್ಲಿ ಮಲಗುತ್ತಾನೆ. ಬಳಿಕ ಅವನೇ ಪುರುಷನಾಮಕ ವಾಸುದೇವನಾಗಿ ಎರಡನೇ ರೂಪವನ್ನು ಧರಿಸುತ್ತಾನೆ. ಮಾಯಾನಾಮಕ ರಮೆಯಲ್ಲಿ ಪುರುಷನಾಮಕ ಬ್ರಹ್ಮನನ್ನು ಹುಟ್ಟಿಸುತ್ತಾನೆ. ಪುರುಷನಾಮಕ ವಾಸುದೇವ ಸ್ವರೂಪನೇ ಆದ ಪ್ರದ್ಯುಮ್ನನು ಕೃತಿನಾಮಕ ರಮೆಯಲ್ಲಿ ಪ್ರಧಾನನಾಮಕ ಗಾಯತ್ರಿಯನ್ನು ಹುಟ್ಟಿಸುತ್ತಾನೆ. ಪುರುಷನಾಮಕ ಬ್ರಹ್ಮ ಪುನಃ ಮಹತ್ತತ್ತ್ವನಾಮಕನಾದ ತನ್ನನ್ನೇ ಪ್ರಧಾನನಾಮಕಳಾದ ಗಾಯತ್ರಿಯಲ್ಲಿ ಹುಟ್ಟಿಸಿಕೊಳ್ಳುತ್ತಾನೆ, ಶ್ರದ್ಧಾನಾಮಕ ಗಾಯತ್ರಿಯನ್ನೂ ಹುಟ್ಟಿಸುತ್ತಾನೆ. ಈ ಮಹತ್ತತ್ತ್ವನಾಮಕ ಬ್ರಹ್ಮ ಮತ್ತು ಶ್ರದ್ಧಾನಾಮಕ ಗಾಯತ್ರಿಯರಿಂದ ಶೇಷ ಜನಿಸಿದ ಎಂದು ಸೃಷ್ಟಿವಿಕ್ಷೇಪ ಎಂಬ ಗ್ರಂಥದಲ್ಲಿ ಹೇಳಿದೆ.

'ಪುರುಷನಾಮಕ ಬ್ರಹ್ಮ ಪುನಃ ಮಹತ್ತತ್ತ್ವನಾಮಕನಾದ ತನ್ನನ್ನೂ ಶ್ರದ್ಧಾನಾಮಕ ಗಾಯತ್ರಿಯನ್ನೂ ಪ್ರಧಾನನಾಮಕ ಗಾಯತ್ರಿಯಲ್ಲಿ ಹುಟ್ಟಿಸುತ್ತಾನೆ' ಎನ್ನುವುದು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಹೇಳದಿದ್ದ, ಭಾಗವತ ತಾತ್ಪರ್ಯದಲ್ಲಿ ಮಾತ್ರ ಹೇಳಿದ ಹೊಸ ಅಂಶವಾಗಿದೆ.

❖❖❖

ಶ್ರೀಕೃಷ್ಣನ ಪರಂಧಾಮ ಪ್ರವೇಶವನ್ನು ಬಯಸಿ ಬ್ರಹ್ಮಾದಿ ದೇವತೆಗಳು ದ್ವಾರಕೆಗೆ ಬಂದು ಸ್ತೋತ್ರ ಮಾಡುತ್ತಾರೆ.

ತತ್ತಸ್ಥುಷಶ್ಚ ಜಗತಶ್ಚ ಭವಾನಧೀಶೋ
ಯನ್ಮಾಯಯೋತ್ಥಗುಣವಿಕ್ರಿಯಯೋಪನೀತಾನ್ ।
ಅರ್ಥಾನ್ ಜುಷನ್ನಪಿ ಹೃಷೀಕಪತೇ ನ ಲಿಪ್ತೋ
ಯೇಽನ್ಯೇ ಸ್ವತಃ ಪರಿಹೃತಾನಪಿ ಬಿಭ್ಯತಿ ಸ್ಮ ॥ ೧೭ ॥

ನಿನ್ನ ಆದೇಶಬಲದಿಂದಲೆ ಬ್ರಹ್ಮಾದಿ ದೇವತೆಗಳು ಬ್ರಹ್ಮಾಂಡಸೃಷ್ಟಿಗೆ ಶಕ್ತರಾಗುವುದರಿಂದ ನೀನೇ ಎಲ್ಲ ಸ್ಥಾವರಜಂಗಮಗಳಿಗೂ ಒಡೆಯ. ನಿನ್ನ ಇಚ್ಛಾಶಕ್ತಿಯಿಂದ ತ್ರಿಗುಣಗಳಿಂದಾಗುವ ವಿಷಯಪದಾರ್ಥಗಳನ್ನು ಇಂದ್ರಿಯಗಳಲ್ಲಿದ್ದು ನೀನೇ ಸೇವಿಸುವೆ. ಆದರಿಂದ ನೀನು ಸರ್ವೇಶ್ವರ. ಇಂದ್ರಿಯ ಪ್ರೇರಕನಾದ ಶ್ರೀಹರಿಯೆ, ನೀನು ವಿಷಯಭೋಗವನ್ನು ಉಣ್ಣುವುದರಿಂದ ನಿನಗೆ ಲೇಪವಿಲ್ಲ. ನಿನ್ನ ಅನುಗ್ರಹ ಪಡೆದ ಯೋಗಿಗಳೂ ಕೂಡ ಲೇಪವಿಲ್ಲದಂತೆ ಮಾಡಿಕೊಳ್ಳುತ್ತಾರೆ. ಆದರೂ ಅವರು ಅದಕ್ಕೆ ಭಯಪಡುತ್ತಾರೆ.

[1]ಬೇರೆ ಜೀವರಾಗಲಿ ಯೋಗಿಗಳಾಗಲಿ ಸ್ವತಃ ತಾವೇ ದೂರಮಾಡಿಕೊಂಡಿರುವ ಅಥವಾ ಸ್ವತಃ ದೂರವಾಗಿರುವ ವಿಷಯಭೋಗಕ್ಕೆ ಭಯಪಡುತ್ತಾರೆ ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ. 'ಯೇಽನ್ಯೇ ಸ್ವತಃ ಪರಿಹೃತಾದಪಿ ಬಿಭ್ಯತಿಸ್ಮ' ಎಂದು ಅವರ ಪಾಠ. ಈ ಪಾಠದಲ್ಲಿ 'ಪರಿಹೃತಾದ್' ಎನ್ನುವುದಕ್ಕೆ ವಿಷಯ ಜೋಷಣಾತ್ ಎಂದು ವಿಶೇಷ್ಯವನ್ನು ಸೇರಿಸಿಕೊಳ್ಳಬೇಕಾಗುತ್ತದೆ. 'ಪರಿಹೃತಾನಪಿ' ಎಂಬ ಪಾಠದಲ್ಲಿ 'ಅರ್ಥಾನ್' ಎಂದು ವಿಶೇಷ್ಯವಿದೆ. 'ಬಿಭ್ಯತಿ' ಎನ್ನುವುದರ ಅನ್ವಯಕ್ಕಾಗಿ 'ಪರಿಹೃತಾದ್' ಎಂದು ಪಂಚಮ್ಯಂತವಾಗಿ ಮಾಡಿಕೊಂಡಂತಿದೆ. ಆದರೆ ಅದು ಆವಶ್ಯಕವಲ್ಲ. ದ್ವಿತೀಯಾಂತವಾಗಿದ್ದರೂ 'ಪ್ರತಿ' ಎಂದು ಸೇರಿಸಿದರೆ ಅದು ಸರಿಯಾಗುತ್ತದೆ.

'ಅನ್ಯೇ' ಎಂದರೆ 'ಜೀವರಾಗಲಿ ಯೋಗಿಗಳಾಗಲಿ' ಎನ್ನುವುದು ಸರಿಯಲ್ಲ. ಯೋಗಿಗಳೆಂದೇ ಹೇಳಬೇಕು. ಭೋಗಿಗಳು ವಿಷಯಭೋಗಕ್ಕೆ ಭಯಪಡುವುದಿಲ್ಲ ಮತ್ತು ಸ್ವತಃ ವಿಷಯಭೋಗಗಳನ್ನು ದೂರಮಾಡಿಕೊಳ್ಳುವವರು ಭೋಗಿಗಳಲ್ಲ. ಅದರಿಂದ 'ಅನ್ಯೇ' ಎಂಬುದರಿಂದ ಯೋಗಿಗಳು ಭೋಗಿಗಳೆನ್ನದೆ ಎಲ್ಲ ವರ್ಗದ ಜೀವರೆಂದಿಟ್ಟುಕೊಳ್ಳುವುದು ಉಚಿತವಲ್ಲ.

'ಸ್ವತಃ' ಎಂದರೆ ತಾವೇ ದೂರಮಾಡಿಕೊಂಡಿರುವ ವಿಷಯ ಪದಾರ್ಥಗಳೆನ್ನುವುದಕ್ಕಿಂತ, ಸ್ವತಂತ್ರನಾದ ಪರಮಾತ್ಮನ ಅನುಗ್ರಹದಿಂದ ದೂರಮಾಡಿಕೊಂಡಿರುವ ವಿಷಯಪದಾರ್ಥಗಳೆಂದಿಟ್ಟುಕೊಳ್ಳುವುದು ಉತ್ತಮ. ಪರಮಾತ್ಮನ ಅನುಗ್ರಹವಿಲ್ಲದಿದ್ದರೆ ಕಾಡಿಗೆ ಹೋದರೂ ವಿಷಯಾಸೆ ಬಿಡದು. ಮತ್ತೆ ಸ್ವಪ್ರಯತ್ನದಿಂದಲೇ ವಿಷಯಪದಾರ್ಥಗಳನ್ನು ದೂರ ಮಾಡಿಕೊಂಡಿದ್ದರೆ ಅವುಗಳಿಗೇಕೆ ಭಯಪಡಬೇಕು? ಅವು ಬಂದರೆ ತಿರುಗಿ ದೂರ ಮಾಡಿಕೊಂಡೇನೆಂದು ನಿಶ್ಚಿಂತೆಯಿಂದಿರಬಹುದು ತಾನೆ? ಅದರಿಂದ ಸ್ವತಃ ಶಬ್ದಕ್ಕೆ ಬೇರೆ ವ್ಯಾಖ್ಯಾನ ಕಾರರು ನೀಡುವ ವಿವರಣೆಗಿಂತ ನಾವು ನೀಡುವ ವಿವರಣೆ ಹೆಚ್ಚು ಸುಂದರ.

ಯೇಽನ್ಯೇ ಜ್ಞಾನಿನಃ ಸ್ವತಃ ಪರಿಹೃತಾನ್ ವಿಷಯಾನ್ ಬಿಭ್ಯತಿ ।

ಬೇರೆ ಜ್ಞಾನಿಗಳು ಸ್ವತಂತ್ರನಾದ ಹರಿಯ ಅನುಗ್ರಹದಿಂದ ವಿಷಯ ಪದಾರ್ಥಗಳನ್ನು ದೂರಮಾಡಿಕೊಂಡಿದ್ದರೂ ಹರಿಯ ಅನುಗ್ರಹ ತಪ್ಪಿದರೆ ಅವು ತಿರುಗಿ ಪೀಡಿಸಬಹುದೆಂದು ಭಯಪಡುತ್ತಾರೆ.

❖❖❖

1. ಯೇ ತ್ವನ್ಯೇ ಜೀವಾ ಯೋಗಿನೋ ವಾ ಸ್ವತಃ ಪರಿಹೃತಾದಪ್ಯವಿದ್ಯಮಾನಾತ್ ತ್ಯಕ್ತಾದ್ವಾ ವಿಷಯ ಜೋಷಣಾದ್ ಬಿಭ್ಯತಿ । -ಶ್ರೀಧರಃ

ಶ್ರೀಕೃಷ್ಣನ ಪರಂಧಾಮ ಪ್ರವೇಶವನ್ನು ಬಯಸಿ ಬ್ರಹ್ಮಾದಿದೇವತೆಗಳು ದ್ವಾರಕೆಗೆ ಬಂದು ಸ್ತೋತ್ರಮಾಡುತ್ತಾರೆ—

ಬಿಭ್ರತ್ ತವಾಮೃತಕಥೋದವಹಾಸ್ತ್ರಿಲೋಕ್ಯಾಃ
ಪಾದವನೇಜಸರಿತಃ ಶಮಲಾನಿ ಹಂತುಮ್ ।
ಆನುಶ್ರವಂ ಶ್ರುತಿಭಿರಂಘ್ರಿಜಮಂಗಸಂಗೈ-
ಸ್ತೀರ್ಥದ್ವಯಂ ಶುಚಿಷದಸ್ತದುಪಸ್ಪೃಶಂತಿ ॥ ೧೯ ॥

ಮೂಲೋಕದಲ್ಲಿ ಅನ್ಯರಿಂದಾಗದ ಎಲ್ಲ ಕಾರ್ಯಭಾರವನ್ನು ಹೊರುವವನು ನೀನು. ಅಂಥ ನಿನ್ನ ಕಥಾಮೃತ ಪ್ರವಾಹದಿಂದ ತುಂಬಿ ಹರಿವ ಶಾಸ್ತ್ರನದಿಯೂ ನಿನ್ನ ಪಾದ ತೊಳೆದ ಗಂಗಾನದಿಯೂ ಎರಡೂ ಪವಿತ್ರತೀರ್ಥಗಳು. ವೇದ ಭಾರತಾದಿ ಗ್ರಂಥಗಳು ಅವುಗಳನ್ನು ಹೊಗಳುತ್ತಿವೆ. ವಾಯ್ವಂತರ್ಗತನಾದ ನಿನ್ನ ಪಾದದಿಂದ ಹೊರಟಿರುವ ಈ ಎರಡು ನದಿಗಳಲ್ಲಿ ಒಂದನ್ನು ಶ್ರವಣದಿಂದಲೂ ಇನ್ನೊಂದನ್ನು ಅವಗಾಹನ ದಿಂದಲೂ ತಮ್ಮ ಪಾಪಗಳನ್ನು ನೀಗಿಕೊಳ್ಳಲು ಮೂಲೋಕದ ಜನರು ಸೇವಿಸುತ್ತಾರೆ.

‘ವಿಭ್ವ್ಯಸ್ತವಾಮೃತ’ ಎಂದು ಬೇರೆ ವ್ಯಾಖ್ಯಾನಕಾರರ ಪಾಠ. ನಿನ್ನ ಕಥಾಮೃತ ಪ್ರವಾಹಗಳೂ ಪಾದೋದಕವಾದ ಗಂಗಾ ಪ್ರವಾಹಗಳೂ ‘ವಿಭ್ವ್ಯಃ’ ಸಮರ್ಥವಾಗಿವೆ, ಮೂಲೋಕವನ್ನು ಪಾವನಗೊಳಿಸಲು ಶಕ್ತವಾಗಿವೆ. ‘ಶಮಲಾನಿ ಹಂತುಂ ವಿಭ್ವ್ಯಃ’ ಎಂದು ಅನ್ವಯ.

ಆದರೆ ‘ಶಮಲಾನಿ ಹಂತುಂ ಉಪಸ್ಪೃಶಂತಿ’ ಎಂದು ಅನ್ವಯಿಸಿದರೆ ಪಾಪ ಪರಿಹರಿಸಿಕೊಳ್ಳಲೆಂದು ಕಥಾಪ್ರವಾಹ ಗಂಗಾಪ್ರವಾಹಗಳನ್ನು ಸೇವಿಸುತ್ತಾರೆ ಎನ್ನುವುದರಿಂದಲೇ ಅವು ಪಾಪ ಪರಿಹಾರ ಸಮರ್ಥಗಳೆಂದು ಹೇಳಿದಂತಾಗುವುದ ರಿಂದ ಬೇರೆ ‘ವಿಭ್ವ್ಯಃ’ ಎಂಬ ಶಬ್ದ ಬೇಕಾಗಿಲ್ಲ.

‘ಬಿಭ್ರತ್ತವಾಮೃತ’ ಎಂಬ ಪಾಠದಲ್ಲಿ ‘ತ್ರಿಲೋಕ್ಯಾ ಬಿಭ್ರತ್’ ಮೂಲೋಕದಲ್ಲಿ ಅಸಾಧ್ಯವಾದ ಎಲ್ಲ ಭಾರವನ್ನೂ ಧರಿಸುವವನು ನೀನು ಎಂದಾಗ ಅಂಥ ನಿನ್ನ ಕಥಾಮೃತಪಾದೋದಕಗಳು ಪಾವನವಾಗಿವೆ ಎಂದು ಸಮರ್ಥಿಸಿದಂತಾಗುವುದು.

‘ಶುಚಿಷದಃ’ ಎಂಬುದನ್ನೂ ‘ಹಂಸಃ ಶುಚಿಷದ್ ವಸುರಂತರಿಕ್ಷಸದ್’ ಎಂಬ ಕಾಠಕಮಂತ್ರದಲ್ಲಿ ಹೇಳಿದಂತೆ ವಾಯ್ವಂತರ್ಗತನೆಂಬ ಅರ್ಥದಲ್ಲಿ ‘ಶುಚಿಷದಸ್ತವ’ ಎಂದು ವಿಶೇಷವಾಗಿ ಅನ್ವಯಿಸಿದರೆ ಪಾದೋದಕದ ಪಾವನತ್ವವನ್ನು ಇನ್ನೂ

ವಿಶೇಷವಾಗಿ ಸಮರ್ಥಿಸಿದಂತಾಗುವುದು. 'ಶುಚಿಷದ ಉಪಸ್ಪೃಶಂತಿ' ಸ್ವಾಶ್ರಮಧರ್ಮದಲ್ಲಿರುವವರು ಪಾದೋದಕವನ್ನು ಸೇವಿಸುವರು ಎಂದು ಅನ್ವಯಮಾಡಿ ಆ ಶಬ್ದದ ಸ್ವಾರಸ್ಯವನ್ನೂ ಕೆಡಿಸಿದ್ದಾರೆ ಬೇರೆ ವ್ಯಾಖ್ಯಾನಕಾರರು.

ಸರ್ವಂ ಬಿಭ್ರತಸ್ತವ ।

'ಮೂಲೋಕದಲ್ಲಿ ಅನ್ಯರಿಂದಾಗದ ಎಲ್ಲ ಕಾರ್ಯಭಾರವನ್ನು ಸಮರ್ಥವಾಗಿ ನಿರ್ವಹಿಸುವ ನಿನ್ನ ಅಥವಾ ಎಲ್ಲವನ್ನೂ ಹೊರುವ ಪೋಷಿಸುವ' ನಿನ್ನ ಪಾದೋದಕವನ್ನು ಮೂಲೋಕದ ಎಲ್ಲ ಜನರು ಸೇವಿಸುತ್ತಾರೆ.

'ಬಿಭ್ರತ್ತವ' ಎಂಬಲ್ಲಿ ಸಮಾಸವಾಗುವಾಗ ಷಷ್ಠೀವಿಭಕ್ತಿ ಲೋಪವಾಗಿದೆ. ಅಥವಾ 'ಬಿಭ್ರತ್' ಎಂದು ಪ್ರಥಮಾಂತವಾದ ಬೇರೆಯೇ ಪದವೆಂದಿಟ್ಟುಕೊಂಡು ಪ್ರಥಮಾ ಷಷ್ಠ್ಯರ್ಥದಲ್ಲಿ 'ತತ್ತ್ವಮಸಿ' ಅಂದರೆ 'ತಸ್ಯ ತ್ವಮಸಿ' 'ಪರಮಾತ್ಮನ ಅಧೀನ ನೀನು' ಎಂಬಂತೆ ಎಂದು ತಿಳಿಯಬೇಕು. ಆಗ 'ಶುಚಿಷದಃ' ಎಂಬ ಷಷ್ಠ್ಯಂತ ವಿಶೇಷಣಪದವನ್ನು 'ತವ' ಎಂಬುದಕ್ಕೆ ಅನ್ವಯಿಸಲು ಅನುಕೂಲ ವಾಗುವುದು.

❖❖❖

ಶ್ರೀಕೃಷ್ಣನ ಪರಂಧಾಮ ಪ್ರವೇಶವನ್ನು ಬಯಸಿದ ಬ್ರಹ್ಮಾದಿ ದೇವತೆಗಳು ದ್ವಾರಕೆಗೆ ಬಂದು ಸ್ತುತಿಸಿ ಶ್ರೀಕೃಷ್ಣ ಅವತರಿಸಿ ಅಂದಿಗೆ ನೂರನಾಲ್ಕು ವರ್ಷ ಎರಡು ತಿಂಗಳುಗಳು ಸಂದಿವೆ ಎನ್ನುತ್ತಾರೆ.

ಯದುವಂಶೇऽವತೀರ್ಣಸ್ಯ ಭವತಃ ಪುರುಷೋತ್ತಮ ।
ಶರಚ್ಛತಂ ವ್ಯತೀಯಾಯ ಪಂಚವಿಂಶಾಧಿಕಂ ಪ್ರಭೋ ॥ ೨೫ ॥

ಪ್ರಭು ಪುರುಷೋತ್ತಮ, ಯದುವಂಶದಲ್ಲಿ ನೀನು ಅವತರಿಸಿ ಇಂದಿಗೆ ನೂರು ವರ್ಷಗಳ ಮೇಲೆ ಇಪ್ಪತ್ತೈದು ಋತುಗಳು, ಅಂದರೆ, ನಾಲ್ಕು ವರ್ಷ ಎರಡು ತಿಂಗಳು ಕಳೆದಿವೆ.

ಈ ಶ್ಲೋಕದಲ್ಲಿ ಮೇಲುನೋಟಕ್ಕೆ ಶ್ರೀಕೃಷ್ಣನು ಅವತರಿಸಿ ನೂರಿಪ್ಪತ್ತೈದು ವರ್ಷಗಳಾದುವೆಂದು ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಎಲ್ಲರೂ ಹಾಗೇ ಗ್ರಹಿಸಿದ್ದಾರೆ. ಆದರೆ ಭವಿಷ್ಯ ಪುರಾಣದ ವಿರೋಧ ಬರುವುದರಿಂದ ಅದಕ್ಕೆ ಅನುಗುಣವಾಗಿ ಭಾಗವತವನ್ನು ಕೂಡಿಸಬೇಕು.

ನವಮಸ್ಕಂಧದಲ್ಲಿ 'ತ್ರಯೋದಶಾಬ್ದಸಾಹಸ್ರಂ' ಹದಿಮೂರು ಸಾವಿರ ವರ್ಷಕಾಲ ಶ್ರೀರಾಮ ರಾಜ್ಯಭಾರ ಮಾಡಿದನೆಂದುದು 'ದಶವರ್ಷಸಹಸ್ರಾಣಿ ದಶವರ್ಷ ಶತಾನಿ ಚ' ಹನ್ನೊಂದು ಸಾವಿರ ವರ್ಷ ರಾಮರಾಜ್ಯಕಾಲ ಎಂದು ರಾಮಾಯಣದಲ್ಲಿ ಹೇಳಿದ್ದಕ್ಕೆ ವಿರುದ್ಧವಾಗುವುದೆಂಬ ಸಮಸ್ಯೆ ಬಂದಾಗ ವೀರರಾಘವ ವ್ಯಾಖ್ಯಾನ ಮುಂತಾದವುಗಳಲ್ಲಿ ಭಾಗವತದ ಮಾತಿಗೇ ಬೇರೆ ವಿವರಣೆ ನೀಡುವ ಯತ್ನ ಮಾಡಿದ್ದಾರೆ. ಹಾಗೇ ಪ್ರಕೃತದಲ್ಲಿ ಭಾಗವತದ ಹೇಳಿಕೆಗೆ ಬೇರೆ ವಿವರಣೆ ನೀಡುವುದು ನ್ಯಾಯ. ಇಪ್ಪತ್ತೈದು ಋತುಗಳು ಹೊರತು ವರ್ಷಗಳಲ್ಲ ಎನ್ನಬೇಕು.

ವತ್ಸರಾಣಾಂ ಶತಂ ಚೈವ ಋತೂನಾಂ ಪಂಚವಿಂಶಕಂ ।
ಅವತೀರ್ಣಸ್ಯ ಕೃಷ್ಣಸ್ಯ ಯದಾ ಪ್ರಾಗಾತ್ ತದಾ ಹರಿಂ ।
ಸ್ವಸ್ಥಾನಗಮನಾಪೇಕ್ಷೀ ಬ್ರಹ್ಮಾ ತುಷ್ಟಾವ ಸಾಮರಃ ।
ಸಂವತ್ಸರದ್ವಯಂ ಚೈವ ಪಶ್ಚಾತ್ ಸ್ಥಿತ್ವಾ ಜನಾರ್ದನಃ ।
ಅಭಿಪೇದೇ ಪರಂ ಸ್ಥಾನಂ ಚಾತುರ್ಮಾಸ್ಯಾಧಿಕಂ ಪುನಃ ॥
ಇತಿ ಭವಿಷ್ಯತ್‌ಪುರಾಣೇ ॥

ಶ್ರೀಕೃಷ್ಣ ಅವತರಿಸಿ ನೂರುವರ್ಷಗಳು ಮತ್ತು ಇಪ್ಪತ್ತೈದು ಋತುಗಳು ಕಳೆದಾಗ ಅವನು ಸ್ವಸ್ಥಾನಕ್ಕೆ ಹೋಗುವುದನ್ನು ಬಯಸಿದ ಬ್ರಹ್ಮಾದಿ ದೇವತೆಗಳು ಸ್ತುತಿಸಿದರು. ಅವರು ಹೋದಬಳಿಕ ಅವನು ಎರಡು ವರ್ಷ ನಾಲ್ಕು ತಿಂಗಳ ಕಾಲವಿದ್ದು ಪರಂಧಾಮವನ್ನು ಪ್ರವೇಶಿಸಿದ ಎಂದು ಭವಿಷ್ಯತ್ ಪುರಾಣದಲ್ಲಿದೆ.

❖ ❖ ❖

ಬ್ರಹ್ಮಾದಿ ದೇವತೆಗಳು ಶ್ರೀಕೃಷ್ಣನನ್ನು ಪರಂಧಾಮ ಪ್ರವೇಶ ಮಾಡೆಂದು ಬೇಡಿಕೊಂಡಾಗ ಯದುಕುಲಸಂಹಾರವಾದ ಬಳಿಕ ಹಾಗೆ ಮಾಡುವೆನೆಂದು ಶ್ರೀಕೃಷ್ಣ ಹೇಳುತ್ತಾನೆ.

ತದಿದಂ ಯಾದವಕುಲಂ ವೀರ್ಯಶೌರ್ಯಶ್ರಿಯೋದ್ಧತಮ್ ।
ಲೋಕಂ ಜಿಘೃಕ್ಷತ್ತ್ಯೂರ್ಧ್ವಂ ಮೇ ವೇಲಾಮಿವ ಮಹಾರ್ಣವಃ ॥ ೩೦ ॥

ಆದರೆ, ನಾನು ಪರಂಧಾಮಕ್ಕೆ ಹೋದಬಳಿಕವೂ ಈ ಯಾದವಕುಲ ಭೂಮಿಯಲ್ಲಿದ್ದರೆ ಕಲಿಕಾಲ ವಶದಿಂದ ವೀರ್ಯ ಶೌರ್ಯಸಂಪತ್ತುಗಳಿಂದ ಬೇಗ ಪ್ರಳಯಸಮುದ್ರವು ತೀರವನ್ನು ಆಕ್ರಮಿಸುವಂತೆ ಲೋಕವನ್ನೇ ಆಕ್ರಮಿಸುವುದು.

ಯದ್ಯಸಂಹೃತ್ಯ ದೃಪ್ತಾನಾಂ ಯದೂನಾಂ ವಿಪುಲಂ ಕುಲಮ್ ।
ಗಂತಾಸ್ಮ್ಯನೇನ ಲೋಕೋಽಯಮುಲ್ಬಣೇನ ವಿನಂಕ್ಷ್ಯತಿ ॥ ೩೦ ॥

ಅಹಂಕಾರಿಗಳಾಗಿರುವ ಯಾದವರ ದೊಡ್ಡ ಕುಲವನ್ನು ನಾಶಗೊಳಿಸದೆ ನಾನು ಪರಂಧಾಮಕ್ಕೆ ತೆರಳಿದೆನೆಂದರೆ ಅದು ಅನ್ಯಾಯದಿಂದ ವಿಜೃಂಭಿಸಿ ಲೋಕವನ್ನು ನಾಶಗೊಳಿಸುವುದು.

[1]ಕೃಷ್ಣನ ವಿಯೋಗ ದುಃಖದಿಂದ ಯಾದವ ಕುಲವು ಉನ್ಮತ್ತವಾಗಿ ಕರ್ತವ್ಯ ಅಕರ್ತವ್ಯಗಳ ವಿವೇಚನೆ ಇಲ್ಲದೆ ಲೋಕವನ್ನು ನಾಶಪಡಿಸೀತೆಂದು ಶ್ರೀಧರ ರಾಧಾರಮಣದಾಸ ವ್ಯಾಖ್ಯಾನಗಳು ಹೇಳುತ್ತವೆ. ಆದರೆ ಬಂಧುವಿಯೋಗದಿಂದ 'ಗಾಂಡೀವಂ ಸ್ರಂಸತೇ ಹಸ್ತಾತ್' ಎಂದು ಅರ್ಜುನ ಹೇಳುವಂತೆ ಎಲ್ಲ ಪ್ರವೃತ್ತಿ ಕುಂಠಿತವಾದೀತು ಹೊರತು ಲೋಕನಾಶ ಮಾಡುವ ಭೀಕರವಾದ ಪ್ರವೃತ್ತಿ ಉಂಟಾಗಲಾರದು.

[2]ಲೋಕನಾಶವೆಂದರೆ ಭೂಲೋಕವು ಸ್ವರ್ಗವಾಗಿ ಭೂಮಿಯಾಗಿರಲಾರದ ಪ್ರಸಂಗ. ಯಾದವರಂಥ ಅತಿಮಾನುಷ ದಿವ್ಯ ಪುರುಷರು ಲೋಕದಲ್ಲಿದ್ದರೆ ಭೂಮಿ ಸ್ವರ್ಗವಾಗುವುದು ಸಹಜತಾನೆ? ಎಂದು ಶುಕದೇವ ವ್ಯಾಖ್ಯಾನ ಹೇಳುತ್ತದೆ.

ಆದರೆ ಶ್ರೀಕೃಷ್ಣ ಭೂಮಿಯಲ್ಲಿ ಅವತರಿಸಿದಂದಿನಿಂದಲೇ ಭೂಮಿಯನ್ನು ಸ್ವರ್ಗವನ್ನಾಗಿ ಮಾಡಿದ್ದಾನೆ. ಇದು ಲೋಕನಾಶವೆಂದಂತಾಯಿತು. ಇಂಥ ಲೋಕ ನಾಶವನ್ನು ಶ್ರೀಕೃಷ್ಣ ಮಾಡಬಹುದು, ಯಾದವರು ಮಾಡಬಾರದೆನ್ನುವುದು ಯಾವ ನ್ಯಾಯ?

[3]ವಿಶ್ವನಾಥವ್ಯಾಖ್ಯಾನ ಹೇಳುತ್ತದೆ. ಲೋಕನಾಶವೆಂದರೆ ಭೂಮಿಗೆ ದುಃಖ.

1. ಉದ್ವೇಲೇನ ಲಂಘಿತಮರ್ಯಾದೇನ । -ಶ್ರೀಧರಃ

ಲಂಘಿತಮರ್ಯಾದೇನೇತಿ ಮದ್ವಿಯೋಗಾದುನ್ಮತ್ತ ಚೇಷ್ಟತ್ವೇನ ಕರ್ತವ್ಯಾಕರ್ತವ್ಯ ವಿಚಾರ ಲೋಪಾತ್ । -ರಾಧಾರಮಣದಾಸಃ

2. ಕಿಂಚಾಯಂ ಲೋಕೋಽನೇನ ಕುಲೇನೋದ್ವೇಲೇನ ಮನುಷ್ಯಯೋಗ್ಯತಾಮತಿಕ್ರಮ್ಯ ವರ್ತಮಾನೇನ ವಿನಂಕ್ಷ್ಯತಿ । ದೇವಲೋಕ ತುಲ್ಯತಾಂ ಪ್ರಾಪ್ಯ ಮನುಷ್ಯಲೋಕ ಭಾವಾತ್ ಪ್ರಚಲಿಷ್ಯತೀತ್ಯರ್ಥಃ । -ಶುಕದೇವಃ

3. ಯದ್ಯಪಿ ಮತ್ಪರಿಜನಾನಾಮೇಷಾಂ ಪರಮಧಾರ್ಮಿಕಾಣಾಂ ಯದೂನಾಂ ಭಾರಂ ಪೃಥಿವೀ ಭಾರಂ ನ ಮನ್ಯತೇ । ತದಪಿ ತಸ್ಯಾಃ ಸ್ವಾಮಿನಾ ಮಯಾಽಯಂ ಭಾರೋಽವತಾರಣೀಯ ಏವ । ಸುಕುಮಾರ್ಯಾ ವನಿತಾಯಾ ಅತಿಬಹುತರ ಭೂಷಣ ಭಾರೋ ಯಥಾ ತತ್ಕಾಂತೇನಾವತಾರ್ಯತೇ ತಥಾ ॥ -ವಿಶ್ವನಾಥಃ

ಭೂಮಿಗೆ ದುರ್ಜನರ ಭಾರದಂತೆ ಸಜ್ಜನರ ಅತಿಯಾದ ಭಾರವೂ ದುಃಖಕರವೆ. ಅತಿ ಭಾರದ ಒಡವೆಗಳನ್ನು ಹಾಕಿದರೆ ಹೆಣ್ಣಿಗೆ ಕಷ್ಟವೆಂದು ಅದನ್ನು ಪ್ರಿಯಕರ ಕೆಳಗೆ ಇಳಿಸುತ್ತಾನೆ ತಾನೆ? ಎಂದು.

ಆದರೆ ಶ್ರೀಕೃಷ್ಣ ಅವತಾರಸಮಾಪ್ತಿ ಮಾಡಿದರೆ ಸಜ್ಜನರಾದ ಯಾದವರು ಸಜ್ಜನರಾಗಿ ಉಳಿಯುವುದಿಲ್ಲ ಕಲಿಪ್ರಭಾವದಿಂದ ಪಾಪಿಗಳಾಗುತ್ತಾರೆ ಲೋಕನಾಶ ಮಾಡುತ್ತಾರೆ ಎಂದು ಶ್ರೀಕೃಷ್ಣನೆ ಮುಂದೆ ಹೇಳುತ್ತಾನೆ—

ಜನೋಽಧರ್ಮರುಚಿರ್ಭದ್ರ ಭವಿಷ್ಯತಿ ಕಲೌ ಯುಗೇ ॥ (11.7.5)

ಯದ್ಯಪಿ ಶ್ರೀಕೃಷ್ಣ ಅವತಾರ ಸಮಾಪ್ತಿ ಮಾಡಿದ ಬಳಿಕವೂ ಪಾಂಡವರನ್ನು ಕ್ಷೇಮಕರಾಜ ಪರ್ಯಂತ ಭೂಮಿಯಲ್ಲಿ ಇರಿಸಿದ್ದಾನೆ. ಅವರಲ್ಲಿ ಕಲಿ ಪ್ರಭಾವ ಉಂಟಾಗದಂತೆ ತಾನು ಅವರಲ್ಲಿ ಆವೇಶಗೊಂಡಿದ್ದಾನೆ. ಹಾಗೇ ಯಾದವರನ್ನೂ ಭೂಮಿಯಲ್ಲಿ ಉಳಿಸಬಹುದಾಗಿತ್ತು. ಆದರೆ ಶ್ರೀಕೃಷ್ಣ ಯಾದವಕುಲನಾಶ ಮಾಡಲು ಬೇರೊಂದು ಮುಖ್ಯ ಕಾರಣವೂ ಇತ್ತು. ಭಗವಂತ ಅವತರಿಸುವಾಗ ಅವನ ಪರಿವಾರದವರೇ ಆದ ದೇವತೆಗಳು ಜೊತೆಗೇ ಅವತರಿಸು ವಂತೆ, ಅವನು ಹೊರಟುಹೋಗುವಾಗಲೂ ಜೊತೆಗೇ ಹೊರಟುಹೋಗಬೇಕು. ಪರಿವಾರ ದವರಾದ ದೇವತೆಗಳು ಪರಿವಾರದವರಾಗಿಯೇ ನಡೆದುಕೊಳ್ಳಬೇಕು. ಅದರಿಂದ ಅವರಿಗೆ ಹೆಚ್ಚು ಪುಣ್ಯಲಾಭವಾಗುವುದು.

ಸತಾಮಪಿ ಕಲೌ ಪ್ರಾಪ್ತೇ ವಿಕಾರೋ ಮನಸೋ ಭವೇತ್ ।
ತಸ್ಮಾದ್ ಯದೂಂಶ್ಚ ಸಂಜಹ್ರೇ ನೈತೇ ಸ್ಯುಃ ಪಾಪಿನಸ್ತ್ವಿತಿ ।
ಪುನರ್ಲೋಕವಿವೃದ್ಧ್ಯರ್ಥಮೌತ್ತರೇಯಾದಿಕಾನ್ ಹರಿಃ ।
ಆವಿಶ್ಯ ರಕ್ಷಾಮಕರೋಜ್ಜಗತಃ ಪುರುಷೋತ್ತಮಃ ।
ಸ್ವಾತ್ಮನಃ ಸಹ ಯಾನೇನ ಪುರುಷಾರ್ಥೋಽಧಿಕೋ ಭವೇತ್ ।
ಇತ್ಯನುಗ್ರಹ ಬುದ್ಧ್ಯಾ ಚ ಸಂಜಹ್ರೇ ಸ್ವಕುಲಂ ವಿಭುಃ ॥ ಇತಿ ಚ ॥

ಕಲಿಯುಗ ಬಂದಾಗ ಸಜ್ಜನರ ಮನಸ್ಸು ಹಾಳಾಗುವುದು. ಅದರಿಂದ ಯಾದವರು ಪಾಪಿಗಳಾಗದಿರಲಿ ಎಂದು ಕರುಣೆಯಿಂದಲೇ ಶ್ರೀಕೃಷ್ಣ ಯಾದವರನ್ನು ನಾಶಪಡಿಸಿದ. ಯದ್ಯಪಿ ಮತ್ತೆ ಲೋಕದಲ್ಲಿ ಸಮೃದ್ಧಿಯಾಗಲೆಂಬ ಉದ್ದೇಶದಿಂದ ಪರೀಕ್ಷಿತ ನಿಂದಾರಂಭಿಸಿ ಕ್ಷೇಮಕರಾಜನ ಪರ್ಯಂತ ರಾಜರನ್ನು ಭೂಮಿಯಲ್ಲಿರಿಸಿ ತಾನು ಅವರಲ್ಲಿ ಆವೇಶಗೊಂಡು ಅವರ ಮೂಲಕ ಲೋಕರಕ್ಷಣೆ ಮಾಡಿದ್ದಾನೆ ಶ್ರೀಕೃಷ್ಣ. ಆದರೂ ಯಾದವರು ತನ್ನೊಂದಿಗೇ

ಪರಲೋಕಕ್ಕೆ ಹೋದರೆ ಹೆಚ್ಚಿನ ಪುಣ್ಯ ಮೋಕ್ಷಸುಖ ಲಭಿಸುವುದು ಎಂದು ಅನುಗ್ರಹ ಬುದ್ಧಿಯಿಂದಲೂ ಕೂಡ ತನ್ನ ಕುಲವನ್ನು ಸಂಹರಿಸಿದ್ದಾನೆ ಎಂದು ಭವಿಷ್ಯಪುರಾಣದಲ್ಲಿದೆ.

❖❖❖

ಪ್ರಭಾಸಕ್ಷೇತ್ರಕ್ಕೆ ಹೋಗಿ ಸ್ನಾನತರ್ಪಣಾದಿಗಳಿಂದ ಪಾಪಪರಿಹಾರ ಮಾಡಿಕೊಳ್ಳೋಣ ಎಂದು ಶ್ರೀಕೃಷ್ಣ ಯಾದವರಿಗೆ ಹೇಳುತ್ತಾನೆ.

ವಯಂ ಚ ತಸ್ಮಿನ್ನಾಪ್ಲುತ್ಯ ತರ್ಪಯಿತ್ವಾ ಪಿತೄನ್ ಸುರಾನ್ ।
ಭೋಜಯಿತ್ವೋಶಿಜೋ ವಿಪ್ರಾನ್ನಾನಾಗುಣವತಾಽಂಧಸಾ ॥ ೩೮ ॥

ನಾವೂ ಆ ಕ್ಷೇತ್ರದಲ್ಲಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ತರ್ಪಣವಿತ್ತು ಅಗ್ನಿಗಳನ್ನೂ ಬ್ರಾಹ್ಮಣರನ್ನೂ ಬಲುರುಚಿಕರವಾದ ಅನ್ನದಿಂದ ತೃಪ್ತಿಪಡಿಸೋಣ.

ತೇಷು ದಾನಾನಿ ಪಾತ್ರೇಷು ಶ್ರದ್ಧಯಾಽರ್ಪ್ಯ ಮಹಾಂತಿ ವೈ ।
ವೃಜಿನಾನಿ ತರಿಷ್ಯಾಮೋ ದಾನೈರ್ನೌಭಿರಿವಾರ್ಣವಮ್ ॥ ೩೯ ॥

ಸತ್ಪಾತ್ರರಾದ ಬ್ರಾಹ್ಮಣರಿಗೆ ಶ್ರದ್ಧೆಯಿಂದ ಮಹಾದಾನಗಳನ್ನು ನೀಡಿ ಆ ದಾನಧರ್ಮವೆಂಬ ನೌಕೆಗಳಿಂದ ಪಾಪಸಮುದ್ರವನ್ನು ದಾಟೋಣ.

ಯಾದವರು ಪ್ರಭಾಸಕ್ಕೆ ಹೊರಟಾಗ ಉದ್ಧವ ಯದುಕುಲ ಸಂಹಾರವಾಗುವುದೆಂದು ತಿಳಿದು ಅದಕ್ಕೆ ಮೊದಲೇ ಶ್ರೀಕೃಷ್ಣನಿಂದ ಉಪದೇಶ ಪಡೆಯಲು ಬಯಸಿ ಅವನ ಮುಂದೆ ಸನ್ಯಾಸಿಗಳನ್ನು ಹೊಗಳುತ್ತಾನೆ, ತಾನು ಕರ್ಮಮಾರ್ಗದಲ್ಲಿ ಅಲೆಯುತ್ತಲೇ ಇದ್ದೇನೆ ಎಂದು ಹೇಳಿಕೊಳ್ಳುತ್ತಾನೆ.

ವಾತಾಶನಾ ಮಹರ್ಷಯಃ ಶ್ರಮಣಾ ಊರ್ಧ್ವಮಂಥಿನಃ ।
ಬ್ರಹ್ಮಾಖ್ಯಂ ಧಾಮ ತೇ ಯಾಂತಿ ಶಾಂತಾಃ ಸಂನ್ಯಾಸಿನೋಽಮಲಾಃ ॥೪೮॥

ದಿಗಂಬರರಾದ ಮಹರ್ಷಿಗಳಾದ ಊರ್ಧ್ವರೇತರಾದ ನಿರ್ಮಲರಾದ ಸಂನ್ಯಾಸಿ ಯತಿಗಳು ನಿನ್ನಲ್ಲಿಯೇ ಮನಸ್ಸಿಟ್ಟು ಬ್ರಹ್ಮಲೋಕವೆನಿಸಿರುವ ಪರಂಧಾಮ ವನ್ನು ಹೊಂದುತ್ತಿದ್ದಾರೆ.

ವಯಂ ತ್ವಿಹ ಮಹಾಯೋಗಿನ್ ಭ್ರಮಂತಃ ಕರ್ಮವರ್ತ್ಮಸು ।
ತ್ವದ್ವಾರ್ತಯಾ ತರಿಷ್ಯಾಮಸ್ತಾವಕೈರ್ದುಸ್ತರಂ ತಮಃ ॥ ೪೯ ॥

ಮಹಾಯೋಗಿಯೆ, ನಾವಾದರೋ ಇನ್ನೂ ಕರ್ಮಜನ್ಯವಾದ ಶರೀರಗಳಲ್ಲಿ ಸುತ್ತುತ್ತಿದ್ದೇವೆ. ಮುಂದೆ ನಾವು ನಿನ್ನ ಭಕ್ತರ ಸಂಗದಲ್ಲಿ ನಿನ್ನ ಲೀಲಾಶ್ರವಣ ಮಾಡಿ ದುಸ್ತರವಾದ ಅಜ್ಞಾನವನ್ನು ದಾಟಬೇಕಾಗಿದೆ.

[1]ಇಲ್ಲಿ ಶ್ರೀಕೃಷ್ಣ ಯಾದವರಿಗೆ ಹೇಳುವ ಮಾತಿನಲ್ಲಿ ತಾನೂ ಸೇರಿದಂತೆ ಎಲ್ಲ ಯಾದವರೂ ಪಾಪ ಮಾಡಿದವರು ಎಂದು ಅವಹೇಳನ ಮಾಡಿಕೊಳ್ಳುವುದು ಕಾಣುತ್ತದೆ. ವಸ್ತುತಃ ಎಲ್ಲರೂ ದೇವಾಂಶಸಂಭೂತರಾದ ಮಹಾತ್ಮರು.

ಉದ್ಧವನೂ ಶ್ರೀಕೃಷ್ಣನ ಮುಂದೆ ಸನಕಾದಿ ಯತಿಗಳನ್ನು ಮಹಾಜ್ಞಾನಿಗಳೆಂದು ಹೊಗಳಿ ತಾನು ಕರ್ಮಮಾರ್ಗದಲ್ಲಿ ಸುತ್ತುತ್ತಿರುವ ಅಜ್ಞಾನಿ ಎನ್ನುತ್ತಾನೆ. ವಸ್ತುತಃ ಆತ ಮಹಾಜ್ಞಾನಿಯಾದ ಬೃಹಸ್ಪತಿಯ ಅವತಾರ.

ಹೀಗೆ ದೊಡ್ಡವರು ತಮ್ಮನ್ನು ಸಣ್ಣವರೆಂದು ಹಳಿದುಕೊಳ್ಳುವುದು ಏಕೆ ಎಂಬ ಪ್ರಶ್ನೆ ಬರುತ್ತದೆ. ಬೇರೆ ವ್ಯಾಖ್ಯಾನಕಾರರು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಉದ್ಧವ ತನ್ನನ್ನು ತಾನು ಹೊಗಳಿಕೊಳ್ಳುತ್ತಿದ್ದಾನೆ ಎಂದೇ ~~ಹೇಳುತ್ತಾರೆ, ಸನ್ಯಾಸಿಗಳು ವಿರಕ್ತರಾಗಿ ಬಹಳ ಶ್ರಮದಿಂದ ವಿಷ್ಣುಲೋಕವನ್ನು~~ ಪಡೆಯುತ್ತಾರೆ, ನಾವು ಕರ್ಮಫಲ ಉಣ್ಣುತ್ತಲೇ ಇದ್ದರೂ ನಿನ್ನ ಸಂಕೀರ್ತನದಿಂದಲೇ ಅನಾಯಾಸವಾಗಿ ಸಂಸಾರವನ್ನು ದಾಟುತ್ತೇವೆ ಎಂದು ಉದ್ಧವನ ಅಭಿಪ್ರಾಯ ಎನ್ನುತ್ತಾರೆ.

ಆದರೆ ಸಂಕೀರ್ತನದಿಂದಲೇ ಅನಾಯಾಸವಾಗಿ ಸಂಸಾರವನ್ನು ದಾಟುತ್ತಿರುವ ಉದ್ಧವ ಜ್ಞಾನೋಪದೇಶವನ್ನು ಕೃಷ್ಣನಲ್ಲಿ ಏಕೆ ಬೇಡುತ್ತಾನೆ? ಕೃಷ್ಣನೇಕೆ ಉಪದೇಶಿಸುತ್ತಾನೆ? ಅದರಿಂದ ಉದ್ಧವ ಜ್ಞಾನಿಗಳಾದ ಸನಕಾದಿ ಯತಿಗಳಿಗಿಂತ ತಾನು ಬಹಳ ಸಣ್ಣವನೆಂದು ವಿನಯದಿಂದ ಹೇಳಿಕೊಳ್ಳುತ್ತಿದ್ದಾನೆ ಎನ್ನಬೇಕು.

'ಭ್ರಮಂತಃ' ನಾವು ಕರ್ಮಮಾರ್ಗಗಳಲ್ಲಿ ಸುತ್ತುತ್ತಿದ್ದೇವೆ ಎನ್ನುತ್ತಾನೆ ಉದ್ಧವ. 'ಭ್ರಮಂತೋऽಪಿ' 'ಸುತ್ತುತ್ತಿದ್ದರೂ' ಎಂದು ಅಪಿಪದವನ್ನು ಹೇಳುತ್ತಿಲ್ಲ.

---

1. ಇಹ ಸಂಸಾರೇ ಕರ್ಮವರ್ತ್ಮಸು ಕರ್ಮಾರ್ಜಿತೇಷು ಸುಖದುಃಖಾದಿಷು ಸ್ವರ್ಗನರಕಪದವೀಷು ವಾ ಭ್ರಮಂತೋऽಪಿ ವಯಂ ತಾವಕೈಸ್ತ್ವದ್‌ಭಕ್ತೈಃ ಸಹ ತ್ವದ್‌ವಾರ್ತಯಾ ದುಸ್ತರಮಪಿ ತಮಃ ತಮಃಕಾರ್ಯಂ ಸಂಸಾರಂ ತರಿಷ್ಯಾಮಃ ಅನಾಯಾಸೇನೇತಿ ಶೇಷಃ। - ವೀರರಾಘವಃ

ಆತ್ಮನೋऽವಮತಾಂ ಬ್ರೂಯುರುತ್ತಮಾ ಅಪಿ ಸರ್ವಶಃ।
ಕದಾಚಿದೇವ ಸ್ವಗುಣಾನ್ ಸ್ನಿಗ್ಧೇಷ್ವೇವ ಹಿ ಸಾಧವಃ।
ಇತಿ ನಾರದೀಯೇ ॥

ದೊಡ್ಡವರು ಎಲ್ಲ ಬಗೆಯಿಂದ ದೊಡ್ಡವರಾಗಿದ್ದರೂ ಭಗವತ್‌ಪ್ರೀತಿಗಾಗಿ ಲೋಕಶಿಕ್ಷಣಕ್ಕಾಗಿ ವಿನಯದಿಂದ ತಮ್ಮನ್ನು ಸಣ್ಣವರೆಂದೇ ಹೇಳಿಕೊಳ್ಳುತ್ತಾರೆ. ಇದು ಅವರ ಸ್ವಭಾವ. ಕೆಲವೊಮ್ಮೆ ಮಾತ್ರ ಈ ಸಜ್ಜನರು ಪ್ರೀತಿಪಾತ್ರರಾದವರಲ್ಲಿ ತಮ್ಮ ಗುಣಗಳನ್ನು ಹೇಳಿಕೊಳ್ಳುತ್ತಾರೆ. ಎಂದು ನಾರದೀಯ ಪುರಾಣದಲ್ಲಿ ಹೇಳಿದೆ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್‌ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ಷಷ್ಠೋऽಧ್ಯಾಯಃ ॥

❖❖❖

ಅಧ್ಯಾಯ–೭

ಅಧ್ಯಾಯ ಸಾರಾಂಶ

ಉದ್ಧವ, ನೀನು ಹೇಳಿದಂತೆಯೆ ನಾನಿನ್ನು ಯದುಕುಲವನ್ನು ಸಂಹಾರಮಾಡಿ ಪರಂಧಾಮಕ್ಕೆ ತೆರಳುತ್ತಿದ್ದೇನೆ. ದೇವತೆಗಳು ಅದನ್ನು ಬಯಸಿದ್ದಾರೆ. ಬ್ರಹ್ಮನ ಪ್ರಾರ್ಥನೆಯಂತೆ ಅವತಾರಮಾಡಿ ದೇವಕಾರ್ಯಗಳನ್ನು ಪೂರೈಸಿದ್ದೇನೆ. ಯಾದವಕುಲ ವಿಪ್ರಶಾಪ ದಿಂದ ಬೆಂದು ಹೋದಂತಿದೆ. ಇನ್ನು ಪರಸ್ಪರ ಕಲಹದಿಂದ ಪೂರ್ತಿನಾಶ ಹೊಂದುತ್ತದೆ. ನಾನೂ ಪರಂಧಾಮಕ್ಕೆ ಹೋದೊಡನೆ ಏಳನೇ ದಿನದಲ್ಲಿ ದ್ವಾರಕೆ ಸಮುದ್ರದಲ್ಲಿ ಮುಳುಗುತ್ತದೆ. ನಾನು ಭೂಲೋಕವನ್ನು ತೊರೆದೆನೆಂದರೆ ಅದು ಅಮಂಗಲಮಯ ವಾಗುವುದು. ಕಲಿಪುರುಷ ಎಲ್ಲೆಡೆ ಆಕ್ರಮಿಸುತ್ತಾನೆ. ಅದರಿಂದ ನಾನು ತೆರಳಿದ ಬಳಿಕ ನೀನೂ ದ್ವಾರಕೆಯಲ್ಲಿರಬೇಡ. ಮನೆಮಠ ವೆಲ್ಲವನ್ನೂ ತೊರೆದು ನನ್ನಲ್ಲಿಯೆ ಮನಸಿಟ್ಟು ಸಂಚಾರ ಮಾಡುತ್ತಿರು.

ಭಗವಂತ ತನ್ನಿಚ್ಛೆಯಂತೆ ಪ್ರಕೃತಿಯಿಂದ ಸೃಜಿಸಿದ್ದೆಲ್ಲವೂ ಅಶಾಶ್ವತ ವಾದರೂ ಸೃಷ್ಟಿ ಇರುವುದರಿಂದ ಸತ್ಯವೇ ಎಂದು ತಿಳಿ. ಭಗವಂತನಲ್ಲಿ

ಮನಸಿಡದವನಿಗೆ ತನ್ನ ಕರ್ಮದ ವಿಷಯದಲ್ಲಿ ತನಗೆ ಸ್ವಾತಂತ್ರ್ಯವಿದೆ ಎಂಬ ಭ್ರಮೆ ಉಂಟಾಗುತ್ತದೆ. ನಾನಿದನ್ನು ಹೀಗೇ ಮಾಡಬಲ್ಲೆ, ಮಾಡದಿರಬಲ್ಲೆ, ವ್ಯತ್ಯಾಸವಾಗಿಯೂ ಮಾಡಬಲ್ಲೆ ಎನ್ನುವ ಈ ಭ್ರಮೆ ಮನಸಿನ ರಜಸ್ತಮೋ ದೋಷಗಳಿಂದಾಗುತ್ತವೆ. ಅದಕ್ಕೆ ನೀನು ಸರ್ವಸೃಷ್ಟಿ ಮಾಡುವ ಬ್ರಹ್ಮನೂ ಸರ್ವೇಶ್ವರನಾದ ನನ್ನ ಅಧೀನ ನೆಂದು ತಿಳಿ. ನಿನ್ನೊಳಗೂ ಬೇರೆಯವರೊಳಗೂ ಇರುವವನು ಒಬ್ಬನೇ ಪರಮಾತ್ಮ ನಾನೆಂದೂ ತಿಳಿ. ಇದನ್ನು ಆಪರೋಕ್ಷಾನುಭವ ದಿಂದ ಕಂಡುಕೊಳ್ಳು. ಅದರಿಂದ ಮುಂದೆ ಸಂಭವಿಸುವ ಪಾಪಗಳು ಮೋಕ್ಷಮಾರ್ಗದಲ್ಲಿ ಅಡ್ಡಿ ಮಾಡದಂತಾಗುವುದು.

ಫಲದಾಸೆ ಇಲ್ಲದೆ ಮಗು ನಿರ್ಭಯವಾಗಿ ಆಟದಲ್ಲಿ ಮಗ್ನವಾಗುವಂತೆ ವಿರಕ್ತನಾದ ಯೋಗಿ ಫಲದಾಸೆ ಇಲ್ಲದೆ ಪಾಪಭೀತಿಯೂ ಇಲ್ಲದೆ ಭಗವಂತನ ಪ್ರೇರಣೆ ಎಂದೇ ಕರ್ಮಾಚರಣೆಯಲ್ಲಿ ಮಗ್ನನಾಗು ತ್ತಾನೆ. ಜೀವಿಗಳೆಲ್ಲ ಪರಮಾತ್ಮನ ಆವಾಸ ಸ್ಥಾನವೆಂದರಿತು ಪ್ರೀತಿಸು ತ್ತಾನೆ. ಯಾರಲ್ಲಿಯೂ ಕೋಪ ಮಾಡುವುದಿಲ್ಲ. ಜ್ಞಾನ ವಿಜ್ಞಾನಶಾಲಿ ಯಾಗಿ ವೈಷ್ಣವ ಸಿದ್ಧಾಂತದಲ್ಲಿ ಬೆಟ್ಟದಂತೆ ಸ್ಥಿರವಾಗಿ ನಿಂತಿರುತ್ತಾನೆ. ಜಗತ್ತೆಲ್ಲವೂ ಪರಮಾತ್ಮನ ಅಧೀನವೆಂದು ನಂಬುತ್ತಾನೆ.

ಶ್ರೀಕೃಷ್ಣ ಹೀಗೆ ಉಪದೇಶಿಸಿದಾಗ ಉದ್ಧವ 'ನೀನು ಹೇಳಿದಂತೆ ವಿಷಯಾಸೆ ಬಿಡುವುದು ಅಶಕ್ಯವೆಂದು ನನಗೆ ಅನಿಸುತ್ತದೆ, ಏನು ಮಾಡಲಿ, ಹೇಳು' ಎಂದ. ಅದಕ್ಕೆ ಶ್ರೀಕೃಷ್ಣ ಅವಧೂತೋ ಪಾಖ್ಯಾನವನ್ನು ವರ್ಣಿಸಿದ.

ಮನುಷ್ಯನಿಗೆ ತನ್ನ ಮನಸ್ಸೇ ವಿಶೇಷವಾಗಿ ಗುರು ಎನ್ನಬಹುದು. ಕೃಷಿಯಿಂದ ಧಾನ್ಯ, ಯಾಗದಿಂದ ಸ್ವರ್ಗ. ಹೀಗೆ ಪ್ರತ್ಯಕ್ಷ ಅನುಮಾನ ಗಳಿಂದ ಅಭೀಷ್ಟಫಲವನ್ನು ಹೇಗೆ ಪಡೆಯಬಹುದೆಂಬುದನ್ನು ಮನಸಿನಿಂದಲೆ ತಿಳಿಯಲು ಶಕ್ಯವಿದೆ. ಮುಮುಕ್ಷುಗಳು ಮಾನವ ಜನ್ಮದಲ್ಲಿಯೇ ನನ್ನನ್ನು ತಿಳಿದುಕೊಳ್ಳುತ್ತಾರೆ. ಅದರಿಂದ ನನಗೆ ಅವರ ಮನುಷ್ಯ ಶರೀರವೇ ಹೆಚ್ಚು ಪ್ರಿಯವೆನಿಸುತ್ತದೆ. ಅಪರೋಕ್ಷಕಾರಣ ವಾದ ಶಮದಮಾದಿಗಳು ಸ್ವಾಧೀನವಲ್ಲವೆನ್ನುವುದು ಅನುಭವಕ್ಕೆ ಬರುವುದೂ ಮನುಷ್ಯಶರೀರದಲ್ಲಿಯೇ. ಅದರಿಂದ ಜೀವರು ಸ್ವತಂತ್ರರಲ್ಲ, ಭಗವಂತನೇ ಸ್ವತಂತ್ರ ಎಂದು ತಿಳಿಯುತ್ತದೆ.

ಇಂದ್ರಿಯಗಳಿಂದ ವಿಷಯಾನುಭವ ಪಡೆಯುವುದರಲ್ಲಿ ಜೀವನಿಗೆ ಸ್ವಾತಂತ್ರ್ಯವಿಲ್ಲದಿರುವುದೂ ಮನುಷ್ಯಜನ್ಮದಲ್ಲಿ ಅನುಭವಕ್ಕೆ ಬರುತ್ತದೆ. ಸ್ವತಂತ್ರ ಪರಮಾತ್ಮನ ಅಸ್ತಿತ್ವವನ್ನು ತಿಳಿಸಬಲ್ಲ ಈ ಅನುಭವಗಳಿಂದಲೇ ಪರಮಾತ್ಮನನ್ನು ವಿಚಾರ ಮಾಡಿ ತಿಳಿಯಬಹುದು. ಈ ವಿಷಯದಲ್ಲಿ ಬಲು ವಿರಕ್ತನಾದ ಮಹಾಜ್ಞಾನಿಯಾದ ಅವಧೂತ ಮುನಿಯೊಬ್ಬನ ಅನುಭವಗಳನ್ನು ಬಲ್ಲವರು ಹೇಳುತ್ತಾರೆ.

ಆ ಮುನಿ ಹೊಟ್ಟೆಪಾಡಿಗೆ ಏನೂ ಪ್ರಯತ್ನ ಮಾಡದೆ ನಿಶ್ಚಿಂತೆಯಿಂದ ನಿರ್ಭೀತಿಯಿಂದಲೆ ಸಂಚರಿಸುತ್ತಿದ್ದ. ಅವನನ್ನು ಒಮ್ಮೆ ಯದುಮಹಾರಾಜ ಕಂಡು ಕೇಳಿದ, 'ಮುನಿಯೆ, ನಿನಗೆ ಇಂಥ ವಿವೇಕಬುದ್ಧಿ ಯಾವ ಗುರುವಿನಿಂದ ಲಭಿಸಿತು? ಜ್ಞಾನಿಯಾಗಿದ್ದೂ ಸಣ್ಣಬಾಲಕನಂತೆ ನಿಶ್ಚಿಂತೆಯಿಂದ ಓಡಾಡಿಕೊಂಡಿರುವೆ! ಜನರು ಕಾಮಲೋಭಾದಿಗಳೆಂಬ ದಳ್ಳುರಿಯಲ್ಲಿ ಬೆಂದು ಹೋಗುತ್ತಿರು ವಾಗ ನೀನು ಅದರಿಂದ ಮುಕ್ತನಾಗಿ ಗಂಗೆಯಲ್ಲಿ ನೀರಾಟವಾಡುವ ಒಂಟಿ ಸಲಗದಂತೆ ವಿಹಾರ ಮಾಡುತ್ತಿರುವೆ. ನಿನಗೆ ನಿನ್ನದೆಂದು ಶರೀರ ಹೊರತಾಗಿ ಬೇರೆನೂ ಇಲ್ಲ. ವಿಷಯಭೋಗವಿಲ್ಲ. ಆದರೂ ಮನದಲ್ಲಿ ಆನಂದ ತುಂಬಿಕೊಂಡಿರುವೆ, ಏನಿದರ ಗುಟ್ಟು, ಹೇಳು'

ಯದುಮಹಾರಾಜ ವಿನಯದಿಂದ ಬಾಗಿ ಹೀಗೆ ಕೇಳಿಕೊಂಡಾಗ ಆತ ಉತ್ತರಿಸಿದ—

'ರಾಜನೆ, ನನಗೆ ಇಪ್ಪತ್ತನಾಲ್ಕು ಗುರುಗಳು. ಸ್ವಂತ ಬುದ್ಧಿಯಿಂದ ನಾನು ಅವರನ್ನು ಆರಿಸಿಕೊಂಡಿದ್ದೇನೆ. ಅವರ ವರ್ತನೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಪಾಠ ಕಲಿತುಕೊಂಡು 'ಅವಧೂತ'ನಾಗಿ ಅಂದರೆ, ಎಲ್ಲ ಅಭಿಮಾನಗಳನ್ನು ತೊರೆದವನಾಗಿ ಸಂಚರಿಸು ತ್ತಿದ್ದೇನೆ. ಆ ಗುರುಗಳು—

(೧)ಭೂಮಿ (೨)ವಾಯು (೩)ಆಕಾಶ (೪)ಜಲ (೫)ಅಗ್ನಿ (೬)ಚಂದ್ರ (೭)ಸೂರ್ಯ (೮)ಪಾರಿವಾಳ (೯)ಹೆಬ್ಬಾವು (೧೦)ಸಮುದ್ರ (೧೧) ಪತಂಗ (೧೨)ಜೇನುನೊಣ (೧೩) ಆನೆ (೧೪)ಜೇನು ತೆಗೆಯುವವ (೧೫) ಜಿಂಕೆ (೧೬) ಮೀನು (೧೭) ಪಿಂಗಳೆ (೧೮)ಕುರವಪಕ್ಷಿ (೧೯)

ಮಗು (೨೦)ಕುಮಾರಿ (೨೧)ಬಾಣ ತಯಾರಿಸುವವನು (೨೨)ಸರ್ಪ (೨೩) ಜೇಡ (೨೪)ಕಣಜದ ಹುಳು.

ಭೂಮಿತಾಯಿಯನ್ನು ಮಕ್ಕಳು ತುಳಿಯುತ್ತಾರೆ. ಆದರೂ ಅವಳು ಸಹಿಸಿಕೊಂಡು ಅವರನ್ನು ಕ್ಷಮಿಸುತ್ತಾಳೆ. ಜ್ಞಾನಿಯೂ ಹಾಗೇ ಅಜ್ಞಾನಿಗಳು ಮಾಡುವ ಅಪಚಾರಗಳನ್ನು ಸಹಿಸಿಕೊಳ್ಳಬೇಕು. ಕ್ಷಮಿಸಬೇಕು. ಮಣ್ಣು ಬೆಳೆಯನ್ನು ತಾನು ಉಣದೆ ಪರರಿಗೇ ನೀಡುತ್ತದೆ. ಜ್ಞಾನಿಯೂ ತನ್ನಲ್ಲಿರುವುದನ್ನು ಪರರಿಗೆ ನೀಡಬೇಕು.

ಪ್ರಾಣವಾಯು ಇಂದ್ರಿಯಗಳಂತೆ ಸಿಕ್ಕಿದ್ದನ್ನೆಲ್ಲ ಉಣಲು ಬಯಸುವುದಿಲ್ಲ. ಏನೂ ಉಣದಿದ್ದರೂ ಹೆಚ್ಚು ಉಂಡರೂ ಜ್ಞಾನಲೋಪವಾಗುವುದರಿಂದ ಆಹಾರದಲ್ಲಿ ಸಂಯಮ ಬೇಕು. ಬಾಹ್ಯವಾಯು ಯಾವುದೇ ಪದಾರ್ಥದ ಸಂಪರ್ಕದಲ್ಲಿ ಲೇಪ ಹೊಂದುವುದಿಲ್ಲ. ಜ್ಞಾನಿಯು ವಿಷಯ ಪದಾರ್ಥಗಳಲ್ಲಿ ಅಭಿಮಾನ ಪಡಬಾರದು. ಶರೀರದ ಉತ್ಪತ್ತಿ ನಾಶಗಳನ್ನೂ ತನ್ನವೆಂದು ಬಗೆಯದೆ ನಿರ್ಲಿಪ್ತನಾಗಿರಬೇಕು.

ಆಕಾಶ ಎಲ್ಲೆಡೆ ಇದ್ದರೂ ಅದಕ್ಕೆ ಯಾವುದರ ಲೇಪವೂ ಇಲ್ಲ. ಪರಮಾತ್ಮನೂ ಹಾಗೇ ಎಲ್ಲೆಡೆ ಇದ್ದರೂ ನಿರ್ಲಿಪ್ತನಾಗಿರುತ್ತಾನೆ ಎಂದು ತಿಳಿಯಬೇಕು. ಗಾಳಿಯಿಂದ ಬರುವ ಮೋಡ ದೂಳು ಮುಂತಾದವುಗಳಿಂದ ಮಿಂಚು ಗುಡುಗು ಮಳೆಗಳ ಅಬ್ಬರದಿಂದ ಆಕಾಶದಲ್ಲಿ ಯಾವುದೇ ವಿಕಾರವಿಲ್ಲ. ಪರಮಾತ್ಮನಲ್ಲಿ ಬ್ರಹ್ಮಾಂಡದ ಸೃಷ್ಟಿಪ್ರಳಯಾದಿಗಳ ಅಬ್ಬರವಿದ್ದರೂ ಅವನಲ್ಲಿ ಯಾವುದೇ ವಿಕಾರವಿಲ್ಲ. ಜ್ಞಾನಿಯೂ ಕಾಲವಶದಿಂದ ಬಂದೊದಗುವ ನಾನಾ ವಿಷಯಪದಾರ್ಥ ಸಂಪರ್ಕದಲ್ಲಿ ಮನೋವಿಕಾರಕ್ಕೊಳಗಾಗ ಬಾರದು.

ಜಲ ಸ್ವಭಾವತಃ ಸ್ವಚ್ಛ, ಸ್ನೇಹಪೂರ್ಣ ಮಧುರಸ್ವಭಾವದ್ದು. ತೀರ್ಥಜಲ ದರ್ಶನ ಸ್ಪರ್ಶನ ಕೀರ್ತನಗಳಿಂದ ಪಾಪಪರಿಹಾರಕವೂ ಆಗಿರುತ್ತದೆ. ಪರಮಾತ್ಮ ಹಾಗೇ ಆಗಿದ್ದಾನೆ ಜ್ಞಾನಿ ಹಾಗೆ ಆಗಬೇಕು.

ಅಗ್ನಿ ಜ್ವಲಿಸುತ್ತದೆ ಬೆಳಕು ಚೆಲ್ಲುತ್ತದೆ ಮುಟ್ಟಲಾಗದು ದೂರದಿಂದ

ಸೇವಿಸಬೇಕು ಪವಿತ್ರ ಅಪವಿತ್ರ ಎಂದು ನೋಡದೆ ಎಲ್ಲವನ್ನೂ ಸುಟ್ಟು ಭಸ್ಮ ಮಾಡುತ್ತದೆ. ತಾನು ಅಪವಿತ್ರವಾಗುವುದಿಲ್ಲ. ಹಾಗೇ ಜ್ಞಾನಿಯೂ ಬ್ರಹ್ಮವರ್ಚಸ್ಸಿನಿಂದ ಜ್ವಲಿಸುತ್ತಾನೆ. ಜ್ಞಾನದ ಬೆಳಕು ನೀಡುತ್ತಾನೆ. ಮುಟ್ಟಿ ಬಲಾತ್ಕಾರ ಮಾಡಲಾಗದು. ದೂರದಿಂದ ಸೇವೆ ಮಾಡಬೇಕು. ಆಪತ್ತಿನಲ್ಲಿ ಅಪವಿತ್ರಾನ್ನ ಉಂಡರೂ ಅರಗಿಸಿಕೊಳ್ಳುತ್ತಾನೆ. ಯಾಗಾಗ್ನಿ ಅರಣಿಕಾಷ್ಠದಲ್ಲಿ ಅವ್ಯಕ್ತವಾಗಿದ್ದು ಮಥನದಿಂದ ವ್ಯಕ್ತವಾಗುತ್ತದೆ. ವ್ಯಕ್ತಗೊಳಿಸಿ ಶ್ರೇಯೋಭಿಲಾಷಿಗಳು ಉಪಾಸನೆ ಮಾಡಬೇಕು. ಪರಮಾತ್ಮ ಹಾಗೇ ಅವ್ಯಕ್ತನಾಗಿದ್ದು ವೇದವಿಚಾರದಲ್ಲಿ ವ್ಯಕ್ತನಾಗುತ್ತಾನೆ, ವ್ಯಕ್ತಗೊಳಿಸಿ ಉಪಾಸನೆ ಮಾಡಬೇಕು. ಯಾಗಾಗ್ನಿ ಯಾಗಾಹುತಿ ಉಂಡು ಯಜಮಾನನಿಗೆ ಅಪರೋಕ್ಷವಿತ್ತು ಪೂರ್ವೋತ್ತರ ಪಾಪಗಳನ್ನು ಪರಿಹರಿಸುತ್ತದೆ. ಜ್ಞಾನಿಯೂ ತನ್ನ ಜ್ಞಾನಾದಿ ಗುಣವನ್ನು ಹೊರಗೆ ತೋರದೆ ಬೂದಿಮುಚ್ಚಿದ ಕೆಂಡದಂತಿದ್ದು ಯೋಗ್ಯ ಶಿಷ್ಯರು ದೊರೆತಾಗ ವ್ಯಕ್ತನಾಗಿ ಅವರಿಂದ ಸೇವೆ ಸ್ವೀಕರಿಸಿ ಅಪರೋಕ್ಷ ಉಂಟುಮಾಡಿ ಅವರ ಪೂರ್ವೋತ್ತರ ಪಾಪ ಲೇಪವಾಗದಂತೆ ಮಾಡುತ್ತಾನೆ. ಅಗ್ನಿ ಸಣ್ಣ ದೊಡ್ಡ ಕಟ್ಟಿಗೆಗಳಲ್ಲಿ ಸಣ್ಣ ದೊಡ್ಡ ಗಾತ್ರಗಳಲ್ಲಿ ಜ್ವಲಿಸುವಂತೆ ಪರಮಾತ್ಮ ಸಣ್ಣ ದೊಡ್ಡ ಪದಾರ್ಥಗಳಲ್ಲಿ ಅವುಗಳ ಆಕಾರದಲ್ಲಿ ವ್ಯಕ್ತನಾಗುತ್ತಾನೆ ಎಂದು ತಿಳಿಯಬೇಕು.

ಚಂದ್ರಬಿಂಬದಲ್ಲಿ ಕಲೆಗಳ ವೃದ್ಧಿ ಕ್ಷಯವಿದ್ದರೂ ಚಂದ್ರದೇವನಲ್ಲಿ ಅವು ಇಲ್ಲ. ಜ್ಞಾನಿ ಶರೀರದ ಉತ್ಪತ್ತಿ ನಾಶಾದಿಗಳನ್ನು ತನ್ನವೆಂದು ತಿಳಿಯುವುದಿಲ್ಲ. ಅಗ್ನಿಜ್ವಾಲೆ ಪ್ರತಿಕ್ಷಣ ಬೇರೆಬೇರೆ ಆಕಾರಗಾತ್ರಗಳಲ್ಲಿ ಉತ್ಪತ್ತಿನಾಶಗಳನ್ನು ಹೊಂದುತ್ತದೆ. ಕಾಲವೇಗದಿಂದ ಅದು ಕಣ್ಣಿಗೆ ಗೋಚರವಾಗುವುದಿಲ್ಲ. ಹಾಗೇ ಪ್ರಾಣಿ ಶರೀರಗಳಲ್ಲಿಯೂ ಪ್ರತಿಕ್ಷಣ ವೃದ್ಧಿಹ್ರಾಸಗಳಿರುವುದರಿಂದ ಉತ್ಪತ್ತಿನಾಶಗಳಾಗುತ್ತಲೇ ಇರುತ್ತವೆ ಎಂದು ತಿಳಿಯಬೇಕು.

ಸೂರ್ಯ ಬೇಸಗೆಯಲ್ಲಿ ನೀರನ್ನು ಆವಿಮಾಡಿ ಎತ್ತಿಕೊಂಡರೂ ಅದರಲ್ಲಿ ಅಭಿಮಾನವಿಟ್ಟುಕೊಳ್ಳದೆ ಮಳೆಗಾಲ ಬಂದಾಗ ಎಲ್ಲವನ್ನೂ ಬಿಟ್ಟುಕೊಡುತ್ತಾನೆ. ಮಳೆ ಸುರಿಸುತ್ತಾನೆ. ಹಾಗೇ ಜ್ಞಾನಿಯೂ

ವಿಷಯಪದಾರ್ಥಗಳನ್ನು ಸ್ವೀಕರಿಸಿದರೂ ಅಭಿಮಾನ ಪಡದೆ ನಿಷಿದ್ಧ ಕಾಲದಲ್ಲಿ ಬಿಟ್ಟುಬಿಡುತ್ತಾನೆ. ಸೂರ್ಯದೇವರಿಗೆ ದಿವ್ಯಶರೀರವಿದೆ. ಆದರೆ ಸ್ಥೂಲಬುದ್ಧಿಯವರಿಗೆ ಅದು ಕಾಣುವುದಿಲ್ಲ. ನೀರಲ್ಲಿ ಕಾಣುವಂಥ ಬರಿ ಗೋಲಾಕಾರ ಮಾತ್ರ ಕಾಣುತ್ತದೆ. ಹಾಗೇ ಆನಂದಮಯ ಪರಮಾತ್ಮ ಅಜ್ಞರಿಗೆ ಜೀವನಂತೆ ಸುಖದುಃಖಿಯಾಗಿ ಕಾಣುತ್ತಾನೆ.

ಪಾರಿವಾಳ ಗೂಡು ಕಟ್ಟಿಕೊಂಡು ಹೆಂಡತಿ ಮಕ್ಕಳೊಂದಿಗೆ ಸುಖವಾಗಿತ್ತು. ಒಮ್ಮೆ ಹೆಂಡತಿಯೊಂದಿಗೆ ಗೂಡಿನಿಂದ ಹೊರಗೆ ಹೋಗಿ ಮಕ್ಕಳಿಗೆ ಆಹಾರವನ್ನು ಸಂಗ್ರಹಿಸಿ ತರುವಷ್ಟರಲ್ಲಿ ಒಬ್ಬ ಬೇಡನ ಬಲೆಯಲ್ಲಿ ಮಕ್ಕಳು ಸಿಕ್ಕಿಬಿದ್ದಿದ್ದುವು. ತಾಯಿ ಪಾರಿವಾಳ ನೋಡಿ ದುಃಖದಿಂದ ತಾನೂ ಬಲೆಯಲ್ಲಿ ಬಿದ್ದಿತು. ಹೆಂಡತಿ ಮಕ್ಕಳಿಲ್ಲದಿದ್ದರೆ ತಾನೊಬ್ಬನೆ ಹೇಗೆ ಬದುಕಿರಲಿ ಎಂದು ಗಂಡೂ ಬಲೆಯಲ್ಲಿ ಬಿದ್ದಿತು. ಬೇಡ ಕೃತಾರ್ಥನಾಗಿ ಎಲ್ಲ ಹಕ್ಕಿಗಳನ್ನೂ ಎತ್ತಿಕೊಂಡು ನಡೆದ. ಅಜ್ಞಮಾನವನೂ ಹೆಂಡತಿ ಮಕ್ಕಳ ಮೋಹದಲ್ಲಿ ಬಿದ್ದು ಅವರೊಂದಿಗೇ ನಾಶಹೊಂದುತ್ತಾನೆ.

❖❖❖

ಭಗವಂತ ತನ್ನಿಚ್ಛೆಯಂತೆ ಪ್ರಕೃತಿಯಿಂದ ನಿರ್ಮಿಸಿದ ಪ್ರಪಂಚ ಅಶಾಶ್ವತವಾದರೂ ಅದಕ್ಕೆ ಸೃಷ್ಟಿ ಇರುವುದರಿಂದ ಅದು ಸತ್ಯವೇ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಯದಿದಂ ಮನಸಾ ವಾಚಾ ಚಕ್ಷುರ್ಭ್ಯಾಂ ಶ್ರವಣಾದಿಭಿಃ ।
ನಶ್ವರಂ ಗೃಹ್ಯಮಾಣಂ ಚ ವಿದ್ಧಿ ಮಾಯಾಂ ಮನೋಮಯೀಮ್ ॥ ೭ ॥

ಮನಸಿನಿಂದ ಮಾತಿನಿಂದ ಕಣ್ಣು ಕಿವಿ ಮುಂತಾದ ಇಂದ್ರಿಯಗಳಿಂದ ಅನುಭವಿಸುವುದೆಲ್ಲವನ್ನೂ ಅಶಾಶ್ವತವೆಂದು ತಿಳಿ. ಆದರೆ ಭಗವಂತನ ಇಚ್ಛೆಯಿಂದ ಪ್ರಕೃತಿಯಿಂದಾದುದನ್ನು ಸತ್ಯವೆಂದು ತಿಳಿ.

[1]'ಪ್ರಪಂಚವೆಲ್ಲವೂ ಕೇವಲ ಮನೋವಿಲಾಸ ಮಾಯೆ, ಮಿಥ್ಯೆ' ಎಂದು

1. ಮನ ಆದಿಭಿರ್ಗೃಹ್ಯಮಾಣಂ ಮನೋಮಯತ್ವಾನ್ಮಾಯೇತಿ ವಿದ್ಧಿ। -ಶ್ರೀಧರಃ
ಮನೋಮಾತ್ರ ವಿಲಸಿತತ್ವಾತ್ ಮಾಯೇತಿ ಮಿಥ್ಯೇತಿ ವಿದ್ಧಿ। -ರಾಧಾರಮಣದಾಸಃ

ಶ್ರೀಧರವ್ಯಾಖ್ಯಾನ ಹೇಳಿದೆ. ಆದರೆ ಅದ್ವೈತ ಮತದಲ್ಲಿ ಮನಸಿಗೆ ಗೋಚರವಾಗುವ ಪ್ರಪಂಚವೆಲ್ಲ ಮಿಥ್ಯೆಯಾದರೂ ಪ್ರಪಂಚ ಕಾಣುವಾಗ ಪರಬ್ರಹ್ಮವೂ ಕಾಣುತ್ತದೆ, ಸರ್ವಪ್ರತ್ಯಯ ವೇದ್ಯ. ಆದರೂ ಅದು ಸತ್ಯ ಎನ್ನುತ್ತಾರೆ. ಹಾವಿನ ಭ್ರಮೆಯಲ್ಲಿ ಹಗ್ಗವೂ ಕಾಣುತ್ತದೆ, ಹಾವು ಸುಳ್ಳು, ಹಗ್ಗ ಸತ್ಯ. ಹಾಗೆ ಮನಸಿಗೆ ಗೋಚರವಾದುದೆಲ್ಲ ಮಿಥ್ಯ ಎನ್ನುವುದು ಅದ್ವೈತಮತಕ್ಕೆ ವಿರುದ್ಧ.

ಮಾಯಾಮಯವಾದ ಮಾತ್ರಕ್ಕೆ ಪ್ರಪಂಚ ಮಿಥ್ಯೆ ಏಕೆ? ಮಾಯೆ ಮಿಥ್ಯೆಯಾದ್ದರಿಂದ ಮಾಯೆಯಿಂದಾದ ಪ್ರಪಂಚವೂ ಮಿಥ್ಯೆ ಎಂದು ಅವರ ವಾದ. ಆದರೆ ಉತ್ಪತ್ತಿ ನಾಶಉಳ್ಳ ಪ್ರಪಂಚವನ್ನು ಸುಳ್ಳೆನ್ನಲಾಗದು. ಮೊಲದ ಕೊಂಬು ಎನ್ನುವುದು ಸುಳ್ಳು. ಅದಕ್ಕೆ ಉತ್ಪತ್ತಿ ನಾಶಗಳಿಲ್ಲ, ಪ್ರಪಂಚಕ್ಕೆ ಉತ್ಪತ್ತಿ ನಾಶಗಳಿವೆ ಎಂದು ಅದ್ವೈತಿಗಳು ಒಪ್ಪಿದ್ದಾರೆ.

ಮನಸಿಗೆ ಕಂಡಿದ್ದೆಲ್ಲ ಮಿಥ್ಯೆಯಾದರೆ, ಇನ್ನೊಬ್ಬರ ಶರೀರದಲ್ಲಿ ಆತ್ಮನಿರುವುದನ್ನು ಅನುಮಾನದಿಂದ ಮನಸು ಕಂಡುಕೊಳ್ಳುತ್ತದೆ, ಆತ್ಮ ಮಿಥ್ಯೆಯಲ್ಲ, ಮಿಥ್ಯೆಯಾಗಬೇಕಾದೀತು. 'ಜೀವೋ ಬ್ರಹ್ಮೈವ ನಾಪರಃ' ಜೀವನು ಬ್ರಹ್ಮಸ್ವರೂಪನಾಗಿದ್ದು ಸತ್ಯನೆಂದೇ ಒಪ್ಪಿದ್ದಾರೆ.

[1]'ಪ್ರಕೃತಿಯ ಗುಣಗಳಿಗೆ ಅಧೀನವಾದ ದುಷ್ಟಮನಸಿಗೆ ಪ್ರಪಂಚ ಸುಖಮಯವಾಗಿ ಕಾಣುತ್ತದೆ. ಶುದ್ಧಮನಸಿನವರಿಗೆ ಸುಖಕರವಾಗಿ ಕಾಣುವುದಿಲ್ಲ' ಎಂದು ವೀರರಾಘವ ವ್ಯಾಖ್ಯಾನ ಹೇಳುತ್ತದೆ. ಆದರೆ ಪ್ರಕೃತಿಯ ರಜಸ್ತಮೋ ಗುಣಗಳಿಗೆ ಅಧೀನವಾದ ಮನಸು ದುಷ್ಟವಾದರೂ ಸತ್ವಗುಣಕ್ಕೆ ಅಧೀನವಾದ ಮನಸು ಶುದ್ಧವೆ. ಅಂಥ ಶುದ್ಧಮನಸಿನವರಿಗೂ ಪ್ರಪಂಚ ಸುಖಮಯವಾಗಿ ಕಾಣುತ್ತದೆ.

ತ್ವಯೋಪಭುಕ್ತಸ್ರಗ್ಗಂಧ ವಾಸೋಽಲಂಕಾರ ಚರ್ಚಿತಾಃ ।
ಉಚ್ಛಿಷ್ಟಭೋಜಿನೋ ದಾಸಾಸ್ತವ ಮಾಯಾಂ ಜಯೇಮಹಿ ॥

ಎಂದು ಉದ್ಧವನೇ ಹೇಳುವಂತೆ ಶುದ್ಧಮನಸಿನವರಿಗೆ ಪ್ರಪಂಚದ ಭೋಗ ಭಾಗ್ಯಗಳೆಲ್ಲವೂ ಭಗವಂತನ ಪ್ರಸಾದವೆಂದೇ ಸುಖಮಯವೆಂದೇ ಕಾಣುತ್ತದೆ. ಸತ್ವಗುಣಕ್ಕೆ ವಶವಾದ ಮನಸ್ಸೂ ಕೂಡ ದುಷ್ಟವೆನ್ನುವುದಾದರೆ ಶುದ್ಧ ಮನಸ್ಸು ಬೇರೆ ಏನಿದೆ?

1. ಪ್ರಕೃತಿಗುಣವಶ್ಯ ಮನೋಜನ್ಯಮೇವ ವಿಷಯಸುಖಂ। ಗುಣವಶ್ಯಮಾನಸಾನಾಮೇವ ತದ್ರೋಚತೇ ನತು ವಿಶುದ್ಧಮಾನಸಾನಾಮಿತ್ಯರ್ಥಃ। -ವೀರರಾಘವಃ

[1]ಪ್ರಪಂಚ ನಿರ್ಮಾಣದಲ್ಲಿ ಭಗವಂತನ ಮನಸ್ಸೇ ಪ್ರಧಾನಪಾತ್ರವನ್ನು ನಿರ್ವಹಿಸುತ್ತದೆ. ಪ್ರಕೃತಿ ಅದರ ಪ್ರೇರಣೆಗಳೊಗಾಗಿ ಪ್ರಪಂಚವಾಗಿ ಪರಿಣಮಿಸುತ್ತದೆ. ಪ್ರಪಂಚ ಹೀಗೆ ಮನೋಮಯ ಎಂದು ಶುಕದೇವ ವ್ಯಾಖ್ಯಾನ ಹೇಳುವುದು ಸಮಂಜಸವಾಗಿದೆ.

ಮಾಯೆ ಎಂದರೆ ಪ್ರಕೃತಿ. ಮಾಯೆ ಪ್ರಪಂಚವಾಗಿ ಪರಿಣಮಿಸುವುದರಿಂದ ಪ್ರಪಂಚ ಮಾಯಾಮಯ. ಭಗವಂತನ ಮನಸಿನಿಂದಾದುದರಿಂದ ಮನೋಮಯವೂ ಹೌದು. ಆದರೆ ಭಾಗವತ ಪ್ರಪಂಚವನ್ನು ಮನೋಮಯ ಎನ್ನುತ್ತಿದ್ದರೂ ಮಾಯಾಮಯ ಎನ್ನುತ್ತಿಲ್ಲ, ಮಾಯೆ ಎನ್ನುತ್ತಿದೆ. ಏಕೆ? ಪ್ರಪಂಚ ಮನಸಿನ ಪರಿಣಾಮವಲ್ಲದಿದ್ದರೂ ಅದನ್ನು ಮನೋಮಯ ಎನ್ನುವಾಗ ಮಾಯಾಪರಿಣಾಮವಾದರೂ ಅದನ್ನು ಕೇವಲ ಮಾಯೆ ಎನ್ನಬೇಕಾದರೆ ವಿಶೇಷಕಾರಣವಿರಬೇಕು. ಅದನ್ನು ಶ್ರೀಮದಾಚಾರ್ಯರು ಹೇಳುತ್ತಾರೆ. ಪ್ರಪಂಚ ಭಗವಂತನ ಮನಸಿನ ಪರಿಣಾಮವಲ್ಲದಿದ್ದರೂ ಮನಸಿಗೆ ಅಧೀನವಾದ ಮಾಯೆಯ ಪರಿಣಾಮವಾಗಿದೆ. ಅದರಿಂದ 'ಮನೋಮಯ ಮಾಯೆ'ಯೇ ಈ ಪ್ರಪಂಚವೆಂದು ಅಭೇದ ಯುಕ್ತವೇ ಆಗಿದೆ. ಎಂದು ಭಾಗವತ ಹೇಳಿದೆ. ಅದರಿಂದ ಮಾಯಾ ಅಂದರೆ ಜಡಮಾಯಾ ಪರಿಣಾಮ ಎಂದು ಹೇಳಿದಂತಾಯಿತು.

ಮತ್ತು ಮಾಯೆಗೆ ಅಭಿಮಾನಿನಿಯಾದ ಮಹಾಲಕ್ಷ್ಮಿಗೆ ಮಾಯೆ ಎಂದು ಹೆಸರಿರುವುದರಿಂದ ಆ ಮಾಯಾದೇವಿಯ ಹೆಸರಿನಿಂದ ಪ್ರಪಂಚವನ್ನು ಕರೆದು ಅವಳನ್ನೇ ಪ್ರಪಂಚವೆಂದು ಹೊಗಳಿದೆ. 'ಮಾಯಾಮಯ' ಎಂದಿದ್ದರೆ ಈ ಅರ್ಥ ಸಿಗುತ್ತಿರಲಿಲ್ಲ.

ವಿದ್ಧಿ ಮಾಯಾಂ ಮನೋಮಯೀಂ
ಮನ್ಮನಃಪ್ರಧಾನಪ್ರಕೃತಿನಿರ್ಮಿತಾಂ ।
ಪ್ರಕೃತಿಃ ಸಾ ಪರಾ ಮಹ್ಯಂ ರೋದಸೀ ಲೋಕಧಾರಿಣೀ ।
ಋತಾ ಸತ್ಯಾಽಮರಾಽಜಯ್ಯಾ ಲೋಕಾನಾಮಾತ್ಮಸಂಜ್ಞಿತಾ ।
ಇತಿ ಮೋಕ್ಷಧರ್ಮೇಷು ॥

ಉತ್ತಮಳಾದ ಚೇತನಪ್ರಕೃತಿ ನನಗಾಗಿ ಇದ್ದಾಳೆ, ನನ್ನ ಮನಸ್ಸಿಗೆ ಅನುಕೂಲಳಾಗಿ ಇದ್ದಾಳೆ. ಭೂಮಿ ಅಂತರಿಕ್ಷಗಳಿಗೆ ನಿಯಾಮಕಳಾಗಿ ಸಮಸ್ತಲೋಕಧಾರಕಳಾಗಿ ಯಥಾರ್ಥ ಜ್ಞಾನ ಕೃತಿ ಸ್ವರೂಪಳಾಗಿದ್ದಾಳೆ. ಮರಣವಿಲ್ಲದವಳು

1. ಮಾಯಾ ಪ್ರೇರಕಮನಃ ಪ್ರಧಾನಂ ಜಗದುಪಾದಾನಭೂತಾಯಾ ಮಮ ಶಕ್ತೇಃ ಪ್ರೇರಕೇಣ ಮಮ ಮನಸಾ ಜಗನ್ನಿರ್ಮಾಣೇ ಪ್ರಧಾನಭೂತೇನ ರಚಿತ ಮಿತ್ಯರ್ಥಃ । -ಶುಕದೇವಃ

ಪರಾಜಯವಿಲ್ಲದವಳು. ಲೋಕಗಳನ್ನು ನಿರ್ಮಾಣ ಮಾಡಿ ಧಾರಣಪೋಷಣ ಗಳನ್ನೂ ಮಾಡುವುದರಿಂದ ಅವಳ ಹೆಸರಿನಿಂದ ಲೋಕವನ್ನು ಕರೆಯುವುದು ಕೂಡುತ್ತದೆ ಎಂದು ಮೋಕ್ಷಧರ್ಮ ವಚನವಿದೆ.

ಭಾಗವತವು ಲೋಕವನ್ನು 'ಮಾಯಾ' ಎನ್ನದೇ 'ಮಾಯಾಮಯ' ಎನ್ನುತ್ತಿದ್ದರೆ ಲೋಕವು ಮಾಯಾದೇವಿಯ ಅಧೀನ ಎಂದು ತಿಳಿಯುತ್ತಿದ್ದರೂ 'ಲೋಕವನ್ನು 'ಲೋಕ' ಎಂಬ ಅದರ ಹೆಸರಿನಿಂದ ಕರೆಯುವಂತೆ 'ಮಾಯೆ' ಎನ್ನುವ ಚಿತ್ಪ್ರಕೃತಿಯ ಹೆಸರಿನಿಂದ 'ಮಾಯೆ' ಎಂದೂ ಕರೆಯುತ್ತಾರೆ,' ಎಂದು ತಿಳಿದುಬರುತ್ತಿರಲಿಲ್ಲ, ಹೀಗೆ ಲೋಕಕ್ಕೆ ಮಾಯಾ ಎಂದು ಲಕ್ಷ್ಮಿಯ ಹೆಸರಿರುವುದರಿಂದ 'ವಿದ್ಧಿ ಮಾಯಾಂ' ಎನ್ನುವುದು ಲಕ್ಷ್ಮಿಯ ಅಧೀನ ಎಂಬ ಅರ್ಥದ ಗೌಣ ಪ್ರಯೋಗವಲ್ಲ, ಮುಖ್ಯ ಪ್ರಯೋಗವೇ ಎಂದಂತಾಯಿತು. ಹೀಗಾಗಿ ಅನಿರ್ವಚನೀಯ ಮಾಯಾಮಯ ಎಂಬ ಅರ್ಥದಲ್ಲಿ 'ವಿದ್ಧಿ ಮಾಯಾಂ' ಎಂಬುದನ್ನು ಗ್ರಹಿಸಿದರೆ ಕೇವಲ ಅಭೇದಾರ್ಥದ ಪ್ರಯೋಗವಾಗುವುದು. 'ಮಾಯಾ'ನಾಮಕವಾಗಿದೆ ಎಂಬರ್ಥದ ಮುಖ್ಯಪ್ರಯೋಗವೆ ಕೂಡುತ್ತಿರುವಾಗ ಗೌಣಪ್ರಯೋಗ ಉಚಿತವಾಗುವುದಿಲ್ಲ.

❖❖❖

ಭಗವಂತನಲ್ಲಿ ಮನಸ್ಸಿಡದವನಿಗೆ ಕರ್ಮದಲ್ಲಿ ತನಗೆ ಸ್ವಾತಂತ್ರ್ಯವಿದೆ ಎನ್ನುವ ಭ್ರಮೆ ಬರುತ್ತದೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಪುಂಸೋಽಯುಕ್ತಸ್ಯ ನಾನಾರ್ಥೋ ಭ್ರಮಃ ಸ ಗುಣದೋಷಕೃತ್ ।
ಕರ್ಮಾಕರ್ಮವಿಕರ್ಮೇತಿ ಗುಣದೋಷಧಿಯೋ ಭಿದಾ ॥ ೮ ॥

ಭಗವಂತನಲ್ಲಿ ಮನಸ್ಸಿಡದ ಮಾನವನಿಗೆ ನಾನಾ ಕರ್ಮ ವಿಷಯಗಳಲ್ಲಿ ತಾನೇ ಮಾಡಿದೆನೆಂದು ಸ್ವಾತಂತ್ರ್ಯಭ್ರಮೆ ಉಂಟಾಗುತ್ತದೆ. ಈ ಭ್ರಮೆ ಗುಣದೋಷಗಳಿಗೆ ಸುಖದುಃಖಗಳಿಗೆ ಕಾರಣವಾಗುತ್ತದೆ. ಭಗವಂತನೆ ಎಲ್ಲವನ್ನೂ ಮಾಡುತ್ತಿರುವಾಗ 'ಕರ್ಮ ಅಕರ್ಮ, ವಿಕರ್ಮ' ನಾನಿದನ್ನು ಮಾಡುತ್ತೇನೆ, ಇದನ್ನು ಮಾಡಲಾರೆ, ಇದನ್ನು ವ್ಯತ್ಯಾಸವಾಗಿ ಮಾಡುತ್ತೇನೆ' ಎಂದು ಭೇದಭ್ರಮಕ್ಕೊಳಗಾಗುತ್ತಾನೆ. ಇದು ದೋಷಬುದ್ಧಿ, ರಜಸ್ತಮೋಗುಣಗಳಿಂದ ಉಂಟಾಗುತ್ತದೆ.

[1]'ಅಯುಕ್ತನಿಗೆ ಅಂದರೆ ನಾನಾ ಭೇದಗಳನ್ನು ಕಾಣುವ ವಿಕ್ಷಿಪ್ತ ಮನಸಿನವನಿಗೆ

1. ವಿಕ್ಷಿಪ್ತಮನಸೋ ನಾನಾರ್ಥೋ ಭೇದವಿಷಯೋ ಭ್ರಮಃ। ಸ ಭ್ರಮ ಏವ ಗುಣದೋಷಭಾಕ್। ನನು ವೇದೇನೈವ ವಿಧಿ ನಿಷೇಧಾಭ್ಯಾಂ ಭೇದಸ್ಯ ಸತ್ಯತೋಕ್ತಾ । ನ ಭ್ರಮವಿಜೃಂಭಿತಗುಣದೋಷ ಬುದ್ಧೇಃ ಪುಂಸಃಕರ್ಮವಿಹಿತಂ ಅಕರ್ಮ ತಲ್ಲೋಪಃ ವಿಕರ್ಮನಿಷಿದ್ಧಮಿತಿ ಭೇದಃ ಅವಿದ್ಯಾವದ್ ವಿಷಯ ಏವ ಭೇದ ಇತ್ಯರ್ಥಃ। -ಶ್ರೀಧರಃ

ನಾನಾ ಭೇದ ಭ್ರಮ ಉಂಟಾಗುತ್ತದೆ. ನಾನಾಭೇದ ಕಾಣುವವನಿಗೆ ಗುಣದೋಷ ಭೇದ ಕಾಣುತ್ತದೆ. ಗುಣದೋಷಭೇದ ಕಾಣುವವನಿಗೆ ಕರ್ಮಅಕರ್ಮಭೇದ ಶಾಸ್ತ್ರದಲ್ಲಿ ಕಾಣುತ್ತದೆ'. ಹೀಗೆ ಶ್ರೀಧರವ್ಯಾಖ್ಯಾನ 'ಭೇದಕಾಣುವವನಿಗೆ ಭೇದ ಕಾಣುತ್ತದೆ' ಎಂದು ಮತ್ತೆಮತ್ತೆ ಹೇಳುತ್ತಿದೆ.

[2]ಸ್ವತಂತ್ರವಸ್ತುಭ್ರಮ ದೇಹಾತ್ಮಭ್ರಮಉಳ್ಳವನಿಗೆ ಮಾತ್ರ ಶಾಸ್ತ್ರದ ವಿಧಿನಿಷೇಧಗಳ ನಿರ್ಬಂಧ ಉಂಟಾಗುತ್ತದೆ ಎಂದು ವೀರರಾಘವ ವ್ಯಾಖ್ಯಾನ ಹೇಳುತ್ತದೆ. ಆದರೆ ಸ್ವತಂತ್ರವಸ್ತುಭ್ರಮ ದೇಹಾತ್ಮಭ್ರಮವನ್ನು ಬಿಟ್ಟವನೂ ಕೂಡ ಹರಿಯೇ ಸ್ವತಂತ್ರ ಅವನ ಪೂಜಾರೂಪವಾಗಿ ಕರ್ಮಮಾಡುತ್ತೇನೆ ಎಂದು ಯಥಾರ್ಥಜ್ಞಾನಪೂರ್ವಕ ಸಂಕಲ್ಪ ಮಾಡಿಯೇ ಕರ್ಮ ಮಾಡಬೇಕು. ಭ್ರಮವಿಟ್ಟುಕೊಂಡೇ ಕರ್ಮ ಮಾಡಿದರೆ ಗಂಗೆಯಲ್ಲಿರುವ ಮೀನು ನಿತ್ಯ ಗಂಗಾಸ್ನಾನ ಮಾಡಿದಂತೆ ವ್ಯರ್ಥ. ಹೀಗಿರುವಾಗ ಭ್ರಮ ಉಳ್ಳವನೇ ಕರ್ಮವಿಧಾಯಕ ಶಾಸ್ತ್ರಕ್ಕೆ ಅಧಿಕಾರಿಯಾಗುತ್ತಾನೆ ಬದ್ಧನಾಗುತ್ತಾನೆ ಎನ್ನುವುದು ಸ್ವವ್ಯಾಹತವಾಗುವುದು. ಅರ್ಥೀ ಸಮರ್ಥೋ ವಿದ್ವಾನ್ ಅಧಿಕ್ರಿಯತೇ ~~ಎನ್ನುವಂತೆ ನಿತ್ಯ ನೈಮಿತ್ತಿಕ ಕಾಮ್ಯ ಕರ್ಮಗಳಲ್ಲಿ ಕಾಮನೆ ಸಾಮರ್ಥ್ಯ ವಿದ್ವತ್ತೆಗಳೇ~~ ವಿಧಿನಿಷೇಧ ಬಂಧಕ್ಕೆ ಹೇತು ಹೊರತು ಸ್ವತಂತ್ರವಸ್ತುಭ್ರಮ ದೇಹಾತ್ಮಭ್ರಮಗಳು ಹೇತು ಎಂದು ಶಾಸ್ತ್ರಗಳು ಎಲ್ಲಿಯೂ ಹೇಳುವುದಿಲ್ಲ.

ಸ್ವರ್ಗಾದ್ಯಾಶ್ಚ ಗುಣಾಃ ಸರ್ವೇ ದೋಷಾಃ ಸರ್ವೇ ತಥೈವ ಚ ।
ಆತ್ಮನಃ ಕರ್ತೃತಾಭ್ರಾಂತ್ಯಾ ಜಾಯಂತೇ ನಾತ್ರ ಸಂಶಯಃ ।
ಪರಮಾತ್ಮಾನಮೇವೈಕಂ ಕರ್ತಾರಂ ವೇತ್ತಿ ಯಃ ಪುಮಾನ್ ।
ಸ ಮುಚ್ಯತೇಽಸ್ಮಾತ್ ಸಂಸಾರಾತ್ ಪರಮಾತ್ಮಾನಮೇತಿ ಚ ।
ಇತಿ ಭಾರತೇ ॥

ಸ್ವರ್ಗಾದಿ ಗುಣಗಳು ಮತ್ತು ನರಕಾದಿ ಎಲ್ಲ ದೋಷಗಳೂ ಅಂದರೆ ಸುಖದುಃಖಾತ್ಮಕ ಸಂಸಾರ ಜೀವನಿಗೆ ಸ್ವತಂತ್ರಕರ್ತೃತ್ವ ಭ್ರಮದಿಂದ ಬರುತ್ತದೆ. ಇದರಲ್ಲಿ ಸಂಶಯವಿಲ್ಲ. ಪರಮಾತ್ಮನೊಬ್ಬನನ್ನೇ ಸ್ವತಂತ್ರಕರ್ತನೆಂದು ತಿಳಿಯುವವನು ಸಂಸಾರದಿಂದ ಮುಕ್ತನಾಗುವನು, ಪರಮಾತ್ಮನನ್ನು ಹೊಂದುವನು ಎಂದು ಭಾರತದಲ್ಲಿದೆ.

---

2. ಸ್ವತಂತ್ರ ವಸ್ತುಭ್ರಮ ದೇಹಾತ್ಮಭ್ರಮವತೋಽಜ್ಞಸ್ಯ ಪುಂಸೋ ವಿಧಿನಿಷೇಧಾತ್ಮಕ ಭೇದಭಿನ್ನ ಶಾಸ್ತ್ರವಶ್ಯತಾ । ತದನುವರ್ತನಾತಿಲಂಘನಾಭ್ಯಾಂ ಸುಖದುಃಖೇ ಚ । ಭ್ರಮಸ್ಯ ಶಾಸ್ತ್ರವಶ್ಯತಾಪಾದನದ್ವಾರಾ ಗುಣದೋಷಕೃತ್ತ್ವಂ, ನ ಸ್ವರೂಪೇಣೇತಿ । -ವೀರರಾಘವಃ

ಇದಂ ಮಯಾ ಕ್ರಿಯತೇ ಇದಂ ಮಯಾ ನ ಕ್ರಿಯತೇ ಇದಂ ಮಯಾ ವಿಪರೀತಂ ಕ್ರಿಯತೇ ಇತಿ ಬುದ್ಧಿಭೇದೋ ರಜಸ್ತಮೋ ಗುಣ ನಿಮಿತ್ತೋ ಭ್ರಮಃ । ಸರ್ವಂ ಹಿ ಪರಮೇಶ್ವರಃ ಕರೋತಿ ॥

ಈ ಕರ್ಮವನ್ನು ನಾನು ಮಾಡುತ್ತೇನೆ. ಈ ಕರ್ಮವನ್ನು ನಾನು ಮಾಡುವುದಿಲ್ಲ. ಈ ಕರ್ಮವನ್ನು ವ್ಯತ್ಯಾಸವಾಗಿ ನಾನು ಮಾಡುತ್ತೇನೆ ಎನ್ನುವ ಬುದ್ಧಿ ಭ್ರಮವು ರಜೋಗುಣ ತಮೋಗುಣ ನಿಮಿತ್ತಕವಾಗಿರುತ್ತದೆ. ಏಕೆಂದರೆ ಎಲ್ಲಕ್ಕೂ ಸ್ವತಂತ್ರಕರ್ತ ಪರಮಾತ್ಮನೇ ಎನ್ನುವುದು ಪ್ರಮಾಣಸಿದ್ಧವಿದೆ.

❖❖❖

ಸರ್ವವನ್ನೂ ಸೃಷ್ಟಿಮಾಡುವ ಬ್ರಹ್ಮನೂ ಭಗವಂತನ ಅಧೀನನೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ತಸ್ಮಾದ್ಯುಕ್ತೇಂದ್ರಿಯಜಯೋ ಯುಕ್ತಚಿತ್ತ ಇದಂ ಜಗತ್ ।
ಆತ್ಮನೀಕ್ಷಸ್ವ ವಿತತಮಾತ್ಮಾನಂ ಮಯ್ಯಧೀಶ್ವರೇ ॥ ೯ ॥

ಅದರಿಂದ ಎಲ್ಲ ಭ್ರಮಕ್ಕೂ ಮೂಲಕಾರಣವಾದ ಮನಸಿನಲ್ಲಿರುವ ರಜಸ್ತಮೋಗುಣಗಳ ಶಕ್ತಿಪ್ರಭಾವಗಳನ್ನು ತಿಳಿದು ಮನಸ್ಸನ್ನು ಭಗವಂತನಲ್ಲಿ ಇರಿಸುವ ಮೂಲಕ ಇಂದ್ರಿಯಜಯ ಮನೋಜಯಗಳನ್ನು ಸಂಪಾದಿಸಬೇಕು. ಅದಕ್ಕೆ ಈ ಎಲ್ಲ ಜಗತ್ತನ್ನು ಸೃಷ್ಟಿ ಮಾಡುವವನು ಚತುರ್ಮುಖಬ್ರಹ್ಮನಾದರೂ ಸರ್ವಶಕ್ತನಾದ ಆ ಬ್ರಹ್ಮನೂ ಕೂಡ ಸರ್ವೇಶ್ವರನಾದ ನನ್ನ ಅಧೀನನೆಂದು ತಿಳಿ.

[1]'ಈ ವಿಶಾಲ ಪ್ರಪಂಚವನ್ನು ತನ್ನೊಳಗೆ ಕಾಣು. ಇದು ಹೇಗೆ ಸಾಧ್ಯವೆಂದರೆ ಅದಕ್ಕೆ ಮೊದಲು ನಿನ್ನನ್ನು ಸರ್ವೇಶ್ವರನಾದ ನನ್ನಲ್ಲಿ ಅಭೇದಭಾವನೆಯಿಂದ ಕಾಣು' ಎಂದು ಶ್ರೀಕೃಷ್ಣ ಉದ್ಧವನಿಗೆ ಹೇಳುತ್ತಾನೆ ಎನ್ನುತ್ತದೆ ಶ್ರೀಧರವ್ಯಾಖ್ಯಾನ.

ಆದರೆ ಶ್ರೀಕೃಷ್ಣ ಉದ್ಧವನಿಗೆ ತನ್ನನ್ನು ಅಭೇದ ಭಾವನೆಯಿಂದ ಕಾಣಲು ಆದೇಶಿಸಿಲ್ಲ. ಅಂಥ ಶಬ್ದ ಶ್ಲೋಕದಲ್ಲಿಲ್ಲ. ಆದರೂ ಸೇರಿಸಿದ್ದಾರೆ. ಏಕೆಂದರೆ ಭಗವಂತನಲ್ಲಿ ಜೀವ ತನ್ನನ್ನು ಕಾಣುವುದೆಂದರೆ ಅವನು ಸರ್ವೇಶ್ವರ, ತಾನು ಅಶಕ್ತ

---

1. ಕಥಮಾತ್ಮನಿ ವಿತತಂ ಜಗದೀಕ್ಷಣೀಯಂ ತತ್ರಾಹ ಆತ್ಮಾನಮಿತಿ ಮಯಿ ಬ್ರಹ್ಮಣಿ ತದ್ರೂಪೇಣೇಕ್ಷಸ್ವ । -ಶ್ರೀಧರಃ

ತನಗೆ ಅವನು ಆಧಾರ ಎಂಬುದನ್ನು 'ಅಧೀಶ್ವರೇ' ಎಂಬ ಆಧಾರ ಸಪ್ತಮೀ ವಿಭಕ್ತಿಯೇ ಹೇಳುತ್ತದೆ. ಆಧಾರನಾಗಬೇಕಾದರೆ ಭೇದವಿರಬೇಕು, ಅಭೇದವಿರ ಕೂಡದು. ಅದರಿಂದ ಭೇದಭಾವನೆಯನ್ನು ಕೃಷ್ಣ ಉಪದೇಶಿಸಿದರೆ ಅದು ಅದ್ವೈತಕ್ಕೆ ಅನುಕೂಲವಾಗದೆಂದುಕೊಂಡು ಸಪ್ತಮೀವಿಭಕ್ತಿಯಿಂದ ಸೂಚಿತವಾಗುವ ಭೇದಭಾವನೆ ಶ್ರೀಕೃಷ್ಣನಿಗೆ ವಿವಕ್ಷಿತವಲ್ಲ, ಅಭೇದಭಾವನೆಯೇ ವಿವಕ್ಷಿತ ಎಂದಿದ್ದಾರೆ.

[2]'ಈ ಜಗತ್ತನ್ನು ಅಂದರೆ ಜಡಶರೀರಸಮೂಹವನ್ನು ಜೀವನಲ್ಲಿ, ಜೀವನನ್ನು ನನ್ನಲ್ಲಿ ಕಾಣು, ಶರೀರಗಳನ್ನು ಜೀವ ಧರಿಸುತ್ತಾನೆ, ಜೀವನನ್ನು ಪರಮಾತ್ಮ ಧರಿಸುತ್ತಾನೆ' ಎಂದು ಶ್ರೀಕೃಷ್ಣ ಉಪದೇಶಿಸುತ್ತಿದ್ದಾನೆ ಎನ್ನುತ್ತಿದೆ ವೀರರಾಘವ ವ್ಯಾಖ್ಯಾನ.

ಆದರೆ 'ಈ ವಿಶಾಲವಾದ ಪ್ರಪಂಚವನ್ನು ಜೀವನಲ್ಲಿ ಕಾಣು' ಎಂದು ಭಾಗವತ ಹೇಳಿದರೆ 'ಶರೀರಗಳನ್ನು ಜೀವ ಧರಿಸುತ್ತಾನೆ' ಎಂದು ಅಭಿಪ್ರಾಯ ಹೇಳುತ್ತಾರೆ. ಇದು, ಶರೀರಕ್ಕೆ ಶರೀರಿ ಆತ್ಮ ಹೇಗೆ ಧಾರಕನೋ ಹಾಗೆ ಶರೀರ ಶರೀರಿಗಳೆರಡಕ್ಕೂ ಪರಮಾತ್ಮ ಧಾರಕ, ಅವನೊಬ್ಬನೇ ತತ್ವ, ವಿಶಿಷ್ಟಾದ್ವೈತ ಎಂದು ತಿಳಿಸುವ ಉದ್ದೇಶದ್ದು. ಪರಮಾತ್ಮ ಎಲ್ಲಕ್ಕೂ ಧಾರಕ ನಿಜ. ಎಲ್ಲವೂ ಅವನಿಗೆ ಶರೀರದಂತೆ ಅಧೀನ ನಿಜ. ಆದರೆ ಎಲ್ಲವೂ ಶರೀರವೇ ಅಲ್ಲ. ಇದನ್ನು 'ಇದಂ ಜಗತ್' ಎಂಬ ಶಬ್ದವೇ ಸೂಚಿಸುತ್ತದೆ. ಶರೀರ ಇಂದ್ರಿಯ ಮತ್ತು ವಿಷಯ ರೂಪವಾದ ಈ ಜಗತ್ತು ಜೀವನಿಗೆ ಶರೀರವಲ್ಲ, ಅದು ಜಡವಾದ್ದರಿಂದ ಜೀವನಿಗೆ ಅಧೀನವಾಗಿದೆ, ಶರೀರ ದಂತಿದೆ. ಅವನಿಗೆ ಅದರ ಮೇಲೆ ಪೂರ್ತಿ ಸ್ವಾಮ್ಯವಿಲ್ಲ. ತನ್ನ ಶರೀರದ ಮೇಲೆಯೇ ಅವನಿಗೆ ಪೂರ್ತಿ ಸ್ವಾಮ್ಯವಿಲ್ಲ! ಅದು ಅವನಿಚ್ಛೆಯಂತೇ ಇರುವುದಿಲ್ಲ ತಾನೆ?

ಶ್ರೀಮದಾಚಾರ್ಯರು ಈ ಶ್ಲೋಕಕ್ಕೆ ಸುಂದರವಾದ ಬೇರೆಯೇ ವಿವರಣೆ ನೀಡುತ್ತಾರೆ. ಅದಕ್ಕೆ ಆಧಾರವನ್ನೂ ತೋರಿಸುತ್ತಾರೆ.

ಆತ್ಮಶಬ್ದೋದಿತೋ ಬ್ರಹ್ಮಾ ಪರಮಾತ್ಮಾಭಿದೋ ಹ್ಯಹಂ ।
ಸರ್ವಂ ಬ್ರಹ್ಮಣಿ ವೀಕ್ಷೇತ ಮಯಿ ಬ್ರಹ್ಮಾಣಮೇವ ಚ ॥
ಇತಿ ಕಾಲಸಂಹಿತಾಯಾಂ ॥

---

2. ಇದಂ ಜಗದ್ ಅಚಿತ್‌ಪರಿಣಾಮಾತ್ಮಕ ದೇವಮನುಷ್ಯಾದಿ ಶರೀರಜಾತಮಾತ್ಮನಿ ಜೀವೇ ಈಕ್ಷಸ್ವ । ಜೀವೇನ ಧಾರ್ಯಂ ಪಶ್ಯ । ಆತ್ಮಾನಂ ಜೀವಂ ಮಯ್ಯಧೀಶ್ವರೇ ವಿತತಂ ವ್ಯಾಪ್ತಂ ಮಯಾ ಧಾರ್ಯಂ ಪಶ್ಯೇತ್ಯರ್ಥಃ । -ವೀರರಾಘವಃ

ಆತ್ಮ ಶಬ್ದದಿಂದ ಕರೆಸಿಕೊಳ್ಳುವವನು ಬ್ರಹ್ಮ. ಪರಮಾತ್ಮ ಶಬ್ದದಿಂದ ಕರೆಸಿಕೊಳ್ಳುವವನು ನಾನು. ಎಲ್ಲ ಜಗತ್ತನ್ನು ಬ್ರಹ್ಮನಲ್ಲಿ, ಬ್ರಹ್ಮನನ್ನು ನನ್ನಲ್ಲಿ ಕಾಣಬೇಕೆಂದು ಪರಮಾತ್ಮ ಹೇಳುತ್ತಿದ್ದಾನೆ ಎನ್ನುತ್ತದೆ ಕಾಲಸಂಹಿತಾವಚನ.

❖❖❖

ಅಪರೋಕ್ಷಜ್ಞಾನಿಗೆ ಮುಂದೆ ಬರಬಹುದಾದ ಪಾಪಗಳು ಮೋಕ್ಷಮಾರ್ಗದಲ್ಲಿ ಅಡ್ಡಿಮಾಡುವುದಿಲ್ಲ ಎಂದು, ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಜ್ಞಾನವಿಜ್ಞಾನಸಂಯುಕ್ತ ಆತ್ಮಭೂತಃ ಶರೀರಿಣಾಮ್ ।
ಆತ್ಮಾನುಭವತುಷ್ಟಾತ್ಮಾ ನಾಂತರಾಯೈರ್ವಿಹನ್ಯಸೇ ॥ ೧೦ ॥

ಜ್ಞಾನವಿಜ್ಞಾನಯುಕ್ತನಾಗಿ ತನ್ನಂತೆಯೇ ಪರರ ಸುಖದುಃಖಗಳನ್ನು ಸಮಾನ ವಾಗಿ ತಿಳಿದು ಪರಮಾತ್ಮಾಪರೋಕ್ಷಾನುಭವದಿಂದ ಸಂತುಷ್ಟ ಮನಸ್ಸಿನವನಾಗು. ಹೀಗೆ ಮಾಡುವವನಿಗೆ ಮುಂದೆ ಬಂದೊದಗುವ ಪಾಪವೆಂಬ ವಿಘ್ನಗಳಿಂದ ಮೋಕ್ಷಮಾರ್ಗದಲ್ಲಿ ತಡೆಉಂಟಾಗದು. ಏಕೆಂದರೆ ಉತ್ತರ ಪೂರ್ವಪಾಪಗಳ ಅಶ್ಲೇಷ ವಿನಾಶಗಳುಂಟಾಗುವುವು.

[1]ಇಲ್ಲಿ ಶ್ರೀಧರವ್ಯಾಖ್ಯಾನ ಹೇಳುತ್ತದೆ 'ಜ್ಞಾನಿಯು ಕರ್ಮಮಾಡದಿದ್ದರೆ ದೇವತೆಗಳು ಅವನಿಗೆ ವಿಘ್ನಗಳಿಂದ ಪೀಡಿಸುತ್ತಾರೆ ಎಂಬ ಸಮಸ್ಯೆಗಳಿಗೆ ಶ್ರೀಕೃಷ್ಣ ಸಮಾಧಾನ ಹೇಳುತ್ತಾನೆ. ಅಜ್ಞಾನಿ ಜ್ಞಾನ ಬರುವವರೆಗೆ ಯಾಗಾದಿ ಕರ್ಮ ಮಾಡಲೇಬೇಕು. ಜ್ಞಾನ ಬಂದಿತೆಂದರೆ ಅವನು, ದೇವತೆಗಳ ಆತ್ಮ ಸ್ವರೂಪನೇ ಆಗುವುದರಿಂದ ದೇವತೆಗಳು ಅವನನ್ನು ಪೀಡಿಸುವುದಿಲ್ಲ' ಎಂದು.

ಆದ್ದರೆ ಜ್ಞಾನಿ ಬ್ರಹ್ಮಾಪರೋಕ್ಷದಿಂದ ಬ್ರಹ್ಮಸ್ವರೂಪನಾಗುತ್ತಾನೆ ಹೊರತು ದೇವತಾಸ್ವರೂಪ ನಾಗುವುದಿಲ್ಲ. ಒಂದು ಘಟ ಒಡೆದಾಗ ಅದರೊಳಗಿದ್ದ ಆಕಾಶ ಇನ್ನೊಂದು ಘಟದೊಳಗೆ ಸೇರುವುದಿಲ್ಲ, ಮಹಾಕಾಶದಲ್ಲಿಯೇ ಲೀನವಾಗುತ್ತದೆ. ವಸ್ತುತಃ ಘಟಾಕಾಶವು ಘಟವಿರುವಷ್ಟು ಕಾಲ ಮಾತ್ರವಿದೆ. ಘಟ ನಾಶವಾದಾಗ

---

1. ನನ್ವೇವಂ ಯುಕ್ತಚಿತ್ತತ್ವೇನ ಕರ್ಮಾಕರಣೇ ದೇವಾದಯೋ ವಿಘ್ನಾನ್ ಕರಿಷ್ಯಂತಿ । ತತ್ರಾಹ ಜ್ಞಾನೇತಿ ಜ್ಞಾನಂ ವೇದತಾತ್ಪರ್ಯನಿಶ್ಚಯಃ ವಿಜ್ಞಾನಂ ತದರ್ಥಾನುಭವಃ । ತಾಭ್ಯಾಂ ಸಮ್ಯಗ್ಯುಕ್ತಃ । ತತ ಆತ್ಮಾನುಭವೇನೈವ ತುಷ್ಟಚಿತ್ತಃ ಶರೀರಿಣಾಂ ದೇವಾದೀನಾಮಾತ್ಮಭೂತೋಽಂತರಾಯೈರ್ನ ಪ್ರತಿಹನ್ಯತೇ । ಅಯಂ ಭಾವಃ । ಯಾವದನುಭವಂ ಯಥಾಶ್ರಮಂ ಕರ್ಮಾಣಿ ಕುರ್ಯಾದೇವ। ತದನಂತರಂ ಸರ್ವೇಷಾಮಾತ್ಮಭೂತತ್ವಾನ್ನ ಕೋಽಪಿ ವಿಘ್ನಾನಾಚರತಿ। ತಥಾ ಚ ಶ್ರುತಿಃ ತಸ್ಯ ಹ ನ ದೇವಾಶ್ಚ ನಾಭೂತ್ಯಾ ಈಶತೇ ಆತ್ಮಾ ಹ್ಯೇಷಾಂ ಸ ಭವತೀತಿ । -ಶ್ರೀಧರಃ

ಅದಿಲ್ಲ. ಹೀಗೇ ಶರೀರಿಯೂ, ಜ್ಞಾನದಿಂದ ಶರೀರ ನಾಶವಾದಾಗ, ಇಲ್ಲವಾಗುತ್ತಾನೆ. ವಿಘ್ನಕ್ಕೆ ಹೆದರಿ ತನ್ನನ್ನು ತಾನೇ ಇಲ್ಲವಾಗಿಸಿಕೊಳ್ಳುವುದು ಜಾಣತನವಲ್ಲ. ಅದರಿಂದ ಬ್ರಹ್ಮಜ್ಞಾನಕ್ಕೆ ಏಕೆ ಪ್ರಯತ್ನ ಮಾಡಬೇಕು?

ವಸ್ತುತಃ ಶ್ಲೋಕದಲ್ಲಿ ದೇವತೆಗಳಿಂದ ವಿಘ್ನಪೀಡೆ ನಿವಾರಿಸಿಕೊಳ್ಳಲು ಜ್ಞಾನಿ ದೇವತೆಗಳ ಆತ್ಮಸ್ವರೂಪನಾಗುತ್ತಾನೆ ಎಂದು ಹೇಳಿಯೇ ಇಲ್ಲ. 'ಆತ್ಮಭೂತಃ ಶರೀರಿಣಾಂ' ಶರೀರಿಗಳೆಲ್ಲರ ಆತ್ಮಸ್ವರೂಪ ನಾಗುತ್ತಾನೆ ಎಂದಿದೆ. 'ನಾಂತರಾಯೈಃ' ವಿಘ್ನಗಳಿಂದ ಪೀಡಿತನಾಗುವುದಿಲ್ಲ ಎಂದಿದೆ, ದೇವತೆಗಳು ಮಾಡುವ ವಿಘ್ನಗಳಿಂದ ಎಂದೂ ಹೇಳಿಲ್ಲ.

ಆತ್ಮಭೂತಃ ಆತ್ಮವದ್‌ಭೂತಃ ।
ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ॥
ಇತಿ ವಚನಾತ್ ॥

ಆತ್ಮಭೂತಃ ಎಂದರೆ ತನ್ನಂತೆಯೇ ಪರರ ಸುಖದುಃಖಗಳನ್ನೂ ಸಮವಾಗಿ ಕಾಣುವವನು. 'ತನ್ನಂತೆಯೇ ಬೇರೆಯವರಿಗೂ ಸುಖದುಃಖಗಳೆಂದು ತನ್ನ ದೃಷ್ಟಾಂತದಿಂದ ಇತರರ ಸುಖವನ್ನಾಗಲಿ ದುಃಖವನ್ನಾಗಲಿ ಸಮವಾಗಿ ಕಾಣುವವನೇ ಉತ್ತಮಯೋಗಿ' ಎಂದು ಗೀತೆಯಲ್ಲಿ (೬.೩೨) ಶ್ರೀಕೃಷ್ಣ ಅರ್ಜುನನಿಗೆ ಉಪದೇಶಿಸಿದ್ದಾನೆ.

❖ ❖ ❖

ವಿರಕ್ತನಾದ ಯೋಗಿ ಸತ್ಕರ್ಮ ಮಾಡುವುದಕ್ಕೆ ಫಲದಾಸೆ ಕಾರಣವಲ್ಲ, ದುಷ್ಕರ್ಮ ಬಿಡುವುದಕ್ಕೆ ಪಾಪಭೀತಿಯೂ ಕಾರಣವಲ್ಲ. ಭಗವಂತನ ಪ್ರೇರಣೆಯೇ ಎಲ್ಲಕ್ಕೂ ಕಾರಣ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ದೋಷಬುದ್ಧ್ಯೋಭಯಾತೀತೋ ನಿಷೇಧಾನ್ನ ನಿವರ್ತತೇ ॥
ಗುಣಬುದ್ಧ್ಯಾ ಚ ವಿಹಿತಂ ನ ಕರೋತಿ ಯಥಾಽರ್ಭಕಃ ॥ ೧೧ ॥

ಫಲದಾಸೆ ಇಲ್ಲದೆಯೆ ಮಗು ಆಟದಲ್ಲಿ ಮಗ್ನವಾಗುತ್ತದೆ. ಹಾಗೇ ಇಹಪರಗಳೆರಡರಲ್ಲಿಯೂ ವಿರಕ್ತನಾದ ಯೋಗಿ ವಿಹಿತ ಕರ್ಮಮಾಡುವುದು ಫಲದಾಸೆಯಿಂದಲ್ಲ. ನಿಷಿದ್ಧಕರ್ಮ ಬಿಡುವುದೂ ಪಾಪಭಯದಿಂದಲ್ಲ. ಸ್ವತಂತ್ರಕರ್ತನಾದ ನಾರಾಯಣನೆ ನನ್ನೊಳಗೆ ನಿಂತು ವಿಹಿತ ನಿಷಿದ್ಧಗಳನ್ನು ಮಾಡುವಂತೆ ಬಿಡುವಂತೆ ಪ್ರೇರಿಸುತ್ತಿದ್ದಾನೆ ಎಂದುಕೊಳ್ಳುತ್ತಾನೆ.

[1]'ಜ್ಞಾನಿ ಮಗುವಿನಂತಿರುತ್ತಾನೆ. ಕರ್ಮ ಮಾಡುವಾಗ ಅದರಿಂದಾಗಬಹುದಾದ ಪುಣ್ಯಪಾಪಗಳ ಬಗ್ಗೆ ಆಲೋಚನೆಯೇ ಅವನಿಗೆ ಇರುವುದಿಲ್ಲ. ಸಂಸ್ಕಾರ ವಶದಿಂದಲೆ ಕೆಲವೊಮ್ಮೆ ಸತ್ಕರ್ಮ ಮಾಡುತ್ತಾನೆ, ದುಷ್ಕರ್ಮ ಎಂದೂ ಮಾಡುವುದಿಲ್ಲ' ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ.

ಮುಗ್ಧಶಿಶು ಆಟವಾಡುತ್ತ ಏನು ಕೆಲಸ ಮಾಡಿದರೂ ಪುರಸ್ಕಾರ ತಿರಸ್ಕಾರಗಳನ್ನು ಹಿರಿಯರು ಮಾಡುವುದಿಲ್ಲ. ಆದರೆ ಜ್ಞಾನಿ ಸತ್ಕರ್ಮ ಮಾಡಿದರೆ ಭಗವಂತ ಒಲಿದು ಬ್ರಹ್ಮರುದ್ರಾದಿ ಪದವಿಗಳನ್ನು ನೀಡುತ್ತಾನೆ. ದುಷ್ಕರ್ಮ ಮಾಡಿದರೆ ಆ ಪಾಪವನ್ನು ಪರಿಹರಿಸುತ್ತಾನೆ. ಹಿಂದೆ, 'ವಿಕರ್ಮಯಚ್ಚೋತ್ಪತಿತಂ ಕಥಂಚಿತ್‌ಧುನೋತಿ ಸರ್ವಂ' (5.43) ಎಂದು ಭಾಗವತ ಹೇಳಿದೆ. 'ಜ್ಞಾನಿ ಎಂದೂ ಪಾಪಮಾಡುವುದೇ ಇಲ್ಲ' ಎನ್ನುವುದಾದರೆ ಪಾಪಪರಿಹಾರ ಪ್ರಸಕ್ತಿ ಇರುವುದಿಲ್ಲ. ಮಗುವಿನಂತೆ ಪಾಪಫಲದ ಪರಿಜ್ಞಾನವಿಲ್ಲದವನಾದರೆ ಜ್ಞಾನಿಗೆ ಪಾಪವೇಕೆ ಬರುತ್ತದೆ? ಪುಣ್ಯಫಲದ ಪರಿಜ್ಞಾನವಿಲ್ಲದೆ ಕರ್ಮ ಮಾಡಿದರೆ ಪುಣ್ಯವೇಕೆ ಬರುತ್ತದೆ? ಅದರಿಂದ ಏನೂ ಆಲೋಚನೆ ಇಲ್ಲದ ಮಗುವಿನಂತೆ ಜ್ಞಾನಿ ಆಟವಾಡುತ್ತಾನೆ. ಕರ್ಮ ಮಾಡುವುದಿಲ್ಲ ಎನ್ನುವುದು ಭಾಗವತಕ್ಕೆ ಸಮ್ಮತವಲ್ಲ.

ಕರ್ಮಫಲದಾಸೆ ಇಲ್ಲವೆನ್ನುವ ಅಂಶದಲ್ಲಿ ಜ್ಞಾನಿ ಮಗುವಿನಂತೆ ಎಂದರೆ ತಪ್ಪಿಲ್ಲ. ಆದರೆ ಅವನು ಭಗವಂತನ ಪ್ರೇರಣೆ ಎಂದು, ಭಗವಂತನಿಗೆ ಪ್ರೀತಿಯಾಗಲೆಂದೇ ದುಷ್ಕರ್ಮ ತ್ಯಜಿಸಿ ಸತ್‌ಕರ್ಮ ಮಾಡುತ್ತಾನೆ, ಭಗವಂತ ಒಲಿದು ಸತ್ಕಾರ್ಯಕ್ಕೆ ಸತ್ಫಲ ಕೊಡುತ್ತಾನೆ, ಪ್ರಾರಬ್ಧ ವಶದಿಂದ ದುಷ್ಕರ್ಮ ಮಾಡಿದರೆ ಅದರಿಂದಾಗುವ ಪಾಪವನ್ನು ದಯೆಯಿಂದ ಪರಿಹರಿಸುತ್ತಾನೆ.

ಕರ್ತೃತ್ವಮಾತ್ಮನೋ ಯಸ್ಮಾಜ್‌ಜ್ಞಾನನಿಷ್ಠೋ ನ ಮನ್ಯತೇ ।
ಅತೋಽಕುರ್ವನ್ನಪಿ ಸದಾ ದೋಷಬುದ್ಧ್ಯಾನ ನಿಂದಿತಂ ।
ಗುಣಬುದ್ಧ್ಯಾ ನ ವಿಹಿತಂ ಕಿಂತ್ವೀಶ ಪ್ರೇರಿತೋಽಸ್ಮ್ಯಹಂ ।
ಸ ಏವ ಚ ಮಯಿ ಸ್ಥಿತ್ವಾ ನಿಂದ್ಯಾನಿಂದ್ಯೇ ಕರೋತ್ಯಜಃ ।
ನ ಮೇ ದೋಷೋ ನ ಚ ಗುಣಃ ಕರ್ತೃತ್ವಾಭಾವತಃ ಸ್ಫುಟಂ ।
ಸ್ವತಂತ್ರತ್ವಾನ್ನ ಚೇಶಸ್ಯ ಯೇಽಜ್ಞಾಸ್ತೇಷು ಭವೇದಪಿ ।

1. ಗುಣದೋಷ ಬುದ್ಧ್ಯತೀತೋಽಪಿ ಪ್ರಾಕ್ತನ ಸಂಸ್ಕಾರಾನ್ನಿಷೇಧಾನ್ನಿವರ್ತತ ಏವ ಕಿಂತು ನ ದೋಷಬುದ್ಧ್ಯಾ । ವಿಹಿತಂ ಚ ಪ್ರಾಯಶಃ ಕರೋತಿ ನ ಗುಣಬುದ್ಧ್ಯಾ । ಯಥಾರ್ಭಕಃ ಸಂಕಲ್ಪ ವಿಕಲ್ಪರಹಿತಃ ಕಿಂಚಿತ್‌ಕರೋತಿ ಕುತಶ್ಚಿನ್ನಿವರ್ತತೇ ತದ್ವತ್ । —ಶ್ರೀಧರಃ

ಇತಿ ಮತ್ವಾ ನಿವರ್ತೇತ ನಿಂದ್ಯಾತ್ ಕುರ್ಯಾದ್ ಗುಣಾನಪಿ।
ಇತಿ ಬೋದ್ಧವ್ಯೇ ॥

ಅಪರೋಕ್ಷಜ್ಞಾನಿಯು ತನ್ನನ್ನು ಕರ್ತನೆಂದು ತಿಳಿಯುವುದಿಲ್ಲ; ಹರಿಯೇ ಕರ್ತನೆಂದು ತಿಳಿಯುತ್ತಾನೆ. ಆದರಿಂದ ನಿಂದ್ಯಕರ್ಮವನ್ನು ಮಾಡದೆ ಬಿಟ್ಟಿದ್ದರೂ, ದೋಷಬುದ್ಧಿಯಿಂದ ಅದನ್ನು ಬಿಟ್ಟಿರುವುದಿಲ್ಲ. ವಿಹಿತಕರ್ಮವನ್ನು ಮಾಡಿದರೂ ಗುಣಬುದ್ಧಿಯಿಂದ ಅದನ್ನು ಮಾಡಿರುವುದಿಲ್ಲ. ಆದರೆ ಪರಮಾತ್ಮನ ಪ್ರೇರಣೆಗೊಳಗಾಗುವವನು ನಾನು. ಅವನೇ ನನ್ನೊಳಗೆ ನಿಂತು ನನ್ನಿಂದ ನಿಂದ್ಯ ಅಥವಾ ವಿಹಿತ ಕರ್ಮಗಳನ್ನು ಮಾಡಿ ಮಾಡಿಸುತ್ತಾನೆ. ನನಗೆ ಸ್ವತಂತ್ರಕರ್ತೃತ್ವ ಭ್ರಮೆವಿಲ್ಲದಿರುವುದರಿಂದ ದೋಷಲೇಪವೂ ಇಲ್ಲ. ಗುಣಲೇಪವೂ ಇಲ್ಲ. ಪರಮಾತ್ಮನಿಗೂ ಅವನು ಸ್ವತಂತ್ರನಾದ್ದರಿಂದಲೆ ಸ್ವಾತಂತ್ರ್ಯಭ್ರಮವಿಲ್ಲದಿರುವುದ ರಿಂದ ಗುಣದೋಷಗಳಿಲ್ಲ. ಯಾರು ಕ್ಷುದ್ರಫಲಕ್ಕಾಗಿ ಯತ್ನಿಸುವ ಬಾಲರಂಥ ಅಜ್ಞಾನಿಗಳು ಹೀಗೆ ತಿಳಿಯುವುದಿಲ್ಲವೋ ಅವರಿಗೆ ಗುಣದೋಷಲೇಪ ಉಂಟಾಗುವುದು. ಹೀಗೆ ತಿಳಿದು ಜ್ಞಾನಿ ನಿಂದ್ಯಕರ್ಮದಿಂದ ದೂರವಿರಬೇಕು. ವಿಹಿತಕರ್ಮಗಳನ್ನು ಮಾಡಬೇಕು ಎಂದು ಬೋದ್ಧವ್ಯ ಎಂಬ ಗ್ರಂಥದಲ್ಲಿದೆ.

ಅನಿತ್ಯಾ ಮೇ ಗುಣಾ ನ ಸ್ಯುರ್ದೋಷಾ ನೈವ ಕಥಂಚನ
ಇತಿ ಮತ್ವಾ ಶುಭಂ ಕುರ್ಯಾನ್ನಿವರ್ತೇದಶುಭಾದಪಿ।
ಜ್ಞಾನೀ ತ್ವಕರ್ತೃತಾಮಾನಾದೀಶ ಕರ್ತೃತ್ವ ನಿಶ್ಚಯಾತ್।
ಕಿಂತು ಪೂರ್ಣಗುಣಾಯ್ವೈವ ನ ತು ದೋಷಾಪನುತ್ತಯೇ।
ನ ಚಾಲ್ಪಗುಣಸಿದ್ಧ್ಯರ್ಥಂ ಬಾಲವತ್ ಕೃತನಿಶ್ಚಯಃ।
ಇತಿ ವೈಶಾರದ್ಯೇ ॥

ಅನಿತ್ಯವಾದ ಸ್ವರ್ಗಾದಿ ಶುಭಫಲ ನನಗೆ ಉಂಟಾಗಲಾರದು, ಅಶುಭಫಲ ಸರ್ವಥಾ ಆಗಲಾರದು ಎಂದು ಬಗೆದು ಜ್ಞಾನಿಯು ಶುಭಕರ್ಮ ಮಾಡುತ್ತಾನೆ. ಅಶುಭಕರ್ಮವನ್ನು ಬಿಡುತ್ತಾನೆ. ತನ್ನಲ್ಲಿ ಸ್ವತಂತ್ರಕರ್ತೃತ್ವವಿಲ್ಲವೆಂದೂ ಪರಮಾತ್ಮನೆ ಸ್ವತಂತ್ರಕರ್ತನೆಂದೂ ನಿಶ್ಚಯ ಮಾಡಿಕೊಂಡು ಪೂರ್ಣವಾದ ಮೋಕ್ಷಾನಂದರೂಪವಾದ ಶುಭಫಲಕ್ಕಾಗಿಯೇ ಶುಭಕರ್ಮ ಮಾಡುತ್ತಾನೆ. ಅಶುಭ ಕರ್ಮ ಬಿಡುತ್ತಾನೆ. ಹೊರತು ಬಾಲಕನಂತೆ ಅಂದರೆ ಅಜ್ಞಾನಿಯಂತೆ ದುಃಖ ಪರಿಹಾರಕ್ಕಾಗಿ ಅಲ್ಲ, ಅಲ್ಪವಾದ ಸ್ವರ್ಗಾದಿ ಸುಖಕ್ಕಾಗಿಯೂ ಅಲ್ಲ. ಪರಮಾತ್ಮನೇ ಸ್ವತಂತ್ರನೆಂದು ಅವನು ದೃಢನಿಶ್ಚಯ ಉಳ್ಳವನು ತಾನೆ? ಎಂದು ವೈಶಾರದ್ಯ ಎಂಬ ಗ್ರಂಥದಲ್ಲಿದೆ.

❖❖❖

ಜ್ಞಾನಿಯು ಜಗತ್ತೆಲ್ಲವೂ ಪರಮಾತ್ಮನ ಅಧೀನವೆಂದು ನಂಬುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಸರ್ವಭೂತಸುಹೃಚ್ಛಾಂತೋ ಜ್ಞಾನವಿಜ್ಞಾನನಿಶ್ಚಲಃ ।
ಪಶ್ಯನ್ಮದಾತ್ಮಕಂ ವಿಶ್ವಂ ನ ವಿಪದ್ಯೇತ ವೈ ಪುನಃ ॥ ೧೨ ॥

ಪರಮಾತ್ಮನ ವಾಸಸ್ಥಾನವೆಂದು ಜೀವಿಗಳನ್ನು ಪ್ರೀತಿಸುತ್ತಾನೆ. ಯಾರಲ್ಲಿಯೂ ಕೋಪ ಮಾಡಲಾರ. ಜ್ಞಾನವಿಜ್ಞಾನಗಳಿಂದ ವೈಷ್ಣವಸಿದ್ಧಾಂತದಲ್ಲಿ ಬೆಟ್ಟದಂತೆ ಅಚಲನಾಗಿದ್ದು ಜಗತ್ತೆಲ್ಲವೂ ಪರಮಾತ್ಮನ ಅಧೀನವೆಂದು ತಿಳಿಯುತ್ತಾನೆ. ಅಂಥವನು ಪುನಃ ಸಂಸಾರದಲ್ಲಿ ಬೀಳುವುದಿಲ್ಲ.

'ಜಗದಾತ್ಮನಿ ಈಕ್ಷಸ್ವ' ಎಂದು ಒಂಬತ್ತನೇ ಶ್ಲೋಕದಲ್ಲಿ ಹೇಳಿದ್ದನ್ನೇ ಪುನಃ ಹೇಳುತ್ತಿದ್ದಾನೆ ಶ್ರೀಕೃಷ್ಣ ಇಲ್ಲಿ 'ಪಶ್ಯನ್ ಮದಾತ್ಮಕಂ ವಿಶ್ವಂ' ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. 'ವಿಶ್ವವು ಮದಾತ್ಮಕ' 'ಈಶ್ವರಾತ್ಮಕ' ಎಂದರೆ ಅದ್ವೈತ ಪ್ರಕಾರ ರಜ್ಜುವಿನಲ್ಲಿ ಆರೋಪಿತವಾದ ಸರ್ಪ ರಜ್ಜ್ವಾತ್ಮಕ, ಅಂದರೆ ರಜ್ಜುವಿಗಿಂತ ಬೇರೆಯಾಗಿ ಇಲ್ಲ. ಹಾಗೇ ಜಗತ್ತು ಬ್ರಹ್ಮನಲ್ಲಿ ಆರೋಪಿತವಾದ್ದರಿಂದ ಅವನಿಗಿಂತ ಬೇರೆಯಾಗಿ ಇಲ್ಲ. ವಿಶಿಷ್ಟಾದ್ವೈತ ಪ್ರಕಾರ ಶರೀರಕ್ಕೆ ಜೀವನು ಆತ್ಮನಾಗಿದ್ದಾನೆ, ಹೇಗೋ ಹಾಗೇ ಜಗತ್ತು ಈಶ್ವರನ ಶರೀರವಾದ್ದರಿಂದ ಅದಕ್ಕೆ ಆತ್ಮನು ಈಶ್ವರ. ಈಶ್ವರನೇ ಆತ್ಮವಾಗಿ ಉಳ್ಳ ಜಗತ್ತು ಈಶ್ವರಾತ್ಮಕ. ಭೇದಾಭೇದ ವಾದಿಗಳ ಪ್ರಕಾರ ಜಗತ್ತಿಗೆ ಈಶ್ವರನಿಂದ ಭೇದವೂ ಇದೆ. ಅಭೇದವೂ ಇದೆ. ಅಭೇದವಿರುವುದರಿಂದ ಈಶ್ವರಾತ್ಮಕ, ಈಶ್ವರಾಭಿನ್ನ. ಈ ಎಲ್ಲ ವಾದಗಳನ್ನು ಸರ್ವಜ್ಞರು ಸಾರ್ವಜ್ಞ ಎಂಬ ಗ್ರಂಥವಚನದ ಆಧಾರ ತೋರುತ್ತ ನಿರಾಕರಿಸುತ್ತಾರೆ.

ವೈಲಕ್ಷಣ್ಯಾದ್ಧರೇರ್ಭಿನ್ನಂ ತತ್ತಂತ್ರತ್ವಾತ್ ತದಾತ್ಮಕಂ ।
ಇತಿ ವಿಶ್ವಂ ಪ್ರಪಶ್ಯಂತಿ ಜ್ಞಾನನಿಷ್ಠಾ ಹರೇಃ ಪ್ರಿಯಾಃ ।

ಇತಿ ಸಾರ್ವಜ್ಞ್ಯೇ ।

ಪ್ರಪಂಚಕ್ಕಿಂತ ಅತ್ಯಂತ ವೈಲಕ್ಷಣ್ಯ ಹರಿಯಲ್ಲಿರುವುದರಿಂದ ಪ್ರಪಂಚವು ಅಭೇದದಿಂದಾಗಲೀ ಶರೀರಾತ್ಮಭಾವದಿಂದಾಗಲಿ ಈಶ್ವರಾತ್ಮಕವೆನಿಸುವುದಿಲ್ಲ. ಅವನ ಅಧೀನ ವಾದ್ದರಿಂದಲೆ ಈಶ್ವರಾತ್ಮಕವೆನಿಸುತ್ತದೆ ಎಂದು ಭಗವಂತನಿಗೆ ಪ್ರಿಯರಾದ ಅಪರೋಕ್ಷ ಜ್ಞಾನಿಗಳು ತಿಳಿಯುತ್ತಾರೆ ಎಂದು ಸಾರ್ವಜ್ಞ ಎಂಬ ಗ್ರಂಥದಲ್ಲಿದೆ.

ಪ್ರಪಂಚ ಈಶ್ವರನಿಗಿಂತ ಬೇರೆಯಾಗಿ ಇದೆ, ಇಲ್ಲವೆನ್ನುವಂತಿಲ್ಲ. ಈಶ್ವರನಲ್ಲಿ ಕಲ್ಪಿತವಲ್ಲ. ಅದರಿಂದ ವಿಶ್ವವು ಅದ್ವೈತ ಪ್ರಕಾರ ಈಶ್ವರಾತ್ಮಕವನ್ನುವಂತಿಲ್ಲ. ವಿಶಿಷ್ಟಾದ್ವೈತ ಪ್ರಕಾರ ಪ್ರಪಂಚ ಈಶ್ವರನಿಗಿಂತ ಭಿನ್ನವೇ ಆಗಿದೆ. ಈಶ್ವರನಿಗೆ ಭಿನ್ನವಾದ ಶರೀರವಿಲ್ಲದಿರುವುದರಿಂದ ಪ್ರಪಂಚ ಅವನಿಗೆ ಶರೀರವೆನ್ನಕೂಡದು. ಹೀಗಾಗಿ ಪ್ರಪಂಚವೆಂಬ ಶರೀರದಲ್ಲಿ ಆತ್ಮನು ಈಶ್ವರನೆನ್ನಲಾಗದಿರುವುದರಿಂದ ಪ್ರಪಂಚ ಈಶ್ವರಾತ್ಮಕವಲ್ಲ. ಪ್ರಪಂಚ ಮತ್ತು ಈಶ್ವರರಿಗೆ ಅತ್ಯಂತ ಭೇದ ವಿರುವುದರಿಂದ ಅಭೇದವನ್ನು ಹೇಳಲಾಗದು. ಹೀಗಾಗಿ ಭೇದಾಭೇದವಾದಿಗಳೂ ಪ್ರಪಂಚವನ್ನು ಈಶ್ವರಾತ್ಮಕ ಎನ್ನುವುದು ಸಮಂಜಸವಲ್ಲ ಎಂದು ಸಾರ್ವಜ್ಞ ವಚನದಿಂದ ಸ್ಪಷ್ಟವಾಗುತ್ತದೆ. ಅದರಿಂದ ಒಂಬತ್ತನೇ ಶ್ಲೋಕದಲ್ಲಿ 'ಜಗದಾತ್ಮನಿ ಈಕ್ಷಸ್ವ' ಎಂದು ಹೇಳಿದ್ದು ಭೇದವನ್ನೇ, ಈ ಶ್ಲೋಕದಲ್ಲಿ ಹೇಳಿದ್ದೂ ಭೇದವನ್ನೇ ಎನ್ನುವುದು ಸ್ಪಷ್ಟವಾಗುತ್ತದೆ.

❖❖❖

ಉದ್ಧವ ಶ್ರೀಕೃಷ್ಣನನ್ನು ಯೋಗೇಶ ಯೋಗವಿನ್ಯಾಸ ಎಂದು ಮುಂತಾಗಿ ಸ್ತೋತ್ರ ಮಾಡುತ್ತಾನೆ.

ಯೋಗೇಶ ಯೋಗವಿನ್ಯಾಸ ಯೋಗಾತ್ಮನ್ ಯೋಗಸಂಭವ ।
ನಿಃಶ್ರೇಯಸಾಯ ಮೇ ಪ್ರೋಕ್ತಸ್ತ್ಯಾಗಃ ಸಂನ್ಯಾಸಲಕ್ಷಣಃ ॥ ೧೪ ॥

ಯೋಗಾಭ್ಯಾಸನಿಯಾಮಕನೂ, ಜ್ಞಾನವನ್ನು ಮತ್ತು ಜ್ಞಾನೋಪಾಯವನ್ನು ವಿಶೇಷವಾಗಿ ದೇವಋಷಿ ಮುಂತಾದವರಲ್ಲಿ ಇರಿಸುವವನೂ, ಜ್ಞಾನಸ್ವರೂಪನೂ, ಜ್ಞಾನಜ್ಞಾನೋಪಾಯಜನಕನೂ ಆಗಿರುವ ಹೇ ಭಗವಂತನೆ, ಎಲ್ಲ ದುಃಸಂಗಗಳ ತ್ಯಾಗವೇ ಮೋಕ್ಷಸಾಧನವೆಂದು ನೀನು ಉಪದೇಶಿಸಿರುವೆ.

[1]“ನೇತಿ ನೇತಿ ಎಂದು ಅಭ್ಯಾಸ ಮಾಡಿದರೆ ಮನಸ್ಸು ತನ್ನ ಎಲ್ಲ ವೃತ್ತಿಗಳೊಂದಿಗೆ ಲಯ ಹೊಂದುತ್ತದೆ. ಲಯಕ್ಕೆ ಅಧಿಕರಣ ಆತ್ಮನಾದ್ದರಿಂದ, ಅಭಾವವು ಅಧಿಕರಣ ಸ್ವರೂಪವಾದ್ದರಿಂದ ಲಯವು ಆತ್ಮಸ್ವರೂಪವಾಗುತ್ತದೆ. ಇದೇ ಚಿತ್ತವೃತ್ತಿನಿರೋಧ

---

1. ಯೋಗೋಽಸಂಪ್ರಜ್ಞಾತಸಮಾಧಿಃ । ತದುಕ್ತಂ ಪಾತಂಜಲೇ ವಿರಾಮಪ್ರತ್ಯಯಾಭ್ಯಾಸ-ಪೂರ್ವಃ ಸಂಸ್ಕಾರಶೇಷೋಽನ್ಯ ಇತಿ। ವಿರಾಮಪ್ರತ್ಯಯೋ ನೇತಿನೇತೀತ್ಯೇತದಂಶಾ-ಪವಾದಃ। ತದಭ್ಯಾಸಪೂರ್ವಃ ಅನ್ಯೋಽಸಂಪ್ರಜ್ಞಾತ ಸಮಾಧಿಃ । ಸ ಚ ಬ್ರಹ್ಮಾತ್ಮಕ ಏವ । ಅಭಾವಸ್ಯಾಧಿಕರಣಾತ್ಮಕತ್ವಾದಿತ್ಯರ್ಥಃ। -ರಾಧಾರಮಣದಾಸಃ

ರೂಪವಾದ ಯೋಗ. ಅದರಿಂದ ಶ್ರೀಕೃಷ್ಣನು ಯೋಗಾತ್ಮ, ಯೋಗಸ್ವರೂಪ' ಎಂದು ರಾಧಾರಮಣದಾಸ ವ್ಯಾಖ್ಯಾನ ಹೇಳುತ್ತದೆ.

ಆದರೆ ನೇತಿನೇತಿ ಧ್ಯಾನದಿಂದಲೇ ಅಂತಃಕರಣ ಲಯ ಹೊಂದುವುದು ನಂಬಲರ್ಹವಲ್ಲ. ಅಪರೋಕ್ಷ ಬರಬೇಕು. ಮತ್ತು ಅಂತಃಕರಣಲಯವು ಧ್ಯಾನ ಮಾಡುವ ಜೀವಾತ್ಮನಲ್ಲಾಗುತ್ತಿದ್ದರೆ ಅದು ಜೀವಾತ್ಮನ ಸ್ವರೂಪವಾಗಲಿ, ಪರಮಾತ್ಮನ ಸ್ವರೂಪ ಏಕಾಗುತ್ತದೆ?

ಶ್ರೀಕೃಷ್ಣನನ್ನು ಯೋಗಸ್ವರೂಪನೆಂದು ಉದ್ಧವನೇಕೆ ಹೇಳುತ್ತಾನೆ? ಜ್ಞಾನೋಪದೇಶ ನೀಡೆಂದು ಕೇಳಿಕೊಳ್ಳುವ ಪ್ರಸಂಗದಲ್ಲಿ ಯೋಗ ಸ್ವರೂಪನೆಂದು ಕೃಷ್ಣನನ್ನು ಪ್ರಶಂಸಿಸುವುದಕ್ಕೆ ಔಚಿತ್ಯವೇನಿದೆ? ವಸ್ತುತಃ ಭಗವಂತ ಚಿತ್ತವೃತ್ತಿ ನಿರೋಧಾತ್ಮಕ ಯೋಗ ಸ್ವರೂಪನಲ್ಲ. ಜ್ಞಾನಾತ್ಮಕ ಯೋಗಸ್ವರೂಪನಾಗಿದ್ದಾನೆ ಜ್ಞಾನೋಪಾಯವಾದ ಶಾಸ್ತ್ರಕ್ಕೆ ಸಂಭವ ಜನಕನಾಗಿದ್ದಾನೆ. ಅದರಿಂದ ಹಾಗೇ ಹೊಗಳುವುದು ಉಚಿತ.

ಯೋಗೋ ದೇವಾದಿಷು ತೇನ ನ್ಯಸ್ತ ಇತಿ ಯೋಗವಿನ್ಯಾಸಃ ।
ಜ್ಞಾನಂ ತು ಯೋಗಶಬ್ದೋಕ್ತಂ ಯುಜ್ಯತೇಽನೇನ ಯತ್‌ಸುಖಂ ।
ಕ್ವಚಿದ್ಯೋಗ ಉಪಾಯಃ ಸ್ಯಾತ್ ಕ್ವಚಿಚ್ಚಿತ್ತ ನಿರೋಧನಂ ॥
ಇತಿ ದತ್ತಾತ್ರೇಯಯೋಗೇ ॥

ಅತ್ರ ಜ್ಞಾನಮುಪಾಯಶ್ಚ । ಭಗವತ್‌ಸ್ವರೂಪತ್ವಾತ್ ।

ಯೋಗವಿನ್ಯಾಸನೆಂದರೆ ಜ್ಞಾನವೆಂಬ ಯೋಗವನ್ನು ದೇವಾದಿಗಳಲ್ಲಿ ವಿಶೇಷವಾಗಿ ಇರಿಸಿದವನು ಶ್ರೀಕೃಷ್ಣ.

ಜ್ಞಾನವೇ ಮುಖ್ಯವಾಗಿ ಯೋಗವೆನಿಸುತ್ತದೆ. ಏಕೆಂದರೆ ಸುಖದ ಯೋಗವನ್ನು, ಅಂದರೆ ಸಂಬಂಧವನ್ನು ಉಂಟುಮಾಡುವುದು ಜ್ಞಾನ. ಕೆಲವು ಕಡೆ ಚಿತ್ತನಿರೋಧ, ಅಂದರೆ ಧ್ಯಾನಯೋಗ ಯೋಗವೆನಿಸುತ್ತದೆ ಎಂದು ದತ್ತಾತ್ರೇಯ ಯೋಗದಲ್ಲಿ ಹೇಳಿದೆ.

ಪ್ರಕೃತ ಶ್ಲೋಕದಲ್ಲಿ ಯೋಗಾತ್ಮನ್ ಎಂದು ಯೋಗಸ್ವರೂಪತ್ವವನ್ನು ಶ್ರೀಕೃಷ್ಣನಿಗೆ ಹೇಳುತ್ತಿರುವುದಿರಂದ, ಚಿತ್ತನಿರೋಧಸ್ವರೂಪತ್ವ ಭಗವಂತನಲ್ಲಿಲ್ಲದ್ದರಿಂದ, ಜ್ಞಾನ ಮತ್ತು ಜ್ಞಾನೋಪಾಯ ರೂಪವಾದ ಯೋಗವೇ ವಿವಕ್ಷಿತವಾಗಿದೆ. ಏಕೆಂದರೆ ಜ್ಞಾನ ಜ್ಞಾನೋಪಾಯಗಳು ಭಗವತ್‌ಸ್ವರೂಪವಾಗಿವೆ.

❖❖❖

ನಿನ್ನ ಸ್ವರೂಪವನ್ನು ಉಪದೇಶಿಸಬಲ್ಲವನು ನೀನೆ ಹೊರತು ಇನ್ನೊಬ್ಬರಿಲ್ಲ. ಅದರಿಂದ ನೀನೇ ಉಪದೇಶಿಸೆಂದು ಉದ್ಧವ ಶ್ರೀಕೃಷ್ಣನನ್ನು ಬೇಡಿಕೊಳ್ಳುತ್ತಾನೆ.

ಸತ್ಯಸ್ಯ ತೇ ಸ್ವದೃಶ ಆತ್ಮನ ಆತ್ಮನೋಽನ್ಯಂ
ವಕ್ತಾರಮೀಶ ವಿಬುಧೇಷ್ವಪಿ ನಾನುಚಕ್ಷೇ ।
ಸರ್ವೇ ವಿಮೋಹಿತಧಿಯಸ್ತವ ಮಾಯಯೇಮೇ
ಬ್ರಹ್ಮಾದಯಸ್ತನುಭೃತೋ ಬಹಿರರ್ಥಭಾವಾಃ ॥ ೧೭ ॥

ನೀನು ಸದ್ಗುಣಪೂರ್ಣ ಸ್ವಪ್ರಕಾಶ ಸರ್ವಸ್ವಾಮಿ. ಹೇ ಪ್ರಭು, ನಿನ್ನ ಸ್ವರೂಪ ವನ್ನು ಉಪದೇಶಿಸಬಲ್ಲವನು ನೀನೆ ಹೊರತು ಬೇರೊಬ್ಬನನ್ನು ದೇವತೆಗಳಲ್ಲಿಯೂ ನಾಕಾಣೆ. ಬ್ರಹ್ಮಾದಿ ದೇವತೆಗಳೆಲ್ಲರೂ ನಿನ್ನಿಚ್ಛೆಯಿಂದ ಬುದ್ಧಿಮೋಹ ಹೊಂದು ವವರೆ. ದೇಹಾಭಿಮಾನದಿಂದ ಬಾಹ್ಯ ವಿಷಯಭೋಗಗಳಲ್ಲಿ ಆಸೆ ಪಡುವವರೆ.

[1]ಬ್ರಹ್ಮಾದಿದೇವತೆಗಳು ಎಲ್ಲರೂ ಶರೀರಧಾರಿಗಳು, ವಿಷ್ಣುಮಾಯೆಗೊಳಗಾಗಿ ~~ಮರುಳಾಗುವವರು ವಿಷಯಪದಾರ್ಥಗಳನ್ನು ಸತ್ಯವೆಂದು ಭ್ರಮಿಸುವವರು~~ ಆತ್ಮವ್ಯತಿರಿಕ್ತವಾದ ದೇಹಾದಿಗಳಲ್ಲಿ ನಾನೆಂದು ಭ್ರಾಂತಿಪಡುವ ಅಜ್ಞರು, ಮೋಕ್ಷವ್ಯತಿರಿಕ್ತವಾದ ಧನಕನಕಾದಿಗಳ ಬಗ್ಗೆ ಮಾತ್ರ ಉಪದೇಶ ಕೊಡುವಲ್ಲಿ ಆಸಕ್ತಿಉಳ್ಳವರು ಮೋಕ್ಷ ಶಾಸ್ತ್ರದಲ್ಲಿ ಆಸಕ್ತಿ ಇಲ್ಲದವರು ಎಂದು ಬೇರೆ ವ್ಯಾಖ್ಯಾನಕಾರರು ವಿವರಣೆ ನೀಡಿದ್ದಾರೆ. ಆದರೆ,

ಋಷಿಮಾದ್ಯಂ ನ ಬಧ್ನಾತಿ ಪಾಪೀಯಾಂಸ್ತ್ವಾಂ ರಜೋಗುಣಃ ।
ಯನ್ಮನೋ ಮಯಿ ನಿರ್ಬದ್ಧಂ ಪ್ರಜಾಃ ಸಂಸೃಜತೋಽಪಿ ತೇ ॥

(ಭಾಗ.3.10.35)

'ನೀನು ಸರ್ವಜ್ಞ, ಜೀವಿಗಳನ್ನು ಸೃಜಿಸು, ಸೃಜಿಸುವಾಗಲೂ ನಿನ್ನ ಮನ ನನ್ನಲ್ಲೆ

---

1. ಬಹಿರರ್ಥಭಾವಾ ವಿಷಯೇಷ್ವರ್ಥಬುದ್ಧಯಃ । -ಶ್ರೀಧರಃ

ಸರ್ವೇಽಪೀಮೇ ಬ್ರಹ್ಮಾದಯೋ ವಿಬುಧಾಸ್ತವ ಮಾಯಯಾ ಮೋಹಿತ ಬುದ್ಧಯಃ ತನುಭೃತಃ ಕರ್ಮಾಧೀನ ದೇಹಭಾಜಃ ಬಹಿರರ್ಥೇಽನಾತ್ಮನಿ ಭಾವೋ ಭಾವನಾ ಅಹಮಿತಿ ಪ್ರತಿಪತ್ತಿರ್ಯೇಷಾಂ ತೇ ಅಜ್ಞಾ ಇತ್ಯರ್ಥಃ । -ವೀರರಾಘವಃ

ತವ ಮಾಯಯಾ ತ್ರಿಗುಣಮಯ್ಯಾ ಶಕ್ತ್ಯಾ ಮೋಹಿತಬುದ್ಧಯಃ ಅತೋ ಬಹಿರರ್ಥಾಃ ಸಪರಿಕರ ಮೋಕ್ಷ ವ್ಯತಿರಿಕ್ತಾಃ ಸಾಧ್ಯಸಾಧನರೂಪಾ ಧನವಿದ್ಯಾದಯಃ ತೇಷು ಭಾವೋ ವಕ್ತುಂ ಪ್ರೀತಿರ್ಯೇಷಾಂ ತೇ ತಥಾ ನ ತು ಮೋಕ್ಷೋಪಾಯಕಥನೇ ಬ್ರಹ್ಮಾದೀನಾಂ ಪ್ರಾಯಶಃ ಪ್ರೀತಿರಿತಿ । -ಶುಕದೇವಃ

ನೆಟ್ಟಿರುತ್ತದೆ. ಹಾಳು ರಜೋಗುಣ ನಿನಗೆ ಬಂಧಕವಾಗುವುದಿಲ್ಲ' ಎಂದು ಸ್ಪಷ್ಟವಾಗಿ ಭಾಗವತದಲ್ಲಿಯೇ ಶ್ರೀಹರಿ ಬ್ರಹ್ಮನ ಗುಣಗಳನ್ನು ಹೊಗಳುತ್ತಾನೆ.

ಯದ್ವಾಚಿ ತಂತ್ಯಾಂ ಗುಣಕರ್ಮ ನಾಮಭಿಃ
ಸ್ವದಾಮಭಿರ್ವತ್ಸ ವಯಂ ಸುಯೋಜಿತಾಃ ।
ಸರ್ವೇ ವಹಾಮೋ ಬಲಿಮೀಶ್ವರಾಯ
ಪ್ರೋತಾ ನಸೀವ ದ್ವಿಪದೇ ಚತುಷ್ಪದಃ ॥ (ಭಾಗ.5.1.14)

'ಮೂಗುದಾರ ಹಾಕಿದ ಎತ್ತುಗಳು ಮನುಷ್ಯರಿಗೆ ಭಾರಹೊರುತ್ತ ಸೇವೆ ಮಾಡುವಂತೆ ನಾವೆಲ್ಲರೂ ವೇದೋಕ್ತವಿಧಿನಿಷೇಧಬದ್ಧರಾಗಿ ಶ್ರೀಹರಿಗೆ ವಿಹಿತ ಕರ್ಮಗಳಿಂದ ಸೇವೆ ಸಲ್ಲಿಸುತ್ತೇವೆ' ಎಂದು ಭಾಗವತವೇ ಹೇಳುವಂತೆ ದೇವತೆಗಳು ವಿಷಯಭೋಗಪದಾರ್ಥ ಸಂಪಾದನೆಗಳನ್ನು ಭಗವತ್ಸೇವಾರೂಪವಾಗಿ ಅವನಾಜ್ಞೆಯಂತೇ ಮಾಡುತ್ತಾರೆ ಹೊರತು ದೇಹಾತ್ಮೈಕ್ಯಾಧ್ಯಾಸ ಮಾಡಿಕೊಂಡು ವಿಷಯ ಭೋಗ ಮಾಡುವ ಅಜ್ಞಾನಿಗಳಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಮೇಲಿನ ಶ್ಲೋಕದಲ್ಲಿ ''ಬ್ರಹ್ಮಾದಿ ದೇವತೆಗಳು ದೇಹಾತ್ಮೈಕ್ಯಾಧ್ಯಾಸ ಮಾಡಿಕೊಂಡು ವಿಷಯಭೋಗ ಮಾಡುವವರು ಅಜ್ಞಾನಿಗಳು ವಿಷಯಭೋಗ ಸಂಪಾದನೆ ರಕ್ಷಣೆಗಳ ಬಗ್ಗೆಯೇ ಪರರಿಗೆ ಉಪದೇಶ ಮಾಡುವುದರಲ್ಲಿ ಆಸಕ್ತರು'' ಎಂದರೆ ಸ್ವವ್ಯಾಹತವಾಗುವುದು. ಬೇರೆ ವ್ಯಾಖ್ಯಾನಕಾರರು ಯಾರೂ ಈ ಸಮಸ್ಯೆಯನ್ನು ಗಮನಿಸಿಲ್ಲ.

ವಸ್ತುತಃ 'ಬ್ರಹ್ಮಾದಯಃ' ಎಂದು ಭಾಗವತವು ಋಜು-ಋಜುಪತ್ನಿಯರನ್ನೂ ಕೂಡ ವಿಷಯ ಮೋಹಕ್ಕೊಳಗಾದವರೆಂದು ಹೇಳಿದರೂ ಅತದ್ಗುಣ ಸಂವಿಜ್ಞಾನ ಬಹುವ್ರೀಹಿ ಸಮಾಸದಿಂದ ರುದ್ರಾದಿಗಳನ್ನೇ ವಿಷಯಮೋಹಉಳ್ಳವರೆನ್ನುವ ಅಭಿಪ್ರಾಯವನ್ನಿಟ್ಟುಕೊಳ್ಳಬೇಕು. ರುದ್ರಾದಿಗಳಿಗೂ ವಿಷಯಮೋಹ ಕದಾಚಿತ್ ಅಸುರಾವೇಶದಿಂದ ಎಂದೂ ತಿಳಿಯಬೇಕು. ದಕ್ಷಯಜ್ಞ ಪ್ರಸಂಗದಲ್ಲಿ ರುದ್ರ ದೇವರೇ ತಾವು ಶ್ರೀಹರಿಯಲ್ಲಿಯೇ ಆಸಕ್ತರು. ವಿಷಯವಿರಕ್ತರು ಎಂದು ಸ್ಪಷ್ಟ ಹೇಳಿದ್ದುಂಟು. (ಭಾಗ.4.8.29) 'ಈಶಾನಾಸಃ ಶವಸಾ ಕ್ರಂತ ಸೂರಯಃ' ವಾಯು ರುದ್ರಾದಿಗಳಿಗೆ ಉಪದೇಶಕನೆಂದಿದೆ. ಬ್ರಹ್ಮಕೇನೋಪನಿಷತ್ತನ್ನು ರುದ್ರನಿಗೆ ಉಪದೇಶಿಸಿದ್ದಾನೆ. ಭಾಗವತವನ್ನು ನಾರದರಿಗೆ ಉಪದೇಶಿಸಿದ್ದಾನೆ. 'ಜ್ಞಾನಾದಿದಾನಂ ದೇವಾನಾಂ ವಿಷ್ಣುನಾ ಸಾಧುಚೋದಿತಂ ವೇದೇ ಚ ತೇಷಾಂ ವಿಹಿತಂ' ಎಂದು ಸೂತ್ರಭಾಷ್ಯ(3.4.46) ದಲ್ಲಿ ವರಾಹವಚನ ಹೇಳುವಂತೆ, ಮೋಕ್ಷಶಾಸ್ತ್ರ ಉಪದೇಶ ಮಾಡುವವರು ಮುಖ್ಯವಾಗಿ ಬ್ರಹ್ಮಾದಿ ದೇವತೆಗಳೇ ಅದರಲ್ಲಿ ಆಸಕ್ತಿ ಇಲ್ಲದವರೆನ್ನಬಾರದು. ಇದನ್ನು ಶ್ರೀಮದಾಚಾರ್ಯರು ತಾತ್ಪರ್ಯದಲ್ಲಿ ಸ್ಪಷ್ಟಪಡಿಸುತ್ತಾರೆ.

ಅಭಗವತ್‌ಸ್ವರೂಪತ್ವಾತ್ ತನುಭೃತ್ತ್ವಂ। ಬಹಿರರ್ಥಾಪೇಕ್ಷಯೈವ ಚ ತೇಷಾಂ ಮೋಹಃ । ಪರಮಸುಖಸಾಧನಾದನ್ಯೋಽರ್ಥೋ ಬಹಿರರ್ಥಃ।

ಬ್ರಹ್ಮಾದಿಗಳು ಭಗವಂತನಂತೆ ಸದಾ ಸ್ವರೂಪಭೂತ ಶರೀರದವರಾಗಿರದೆ, ಪ್ರಾಕೃತಶರೀರದವರಾಗಿರುವುದರಿಂದ 'ಶರೀರಧಾರಿ'ಗಳೆಂದು ಭಾಗವತ ಹೇಳುತ್ತಿದೆ. ('ಭಗವತ್‌ಸ್ವರೂಪತ್ವಾತ್' ಎಂಬ ಪಾಠದಲ್ಲಿ ಭಗವಂತನಿಗಾಗಿ, ಅವನ ಸೇವೆಗಾಗಿಯೇ 'ಸ್ವ-ರೂಪ' ತಮ್ಮ ಶರೀರವೆಂದು ತಿಳಿದು ಅದರಲ್ಲಿ ನಾನು ನನ್ನದೆಂಬ ಅಭಿಮಾನ ತೋರೆದವರಾದ್ದರಿಂದ ಸಾರ್ಥಕಶರೀರಧಾರಣೆ ಮಾಡುವವರಾದ್ದರಿಂದ 'ಶರೀರಧಾರಿ'ಗಳೆಂದು ಭಾಗವತ ಹೇಳುತ್ತದೆ. ಈ ಮೂಲಕ ಬ್ರಹ್ಮಾದಿಗಳು 'ಪ್ರೋತಾ ನಸೀವ' (ಭಾಗ.೫.೧.೧೪) ಎಂದು ಹೇಳಿದಂತೆ ಭಗವಂತನ ಅಧೀನರಾಗಿದ್ದು ಅವನ ಅನುಗ್ರಹವಿಲ್ಲದೆ ತತ್ತ್ವೋಪದೇಶ ಮಾಡಲು ಅಶಕ್ತರೆಂದು ಸೂಚನೆ ಮಾಡುತ್ತಿದೆ.)

'ಬಹಿರರ್ಥ' ಅಂದರೆ ಮೋಕ್ಷಸುಖಕ್ಕಿಂತ, ಮೋಕ್ಷಸುಖಸಾಧನಗಳಿಗಿಂತ ಬೇರೆಯಾದ ವಿಷಯಪದಾರ್ಥ. ಅದರ ಅಪೇಕ್ಷೆಯು ಕದಾಚಿತ್ ಅಸುರಾವೇಶದಿಂದ ರುದ್ರಾದಿಗಳಲ್ಲಿ ಕಂಡುಬರುವುದರಿಂದಲೇ ಅವರಿಗೆ 'ಮೋಹ' ಅಜ್ಞಾನ, ಮಿಥ್ಯಾಜ್ಞಾನ ಬರುತ್ತದೆ ಎಂದು ಸಿದ್ಧವಾಗುತ್ತದೆ. ('ಅವಿಕಾರೌ ಬ್ರಹ್ಮರುದ್ರೌ' ಎಂಬಂತೆ ರುದ್ರನಿಗೂ ಬಹಿರರ್ಥಕಾಮನೆ ಮೋಹಗಳು ಇಲ್ಲ, ಆದರೂ ಕೆಲವೊಮ್ಮೆ ಕಂಡುಬರುತ್ತದೆ. ಬ್ರಹ್ಮನಿಗೆ ಎಂದೂ ಅದು ಇಲ್ಲ, ಅದರಿಂದ 'ಬ್ರಹ್ಮಾದಯಃ' ಎಂಬುದು ಅತದ್ಗುಣಸಂವಿಜ್ಞಾನ ಬಹುವ್ರೀಹಿ ಸಮಾಸದಿಂದ 'ರುದ್ರಾದಿ' ಎಂಬ ಅರ್ಥ ಕೊಡುತ್ತದೆ. ಹೀಗೆ ರುದ್ರಾದಿಗಳು ಅಸುರಾವೇಶಕ್ಕೊಳಗಾಗುವುದರಿಂದಲೂ ಭಗವದನುಗ್ರಹವಿಲ್ಲದೆ ತತ್ತ್ವೋಪದೇಶ ಮಾಡಲು ಅಶಕ್ತರು ಎಂದು ಭಾಗವತ ಹೇಳುತ್ತಿದೆ.)

ಅಶರೀರಃ ಸದಾ ವಿಷ್ಣುಃ ಪೂರ್ಣಾನಂದತ್ವತಃ ಸದಾ ।
ಇಚ್ಛಾ ಚ ಕ್ರೀಡಯೈವಾಸ್ಯ ನ ಫಲಾಯ ಯತೋ ವಿಭೋಃ ।
ಅತೋ ಬಾಹ್ಯಾರ್ಥಕಾಮೋಽಪಿ ನಿಷ್ಕಾಮ ಇತಿ ಕಥ್ಯತೇ ।
ಬ್ರಹ್ಮಾ ನಿರಭಿಮಾನತ್ವಾಚ್ಛರೀರ್ಯಪ್ಯಶರೀರವಾನ್ ।
ನಿತ್ಯಾನಂದೋಪಯೋಗ್ಯನ್ಯ ಕಾಮಸ್ಯೋಜ್ಝಿತಃ ಸದಾ ।
ಬಹಿರರ್ಥವಿನಿರ್ಮುಕ್ತಸ್ತಥಾಪಿ ತನುಧಾರಣಾತ್ ।
ಅಮೂಢೋ ಮೂಢ ಇತಿವದುಚ್ಯತೇ ಚ ಸರಸ್ವತೀ ।
ರುದ್ರಾದ್ಯಾಸ್ತನ್ವಭೀಮಾನಾದ್ ಬಹಿರರ್ಥಯುಜಸ್ತಥಾ ॥

ವಿಷ್ಣು ಸದಾ ಪೂರ್ಣಜ್ಞಾನಂದಮಯನಾದ್ದರಿಂದ ಸದಾ ಪ್ರಾಕೃತ ಶರೀರರಹಿತನಾಗಿರುತ್ತಾನೆ. ಸರ್ವಶಕ್ತನಾದ ಆತ ವಿಷಯಪದಾರ್ಥವನ್ನು ಬಯಸುವುದು ಕೇವಲ ಲೀಲೆಯಿಂದ ಹೊರತು ಅದರಿಂದ ಬರುವ ಸುಖಕ್ಕಾಗಿ ಅಲ್ಲ. ಅದರಿಂದ ಬಾಹ್ಯಾರ್ಥಕಾಮನೆ ಉಳ್ಳವನಾದರೂ ನಿಷ್ಕಾಮನೆನಿಸುತ್ತಾನೆ. ಬ್ರಹ್ಮನು ಪ್ರಾಕೃತ ಶರೀರಧಾರಿಯಾಗಿದ್ದರೂ ಅದರಲ್ಲಿ ಅಭಿಮಾನವಿಲ್ಲದಿರುವವನಾದ್ದರಿಂದ ಶರೀರಿ ಎನಿಸುವುದಿಲ್ಲ. ನಿತ್ಯವಾದ ಸ್ವರೂಪಾನಂದಾಭಿವ್ಯಕ್ತಿಗಿಂತ ಅದರ ಸಾಧನಗಳಾದ ನಿಷ್ಕಾಮಕರ್ಮಗಳಿಗಿಂತ ಬೇರೆಯದರಲ್ಲಿ ಕಾಮನೆ ಅವನಿಗೆ ಎಂದೂ ಇಲ್ಲದ್ದರಿಂದ ಅವನು 'ಬಹಿರರ್ಥಭಾವ'ನಲ್ಲ. ಬಹಿರರ್ಥವಿನಿರ್ಮುಕ್ತನೆ. ಆದರೂ ವಿಷಯಸುಖಸಾಧನವಾಗಬಲ್ಲ ಪ್ರಾಕೃತ ಶರೀರವನ್ನು ಅವನೂ ಧಾರಣ ಮಾಡಿರುವುದರಿಂದ, ಮೋಹರಹಿತನಾದರೂ ಮೋಹಉಳ್ಳವನೆನಿಸುತ್ತಾನೆ. ಸರಸ್ವತಿಯೂ ಹೀಗೇ ಶರೀರಾಭಿಮಾನರಹಿತಳು ಬಹಿರರ್ಥಕಾಮನಾರಹಿತಳು ಮೋಹರಹಿತಳೇ ಆಗಿರುವಳು. ಆದರೂ ಬಹಿರರ್ಥಕಾಮನೆ ಉಳ್ಳವಳು ಮೋಹಉಳ್ಳವಳೆನಿಸುವಳು (ವಾಯು ಭಾರತಿಯರೂ ಬ್ರಹ್ಮ ಸರಸ್ವತಿ ಯರಂತೆಯೇ ಎಂದು ತಿಳಿಯಬೇಕು.) ರುದ್ರಾದಿ ದೇವತೆಗಳು (ರುದ್ರದೇವರು ಅಸುರಾವೇಶಕಾಲದಲ್ಲಿ ಮಾತ್ರ) ಶರೀರಾಭಿಮಾನಉಳ್ಳವರಾದ್ದರಿಂದ ಬಾಹ್ಯ ವಿಷಯಪದಾರ್ಥಗಳನ್ನು ಅಸುರಾವೇಶದಿಂದ ಅಥವಾ ಪ್ರಾರಬ್ಧವಶದಿಂದ ಬಯಸುತ್ತಾರೆ.

ಸರ್ವೇಷಾಂ ಬ್ರಹ್ಮಪದವೀಯೋಗ್ಯಾನಾಂ ಪೂರ್ವಮೇವ ತು ।
ಅಭಾವಸ್ತ್ವಪರೋಕ್ಷಸ್ಯ ಮೋಹೋ ಜ್ಞಾನಸ್ಯ ಭಣ್ಯತೇ ॥
ಬ್ರಹ್ಮಣಸ್ತ್ವಂಶರೂಪೇಷು ಭಾರತ್ಯಾ ಜ್ಞಾನವರ್ಜನಂ ।
ಬ್ರಹ್ಮಗಾಯತ್ರಿಭಾವೇ ತು ನಾಂಶಾವತರಣಂ ಕ್ವಚಿತ್ ।
ಶತಜನ್ಮಸು ಪೂರ್ವಂ ತು ಜ್ಞಾನೋದಯ ಉದೀರ್ಯತೇ ।
ಅಪರೋಕ್ಷೇಣ ಪಾರೋಕ್ಷ್ಯಾತ್ ಪೂರ್ಣಜ್ಞಾನಂ ಸದೈವ ತು ।
ಶತಜನ್ಮಗತಾಯಾಶ್ಚ ಆಪರೋಕ್ಷ್ಯೋಜ್ಝಿತಿರ್ಭವೇತ್ ।
ಕ್ವಚಿತ್ ಕ್ವಚಿತ್ ಸರಸ್ವತ್ಯಾ ಅಂಶಾವತರಣೇಷ್ವಿತಿ ॥

ಇತಿ ಶಕ್ತಿವಿವೇಕೇ ॥

ಬ್ರಹ್ಮಪದವಿಯೋಗ್ಯರಿಗೆ ಬ್ರಹ್ಮಪದವಿಪ್ರಾಪ್ತಿಗೆ ಮೊದಲು ನೂರು ಜನ್ಮಗಳಿಗಿಂತ ಪೂರ್ವದಲ್ಲಿ ಅಪರೋಕ್ಷಜ್ಞಾನಾಭಾವವೇ ಮೋಹ ಎನಿಸುತ್ತದೆ, ಹೊರತು ಮಿಥ್ಯಾಜ್ಞಾನವಿರುವುದಿಲ್ಲ. ವಾಯುವಿಗೂ ಭಾರತಿಗೂ ಭೀಮಸೇನ ದ್ರೌಪದಿ ಮುಂತಾದ ಅವತಾರ ರೂಪಗಳಲ್ಲಿ ಕದಾಚಿತ್ ಅಪರೋಕ್ಷ ವ್ಯಕ್ತವಾಗದಿರುವುದು ಮೋಹವೆನಿಸುತ್ತದೆ. (ಏಕೆಂದರೆ 'ಇಚ್ಛಾವ್ಯಕ್ತಿ ಪ್ರಾಯಶೋ ಮಾರುತಸ್ಯ' ಇಚ್ಛೆ

ಇಲ್ಲದಿದ್ದಾಗ ಅಪರೋಕ್ಷ ವ್ಯಕ್ತವಾಗದಿರಬಹುದು.) ಬ್ರಹ್ಮಸರಸ್ವತಿ ಪದವಿಗಳಲ್ಲಿ ಅವರಿಗೆ ಅಂಶದಿಂದ ಅವತಾರವೇ ಇರುವುದಿಲ್ಲ, ನೂರುಜನ್ಮಗಳಲ್ಲಿ ಮೊದಲನೆ ಜನ್ಮದಲ್ಲಿ ಅಪರೋಕ್ಷಜ್ಞಾನೋದಯವಾಗುತ್ತದೆ. ಪರೋಕ್ಷಜ್ಞಾನವು ಪೂರ್ಣ ವಾಗಿ ಹಿಂದೆಯೂ ಸದಾ ಇರುತ್ತದೆ. ಸರಸ್ವತಿಗೆ ನೂರುಜನ್ಮಗಳಲ್ಲಿಯೂ ಕೂಡ ಭಾರತೀಜನ್ಮಕ್ಕಿಂತ ಪೂರ್ವದಲ್ಲಿ ಆಗಾಗ ಅಪರೋಕ್ಷವಿಲ್ಲವಾಗುವುದುಂಟು. ಹೀಗೆಂದಮೇಲೆ ಭಾರತಿಯಾಗಿರು ವಾಗ ಅವಳಿಗೆ ಅಂಶಾವತಾರಗಳಲ್ಲಿ ಅಪರೋಕ್ಷ ಆಗಾಗ ಇಲ್ಲವಾಗುವುದೆಂದು ಬೇರೆ ಏನು ಹೇಳಬೇಕು?' ಎಂದು ಶಕ್ತಿವಿವೇಕ ಗ್ರಂಥದಲ್ಲಿ ಹೇಳಿದೆ.

ಅಶರೀರೋ ವಾಯುರಭ್ರಂ ವಿದ್ಯುತ್ ಸ್ತನಯಿತ್ನುರಶರೀರಾಣಿ ವಾ ಏತಾನಿ । ಇತಿ ಚ ಶ್ರುತಿಃ ॥

ಶ್ರುತಿಭಿಃ ಸ್ತನಿತತ್ವಾತ್ತು ಸ್ತನಯಿತ್ನುರ್ಹರಿಃ ಸ್ಮೃತಃ ।
ಅಭ್ರಂ ಭೂತಾಭಿಭರಣಾಚ್ಛ್ರೀರ್ವಾಯುರ್ಭರತಃ ಸ್ಮೃತಃ ।
ವಿದ್ಯುತ್ತು ಭಾರತೀ ಪ್ರೋಕ್ತಾ ಏತ ಏವಾಶರೀರಿಣಃ ।
ವ್ಯತ್ಯಾಸೇನಾಪಿ ನಾಮ ಸ್ಯಾದೇತೇಷಾಂ ಮಹತಾಂ ಸದಾ ॥
ಇತ್ಯುಭಯನಿರುಕ್ತೇ ॥

'ವಾಯು ಅಶರೀರ. ಅಭ್ರ ವಿದ್ಯುತ್ ಸ್ತನಯಿತ್ನು ಇವರೂ ಅಶರೀರರು' ಎಂದು ಛಾಂದೋಗ್ಯ ಶ್ರುತಿ ಹೇಳುತ್ತಿದೆ.

ಉಭಯನಿರುಕ್ತ ಗ್ರಂಥದಲ್ಲಿ ಸ್ತನಯಿತ್ನು ಅಭ್ರ ವಿದ್ಯುತ್ ಶಬ್ದಗಳಿಗೆ ಅರ್ಥವಿವರಣೆ ಇದೆ—'ಶ್ರುತಿಗಳಲ್ಲಿ ವಿಶೇಷವಾಗಿ ಪ್ರತಿಪಾದಿಸಲ್ಪಡುವುದರಿಂದ ಶ್ರೀಹರಿ 'ಸ್ತನಯಿತ್ನು' ಎನಿಸುತ್ತಾನೆ. ಪ್ರಾಣಿಗಳನ್ನು ಚೆನ್ನಾಗಿ ಭರಿಸುವುದರಿಂದ ಲಕ್ಷ್ಮೀದೇವಿ 'ಅಭ್ರ'ಳೆನಿಸುವಳು . (ಅಭಿ ಭೃ ಅ, ಇಕಾರಲೋಪ) ವಾಯುವಿಗೆ ಭರತನೆಂದು ಹೆಸರಿದೆ. ಭರತನ ಪತ್ನಿ ಭಾರತಿ 'ವಿದ್ಯುತ್' ಎನಿಸುತ್ತಾಳೆ. ಇವರೇ ಶರೀರಾಭಿಮಾನ ರಹಿತರು, ಅಶರೀರಿಗಳು. ಇವರು ಮಹಾತ್ಮರಾದ್ದರಿಂದ ಅವರ ಹೆಸರುಗಳು ವ್ಯತ್ಯಾಸವಾಗಿಯೂ ಕಂಡುಬರುವುವು' ಎಂದು.

❖❖❖

ಉದ್ಧವ ಶ್ರೀಕೃಷ್ಣನಿಂದ ಜ್ಞಾನೋಪದೇಶವನ್ನು ಬಯಸಿ ಶರಣು ಹೊಂದುತ್ತಾನೆ—

ತಸ್ಮಾದ್ಭವಂತಮನವದ್ಯಮನಂತಪಾರಂ
ಸರ್ವಜ್ಞಮೀಶ್ವರಮಖಂಡವಿಕುಂಠಧಿಷ್ಣ್ಯಮ್ ।

ನಿರ್ವೇದಧೀರಹರಹರ್ವ್ಯಜಿನಾಭಿತಪ್ತೋ
ನಾರಾಯಣಂ ನರಸಖಂ ಶರಣಂ ಪ್ರಪದ್ಯೇ ॥ ೧೮ ॥

ಅದರಿಂದ ನಿನ್ನ ಸ್ವರೂಪವನ್ನು ತಿಳಿಯಲು ನನಗೆ ನೀನೆ ಉಪದೇಶಿಸೆಂದು ಪೂಜ್ಯನಾದ ನಿನ್ನನ್ನೇ ಮೊರೆಹೋಗುತ್ತೇನೆ. ನಿನ್ನ ಮಹಿಮೆಗೆ ಪಾರವಿಲ್ಲ, ಸರ್ವಜ್ಞ ಸರ್ವಶಕ್ತ ನಿರ್ದೋಷನಾಗಿರುವೆ. ನಿನ್ನ ಸ್ಥಾನ ನಿನಗೆಂದೂ ತಪ್ಪುವುದಿಲ್ಲ, ನಾಶವಾಗುವುದೂ ಇಲ್ಲ. ಹೇ ಹರಿ, ನಾರಾಯಣಮುನಿಯೇ ನೀನು ಕೃಷ್ಣನಾಗಿ ಅವತರಿಸಿರುವೆ. ಅವನಂತೆ ನೀನೂ ಉಪದೇಶಲೀಲೆಯನ್ನು ತೋರು. ನರಾಂಶಯುಕ್ತನಾದ ಅರ್ಜುನನ ಸಖ ನೀನು. ಅರ್ಜುನನಿಗೆ ಹೇಗೋಹಾಗೆ ನನಗೂ ಉಪದೇಶಿಸು.

[1]ಎಲ್ಲ ಜೀವರಿಗೂ ಅನುಗ್ರಹ ಮಾಡಲು ಅವತರಿಸಿದವನಾದ್ದರಿಂದ ನನ್ನ ಮೇಲೂ ಅನುಗ್ರಹ ಮಾಡಿ ತತ್ತ್ವೋಪದೇಶ ನೀಡೆಂದು ಉದ್ಧವ ಕೇಳಿಕೊಳ್ಳುತ್ತಾನೆ ಎಂದು ಶ್ರೀಧರವ್ಯಾಖ್ಯಾನ ಜೀವಗೋಸ್ವಾಮಿ ವ್ಯಾಖ್ಯಾನಗಳು ಹೇಳುತ್ತವೆ.

ಆದರೆ 'ಪರಿತ್ರಾಣಾಯ ಸಾಧೂನಾಂ' ಎಂಬಂತೆ ಸಜ್ಜನರಿಗೆ ಅನುಗ್ರಹ ಮಾಡಲು ಶ್ರೀಕೃಷ್ಣ ಅವತರಿಸಿದ್ದಾನೆ, ಎಲ್ಲ ಜೀವರಿಗೆ ಅನುಗ್ರಹಮಾಡುವುದಕ್ಕಲ್ಲ.

[2]ನರ ಎಂದರೆ ಇಲ್ಲಿ ಅರ್ಜುನ. ಅವನಿಗೆ ಉಪದೇಶ ಮಾಡಿದವನು, ನನಗೂ ಉಪದೇಶಿಸೆನ್ನುತ್ತಾನೆಂದು ಶುಕದೇವ ವ್ಯಾಖ್ಯಾನ ವೀರರಾಘವ ವ್ಯಾಖ್ಯಾನಗಳು ಹೇಳುತ್ತವೆ. ಆದರೆ ನರನು ಶೇಷಾವತಾರ. ಅರ್ಜುನ ಇಂದ್ರಾವತಾರ. ಆ ನರನೇ ಈ ಅರ್ಜುನ ಎನ್ನುವುದು ಹೇಗೆ? ಶ್ರೀಮದಾಚಾರ್ಯರು ಹೇಳುತ್ತಾರೆ.

ಅರ್ಜುನ ನರನಲ್ಲದಿದ್ದರೂ ನರಾವೇಶಿಯಾದ್ದರಿಂದ ನರನೆಂದು ಉದ್ಧವ ಹೇಳುತ್ತಿದ್ದಾನೆ.

ವಿಷ್ಣೋರ್ವಾಯೋರನಂತಸ್ಯ ತ್ರಿಭಿರಂಶೈರ್ನರಃ ಸ್ಮೃತಃ ।
ಸೇಂದ್ರೈಶ್ಚತುರ್ಭಿಃ ಪಾರ್ಥಸ್ತು ದ್ವಾಭ್ಯಾಂ ತು ಬಲಲಕ್ಷ್ಮಣೌ ॥
ಇತ್ಯಂಶವಿವೇಕೇ ॥

---

1. ನರೋ ಜೀವಸ್ತಸ್ಯ ಸಖಾಯಂ । -ಶ್ರೀಧರಃ
ನರಸುಖಂ ನರಮಾತ್ರಾನುಗ್ರಹಾಯಾವತೀರ್ಣಂ । -ಜೀವಗೋಸ್ವಾಮಿ
2. ನರಸಖಮಿತ್ಯನೇನ ಅಖಿಲಾಧ್ಯಾತ್ಮ ತತ್ತ್ವೋಪದೇಶಾರ್ಥಂ ಬದ್ಧದೀಕ್ಷ ನಾರಾಯಣಾವತಾರ ರೂಪತ್ವಮರ್ಜುನಾದಿ ಮುಖೇನ ತದುಪದೇಷ್ಟೃತ್ವಂ ಚ ವ್ಯಜ್ಯತೇ । -ವೀರರಾಘವಃ
ನರಸಖಮಿತಿ – ಯೇನಾರ್ಜುನಂ ಪ್ರತ್ಯುಕ್ತಂ ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯೇತಿ ತೇನಾರ್ಜುನಸ್ಯ ಸಖಾಯಂ । -ಶುಕದೇವ

ವಿಷ್ಣು ವಾಯು ಶೇಷರೆಂದು ಮೂರು ಅಂಶಗಳಿಂದ ಯುಕ್ತನಾದವನು ನರ. ವಿಷ್ಣುವಿನ ಶುಕ್ಲಕೇಶರೂಪ-ವಾಯು-ಶೇಷರು ಮತ್ತು ವಿಷ್ಣುವಿನ ಮೂಲರೂಪ ಹೀಗೆ ನಾಲ್ವರು, ಇಂದ್ರನೊಂದಿಗೆ ಅರ್ಜುನನಾಗಿ ಅವತರಿಸಿರುವರು. ಬಲರಾಮ ಲಕ್ಷ್ಮಣರಿಬ್ಬರೂ ವಿಷ್ಣುವಿನ ಶುಕ್ಲಕೇಶರೂಪ ಮತ್ತು ಶೇಷ ಎಂದು ಎರಡು ಅಂಶಗಳಿಂದ ಯುಕ್ತರಾಗಿರುವರು. ಎಂದು ಅಂಶ ವಿವೇಕ ಗ್ರಂಥದಲ್ಲಿದೆ.

❖❖❖

ಲೋಕಾನುಭವದಿಂದ ಪರತತ್ವವನ್ನು ತಿಳಿದು ಮೋಕ್ಷಸಾಧನೆ ಮಾಡುವುದು ಸಾಧ್ಯವೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಪ್ರಾಯೇಣ ಮನುಜಾ ಲೋಕೇ ಲೋಕತತ್ತ್ವವಿಚಕ್ಷಣಾಃ ।
ಸಮುದ್ಧರಂತಿ ಹ್ಯಾತ್ಮಾನಮಾತ್ಮನೈವಾಶುಭಾಶಯಾತ್ ॥ ೧೯ ॥

ಬುದ್ಧಿವಂತನಾದ ಮನುಷ್ಯರು ಲೋಕದಲ್ಲಿ ಇನ್ನೊಬ್ಬರ ಉಪದೇಶ ವಿಲ್ಲದೆಯೂ ತಮ್ಮ ಬುದ್ಧಿಶಕ್ತಿಯಿಂದಲೇ ಲೋಕದ ಮತ್ತು ತತ್ವದ ವಿಷಯದಲ್ಲಿ ಚೆನ್ನಾಗಿ ತಿಳಿದುಕೊಂಡು ಹರಿಗುರು ಭಕ್ತಿಯಿಂದ ಅಪರೋಕ್ಷವನ್ನು ಸಂಪಾದಿಸಿ ಸಂಸಾರಕೂಪದಿಂದ ಉದ್ಧಾರ ಮಾಡಿಕೊಳ್ಳುತ್ತಾರೆ.

[1]ಒಳ್ಳೆಯ ಬುದ್ಧಿವಂತನಲ್ಲದಿದ್ದರೂ ಒಳ್ಳೆಯ ಗುರುವಿನ ಉಪದೇಶ ಪಡೆಯ ದಿದ್ದರೂ ತನ್ನ ಬುದ್ಧಿ ಬಲದಿಂದಲೇ ಲೋಕದ ಏಳು ಬೀಳುಗಳ ಕಾರಣಗಳನ್ನು ವಿಚಾರಮಾಡಿ ತಿಳಿಯಬಲ್ಲವನು ವಿಷಯಾಕರ್ಷಣೆಯಿಂದ ತನ್ನನ್ನು ಮುಕ್ತಗೊಳಿಸ ಬಲ್ಲ ಎಂದು ಬೇರೆ ವ್ಯಾಖ್ಯಾನಕಾರರು ವಿವರಣೆ ನೀಡುತ್ತಾರೆ.

ಇದನ್ನು ಒಪ್ಪುವುದಾದರೆ ಶಾಸ್ತ್ರವಾಙ್ಮಯ ಪ್ರಪಂಚವೇ ನಿರರ್ಥಕ. ಗುರೂಪದೇಶ ವ್ಯರ್ಥ. 'ಗುರುವಿನ ಗುಲಾಮನಾಗದತನಕ ದೊರೆಯದಣ್ಣ ಮುಕುತಿ' ಎನ್ನುವ ಮಾತಿಗೆ ಅರ್ಥವಿಲ್ಲ. ವಸ್ತುತಃ ಗುರೂಪದೇಶದಿಂದ ಶಾಸ್ತ್ರದಲ್ಲಿ ಹೇಳಿದ ಪರತತ್ವ ವಿಚಾರವನ್ನು ತಿಳಿದು ಲೋಕಾನುಭವ ಬಲದಿಂದ ದೃಢಪಡಿಸಿ ಕೊಂಡರೆ ಹರಿಗುರುಭಕ್ತಿ ಲಭಿಸುವುದರಿಂದ ಬೇಗನೆ ವಿಷಯಾಕರ್ಷಣೆಯಿಂದ ಹೊರಗೆ ಬರುವುದು ಸುಲಭವಾಗುವುದು. ಅದರಿಂದ ಪರತತ್ವ ವಿಚಾರಕ್ಕೆ ಲೋಕಾನುಭವವು ಪೂರಕವಾಗಿಯೇ ಅಪೇಕ್ಷಣೀಯವಾಗಿದೆ. ಬರಿ ಲೋಕಾನುಭವ

1. ಹೇ ಉದ್ಧವ, ತ್ವತ್ತೋ ನಿಕೃಷ್ಟಾ ಅಪಿ ಗುರೂಪದೇಶಂ ವಿನಾಪಿ ಸ್ವೀಯ ಬುದ್ಧಿ ಬಲಾದೇವ ತತ್ವಂ ಜಾನಂತೋ ದೃಶ್ಯಂತೇ । ದೃಶ್ಯಮಾನ ಲೋಕಭದ್ರಾಭದ್ರಹೇತುವಿಚಾರಪ್ರವೀಣಾ ಅಶುಭಾಶಯಾತ್ ವಿಷಯವಾಸನಾತಃ । - ವಿಶ್ವನಾಥಃ

ಸಾಕೆಂದು, ಅದು ಪರತತ್ವವಿಚಾರಕ್ಕೆ ಪರ್ಯಾಯವೆಂದು ಬಗೆದರೆ ಅದರಿಂದ ಅನರ್ಥವೇ ಆಗುವುದು. ಭಾಗವತದ ಲೋಕತತ್ವ ವಿಚಕ್ಷಣ ಶಬ್ದಕ್ಕೆ ಲೋಕತತ್ವದಲ್ಲಿ ವಿಚಕ್ಷಣ ಎಂದು ಅರ್ಥವಲ್ಲ, ಲೋಕ ಮತ್ತು ತತ್ವ, ಅಂದರೆ ಪರತತ್ವ ಇವೆರಡರಲ್ಲಿ ವಿಚಕ್ಷಣನಾದರೆ ಪ್ರಾಯಃ ಮೋಕ್ಷಸಾಧನೆ ಸುಲಭವಾಗುವುದು ಎಂದರ್ಥ.

ಲೋಕೇ ತತ್ವೇ ಚ ವಿಚಕ್ಷಣಾಃ ।

ಲೋಕವಿಚಾರ ತತ್ವವಿಚಾರಗಳೆರಡರಲ್ಲಿ ಪಾರಂಗತರಾದವರು ಪ್ರಾಯಃ ಮೋಕ್ಷಸಾಧನೆ ಮಾಡಿಕೊಳ್ಳಬಲ್ಲರು.

ಪಾರೋಕ್ಷ್ಯೇಣೈವ ತತ್ವಂ ತು ಲೋಕಂ ಚಾಪಿ ವಿದಂತಿ ಯೇ ।
ತೇಽಪಿ ಸತ್‌ಸ್ನೇಹನಿರ್ಮುಕ್ತಾಸ್ತಮೋ ಯಾಂತಿ ವಿನಿಶ್ಚಯಾತ್ ।
ಅಪರೋಕ್ಷ್ಯಂ ನ ಚ ಜ್ಞಾನಂ ತೇಷಾಮುತ್ಪದ್ಯತೇ ಕ್ವಚಿತ್ ॥

ಇತಿ ಷಾಡ್ಗುಣ್ಯೇ ।

ಭಾಗವತ ಶ್ಲೋಕದಲ್ಲಿ ಪ್ರಾಯೇಣ ಎಂದುದರ ಅಭಿಪ್ರಾಯವಿದು— ಅನುಭವಾರೂಢವಾಗಿ ಮಾಡಿಕೊಳ್ಳದಿದ್ದ ಶಾಸ್ತ್ರಜ್ಞಾನವನ್ನೂ ಲೌಕಿಕ ಸುಖಸಾಧನ ಜ್ಞಾನವನ್ನೂ ಸಂಪಾದಿಸಿದವರು ಆ ಲೋಕಜ್ಞಾನದಲ್ಲಿ ಹುರುಳಿಲ್ಲವೆಂದು ಕಂಡು ಹರಿಗುರುಭಕ್ತಿಯನ್ನು ಸಂಪಾದಿಸಿಕೊಳ್ಳದಿದ್ದರೆ ಶಾಸ್ತ್ರಜ್ಞಾನವನ್ನೂ ಅನುಭವರೂಢವಾಗಿ ಮಾಡಿ ದೃಢಪಡಿಸಿಕೊಳ್ಳದಿದ್ದರೆ ಅವರಿಗೆ ಅಪರೋಕ್ಷಜ್ಞಾನವೆಂದೂ ಉಂಟಾಗದು. ಹರಿಗುರುಗಳಲ್ಲಿ ಭಕ್ತಿಹೀನರಾಗಿ ದ್ವೇಷಮಾಡಿ ಅವರು ತಮಸ್ಸನ್ನೇ ಪಡೆಯುವುದು ನಿಶ್ಚಯ ಎಂದು ಷಾಡ್ಗುಣ್ಯವೆಂಬ ಗ್ರಂಥದಲ್ಲಿದೆ.

❖❖❖

'ಎಲ್ಲವನ್ನೂ ಬಿಟ್ಟ ಸನ್ನ್ಯಾಸಿಯಾದ ನಿನಗೆ ಸುಖವೇತರಿಂದ?' ಎಂದು ಯದುಮಹಾರಾಜ ಅವಧೂತನನ್ನು ಕೇಳುತ್ತಾನೆ.

ತ್ವಂ ಹಿ ನಃ ಪೃಚ್ಛತಾಂ ಬ್ರಹ್ಮನ್ನಾತ್ಮನ್ಯಾನಂದಕಾರಣಮ್ ।
ಬ್ರೂಹಿ ಸ್ಪರ್ಶವಿಹೀನಸ್ಯ ಭವತಃ ಕೇವಲಾತ್ಮನಃ ॥ ೩೦ ॥

ಬ್ರಾಹ್ಮಣ, ನಾವು ಕೇಳುತ್ತಿದ್ದೇವೆ, ನಿನಗೆ ನಿನ್ನ ಈ ಶರೀರ ಒಂದು ಹೊರತಾಗಿ ತನ್ನದೆಂಬುದಿಲ್ಲದವನು ನೀನು. ವಿಷಯಭೋಗಗಳನ್ನು ಮಾಡದವನು. ಆದರೂ ನಿನ್ನ ಅಂತರಂಗದಲ್ಲಿ ಆನಂದ ತುಂಬಿರಲು ಕಾರಣವೇನು ಹೇಳು.

ಇಲ್ಲಿ ಕೇವಲಾತ್ಮನೆಂದರೆ ಹೆಂಡತಿ ಮಕ್ಕಳಿಲ್ಲದವನೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಹೆಂಡತಿ ಮಕ್ಕಳಿಲ್ಲದಿದ್ದರೂ ತನ್ನ ಆರೈಕೆಯನ್ನು ತಾನೇ ಮಾಡಿಕೊಂಡು ಸುಖವಾಗಿರಬಹುದು. ಅದರಿಂದ ಈ ವಿವರಣೆ ತೃಪ್ತಿಕರವಾಗಿಲ್ಲ.

ವೀರರಾಘವ ವ್ಯಾಖ್ಯಾನದಲ್ಲಿ ನೀನು ನಿನ್ನ ಶರೀರಕ್ಕೆ ವಿಷಯಪದಾರ್ಥ ಸಂಪರ್ಕವಿಲ್ಲದಿದ್ದರೂ ಆನಂದಪಡುವುದು ಹೇಗೆ? ಎಂದು ಪ್ರಶ್ನೆಯ ಅಭಿಪ್ರಾಯವನ್ನು ಹೇಳುತ್ತಾರೆ. ಆದರೆ ಅವಧೂತ ಅವನ ಶರೀರಕ್ಕೆ ವಿಷಯ ಪದಾರ್ಥಸಂಪರ್ಕ ಬಾರದಂತೆ ತಡೆಯುವುದಿಲ್ಲ.

ಶ್ರೀಮದಾಚಾರ್ಯರು ಹೇಳುತ್ತಾರೆ 'ಆತ್ಮ' ಎಂದರೆ ಶರೀರ ಇಲ್ಲಿ ವಿವಕ್ಷಿತವಾಗಿದೆ. 'ಕೇವಲ ಆತ್ಮ' ಕೇವಲ ಶರೀರವನ್ನು ಮಾತ್ರ ಮೋಕ್ಷಸಾಧನೆಗಾಗಿ ಕಾಪಾಡಿಕೊಳ್ಳುವಿ. ಯಾವ ವಿಷಯಪದಾರ್ಥಗಳನ್ನೂ ಗಳಿಸಿ ಕಾಪಾಡಿಕೊಳ್ಳುವುದಿಲ್ಲ. ಆದರೂ ನಿನಗೆ ಸುಖ ಏತರಿಂದ? ಎಂದು ರಾಜ ಕೇಳುತ್ತಿದ್ದಾನೆ.

ಕೇವಲಾತ್ಮನಃ ಶರೀರಮಾತ್ರ ಪರಿಗ್ರಹಸ್ಯ ।

ಕೇವಲಾತ್ಮನೆಂದರೆ ಶರೀರ ಹೊರತು ಬೇರೇನೂ ತನ್ನದೆಂಬುದು ಇಲ್ಲದವನು ಎಂದರ್ಥ.

❖❖❖

ಅವಧೂತನು ತಾನು ಭೂಮಿಯಿಂದ ಕಲಿತ ಪಾಠವನ್ನು ಯದುಮಹಾರಾಜನಿಗೆ ಹೇಳುತ್ತಾನೆ—

ಶಶ್ವತ್ಪರಾರ್ಥಸರ್ವೇಹಾಂ ಪರಾರ್ಥೈಕಾಂತಸಂಭವಮ್ ।
ಸಾಧುಃ ಶಿಕ್ಷೇತ ಭೂಮೇಶ್ಚ ಅನುಶಿಕ್ಷಂ ವ್ರತಾಂತರಮ್ ॥ ೩೮ ॥

ಸಜ್ಜನರ ಲಾಭಕ್ಕಾಗಿಯೇ ತನ್ನ ಎಲ್ಲ ಪ್ರವೃತ್ತಿ, ಸಜ್ಜನರ ಉಪಯೋಗಕ್ಕಾಗಿಯೇ ತನ್ನ ಸಂಪತ್ತು ಎಂದು ಸಜ್ಜನರು ತಿಳಿಯಬೇಕು. ಈ ಇನ್ನೊಂದು ಪಾಠವನ್ನೂ ನಾನು ಭೂಮಿಯನ್ನು ನೋಡಿ ಕಲಿತುಕೊಂಡೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಶ್ಲೋಕಪಾಠ ಹೀಗಿದೆ—

ಶಶ್ವತ್ ಪರಾರ್ಥಸರ್ವೇಹಃ ಪರಾರ್ಥೈಕಾಂತ ಸಂಭವಃ ।
ಸಾಧುಃ ಶಿಕ್ಷೇತ ಭೂಭೃತ್ತೋ ನಗಶಿಷ್ಯಃ ಪರಾತ್ಮತಾಂ ॥

ಈ ಪಾಠದಲ್ಲಿ ಅವಧೂತನು ತಾನು 'ಭೂಮಿಯಿಂದ ಏನು ಪಾಠಕಲಿತೆನೆ'ಂದು ಹೇಳಲು ಹೊರಟು, 'ವೃಕ್ಷಗಳಿಗೆ ಶಿಷ್ಯನಾಗಿ ಪರ್ವತದಿಂದ ಪಾಠ ಕಲಿತೆನೆ'ನ್ನುತ್ತಾನೆ. ಇದು ಅಸಂಗತ.

ವ್ಯಾಖ್ಯಾನಕಾರರು ಪರ್ವತ ವೃಕ್ಷಗಳು ಭೂಮಿಯ ಭಾಗಗಳೇ ಎಂದು ಸಮಾಧಾನ ಹೇಳುತ್ತಾರೆ. ಅದು ತೃಪ್ತಿಕರವಲ್ಲ. ಭೂಮಿಯಲ್ಲಿ ಹೊಲಗದ್ದೆ ತೋಟ ಕಾಡು ಎಂದು ಅನೇಕ ಭಾಗಗಳಿವೆ. ವೃಕ್ಷಗಳಂತೆ ಪ್ರಾಣಿಪಶುಪಕ್ಷಿ ಮಾನವ ಮುಂತಾದ ಭಾಗಗಳೂ ಇವೆ. ಈ ರೀತಿ ಭಾಗಗಳನ್ನು ಹೇಳುವುದರ ಔಚಿತ್ಯವೇನಿಲ್ಲ. ಶ್ಲೋಕದ ಈ ಪಾಠವೆ ವಾಸ್ತವವಾಗಿದ್ದರೆ ಸ್ಥಿತಸ್ಯ ಗತಿಶ್ಚಿಂತನೀಯಾನ್ಯಾಯದಿಂದ ಏನಾದರೂ ವಿವರಣೆ ಕೊಡಬೇಕಾಗಿತ್ತು.

ಸುಂದರವಾದ ಪ್ರಾಚೀನಪಾಠ ಬೇರೆಯೇ ಇದೆ. ಅದರಲ್ಲಿಯೂ 'ಪರಾರ್ಥೈಕಾಂತ ಸಂಭವಂ' ಎನ್ನುವಲ್ಲಿ ಬೇರೆ ವ್ಯಾಖ್ಯಾನಕಾರರು ಹೇಳುವಂತೆ ಸಂಭವ ಎಂಬುದಕ್ಕೆ ಉತ್ಪತ್ತಿ ಎಂದು ಅರ್ಥ ಹೇಳಿದರೆ 'ಭೂಮಿಯ ಉತ್ಪತ್ತಿ ಪರಾರ್ಥಕ್ಕೆಂದೇ ಇದೆ' ಎಂದಂತಾಗುತ್ತದೆ. ಆದರೆ ಭೂಮಿಯ ಉತ್ಪತ್ತಿಯನ್ನು ಅವಧೂತ ಕಾಣುತ್ತಿಲ್ಲ. ಭೂಮಿಯಲ್ಲಿರುವ ಸಂಪತ್ತನ್ನು ಕಾಣುತ್ತಿದ್ದಾನೆ. 'ವಸುಂಧರಾ' ಎಂದು ಭೂಮಿಗೆ ಹೆಸರೇ ಇದೆ. 'ವಸು' ಎಂದರೆ ಸಸ್ಯಾದಿಸಂಪತ್ತು. ಅದು ಪರರಿಗಾಗಿ ಹೊರತು ತನ್ನ ಉಪಯೋಗಕ್ಕಾಗಿ ಇರುವುದಿಲ್ಲ. ಅವಧೂತನು ಇದನ್ನು ಕಂಡು ಪಾಠ ಕಲಿಯುತ್ತಾನೆ. ಸಜ್ಜನರು ತಮ್ಮ ಐಹಿಕ ಸಂಪತ್ತನ್ನು ಸ್ವೋತ್ತಮರು ಅಧಮರು ಎನ್ನದೆ ಎಲ್ಲ ಸಜ್ಜನರ ಹಿತಕ್ಕಾಗಿ ಬಳಸಿಕೊಳ್ಳಬೇಕು, ಪಾರತ್ರಿಕ ಸಂಪತ್ತನ್ನು ಹರಿಗುರುಗಳ ಆರಾಧನೆಗಾಗಿ ಬಳಸಬೇಕು ಎಂದು.

ಪರಾರ್ಥೈಕಾಂತಸಂಭವಂ ಆತ್ಮನೋ ವೃದ್ಧಿಶ್ಚ ಪರಾರ್ಥೇತಿ ।
ಸಜ್ಜನಾರ್ಥೇಽನುಮನ್ಯೇತ ಐಹಿಕೀಂ ವೃದ್ಧಿಮಾತ್ಮನಃ ।
ಪಾರತ್ರಿಕೀಮೈಹಿಕೀಂ ಚ ಪ್ರೀತಯೇ ಗುರುದೇವಯೋಃ ।
ದೇವತಾನಾಂ ಚ ಸರ್ವೇಷಾಂ ಸ್ವೋತ್ತಮಾನಾಂ ಚ ಸರ್ವಶಃ ॥
ಇತಿ ಚ ॥

'ಪರಾರ್ಥೈಕಾಂತ ಸಂಭವಂ' ಎಂದರೆ ತನ್ನ ಸಂಪತ್‌ಸಮೃದ್ಧಿ ಪರರಿಗಾಗಿ ಎಂದರ್ಥ. ಇದಕ್ಕೆ ವಿವರಣೆ ಷಾಡ್ಗುಣ್ಯವಚನದಲ್ಲಿ ಹೀಗಿದೆ— ತನ್ನ ಐಹಿಕ ಸಮೃದ್ಧಿಯನ್ನು ಎಲ್ಲ ಸಜ್ಜನರಿಗಾಗಿ ಉಪಯೋಗಿಸಬೇಕು. ಪಾರತ್ರಿಕವಾದ ಜ್ಞಾನಭಕ್ತ್ಯಾದಿ ಸಂಪತ್ತನ್ನು ಮತ್ತು ಐಹಿಕ ಧನಧಾನ್ಯಾದಿ ಸಂಪತ್ತನ್ನು ಗುರುದೇವರ ಪ್ರೀತಿಗಾಗಿ ಬಳಸಬೇಕು. ದೇವರೆಂದರೆ ಎಲ್ಲ ದೇವತೆಗಳು, ಗುರುಗಳೆಂದರೆ ಸ್ವೋತ್ತಮರೆಲ್ಲರೂ ಎಂದಿಟ್ಟುಕೊಳ್ಳಬೇಕು.

❖❖❖

ಆಕಾಶದಿಂದ ತಾನೇನು ಪಾಠ ಕಲಿತೆನೆಂದು ಅವಧೂತನು ಯದುಮಹಾರಾಜನಿಗೆ ಹೇಳುತ್ತಾನೆ.

ಅಂತರ್ಬಹಿಶ್ಚ ಸ್ಥಿರಜಂಗಮೇಷು
ಬ್ರಹ್ಮಾತ್ಮಭಾವೇನ ಸಮನ್ವಯೇನ ।
ವ್ಯಾಪ್ತ್ಯಾಽವ್ಯವಚ್ಛೇದಮಸಂಗಮಾತ್ಮನೋ
ಮುನಿರ್ನಭೋವದ್ವಿತತಸ್ಯ ಭಾವಯೇತ್ ॥ ೪೨ ॥

ಆಕಾಶವು ಸ್ಥಾವರ ಜಂಗಮ ಪ್ರಾಣಿಗಳಲ್ಲಿ ಒಳಗೂ ಹೊರಗೂ ವ್ಯಾಪಿಸಿರುವುದರಿಂದ ಹೊರಗಿದ್ದರೂ ಒಳಗೆ, ಒಳಗಿದ್ದರೂ ಹೊರಗೆ ಅದರ ವ್ಯಾಪ್ತಿಗೆ ಕುಂದಿಲ್ಲ. ಅವುಗಳ ಗುಣದೋಷಗಳಿಂದ ಅದಕ್ಕೆ ಲೇಪವೂ ಇಲ್ಲ. ಹಾಗೆ ಸರ್ವವ್ಯಾಪ್ತನಾದ ಪರಮಾತ್ಮ ಎಲ್ಲ ಸ್ಥಾವರಜಂಗಮಗಳೊಳಗೆ ಅಂತರ್ಯಾಮಿಯಾಗಿದ್ದು ಹೊರಗೂ ವ್ಯಾಪಿಸಿದ್ದಾನೆ. ಅವನ ವ್ಯಾಪ್ತಿಗೆ ಕುಂದಿಲ್ಲ. ಅವುಗಳ ಗುಣದೋಷಗಳಿಂದ ಲೇಪವೂ ಇಲ್ಲ. ಇದನ್ನು ಮುನಿ ಚಿಂತಿಸಬೇಕು.

~~ಇಲ್ಲಿ 'ಅಂತರ್ಹಿತಶ್ಚ ಸ್ಥಿರಜಂಗಮೇಷು' ಎಂದು ಬೇರೆ ವ್ಯಾಖ್ಯಾನಕಾರರ ಪಾಠ.~~

[1]ದೇಹದೊಳಗಿರುವ ಜೀವಾತ್ಮ ಅಣುವಾಗಿದ್ದರೂ ವಸ್ತುತಃ ಅವನು ದೇಹಸಂಗರಹಿತ, ವ್ಯಾಪಕನೆಂದು ಶ್ರೀಧರೀವ್ಯಾಖ್ಯಾನ ಹೇಳುತ್ತದೆ.

[2]ಶ್ರೀಧರೀವ್ಯಾಖ್ಯಾನದ ಮೇಲೆ ಶುಕದೇವ ವ್ಯಾಖ್ಯಾನ ಹೀಗೆ ಆಕ್ಷೇಪಿಸುತ್ತದೆ. ಜೀವಾತ್ಮನು ಅಣುರ್ಹ್ಯೇಷ ಆತ್ಮಾ ಎಂಬ ಶ್ರುತಿಯಲ್ಲಿ ಅಣು ಎಂದು ಪ್ರಸಿದ್ಧನಾಗಿದ್ದಾನೆ. ಅಣುವಾಗಿರುವವನು ವ್ಯಾಪಕ ಹೇಗಾಗುತ್ತಾನೆ?

---

1. ಅಂತರ್ಹಿತಶ್ಚ ದೇಹಾಂತರ್ಗತೋಽಪಿ ಮುನಿರಾತ್ಮನೋ ದೇಹಾದ್ಯಸಂಗಂ ಅತ ಏವಾವ್ಯವಚ್ಛೇದಂ ಚ ಭಾವಯೇತ್ । ಕುತಃ? ಸ್ಥಿರಜಂಗಮೇಷು ಸಮನ್ವಯೇನ ಯಾ ವ್ಯಾಪ್ತಿಸ್ತಯಾ । ಕಿಂ ಮಣಿಷು ಸೂತ್ರಸ್ಯೇವ ವ್ಯಾಪ್ತಿಃ? ನ । ವಿತತಸ್ಯ ಸರ್ವಗತಸ್ಯ । ತತ್ ಕುತಃ ಬ್ರಹ್ಮಾತ್ಮಭಾವೇನ ಬ್ರಹ್ಮಸ್ವರೂಪಭಾವನಯಾ ತತ್ತ್ವಮಸೀತಿ ಶ್ರುತೇಃ । -ಶ್ರೀಧರಃ
   ಸಮನ್ವಯೇನ ಅಧಿಷ್ಠಾನತಯಾಽನುಗಮೇನ ಜೀವಸ್ಯ ವಿತತತ್ವಂ । -ರಾಧಾರಮಣದಾಸಃ
   ನನ್ವೇತತ್ ಸರ್ವಂ ಕಥಂ ಸಂಭವತಿ ತತ್ರಾಹ ನಭಸ್ತ್ವಂ ತತ್ತುಲ್ಯತ್ವಂ ಭಾವಯೇತ್ ಯಥಾ ನಭಸಃ ಸರ್ವಗತಸ್ಯ ನ ಘಟಾದಿಭಿಃ ಸಂಗಃ ಪರಿಚ್ಛೇದೋ ವಾ ಏವಮಾತ್ಮನೋಽಪಿ ಸಂಭವತೀತಿ । -ಶ್ರೀಧರಃ
2. ಅಣುರ್ಹ್ಯೇಷ ಆತ್ಮೇತಿ ಶ್ರುತಿಪ್ರತಿಪಾದಿತಸ್ಯಾನ್ವಯೇನ ಸರ್ವವ್ಯಾಪ್ತ್ಯಸಂಭವಾತ್ । ಅಣುಸ್ವರೂಪಸ್ಯ ವ್ಯಾಪಕ ಸ್ವರೂಪೈಕ್ಯಭಾವನಾಪಿ ನಿರರ್ಥಿಕೈವ ಸ್ಯಾತ್ । ನಹಿ ಪರಮಾಣುರ್ಮೇರುಭಾವನಯಾ ಮೇರುರ್ಭವತಿ । -ಶುಕದೇವಃ

'ಅನ್ವಯದಿಂದ ವ್ಯಾಪಕನಾಗುತ್ತಾನೆ. ಅಂದರೆ, ಇದು ಘಟ ಇದು ಪಟ ಇದು ಮನೆ ಇದು ಮಠ ಎಂದು ಅಣುವಾದ ಜೀವಾತ್ಮನೂ ಎಲ್ಲಕಡೆ ಇದು ಇದು ಎಂದು ವ್ಯಾಪಕ ನಾಗುತ್ತಾನೆ. ಇದು ಹೇಗೆ ಸಾಧ್ಯ ಎಂದರೆ 'ನಭಸ್ತ್ವಂ ಭಾವಯೇತ್' ನಭಸ್ತ್ವವೆಂದರೆ ಆಕಾಶತ್ವ. ಜೀವಾತ್ಮನಲ್ಲಿ ಆಕಾಶತ್ವವಿಲ್ಲದಿದ್ದರೂ ಆಕಾಶತುಲ್ಯತ್ವ ವನ್ನು ಅಂದರೆ ವ್ಯಾಪಕತ್ವವನ್ನು ಚಿಂತಿಸಬೇಕು. ಆಗ ಅವನು ವ್ಯಾಪಕನೇ ಆಗುತ್ತಾನೆ' ಎಂದು ಶ್ರೀಧರವ್ಯಾಖ್ಯಾನ.

ಅಣು ಮತ್ತು ಅವಿದ್ಯಾಸಂಗಉಳ್ಳವನು ಜೀವಾತ್ಮ ಅವನನ್ನು ವ್ಯಾಪಕ ಅಸಂಗನಾದ ಪರಮಾತ್ಮನೆಂದು ಚಿಂತಿಸಿದ ಮಾತ್ರಕ್ಕೆ ವ್ಯಾಪಕ ಅಸಂಗನಾಗುವನೆ? ಸಾಸಿವೆಕಾಳನ್ನು ಬೆಟ್ಟವೆಂದು ಚಿಂತಿಸಿದ ಮಾತ್ರಕ್ಕೆ ಬೆಟ್ಟವಾಗಿಬಿಡುವುದೆ? ಮತ್ತು ಅಣುವನ್ನು ವ್ಯಾಪಕವೆಂದು ಚಿಂತಿಸುವುದಾದರೂ ಹೇಗೆ ಸಾಧ್ಯ ಎಂದು ಶುಕದೇವವ್ಯಾಖ್ಯಾನ.

ಅಣುವ್ಯಾಪಕಗಳು ಒಂದಾಗಲಾರವು ನಿಜ. ಆದರೆ ಅಣುವಿನಲ್ಲಿ ಅಣುತ್ವವನ್ನು ವ್ಯಾಪಕದಲ್ಲಿ ವ್ಯಾಪಕತ್ವವನ್ನು ಬಿಟ್ಟರೆ ಎರಡೂ ಒಂದಾಗಲು ಅಡ್ಡಿಯಿಲ್ಲ. 'ತತ್ವಮಸಿ' ಎಂಬಂತೆ. ತತ್ ಎಂದರೆ ಸರ್ವಜ್ಞ ಪರಮಾತ್ಮ, ತ್ವಂ ಎಂದರೆ ಅಲ್ಪಜ್ಞ ಜೀವಾತ್ಮ. ಅವರಲ್ಲಿ ಸರ್ವಜ್ಞತ್ವ ಅಲ್ಪಜ್ಞತ್ವಗಳನ್ನು ಬಿಟ್ಟರೆ ಎರಡೂ ಒಂದಾಗುವುವು ಎಂದು ಶ್ರೀಧರವ್ಯಾಖ್ಯಾನ.

ಆದರೆ ಅಣುತ್ವ ವ್ಯಾಪಕತ್ವಗಳನ್ನು ಬೇಡವೆಂದು ನಾವು ಬಿಟ್ಟರೂ ಜೀವಾತ್ಮ ಪರಮಾತ್ಮರು ಏಕೆ ಬಿಡುತ್ತಾರೆ? ಬಿಡಲು ಕಾರಣವಿಲ್ಲ ತಾನೆ? ವೈಕುಂಠವರ್ಣನೆ ಯಲ್ಲಿ ಶ್ರೀವಾದಿರಾಜರು ಹೇಳುತ್ತಾರೆ—

ದ್ವಾಸುಪರ್ಣೆಂಬ ವೇದ ಭೇದವನೆ ಪೇಳೆ ಸ
ರ್ವೇಶ ನಾನೆಂಬ ಮತದಾಸೆ ಸಲ್ಲ
ಈಶತನ ಪೋದಮೇಲಾದೀತೆಂಬ ಮಾತು ವಿಚಾ
ರೀಸಲು ಕೂಡದು ನಿನಗೋಸುಗ ತನ್ನ
ಈಶತ್ವವನು ಚೆನ್ನಕೇಶವನು ಬಿಡನು
ಈ ಶ್ರುತಿಯ ಬಲದಿಂದೀಶತೆಯ ಪೋಕಳಿಸು
ವಾಸೆ ಬೇಡೀಶತ್ವ ಪೋದ ಮೇಲೀ ಶ್ರುತಿಯು
ಈಶನೈಕ್ಯವ ಪೇಳ್ವುದೈಸೆಯಾಗೀಶ್ವತ್ವವ

ಪೂಸಿ ಮಾಡದರಿಂದಲೆ ಹೇಸಿ ಇಂತಕ್ಕು ಅನ್ಯೋ
ನ್ಯಾಶ್ರಯ ಸಿಕ್ಕು ಸಾಕು ನಿನ್ನಯ ಸೊಕ್ಕು ॥
ಅಂದು ಭೃಗುಮುನಿ ಬಂದು ಚಂದದ ವಕ್ಷವ ಕಾಲಿ
ನಿಂದಲೊದೆಯಲವನ ಕುಂದನೆ ನೋಡದೆ
ಇಂದಿರೇಶನು ತನ್ನ ಈಶತ್ವ ರಕ್ಷಿಸಿದ
ನೆಂದುಕೊಂಡಾಡಿದ ಶ್ರುತಿಯೆಂದು ಹರಿಯ ತನ್ನ
ತಂದುಪಕಾರಿಯ ಚಂದವಾದ ಸಿರಿಯ ಕುಂದಿಸದೆಂದರಿಯ ॥

ಭೃಗುಮುನಿ ಬಂದು ಎದೆಗೆ ಒದ್ದರೂ ಕೋಪಿಸಿಕೊಳ್ಳದೆ ಶ್ರೀಹರಿ ತನ್ನ ಈಶತ್ವವನ್ನು ಸರ್ವೋತ್ತಮತ್ವವನ್ನು ಚೆನ್ನಾಗಿ ನಿರೂಪಿಸಿದನೇ ಹೊರತು ಬಿಟ್ಟುಕೊಡಲಿಲ್ಲ. ಆದರಿಂದ ನಾವು ಹರಿಯ ಈಶತ್ವವನ್ನು ಬಿಟ್ಟು ಬಿಡಬಲ್ಲೆವೆ?

ಬಿಡಬಲ್ಲೆವು, ಬಿಡುವುದೆಂದರೆ, ಇಲ್ಲ, ಮಿಥ್ಯೆ ಎಂದು ತಿಳಿದುಕೊಳ್ಳುವುದು. ಅದನ್ನು ನಾವು ಮಾಡಬಲ್ಲೆವು ಎಂದರೆ ಈಶತ್ವ ಮಿಥ್ಯೆಯಲ್ಲ, ಸತ್ಯವೆಂದು ಭೃಗುಮುನಿಗೆ ಶ್ರೀಹರಿ ತಾನೇ ನಿರೂಪಿಸಿದ್ದಾನೆ. ವೇದೋದ್ಧಾರವನ್ನೂ ಮಾಡಿ ತನ್ನ ಈಶತ್ವ ಅರ್ಥಕ್ರಿಯಾಕಾರಿಯಾಗಿದೆ, ಎಂದು ತೋರಿಸಿದ್ದಾನೆ. ಅವನ ಈಶತ್ವ ಹಗ್ಗದಲ್ಲಿ ಕಂಡ ಮಿಥ್ಯೆಯಾದ ಹಾವಲ್ಲ, ನಿಜವಾದ ಬುಸುಗುಟ್ಟುವ ಹಾವು ಎಂದು ತಿಳಿಸಿದ್ದಾನೆ.

ವಸ್ತುತಃ ಈ ಭಾಗವತಶ್ಲೋಕ ಜೀವೇಶ್ವರೈಕ್ಯವನ್ನು ಹೇಳುತ್ತಿಲ್ಲ. ಅಂತರ್ಯಾಮಿ ಹಾಗೂ ವ್ಯಾಪಕ ಭಗವದ್ರೂಪಗಳಿಗೆ ಐಕ್ಯವನ್ನು ಹೇಳುತ್ತದೆ. ಅಣೋರಣೀಯಾನ್ ಮಹತೋಮಹೀಯಾನ್ ಆಗಬಲ್ಲ ಅಚಿಂತ್ಯಶಕ್ತಿಯಿಂದ ದೇಹದೊಳಗಿರುವ ಅಂತರ್ಯಾಮಿ ಅಣುವಾಗಿದ್ದರೂ ದೇಹಸಂಗ ರಹಿತನಾಗಿದ್ದು ವ್ಯಾಪಕನೇ ಆಗಿದ್ದಾನೆ ಎಂದು, ಇದನ್ನು ವಸ್ತುಗಳ ಒಳಗೂ ಹೊರಗೂ ಇರುವ ಅವ್ಯಾಕೃತಾಕಾಶಗಳಿಗೆ ಭೇದವಿಲ್ಲ ಹೇಗೋ ಹಾಗೆ ತಿಳಿಯಬೇಕೆಂದು ಅವಧೂತ ಹೇಳುತ್ತಿದ್ದಾನೆ.

ಪ್ರಮಾಣ ಸಿದ್ಧವಾದ ಪ್ರಮೇಯದ ದಾರ್ಢ್ಯಕ್ಕೆ ಆಕಾಶವು ನಿದರ್ಶನ ಹೊರತು ಪ್ರಮಾಣಗಳಿಗೆ ಯುಕ್ತಿಗೆ ವಿರುದ್ಧವಾದ ವಿಷಯವನ್ನು ಅದು ಸಾಧಿಸಿಕೊಡಲಾರದು. ಇಲ್ಲದಿದ್ದರೆ, ಆಕಾಶ ಜಡವಾದ್ದರಿಂದ ಅದರಂತೇ ಜೀವಾತ್ಮನೂ ಜಡವೆನ್ನಬೇಕಾದೀತು. ಅವಧೂತನ ಇಪ್ಪತ್ತನಾಲ್ಕು ಗುರುಗಳೂ ಕೂಡ ಹೀಗೇ ಅವನ ಶಾಸ್ತ್ರಜ್ಞಾನಕ್ಕೆ ನಿದರ್ಶನವಾಗುತ್ತಾರೆ ಎಂದು ತಿಳಿಯಬೇಕು.

ಜೀವಾಂತರ್ಯಾಮಕೋ ವಿಷ್ಣುರಾತ್ಮನಾಮಾ ಸಮೀರಿತಃ ।
ತಸ್ಯ ತು ಬ್ರಹ್ಮರೂಪತ್ವಾದ್ ಬಹಿರಂತಸ್ತಥೈವ ಚ ।
ಪಶ್ಯೇದಾಕಾಶವದ್ ವ್ಯಾಪ್ತಿಮಸಂಗತ್ವಂ ಚ ನಿತ್ಯಶಃ ॥
ಇತಿ ತಂತ್ರಭಾಗವತೇ ॥

ಜೀವಾಂತರ್ಯಾಮಿರೂಪಿಯಾದ ವಿಷ್ಣು ಆತ್ಮನಾಮಕನಾಗಿದ್ದಾನೆ. ಅವನೇ 'ಬ್ರಹ್ಮ' ಎಂಬ ರೂಪದವನೂ ಆದ್ದರಿಂದ ಆ ರೂಪದಲ್ಲಿ ಹೊರಗೂ ವ್ಯಾಪ್ತನಾದ್ದರಿಂದ ಅವನಿಗೆ ಆಕಾಶದಂತೆ ವ್ಯಾಪ್ತಿಯನ್ನೂ ಅಸಂಗತ್ವವನ್ನೂ ಸದಾ ತಿಳಿಯಬೇಕು ಎಂದು ತಂತ್ರಭಾಗವತದಲ್ಲಿ ಹೇಳಿದೆ.

❖ ❖ ❖

ಇಪ್ಪತ್ತನಾಲ್ಕು ನಿದರ್ಶನಗಳಲ್ಲಿ ಕೆಲವುಕಡೆ 'ಈ ರೀತಿ ನಾನಾಗಬೇಕೆಂ'ದು, ಕೆಲವು ಕಡೆ 'ಈ ರೀತಿ ಪರಮಾತ್ಮನಿದ್ದಾನೆ' ಎಂದು ಪಾಠ ಕಲಿಯುತ್ತಾನೆ, ಅವಧೂತಮುನಿ.

ತೇಜೋಽಂಬ್ವನ್ನಮಯೈರ್ಭಾವೈರ್ಮೇಘಾದ್ಯೈರ್ವಾಯುನೇರಿತೈಃ ।
ನ ಸ್ಪೃಶ್ಯತೇ ನಭಸ್ತದ್ವತ್ಕಾಲಸೃಷ್ಟೈರ್ಗುಣೈಃ ಪುಮಾನ್ ॥ ೪೩ ॥

ಆಕಾಶವು ಗಾಳಿಯಿಂದ ಬರುವ ಮೋಡ ಮುಂತಾದ ಅಗ್ನಿ ಜಲ ಪೃಥಿವೀ ಮಯವಾದ ವಸ್ತುಗಳಿಂದ ಲೇಪ ಹೊಂದುವುದಿಲ್ಲ, ಹಾಗೇ ಕಾಲವಶದಿಂದ ಬಂದೊದಗುವ ಅಗ್ನಿ ಜಲ ಪೃಥಿವಿಮಯವಾದ ವಿಷಯ ಪದಾರ್ಥಗಳಿಂದ ಪರಮಾತ್ಮ ಯಾವುದೇ ಮನೋವಿಕಾರಕ್ಕೊಳಗಾಗುವುದಿಲ್ಲ ಎಂದು ತಿಳಿಯಬೇಕು. ಜ್ಞಾನಿಯೂ ಮನೋವಿಕಾರ ಹೊಂದಬಾರದು. ಹಾಗೆ ಯತ್ನಿಸಬೇಕು.

[1]'ಜೀವಾತ್ಮನಲ್ಲಿ ಆಗಾಗ ಬಂದು ಹೋಗುವ ಶರೀರಾದಿ ಸಂಬಂಧಗಳಿಂದ ಏನೂ ವಿಕಾರವಾಗುವುದಿಲ್ಲ, ಆಕಾಶದಲ್ಲಿ ಮೋಡ ಮಳೆಗಾಳಿಗಳಿಂದ ವಿಕಾರ ಹೇಗೆ ಇಲ್ಲವೋ ಹಾಗೆ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ.

ಆದರೆ ಜೀವಾತ್ಮ ನಿರ್ವಿಕಾರನೆನ್ನುವುದು ಅನುಭವ ವಿರುದ್ಧ, ಪರಮಾತ್ಮನೆ ನಿರ್ವಿಕಾರ. ಜೀವೇಶ್ವರೈಕ್ಯ ಪ್ರಮಾಣವಿರುದ್ಧ, ಅದರಿಂದ ಈ ನಿದರ್ಶನದಿಂದ

---

1. ಕೂಟಸ್ಥಸ್ಯಾತ್ಮನೋ ನಾಗಮಾಪಾಯಿ ದೇಹಾದಿ ಸಂಬಂಧ ಇತ್ಯಾಹ। ತೇಜೋಽ ಬನ್ನ ಮಯೈಃ ಕಾಲಸೃಷ್ಟೈರ್ಗುಣೈರ್ದೇಹಾದಿಭಿಃ ಪುಮಾನ್ ನ ಸ್ಪೃಶ್ಯತ ಇತಿ ನಭೋವತ್ ಸಂಭವತೀತಿ' ।
-ಶ್ರೀಧರಃ

ಪರಮಾತ್ಮ ನಿರ್ವಿಕಾರನೆಂದೂ, ತಾನೂ ಮೋಕ್ಷದಲ್ಲಿ ಹಾಗಾಗಬೇಕೆಂದೂ ಪಾಠ ಕಲಿಯುತ್ತಾನೆ ಅವಧೂತಮುನಿ. ಪರಮಾತ್ಮ ವ್ಯಾಪಕನೆಂದೂ ಅಚಿಂತ್ಯಶಕ್ತಿಯಿಂದ ಅಣುವೂ ಆಗಬಲ್ಲನೆಂದೂ ತಾನೆಂದೂ ಹಾಗಾಗಲಾರೆನೆಂದೂ ಪಾಠ ಕಲಿಯುತ್ತಾನೆ. ತಾನೇ ಪರಮಾತ್ಮನಾಗುವೆನೆಂದಲ್ಲ. ಹೀಗೆ ಕೆಲವು ಗುಣಗಳು ನನ್ನಲ್ಲಿ ಬರಲು ಯೋಗ್ಯ, ಅವುಗಳನ್ನು ಸಂಪಾದಿಸುವೆನು, ಕೆಲವು ಗುಣಗಳು ನನ್ನಲ್ಲಿ ಬರಲು ಯೋಗ್ಯವಲ್ಲ, ಪರಮಾತ್ಮನಲ್ಲಿಯೇ ಇರುವಂಥವು. ಅವು ಪರಮಾತ್ಮನಲ್ಲಿ ಇವೆ ಎಂದು ತಿಳಿಯುವೆನು ಎಂದು ಅವಧೂತಮುನಿ ಯದುಮಹಾರಾಜನಿಗೆ ಹೇಳುತ್ತಾನೆ.

ಗುಣಾನ್ ಜೀವಸ್ಯ ಚೇಷ್ಟವ್ಯಾನ್ ಸಿದ್ಧಾನ್ ವಿಷ್ಣೋರ್ಗುಣಾಂಸ್ತಥಾ ।
ತತ್ತದ್ ದೃಷ್ಟ್ವಾ ವಿಚಿನ್ವೀತ ಪೃಥಗೇವ ಸುಧೀಃ ಸದಾ ।

ಇತಿಲೋಕತತ್ವೇ ।

ಜೀವನಿಗೆ ಸಂಪಾದಿಸಲು ಯೋಗ್ಯವಾದ ಗುಣಗಳು ಕೆಲವು, ವಿಷ್ಣುವಿನಲ್ಲಿ ಮಾತ್ರ ಇರುವ ಗುಣಗಳು ಕೆಲವು ಹೀಗೆ ಲೋಕದಲ್ಲಿ ಕಂಡುಬರುವ ಗುಣಗಳಲ್ಲಿ ವಿವೇಚನೆ ಮಾಡಿ ಬೇರೆಬೇರೆಯಾಗಿ ಬುದ್ಧಿವಂತನು ಸದಾ ತಿಳಿಯಬೇಕು ಎಂದು ಲೋಕತತ್ವಗ್ರಂಥದಲ್ಲಿದೆ.

❖❖❖

ಅವಧೂತಮುನಿ ತಾನು ನೀರಿನಿಂದ ಏನು ಪಾಠ ಕಲಿತೆನೆಂಬುದನ್ನು ಯದುಮಹಾರಾಜನಿಗೆ ಹೇಳುತ್ತಾನೆ.

ಸ್ವಚ್ಛಃ ಪ್ರಕೃತಿತಃ ಸ್ನಿಗ್ಧೋ ಮಧುರಸ್ತೀರ್ಥವನ್ನೃಣಾಮ್ ।
ಮುನಿಃ ಪುನಾತ್ಯಘಾನ್ ಮಿತ್ರಮೀಕ್ಷಣಸ್ಪರ್ಶಕೀರ್ತನೈಃ ॥ ೪೪ ॥

ಜಲ ಸ್ವಭಾವತಃ ಸ್ವಚ್ಛ. ಸ್ನೇಹ ಮಾಧುರ್ಯಗುಣಉಳ್ಳದ್ದು. ಗಂಗಾದಿ ತೀರ್ಥಜಲ ದರ್ಶನ ಸ್ಪರ್ಶನ ಕೀರ್ತನೆಗಳಿಂದ ಪಾಪ ಪರಿಹಾರಕವೂ ಆಗುತ್ತದೆ. ಪರಮಾತ್ಮನೂ ಸದಾ ಸ್ವಚ್ಛ. ಸ್ನೇಹಪರ ಮಧುರ. ದರ್ಶನ ಸ್ಪರ್ಶನ ಕೀರ್ತನಗಳಿಂದ ಪಾಪ ಪರಿಹಾರ ಮಾಡುತ್ತಾನೆ. ಜ್ಞಾನಿಯೂ ಸ್ವಭಾವತಃ ಸ್ವಚ್ಛ, ಸ್ನೇಹಪರ ಮಧುರ ಸುಖಕರ ಸ್ವಭಾವದವನಾಗಿದ್ದು ದರ್ಶನ ಸ್ಪರ್ಶನ ಕೀರ್ತನಗಳಿಂದ ಸಜ್ಜನರ ಪಾಪ ಪರಿಹಾರ ಮಾಡುತ್ತಾನೆ.

ಮಾಧುರ್ಯ ಎಂದರೆ ಸವಿ, ನಾಲಿಗೆಯಿಂದ ಮಾತ್ರವೇ ತಿಳಿದು ಬರುವ

ಷಡ್ರಸಗಳಲ್ಲಿ ಒಂದು ಎಂದು ಪ್ರಸಿದ್ಧಿ. ಆದರೆ ಅದನ್ನು ತನ್ನಲ್ಲಿ ಬೆಳೆಸಿಕೊಳ್ಳಲು ಅವಧೂತಮುನಿ ಯತ್ನಿಸುವುದಾಗದು. ಅದಕ್ಕೆ ಮಧುರಾಲಾಪ, ಸವಿನುಡಿ ಎಂದು ಪ್ರಾಯಃ ಎಲ್ಲ ಬೇರೆ ವ್ಯಾಖ್ಯಾನಕಾರರು ವಿವರಣೆ ನೀಡುತ್ತಾರೆ. ಶುಕದೇವ ವ್ಯಾಖ್ಯಾನ ಮಾತ್ರ 'ಮಧುರ ವಾಗಾದಿ ವೃತ್ತಿಮಾನ್' ನಡೆನುಡಿಗಳೆಲ್ಲವೂ ಆಕರ್ಷಕ ವಾಗಿರುವುದೆಂದು ಹೇಳಿದೆ. ಆದರೆ ಅಷ್ಟೇ ಸಾಲದು, ಆಕೃತಿಯೂ ಸುಂದರವಾಗಿರ ಬೇಕು. ಪರಮಾತ್ಮನ ಆಕೃತಿ ಪರಮಸುಂದರ. ಅದನ್ನು ಉಪಾಸನೆ ಮಾಡಿದರೆ ಸುಂದರವಾದ ಆಕೃತಿಯೂ ಲಭ್ಯವಾಗುವುದು. 'ಸುಖೇ ರತಿಃ' ಸುಖಕರವಾದ ಆಕೃತಿಯಲ್ಲಿ ಆಸಕ್ತಿ, ಅದರದೇ ಚಿಂತನೆ, ಉಪಾಸನೆಯನ್ನು ಕಲಿಯಬೇಕು. ಸ್ವಚ್ಛವಾದ ಗಂಗಾಜಲ ಹಾಗೆ ಪಂಚೇಂದ್ರಿಯಗಳಿಗೂ ಸುಖಕರವಾದ ಆಕೃತಿ ಉಳ್ಳದು. ಅದನ್ನು ನೋಡಿ, ಇಂಥ ಆಕೃತಿಯು ಪರಮಾತ್ಮನಲ್ಲಿ ನಿತ್ಯಸಿದ್ಧವಾಗಿದ್ದು ಜೀವನು ಉಪಾಸನೆಯಿಂದ ಯಥಾಶಕ್ತಿ ಸಂಪಾದಿಸಬಹುದೆಂದು ಅವಧೂತ ಪಾಠ ಕಲಿಯುತ್ತಾನೆ.

ಮಧು ನಾಮ ಸುಖಂ ವಿದ್ಯಾನ್ಮಾಧುರ್ಯಂ ಸುಖ ಹೇತುತಾ ।
ಸುಖೇ ರತಿರ್ವಾ ಸಂಪ್ರೋಕ್ತಾ ಶಬ್ದತತ್ವವಿಚಕ್ಷಣೈಃ ॥
ಇತಿ ಶಬ್ದನಿರ್ಣಯೇ ॥

ಮಧು ಎಂದರೆ ಸುಖ. ಅದರಿಂದ ಮಾಧುರ್ಯವೆಂದರೆ ಸುಖಕಾರಣತ್ವ ಎಂದು ಒಂದು ಅರ್ಥ. ಮಧು ಅಂದರೆ ಸುಖಸ್ವರೂಪವಾದ ಪರಮಾತ್ಮನ ಆಕೃತಿಯಲ್ಲಿ ರತಿ, ಆಸಕ್ತಿ ಅಂದರೆ ಉಪಾಸನೆ ಎಂದು ಇನ್ನೊಂದರ್ಥವೆಂದು ಶಬ್ದನಿರ್ಣಯದಲ್ಲಿದೆ.

❖❖❖

ಅವಧೂತಮುನಿ ಅಗ್ನಿಯಿಂದ ಕಲಿತುದನ್ನು ಯದುಮಹಾರಾಜನಿಗೆ ಹೇಳುತ್ತಾನೆ.

ತೇಜಸ್ವೀ ತಪಸಾ ದೀಪ್ತೋ ದುರ್ಧರ್ಷೋ ದೂರಭಾಜನಃ ।
ಸರ್ವಭಕ್ಷೋಽಪಿ ಯುಕ್ತಾತ್ಮಾ ನಾದತ್ತೇ ಪಾಪಮಗ್ನಿವತ್ ॥ ೪೫ ॥

ಅಗ್ನಿ ಜ್ವಲಿಸುತ್ತದೆ. ಜ್ವಾಲೆಯಿಂದ ಬೆಳಕು ಚೆಲ್ಲುತ್ತದೆ. ಮುಟ್ಟಿ ಆರಿಸಲಾಗದು. ದೂರದಿಂದಲೇ ಸೇವಿಸಬೇಕು. ಪವಿತ್ರ ಅಪವಿತ್ರವೆಂದು ಭೇದವಿಲ್ಲದೆ ಎಲ್ಲವನ್ನೂ ಸುಡುತ್ತದೆ. ತಾನು ಅಪವಿತ್ರವಾಗುವುದಿಲ್ಲ. ಹಾಗೇ ಭಗವದ್ಭಕ್ತನಾದ ಜ್ಞಾನಿಯೂ

ಕೂಡ ಬ್ರಹ್ಮವರ್ಚಸ್ಸಿನಿಂದ ಜ್ವಲಿಸುತ್ತಾನೆ. ತಪಸ್ಸಿನಿಂದ ಜ್ಞಾನದ ಬೆಳಕನ್ನು ನೀಡುತ್ತಾನೆ. ದೈಹಿಕವಾಗಿ ಯಾರೂ, ರಾಜನೂ ಕೂಡ, ಅವನನ್ನು ಶಿಕ್ಷಿಸಬಾರದು. ದೂರದಿಂದ ಸೇವೆ ಮಾಡಬೇಕು. ಆಪತ್ಕಾಲದಲ್ಲಿ ಅವನು ನಿಷಿದ್ಧಾನ್ನ ಉಂಡರೂ ಅವನಿಗೆ ದೋಷವಿಲ್ಲ.

ಇಲ್ಲಿ 'ದುರ್ಧರ್ಷೋऽದರಭಾಜನಃ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ.

[1]'ಮಾನಾಪಮಾನಾದಿದ್ವಂದ್ವಗಳಿಂದ ಕ್ಷೋಭೆಗೊಳ್ಳದವನು ಮತ್ತು ಭಿಕ್ಷಾನ್ನವನ್ನು ಕೂಡಿಡಲೆಂದು ಪಾತ್ರೆಯನ್ನಿಟ್ಟುಕೊಳ್ಳದೆ ಹೊಟ್ಟೆಯನ್ನು ಮಾತ್ರ ತುಂಬಿಸಿಕೊಳ್ಳುವ ಅಪರಿಗ್ರಹವ್ರತಧಾರಿಯೇ 'ದರ್ಧರ್ಷೋऽದರಭಾಜನ' ದರ್ಧರ್ಷನೂ ಉದರಭಾಜನನೂ ಆಗಿರುವ ಯತಿ' ಎಂದು ಬೇರೆ ವ್ಯಾಖ್ಯಾನಕಾರರ ವಿವರಣೆ.

ಆದರೆ ಕ್ಷೋಭೆಗೊಳ್ಳದಿರುವುದು ಅಗ್ನಿಯಿಂದ ಕಲಿಯಬೇಕಾದ ಪಾಠವಲ್ಲ. 'ಜ್ವಲತಿ ಚಕಿತೇಂಧನೋऽಗ್ನಿಃ' ಕಟ್ಟಿಗೆ ಅಲ್ಲಾಡಿಸಿದರೆ ಬೆಂಕಿ ಧಗ್ಗನೆ ಉರಿಯುತ್ತದೆ ಕ್ಷೋಭೆ ಗೊಳ್ಳುತ್ತದೆ. ಆಹಾರ ಸಾಮಗ್ರಿಗಳನ್ನು ಕೂಡಿಡದಿರುವುದೂ ಅವಧೂತರಿಗೆ ಮಾತ್ರ ವಿಹಿತವೆನ್ನಲಾಗದು.

ಅಭ್ಯುಷ್ಣಾತ್ ಸಘೃತಾದನ್ನಾದಚ್ಛಿದ್ರಾಚ್ಚೈವ ವಾಸಸಃ ।
ಅಧಿಕಂ ಯೋऽಭಿಮನ್ಯೇತ ಸ ಸ್ತೇನೋ ದಂಡಮರ್ಹತಿ ॥

ಎಂದು ಎಲ್ಲ ಕಳ್ಳದಾಸ್ತಾನುಕಾರರನ್ನು ಕಳ್ಳರೆಂದೇ ಶಾಸ್ತ್ರ ಕರೆದಿದೆ. 'ದುರ್ಧರ್ಷೋ ದೂರಭಾಜನಃ' ಎಂದೇ ಸರಿಯಾದ ಪಾಠ. ಅದಕ್ಕೆ ವಿವರಣೆ ಹೀಗೆ—

ದೂರತ ಏವ ಭಜನೀಯಃ ।
ಪರಾಭವೋ ಧರ್ಷಣಂ ಸ್ಯಾದವಜ್ಞಾನಮಥಾಪಿ ವಾ ।
ನ ತತ್ ಸತ್ಸು ಸದಾ ಕುರ್ಯಾತ್ ಸಹಾಸಾಶಯನಂ ನ ಚ ॥
ಇತಿ ಸದ್ಗುಣೇ ॥

'ದೂರಭಾಜನಃ' ಎಂದರೆ ದೂರದಿಂದ ಸೇವ್ಯನೆನಿಸುವವನು.

ದುರ್ಧರ್ಷ ಮತ್ತು ದೂರಭಾಜನ ಶಬ್ದಗಳಿಗೆ ಸದ್ಗುಣಗ್ರಂಥದಲ್ಲಿ ಹೀಗೆ ವಿವರಣೆ ಇದೆ— ಪರಾಭವಗೊಳಿಸುವುದು ಅಥವಾ ತಿರಸ್ಕಾರದಿಂದ ಕಾಣುವುದು

1. ದುರ್ಧರ್ಷೋऽಕ್ಷೋಭ್ಯಃ ಸ ಚಾಸಾವುದರಭಾಜನಶ್ಚಾಪರಿಗ್ರಹಃ । -ಶ್ರೀಧರಃ

ಎರಡೂ ಧರ್ಷಣವೆನಿಸುವುವು. ಯಾಗಾಗ್ನಿಯಲ್ಲಿ ಹೇಗೋ ಹಾಗೆ ಸಜ್ಜನ ಗುರುಹಿರಿಯರಲ್ಲಿಯೂ ಇವನ್ನು ಎಂದೂ ಮಾಡಬಾರದು. ಮತ್ತು ಜೊತೆಯಲ್ಲಿ ಒಂದೇ ಆಸನದಲ್ಲಿ ಕುಳ್ಳಿರುವುದು ಒಂದೇ ಶಯ್ಯೆಯಲ್ಲಿ ಮಲಗುವುದು ಇವನ್ನೂ ಮಾಡದೆ, ದೂರದಿಂದಲೇ ಗುರುಹಿರಿಯರನ್ನು ಯಾಗಾಗ್ನಿಗಳಂತೆ ಸೇವಿಸಬೇಕು.

❖❖❖

ಪುನಃ ಎರಡು ಪದ್ಯಗಳಲ್ಲಿ ಯಾಗಾಗ್ನಿಯಿಂದ ಕಲಿತುದನ್ನು ಅವಧೂತನು ಯದುರಾಜನಿಗೆ ಹೇಳುತ್ತಾನೆ.

ಕ್ವಚಿಚ್ಛನ್ನಃ ಕ್ವಚಿತ್ ಸ್ಪಷ್ಟ ಉಪಾಸ್ಯಃ ಶ್ರೇಯ ಇಚ್ಛತಾಮ್ ।
ಭುಂಕ್ತೇ ಸರ್ವತ್ರ ದಾತೃಣಾಂ ದಹನ್ ಪ್ರಾಗುತ್ತರಾಶುಭಮ್ ॥ ೪೬ ॥

ಯಾಗಾಗ್ನಿ ಅರಣಿಮಥನಕ್ಕಿಂತ ಮೊದಲು ಅವ್ಯಕ್ತವಾಗಿದ್ದು ಮಥನದಿಂದ ವ್ಯಕ್ತವಾಗುವುದು. ಅದನ್ನು ಶ್ರೇಯೋಭಿಲಾಷಿಗಳೆಲ್ಲರೂ ಉಪಾಸನೆ ಮಾಡಬೇಕು. ಹಾಗೇ ಅವ್ಯಕ್ತನಾದ ಪರಮಾತ್ಮ ಶಾಸ್ತ್ರವಿಚಾರದಿಂದ ವ್ಯಕ್ತನಾದಾಗ ಅವನನ್ನು ಉಪಾಸನೆ ಮಾಡಬೇಕು. ಯಾಗಾಗ್ನಿ ಯಜಮಾನ ನೀಡುವ ಆಹುತಿಗಳನ್ನು ಉಂಡು ಅವನಿಗೆ ಅಪರೋಕ್ಷಜ್ಞಾನವನ್ನು ಉಂಟುಮಾಡಿ ಪೂರ್ವೋತ್ತರ ಪಾಪಗಳನ್ನು ಪರಿಹರಿಸುವುದು ಹಾಗೇ ಜ್ಞಾನಿಯೂ ಬೂದಿಮುಚ್ಚಿದ ಕೆಂಡದಂತಿದ್ದು ಶ್ರೇಯೋಭಿಲಾಷಿಗಳು ಮಾಡುವ ಪೂಜೆಯನ್ನು ಸ್ವೀಕರಿಸಿ ವ್ಯಕ್ತನಾದಾಗ ಅಪರೋಕ್ಷವನ್ನು ಉಂಟುಮಾಡಿ ಪೂರ್ವೋತ್ತರ ಪಾಪಗಳನ್ನು ಪರಿಹರಿಸಬೇಕು.

ಸ್ವಮಾಯಯಾ ಸೃಷ್ಟಮಿದಂ ಸದಸಲ್ಲಕ್ಷಣಂ ವಿಭುಃ ।
ಪ್ರವಿಷ್ಟ ಈಯತೇ ತತ್ತತ್ಸರೂಪೋಽಗ್ನಿರಿವೈಧಸಿ ॥ ೪೭ ॥

ಅಗ್ನಿ ಸಣ್ಣ ದೊಡ್ಡ ಕಟ್ಟಿಗೆಗಳಲ್ಲಿ ಸಣ್ಣ ದೊಡ್ಡ ಗಾತ್ರಗಳಲ್ಲಿ ತೋರುವಂತೆ, ಪರಮಾತ್ಮ ತಾನು ಸ್ವೇಚ್ಛೆಯಿಂದ ಸೃಜಿಸುವ ಸ್ಥೂಲ ಸೂಕ್ಷ್ಮ ಪದಾರ್ಥಗಳಲ್ಲಿ ಪ್ರವೇಶಿಸಿ ಅವುಗಳ ಆಕಾರದಲ್ಲಿ ವ್ಯಕ್ತನಾಗುತ್ತಾನೆ ಎಂದು ತಿಳಿಯಬೇಕು.

[1]'ಜೀವಾತ್ಮನಿಗೆ ಮೇಲುಕೀಳುತನವೆಂಬುದು ಶರೀರದೃಷ್ಟಿಯಿಂದ ಹೊರತು ಸ್ವಾಭಾವಿಕವಲ್ಲ. ತನ್ನ ಅವಿದ್ಯೆಯಿಂದಾದ ನಾನಾ ಶರೀರಗಳನ್ನು ಹೊಕ್ಕು ದೇವನೆನಿಸ

1. ಆತ್ಮನೋ ದೇಹೋಪಾಧಿಕಮೇವ ಉಚ್ಚನೀಚತ್ವಾದಿ, ನ ಸ್ವಾಭಾವಿಕಮಿತ್ಯಗ್ನಿ ದೃಷ್ಟಾಂತೇನ ಸಂಭಾವಿತಮಿತ್ಯಾಹ । ಸ್ವಮಾಯಯಾ ಸ್ವಾವಿದ್ಯಯಾ ಸೃಷ್ಟಂ ಸದಸಲ್ಲಕ್ಷಣಂ ದೇವತಿರ್ಯಗಾದಿರೂಪಂ ವಿಪ್ರಶೂದ್ರಾದಿರೂಪಂ ವಾ । -ಶ್ರೀಧರಃ

ಬಹುದು ಅಥವಾ ಪ್ರಾಣಿ ಎನಿಸಬಹುದು. ವಿಪ್ರನೆನಿಸಬಹುದು ಅಥವಾ ಶೂದ್ರನೆನಿಸಬಹುದು' ಎಂದು ಶ್ರೀಧರ ವ್ಯಾಖ್ಯಾನ ಹೇಳುತ್ತಿದೆ.

ಆದರೆ 'ಸ್ವಮಾಯೆ' ಎಂದರೆ ತನ್ನ ಅವಿದ್ಯೆಯಲ್ಲ, ವಿಭು ಎಂದರೆ ಜೀವಾತ್ಮನೂ ಅಲ್ಲ. ಸರ್ವಶಕ್ತನಾದ ಈಶ್ವರ ತನ್ನ ಮಾಯೆಯಿಂದ ಶರೀರಗಳನ್ನು ಸೃಷ್ಟಿಮಾಡಿ ಜೀವನಿಯಾಮಕನಾಗಿ ಜೀವನೊಂದಿಗೆ ಶರೀರಗಳನ್ನು ಪ್ರವೇಶಿಸುತ್ತಾನೆ ಎಂದು ವಿವರಣೆ ನೀಡಬೇಕು.

ಹಿಂದಿನ ಶ್ಲೋಕದಲ್ಲಿ 'ಕ್ವಚಿಚ್ಛನ್ನಃ' ಎಂಬುದನ್ನು ಮಾತ್ರ, 'ತದವ್ಯಕ್ತಮಾಹಹಿ' ಎಂಬ ಸೂತ್ರದಲ್ಲಿ (ಬ್ರ.ಸೂ.3.2.23) ಹೇಳಿದಂತೆ ಈಶ್ವರನು ಸ್ವಭಾವತಃ ಸದಾ ಅವ್ಯಕ್ತನೇ ಆದ್ದರಿಂದ, 'ಕ್ವಚಿತ್‌ಛನ್ನಃ' 'ಕೆಲವೊಮ್ಮೆ ಅವ್ಯಕ್ತ'ನೆನ್ನಲಾಗದೆಂಬ ಅಭಿಪ್ರಾಯದಲ್ಲಿ ಈಶ್ವರಪರವಾಗಿ ಕೂಡಿಸಲಾಗದು, ಜೀವಪರವಾಗಿ ಗ್ರಹಿಸಬೇಕು. ಜೀವನೆಂದರೆ ಇಲ್ಲಿ ಜ್ಞಾನಿಯು ದುರ್ಜನರ ಮುಂದೆ ಬೂದಿ ಮುಚ್ಚಿದ ಕೆಂಡದಂತೆ ಅವ್ಯಕ್ತನಾಗಿರುತ್ತಾನೆ, ಸಜ್ಜನರ ಮುಂದೆ ವ್ಯಕ್ತನಾಗಿರುತ್ತಾನೆ ಎಂದು ವಿವರಣೆ ನೀಡಬೇಕು.

ಈಶ್ವರನು ಸ್ವಭಾವತಃ ಅವ್ಯಕ್ತನಾದರೂ ಅಚಿಂತ್ಯ ಶಕ್ತಿಯಿಂದ ಸಜ್ಜನರಿಗೆ ವ್ಯಕ್ತನಾಗುವುದರಿಂದ, ದುರ್ಜನರಿಗೆ ಮಾತ್ರ ಅವ್ಯಕ್ತನಾಗುವುದರಿಂದ 'ಕ್ವಚಿತ್‌ಛನ್ನಃ' 'ದುರ್ಜನರ ವಿಷಯದಲ್ಲಿ ಅವ್ಯಕ್ತ'ನೆಂಬ ವಿವಕ್ಷೆಯಲ್ಲಿ ಈಶ್ವರನ ಪರವಾಗಿಯೂ ಅದನ್ನು ಕೂಡಿಸಬಹುದು. ಇದು ಸದ್ಗುಣ ಎಂಬ ಗ್ರಂಥದಲ್ಲಿದೆ.

ಜೀವಸ್ಯ ಛನ್ನತಾಂ ಶಿಕ್ಷೇತ್ ಪ್ರವಿಷ್ಟತ್ವಂ ಪರಾತ್ಮನಃ ।
ತತ್ತದ್‌ಗುಣವಿಡಂಬಂ ಚ ವಹ್ನೇಃ ಸರ್ವಮಥಾಪಿ ಚ ॥

ಇತಿ ಚ ॥

ಅಲ್ಪದಾರೌ ಯಥಾಽಲ್ಪೋಽಗ್ನಿರೇವಮಲ್ಪ ಶರೀರಗಃ ।
ದೃಶ್ಯತೇ ಪರಮಾತ್ಮಾಽಪಿ ಸ್ಥೂಲಃ ಸ್ಥೂಲಶರೀರಗಃ ॥

ಇತಿ ವೈಭವೇ ॥

ಜ್ಞಾನಿಯು ಅಯೋಗ್ಯರ ಮುಂದೆ ಬೂದಿಮುಚ್ಚಿದ ಕೆಂಡದಂತಿರುತ್ತಾನೆ. ಇದನ್ನು ಅವನಿಂದ ಕಲಿಯಬೇಕು. ತಾನು ಸೃಜಿಸುವ ಶರೀರದಲ್ಲಿ ನಿಯಾಮಕನಾಗಿ ಪರಮಾತ್ಮ ಪ್ರವೇಶಿಸುವುದರಿಂದ ಅದು ಅವನ ಮಹಿಮೆಯೆಂದು ತಿಳಿಯಬೇಕು. ಹಾಗೇ ಸಣ್ಣದೊಡ್ಡ ಕಟ್ಟಿಗೆಗಳಲ್ಲಿ ಸಣ್ಣ ದೊಡ್ಡ ಗಾತ್ರವಾಗಿ ಬೆಂಕಿ ಉರಿಯುವಂತೆ

ಸ್ಥೂಲಸೂಕ್ಷ್ಮ ಪದಾರ್ಥಗಳಲ್ಲಿ ಸ್ಥೂಲಸೂಕ್ಷ್ಮ ಆಕಾರಗಳಲ್ಲಿ ವ್ಯಕ್ತನಾಗುವುದೂ ಪರಮಾತ್ಮನ ಮಹಿಮೆ ಎಂದೇ ತಿಳಿಯಬೇಕು. ಅಥವಾ ಬೂದಿಮುಚ್ಚಿದ ಕೆಂಡದಂತೆ ಅವ್ಯಕ್ತನಾಗಿರುವ ಮಹಿಮೆಯೂ ಸೇರಿದಂತೆ ಎಲ್ಲ ಮಹಿಮೆಗಳನ್ನು ಪರಮಾತ್ಮನಲ್ಲಿಯೇ ತಿಳಿಯಲೂಬಹುದು ಎಂದು ಸದ್ಗುಣಗ್ರಂಥದಲ್ಲಿದೆ.

ಸಣ್ಣಕಟ್ಟಿಗೆಯಲ್ಲಿ ಬೆಂಕಿ ಸಣ್ಣದಾಗಿ ಕಾಣುವಂತೆ ಸಣ್ಣ ಪದಾರ್ಥದಲ್ಲಿ ಪರಮಾತ್ಮನೂ ಸಣ್ಣ ಆಕೃತಿಯಲ್ಲಿ ವ್ಯಕ್ತನಾಗುತ್ತಾನೆ. ಹಾಗೇ ದೊಡ್ಡ ಕಟ್ಟಿಗೆಯಲ್ಲಿ ಬೆಂಕಿ ದೊಡ್ಡದಾಗಿ ಕಾಣುವಂತೆ ಪರಮಾತ್ಮನೂ ದೊಡ್ಡ ಪದಾರ್ಥದಲ್ಲಿ ದೊಡ್ಡ ಆಕೃತಿಯಲ್ಲಿ ವ್ಯಕ್ತನಾಗುತ್ತಾನೆ ಎಂದು ವೈಭವ ಗ್ರಂಥದಲ್ಲಿದೆ.

❖❖❖

ಅಗ್ನಿಜ್ವಾಲೆಯಂತೆ ಪ್ರಾಣಿಶರೀರವೂ ಪ್ರತಿಕ್ಷಣ ಉತ್ಪತ್ತಿ ನಾಶಗಳನ್ನು ಹೊಂದುತ್ತಿದ್ದರೂ ಸ್ಪಷ್ಟವಾಗಿ ಕಣ್ಣಿಗೆ ಅದು ಗೋಚರವಾಗುವುದಿಲ್ಲ ಎಂದು ಅವಧೂತಮುನಿ ಯದುರಾಜನಿಗೆ ಉಪದೇಶಿಸುತ್ತಾನೆ.

ಕಾಲನದ್ಯೋಘವೇಗೇನ ಭೂತಾನಾಂ ಪ್ರಭವಾಪ್ಯಯೌ।
ನಿತ್ಯಾವಪಿ ನ ದೃಶ್ಯೇತೇ ಆತ್ಮನೋಽಗ್ನೇರ್ಯಥಾಽರ್ಚಿಷಾಮ್ ॥ ೪೯ ॥

ಅಗ್ನಿಯ ಜ್ವಾಲೆಗಳಿಗೆ ಪ್ರತಿಕ್ಷಣ ಉತ್ಪತ್ತಿ ನಾಶಗಳಾಗುತ್ತವೆ. ಕಾಲನದೀ ಪ್ರವಾಹದ ವೇಗದಿಂದ ವೇಗವಾಗಿ ಈ ಉತ್ಪತ್ತಿ ನಾಶಗಳು ಉಂಟಾಗುವುದರಿಂದ ಕಣ್ಣಿಗೆ ಗೋಚರವಾಗುವುದಿಲ್ಲ. ಹಾಗೇ ಪ್ರಾಣಿಗಳ ಶರೀರಕ್ಕೂ ಪ್ರತಿಕ್ಷಣ ಉತ್ಪತ್ತಿನಾಶಗಳಿವೆ, ಗೋಚರವಾಗುವುದಿಲ್ಲ.

ಇಲ್ಲಿ ದೀಪಜ್ವಾಲೆಗಳಂತೆ ಶರೀರಗಳೂ ಪ್ರತಿಕ್ಷಣ ಉತ್ಪತ್ತಿ ನಾಶಗಳನ್ನು ಹೊಂದುತ್ತವೆ ಎಂದು ಭಾಗವತ ಹೇಳುತ್ತಿದೆ. ಜಗತ್ತಿನ ಎಲ್ಲ ಪದಾರ್ಥಗಳಿಗೂ ಪ್ರತಿಕ್ಷಣ ಉತ್ಪತ್ತಿ ನಾಶಗಳಿವೆ ಎಂದು ಬೌದ್ಧರು ಹೇಳುತ್ತಾರೆ. ಆದರೆ ಬೌದ್ಧರ ವಾದವನ್ನು ಬೇರೆ ಯಾರೂ ಒಪ್ಪುವುದಿಲ್ಲ. ಏಕೆಂದರೆ ದೀಪದ ಜ್ವಾಲೆ ಆಗಾಗ ಗಾತ್ರ ಆಕಾರಗಳಲ್ಲಿ ಬೇರೆಯಾಗುವುದರಿಂದ ಜ್ವಾಲೆಗೆ ಮಾತ್ರ ಉತ್ಪತ್ತಿ ನಾಶಗಳಾಗುತ್ತವೆ. ದೀಪ ಬೇರೆಯಾಗುವುದಿಲ್ಲ. ಅದರಿಂದ ದೀಪಕ್ಕೆ ಉತ್ಪತ್ತಿನಾಶಗಳನ್ನು ಒಪ್ಪುವುದು ಸರಿಯಲ್ಲ. ಬೌದ್ಧರು ದೀಪವೂ ಪ್ರತಿಕ್ಷಣ ಬೇರೆಯಾಗುತ್ತದೆ, ಪ್ರತಿಕ್ಷಣ ದೀಪಕ್ಕೂ ಉತ್ಪತ್ತಿನಾಶಗಳಿವೆ ಎನ್ನುತ್ತಾರೆ. ಇದನ್ನು ಬೇರೆ ವ್ಯಾಖ್ಯಾನಕಾರರು ಯಾರೂ ಸ್ಪಷ್ಟಪಡಿಸಿಲ್ಲ.

ಅವಯವ್ಯವಯವಾನಾಂ ಚ ಗುಣಾನಾಂ ಗುಣಿನಸ್ತಥಾ ।
ಶಕ್ತಿಶಕ್ತಿಮತೋಶ್ಚೈವ ಕ್ರಿಯಾಯಾಸ್ತದ್ವತಸ್ತಥಾ ।
ಸ್ವರೂಪಾಂಶಾಂಶಿನೋಶ್ಚೈವ ನಿತ್ಯಾಭೇದೋ ಜನಾರ್ದನೇ ।
ಜೀವಸ್ವರೂಪೇಷು ತಥಾ ತಥೈವ ಪ್ರಕೃತಾವಪಿ ।
ಚಿದ್ರೂಪಾಯಾಮತೋಽನಂಶಾ ಅಗುಣಾ ಅಕ್ರಿಯಾ ಇತಿ ।
ಹೀನಾ ಅವಯವೈಶ್ಚೇತಿ ಕಥ್ಯಂತೇ ತೇ ಹ್ಯಭೇದತಃ ।
ಪೃಥಗ್ ಗುಣಾದ್ಯಭಾವಾಚ್ಚ ನಿತ್ಯತ್ವಾದುಭಯೋರಪಿ ।
ವಿಷ್ಣೋರಚಿಂತ್ಯಶಕ್ತೇಶ್ಚ ಸರ್ವಂ ಸಂಭವತಿ ಧ್ರುವಂ ॥

ಭಗವಂತನಲ್ಲಿ ಅವಯವ ಅವಯವಿಗಳಿಗೂ ಗುಣ ಗುಣಿಗಳಿಗೂ ಶಕ್ತಿ ಶಕ್ತಗಳಿಗೂ ಕ್ರಿಯಾ ಕ್ರಿಯಾಶ್ರಯಗಳಿಗೂ ಸ್ವರೂಪಾಂಶ ಅಂಶಿಗಳಿಗೂ ನಿಯಮೇನ ಅಭೇದವಿದೆ. ಜೀವಸ್ವರೂಪಗಳಲ್ಲಿಯೂ ಹಾಗೇ. ಚಿತ್‌ಪ್ರಕೃತಿಯಲ್ಲಿಯೂ ಹಾಗೇ. ಹೀಗೆ ಅಭೇದವಿರುವುದರಿಂದ ಇವರೆಲ್ಲರೂ ನಿರಂಶರು ನಿರ್ಗುಣರು ನಿಷ್ಕ್ರಿಯರು ನಿರವಯವರೆಂದು ಉಕ್ತರಾಗುತ್ತಾರೆ. ಬೇರೆ ಭಿನ್ನಗುಣಾದಿಗಳಿಲ್ಲದಿರುವುದರಿಂದಲೂ ಧರ್ಮಧರ್ಮಿಗಳಿಬ್ಬರೂ ನಿತ್ಯರಾಗಿರುವುದರಿಂದಲೂ ಈ ನಿರ್ಗುಣತ್ವಾದಿ ವ್ಯವಹಾರಗಳಾಗುತ್ತಿವೆ. ಹರಿಯ ಅಚಿಂತ್ಯ ಶಕ್ತಿಯಿಂದ ಮತ್ತು ವಿಶೇಷ ಬಲದಿಂದ ಗುಣಪೂರ್ಣತ್ವಾದಿ ವ್ಯವಹಾರಗಳು ಎಲ್ಲವೂ ಕೂಡುತ್ತವೆ.

ಕ್ರಿಯಾದೇರಪಿ ನಿತ್ಯತ್ವಂ ವ್ಯಕ್ತ್ಯವ್ಯಕ್ತಿವಿಶೇಷಣಂ ।
ಭಾವಾಭಾವ ವಿಶೇಷೇಣ ವ್ಯವಹಾರಾಶ್ಚ ತಾದೃಶಃ ।
ವಿಶೇಷ್ಯಸ್ಯ ವಿಶಿಷ್ಟಸ್ಯಾಪ್ಯಭೇದ ಸ್ತದ್ವದೇವ ತು ।
ಸರ್ವಂ ಚಾಚಿಂತ್ಯಶಕ್ತಿತ್ವಾದ್ ಯುಜ್ಯತೇ ಪರಮೇಶ್ವರೇ
ತಚ್ಛಕ್ತ್ಯೈವ ತು ಜೀವೇಷು ಚಿದ್ರೂಪಪ್ರಕೃತಾವಪಿ
ಭೇದಾಭೇದೌ ತದನ್ಯತ್ರ ಹ್ಯುಭಯೋರಪಿ ದರ್ಶನಾತ್
ಕಾರ್ಯಕಾರಣಯೋಶ್ಚಾಪಿ ನಿಮಿತ್ತಂ ಕಾರಣಂ ವಿನಾ ।

ಇತಿ ಬ್ರಹ್ಮತರ್ಕೇ ॥

ಕ್ರಿಯಾದಿಗಳಿಗೆ ನಿತ್ಯತ್ವವು ವ್ಯಕ್ತಿ ಅವ್ಯಕ್ತಿಗಳೆಂಬ ಅವಸ್ಥಾ ವಿಶೇಷಗಳಿಂದ ಯುಕ್ತವಾಗುವುದು. ಕ್ರಿಯಾದಿಗಳು ಈಗ ಇವೆ ಇಲ್ಲ ಎಂಬ ವಿಶೇಷ ವ್ಯವಹಾರಗಳು ಈ ಅವಸ್ಥಾ ವಿಶೇಷಗಳಿಂದಾಗುತ್ತವೆ. (ವ್ಯಕ್ತಿಯೂ ಕೂಡ ಈಗ ಇದೆ ಇಲ್ಲ ಎಂಬ ವ್ಯವಹಾರವು ಅದರ ಶಕ್ತಿ ವ್ಯಕ್ತಿ ವಿಶೇಷಗಳಿಂದಾಗುತ್ತದೆ.

ಅದರಿಂದ ಅನವಸ್ಥಾ ಬಂದೀತೆನ್ನಬಾರದು. ಕ್ರಿಯೆಯ ವ್ಯಕ್ತಿಯೂ ಆ ವ್ಯಕ್ತಿಯ ವ್ಯಕ್ತಿಯೂ ಬೇರೆಯಲ್ಲ, ಘಟದ ಉತ್ಪತ್ತಿ ಮತ್ತು ಉತ್ಪತ್ತಿಯ ಉತ್ಪತ್ತಿಗಳು ಹೇಗೆ ಅಭಿನ್ನವೋ ಹಾಗೆ.) ಶುದ್ಧಕ್ಕೂ ವಿಶಿಷ್ಟಕ್ಕೂ ಗುಣಗುಣಿ ಮುಂತಾದವುಗಳಿಗಿರುವಂತೆಯೇ ಅತ್ಯಂತಾಭೇದವೆ ಇರುತ್ತದೆ. ಹೀಗೆ ಅಭೇದವೇ ಇದ್ದರೂ ಧರ್ಮಧರ್ಮಿಭಾವಾದಿಗಳೆಲ್ಲವೂ ಪರಮಾತ್ಮನಲ್ಲಿ ಅಚಿಂತ್ಯ ಶಕ್ತಿಯಿಂದ ಕೂಡುತ್ತದೆ. ಆ ಶಕ್ತಿಯಿಂದಲೇ ಜೀವರಲ್ಲಿಯೂ ಚಿತ್‌ಪ್ರಕೃತಿಯಲ್ಲಿಯೂ ಅವು ಕೂಡುತ್ತವೆ. ಪರಮಾತ್ಮ ಲಕ್ಷ್ಮೀ ಮುಕ್ತರ ಶರೀರಗಳಿಗಿಂತ ಬೇರೆ ಭೌತಿಕ ಶರೀರಗಳಲ್ಲಿ ಗುಣಗುಣಿ, ಕ್ರಿಯಾಕ್ರಿಯಾಶ್ರಯ ಮುಂತಾದವುಗಳಿಗೆ ಭೇದಾಭೇದಗಳಿವೆ. ಏಕೆಂದರೆ ಎರಡೂ ಕಾಣುತ್ತವೆ. ನಿಮಿತ್ತ ಕಾರಣವನ್ನು ಬಿಟ್ಟು ಬೇರೆ ಕಾರಣ ಕಾರ್ಯಗಳಿಗೆ, ಅಂದರೆ ಉಪಾದಾನ ಉಪಾದೇಯಗಳಿಗೆ ಕೂಡ ಭೇದಾಭೇದಗಳಿವೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

'ಆತ್ಮನಿ ಚೈವಂ ವಿಚಿತ್ರಾಶ್ಚ ಹಿ' 'ಸರ್ವೋಪೇತಾ ಚ ತದ್ದರ್ಶನಾತ್'
'ಸರ್ವಧರ್ಮೋಪಪತ್ತೇಶ್ಚ' 'ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ'
~~'ಯತ್ರಾ ಸಪ್ತರ್ಷೀನ್ ಪರ ಏಕಮಾಹುಃ'~~

ಇತ್ಯಾದೇಶ್ಚ ॥

'ಈಶ್ವರನಲ್ಲಿಯೇ ಸಕಲ ಯುಕ್ತಿವಿರೋಧಗಳನ್ನು ಪರಿಹರಿಸುವ ಅಚಿಂತ್ಯ ಅದ್ಭುತ ಶಕ್ತಿಗಳಿವೆ. ಇದು ಶ್ರುತ್ಯಾದಿಗಳಲ್ಲಿ ಪ್ರಸಿದ್ಧವಾಗಿದೆ' 'ಪರದೇವತೆಯಾದ ಶ್ರೀಹರಿ ಸರ್ವಶಕ್ತಿಗಳಿಂದ ಕೂಡಿದ್ದಾನೆ. ಹಾಗೆ ಶ್ರುತಿಗಳು ಹೇಳುತ್ತವೆ' 'ಜ್ಞಾನಾನಂದಾದಿಗುಣಗಳು ಮತ್ತು ದುಃಖಾದಿದೋಷಾಭಾವಗಳು ಈ ಎಲ್ಲ ಧರ್ಮಗಳು ಈಶ್ವರನಲ್ಲಿ ಸ್ವಾತಂತ್ರ್ಯಾದಿ ಪ್ರಯುಕ್ತ ಉಪಪನ್ನವಾಗುವುದರಿಂದಲೂ ಯುಕ್ತಿವಿರೋಧವಿಲ್ಲ.' 'ವಿಷ್ಣುವಿನಲ್ಲಿ ಜ್ಞಾನ ಬಲ ಕ್ರಿಯೆಗಳು ಸ್ವಾಭಾವಿಕ, ನಿತ್ಯವಾಗಿರುವುದರಿಂದ ಭೇದ ಪ್ರಸಕ್ತಿ ಇಲ್ಲ' 'ಶ್ವೇತದ್ವೀಪಾದಿಗಳಲ್ಲಿ ಸಪ್ತರ್ಷಿಗಳು ಮುಂತಾದ ಮುಕ್ತರನ್ನು 'ಏಕಂ' ಅವಯವಾದಿ ಭೇದರಹಿತರೆಂದು ಕೆಲವು ಜ್ಞಾನಿಗಳು ಹೇಳುತ್ತಾರೆ.' ಇತ್ಯಾದಿ ಶ್ರುತಿ ಸೂತ್ರಗಳಿರುವುದರಿಂದಲೂ ಹರಿಯಲ್ಲಿ ಗುಣಾದಿಗಳಿವೆ ಎಂದೂ ಅವು ಅಭಿನ್ನವಾದರೂ ಅಚಿಂತ್ಯಶಕ್ತಿಯಿಂದ ಧರ್ಮಧರ್ಮಿಭಾವಾದಿ ಯುಕ್ತವಾಗಿವೆ ಎಂದೂ ಸಿದ್ಧವಾಗುತ್ತದೆ.

ವಿನಾ ದೋಷಾನ್ ಶ್ರುತಮದ್ಧಾವಗಮ್ಯಂ
ತಥಾ ಸ್ಮೃತಂ ಪರಮೇ ಸತ್ಯರೂಪಂ ।
ನೈವಾಸತ್ಯಂ ಕ್ವಚಿದಸ್ಮಿನ್ ಪರೇಶೇ
ಸರ್ವಂ ಯುಕ್ತಂ ಪೂರ್ಣಶಕ್ತೇಃ ಸದೈವ ॥ ಇತಿ ವಿಶ್ವಂಭರಶ್ರುತಿಃ ॥

ಶ್ರೀಹರಿಯಲ್ಲಿ ಪೂರ್ಣಶಕ್ತನಾದ ಪರಮೇಶ್ವರನಾದ್ದರಿಂದ ದೋಷಗಳನ್ನು ಬಿಟ್ಟು ಅಸತ್ಯ ಯಾವುದೂ ಎಂದೂ ಇಲ್ಲ. ಎಲ್ಲವೂ ಯುಕ್ತವಾಗುವುವು. ಅದರಿಂದ ದೋಷಗಳನ್ನು ಬಿಟ್ಟು ಶ್ರುತಿಸ್ಮೃತ್ಯುಕ್ತವಾದ ಎಲ್ಲವನ್ನೂ ಪಾರಮಾರ್ಥಿಕ ಸತ್ಯವೆಂದು ಸತ್ಯವಾಗಿ ತಿಳಿಯಬೇಕು. ಎಂದು ವಿಶ್ವಂಭರ ಶ್ರುತಿಯು ಹೇಳುತ್ತಿದೆ.

ತಸ್ಮಾದೇಕಸ್ಮಿನ್ನಪಿ ಶರೀರೇ ಭೇದಾಭೇದಾತ್ ಪ್ರಭವಾಪ್ಯಯೌ
ಯುಜ್ಯೇತೇ । ನ ಚ ವಿರೋಧಃ । ಸ್ಥೂಲಸೂಕ್ಷ್ಮತ್ವವತ್ ।
ಆಪೇಕ್ಷಿಕತ್ವಂ ಅತ್ರಾಪಿ ಯುಜ್ಯತೇ ॥

ಆದುದರಿಂದ ಒಂದೇ ಶರೀರದಲ್ಲಿ ಧರ್ಮಿಯಿಂದ ಧರ್ಮಗಳಿಗೆ ಭೇದ ಅಭೇದಗಳು ಇರುವುದರಿಂದ ಧರ್ಮಿ ಸ್ಥಾಯಿಯಾದರೂ ಧರ್ಮಗಳಲ್ಲಿ ಉತ್ಪತ್ತಿ ನಾಶಗಳು ಕೂಡುತ್ತವೆ. ಭೇದ ಮತ್ತು ಅಭೇದಗಳಿಗೆ ವಿರೋಧವೆಂದು ತಿಳಿಯಬಾರದು. ಒಂದೇ ವಸ್ತುವಿನಲ್ಲಿ ಸ್ಥೂಲತ್ವ ಸೂಕ್ಷ್ಮತ್ವಗಳಿರುವುದು ಕಂಡಿದೆ. ಇದಕ್ಕಿಂತ ಸ್ಥೂಲ ಅದಕ್ಕಿಂತ ಸೂಕ್ಷ್ಮ ಎಂದು ಆಪೇಕ್ಷಿಕವಾದ್ದರಿಂದ ವಿರೋಧ ವಿಲ್ಲವೆನ್ನುವುದಾದರೆ ಹಾಗೇ ಪ್ರಕೃತ ಶರೀರದಲ್ಲಿಯೂ ಶರೀರರೂಪವಾದ ಧರ್ಮಿ ಸ್ಥಾಯಿ, ಅದರ ಅವಸ್ಥಾದಿರೂಪವಾದ ಧರ್ಮಗಳು ಉತ್ಪತ್ತಿನಾಶ ಉಳ್ಳವುಗಳೆಂದು ಆಪೇಕ್ಷಿಕವಾದ್ದರಿಂದ ಸ್ಥಾಯಿತ್ವ–ಉತ್ಪತ್ತಿನಾಶಗಳಿಗೆ ವಿರೋಧವಿಲ್ಲ.

❖❖❖

ಪರಮಾತ್ಮ ಜೀವಶರೀರಗಳಲ್ಲಿ ನಿಯಾಮಕನಾಗಿ ಜೀವನೊಂದಿಗೇ ಇರುವುದರಿಂದ ಜೀವನಂತೇ ಅಜ್ಞನೆಂದು ಸ್ಥೂಲಬುದ್ಧಿಯವರಿಗೆ ಕಾಣುತ್ತಾನೆ ಎನ್ನುತ್ತಾನೆ ಅವಧೂತಮುನಿ.

ಬುದ್ಧಿಸಂಸ್ಥೇನ ಭೇದೇನ ವ್ಯಕ್ತಸ್ಥ ಇವ ತದ್ಗತಃ ।
ಲಕ್ಷ್ಯತೇ ಸ್ಥೂಲಮತಿಭಿರಾತ್ಮಾ ಚಾಂಬುಸ್ಥಿತಾರ್ಕವತ್ ॥ ೫೦ ॥

ಆಕಾಶದಲ್ಲಿ ಸಂಚರಿಸುವ ದಿವ್ಯಶರೀರಿಯಾದ ಸೂರ್ಯದೇವ ಸ್ಥೂಲಬುದ್ಧಿ ಯವರಿಗೆ ನೀರಲ್ಲಿ ಕಾಣುವ ಸೂರ್ಯನಂತೆ ದುಂಡಗೆ ಗೋಲಾಕಾರನಾಗಿ ಕಾಣು ತ್ತಾನೆ. ಹಾಗೇ ಆನಂದಮಯನಾದ ಪರಮಾತ್ಮ ಜೀವಶರೀರದಲ್ಲಿ ಜೀವನೊಂದಿಗೆ ಇರುವುದರಿಂದ ಸ್ಥೂಲಬುದ್ಧಿಯವರಿಗೆ ಜೀವನ ಹಾಗೇ ಅಂತಃಕರಣದ ಮಿಥ್ಯಾಜ್ಞಾನದಿಂದ ಬಳಲುವಂತೆ ಕಾಣುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಶ್ಲೋಕಪಾಠ ಬೇರೆ ಇದೆ—

ಬುಧ್ಯತೇ ಸ್ವೇ ನ ಭೇದೇನ ವ್ಯಕ್ತಿಸ್ಥ ಇವ ತದ್ಗತಃ ।
ಲಕ್ಷ್ಯತೇ ಸ್ಥೂಲ ಮತಿಭಿರಾತ್ಮಾ ಚಾವಸ್ಥಿತೋಽರ್ಕವತ್ ॥

[1]ಸ್ವಸ್ವರೂಪದಲ್ಲಿರುವ ಆತ್ಮ ಬೇರೆಬೇರೆಯಾಗಿ ಕಾಣುವುದಿಲ್ಲ. ಉಪಾಧಿಯು ವ್ಯಂಜಕವಾಗಿರುವುದರಿಂದ ಅದರಲ್ಲಿ ಪ್ರತಿಬಿಂಬಿತನಾಗಿ ಅದರೊಳಗೆ ಪ್ರವೇಶ ಮಾಡಿರುವಂತೆ ಬೇರೆ ಬೇರೆಯಾಗಿ ಕಾಣುತ್ತಾನೆ, ನೀರಲ್ಲಿ ಕಾಣುವ ಸೂರ್ಯನಂತೆ, ಎಂದು ಶ್ರೀಧರ ವ್ಯಾಖ್ಯಾನದಲ್ಲಿ ವಿವರಣೆ ಇದೆ. ಅದರಂತೆ, 'ಆತ್ಮನು ಅಂತಃಕರಣ ವೃತ್ತಿರೂಪವಾದ ಉಪಾಧಿಗಳಲ್ಲಿ ಪ್ರತಿಬಿಂಬಿತನಾಗಿ ವ್ಯಕ್ತನಾದಾಗ ಕಾಣುತ್ತಾನೆ.' ಆದರೆ ಕಾಣುವುದಿಲ್ಲವೆಂದು ಶ್ರೀಧರ ವ್ಯಾಖ್ಯಾನವೇ ಹಿಂದೆ (ಶ್ಲೋಕ 11.3.37) ಹೇಳಿದೆ—

ಜಡಾಸು ಮನಆದಿವೃತ್ತಿಷು ಅಭಿವ್ಯಜ್ಯಮಾನಸ್ಯಾತ್ಮಪ್ರಕಾಶಸ್ಯ
ತತ್ತದ್ವೃತ್ತಿ ಪ್ರಕಾಶಕಸ್ಯ ನ ತತ್ಪ್ರಕಾಶವಿಷಯತ್ವಂ ।

ವಸ್ತುತಃ ಉಪಾಧಿಯು ಬಿಂಬಕ್ಕೆ ಅಭಿವ್ಯಂಜಕವಲ್ಲ. ಬಾನಲ್ಲಿ ತಾನೇ ತಾನಾಗಿ ಬೆಳಗುವ ಸೂರ್ಯನಿಗೆ ಯಾವ ಅಭಿವ್ಯಂಜಕವೂ ಬೇಕಾಗಿಲ್ಲ. ನೀರು ಅವನ ಪ್ರತಿಬಿಂಬಕ್ಕೆ ಆಶ್ರಯ ಹೊರತು ಅದಕ್ಕೆ ವ್ಯಂಜಕವಲ್ಲ. ಘಟದ ರೂಪಕ್ಕೆ ಘಟ ಆಶ್ರಯ ಹೊರತು ವ್ಯಂಜಕವೆನಿಸುವುದಿಲ್ಲ ತಾನೆ? ಅದರಿಂದ ಭಾಗವತದಲ್ಲಿ 'ವ್ಯಕ್ತಿಸ್ಥಃ' ಎಂದರೆ ಅಭಿವ್ಯಂಜಕವಾದ ಉಪಾಧಿಯೊಳಗಿರುವುದೆಂದು ಅರ್ಥ ಕೂಡುವುದಿಲ್ಲ. ಹೀಗಾಗಿ ಆ ಪಾಠವೂ ಸರಿಯಿಲ್ಲ. ಅದಕ್ಕೆ ನೀಡಿದ ವಿವರಣೆಯೂ ಸರಿಯಿಲ್ಲ. ಬೇರೆ ವ್ಯಾಖ್ಯಾನಕಾರರೆಲ್ಲರೂ ಈ ಪಾಠವನ್ನೇ ಇಟ್ಟುಕೊಂಡು ವ್ಯಕ್ತಿ ಎಂದರೆ ಉಪಾಧಿ ಎಂದಿದ್ದಾರೆ.

ವೀರರಾಘವ ವ್ಯಾಖ್ಯಾನದಲ್ಲಿಯೂ ವ್ಯಕ್ತಿ ಎಂದರೆ ದರ್ಪಣಾದಿಗಳಂತೆ ಉಪಾಧಿಯಾದ ದೇಹ ಎನ್ನುತ್ತಾರೆ. ಆತ್ಮನು ದೇವಾದಿ ಶರೀರಗಳಲ್ಲಿದ್ದು ದೇವಾದಿ ಭೇದಯುಕ್ತನಾಗಿ ಕಾಣುತ್ತಾನೆ ಎನ್ನುತ್ತಾರೆ. ವಸ್ತುತಃ ಆತ್ಮನು 'ವ್ಯಕ್ತಸ್ಥ' ದೇಹದಲ್ಲಿರುತ್ತಾನೆ. ವ್ಯಕ್ತ ಎಂದರೆ ದೇಹ ಎನ್ನಬೇಕು.

1. ಸ್ವೇ ಸ್ವರೂಪೇಽವಸ್ಥಿತ ಆತ್ಮಾ ಭೇದೇನ ನ ಬುಧ್ಯತೇ । ಅಭಿವ್ಯನಕ್ತೀತಿ ವ್ಯಕ್ತಿರುಪಾಧಿಃ । ವ್ಯಕ್ತಿಸ್ಥ ಉಪಾಧಿಪ್ರತಿಬಿಂಬಿತಸ್ತು ತದ್ಗತ ಇವ ಉಪಾಧಿ ಪ್ರವಿಷ್ಟ ಇವ ಭೇದೇನ ಸ್ಥೂಲಮತಿಭಿರ್ಲಕ್ಷ್ಯತೇ ಅರ್ಕವದಿತ್ಯನ್ವಯಃ । —ಶ್ರೀಧರಃ

ಬುದ್ಧಿಸಂಸ್ಥಸ್ತ್ವಾತ್ಮಭೇದೋ ವ್ಯಕ್ತಸ್ಥೋ ಜೀವ ಉಚ್ಯತೇ ।
ತೇನೈವ ಸಹ ಸಂಸ್ಥಾನಾತ್ ಪರಾತ್ಮಾ ಸ್ಥೂಲಬುದ್ಧಿಭಿಃ ।
ಜೀವವಲ್ಲಕ್ಷ್ಯತೇ ವಿಷ್ಣುರ್ಯಥೈವಾಂಬುಸ್ಥಿತಾರ್ಕವತ್ ।
ಪರಮಾರ್ಕಃ ಪಾರಿಮಾಣ್ಯಾದ್ ವರ್ತುಲತ್ವಾದಿನಾ ತಥಾ ।
ಅರ್ಕಸ್ವರೂಪಾನಭಿಜ್ಞೈಃ ಶಿರಃಪಾದಾದಿವರ್ಜಿತಃ ।
ಅಚೇತನಶ್ಚ ಕಲ್ಪ್ಯೇತ ತತ್ತೇಜೋಮಾತ್ರದರ್ಶಿಭಿಃ ।
ಸೂರ್ಯದೇಹಾದಿಭಿನ್ನಂ ಹಿ ತೇಜೋಮಂಡಲಮೇವ ತು ।
ದೃಶ್ಯತೇ ಸ್ಥೂಲಮತಿಭಿರೇವಮೇವ ಜನಾರ್ದನಃ ॥

ಇತಿ ಪ್ರಭಾಸಕೇ ॥

'ಆತ್ಮ' ಅಂದರೆ ಪರಮಾತ್ಮ. ಪರಮಾತ್ಮನ ವಿಷಯದಲ್ಲಿ 'ಭೇದ' ಮಿಥ್ಯಾಜ್ಞಾನವು ಬುದ್ಧಿಯಲ್ಲಿ ಬಾಹ್ಯ ಅಂತಃಕರಣದಲ್ಲಿ ಇರುವುದು. (ವ್ಯಕ್ತ ಅಂದರೆ ಶರೀರ. ಅವ್ಯಕ್ತವಾದ ಪ್ರಕೃತಿಯಿಂದ ವ್ಯಕ್ತವಾದುದು. ಅದರಲ್ಲಿ ಜೀವನಿರುತ್ತಾನೆ. ಜೀವನು ಶರೀರದಲ್ಲಿ ಶರೀರಜನ್ಯವಾದ ಸುಖದುಃಖಗಳನ್ನು ಉಣ್ಣುತ್ತ ವಾಸಮಾಡುವುದರಿಂದ) ವ್ಯಕ್ತಸ್ಥ ಎಂದು ಜೀವನಿಗೆ ಹೆಸರು. ಅಂತರ್ಯಾಮಿಯಾದ ಪರಮಾತ್ಮನು ಜೀವನೊಂದಿಗೆ ಜೀವರ ಶರೀರದಲ್ಲಿರುವುದರಿಂದ ಸ್ಥೂಲಬುದ್ಧಿಯವರಿಗೆ ಜೀವನಂತೆಯೇ ಶರೀರಜನ್ಯ ಸುಖದುಃಖ ಉಣ್ಣುವವನೆಂದು ಕಾಣುತ್ತಾನೆ. ನೀರಲ್ಲಿರುವ ಪ್ರತಿಬಿಂಬದಂತೆ ಬಿಂಬನಾದ ಸೂರ್ಯದೇವನೂ ಕೂಡ ಸೂರ್ಯದೇವನ ಶರೀರಾಕೃತಿಯನ್ನು ಕಂಡರಿಯದ, ಅವನ ತೇಜೋಮಂಡಲವನ್ನು ಮಾತ್ರ ಕಂಡ ಅಜ್ಞರಿಗೆ ಸಣ್ಣಗೆ ದುಂಡಗೆ ತಲೆಕಾಲಿಲ್ಲದ ಅಚೇತನ ವಸ್ತುವಾಗಿ ಭ್ರಾಂತಿಯಲ್ಲಿ ಕಾಣುವಂತೇ ಇದು. ವಸ್ತುತಃ ಸೂರ್ಯದೇವನ ಶರೀರಕ್ಕಿಂತ ಬೇರೆಯೇ ಅವನ ತೇಜೋಮಂಡಲ. ಸ್ಥೂಲಬುದ್ಧಿಯವರಿಗೆ ಅದೇ ಕಾಣುತ್ತದೆ. ಹೀಗೇ ಜನಾರ್ದನನೂ ಭ್ರಾಂತಿಯಿಂದ ಜೀವನಂತೆ ಕಾಣುತ್ತಾನೆ ಎಂದು ಪ್ರಭಾಸಕ ಎಂಬ ಗ್ರಂಥದಲ್ಲಿದೆ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್‌ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ಸಪ್ತಮೋऽಧ್ಯಾಯಃ ॥

❖❖❖

ಅಧ್ಯಾಯ–೮

ಅಧ್ಯಾಯ ಸಾರಾಂಶ

ಹೆಬ್ಬಾವು ಅನಾಯಾಸವಾಗಿ ತನ್ನ ಬಾಯಿಗೆ ಸಿಗುವ ಕೊಳ್ಳೆಯನ್ನು ನುಂಗಿ ಮಲಗುತ್ತದೆ. ಏನೂ ಸಿಗದಿದ್ದರೂ ಸುಮ್ಮನೆ ಮಲಗುತ್ತದೆ. ಜ್ಞಾನಿಯೂ ದೈವೇಚ್ಛೆಯಿಂದ ಸಿಕ್ಕಿದ್ದರಲ್ಲಿ ತೃಪ್ತಿಪಡಬೇಕು. ಇಂದ್ರಿಯ ಸುಖ ದುಃಖದಂತೆಯೆ ಪ್ರಯತ್ನವಿಲ್ಲದೆಯೆ ಹೀನಜನ್ಮದಲ್ಲಿಯೂ ಸಿಗುತ್ತದೆ. ಅದಕ್ಕಾಗಿ ದುಡಿಯಬೇಕಾಗಿಲ್ಲ.

ಸಮುದ್ರ ನಿರ್ಮಲ. ಆಳವಾಗಿದ್ದು ಒಳಗೆ ಪ್ರವೇಶ ಮಾಡಲಾಗ ದುದು. ಅಪಾರವಾಗಿದ್ದು ದಾಟಲಾಗದುದು. ನಿಶ್ಚಲವಾಗಿರುತ್ತದೆ. ಜ್ಞಾನಿಯೂ ಸದಾ ಪ್ರಸನ್ನ, ಗಂಭೀರ ಅನ್ಯರಿಗೆ ತಿಳಿಯಲಾಗದವ, ಆಕ್ರಮಣಕ್ಕೊಳಗಾಗದವ, ಅಪಾರ ಬುದ್ಧಿಶಾಲಿ, ನಿಶ್ಚಲ. ಮಳೆಗಾಲ ದಲ್ಲಿ ನದಿಗಳು ತುಂಬಿ ಹರಿದು ಬಂದರೂ ತಾನು ಉಕ್ಕೇರದು. ಜ್ಞಾನಿ ವಿಷಯಪದಾರ್ಥಗಳು ಒದಗಿ ಬಂದಾಗ ಹಿಗ್ಗುವುದಿಲ್ಲ. ಬೇಸಗೆಯಲ್ಲಿ ನದಿಗಳು ಹರಿದು ಬಾರದಿದ್ದರೆ ಸಮುದ್ರ ಬತ್ತುವು ದಿಲ್ಲ. ಜ್ಞಾನಿಯು ವಿಷಯಪದಾರ್ಥ ಸಿಗದಿದ್ದಾಗ ಕುಗ್ಗುವುದಿಲ್ಲ.

ಪತಂಗ ಬೆಂಕಿಯ ರೂಪಕ್ಕೆ ಮರುಳಾಗಿ ಅದರಲ್ಲಿ ಬೀಳುವಂತೆ ಅಜ್ಞಾನಿ ಪರಸತಿಯರ ಮೋಹದಲ್ಲಿ ಬೀಳಬಾರದು.

ಜೇನುನೊಣ ಬೇರೆಬೇರೆ ಹೂಗಳಿಂದ ಸ್ವಲ್ಪಸ್ವಲ್ಪ ರಸವನ್ನು ಹೀರುವಂತೆ ಯತಿಯೂ ಬೇರೆಬೇರೆ ಮನೆಗಳಲ್ಲಿ ಸ್ವಲ್ಪಸ್ವಲ್ಪ ಅನ್ನವನ್ನು ಬೇಡಿ ಪಡೆಯಬೇಕು. ಜೇನುನೊಣ ಚಿಕ್ಕದು ದೊಡ್ಡದೆನ್ನದೆ ಎಲ್ಲ ಹೂಗಳಿಂದ ರಸವನ್ನು ಸಂಗ್ರಹಿಸುವಂತೆ ಮುಮುಕ್ಷು ಸಣ್ಣದೊಡ್ಡ ಎಲ್ಲ ಶಾಸ್ತ್ರಗಳಿಂದಲೂ ಪರಮಾತ್ಮ ತತ್ವಜ್ಞಾನವನ್ನು ಸಂಗ್ರಹಿಸಬೇಕು. ಜೇನುನೊಣ ಜೇನನ್ನು ಸಂಗ್ರಹಿಸಿಡುವಂತೆ ಮಾತ್ರ ಯತಿಯು ಹಣವನ್ನು ಬೇಡಿ ಸಂಗ್ರಹಿಸಬಾರದು. ಸಂಗ್ರಹಿಸಿದರೆ, ಜೇನಿನೊಂದಿಗೆ ನೊಣದಂತೆ ಹಣದೊಂದಿಗೆ ಯತಿಯೂ ನಾಶವಾಗುತ್ತಾನೆ.

ಆನೆಯನ್ನು ಖೆಡ್ಡಾದಲ್ಲಿ ಕೆಡವಲು ಪಳಗಿದ ಹೆಣ್ಣಾನೆಯನ್ನು ಕಟ್ಟಿರುತ್ತಾರೆ. ಅದರ ಅಂಗಸಂಗದಾಸೆಯಿಂದ ಗಂಡುಸಲಗ ಬಂದು

ಬೀಳುತ್ತದೆ. ಯತಿಯು ಹೆಣ್ಣಿನ ಬೊಂಬೆಯನ್ನು ಕೂಡ ಸ್ಪರ್ಶಿಸಬಾರದು. ಸ್ಪರ್ಶಿಸಿದರೆ ಸಂಸಾರ ಕೂಪದಲ್ಲಿ ಬೀಳುತ್ತಾನೆ. ಹೆಣ್ಣಾನೆಯ ಸಲುವಾಗಿ ಗಂಡು ಬೇರೆ ಆನೆಗಳೊಂದಿಗೆ ಜಗಳ ಕಾದು ಸಾಯುವುದುಂಟು. ಹಾಗೇ ಮಾನವ ಮಾಡಬಾರದು.

ಜೇನು ತೆಗೆಯುವವನು ನೊಣಗಳು ಕಷ್ಟದಿಂದ ಕೂಡಿಟ್ಟ ಜೇನನ್ನು ಅನಾಯಾಸವಾಗಿ ತೆಗೆದು ತಿನ್ನುತ್ತಾನೆ. ಗೃಹಸ್ಥರು ಕಷ್ಟದಿಂದ ಅನ್ನ ಸಿದ್ಧಪಡಿಸಿದರೆ ಯತಿ ಅವರ ವೈಶ್ವದೇವ ಹೋಮಕಾಲದಲ್ಲಿ ಹೋಗಿ ಅವರಿಗಿಂತಲೂ ಮೊದಲಿಗೆ ಅನ್ನ ಉಣ್ಣುತ್ತಾನೆ. ಅವನಿಗೆ ಭಿಕ್ಷಾನ್ನ ಉಣಿಸದೆ ಗೃಹಸ್ಥ ಮೊದಲಿಗೇ ಉಂಡರೆ ಅದಕ್ಕೆ ಪ್ರಾಯಶ್ಚಿತ್ತವಾಗಿ ಚಾಂದ್ರಾಯಣ ವ್ರತ ಮಾಡಬೇಕಾಗುವುದು.

ಜಿಂಕೆ ಬೇಟೆಗಾರನ ಸಂಗೀತ ಧ್ವನಿಗೆ ಮೈಮರೆತು ಅವನ ವಶವಾಗುತ್ತದೆ. ಯತಿಯೂ ಇಂದ್ರಿಯವನ್ನು ಕೆರಳಿಸುವ ಮಾದಕ ಸಂಗೀತಧ್ವನಿಯನ್ನು ಆಲಿಸಬಾರದು. ಋಷ್ಯಶೃಂಗ ಮುನಿ ರೋಮಪಾದರಾಜನ ವೇಶ್ಯೆಯರ ಗಾನಕ್ಕೆ ಮನಸೋತು ಅರಮನೆಯಲ್ಲಿಯೇ ಸಂಸಾರ ಹೂಡಿದನಂತೆ!

ಮೀನು ಜಿಹ್ವಾಚಾಪಲ್ಯಕ್ಕೊಳಗಾಗಿ ಗಾಳದಲ್ಲಿ ಸಿಕ್ಕುತ್ತದೆ. ಸಾಧಕನೂ ವಿಷಯಾಸೆಗೆ ಬಲಿಯಾಗಿ ಸಂಸಾರಮೃತ್ಯುಕೂಪದಲ್ಲಿ ಬೀಳಬಾರದು. ಆಹಾರವನ್ನು ಬಿಡುವುದರಿಂದ ಬೇರೆ ಇಂದ್ರಿಯ ಸೋತರೂ ಜಿಹ್ವೆ ಇನ್ನೂ ಹೆಚ್ಚಾಗಿಯೇ ಉಣಲು ಬಯಸುತ್ತದೆ.

ಪಿಂಗಳೆ ಎಂಬ ವೇಶ್ಯೆ ವಿದೇಹನಗರದಲ್ಲಿ ಸಂಜೆ ಮನೆಬಾಗಿಲಲ್ಲಿ ನಿಂತಿರುತ್ತಿದ್ದಳು. ತನಗೆ ಬೇಕಾದ ದೊಡ್ಡಮೊತ್ತವನ್ನು ನೀಡದ ಪುರುಷರನ್ನು ಆಕೆ ಬಳಿಗೆ ಸೇರಿಸಿಕೊಳ್ಳುತ್ತಿರಲಿಲ್ಲ. ಒಂದುದಿನ ಧನಿಕರು ಯಾರೂ ಬರಲಿಲ್ಲ. ಕಾದುಕಾದು ಸೋತಳು. ಮತ್ತೆ ಮತ್ತೆ ಮನೆಯೊಳಗೆ ಹೊರಗೆ ನಡೆದು ಅನ್ನನಿದ್ದೆಗಳನ್ನು ಬಿಟ್ಟು ಅರ್ಧರಾತ್ರಿಯನ್ನೇ ಕಳೆದಳು. ಕೊನೆಗೆ ಹತಾಶತೆಯಿಂದ ಮುಖ ಬಾಡಿತು. ದುಃಖ ಉಮ್ಮಳಿಸಿತು. ಮನದಲ್ಲಿ ವೈರಾಗ್ಯ ಮೂಡಿತು.

'ಅಯ್ಯೋ, ನಾನೆಂಥ ಮೂರ್ಖಳು! ನನಗೆ ಸುಖವನ್ನೂ ಸಂಪತ್ತನ್ನೂ

ನೀಡುತ್ತ ಪ್ರಿಯಕರನಾಗಿ ಶ್ರೀಹರಿ ನನ್ನೊಳಗೇ ಇರುವಾಗ ನಾನು ಅವನನ್ನು ಮರೆತು ತುಚ್ಛಮಾನವನಿಗಾಗಿ ಕಾಯುತ್ತಿದ್ದೇನೆ. ಹಣಕ್ಕೆ ಶರೀರವನ್ನು ಮಾರಿಕೊಳ್ಳುವ ಪರಮ ನೀಚವೃತ್ತಿಯಿಂದ ಬದುಕುತ್ತಿದ್ದೇನೆ.

ಈ ಶರೀರ ಎಲುವು ತೊಗಲು ಕೂದಲು ಉಗುರುಗಳಿಂದ ನಿರ್ಮಿತವಾದ ಹೊಲಸಿನ ಮನೆ. ನವದ್ವಾರಗಳಲ್ಲಿ ಸದಾ ಸೋರುವುದು. ಇದರಲ್ಲಿ ರತಿ ಸುಖ ಧನ ಸಂಪಾದನೆಗಳನ್ನು ಬಯಸುವ ನಾನೆಂಥ ಮೂರ್ಖಳು!

ಈ ವಿದೇಹನಗರದಲ್ಲಿ ನನ್ನಂಥ ಬುದ್ಧಿಶೂನ್ಯಳು ಇನ್ನಾರೂ ಇರಲಾರರು. ಸಾಕ್ಷಾತ್ ಶ್ರೀಹರಿಯೇ ನನ್ನೊಳಗಿರುವಾಗ ಅವನನ್ನು ಬಿಟ್ಟು ಬೇರೆ ಪ್ರಿಯಕರರಿಗಾಗಿ ಕಾಯುತ್ತಿದ್ದೇನೆ. ಅಚ್ಯುತನಿಗೇ ಈ ಶರೀರವನ್ನು ಒಪ್ಪಿಸಿ ಅವನನ್ನೇ ಕೊಂಡುಕೊಳ್ಳುತ್ತೇನೆ. ಅವನೊಂದಿಗೇ ರಮಿಸುತ್ತೇನೆ. ಮಾನವರು ನನಗೆ ಕೊಟ್ಟರೆ ಎಷ್ಟು ತಾನೆ ಕೊಡಬಲ್ಲರು? ದೇವತೆಗಳಾದರೂ ಸರಿಯೆ. ಅವರೂ ಕಾಲಕ್ಕೆ ವಶರಾಗುವವರೆ. ಉತ್ಪತ್ತಿನಾಶ ಉಳ್ಳವರೆ.

ಹಣಗಳಿಸುವ ದುರಾಸೆಯಿಂದ ಮನದ ನೆಮ್ಮದಿಯನ್ನೇ ಕಳೆದುಕೊಂಡಿದ್ದ ನನಗೆ ಈಗಲಾದರೂ ಸುಖಕರವಾದ ಈ ವೈರಾಗ್ಯ ಬಂದಿದೆ ಎಂದರೆ ನಿಶ್ಚಯವಾಗಿಯೂ ನನ್ನ ಯಾವುದೋ ಒಂದು ಪೂರ್ವಪುಣ್ಯಕರ್ಮಕ್ಕೆ ಹರಿ ಒಲಿದಿದ್ದಾನೆ. ಇಲ್ಲದಿದ್ದರೆ ಮಂದ ಭಾಗ್ಯಳಾದ ನನಗೆ ವೈರಾಗ್ಯ ಕಾರಣವಾದ ಇಂಥ ಕ್ಲೇಶ ಬರುತ್ತಿರಲಿಲ್ಲ. ಇನ್ನು ನಾನು ಹರಿಯನ್ನೇ ಮೊರೆಹೊಕ್ಕು ದೈವಾತ್ ಸಿಕ್ಕಿದ್ದರಲ್ಲಿಯೇ ತೃಪ್ತಿಪಟ್ಟು ಪ್ರಿಯಕರನಾದ ಹರಿಯೊಂದಿಗೇ ವಿಹರಿಸುತ್ತೇನೆ.''

ಹೀಗೆ ಹೇಳಿಕೊಳ್ಳುತ್ತ ಸುಖವಾಗಿ ಮಲಗಿದಳು ಪಿಂಗಳೆ. ವಿಷಯಾಸೆ ಪರಮದುಃಖ. ವೈರಾಗ್ಯವೇ ಪರಮಸುಖ.

❖❖❖

ಪತಂಗಹುಳದಿಂದ ತಾನೇನು ಪಾಠ ಕಲಿತೆನೆಂದು ಅವಧೂತಮುನಿ ಯದು ಮಹಾರಾಜನಿಗೆ ಹೇಳುತ್ತಾನೆ—

ದೃಷ್ಟ್ವಾಸ್ತ್ರಿಯಂ ದೇವಮಾಯಾಂ ತದ್ಭಾವೈರಜಿತೇಂದ್ರಿಯಃ।
ಪ್ರಲೋಭಿತಃ ಪತತ್ಯಂಧೇ ತಮಸ್ಯಗ್ನೌ ಪತಂಗವತ್ ॥ ೭ ॥

ಪತಂಗ ಬೆಂಕಿಯ ನೋಟಕ್ಕೆ ಮರುಳಾಗಿ ಅದರಲ್ಲಿ ಬೀಳುವಂತೆ ಭಗವಂತನ ಮೋಹಕಶಕ್ತಿಯಿಂದ ಆಕರ್ಷಿಸುವ ಪರಸ್ತ್ರೀಯನ್ನು ನೋಡಿದಾಗ ಇಂದ್ರಿಯನಿಗ್ರಹ ವಿಲ್ಲದವನು ಅವಳ ಹಾವಭಾವಗಳಿಗೆ ಮನಸೋತು ಅಂಧಂತಮಸಿನಲ್ಲಿ ಬೀಳುತ್ತಾನೆ.

ಯೋಷಿತ್ಸು ತಲ್ಪಾಭರಣಾಂಬರಾದಿ-
ದ್ರವ್ಯೇಷು ಮಾಯಾರಚಿತೇಷು ಮೂಢಃ।
ಪ್ರಲೋಭಿತಾತ್ಮಾ ಹ್ಯುಪಭೋಗಬುದ್ಧ್ಯಾ
ಪತಂಗವನ್ನಶ್ಯತಿ ನಷ್ಟದೃಷ್ಟಿಃ ॥ ೮ ॥

ಭಗವಂತನ ಇಚ್ಛೆಯಿಂದ ನಿರ್ಮಿತವಾದ ಹಾಸಿಗೆ ವಸ್ತ್ರಾಭರಣಾದಿದ್ರವ್ಯ ಗಳಲ್ಲಿಯೂ ಪರಸ್ತ್ರೀಯರಲ್ಲಿಯೂ ಅವೆಲ್ಲವೂ ತನ್ನ ಭೋಗಕ್ಕಾಗಿಯೇ ಇರುವವೆಂಬ ಕಲ್ಪನೆಯಿಂದ ಮೋಹಿತನಾಗಿ ಬುದ್ಧಿ ಕಳೆದುಕೊಂಡು ಪತಂಗದ ಹುಳದಂತೆ, ಭೋಗಿ ನಾಶವಾಗುತ್ತಾನೆ, ಯೋಗಿ ಇದರಿಂದ ಪಾಠ ಕಲಿಯಬೇಕು.

ಇಲ್ಲಿ ಸ್ತ್ರೀಕಾಮನೆಯಿಂದ ಅಂಧಂತಮಸ್ಸಾಗುವುದೆಂದು ಹೇಳಿದ್ದಕ್ಕೆ ವಿವರಣೆ ಬೇಕು. ಬೇರೆ ವ್ಯಾಖ್ಯಾನಕಾರರು ಈ ಬಗ್ಗೆ ವಿಚಾರಮಾಡಿಲ್ಲ. ಶ್ರೀಮದಾಚಾರ್ಯರು ಧರ್ಮಸಂಹಿತಾ ತಂತ್ರನಿರುಕ್ತ ಮಾಯಾವೈಭವ ಮುಂತಾದ ಗ್ರಂಥಗಳ ಆಧಾರದೊಂದಿಗೆ ಸರಿಯಾದ ವಿವರಣೆ ನೀಡಿದ್ದಾರೆ.

ಮಹತಾಂ ವನಿತಾಕಾಮಃ ಪತತ್ಯಂಧೇ ತಮಸ್ಯಲಂ।
ಅನ್ಯತ್ರ ನಿರಯಂ ಯಾತಿ ದುಃಖವಾನ್ ಸ್ಯಾದ್ ವಿಪರ್ಯಯೇ ॥
ಇತಿ ಧರ್ಮಸಂಹಿತಾಯಾಂ ॥

ಸ್ವೋತ್ತಮರಾದ ದೇವತೆಗಳು ಋಷಿಗಳು ಮುಂತಾದವರ ಪತ್ನಿಯರನ್ನು ಬಯಸುವವನು ಅಂಧಂತಮಸಿನಲ್ಲಿ ಬೀಳುತ್ತಾನೆ. 'ಅನ್ಯತ್ರ' ಸಮಾನಿಕರ ಕೆಳಗಿನವರ ಸ್ತ್ರೀಯರನ್ನು ಕಾಮಿಸುವವನು ನರಕವನ್ನು ಹೊಂದುವನು. 'ವಿಪರ್ಯಯೇ' ದೇವಋಷಿ ಮುಂತಾದವರು ತಮಗಿಂತ ಕೆಳಗಿನವರ ಪತ್ನಿಯರನ್ನು ಬಯಸಿದರೆ ಅಪಕೀರ್ತಿ ಮುಂತಾದವುಗಳಿಂದ ಸ್ವಲ್ಪ ದುಃಖ ಬರುವುದು ಎಂದು ಧರ್ಮಸಂಹಿತಾ ವಚನವಿದೆ.

ಮೋಹಕಾರಣಭೂತಾಂ ತು ಮಾಯೇತ್ಯಾಹುರ್ಮನೀಷಿಣಃ ।
ಅವಿದ್ಯಮಾನಂ ಮೇತ್ಯುಕ್ತಂ ತಜ್ ಜ್ಞಾಪಯತಿ ಯತ್ ಸ್ವಯಂ
ಕುತ್ರಚಿಜ್ ಜ್ಞಾನರೂಪಂ ಸಲ್ಲಾಭರೂಪಂ ಚ ಭಣ್ಯತೇ
ಮಯಂ ಪ್ರಾಚುರ್ಯಮುದ್ದಿಷ್ಟಂ ಮಾಯಾ ಸ್ಯಾತ್ಪ್ರಚುರೇತ್ಯಪಿ ।
ಇತಿ ತಂತ್ರನಿರುಕ್ತೇ ।

ಮೋಹವನ್ನು ಅಂದರೆ ಸುಖದಾಯಕಳೆಂದು ಭ್ರಮೆಯನ್ನು ಹುಟ್ಟಿಸುವ ಪರಸ್ತ್ರೀಯನ್ನು ಜ್ಞಾನಿಗಳು ಮಾಯೆ ಎನ್ನುತ್ತಾರೆ. ಏಕೆಂದರೆ 'ಮಾ' ಎನ್ನುವುದು ನಿಷೇಧಾರ್ಥಕ ಶಬ್ದ. ಅವಿದ್ಯಮಾನವನ್ನು ವಾಸ್ತವದಲ್ಲಿಲ್ಲದ್ದನ್ನು ಹೇಳುತ್ತದೆ. 'ಯಾ' ಪ್ರಾಪಣೇ ಗತ್ಯರ್ಥಕವಾದ್ದರಿಂದ 'ತಿಳಿಸುವುದು, ಇಲ್ಲದ್ದರ ಭ್ರಮೆ ಉಂಟುಮಾಡುವುದು' ಎಂಬ ಅರ್ಥವನ್ನು ಕೊಡುತ್ತದೆ. ಕೆಲವು ಕಡೆ, ಪ್ರಪಂಚವೇ ಮಾಯಾಮಯ ಮಾಯೆಯಿಂದಾದುದು ಎನ್ನುವಲ್ಲಿ ಮಾಯೆ ಎಂದರೆ 'ಮಾಜ್ ಮಾನೇ' 'ಯಾ ಪ್ರಾಪಣೇ' ಜ್ಞಾನರೂಪವಾಗಿದೆ ಮತ್ತು ಪರಮಲಾಭರೂಪ, ಆನಂದರೂಪವೂ ಆಗಿದೆ, ಜ್ಞಾನಾನಂದರೂಪವಾದ ಈಶ್ವರೇಚ್ಛೆ ಮಾಯೆ ಎನಿಸಿದೆ. 'ಮಯ' ಎಂದು 'ಮಯ ಗತೌ' ಧಾತುವಿನಿಂದ, ಧಾತುವಿಗೆ ಅನೇಕಾರ್ಥವಿರುವುದರಿಂದ, ಪ್ರಾಚುರ್ಯ, ಅಂದರೆ ಸರ್ವೋತ್ತಮತ್ವವೆಂಬ ಅರ್ಥವನ್ನು ಕೊಡುವುದರಿಂದ ಮಾಯಾ ಎಂದರೆ ಸರ್ವೋತ್ತಮವಾದ ಭಗವಂತನ ಇಚ್ಛೆ. ಈ ಮಾಯೆಯಿಂದಾದುದು 'ಮಾಯಾಮಯ' ಪ್ರಪಂಚ ಎಂದು ತಂತ್ರನಿರುಕ್ತಗ್ರಂಥದಲ್ಲಿ ಉಕ್ತವಾಗಿದೆ.

ಸ್ವತಂತ್ರಂ ಪರಮಾರ್ಥಾಖ್ಯಂ ಸ್ವತಂತ್ರೈಕಾ ಹರೇರ್ಮತಿಃ ।
ಸೈವ ಮಾಯಾ ಸಮುದ್ದಿಷ್ಟಾ ಮುಖ್ಯತಸ್ತತ್ ಸ್ವರೂಪಕಾ ।
ಮತಿಮನ್ಮತಿಭೇದೋಽಪಿ ನ ವಿಷ್ಣೋಃ ಕ್ವಚಿದಿಷ್ಯತೇ ।
ಪಾರಮಾರ್ಥ್ಯೇನ ನಾಸ್ತ್ಯೇವ ತದನ್ಯತ್ ತದ್ವಶಂ ಯತಃ ।
ಅನಾದ್ಯನಂತಕಾಲೇಽಪಿ ವಿದ್ಯಮಾನಮಪಿ ಧ್ರುವಂ ।
ಅತೋ ಮಾಯಾಮಯಂ ಚಾಹುಃ ಸರ್ವಂ ತದ್ ವಶಗಂ ಯತಃ ॥
ಇತಿ ಮಾಯಾವೈಭವೇ ॥

ಸ್ವತಂತ್ರವು ಪರಮಾರ್ಥವೆನಿಸುತ್ತದೆ. ಹರಿಯ ಮತಿಯೊಂದೇ ಸ್ವತಂತ್ರ. ಅದರಿಂದ 'ಅದ್ವೈತಂ ಪರಮಾರ್ಥತಃ' ಎಂಬಲ್ಲಿ ಪರಮಾರ್ಥವೆಂದು ಸ್ವತಂತ್ರ ವಸ್ತುವೇ ಉಕ್ತವಾಗುತ್ತದೆ. ಮಾಯಾ ಎಂದರೆ ಮುಖ್ಯವಾಗಿ ಸ್ವತಂತ್ರವಾದ ಹರಿಮತಿಯೆ ಉಕ್ತವಾಗುತ್ತದೆ. 'ಮಾಯಾಮಾತ್ರಮಿದಂ ದ್ವೈತಂ' ಎಂಬಲ್ಲಿ ದ್ವೈತವು

ಹರಿಮತಿಗೇ ಅಧೀನವೆಂದರ್ಥ. ಹರಿಮತಿಗೆ ಅಧೀನವೆಂದರೆ ಹರಿಗೆ ಅಧೀನವೆಂದಂತಾಗುವುದು. ಏಕೆಂದರೆ ಹರಿಮತಿಯು ಹರಿಸ್ವರೂಪವೇ ಆಗಿದೆ. ಹರಿಯಲ್ಲಿ, ಮತಿಉಳ್ಳವನಿಗೂ ಮತಿಗೂ ಭೇದವೆಂಬುದು ಎಂದೂ ಇಲ್ಲ. ದ್ವೈತವು, ಹರಿಗಿಂತ ಭಿನ್ನವಾದುದು, ಮಾಯಾಮಾತ್ರ, ಹರಿಮತಿಗೆ, ಹರಿಗೆ ಅಧೀನ. ಹೀಗಾಗಿ ಪರಮಾರ್ಥ, ಸ್ವತಂತ್ರ ವಸ್ತುವು ಪರಮಾತ್ಮ ಎಂಬ ತತ್ವ ಒಂದೇ. ಬೇರೆ ಯಾವುದೂ ಪರಮಾರ್ಥವಾಗಿ ಸ್ವತಂತ್ರವಾಗಿ ಇಲ್ಲ. ಅವನ ಅಧೀನವಾಗಿಯೆ ಇದೆ. ಅನಾದಿ ಅನಂತ ಕಾಲದಲ್ಲಿಯೂ ಅದು ಅಸ್ತಿತ್ವದಲ್ಲಿದ್ದರೂ ಅವನಿಗೆ ಅಧೀನವಾಗಿಯೇ ಇದೆ. ಇದು ನಿಶ್ಚಯ. ಅದರಿಂದ ಅದನ್ನು ಮಾಯಾಮಯ ಎನ್ನುತ್ತಾರೆ ಎಂದು ಮಾಯಾವೈಭವವೆಂಬ ಗ್ರಂಥದಲ್ಲಿದೆ.

ಸ್ವಾಧೀನಂ ಸದಿತಿ ಪ್ರೋಕ್ತಂ ಪರಾಧೀನಮಸತ್ಸ್ಮೃತಂ ।
ಅವಿದ್ಯಮಾನಮೇತಸ್ಮಾಜ್ಜಗದಾಹುರ್ವಿಪಶ್ಚಿತಃ ।
ಅನಾದ್ಯನಂತಕಾಲೇಷು ವಿದ್ಯಮಾನಮಪಿ ಧ್ರುವಂ ।
ಅಸ್ವಾತಂತ್ರ್ಯಾತ್ತು ನಾಸ್ತ್ಯೇವೇತ್ಯೇವಂ ವಾಚ್ಯಂ ಜಗತ್ ಸದಾ ॥

(ಅವಿದ್ಯಮಾನೋಽಪ್ಯವಭಾತಿ ಹಿ ದ್ವಯೋ (೧೧.೨.೩೮) ಇತ್ಯಾದಿ ಸ್ಥಳಗಳಲ್ಲಿ 'ಅವಿದ್ಯಮಾನ' ಎಂದರೆ 'ತನ್ನದಾಗಿ ಇಲ್ಲದ್ದು' ಎಂದು ಹರಿವಂಶ ವಚನಾನುಸಾರವಾಗಿ ಅರ್ಥ ಯುಕ್ತವೆ. ಮಾಯಾವೈಭವ ವಚನಾನುಸಾರ ಇನ್ನೊಂದು ಅರ್ಥವೂ ಇದೆ.) ಸ್ವತಂತ್ರವಾಗಿ ಇರುವುದೇ 'ಇದೆ', 'ವಿದ್ಯಮಾನವಾಗಿದೆ' ಎನಿಸುತ್ತದೆ. ಅಸ್ವತಂತ್ರವಾಗಿ ಇರುವುದು 'ಇಲ್ಲ', 'ಅವಿದ್ಯಮಾನ' ಎನಿಸುತ್ತದೆ. ಅದರಿಂದ ಈ ಜಗತ್ತು ಅನಾದಿ ಅನಂತಕಾಲಗಳಲ್ಲಿ ಸತ್ಯವಾಗಿ ಇರುವುದೇ ಆದರೂ ಅಸ್ವತಂತ್ರವಾಗಿ ಇರುವುದರಿಂದ ಅದನ್ನು 'ಇಲ್ಲ'ದ್ದು, 'ಅವಿದ್ಯಮಾನ' ಎಂದು ಭಾಗವತ ಹೇಳುತ್ತಿದೆ. ಅನಾದಿ ಅನಂತ ಕಾಲಗಳಲ್ಲಿ ಸತ್ಯವಾಗಿಯೇ ಇದ್ದರೂ ಅಸ್ವತಂತ್ರವಾಗಿರುವುದರಿಂದ ಜಗತ್ತು ಇಲ್ಲವೆಂದೇ ಹೇಳಲು ಯೋಗ್ಯವಾಗಿದೆ.

ಸದಾ ವೃತ್ತೇರ್ವಿದ್ಯಮಾನಮಿತಿ ಬ್ರೂಯಾದ್ಯದಿ ಕ್ವಚಿತ್।
ತಥಾಪಿ ನಾಶವದ್ಧೀದಂ ಪ್ರವಾಹಾದ್ಧ್ಯಸ್ಯ ನಿತ್ಯತಾ ।
ಅತೋ ನಿವರ್ತ್ಯಮಿತ್ಯಾಹುಃ ಪ್ರಪಂಚೋ ಹ್ಯಸ್ತಿ ಯದ್ಯಪಿ ।
ವಿಷ್ಣೋರಿಚ್ಛಾವಶತ್ವಾಚ್ಚ ಮಾಯಾಮಾತ್ರಮಿತಿ ಸ್ಫುಟಂ ।
ಪರಮಾರ್ಥಂ ತ್ವೇಕಮೇವ ಸ್ವಾತಂತ್ರ್ಯಾದ್ ವಿಷ್ಣುಮವ್ಯಯಂ ।

('ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ' ಎನ್ನುವ ಶ್ರುತಿಯು

ಜಗನ್ಮಿಥ್ಯಾತ್ವವನ್ನು ಹೇಳುತ್ತಿಲ್ಲ. ಅದು ಹೀಗೆ ಹೇಳುತ್ತಿದೆ—) ಪ್ರಪಂಚವು ಸದಾ ಇರುವುದರಿಂದ ಪರಮಾತ್ಮನಂತೆ ವಿದ್ಯಮಾನವೇ, ಸ್ವತಂತ್ರವೇ ಎಂದು ಯಾರಾದರೂ ಹೇಳುವ ಸಂಭವವಿದೆ. ಆದರೂ ಪ್ರಪಂಚ ನಾಶಉಳ್ಳದ್ದೆ. ಪ್ರವಾಹತಃ ನಿತ್ಯವಾಗಿದೆಯಷ್ಟೆ. ಹೀಗಾಗಿ 'ಪ್ರಪಂಚ ಸದಾ ಇದ್ದರೂ ಅದು ವಿನಾಶ ಹೊಂದುವಂಥದ್ದೆ' ಎಂದು ಶ್ರುತಿವಾಕ್ಯದ ಅರ್ಥ. ('ಮಾಯಾಮಾತ್ರಮಿದಂ ದ್ವೈತಂ' ಎಂಬ ಶ್ರುತಿವಾಕ್ಯಕ್ಕೆ ಇನ್ನೊಂದು ಅರ್ಥ ಹೀಗೆ—) ಮಾಯೆಗೆ, ವಿಷ್ಣುವಿನ ಇಚ್ಛೆಗೆ ಅಧೀನವಾದ್ದರಿಂದ ಜಗತ್ತನ್ನು ಮಾಯಾಮಾತ್ರವೆಂದು ಸ್ಫುಟವಾಗಿ ಶ್ರುತಿಗಳು ಹೇಳುತ್ತಿವೆ. ('ಅದ್ವೈತಃ ಸರ್ವಭಾವಾನಾಂ' ಎಂದು ದ್ವಿತೀಯಾಭಾವವನ್ನು ಹೇಳುವುದರ ಅಭಿಪ್ರಾಯ ಹೀಗೆ—) ನಾಶರಹಿತನಾದ ವಿಷ್ಣು ಒಬ್ಬನನ್ನು ಮಾತ್ರ ಸ್ವತಂತ್ರನಾದ್ದರಿಂದ 'ಪರಮಾರ್ಥ' ಎಂದು ಹೇಳುತ್ತಾರೆ. ಬೇರೇನೂ ಪರಮಾರ್ಥವಿಲ್ಲ ಎಂದು ಅಭಿಪ್ರಾಯ.

ಯದಿ ಕಲ್ಪಯತೀದಂ ಸ ಸ ಏವ ವಿನಿವರ್ತಯೇತ್ ।
ವಿಷ್ಣುಸ್ತಸ್ಮಾತ್ ತದ್ವಶತ್ವಾನ್ನಾಸ್ತೀತಿ ದ್ವೈತಮುಚ್ಯತೇ ।
ಸ್ವಾತಂತ್ರ್ಯೇಣ ಹರೌ ಜ್ಞಾತೇ ಪರಾಧೀನತ್ವನಿಶ್ಚಯಾತ್ ।
ಇತ್ಯಾಹುರುಪದೇಷ್ಟಾರ ಆಚಾರ್ಯಾಸ್ತತ್ವವೇದಿನಃ ॥

(ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್ ಎಂಬ ಶ್ರುತಿ ವಾಕ್ಯದ ಅರ್ಥ) ವಿಷ್ಣು ಈ ಜಗತ್ತನ್ನು ಸೃಜಿಸಲು ಶಕ್ತ. ಅದರಿಂದ ಅದನ್ನು ನಾಶ ಮಾಡುವುದಕ್ಕೂ ಅವನೇ ಶಕ್ತ. ಅದರಿಂದ ಜಗತ್ತು ಅವನ ಅಧೀನ ವಾಗಿರುವುದರಿಂದ, ಸ್ವತಂತ್ರವಾಗಿ ಇಲ್ಲದಿರುವುದರಿಂದ, ದ್ವೈತವು ಅಂದರೆ ವಿಷ್ಣುವಿಗಿಂತ ಬೇರೆ ವಸ್ತುವು 'ನಾಸ್ತಿ' ಎಂದು ಗೌಣವಾಗಿ ಹೇಳಲ್ಪಡುತ್ತದೆ. ಹರಿಯನ್ನು ಸ್ವತಂತ್ರನೆಂದು ತಿಳಿದಾಗ ಜಗತ್ತು ಅಸ್ವತಂತ್ರ ಎಂಬುದು ತುಲ್ಯವಿತ್ತಿವೇದ್ಯ. ನಿಶ್ಚಯವೇ ಉಂಟಾಗುತ್ತದೆ. ಹೀಗೆ ಉಪದೇಶ ಮಾಡುವ ತತ್ವವೇತ್ತರು ಆಚಾರ್ಯರು ಹೇಳುತ್ತಾರೆ.

ಯಥೈವ ರಾಜನಿ ಜ್ಞಾತೇ ನಾನ್ಯೋಽಸ್ತೀತಿ ಸ್ಫುಟಂ ವಚಃ ।
ಸ್ವಾತಂತ್ರ್ಯಾತ್ ಪಾರತಂತ್ರ್ಯಾಚ್ಚ ತದ್ಭೃತ್ಯಾದಿಷು ಸತ್ಸ್ವಪಿ ।
ಯಥೈಕಚ್ಛತ್ರವಾಂಶ್ಚೈವ ಏಕವೀರ ಇತೀವ ಚ ।
ತಥೈವ ಸರ್ವಪ್ರಾಧಾನ್ಯಾದ್ ಅದ್ವಿತೀಯೋ ಹರಿಃ ಸ್ಮೃತಃ ।
ಏವಂ ಮುಕ್ತಾ ವಿಜಾನಂತಿ ಸಾಯುಜ್ಯಂ ಪ್ರಾಪಿತಾ ವಿಭೋಃ ।

ಅನಂತಕಾಲಂ ಪಶ್ಯಂತೋ ಜಗದೇತಚ್ಚರಾಚರಂ ।
ತಸ್ಯೈತಸ್ಯ ಹ್ಯವಿಜ್ಞಾನಾತ್ ಕೇವಲ ಭ್ರಾಂತಿರೂಪಕಂ ।
ಜಗದುಕ್ತ್ವಾ ತಮೋ ಯಾಂತಿ ಹೀಶಿತವ್ಯೇಶ ಶಾಪತಃ ॥ಇತಿ ಚ ॥

(ಜ್ಞಾತೇ ದ್ವೈತಂ ನ ವಿದ್ಯತೇ' ಎಂದರೆ—) ಸ್ವತಂತ್ರನಾದ ರಾಜನಿರುವನೆಂದು ತಿಳಿದಾಗ ಪರತಂತ್ರರಾದ ರಾಜಭಟರು ಇದ್ದರೂ 'ರಾಜನಿದ್ದಾನೆ ಇನ್ನಾರೂ ಇಲ್ಲ' ಎಂದು ಸ್ಫುಟವಾಗಿ ಹೇಳುವುದುಂಟು. ಇದು ಗೌಣಪ್ರಯೋಗ. (ಹಾಗೇ ಸ್ವತಂತ್ರನಾದ ಹರಿ ಇರುವನೆಂದು ತಿಳಿದಾಗ ಪರತಂತ್ರವಾದ ಜಗತ್ತಿಲ್ಲ ಎನ್ನುವುದೂ ಗೌಣಪ್ರಯೋಗ.) ಬೇರೆ ಛತ್ರಉಳ್ಳವರು, ಬೇರೆ ವೀರರು ಅನೇಕರಿರುವಾಗ ಇವನೊಬ್ಬನೇ ಛತ್ರಉಳ್ಳವನು ಇವನೊಬ್ಬನೆ ವೀರ ಎಂದರೆ ಇದು ಗೌಣಪ್ರಯೋಗ. ಈತನಂಥ ಛತ್ರಧಾರಿ, ಈತನಂಥ ವೀರ ನಿನ್ನೊಬ್ಬನಿಲ್ಲ ಎಂದು ಅರ್ಥವಾಗುವಂತೆ, ಉತ್ತಮರು ಬ್ರಹ್ಮಾದಿಗಳು ಅನೇಕರಿರುವಾಗ ಅದ್ವಿತೀಯನು ಹರಿ ಎಂದರೆ ಹರಿಯಂಥ ಉತ್ತಮನು ಇನ್ನೊಬ್ಬನಿಲ್ಲ ಎಂದು ಸರ್ವೋತ್ತಮತ್ವವನ್ನೇ ಹೇಳಿದಂತಾಗುತ್ತದೆ. ಹರಿಸರ್ವೋತ್ತಮತ್ವಜ್ಞಾನಕ್ಕೆ ಸಾಯುಜ್ಯ ಫಲವಿದೆ. ಸಾಯುಜ್ಯ ಮುಕ್ತರು ಅನಂತಕಾಲದಲ್ಲಿಯೂ ಈ ಸತ್ಯವಾದ ಜಗತ್ತನ್ನು ನೋಡುತ್ತ ಹರಿಯ ಸ್ವಾತಂತ್ರ್ಯವನ್ನು ಹೀಗೆ ತಿಳಿಯುತ್ತಾರೆ. ಇದನ್ನು ತಿಳಿಯದೆ ಜಗತ್ತನ್ನು ಕೇವಲಭ್ರಾಂತಿ ಎಂದು ಹೇಳುವವರು ಅಸ್ವತಂತ್ರರಾದ ಬ್ರಹ್ಮಾದಿಗಳಿಂದಲೂ ಸ್ವತಂತ್ರನಾದ ಹರಿಯಿಂದಲೂ ಶಾಪವನ್ನು ಹೊಂದಿ ತಮಸಿಗೆ ಹೋಗುತ್ತಾರೆ ಎಂದೂ ಮಾಯಾವೈಭವದಲ್ಲಿದೆ.

ಪುತ್ರಾ ಮೇ ಯದಿ ವಿದ್ಯಂತೇ ಮರಿಷ್ಯಂತ್ಯೇವ ತೇ ಧ್ರುವಂ ।
ಯದಿ ರಾಜ್ಯಂ ಕರೋತ್ಯೇಷ ನಶ್ಯತ್ಯೇತದಸಂಶಯಂ ॥
ಇತಿ ಧೃತರಾಷ್ಟ್ರವಚನವತ್ 'ಪ್ರಪಂಚೋ ಯದಿ ವಿದ್ಯೇತೇ'ತ್ಯಾದಿ ॥
ಯದಿ ಶಬ್ದಸ್ತ್ವವಸ್ತುತ್ವೇ ಚಾಸ್ವಾತಂತ್ರ್ಯೇ ಚ ಸಂಶಯೇ ।
ಅವಸ್ತುಶಬ್ದಶ್ಚಾಶಕ್ತೇ ಹ್ಯಲ್ಪಶಕ್ತೌ ಚ ಕೀರ್ತ್ಯತೇ ॥
ಇತಿ ಶಬ್ದನಿರ್ಣಯೇ ॥

'ನನ್ನ ಮಕ್ಕಳು ಅಶಕ್ತರಾಗಿದ್ದಾರೆ ಅವರು ನಿಶ್ಚಿತವಾಗಿ ಸಾಯುತ್ತಾರೆ', ಈ ದುರ್ಯೋಧನ ರಾಜ್ಯಭಾರ ಮಾಡಲು ಅಶಕ್ತ, ಅವನು ಆಳಿದರೆ ರಾಜ್ಯವಿದು ನಿಶ್ಚಯವಾಗಿ ಹಾಳಾಗುವುದು' ಎಂದು ಧೃತರಾಷ್ಟ್ರನ ಮಾತಿದೆ. ಇದರಲ್ಲಿ ಯದಿ ಶಬ್ದ ಅಶಕ್ತಿಯನ್ನು ಹೇಳುತ್ತದೆ. ಹಾಗೇ 'ಪ್ರಪಂಚೋ ಯದಿ ವಿದ್ಯೇತ' ಎಂಬಲ್ಲಿಯೂ ಯದಿಶಬ್ದ ಅಶಕ್ತಿಯನ್ನು ಹೇಳುತ್ತದೆ.

ಶಬ್ದನಿರ್ಣಯದಲ್ಲಿ ಯದಿ ಶಬ್ದದ ಅರ್ಥ ಹೀಗೆ ಉಕ್ತವಾಗಿದೆ—'ಯದಿ ಶಬ್ದವು ಅವಸ್ತುತ್ವ ಅಸ್ವಾತಂತ್ರ್ಯ ಸಂಶಯ ಎಂದು ಮೂರು ಅರ್ಥಗಳಲ್ಲಿ ಪ್ರಯೋಗದಲ್ಲಿದೆ. ಅವಸ್ತುತ್ವವೆಂದರೆ ಅಶಕ್ತಿ ಅಥವಾ ಅಲ್ಪಶಕ್ತಿ' ಎಂದು.

❖❖❖

ಅವಧೂತಮುನಿ ಪಿಂಗಳೆ ಎಂಬ ವೇಶ್ಯೆಗೆ ಹೇಗೆ ಜ್ಞಾನೋದಯ ವಾಯಿತೆಂಬುದನ್ನು ಯದುಮಹಾರಾಜನಿಗೆ ಹೇಳುತ್ತಾನೆ—

ಸುಹೃತ್ಪ್ರೇಷ್ಠತಮೋ ನಾಥ ಆತ್ಮಾ ಚಾಯಂ ಶರೀರಿಣಾಮ್ ।
ತಂ ವಿಕ್ರೀಯಾತ್ಮನೈವಾಹಂ ರಮೇಽನೇನ ಯಥಾ ರಮಾ ॥ ೩೪ ॥

ಎಲ್ಲ ಶರೀರಿಗಳಿಗೂ ಅಂತರ್ಯಾಮಿ ಬಂಧು ಅತ್ಯಂತಪ್ರಿಯಕರ ಸ್ವಾಮಿ ಅಚ್ಯುತ. ನನ್ನ ಶರೀರವನ್ನು ಅವನಿಗೇ ಒಪ್ಪಿಸಿ ಅವನನ್ನೇ ಕೊಂಡುಕೊಳ್ಳುತ್ತೇನೆ. ರಮೆಯಂತೆ ನಾನೂ ಅವನೊಂದಿಗೆ ರಮಿಸುತ್ತೇನೆ.

ಮುಂದೆ 42ನೇ ಶ್ಲೋಕದಲ್ಲಿ 'ಉಪಶಮಮಾಸ್ಥಾಯ' 'ಪಿಂಗಳೆ ಭಗವಂತನಲ್ಲಿ ಭಕ್ತಿಯನ್ನು ಹೊಂದಿ ಸುಖವಾಗಿ ನಿದ್ದೆ ಮಾಡಿದಳು' ಎಂದು ಅವಧೂತಮುನಿ ಹೇಳುತ್ತಾನೆ. 'ಉಪಶಮ' ಎಂದರೆ ಭಗವಂತನಲ್ಲಿ ಭಕ್ತಿ. ಪ್ರಕೃತಶ್ಲೋಕದಲ್ಲಿಯೂ 'ಆತ್ಮಾ ಚಾಯಂ ಶರೀರಿಣಾಂ' ಎಲ್ಲ ಶರೀರಿಗಳಲ್ಲಿ ಅಂತರ್ಯಾಮಿ ಎಂದು ಶ್ರೀಹರಿಯನ್ನು ಕೊಂಡಾಡುತ್ತಾಳೆ. ಹಿಂದೆ 32ನೇ ಶ್ಲೋಕದಲ್ಲಿಯೂ 'ಯದಸ್ಥಿಭಿ-ರ್ನಿರ್ಮಿತ ವಂಶ' 'ಭೌತಿಕ ಶರೀರ ಎಂಬುದು ಎಲುಬು ತೊಗಲು ಮುಂತಾದವುಗಳಿಂದ ಕಟ್ಟಿದ ಹೊಲಸು ತುಂಬಿದ ಮನೆ' ಎಂದು ಹೇಳುತ್ತ ಬಾಹ್ಯಶರೀರದ 'ಕಾಮಲಾಲಸೆ' ತನಗೆ ಇಲ್ಲವೆಂದು ಸೂಚಿಸಿದ್ದಾಳೆ. ಆದರೂ [1]ಬೇರೆ ವ್ಯಾಖ್ಯಾನಕಾರರು ಪಿಂಗಳೆಯ ಭಕ್ತಿ ಶುದ್ಧಭಕ್ತಿಯಲ್ಲ ಕಾಮಲಾಲಸೆ, ಭೋಗತೃಷ್ಣೆ ಎನ್ನುತ್ತಾರೆ. ಹಾಗಾದರೆ ಅವಧೂತಮುನಿ ಪಿಂಗಳೆಯಿಂದ ಇಂಥ ಕಾಮಲಾಲಸೆಯಪಾಠವನ್ನೇ ಕಲಿತನೆ?

ಪಿಂಗಳೆಯದು ಶುದ್ಧಭಕ್ತಿ. ಅವಳು ಪೂರ್ವಜನ್ಮದಲ್ಲಿ ಒಬ್ಬಳು ಅಪ್ಸರೆ. ಅಪ್ಸರೆಯರು ಅಪರೋಕ್ಷಿಗಳು, ಭಗವಂತನನ್ನೇ ಬಯಸುವವರು ವಿಷಯಲಾಲಸೆ ಇಲ್ಲದವರು. ಅದರಿಂದ ಪಿಂಗಳೆಗೆ ಭಗವಂತನಲ್ಲಿ ಕೇವಲ ದೈಹಿಕ ಆಕರ್ಷಣೆಯಲ್ಲ. ಆದರೂ ಅವಳು ಪರಮಾತ್ಮನ ಪತ್ನಿಯಾಗುವೆನೆಂದು ಬಯಸುವುದು ತಪ್ಪಲ್ಲವೆ?

---

1. 'ಉಪಶಮಂ ಬುದ್ಧೇಃ ಶ್ರೀಕೃಷ್ಣಕಾಂತ್ಯೈಕನಿಷ್ಠಾರೂಪಂ ರಾಗಂ । ತಥಾ ಚಾಸ್ಯಾ ರಾಗರೂಪಾ ಭಕ್ತಿಃ ನ ತು ವೈಧೀತಿ ಸೂಚಿತಂ । -ರಾಧಾರಮಣದಾಸಃ

ಊರ್ವಶಿಯಂಥ ಶ್ರೇಷ್ಠ ಅಪ್ಸರೆಯರೂ ಇದನ್ನು ಅಯೋಗ್ಯ ಬಯಕೆ ಎಂದು ತಿಳಿದು ಭಯಪಡುವಾಗ ಪಿಂಗಳೆ ಅದನ್ನು ಬಯಸಬಹುದೆ? 'ರಮೇऽನೇನ ಯಥಾ ರಮಾ' ರಮೆಯಂತೆ ಹರಿಯೊಂದಿಗೆ ರಮಿಸುವೆನೆನ್ನುವುದಂತೂ ರಮಾಸಾಮ್ಯದ ಬಯಕೆ, ಅತ್ಯಂತ ಅನರ್ಥಕರವಲ್ಲವೆ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಶ್ರೀಮದಾಚಾರ್ಯರು ಮಾತ್ರ ಸಮಾಧಾನ ನೀಡಬಲ್ಲರು. ಸ್ವಾಭಾವ್ಯ ಗ್ರಂಥದ ಆಧಾರ ತೋರಿಸುತ್ತ ಸಮಾಧಾನ ನೀಡಿದ್ದಾರೆ.

ಭಗವದ್‌ಭಾರ್ಯತಾಯೋಗ್ಯಾಃ ಕಾಶ್ಚಿದಪ್ಸರಸಃ ಸ್ತ್ರಿಯಃ ।
ರಮಾವೇಶಾತ್ ಕದಾಚಿತ್ ಸ್ಯುಸ್ತಾಸ್ವೇಕಾ ಪಿಂಗಲಾऽಭವತ್ ।
ತದನ್ಯಾಸಾಂ ಮಹಾನ್‌ದೋಷೋ ಭಗವದ್‌ಭರ್ತೃತಾಸ್ಮೃತೌ ॥
ಇತಿ ಸ್ವಾಭಾವ್ಯೇ ॥

ಕೆಲವು ಅಪ್ಸರೆಯರು ರಮೆಯ ಆವೇಶದಿಂದ ಕೆಲವೊಮ್ಮೆ ಭಗವಂತನ ಪತ್ನಿಯರಾಗಲು ಯೋಗ್ಯರು. ಅವರಲ್ಲಿ ಪಿಂಗಳೆಯೂ ಒಬ್ಬಳಾಗಿದ್ದಳು. ಬೇರೆ ಸ್ತ್ರೀಯರು ಭಗವಂತನ ಪತ್ನಿಯರಾಗಿ ರಮಾಸಾಮ್ಯವನ್ನು ಪಡೆಯಲು ಬಯಸಿದರೆ ಮಹಾಅನರ್ಥ ಉಂಟಾಗುವುದು ಎಂದು ಸ್ವಾಭಾವ್ಯಗ್ರಂಥದಲ್ಲಿ ಹೇಳಿದೆ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್‌ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ಅಷ್ಟಮೋऽಧ್ಯಾಯಃ ॥

❖❖❖

ಅಧ್ಯಾಯ–೯

ಅಧ್ಯಾಯ ಸಾರಾಂಶ

ಕುರವಹಕ್ಕಿ ಮಾಂಸದ ತುಂಡನ್ನು ಬಾಯಲ್ಲಿ ಕಚ್ಚಿಕೊಂಡಿತ್ತು. ಆಗ ಬೇರೆ ಹಕ್ಕಿಗಳು ಹೊಡೆಯಲಾರಂಭಿಸಿದವು. ಅದಕ್ಕೆ ಹಕ್ಕಿ ಮಾಂಸವನ್ನು ಬಿಟ್ಟುಕೊಟ್ಟು ನೆಮ್ಮದಿ ಹೊಂದಿತು. ಮನುಷ್ಯರಿಗೆ ಸಂಪತ್ತು ಕೂಡಿಡುವ ಸ್ವಭಾವವಿರುತ್ತದೆ. ಆದರೆ ಅದರಲ್ಲಿ ಸುಖವಿಲ್ಲ. ಸಂಪತ್ತು ಕೂಡಿಡುವಾಗ ಸುಖವೆನಿಸಿದರೂ ಕೊನೆಯಲ್ಲಿ ದುಃಖವಿದೆ. ಇದನ್ನು ಮೊದಲೇ ತಿಳಿದುಕೊಂಡು ಕೂಡಿಡದೇ ಇರಬೇಕು. ಆಗ ತತ್ಕಾಲದಲ್ಲಿ ಸುಖವಿಲ್ಲದಿದ್ದರೂ ಕೊನೆಯಲ್ಲಿ ಸುಖ ನೆಮ್ಮದಿಗಳಿವೆ.

ಮಗುವಿಗೆ ಮಾನಾಪಮಾನಗಳ ಚಿಂತೆಯಿಲ್ಲ. ಹಣ ಸಂಪಾದನೆಯ ಚಿಂತೆಯಿಲ್ಲ. ಯಾರ ಭಯವೂ ಇಲ್ಲ. ಆಟವಾಡುತ್ತ ಸುಖವಾಗಿರುತ್ತದೆ. ಮಾನವ ಮಗುವಿನಂತಿರಬೇಕು. ಪರಮಾತ್ಮನೊಂದಿಗೆ ಆಟವಾಡುವುದರಲ್ಲಿಯೇ ಸುಖ ಕಾಣಬೇಕು. ಯಾವ ಚಿಂತೆಯೂ ಇಲ್ಲದೆ ಪರಮಾನಂದ ಮಗ್ನರಾಗಿರುವವರೆಂದರೆ ಲೋಕದಲ್ಲಿ ಇಬ್ಬರೆ. ಒಬ್ಬ ಏನೂ ಅರಿಯದ ಬಾಲಕ. ಇನ್ನೊಬ್ಬ ಹರಿಯನ್ನು ಕಂಡ ಭಕ್ತ.

ಕುಮಾರಿ, ಮದುವೆಯಾಗದಿದ್ದ ಕನ್ಯೆಯೊಬ್ಬಳು ಮನೆಯಲ್ಲಿ ಒಬ್ಬಳೇ ಇದ್ದಳು. ಮನೆಮಂದಿ ಹೊರಗೆ ಎಲ್ಲಿಗೋ ಹೋಗಿದ್ದರು. ಆಗ ಕನ್ಯಾರ್ಥಿಗಳು ಮನೆಗೆ ಬಂದರು. ಕನ್ಯೆ ತಾನೇ ಅವರನ್ನು ಸತ್ಕರಿಸಬೇಕಾಯಿತು. ಅದಕ್ಕೆ ಬತ್ತಕುಟ್ಟಲು ತೊಡಗಿದಾಗ, ಕೈಬಳೆಗಳು ಸದ್ದು ಮಾಡಿದರೆ ತಮ್ಮ ಬಡತನವನ್ನು ತಿಳಿದಾರೆಂದು ಚತುರೆಯಾದ ಆಕೆ ಬಳೆಗಳನ್ನು ಒಂದೊಂದಾಗಿ ತೆಗೆದಳು. ಎರಡು ~~ಬಳೆಗಳೂ ಸದ್ದು ಮಾಡುವು ದೆಂದು ಒಂದೇ ಬಳೆ ಉಳಿಸಿಕೊಂಡು~~ ಸದ್ದಿಲ್ಲದೆ ಕೆಲಸ ಮಾಡಿದಳು. ಬಹು ಜನ ಸೇರಿದರೆ ಕಲಹ, ಇಬ್ಬರಿದ್ದರೂ ಹರಟೆ. ಒಬ್ಬನೇ ಇರಬೇಕು, ಕನ್ಯೆಯ ಕೈಬಳೆಯಂತೆ.

ಬಾಣಗಾರ ಒಂದು ಹರಿತವಾದ ಬಾಣವನ್ನು ತಯಾರಿಸುವಾಗ ತನ್ಮಯನಾಗಿದ್ದು ಬಳಿಯಲ್ಲಿಯೇ ಒಬ್ಬ ರಾಜ ನಡೆದು ಹೋದುದನ್ನು ಅರಿಯದೆ ಹೋದ. ನಾನೂ ಹಾಗೆ ತನ್ಮಯತೆಯಿಂದ ಪರಮಾತ್ಮನನ್ನು ಆಲೋಚಿಸುತ್ತ ಹೊರಗೆ ಒಳಗೆ ಏನು ನಡೆದರೂ ತಿಳಿಯದಿರುತ್ತೇನೆ. ಪರಮಾತ್ಮನಲ್ಲಿಯೇ ಮನಸಿಟ್ಟರೆ, ಮನಸಿನಿಂದ ದುಷ್ಕರ್ಮ ದೂರವಾಗುತ್ತದೆ. ಸತ್ವಗುಣ ವೃದ್ಧಿಯಾಗುತ್ತದೆ. ವೃದ್ಧಿ ಹೊಂದಿದ ಸತ್ವಗುಣದಿಂದ ರಜೋಗುಣ ತಮೋಗುಣಗಳನ್ನು ನೀಗಿಕೊಂಡು ಮನಸು ಕಟ್ಟಿಗೆ ಇಲ್ಲದ ಬೆಂಕಿಯಂತೆ ತಾನೇ ಶಾಂತವಾಗುತ್ತದೆ.

ಸರ್ಪ ಗೆದ್ದಲುಹುಳುಗಳು ಮಾಡಿದ ಹುತ್ತವನ್ನು ಹೊಕ್ಕು ಸುಖವಾಗಿರುತ್ತದೆ. ಮನೆ ಕಟ್ಟಿಕೊಳ್ಳುವುದು ಕಷ್ಟ. ಅಶಾಶ್ವತವಾದ ಶರೀರದ ರಕ್ಷಣೆಗಾಗಿ ಮನೆ ಕಟ್ಟಿಕೊಳ್ಳುವುದೂ ವ್ಯರ್ಥ. ಒಬ್ಬನೇ ಹರಿಧ್ಯಾನ ಮಾಡುತ್ತ ಸಂಚರಿಸುತ್ತಿರಬೇಕು.

ಜೇಡರಹುಳು ಹೊಟ್ಟೆಯಿಂದ ದಾರವನ್ನು ಹೊರಗೆ ಹಾಕಿ ಬಾಯಿಯಿಂದ ಬಲೆ ಹೆಣೆದು ಆ ಬಲೆಯಲ್ಲಿಯೇ ಯಥೇಚ್ಛ ವಿಹಾರಮಾಡಿ ತಿರುಗಿ ಅದನ್ನು ನುಂಗುವುದು. ಹಾಗೇ ಪರಮಾತ್ಮ ಸೃಷ್ಟಿಕಾಲ ಬಂದಾಗ ತನ್ನ ಉದರದಿಂದ ಜಗತ್ತನ್ನು ಹೊರಗೆ ಹಾಕಿ ಸೃಷ್ಟಿ ಮಾಡಿ ವಿಹರಿಸಿ ಲಯಕಾಲದಲ್ಲಿ ತಿರುಗಿ ಉದರದೊಳಗೆ ಸೇರಿಸಿಕೊಳ್ಳುತ್ತಾನೆ.

ಕಣಜದ ಹುಳು ಮರಿಹುಳುವನ್ನು ಗೋಡೆಯಲ್ಲಿ ಗೂಡಿನೊಳಗೆ ಇರಿಸಿ ಸಾಕುತ್ತದೆ. ಅದು ಮೊದಮೊದಲಿಗೆ ಕೋಪ ಮಾಡಿದರೂ ಕೊನೆಗೆ ಪ್ರೀತಿಯಿಂದಲೆ ತಾಯಿಕಣಜವನ್ನು ನಿರಂತರ ಧ್ಯಾನಮಾಡಿ ಪ್ರೀತಿಯ ಕಣಜದ ಆಕೃತಿಯನ್ನೇ ಪಡೆಯುತ್ತದೆ. ಹಾಗೆ ಜೀವನೂ ಪರಮಾತ್ಮನಲ್ಲಿ ಪ್ರೀತಿಯಿಂದ ಪ್ರೀತಿವಿಷಯವಾದ ಸುಖಸ್ವರೂಪ ವನ್ನಾಗಲಿ, ದ್ವೇಷದಿಂದ ದ್ವೇಷವಿಷಯವಾದ ದುಃಖಸ್ವರೂಪ ವನ್ನಾಗಲಿ ತನ್ಮಯತೆಯಿಂದ ಧ್ಯಾನಿಸಿದರೆ, ಕೊನೆಗೆ ಮೋಕ್ಷದಲ್ಲಿ ಪ್ರೀತಿವಿಷಯ ಸುಖಸ್ವರೂಪನೋ ತಮಸಿನಲ್ಲಿ ದ್ವೇಷವಿಷಯ ದುಃಖಸ್ವರೂಪನೋ ಆಗುತ್ತಾನೆ.

ಹೀಗೆ ಇಪ್ಪತ್ತನಾಲ್ಕು ಗುರುಗಳಿಂದ ನಾನು ನೀತಿ ಪಾಠ ಕಲಿತಿದ್ದೇನೆ. ರಾಜನೆ, ನಾನೀಗ **ನನ್ನ ಶರೀರ**ದಿಂದಲೂ ಪಾಠ ಕಲಿತಿದ್ದೇನೆ. ನನ್ನ ಶರೀರವೇ ನನಗೆ ಗುರುವಾಯಿತು. ಅದು ನನಗೆ ನಿತ್ಯಾನಿತ್ಯ ವಸ್ತು ವಿವೇಕವನ್ನು ಉಂಟುಮಾಡಿ ವೈರಾಗ್ಯ ತಂದುಕೊಟ್ಟಿತು. ಅದರಿಂದ ನಾನು ಪರಾಪರ ತತ್ವಗಳನ್ನು ಶಾಸ್ತ್ರದಿಂದ ವಿಮರ್ಶೆಮಾಡಿ ಸರಿಯಾಗಿ ತಿಳಿಯುತ್ತಿದ್ದೇನೆ. ಈ ನನ್ನ ಶರೀರ ಸರ್ವಾಧಾರನಾದ ಆನಂದ ಮೂರ್ತಿಯಾದ ಪರಮಾತ್ಮನನ್ನು ತನ್ನೊಳಗೆ ತುಂಬಿಕೊಂಡಿದೆ. ಹೀಗಿದ್ದರೂ ಇದು ಭಗವಂತ ನನಗೆ ಕೊಟ್ಟಿದ್ದು, ನನ್ನಾತ್ಮಸ್ವರೂಪಕ್ಕೆ ಸಂಬಂಧಿಸಿದ್ದಲ್ಲ ಎಂದರಿತು ಹೆಚ್ಚಿನ ಆಸಕ್ತಿ ಇರಿಸಿಕೊಳ್ಳದೆ ಸಂಚರಿಸುತ್ತಿದ್ದೇನೆ.

ಹೆಂಡತಿ ಮಕ್ಕಳು ಮುಂತಾದ ಬಂಧುವರ್ಗದ ಪೋಷಣೆಯಲ್ಲಿ ಆಸಕ್ತನಾದವನು ಪುನರ್ಜನ್ಮಕ್ಕೆ ಕಾರಣವಾಗಬಲ್ಲ ಈ ಕಾರ್ಯಕ್ಕೆ ಮೋಕ್ಷಸಾಧನವಾದ ಈ ಶರೀರವನ್ನು ಬಳಸಿಕೊಳ್ಳುವುದು ಅನ್ಯಾಯ. ಮುಂದಿನ ಶರೀರಗಳನ್ನು ಸಿದ್ಧಪಡಿಸಿಕೊಂಡು ಆತ ನರಕಾದಿ

ಕ್ಲೇಶಭಾಗಿಯಾಗುತ್ತಾನೆ. ಮರಗಿಡಗಳು ತಮಗರಿವಿಲ್ಲದಂತೆಯೇ ಬೇರೆ ಮರಗಳ ಉತ್ಪತ್ತಿಗೆ ಕಾರಣವಾಗಬಲ್ಲ ಹೂ ಹಣ್ಣು ಬೀಜಗಳನ್ನು ಬೆಳೆಸಿ ಪೋಷಿಸಿ, ಒಣಗಿ ಸತ್ತುಹೋಗುವುವು. ಮಾನವನ ದೇಹ ಹೀಗಾಗಬಾರದು.

ಅಜ್ಞಾನಿ ವಿಷಯಸುಖಕ್ಕಾಗಿ ಈ ಸಾಧನಶರೀರವನ್ನು ಬಳಸಿಕೊಂಡು ಬಂಧಕ ಕರ್ಮಗಳನ್ನು ಮಾಡುತ್ತಾನೆ. ಇಂದ್ರಿಯಗಳು ಅವನನ್ನು ವಿಷಯಪದಾರ್ಥಗಳ ಕಡೆಗೆ ಬಲವಾಗಿ ಸೆಳೆಯುತ್ತವೆ, ಹಿಂಸೆ ಮಾಡುತ್ತವೆ. ವಿವೇಕಿಯಾದ ಮಾನವ ಎಚ್ಚೆತ್ತು ಅಮೂಲ್ಯವಾದ ಈ ಸಾಧನಶರೀರ ಬಿದ್ದುಹೋಗುವುದರೊಳಗೇ ಸಾಧನ ಮಾಡಿಕೊಳ್ಳ ಬೇಕು.

ಭಗವಂತನ ಅಪಾರ ಮಹಿಮೆಗಳನ್ನು ಒಬ್ಬನೇ ಗುರು ಉಪದೇಶಿಸ ಲಾರ. ಒಬ್ಬನೇ ಗುರು ಉಪದೇಶಿಸಿದ್ದು ಸ್ಥಿರವೂ ಆಗಿ ನಿಲ್ಲದು. ಅದರಿಂದ ಅನೇಕ ಗುರುಗಳು ಬೇಕು.

ಹೀಗೆ ಜ್ಞಾನಿಯಾದ ಅವಧೂತಮುನಿ ಯದು ಮಹಾರಾಜನಿಗೆ ಉಪದೇಶಿಸಿ ಅವನಿಂದ ಪ್ರೀತಿಯ ಸತ್ಕಾರಪಡೆದು ಸಂತುಷ್ಟನಾಗಿ ಹೊರಟುಹೋದ. ನಮ್ಮ ಕುಲದ ಹಿರಿಯರಿಗೂ ಹಿರಿಯನಾದ ಯದುಮಹಾರಾಜ ಮುನಿಯ ಉಪದೇಶದಂತೆ ಜ್ಞಾನ ಸಂಪಾದಿಸಿ ಪರಮಾತ್ಮನಲ್ಲಿ ಸ್ಥಿರವಾಗಿ ಮನವನ್ನಿರಿಸಿದ.

❖❖❖

ಕುಮಾರಿಯ ಕೈಬಳೆಯಿಂದ ತಾನು ಕಲಿತುದನ್ನು ಅವಧೂತಮುನಿ ಯದುಮಹಾರಾಜನಿಗೆ ಹೇಳುತ್ತಾನೆ.

ವಾಸೇ ಬಹೂನಾಂ ಕಲಹೋ ಭವೇದ್ವಾರ್ತಾ ದ್ವಯೋರಪಿ ।
ಏಕ ಏವ ಚರೇತ್ತಸ್ಮಾತ್ಕುಮಾರ್ಯಾ ಇವ ಕಂಕಣಃ ॥ ೧೦ ॥

'ಬಹು ದುರ್ಜನರು ಕಲೆತಾಗ ಕಲಹ. ಇಬ್ಬರು ಜತೆಗಿದ್ದರೂ ಹರಟೆ. ಅದರಿಂದ ಒಬ್ಬನೇ ಇರಬೇಕು. ಕುಮಾರಿಯ ಕೈಬಳೆಯಂತೆ' ಎಂದು.

'ಕೈಬಳೆಯ ಉಪದೇಶ ಜ್ಞಾನಮಾರ್ಗಿಗಳಿಗೇ ಹೊರತು ಭಕ್ತಿಮಾರ್ಗಿಗಳಿಗೆ ಅಲ್ಲ. ಜ್ಞಾನಮಾರ್ಗ ತನ್ನನ್ನು ಆಶ್ರಯಸಿದ ಮುನಿಗಳನ್ನು ಯಾರ ಸಂಗವನ್ನು ಮಾಡಲು ಬಿಡದು. ದರಿದ್ರಕನ್ಯೆ ತನಗೆ ವರನು ಸಿಗದಿದ್ದಾಗ ಕೈಬಳೆ ಸದ್ದು ಮಾಡ

ಬಾರದೆಂದು ಅವನ್ನು ದೂರಮಾಡಿಕೊಳ್ಳುತ್ತಾಳೆ. ಭಕ್ತಿಯೋಗ ರಾಜಕುಮಾರಿ ಯಂತೆ. ಅವಳು ಪತಿಯನ್ನು ವರಿಸಿ ಅವನ ಬಳಿಗೆ ಹೋಗುವಾಗ ಕೈಬಳೆ ಸದ್ದು ಮಾಡಬೇಕು. ಭಕ್ತಿದೇವಿಯೂ ಹಾಗೆ ತನ್ನನ್ನು ಆಶ್ರಯಿಸಿದ ವಿಷ್ಣುಭಕ್ತರನ್ನು ಮಧುರ ಸಂಕೀರ್ತನ ಧ್ವನಿ ಮಾಡಿರೆನ್ನುತ್ತಾಳೆ. ಅವರನ್ನು ಪರಸ್ಪರ ಸೇರಿಸುತ್ತಾಳೆ ದೂರ ಮಾಡುವುದಿಲ್ಲ' ಎಂದು ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ.

ಈ ವ್ಯಾಖ್ಯಾನದ ಪ್ರಕಾರ, ಅವಧೂತಮುನಿ ಸಾಕ್ಷಾದ್ ದತ್ತಾತ್ರೇಯಯೋಗಿ. ಅವನು ತನ್ನನ್ನು ತಾನೆ ವರನಿಲ್ಲದ ದರಿದ್ರಕನ್ಯೆಯಂತೆ ಏಕಾಕಿಯಾಗಿ ಅಲೆಯುವ ಜ್ಞಾನಮಾರ್ಗಿ ಎಂದು ಹಳಿದುಕೊಳ್ಳುವನೆ? ಹೀಗೆ ಈ ಅವಧೂತಗೀತೆ ಅದ್ವೈತ ಜ್ಞಾನಿಗಾಗಿ ಇದೆ ಹೊರತು ಭಕ್ತರಿಗಾಗಿ ಅಲ್ಲ ಎಂದು ಪರ್ಯಾಯವಾಗಿ ಹೇಳಿದಂತೆಯೂ ಆಯಿತು.

ವಸ್ತುತಃ ಭಾಗವತದಲ್ಲಿಯೂ ಮುಂದೆ ಶ್ರೀಕೃಷ್ಣನೆ 'ಜ್ಞಾನೀ ಪ್ರಿಯತಮಃ' (11.19.3) ಎಂದು ಜ್ಞಾನಯೋಗಿಯನ್ನು ತನಗೆ 'ಪ್ರಿಯತಮ' ಎನ್ನುತ್ತಾನೆ. 'ಜ್ಞಾನೀತ್ವಾತ್ಮೈವ ಮೇ ಮತಂ' ಎಂದು ಜ್ಞಾನಯೋಗಿಯನ್ನು ಶ್ರೀಕೃಷ್ಣನೇ ಗೀತೆಯಲ್ಲಿ ಹೊಗಳುತ್ತಾನೆ. ಅದರಿಂದ 'ಏಕ ಏವ ಚರೇತ್' ಜ್ಞಾನಯೋಗಿ ಏಕಾಂಗಿ ಯಾಗಿರಬೇಕು ಎನ್ನುವುದು ದುರ್ಜನರ ಸಂಗದಲ್ಲಿರಬಾರದೆಂದು ಹೊರತು ಭಕ್ತರೊಂದಿಗೆ ಬೆರೆಯಬಾರದೆಂದಲ್ಲ, ಬೆರೆತು ಸಂಕೀರ್ತನೆ ಮಾಡಬಾರದೆಂದಲ್ಲ - ಭಕ್ತರ ಸಂಗವನ್ನು ಹೆಚ್ಚು ಮಾಡಿದಷ್ಟೂ ಒಳ್ಳೆಯದು. ಭಕ್ತನೇ ಜ್ಞಾನಿ, ಜ್ಞಾನಿಯೇ ಭಕ್ತ.

ಅಸಜ್ಜನೈಸ್ತು ಸಂವಾಸೋ ನ ಕರ್ತವ್ಯಃ ಕದಾಚನ ।
ಯಾವದ್ ಯಾವಚ್ಚ ಬಹುಭಿಃ ಸಜ್ಜನೈಃ ಸಹ ಮುಕ್ತಿದಃ ॥
ಇತಿ ಸದ್ಗುಣೇ ॥

ದುರ್ಜನರ ಸಹವಾಸವನ್ನು ಎಂದೂ ಮಾಡಬಾರದು. ಸಜ್ಜನರ ಸಹವಾಸವನ್ನು ಹೆಚ್ಚೆಚ್ಚು ಮಾಡಿದಷ್ಟೂ ಅದು ಹೆಚ್ಚು ಮೋಕ್ಷಸುಖದಾಯಕವಾಗುವುದು ಎಂದು ಸದ್ಗುಣಗ್ರಂಥದಲ್ಲಿ ಹೇಳಿದೆ.

❖❖❖

ಮನಸ್ಸು ಹರಿಧ್ಯಾನನಿರತವಾದರೆ ರಜಸ್ತಮೋಗುಣಗಳು ಅಳಿಯುವುದರಿಂದ ಕಟ್ಟಿಗೆಯಿಲ್ಲದ ಬೆಂಕಿಯಂತೆ ಆ ಮನಸ್ಸು ತಾನೇ ನಾಶಹೊಂದುವುದೆಂದು ಅವಧೂತಮುನಿ ಯದುಮಹಾರಾಜನಿಗೆ ಹೇಳುತ್ತಾನೆ.

ಯಸ್ಮಿನ್ಮನೋ ಲಬ್ಧಪದಂ ಯದೇತ-
ಚ್ಛನೈಃಶನೈರ್ಮುಂಚತಿ ಕರ್ಮರೇಣೂನ್ ।
ಸತ್ವೇನ ವೃದ್ಧೇನ ರಜಸ್ತಮಶ್ಚ
ವಿಧೂಯ ನಿರ್ವಾಣಮುಪೈತ್ಯನಿಂಧನಮ್ ॥ ೧೨ ॥

ಭಗವಂತನಲ್ಲಿ ಮನಸು ನೆಲೆನಿಂತರೆ ಕ್ರಮೇಣ ದುಷ್ಕರ್ಮವೆಂಬ ದೂಳನ್ನು ನೀಗಿಕೊಳ್ಳುತ್ತದೆ. ಸತ್ವಗುಣವನ್ನು ವೃದ್ಧಿ ಮಾಡಿಕೊಳ್ಳುತ್ತದೆ. ವೃದ್ಧಿ ಹೊಂದಿದ ಸತ್ವಗುಣದಿಂದ ರಜೋಗುಣ ತಮೋಗುಣಗಳನ್ನು ನೀಗಿಕೊಂಡು ಕಟ್ಟಿಗೆ ಇಲ್ಲದ ಬೆಂಕಿಯಂತೆ ಕೊನೆಗೆ ತಾನೇ ನಾಶಹೊಂದುವುದು.

[1]"ಮನಸ್ಸು ಸದಾ ಲಯ ವಿಕ್ಷೇಪಗಳನ್ನು ಹೊಂದುತ್ತಿರುತ್ತದೆ. ಜಾಗರದಲ್ಲಿ ರಜೋಗುಣದಿಂದ ವಿಕ್ಷೇಪ, ನಾನಾ ವಿಷಯಗಳ ಆಲೋಚನೆ, ಸುಪ್ತಿಯಲ್ಲಿ ತಮೋಗುಣದಿಂದ ಲಯ. ಸಮಾಧಿಯಲ್ಲಿ ಸತ್ವಗುಣ ಅಧಿಕವಾಗುವುದರಿಂದ ರಜೋಗುಣ ತಮೋಗುಣಗಳೆರಡೂ ಕರ್ಮವಾಸನಾನಾಶದಿಂದ ನಾಶ ಹೊಂದುವುವು. ಮನಸ್ಸು ಬ್ರಹ್ಮನಲ್ಲೇ ಲೀನವಾಗುವುದು. ಇದೇ ನಿರ್ವಾಣಸ್ಥಿತಿ ಅಸಂಪ್ರಜ್ಞಾತ ಸಮಾಧಿ, ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ.

ಆದರೆ ಹೀಗೆ ಹೇಳುತ್ತಿರುವ ರಾಧಾರಮಣದಾಸ ವ್ಯಾಖ್ಯಾನವೇ ಹಿಂದೆ (11.7.14) ಹೀಗೆ ಹೇಳಿದೆ—'ಯೋಗವೆಂದರೆ ಅಸಂಪ್ರಜ್ಞಾತ ಸಮಾಧಿ. ಅದು ಭಗವತ್‌ಸ್ವರೂಪ. ಏಕೆಂದರೆ 'ವಿರಾಮಪ್ರತ್ಯಯಾಭ್ಯಾಸಪೂರ್ವಃ ಸಂಸ್ಕಾರ-ಶೇಷೋಽನ್ಯಃ' (ಯೋಗಸೂತ್ರ 1.18) ಎಂಬ ಯೋಗಸೂತ್ರ ಪ್ರಕಾರ 'ನೇತಿ ನೇತಿ' ಎಂದು ಬ್ರಹ್ಮಧ್ಯಾನ ಮಾಡುವ ಮನಸ್ಸು ತನ್ನೆಲ್ಲ ವೃತ್ತಿಗಳೊಂದಿಗೆ ತ್ರಿಗುಣಗಳಲ್ಲಿ ಲಯ ಹೊಂದುವುದು. ಗುಣಗಳು ಪ್ರಕೃತಿಯಲ್ಲಿ ಲಯಹೊಂದಿದಾಗ ಪ್ರಕೃತಿಯೂ

---

1. ಲಯವಿಕ್ಷೇಪಾತ್ಮಕಂ ಮನ ಏತದ್ ಯಸ್ಮಿನ್ ಪರಮಾನಂದರೂಪೇ ಭಗವತಿ ಲಬ್ಧಾಸ್ಪದಂ ಸತ್ ಕರ್ಮರೇಣೂನ್ ಕರ್ಮವಾಸನಾ ಮುಂಚತಿ ತಸ್ಮಿನ್ । ನನು ಕರ್ಮವಾಸನಾತ್ಯಾಗೇಽಪಿ ಸುಷುಪ್ತಿವಲ್ಲಯೋ ದುರ್ವಾರಃ । ನ । ಸತ್ವೇನೇತಿ । ವೃದ್ಧೇನೋಪಶಮಾತ್ಮಕೇನ । ರಜಸ್ತಮಸೋರಭಾವೇ ವಿಕ್ಷೇಪಲಯಾಭಾವಾತ್ ನಿರ್ವಾಣಮವೃತ್ತಿಕಂ ಧ್ಯೇಯಾಕಾರೇಣಾವಸ್ಥಾನ ಮುಪೈತಿ । ಕುತಃ । ಅನಿಂಧನಂ । ಇಂಧನಂ ಗುಣಾಸ್ತತ್ಕಾರ್ಯಂ ಚ । ತದ್ರಹಿತಂ । ತದುಕ್ತಂ ಯೋಗಶಾಸ್ತ್ರೇ–

ಮನಸೋ ವೃತ್ತಿಶೂನಸ್ಯ ಬ್ರಹ್ಮಾಕಾರತಯಾ ಸ್ಥಿತಿಃ ।
ಯಾಽಸಂಪ್ರಜ್ಞಾತನಾಮಾಽಸೌ ಸಮಾಧಿರಭಿಧೀಯತೇ ॥ ಇತಿ ॥- ರಾಧಾರಮಣದಾಸಃ

ಪುರುಷನಿಂದ ತಾನೇ ದೂರವಾಗುವುದು. ಅದೇ ಕೈವಲ್ಯ ಶುದ್ಧಬ್ರಹ್ಮ. ಹೀಗೆ ಚಿತ್ತವೃತ್ತಿ ನಿರೋಧರೂಪವಾದ ಯೋಗವು ಅಭಾವರೂಪ. ಅಭಾವವು ಅಧಿಕರಣಸ್ವರೂಪ. ಅದರಿಂದ ಅದು ಬ್ರಹ್ಮಸ್ವರೂಪ' ಎಂದು. 'ಪುರುಷಾರ್ಥಶೂನ್ಯಾನಾಂ ಗುಣಾನಾಂ ಪ್ರತಿಪ್ರಸವಃ ಕೈವಲ್ಯಂ ಸ್ವರೂಪಪ್ರತಿಷ್ಠಾ ವಾ ಚಿತಿಶಕ್ತೇರಿತಿ (ಯೋಗಸೂತ್ರ 4.34) ಎಂಬ ಯೋಗಸೂತ್ರ ಹಾಗೇ ಹೇಳುತ್ತದೆ. ಇದು ಪೂರ್ವೋತ್ತರ ವಿರೋಧ.

ಈ ಶ್ಲೋಕದಲ್ಲಿ ಸ್ಪಷ್ಟವಾಗಿ 'ಇಂಧನವಿಲ್ಲವಾಗುವುದರಿಂದ ನಿರ್ವಾಣ ಹೊಂದುತ್ತದೆ' ಎಂಬ ಮಾತಿಗೆ 'ತೈಲ ತೀರಿದಾಗ ದೀಪ ಆರುತ್ತದೆ' ಎಂದು ಸ್ವರಸವಾಗಿ ಅರ್ಥವಾಗುತ್ತದೆ. ಮನಸ್ಸೆಂಬ ದೀಪ ಉರಿಯಲು ರಜಸ್ತಮೋ ಗುಣ ಗಳೇ ತೈಲ. ಅದು ತೀರಿದಾಗ ಮನಸ್ಸು ನಿರ್ವಾಣ ಹೊಂದುತ್ತದೆ, ನಾಶವಾಗುತ್ತದೆ.

ಇಂಧನ ಶಬ್ದಕ್ಕೆ ಕರಣಾರ್ಥಕ ಪ್ರತ್ಯಯದಿಂದ 'ಜ್ಯೋತಿಗೆ ಉರಿಯಲು ಸಾಧನ' ಎಂದರ್ಥ ಸ್ವರಸ. ಅದನ್ನು ಬಿಟ್ಟು ಕರ್ಮಾರ್ಥದಲ್ಲಿ ಪ್ರತ್ಯಯವಿಟ್ಟುಕೊಂಡು 'ಜ್ಯೋತಿಗೆ ವಿಷಯವಾಗುವ ವಸ್ತು' ಎಂದು ವ್ಯಖ್ಯಾನಿಸುವುದು ಸ್ವರಸವಲ್ಲ.

ನಿರ್ವಾಣ ಶಬ್ದಕ್ಕೂ ಆರಿಹೋಗುವುದು ನಾಶವಾಗುವುದೆಂದು ಅರ್ಥವೇ ಸ್ವರಸ. ನಿರ್ವಿಷಯವಾಗುತ್ತದೆ ಎಂಬ ಅರ್ಥ ಸ್ವರಸವಲ್ಲ.

ಮನಸ್ಸು ಬ್ರಹ್ಮನಲ್ಲಿ ತಲ್ಲೀನವಾಗುವುದೆಂದರೆ ವಿಷಯೀಕರಿಸುವುದೇ. ಆದ್ದರಿಂದ ನಿರ್ವಿಷಯತ್ವ ವ್ಯಾಹತವೂ ಆಗುತ್ತದೆ.

ಪ್ರಮಾಣ ವಿರೋಧವೂ ಬರುತ್ತದೆ. ಮುಕ್ತಿತತ್ವ ಗ್ರಂಥದಲ್ಲಿ ಅಂತಃಕರಣ ಲಯವೇ ಉಕ್ತವಾಗಿದೆ. ಅಂತಃಕರಣದಲ್ಲಿ ಸತ್ವಗುಣೋದ್ರೇಕದಿಂದ ಅಪರೋಕ್ಷ ಬಂದಾಗ ಕರ್ಮವಾಸನೆ ನಾಶವಾಗುತ್ತದೆ. ಉದ್ರಿಕ್ತವಾದ ಸತ್ವಗುಣದಿಂದ ಅಂತಃಕರಣದ ರಜಸ್ತಮೋಗುಣಗಳೂ ನಾಶವಾಗುತ್ತವೆ. ಆಗ ಅದು ಎಣ್ಣೆಯಿಲ್ಲದ ದೀಪ ಆರುವಂತೆ ನಾಶವಾಗುತ್ತದೆ. ಮುಂದೆ ಮುಕ್ತಿಯಲ್ಲಿ ಜೀವಸ್ವರೂಪಭೂತವಾದ ಚಿನ್ಮಯ ಅಂತಃಕರಣದಿಂದಲೇ ಮುಕ್ತಿಲೋಕದಲ್ಲಿ ದಿವ್ಯಭೋಗಗಳು ನಡೆಯುತ್ತವೆ ಎಂದು.

ಬಾಹ್ಯಂ ಮನೋ ವಿಲೀನಂ ಸ್ಯಾನ್ಮುಕ್ತೌ ಚಿನ್ಮಾತ್ರಕಂ ಮನಃ।
ತೇನೈವಾನುಭವೇತ್ ಸರ್ವಂ ಸ್ವಾತ್ಮಾಭಿನ್ನೇನ ಮುಕ್ತಿಗಃ॥
ಇತಿ ಮುಕ್ತಿತತ್ವೇ॥

'ಮುಕ್ತಿಯಲ್ಲಿ ಚಿನ್ಮಯವಾದ ಜೀವಸ್ವರೂಪಮನಸ್ಸು ಮಾತ್ರ ಇರುತ್ತದೆ.

ಬಾಹ್ಯವಾದ ಜಡ ಮನಸ್ಸು ನಾಶವಾಗಿರುತ್ತದೆ. ಮುಕ್ತಿಯವಸ್ಥೆಯಲ್ಲಿರುವವನು ತನ್ನ ಸ್ವರೂಪಭೂತವಾದ ಮನಸಿನಿಂದಲೆ ಎಲ್ಲ ವಿಷಯಭೋಗಗಳನ್ನು ಅನುಭವಿಸುತ್ತಾನೆ' ಎಂದು ಮುಕ್ತಿತತ್ವಗ್ರಂಥದಲ್ಲಿದೆ.

❖❖❖

ಜೇಡರಹುಳುವಿನಿಂದ ಕಲಿತುದನ್ನು ಅವಧೂತಮುನಿ ಯದುರಾಜನಿಗೆ ಹೇಳುತ್ತಾನೆ.

ಏಕೋ ನಾರಾಯಣೋ ದೇವಃ ಪೂರ್ವಸೃಷ್ಟಂ ಸ್ವಮಾಯಯಾ ।
ಸಂಹೃತ್ಯ ಕಾಲಕಲಯಾ ಕಲ್ಪಾಂತ ಇದಮೀಶ್ವರಃ ॥ ೧೬ ॥

ನಾರಾಯಣದೇವ ಸ್ವೇಚ್ಛೆಯಿಂದ ಹಿಂದೆ ತಾನೇ ಸೃಜಿಸಿದ ಜಗತ್ತನ್ನು ಸಂಹಾರಕವಾದ ತನ್ನ ರೂಪದಿಂದ ತಾನೆ ಬ್ರಹ್ಮಕಲ್ಪದ ಕೊನೆಯಲ್ಲಿ ನಾಶಗೊಳಿಸಿ ಒಬ್ಬನೆ ಸ್ವತಂತ್ರನಾಗಿ ಇದ್ದ.

ಏಕ ಏವಾದ್ವಿತೀಯೋಽಭೂದಾತ್ಮಾಧಾರೋಽಖಿಲಾಶ್ರಯಃ ।
ಕಾಲೇನಾತ್ಮಾನುಭಾವೇನ ಸಾಮ್ಯಂ ನೀತಾಸು ಶಕ್ತಿಷು ॥ ೧೭ ॥

ತನ್ನ ಶಕ್ತಿಯಿಂದ ತುಂಬಿಕೊಂಡ ಲಯಕಾಲದ ನಿಮಿತ್ತದಿಂದ ಸತ್ವಾದಿ ಗುಣಗಳೆಂಬ ಶಕ್ತಿಗಳಿಗೆ ಸಾಮ್ಯಾವಸ್ಥೆಯನ್ನು ತಾನೇ ತಂದುಕೊಟ್ಟು ಆ ಲಯಕಾಲದಲ್ಲಿ ಸರ್ವಾಧಾರನೂ ತನಗೆ ತಾನೇ ಆಧಾರನೂ ಆಗಿರುವ ಅಸದೃಶನಾದ ಆ ನಾರಾಯಣನೊಬ್ಬನೇ ಸ್ವತಂತ್ರನಾಗಿದ್ದ.

ಸತ್ತ್ವಾದಿಷ್ವಾದಿಪುರುಷಃ ಪ್ರಧಾನಪುರುಷೇಶ್ವರಃ ।
ಪರಾವರಾಣಾಂ ಪರಮ ಆಸ್ತೇ ಕೈವಲ್ಯಸಂಜ್ಞಿತಃ ॥ ೧೮ ॥

ಸರಸ್ವತೀ ಬ್ರಹ್ಮರಿಗೆ ನಿಯಾಮಕ, ಮುಕ್ತಾಮುಕ್ತನಿಯಾಮಕ ಆದಿಪುರುಷನಾದ ನಾರಾಯಣ ಸರಿಮಿಗಿಲಿಲ್ಲದವನಾದ್ದರಿಂದ ಕೈವಲ್ಯನಾಮಕನಾಗಿ ಲಯಕಾಲದಲ್ಲಿದ್ದ.

[1]ಶ್ರೀಧರ ವ್ಯಾಖ್ಯಾನದಲ್ಲಿ ಚೇತನಾಚೇತನವೆಲ್ಲವೂ ಲಯಹೊಂದಿದ್ದರಿಂದ

---

1. ಏಕ ಏವಾದ್ವಿತೀಯ ಇತ್ಯಸ್ಯ ಸಜಾತೀಯ ವಿಜಾತೀಯ ಭೇದಶೂನ್ಯ ಇತಿ ವ್ಯಾಖ್ಯಾತ್ವನುಚಿತಾ । ಕಾಲಕಲಯಾ ಸಂಹೃತ್ಯೇತಿ ವಿಜಾತೀಯಕಾಲಸ್ಯ ತದಾ ಸದ್ಭಾವಾವಗಮಾತ್ । ಗುಣಸಾಮ್ಯಾವಸ್ಥಾಚಿದ್ ದ್ರವ್ಯಸದ್ಭಾವಾವಗಮಾಚ್ಚ ಪ್ರಧಾನಪುರುಷೇಶ್ವರ ಇತಿ ಸೂಕ್ಷ್ಮಾವಸ್ಥಯೋಸ್ತಯೋಸ್ತನ್ನಿಯಾಮ್ಯತ್ವೇನ ತಚ್ಛರೀರತಯಾವಸ್ಥಾನಾವಗಮಾಚ್ಚ ।
-ವೀರರಾಘವಃ1.

ಲಯಕಾಲದಲ್ಲಿ ಪರಮಾತ್ಮನಿಗಿಂತ ಬೇರೆ ಏನೂ ಇರಲಿಲ್ಲ ಎಂದು ಹೇಳಿದ್ದನ್ನು ವೀರರಾಘವ ವ್ಯಾಖ್ಯಾನ ಒಪ್ಪುವುದಿಲ್ಲ. 'ಸಂಹೃತ್ಯ ಕಾಲಕಲಯಾ' ಲಯಕಾಲದ ಮೂಲಕ ಭಗವಂತ ಲಯ ಮಾಡಿದ್ದರಿಂದ ಲಯಕಾಲ ಲಯಕಾಲದಲ್ಲಿತ್ತು. 'ಸಾಮ್ಯಂ ನೀತಾಸು ಶಕ್ತಿಷು' ತ್ರಿಗುಣಗಳಿಗೆ ಆಗ ಸಾಮ್ಯಾವಸ್ಥೆ ಬಂದಿತ್ತು. ಪ್ರಧಾನಪುರುಷೇಶ್ವರಃ ಎಂದೂ ಹೇಳಿದ್ದರಿಂದ ಪ್ರಕೃತಿ ಜೀವರೂ ಇದ್ದರೆಂದು ತಿಳಿದು ಬರುತ್ತದೆ. ಅದರಿಂದ ಇವು ಯಾವುವೂ ಇರಲಿಲ್ಲ ಎನ್ನುವುದು ತಪ್ಪು. ಇದ್ದರೂ ಸ್ವತಂತ್ರವಾಗಿರಲಿಲ್ಲ. ಪರಮಾತ್ಮನಿಗೆ ಶರೀರವಾಗಿ ಇದ್ದುವು.' ಎಂದು ವೀರರಾಘವ ವ್ಯಾಖ್ಯಾನದಲ್ಲಿ ಹೇಳಿದೆ.

ಬೇರೆ ಯಾವುದೂ ಸ್ವತಂತ್ರವಾಗಿರಲಿಲ್ಲ. ಅದರಿಂದ ಪರಮಾತ್ಮ ಸ್ವತಂತ್ರ ಎನ್ನುವುದು ಒಪ್ಪಬೇಕಾದುದೆ. ಆದರೆ ಬೇರೆ ಎಲ್ಲವೂ ಅವನಿಗೆ ಶರೀರವಾಗಿದ್ದುವು ಎಂದು ಶ್ಲೋಕದಲ್ಲಿ ಹೇಳಿಲ್ಲ. ಇರುವುದನ್ನು ಇಲ್ಲವೆಂದರೆ ಸ್ವತಂತ್ರವಾಗಿ ಇಲ್ಲ ಎಂದು ಗ್ರಹಿಸಬಹುದು. ಶರೀರವಾಗಿ ಇದೆ ಎನ್ನಲು ಶ್ಲೋಕದಲ್ಲಿ ಶಬ್ದವಿಲ್ಲ. 'ಯಸ್ಯ ಪೃಥಿವೀ ಶರೀರಂ' ಎಂದು ಉಪನಿಷತ್ತು ಸೃಷ್ಟಿಕಾಲದಲ್ಲಿ ಸ್ಥೂಲವಾದ ಪೃಥಿವೀ ಮುಂತಾದವುಗಳೊಂದಿಗೆ ಅವ್ಯಕ್ತ ಜೀವ ಕಾಲಗಳೂ ಶರೀರವಾಗಿದ್ದುವು ಎನ್ನುತ್ತಿದೆ ಎಂದರೂ ಲಯಕಾಲದಲ್ಲಿ ಸೂಕ್ಷ್ಮ ಅವ್ಯಕ್ತ ಜೀವ ಕಾಲಗಳು ಸೂಕ್ಷ್ಮಶರೀರ ವಾಗಿದ್ದುವು ಎನ್ನಲು ಏನು ಆಧಾರವಿದೆ. ಸ್ಥೂಲಶರೀರಿಗೆ ಲಯಕಾಲದಲ್ಲಿ ಸೂಕ್ಷ್ಮಶರೀರ ಇದೆ ಎಂದು ಒಪ್ಪಲೇಬೇಕೆಂಬ ನಿಯಮವಿಲ್ಲ. ಮುಕ್ತನಿಗೆ ಸೂಕ್ಷ್ಮಶರೀರವಿರುವುದಿಲ್ಲ. ನಿತ್ಯಮುಕ್ತನಾದ ಪರಮಾತ್ಮನಿಗೆ ಆಗ ಯಾವ ಶರೀರವೂ ಇರಲಿಲ್ಲ ಎನ್ನಬಹುದು. ವಸ್ತುತಃ ಪರಮಾತ್ಮನಿಗೆ ಯಾವಕಾಲದಲ್ಲಿಯೂ ಬಾಹ್ಯವಾದ ಜಡಶರೀರವಿಲ್ಲ. ಅದರಿಂದ ಲಯಕಾಲದಲ್ಲಿ ಸೂಕ್ಷ್ಮ ಚೇತನಾಚೇತನಗಳಿದ್ದರೂ ಭಗವಂತ 'ಏಕ ಏವ ಅದ್ವಿತೀಯ' ಬೇರೆ ಸ್ವತಂತ್ರವಾದ ವಸ್ತು ಇರಲಿಲ್ಲ ಎಂದು ಭಾಗವತ ಹೇಳುತ್ತಿದೆ.

ಆದರೆ, 'ಲಯಕಾಲದಲ್ಲಿ ಬೇರೆ ಸ್ವತಂತ್ರವಸ್ತು ಇರಲಿಲ್ಲ' ಎಂದು ವಿಶೇಷವಾಗಿ ಏಕೆ ಭಾಗವತ ಹೇಳುತ್ತಿದೆ. ಯಾವಕಾಲದಲ್ಲಿಯೂ ಸ್ವತಂತ್ರವಸ್ತು ಇಲ್ಲ ತಾನೆ? ಎಂದರೆ ಲಯಕಾಲದಲ್ಲಿ ಪ್ರಕೃತಿ ಜೀವಕಾಲಗಳು ಅಸ್ವತಂತ್ರವಾಗಿಯಾದರೂ ತಮ್ಮ ಕಾರ್ಯಚಟುವಟಿಕೆಗಳನ್ನು ಏನೂ ಮಾಡದೆ ಸುಪ್ತವಾಗಿದ್ದುವು. ಅದರಿಂದ ವಿಶೇಷವಾಗಿ ಲಯಕಾಲದಲ್ಲಿರಲಿಲ್ಲ ಎಂದು ಭಾಗವತ ಹೇಳುತ್ತಿದೆ.

ಹಾಗಾದರೆ ಲಯಕಾಲದಲ್ಲಿ ಪರಮಾತ್ಮನೂ ಏನೂ ಸೃಷ್ಟಿಮಾಡದೆ

ಸುಮ್ಮನಿದ್ದುದರಿಂದ ಅವನೂ ಇರಲಿಲ್ಲ ಎನ್ನಬೇಕಾಗಿತ್ತು ಎಂದರೆ ಆಗಲೂ ಪರಮಾತ್ಮ ಲಯಕಾಲದ ಸೃಷ್ಟಿಯನ್ನೂ ಸುಪ್ತವಾದ ಚೇತನಾಚೇತನಗಳನ್ನು ಕಾಪಾಡುವ ಕಾರ್ಯವನ್ನೂ ಮಾಡುತ್ತಲೇ ಇದ್ದ. ಅದರಿಂದ ಅವನೊಬ್ಬನೆ ಇದ್ದ.

ಕಾಲಪ್ರಕೃತಿ ಜೀವಾದೌ ಲಯೇ ಸತ್ಯಪ್ರವರ್ತನಾತ್ ।
ತನ್ನಿಮಿತ್ತಸ್ಯ ಕಾರ್ಯಸ್ಯ ವಿಷ್ಣುರೇಕ ಇತೀರ್ಯತೇ ।
ಸ ಹಿ ಕಾಲಾದಿಕಂ ಸರ್ವಂ ವರ್ತಯತ್ಯಮಿತದ್ಯುತಿಃ ।
ಇತಿ ತತ್ವಲಯೇ ॥

ಪ್ರಕೃತಿಶ್ಚ ಗುಣಾಶ್ಚೈವ ಶಕ್ಯತ್ವಾಚ್ಛಕ್ತಯಃ ಸ್ಮೃತಾಃ ।
ವಿಷ್ಣೋಃ ಸ್ವರೂಪಭೂತಾ ತು ಶಕನಾಚ್ಛಕ್ತಿರುಚ್ಯತೇ ।
ಇತಿ ಶಕ್ತಿತತ್ವೇ ॥

ಕಾಲ ಪ್ರಕೃತಿ ಜೀವ ಮುಂತಾದುವು ಲಯದಲ್ಲಿದ್ದರೂ ಅವುಗಳಿಂದಾಗುವ ಕಾರ್ಯವು ಆಗ ಉಂಟಾಗುವುದಿಲ್ಲವಾದ್ದರಿಂದ ವಿಷ್ಣು ಒಬ್ಬನೇ ಲಯದಲ್ಲಿದ್ದನೆಂದು ಶ್ರುತಿಸ್ಮೃತಿಗಳಲ್ಲಿ ಉಕ್ತನಾಗುತ್ತಾನೆ. ಏಕೆಂದರೆ ಅವನು ಕಾಲಾದಿ ಸರ್ವವನ್ನೂ ಆಗಲೂ ಕೂಡ ನಿಯಮನ ಮಾಡುತ್ತಾನೆ ಎಂದು ತತ್ವಲಯ ಗ್ರಂಥದಲ್ಲಿದೆ.

ಪ್ರಕೃತಿಯೂ ಗುಣಗಳೂ ಭಗವಂತನಿಂದ ನಿಯಮ್ಯವಾದ್ದರಿಂದ ಶಕ್ತಿಗಳೆನಿಸುತ್ತವೆ. ಅವನ ಸ್ವರೂಪಭೂತವಾದ ಶಕ್ತಿಯು ನಿಯಮನರೂಪವಾದ್ದರಿಂದ ಶಕ್ತಿ ಎನಿಸುತ್ತದೆ ಎಂದು ಶಕ್ತಿತತ್ವಗ್ರಂಥದಲ್ಲಿದೆ.

❖❖❖

ಅವಧೂತಮುನಿಗೆ ಅವನ ಇಪ್ಪತ್ತನಾಲ್ಕನೆ ಗುರು ಕಣಜದಹುಳು ಕಲಿಸಿದ ಪಾಠ—

ಯತ್ರ ಯತ್ರ ಮನೋ ದೇಹೀ ಧಾರಯೇತ್ಸಕಲಂ ಧಿಯಾ ।
ಸ್ನೇಹಾದ್ ದ್ವೇಷಾದ್ಭಯಾದ್ವಾಪಿ ಯಾತಿ ತತ್ತತ್ಸರೂಪತಾಮ್ ॥ ೨೨ ॥

ಜೀವಾತ್ಮನು ಸ್ನೇಹದಿಂದಾಗಲಿ ದ್ವೇಷದಿಂದಾಗಲಿ ಭಯದಿಂದಾಗಲಿ ತನ್ನ ಮನಸ್ಸನ್ನು ಪೂರ್ತಿಯಾಗಿ ಬುದ್ಧಿಪೂರ್ವಕವಾಗಿ ಎಲ್ಲೆಲ್ಲಿ ಇರಿಸುವನೋ ಆಯಾ ಸಾದೃಶ್ಯವನ್ನೇ ಆತ ಹೊಂದುತ್ತಾನೆ.

ಕೀಟಃ ಪೇಶಸ್ಕರಂ ಧ್ಯಾಯನ್ ಕುಡ್ಯಾಂ ತೇನ ಪ್ರವೇಶಿತಃ ।
ಯಾತಿ ತತ್ಸಾತ್ಮತಾಂ ರಾಜನ್ ಪೂರ್ವರೂಪಂ ಸ ಸಂತ್ಯಜನ್ ॥ ೨೩ ॥

ರಾಜನೆ, ಕಣಜದ ಹುಳು ಮರಿಹುಳುವನ್ನು ಗೋಡೆಯಲ್ಲಿ ಗೂಡಿನೊಳಗೆ ಹಿಡಿದಿಟ್ಟು ಸಾಕುತ್ತದೆ. ಆ ಮರಿಹುಳು ಮೊದಲಿಗೆ ಕೆಲಕಾಲ ದ್ವೇಷಮಾಡಿದರೂ ಕೊನೆಗೆ ಸ್ನೇಹದಿಂದಲೇ ಕಣಜದ ಹುಳುವನ್ನು ನಿರಂತರ ಧ್ಯಾನಮಾಡಿ ಹಿಂದಿನ ರೂಪವನ್ನು ಬಿಟ್ಟು ಕಣಜದ ಹುಳುವಿನ ಪ್ರಿಯವಾದ ಆಕಾರವನ್ನೇ ಪಡೆಯುತ್ತದೆ.

[1]ಸ್ನೇಹದಿಂದಾಗಲಿ ದ್ವೇಷದಿಂದಾಗಲಿ ಭಯದಿಂದಾಗಲಿ ಭಗವಂತನನ್ನು ಧ್ಯಾನಿಸಿದರೆ ಸಾರೂಪ್ಯ ಮೋಕ್ಷ ಲಭಿಸುವುದೆಂದು ಈ ಶ್ಲೋಕಗಳು ಹೇಳುವಂತೆ ಕಾಣುತ್ತವೆ. ವೀರರಾಘವ ವ್ಯಾಖ್ಯಾನದಲ್ಲಿ ಹಾಗೇ ಹೇಳಿದ್ದಾರೆ. ಆದರೆ ಹಾಗೆ ಹೇಳಿದರೆ ಶ್ರುತಿಸ್ಮೃತಿ ವಿರೋಧಗಳು ಬರುತ್ತವೆ.

ತಂ ಯಥಾ ಯಥಾ ಉಪಾಸತೇ ತದೇವ ಭವತಿ

ಎಂದು ಶ್ರುತಿಯು ಪರಮಾತ್ಮನನ್ನು ಹೇಗೆಹೇಗೆ ಉಪಾಸನೆ ಮಾಡುವನೋ ಹಾಗೆಹಾಗೇ ಆಗುತ್ತಾನೆ. ಭಕ್ತನು ಭಕ್ತಿಯಿಂದ ಸುಖರೂಪನೆಂದು ಧ್ಯಾನಮಾಡಿದರೆ ಭಕ್ತಿಪೂರ್ಣಸುಖಸ್ವರೂಪನಾಗಿ ಮುಕ್ತಿಯಲ್ಲಿ ಅಭಿವ್ಯಕ್ತನಾಗುತ್ತಾನೆ. ದ್ವೇಷಿಯು ದ್ವೇಷದಿಂದ ದುಃಖರೂಪನೆಂದು ಧ್ಯಾನಮಾಡಿದರೆ ದ್ವೇಷಪೂರ್ಣ ದುಃಖ ಸ್ವರೂಪನಾಗಿ ತಮಸಿನಲ್ಲಿ ಅಭಿವ್ಯಕ್ತನಾಗುತ್ತಾನೆ.

ಭಕ್ತನು ಅಸುರಾವೇಶದಿಂದ ಸ್ವಲ್ಪ ಭಯವನ್ನಾಗಲಿ, ದ್ವೇಷವನ್ನಾಗಲಿ ಮೊದಲಿಗೆ ಮಾಡಿದರೂ, ಸ್ವಾಭಾವಿಕವಾಗಿ ಅವನು ಪ್ರೀತಿಸ್ವರೂಪನಾದ್ದರಿಂದ ಕ್ರಮೇಣ ಪ್ರೀತಿಯೇ ಅಧಿಕವಾಗುವುದರಿಂದ ಭಯದ್ವೇಷಗಳು ಮರೆಯಾಗುತ್ತವೆ.

ಕಣಜಮರಿಯನ್ನು ತಾಯಿಹುಳು ಗೋಡೆಯಲ್ಲಿ ಕೂಡಿಹಾಕಿ ದೊಡ್ಡ ಶಬ್ದಮಾಡಿದರೆ ಮರಿ ಮೊದಲಿಗೆ ಭಯದ್ವೇಷಗಳನ್ನು ಸ್ವಲ್ಪ ಮಾಡುತ್ತದೆ. ತಿನ್ನಲು ಆಹಾರ ನೀಡುವುದರಿಂದ ತಾಯಿಯಲ್ಲಿ ಸ್ವಾಭಾವಿಕವಾಗಿರುವ ಪ್ರೀತಿ ಕ್ರಮೇಣ ಮರಿಯಲ್ಲಿ ಹೆಚ್ಚಾಗುತ್ತದೆ ಭಯ ದ್ವೇಷಗಳು ಮರೆಯಾಗುತ್ತವೆ. ಮರಿ ತನ್ನ ಸ್ವಾಭಾವಿಕವಾದ ಕಣಜ ಸ್ವರೂಪವನ್ನೇ ಪಡೆಯುತ್ತದೆ.

ಭಕ್ತನಲ್ಲಿ ಆವೇಶಗೊಂಡಿರುವ ದ್ವೇಷಿಜೀವನಿಗೆ ಮಾತ್ರ ದ್ವೇಷದುಃಖಗಳು ಸ್ವರೂಪವೇ ಆದ್ದರಿಂದ ಭಕ್ತಜೀವನ ಸಂಪರ್ಕದಲ್ಲಿ ಮೊದಲಿಗೆ ಸ್ವಲ್ಪಭಕ್ತಿ ಮೂಡಿದರೂ ಸ್ವಭಾವಭೂತವಾದ ಭಯದ್ವೇಷಗಳೇ ಕ್ರಮೇಣ ಹೆಚ್ಚುಹೆಚ್ಚಾಗಿ

1. ಕೇನಾಪಿ ಭಾವೇನ ನಿತ್ಯಮುಕ್ತವಿಧಂ ಶ್ರೀನಾರಾಯಣಂ ಧ್ಯಾಯನ್ ತತ್ ಸಾರೂಪ್ಯಂ ಯಾತಿ।
- ವೀರರಾಘವಃ

ಬೆಳೆದು ಅಲ್ಪಸ್ವಲ್ಪ ಬಂದಿದ್ದ ಭಕ್ತಿಯನ್ನು ಪೂರ್ತಿನಾಶಮಾಡುತ್ತದೆ. ತಮಸಿನಲ್ಲಿ ಪೂರ್ತಿ ಅಭಿವ್ಯಕ್ತವಾಗಿ ನಿತ್ಯಭಯದ್ವೇಷಗಳಿಂದ ನಿತ್ಯದುಃಖವನ್ನೇ ಅನುಭವಕ್ಕೆ ತಂದುಕೊಡುತ್ತದೆ.

ಕಣಜದ ಹುಳುವಿನ ದೃಷ್ಟಾಂತ ಎಲ್ಲ ಅಂಶಗಳಲ್ಲಿ ದೃಷ್ಟಾಂತ ಎಂದು ತಿಳಿಯಬಾರದು. ಮರಿ ತಾಯಿಯನ್ನು ಮೊದಲಿಗೆ ದ್ವೇಷ ಮಾಡಿದರೂ ತಾಯಿ ಪ್ರತಿಯಾಗಿ ದ್ವೇಷಮಾಡುವುದಿಲ್ಲ, ಶಿಕ್ಷೆ ನೀಡುವುದಿಲ್ಲ. ಪರಮಾತ್ಮನೂ ಹಾಗೇ ಭಕ್ತನು ಮಾಡಿದ ದ್ವೇಷವನ್ನು ಮರೆಯುತ್ತಾನೆ, ಆದರೆ ದ್ವೇಷಿಜೀವನು ಜೊತೆಗಿದ್ದು ಮಾಡಿದ ದ್ವೇಷಕ್ಕೆ ಶಿಕ್ಷೆ ಮಾಡಿಯೇ ಮಾಡುತ್ತಾನೆ, ಏಕೆಂದರೆ ದ್ವೇಷವು ದ್ವೇಷಿ ಜೀವನ ಸ್ವರೂಪ. ಅದರ ಫಲವಾದ ಶಿಕ್ಷೆಯ ದುಃಖವೂ ಅವನ ಸ್ವರೂಪಭೂತವೇ. ಅದರಿಂದ ದ್ವೇಷಫಲವಾದ ನಿತ್ಯದುಃಖವನ್ನೇ ಅಭಿವ್ಯಕ್ತ ಮಾಡಿಕೊಡುತ್ತಾನೆ ಪರಮಾತ್ಮ.

ಮನುಷ್ಯರು ವೇದದ ವಿಧಿನಿಷೇಧಗಳ ಭಯದಿಂದ ಭಕ್ತಿ ಮಾಡುತ್ತಾರೆ. ಹೀಗೆ ಭಯಪೂರ್ವಕ ಭಕ್ತಿಯಿಂದಾಗಲಿ, ಭಯಪೂರ್ವಕ ದ್ವೇಷದಿಂದಾಗಲಿ ಪರಮಾತ್ಮನ ಚಿಂತನೆ ಎರಡು ಬಗೆ ಇರುತ್ತದೆ. ಶಿಶುಪಾಲನಲ್ಲಿದ್ದ ಭಕ್ತಜೀವನು ಭಯಪೂರ್ವಕ ಭಕ್ತಿಯಿಂದ, ದ್ವೇಷಿಜೀವನು ಭಯಪೂರ್ವಕ ದ್ವೇಷದಿಂದ ಚಿಂತನೆ ಮಾಡಿದರು. ಭಯದಿಂದಲಾದರೂ ಭಕ್ತಿಪ್ರೀತಿಗಳಿಂದ ಚಿಂತನೆ ಮಾಡಿದ್ದಕ್ಕೆ ಭಕ್ತಜೀವನಿಗೆ ಸುಖಮಯವಾದ ಸಾರೂಪ್ಯದೊರಕಿತು. ದ್ವೇಷಿಗೆ ದ್ವೇಷಸಾರೂಪ್ಯ ಸಿಕ್ಕಿತು. ಏಕೆಂದರೆ ದ್ವೇಷಿ ತಾನು ದ್ವೇಷಮಾಡುವ ವ್ಯಕ್ತಿಯಲ್ಲಿರುವ ಗುಣಗಳನ್ನು ಅನ್ಯಥಾ ತಿಳಿದು ದ್ವೇಷಮಾಡುತ್ತಾನೆ. ಪರಮಾತ್ಮನಲ್ಲಿರುವ ಸುಖವನ್ನು ದುಃಖವೆಂದು ತಿಳಿದು ದ್ವೇಷಿಸುತ್ತಾನೆ. ಅದರ ಫಲವಾಗಿ ದುಃಖಸ್ವರೂಪತ್ವವನ್ನು ಹೊಂದುತ್ತಾನೆ.

ಹಿರಣ್ಯಕಶಿಪು ಮುದ್ದುನರಸಿಂಹ ನನ್ನು ವಿಕೃತ ಆಕೃತಿ ಎಂದು ಅನ್ಯಥಾ ತಿಳಿದು ದ್ವೇಷಮಾಡುತ್ತ ಮರಣಹೊಂದಿದ್ದರಿಂದ ವಿಕೃತಾಕಾರದ ರಾಕ್ಷಸರಾವಣನಾಗಿ ಹುಟ್ಟಿದ. ಆ ಜನ್ಮದಲ್ಲಿ ಶ್ರೀರಾಮನನ್ನು ದುರ್ಬಲ ಮಾನವನೆಂದು ಅನ್ಯಥಾ ತಿಳಿದು ದ್ವೇಷಮಾಡುತ್ತ ಸತ್ತಿದ್ದರಿಂದ ದುರ್ಬಲಮಾನವನಾಗಿ ಶಿಶುಪಾಲನಾಗಿ ಜನಿಸಿದ. ಆ ಜನ್ಮದಲ್ಲಿ ಶ್ರೀಕೃಷ್ಣನನ್ನು ಭಕ್ತಿಯಿಂದ ಕಾಣುತ್ತ ಶರೀರತ್ಯಾಗ ಮಾಡಿದ್ದರಿಂದ ಪರಮಾತ್ಮನನ್ನು ಪಡೆದ. ಆದರೆ ಆ ಭಕ್ತನ ಜೊತೆಗಿದ್ದ ದ್ವೇಷಿಜೀವ ಕ್ರಮೇಣ ದ್ವೇಷವನ್ನೇ ಮೂರು ಜನ್ಮಗಳಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಸಿಕೊಂಡ. ಏಕೆಂದರೆ ಅದು ಅವನ ಸ್ವಭಾವಭೂತವಾಗಿತ್ತು. ಸುಖರೂಪನಾದ ಹರಿಯನ್ನು ದುಃಖರೂಪನೆಂದು ಆತ ಅನ್ಯಥಾ ತಿಳಿದು ದುಃಖಸ್ವರೂಪತ್ವವನ್ನೇ ಪಡೆದ. ಇದೇ ದುಃಖ ಸಾರೂಪ್ಯ.

ಭಾಗವತ 'ಯತ್ರ ಯತ್ರ ಮನೋ ದೇಹೀ ಧಾರಯೇತ್' ಎನ್ನುವಾಗ 'ಯಾರು ಯಾರನ್ನು ಚಿಂತಿಸುವನೋ' ಎಂದರೆ ಯಾರು ಎಂಥವನನ್ನು ಚಿಂತಿಸುವನೋ ಎಂದು ವಿವಕ್ಷಿತವಾಗಿದೆ. ಅದರಿಂದ ಭಕ್ತನು ಸುಖರೂಪನನ್ನು, ದ್ವೇಷಿಯು ದುಃಖರೂಪನನ್ನು ಚಿಂತಿಸುತ್ತಾನೆ, ಭಕ್ತ ಸುಖಿಸಾರೂಪ್ಯವನ್ನು ದ್ವೇಷಿ ದುಃಖಿ ಸಾರೂಪ್ಯವನ್ನು ಹೊಂದುತ್ತಾನೆ.

ಭಯಾದಪಿ ಹರಿಂ ಭಕ್ತ್ಯಾ ಚಿಂತಯನ್ ತತ್ಸರೂಪತಾಂ ।
ಪೇಶಸ್ಕಾರಿವದಾಯಾತಿ ದ್ವಿಷನ್ ದ್ವೇಷಸರೂಪತಾಂ ।
ಸುಖರೂಪಸ್ಯ ಹಿ ದ್ವೇಷೋ ದುಃಖರೂಪ ಇತೀರ್ಯತೇ ।
ತಸ್ಮಾದ್ ದುಃಖಂ ಸದಾ ಯಾತಿ ದ್ವೇಷವಾನ್ ಪುರುಷೋತ್ತಮೇ ।
ನೃಸಿಂಹದ್ವೇಷತೋ ದುಃಖಂ ರಕ್ಷೋರೂಪೇಣ ರಾವಣಃ ।
ಅಗಾಚ್ಛ ರಾಮವಿದ್ವೇಷಾತ್ ಶಿಶುಪಾಲಸ್ತಥೈವ ಚ ।
ತತೋ ಭಕ್ತ್ಯಾ ಪರಂ ಯಾತೋ ದ್ವೇಷರೂಪೇ ತ್ವಧೋಗತೇ ।
ತಸ್ಮಾತ್ ಸರ್ವಗುಣೋದ್ರೇಕಿವಿದ್ವೇಷಾತ್ ಸರ್ವದೋಷವಾನ್ ।
ಭವೇದಿತಿ ಸರೂಪತ್ವಂ ದ್ವೇಷಾದೇಃ ಪುರುಷಸ್ಯ ಹಿ ।
ಇತಿ ಭಾಗವತತಂತ್ರೇ ॥

ಭಯಪೂರ್ವಕವಾಗಿಯಾದರೂ ಭಕ್ತಿಯಿಂದ ಹರಿಯನ್ನು ಚಿಂತಿಸುವವನು ಕಣಜದ ಹುಳದಂತೆ ಸುಖರೂಪನಾದ ಹರಿಯ ಭಾವನಾರೂಪ ಸುಖಿಸಾರೂಪ್ಯವನ್ನು ಹೊಂದುತ್ತಾನೆ. ದ್ವೇಷಿಸುವವನು ದುಃಖರೂಪನೆಂಬ ಭಾವನಾರೂಪ ದ್ವೇಷಸಾರೂಪ್ಯವನ್ನು ಹೊಂದುತ್ತಾನೆ. ಏಕೆಂದರೆ ಸುಖರೂಪನಾದ ಹರಿಯನ್ನು ದ್ವೇಷಿಸುವುದೆಂದರೆ ಅದು ದುಃಖರೂಪನೆಂಬ ಭಾವನೆಯೇ ಆಗಿರುತ್ತದೆ. ಅದರಿಂದ ಪುರುಷೋತ್ತಮನಲ್ಲಿ ಸದಾ ದ್ವೇಷಮಾಡುವವನು ನಿತ್ಯ ದುಃಖವನ್ನೇ ಹೊಂದುತ್ತಾನೆ. ನರಸಿಂಹನನ್ನು ದ್ವೇಷದಿಂದ ವಿಕೃತಾಕಾರನೆಂಬ ಭಾವನೆಯಿಂದ ಕಂಡ ಹಿರಣ್ಯಕಶಿಪು ವಿಕೃತಾಕಾರದ ರಾಕ್ಷಸ ರಾವಣನಾಗಿ ದುಃಖವನ್ನೇ ಹೊಂದಿದ. ಅವನೇ ಶ್ರೀರಾಮನನ್ನು ಸಾಮಾನ್ಯ ಮಾನವನೆಂದು ದ್ವೇಷಮಾಡಿ ಸಾಮಾನ್ಯಮಾನವನಾಗಿ ಶಿಶುಪಾಲನಾಗಿ ಜನಿಸಿದ. ದುಃಖವನ್ನು ಹೊಂದಿದ. ಶಿಶುಪಾಲನೂ ಹಾಗೇ ಶ್ರೀಕೃಷ್ಣದ್ವೇಷದಿಂದ ತಮಸ್ಸನ್ನು ಹೊಂದಿದ. ದ್ವೇಷಸ್ವರೂಪನಾದ ಆತ ದ್ವೇಷದಿಂದ ಅಧೋಗತಿಯನ್ನು ಹೊಂದಿದಾಗ, ಅವನ ಜೊತೆಗಿದ್ದ ಜಯದೇವ ಭಕ್ತಿಯಿಂದ ಪರಮಾತ್ಮನನ್ನು ಹೊಂದಿದ. ಅದರಿಂದ ಸರ್ವಗುಣ ಪೂರ್ಣನಾದ

ಪರಮಾತ್ಮನಲ್ಲಿ ದ್ವೇಷಮಾಡುವುದರಿಂದ ಪುರುಷನು ಸರ್ವದೋಷ ಭಾಗಿಯಾಗುತ್ತಾನೆ. ಹೀಗೆ ಪುರುಷನಿಗೆ ಹರಿಯಲ್ಲಿ ದ್ವೇಷದಿಂದ ದ್ವೇಷಸಾರೂಪ್ಯವೂ ಭಕ್ತಿಯಿಂದ ಸುಖಸಾರೂಪ್ಯವೂ ಲಭಿಸುತ್ತದೆ ಎಂದು ತಿಳಿಯಬೇಕು ಎಂದು ಭಾಗವತತಂತ್ರದಲ್ಲಿ ಹೇಳಿದೆ.

'ತಂ ಯಥಾಯಥೋಪಾಸತೇ ತದೇವ ಭವತಿ'
ತಂ ಭೂತಿರಿತಿ ದೇವಾ ಉಪಾಸಾಂಚಕ್ರಿರೇ ತೇ ಬಭೂವುಃ ।
ತಸ್ಮಾದ್ಧಾಽಪ್ಯೇತರ್ಹಿ ಸುಪ್ತೋ ಭೂರ್ಭೂರಿತ್ಯೇವ
ಪ್ರಶ್ವಸಿತ್ಯಭೂತಿರಿತ್ಯಸುರಾಸ್ತೇ ಹ ಪರಾಬಭೂವುಃ ॥

ಇತ್ಯಾದಿ ಚ ॥

'ಪರಮಾತ್ಮನನ್ನು ಹೇಗೆ ಹೇಗೆ ಉಪಾಸನೆ ಮಾಡುವನೋ ಆಯಾ ಸಾರೂಪ್ಯವನ್ನು ಹೊಂದುತ್ತಾನೆ' 'ಪರಮಾತ್ಮನನ್ನು ಗುಣಪೂರ್ಣನೆಂದು ದೇವತೆಗಳು ಉಪಾಸನ ಮಾಡಿದರು. ಅವರು ಸ್ವಯೋಗ್ಯಗುಣಪೂರ್ಣತ್ವರೂಪ ~~ಸಾರೂಪ್ಯವನ್ನೇ ಪಡೆದರು. ಆದರಿಂದ ಇಂದಿಗೂ ಕೂಡ ಮಲಗಿದವರಲ್ಲಿ~~ ಮುಖ್ಯಪ್ರಾಣನು 'ಭೂರ್‌ಭೂರ್' ಗುಣಪೂರ್ಣಗುಣಪೂರ್ಣನೆಂದೇ ಶ್ವಾಸ ಜಪ ಮಾಡುತ್ತಾನೆ. ಅಸುರರು ಹರಿಯನ್ನು ದುಃಖಪೂರ್ಣನೆಂದು ಉಪಾಸನ ಮಾಡಿದರು. ಅವರು ನಿತ್ಯದುಃಖವನ್ನೇ ಹೊಂದಿದರು. ಇದು ಪ್ರಸಿದ್ಧವೇ ಇದೆ' ಎಂದು ಮುಂತಾಗಿ ಶ್ರುತಿಗಳಿವೆ.

ಸತ್ಯಪ್ಯತ್ಯಲ್ಪವಿದ್ವೇಷೇ ಭೋಜನಂ ದಾಸ್ಯತೀತಿ ತು ।
ಸ್ನೇಹಬಾಹುಲ್ಯತಃ ಕೀಟಃ ಪೇಶಸ್ಕಾರಿಸಮೋ ಭವೇತ್ ।
ದ್ವೇಷೇ ಸರ್ವಾತ್ಮನಾ ನಷ್ಟೇ ಸ್ನೇಹೇ ಚೈವ ವಿವರ್ಧತಿ ।
ಸರೂಪತಾ ತದೈವ ಸ್ಯಾತ್ ಕೀಟಸ್ಯೈವಂ ಹರೇರಪಿ ।
ಅತ್ಯಲ್ಪೋಽಪಿ ಹರೇರ್ದ್ವೇಷಃ ಸ್ನೇಹಸ್ಯಾನುದಯಂಕರಃ ।
ಸೋಽಯಂ ವಿಶೇಷೋಽತ್ರಾನ್ಯಶ್ಚ ಫಲದಾತಾ ಹಿ ಕೇಶವಃ ।
ನ ಹಿ ಪೇಶಸ್ಕೃತಃ ಕಿಂಚಿತ್‌ಫಲದಾತೃತ್ವಮಿಷ್ಯತೇ ।
ಸ್ವಾತಂತ್ರ್ಯಾದ್ ವಿದ್ವಿಷಾಂ ಚೈವ ಕೇಶವೋ ನ ಸುಖಪ್ರದಃ ॥

ಇತಿ ಸ್ವಾತಂತ್ರ್ಯವಿವೇಕೇ ॥

ಮರಿಹುಳುವಿಗೆ ತಾಯಿಕಣಜದಲ್ಲಿ ಅಲ್ಪದ್ವೇಷವಿದ್ದರೂ ಆಹಾರವನ್ನು ನೀಡುತ್ತದೆ ಎಂದು ಹೆಚ್ಚು ಪ್ರೀತಿಯೇ ಉಂಟಾಗುವುದರಿಂದ ಅದು ಕಣಜ

ಸಮಾನರೂಪವನ್ನು ಪಡೆಯುತ್ತದೆ. ದ್ವೇಷವು ಪೂರ್ತಿಯಾಗಿ ಅಳಿದಾಗ, ಪ್ರೀತಿ ಹೆಚ್ಚಿದಾಗಲೆ ಮರಿಗೆ ತಾಯಿಯ ಸಾರೂಪ್ಯ ಬರುತ್ತದೆ. ಹೀಗೆಯೇ ಹರಿಯ ಬಗ್ಗೆ ದ್ವೇಷ ಪೂರ್ತಿಯಾಗಿ ಅಳಿದಾಗ ಭಕ್ತಿ ಹೆಚ್ಚಿದಾಗಲೇ ಭಕ್ತಜೀವನಿಗೆ ಭಗವಂತನ ಸಾರೂಪ್ಯ ಬರುತ್ತದೆ. ದ್ವೇಷಿ ಜೀವನಲ್ಲಿ ಮಾತ್ರ ಸ್ವಭಾವದಲ್ಲಿ ಇದ್ದ ಅಲ್ಪದ್ವೇಷವೂ ಬಲವಾಗಿ ಬೆಳೆದು, ಭಕ್ತಿ ಉದಯವಾಗದಂತೆ ತಡೆಯುತ್ತದೆ. ಇದು ಕಣಜದ ಉದಾಹರಣೆಗೂ ಹರಿದ್ವೇಷಕ್ಕೂ ಇರುವ ಒಂದು ವಿಶೇಷ. ಇನ್ನೊಂದು ವಿಶೇಷವೇನೆಂದರೆ ಹರಿ ದ್ವೇಷಕ್ಕೆ ಫಲ ನೀಡುತ್ತಾನೆ. ಆದರೆ ಮರಿಹುಳುವು ಮಾಡಿದ ದ್ವೇಷಕ್ಕೆ ತಾಯಿಕಣಜವು ಏನೂ ಫಲ ನೀಡುವುದಿಲ್ಲ. ಹರಿ ಸ್ವತಂತ್ರನಾದ್ದರಿಂದ ದ್ವೇಷಿಗಳಿಗೆ ಸುಖ ನೀಡುವುದಿಲ್ಲ. ಎಂದು ಸ್ವಾತಂತ್ರ್ಯವಿವೇಕ ಎಂಬ ಗ್ರಂಥದಲ್ಲಿದೆ.

❖❖❖

ಅವಧೂತಮುನಿಗೆ ಅವನ ಶರೀರ ಕಲಿಸಿದ ಪಾಠ.

ದೇಹೋ ಗುರುರ್ಮಮ ವಿರಕ್ತಿವಿವೇಕಹೇತು-
ರ್ಬಿಭ್ರತ್‌ಸ್ಮ ಸತ್ವನಿಧನಂ ಸತತಾತ್ಯುದರ್ಕಮ್ ।
ತತ್ತ್ವಾನ್ಯನೇನ ವಿಮೃಶಾಮಿ ಯಥಾ ತಥಾಪಿ
ಪಾರಕ್ಯಮಿತ್ಯವಸಿತೋ ವಿಚರಾಮ್ಯಸಂಗಃ ॥ ೨೫ ॥

ನನ್ನ ದೇಹ ನನಗೆ ಗುರು ಏಕೆಂದರೆ ಅದು ನನಗೆ ನಿತ್ಯಾನಿತ್ಯ ವಸ್ತು ವಿವೇಕ ವನ್ನುಂಟುಮಾಡಿ ವೈರಾಗ್ಯವನ್ನು ತಂದುಕೊಟ್ಟಿದೆ. ಮಾತ್ರವಲ್ಲ ಸಕಲ ಪ್ರಾಣಿಗಳಿಗೆ ಆಶ್ರಯನಾದ ಸದಾ ಅತ್ಯಂತ ಉತ್ಕೃಷ್ಟ ಕೇವಲ ಸುಖರೂಪನಾದ ಪರಮಾತ್ಮನನ್ನು ತನ್ನೊಳಗೆ ತುಂಬಿಕೊಂಡಿದೆ. ಮತ್ತು ಈ ದೇಹದಿಂದಲೇ ನಾನು ಪರಾಪರ ತತ್ವಗಳನ್ನು ಶಾಸ್ತ್ರಗಳ ಮೂಲಕ ವಿಮರ್ಶೆ ಮಾಡಿ ಯಥಾವತ್ತಾಗಿ ತಿಳಿಯುತ್ತಿದ್ದೇನೆ. ಹೀಗಿದ್ದರೂ ಈ ದೇಹ ಕರ್ಮಾಧೀನ ಭಗವಂತ ಕೊಟ್ಟಿದ್ದು, ಹೊರತು ನನ್ನ ಆತ್ಮಸ್ವರೂಪಕ್ಕೆ ಸಂಬಂಧಿ ಸಿದ್ದಲ್ಲ. ಪರಕೀಯವೆಂದು ನಿಶ್ಚಯಿಸಿಕೊಂಡು ಅದರಲ್ಲಿ ಆಸಕ್ತಿ ಇರಿಸಿಕೊಳ್ಳದೆ ಸಂಚರಿಸುತ್ತಿದ್ದೇನೆ.

ಸತ್ವನಿಧನ' ಎಂದರೆ ಬಲಜ್ಞಾನರೂಪವಾದ ಸತ್ವಕ್ಕೆ ನಿಧಿ, ಆಶ್ರಯನಾಗಿರುವ ಶ್ರೀಹರಿ. 'ಸತತಾತ್ಯುದರ್ಕ' ಎಂದರೆ ಸದಾ ಉತ್ತಮನೇ ಆಗಿರುವ ಕೇವಲ ಸುಖರೂಪನಾಗಿರುವ ಶ್ರೀಹರಿ.

ಬೇರೆ ವ್ಯಾಖ್ಯಾನಕಾರರಲ್ಲಿ 'ಸತತಾರ್ತ್ಯುದರ್ಕಂ' ಎಂದು ಪಾಠ.

[1]ಈ ದೇಹವೂ ನನಗೆ ಗುರು. ವಿರಕ್ತಿ ವಿವೇಕಗಳನ್ನು ಉಂಟುಮಾಡುತ್ತದೆ. ದೇಹಕ್ಕೆ 'ಸತ್ವನಿಧನ' ಉತ್ಪತ್ತಿನಾಶಗಳುಂಟು. 'ಸತತ ಆರ್ತಿ' ಮೇಲಿಂದಮೇಲೆ ದುಃಖವನ್ನು ನೀಡುತ್ತದೆ. ಅದರಿಂದ ವಿರಕ್ತಿ ಉಂಟಾಗುತ್ತದೆ. ಈ ದೇಹದಿಂದಲೆ ನಾನು ಚೆನ್ನಾಗಿ ತತ್ವವಿಮರ್ಶೆ ಮಾಡುವುದರಿಂದ ವಿವೇಕಕ್ಕೂ ಕಾರಣವಾಗಿದೆ. ಆದರೂ ಅದು ಇಂದಲ್ಲ ನಾಳೆ ನರಿನಾಯಿಗಳಿಗೆ ತುತ್ತಾಗುವುದರಿಂದ ಅಭಿಮಾನ ಪಡದೇ ಸಂಚರಿಸುತ್ತೇನೆ'' ಎಂದು ಬೇರೆ ವ್ಯಾಖ್ಯಾನಕಾರರು ವಿವರಣೆ ನೀಡುತ್ತಾರೆ.

ಆದರೆ ಈ ವಿವರಣೆಯಲ್ಲಿ 'ತಥಾಪಿ' ಶಬ್ದ ಸ್ವರಸವಾಗಿ ಕೂಡುವುದಿಲ್ಲ. ದೇಹವು ನನಗೆ ವಿರಕ್ತಿ ವಿವೇಕಗಳ ಪಾಠವನ್ನು ಕಲಿಸುವುದರಿಂದಲೇ ನಾನು ಅದರಲ್ಲಿ ವಿರಕ್ತಿ ತಾಳಿದ್ದೇನೆ. ವಿವೇಕಪೂರ್ಣನಾಗಿ ಅನಾಸಕ್ತಿಯಿಂದ ಸಂಚರಿಸುತ್ತಿದ್ದೇನೆ ಎನ್ನಬೇಕು ತಾನೆ? ತಥಾಪಿ 'ದೇಹವು ಹೀಗೆ ನನಗೆ ಬಹಳ ಉಪಯುಕ್ತವಾಗಿದ್ದರೂ' ಎನ್ನುವುದು ಪೂರ್ವೋತ್ತರ ವಿರುದ್ಧ. ಹಿಂದೆ 'ಸತ್ವನಿಧನಂ ಬಿಭ್ರತ್' ಉತ್ಪತ್ತಿನಾಶ ಉಳ್ಳದು. 'ಸತತ ಆರ್ತಿ' ಸದಾ ದುಃಖ ನೀಡುವುದು ಎಂದೂ ಹೇಳಿದ್ದರಿಂದ ಅದು ಉಪಕಾರಿಯಲ್ಲ ಎಂದಂತಾಗಿದೆ. ಮುಂದೆಯೂ 'ಪಾರಕ್ಯಂ' ನರಿನಾಯಿಗಳಿಗೆ ತುತ್ತಾಗುವುದು, ಹೇಯ ಎಂದೂ ಹೇಳಿದೆ.

ವಸ್ತುತಃ 'ಸತ್ವನಿಧನಂ' ಎಂದರೆ ಎಲ್ಲ ಪ್ರಾಣಿಗಳಿಗೆ ಆಶ್ರಯನಾದ ಪರಮಾತ್ಮ. 'ಸತತಾತ್ಯುದರ್ಕ' ಸದಾ ಅತ್ಯಂತ ಉತ್ತಮವಾದ ಜ್ಞಾನಾನಂದ ಸ್ವರೂಪನಾದ ಪರಮಾತ್ಮ. ಇಂಥ ಪರಮಾತ್ಮನನ್ನು ಹೊತ್ತಿರುವುದರಿಂದ ನನ್ನ ದೇಹ ನನಗೆ ಗುರು. ಜ್ಞಾನಾನಂದಮಯನಾದ ಪರಮಾತ್ಮ ಎಲ್ಲ ಪ್ರಾಣಿಗಳಿಗೆ ಸುಖ ನೀಡುತ್ತ ನನ್ನ ಶರೀರದಲ್ಲಿ ನೆಲೆಸಿದ್ದಾನೆ. ಅದರಿಂದ ನಾನೂ ಎಲ್ಲ ಸಜ್ಜನರಿಗೆ ಉಪದೇಶ ನೀಡಿ ಸುಖಕಾರಣನಾಗಿದ್ದೇನೆ ಎಂದು ತನ್ನ ಶರೀರವನ್ನು ಮುಕ್ತಕಂಠದಿಂದ ಹೊಗಳುತ್ತಿದ್ದಾನೆ. ಇದು ಸಾತ್ವಿಕ ಅಭಿಮಾನ.

ಶರೀರ ತನ್ನದು ನನಗೆ ದೈಹಿಕ ಸುಖಸಾಧನ ಎಂಬ ಕೆಟ್ಟ ಅಭಿಮಾನ ಅವನಿಗೆ ಇಲ್ಲ. ಪಾರಕ್ಯ ಶಬ್ದದಿಂದಲೂ ಅದನ್ನೇ ಹೇಳುತ್ತಾನೆ. ಪರ ಎಂದರೆ ಪರಮಾತ್ಮನಿಗೆ ಸೇರಿದ್ದು ಈ ಶರೀರ. ಅದರ ರಕ್ಷಣೆ ಮಾಡುವ ಭಾರವನ್ನು ಅವನ ಮೇಲೆಯೇ

1. ಗರುತ್ವೇ ಹೇತುಃ ವಿರಕ್ತಿ ವಿವೇಕಯೋ ರ್ಹೇತುಃ । ವಿರಕ್ತಿಹೇತುತ್ವಮಾಹ ಸತ್ವನಿಧನಮುತ್ಪತ್ತಿ ವಿನಾಶೌ ಬಿಭ್ರತ್‌ಸ್ಮ । ಕಿಂ ಚ ಸತತಂ ಸಂತತಮಾರ್ತ್ಯುದರ್ಕಂ ದುಃಖಮೇವೋತ್ತರಫಲಂ ಬಿಭ್ರತ್ ಸ್ಮ। ವಿವೇಕಹೇತುತ್ವಮಾಹ ತತ್ವಾನೀತಿ। ಏವಮಪ್ಯುಪಕಾರಿತ್ವೇಽಪಿ ದೇಹೇ ನೈವಾಸ್ಥಾ ಕರ್ತವ್ಯೇತ್ಯಾಹ ತಥಾಪೀತಿ। ಪಾರಕ್ಯಂ ಶ್ವಸೃಗಾಲಾದಿ ಭಕ್ಷ್ಯಮಿತಿ ನಿಶ್ಚಿತವಾನ್ । -ಶ್ರೀಧರಃ

ಬಿಟ್ಟು, ಈ ಶರೀರವನ್ನು ನನ್ನ ಸೊತ್ತೆಂದು ನಾನೇ ಕಾಪಾಡಿಕೊಳ್ಳಬೇಕೆಂದು ಕೆಟ್ಟ ಅಭಿಮಾನ ಬಿಟ್ಟು, ಅನಾಸಕ್ತಿಯಿಂದ ಆನಂದದಿಂದಲೇ ಹಿಂದೆ ಹೇಳಿದಂತೆ ಕಾಳ್ಗಿಚ್ಚಿನಲ್ಲಿ ಎಲ್ಲ ಪ್ರಾಣಿಗಳು ಬೇಯುವಾಗ ಗಂಗಾಜಲದಲ್ಲಿ ವಿಹಾರ ಮಾಡುವ ಮದ್ದಾನೆಯಂತೆ 'ವಿಚರಾಮಿ' ವಿ=ವಿಲಕ್ಷಣವಾಗಿ, ಲೋಕವಿಲಕ್ಷಣವಾಗಿ ಸಂಚರಿಸುತ್ತೇನೆ. ಎಲ್ಲೆಡೆ ಭಗವಂತನನ್ನು ಕಾಣುತ್ತ ಸಂಚರಿಸುತ್ತೇನೆ ಎನ್ನುತ್ತಾನೆ ಅವಧೂತ ಮುನಿ.

ಅವಧೂತನಂಥ ಯೋಗಿಗಳಿಗೆ ಬಂಧುಮಿತ್ರರೆಂದು ಯಾರೂ ಇಲ್ಲ. ಆದರೆ ಶಿಷ್ಯರು ನೂರಾರು ಸಾವಿರಾರು ದತ್ತಾತ್ರೇಯ ದುರ್ವಾಸರಂಥವರಲ್ಲಿ ಕಂಡಿದ್ದೇವೆ. ಅವರ ಶರೀರ ನರಿನಾಯಿಗಳಿಗೆ ಪಾಲಾಗಲು ಶಿಷ್ಯರು ಸರ್ವಥಾ ಬಿಡಲಾರರು. ಮಣ್ಣುಮಾಡಿ ಗುಡಿಕಟ್ಟಿ ಆರಾಧಿಸುವರು. ಒಂದುವೇಳೆ ಶಿಷ್ಯರಿಲ್ಲದಿದ್ದರೆ ಅಂತ್ಯಕಾಲ ಬಂದಾಗ ಗಂಗಾದಿ ತೀರ್ಥಗಳಲ್ಲಿ ಶರೀರತ್ಯಾಗ ಮಾಡುವರು. ಅದೂ ಸಾಧ್ಯವಾಗದಿದ್ದಲ್ಲಿ ಯೋಗಾಗ್ನಿಯಿಂದ ತಮ್ಮ ಶರೀರವನ್ನು ಸುಡಿಸಿಕೊಂಡೇ ಪರಲೋಕಕ್ಕೆ ಪಯಣ ಮಾಡುವರು. ಇಂಥ ಪವಿತ್ರವಾದ ಅವಧೂತಮುನಿಯ ಶರೀರವನ್ನು ನರಿನಾಯಿಗಳಿಗೆ ತುತ್ತಾಗುವಂಥದ್ದು ಹೇಯ ಎಂದು ಮುನಿ ತಾನೇ ಹೀನಾಯವಾಗಿ ಚಿತ್ರಿಸುವುದು ಉಚಿತವಲ್ಲ. ಸಂಭಾವಿತವಲ್ಲ.

ಸತ್ವನಿಧನಃ ಸತ್ವಂ ನಿಧೀಯತೇಽಸ್ಮಿನ್ ಪರಮೇಶ್ವರ ಇತಿ ।
ಸತತಮತಿಶಯೇನೋಚ್ಚೈರರಂ ಕರೂಪ ಇತಿ
ಸತತಾತ್ಯುದರ್ಕೋ ಭಗವಾನ್ ॥

ಸತ್ವನಿಧನನೆಂದರೆ ಪ್ರಾಣಿಗಳಿಗೆ ಆಶ್ರಯನಾದ ಪರಮಾತ್ಮ. ಬಲಜ್ಞಾನ ಪೂರ್ಣಸ್ವರೂಪನಾದ ಪರಮಾತ್ಮ. ಸತತಾತ್ಯುದರ್ಕನೆಂದರೆ ಸತತ ಅತ್ಯುತ್ತಮವಾದ ಜ್ಞಾನಾನಂದಮಯಸ್ವರೂಪನಾದ ಪರಮಾತ್ಮ.

ಶರೀರದಲ್ಲಿ ಜ್ಞಾನಾನಂದಮಯನಾದ ಪರಮಾತ್ಮನ ಸನ್ನಿಧಾನವನ್ನು ಸದಾ ಚಿಂತಿಸುತ್ತಿದ್ದರೆ ಜ್ಞಾನಾನಂದಮಯವಾದ ಮೋಕ್ಷಸಾಧನೆ ಶರೀರದಿಂದಾಗುತ್ತದೆ ಎಂದು ಲೋಕಕ್ಕೆ ಅವಧೂತಮುನಿ ಉಪದೇಶಿಸುತ್ತಿದ್ದಾನೆ.

❖❖❖

ಶರೀರ ವಿಷಯಸುಖಭೋಗಕ್ಕಾಗಿಯೇ ಇರುವುದೆಂದು ತಿಳಿದರೆ ಸಂಸಾರದಿಂದ ಮುಕ್ತಿ ಇಲ್ಲವೆಂದು ಅವಧೂತಮುನಿ ಯದುರಾಜನಿಗೆ ಉಪದೇಶಿಸುತ್ತಾನೆ.

ಜಾಯಾತ್ಮಜಾರ್ಥಪಶುಭೃತ್ಯಗೃಹಾಪ್ತವರ್ಗಾನ್
ಪುಷ್ಣಾತಿ ಯಃ ಪ್ರಿಯಚಿಕೀರ್ಷಯಾ ವಿತನ್ವನ್ ।
ಸೋಽಂತೇ ಸುಕೃಚ್ಛ್ರಮವರುದ್ಧಮನಾಃ ಸ್ವದೇಹಂ
ಸೃಷ್ಟ್ವಾ ಸ್ವಬೀಜಮವಸೀದತಿ ವೃಕ್ಷಧರ್ಮಾ ॥ ೨೬ ॥

ಹೆಂಡತಿ ಮಕ್ಕಳು ಆಸ್ತಿಪಾಸ್ತಿ ಪಶು ಭೃತ್ಯ ಬಂಧುವರ್ಗದವರೆಂದು ಎಲ್ಲರನ್ನೂ, ಅವರ ಸಂತೋಷಕ್ಕಾಗಿ ಬಲುಕಷ್ಟದಿಂದ ಧನಾರ್ಜನೆ ಮಾಡಿ ಪೋಷಣ ಮಾಡುವ ಮಾನವ ಮನಸಿನಲ್ಲಿ ಅವರ ಬಗ್ಗೆಯೇ ಆಸಕ್ತಿ ತುಂಬಿಕೊಂಡು ತನಗರಿವಿಲ್ಲ ದಂತೆಯೇ ತನ್ನ ಪುನರ್ಜನ್ಮಕ್ಕೆ ಬೀಜವಾಗಬಲ್ಲ ಧನಾರ್ಜನಪೋಷಣಕರ್ಮ ಮಾಡುತ್ತಾನೆ. ಅದಕ್ಕೆ ಈ ದೇಹವನ್ನು ಬಳಸಿಕೊಳ್ಳುತ್ತಾನೆ. ಹೀಗೆ ಕರ್ಮ ಮಾಡಿ ತನಗೆ ಮುಂದಿನ ದೇಹವನ್ನು ಸಿದ್ಧಪಡಿಸಿಕೊಂಡು ನರಕಾದಿ ಕ್ಲೇಶಭಾಗಿಯಾಗುತ್ತಾನೆ. ಮರ ತನಗರಿವಿಲ್ಲದೆಯೆ ಇನ್ನೊಂದು ಮರದ ಉತ್ಪತ್ತಿಗೆ ಕಾರಣವಾಗಬಲ್ಲ ಚಿಗುರೆಲೆ ಹೂ ಕಾಯಿ ಹಣ್ಣುಗಳನ್ನು ಬೆಳೆಸಿ ಪೋಷಿಸಿ ಕೊನೆಯಲ್ಲಿ ಸತ್ತು ಒಣಗಿಹೋಗುವುದು. ಮಾನವನ ದೇಹವೂ ಹೀಗೆ ವ್ಯರ್ಥವಾಗಿ ದೇಹಾಂತರಕ್ಕೆ ಕಾರಣವಾಗಿ ಕ್ಲೇಶದಾಯಕ ವೆನಿಸಬಾರದು.

ಬೇರೆ ವ್ಯಾಖ್ಯಾನಕಾರರು ಇಲ್ಲಿ 'ವೃಕ್ಷಧರ್ಮಾ' ಎಂದರೆ ಮರಗಿಡಗಳು ಒಣಗಿ ಹೋಗುವಾಗ ತಮ್ಮಂತೆ ಬೇರೆ ಗಿಡಗಳ ಉತ್ಪತ್ತಿಗೆ ಕಾರಣವಾದ ಬೀಜಗಳನ್ನು ಚೆಲ್ಲಿಟ್ಟೇ ಒಣಗಿ ಹೋಗುತ್ತವೆ. ಮಾನವನೂ ತನಗೆ ಪುನರ್ಜನ್ಮಕ್ಕೆ ಬೇಕಾಗುವ ಶರೀರಗಳ ಉತ್ಪತ್ತಿಗೆ ಕರ್ಮಗಳನ್ನು ಮಾಡಿಯೇ ಸಾಯುತ್ತಾನೆ ಎಂದು ವಿವರಣೆ ನೀಡಿದ್ದಾರೆ.

ಆದರೆ 'ಜಾಯಾತ್ಮಜಾರ್ಥ' ಎಂದು ಮುಂತಾಗಿ ಹೇಳಿದ್ದು ಪ್ರಕೃತ ವೃಕ್ಷಸಾದೃಶ್ಯಕ್ಕೆ ಹೇಗೆ ಉಪಯುಕ್ತವಾಗಿದೆ ಎಂಬುದನ್ನು ವಿವರಿಸಿಲ್ಲ. ಶ್ರೀಮದಾಚಾರ್ಯರು ವಿವರಿಸುತ್ತಾರೆ.

ವೃಕ್ಷವು ಅಂಕುರಿಸಿದಂದಿನಿಂದಲೂ ಆ-ರೋಹಣ ಮಾಡುತ್ತದೆ. ಚೆನ್ನಾಗಿ ಬೆಳೆಯುತ್ತದೆ. ಬೆಳೆದು ಹೆಮ್ಮರವಾಗುತ್ತದೆ. ಶಾಖೋಪಶಾಖೆಗಳನ್ನು ಸುತ್ತಲೂ ವಿಶಾಲವಾಗಿ ಹಬ್ಬಿಸುತ್ತದೆ. ಎಲೆ ಹೂ ಹಣ್ಣುಗಳನ್ನು ಹೊತ್ತು ಸೊಂಪಾಗಿ ಬೆಳೆದು ತಲೆಎತ್ತಿ ನಿಲ್ಲುತ್ತದೆ ಇದೆಲ್ಲ ಏಕೆ? 'ಸ್ವಬೀಜಂ ಉದ್ದಿಶ್ಯ' ಬೇರೆ ಮರಗಳ ಉತ್ಪತ್ತಿಗೆ ಕಾರಣವಾಗಬಲ್ಲ ತನ್ನ ಬೀಜದ ಉತ್ಪತ್ತಿಗಾಗಿ. ಇದು ವೃಕ್ಷಕ್ಕೆ ತಿಳಿಯುವುದಿಲ್ಲ. ಹಾಗೇ ಅಜ್ಞಾನಿ ಮಾನವನೂ ಕೂಡ ಹುಟ್ಟಿದಂದಿನಿಂದ ಬೆಳೆದು ದೊಡ್ಡವನಾಗಿ ಹೆಂಡತಿ

ಮಕ್ಕಳು ಬಂಧು ಬಳಗದವರೆಂದು ಸುತ್ತಲೂ ದೊಡ್ಡ ಪರಿವಾರವನ್ನು ಕಟ್ಟಿಕೊಂಡು ಚೆನ್ನಾಗಿ ಬೆಳೆಸಿ ಪೋಷಿಸುತ್ತಾನೆ. ಇದೆಲ್ಲ ಏಕೆ? ತನ್ನ ಪುನರ್ಜನ್ಮಕ್ಕೆ ಕಾರಣವಾಗಬಲ್ಲ ಕರ್ಮವೆಂಬ ಬೀಜವನ್ನು ಸೃಷ್ಟಿಮಾಡುವುದಕ್ಕಾಗಿ.

ತನ್ನ ದೇಹವನ್ನು 'ಸೃಷ್ಟ್ವಾ' ಎಂದರೆ ಸೃಷ್ಟಿ ಮಾಡಿಕೊಂಡಂತೆ. ಶ್ಲೋಕದಲ್ಲಿ 'ವಿತನ್ವನ್ ಪುಷ್ಣಾತಿ' 'ವಿಸ್ತಾರವಾಗಿ ಮಾಡಿ ಪೋಷಿಸುತ್ತಾನೆ' ಎಂದಿದೆ. 'ಆರೋಹಣಾದಿಕಂ ಕುರ್ವನ್' ಎಂದು ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ಅರ್ಥ ಹೇಳುತ್ತಾರೆ. ವೃಕ್ಷವಾಗಲಿ ಮಾನವನಾಗಲಿ ತಾವು ಮಾಡುವ ಈ ಎಲ್ಲ ಪ್ರಯಾಸ ಏತಕ್ಕಾಗಿ? 'ಬೀಜಾರ್ಥಂ' ಬೀಜಕ್ಕಾಗಿ, ಕರ್ಮಕ್ಕಾಗಿ ಎನ್ನುವುದನ್ನು ಅವರು ತಾವು ತಿಳಿದಿರುವುದಿಲ್ಲ. ಈ ಅಜ್ಞಾನವನ್ನು ತೋರಿಸಿ ಅವಧೂತಮುನಿ ಸಂಸಾರಿಗಳಿಗೆ ಜ್ಞಾನೋದಯ ಉಂಟುಮಾಡುತ್ತಾನೆ.

ಬೀಜಾರ್ಥಂ ಆರೋಹಣಾದಿಕಂ ಕುರ್ವನ್ನಿತಿ ।

'ಬೀಜದ ಉದ್ದೇಶದಿಂದ ತನ್ನ ದೇಹದ ಬೆಳವಣಿಗೆ ಮುಂತಾದುವನ್ನು ಮಾಡಿಕೊಂಡು' ಎಂಬುದು 'ಸ್ವಬೀಜಂ ಉದ್ದಿಶ್ಯ ಸ್ವದೇಹಂ ಸೃಷ್ಟ್ವಾ, ವಿತನ್ವನ್ ಪುಷ್ಣಾತಿ' ಎಂಬ ಮಾತಿನ ಅರ್ಥ.

❖❖❖

ಅನೇಕಮಂದಿ ಗುರುಗಳನ್ನೇಕೆ ಆಶ್ರಯಿಸಬೇಕೆಂದು ಅವಧೂತಮುನಿ ಯದುರಾಜನಿಗೆ ಹೇಳುತ್ತಾನೆ.

ನ ಹ್ಯೇಕಸ್ಮಾದ್ಗುರೋರ್ಜ್ಞಾನಂ ಸುಸ್ಥಿರಂ ಸ್ಯಾತ್ಸುಪುಷ್ಕಲಮ್ ।
ಬ್ರಹ್ಮೈತದದ್ವಿತೀಯಂ ವೈ ಗೀಯತೇ ಬಹುಧರ್ಷಿಭಿಃ ॥ ೩೧ ॥

ಅದ್ವಿತೀಯನಾದ ಪರಬ್ರಹ್ಮ ನಾರಾಯಣನನ್ನು ಜ್ಞಾನಿಗಳು ಅನೇಕ ಪ್ರಕಾರವಾಗಿ ಉಪದೇಶಿಸುವುದರಿಂದ ಒಬ್ಬನೇ ಗುರುವಿನಿಂದ ಪೂರ್ಣವಾಗಿ ಮತ್ತು ಸ್ಥಿರವಾಗಿ ಜ್ಞಾನ ಉಂಟಾಗದು.

ಒಬ್ಬನೇ ಗುರುವಿನಿಂದ ಯಾರಿಗೂ ಸ್ಥಿರವಾದ ಪೂರ್ಣವಾದ ತತ್ವಜ್ಞಾನ ಲಭಿಸುವುದಿಲ್ಲ. ಅನೇಕ ಗುರುಗಳನ್ನೇ ಆಶ್ರಯಿಸಬೇಕೆಂದು ಅವಧೂತಮುನಿ ಹೇಳುವುದು ಯುಕ್ತವೆನಿಸುವುದಿಲ್ಲ. 'ಗುರೂಂಶ್ಚಾಪಿ ನತ್ವಾ' ಎಂಬ ಅಪಿ ಶಬ್ದದಿಂದ ಶ್ರೀಮದಾಚಾರ್ಯರು ತಮಗೆ ಲಕ್ಷ್ಮೀನಾರಾಯಣರನ್ನು ಹೊರತುಪಡಿಸಿ ಬೇರೆ ಗುರುಗಳಿಲ್ಲವೆಂದು ಹೇಳಿದ್ದಾರೆ. 'ಈಶಾನಾಸಃ ಶವಸಾ ಕ್ರಂತ ಸೂರಯಃ' ರುದ್ರಾದಿ

ಸಮಸ್ತದೇವತೆಗಳಿಗೂ ತ್ರೈಲೋಕ್ಯಾಚಾರ್ಯರೆನಿಸಿದ ಶ್ರೀಮದಾಚಾರ್ಯರು ಒಬ್ಬರೇ ಗುರುಗಳು ಎಂದು ಬಳಿತ್ಥಾಸೂಕ್ತ ಹೇಳುತ್ತಿದೆ. ಬೇರೆ ವ್ಯಾಖ್ಯಾನಕಾರರಲ್ಲಿ ಈ ಬಗ್ಗೆ ವಿವರಣೆ ಸಿಗುವುದಿಲ್ಲ. ಶ್ರೀಮದಾಚಾರ್ಯರು ಹೇಳುತ್ತಾರೆ.

ಶ್ರೀಧರವ್ಯಾಖ್ಯಾನದಲ್ಲಿ 'ಇವರು ಯಾರೂ ತತ್ತ್ವೋಪದೇಶಗೈವ ಗುರುಗಳಲ್ಲ, ತತ್ತ್ವಜ್ಞಾನದಾಯಕನಾದ ಗುರು ಒಬ್ಬನೆ' ಎಂದಿದ್ದಾರೆ. ಛಾಂದೋಗ್ಯದಲ್ಲಿ ಜಾಬಾಲ ಸತ್ಯಕಾಮನಿಗೆ ವೃಷಭ ಅಗ್ನಿ ಹಂಸ ಮುಂತಾದವುಗಳು ತತ್ತ್ವಜ್ಞಾನೋಪದೇಶ ಮಾಡಿದ ಉಲ್ಲೇಖವಿದೆ. ಉಪಕೋಸಲನಿಗೆ ಮೂರು ಅಗ್ನಿಗಳಿಂದ ತತ್ತ್ವದ ಉಪದೇಶ ದೊರಕಿತೆಂದೂ ಹೇಳಿದೆ. ಅಲ್ಲಿ ಅಭಿಮಾನಿ ದೇವತೆಗಳಿಂದ ಉಪದೇಶವಾಯಿ ತೆಂದರೆ ಇಲ್ಲಿಯೂ ಹಾಗೇ ಎಂದು ತಿಳಿಯಬಹುದು.

ವಿಶ್ವನಾಥ ವ್ಯಾಖ್ಯಾನದಲ್ಲಿ 'ನಾಸಾವೃಷಿರ್ಯಸ್ಯ ಮತಂ ನ ಭಿನ್ನಂ' ತತ್ತ್ವ ಒಂದೇ ಇದ್ದರೂ ಒಬ್ಬೊಬ್ಬರು ದಾರ್ಶನಿಕರು ಒಂದೊಂದು ರೀತಿ ಹೇಳುತ್ತಾರೆ. ಅದರಿಂದ ವ್ಯಾವಹಾರಿಕ ಪದಾರ್ಥಗಳನ್ನೇ ಗುರುಗಳನ್ನಾಗಿ ಮಾಡಿಕೊಂಡೆನೆಂದು ಅವಧೂತ ಗೀತೆಗೆ ಅವರ ಭಾಷ್ಯವಿದೆ! ದರ್ಶನಾಚಾರ್ಯರುಗಳಿಗಿಂತ ವ್ಯಾವಹಾರಿಕ ಜಡಪದಾರ್ಥಗಳೇ ಹೆಚ್ಚಿನ ಗುರುಗಳೆಂದಂತಾಯಿತು. ಆದರೆ,

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ ।

ಎಂದು ಗೀತೆಯಲ್ಲಿ 'ವಿಷ್ಣುತತ್ತ್ವನಿಶ್ಚಯವಿಲ್ಲದ ದಾರ್ಶನಿಕರ ಬುದ್ಧಿ ಬೇರೆಬೇರೆ ಇರುತ್ತದೆ. ಅವರು ಗುರುಗಳೇ ಅಲ್ಲ' ಎಂದಿದೆ.

ಬುದ್ಧಿರ್ನಿರ್ಣೀತತತ್ತ್ವಾನಾಮೇಕಾ ವಿಷ್ಣುಪರಾಯಣಾ ।
ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ ॥

ಎಂದು ಬ್ರಹ್ಮವೈವರ್ತವು ಗೀತೆಯ ತಾತ್ಪರ್ಯವನ್ನು ಸ್ಪಷ್ಟಪಡಿಸಿದೆ.

ಅದರಿಂದ ವಿಷ್ಣುತತ್ತ್ವನಿಶ್ಚಯ ಉಳ್ಳ ಗುರುಗಳು ಸರಿಯಾದ ಉಪದೇಶವನ್ನೇ ನೀಡುತ್ತಾರೆ. ಆದರೂ ಅದರಲ್ಲಿ ದಾರ್ಢ್ಯ ಬರಲು ಪೂರಕವಾಗಿ ಲೋಕಾನುಭವ ವನ್ನು ಸ್ವೀಕರಿಸಬೇಕು ಎನ್ನುವುದು ಯುಕ್ತ.

ರುದ್ರಾದಿಗಳಿಗೆ ಬ್ರಹ್ಮನೊಬ್ಬನೇ ಗುರು, ಬ್ರಹ್ಮನಿಗೆ ವಿಷ್ಣು ಒಬ್ಬನೇ ಗುರು. ವಿಷ್ಣುವಿಗೆ ಗುರುವೇ ಇಲ್ಲ. ಹೀಗಿರುವಾಗ ಅನೇಕ ಗುರುಗಳಿಲ್ಲದೆ ಜ್ಞಾನವಿಲ್ಲ ಎಂದು ಭಾಗವತ ಹೇಳುವುದು ಹೇಗೆ ಯುಕ್ತ ಎನ್ನುವ ಪ್ರಶ್ನೆಗೆ ಗುರುವಿವೇಕ

ಗ್ರಂಥವಚನವನ್ನು ಉದಾಹರಿಸುತ್ತ ಶ್ರೀಮದಾಚಾರ್ಯರು ಭಾಗವತದ ತಾತ್ಪರ್ಯವನ್ನು ಹೇಳುತ್ತಾರೆ.

ಏಕಸ್ಮಾತ್ತು ಗುರೋರ್ಜ್ಞಾನಂ ಜಾಯತೇ ನೈವ ಕಸ್ಯಚಿತ್ ।
ಏಕಸ್ಮಾದೇವ ಜಾಯೇತ ಯೋಗ್ಯಾದ್ ಬ್ರಹ್ಮಪದಸ್ಯ ತು ।
ಸ್ವಯಂ ತೂಪದಿಶನ್ ಜ್ಞಾನಂ ವೈರಿಂಚಪದಯೋಗಿನಿ ।
ಅನುಗ್ರಹಾತ್ತೇನ ಚಾಪಿ ಜ್ಞಾನಂ ದತ್ವಾ ವಿಮುಕ್ತಿದಃ ।
ಜ್ಞಾನಂ ಪ್ರಾಪ್ಯ ಬಹುಭ್ಯೋಽಪಿ ನರ್ತೇ ಮುಕ್ತಿಶ್ಚತುರ್ಮುಖಾತ್ ।
ಜ್ಞಾನಮಪ್ರಾಪ್ಯ ತೇಷಾಂ ತು ಜ್ಞಾನದೋ ವಿಷ್ಣುರೇವ ಹಿ ॥
ಇತಿ ಗುರುವಿವೇಕೇ ॥

ಒಬ್ಬನೇ ಗುರುವಿನಿಂದ ಯಾರಿಗೂ ಸ್ಥಿರವಾದ ಪೂರ್ಣವಾದ ಶಾಸ್ತ್ರಜ್ಞಾನ ಉಂಟಾಗದು. ಆದರೆ ಬ್ರಹ್ಮಪದವಿಗೆ ಯೋಗ್ಯನಾದ ಒಬ್ಬನೇ ಗುರುವಿನಿಂದ ಪೂರ್ಣಜ್ಞಾನವೇ ಉಂಟಾಗುವುದು. ಸ್ವತಂತ್ರನಾದ ವಿಷ್ಣು ಬ್ರಹ್ಮಪದವಿಗೆ ಯೋಗ್ಯನಿಗೆ ತಾನೊಬ್ಬನೇ ಉಪದೇಶ ನೀಡಿ ಅವನ ಮೇಲಿನ ಅನುಗ್ರಹಬುದ್ಧಿಯಿಂದ ರುದ್ರಾದಿ ಸಮಸ್ತ ಜಿಜ್ಞಾಸುಗಳಿಗೆ ಅವನಿಂದಲೇ ಉಪದೇಶಕೊಡಿಸಿ ಮುಕ್ತಿ ನೀಡುತ್ತಾನೆ. (ಶುಕ ಅರ್ಜುನ ಮುಂತಾಗಿ ಅವತರಿಸಿದ ರುದ್ರಾದಿ ದೇವತೆಗಳಿಗೆ ತಾನೇ ಉಪದೇಶ ಮಾಡಿದರೂ ಅವರಿಗೆ ಪುನಃ ಬ್ರಹ್ಮನಿಂದ ಉಪದೇಶ ಕೊಡಿಸಿಯೇ ಮುಕ್ತಿ ನೀಡುತ್ತಾನೆ) ಅದರಿಂದ ಅನೇಕ ಮಂದಿ ಗುರುಗಳಿಂದ ಜ್ಞಾನಪಡೆದರೂ ಬ್ರಹ್ಮನ ಉಪದೇಶವಿಲ್ಲದೆ ಯಾರಿಗೂ ಮುಕ್ತಿ ಇಲ್ಲ. ವಿಷ್ಣು ತಾನು ಮಾತ್ರ ಯಾರಿಂದಲೂ ಜ್ಞಾನ ಪಡೆಯದೆ ಸ್ವತಃ ಸಿದ್ಧವಾದ ಜ್ಞಾನದಿಂದಲೇ ಶುಕ ಅರ್ಜುನ ಮುಂತಾದ ಶಿಷ್ಯರಿಗೆ ಜ್ಞಾನೋಪದೇಶ ನೀಡುತ್ತಾನೆ. ಎಂದು ಗುರುವಿವೇಕಗ್ರಂಥದಲ್ಲಿದೆ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್‌ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ನವಮೋಽಧ್ಯಾಯಃ ॥

❖❖❖

ಅಧ್ಯಾಯ–೧೦

ಅಧ್ಯಾಯ ಸಾರಾಂಶ

ಫಲಾಪೇಕ್ಷೆ ಬಿಟ್ಟು ನನ್ನನ್ನೇ ಮೊರೆಹೊಕ್ಕು ನಾನು ಗೀತೆ ಪಂಚರಾತ್ರ

ಗಳಲ್ಲಿ ಹೇಳಿದಂತೆ ವೈಷ್ಣವಧರ್ಮಗಳನ್ನೂ ವರ್ಣಾಶ್ರಮಧರ್ಮಗಳನ್ನೂ ಕುಲಾಚಾರಗಳನ್ನೂ ಪಾಲಿಸಬೇಕು. ವಿಷಯಾಸಕ್ತಿಯಿಂದ ಮಾಡುವ ಕರ್ಮ ದುಃಖಕ್ಕೇ ಕಾರಣವೆಂದು ನಿರ್ಮಲ ಮನಸಿನಿಂದ ಅರಿತುಕೊಳ್ಳಬೇಕು.

ಮನಸಿನಲ್ಲಿ ಉಂಟಾಗುವ ಕಾಮಕ್ರೋಧಾದಿಗಳು ಮನಸಿಗೇ ಸಂಬಂಧಿಸಿದವು ಹೊರತು ಆತ್ಮಸ್ವರೂಪಕ್ಕೆ ಸಂಬಂಧಿಸಿಲ್ಲವೆಂದೂ ಅರಿಯಬೇಕು. ಕಾಮಾದಿ ವಶನಾಗಿ ಕಾಮ್ಯಕರ್ಮ ಮಾಡುವುದು ಜ್ಞಾನಪ್ರಾಪ್ತಿಗೆ ವಿರೋಧಿಯಾದ್ದರಿಂದ ಬಿಡಬೇಕು. ಯಮ ನಿಯಮಾದಿಗಳನ್ನು ಅನುಷ್ಠಾನ ಮಾಡಬೇಕು.

ನನ್ನ ಭಕ್ತ ಅಹಂಕಾರ ಮಾತ್ಸರ್ಯಗಳನ್ನು ಬಿಡಬೇಕು. ಗುರೂಪದೇಶ ಶ್ರವಣಸಾಮರ್ಥ್ಯವನ್ನು ಸಂಪಾದಿಸಬೇಕು. ಶಾಸ್ತ್ರದಲ್ಲಿ ದೃಢನಿಷ್ಠೆ ಇರಿಸಬೇಕು. ಹೆಂಡತಿ ಮಕ್ಕಳಲ್ಲಿ ಉದಾಸೀನನಾಗ ಬೇಕು. ಅವರಲ್ಲಿ ~~ತನಗೆ ಎಷ್ಟು ಆವಶ್ಯಕವೋ ಅಷ್ಟೇ ಪ್ರಯೋಜನ ಕಂಡುಕೊಳ್ಳಬೇಕು.~~ ಕಟ್ಟಿಗೆಯಲ್ಲಿ ಬೆಂಕಿಯಂತೆ ಎಲ್ಲೆಡೆ ಎಲ್ಲಕ್ಕಿಂತ ವಿಲಕ್ಷಣನಾಗಿ ಭಗವಂತನಿರುವನೆಂದು ತಿಳಿಯಬೇಕು.

ಶರೀರದಲ್ಲಿ ಜೀವಾತ್ಮನೊಂದಿಗೆ ಪರಮಾತ್ಮನಿರುತ್ತಾನೆ. ಇಬ್ಬರೂ ಶರೀರದಿಂದ ವಿಲಕ್ಷಣರೇ. ಆದರೆ ಜೀವಾತ್ಮ ಶರೀರದ ಜನನಾದಿ ದೋಷಗಳನ್ನು ತನಗೆ ಸ್ವಾಭಾವಿಕವೆಂದುಕೊಳ್ಳುತ್ತಾನೆ. ಪರಮಾತ್ಮನೂ ಕೂಡ ಹಾಗೇ ತಾನೂ ಎಂದು ಅಜ್ಞರಿಗೆ ತೋರಿಕೊಳ್ಳುತ್ತಾನೆ. ಅವಿದ್ಯೆಯಲ್ಲಿ ಮುಳುಗಿರುವ ಜೀವಾತ್ಮನಿಗೇ ಶರೀರ ಬಂದಿರುತ್ತದೆ. ಅವನಿಗೇ ಅದರಲ್ಲಿ ಅಭಿಮಾನ. ಶರೀರಸಂಬಂಧದಿಂದಾಗುವ ಜನನಮರಣಾದಿ ದುಃಖ ಅವನಿಗೇ ಹೊರತು ಪರಮಾತ್ಮನಿಗಲ್ಲ. ಅದರಿಂದ ಪರಮಾತ್ಮ ಜೀವವಿಲಕ್ಷಣ.

ತತ್ತ್ವಜ್ಞಾನ ಉದಿಸಬೇಕಾದರೆ ಗುರೂಪದೇಶ ಬೇಕು. ಅರಣಿಯಲ್ಲಿ ಅಗ್ನಿ ಉದಿಸಲು ಮಥನದಂತೆ ಈ ಗುರೂಪದೇಶ. ಗುರು ಮೇಲಿನ ಅರಣಿಕಾಷ್ಠ ಶಿಷ್ಯ ಕೆಳಗಿನ ಕಾಷ್ಠ ಪ್ರವಚನವೆ ಕಡಗೋಲು. ಮಥನದಿಂದ ಯಾಗಾಗ್ನಿ ಉದಿಸಿ ಸ್ವರ್ಗಸಾಧನವಾಗುವಂತೆ ಪ್ರವಚನದಿಂದ ತತ್ತ್ವಜ್ಞಾನ ಉದಿಸಿ ಮೋಕ್ಷಸಾಧನವಾಗುತ್ತದೆ. ಅದಕ್ಕೆ ಮೊದಲಿಗೆ ಈ ತತ್ತ್ವಜ್ಞಾನ ಅಪರೋಕ್ಷವನ್ನು ಉಂಟುಮಾಡುತ್ತದೆ.

ಅಪರೋಕ್ಷವು ಕಾಮಾದಿ ಹೇತುವಾದ ಜೀವಾಚ್ಛಾದಕವನ್ನು ನಾಶಮಾಡಿ ಪರಮಾಚ್ಛಾದಕವನ್ನು ದೂರ ಸರಿಸುತ್ತದೆ. ಕಾಮ ಕ್ರೋಧಾದಿಗಳನ್ನು ಸುಟ್ಟು ಸಂಸಾರಕ್ಕೆ ಮೂಲಕಾರಣವಾದ ಅವಿದ್ಯೆಯನ್ನು ಸುಟ್ಟು ಬಳಿಕ ತಾನೂ ಕಟ್ಟಿಗೆಯಿಲ್ಲದ ಬೆಂಕಿಯಂತೆ ನಾಶಹೊಂದುವುದು. ಮುಕ್ತಿಯಲ್ಲಿ ಈ ಜಡವಾದ ಅಪರೋಕ್ಷವಿಲ್ಲ. ಜೀವಸ್ವರೂಪಭೂತವಾದ ಅಪರೋಕ್ಷವೇ ಇರುತ್ತದೆ.

ಜೀವರ ಸ್ವರೂಪ ಸ್ಥೂಲವಾಗಿ ಸಾತ್ವಿಕ ರಾಜನ ತಾಮಸ ಎಂದು ಮೂರು ಬಗೆ. ಅದಕ್ಕನುಗುಣವಾಗಿ ಅವರಿಗೆ ದೇವಾಸುರಾದಿ ಮೂರು ಬಗೆಯ ಶರೀರವೂ ಮೂರು ಬಗೆ ಜ್ಞಾನವೂ ಬರುತ್ತದೆ. ಜೀವಸ್ವರೂಪ ನಿತ್ಯವೇ ಆದರೂ ಕರ್ಮಾನುಸಾರ ಶರೀರ ಬರುವುದರಿಂದ ಜನನಮರಣಾದಿಗಳು ಪ್ರವಾಹರೂಪದಿಂದ ಬರುತ್ತವೆ. ಅವು ಸತ್ಯವೇ ಆಗಿರುತ್ತವೆ.

ಸಂಸಾರದಲ್ಲಿ ಕರ್ಮ ಮಾಡುವಾಗಲೂ ಅದರ ಫಲ ಉಣ್ಣುವಾಗಲೂ ಅಸ್ವಾತಂತ್ರ್ಯ ಅನುಭವದಲ್ಲಿ ಕಂಡುಬರುತ್ತದೆ. ಅಸ್ವತಂತ್ರರಿಗೆ ಏನು ಸುಖವಿದೆ? ಜ್ಞಾನಿಗಳಿಗೂ ಕೂಡ ದೇಹಾಭಿಮಾನವಿರುವಷ್ಟು ಕಾಲ ಸುಖವಿಲ್ಲವೆಂದಮೇಲೆ ಅಹಂಕಾರಿಗಳಾದ ಅಜ್ಞಾನಿಗಳಿಗೆ ಸುಖವಿಲ್ಲವೆಂದು ಬೇರೇನು ಹೇಳಬೇಕು? ಸುಖ ಹೇಗೆ ಬರುತ್ತದೆ, ದುಃಖ ಹೇಗೆ ನಿವಾರಣೆಯಾಗುತ್ತದೆ ಎಂದು ತಿಳಿದುಕೊಂಡು ವೇದವಿದ್ವಾಂಸರೆನಿಸಿಕೊಂಡವರೂ ಕೂಡ ದೇಹಾಭಿಮಾನ ಉಳ್ಳವರಾದರೆ ಮರಣಭಯ ನಿವಾರಣೆಗೆ ಉಪಾಯವನ್ನು ತಿಳಿದಿರುವುದಿಲ್ಲ. ಹೀಗಾಗಿ ಮರಣಭಯವುಳ್ಳ ಮಾನವನಿಗೆ ಎಲ್ಲಿಯ ಸುಖ? ಮರಣದಂಡನೆಗೆ ಗುರಿಯಾಗಿರುವ ಅಪರಾಧಿಗೆ ಮೃಷ್ಟಾನ್ನ ನೀಡಿದರೂ ಸುಖವಿಲ್ಲ.

ಯಾಗಾದಿ ಕರ್ಮ ಮಾಡುವಾಗ ಆಯಾಸ ದುಃಖವಿದ್ದೇ ಇದೆ. ಪರಸ್ಪರ ಸ್ಪರ್ಧೆ ಅಸೂಯೆ ಅತಿಕ್ರಮಗಳಿಂದ ಯಾಗ ನಿಂತೂ ಹೋಗಬಹುದು. ಮಧ್ಯದಲ್ಲಿ ತನಗೇ ಮರಣ ಸಂಭವಿಸಬಹುದು. ಒಂದುವೇಳೆ ಯಾಗ ನಿರ್ವಿಘ್ನವಾಗಿ ನಡೆಯಿತೆಂದರೂ ಅದರಿಂದ ಸಿಗುವ ಸ್ವರ್ಗ ನಿಜವಾಗಿ ಸುಖವಲ್ಲ. ದುರ್ಜನರು ದೈವಾತ್ ಸಜ್ಜನಸಂಗ ಪ್ರಭಾವದಿಂದ ಯಾಗಮಾಡಿ ಸ್ವರ್ಗಕ್ಕೆ ಹೋದರೆ

ಕೆಲಕಾಲ ಅಪ್ಸರೆಯರೊಂದಿಗೆ ವಿಹರಿಸಬಹುದು. ಆದರೆ ಆ ಸುಖದಲ್ಲಿ ಮೈಮರೆತಿದ್ದಂತೆಯೇ ಪುಣ್ಯ ತೀರಿದಾಗ ತಮಗರಿಲ್ಲ ದಂತೆಯೇ ಭೂಮಿಗೆ ಬಂದು ಬೀಳುವರು. ಬಳಿಕ ದುರ್ಜನಸಂಗ ಮಾಡಿ ವಿಧಿವಿರುದ್ಧವಾದ ಪಶುಹಿಂಸೆಯಿಂದ ನರಕಕ್ಕೆ ಹೋಗಿ ಬಳಿಕ ತಮಸ್ಸಿನಲ್ಲಿ ಬೀಳುವರು. ಅವರಿಗೆ ಏನು ಸುಖವಿದೆ? ರಾಜಸ ಸ್ವಭಾವದವರೂ ಕೂಡ ಕಾಮ್ಯಕರ್ಮಗಳನ್ನೇ ಮಾಡಿ ಮತ್ತೆ ಮತ್ತೆ ದೇಹಗಳನ್ನು ಸಂಪಾದಿಸುತ್ತಲೇ ಇರುತ್ತಾರೆ. ಅವರಿಗೆಲ್ಲಿಯ ಸುಖ? ಕಲ್ಪದ ಕೊನೆವರೆಗೂ ಆಯುಷ್ಯ ಹೊಂದಿರುವ ಲೋಕಪಾಲಕ ರಿಗೂ ಕಲ್ಪದ ಕೊನೆಯಲ್ಲಿ ಮರಣಭಯವಿದ್ದೇ ಇದೆ.

ಜೀವರು ಶರೀರದಲ್ಲಿದ್ದು ಕರ್ಮಫಲ ಉಣ್ಣುವವರು. ಪರಮಾತ್ಮ ಶರೀರದಲ್ಲಿದ್ದರೂ ಕರ್ಮಫಲ ಉಣ್ಣುವುದಿಲ್ಲ. ಅದರಿಂದ ಜೀವ ಪರಮಾತ್ಮರಿಗೆ ಭೇದವಿದೆ.

ಜೀವೇಶ್ವರಭೇದ ಪಾರಮಾರ್ಥಿಕವಲ್ಲ ಎಂದು ಕೆಲವರ ವಾದ. ತ್ರಿಗುಣಗಳಿಂದ ಶರೀರಸೃಷ್ಟಿ ಇರುವವರೆಗೂ ಆತ್ಮನಿಗೆ ಭೇದಭ್ರಮ ವಿರುತ್ತದೆ. ಅದರಿಂದ ಪಾರತಂತ್ರ್ಯ ಭ್ರಮ, ಈಶ್ವರನಿಂದ ನಾಶ ಉಂಟಾಗುವ ಭಯ. ಇವೆಲ್ಲವೂ ಅವಿದ್ಯೆಯ ಕಾರ್ಯ. ಅವಿದ್ಯೆ ನಾಶವಾಯಿತೆಂದರೆ ಭೇದಭ್ರಮವಿಲ್ಲ, ಭೇದವಿಲ್ಲ, ಈಶ್ವರನೇ ಇಲ್ಲ. ಇನ್ನು ಭಯವೆಲ್ಲಿ? ಎನ್ನುತ್ತಾರೆ. ಆದರೆ ಹೀಗೆ ವಾದಿಸುವವರು ಭ್ರಾಂತಿಯಲ್ಲಿ ಸಿಲುಕಿ ತಮಸಿನಲ್ಲಿ ಬೀಳುತ್ತಾರೆ ಎಂದು ತಿಳಿಯಬೇಕು. ಏಕೆಂದರೆ ಮುಕ್ತಿಯಲ್ಲಿಯೂ ಕೂಡ ಜೀವರು ಪರಮಾತ್ಮನನ್ನು ಕಾಲಾದಿ ನಿಯಾಮಕನೆಂದು ಸ್ತುತಿಸುತ್ತಾರೆ. ಮುಕ್ತಿಯಲ್ಲಿಯೂ ಜೀವೇಶ್ವರಭೇದವಿದೆ ಎಂದಮೇಲೆ ಅದು ಅವಿದ್ಯೆಯಿಂದಾದು ದಲ್ಲ, ಸತ್ಯವೇ ಆಗಿದೆ.

ಹೀಗೆ ಶ್ರೀಕೃಷ್ಣ ಉಪದೇಶಿಸಿದಾಗ ಉದ್ಧವ ಕೇಳಿದ, 'ಜೀವರ ಶರೀರದಲ್ಲಿರುವ ಪರಮಾತ್ಮನೂ ಜೀವರಂತೆ ಕಾಮಕ್ರೋಧಾದಿ ಗಳಿಂದ ಯುಕ್ತನಾಗಿರುವಂತೆ ಕಾಣುತ್ತಾನೆ. ಅದರಿಂದ ಅವನೂ ತ್ರಿಗುಣಬದ್ಧನಾಗಿರಬಹುದೆ? ಎಂದು ಸಂದೇಹ ಬರುತ್ತದೆ. ತ್ರಿಗುಣ ಬದ್ಧನೆಂದು ಒಪ್ಪಿದರೆ ಅವನು ಅಶರೀರಿ ಎನ್ನುವುದು ಕೂಡ ಲಾರದು.

ಸೃಷ್ಟ್ಯಾದಿ ಪ್ರವೃತ್ತಿ ಕೂಡಲಾರದು. ಪ್ರವೃತ್ತಿ ಇಲ್ಲವೆಂದರೆ, ಜನ್ಮಾದಿ ಕರ್ತೃತ್ವವಿಲ್ಲದ್ದರಿಂದ ಅವನನ್ನು ಯಾವ ಲಕ್ಷಣಗಳಿಂದ ತಿಳಿಯಬೇಕು? ಬದ್ಧನಾದ್ದರಿಂದ ಕರ್ಮಫಲ ಉಣ್ಣುವನೆನ್ನಬೇಕೆ? ಈಶ್ವರನಾದ್ದರಿಂದ ಉಣ್ಣುವುದಿಲ್ಲ ಎನ್ನಬೇಕೆ? ಶಯನ ಆಸನ ಗಮನಾದಿಕ್ರಿಯೆಗಳು ಅವನಲ್ಲಿ ಉಂಟೆ ಇಲ್ಲವೆ?

'ಜೀವನೇ ಕಾಮಾದಿದೋಷಯುಕ್ತನಾಗಿದ್ದಾನೆ, ಬದ್ಧನಾಗಿದ್ದಾನೆ. ಕರ್ಮಫಲ ಉಣ್ಣುತ್ತಿದ್ದಾನೆ, ಶಯನಾದಿ ಕ್ರಿಯಾಯುಕ್ತನೂ ಆಗಿದ್ದಾನೆ. ಏಕೆಂದರೆ ಅವನು ಅಸ್ವತಂತ್ರ. ಸ್ವತಂತ್ರನಾದ ಈಶ್ವರ ಕಾಮಾದಿ ದೋಷಯುಕ್ತನಾಗಿರುವಂತೆ ಅಜ್ಞಾನಿಗಳಿಗೆ ಕಂಡುಬಂದರೂ ವಸ್ತುತಃ ಬದ್ಧನಲ್ಲ. ಕರ್ಮಫಲ ಉಣ್ಣುವುದಿಲ್ಲ. ಅದರಿಂದ ಸ್ವತಂತ್ರನಾಗಿ ಸೃಷ್ಟ್ಯಾದಿ ಪ್ರವೃತ್ತಿ ಮಾಡುತ್ತಿದ್ದಾನೆ, ಜನ್ಮಾದಿ ಕರ್ತೃತ್ವ ಲಕ್ಷಣಗಳಿಂದ ಜ್ಞೇಯನಾಗಿದ್ದಾನೆ' ಎಂದು ಸಮಾಧಾನವನ್ನು ಹೇಳುವಂತಿಲ್ಲ. ಏಕೆಂದರೆ, 'ನಿತ್ಯಮುಕ್ತ ಈಶ್ವರ ಮತ್ತು ನಿತ್ಯಬದ್ಧ ಜೀವನೆಂದು ಇಬ್ಬರಿಲ್ಲ, ಒಬ್ಬನೇ' ಎಂದು ನನ್ನ ಅಭಿಪ್ರಾಯ. 'ಒಬ್ಬನೇ ಜೀವ ಅವಿದ್ಯೆಯಿಂದ ಸ್ವಪ್ನದಂತೆ ಅನೇಕ ಜೀವರನ್ನೂ ಒಬ್ಬ ಈಶ್ವರನನ್ನೂ ಭ್ರಾಂತಿಯಿಂದ ಕಲ್ಪಿಸಿಕೊಂಡಿದ್ದಾನೆ' ಎನ್ನುತ್ತೇನೆ. ಅದರಿಂದ ಪ್ರಶ್ನೆಗಳನ್ನು ಮಾಡುತ್ತಿದ್ದೇನೆ' ಎಂದು.

❖❖❖

ನಿಷಿದ್ಧಕಾಮನೆಗಳನ್ನು ತೊರೆದು ಕರ್ಮಾಚರಣೆ ಮಾಡೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಸುಪ್ತಸ್ಯ ವಿಷಯಾಲೋಕೋ ಧ್ಯಾಯತೋ ವಾ ಮನೋರಥಃ।
ನಾನಾತ್ಮಕತ್ವಾದ್ವಿಫಲಸ್ತಥಾಽ ಭೇದೋಽನ್ಯಧೀಗುಣೈಃ ॥ ೩ ॥

ಮಲಗಿದವನಿಗೆ ಕನಸಿನಲ್ಲಿ ವಿಷಯಪದಾರ್ಥಾನುಭವವಾಗಲಿ, ವಿಷಯ ಧ್ಯಾನದಲ್ಲಿರುವವನಿಗೆ ಹಗಲುಗನಸುಗಳಾಗಲಿ ಎರಡೂ ವಸ್ತುಸ್ಥಿತಿಗೆ ವಿಪರೀತವಾಗಿ ಬರುವುದರಿಂದ ಭ್ರಾಂತಿ ಎನಿಸುತ್ತದೆ. ಹಾಗೇ ಬಾಹ್ಯ ಅಂತಃಕರಣದಲ್ಲಿ ಮೂಡುವ ಕಾಮ ಕ್ರೋಧಾದಿಗಳಲ್ಲಿ ಅವು ನನ್ನವೆಂಬ ಅಭಿಮಾನವೂ ಭ್ರಾಂತಿಯಾಗಿದೆ. ಏಕೆಂದರೆ ಅವು ಆತ್ಮನ ಸ್ವರೂಪಭೂತವಲ್ಲವೆಂದು ತಿಳಿಯಬೇಕು.

ಇಲ್ಲಿ ಬೇರೆ ವ್ಯಾಖ್ಯಾನಕಾರರಿಗೆ 'ತಥಾ ಭೇದಾತ್ಮಧೀರ್ಗುಣ್ಯೈಃ' ಎಂದು ಪಾಠ.

[1]ಸ್ವಪ್ನ ಮನೋರಥಗಳಲ್ಲಿ ಕಾಣುವಂತೆ ಜಾಗರದಲ್ಲಿಯೂ ನಾನಾಪದಾರ್ಥಗಳು ಮನ ಇಂದ್ರಿಯಗಳಿಂದ ಕಾಣುತ್ತವೆ. ಅವೆಲ್ಲವೂ ಮಿಥ್ಯ ವಿಫಲ, ಅರ್ಥಕ್ರಿಯಾಕಾರಿಯಲ್ಲ ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ. ಕರ್ಮಫಲವೂ ಮಿಥ್ಯೆಯಾದ್ದರಿಂದ ಫಲಕಾಮನೆಯನ್ನು ತೊರೆದು ನಿತ್ಯನೈಮಿತ್ತಿಕ ಕರ್ಮವನ್ನು ಮಾತ್ರ ಮಾಡಬೇಕೆಂದೂ ಅಲ್ಲಿ ಹೇಳಿದೆ. 'ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್' ಎಂಬ ಬ್ರಹ್ಮಸೂತ್ರದಲ್ಲಿಯೇ ಸ್ವಪ್ನಮನೋರಥ ಗಳಂತೆ ಜಾಗರದಲ್ಲಿ ಕಾಣುವ ಪದಾರ್ಥಗಳಿಗೆ ಬಾಧವಿಲ್ಲದ್ದರಿಂದ ಅರ್ಥಕ್ರಿಯಾಕಾರಿಯಾದ್ದರಿಂದ ಮಿಥ್ಯೆ ಎನ್ನಲಾಗದೆಂದು ಹೇಳಿದೆ. ಬಾಧ ಇದ್ದರೆ ಮಾತ್ರ ಮಿಥ್ಯೆ. ನಾನಾಪದಾರ್ಥಗಳನ್ನು ಬುದ್ಧಿ ಗ್ರಹಿಸಿದ ಮಾತ್ರಕ್ಕೆ ಅದು ಮಿಥ್ಯೆ ಎನ್ನುವುದು ಯುಕ್ತವಲ್ಲ. ಕರ್ಮಫಲಗಳಿಗೂ ಬಾಧವಿಲ್ಲದ್ದರಿಂದ ಮಿಥ್ಯೆಯಲ್ಲ. ಫಲಕಾಮನೆಯನ್ನು ಬಿಡಬೇಕೆನ್ನಲು ಕಾರಣವೇ ಇಲ್ಲ.

[2]ಪ್ರಪಂಚದ ಎಲ್ಲ ಪದಾರ್ಥಗಳು ಕೆಲವೊಮ್ಮೆ ಪ್ರಿಯ ಕೆಲವೊಮ್ಮೆ ಅಪ್ರಿಯವೆಂದು ನಾನಾ ಬಗೆಯಾದ್ದರಿಂದ ಅವುಗಳಿಂದ ಪುರುಷಾರ್ಥ ಸಿಗುವುದಿಲ್ಲ. ಮತ್ತು ಆತ್ಮನಲ್ಲಿ ದೇವ ಮನುಷ್ಯಾದಿ ದೇಹಧರ್ಮಗಳನ್ನು ಆರೋಪಿಸುವುದೂ ಪುರುಷಾರ್ಥಸಾಧಕವಲ್ಲ ಎಂದು ವೀರರಾಘವವ್ಯಾಖ್ಯಾನ ಹೇಳಿದೆ. 'ಭೇದಾರ್ಥಧೀರ್ಗುಣ್ಯೈಃ' ಎಂದು ಅವರಿಗೆ ಪಾಠ. ಆದರೆ ಅಪ್ರಿಯವಾದ ಪದಾರ್ಥಗಳಿಂದ ಸುಖ ಸಿಗದಿದ್ದರೂ ಪ್ರಿಯವಾದ ಪದಾರ್ಥಗಳಿಂದ ಅವು

---

1. ಫಲವೈಪರೀತ್ಯಾದಕಾಮಃ ಸ್ಯಾತ್ ಕಿಂಚ ಕಾಮ್ಯವಿಷಯಾಣಾಂ ಮಿಥ್ಯಾತ್ವಾದಪೀತ್ಯಾಹ ಸುಪ್ತಸ್ಯೇತಿ । ವಿಫಲೋಽರ್ಥಶೂನ್ಯಃ । ಅತ್ರೈವಂ ಪ್ರಯೋಗಃ ಇಂದ್ರಿಯೈರ್ಯಾ ಬಹಿರ್ನಾನಾಬುದ್ಧಿಃ ಸಾ ವಿಫಲಾ ನಾನಾತ್ಮಕತ್ವಾತ್ ಐಂದ್ರಿಯಕತ್ವಾಚ್ಚ ಮನೋಜನ್ಯ ಸ್ವಪ್ನ ಮನೋರಥವದಿತಿ । -ಶ್ರೀಧರಃ

ಅರ್ಥಶೂನ್ಯಃ ಮಿಥ್ಯಾಭೂತಃ । ಅತ್ರ ಅರ್ಥಶೂನ್ಯತ್ವೇ । -ರಾಧಾರಣದಾಸಃ

2. ಯಥಾ ಸುಪ್ತಸ್ಯ ಪುಂಸೋ ವಿಷಯಾಲೋಕಃ ಪ್ರಿಯಾಪ್ರಿಯ ವಿಷಯಾವಭಾಸಃ ಯಥಾ ವಾ ಧ್ಯಾಯತೋ ಮನೋರಥಶ್ಚ ವಿಫಲಃ । ತೌ ನಾನಾತ್ಮಕತ್ವಾದ್ ವಿಫಲೌ । ಪ್ರಿಯಾಪ್ರಿಯರೂಪೇಣ ವಿಷಯಾಣಾಂ ನಾನಾತ್ಮಕತ್ವಾತ್ ತಯೋರ್ನಾನಾತ್ಮಕತ್ವಮವಗಂತವ್ಯಂ । ವಿಫಲತ್ವಂ ಚ ಪುರುಷಾರ್ಥ ಶೂನ್ಯತ್ವಂ । ತಥಾ ಗುಣ್ಯೈರ್ಯೋ ಭೇದಃ ಆತ್ಮನಿ ದೇವಮನುಷ್ಯಾದಿ ಭೇದಃ ಅರ್ಥಃ ಶಬ್ದಾದಿ ವಿಷಯಶ್ಚ ತದ್ವಿಷಯಾ ಧೀರ್ನಾನಾತ್ಮಕತ್ವಾದ್ ವಿಫಲಾ । ನಾನಾತ್ಮಕತ್ವಾದಿತ್ಯೇತತ್ ಕಾರ್ಯತ್ವಾನಿತ್ಯತ್ವಾದೀನಾಮಪ್ಯುಪಲಕ್ಷಣಂ । -ವೀರರಾಘವಃ

ಪ್ರಿಯವಾಗಿರುವಾಗ ಸುಖ ಸಿಗದೆಂದು ಹೇಗೆ ಹೇಳಲಾದೀತು? ದೇಹಧರ್ಮಗಳಾದ ಬ್ರಾಹ್ಮಣತ್ವಾದಿ ಭೇದಗಳನ್ನು ಆತ್ಮನಲ್ಲಿ ಆರೋಪಿಸುವುದರಿಂದ ಅಧಿಕಾರ ಪ್ರಾಪ್ತವಾಗಿ ವರ್ಣಾಶ್ರಮ ಧರ್ಮಾಚರಣೆ ಸಾಧ್ಯವಾಗುತ್ತದೆ. ಅದರಿಂದ ಪುರುಷಾರ್ಥ ಸಿಗುತ್ತದೆ. ಅದನ್ನು ವಿಫಲ ಎನ್ನುವುದೂ ವ್ಯಾಹತವಾಗುತ್ತದೆ.

[3] 'ಪರಮೇಶ್ವರ ವಿಷಯಕವಾದ ಬುದ್ಧಿ ಪರಮೇಶ್ವರನ ಗುಣಲೀಲಾದಿ ನಾನಾ ಪದಾರ್ಥಗಳನ್ನು ವಿಷಯೀಕರಿಸಿದರೂ ಗುಣಲೀಲಾದಿಗಳು ಪರಮಾತ್ಮನಿಗಿಂತ ಬೇರೆಯಲ್ಲದ್ದರಿಂದ ಒಬ್ಬನೇ ಪರಮೇಶ್ವರ ವಿಷಯನಾಗುವುದರಿಂದ ಆ ಬುದ್ಧಿ ಏಕಾತ್ಮಕ' ಎಂದು ವಿಶ್ವನಾಥ ವ್ಯಾಖ್ಯಾನ ಹೇಳಿದೆ.

ಆದರೆ ಗುಣಲೀಲಾದಿಗಳು ವಸ್ತುತಃ ಪರಮೇಶ್ವರ ಸ್ವರೂಪವಾದರೂ ಬುದ್ಧಿ ಅವುಗಳನ್ನು ಬೇರೆಬೇರೆಯಾಗಿಯೇ ಗ್ರಹಿಸುತ್ತದೆ. ಬೇರೆಬೇರೆಯಾಗಿ ಗ್ರಹಿಸಿದಾಗಲೇ ಆನಂದ. ಅದು ಅವಿದ್ಯೆಯಿಂದ ಎನ್ನಬೇಕು. ಆಗ ಅದೂ ಮಿಥ್ಯೆಯೇ ಆಯಿತು. ಪಾರಮಾರ್ಥಿಕವಲ್ಲ ಎಂದಂತಾಯಿತು. ಪ್ರಪಂಚಜ್ಞಾನ ಮಾತ್ರವೇ ಅನೇಕಾತ್ಮಕವಾಗಿದ್ದು ಮಿಥ್ಯೆಯಾಗಿರುತ್ತದೆ ಎನ್ನುವುದು ಅಸಂಗತ.

ಬೇರೆಬೇರೆಯಾಗಿ ಗುಣಲೀಲಾದಿಗಳನ್ನು ಬುದ್ಧಿಯು ಗ್ರಹಿಸಿದರೂ ವಸ್ತುತಃ ಒಂದೇ ಆದ್ದರಿಂದ ಏಕಾತ್ಮಕ ಎನ್ನುವುದಾದರೆ ಸರ್ವಂ ಖಲ್ವಿದಂ ಬ್ರಹ್ಮ ಒಂದೇ ಬ್ರಹ್ಮ ಅವಿದ್ಯೆಯಿಂದ ನಾನಾ ಪ್ರಪಂಚವಾಗಿ ಕಾಣುತ್ತಿದ್ದರೂ ವಸ್ತುತಃ ಒಂದೇ ಆದ್ದರಿಂದ ಪ್ರಪಂಚಜ್ಞಾನ ಏಕಾತ್ಮಕ ಏಕಲ್ಲ? ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ಎಂದು ಭಗವದ್ಗೀತೆಯಲ್ಲಿ ಪರಮೇಶ್ವರ ವಿಷಯದಲ್ಲಿ ನಿಶ್ಚಯಾತ್ಮಕ ವಾಗಿ ಬರುವ ಬುದ್ಧಿ ಒಂದೇ ಒಂದೆಂದು ಹೇಳಿಲ್ಲ. ಪ್ರಪಂಚ ವಿಷಯದಲ್ಲಿಯೂ ನಿಶ್ಚಯಾತ್ಮಕವಾದ ಬುದ್ಧಿಯು ವಸ್ತುತಃ ಒಬ್ಬನೇ ಪರಮೇಶ್ವರನನ್ನು ಗ್ರಹಿಸುವುದರಿಂದ ಒಂದೇ ಎನ್ನಬಹುದು.

ಹೀಗೆ ಶ್ಲೋಕದಲ್ಲಿ 'ನಾನಾತ್ಮಕತ್ವಾದ್ ವಿಫಲಃ' ಎನ್ನುವುದನ್ನು ಬೇರೆ ವ್ಯಾಖ್ಯಾನಕಾರರು ವಿವರಿಸುವಲ್ಲಿ ವಿಫಲರಾಗಿದ್ದಾರೆ. ಶ್ರೀಮದಾಚಾರ್ಯರು ವಿವೇಕ ಗ್ರಂಥದ ವಚನವನ್ನು ಉದಾಹರಿಸಿ ಸರಿಯಾದ ವಿವರಣೆ ನೀಡುತ್ತಾರೆ.

---

3. ಪರಮೇಶ್ವರೈಕಾಲಂಬನಾ ಬುದ್ಧಿರೇವ ಪಾರಮಾರ್ಥಿಕಫಲಾ । ತದ್ರೂಪ ಗುಣಲೀಲಾ ಭಕ್ತ್ಯಾದೀನಾಂ ತತಃ ಪಾರ್ಥಕ್ಯಾಭಾವಾತ್ ಚಿದೇಕಮಯತ್ವಾತ್ ಕೇವಲ ಭದ್ರಾತ್ಮಕತ್ವಾಚ್ಚ ತದೈಕ್ಯಮೇವ ಜ್ಞೇಯಂ । ಅತ ಏವೋಕ್ತಂ ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ । ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ ಇತಿ । -ವಿಶ್ವನಾಥಃ

ಬುದ್ಧಿಗುಣೈಃ ಕಾಮಕ್ರೋಧಾದಿಭಿರಭೇದೋ ವಿಫಲಃ ।
ವಸ್ತುಸ್ಥಿತೇರನ್ಯಥಾತ್ವಂ ನಾನಾತ್ವಮಿತಿ ಕೀರ್ತಿತಂ ।
ಜ್ಞಾನಸ್ಯೈವ ತು ನಾನಾತ್ವಾನ್ನ ಸ್ಯಾತ್ ಕಾಮಾದ್ಯಹಂಮತಿಃ ।
ಕಾಮಾದಿಷು ಸ್ವಧೀಸ್ಥೇಷು ಕೇವಲಂ ಜೀವಸಂಸ್ಥಿತಿಃ ।
ಇತಿ ಬುದ್ಧಿರಭೇದಃ ಸ್ಯಾತ್ ಸ ನ ಕಾರ್ಯಃ ಕಥಂಚನ ।
ಅದುಷ್ಟಕಾಮಶ್ಚಿದ್ರೂಪೋ ಜೀವಾಭಿನ್ನಃ ಸ್ವರೂಪತಃ ।
ದುಷ್ಟಕಾಮೋ ಮನೋಧರ್ಮಸ್ತಸ್ಮಾದ್ಧೇಯಃ ಸದೈವ ತು ।
ಇತಿ ವಿವೇಕೇ ॥

ಬಾಹ್ಯ ಜಡ ಅಂತಃಕರಣದಲ್ಲಿ ಮೂಡುವ ಕಾಮಕ್ರೋಧಾದಿಗಳಿಂದ ನಾನು ಕಾಮಿ ನಾನು ಕ್ರೋಧಿ ಎಂದು ಅಭೇದ ಬುದ್ಧಿಯು ವಿಫಲ ಎಂದು ಭಾಗವತದ 'ನಾನಾತ್ಮಕತ್ವಾದ್ ವಿಫಲ' ಎಂಬುದರ ಅರ್ಥ.

ವಿವೇಕ ಎಂಬ ಗ್ರಂಥದಲ್ಲಿ ಹೀಗೆ ಹೇಳಿದೆ—ಜ್ಞಾನದಲ್ಲಿ ವಿಷಯವನ್ನು ವಸ್ತುಸ್ಥಿತಿಗೆ ವಿಪರೀತವಾಗಿ ತಿಳಿಯುವುದೇ ನಾನಾತ್ವವೆನಿಸುತ್ತದೆ. ನಾನು ಕಾಮಿ ಎಂದು ಮುಂತಾಗಿ ತಿಳಿಯುವುದು ಭ್ರಮಾತ್ಮಕವಾದ್ದರಿಂದ ಹಾಗೆ ತಿಳಿಯಬಾರದು. ತನ್ನ ಬಾಹ್ಯಅಂತಃಕರಣದಲ್ಲಿರುವ ಕಾಮಾದಿಗಳ ವಿಷಯದಲ್ಲಿ ಅವು ಜೀವಸ್ವರೂಪದಲ್ಲಿಯೇ ಇರುವಂಥವೆಂದು ತಿಳಿಯುವುದು ಅಭೇದಬುದ್ಧಿ. ಅದನ್ನು ಸರ್ವಥಾ ಮಾಡಕೂಡದು. ಜ್ಞಾನಭಕ್ತ್ಯಾದಿ ಅನಿಷಿದ್ಧಕಾಮನೆ ಜೀವಾಭಿನ್ನಸ್ವರೂಪವಾದ್ದರಿಂದ ಚಿನ್ಮಯವೇ ಆಗಿದೆ. ನಿಷಿದ್ಧಕಾಮನೆ ಮನಸಿನ ಪರಿಣಾಮರೂಪವಾಗಿದ್ದು ಸದಾ ಹೇಯವಾಗಿದೆ ಎಂದು ವಿವೇಕ ಎಂಬ ಗ್ರಂಥದಲ್ಲಿದೆ.

❖❖❖

ಜ್ಞಾನಾರ್ಥಿಯು ಅಂತಃಕರಣ ಶುದ್ಧಿಗಾಗಿ ನಿಷ್ಕಾಮಕರ್ಮ ಮಾಡಬೇಕು. ಕಾಮ್ಯಕರ್ಮಗಳನ್ನು ಮಾಡಬಾರದೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ನಿವೃತ್ತಂ ಕರ್ಮ ಸೇವೇತ ಪ್ರವೃತ್ತಂ ಮತ್ಪರಸ್ತ್ಯಜೇತ್ ।
ಜಿಜ್ಞಾಸಾಯಾಂ ಸಂಪ್ರವೃತ್ತೋ ನಾದ್ರಿಯೇತ್ಕರ್ಮಚೋದನಾಮ್ ॥ ४ ॥

ನನ್ನಲ್ಲಿಯೇ ಸರ್ವೋತ್ತಮನೆಂದು ಭಕ್ತಿಮಾಡಬೇಕು. ನಿಷ್ಕಾಮಕರ್ಮ ಮಾಡಬೇಕು. ಕಾಮ್ಯಕರ್ಮವನ್ನು ಬಿಡಬೇಕು. ಬ್ರಹ್ಮಜ್ಞಾನ ಸಾಧನೆಗೆ ಹೊರಟವನು ಅದಕ್ಕೆ ವಿರೋಧಿಯಾದ ಕಾಮ್ಯಕರ್ಮವಿಧಿಯನ್ನು ಆದರಿಸಬಾರದು.

[1]ಪ್ರವೃತ್ತವೆಂದರೆ ಕಾಮ್ಯಕರ್ಮ. ಅದನ್ನು ಬಿಟ್ಟು ನಿವೃತ್ತವೆನಿಸುವ ನಿತ್ಯ ನೈಮಿತ್ತಿಕ ಕರ್ಮವನ್ನೇ ಮಾಡಬೇಕು. ಆತ್ಮವಿಚಾರದಲ್ಲಿ ಚೆನ್ನಾಗಿ ಮುಳುಗಿದವನು ನಿವೃತ್ತಕರ್ಮವಿಧಿಯನ್ನು ಕೂಡ ಆದರಿಸಕೂಡದು ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ. ಇದು 'ನಿವೃತ್ತಂ ಸೇವಮಾನಸ್ತು ಬ್ರಹ್ಮಾಭ್ಯೇತಿ' 'ನಿವೃತ್ತಕರ್ಮ ಮಾಡುತ್ತಲೇ ಬ್ರಹ್ಮನನ್ನು ಹೊಂದಬೇಕು' ಎನ್ನುವ ಭಾರತಕ್ಕೆ ವಿರುದ್ಧವಾಗುವುದು.

ಬ್ರಹ್ಮವಿಚಾರದಲ್ಲಿ ಪ್ರವೃತ್ತನಾದವನು ನಿವೃತ್ತಕರ್ಮವನ್ನು ಬಿಡಬೇಕೆನ್ನುವುದು 'ನನ್ನ ತಾಯಿ ಬಂಜೆ' ಎನ್ನುವಂತೆ ಸ್ವವ್ಯಾಹತವೂ ಆಗಿದೆ. ಏಕೆಂದರೆ ಬ್ರಹ್ಮವಿಚಾರ ವೆಂದರೆ ಶ್ರವಣಾದಿಕರ್ಮ. ಅದನ್ನೇ ಮುಖ್ಯವಾಗಿ ನಿವೃತ್ತಕರ್ಮ ಎಂದು ಕರೆಯು ತ್ತಾರೆ. 'ನಿವೃತ್ತ' ಎಂದರೆ ಸಂಸಾರ ನಿವೃತ್ತಿ ಸಾಧನ. ಕರಣೇ ಕ್ತಪ್ರತ್ಯಯ. ಸಂಸಾರ ನಿವೃತ್ತಿಗಾಗಿ ಬ್ರಹ್ಮವಿಚಾರದಲ್ಲಿ ಅಂದರೆ ಶ್ರವಣಾದಿಕರ್ಮದಲ್ಲಿ ಚೆನ್ನಾಗಿ ನಿರತನಾದವನು, ಆ ಶ್ರವಣಾದಿ ನಿವೃತ್ತಕರ್ಮ ಮಾಡಬಾರದೆಂದರೆ ಅದು ಸ್ವವಚನ ವಿರೋಧವಾಗುವುದು.

[2]ವಿಶ್ವನಾಥ ವ್ಯಾಖ್ಯಾನದಲ್ಲಿ 'ಸಮ್ಯಕ್ ಪ್ರವೃತ್ತನೆಂದರೆ ಚೆನ್ನಾಗಿ ಪ್ರವೃತ್ತಿಮಾಡಿ ಮುಗಿಸಿದವನು ಅಂದರೆ ಬ್ರಹ್ಮವಿಚಾರವನ್ನು ಮಾಡಿ ಮುಗಿಸಿದವನು ಗೀತೆಯಲ್ಲಿ ಹೇಳಿದ ಯೋಗಾರೂಢನು. ಅವನು ಗೀತೆಯಲ್ಲಿ ಹೇಳಿದಂತೆಯೇ ಕರ್ಮದಲ್ಲಿ ಅಧಿ ಕಾರವಿಲ್ಲದವನಾದ್ದರಿಂದ ನಿವೃತ್ತಕರ್ಮವನ್ನೂ ಮಾಡಬಾರದು' ಎಂದು ಹೇಳಿದೆ.

ಆದರೆ ಬ್ರಹ್ಮವಿಚಾರವೆಂದರೆ ಶ್ರವಣ. ಅದನ್ನು ಮಾಡಿ ಮುಗಿಸಿದವನೆಂದರೆ ಶ್ರವಣದಿಂದ ಬ್ರಹ್ಮಾಪರೋಕ್ಷ ಪಡೆದವನು. ತತ್ವಮಸಿ ವಾಕ್ಯಾರ್ಥವನ್ನು

---

1. ಪ್ರವೃತ್ತಂ ಕಾಮ್ಯ ಕರ್ಮ ತ್ಯಜೇನ್ನಿವೃತ್ತಂ ನಿತ್ಯನೈಮಿತ್ತಿಕಮೇವ ಕುರ್ಯಾತ್ । ಆತ್ಮವಿಚಾರೇ ತು ಸಮ್ಯಕ್ ಪ್ರವೃತ್ತೋ ನಿವೃತ್ತಕರ್ಮಚೋದನಾಮಪಿ ನಾದ್ರಿಯೇತ್ । -ಶ್ರೀಧರಃ
ಸಮ್ಯಕ್ ಪ್ರವೃತ್ತ ಇತಿ ಪ್ರವೃತ್ತೇಃ ಪರಮ ವೈರಾಗ್ಯಪೂರ್ವಕತ್ವಂ ಸೂಚಯತಿ ಯಥೋಕ್ತಂ ಶ್ರೀಗೀತಾಸು-
ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣ ಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ।
ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ ।
ಸರ್ವಸಂಕಲ್ಪ ಸನ್ನ್ಯಾಸೀ ಯೋಗಾರೂಢಸ್ತದೋಚ್ಯತೇ ಇತಿ ।। -ರಾಧಾರಮಣದಾಸಃ
2. ಜಿಜ್ಞಾಸಾಯಾಂ ಸಮ್ಯಗೇವ ಪ್ರವೃತ್ತೋ ಜಿಜ್ಞಾಸೋತ್ತರದಶಾಸ್ಥೋ ಯೋಗಾರೂಢಶ್ಚೇದಿತ್ಯರ್ಥಃ । ಕರ್ಮಚೋದನಾಂ ನಿತ್ಯನೈಮಿತ್ತಿಕಾದಿಕರ್ಮವಿಧಿಮನಧಿ ಕಾರಾನ್ನಾದ್ರಿಯೇತ । ತದುಕ್ತಂ ಆರುರುಕ್ಷೋರ್ಮುನೇರ್ಯೋಗಂ ಇತಿ । -ವಿಶ್ವನಾಥಃ

ಸಾಕ್ಷಾತ್ಕರಿಸಿಕೊಳ್ಳುವುದೇ ಶ್ರವಣ ಎಂದು ಅದ್ವೈತ ಮತವಿದೆ. ಅಂಥ ಅಪರೋಕ್ಷಿಗೆ ವಿಧಿವಾಕ್ಯದಂತೆ ಕರ್ಮವಿಧಿಯನ್ನು ಆದರಿಸಕೂಡದು ಎಂಬ ನಿಷೇಧವಾಕ್ಯವೂ ಏನೂ ಹೇಳುವುದಿಲ್ಲ. ಅವನ ಪಾಲಿಗೆ ಪ್ರಪಂಚವೇ ಇಲ್ಲ. ನಿಷೇಧಮಾಡುವುದೂ ವ್ಯರ್ಥ. ಪಶುಪಕ್ಷಿಗಳಿಗೆ ನಿಷೇಧ ಮಾಡಿದಂತೆ ಅರ್ಥಹೀನವಾಗುತ್ತದೆ.

[1]ವಸ್ತುತಃ ಯೋಗಾರೂಢನಿಗೆ ಕರ್ಮನಿವೃತ್ತಿಯನ್ನು 'ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ' ಎಂಬ ಗೀತಾವಾಕ್ಯ ಹೇಳುತ್ತಿಲ್ಲ ಎಂದು ಶಾಂಕರ ಭಾಷ್ಯ ಹೇಳಿದೆ. ಯೋಗಾರೂಢನಾಗುತ್ತಿರುವವನಿಗೆ ಸುಖವಾಗಿ ಯೋಗಾರೂಢ ನಾಗಲು ಶಕ್ಯವಿದ್ದಷ್ಟು ಕರ್ಮನಿವೃತ್ತಿಯನ್ನು ಗೀತೆ ಉಪದೇಶಿಸುತ್ತಿದೆ ಎಂದಿದೆ.

ಅದರಿಂದ ಶ್ರೀಧರ ವಿಶ್ವನಾಥ ವ್ಯಾಖ್ಯಾನಗಳು ಹೇಳುವಂತೆ ನಿವೃತ್ತಕರ್ಮ ತ್ಯಾಗವನ್ನು ಭಾಗವತ ಹೇಳುತ್ತಿಲ್ಲ. 'ಪ್ರವೃತ್ತಂ ಮತ್ಪರಸ್ತ್ಯಜೇತ್' ಕಾಮ್ಯಕರ್ಮವನ್ನು ಬಿಡಬೇಕು ಎಂಬುದರ ವಿವರಣೆ 'ನಾದ್ರಿಯೇತ್ ಕರ್ಮಚೋದನಾಂ' ಎನ್ನಬೇಕು ಹೊರತು 'ನಿವೃತ್ತಂ ಕರ್ಮಸೇವೇತ' 'ನಿವೃತ್ತಕರ್ಮ ಮಾಡಬೇಕು' ಎಂದು ತಾನು ~~ಹೇಳಿದ್ದನ್ನೇ ತಾನು 'ನಾದ್ರಿಯೇತ್' ಎಂದು ನಿಷೇಧಿಸುತ್ತಿಲ್ಲ.~~

'ನಿವೃತ್ತ' ಎಂದರೆ ಫಲದಾಸೆಯಿಲ್ಲದ ಕರ್ಮ. 'ನಿವೃತ್ತಂ ಫಲಾನ್ನಿವೃತ್ತಂ ನಿಷ್ಕಾಮಮನನ್ಯಪ್ರಯೋಜನಮಿತಿ ಯಾವತ್ ತತ್‌ಕರ್ಮ' ಎಂದು ವೀರರಾಘವ ವ್ಯಾಖ್ಯಾನದಲ್ಲಿ ಹೇಳಿದೆ. ಆದರೆ ಫಲದಾಸೆ ಬಿಟ್ಟರೆ ಸಾಲದು. ಪರಾಪರತತ್ವಜ್ಞಾನ ಪೂರ್ವಕವಾಗಿರಬೇಕು. ಅಪರತತ್ವವೆಲ್ಲವೂ ಪರತತ್ವಕ್ಕಾಗಿ ಅವನ ಆರಾಧನೆಗಾಗಿ ಎಂಬ ಜ್ಞಾನಪೂರ್ವಕವಾದರೆ ಅದು ನಿವೃತ್ತಕರ್ಮ ಸಂಸಾರ ನಿವೃತ್ತಿಸಾಧನವಾದ ಕರ್ಮ ವೆನಿಸುತ್ತದೆ. ಪ್ರವೃತ್ತಕರ್ಮ ಸಂಸಾರಪ್ರವೃತ್ತಿಗೆ ಸಾಧನವಾಗಿದೆ. ಫಲಕಾಮನೆ ಯಿಂದ ಕೂಡಿದ್ದು ಕಾಮ್ಯಕರ್ಮವೆನಿಸಿದೆ. ಬ್ರಹ್ಮವಿಚಾರದಲ್ಲಿ ಪ್ರವೃತ್ತನಾದವನು ಬ್ರಹ್ಮಜ್ಞಾನ ಉಂಟುಮಾಡಲೆಂದು ಪ್ರವೃತ್ತವಾದ ಸಕಲ ವೈದಿಕ ಶಬ್ದಗಳಲ್ಲಿ ಕೇವಲ ಕಾಮ್ಯಕರ್ಮವಿಧಿಯನ್ನು ಕಂಡುಕೊಂಡರೆ ಕರ್ಮವಿಧಿಗೆ ಆದರ ಮಾಡಿದಂತಾಗು ವುದು. ಹಾಗೆ 'ನಾದ್ರಿಯೇತ್' ಆದರ ಮಾಡಕೂಡದು. ಇದು 'ಪ್ರವೃತ್ತಂ ಮತ್ಪರಸ್ತ್ಯಜೇತ್' ಎನ್ನುವುದರ ವಿವರಣೆ.

ನಿಷ್ಕಾಮಂ ಜ್ಞಾನಪೂರ್ವಂ ತು ನಿವೃತ್ತಮಿತಿ ಚೋಚ್ಯತೇ ।
ನಿವೃತ್ತಂ ಸೇವಮಾನಸ್ತು ಬ್ರಹ್ಮಾಭ್ಯೇತಿ ಸನಾತನಂ ॥ ಇತಿ ಭಾರತೇ ॥

---

1. ಯಾವದ್ಯಾವತ್ ಕರ್ಮಭ್ಯೋ ಉಪರಮತೇ ತಾವತ್ತಾವನ್ನಿರಾಯಾಸಸ್ಯ ಜಿತೇಂದ್ರಿಯಸ್ಯ ಚಿತ್ತಂ ಸಮಾಧೀಯತೇ ತಥಾಸತಿ ಸ ಝಟಿತಿಯೋಗಾರೂಢೋ ಭವತಿ। - ಶಾಂಕರಗೀತಾಭಾಷ್ಯ

ಪರಾಪರತತ್ವಜ್ಞಾನಪೂರ್ವಕವಾದ ನಿಷ್ಕಾಮಕರ್ಮ ನಿವೃತ್ತವೆನಿಸುತ್ತದೆ. ನಿವೃತ್ತಕರ್ಮವನ್ನು ಮಾಡುತ್ತಲೇ ಮುಮುಕ್ಷು ಸನಾತನ ಪರಬ್ರಹ್ಮನನ್ನು ಹೊಂದುತ್ತಾನೆ ಎಂದು ಭಾರತದಲ್ಲಿ ಹೇಳಿದೆ.

❖❖❖

ಮುಮುಕ್ಷುವು ಜ್ಞಾನಸಾಧನೆಗಾಗಿ ಯೋಗ್ಯಗುರುವನ್ನು ಸೇವಿಸಬೇಕೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಯಮಾನಭೀಕ್ಷ್ಣಂ ಸೇವೇತ ನಿಯಮಾನ್ ಮತ್ಪರಃ ಕ್ವಚಿತ್ ।
ಮದಭಿಜ್ಞಂ ಗುರುಂ ಶಾಂತಮುಪಾಸೀತ ಮದಾತ್ಮಕಮ್ ॥ ೫ ॥

ನನ್ನ ಭಕ್ತ ಸದಾ ಯಮ ನಿಯಮಗಳನ್ನು ಅನುಷ್ಠಾನ ಮಾಡಬೇಕು. ನನ್ನನ್ನು ಚೆನ್ನಾಗಿ ಅರಿತುಕೊಂಡು, ಕ್ರೋಧಾದಿಗಳನ್ನು ತ್ಯಜಿಸಿ, ನನ್ನನ್ನು ಮನಸಿನಲ್ಲಿ ಸದಾ ಧ್ಯಾನಿಸುವ ಗುರುವನ್ನು ಸೇವಿಸಬೇಕು.

ಇಲ್ಲಿ 'ಮದಾತ್ಮಕಂ' ಎಂದರೆ ಗುರುವನ್ನು ಪರಮಾತ್ಮಸ್ವರೂಪನೆಂದು ಆರಾಧಿಸಬೇಕೆಂದು ಹೇಳಿದಂತೆ ಕಾಣುತ್ತದೆ.

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ
ಗುರುಃ ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥

ಎಂದು ಗುರುವನ್ನು ನಮಿಸುವುದು ಕಂಡುಬರುತ್ತದೆ. ಶ್ರೀಧರ ವ್ಯಾಖ್ಯಾನದಲ್ಲಿ 'ಮದಾತ್ಮಕಂ ಮದ್ರೂಪಂ' ಗುರುವನ್ನು ಪರಮಾತ್ಮ ಸ್ವರೂಪನೆಂದು ನಮಿಸಬೇಕೆಂದು ಹೇಳಿದೆ. ವೀರರಾಘವ ವ್ಯಾಖ್ಯಾನದಲ್ಲಿ 'ಮತ್ತಾದಾತ್ಮ್ಯದೃಷ್ಟಿ ವಿಷಯಂ' ಪರಮಾತ್ಮನ ತಾದಾತ್ಮ್ಯವನ್ನು ಗುರುವಿನಲ್ಲಿ ತಿಳಿಯಬೇಕೆಂದಿದೆ. ಶ್ರೀಮದಾಚಾರ್ಯರು ಭಾರತವಚನದ ಆಧಾರವನ್ನು ತೋರಿಸುತ್ತ ಹೇಳುತ್ತಾರೆ—

ಮಾಮೇವ ನಿತ್ಯಂ ಧ್ಯಾಯೇದ್ಯೋ ಮದಾತ್ಮಾ ಸಂಪ್ರಕೀರ್ತಿತಃ ।
ಇತಿ ಚ ॥

ಶ್ರೀಹರಿ ಹೇಳುತ್ತಾನೆ, 'ನನ್ನನ್ನೇ ಸದಾ ಧ್ಯಾನಿಸುವವನು ಮದಾತ್ಮನೆನಿಸುತ್ತಾನೆ' ಎಂದು ಭಾರತದಲ್ಲಿ ಹೇಳಿದೆ.

❖❖❖

ಶರೀರದಲ್ಲಿ ನೆಲೆಸಿರುವ ಜೀವ ಪರಮಾತ್ಮರು ಶರೀರಕ್ಕಿಂತ ಬೇರೆಯಾಗಿರುವರೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ವಿಲಕ್ಷಣಃ ಸ್ಥೂಲಸೂಕ್ಷ್ಮಾದ್ದೇಹಾದಾತ್ಮೇಕ್ಷಿತಾ ಸ್ವದೃಕ್ ।
ಯಥಾಗ್ನಿರ್ದಾರುಣೋ ದಾಹ್ಯಾದ್ದಾಹಕೋಽನ್ಯಃ ಪ್ರಕಾಶಕಃ ॥ ೮ ॥

ಬೆಂಕಿ ಮತ್ತು ಕಟ್ಟಿಗೆಗಳು ದಾಹಕ ದಾಹ್ಯಗಳಾಗಿವೆ. ಪ್ರಕಾಶಕ ಪ್ರಕಾಶ್ಯಗಳಾಗಿವೆ. ಆದರಿಂದ ಕಟ್ಟಿಗೆಗಳಲ್ಲಿರುವ ಬೆಂಕಿ ಕಟ್ಟಿಗೆಗಳಿಗಿಂತ ವಿಲಕ್ಷಣ. ಹಾಗೇ ಜಡವಾದ ಸ್ಥೂಲಸೂಕ್ಷ್ಮ ದೇಹಗಳಿಗಿಂತ ಅವುಗಳಲ್ಲಿರುವ 'ಆತ್ಮ' ಸರ್ವಜ್ಞನಾದ ಪರಮಾತ್ಮನೂ 'ಆತ್ಮ' ಜೀವಾತ್ಮನೂ ವಿಲಕ್ಷಣನಾಗಿದ್ದಾನೆ.

ನಿರೋಧೋತ್ಪತ್ತ್ಯಣುಬೃಹನ್ನಾನಾತ್ವಂ ತತ್ಕೃತಾನ್ ಗುಣಾನ್ ।
ಅನುಪ್ರವಿಷ್ಟ ಆಧತ್ತೇ ಏವಂ ದೇಹಗುಣಾನ್ ಪರಃ ॥ ೯ ॥

ಶರೀರದಲ್ಲಿ ಪ್ರವೇಶಿಸಿರುವ ಜೀವಾತ್ಮ ಮರಣಜನನ ಕೃಶತ್ವಸ್ಥೂಲತ್ವ ಸುರನರಾದಿ ನಾನಾ ಜಾತಿಗಳು ಎಂದು ದೇಹ ಸಂಬಂಧದಿಂದ ಉಂಟಾಗಿರುವ ಗುಣಧರ್ಮಗಳನ್ನು ತನಗೆ ಸ್ವಾಭಾವಿಕವೆಂದು ಭಾವಿಸುತ್ತಾನೆ. ಅವನ ಜೊತೆಗೇ ನಿಯಾಮಕನಾಗಿ ದೇಹದಲ್ಲಿ ಪ್ರವೇಶಿಸಿರುವ ಪರಮಾತ್ಮನೂ ಕೂಡ ತಾನೂ ಹಾಗೇ ಎಂದು ಅಜ್ಞರಿಗೆ ತೋರಿಕೊಳ್ಳುತ್ತಾನೆ.

ಯೋಽಸೌ ಗುಣೈರ್ವಿರಚಿತೋ ದೇಹೋಽಯಂ ಪುರುಷಸ್ಯ ಹಿ ।
ಸಂಸಾರಸ್ತನ್ನಿಬಂಧೋಽಯಂ ಪುಂಸೋಽ ವಿದ್ಯಾಸ್ಥಿತಾತ್ಮನಃ ॥ ೧೦ ॥

ಸತ್ವಾದಿ ಗುಣಗಳಿಂದಾಗಿರುವ ದೇಹ ಅವಿದ್ಯೆಯಲ್ಲಿ ಮುಳುಗಿರುವ ಜೀವಾತ್ಮನಿಗೇ ಸಂಸಾರನಿಮಿತ್ತವಾಗಿ ಬಂದಿರುತ್ತದೆ. ಅವನಿಗೇ ಅದರಲ್ಲಿ ಅಭಿಮಾನ. ದೇಹ ಸಂಬಂಧ ಪ್ರಯುಕ್ತವಾದ ಜನನ ಮರಣಾದಿ ಸಂಸಾರ ದುಃಖವೂ ಅವನಿಗೇ ಹೊರತು ಪರಮಾತ್ಮನಿಗೆ ಅಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಮೂರು ಶ್ಲೋಕಗಳಲ್ಲಿ ಜೀವಾತ್ಮನು ದೇಹವಿಲಕ್ಷಣ, ದೇಹದಲ್ಲಿ ಅಭಿಮಾನಪಟ್ಟು ಸಂಸಾರದಲ್ಲಿ ಸಿಲುಕುತ್ತಾನೆ ಎಂದು ವಿವರಣೆ ನೀಡುತ್ತಾರೆ. ದೇಹದಲ್ಲಿ ಜೀವಾತ್ಮನೊಂದಿಗೆ ಪರಮಾತ್ಮನೂ ಇದ್ದು ಜೀವನಂತೆಯೇ ಸಂಸಾರದಲ್ಲಿ ಸಿಲುಕಿರುವಂತೆ ಕಾಣುತ್ತಾನೆ. ವಸ್ತುತಃ ಜೀವನಿಗಿಂತ ಪರಮಾತ್ಮ ಅತ್ಯಂತ ವಿಲಕ್ಷಣ ಎಂದು ಶ್ಲೋಕದಲ್ಲಿ ಹೇಳಿದ್ದರೂ ಬೇರೆ ವ್ಯಾಖ್ಯಾನಕಾರರು ಯಾರೂ ಇದನ್ನು ಗಮನಿಸುವುದಿಲ್ಲ.

'ಏವಂ ದೇಹ ಗುಣಾನ್‌ಪರಃ' ದೇಹಪ್ರಯುಕ್ತವಾದ ಜನನ ಮರಣಾದಿಗಳನ್ನು ಜೀವನಂತೆ 'ಪರಃ' ಪರಮಾತ್ಮನೂ ಹೊಂದಿರುವಂತೆ ಕಾಣುತ್ತಾನೆ ಎಂದು ಶ್ಲೋಕದಲ್ಲಿ ಸ್ಪಷ್ಟ ಹೇಳಿದೆ. ಆದರೂ 'ಪರಃ' ಎಂದರೆ ದೇಹವಿಲಕ್ಷಣನಾದ ಜೀವಾತ್ಮನೆಂದೇ ವಿವರಣೆ ನೀಡುತ್ತಾರೆ.

'ವಿಲಕ್ಷಣಃ ಸ್ಥೂಲಸೂಕ್ಷ್ಮಾದ್ ದೇಹಾತ್' ಎಂದು ಸ್ಥೂಲಸೂಕ್ಷ್ಮ ದೇಹಗಳಿಗಿಂತ ವೈಲಕ್ಷಣ್ಯವನ್ನು ಇಲ್ಲಿಯೇ ಹೇಳಿರುವುದರಿಂದ ಪುನಃ 'ಪರಃ' ಎಂದು ಅದೇ ವೈಲಕ್ಷಣ್ಯವನ್ನು ಹೇಳಿದರೆ ಪುನರುಕ್ತಿ ಸ್ಪಷ್ಟ. ಅದರಿಂದ 'ಪರಃ' ಎಂದರೆ ಸರ್ವೋತ್ತಮನಾದ ಪರಮಾತ್ಮ ಎಂದರ್ಥವನ್ನು ಹೇಳಬೇಕು. ಮೂರು ಶ್ಲೋಕಗಳ ಅಭಿಪ್ರಾಯವನ್ನು ವಿಷ್ಣುಸಂಹಿತಾ ವಚನದ ಮೂಲಕ ಸರಿಯಾಗಿ ತಿಳಿಯಬೇಕು.

ಅದೇಹಧರ್ಮವಾನ್ ವಿಷ್ಣುರ್ದೇಹಧರ್ಮವದೀಯತೇ ।
ಜೀವಸ್ತ್ವದೇಹಧರ್ಮೋಽಪಿ ಪರತೋ ದೇಹಧರ್ಮವಾನ್ ।
ಸ್ವಯಂ ತ್ವನಭಿಮಾನಃ ಸನ್ನಜ್ಞಾನಾಮೇವ ದರ್ಶಯೇತ್ ।
ವಿಷ್ಣುರ್ಜೀವಸ್ತ್ವಭಿಮಾನೀ ಯಾವನ್ಮುಕ್ತಿಪದಂ ವ್ರಜೇತ್ ।
ಇತಿ ವಿಷ್ಣುಸಂಹಿತಾಯಾಂ

ಶ್ರೀವಿಷ್ಣು ದೇಹಪ್ರಯುಕ್ತ ಜನನಮರಣಾದಿಗಳಿಲ್ಲದವನಾದರೂ ಅವಿರುವಂತೆ ತೋರಿಕೊಳ್ಳುತ್ತಾನೆ. ('ವಿಲಕ್ಷಣಃ ಸ್ಥೂಲಸೂಕ್ಷ್ಮಾದ್ದೇಹಾತ್' ಎನ್ನುವುದಕ್ಕೆ ದೇಹಪ್ರಯುಕ್ತ ಜನನಾದಿಗಳಿಲ್ಲದವನೆಂದು ವಿವರಣೆ. 'ಏವಂ ದೇಹಗುಣಾನ್ ಪರಃ' ಎನ್ನುವುದಕ್ಕೆ 'ಜನನಾದಿಗಳುಳ್ಳವನಂತೆ ತೋರಿಕೊಳ್ಳುತ್ತಾನೆ' ಎಂದು ವಿವರಣೆ.) ಜೀವನು ಸ್ವತಃ ಜನನಾದಿ ರಹಿತನಾದರೂ ದೇಹಾಭಿಮಾನದಿಂದ ಜನನಾದಿಗಳುಳ್ಳವನಾಗಿದ್ದಾನೆ. (ಇದು 'ಯೋಽಸೌ ಗುಣೈರ್ವಿರಚಿತೋ' ಎಂಬ ಶ್ಲೋಕದ ತಾತ್ಪರ್ಯ. ಜೀವಾತ್ಮನಿಗೂ ಕೂಡ ಸ್ವತಃ ಜನನಾದಿಗಳಿಲ್ಲ, ಅಭಿಮಾನದಿಂದಲೆ ಇದೆ ಎಂದಮೇಲೆ ಅಭಿಮಾನವಿಲ್ಲದ ಸರ್ವಶಕ್ತನಾದ ಹರಿಗೆ ಅದು ಇಲ್ಲ ಎಂದು ಬೇರೇನು ಹೇಳಬೇಕೆಂದು ಕೈಮುತ್ಯವನ್ನು ತೋರಿಸುತ್ತ 'ವಿಷ್ಣುರ್ದೇಹಧರ್ಮವದೀಯತೇ' ಎಂದು ಹೇಳಿದ್ದನ್ನು 'ಸ್ವಯಂತ್ವನಭಿಮಾನಃ ಸನ್' ಎಂದು ವಿವರಿಸುತ್ತಾರೆ—) ತಾನು ದೇಹಾಭಿಮಾನವಿಲ್ಲದವನಾದರೂ ಉಳ್ಳವನಂತೆ ಅಜ್ಞರಿಗೆ ತೋರಿಕೊಳ್ಳುತ್ತಾನೆ. ಜೀವನೂ ಕೂಡ ವಿಷ್ಣುಲೋಕವನ್ನು ಹೊಂದುವ ತನಕವೇ ಅಭಿಮಾನ ಉಳ್ಳವನಾಗಿರುತ್ತಾನೆ' ಎಂದು ವಿಷ್ಣುಸಂಹಿತೆಯಲ್ಲಿ ಹೇಳಿದೆ.

❖❖❖

ಅಜ್ಞಾನದಿಂದ ದೇಹಾದಿಗಳಲ್ಲಿ ಅಭಿಮಾನಪಟ್ಟು ಸಂಸಾರದಲ್ಲಿ ಮುಳುಗಿರುವ ಜೀವಾತ್ಮ ತಾನು ಅಶಕ್ತನೆಂದು ತಿಳಿದು ಮೋಕ್ಷಸಂಪಾದನೆಗಾಗಿ ಗುರುವನ್ನೇ ಮೊರೆಹೊಂದಬೇಕೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ತಸ್ಮಾಜ್ಜಿಜ್ಞಾಸಯಾಽಽತ್ಮಾನಮಾತ್ಮಸ್ಥಂ ಕೇವಲಂ ಪರಮ್ ।
ಸಂಗಮ್ಯ ನಿರಸೇದಸ್ಯ ವಸ್ತುಬುದ್ಧಿಂ ಯಥಾಕ್ರಮಮ್ । ॥ ೧೧ ॥

ಅದರಿಂದ ದೇಹದೊಳಗೆ ನಿಯಾಮಕನಾಗಿ ಕುಳಿತಿರುವ ಪರಮಾತ್ಮನನ್ನು ದೇಹಸಂಬಂಧದಿಂದಾಗುವ ಉತ್ಪತ್ತ್ಯಾದಿಗಳಿಂದ ರಹಿತನೆಂದೂ ಜೀವವಿಲಕ್ಷಣನೆಂದೂ ವಿಚಾರದಿಂದ ಚೆನ್ನಾಗಿ ತಿಳಿದು, ಜೀವನಲ್ಲಿಯೂ ಅಂಥ ಸಾಮರ್ಥ್ಯವಿರಬಹುದೆಂಬ ಭಾವನೆಯನ್ನು ಕ್ರಮವಾಗಿ ವಿಚಾರಮಾಡಿ ದೂರಮಾಡಿಕೊಳ್ಳಬೇಕು.

ಬೇರೆ ವ್ಯಾಖ್ಯಾನಕಾರರು 'ವಸ್ತು ಬುದ್ಧಿಂ ನಿರಸೇತ್' ಎಂದರೆ 'ದೇಹಾದಿಗಳು ಸತ್ಯ ಆತ್ಮನಿಗೆ ಅವು ಉಪಕಾರಿಯಾಗಿದ್ದು ಅಭಿಮಾನ ಪಾತ್ರವಾಗಿವೆ' ಎಂಬ ~~ಭಾವನೆಯನ್ನು ಬಿಡಬೇಕು ಎಂದು ವಿವರಣೆ ನೀಡಿದ್ದಾರೆ. ಆದರೆ ಇದು ಸರಿಯಲ್ಲ.~~ ದೇಹಾದಿಗಳು ಸತ್ಯವೇ ಆತ್ಮನಿಗೆ ಉಪಕಾರಕವೇ ಅಭಿಮಾನಪಾತ್ರವೇ ಆಗಿವೆ. ಏಕೆಂದರೆ ಅವಧೂತಮುನಿ ತನ್ನ ದೇಹವನ್ನು ತನಗೆ ಗುರು ಎಂದು ಮುಕ್ತಕಂಠದಿಂದ ಪ್ರಶಂಸಿಸಿದ್ದಾನೆ. ಅದರಿಂದ ದೇಹಾದಿಗಳು ಪರಮೋಪಾದೇಯ, ಪರಮೋಪಕಾರಿ, ಮೋಕ್ಷಸಾಧನವೇ ಆಗಿವೆ. ಅವುಗಳನ್ನು ಮೋಕ್ಷಸಾಧನವಾಗಿ ಮಾಡಿಕೊಳ್ಳದೆ ಇಂದ್ರಿಯ ಸುಖಭೋಗಕ್ಕಾಗಿ ದುರುಪಯೋಗಪಡಿಸಿಕೊಳ್ಳುವುದು ಜೀವಾತ್ಮನದೇ ತಪ್ಪು.

ಅದರಿಂದ 'ಅಸ್ಯ ವಸ್ತುಬುದ್ಧಿಂ ಯಥಾಕ್ರಮಂ ನಿರಸೇತ್' ಎಂದರೆ, 'ಪರಮಾತ್ಮನೇ ಸರ್ವಶಕ್ತ, ಜೀವನು ಆತ್ಮೋದ್ಧಾರವನ್ನು ಸ್ವತಃ ಮಾಡಿಕೊಳ್ಳಲಾರದ ಅಶಕ್ತನು ಎಂದು ತನ್ನಲ್ಲಿ ಶಕ್ತತ್ವಬುದ್ಧಿಯನ್ನು ಕ್ರಮೇಣ ವಿಚಾರದಿಂದ ನಿರಸನ ಮಾಡಿಕೊಳ್ಳಬೇಕು' ಎಂದರ್ಥ ಹೇಳಬೇಕು.

ಅವಸ್ತ್ವಶಕ್ತಮುದ್ದಿಷ್ಟಂ ಶಕ್ತಂ ವಸ್ತ್ವಿಹ ಭಣ್ಯತೇ ।
ತಸ್ಮಾದೇಕಂ ಪರಂ ಬ್ರಹ್ಮ ವಸ್ತುಶಬ್ದೋದಿತಂ ಸದಾ ॥

ಇತಿ ಲಕ್ಷಣೇ ॥

ಅಶಕ್ತವು ಅವಸ್ತು ಎನಿಸುತ್ತದೆ. ಶಕ್ತವು ವಸ್ತು ಎಂದು ಕರೆಯಲ್ಪಡುತ್ತದೆ. ಅದರಿಂದ

ಪರಬ್ರಹ್ಮನೊಬ್ಬನೇ ಶಕ್ತನಾದ್ದರಿಂದ ಅವನೊಬ್ಬನೇ ವಸ್ತುಶಬ್ದದಿಂದ ಸದಾ ಕರೆಸಿಕೊಂಡಿದ್ದಾನೆ ಎಂದು ಲಕ್ಷಣ ಎಂಬ ಗ್ರಂಥದಲ್ಲಿ ಹೇಳಿದೆ.

❖❖❖

ಜ್ಞಾನಾಗ್ನಿ ಹೇಗೆ ಜೀವಾತ್ಮನಿಗೆ ಮೋಕ್ಷ ಕಾರಣವಾಗುತ್ತದೆ ಎಂಬುದನ್ನು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ವೈಶಾರದೀ ಸಾಽತಿವಿಶುದ್ಧಬುದ್ಧಿ
ರ್ಧುನೋತಿ ಮಾಯಾಂ ಗುಣಸಂಪ್ರಸೂತಿಮ್ ।
ಗುಣಾಂಶ್ಚ ಸಂದಹ್ಯ ಯದಾತ್ಮ್ಯಮೇತತ್
ಸ್ವಯಂ ಚ ಶಾಮ್ಯತ್ಯಸಮಿದ್ಯಥಾಽಗ್ನಿಃ ॥ ೧೩ ॥

ಬಳಿಕ ಅತ್ಯಂತ ನಿರ್ಮಲವಾದ ಪರಮಾತ್ಮಾಪರೋಕ್ಷ ಉದಿಸಿ ಕಾಮಕ್ರೋಧಾದಿ ಹೇತುವಾದ ಜೀವಾಚ್ಛಾದಕ ಅವಿದ್ಯೆಯನ್ನು ನಾಶಮಾಡುವುದು. ಪರಮಾಚ್ಛಾದಕ ವನ್ನು ದೂರಮಾಡುವುದು. ಕಾಮಕ್ರೋಧಾದಿಗಳನ್ನು ಸುಟ್ಟು ಸಂಸಾರಕ್ಕೆ ಮೂಲವಾದ ಅವಿದ್ಯೆಯನ್ನು ಸುಟ್ಟು ಬಳಿಕ ತಾನೂ ಕೂಡ ಕಟ್ಟಿಗೆಯಿಲ್ಲದ ಬೆಂಕಿಯಂತೆ ತಾನೇ ನಾಶಹೊಂದುವುದು.

ಕಾಮಕ್ರೋಧಾದಿಗಳು ಬಾಹ್ಯವಾದ ಜಡ ಅಂತಃಕರಣದ ಪರಿಣಾಮ. ಅಪರೋಕ್ಷಜ್ಞಾನವೂ ಅದೇ ಜಡ ಅಂತಃಕರಣದ ಪರಿಣಾಮ. ಅದರಿಂದ ಅಪರೋಕ್ಷಜ್ಞಾನಾಗ್ನಿ ಕಾಮಕ್ರೋಧಾದಿಗಳನ್ನು ಸುಡುವಾಗಲೆ ಜಡ ಅಂತಃಕರಣವೂ ಸುಟ್ಟುಹೋಗುತ್ತದೆ. ಆಗ ಅಪರೋಕ್ಷ ತನಗೆ ಆಶ್ರಯವಾದ ಜಡ ಅಂತಃಕರಣ ವಿಲ್ಲವಾಗುವುದರಿಂದ ಕಟ್ಟಿಗೆಯಿಲ್ಲದ ಬೆಂಕಿಯಂತೆ ತಾನೂ ಸ್ವಯಂ ಆರಿಹೋಗು ತ್ತದೆ. ಜೀವಾತ್ಮನಿಗೆ ಮುಂದೆ ಮುಕ್ತಿಯಲ್ಲಿ ಸ್ವರೂಪಾಂತಃಕರಣದಿಂದಲೇ ಜ್ಞಾನಾನಂದಾದಿ ಅನುಭವ ಉಂಟಾಗುತ್ತದೆ.

ಪರಮಾತ್ಮನ ಅಪರೋಕ್ಷವು ಮಾಯೆಯನ್ನು ಕಳೆಯುತ್ತದೆ ಎಂದರೆ ಪ್ರಕೃತಿಯನ್ನಾಗಲಿ, ಭಗವಂತನ ಇಚ್ಛೆಯನ್ನಾಗಲಿ ನಾಶಮಾಡುತ್ತದೆ ಎಂದಲ್ಲ. ಅನಾದಿಕಾಲದಿಂದ ಜೀವನಲ್ಲಿ ಜೀವಾಚ್ಛಾದಿಕಾ ಮತ್ತು ಪರಮಾಚ್ಛಾದಿಕಾ ಎಂದು ಎರಡು ಮಾಯೆಯ ಆವರಕಗಳಿವೆ. ಪಿಶಾಚಿಯಂತೆ ದುಃಖ ಉಂಟುಮಾಡುತ್ತವೆ. ಅಹಂಕಾರ ಮಮಕಾರಗಳನ್ನು ಹುಟ್ಟಿಸಿ ಭಗವಂತನನ್ನು ಮರೆಮಾಡುತ್ತವೆ. ಪರಮಾತ್ಮಾಪರೋಕ್ಷಜ್ಞಾನದಿಂದ ಅವು ನಾಶ ಹೊಂದುತ್ತವೆ ಎಂದು ವೈಭಾವ್ಯ ಎಂಬ ಗ್ರಂಥದಲ್ಲಿದೆ.

'ಯದಾತ್ಮ್ಯಮೇತತ್' ಮಾಯೆಯೆ ಸಂಸಾರಕ್ಕೆ ಮೂಲ ಎಂದು ಭಾಗವತ ಹೇಳುತ್ತಿದೆ. 'ಏತತ್' ಶಬ್ದವು ಸಾಕ್ಷಿಪ್ರತ್ಯಕ್ಷಸಿದ್ಧವಾದ ದುಃಖಾದಿ ರೂಪವಾದ ಸಂಸಾರವನ್ನು ಹೇಳುತ್ತದೆ. ಕೆಲವೆಡೆ ಪ್ರಪಂಚವನ್ನೂ ಕೆಲವೆಡೆ ಪರಬ್ರಹ್ಮನನ್ನೂ ಇನ್ನೂ ಕೆಲವೆಡೆ ಮಿಥ್ಯಾಜ್ಞಾನಾದಿ ಹೇಯವಸ್ತುವನ್ನೂ ಹೇಳುತ್ತದೆ ಎಂದು ತಂತ್ರನಿರುಕ್ತ ಎಂಬ ಗ್ರಂಥ ಹೇಳಿದೆ. ಅದರಿಂದ ಭಾಗವತದಲ್ಲಿ ಏತತ್ ಶಬ್ದವು ಸಂಸಾರವನ್ನು ಹೇಳುತ್ತದೆ.

ಅಪರೋಕ್ಷಜ್ಞಾನವು ಮಾಯೆಯನ್ನು ಕಳೆದ ಬಳಿಕ ತಾನೂ ನಾಶವಾಗುತ್ತದೆ ಹೀಗೆ 'ಬಾಹ್ಯಅಂತಃಕರಣಜನ್ಯವಾದ ಜ್ಞಾನವು ಮುಕ್ತಿಯಲ್ಲಿ ನಾಶವಾಗಿರುತ್ತದೆ. ಸ್ವರೂಪಭೂತವಾದ ಜ್ಞಾನದಿಂದಲೇ ಮುಕ್ತಿಯಲ್ಲಿ ಸುಖಭೋಗಗಳು' ಎಂದು ಮುಕ್ತಿತತ್ವಗ್ರಂಥ ವಿವರಣೆ ನೀಡಿದೆ.

ಇಲ್ಲಿ 'ಸ್ವಯಂ ಚ ಶಾಮ್ಯತ್ಯಸಮಿದ್ಯಥಾಗ್ನಿಃ' ಎಂಬ ಮಾತನ್ನು ಬೇರೆ ವ್ಯಾಖ್ಯಾನಕಾರರು ಬೇರೆಬೇರೆ ರೀತಿಯಾಗಿ ಅರ್ಥೈಸಿಕೊಂಡಿದ್ದಾರೆ. [1]ಶ್ರೀಧರ ವ್ಯಾಖ್ಯಾನದಲ್ಲಿ ತತ್ವಮಸಿವಾಕ್ಯ ಜನ್ಯ ಐಕ್ಯಸಾಕ್ಷಾತ್ಕಾರವು ಅಜ್ಞಾನವನ್ನು ಅದರ ಎಲ್ಲ ಕಾರ್ಯವನ್ನೂ ಸುಟ್ಟು ಕಟ್ಟಿಗೆಯಿಲ್ಲದ ಬೆಂಕಿಯಂತೆ ತಾನೂ ನಾಶವಾಗುತ್ತದೆ. ಬಳಿಕ ಆತ್ಮ ಕೇವಲ ಆನಂದಸ್ವರೂಪನಾಗಿ ಮುಕ್ತಿಯಲ್ಲಿ ಉಳಿಯುತ್ತಾನೆ ಎಂದು ಹೇಳಿದೆ. [2]ವೀರರಾಘವ ವ್ಯಾಖ್ಯಾನದಲ್ಲಿ ಮೋಕ್ಷೋಪಾಯವಾದ ಧ್ಯಾನರೂಪ ಬುದ್ಧಿಯು ಮಾಯೆಯನ್ನೂ ಗುಣಗಳನ್ನೂ ಪುಣ್ಯಪಾಪಕರ್ಮಗಳನ್ನೂ ನಾಶಮಾಡಿ ತಾನು ಕೂಡ ನಾಶವಾಗುತ್ತದೆ ಎಂದಿದ್ದಾರೆ.

---

1. ಅತಿವಿಶುದ್ಧಾ ಬುದ್ಧಿರ್ಗುಣಕಾರ್ಯರೂಪಾಂ ಮಾಯಾಂ ನಿವರ್ತಯತಿ । ಯದಾತ್ಮಕಮೇತದ್ ವಿಶ್ವಂ ಜೀವಸ್ಯ ಸಂಸೃತಿನಿಮಿತ್ತಂ ತಾನ್ ಗುಣಾಂಶ್ಚ ದಗ್ಧ್ವಾ ಆಸಮಿನ್ನಿರಿಂಧನಃ । ತಸ್ಮಾತ್ ಕಾರ್ಯೇಣ ಕಾರಣೇನ ವಿದ್ಯಯಾ ಚ ವ್ಯವಧಾನಾಭಾವಾತ್ ಸಾಕ್ಷಾತ್ ಪರಮಾನಂದರೂಪೋ ಭವತೀತಿ । -ಶ್ರೀಧರಃ

   ಕಾರ್ಯೇಣ ದೇಹೇಂದ್ರಿಯಾದಿನಾ ಕಾರಣೇನಾಜ್ಞಾನೇನ ವಿದ್ಯಯಾ ಚ ವಾಕ್ಯಜೈಕ್ಯ ಜ್ಞಾನೇನ ವ್ಯವಧಾನಾಭಾವಾತ್ ಸ್ವರೂಪಪ್ರಾಪ್ತೌ ಪ್ರತಿಬಂಧಾಭಾವಾತ್ । -ರಾಧಾರಮಣದಾಸಃ

2. ಅತಿ ವಿಶುದ್ಧಾ ಬುದ್ಧಿರ್ಗುಣಸಂಪ್ರಸೂತಾಂ ಮಾಯಾಂ ವಿಚಿತ್ರಾಂ ಸಂಸೃತಿಂ ಧುನೋತಿ ತಥಾ ಏತದ್ದೇಹ ತದನುಬಂಧ್ಯಾದಿಕಂ ಯದಾತ್ಮಂ ಯದಾತ್ಮಕಂ ಯದ್ಗುಣಪರಿಣಾಮಾತ್ಮಕಂ ತಾಂಶ್ಚ ಗುಣಾನ್ ತನ್ಮೂಲ ಪುಣ್ಯಾಪುಣ್ಯಾತ್ಮಕ ಕರ್ಮಾಣಿ ಚ ಸಂದಹ್ಯ ಸ್ವಯಂ ಚ ಶಾಮ್ಯತಿ ಉಪಾಯರೂಪಾ ಧ್ಯಾನಾತ್ಮಿಕಾ ಬುದ್ಧಿರ್ಮುಕ್ತೌ ನಾನುವರ್ತತೇ ಇತ್ಯರ್ಥಃ । -ವೀರರಾಘವಃ

[3]ಶುಕದೇವ ವ್ಯಾಖ್ಯಾನವು ಬುದ್ಧಿನಾಶವನ್ನು ಒಪ್ಪುವುದಿಲ್ಲ. ಅದು ಅಜ್ಞಾನವನ್ನು ನಾಶಪಡಿಸಿದ ಬಳಿಕ ಮೋಕ್ಷದಲ್ಲಿ ಭಗವಂತನ ದರ್ಶನ ವಿಷಯಭೋಗಗಳನ್ನು ಮುಕ್ತರಿಗೆ ನೀಡುತ್ತ ಸದಾ ಇರುತ್ತದೆ. ಇದು ಶ್ರುತಿಸಿದ್ಧವಾಗಿರುವುದರಿಂದ ಬುದ್ಧಿನಾಶವನ್ನು ಹೇಳುವವರನ್ನು ಉಪೇಕ್ಷೆ ಮಾಡಬೇಕು. ಭಾಗವತವು 'ಕಟ್ಟಿಗೆ ಯಿಲ್ಲದ ಬೆಂಕಿ ಆರಿಹೋಗುವಂತೆ ಬುದ್ಧಿನಾಶವಾಗುತ್ತದೆ' ಎನ್ನುತ್ತಿಲ್ಲ. ಕಟ್ಟಿಗೆಯಿಲ್ಲದ ಬೆಂಕಿ ಕಟ್ಟಿಗೆಯನ್ನು ಸುಡುವ ಕಾರ್ಯವನ್ನು ಬಿಟ್ಟು ಮಹಾಭೂತರೂಪದಿಂದ ಇರುವಂತೆ ಬುದ್ಧಿಯೂ ಅಜ್ಞಾನವನ್ನು ಸುಡುವ ಕಾರ್ಯವನ್ನು ಮಾಡಿ ಮುಗಿಸಿರುವು ದರಿಂದ ಆ ಕಾರ್ಯವನ್ನು ಬಿಟ್ಟು ಮೋಕ್ಷದಲ್ಲಿ ತಾನು ಸುಮ್ಮನಿರುತ್ತದೆ ಎನ್ನುತ್ತಾರೆ.

ಮೋಕ್ಷದಲ್ಲಿ ಭಗವಂತನ ದರ್ಶನ ವಿಷಯಭೋಗಗಳಿವೆ ಎಂದು ಅದ್ವೈತವು ಒಪ್ಪುವುದಿಲ್ಲ. ಗೌಣಮೋಕ್ಷದಲ್ಲಿ ಅವು ಇದ್ದರೂ ನಿರ್ಗುಣ ಮೋಕ್ಷದಲ್ಲಿ ಅವು ಇರಲಾರವೆಂದು ಹೇಳುತ್ತಾರೆ. ಆದರೆ ನಿರ್ಗುಣ ಮೋಕ್ಷವು ಶ್ರುತಿ ವಿರುದ್ಧವಾದ್ದರಿಂದ ಶ್ರೀಧರವ್ಯಾಖ್ಯಾನ ಸಮಂಜಸವಾಗುವುದಿಲ್ಲ.

~~ವೀರರಾಘವ ವ್ಯಾಖ್ಯಾನದಲ್ಲಿ ಅಜ್ಞಾನನಿವರ್ತಕವಾದ ಬುದ್ಧಿ ತಾನೇ~~ ನಾಶವಾಗುತ್ತದೆ ಎಂದು ಹೇಳಿದರೂ ಅದು ಸರಿಯಲ್ಲ. ಅವರ ಮತದಲ್ಲಿ ಅಜ್ಞಾನ ನಾಶಕ ಅಪರೋಕ್ಷವಲ್ಲ. ಭಗವಂತ ಅಪರೋಕ್ಷ ಗೋಚರನಾಗುವುದಿಲ್ಲ. ಧ್ಯಾನಗೋಚರನಾಗುತ್ತಾನೆ. ಆ ಧ್ಯಾನರೂಪವಾದ ಬುದ್ಧಿ ಅಜ್ಞಾನನಾಶಕ. ಅಜ್ಞಾನನಾಶೋತ್ತರದಲ್ಲಿ ಮುಕ್ತಿಯಲ್ಲಿ ಧ್ಯಾನವಿರುವುದಿಲ್ಲ ಎನ್ನುತ್ತಾರೆ. ಆದರೆ 'ಯಜ್ಞಸ್ಯ ಮಾತ್ರಾಂ ವಿಮಿಮೀತ ಉ ತ್ವಃ' ಎಂದು ಮುಕ್ತರ ಧ್ಯಾನವನ್ನು ಋಗ್ವೇದ ಹೇಳಿದೆ. ಅದರಿಂದ ಧ್ಯಾನವಿರುವುದೇ ಇಲ್ಲ ಎನ್ನಲಾಗದು. ಆದರೂ ಅವರ ಮತದಲ್ಲಿ ಮೋಕ್ಷದಲ್ಲಿ ಧರ್ಮಭೂತಜ್ಞಾನವಿರುವುದರಿಂದ ಭಗವದ್ದರ್ಶನಾದಿಗಳು ಕೂಡುತ್ತವೆ.

ಶ್ರೀಮದಾಚಾರ್ಯರು ಮುಕ್ತರಿಗೆ ಸ್ವರೂಪಭೂತ ಮನ ಇಂದ್ರಿಯ

---

3. ಅತಿವಿಶುದ್ಧಾ ಬುದ್ಧಿರ್ವಿದ್ಯಾ ಶಾಮ್ಯತಿ । ಅಜ್ಞಾನಾದಿ ನಿರಾಕರಣವ್ಯಾಪಾರಂ ತ್ಯಜತಿ । ತದನಂತರಂ ತು ಸ್ವಯಮವತಿಷ್ಠತ ಇತಿ ಶೇಷಃ । ಯಥಾಽಸಮಿನ್ನಿರಿಂಧನೋಗ್ನಿಃ ಕಾಷ್ಠ ಸಂದೀಪನವ್ಯಾಪಾರಂ ತ್ಯಜತಿ ಸ್ವಯಂ ಮಹಾಭೂತರೂಪೇಣಾವತಿಷ್ಠತೇ ಏವಂ ತದ್ವದಿತ್ಯರ್ಥಃ । ಅತ್ರೇದಂ ಬೋಧ್ಯಂ । ಸದಾ ಪಶ್ಯಂತಿ ಸೂರಯಃ ಜಕ್ಷನ್ ಕ್ರೀಡನ್ ರಮಮಾಣ ಇತ್ಯಾದಿ ಶ್ರುತ್ಯಾ ಸಬೋಧ ಏವ ಮುಕ್ತೌ ಜೀವಃ ಪ್ರತಿಪಾದಿತಃ। ಅತೋ ವಿದ್ಯಾ ಸ್ವಯಂ ಮುಕ್ತೌ ತಿಷ್ಠತ್ಯೇವ । ಯೇ ತು ಮುಕ್ತೌ ನಿರ್ಬೋಧ ಏವಾತ್ಮಾ ತಿಷ್ಠತೀತ್ಯಾಹುಸ್ತೇ ಉಪೇಕ್ಷಣೀಯಾಃ ಶ್ರುತಿ ವಿರುದ್ಧವಾದಿತ್ವಾದಿತ್ಯಲಂ ವಿಸ್ತರೇಣ। -ಶುಕದೇವಃ

ಗಳಿಂದಲೇ ಭಗವದ್ದರ್ಶನಾದಿಗಳಾಗುವುವು ಎಂದಿದ್ದಾರೆ. ಅದರಿಂದ ಬಾಹ್ಯಜಡ ಬುದ್ಧಿನಾಶವನ್ನು ಶುಕದೇವ ವ್ಯಾಖ್ಯಾನ ವಿರೋಧಿಸುವುದು ಯುಕ್ತವಾಗುವುದಿಲ್ಲ.

ಪಿಶಾಚವತ್ ಸ್ಥಿತಾ ಮಾಯಾ ಮುಚ್ಯತೇ ಜೀವಗಾ ಸದಾ ।
ದಹ್ಯಂತೇ ತದ್ಗುಣಾಃ ಸರ್ವೇ ಸಾ ಚ ಪ್ರಾತಿಸ್ವಿಕೀ ನರೇ ॥
ಇತಿ ವೈಭಾವ್ಯೇ ॥

ಏತಚ್ಛಬ್ದೇನ ದುಃಖಾದಿರಪರೋಕ್ಷತಯೋಚ್ಯತೇ ।
ಕ್ವಚಿದ್ ವಿಶ್ವಂ ಕ್ವಚಿದ್ ಬ್ರಹ್ಮ ಕ್ವಚಿನ್ನಿಂದ್ಯಮುದೀರ್ಯತೇ ॥
ಇತಿ ತಂತ್ರನಿರುಕ್ತೇ ॥

ಬಾಹ್ಯಾಂತಃಕರಣಾಜ್ಜನ್ಯಂ ಜ್ಞಾನಂ ನಶ್ಯತಿ ಮುಕ್ತಿಗೇ ।
ಸ್ವರೂಪಜ್ಞಾನತೋ ಭೋಗಾನ್ ಮುಕ್ತೋ ಭುಂಕ್ತೇ ಯಥೇಷ್ಟತಃ ॥
ಇತಿ ಮುಕ್ತಿತತ್ತ್ವೇ ॥

(ಪರಮಾತ್ಮಾಪರೋಕ್ಷವು ಮಾಯೆಯನ್ನು ಕಳೆಯುತ್ತದೆ ಎಂದರೆ ಅದ್ವೈತಿಗಳು ಹೇಳುವ ಅವಿದ್ಯೆಯನ್ನಾಗಲಿ ಮೂಲಪ್ರಕೃತಿಯನ್ನಾಗಲಿ ಭಗವಂತನ ಇಚ್ಛೆಯನ್ನಾಗಲಿ ನಾಶಮಾಡುವುದೆಂದು ಅರ್ಥವಲ್ಲ.) ಜೀವನಲ್ಲಿ ಅನಾದಿಕಾಲದಿಂದ ಜೀವಾಚ್ಛಾದಿಕಾ ಪರಮಾಚ್ಛಾದಿಕಾ ಎಂದು ಎರಡು ಬಗೆಯಾದ ಮಾಯೆಯ ಆವರಕ ಪಿಶಾಚಿಯಂತೆ ಪೀಡಿಸುತ್ತ ಸದಾ ಇರುತ್ತದೆ. ಅದನ್ನು ಜೀವನು ಅಪರೋಕ್ಷ ಬಲದಿಂದ ದೂರಮಾಡಿಕೊಳ್ಳುತ್ತಾನೆ. (ದೂರಮಾಡಿಕೊಳ್ಳುವುದೆಂದರೆ ಜೀವಾಚ್ಛಾದಕವನ್ನು ಜ್ಞಾನಾಗ್ನಿಯಿಂದ ಸುಡುವುದು, ಪರಮಾಚ್ಛಾದಿಕೆಯನ್ನು ದೂರ ಸರಿಸುವುದು) ಈ ಮಾಯೆಯು ಉಂಟುಮಾಡುವ ಕಾಮಕ್ರೋಧಾದಿ ದುರ್ಗುಣಗಳು ಎಲ್ಲವೂ ಆಗಲೆ ಜ್ಞಾನಾಗ್ನಿಯಲ್ಲಿ ಸುಟ್ಟುಹೋಗುವುವು. ಪ್ರತಿಜೀವನಲ್ಲಿಯೂ ಪ್ರತ್ಯೇಕವಾಗಿಯೇ ಈ ಎರಡು ಬಗೆಯ ಮಾಯೆ ಇರುತ್ತದೆ ಎಂದು ವೈಭಾವ್ಯ ಗ್ರಂಥದಲ್ಲಿದೆ.

'ಯದಾತ್ಮ್ಯಮೇತತ್' ಎಂಬಲ್ಲಿ 'ಏತತ್' ಎಂದರೆ ತುಚ್ಛವಾದ ಈ ಸಂಸಾರ ದುಃಖ ಮುಂತಾದುವು. ಏಕೆಂದರೆ ಸಾಕ್ಷಿ ಪ್ರತ್ಯಕ್ಷದಿಂದ ಅವು ಬುದ್ಧಿಯಲ್ಲಿ ಸನ್ನಿಹಿತವಾಗಿರುತ್ತವೆ. ಕೆಲವು ಕಡೆ ಈ ಪ್ರಪಂಚ ಪ್ರತ್ಯಕ್ಷಾದಿ ಪ್ರಮಾಣದಿಂದ ಬುದ್ಧಿಸ್ಥವಾದ್ದರಿಂದ, ಕೆಲವುಕಡೆ ಬ್ರಹ್ಮ ತನಗೆ ನಿಯಾಮಕನಾಗಿ ನಿತ್ಯ ಬುದ್ಧಿಯಲ್ಲಿರುವುದರಿಂದ, ಕೆಲವುಕಡೆ ನಿಂದ್ಯವಾದ ಮಿಥ್ಯಾಜ್ಞಾನ ಅದರ ಅಭಿಮಾನಿ ಕಲ್ಯಾದಿ ಅಸುರರು ಶಾಸ್ತ್ರದ ಮೂಲಕ ಬುದ್ಧಿಸ್ಥವಾಗುವುದರಿಂದ 'ಏತತ್' ಎಂಬ ಸರ್ವನಾಮ ಶಬ್ದದಿಂದ ಹೇಳಲ್ಪಡುತ್ತದೆ ಎಂದು ತಂತ್ರನಿರುಕ್ತ ಗ್ರಂಥದಲ್ಲಿದೆ.

(ಅಪರೋಕ್ಷದಿಂದ ಬುದ್ಧಿ ನಾಶವಾಗುವುದಾದರೆ ಮೋಕ್ಷದಲ್ಲಿ ಭಗವದ್ದರ್ಶನ ವಿಷಯಭೋಗಾದಿಗಳಿಲ್ಲವೆಂದಾದೀತು, ಅಂಥ ಮೋಕ್ಷ ಪುರುಷಾರ್ಥವಾಗದೆ ಹೋದೀತು ಎನ್ನುವ ಪ್ರಶ್ನೆಗೆ ಸಮಾಧಾನ-)

ಬಾಹ್ಯ ಅಂತಃಕರಣದಿಂದ ಉಂಟಾದ ಅಪರೋಕ್ಷ ಜ್ಞಾನ ಮುಕ್ತನಲ್ಲಿ ನಾಶವಾಗಿರುತ್ತದೆ. ಬಳಿಕ ಮುಕ್ತಿಯಲ್ಲಿ ಸ್ವರೂಪಭೂತಜ್ಞಾನದಿಂದ ಯಥೇಚ್ಛವಾಗಿ ಭೋಗಗಳನ್ನು ಮುಕ್ತನು ಅನುಭವಿಸುತ್ತಾನೆ ಎಂದು ಮುಕ್ತಿ ತತ್ವದಲ್ಲಿದೆ.

❖❖❖

ಜೀವರು ನಿತ್ಯರೇ ಆದರೂ ಕರ್ಮದಿಂದ ತಾರತಮ್ಯಾನುಸಾರವಾಗಿ ಶರೀರಗಳು ಅವರಿಗೆ ಬರುವುವು ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಅಥೈಷಾಂ ಕರ್ಮಕರ್ತೄಣಾಂ ಭೋಕ್ತೄಣಾಂ ಸುಖದುಃಖಯೋಃ ।
ನಾನಾತ್ವಮಥ ನಿತ್ಯತ್ವಂ ಲೋಕಕಾಲಾಗಮಾತ್ಮನಾಮ್ ॥ ೧೪ ॥

ನಾನಾ ಬಗೆಯ ಕರ್ಮ ಮಾಡುವವರು ಜೀವಾತ್ಮರು. ಅದರ ಫಲವಾಗಿ ನಾನಾ ಬಗೆಯ ಸುಖದುಃಖಗಳನ್ನೇ ಭೋಗಿಸುತ್ತಾರೆ. ಹೀಗಾಗಿ ಅವರು ಸ್ಥೂಲವಾಗಿ ಸ್ವರೂಪದಿಂದ ಮೂರು ಬಗೆಯಾಗಿ ತಾರತಮ್ಯಉಳ್ಳವರಾಗಿರುವರು ಮತ್ತು ಲೋಕ ದೇಶ ಕಾಲ ವೇದಗಳಂತೆ ಚೇತನರು ಎಲ್ಲರೂ ನಿತ್ಯರು. ಅದರಿಂದ ಸ್ವರೂಪ ತಾರತಮ್ಯವೂ ನಿತ್ಯ.

'ಸುಖ ದುಃಖಗಳು ನಾನಾ ಬಗೆ' ಎಂದರೆ ಸುಖ, ದುಃಖ, ಸುಖಮಿಶ್ರ ದುಃಖ ಎಂದು ಮೂರು ಬಗೆ, ಅವು ಕ್ರಮವಾಗಿ ಸಾತ್ವಿಕ ತಾಮಸ ರಾಜಸ ಚೇತನಗಳ ಸ್ವರೂಪಗಳಾಗಿರುವುದರಿಂದ ಜೀವತ್ರೈವಿಧ್ಯ ಯುಕ್ತವೆನಿಸುತ್ತದೆ. ಜೀವ ನಿತ್ಯತ್ವವು ಲೋಕ ದೇಶ ಕಾಲ ವೇದ ನಿತ್ಯತ್ವದಂತೆ ಶ್ರುತ್ಯಾದಿ ಸಿದ್ಧವೇ ಆಗಿದೆ. ಅದನ್ನು ಯುಕ್ತಿಯಿಂದ ಸಮರ್ಥಿಸಬೇಕಾಗಿಲ್ಲ.

ಮನ್ಯಸೇ ಸರ್ವಭಾವಾನಾಂ ಸಂಸ್ಥಾ ಹ್ಯೌತ್ಪತ್ತಿಕೀ ಯಥಾ ।
ತತ್ತದಾಕೃತಿಭೇದೇನ ಜಾಯತೇ ಭಿದ್ಯತೇ ಚ ಧೀಃ ॥ ೧೫ ॥

ದೇವಾಸುರ ಮನುಷ್ಯಾದಿ ಸರ್ವಜೀವರ ಸ್ವರೂಪಯೋಗ್ಯತೆ ಹೇಗೆ ಸ್ವಾಭಾವಿಕವಾಗಿ ಮೂರು ಬಗೆ ಬೇರೆ ಬೇರೆಯಾಗಿರುವುದೋ ಹಾಗೇ ದೇವಾಸುರಾದಿ ಆಯಾ ಶರೀರಗಳೂ ಅವರಿಗೆ ಬೇರೆಬೇರೆಯಾಗಿಯೇ ಬರುತ್ತದೆ. ಜ್ಞಾನವೂ ಆ

ದೇಹಗಳಿಗನುಸಾರವಾಗಿಯೇ ಬರುತ್ತದೆ ಉದ್ಧವ, ನೀನಿದನ್ನು ತಿಳಿದೇ ಇರುವೆ. ನಾನು ಬೇರೆ ಹೇಳಬೇಕಾಗಿಲ್ಲ. ಹೀಗಾಗಿ ಈಶ್ವರ ಇಂಥ ಜೀವನಿಗಿಂತ ವಿಲಕ್ಷಣ.

ಏವಮಪ್ಯತ್ರ ಸರ್ವೇಷಾಂ ದೇಹಿನಾಂ ದೇಹಯೋಗತಃ।
ಕಾಲಾವಯವತಃ ಸಂತಿ ಭಾವಾ ಜನ್ಮಾದಯೋಽಸಕೃತ್ ॥ ೧೬ ॥

ಜೀವರು ಸ್ವರೂಪದಿಂದ ಪರಮಾತ್ಮನಂತೆ ನಿತ್ಯರೇ ಆದರೂ ಎಲ್ಲ ಶರೀರಿ ಗಳಿಗೂ ಆಯಾ ಕರ್ಮ ಪರಿಪಾಕದ ಕಾಲ ಬಂದಾಗಲೆಲ್ಲ ದೇಹ ಬರುವುದರಿಂದ ದೇಹಸಂಬಂಧಪ್ರಯುಕ್ತವಾಗಿ ಮತ್ತೆಮತ್ತೆ ಜನನ ಮರಣಾದಿ ಅವಸ್ಥೆಗಳು ಪ್ರವಾಹ ರೂಪದಿಂದ ಬರುವುವು. ಅವೂ ಸತ್ಯವೇ ಆಗಿರುವುವು. ಅದರಿಂದ ಜೀವೇಶ್ವರ ಭೇದ ಸತ್ಯ.

[1]ಈ ಶ್ಲೋಕಗಳಲ್ಲಿ 'ಅಥೈಷಾಂ' 'ಮನ್ಯಸೇ' 'ಏವಮಪಿ' ಎಂದು ಯಾವುದೋ ಪೂರ್ವಪಕ್ಷವನ್ನು ಎತ್ತಿಕೊಂಡು ಸಮಾಧಾನ ಮಾಡುತ್ತಿರುವಂತೆ ಮೇಲುನೋಟಕ್ಕೆ ಕಾಣುತ್ತದೆ. ಮತ್ತು ಭೋಕ್ತೃಜೀವರಿಗೆ ನಾನಾತ್ವ ನಿತ್ಯತ್ವಗಳನ್ನು ಭಾಗವತ ಹೇಳುವುದು ಅದ್ವೈತಕ್ಕೆ ಅನುಗುಣವಾಗುವುದೂ ಇಲ್ಲ. ಅದಕ್ಕೆ ಶ್ರೀಧರ ವ್ಯಾಖ್ಯಾನ 'ಇದೆಲ್ಲವೂ ಮೀಮಾಂಸಕ ರೀತಿಯಿಂದ ಪೂರ್ವಪಕ್ಷ, ಇದಕ್ಕೆ ಅದ್ವೈತ ರೀತಿಯಿಂದ ಉತ್ತರ ಮುಂದೆ 31, 32, 33, 34ನೇ ಶ್ಲೋಕಗಳಲ್ಲಿ ಬರುತ್ತದೆ' ಎನ್ನುವ ಅಭಿಪ್ರಾಯದಿಂದ ಈ ಶ್ಲೋಕಗಳನ್ನು ಮೀಮಾಂಸಕ ಮತಾನುವಾದ ಪರವಾಗಿ ವ್ಯಾಖ್ಯಾನ ಮಾಡಿದೆ. ಆದರೆ ಇಲ್ಲಿ ಸಿದ್ಧಾಂತರೂಪದಿಂದ ತತ್ವವಾದವನ್ನೇ ಹೇಳಿದೆ ಎನ್ನುವುದು ಶ್ರೀಮದಾಚಾರ್ಯರು ತೋರಿಸಿರುವ ಜೀವತತ್ವಗ್ರಂಥ ವಚನದಿಂದ ತಿಳಿದುಬರುತ್ತದೆ.

[2]ವೀರರಾಘವ ವ್ಯಾಖ್ಯಾನದಲ್ಲಿ 'ಸುಪ್ತಸ್ಯ ವಿಷಯಾಲೋಕೋ (ಶ್ಲೋ.3)

1. ಮತಾಂತರ ವಿರೋಧೇನ ಸಂದೇಹೋ ಮಾಭೂದಿತಿ ತನ್ಮತಂ ನಿರಾಕರ್ತುಮುದ್ಭಾವಯತಿ ಅಥೇತಿ। ಏವಂ ಹಿ ಜೈಮಿನೀಯಾ ಮನ್ಯಂತೇ ಅಹಂಪ್ರತ್ಯಯ ವಿಜ್ಞೇಯ ಏವಾತ್ಮಾ। ಸ ಚ ಪ್ರತಿಶರೀರಂ ಭಿನ್ನಃ ಕರ್ತೃಭೋಕ್ತೃರೂಪಶ್ಚ। ನ ತು ತತ್ಸ್ವರೂಪಭೂತೋ ನಿರ್ವಿಕಾರ ಏಕಃ ಪರಮಾತ್ಮಾಽಸ್ತೀತಿ। ತಥಾ ವೈರಾಗ್ಯಂ ಚ ನ ಸಂಭವತಿ। -ಶ್ರೀಧರಃ

2. ದೇವಮನುಷ್ಯಾದಿ ಶರೀರಾಣಾಂ ತದುಪಭೋಗ್ಯಾನಾಂ ಶಬ್ದಾದಿವಿಷಯಾಣಾಂ ಚ ನಾನಾತ್ಮಕತ್ವೇನ ವಿಫಲತ್ವಮುಕ್ತಂ ತತ್ರ ಶಂಕತೇ ಅಥೇತಿ। ಯದ್ಯಪಿ ನಾನಾತ್ವಮಥಾಪಿ ನಿತ್ಯತ್ವಂ ಸ್ಥಾಯಿತ್ವಂ ಮನ್ಯಸೇ ಇತಿ ಸಂಬಂಧಃ। ಅಯಂ ಭಾವಃ ದೇವಾದ್ಯಾಕಾರಾಣಾಮನಿತ್ಯತ್ವೇಽಪಿ ತದಾಕಾರಭಾಜಾಂ ಜೀವಾನಾಂ ನಿತ್ಯತ್ವಾತ್ ಪ್ರವೃತ್ತಿಕರ್ಮ ಪುರುಷಾರ್ಥ ಸಾಧನಮೇವೇತಿ ನ ತತ್ತ್ಯಾಗ ಉಚಿತಃ। ದುಃಖಸಾಧನಂ ತು ತ್ಯಜ್ಯತ ಏವ। -ವೀರರಾಘವಃ

ಎಂದು ಮುಂತಾಗಿ ಹಿಂದೆ ಪ್ರವೃತ್ತಕರ್ಮವನ್ನು ನಿಂದೆ ಮಾಡುತ್ತ ದೇವ ಮನುಷ್ಯಾದಿ ಶರೀರಗಳು ಶಬ್ದಾದಿ ವಿಷಯಗಳು ಪುರುಷಾರ್ಥದಾಯಕವಲ್ಲ ಎಂದಿದೆ. ಇದೀಗ ಪ್ರವೃತ್ತಕರ್ಮ ನಿತ್ಯಫಲ ಕೊಡಬಲ್ಲುದೆಂದು ಪೂರ್ವಪಕ್ಷ' ಎಂದಿದೆ. ಆದರೆ ಈ ಶ್ಲೋಕಗಳಲ್ಲಿ ಅಂಥ ಪೂರ್ವಪಕ್ಷ ಕಾಣುವುದಿಲ್ಲ.

ದೇಹಾಪೇಕ್ಷಮನಿತ್ಯತ್ವಂ ಜೀವಾನಾಂ ಜನನಂ ತಥಾ ।
ಸ್ವತಸ್ತ್ವಜಾಶ್ಚ ನಿತ್ಯಾಶ್ಚ ಬಹವಃ ಸುಖರೂಪಿಣಃ ।
ಉತ್ತಮಾ ಜೀವಸಂಘಾಸ್ತು ನೀಚಾ ವೈ ನಿತ್ಯದುಃಖಿನಃ ॥
ಇತಿ ಜೀವತತ್ತ್ವೇ ॥

ದೇಹಪ್ರಯುಕ್ತವಾಗಿ, ದೇಹದ ನಾಶದಿಂದಲೆ ಜೀವರಿಗೆ ಮರಣ, ದೇಹದ ಉತ್ಪತ್ತಿಯಿಂದಲೇ ಜೀವರಿಗೆ ಜನನ ಹೊರತು ಸ್ವತಃ ಜೀವರು ಜನನವಿಲ್ಲದವರು, ಮರಣರಹಿತರು, ಸಂಖ್ಯೆಯಲ್ಲಿ ಅನೇಕರು. ಅವರಲ್ಲಿ ಉತ್ತಮ ಜೀವಸಮೂಹಗಳು ಸುಖರೂಪಿಗಳು ಅಧಮರು ನಿತ್ಯದುಃಖಿಗಳು ಎಂದು ಜೀವತತ್ವಗ್ರಂಥ ವಚನವಿದೆ.

❖❖❖

ಜೀವರು ಅಸ್ವತಂತ್ರರಾದ್ದರಿಂದ ಉತ್ತಮರ ಅಧೀನದಲ್ಲಿದ್ದು ಅವರಲ್ಲಿ ಭಕ್ತಿ ಉಳ್ಳವರಾದರೆ ಮಾತ್ರ ಸುಖಿಗಳಾಗುತ್ತಾರೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುವನು.

ತತ್ರಾಪಿ ಕರ್ಮಣಾಂ ಕರ್ತುರಸ್ವಾತಂತ್ರ್ಯಂ ಚ ಲಕ್ಷ್ಯತೇ ।
ಭೋಕ್ತುಶ್ಚ ಸುಖದುಃಖಾನಾಂ ಕೋ ನ್ವರ್ಥೋ ವಿವಶಂ ಭಜೇತ್ ॥ ೧೭ ॥

ಈ ಜನನ ಮರಣಾದಿರೂಪ ಸಂಸಾರದಲ್ಲಿ ಕರ್ಮಗಳನ್ನು ಮಾಡುವಾಗಲೂ ಅವುಗಳ ಫಲವಾಗಿ ಸುಖದುಃಖಗಳನ್ನು ಭೋಗಿಸುವಾಗಲೂ ಜೀವರಿಗೆ ಅಸ್ವಾತಂತ್ರ್ಯ ವಿರುವುದು ಅನುಭವದಲ್ಲಿ ಕಂಡಿದೆ. ಹೀಗೆ 'ವಿವಶ' ಅಸ್ವತಂತ್ರರಾದವ ರಿಗೆ ಏನು ಸುಖ ದೊರಕುವುದು? 'ವಿ-ವಶ' ಉತ್ತಮರ ಅಧೀನದಲ್ಲಿರುವವರಿಗೆ, ಅವರಲ್ಲಿ ಭಕ್ತಿ ಉಳ್ಳವರಿಗೆ ಮಾತ್ರ ಸುಖವಿದೆ.

[1]ಶ್ರೀಧರ ವ್ಯಾಖ್ಯಾನದ ಪ್ರಕಾರ ಈ ಶ್ಲೋಕದಲ್ಲಿ ಮೀಮಾಂಸಕ ಮತದ ಮೇಲೆ

1. ಅತ್ರಾಪಿ ಜೈಮಿನ್ಯಭಿಮತಕರ್ತೃ ಭೋಕ್ತೃಪಕ್ಷೇಽಪಿ ಕರ್ಮಣಾಂ ಕರ್ತುರಸ್ವಾತಂತ್ರ್ಯಂ ಲಕ್ಷ್ಯತೇ ಲೋಕೇ ದೃಶ್ಯತೇ। ತಥಾ ದುಃಖಸುಖಭೋಕ್ತುಶ್ಚಾಸ್ವಾತಂತ್ರ್ಯಂ ಲಕ್ಷ್ಯತೇ।
- ರಾಧಾರಮಣದಾಸಃ

ಆಕ್ಷೇಪ-'ಕರ್ತೃಭೋಕ್ತೃ ಎನಿಸಿದ ಜೀವನಿಗೆ ಕರ್ಮಮಾಡುವುದರಲ್ಲಿಯೂ ಅದರ ಫಲ ಉಣ್ಣುವುದರಲ್ಲಿಯೂ ಸ್ವಾತಂತ್ರ್ಯವಿಲ್ಲದಿರುವುದು ಕಂಡಿದೆ. ಹೀಗೆ ಪರಾಧೀನ ನಾದವನಿಗೆ ಎಲ್ಲಿಯ ಸುಖ?' ಎಂದು.

ಇದಕ್ಕೆ ಮೀಮಾಂಸಕ ಹೀಗೆ ಮರುಸವಾಲು ಹಾಕಬಹುದು. 'ನಿಮ್ಮ ಗೌಣಮುಕ್ತಿಯಲ್ಲಿ ಸಂಕಲ್ಪಮಾತ್ರದಿಂದಲೆ ತಂದೆ ತಾಯಿಗಳು ಮುಂದೆ ಬಂದು ನಿಲ್ಲುತ್ತಾರೆ. ಅಸ್ವತಂತ್ರನಿಗೂ ಹೀಗೆ ಸಂಕಲ್ಪ ಮಾತ್ರದಿಂದಲೆ ಬಂಧು ಸಮಾಗಮ ಸುಖ ಸಿಗುವುದನ್ನು ನೀವೇ ಒಪ್ಪಿರುವಾಗ ಅಸ್ವಂತ್ರನಿಗೆ ಸುಖವೆಲ್ಲಿ ಎಂದು ನಮ್ಮ ಮೇಲೆ ಆಕ್ಷೇಪ ಮಾಡುವುದು ಹೇಗೆ ಸರಿಯಾದೀತು?' ಎಂದು.

ಆದರಿಂದ ಭಾಗವತ ಇಲ್ಲಿ ಮೀಮಾಂಸಕ ಮತವನ್ನು ಟೀಕಿಸುತ್ತಿಲ್ಲ. ಜೀವರು ಅಸ್ವತಂತ್ರರಾದರೂ ಸುಖಿಸಬಲ್ಲರು. ಅವರು ದುಃಖಿಸಿದರೆ ಅದು ಅವರದೇ ತಪ್ಪು. ಮೊದಲಿಗೆ ತಾವು ಸಾತ್ವಿಕರಾಗಿರಬೇಕು, ಸಾತ್ವಿಕಸ್ವೋತ್ತಮರ ಅಧೀನದಲ್ಲಿದ್ದು ಅವರಲ್ಲಿ ಭಕ್ತಿಉಳ್ಳವರಾಗಬೇಕು. ಅದರಲ್ಲಿಯೇ ಪರಮಸುಖವಿದೆ.

~~ಸ್ವಾಧಿಕಾನಾಂ ವಶತ್ವಾತ್ತು ಪರಮಂ ಸುಖಮೇವ ತು ।~~
ತದನ್ಯೇಷಾಂ ವಶೇ ಯಸ್ತು ಕಿಂ ಸುಖಂ ತಸ್ಯಭಣ್ಯತಾಂ ।
ಸ್ವಾಧಿಕಾನಾಂ ವಶತ್ವಂ ಚ ತೇಷು ಭಕ್ತಿಮತಃ ಸುಖಂ ।
ತದನ್ಯೇಷಾಂ ತು ದುಃಖಾಯ ತಸ್ಮಾದ್ ಭಕ್ತೋಽಧಿಕೇ ಭವೇತ್ ॥
ಇತಿ ಚ ॥

ಉತ್ತಮರ ವಶದಲ್ಲಿರುವುದರಿಂದ ಪರಮಸುಖವೇ ಆಗುವುದು. ಅಧಮರ ವಶದಲ್ಲಿ ಏನು ಸುಖವಿದೆ, ಹೇಳಿ. ಉತ್ತಮರ ವಶದಲ್ಲಿರುವುದು ಅವರಲ್ಲಿ ಭಕ್ತಿ ಉಳ್ಳವನಿಗೆ ಮಾತ್ರ. ಭಕ್ತಿ ಇಲ್ಲದವರಿಗೆ ಅದೂ ದುಃಖಕರವೇ ಆಗುವುದು. ಆದರಿಂದ ಉತ್ತಮರಲ್ಲಿ ಭಕ್ತಿ ಉಳ್ಳವನಾಗಬೇಕು ಎಂದೂ ಜೀವತತ್ವ ವಚನವಿದೆ.

❖❖❖

ದೇಹಾಭಿಮಾನವಿದ್ದರೆ ಜ್ಞಾನಿಗಳಿಗೂ ದುಃಖವೆ, ಅಜ್ಞಾನಿಗಳಿಗೆ ಇನ್ನೇನು ಹೇಳಬೇಕೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ನ ದೇಹಿನಾಂ ಸುಖಂ ಕಿಂಚಿದ್ವಿದ್ಯತೇ ವಿದುಷಾಮಪಿ ।
ತಥಾಚ ದುಃಖ ಮೂಢಾನಾಂ ತಥಾಽಹಂಕಾರಿಣಾಂ ಪರಮ್ ॥ ೧೮ ॥

ಜ್ಞಾನಿಗಳಿಗೂ ಕೂಡ ದೇಹಾಭಿಮಾನವಿರುವಷ್ಟು ಕಾಲ ಸುಖವಿಲ್ಲವೆಂದ ಮೇಲೆ ದುಃಖದಿಂದ ಮೋಹಿತರಾಗಿದ್ದು ಕೇವಲ ಅಹಂಕಾರಿಗಳಾಗಿರುವ ಅಜ್ಞರಿಗೆ ಏನೂ ಸುಖವಿಲ್ಲವೆಂದು ಬೇರೆನು ಹೇಳಬೇಕು?

[1]'ಕರ್ಮಾನುಷ್ಠಾನವನ್ನು ಚೆನ್ನಾಗಿ ಬಲ್ಲವರಿಗೆ ಕರ್ಮದಿಂದ ಸುಖವೆ ಎಂದು ಮೀಮಾಂಸಕನು ಹೇಳಿದರೆ ನಮ್ಮ ಉತ್ತರ-ಕರ್ಮವನ್ನು ಚೆನ್ನಾಗಿಬಲ್ಲ ದಕ ಪ್ರಜಾಪತಿಗೆ ಸುಖ ಬರಲಿಲ್ಲ ತಾನೇ ಮರಣಹೊಂದಿದ ಮತ್ತು ಕರ್ಮವನ್ನು ಬಲ್ಲವ ರಿಗೂ ಪ್ರಮಾದವಶದಿಂದ ಕರ್ಮ ಸರಿಯಾಗಿ ನಡೆಯದೆ ಅನರ್ಥವಾಗಬಹುದು ಎಂದು.'–ಹೀಗೆ ಶ್ರೀಧರವ್ಯಾಖ್ಯಾನ ರಾಧಾರಮಣದಾಸ ವ್ಯಾಖ್ಯಾನಗಳು ಹೇಳಿವೆ.

ಆದರೆ ಮೀಮಾಂಸಕನು ಕರ್ಮದಿಂದ ಸುಖವನ್ನು ಸುಖವಾಗಿ ಬಾಚಿಕೊಳ್ಳಲು ಶಕ್ಯವಿದೆ ಎನ್ನುವುದಿಲ್ಲ. 'ಬಲು ಕಷ್ಟಪಟ್ಟು ಕರ್ಮವನ್ನು ವೇದದಿಂದ ತಿಳಿಯಬೇಕು. ಏನೂ ಪ್ರಮಾದವಾಗದಂತೆ ಎಚ್ಚರಿಕೆಯಿಂದ ಕರ್ಮಮಾಡಬೇಕು. ಆಗ ಸ್ವರ್ಗ ಮೋಕ್ಷಗಳು ದೊರೆಯುತ್ತವೆ. ವೇದಾಂತಿಗಳಿಗೂ ಜ್ಞಾನದಿಂದ ಮೋಕ್ಷಸಂಪಾದನೆ ~~ಮಾಡುವುದು ಸುಲಭವಲ್ಲ' ಎನ್ನುತ್ತಾನೆ. ಅದರಿಂದ ಮೀಮಾಂಸಕ ಮತ ಸುಲಭ~~ ವಾಗಿ ಸೋಲುವುದಿಲ್ಲ. ಅದರಿಂದ ಶ್ಲೋಕಕ್ಕೆ ಇದು ಸರಿಯಾದ ವಿವರಣೆಯಲ್ಲ.

ಇಲ್ಲಿ 'ತಥಾ ಚ ದುಃಖಂ ಮೂಢಾನಾಂ ವೃಥಾऽಹಂಕರಣಂ ಪರಂ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. 'ವಿದ್ವಾಂಸರಿಗೆ ಏನೂ ಸುಖವಿಲ್ಲ, ಮೂಢರಿಗೆ ಏನೂ ದುಃಖವಿಲ್ಲ. ಬರಿದೆ ಕರ್ಮದಿಂದ ಸುಖ ಪಡೆಯುವೆನೆಂದು ಅಹಂಕಾರ' ಎಂದು ವಿವರಣೆ. ಇದು ಯಾರೂ ಕಂಡರಿಯದ ಸಂಗತಿ. ವಿದ್ವಾಂಸರಿಗೆ ಕೆಲವೊಮ್ಮೆ ದುಃಖ ಕಂಡಿದೆ ಹೊರತು ಸುಖವೇ ಇಲ್ಲವೆನ್ನುವುದು ಕಂಡಿಲ್ಲ. ಮೂಢರಿಗೂ ಕೆಲವೊಮ್ಮೆ ಸುಖ ಕಂಡಿದೆ ಹೊರತು ದುಃಖವೇ ಇಲ್ಲವೆಂದು ಕಂಡಿಲ್ಲ.

[2]ಇಲ್ಲಿ ರಾಧಾರಮಣದಾಸ ವ್ಯಾಖ್ಯಾನ ಹೇಳುತ್ತದೆ. 'ಮೂಢರು ಕೆಲವೊಮ್ಮೆ

---

1. ನನು ಯೇ ಸಮ್ಯಕ್ ಕರ್ಮಕರ್ತುಂ ಜಾನಂತಿ ತೇ ಸುಖಿನ ಏವ । ಯೇ ತು ನ ಜಾನಂತಿ ತ ಏವ ದುಃಖಿನ ಇತಿ ಚೇತ್ತತ್ರಾಹ ನೇತಿ । -ಶ್ರೀಧರಃ
   ವಿದುಷಾಂ ಕರ್ಮಾಭಿಜ್ಞಾನಾಂ ದಕ್ಷಾದೀನಾಮಪಿ ಕ್ವಚಿದ್ ವಿಹಿತೇऽಪಿ ಕಾಮ್ಯಕರ್ಮಣಿ ಸುಖಂ ನ ವಿದ್ಯತೇ ಪ್ರತ್ಯುತ ಸ್ವನಾಶ ಪರ್ಯಂತಂ ದುಃಖಮೇವ ದೃಶ್ಯತೇ । ಪ್ರಮಾದಾದಿನಾ ಕರ್ಮ ವೈಗುಣ್ಯಾದಿತಿ ಭಾವಃ । -ರಾಧಾರಮಣದಾಸಃ
2. ಮೂಢಾನಾಂ ದುಃಖಂ ನ ವಿದ್ಯತೇ ಸಾರಲ್ಯಾದಿಗುಣೇನ ಅಕಸ್ಮಾತ್ ತೀರ್ಥಾದಿ ಸಂಬಂಧಜಾತ ಪುಣ್ಯೇನ ಚ ಪ್ರತ್ಯುತ ಸುಖಮೇವ ದೃಶ್ಯತೇ । ಅತಃ ಕರ್ಮಣಾಂ ಸುಖದುಃಖಾಪ್ರಯೋಜಕತ್ವಾತ್ । -ರಾಧಾರಮಣದಾಸಃ

ಅಕಸ್ಮಾತ್ ತೀರ್ಥಕ್ಷೇತ್ರದರ್ಶನದ ಪುಣ್ಯದಿಂದ ಸುಖ ಹೊಂದುತ್ತಾರೆ. ಅದರಿಂದ ಕರ್ಮವು ಸುಖ ದುಃಖಗಳಿಗೆ ಪ್ರಯೋಜಕವಲ್ಲ' ಎಂದು. ಆದರೆ ಕರ್ಮ ಅಕಸ್ಮಾತ್ ನಡೆದರೂ ಅದರ ಪುಣ್ಯದಿಂದಲೇ ಸುಖವೆಂದಮೇಲೆ ಸುಖಕ್ಕೆ ಕರ್ಮ ಅಪ್ರಯೋಜಕ ಹೇಗೆ? ಅಕಸ್ಮಾತ್ ಮಾಡಿದ ಕರ್ಮವೇ ಫಲಪ್ರದವೆಂದರೆ ಉದ್ದೇಶಪೂರ್ವಕ ಮಾಡಿದ ಕರ್ಮ ಫಲಪ್ರದವಾಗದಿದ್ದೀತೆ? ಅದರಿಂದ ಕರ್ಮದಿಂದ ಸುಖ ಸಂಪಾದಿಸುವೆನೆಂಬ ವಿಶ್ವಾಸ ಮೀಮಾಂಸಕನಿಗೆ ಬಂದರೆ ತಪ್ಪಿಲ್ಲ. ಅದನ್ನು 'ವ್ಯರ್ಥ ಅಹಂಕಾರ' ಎಂದು ಭಾಗವತ ಸರ್ವಥಾ ಹೇಳಲಾರದು. ಶ್ಲೋಕಕ್ಕೆ ಬೇರೆಯೇ ವಿವರಣೆ ಬೇಕು.

ವಿದುಷಾಮಪಿ ದೇಹಮಾನಿನಾಂ ಯದಾ ನ ವಿದ್ಯತೇ ಸುಖಂ
ತದಾ ದುಃಖಮೂಢಾನಾಮಹಂಕಾರಿಣಾಂ ಚ ಕಿಮು ಇತ್ಯರ್ಥಃ ।

ಜ್ಞಾನಿಗಳೂ ಕೂಡ ದೇಹಾಭಿಮಾನವನ್ನು ಬಿಡಲಾರದೆ ಹೋದರೆ ಯಾವಾಗ ಸುಖವಿಲ್ಲವೋ ಆಗ ದುಃಖದಿಂದ ಮೋಹಿತರಾಗಿದ್ದು ಕೇವಲ ಅಹಂಕಾರಿಗಳಾಗಿರುವವರಿಗೆ ಏನು ಹೇಳಬೇಕು ಎಂದರ್ಥ.

ಪುನಃಶಬ್ದೇ ಪ್ರಸ್ತುತಾರ್ಥೇ ತಥಾಶಬ್ದ ಉದೀರ್ಯತೇ ।
ಇತಿ ಶಾಬ್ದೇ ॥

ಪುನಃ ಎಂದು ಹೇಳುವಲ್ಲಿ, ಪ್ರಸ್ತುತ ಎಂಬ ಅರ್ಥದಲ್ಲಿ ತಥಾಶಬ್ದ ಪ್ರಯೋಗವಿದೆ ಎಂದು ಶಾಬ್ದ ಎಂಬ ಗ್ರಂಥದಲ್ಲಿ ಹೇಳಿದೆ.

❖❖❖

ದೇಹಾಭಿಮಾನಿಗಳು ತಮಗೆ ಮರಣ ಬಾರದಂತೆ ಮಾಡಿಕೊಳ್ಳುವ ಉಪಾಯವನ್ನು ಅರಿಯರು ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾರೆ.

ಯದಿ ಪ್ರಾಪ್ತಿಂ ವಿಘಾತಂ ಚ ಜಾನಂತಿ ಸುಖದುಃಖಯೋಃ ।
ತೇಽಪ್ಯದ್ಧಾ ನ ವಿದುರ್ಯೋಗಂ ಮೃತ್ಯುರ್ನ ಪ್ರಭವೇದ್ಯಥಾ ॥ ೧೯ ॥

ಸುಖ–ದುಃಖಗಳ ಪ್ರಾಪ್ತಿ–ಪರಿಹಾರೋಪಾಯಗಳನ್ನು ವೇದದಿಂದ ತಿಳಿದು ವಿದ್ವಾಂಸರೆಂದು ಲೋಕಪ್ರಸಿದ್ಧರಾದವರೂ ಕೂಡ ದೇಹಾಭಿಮಾನ ಉಳ್ಳವರಾದರೆ ಮರಣಬಾರದಂತೆ ಮಾಡುವ ಉಪಾಯವನ್ನು ಅವರು ಸರಿಯಾಗಿ ತಿಳಿದಿರುವುದಿಲ್ಲ.

ಈ ಶ್ಲೋಕದಲ್ಲಿ 'ತೇ' ಅವರು ಸುಖದುಃಖಗಳ ಪ್ರಾಪ್ತಿ ಪರಿಹಾರಗಳಿಗೆ

ಉಪಾಯಗಳನ್ನು ತಿಳಿದವರಾದರೂ ಮೃತ್ಯುಭಯವನ್ನು ಪರಿಹರಿಸಿಕೊಳ್ಳುವ ಉಪಾಯವನ್ನು ಸರ್ವಥಾ ತಿಳಿಯರು' ಎಂದು ಹೇಳಿದೆ.

ಇಲ್ಲಿ 'ತೇ' ಅವರು ಎಂದರೆ ಯಾರು? ಸುಖದುಃಖಪ್ರಾಪ್ತಿ ಪರಿಹಾರಗಳನ್ನು ತಿಳಿದವರಾದರೂ ಮರಣದುಃಖ ಪರಿಹಾರವನ್ನು ತಿಳಿಯರು ಎನ್ನುವುದು ವ್ಯಾಹತವಲ್ಲವೆ? ಎಂಬ ಪ್ರಶ್ನೆಗಳು ಬರುತ್ತವೆ.

ಬೇರೆ ವ್ಯಾಖ್ಯಾನಕಾರರು ಇದರ ಬಗ್ಗೆ ಗಮನ ಹರಿಸಿಲ್ಲ. ಶ್ರೀಮದಾಚಾರ್ಯರು ಸರಿಯಾದ ಸಮಾಧಾನ ನೀಡಿದ್ದಾರೆ.

'ತೇ' ಅವರು ಎಂದರೆ ಹಿಂದಿನ ಶ್ಲೋಕದಲ್ಲಿ 'ನ ದೇಹಿನಾಂ ಸುಖಂ ಕಿಂಚಿತ್' ಎಲ್ಲ ಸುಖದಿಂದ ವಂಚಿತರಾದವರು ವಂಚಿತರಾಗಲಿರುವವರು ಸುಖಲೇಶವಿಲ್ಲದ ತಮಸ್ಸಿಗೇ ಯೋಗ್ಯರಾದವರೆಂದು ಮುಂದೆ 28ನೇ ಶ್ಲೋಕದಲ್ಲಿ ಭಾಗವತವೆ ಸ್ಪಷ್ಟಪಡಿಸುತ್ತದೆ. ಎಲ್ಲ ಸುಖಗಳಿಂದ ವಂಚಿತರು ಏಕೆಂದರೆ 'ದುಃಖಮೂಢರು', ದುಃಖ ಬಂದಾಗ ಭಯದಿಂದ ವಿಚಲಿತರಾಗಿ ಪರಿಹಾರೋಪಾಯವನ್ನು ಆಲೋಚಿಸಲು ಶಕ್ತರಾಗದವರು. ಅಷ್ಟು ಭಯ ಏಕೆಂದರೆ 'ದೇಹಿ'ಗಳು ದೇಹಾಭಿಮಾನ ಉಳ್ಳವರು. ದೇಹವಿಯೋಗಕ್ಕೆ ಬಹಳ ಭಯಪಡುವವರು. ಹರಿದಾಸರ ಬಳಿ ಬಂದು ಭಯಪರಿಹಾರಕ್ಕೆ ಉಪಾಯವನ್ನು ಕೇಳಬಾರದೆ? ಎಂದರೆ 'ವಿದುಷಾಂ' ವಿದ್ವಾಂಸ ರಲ್ಲದಿದ್ದರೂ ವಿದ್ವಾಂಸರೆಂದು ಪ್ರಸಿದ್ಧರಾದವರು. ಹೀಗಾಗಿ 'ಅಹಂಕಾರಿ'ಗಳಾಗಿ ದ್ದಾರೆ. ಎಲ್ಲರೂ ತನ್ನನ್ನು ವಿದ್ವಾಂಸನೆಂದು ಹೊಗಳುವಾಗ ಹೌದು, ನಾನು ವಿದ್ವಾಂಸನೇ ಎಂದು ಭ್ರಮೆಯಿಂದ ಅಹಂಕಾರಪಡುವವರು. ಆದರೆ ಮರಣಭಯ ಕಾಡುವುದರಿಂದ ಅವರಿಗೆ ಯಾವುದರಲ್ಲಿಯೂ ಸುಖ ಕಾಣುವುದಿಲ್ಲ. ಗಲ್ಲು ಶಿಕ್ಷೆಗೊಳಗಾದವನಿಗೆ ಮೃಷ್ಟಾನ್ನ ನೀಡಿದರೂ ಬೇಡವೆನಿಸುವುದೆಂದು ಮುಂದಿನ ಶ್ಲೋಕದಲ್ಲಿಯೇ ವಿವರಣೆ ಬರುತ್ತದೆ. ಹೀಗೆ ಈ ಶ್ಲೋಕಕ್ಕೆ ವಿವರಣೆ ನೀಡಬೇಕೆಂದು ಶ್ರೀಮದಾಚಾರ್ಯರು ಹೇಳುತ್ತಾರೆ.

ಯೇ ತು ವಿದ್ವತ್ತ್ವೇನ ಪ್ರಸಿದ್ಧಾಃ ಪ್ರಾಕೃತಾನಾಂ
ತೇಽಪ್ಯದ್ಧಾ ನ ವಿದುಃ ದೇಹಾಭಿಮಾನಿನಶ್ಚೇತ್ ।
ದುಃಖಮೂಢಾ ಅಧೀರಾಃ ।
ಅಹಂಕಾರಿಣೋ ವಿಶೇಷತೋಽಪ್ಯವಿದ್ಯಮಾನ ಗುಣಾಭಿಮಾನಿನಃ॥

ಯಾರು ಅಜ್ಞರ ನಡುವೆ ವಿದ್ವಾಂಸರೆಂದು ಪ್ರಸಿದ್ಧರಾಗಿರುವರೋ ಅವರು ಕೂಡ

ದೇಹಾಭಿಮಾನಿ ಗಳಾಗಿದ್ದರೆ. ಮರಣಭಯ ನಿವಾರಣೋಪಾಯವನ್ನು ಸರ್ವಥಾ ತಿಳಿಯರು.

ದುಃಖ ಬಂದಾಗ ಅಧೀರರಾಗುವವರು ದುಃಖಮೂಢರು. ಅಹಂಕಾರಿಗಳೆಂದರೆ, ಎಲ್ಲರಿಗೂ ಅಹಂಕಾರವಿದೆ, ಇವರು ವಿಶೇಷವಾಗಿ ತಮ್ಮಲ್ಲಿಲ್ಲದ ಗುಣವನ್ನು ಉಂಟೆಂದು ಅನ್ಯಥಾ ತಿಳಿದು ಅಭಿಮಾನಪಡುತ್ತಾರೆ.

❖❖❖

ಅದ್ವೈತೋಪಾಸನೆ ಬಹಳ ಅನರ್ಥಕರ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಗುಣಾಃ ಸೃಜಂತಿ ಕರ್ಮಾಣಿ ಕಾಲೋ ನು ಸೃಜತೇ ಗುಣಾನ್ ।
ಜೀವಸ್ತು ಗುಣಸಂಯುಕ್ತೋ ಭುಂಕ್ತೇ ಕರ್ಮಫಲಾನ್ಯಸೌ ॥ ೩೦ ॥

ತ್ರಿಗುಣಗಳು ಶರೀರೇಂದ್ರಿಯ ಮನಸ್ಸುಗಳ ಮೂಲಕ ಜೀವನಲ್ಲಿ ಕರ್ಮಗಳನ್ನು ಉಂಟುಮಾಡುತ್ತವೆ. ಆ ಗುಣಗಳನ್ನು ಪ್ರಕೃತಿಯಿಂದ ಕಾಲನಾಮಕ ಪರಮಾತ್ಮ ಉಂಟುಮಾಡುತ್ತಾನೆ. ಹೀಗಾಗಿ ಗುಣಬದ್ಧನಾದ ಜೀವನು ಶರೀರದಲ್ಲಿದ್ದು ಕರ್ಮಮಾಡಿ ಫಲ ಉಣ್ಣುತ್ತಾನೆ. ಪರಮಾತ್ಮ ಸ್ವತಂತ್ರನಾದ್ದರಿಂದ ಶರೀರದಲ್ಲಿದ್ದರೂ ಕರ್ಮಫಲವನ್ನು ಉಣ್ಣುವುದಿಲ್ಲ. ಹೀಗೆ ಸಂಸಾರದಲ್ಲಿ ಭೇದವಿದ್ದೇ ಇದೆ.

ಯಾವತ್ ಸ್ಯಾದ್ಗುಣವೈಷಮ್ಯಂ ತಾವನ್ನಾನಾತ್ವಮಾತ್ಮನಃ ।
ನಾನಾತ್ವಮಾತ್ಮನೋ ಯಾವತ್ಪಾರತಂತ್ರ್ಯಂ ತದೈವ ಹಿ ॥ ೩೧ ॥
ಯಾವದಸ್ಯಾಸ್ವತಂತ್ರತ್ವಂ ತಾವದೀಶ್ವರತೋ ಭಯಮ್ ।
ಯ ಏತತ್ಸಮುಪಾಸೀರಂಸ್ತೇ ಮುಹ್ಯಂತಿ ಶುಚಾಽರ್ಪಿತಾಃ ॥ ೩೨ ॥

ಕೆಲವರು ಹೇಳುತ್ತಾರೆ— 'ಗುಣವೈಷಮ್ಯರೂಪವಾದ ಸೃಷ್ಟಿ ಇರುವವರೆಗೆ ಮಾತ್ರ ಆತ್ಮನಲ್ಲಿ ಜೀವೇಶಭೇದ ಭ್ರಮವಿರುತ್ತದೆ. ಭೇದಭ್ರಮವಿರುವ ವರೆಗೆ ಪಾರತಂತ್ರ್ಯವಿರುತ್ತದೆ, ಈಶ್ವರನಿಂದ ನಾಶಭಯವಿರುತ್ತದೆ. ಇದೆಲ್ಲವೂ ಅವಿದ್ಯೆಯ ಕಾರ್ಯ. ಅವಿದ್ಯೆ ನಾಶವಾಯಿತೆಂದರೆ ಭೇದಭ್ರಮವಿಲ್ಲ, ಜೀವೇಶ್ವರ ಭೇದವಿಲ್ಲ, ಈಶ್ವರನೆ ಇಲ್ಲವೆಂದ ಮೇಲೆ ಯಾವ ಭಯವೂ ಇಲ್ಲ.' ಎಂದು. ಈ ಮತವನ್ನು ಒಪ್ಪುವವರು ಭ್ರಾಂತಿಯಲ್ಲಿ ಸಿಲುಕಿರುತ್ತಾರೆ. ಅದರಿಂದ ತಮಸಿನಲ್ಲಿ ಬಿದ್ದು ದುಃಖಪರವಶರಾಗುತ್ತಾರೆ. ಮೂರ್ಛಿತರಾಗುತ್ತಾರೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರಿಗೆ 'ಗುಣೋಽನುಸೃಜತೇ ಗುಣಾನ್' ಎಂದು ಪಾಠ.

[1]ಇಲ್ಲಿ ಶ್ರೀಧರವ್ಯಾಖ್ಯಾನದಲ್ಲಿ 'ಮೀಮಾಂಸಕರು ಜೀವನನ್ನು ಕರ್ತಭೋಕ್ತ ನೆನ್ನುತ್ತಾರೆ. ಅದನ್ನು ಭಾಗವತ ನಿರಾಕರಿಸುತ್ತದೆ— ಇಂದ್ರಿಯಗಳು ಕರ್ಮಗಳನ್ನು ಉಂಟುಮಾಡುತ್ತವೆ, ಆತ್ಮನಲ್ಲ. ಸತ್ವಾದಿಗುಣವೇ ಇಂದ್ರಿಯಗಳನ್ನು ಕರ್ಮದಲ್ಲಿ ಪ್ರೇರಿಸುತ್ತದೆ. ಆತ್ಮನಲ್ಲ. ಅದರಿಂದ ಆತ್ಮನಿಗೆ ಕರ್ತೃತ್ವವಿಲ್ಲ. ಭೋಕ್ತೃತ್ವ ಯದಪಿ ಕಾಣುತ್ತದೆ. ಆದರೆ ಅದು ಆತ್ಮನಿಗೆ ಸ್ವಾಭಾವಿಕವಲ್ಲ. ಇಂದ್ರಿಯಾಧ್ಯಾಸದಿಂದ ಔಪಾಧಿಕ. ಇದನ್ನು 'ಅಸೌ' ಎಂಬ ಶಬ್ದವೇ ಹೇಳುತ್ತದೆ. ಅಸೌ ಎಂದರೆ ಇಂದ್ರಿಯಗಳ ಐಕ್ಯವನ್ನು ತನ್ನಲ್ಲಿ ಆರೋಪಿಸಿಕೊಂಡವನೆಂದರ್ಥ' ಎಂದಿದೆ. ಈ ವಿವರಣೆ ಸರಿಯಿಲ್ಲ.

'ಇಂದ್ರಿಯಗಳು ಕರ್ಮಗಳಿಗೆ ಕರ್ತೃ, ಕರ್ತೃವಾದ ಇಂದ್ರಿಯಗಳ ಐಕ್ಯವನ್ನು ತನ್ನಲ್ಲಿ ಆರೋಪಿಸಿಕೊಂಡು ಆತ್ಮ ತಾನು ಕರ್ತನೆಂದುಕೊಳ್ಳುತ್ತಾನೆ' ಎನ್ನುವುದು ~~ಸರಿಯಲ್ಲ. ಹಗ್ಗವನ್ನು ಹಾವೆಂದು ತಿಳಿದವನು ಪರೀಕ್ಷೆ ಮಾಡಿ ನೋಡಿದ ಬಳಿಕ~~ ಹಾವಲ್ಲ ಎನ್ನುತ್ತಾನೆ. ಹಾಗೆ ನಾನು ಕಣ್ಣಿಂದ ನೋಡಿದೆನು. ಕೈಯಿಂದ ಹೊಡೆದೆನು ಎಂದು ಹೇಳುತ್ತಾನೆಯೆ ಹೊರತು ನಾನು ನೋಡಲಿಲ್ಲ, ನಾನು ಹೊಡೆಯಲಿಲ್ಲ ಎಂದುಕೊಳ್ಳುವುದಿಲ್ಲ. ಅದರಿಂದ ಕರ್ಮಗಳಿಗೆ ಜೀವನೇ ಕರ್ತ. ಇಂದ್ರಿಯಗಳು ಕೇವಲ ಕರಣಗಳು. ಶಾಸ್ತ್ರಗಳಲ್ಲಿ ಲೌಕಿಕವ್ಯವಹಾರಗಳಲ್ಲಿ ಸರ್ವತ್ರ 'ಅಂತಃಕರಣ' 'ಬಾಹ್ಯಕರಣ'ಗಳೆಂದೇ ಉಕ್ತವಾಗುತ್ತವೆ. ಕರ್ತೃಗಳೆಂದು ಎಲ್ಲಿಯೂ ಹೇಳುವುದಿಲ್ಲ. ಸತ್ವಾದಿಗುಣಗಳು ಇಂದ್ರಿಯಗಳಿಗೆ ಪ್ರೇರಕಗಳೆಂದ ಮಾತ್ರಕ್ಕೆ ಜೀವನು ಪ್ರೇರಕನಲ್ಲ ಎಂದಾಗುವುದಿಲ್ಲ. ಜೀವನೂ ಪ್ರೇರಕ, ಪರಮಾತ್ಮನೂ ಪ್ರೇರಕ. ಎಲ್ಲರ ಪ್ರೇರಣೆಗಳಿಂದಲೇ ಇಂದ್ರಿಯಗಳು ಕರ್ಮಗಳನ್ನು ಉಂಟುಮಾಡುತ್ತಿವೆ.

ಜೀವನು ಭೋಕ್ತನೆಂದು,

ಜೀವಸ್ತು ಗುಣ ಸಂಯುಕ್ತೋ ಭುಂಕ್ತೇ ಕರ್ಮಫಲಾನ್ಯಸೌ ।

1. ಯದುಕ್ತಂ ಕರ್ತೃಭೋಕ್ತೃ ರೂಪ ಏವಾತ್ಮೇತಿ ತನ್ನಿರಾಕರೋತಿ ಗುಣಾ ಇತಿ । ಗುಣಾ ಇಂದ್ರಿಯಾಣಿ ಕರ್ಮಾಣಿ ಸೃಜಂತಿ ನ ತ್ವಾತ್ಮಾ । ಆತ್ಮೈವೇಂದ್ರಿಯಾಣಿ ಪ್ರವರ್ತಯನ್ ಕರ್ಮಾಣಿ ಕರೋತೀತಿ ಚೇನ್ನೇತ್ಯಾಹ ಗುಣ ಇತಿ । ಗುಣಃ ಸತ್ವಾದಿಃ ಗುಣಾನಿಂದ್ರಿಯಾಣಿ ಅನುಸೃಜತೇ ಪ್ರವರ್ತಯತಿ ನ ತ್ವಾತ್ಮಾ । ಅತ ಆತ್ಮನಃ ಕರ್ತೃತ್ವಂ ನಾಸ್ತೀ। ಭೋಕ್ತೃತ್ವಮಪ್ಯೌಪಾಧಿಕಮಿತ್ಯಾಹ ಜೀವಸ್ತ್ವಿತಿ। ಗುಣಸಂಯುಕ್ತ ಇಂದ್ರಿಯಾದಿ ಸಂಯುಕ್ತಃ। ಕುತ ಇತ್ಯತ ಆಹ ಅಸೌ ತೇಷ್ವಹಂಕಾರವಾನಿತ್ಯರ್ಥಃ। -ಶ್ರೀಧರಃ

ಎಂದು ಭಾಗವತ ಸ್ಪಷ್ಟವಾಗಿಯೇ ಹೇಳುತ್ತದೆ. 'ಜೀವನು ತನ್ನಲ್ಲಿ ಇಂದ್ರಿಯಗಳ ಐಕ್ಯವನ್ನು ಆರೋಪಿಸಿಕೊಂಡು ಇಂದ್ರಿಯ ಸಂಯುಕ್ತನೆನಿಸುತ್ತಾನೆ' ಎಂದು ಹೇಳಿಲ್ಲ.

[1]ಶ್ರೀಧರವ್ಯಾಖ್ಯಾನಕ್ಕೆ ವಿವರಣೆ ನೀಡುತ್ತ ರಾಧಾರಮಣದಾಸ ವ್ಯಾಖ್ಯಾನ ಹೇಳುತ್ತದೆ—

'ಅಸೌ' ಎಂಬ ಶಬ್ದ ಆತ್ಮನಲ್ಲಿ ಇಂದ್ರಿಯಾಧ್ಯಾಸವನ್ನು ಹೇಳುತ್ತದೆ. ಹೇಗೆಂದರೆ, ಆತ್ಮ ತನಗೆ ತಾನು ಎಲ್ಲಕ್ಕಿಂತ ಸನ್ನಿಕೃಷ್ಟ, ಸಮೀಪದ್ದು, 'ಇದು' ಎಂದು ಕರೆಯಬೇಕಾದುದು . 'ಅದು' ಎಂದಲ್ಲ. 'ಅದು' ವಿಪ್ರಕೃಷ್ಟ ದೂರದ್ದು ತನ್ನ ಸ್ವರೂಪ ವಲ್ಲದ್ದು. ಇಂದ್ರಿಯ ಆತ್ಮಸ್ವರೂಪವಲ್ಲದ್ದರಿಂದ ಅದನ್ನು 'ಅದು' ಎನ್ನಬೇಕು. 'ಅಸೌ' ಎಂದು ಅದಃಶಬ್ದಜನ್ಯವಾದ ಶಬ್ದದಿಂದಲೇ ಹೇಳಬೇಕು.

ಇದಮಸ್ತು ಸನ್ನಿಕೃಷ್ಟಂ ಸಮೀಪತರವರ್ತಿ ಚೈತದೋ ರೂಪಂ ।
ಅದಸಸ್ತು ವಿಪ್ರಕೃಷ್ಟಂ ತದಿತಿ ಪರೋಕ್ಷೇ ವಿಜಾನೀಯಾತ್ ॥

ಭಾಗವತವು 'ಅಸೌ ಜೀವಸ್ತು' 'ಆ ಜೀವ' ಎಂದು ಈ ಜೀವನನ್ನು ಹೇಳಿದೆ. ಇದು ಕೂಡಬೇಕಾದರೆ 'ಆ ಇಂದ್ರಿಯ' ಈ ಜೀವನಲ್ಲಿ ಅಧ್ಯಸ್ತವಾಗಿದೆ ಎಂದರ್ಥ. ಬೆಂಕಿಯಲ್ಲಿ ಕೆಂಪಗೆ ಕಾಸಿದ ಕಬ್ಬಿಣದ ತುಂಡನ್ನು 'ಬೆಂಕಿ' ಎನ್ನುವುದುಂಟು ಹಾಗೇ ಇದು. ಗುಣಸಂಯುಕ್ತ ಎಂದು ಭಾಗವತ ಹೇಳಿದ್ದು ಇದೇ ಅಭಿಪ್ರಾಯದಿಂದ. ಹೀಗಾಗಿ ಇಂದ್ರಿಯಾಧ್ಯಾಸಪ್ರಯುಕ್ತವಾಗಿಯೇ ಜೀವ ಇಂದ್ರಿಯ ಸಂಯುಕ್ತನೆನಿಸಿ ಭೋಕ್ತೃ ಎನಿಸುತ್ತಾನೆ ಹೊರತು ಭೋಕ್ತೃತ್ವ ಜೀವನಲ್ಲಿ ಸ್ವಾಭಾವಿಕವಲ್ಲ' ಎಂದು.

ಇದು ಸರಿಯಲ್ಲ. ಕಾದ ಕಬ್ಬಿಣದಲ್ಲಿ ಬೆಂಕಿಯ ಸಂಯೋಗವಿದೆ, ಅಧ್ಯಾಸವಿಲ್ಲ. ಎರಡು ಸತ್ಯವಾದ ವಸ್ತುಗಳಿಗೇ ಸಂಯೋಗ. ಅಧ್ಯಸ್ತವಾದುದಕ್ಕೆ ಅಧಿಷ್ಠಾನದಲ್ಲಿ ಸಂಯೋಗವಿಲ್ಲ. ಶುಕ್ತಿ ಸಂಯೋಗ ರಜತಕ್ಕಿಲ್ಲ. ರಜ್ಜು ಸಂಯೋಗ ಸರ್ಪಕ್ಕಿಲ್ಲ. ಶುಕ್ತಿಯೇ ರಜತವಾಗಿ ಕಂಡಿತು. ರಜ್ಜುವೇ ಸರ್ಪವಾಗಿ ಕಂಡಿತೆಂದು ಲೋಕ ವ್ಯವಹಾರ ಕಬ್ಬಿಣ ಬೆಂಕಿಯಾಗಿ ಕಂಡಿತೆಂದು ವ್ಯವಹಾರವಿಲ್ಲ. ಅದರಿಂದ ಇಂದ್ರಿಯ ಸಂಯೋಗ ಆತ್ಮನಿಗೆ ಇದೆ ಎಂದಮೇಲೆ ಅವೆರಡಕ್ಕೆ ಅಧ್ಯಾಸವಿಲ್ಲ.

---

1. ಸ್ವಾತ್ಮನಃ ಸನ್ನಿಕೃಷ್ಟತ್ವಾದಿಂದ್ರಿಯಾದೇಸ್ತು ಸ್ವಸ್ವರೂಪತ್ವಾಭಾವೇನ ವಿಪ್ರಕೃಷ್ಟತ್ವಾತ್ ಆತ್ಮನೋಽದಃ ಶಬ್ದ ವ್ಯಪದೇಶ್ಯತ್ವಂ ನ ಸಂಗಚ್ಛತೇ ಕಿಂತು ತಪ್ತಾಯಃ ಪಿಂಡವತ್ ತತ್ತಾದಾತ್ಮ್ಯೇನ ತು ತತ್ ಸಂಗಚ್ಛತೇ ಇತಿ ತೇಷು ದೇಹೇಂದ್ರಿಯಾದಿಷ್ವಹಂಕಾರವಾನಿತ್ಯರ್ಥ ಇತ್ಯುಕ್ತಂ । -ರಾಧಾರಮಣದಾಸಃ

ಸನ್ನಿಕೃಷ್ಟನಾದ ಆತ್ಮನಲ್ಲಿ ವಿಪ್ರಕೃಷ್ಟ ಇಂದ್ರಿಯಾರೋಪ ಮಾಡಿದರೆ ಆತ್ಮ ವಿಪ್ರಕೃಷ್ಟನಾಗುವುದಿಲ್ಲ. ಇಂದ್ರಿಯವೇ ಸನ್ನಿಕೃಷ್ಟವಾಗುವುದು. ಈ ಶುಕ್ತಿಯಲ್ಲಿ ಆ ರಜತಾರೋಪ ಮಾಡಿದಾಗ 'ಇದು ರಜತ' ಎನ್ನುತ್ತೇವೆ ಹೊರತು 'ಅದು ಶುಕ್ತಿ' ಎನ್ನುವುದಿಲ್ಲ.

ಹಾಗಾದರೆ ಭಾಗವತದಲ್ಲಿ 'ಅಸೌ' ಯಾರು? 'ಅಸೌ ಗುಣೋऽನುಸೃಜತೇ' ಎಂದು ಅನ್ವಯ ಹೇಳಬೇಕು. ಆಗ 'ಅಸೌ ಗುಣಃ ಗುಣಾನ್ ಅನುಸೃಜತೇ ಜೀವಸ್ತು ಕರ್ಮಫಲಾನಿ ಭುಂಕ್ತೇ' ಆ ಸತ್ವಾದಿ ಗುಣ ಇಂದ್ರಿಯಗಳಿಗೆ ಪ್ರೇರಕವೇ ಹೊರತು ಕರ್ಮಫಲಭೋಕ್ತೃ ಅಲ್ಲ. ಭೋಕ್ತೃವು ಈ ಜೀವನೇ ಎಂದಂತಾಗುವುದು.

ವಸ್ತುತಃ ಇಂದ್ರಿಯಗಳಿಗೆ ಮುಖ್ಯ ಪ್ರೇರಕ ಕಾಲನಾಮಕ ಪರಮಾತ್ಮ. ಸತ್ವಾದಿ ಗುಣವು ನಿಮಿತ್ತ ಮಾತ್ರ. 'ಕಾಲೋನುಸೃಜತೇ ಗುಣಾನ್' ಎಂದು ಪಾಠವಿಟ್ಟು ಕೊಳ್ಳಬೇಕು. ಆಗ 'ಅಸೌ ಕಾಲಃ' ಆ ಕಾಲನಾಮಕ ಪರಮಾತ್ಮ ಇಂದ್ರಿಯಗಳನ್ನು ಪ್ರೇರಿಸುತ್ತಾನೆ. ಅದರಿಂದಾಗುವ ಕರ್ಮದ ಫಲವನ್ನು 'ಜೀವಸ್ತು' ಈ ಜೀವನೇ ಉಣ್ಣುತ್ತಾನೆ. ಆತ ಉಣದ ಹಕ್ಕಿ, ಈತ ಉಣುವ ಹಕ್ಕಿ. ಹೀಗೆ ಈ ಶ್ಲೋಕದಲ್ಲಿ ಜೀವೇಶ್ವರ ಭೇದ ಉಕ್ತವಾಗುತ್ತಿದೆ, ಅದ್ವೈತವಲ್ಲ.

'ಯ ಏತತ್ ಸಮುಪಾಸೀರಂಸ್ತೇ ಮುಹ್ಯಂತಿ ಶುಚಾರ್ಪಿತಾಃ' ಎಂಬಲ್ಲಿ 'ಏತತ್' 'ಇದನ್ನು' ಉಪಾಸನೆ ಮಾಡುವವರು ಶೋಕಮೂರ್ಛಿತರಾಗುತ್ತಾರೆ ಎಂದಿದೆ.

'ಇದನ್ನು' ಎಂದರೆ ಏನನ್ನು?

[1]'ಗುಣವೈಷಮ್ಯವನ್ನು ಅದರಿಂದಾಗುವ ಭೋಗವನ್ನು ಕರ್ಮವನ್ನು' ಎನ್ನುತ್ತದೆ ಶ್ರೀಧರ ವ್ಯಾಖ್ಯಾನ. ಆದರೆ ಗುಣವೈಷಮ್ಯ ಭೋಗ ಕರ್ಮಗಳನ್ನು ಉಪಾಸನೆ ಮಾಡುವುದುಂಟೆ? ಉಪಾಸನೆ ಮಾಡುವುದೆಂದರೆ ಭಕ್ತಿಯಿಂದ ಆರಾಧಿಸುವುದು. ಭೋಗದಲ್ಲಿ ಕರ್ಮಮಾಡುವಲ್ಲಿ ಆಸಕ್ತಿ ಇಟ್ಟುಕೊಳ್ಳಬಹುದು. ಮಗು ಆಟದಲ್ಲಿ ಆಸಕ್ತಿ ಇಟ್ಟುಕೊಂಡರೆ ಅದನ್ನು ಉಪಾಸನೆ ಎನ್ನಬಹುದೆ? ಇಂಥ ಉಪಾಸನೆಗೆ

---

1. ಏತದ್ ಗುಣವೈಷಮ್ಯಂ ತತ್‌ಕೃತಂ ಭೋಗಂ ಕರ್ಮ ಚೇತ್ಯರ್ಥಃ । ಉಪಾಸೀರನ್ ಸೇವೇರನ್ ತೇ ಲೋಕಾದೀನಾಮನಿತ್ಯತ್ವಾಚ್ಛುಚಾರ್ಪಿತಾಃ ಪ್ರೋತಾಃ ಸಂತೋ ಮುಹ್ಯಂತಿ ।
-ಶ್ರೀಧರಃ

ಸೇವೇರನ್ ಧರ್ಮಾಧರ್ಮ್ಯಾಧ್ಯಾಸೇನೇತಿ ಶೇಷಃ । ಮುಹ್ಯಂತಿ ದುಃಖೇನ ಮೂರ್ಛಾಮಾಪ್ನುವಂತಿ ।
-ರಾಧಾರಮಣದಾಸಃ

ದುಃಖದಿಂದ ಮೂರ್ಛೆಹೊಂದುವ ಫಲ ಎಲ್ಲಾದರೂ ಕಂಡಿದೆಯೆ? ಅದರಿಂದ 'ಯಾವತ್ ಸ್ಯಾದ್ ಗುಣವೈಷಮ್ಯಂ ತಾವನ್ನಾನಾತ್ವಮಾತ್ಮನಃ' 'ಪ್ರಪಂಚ ಸೃಷ್ಟಿ ಇರುವಷ್ಟು ಕಾಲ ಮಾತ್ರ ಜೀವೇಶ್ವರ ಭೇದಭ್ರಮ. ಸೃಷ್ಟಿ ಅವಿದ್ಯೆಯಿಂದಾದುದು, ಅವಿದ್ಯೆ ತೊಲಗಿದರೆ ಸೃಷ್ಟಿ ಇಲ್ಲ, ಭೇದಭ್ರಮವೂ ಇಲ್ಲ' ಎನ್ನುವ ಅದ್ವೈತವನ್ನು ಉಪಾಸನೆ ಮಾಡಿದರೆ ಅದಕ್ಕೆ ಫಲ ತಮಸ್ಸು, ತಮಸಿನಲ್ಲಿ ದುಃಖದಿಂದ ಮೂರ್ಛೆ ಹೊಂದುವುದು ಎಂದು ಹಿಂದೆ 28ನೇ ಶ್ಲೋಕದಲ್ಲಿ ಬಂದಿದೆ. ಹೀಗೆ ಅದ್ವೈತವನ್ನು ಭಾಗವತ ನಿಂದಿಸುತ್ತಿದೆ. ಶ್ರೀಧರ ವ್ಯಾಖ್ಯಾನ ಹೇಳುವಂತೆ ಮೀಮಾಂಸಕ ಮತ ನಿರಾಕರಣೆ ಇಲ್ಲಿ ಕಾಣುವುದಿಲ್ಲ.

ಅದ್ವೈತ ನಿರಾಕರಣೆ ಭಾಗವತಕ್ಕೆ ವಿವಕ್ಷಿತವಾಗಿದೆ ಎನ್ನಲು, 'ಗುಣಾಃ ಸೃಜಂತಿ ಕರ್ಮಾಣಿ' ಎಂಬ ಈ ಶ್ಲೋಕವೇ ಸಾಕ್ಷಿ. ಇಲ್ಲಿ

'ಜೀವಸ್ತು ಗುಣಸಂಯುಕ್ತೋ ಭುಂಕ್ತೇ ಕರ್ಮಫಲಾನ್ಯಸೌ ।'

'ಜೀವನು ಮಾತ್ರ ಕರ್ಮಫಲವನ್ನು ಉಣ್ಣುತ್ತಾನೆ. ಪರಮಾತ್ಮನಲ್ಲ.'

ಎಂದು ಸ್ಪಷ್ಟವಾಗಿ ಜೀವೇಶ್ವರಭೇದದ ಪ್ರತಿಪಾದನೆ ಇದೆ.

ಯಾವತ್ ಸ್ಯಾದ್ ಗುಣವೈಷಮ್ಯಮಿತ್ಯಾದಿ
ಯ ಉಪಾಸೀರಂಸ್ತೇ ಮುಹ್ಯಂತಿ ।
ಗುಣ ಸಂಯುಕ್ತಃ ಕರ್ಮಫಲಾನಿ ಭುಂಕ್ತೇ ॥

'ಪ್ರಪಂಚ ಸೃಷ್ಟಿ ಅವಿದ್ಯೆಯಿಂದಾದುದು ಇದು ಇರುವಷ್ಟು ಕಾಲ ಮಾತ್ರ ಜೀವೇಶ್ವರಭೇದ ಕಲ್ಪನೆ ಇರುತ್ತದೆ. ಅದ್ವೈತಜ್ಞಾನದಿಂದ ಅವಿದ್ಯೆ ಹರಿದು ಹೋದರೆ ಅದು ಇಲ್ಲ' ಎಂದು ಅದ್ವೈತೋಪಾಸನೆ ಮಾಡುವವರು ತಮಸಿನಲ್ಲಿ ಶೋಕ ಮೂರ್ಛಿತರಾಗುತ್ತಾರೆ ಎಂದು ಭಾಗವತ ಹೇಳುತ್ತಿದೆ. ಏಕೆಂದರೆ, ಗುಣಬದ್ಧನಾದ ಜೀವನು ಮಾತ್ರ ಕರ್ಮಫಲ ಉಣ್ಣುತ್ತಾನೆ, ಕಾಲನಾಮಕ ಪರಮಾತ್ಮ ಕರ್ಮಪ್ರೇರಕನಾದರೂ ಅದರ ಫಲವನ್ನು ಉಣ್ಣುವುದಿಲ್ಲ ಎಂದು ಭಾಗವತವೇ ಜೀವೇಶ್ವರ ಭೇದವನ್ನು ಸಮರ್ಥಿಸಿದೆ.

❖❖❖

ಮುಕ್ತಿಯಲ್ಲಿಯೂ ಜೀವೇಶ್ವರ ಭೇದವಿರುವುದರಿಂದ ಅದು ಅವಿದ್ಯೆಯಿಂದಾದುದು ಮಿಥ್ಯೆ ಎನ್ನಲಾಗದೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಕಾಲ ಆತ್ಮಾಽಽಗಮೋ ಲೋಕಃ ಸ್ವಭಾವೋ ಧರ್ಮ ಏವ ಚ।
ಇತಿ ಮಾಂ ಬಹುಧಾ ಪ್ರಾಹುರ್ಗುಣವ್ಯತಿಕರೇಽಸತಿ ॥ ೩೪ ॥

ಗುಣ ಸಂಬಂಧರೂಪವಾದ ಸಂಸಾರ 'ಅಸತಿ' ಇಲ್ಲದಿರುವಾಗ ಅಂದರೆ ಮುಕ್ತಿಯಲ್ಲಿ ಮುಕ್ತರು ನನ್ನನ್ನೇ ಕಾಲ ಆತ್ಮ ಆಗಮ ಲೋಕ ಸ್ವಭಾವ ಧರ್ಮಗಳಿಗೆ ನಿಯಾಮಕನೆಂದು ಮುಂತಾಗಿ ನಾನಾ ಪ್ರಕಾರವಾಗಿ ಸ್ತುತಿಸುತ್ತಾರೆ. ಉಪಾಸನೆ ಮಾಡುತ್ತಾರೆ. ಹೀಗಾಗಿ ಮುಕ್ತಿಯಲ್ಲಿಯೂ ಜೀವೇಶ್ವರ ಭೇದವಿರುವುದರಿಂದ ಅದು ಅವಿದ್ಯೆಯಿಂದಾದುದಲ್ಲ ಸತ್ಯವೇ ಆಗಿದೆ.

[1]'ಈ ಶ್ಲೋಕದಲ್ಲಿ ಮೀಮಾಂಸಕಮತ ನಿರಾಕರಣೆ ಮುಂದುವರೆದಿದೆ. ಮೀಮಾಂಸಕರು ಭೇದವನ್ನು ನಿತ್ಯ ಸತ್ಯ ಎನ್ನುತ್ತಾರೆ. ಭಾಗವತ 'ಯಾವತ್‌ಸ್ಯಾದ್ ಗುಣ ವೈಷಮ್ಯಂ' ಎಂಬ ಹಿಂದಿನ ಶ್ಲೋಕದಲ್ಲಿ 'ಗುಣವೈಷಮ್ಯವಿರುವವರೆಗೆ ಭೇದ ವ್ಯವಹಾರ. ಅದ್ವೈತಜ್ಞಾನದಿಂದ ಅದು ನಿವೃತ್ತಿ ಹೊಂದಿದಾಗ ಭೇದಕ್ಕೂ ನಿವೃತ್ತಿ ಉಂಟಾಗುವುದು' ಎಂದು ಭೇದ ನಿತ್ಯತ್ವದ ನಿರಾಕರಣೆ ಮಾಡಿದೆ. ಇದೀಗ 'ಗುಣವ್ಯತಿಕರೇ ಸತಿ' ಗುಣವೈಷಮ್ಯವಿರುವಾಗ, ಅಂದರೆ ಮಾಯೆಗೆ ಕ್ಷೋಭೆ ಉಂಟಾದಾಗ 'ಮಾಂ ಬಹುಧಾ ಪ್ರಾಹುಃ' ನನ್ನನ್ನೇ ಕಾಲಾದಿ ರೂಪದಿಂದ ಬಹುಪ್ರಕಾರವಾಗಿ ಹೇಳುತ್ತಾರೆ. ಮಾಯೆಯಿಂದ ಕಾಲಾದಿಗಳೆಲ್ಲ ನನ್ನಲ್ಲಿ ಆರೋಪಿತವಾಗಿವೆ. ನನ್ನಿಂದ ಬೇರೆಯಾಗಿ ಪಾರಮಾರ್ಥಿಕವಾಗಿ ಇಲ್ಲ ಎಂದು ಭೇದಸತ್ಯತ್ವದ ನಿರಾಕರಣೆ'-ಎಂದು ಶ್ರೀಧರ ವ್ಯಾಖ್ಯಾನ.

ಆದರೆ 'ಮಾಂ ಬಹುಧಾ ಪ್ರಾಹುಃ' ಎನ್ನುವುದಕ್ಕೆ ಕಾಲಾದಿ ಬಹುರೂಪನೆಂದೇ ಅರ್ಥವನ್ನು ಹೇಳಬೇಕಾಗಿಲ್ಲ, ಕಾಲಾದಿನಿಯಾಮಕನೆಂದು ಬಹುವಾಗಿ ಹೇಳುತ್ತಾರೆ ಎನ್ನಬಹುದು. ಹಾಗೇ ವೀರರಾಘವ ವ್ಯಾಖ್ಯಾನದಲ್ಲಿ ಹೇಳಿದೆ.

'ಗುಣವ್ಯತಿಕರೇ ಸತಿ' ಎಂಬಲ್ಲಿ 'ಅಸತಿ' ಎಂದೂ ಪದ ವಿಭಾಗ ಶಕ್ಯವಿದೆ. ಆಗ ಗುಣವೈಷಮ್ಯವಿಲ್ಲದ ಮೋಕ್ಷಕಾಲದಲ್ಲಿ ಕಾಲಾದಿನಿಯಾಮಕನೆಂದು ಭೇದವ್ಯವಹಾರ ವಿದೆ. ಅದರಿಂದ ಅದು ಮಾಯೆಯಲ್ಲ, ಮೋಕ್ಷದಲ್ಲಿ ಮಾಯೆ ಇರುವುದಿಲ್ಲ ಎಂದು ಭೇದ ಸತ್ಯತ್ವವೇ ಪ್ರತಿಪಾದಿತವಾಗಬಹುದು.

---

1. ನ ಕೇವಲಮನಿತ್ಯತಾ ಮಾತ್ರಂ ಕಿಂತು ಮಾಯಾಮಯತ್ವಮಪೀತ್ಯಾಹ ಕಾಲ ಇತಿ । ಗುಣವ್ಯತಿಕರೇ ಮಾಯಾಕ್ಷೋಭೇ ಸತಿ ಮಾಮೇವ ಪ್ರಾಹುಃ। ನ ಮದ್‌ವ್ಯತಿರಿಕ್ತಾಃ ಸಂತಿ।
-ಶ್ರೀಧರಃ

ತದಭ್ಯುಪಗತಾಂ ನಿತ್ಯತಾಂ ನಿರಾಕೃತ್ಯ ತದಭ್ಯುಪಗತಂ ಯಥಾವತ್ತ್ವಮಪಿ ನಿರಾಕರೋತಿ।
- ರಾಧಾರಮಣದಾಸಃ

ವಸ್ತುತಃ 'ಅಸತಿ' ಎಂದೇ ಪದವಿಭಾಗ ಭಾಗವತಕ್ಕೆ ಸಮ್ಮತ. ಏಕೆಂದರೆ ಭಾಗವತವ್ಯಾಖ್ಯಾನ ರೂಪವಾಗಿರುವ ತಂತ್ರಭಾಗವತದಲ್ಲಿ ಭೇದ ವ್ಯವಹಾರ ಮೋಕ್ಷದಲ್ಲಿಯೂ ಇದೆ 'ಉಪಾಸತೇ ಸದಾ ಮುಕ್ತಾಃ' 'ಮುಕ್ತಾವಪಿ ಸದೇಷ್ಯತೇ' ಎಂದು ಸ್ಪಷ್ಟ ಹೇಳಿದೆ.

ಹೀಗಾಗಿ ಭೇದಪ್ರಪಂಚ ಅವಿದ್ಯೆಯಿಂದಾದುದು ಎಂಬುದು ಭಾಗವತ ತಾನು ಎತ್ತಿಕೊಂಡ ಪೂರ್ವಪಕ್ಷ, ಮೋಕ್ಷದಲ್ಲಿಯೂ ಅದು ಇರುವುದರಿಂದ ಸತ್ಯವೆಂಬುದು ತನ್ನ ಸಿದ್ಧಾಂತ ಹೊರತು ಮೀಮಾಂಸಕ ಮತವನ್ನು ನಿರಾಕರಣ ಮಾಡುವುದು ಅದರ ಉದ್ದೇಶವಲ್ಲ.

ಅಸತಿ ಗುಣವ್ಯತಿಕರೇ ಕಾಲಾದಿನಾಮಾನಂ
ಮಾಮೇವಾಹುರಿತಿ ಸ್ವಸಿದ್ಧಾಂತಃ ।

ಗುಣ ವೈಷಮ್ಯರೂಪವಾದ ಪ್ರಪಂಚಸೃಷ್ಟಿ ಇಲ್ಲದ ಮೋಕ್ಷದಲ್ಲಿಯೂ ಕಾಲಾದಿ ನಾಮಗಳಿಂದ ನನ್ನನ್ನೇ ಮುಕ್ತರು ಸ್ತುತಿಸುವರೆನ್ನುವುದು ಭಾಗವತದಲ್ಲಿ ಶ್ರೀಕೃಷ್ಣನ ಸ್ವಸಿದ್ಧಾಂತ.

ಕಾಲಃ ಸರ್ವಗುಣೋದ್ರೇಕಾದಾಪ್ತತ್ವಾದಾತ್ಮನಾಮಕಃ ।
ಆಗಮೋಽವಗತೇರಸ್ಯ ಲೋಕೋ ಜ್ಞಾನಸ್ವರೂಪತಃ ।
ಸ್ವವಶತ್ವಾತ್ ಸ್ವಭಾವೋಽಯಂ ಧಾರಣಾದ್ ಧರ್ಮ ಇತ್ಯಪಿ ।
ಉಪಾಸತೇ ಸದಾ ಮುಕ್ತಾಃ ಪರಾನಂದೈಕಭೋಗಿನಃ ।
ತದೇತತ್ ತತ್ವಮಜ್ಞಾತ್ವಾ ಪ್ರಾಹುರ್ದುರ್ಮತಯಃ ಪರೇ ।
ಯಾವತ್ತು ಗುಣವೈಷಮ್ಯಂ ತಾವನ್ನಾನಾತ್ವಮಾತ್ಮನಃ ।
ಭೇದಬುದ್ಧಿಸ್ತು ಯಾವತ್‌ಸ್ಯಾತ್ ತಾವದೀಶ್ವರತಂತ್ರತಾ ।
ಯಾವದೀಶ್ವರತಂತ್ರತ್ವಂ ತಾವತ್ ತಸ್ಮಾದ್ ಭಯಂ ಭವೇತ್ ।
ಉಪಾಸತೇ ಯ ಏವಂ ತು ನಿತ್ಯಶೋಕೇ ಪತಂತಿ ತೇ ।
ಮಹಾತಮಸ್ಯನಾನಂದೇ ತಸ್ಮಾನ್ನೈವಂ ವಿಚಿಂತಯೇತ್ ।
ತಸ್ಮಾನ್ನಿತ್ಯಂ ತು ನಾನಾತ್ವಂ ಜೀವಾನಾಮೀಶತಂತ್ರತಾ ।
ಸ್ವಾಧಿಕಾನಾಂ ವಶತ್ವಂ ಚ ಮುಕ್ತಾವಪಿ ಸದೇಷ್ಯತೇ ।
ಏವಂ ಜ್ಞಾತ್ವಾ ವಿಮುಚ್ಯಂತೇ ಪರಾನಂದಂ ವ್ರಜಂತಿ ಚ ॥

ಇತಿ ತಂತ್ರಭಾಗವತೇ ॥

('ಯಾವತ್‌ಸ್ಯಾದ್ ಗುಣವೈಷಮ್ಯಂ' ಇತ್ಯಾದಿ ಮೂರು ಶ್ಲೋಕಗಳನ್ನು ಹೀಗೆ ವ್ಯಾಖ್ಯಾನಿಸಬೇಕು) 'ಸರ್ವಗುಣಪೂರ್ಣನಾದ್ದರಿಂದ ಶ್ರೀಹರಿ ಕಾಲನೆನಿಸಿದ್ದಾನೆ. ವ್ಯಾಪಕನಾದ್ದರಿಂದ ಆತ್ಮನಾಮಕ. ಸರ್ವಜ್ಞನಾದ್ದರಿಂದ ಆಗಮ ಎಂದೂ ಇವನಿಗೆ ಹೆಸರು. ಜ್ಞಾನಸ್ವರೂಪನಾದ್ದರಿಂದ ಲೋಕನೆನಿಸಿದ್ದಾನೆ. ಸ್ವತಂತ್ರನಾದ್ದರಿಂದ ಸ್ವಭಾವ. ಜಗದ್ಧಾರಣ ಮಾಡುವುದರಿಂದ ಧರ್ಮನೂ ಆಗಿದ್ದಾನೆ' ಎಂದು ಪರಮಾನಂದ ಭೋಗಮಾಡುವ ಮುಕ್ತರು ಸದಾ ಶ್ರೀಹರಿಯನ್ನು ಉಪಾಸನ ಮಾಡುತ್ತಾರೆ. ಈ ತತ್ವವನ್ನರಿಯದೆ ಕೆಲವು ದುರ್ಬುದ್ಧಿಗಳಾದ ಬೇರೆ ವಾದಿಗಳು ಹೀಗೆ ಹೇಳುತ್ತಾರೆ— 'ಗುಣವೈಷಮ್ಯವಿರುವಷ್ಟು ಕಾಲ ಮಾತ್ರ ಆತ್ಮನಿಗೆ ಭೇದ ಭ್ರಮ. ಭೇದಭ್ರಮವಿರುವಷ್ಟು ಕಾಲ ಮಾತ್ರ ಪರಮಾತ್ಮನ ವಶದಲ್ಲಿರ ಬೇಕಾಗುತ್ತದೆ. ಪರಮಾತ್ಮನ ವಶದಲ್ಲಿರುವಷ್ಟು ಕಾಲ ಅವನಿಂದ ಭಯ ಉಂಟಾಗುವುದು' ಎಂದು. ಆದರೆ ಹೀಗೆ ಯಾರು, ಉಪಾಸನೆ ಮಾಡುವರೋ ಅವರು ನಿತ್ಯದುಃಖಉಳ್ಳ ಸುಖಲೇಶವಿಲ್ಲದ ಮಹಾತಮಸಿನಲ್ಲಿ ಬೀಳುತ್ತಾರೆ. ಅದರಿಂದ ಹೀಗೆ ಉಪಾಸನೆ ಮಾಡಬಾರದು. ಜೀವರಲ್ಲಿ ಭೇದ ಈಶ್ವರಾಧೀನತ್ವ ಸ್ವೋತ್ತಮರ ಅಧೀನದಲ್ಲಿರುವಿಕೆಗಳು ನಿತ್ಯ. ಮೋಕ್ಷದಲ್ಲಿಯೂ ಸದಾ ಇರುತ್ತವೆ. ಇದನ್ನು ತಿಳಿದರೆ ಮುಕ್ತಿ ಹೊಂದುತ್ತಾರೆ, ಪರಮಾನಂದವನ್ನು ಹೊಂದುತ್ತಾರೆ' ಎಂದು ತಂತ್ರಭಾಗವತದಲ್ಲಿದೆ.

❖❖❖

ಜೀವನ ದೇಹದಲ್ಲಿದ್ದು ವಿಷಯಭೋಗ ಮಾಡುವ ಪರಮಾತ್ಮನನ್ನು ಬದ್ಧನೆನ್ನುವುದಾದರೆ ಸ್ವತಃ ದೇಹವಿಲ್ಲದ ಆತ ಹೇಗೆ ಬದ್ಧನಾಗಿರುತ್ತಾನೆ ಎಂದು ಉದ್ಧವ ಶ್ರೀಕೃಷ್ಣನನ್ನು ಕೇಳುತ್ತಾನೆ.

ಗುಣೇಷು ವರ್ತಮಾನೋಽಪಿ ದೇಹಜೇಷ್ವನಪಾವೃತಃ ।
ಗುಣೈರ್ನ ಬಧ್ಯತೇಽದೇಹೀ ಬಧ್ಯತೇ ವಾ ಕಥಂ ವಿಭೋ ॥ ೩೫ ॥

ಪರಮಾತ್ಮ ಜೀವದೇಹದೊಳಗಿರುವ ಪ್ರಯುಕ್ತ 'ಅನಪಾವೃತ' ಆವರಣ ರಹಿತನಲ್ಲ, ದೇಹವೆಂಬ ಆವರಣವಿದೆ. ಆದರೂ ಸ್ವತಃ 'ಅದೇಹ' ದೇಹರಹಿತ ಎನ್ನುವಿ. ಆದರೂ 'ದೇಹಜ' ದೇಹದಿಂದ ಉಂಟಾಗುವ ಕಾಮಕ್ರೋಧಾದಿಗಳಿಂದ ಹಾಗೂ ವಿಷಯಭೋಗಗಳಿಂದ ಯುಕ್ತನಾಗಿರುವಂತೆ ಕಾಣುತ್ತಾನೆ. ಪ್ರಭು, ಅಂಥ ಪರಮಾತ್ಮ ಗುಣಗಳಿಂದ ಬದ್ಧನೆ ಅಥವಾ ಬದ್ಧನಲ್ಲವೆ? ಬದ್ದನಲ್ಲವೆಂದರೆ ಕಾಮಾದಿಯುಕ್ತನಂತೆ ಕಾಣುವುದು ಹೇಗೆ? ಬದ್ಧನೆಂದರೆ ದೇಹವಿಲ್ಲದವನೆನ್ನುವುದು ಹೇಗೆ ಕೂಡುತ್ತದೆ?

ಏತದಚ್ಯುತ ಮೇ ಬ್ರೂಹಿ ಪ್ರಶ್ನಂ ಪ್ರಶ್ನವಿದಾಂ ವರ ।
ನಿತ್ಯಮುಕ್ತೋ ನಿತ್ಯಬದ್ಧ ಏಕ ಏವೇತಿ ಮೇ ಮತಿಃ ॥ ೩೭ ॥

ಶಿಷ್ಯನ ಪ್ರಶ್ನೆಯನ್ನು ಸರಿಯಾಗಿ ಅರಿಯಬಲ್ಲವರಲ್ಲಿ ಉತ್ತಮನಾದ ಅಚ್ಯುತನೆ, ಈ ನನ್ನ ಪ್ರಶ್ನೆಗೆ ಉತ್ತರ ಹೇಳು. ನಿತ್ಯಮುಕ್ತನೂ ನಿತ್ಯಬದ್ಧನೂ ಒಬ್ಬನೇ ಎಂದು ನನ್ನ ಅನಿಸಿಕೆ. ಅದರಿಂದ ನಾನು ಈ ರೀತಿ ಪ್ರಶ್ನೆ ಮಾಡುತ್ತಿದ್ದೇನೆ. ಬದ್ಧರು ಮುಕ್ತರು ಎಂದು ಬೇರೆ ಬೇರೆ ಇಲ್ಲವೆಂದರೆ ಬಂಧಮುಕ್ತಿಗಳು ಹೇಗೆ ಎನ್ನುವುದು ಪ್ರಶ್ನೆ.

[1]ಒಬ್ಬನೇ ಆತ್ಮ ಅವಿದ್ಯೆಯಿಂದ ಬದ್ಧನಾಗಿದ್ದು ವಿದ್ಯೆಯಿಂದ ಮುಕ್ತನಾಗುತ್ತಾನೆ. ಆದರೆ ಇಲ್ಲಿ ಪ್ರಶ್ನೆ ಬರುತ್ತದೆ, 'ಶರೀರಾದಿ ಇಲ್ಲದಿದ್ದರೆ ಜೀವನಿಗೆ ಮೋಕ್ಷಸಾಧನೆ ಹೇಗೆ? ಶರೀರಾದಿ ಇದ್ದರೆ, ಅದರಲ್ಲಿ ಆತ ಬದ್ಧನೇ ಆಗುವುದರಿಂದ, ಮೋಕ್ಷ ಹೇಗೆ?' ಎಂದು. 'ಆಕಾಶದಂತೆ ನಿರ್ಲಿಪ್ತನಾದ್ದರಿಂದ ಶರೀರಾದಿ ಅವನಿಗೆ ಬಂಧಕವಾಗುವುದಿಲ್ಲ, ಮೋಕ್ಷ ಸಾಧ್ಯವಾಗುವುದು' ಎಂದು ಹೇಳುವ ಪಕ್ಷದಲ್ಲಿ ನಿರ್ಲಿಪ್ತನಾದ ಆತ್ಮನಿಗೆ ಬಂಧ ಹೇಗೆ ಸಾಧ್ಯವಾಯಿತು?' ಎಂಬ ಪ್ರಶ್ನೆ ಬರುತ್ತದೆ. ~~ಅದಕ್ಕೆ 'ಶರೀರಾಧ್ಯಾಸದಿಂದ ಅಭಿಮಾನದಿಂದ ಬಂಧ, ವೈರಾಗ್ಯದಿಂದ ಮುಕ್ತಿ'~~ ಎಂದು ಸಮಾಧಾನ. ಹಾಗಿದ್ದರೆ ವಿರಕ್ತನ ಚರ್ಯೆ ಹೇಗಿರುತ್ತದೆ ಎಂದು ತಿಳಿಯ ಬೇಕಾಗುತ್ತದೆ. ಇನ್ನೊಂದು ಪ್ರಶ್ನೆ—ಆತ್ಮನ ಬಂಧ ಅನಾದಿ. ಮುಕ್ತಿಯೂ ಜನ್ಯವಾದರೆ ಅನಿತ್ಯವಾಗುವ ಪ್ರಸಂಗವಿರುವುದರಿಂದ ಅನಾದಿ ಎನ್ನಬೇಕು ಆಗ ಒಬ್ಬನೇ ನಿತ್ಯಬದ್ಧ ನಿತ್ಯಮುಕ್ತ ಎಂದಂತಾಗುವುದು ಎಂದು ನನಗೆ ಭ್ರಮೆ ಬರುತ್ತದೆ, ಎಂದು. ಹೀಗೆ ಶ್ರೀಧರವ್ಯಾಖ್ಯಾನ ಹೇಳಿದೆ.

ಇಲ್ಲಿ ಮೊದಲನೆ ಪ್ರಶ್ನೆ 'ವಿರಕ್ತನ ಚರ್ಯೆ ಹೇಗಿರುತ್ತದೆ' ಎಂದು ಕೇವಲ ಜಿಜ್ಞಾಸೆಯೇ ಹೊರತು ಪ್ರಶ್ನೆಯೇ ಅಲ್ಲ, ಎರಡನೆ ಪ್ರಶ್ನೆಯೂ ಸರಿಯಲ್ಲ, ಒಬ್ಬನೇ ನಿತ್ಯಬದ್ಧ ನಿತ್ಯಮುಕ್ತ ಎಂದು ಅದ್ವೈತ ಸಿದ್ಧಾಂತ. 'ಒಬ್ಬನೇ ನಿತ್ಯಬದ್ಧ

1. ಗುಣೇಷ್ವಸತ್ಸು ಮುಕ್ತಿಃ ಸತ್ಸ್ವೇವ ವಾ? ಆದ್ಯೇ ಜ್ಞಾನಸಾಧನಾಭಾವಾನ್ನ ಮುಕ್ತಿಃ। ದ್ವಿತೀಯೇ ಚ ಗುಣೇಷು ವರ್ತಮಾನೋಽಪಿ ತತ್ಕಾರ್ಯದೇಹಜೇಷು ಕರ್ಮಸು ಸುಖಾದಿಷು ಚ ಕಥಂ ನ ಬಧ್ಯತೇ । ತಥಾಪಿ ತೈರಾಕಾಶವದನಾವೃತತ್ವಾನ್ನ ಬಧ್ಯತ ಇತಿ ಚೇತ್ತರ್ಹಿ ಬಂಧೋ ನ ಸಂಭವತೀತ್ಯಾಹ ಅನಪಾವೃತಃ ಕಥಂ ಬಧ್ಯತ ಇತಿ । ಯದಿ ತು ಸತ್ಸ್ವೇವ ತದಹಂಕಾರೇಣ ಬಧ್ಯತೇ ತನ್ನಿವೃತ್ತ್ಯಾ ಚ ಮುಚ್ಯತೇ ಇತಿ ಮತಂ ತರ್ಹಿ ತತ್ ಕಥಂ ಜ್ಞಾತವ್ಯಮಿತಿ ಪೃಚ್ಛತಿ। ಏಕ ಏವಾತ್ಮಾಽನಾದಿ ಗುಣ ಸಂಬಂಧಾನ್ನಿತ್ಯಬದ್ಧಃ । ಮುಕ್ತೇ ರ್ಜನ್ಯತ್ವೇಽನಿತ್ಯತ್ವ ಪ್ರಸಂಗಾನ್ನಿತ್ಯಮುಕ್ತ ಇತ್ಯಪ್ಯಂಗೀಕಾರ್ಯಂ ಸ್ಯಾತ್। ತತ್ರ ಮೇ ಭ್ರಮೋ ಭವತೀತ್ಯಾಹ।
-ಶ್ರೀಧರಃ

ನಿತ್ಯಮುಕ್ತನೆಂದು ನನಗೆ ಭ್ರಮೆ ಬರುತ್ತದೆ' ಎಂದು ಉದ್ಧವ ಏಕೆ ಹೇಳುತ್ತಿದ್ದಾನೆ'? 'ಏಕ ಏವೇತಿ ಮೇ ಭ್ರಮಃ' ಎಂದು ಪಾಠವಿಟ್ಟುಕೊಂಡೂ ಇದನ್ನು ಪ್ರಶ್ನೆ ಎಂದು ಅರ್ಥೈಸಿದ್ದಾರೆ. 'ಮುಕ್ತಿಯು ಜನ್ಯವಾದರೆ ಅನಿತ್ಯವಾಗುವ ಪ್ರಸಂಗ' ಎನ್ನುವುದೂ ಅಸಂಗತ. ಬಂಧಧ್ವಂಸವೇ ಮುಕ್ತಿ. ಧ್ವಂಸವು ಜನ್ಯವೇ. ಆದರೂ ನಿತ್ಯ. 'ಸಾದಿರನಂತಃ ಪ್ರಧ್ವಂಸಃ' ಎಂದು ಎಲ್ಲರೂ ಒಪ್ಪಿದ್ದಾರೆ. ಅನಿತ್ಯತ್ವ ಪ್ರಸಂಗ ಭಯದಿಂದ ಧ್ವಂಸವನ್ನು ಅನಾದಿ ಎಂದು ಯಾರೂ ಹೇಳುವುದಿಲ್ಲ.

[2]'ಜೀವನಿಗೆ ಅನಾದಿಕರ್ಮದ ಆವರಣವಿದೆ. ಅದು ಅನಾದಿ ಎಂದ ಮೇಲೆ ನಿತ್ಯವೇ, ನಾಶವಾಗದು, ಹೀಗಾಗಿ ಮೋಕ್ಷ ಬರಲಾರದು. ಕರ್ಮಕ್ಕೆ ನಾಶವನ್ನು ಒಪ್ಪುವುದಾದರೆ ಈಶ್ವರನಂತೆ ಸ್ವಪ್ರಕಾಶನಾದ ಜೀವನಿಗೆ ಬಂಧ ಹೇಗೆ ಕೂಡುತ್ತದೆ? ಇದು ಒಂದು ಪ್ರಶ್ನೆ. ಮೋಕ್ಷೋಪಾಯವನ್ನು ತಿಳಿದ ವಿದ್ವಾಂಸನು ಹೇಗಿರುತ್ತಾನೆ? ಅವನ ಚರ್ಯೆಗಳು ಹೇಗಿರುತ್ತವೆ ಎಂದು ಇನ್ನೊಂದು ಪ್ರಶ್ನೆ. ನಿತ್ಯಮುಕ್ತನಾದ ಈಶ್ವರನೇ ತನ್ನ ಅವಿದ್ಯೆಯಿಂದ ಬದ್ಧನಾಗಿರುವನೆಂದೂ ನನಗೆ ಭ್ರಮೆ ಬಂದಿದೆ' ಎಂದು ವೀರರಾಘವ ವ್ಯಾಖ್ಯಾನ ಹೇಳಿದೆ.

ಈ ಪ್ರಶ್ನೆಗಳೂ ಅಸಂಗತವಾಗಿವೆ. ಕರ್ಮ ಅನಾದಿಯಾಗಲು ಸಾಧ್ಯವಿಲ್ಲ. ಅದರ ಪ್ರವಾಹ ಅನಾದಿಯಾಗಿರಬಹುದು. ಆ ಪ್ರವಾಹದಲ್ಲಿರುವ ಪ್ರತಿಯೊಂದು ಕರ್ಮವೂ ಉತ್ಪತ್ತಿನಾಶಉಳ್ಳದ್ದು. ಕರ್ಮಗಳು ಒಂದರ ಮೇಲೊಂದು ಉತ್ಪತ್ತಿ ಯಾಗುತ್ತಲೇ ಇದ್ದರೆ ಪ್ರವಾಹಕ್ಕೆ ಕೊನೆ ಇಲ್ಲವಾದೀತು ನಿಜ. ಆದರೆ ಮುಮುಕ್ಷು

---

2. ಜೀವಾನಾಂ ಕರ್ಮಣಾ ತಿರೋಹಿತ ಸ್ವಭಾವತ್ವ ಶ್ರವಣಾತ್ ವೈಶಾರದೀ ಬುದ್ಧಿರಪಿ ನ ಗುಣಕರ್ಮ ನಿರೋಧಂ ದಹತೀತಿ ಗುಣಾತೀತತ್ವಮಸಂಭಾವಿತಮಿತಿ ಭಾವಃ। ಅತಃ ಗುಣೈಃ ಗುಣಕರ್ಮಮೂಲೈಃ ಸುಖದುಃಖಾದಿಭಿಃ ಕಥಂ ನ ಯುಜ್ಯತೇ ಯುಜ್ಯತ ಏವೇತಿ ಭಾವಃ। ವಸ್ತುತೋ ದೇಹಾದ್ ವಿಲಕ್ಷಣತ್ವೇಽಪ್ಯಾವರಣಸ್ಯೌಪಾಧಿಕತ್ವೇಽಪಿ ಅನಾದಿತ್ವಾನ್ನಿತ್ಯತ್ವಾಜ್ಜೀವಸ್ಯ ಕರ್ಮವಶ್ಯತ್ವಂ ತದಾವೃತತ್ವಂ ತತ್ಪ್ರಯುಕ್ತ ಸುಖದುಃಖಭಾಕ್ತ್ವಂ ಚ ದುರ್ವಾರಂ। ನನು ಕರ್ಮವಶ್ಯತ್ವಾದಿಕಮನಾದ್ಯಂತವಚ್ಚೇತ್ಯತ ಆಹ ಬಧ್ಯತೇ ವಾ ಕಥಮಿತಿ। ತರ್ಹೀಶ್ವರವದಾತ್ಮನಃ ಸ್ವದೃಶ ಈಕ್ಷಿತುಶ್ಚ ನ ಬಂಧ ಸಂಭವ ಇತಿ ಭಾವಃ। ಅನ್ಯದಪಿ ಪೃಚ್ಛತಿ। ವೈಶಾರದ ಬುದ್ಧ್ಯುದಯಾನುಗುಣಾ ವೃತ್ತಿಃ ಕೀದೃಶೀತಿ ಪ್ರಶ್ನಃ। ಇತ್ಥಮಾಕ್ಷಿಪತಾ ತ್ವಯಾ ಕಿಮವಧೃತಮಿತ್ಯತ ಆಹ ನಿತ್ಯಬದ್ಧ ಇತಿ। ಏಕಶಬ್ದೋಽನ್ಯಾರ್ಥಕಃ। ನಿತ್ಯಬದ್ಧೋ ಜೀವೋಽನ್ಯಃ ನಿತ್ಯಮುಕ್ತಸ್ತ್ವನ್ಯ ಇತಿ ಕಿಂಚಿದವಧೃತಮಪಿತು ನ ಬದ್ಧಸ್ಯ ಕದಾಚಿದಪಿ ಮುಕ್ತಿಃ ಸಂಭವಿಷ್ಯತಿ। ಮುಕ್ತಸ್ಯ ಪೂರ್ವಂ ಬಂಧಃ ಕಥಂ ಸಮಭವದಿತಿ ಮೇ ಭ್ರಮಃ। ಯದ್ವಾ ಯೋಽಯಂ ನಿತ್ಯಮುಕ್ತ ಈಶ್ವರಃ ಸ ಏವ ಸ್ವಾವಿದ್ಯಯಾ ನಿತ್ಯಬದ್ಧ ಇತಿ ಮೇ ಭ್ರಮಃ।
-ವೀರರಾಘವಃ

ಕಾಮ್ಯಕರ್ಮಮಾಡುವುದನ್ನು ನಿಲ್ಲಿಸಿ ನಿಷ್ಕಾಮಕರ್ಮ ಮಾಡಲು ತೊಡಗಿದರೆ ಕಾಮ್ಯಕರ್ಮಪ್ರವಾಹ ನಿಂತು ಹೋಗಬಲ್ಲುದು. ಆಗ ಮೋಕ್ಷ ದೊರಕುವುದು. 'ಕರ್ಮಕ್ಕೆ ನಾಶವನ್ನು ಒಪ್ಪುವುದಾದರೆ ಈಶ್ವರನಂತೆ ಜೀವನಿಗೂ ಬಂಧವಿಲ್ಲವಾದೀತು' ಎನ್ನುವುದು ಇಷ್ಟಾಪತ್ತಿ. ಕರ್ಮನಾಶವಾದರೆ ಮುಕ್ತಿ ಬಂದೇ ತೀರುವುದು. ಮುಕ್ತನಿಗೆ ತಿರುಗಿ ಬಂಧ ಉಂಟಾಗುವ ಪ್ರಶ್ನೆಯೇ ಬರುವುದಿಲ್ಲ. 'ನಿತ್ಯಮುಕ್ತನಾದ ಈಶ್ವರನೇ ತನ್ನ ಅವಿದ್ಯೆಯಿಂದ ಬದ್ಧನಾಗಿರುವನೆಂದು ಭ್ರಮೆ ಬಂದಿದೆ' ಎಂದು ಉದ್ಧವ ಹೇಳುತ್ತಿದ್ದರೂ ಆ ಭ್ರಮೆಗೆ ಕಾರಣವನ್ನು ಹೇಳಿಲ್ಲ. 'ಭ್ರಮೆ' ಎಂದೂ ತಾನೇ ಹೇಳುತ್ತಿದ್ದಾನೆ. ಅದರಿಂದ ಅದು ಪ್ರಶ್ನೆಯಾಗುವುದಿಲ್ಲ.

ಅದರಿಂದ ಇಲ್ಲಿ ಬೇರೆ ವ್ಯಾಖ್ಯಾನಕಾರರು ಹೇಳುವಂತೆ ಜೀವನ ಬಂಧ ಮೋಕ್ಷಗಳ ಬಗ್ಗೆ ವಿಚಾರವಲ್ಲ. 'ಪರಮಾತ್ಮ ಜೀವಶರೀರದಲ್ಲಿದ್ದು ಜೀವನಂತೆ ಶಾರೀರಿಕ ವಿಷಯಭೋಗಗಳನ್ನು ನಡೆಸುತ್ತಿರುವಂತೆ ಕಾಣುತ್ತಾನೆ. ಅದರಿಂದ ಅವನನ್ನು ಬದ್ಧನೆನ್ನಬೇಕೆ ಅಥವಾ ಜೀವಶರೀರದಲ್ಲಿದ್ದೂ ಜೀವನಂತೆ ಅಭಿಮಾನ ವಿಲ್ಲದವನಾದ್ದರಿಂದ ಬದ್ಧನೆನಿಸಲು ಶಕ್ಯವಿಲ್ಲದ್ದರಿಂದ ಬದ್ಧನಲ್ಲವೆನ್ನಬೇಕೆ? ಬದ್ಧನೆನ್ನುವುದಾದರೆ ಸ್ವತಃ ಜಡದೇಹವಿಲ್ಲದವನು ಹೇಗೆ ಬದ್ಧನೆನಿಸುತ್ತಾನೆ? ಎಂದು ಪ್ರಶ್ನೆ. ಬದ್ಧನೆನ್ನುವ ಪಕ್ಷದಲ್ಲಿ ಪ್ರಪಂಚಸೃಷ್ಟ್ಯಾದಿ ಕಾರ್ಯಗಳನ್ನು ಹೇಗೆ ನಡೆಸುತ್ತಾನೆ ಎಂದು ಇನ್ನೊಂದು ಪ್ರಶ್ನೆ.

ನಿತ್ಯಮುಕ್ತನಾದ ಭಗವಂತನ ಬಗ್ಗೆ ಅವನು ಬದ್ಧನೆ ಅಥವಾ ಬದ್ಧನಲ್ಲವೆ ಎನ್ನುವ ಪ್ರಶ್ನೆ ಏಕೆ ಬಂದಿತೆಂದರೆ ಉದ್ಧವ ಹೇಳುತ್ತಾನೆ. ಅದ್ವೈತದಲ್ಲಿ ಏಕಜೀವವಾದ ಮತ ಒಂದಿದೆ. ಅದೇ ಮುಖ್ಯ. ಶಕ್ತರು ಅದನ್ನೇ ಉಪಾಸನೆ ಮಾಡಬೇಕು. ಅಶಕ್ತರು ಪ್ರಾರಂಭದ ಹಂತದಲ್ಲಿ ಬಹುಜೀವವಾದಮತವನ್ನು ಉಪಾಸನೆ ಮಾಡಬೇಕೆನ್ನುತ್ತಾರೆ. ಈ ಏಕಜೀವವಾದಮತದಲ್ಲಿ ಬ್ರಹ್ಮನು ತಾನೇ ಅವಿದ್ಯೆಯಿಂದ ಜೀವನಾಗಿದ್ದಾನೆ. ಬೇರೆ ಜೀವರಿಲ್ಲ, ಬೇರೆ ಈಶ್ವರನಿಲ್ಲ.

ಲೋಕದಲ್ಲಿ ಕಾಣುವ ಎಲ್ಲ ಶರೀರಗಳಲ್ಲಿಯೂ ಈ ಒಬ್ಬ ಜೀವನೇ ಬೇರೆಬೇರೆ ಅಂಶಗಳಿಂದಿರುತ್ತಾನೆ. ಎಲ್ಲ ಶರೀರಗಳಲ್ಲಿರುವ ಮನಸುಗಳ ಎಲ್ಲ ಅನುಭವಗಳೂ ಈ ಹಿರಣ್ಯಗರ್ಭನೆಂಬ ಒಬ್ಬ ಜೀವನಿಗೇ ತಿಳಿಯುತ್ತವೆ.

ಒಂದು ಶರೀರದಲ್ಲಿರುವ ಮನಸಿನ ಭಾವನೆ ಇನ್ನೊಂದು ಶರೀರದಲ್ಲಿರುವ ಮನಸಿಗೆ ತಿಳಿಯದಿದ್ದರೂ ಎಲ್ಲ ಮನಸುಗಳ ಭಾವನೆಗಳು ಹಿರಣ್ಯಗರ್ಭನಿಗೆ ತಿಳಿಯುತ್ತವೆ. ಏಕೆಂದರೆ ಎಲ್ಲ ಶರೀರಗಳಲ್ಲಿರುವ ಚೈತನ್ಯಾಂಶಗಳೂ ಹಿರಣ್ಯಗರ್ಭನ ಸ್ವರೂಪಾಂಶಗಳು.

ಇವನು ತಾನೇ ಅನಾದಿಬದ್ಧನಾಗಿದ್ದರೂ ನಿತ್ಯಮುಕ್ತನಾದ ಸರ್ವಜ್ಞನಾದ ಒಬ್ಬ ಈಶ್ವರನನ್ನು ಕಲ್ಪಿಸಿಕೊಂಡು ಸೋಹಮುಪಾಸನೆ ಮಾಡಿ ತಾನೇ ನಿತ್ಯಮುಕ್ತನೆನಿಸು ತ್ತಾನೆ. ಹೀಗಾಗಿ ನಿತ್ಯಮುಕ್ತನೂ ನಿತ್ಯಬದ್ಧನೂ ಒಬ್ಬನೆ. ಬೇರೆ ಇಲ್ಲ.

ಈ ಮತವನ್ನಿಟ್ಟುಕೊಂಡರೆ ಅನೇಕ ಪ್ರಶ್ನೆಗಳು ಬರುತ್ತವೆ. ಈ ಹಿರಣ್ಯಗರ್ಭ ಮುಕ್ತನೆಂದರೆ ಹೇಗೆ ಮುಕ್ತ? ಎಲ್ಲ ಶರೀರಗಳಲ್ಲಿದ್ದು ಕರ್ಮಫಲವಾದ ಸುಖದುಃಖ ಗಳನ್ನು ಉಣ್ಣುತ್ತಿದ್ದಾನೆ ತಾನೆ? ಬದ್ಧನೆಂದರೆ ಹೇಗೆ ಬದ್ಧ? ಪಾರಮಾರ್ಥಿಕವಾಗಿ ಶರೀರವಿಲ್ಲದವನು ತಾನೆ? ಬದ್ಧನೆಂದರೆ ಸೃಷ್ಟ್ಯಾದಿ ವ್ಯಾಪಾರಗಳನ್ನು ಹೇಗೆ ಮಾಡುತ್ತಾನೆ, ಅಶಕ್ತನು ತಾನೆ? ಎಂದು ಉದ್ಧವನು ಕೇಳುತ್ತಾನೆ.

ಶ್ರೀಕೃಷ್ಣ ಹೇಳುತ್ತಾನೆ, ಈ ಏಕ ಜೀವವಾದಿಮತವೇ ಅಸಂಗತ. ಏಕೆಂದರೆ ಜೀವೇಶ್ವರರಲ್ಲಿ ಭೇದ ಸತ್ಯವಾಗಿಯೇ ಇದೆ. ನಿತ್ಯಮುಕ್ತನೆ ಬೇರೆ, ನಿತ್ಯಬದ್ಧನೇ ಬೇರೆ. ಒಬ್ಬನೇ ಮುಕ್ತನಾದರೆ ಬದ್ಧನಾದರೆ ಎಂದು ವಿಚಾರ ಮಾಡಲು ಅವಕಾಶವೆ ಇಲ್ಲ ಎಂದು.

ಉದ್ಧವನಿಗೆ ಏಕಜೀವವಾದಿ ಅದ್ವೈತಮತ ತಪ್ಪೆಂದು ತಿಳಿದಿದೆ. 'ವಿಲಕ್ಷಣಃ ಸ್ಥೂಲ ಸೂಕ್ಷ್ಮಾದ್ದೇಹಾದಾತ್ಮಾ' ಎಂದು ದೇಹಾತ್ಮಭೇದವನ್ನೂ, 'ನಾನಾತ್ವಮಥ ನಿತ್ಯತ್ವಂ' ಎಂದು ಜೀವಭೇದವನ್ನೂ, 'ಜೀವಸ್ತು ಗುಣಸಂಯುಕ್ತೋ ಭುಂಕ್ತೇ' ಎಂದು ಜೀವೇಶ್ವರ ಭೇದವನ್ನೂ ಶ್ರೀಕೃಷ್ಣ ಹಿಂದೆ ಹೇಳಿದ್ದಾನೆ. ಆದರೂ ಅದ್ವೈತವನ್ನು ಇನ್ನೂ ಸ್ಪಷ್ಟವಾಗಿ ಶ್ರೀಕೃಷ್ಣನೆ ನಿರಾಕರಣೆ ಮಾಡಲಿ ಎನ್ನುವ ಅಭಿಪ್ರಾಯದಿಂದ ಉದ್ಧವ ಪ್ರಶ್ನೆ ಮಾಡುತ್ತಿದ್ದಾನೆ.

ಬಹುಜೀವವಾದದಲ್ಲಿ ಜೀವೇಶ್ವರರಿಗೆ ವ್ಯಾವಹಾರಿಕ ಭೇದವಿರುವುದರಿಂದ ಮುಕ್ತನಾದರೆ ಮುಕ್ತ ಹೇಗೆ, ಬದ್ಧನಾದರೆ ಬದ್ಧ ಹೇಗೆ ಎನ್ನುವ ವಿಚಾರಕ್ಕೆ ಅವಕಾಶವಿಲ್ಲ. ಮುಂದೆ ಶ್ರೀಕೃಷ್ಣ ಜೀವೇಶ್ವರ ಭೇದವನ್ನು ಪ್ರತಿಪಾದಿಸುವ ಆವಶ್ಯಕತೆಯೂ ಇರುವುದಿಲ್ಲ. ಆದರೆ 'ನ ಮೇ ಮೋಕ್ಷೋ ನ ಬಂಧನಂ' ಎಂದು ಮುಂತಾಗಿ ಭೇದ ಸಮರ್ಥನೆ ಮಾಡುತ್ತಾನೆ. ಅದರಿಂದ ಉದ್ಧವ ಏಕಜೀವವಾದಿ ಮತವಿಟ್ಟುಕೊಂಡೇ ಪ್ರಶ್ನೆ ಮಾಡಿದ್ದಾನೆ ಎನ್ನುವುದು ಯುಕ್ತ.

'ನಿತ್ಯಮುಕ್ತೋ ನಿತ್ಯಬದ್ಧ ಏಕ ಏವೇತಿ ಮೇ ಮತಿಃ' 'ನಿತ್ಯಮುಕ್ತನೂ ನಿತ್ಯಬದ್ಧನೂ ಒಬ್ಬನೇ ಎಂದು ನನ್ನ ಅನಿಸಿಕೆ' ಎಂದು ಉದ್ಧವ ಸುಳ್ಳು ಹೇಳಿದರೂ ಅದು ತಪ್ಪಾಗುವುದಿಲ್ಲ. ಅದು ಸುಳ್ಳೆಂದು ಅವನಿಗೆ ಗೊತ್ತು. ಏಕೆ ಸುಳ್ಳು ಎಂಬುದನ್ನು

ಶ್ರೀಕೃಷ್ಣನ ಉಪದೇಶದಿಂದ ಇನ್ನಷ್ಟು ದೃಢಪಡಿಸಿಕೊಳ್ಳುವುದಕ್ಕಾಗಿ ಸುಳ್ಳು ಹೇಳುತ್ತಿದ್ದಾನೆ.

'ಗುಣೈರ್ನಬಧ್ಯತೇ ಅದೇಹೀ' ಎಂದು ಪದವಿಭಾಗ ಮಾಡಿದ್ದು ಏಕೆ ಎಂದರೆ ಹಾಗೆ ಪದವಿಭಾಗ ಮಾಡದಿರುತ್ತಿದ್ದರೆ ಉದ್ಧವನ ಪ್ರಶ್ನೆ ಶ್ರೀಕೃಷ್ಣನ ಸಮಾಧಾನ ಗಳೆರಡೂ ಅದ್ವೈತ ಪರವಾಗುತ್ತಿತ್ತು. ಅದು ಹೀಗೆ—'ದೇಹಜನ್ಯ ವಿಷಯ ಭೋಗವಿರುವಾಗ ದೇಹಿಯಾದ ಜೀವನಿಗೆ ಬಂಧವಿಲ್ಲ ಎನ್ನುವುದು ಹೇಗೆ? ದೇಹ ಉಳ್ಳವನಾದ್ದರಿಂದ ಬಂಧವಿದೆ ಎನ್ನಬಹುದಾದರೂ, ಸ್ವಭಾವತಃ ಆವರಣ ರಹಿತನಾದ ಬ್ರಹ್ಮನಿಂದ ಅಭಿನ್ನನಾದ್ದರಿಂದ ಬಂಧವಿದೆ ಎನ್ನುವುದಾದರೂ ಹೇಗೆ ಎಂದು ಉದ್ಧವನ ಪ್ರಶ್ನೆ. 'ಬದ್ಧೋ ಮುಕ್ತ ಇತಿ ವ್ಯಾಖ್ಯಾ ಗುಣತೋ ಮೇ, ನ ವಸ್ತುತಃ' ಬಂಧವಾಗಲಿ ಮೋಕ್ಷವಾಗಲಿ ಎರಡೂ ವಾಸ್ತವವಲ್ಲ. ಆರೋಪಿತ. ಅದರಿಂದ ಆರೋಪಿತವಾದ ಬಂಧವಿರುವುದರಿಂದ ಬಂಧವಿದೆ ಎನ್ನಲಡ್ಡಿಯಿಲ್ಲ' ಎಂದು ಕೃಷ್ಣನ ಉತ್ತರ' ಎಂದು. ಅದರಿಂದ 'ಅದೇಹೀ' ಎಂದು ಪದಚ್ಛೇದ ಮಾಡುತ್ತಾರೆ, ಶ್ರೀಮದಾಚಾರ್ಯರು.

'ನ ವಸ್ತುತಃ' ಎಂದು ಹೇಳಿದ ಮಾತ್ರಕ್ಕೆ 'ಆರೋಪಿತತ್ವ'ವನ್ನು ಬಂಧಕ್ಕೆ ಹೇಳಬೇಕಾಗಿಲ್ಲ. 'ಅಸ್ವಾಭಾವಿಕ' ಎಂದು ಅರ್ಥ ಹೇಳಬಹುದು. ಆದರೆ 'ನ ಮೇ ಮೋಕ್ಷೋ ನ ಬಂಧನಂ' 'ಏಕಸ್ಯೈವ ಮಮಾಂಶಸ್ಯ' ಎಂದು ಮುಂತಾಗಿ ಮತ್ತೆ ಮತ್ತೆ ಭೇದವನ್ನು ಹೇಳುತ್ತಿರುವುದು ಸ್ಪಷ್ಟ. ಅದರಿಂದ 'ಅದೇಹೀ' ಎಂದು ಪದವಿಭಾಗ ಮಾಡಿ, ಏಕಜೀವವಾದದ ವಿಮರ್ಶೆಯ ಪರವಾಗಿಯೇ ವ್ಯಾಖ್ಯಾನ ಮಾಡಿದ್ದಾರೆ ಶ್ರೀಮದಾಚಾರ್ಯರು.

ಅದೇಹೀ ಪರಮಾತ್ಮಾ ಬಧ್ಯತೇ ಚೇತ್ ಕಥಂ ಬಧ್ಯತೇ ?
ನಿತ್ಯಮುಕ್ತೋ ನಿತ್ಯಬದ್ಧ ಇತ್ಯೇಕಜೀವವಾದಿಮತಾನುಸಾರೇಣ ಚೋದಯತಿ ।

ಶಿಷ್ಯೋऽಪಿ ಪೂರ್ವಪಕ್ಷಸ್ಥಸ್ತದೇವಾತ್ಮಮತಂ ಬ್ರುವನ್ ।
ನೈವ ದುಷ್ಯತ್ಯಸತ್ಯೇನ ಸ್ಥಿರತ್ವಾರ್ಥಂ ಹಿ ತದ್ವಚಃ ॥

ಇತಿ ವಿಕ್ಷೇಪೇ ॥

ಪರಮಾತ್ಮ ಅದೇಹಿ. ಅವನು ಬದ್ಧನೆಂದರೆ ಹೇಗೆ ಬದ್ಧನೆನಿಸುತ್ತಾನೆ? ಎಂದು ಪ್ರಶ್ನೆ.

ನಿತ್ಯಮುಕ್ತನೂ ನಿತ್ಯಬದ್ಧನೂ ಒಬ್ಬನೆ ಎಂದು ನನ್ನ ಅನಿಸಿಕೆ ಎಂದು ಏಕಜೀವವಾದಿ ಮತಾನುಸಾರ ಉದ್ಧವನು ಪ್ರಶ್ನೆ ಮಾಡುತ್ತಿದ್ದಾನೆ.

ಶಿಷ್ಯನು ಪೂರ್ವಪಕ್ಷ ಮಾಡುವಾಗ ಇದು ನನ್ನ ಮತ ಎನ್ನುತ್ತ ಸುಳ್ಳಾದ ಅದ್ವೈತದ ಪಕ್ಷ ಹಿಡಿದು ಪ್ರಶ್ನೆ ಮಾಡಿದರೂ ಸುಳ್ಳು ಹೇಳಿದ ದೋಷಕ್ಕೆ ಭಾಗಿಯಾಗಲಾರ. ಏಕೆಂದರೆ, ಅವನು ಆ ರೀತಿ ಹೇಳುವುದು ಅದೇಕೆ ಸುಳ್ಳೆನ್ನುವುದನ್ನು ಸ್ಥಿರಪಡಿಸಿಕೊಳ್ಳುವ ಉದ್ದೇಶದಿಂದ ಎಂದು ವಿಕ್ಷೇಪ ಎಂಬ ಗ್ರಂಥದಲ್ಲಿದೆ.

'ನ ಮೇ ಮೋಕ್ಷೋ ನ ಬಂಧನಂ'

'ಏಕಸ್ಯೈವ ಮಮಾಂಶಸ್ಯ ಜೀವಸ್ಯೈವಂ ಮಹಾಮತೇ ।
ಬಂಧೋಽಸ್ಯಾವಿದ್ಯಯಾಽನಾದಿರ್ವಿದ್ಯಯಾ ಚ ತಥೇತರತ್ ।
ಅಥ ಬದ್ಧಸ್ಯ ಮುಕ್ತಸ್ಯ ವೈಲಕ್ಷಣ್ಯಂ ವದಾಮಿ ತೇ' ॥

ಇತ್ಯಾದಿ ಪರಿಹಾರಾತ್ ॥

'ನನಗೆ ತ್ರಿಗುಣಗಳಿಂದ ಬಂಧನವಿಲ್ಲ, ಅವುಗಳಿಂದ ಮುಕ್ತಿಯೂ ಆಗುವುದಿಲ್ಲ'. 'ನನ್ನ ಭಿನ್ನಾಂಶನಾದ ಜೀವನಿಗೇ ಅವಿದ್ಯೆಯಿಂದ ಅನಾದಿ ಬಂಧ. ವಿದ್ಯೆಯಿಂದ ಆದರಿಂದ ಮೋಕ್ಷ. ಒಂದೇ ಶರೀರದಲ್ಲಿರುವ ವಿಲಕ್ಷಣ ಸ್ವಭಾವದವರಾದ ಜೀವೇಶ್ವರರಲ್ಲಿ ಒಬ್ಬನು ನಿತ್ಯಬದ್ಧ, ಇನ್ನೊಬ್ಬನ ಇತ್ಯಮುಕ್ತ. ಅವರಲ್ಲಿರುವ ವೈಲಕ್ಷಣ್ಯವನ್ನು ನಿನಗೆ ಹೇಳುತ್ತೇನೆ' ಎಂದು ಮುಂತಾಗಿ ಭೇದವನ್ನು ಹೇಳುತ್ತಲೆ ಉದ್ಧವನ ಪ್ರಶ್ನೆಗಳಿಗೆ ಪರಿಹಾರವನ್ನು ಶ್ರೀಕೃಷ್ಣ ಹೇಳುತ್ತಿರುವುದರಿಂದ ದ್ವೈತವೇ ಇಬ್ಬರಿಗೂ ಸಮ್ಮತವಾದ ಸಿದ್ಧಾಂತ ಎನ್ನುವುದು ಸ್ಪಷ್ಟ

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್‌ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ದಶಮೋಽಧ್ಯಾಯಃ ॥

❖❖❖

ಅಧ್ಯಾಯ–೧೧

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಉದ್ಧವನ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದಾನೆ—

'ಇವನು ಬದ್ಧ ಇವನು ಮುಕ್ತ ಎನ್ನುವುದು ನನ್ನ ಅಧೀನವಾದ ತ್ರಿಗುಣ ಸಂಬಂಧದಿಂದ. ತ್ರಿಗುಣ ಸಂಬಂಧವಿದ್ದರೆ ಬದ್ಧ, ಅದು ತೊಲಗಿದರೆ ಮುಕ್ತ ಎಂದು ವ್ಯವಸ್ಥೆ. ಈ ತ್ರಿಗುಣಗಳೂ ಪ್ರಕೃತಿ ಜನ್ಯವಾಗಿರುವುದರಿಂದ ಪ್ರಕೃತಿರಹಿತನಾದ ನನಗೆ ತ್ರಿಗುಣಗಳಿಂದ ಬಂಧನವೂ ಇಲ್ಲ ಮೋಕ್ಷವೂ ಇಲ್ಲ.

ಜೀವನಿಗೆ ಕನಸಿನಲ್ಲಿ ಇದು ಕನಸೆಂಬ ಪರಿಜ್ಞಾನವಿಲ್ಲ, ಎಚ್ಚರವೆಂದು ಭ್ರಮವಿರುತ್ತದೆ. ಹಾಗೇ ಎಚ್ಚರದಲ್ಲಿ ಅವನಿಗೆ ತಾನು ಅಸ್ವತಂತ್ರ ಎಂಬ ಪರಿಜ್ಞಾನವಿಲ್ಲ, ಸ್ವತಂತ್ರನೆಂದು ಭ್ರಮವಿರುತ್ತದೆ. ಅದರಿಂದ ಅವಿದ್ಯೆಯಿಂದ ಶೋಕಮೋಹಾದಿ ರೂಪವಾದ ಸಂಸಾರ ಅವನನ್ನು ಬಂಧಿಸಿದೆ. ಅದು ಅವನಿಗೆ ಸ್ವಾಭಾವಿಕವಲ್ಲದಿದ್ದರೂ ಸತ್ಯವೆ. ಹರಿಯೇ ಸ್ವತಂತ್ರ ತಾನು ಅಸ್ವತಂತ್ರ ಎಂದು ಜ್ಞಾನ ಬಂದಾಗಲೇ ಸಂಸಾರಬಂಧನ ತೊಲಗುವುದು. ಈ ಜ್ಞಾನ ಅಜ್ಞಾನಗಳೆರಡೂ ನನ್ನ ಅಧೀನ, ನನಗೆ ಪ್ರತಿಮೆಗಳು. ಅದರಿಂದ ನನ್ನ ಶರೀರಗಳೆಂದೇ ಹೇಳುವುದುಂಟು. ನನ್ನ ಭಿನ್ನಾಂಶನಾದ ಜೀವನಿಗೇ ಅಜ್ಞಾನದಿಂದ ಬಂಧ, ಜ್ಞಾನದಿಂದ ಮೋಕ್ಷ.

ಜೀವನೇ ನಿತ್ಯಬದ್ಧ, ಈಶ್ವರನೇ ನಿತ್ಯಮುಕ್ತ ಎನ್ನಬೇಕು ಹೊರತು ಒಬ್ಬನೆ ನಿತ್ಯಬದ್ಧ ನಿತ್ಯಮುಕ್ತನಲ್ಲ. ಜೀವೇಶ್ವರರು ದೇಹವೆಂಬ ವೃಕ್ಷದಲ್ಲಿರುವ ಎರಡು ಪಕ್ಷಿಗಳು. ಜೀವಪಕ್ಷಿ ಕರ್ಮಫಲವನ್ನು ಉಣ್ಣುತ್ತದೆ, ಈಶ್ವರಪಕ್ಷಿ ಉಣ್ಣುವುದಿಲ್ಲ. ಸರ್ವಜ್ಞನಾದ ಈಶ್ವರ ಜೀವನನ್ನು ತಿಳಿಯುತ್ತಾನೆ, ಅಜ್ಞಾನದಿಂದ ಕುರುಡಾದ ಜೀವ ಈಶ್ವರನನ್ನು ತಿಳಿಯುವುದಿಲ್ಲ. ಈಶ್ವರ ಶರೀರದೊಳಗಿದ್ದೂ ಅಭಿಮಾನರಹಿತ ನಾದ್ದರಿಂದ ಅಶರೀರಿ. ಜೀವ ಕನಸು ಕಾಣುತ್ತಿರುವವನಂತೆ ದುಃಖಿ. ಈಶ್ವರ ಎಚ್ಚೆತ್ತವನಂತೆ ಸುಖಿ.

ಶಯನಾದಿ ಕ್ರಿಯೆಗಳಲ್ಲಿ ಹರಿಯೇ ಸ್ವತಂತ್ರ ತಾನು ಅಸ್ವತಂತ್ರ ಎಂದು ಜೀವ ತಿಳಿಯಬೇಕು. ಕರ್ಮಫಲದಲ್ಲಿ ವೈರಾಗ್ಯ ತಾಳಬೇಕು. ಆಗ ವಿಷಯಗಳನ್ನು ಉಣ್ಣುತ್ತಿದ್ದರೂ ಅಜ್ಞಾನಿಯಂತೆ ದುಃಖಿಯಾಗುವುದಿಲ್ಲ. ಬದ್ಧನಾಗುವುದಿಲ್ಲ. ಆಕಾಶದಂತೆ ಸೂರ್ಯಕಿರಣಗಳಂತೆ, ಗಾಳಿಯಂತೆ ಅವನು ನಿರ್ಲಿಪ್ತನಾಗುತ್ತಾನೆ. ನಿರ್ಲಿಪ್ತನಾದರೆ ಅಪರೋಕ್ಷದಿಂದ ಎಲ್ಲ ಸಂಶಯಗಳನ್ನೂ ಕಡಿದುಕೊಂಡು ಕನಸಿನಿಂದ ಎಚ್ಚೆತ್ತವನಂತೆ ಮಿಥ್ಯಾಜ್ಞಾನ ರಹಿತನಾಗಿ ಬಂಧಮುಕ್ತನಾಗುತ್ತಾನೆ, ಜೀವನ್ಮುಕ್ತನೆನಿಸುತ್ತಾನೆ.

ಜೀವನ್ಮುಕ್ತನು ದೇಹದಲ್ಲಿದ್ದೂ ದೇಹಸಂಬಂಧ ಪ್ರಯುಕ್ತ ಸುಖದುಃಖವಿಲ್ಲದವನಾಗುತ್ತಾನೆ. ಅವನ ದೇಹವನ್ನು ಯಾರೇ

ಹಿಂಸಿಸಲಿ ಪೂಜಿಸಲಿ ಎರಡನ್ನೂ ಹರೀಚ್ಛೆ ಎಂದುಕೊಂಡು ಅವನು ಅದನ್ನು ಹೊಗಳುವುದೂ ಇಲ್ಲ ತೆಗಳುವುದೂ ಇಲ್ಲ. ಹರ್ಷ ಶೋಕಗಳಿಗೊಳಗಾಗುವುದಿಲ್ಲ. ಅವನೇನು ಮಾಡಿದರೂ ತನಗಾಗಿ ಮಾಡುವುದಿಲ್ಲ. ಹರಿಪ್ರೀತಿಗಾಗಿ ಮಾಡುತ್ತಾನೆ.

ವೇದಶಾಸ್ತ್ರಗಳಲ್ಲಿ ಪಾರಂಗತನಾಗಿಯೂ ಹರಿಯನ್ನು ಆರಾಧಿಸದಿದ್ದರೆ ಅವನ ಶ್ರಮಕ್ಕೆ ದುಃಖವೇ ಫಲ. ಹಾಲು ಮಾರುವವನು ಹಾಲು ಕೊಡದ ಹಸುವನ್ನು ಕಟ್ಟಿದಂತೆ ಅವನ ಅಧ್ಯಯನ ನಿಷ್ಫಲ. ನನ್ನ ಗುಣಗಾನವಿಲ್ಲದ ಶಾಸ್ತ್ರವೂ ನಿಷ್ಫಲ. ಅದನ್ನು ಬುದ್ಧಿವಂತನು ಓದುವುದಿಲ್ಲ. ಹೀಗೆ ವಿಚಾರ ಮಾಡಿ ನೀನು ಅನ್ಯಥಾಜ್ಞಾನವನ್ನು ನೀಗಿಕೊಂಡು ನನ್ನಲ್ಲಿ ನಿರ್ಮಲವಾದ ಮನಸ್ಸಿಡು. ಮನಸು ನನ್ನಲ್ಲಿ ನಿಲ್ಲದಿದ್ದರೆ ಫಲಾಪೇಕ್ಷೆಯಿಲ್ಲದೆ ನನ್ನ ಆರಾಧನಾರೂಪವಾಗಿ ಕರ್ಮ ಮಾಡು. ನನ್ನ ಕಥಾಶ್ರವಣ ಮಾಡು. ಸಜ್ಜನರೊಡನಾಟದಿಂದ ಭಕ್ತಿಯನ್ನು ಸಂಪಾದಿಸು. ಭಕ್ತಿಯಿಂದ ನನ್ನನ್ನು ಉಪಾಸನೆ ಮಾಡುವವನು ಮುಕ್ತಿಭಾಗಿಯಾಗುವನು.

ಉದ್ಧವ ನುಡಿದ— 'ಸಜ್ಜನರ ಲಕ್ಷಣಗಳೇನು? ಅವರ ಮನಸ್ಸು ಹೇಗಿರುತ್ತದೆ? ಯಾವ ರೀತಿಯ ಭಕ್ತಿ ನಿನ್ನ ಅನುಗ್ರಹಕ್ಕೆ ಕಾರಣವಾಗುತ್ತದೆ?

ಶ್ರೀಕೃಷ್ಣ ನುಡಿದ—

ಸಜ್ಜನರು ಎಲ್ಲ ಪ್ರಾಣಿಗಳಲ್ಲಿ ದಯೆದೋರುತ್ತಾರೆ. ದ್ರೋಹ ಬಗೆಯುವುದಿಲ್ಲ. ದ್ವಂದ್ವಸಹಿಷ್ಣುಗಳು ಸತ್ಯಸಂಧರು ನಿರ್ಮಲ ಅಂತಃಕರಣವುಳ್ಳವರು. ಶತ್ರುಗಳಲ್ಲಿ ಮಿತ್ರರಲ್ಲಿ ತಕ್ಕಂತೆ ವರ್ತಿಸುವವರು. ಸಜ್ಜನರಿಗೆ ಉಪಕಾರಿಗಳು. ವಿಷಯಾಸಕ್ತಿ ರಹಿತರು ಇಂದ್ರಿಯ ನಿಗ್ರಹಉಳ್ಳವರು ಸೌಮ್ಯ ಸ್ವಭಾವದವರು ಶರೀರಶುದ್ಧಿ ಉಳ್ಳವರು ಹಣ ಕೂಡಿಡದವರು. ನಿಷಿದ್ಧಕರ್ಮ ತೊರೆವವರು ಮಿತಾಹಾರಿಗಳು ಭಗವದ್‌ಭಕ್ತರು ವೈಷ್ಣವಸಿದ್ಧಾಂತದಲ್ಲಿ ಅಚಲ ನಿಷ್ಠೆ ಉಳ್ಳವರು ನನ್ನನ್ನೇ ಮೊರೆಹೊಕ್ಕವರು ಮನನ ಮಾಡುವವರು ವಿಹಿತಕರ್ಮ ಬಿಡದವರು ಆಳವಾದ ಜ್ಞಾನಉಳ್ಳವರು ಆಪತ್ತಿನಲ್ಲಿ ಧೃತಿಗೆಡದವರು ಕಾಮಕ್ರೋಧಾದಿಗಳನ್ನು ಗೆದ್ದವರು ಅಹಂಕಾರ

ರಹಿತರು ಹಿರಿಯರಿಗೆ ಗೌರವ ನೀಡುವವರು ಗಾಯತ್ರೀ ಮಂತ್ರ ಜಪಿಸುವವರು ತಮ್ಮ ಗುಣದೋಷಗಳನ್ನು ಅರಿತುಕೊಂಡು ದೋಷಗಳನ್ನು ನೀಗಿಕೊಂಡು ಸ್ವಧರ್ಮಾಚರಣ ಮಾಡಿ ನನಗೆ ಅರ್ಪಿಸುವವರು. ನನ್ನ ಚಲಪ್ರತಿಮೆಗಳಾದ ಭಕ್ತರನ್ನು ಮುಟ್ಟಿ ಪೂಜಿಸುವವರು. ನನ್ನ ಕಥಾಶ್ರವಣ ಧ್ಯಾನ ದಾಸ್ಯ ಆತ್ಮನಿವೇದನ ಗಳನ್ನು ಮಾಡುವವರು ಯಾತ್ರೆ ವ್ರತಾಚರಣೆ ಮಾಡುವವರು ನನಗೆ ಗುಡಿ ನಿರ್ಮಿಸಿ ಪ್ರತಿಷ್ಠೆ ಮಾಡಿಸಿ ಉದ್ಯಾನವನ ಉತ್ಸವ ಮಂಟಪ ಪ್ರಾಕಾರ ಗರ್ಭಗೃಹ ನಿರ್ಮಾಣ ಮಾಡುವವರು, ಗುಡಿಯಲ್ಲಿ ಕಸ ಗುಡಿಸಿ ಗೋಮಯ ಬಳಿದು ರಂಗೋಲಿ ಹಾಕುವಲ್ಲಿ ಸೇವಕರಂತೆ ವರ್ತಿಸುವವರು ದಂಭಾಚಾರ ಬಿಟ್ಟು, ಪುಣ್ಯಕಾಯಕ ಮಾಡಿ, ಅದನ್ನು ಹೇಳಿಕೊಳ್ಳದವರು– ಇವರು ನನ್ನ ಭಕ್ತರು, ಸಜ್ಜನರು. ಲೋಕದಲ್ಲಿ ತನಗೆ ಬಲು ಇಷ್ಟವಾದುದು ಏನೇನಿದೆಯೋ ತನಗೆ ಇಷ್ಟರಾದವರು ಯಾರಾರು ಇರುವರೋ ಆ ಎಲ್ಲ ಭೋಗವಸ್ತುಗಳನ್ನೂ ಆ ಎಲ್ಲ ಬಂಧುಮಿತ್ರರನ್ನೂ ನನಗೆ ನಿವೇದಿಸುವವನು ಅನಂತಫಲ ಭಾಗಿಯಾದ ಭಕ್ತ ಸಜ್ಜನ.

ಸೂರ್ಯ ಅಗ್ನಿ ಬ್ರಾಹ್ಮಣ ಗೋವು ವಿಷ್ಣುಭಕ್ತ ಹೃದಯಾಕಾಶ ಪ್ರಾಣವಾಯು ಜಲ ಪೃಥಿವಿ ತನ್ನ ಶರೀರ ಮತ್ತು ಎಲ್ಲ ಪ್ರಾಣಿಗಳು ನನ್ನ ಪೂಜೆಗೆ ಯೋಗ್ಯವಾದ ಪ್ರತಿಮೆಗಳು. ಸೂರ್ಯನಲ್ಲಿ ವೇದ ಮಂತ್ರಗಳಿಂದ ಮತ್ತು ಗಾಯತ್ರಿಯಿಂದ ನನ್ನನ್ನು ಪೂಜಿಸಬೇಕು. ಅಗ್ನಿಯಲ್ಲಿ ಆಹುತಿಗಳಿಂದ ಪೂಜಿಸಬೇಕು. ಬ್ರಾಹ್ಮಣರಲ್ಲಿ ವಿಷ್ಣುಭಕ್ತ ರಾದ ಅತಿಥಿಗಳಲ್ಲಿ ಸತ್ಕಾರದಿಂದ, ಗೋವುಗಳಲ್ಲಿ ಹುಲ್ಲು ನೀರು ಗಳಿಂದ, ವಿಷ್ಣುಭಕ್ತರಲ್ಲಿ ಅಳಿಯನಂತೆ ಉಪಚಾರದಿಂದಲೂ ನನ್ನನ್ನು ಆರಾಧಿಸಬೇಕು. ಹೃದಯಾಕಾಶದಲ್ಲಿ ಧ್ಯಾನದಿಂದ, ಮುಖ್ಯಪ್ರಾಣ ನಲ್ಲಿ ಅವನನ್ನು ಜೀವೋತ್ತಮನೆಂದು ಸೇವಿಸುವುದರಿಂದ, ಜಲದಲ್ಲಿ ಜಲ ಗಂಧ ಪುಷ್ಪಾದಿ ಉಪಚಾರಗಳಿಂದ ನನ್ನನ್ನು ಆರಾಧಿಸಬೇಕು.

ನೆಲದಲ್ಲಿ ಚಕ್ರಾಬ್ಜಾದಿ ಮಂಡಲ ಬರೆದು ಆಯಾ ಇಷ್ಟ ಮಂತ್ರಗಳೊಂದಿಗೆ ನಮಃ ಶಬ್ದವನ್ನು ಸೇರಿಸಿ ಗಂಧಾದಿದ್ರವ್ಯಗಳಿಂದ ನನ್ನನ್ನು ಪೂಜಿಸಬೇಕು. ತನ್ನ ಶರೀರದಲ್ಲಿ ಆತ್ಮನಾಮಕನಾದ ನನ್ನನ್ನು ಅನ್ನಾದಿ ಭೋಗಗಳಿಂದ ಆರಾಧಿಸಬೇಕು. ಎಲ್ಲ ಪ್ರಾಣಿಗಳಲ್ಲಿ ಕ್ಷೇತ್ರಜ್ಞ

ನಾಮದಿಂದ ನಾನಿರುವೆನೆಂದು ಆದರಿಸಬೇಕು.

ಎಲ್ಲ ಪ್ರತಿಮೆಗಳಲ್ಲಿಯೂ ನನ್ನ ಚತುರ್ಭುಜ ಶಂಖ ಚಕ್ರ ಗದಾ ಪದ್ಮಧಾರಿ ಸೌಮ್ಯರೂಪವನ್ನು ಧ್ಯಾನಿಸಿ ಪೂಜಿಸಬೇಕು. ಯಾಗ ಯಜ್ಞ ಲೋಕೋಪಕಾರ ಕಾರ್ಯಗಳಿಂದ ನನ್ನನ್ನು ಆರಾಧಿಸಿ ಭಕ್ತಿ ಸಂಪಾದಿಸಿ ಗುರುಸೇವೆಯಿಂದ ಜ್ಞಾನ ಸಂಪಾದಿಸಬೇಕು.

❖❖❖

ಉದ್ಧವನ ಪ್ರಶ್ನೆಗಳಿಗೆ ಉತ್ತರ ನೀಡಲು ಶ್ರೀಕೃಷ್ಣ ಪ್ರಾರಂಭಿಸುತ್ತಾನೆ.

ಬದ್ಧೋ ಮುಕ್ತ ಇತಿ ಹ್ಯಾಖ್ಯಾ ಗುಣತೋ ಮೇ ನ ವಸ್ತುತಃ।
ಗುಣಸ್ಯ ಮಾಯಾಮೂಲತ್ವಾನ್ನ ಮೇ ಮೋಕ್ಷೋ ನ ಬಂಧನಮ್ ॥ ೧ ॥

'ಇವನು ಬದ್ಧ' 'ಇವನು ಮುಕ್ತ' ಎನ್ನುವುದು 'ಮೇ ಗುಣತಃ' ನನ್ನ ಅಧೀನ ವಾದ ತ್ರಿಗುಣಸಂಬಂಧದಿಂದ, ಅದು ಇದ್ದರೆ ಬದ್ಧ, ತೊಲಗಿದರೆ ಮುಕ್ತ ಎನಿಸುತ್ತಾನೆ, ~~ಹೊರತು ಸ್ವಾಭಾವಿಕವಾಗಿ ಅಲ್ಲ. ತ್ರಿಗುಣಗಳು ಪ್ರಕೃತಿಜನ್ಯವೆಂದಮೇಲೆ~~ ಪ್ರಕೃತಿರಹಿತನಾದ ನನಗೆ ತ್ರಿಗುಣಗಳಿಂದ ಬಂಧನವೂ ಇಲ್ಲ, ಮೋಕ್ಷವೂ ಇಲ್ಲ.

ಇಲ್ಲಿ 'ಬದ್ಧೋ ಮುಕ್ತ ಇತಿ ವ್ಯಾಖ್ಯಾ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ.

[1]ಇಲ್ಲಿ ಶ್ರೀಧರವ್ಯಾಖ್ಯಾನದ ರೀತಿ ಹೀಗಿದೆ—

ಹಿಂದಿನ ಅಧ್ಯಾಯದ ಕೊನೆಯಲ್ಲಿ 'ನಿತ್ಯಮುಕ್ತನೂ ನಿತ್ಯಬದ್ಧನೂ ಒಬ್ಬನೇ ಆತ್ಮ ಎಂದು ನನ್ನ ಅನಿಸಿಕೆ. ಅದು ಭ್ರಮವಿರಬಹುದು' ಎಂದು ಉದ್ಧವ ಹೇಳಿದ್ದಾನೆ. ಇದರ ಅಭಿಪ್ರಾಯ ವೀರರಾಘವ ವ್ಯಾಖ್ಯಾನದಲ್ಲಿ ಹೀಗಿದೆ— 'ಐಕ್ಯವು ಯಾವ ಪ್ರಮಾಣಕ್ಕೂ ಗೋಚರವಾಗುವುದಿಲ್ಲ. ಅದರ ವಿಷಯದಲ್ಲಿ ನನಗೆ ನಿಶ್ಚಯವಿಲ್ಲ.

---

1. ಆತ್ಮಾ ಬದ್ಧೋ ಮುಕ್ತಶ್ಚ ಮೇ ಗುಣತೋ ಮದಧೀನ ಸತ್ವಾದಿಗುಣೋಪಾಧಿತೋ ನ ತು ವಸ್ತುತಃ। ನನ್ವೌ ಪಾಧಿಕತ್ವೇಽಪಿ ತಂಡುಲ ಪಾಕಾದಿವತ್ ವಾಸ್ತವತ್ವಂ ಕಿ ನ ಸಾತ್ ತತ್ರಾಹ ಗುಣಸ್ಯ ಮಾಯಾ ಮೂಲತ್ವಾತ್ ಬಂಧನಂ ನಾಸ್ತಿ ಅತ ಏವ ಮೋಕ್ಷಶ್ಚ ನಾಸ್ತಿ। ನನು ಕಥಂ ಸರ್ವಶಾಸ್ತ್ರವಿರುದ್ಧಮುಚ್ಯತೇ ತತ್ರಾಹ ಇತಿ ಮೇ ವ್ಯಾಖ್ಯೇತಿ। ಏವಂ ಮತ್ಕೃತೋ ನಿರ್ಣಯಃ। ಅಲಮತಿಕುತರ್ಕೈರಿತ್ಯರ್ಥಃ। ಅಥವೈವಮನ್ವಯಃ। ಆತ್ಮಾ ಬದ್ಧೋ ಮುಕ್ತ ಇತಿ ಯಾ ವ್ಯಾಖ್ಯಾ ಉಕ್ತಿಃ ಸಾ ಮೇ ಗುಣತೋ ಮದ್ಗುಣಪಾರತಂತ್ರ್ಯಾತ್ । ಅತ್ರ ಹೇತುತ್ವೇನ ಗುಣನಿಯಂತರಿ ಸ್ವಸ್ಮಿಂಸ್ತದ್ವ್ಯತಿರೇಕ ಮಾಹ ಅತ ಏವ ನ ಮೇ ಬಂಧನಂ ಮೋಕ್ಷೋ ವೇತಿ। ಅನ್ಯತ್ ಸಮಾನಂ। -ಶ್ರೀಧರಃ

ಅದು ಭ್ರಮವೂ ಆಗಿರಬಹುದು' ಎಂದು. ಈ ವಿವರಣೆ ಶ್ರೀಧರವ್ಯಾಖ್ಯಾನಕ್ಕೂ ಸಂಮತವೇ ಎನ್ನಬೇಕು. ಏಕೆಂದರೆ ಅದ್ವೈತಮತದಲ್ಲಿ ಅವರ ಅದ್ವೈತ ತತ್ವವು ಯಾವ ಪ್ರಮಾಣಕ್ಕೂ ಗೋಚರವಲ್ಲ. ಪ್ರಮಾಣಗೋಚವಾದುದೆಲ್ಲ ಮಿಥ್ಯೆ. ಅದ್ವೈತವು ಪ್ರಮಾಣ ಗೋಚರವಾದರೆ ಮಿಥ್ಯೆಯಾದೀತು ಎಂದು.

ಆದರೆ, ಬದ್ಧ ಮುಕ್ತರ ಐಕ್ಯ ಪ್ರಮಾಣದಿಂದ ಸಿದ್ಧವಾಗಬಹುದು. ಅದ್ವೈತಿಗಳೇ ಹೇಳುವಂತೆ ಬಂಧ ಅವಾಸ್ತವ. ಅವಾಸ್ತವವಾದ ಬಂಧ ಮುಕ್ತಆತ್ಮನಲ್ಲಿರಬಹುದು. ಬದ್ಧಮುಕ್ತರ ಐಕ್ಯ ಹೀಗೆ ಯುಕ್ತಿಯುಕ್ತವಾಗಿದೆ ತಾನೆ?ಎಂದು ಶ್ರೀಕೃಷ್ಣ ಹೇಳಿದರೆ ಉದ್ಧವ ಹೇಳುತ್ತಾನೆ, 'ಬಂಧ ಅವಾಸ್ತವವೆನ್ನುವುದು ಸಕಲಶಾಸ್ತ್ರಗಳಿಗೆ ವಿರುದ್ಧವಾಗಿದೆ'.

ಶ್ರೀಕೃಷ್ಣನಿಗೆ ಆಗ ತುಸು ಕೋಪ ಬರುತ್ತದೆ. ಅವನು ಹೇಳುತ್ತಾನೆ, 'ಇತಿ ಮೇ ವ್ಯಾಖ್ಯಾ' 'ಇದು ನನ್ನ ನಿರ್ಣಯ. ಇದರ ಮೇಲೆ ನೀನೇನೂ ಕುರ್ತ ಮಾಡುವಂತಿಲ್ಲ'. —ಹೀಗೆ ಶ್ರೀಧರ ವ್ಯಾಖ್ಯಾನ ಹೇಳಿದೆ.

ಬಳಿಕ 'ಅಥವಾ ಹೀಗೆ ಹೇಳಬೇಕು—'ಮೇ ಗುಣತಃ' ನನ್ನ ಅಧೀನವಾದ ಗುಣಗಳಿಗೆ ಜೀವನು ಅಧೀನನಾಗಿರುವನು. ನಾನು ಅಧೀನನಲ್ಲ, ನಿಯಾಮಕನೇ ಆಗಿರುವೆನು. ಅದರಿಂದ ನನಗೆ ಬಂಧವೂ ಇಲ್ಲ, ಮೋಕ್ಷವೂ ಇಲ್ಲ. ಜೀವನಿಗೆ ಬಂಧವಿದೆ ಮೋಕ್ಷವೂ ಇದೆ ಎನ್ನುವುದು ಶಾಸ್ತ್ರದಲ್ಲಿರುವ ವಿವರಣೆ' ಎಂದು.

[2]ರಾಧಾರಮಣದಾಸ ವ್ಯಾಖ್ಯಾನವು ಇಲ್ಲಿ ಶ್ರೀಧರವ್ಯಾಖ್ಯಾನದ 'ಅಥವಾ ಹೀಗೆ ಹೇಳಬೇಕು' ಎಂಬ ಮಾತಿಗೆ ಹೀಗೆ ವಿವರಣೆ ಕೊಡುತ್ತದೆ— 'ಇತಿ ಮೇ ವ್ಯಾಖ್ಯಾ' 'ಇದು ನನ್ನ ನಿರ್ಣಯ' ಎಂದು ಶ್ರೀಕೃಷ್ಣ ನುಡಿದರೆ ಅವನು ಶಾಸ್ತ್ರಗಳನ್ನು ಅನಾದರದಿಂದ ಕಂಡಂತಾಗುವುದು. ಅದು ಶಾಸ್ತ್ರಗಳಿಗೆ ಅಪಚಾರವಾಗುವುದು. ಮತ್ತು ಶಾಸ್ತ್ರಗಳಿಗೆ ವಿರೋಧವಾದರೂ ಲೆಕ್ಕಿಸದೆ ತಾನು ನಿರ್ಣಯ ನೀಡುವ ಪ್ರಸಕ್ತಿಯೂ ಈಗ ಬಂದಿಲ್ಲ. ಕೋಪಿಸಲೂ ಅವಕಾಶವಿಲ್ಲ. ಉದ್ಧವ ಐಕ್ಯವನ್ನು ಶಾಸ್ತ್ರವಿರುದ್ಧವೆಂದು ಆಗ್ರಹದಿಂದ ವಾದಿಸಲಿಲ್ಲ. ಶಾಸ್ತ್ರದಲ್ಲಿ ಐಕ್ಯ ಸಮರ್ಥನೆ ಕಾಣುವುದಿಲ್ಲವೆಂದೂ, ಅದರ ಬಗ್ಗೆ ನಾನೇನೂ ನಿಶ್ಚಯಕ್ಕೆ ಬರಲು ಸಮರ್ಥನಲ್ಲ ಎಂದೂ ವಿನಯದಿಂದ ಹೇಳಿಕೊಳ್ಳುತ್ತಿದ್ದಾನೆ. ಅದರಿಂದ ಶ್ರೀಕೃಷ್ಣ 'ಇದು ನನ್ನ ನಿರ್ಣಯ, ಇದರ ಮೇಲೆ ನೀನು ಕುತರ್ಕ ಮಾಡುವಂತಿಲ್ಲ' ಎಂದು ಹೇಳುವುದು

---

2. ಪೂರ್ವಾರ್ಥೇ ಶಾಸ್ತ್ರಾನಾದರಃ ಇತಿವ್ಯಾಖ್ಯೇತ್ಯಸ್ಯಾಸ್ಥಾನಪತಿತತ್ವಂ ಚಾತೋಽಥವೇತಿ । ಉಕ್ತಿಃ ಶಾಸ್ತ್ರೇಷು ವರ್ಣನಂ । - ರಾಧಾರಮಣದಾಸಃ

'ಅಸ್ಥಾನ ಪತಿತ' ಅಕಾಂಡತಾಂಡವವಾಗುವುದು. ಅದರಿಂದ 'ಅಥವಾ' ಎಂದು ಇನ್ನೊಂದು ರೀತಿಯಿಂದ 'ವ್ಯಾಖ್ಯಾ' ಶಬ್ದಕ್ಕೆ ವಿವರಣೆಯನ್ನು ಶ್ರೀಧರ ವ್ಯಾಖ್ಯಾನ ನೀಡಿದೆ' ಎಂದು.

ಆದರೆ ಇದು ಬೇಕೆಂದೇ ಅಪರಾಧವೆಸಗಿ ಬಳಿಕ ತೋರಿಕೆಗೆ ಕ್ಷಮೆಯಾಚಿಸಿ ದಂತಾಯಿತು. 'ಅದ್ವೈತವು ಸಕಲಶಾಸ್ತ್ರಗಳಿಗೆ ವಿರುದ್ಧವಾದರೂ ಸತ್ಯವೇ. ಅದು ನನ್ನ ನಿರ್ಣಯ, ಅದರ ಮೇಲೆ ಕುತರ್ಕಸಲ್ಲದೆಂ'ದು ನುಡಿಯುವುದೆಂದರೆ ಅದು ಶ್ರೀಕೃಷ್ಣ ಶಾಸ್ತ್ರಗಳಿಗೆ ಮಾಡಿದ ಅಪಚಾರವಾಗುವುದು. ಶ್ರೀಕೃಷ್ಣ ಹಾಗೆ ಮಾಡುತ್ತಾನೆ ಎಂದು ಶ್ರೀಧರ ವ್ಯಾಖ್ಯಾನ ಹೇಳುವುದೆಂದರೆ ಅದು ಶ್ರೀಕೃಷ್ಣನಿಗೆ ಮಾಡಿದ ಅಪಚಾರವಾಗುವುದು. ತಮ್ಮ ಅದ್ವೈತಸಿದ್ಧಾಂತವನ್ನು ಶಾಸ್ತ್ರವಿರುದ್ಧವೆಂದು ಪರ್ಯಾಯವಾಗಿ ಒಪ್ಪಿದಂತಾಗುವುದರಿಂದ ತಮ್ಮ ಸಿದ್ಧಾಂತಕ್ಕೆ ತಾವೇ ಅಪಚಾರ ಗೈದಂತೆಯೂ ಆಗುವುದು. ಇಷ್ಟು ದೋಷಪೂರ್ಣವಾದ ವ್ಯಾಖ್ಯಾನವನ್ನು ಏಕೆ ಶ್ರೀಧರಸ್ವಾಮಿಗಳು ಮಾಡಿದರು?

[3]ಐಕ್ಯವು ಸಕಲಶಾಸ್ತ್ರಗಳಿಗೆ ವಿರುದ್ಧ ಎಂದು ಅದ್ವೈತಮತವು ಹೇಳುವುದಿಲ್ಲ. ಐಕ್ಯವು ನಿರ್ವಿಶೇಷ ಬ್ರಹ್ಮಸ್ವರೂಪ, ಸ್ವಪ್ರಕಾಶ. ಬಾಹ್ಯಪ್ರಮಾಣಗಳಿಂದ ಸಿದ್ಧವಾಗುವ ಪ್ರಮೇಯವಲ್ಲ ಎನ್ನುತ್ತದೆ. ಇದು ವೀರರಾಘವವ್ಯಾಖ್ಯಾನದಲ್ಲಿ ಸ್ಪಷ್ಟವಾಗುತ್ತದೆ.

'ಗುಣವು ಮಾಯಿಕವಾದ್ದರಿಂದ ಬಂಧಮೋಕ್ಷಗಳೆರಡೂ ವಾಸ್ತವವಲ್ಲ' ಎಂದು ಶ್ರೀಧರ ವ್ಯಾಖ್ಯಾನವು ಹೇಳುವುದೂ ಅದ್ವೈತಕ್ಕೆ ಸಮ್ಮತವಲ್ಲ. ಬಂಧವು ಅವಾಸ್ತವವಾಗಲಿ, ಮೋಕ್ಷವೇಕೆ ಅವಾಸ್ತವ? ಬಂಧಾಭಾವ ರೂಪವಾದ ಮೋಕ್ಷ ಬ್ರಹ್ಮ ಸ್ವರೂಪ, ಬ್ರಹ್ಮದಂತೆಯೇ ಸತ್ಯ, ವಾಸ್ತವ.

ಅದರಿಂದ 'ಗುಣತೋ ಮೇ ನ ವಸ್ತುತಃ' ಎಂದರೆ, ಗುಣದಿಂದ ಔಪಾಧಿಕವಾಗಿ ಬಂಧವು ಜೀವನಲ್ಲಿದೆ, 'ವಸ್ತುತಃ' ಸ್ವಾಭಾವಿಕವಾಗಿ ಇಲ್ಲ ಎಂದರ್ಥ. ಶ್ರೀಮಂತನೇ ಹೊರತು ಬಡವನಲ್ಲ, ಜಾಣನೇ ಹೊರತು ದಡ್ಡನಲ್ಲ ಎಂಬಂತೆ ಔಪಾಧಿಕವೇ ಹೊರತು ಸ್ವಾಭಾವಿಕವಲ್ಲ ಎಂದೇ ಅರ್ಥವಾಗುತ್ತದೆ. 'ಔಪಾಧಿಕವೇ ಹೊರತು ವಾಸ್ತವವಲ್ಲ' ಎಂದಲ್ಲ. ಮತ್ತು 'ವಸ್ತು' ಎಂದರೆ 'ಸದಾ ವಸತಿ' ಸದಾ ಸ್ವಾಭಾವಿಕವಾಗಿ ಇರುವುದು ಎಂದು ತಿಳಿಯುತ್ತದೆ. ಬಂಧಮೋಕ್ಷಗಳು ಸದಾ ಸ್ವಾಭಾವಿಕವಾಗಿ ಇರುವುದಿಲ್ಲ. ಎರಡೂ ಅಸ್ವಾಭಾವಿಕ.

3. ಮೇ ಭ್ರಮ ಇತ್ಯನೇನೈಕ್ಯಪ್ರಮಿತಿ ಕಾರಣಾಭಾವಾತ್ ತದಪಿ ನಿಶ್ಚೇತುಂ ನ ಪ್ರಭವಾಮೀತಿ ಸೂಚಿತಂ । -ವೀರರಾಘವಃ

ಅವಾಸ್ತವ ಎಂಬ ಅರ್ಥವಿಟ್ಟುಕೊಂಡರೆ 'ಬಂಧಮೋಕ್ಷಗಳೆರಡೂ ವಾಸ್ತವವಾಗಿ ಇಲ್ಲ' ಯಾರಿಗೆ? 'ಮೇ' ನನಗೆ ಎಂದೇಕೆ ಶ್ರೀಕೃಷ್ಣ ಹೇಳುತ್ತಾನೆ, ಜೀವನಿಗೂ ವಾಸ್ತವವಾಗಿ ಇಲ್ಲ, ಅಸ್ವಾಭಾವಿಕವೆನ್ನುವ ಪಕ್ಷದಲ್ಲಿ ಜೀವನಿಗೆ ಔಪಾಧಿಕವಾಗಿ ಬಂಧವಿದೆ; ಔಪಾಧಿಕವಾಗಿ ಅದರ ನಾಶವೂ ಇದೆ, ನನಗೆ ಶ್ರೀಕೃಷ್ಣನಿಗೆ ಔಪಾಧಿಕವಾಗಿಯೂ ಬಂಧವಿಲ್ಲ, ಅದರಿಂದ ಅದರ ನಾಶವೂ ಇಲ್ಲ ಎಂದು 'ಮೇ' ಶಬ್ದವು ಸಾರ್ಥಕವಾಗುತ್ತದೆ.

ಮೇ ಗುಣತಃ ಮದ್ವಶಸತ್ವಾದೇಃ ।
ಅಮಾಯತ್ವಾನ್ನಿರ್ಗುಣೋಽಹಂ ಬಂಧಮೋಕ್ಷೌ ನ ಚಾಪಿ ಮೇ ।
ಮದಧೀನಸ್ಯ ಜೀವಸ್ಯ ಬಂಧಮೋಕ್ಷೌ ಮದೇವ ತು ॥
ಇತಿ ಸ್ವಾಭಾವ್ಯೇ ॥

('ನನಗೆ ಬದ್ಧನೆಂದು ಮುಕ್ತನೆಂದು ಹೆಸರು ಗುಣಸಂಬಂಧದಿಂದ' ಎಂದು ಅನ್ವಯವಲ್ಲ.) ನನ್ನ ಅಧೀನವಾದ ಗುಣದ ಸಂಬಂಧದಿಂದ ನನ್ನ ಅಧೀನನಾದ ಜೀವನಿಗೆ ಬದ್ಧನೆಂದು ಮುಕ್ತನೆಂದು ಹೆಸರು ಎಂದು ಅನ್ವಯವನ್ನು ಹೇಳಬೇಕು.

ನಾನು ಮಾಯಾರಹಿತನಾದ್ದರಿಂದ ಮಾಯಾಮೂಲಕವಾದ ಗುಣಗಳಿಂದ ರಹಿತನಾಗಿದ್ದೇನೆ. ಗುಣರಹಿತನಾದ್ದರಿಂದ ಗುಣನಿಮಿತ್ತಕವಾದ ಬಂಧಮೋಕ್ಷಗಳೂ ನನಗೆ ಇಲ್ಲ, ನನ್ನ ಅಧೀನನಾದ ಜೀವನಿಗೆ ನನ್ನಿಂದಲೇ ಬಂಧ ಮೋಕ್ಷಗಳು ಇವೆ ಎಂದು ಸ್ವಾಭಾವ್ಯ ಎಂಬ ಗ್ರಂಥದಲ್ಲಿದೆ.

❖❖❖

ಅಜ್ಞಾನದಿಂದ ಜೀವನಿಗೆ ಸಂಸಾರವಿದೆ ಹೊರತು ಅದು ಅವನಿಗೆ ಸ್ವಾಭಾವಿಕವಲ್ಲ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಶೋಕಮೋಹೌ ಸುಖಂ ದುಃಖಂ ದೇಹಾಪತ್ತಿಶ್ಚ ಮಾಯಯಾ ।
ಸ್ವಪ್ನೇ ಯಥಾತ್ಮನಃ ಖ್ಯಾತಿಃ ಸಂಸೃತಿರ್ನತು ವಾಸ್ತವೀ ॥ ೨ ॥

ಜೀವನಿಗೆ ಕನಸಿನಲ್ಲಿ ಇದು ಕನಸೆಂದು ಪರಿಜ್ಞಾನವಿಲ್ಲ, ಜಾಗರವೆಂದು ಭ್ರಮಿಸುತ್ತಾನೆ. ಅದರಿಂದ ಸುಖದುಃಖಾನುಭವ ಉಂಟಾಗುವುದು. ಹಾಗೇ ಎಚ್ಚರದಲ್ಲಿ ಅವನಿಗೆ ತಾನು ಅಸ್ವತಂತ್ರನೆಂಬ ಪರಿಜ್ಞಾನವಿಲ್ಲ, ಅದರಿಂದ ಅವಿದ್ಯೆಯಿಂದ ಶೋಕಮೋಹ ಸುಖದುಃಖ ದೇಹೋತ್ಪತ್ತಿರೂಪವಾದ ಸಂಸಾರ ಉಂಟಾಗುವುದು ಹೊರತು 'ವಾಸ್ತವ'ವಾಗಿ ಅಂದರೆ ಸ್ವಾಭಾವಿಕವಾಗಿ ಸಂಸಾರ ಜೀವನಲ್ಲಿಲ್ಲ. ಹರಿಯೆ

ಸ್ವತಂತ್ರ, ತಾನು ಅಸ್ವತಂತ್ರ ಎಂಬ ಜ್ಞಾನ ಬಂದಾಗ ಅಸ್ವಾಭಾವಿಕವಾದರೂ ಸತ್ಯವೇ ಆಗಿರುವ ಈ ಸಂಸಾರ ತೊಲಗುವುದು.

[1] 'ಅಂತಃಕರಣದಲ್ಲಿ ತನ್ನದೆನ್ನುವ ಅಭಿಮಾನವಿರುವುದರಿಂದ, ಅದರಲ್ಲಿ ಮಾಯೆಯಿಂದ ಸೃಷ್ಟವಾದ ಶೋಕ ಮೋಹಾದಿಗಳು ಸತ್ಯವಾದರೂ, ಅವುಗಳ ಸಂಬಂಧ ಆತ್ಮನಲ್ಲಿ ಅವಿದ್ಯೆಯಿಂದ ಕಲ್ಪಿತವಾಗಿದ್ದು ಮಿಥ್ಯೆಯಾಗಿದೆ ಎಂದು ವಿಶ್ವನಾಥ ವ್ಯಾಖ್ಯಾನ ಹೇಳಿದೆ.

ಆದರೆ ಅತಃಕರಣವನ್ನು ಅಜ್ಞಾನದಿಂದ ತನ್ನದೆಂದು ಕಲ್ಪಿಸಿಕೊಂಡ ಪ್ರಯುಕ್ತ ಅದರಲ್ಲಿ ಉಂಟಾಗುವ ಶೋಕಮೋಹಾದಿಗಳನ್ನು ಪುನಃ ತನ್ನದೆಂದು ಸಂಬಂಧವನ್ನು ಕಲ್ಪಿಸಿಕೊಳ್ಳುವುದಿಲ್ಲ. ತನ್ನದೆಂಬಂತೆ ಕಂಡು ಉಚ್ಚತ್ವ ನೀಚತ್ವರೂಪವಾದ ಕಿಂಚಿದ್ ವಿಕಾರವನ್ನು ಆತ್ಮಸ್ವರೂಪದಲ್ಲಿ ಪಡೆಯತ್ತಾನೆ. ಇದೇ ಅಂತಃಕರಣಗತ ಸುಖಾದಿಗಳ ಅನುಭವ. ಇದು ಮಿಥ್ಯೆಯಲ್ಲ. ಆದರೂ ಅಂತಃಕರಣವು ಪರಮಾತ್ಮನ ಅಧೀನ ಹೊರತು ನನ್ನ ಅಧೀನವಲ್ಲ ನನ್ನ ಸೊತ್ತು ಅಲ್ಲ ಎನ್ನುವ ಜ್ಞಾನವಿಲ್ಲದ ಪ್ರಯುಕ್ತ ಆ ~~ಅಂತಃಕರಣದಲ್ಲಿ ಮೂಡುವ ಶೋಕಾದಿಗಳಿಂದ ಆತ್ಮನಲ್ಲಿ ವಿಕಾರ ಬಂದ ಕಾರಣ~~ ಅಸ್ವಾಭಾವಿಕ ಎನ್ನಬೇಕು. ಇದಕ್ಕೆ ಉದಾಹರಣೆ ಮಕ್ಕಳ ಮೇಲಿನ ಮೋಹದಿಂದ ಮಕ್ಕಳ ನೋವು ನಲಿವುಗಳನ್ನು ತಂದೆತಾಯಿಗಳು ತಮ್ಮವೆಂದು ಕಲ್ಪಿಸಿಕೊಳ್ಳುವುದಿಲ್ಲ, ತಮಗೇ ನೋವು ನಲಿವು ಉಂಟಾದರೆ ಯಾವರೀತಿ ಕುಗ್ಗುವುದು ಹಿಗ್ಗುವುದು ತಮ್ಮಲ್ಲಿ ಉಂಟಾಗುವುದೋ ಅದೇರೀತಿ ಮಕ್ಕಳ ನೋವು ನಲಿವುಗಳನ್ನು ಕಂಡು ಕುಗ್ಗುತ್ತಾರೆ, ಹಿಗ್ಗುತ್ತಾರೆ. ಈ ಮಕ್ಕಳ ನೋವು ನಲಿವುಗಳೂ ಅವುಗಳಿಂದ ತಂದೆತಾಯಿಗಳಲ್ಲಿ ಉಂಟಾಗುವ ಕುಗ್ಗು ಹಿಗ್ಗುಗಳೂ ಮಿಥ್ಯೆಯಲ್ಲ, ಸತ್ಯವೆ. ಆದರೆ ಅಸ್ವಾಭಾವಿಕವಾಗಿ ಮೋಹದಿಂದ ಉಂಟಾಗಿರುತ್ತವೆ. ಜಾಗರದಲ್ಲಿ ಹೀಗೆ ಆತ್ಮನಲ್ಲಿ ಅಸ್ವಾಭಾವಿಕವಾದ ಕುಗ್ಗುಹಿಗ್ಗುಗಳುಂಟಾಗುವುದು ಕಂಡಬರುತ್ತದೆ. ಸ್ವಪ್ನದಲ್ಲಿಯೂ ಹೀಗೇ ಸ್ವಾಪ್ನಪದಾರ್ಥಗಳಲ್ಲಿ 'ಅವು ಸ್ವಾಪ್ನಪದಾರ್ಥಗಳು, ಪರಮಾತ್ಮ ಸೃಷ್ಟಿ ಮಾಡಿ ತೋರಿಸುತ್ತಿದ್ದಾನಷ್ಟೆ' ಎನ್ನುವ ಜ್ಞಾನವಿಲ್ಲದಿರುವುದರಿಂದ ಆತ್ಮನಲ್ಲಿ ಅದೇ ರೀತಿಯ ಕುಗ್ಗು ಹಿಗ್ಗುಗಳನ್ನು ಉಂಟುಮಾಡುತ್ತವೆ. ಅವು ಮಿಥ್ಯೆಯಲ್ಲ ಲೋಕಸಂಹಿತಾ ವಚನದಿಂದ ಈ ಪ್ರಮೇಯ ಪ್ರಾಮಾಣಿಕವೆಂದು ಸಿದ್ಧವಾಗಿದೆ.

---

1. ಮಾಯಿಕೋಪಾಧಾವಂತಃಕರಣೇ ಸೂಕ್ಷ್ಮದೇಹೇ ಜೀವಸ್ಯ ಅಭಿಮಾನಾದೇವ ತದೀಯ ಧರ್ಮಾಣಾಂ ಶೋಕಮೋಹಾದೀನಾಮಪಿ ಸ್ವೀಯತ್ವೇನ ಗ್ರಹಣಮಿತ್ಯರ್ಥಃ । ಶೋಕಮೋಹಾದೀನಾಂ ಮಾಯಾಸೃಷ್ಟತ್ವೇನ ಸತ್ಯತ್ವೇಽಪಿ ತತ್‌ಸಂಬಂಧಸ್ಯ ಜೀವೇ ಅವಿದ್ಯಾಕಲ್ಪಿತತ್ವಾನ್ಮಿಥ್ಯಾತ್ವಮಿತ್ಯರ್ಥಃ। -ವಿಶ್ವನಾಥಃ

ಸ್ವಪ್ನೋಽಯಮಿತ್ಯವಿಜ್ಞಾನಾತ್ ಸ್ವಾಪ್ನದುಃಖಮುಪಾಶ್ನುತೇ ।
ನಿಜಸ್ವರೂಪಾನುಭವರಾಹಿತ್ಯಾತ್ ತದ್ವದೇವ ತು ।
ಜಾಗ್ರದ್‌ದುಃಖಮಪಿ ಪ್ರೋಕ್ತಂ ವಿಷ್ಣುತತ್ವಂ ನಪಶ್ಯತಃ ।
ತಸ್ಮಾತ್ ತದಸ್ವಭಾವತ್ವಾತ್ ಸದಪ್ಯೇತದವಾಸ್ತವಂ॥
ಇತಿ ಲೋಕಸಂಹಿತಾಯಾಂ ॥

ಕನಸನ್ನು ಕನಸೆಂದು ತಿಳಿಯದ ಕಾರಣ ಕನಸಿನಿಂದ ದುಃಖವನ್ನು ಅನುಭವಿಸುವಂತೆ ಪರಮಾತ್ಮತತ್ವವನ್ನು ಅವನ ಸ್ವಾತಂತ್ರ್ಯವನ್ನು ಅರಿಯದವನು ತನ್ನ ಸ್ವರೂಪದ ಯಥಾರ್ಥ ಜ್ಞಾನವಿಲ್ಲದ ಕಾರಣ ಜಾಗರದ ದುಃಖವನ್ನು ಅನುಭವಿಸುತ್ತಾನೆ. ಈ ದುಃಖ ಆತ್ಮನ ಸ್ವಭಾವವಲ್ಲದ್ದರಿಂದ, ಸತ್ಯವಾದರೂ ಅವಾಸ್ತವವೆನಿಸುತ್ತದೆ ಎಂದು ಲೋಕಸಂಹಿತೆಯಲ್ಲಿ ಹೇಳಿದೆ.

❖❖❖

ಪರಮಾತ್ಮನ ಅಧೀನವಾಗಿರುವ ಅವಿದ್ಯೆ ಬಂಧಕ, ವಿದ್ಯೆ ಮೋಚಕ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ವಿದ್ಯಾವಿದ್ಯೇ ಮಮ ತನೂ ವಿದ್ಧ್ಯುದ್ಧವ ಶರೀರಿಣಾಮ್ ।
ಮೋಕ್ಷಬಂಧಕರೀ ಆದ್ಯೇ ಮಾಯಯಾ ಮೇ ವಿನಿರ್ಮಿತೇ ॥ ೩ ॥

ಉದ್ಧವ, ಶರೀರಿಗಳಿಗೆ ಜ್ಞಾನಅಜ್ಞಾನಗಳು ಆದಿಕಾಲದಿಂದ, ಅಂದರೆ ಅನಾದಿಯಾಗಿ ಇರುವವುಗಳು. ನನ್ನಿಚ್ಛೆಯಿಂದ ಜ್ಞಾನವು ಮೋಕ್ಷಕ್ಕೂ ಅಜ್ಞಾನವು ಬಂಧಕ್ಕೂ ಕಾರಣವಾಗುವುದು. ನನಗೆ ಪ್ರತಿಮೆಯಂತಿರುವುದರಿಂದ ಈ ಜ್ಞಾನ ಅಜ್ಞಾನಗಳು ಅವುಗಳ ಅಭಿಮಾನಿ ಲಕ್ಷ್ಮೀರೂಪಗಳು ನನ್ನ ಶರೀರಗಳೆಂದು ಕರೆಸಿಕೊಳ್ಳುವುವು.

ಜಡದೇಹ ರಹಿತನಾದ ಹರಿಗೆ ಜಡವಾದ ವಿದ್ಯೆ ಅವಿದ್ಯೆಗಳು ಶರೀರವೆನಿಸುವುದು ಹೇಗೆ? ಜಡಕ್ಕಿಂತ ಚೇತನಕ್ಕೇ ಹೆಚ್ಚು ಶಕ್ತಿ. ಆದರೂ ಜಡವಾದ ವಿದ್ಯೆ ಅವಿದ್ಯೆಗಳು ಚೇತನರಿಗೆ ಮೋಕ್ಷ ಬಂಧಗಳನ್ನು ಉಂಟುಮಾಡುವುದು ಹೇಗೆ ಸಾಧ್ಯ? ಬಹುಜನ್ಮಗಳ ಸಾಧನೆಯಿಂದ ಬರುವ ವಿದ್ಯೆ ಅನಾದಿ ಹೇಗೆ? ಅನಾದಿಯಾದ ಬಂಧವನ್ನು ಹೇಗೆ ಕಳೆಯುತ್ತದೆ? ಇತ್ಯಾದಿ ಪ್ರಶ್ನೆಗಳು ಇಲ್ಲಿ ಉದ್ಭವಿಸುತ್ತವೆ. ಇದನ್ನು ಬೇರೆ ವ್ಯಾಖ್ಯಾನಕಾರರು ಯಾರೂ ಗಮನಿಸುವುದಿಲ್ಲ, ಶ್ರೀಮದಾಚಾರ್ಯರು ಎಲ್ಲ ಪ್ರಶ್ನೆಗಳಿಗೂ ಸಮಾಧಾನ ನೀಡುತ್ತಾರೆ.

ವಿದ್ಯಾವಿದ್ಯೇ ಮಮ ತನೂ ಪ್ರತಿಮಾವತ್ ಸದೋದಿತೇ ।
ಸದಾ ತದ್ವ್ಯತಿರಿಕ್ತಸ್ಯ ನಿತ್ಯಜ್ಞಾನ ಸುಖಾತ್ಮನಃ ।
ಮದಿಚ್ಛಾವಶಗೇ ನಿತ್ಯಮವಿದ್ಯಾನಿರ್ಮಿತಾ ಗುಣಾಃ ।
ಸತ್ವಾದ್ಯಾ ಮದಧೀನತ್ವಾದವಿದ್ಯಾಯಾ ನ ಮೇ ಗುಣಾಃ ।
ಅವಿದ್ಯಾ ಚೈವ ವಿದ್ಯಾ ಚ ಗುಣಾಃ ಸತ್ವಾದಿಕಾ ಅಪಿ ।
ದೇಹೋತ್ಪತ್ತಿಃ ಸುಖಂ ದುಃಖಂ ಸರ್ವಮೇತನ್ಮದಿಚ್ಛಯಾ ।
ಅತೋಽಹಂ ಬಂಧಮೋಕ್ಷಾಭ್ಯಾಂ ರಹಿತೋ ನಿತ್ಯಮೇವ ತು ।
ಮುಕ್ತಶಬ್ದೋದಿತೋ ಬಂಧರಾಹಿತ್ಯಾನ್ನ ವಿಮೋಕ್ಷತಃ ॥

ಇತಿ ಕಾಲಸಂಹಿತಾಯಾಂ ॥

ಶ್ರೀಸ್ತು ವಿದ್ಯಾ ಸಮುದ್ದಿಷ್ಟಾ ದುರ್ಗಾಽವಿದ್ಯಾ ಪ್ರಕೀರ್ತಿತಾ ।
ತೇ ತ್ವನಾದೀ ಹರೇರಿಚ್ಛಾನಿಯತೇ ಸರ್ವದೈವ ತು ॥

ಇತಿ ಮಾಯಾವೈಭವೇ ॥

ವಿದ್ಯೆ ಅವಿದ್ಯೆಗಳು ನನಗೆ ಪ್ರತಿಮೆಯಂತಿರುವುದರಿಂದ ಶರೀರಗಳೆನಿಸಿವೆ. ನಾನು ನಿತ್ಯಜ್ಞಾನ ಸುಖ ಸ್ವರೂಪಿ. ನನಗಿಂತ ಅವು ಬೇರೆಯೇ ಆಗ್ಗಿದ್ದು ನನ್ನ ಇಚ್ಛೆಗೆ ಸದಾ ಅಧೀನವಾಗಿವೆ. ಅವಿದ್ಯೆಯಿಂದಾಗಿರುವ ಸತ್ವಾದಿ ಗುಣಗಳು ನನಗೆ ಬಂಧಕವಾಗುವುದಿಲ್ಲ. ಏಕೆಂದರೆ ಅವಿದ್ಯೆ ನನ್ನ ಅಧೀನವಾಗಿದೆ. ಅವಿದ್ಯೆ ವಿದ್ಯೆ ಸತ್ವಾದಿ ಗುಣಗಳು ದೇಹೋತ್ಪತ್ತಿ ಸುಖದುಃಖ ಇವೆಲ್ಲವೂ ನನ್ನಿಚ್ಛೆಯಿಂದಲೇ ಇವೆ. ಅದರಿಂದ ನಾನು ಸದಾ ಬಂಧ ಮೋಕ್ಷ ರಹಿತನಾಗಿದ್ದೇನೆ. ನಾನು ಮುಕ್ತನೆನಿಸುವುದು ಬಂಧರಹಿತನಾದ್ದರಿಂದ ಹೊರತು ಬಂಧನಾಶದಿಂದಲ್ಲ. ಎಂದು ಕಾಲಸಂಹಿತೆಯಲ್ಲಿ ಹೇಳಿದೆ.

ಶ್ರೀದೇವಿ ವಿದ್ಯಾಭಿಮಾನಿನಿ. ದುರ್ಗೆ ಅವಿದ್ಯಾಭಿಮಾನಿನಿ. ಅವರು ಸದಾ ಹರೀಚ್ಛೆಯಂತೆಯೇ ನಡೆದುಕೊಳ್ಳುವವರು ಜಡ ವಿದ್ಯಾವಿದ್ಯೆಗಳ ಮೂಲಕ ಚೇತನರಿಗೆ ಮೋಕ್ಷ ಬಂಧಗಳನ್ನುಂಟುಮಾಡುತ್ತಾರೆ ಎಂದು ಮಾಯಾವೈಭವದಲ್ಲಿ ಹೇಳಿದೆ.

ವಿದ್ಯೆ ಅನಾದಿಯಲ್ಲದಿದ್ದರೂ ಅದರ ಅಭಿಮಾನಿನಿ ಶ್ರೀದೇವಿ ಅನಾದಿಯಾದ್ದರಿಂದ ಅದನ್ನು ಅನಾದಿ ಎಂದು ಗೌಣವಾಗಿ ವ್ಯವಹರಿಸುತ್ತಾರೆ.

❖❖❖

ನನ್ನ ಭಿನ್ನಾಂಶನಾದ ಜೀವನಿಗೆ ಮಾತ್ರ ಬಂಧ ಮೋಕ್ಷಗಳು ಹೊರತು ನನಗೆ ಅವು ಇಲ್ಲ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಏಕಸ್ಯೈವ ಮಮಾಂಶಸ್ಯ ಜೀವಸ್ಯೈವಂ ಮಹಾಮತೇ ।
ಬಂಧೋಽಸ್ಯಾವಿದ್ಯಯಾಽನಾದಿರ್ವಿದ್ಯಯಾ ಚ ತಥೇತರತ್ ॥ ೪ ॥

ಮಹಾಬುದ್ಧಿಶಾಲಿಯಾದ ಉದ್ಧವನೆ, ಜೀವ ಈಶ್ವರರೊಳಗೆ ಒಬ್ಬನಾದ ಜೀವ ನನ್ನ ಭಿನ್ನಾಂಶ. ಅವನಿಗೇ ಅಜ್ಞಾನದಿಂದ ಅನಾದಿಬಂಧವಿದೆ. ಜ್ಞಾನದಿಂದ ಅವನಿಗೇ ಮೋಕ್ಷ ಬರುತ್ತದೆ.

[1]ಇಲ್ಲಿ ಶ್ರೀಧರ ವ್ಯಾಖ್ಯಾನ ಹೀಗೆ ಹೇಳಿದೆ. 'ಶರೀರಿಣಾಂ ಮೋಕ್ಷ ಬಂಧಕರೀ' 'ವಿದ್ಯೆ ಅವಿದ್ಯೆಗಳು ಶರೀರಿಗಳಿಗೆ ಮೋಕ್ಷಬಂಧ ಕಾರಣಗಳು' ಎಂದು ಹಿಂದಿನ ಶ್ಲೋಕದಲ್ಲಿ 'ಶರೀರಿಗಳಿಗೆ' ಎಂದು ಬಹುವಚನದಿಂದ, ಶರೀರಿಗಳಲ್ಲಿ ಕೆಲವರಿಗೆ ಬಂಧ, ಕೆಲವರಿಗೆ ಮೋಕ್ಷ ಎಂದು ವ್ಯವಸ್ಥೆ ಹೇಳಿದೆ ಎಂಬ ಭ್ರಾಂತಿಗೆ ಅವಕಾಶವಿರುವ ಕಾರಣ ಈ ಶ್ಲೋಕದಲ್ಲಿ 'ಏಕಸ್ಯ ಜೀವಸ್ಯ' 'ಪ್ರತಿಯೊಬ್ಬ ಜೀವನಿಗೂ ಬಂಧಮೋಕ್ಷಗಳು' ಎಂದಿದೆ. 'ಜೀವಪರಮಾತ್ಮರಿಗೆ ಐಕ್ಯವಿರುವುದರಿಂದ ನಿನಗೂ ಬಂಧಮೋಕ್ಷಗಳಿವೆಯೇ? ಎಂದರೆ, ಶ್ರೀಕೃಷ್ಣ ಹೇಳುತ್ತಾನೆ, 'ಇಲ್ಲ, ಜೀವನಿಗೆ ಮಾತ್ರ ಇವೆ, 'ಜೀವಸ್ಯೈವ' 'ಐಕ್ಯವಿರುವಾಗ ಇದು ಹೇಗೆ ಕೂಡುತ್ತದೆ' ಎಂದರೆ, 'ಮಮಾಂಶಸ್ಯ' ಜೀವನು ನನ್ನ ಅಂಶ, ಪ್ರತಿಬಿಂಬ. ನಾನು ಬಿಂಬ. ಅವಿದ್ಯೆ ಉಪಾಧಿ. ಉಪಾಧಿಯು ಪ್ರತಿಬಿಂಬದಲ್ಲಿಯೇ ದೋಷವನ್ನುಂಟು ಮಾಡುತ್ತದೆ. ಅದರಿಂದ ಪ್ರತಿಬಿಂಬನಾದ ಜೀವನಲ್ಲಿಯೇ ಬಂಧ ಮೋಕ್ಷಗಳು. ಈ ಪ್ರಮೇಯ ಪರಮರಹಸ್ಯ. 'ಮಹಾಮತೇ' ಉದ್ಧವ, ನೀನು ಮಹಾಬುದ್ಧಿಶಾಲಿ. ನಿನ್ನ ಸ್ವಂತ ಬುದ್ಧಿಯಿಂದ ವಿಚಾರಮಾಡಿ ಈ ಪ್ರಮೇಯವನ್ನು ನಿಶ್ಚಯಿಸಿಕೊಳ್ಳು' ಎನ್ನುತ್ತಾನೆ ಶ್ರೀಕೃಷ್ಣ.

ಇಲ್ಲಿ ಬಂಧ ಮೋಕ್ಷಗಳು ಬೇರೆಬೇರೆ ವ್ಯಕ್ತಿಗಳಲ್ಲಿ ಇರಬಹುದೆಂಬ ಭ್ರಾಂತಿ

1. ತತ್ರ ಶರೀರಿಣಾಮಿತಿ ಬಹುವಚನ ನಿರ್ದೇಶಾತ್ ವಿಷಯಭೇದೇನಾವಿರೋಧ ಉಕ್ತ ಇತಿ ಭ್ರಾಂತಿಂ ವ್ಯಾವರ್ತಯನ್ ಬಂಧಮೋಕ್ಷ ವ್ಯವಸ್ಥಾಮುಪಪಾದಯತಿ ಏಕಸ್ಯೈವೇತಿ । ತರ್ಹಿ ಕಿಮಾತ್ಮಾಭೇದಾತ್ ತವಾಪಿ ಬಂಧೋ ನಹೀತ್ಯಾಹ ಅಸ್ಯ ಜೀವಸ್ಯೈವೇತಿ । ನನ್ವಾತ್ಮಾಭೇದೇ ಜೀವೋ ನಾಮ ಕೋಽನ್ಯೋಽಸ್ತಿ ಪೃಥಕ್ ಕಥಂ ಚ ಬಂಧ ಮೋಕ್ಷ ಸುಖ ದುಃಖಾದಿ ವ್ಯವಸ್ಥಾ ತತ್ರಾಹ ಮದಂಶಸ್ಯ ಜೀವಸ್ಯೈವ ತತ್ಕೃತೋ ಬಂಧಃ ಇತಿ । ಏತಚ್ಚಾತಿರಹಸ್ಯಂ ಸ್ವಬುದ್ಧ್ಯಾ ನಿಶ್ಚೇತವ್ಯಮಿತಿ ಸಂಬೋಧಯತಿ ಹೇ ಮಹಾಮತೇ । -ಶ್ರೀಧರಸ್ವಾಮೀ

ಅಸಂಭಾವಿತ. ಬಂಧ ಮತ್ತು ಬಂಧಧ್ವಂಸರೂಪವಾದ ಮೋಕ್ಷಗಳು ಒಂದೇ ಕಡೆ ಇರಬೇಕು. ಅದರಿಂದ 'ಏಕಸ್ಯೈವ' ಎಂದು ಶ್ಲೋಕದಲ್ಲಿ ಹೇಳಿದ್ದು ವ್ಯರ್ಥ. 'ಜೀವಸ್ಯೈವ' ಎನ್ನುವುದು ವಿರುದ್ಧಾರ್ಥ ಕೊಡುತ್ತದೆ. ಅದ್ವೈತಕ್ಕೆ ವಿರುದ್ಧವಾಗಿ ಜೀವಪರಮಾತ್ಮರಿಗೆ ಭೇದವನ್ನೇ ಹೇಳುತ್ತದೆ.

'ಮಮಾಂಶಸ್ಯ' ಎನ್ನುವುದೂ ಕೂಡ 'ನನ್ನ ಪ್ರತಿಬಿಂಬ ಜೀವ' ಎನ್ನುವ ಅರ್ಥವನ್ನು ಕೊಡುವುದಿಲ್ಲ, ನನ್ನ ಒಂದು ಭಾಗ, ಅವಯವ ಎಂದು ಅರ್ಥ ಕೊಡುತ್ತದೆ.

ಪ್ರತಿಬಿಂಬ ಎಂದು ಅರ್ಥವನ್ನಿಟ್ಟುಕೊಂಡರೂ ಬಿಂಬ ಪ್ರತಿಬಿಂಬಗಳಿಗೆ ಅಭೇದ ಲೋಕವಿರುದ್ಧ. ಎಲ್ಲೂ ಕಂಡಿಲ್ಲ. ಕನ್ನಡಿಯಲ್ಲಿರುವ ಪ್ರತಿಬಿಂಬ ಬಿಂಬಕ್ಕಿಂತ ವಿಲಕ್ಷಣ. ಬಿಂಬ ಪೂರ್ವಾಭಿಮುಖವಾಗಿದ್ದರೆ ಪ್ರತಿಬಿಂಬ ಅದಕ್ಕೆ ವಿರುದ್ಧವಾಗಿ ಪಶ್ಚಿಮಾಭಿಮುಖವಿರುತ್ತದೆ. ಪ್ರತಿಬಿಂಬ ಕನ್ನಡಿಯಲ್ಲಿರುತ್ತದೆ, ಬಿಂಬ ಹೊರಗಿರುತ್ತದೆ. ಬಿಂಬಕ್ಕೆ ಏಟು ತಗುಲಿ ನೋವಾದರೂ ಪ್ರತಿಬಿಂಬಕ್ಕೆ ಆಗುವುದಿಲ್ಲ. ಆದರೂ ಬಿಂಬ ಪ್ರತಿಬಿಂಬಗಳು ಒಂದೇ ಹೇಗೆ? 'ಒಂದೇ' ಎನ್ನುತ್ತಲೇ 'ಪ್ರತಿಬಿಂಬಕ್ಕೇ ಬಂಧಮೋಕ್ಷಗಳು, ಬಿಂಬಕ್ಕೆ ಅವು ಇಲ್ಲ' ಎಂದು ವೈಲಕ್ಷಣ್ಯವನ್ನೂ ಹೇಳುತ್ತಾರೆ.

ಸರ್ವಪ್ರಮಾಣವಿರುದ್ಧವಾಗಿದ್ದು ಅವೇದ್ಯವೆಂದು ಅವರೇ ಹೇಳಿರುವ ಈ ಐಕ್ಯವನ್ನು ಅತಿರಹಸ್ಯ ಎನ್ನುವುದು, ಮಹಾಬುದ್ಧಿಶಾಲಿಯಾದ ಉದ್ಧವ ತಾನೇ ಸ್ವಬುದ್ಧಿಯಿಂದ ವಿಚಾರ ಮಾಡಿ ನಿಶ್ಚಯಿಸಿಕೊಳ್ಳಬೇಕು, ಶಬ್ದದಿಂದ ಹೇಳಲಾಗದು ಎನ್ನುವುದು ಆಶ್ಚರ್ಯವೇ ಸರಿ.

ಭಿನ್ನಾಂಶಸ್ಯೈವ ಜೀವಸ್ಯ ಬಂಧಮೋಕ್ಷೌ ನ ಮೇ ಕ್ವಚಿತ್ ।
ಅಭಿನ್ನಾಂಶಾಸ್ತು ಮತ್ಸ್ಯಾದ್ಯಾಸ್ತೇಜಸಃ ಕಾಲವಹ್ನಿವತ್ ।
ಜೀವಾ ಭಿನ್ನಾಂಶಕಾಸ್ತತ್ರ ತೇಜಸಃ ಪ್ರತಿಬಿಂಬವತ್ ।

ಇತಿ ವೈಲಕ್ಷಣ್ಯೇ ।

ನನ್ನ ಭಿನ್ನಾಂಶನಾದ ಜೀವನಿಗೇ ಬಂಧಮೋಕ್ಷಗಳು, ಹೊರತು ನನಗೆ ಎಂದೂ ಅವು ಇಲ್ಲ, ನನ್ನ ಅಭಿನ್ನಾಂಶಗಳು ಮತ್ಸ್ಯಾದಿ ಅವತಾರಗಳು, ಅಗ್ನಿದೇವನಿಗೆ ಕಾಲಾಗ್ನಿದೇವನು ಅಭಿನ್ನಾಂಶವಾಗಿರುವಂತೆ, ಆದರೆ, ಸೂರ್ಯನಿಗೆ ನೀರಲ್ಲಿ ಬೀಳುವ ಪ್ರತಿಬಿಂಬದಂತೆ ಮಿಂಚಿನ ಹುಳದಂತೆ ನನಗೆ ಜೀವರು ಭಿನ್ನಾಂಶರು ಎಂದು ವೈಲಕ್ಷಣ್ಯ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

ಮುಕ್ತಸ್ಯ ತು ನ ಮೇ ಮೋಕ್ಷೋ ಬಂಧಾಭಾವಾತ್ ಕಥಂಚನ ।
ಮುಕ್ತ ಇತ್ಯಪಿ ನಾಮೈತದ್ ದೀಪ್ಯತೇಽಸೌ ದಿವಾಕರಃ ।
ಇತಿವದ್ ಬಂಧರಾಹಿತ್ಯಾನ್ನ ತು ವೃಕ್ಷಾದಿದೀಪ್ತಿವತ್ ।
ಕಾದಾಚಿತ್ಕತಯಾ ವಾಚ್ಯಂ ಬಂಧಾಭಾವಾದಮೋಕ್ಷತಃ ।
ಜೀವಸ್ಯ ಬಂಧಮೋಕ್ಷಸ್ತು ಮತ್‌ಪ್ರಸಾದಾತ್ ಕದಾಚನ ॥
ಇತಿ ತತ್ತ್ವೋದಯೇ ॥

ನಿತ್ಯಮುಕ್ತನಾದ ನನಗೆ ಸರ್ವಥಾ ಬಂಧವಿಲ್ಲದ ಕಾರಣ ಬಂಧನಾಶರೂಪ ವಾದ ಮೋಕ್ಷವಿಲ್ಲ. ನನ್ನನ್ನು ಮುಕ್ತನೆಂದು ಕರೆಯುವುದು ಸೂರ್ಯನು ಪ್ರಕಾಶಿಸುತ್ತಾನೆ ಎನ್ನುವಂತೆ. ಸೂರ್ಯನು ನಿತ್ಯಪ್ರಕಾಶಉಳ್ಳವನು. ಹಾಗೇ ನಾನೂ ನಿತ್ಯಮುಕ್ತ. ವೃಕ್ಷವು ಸದಾ ಪ್ರಕಾಶಿಸದೆ ಬೆಳಕು ಬಿದ್ದಾಗ ಮಾತ್ರ ಪ್ರಕಾಶಿಸುವಂತೆ, ನಾನು ಬಂಧವು ಕದಾಚಿತ್ ಇದ್ದು ಅದು ಧ್ವಂಸವಾದಾಗ ಮುಕ್ತನೆನಿಸಿದವನಲ್ಲ. ಜೀವನಿಗೆ ಬಂಧಾಭಾವವು ನಿತ್ಯವಲ್ಲ. ನನ್ನ ಅನುಗ್ರಹದಿಂದ ಕದಾಚಿತ್ ಉಂಟಾಗುತ್ತದೆ ಎಂದು ತತ್ತ್ವೋದಯ ಎಂಬ ಗ್ರಂಥದಲ್ಲಿದೆ.

❖❖❖

ಜೀವೇಶ್ವರರು ಒಂದೇ ಶರೀರದಲ್ಲಿದ್ದರೂ ಹೇಗೆ ವಿಲಕ್ಷಣ ಸ್ವಭಾವದವರೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಅಥ ಬದ್ಧಸ್ಯ ಮುಕ್ತಸ್ಯ ವೈಲಕ್ಷಣ್ಯಂ ವದಾಮಿ ತೇ ।
ವಿರುದ್ಧಧರ್ಮಿಣೋಸ್ತಾತ ಸ್ಥಿತಯೋರೇಕಧರ್ಮಿಣಿ ॥ ೫ ॥

ನನ್ನ ಪ್ರೀತಿಯ ಉದ್ಧವನೆ, ಜೀವನೂ ಈಶ್ವರನೂ ಒಂದೇ ಶರೀರದಲ್ಲಿ ನೆಲೆಸಿದ್ದಾರೆ. ಆದರೂ ಇಬ್ಬರೂ ಪರಸ್ಪರ ವಿಲಕ್ಷಣ ಸ್ವಭಾವದವರು. ಜೀವ ನಿತ್ಯಬದ್ಧ. ಈಶ್ವರ ನಿತ್ಯಮುಕ್ತ. ಅವನಿಗೆ ಜೀವನಂತೆ ದೇಹದಲ್ಲಿ ಸುಖದುಃಖಗಳಿಲ್ಲ. ಅದರಿಂದ ನಿತ್ಯಬದ್ಧನಿಗೂ ನಿತ್ಯಮುಕ್ತನಿಗೂ ಇರುವ ವೈಲಕ್ಷಣ್ಯವನ್ನು ನಿನಗೆ ಹೇಳುತ್ತೇನೆ.

[1]'ಕಥಂ ವರ್ತೇತ ವಿಹರೇತ್ (ಶ್ಲೋ.11.10.36) ಎಂದು ಹಿಂದೆ ಶ್ರೀಕೃಷ್ಣನಲ್ಲಿ ಉದ್ಧವ 'ನಿರ್ಲಿಪ್ತನಾದ ಆತ್ಮನಿಗೆ ಬಂಧ ಹೇಗೆ ಸಾಧ್ಯವಾಯಿತೆಂದರೆ ಶರೀರಾಭಿ

1. ತದೇವಂ ವ್ಯವಸ್ಥಾಮುಪಪಾದ್ಯ ಕಥಂ ವರ್ತೇತೇತ್ಯಾದಿ ವೈಲಕ್ಷಣ್ಯ ಪ್ರಶ್ನಸ್ಯೋತ್ತರಮಾಹ ಅಥೇತಿ । ತಚ್ಚ ವೈಲಕ್ಷಣ್ಯಂ ದ್ವಿವಿಧಂ ಜೀವೇಶ್ವರಯೋರೇಕಂ ಜೀವಾನಾಂ ಚೈಕಂ ತತ್ ಜೀವೇಶ್ವರಯೋ ರ್ವೈಲಕ್ಷಣ್ಯಮಾಹ । -ಶ್ರೀಧರಃ

ಮಾನದಿಂದ ಬಂಧ, ವೈರಾಗ್ಯದಿಂದ ಮುಕ್ತಿ ಎಂದು ನೀನು ಸಮಾಧಾನ ಹೇಳಬಹುದು. ಹಾಗಿದ್ದರೆ ವಿರಕ್ತನ ಚರ್ಯೆ ಹೇಗಿರುತ್ತದೆ ತಿಳಿಯಬೇಕಾಗುತ್ತದೆ' ಎಂದು ಹೇಳಿದ್ದ. ಆದರಿಂದ ಇಲ್ಲಿ ಶರೀರಾಭಿಮಾನಉಳ್ಳ ಜೀವನಿಗೂ ಆ ಅಭಿಮಾನವಿಲ್ಲದ ವಿರಕ್ತ ಜೀವನಿಗೂ ವೈಲಕ್ಷಣ್ಯವನ್ನು ಹೇಳುವುದು ಪ್ರಸಕ್ತವಾಗಿದೆ'. ಇದು ಆ ಹಿಂದಿನ ಶ್ಲೋಕದ ಶ್ರೀಧರವ್ಯಾಖ್ಯಾನದಿಂದ ತಿಳಿದುಬರುತ್ತದೆ.

ಆದರೆ ಇಲ್ಲಿ ಶ್ರೀಧರವ್ಯಾಖ್ಯಾನ ಹೀಗೆ ಹೇಳುತ್ತಿದೆ– 'ಹಿಂದೆ ಬದ್ಧಮುಕ್ತರೊಳಗಿನ ವೈಲಕ್ಷಣ್ಯವನ್ನು ತಿಳಿಯಬೇಕೆಂದು ಉದ್ಧವ ಅಪೇಕ್ಷೆ ಮಾಡಿದ್ದ. ಈ ವೈಲಕ್ಷಣ್ಯ ಎರಡು ಬಗೆ, ಜೀವೇಶ್ವರರ ವೈಲಕ್ಷಣ್ಯ ಮತ್ತು ಜೀವರ ಪರಸ್ಪರ ವೈಲಕ್ಷಣ್ಯ ಎಂದು. ಇದೀಗ ಜೀವೇಶ್ವರರ ವೈಲಕ್ಷಣ್ಯವನ್ನು ಶ್ರೀಕೃಷ್ಣ ಹೇಳುತ್ತಿದ್ದಾನೆ' ಎಂದು. ಇದು ಪೂರ್ವೋತ್ತರ ವಿರುದ್ಧ. ಹಿಂದೆ ಈಶ್ವರ ಪ್ರಸಕ್ತನಾಗಿಲ್ಲ.

ಈಶ್ವರನಿಗೆ 'ನ ಮೇ ಮೋಕ್ಷೋ ನ ಬಂಧನಂ' ಬಂಧ ಮೋಕ್ಷಗಳು ಎರಡೂ ಇಲ್ಲ. ದೇಹಾಭಿಮಾನದಿಂದ ಬಂಧ, ವೈರಾಗ್ಯದಿಂದ ಮುಕ್ತಿ ಎಂದು ಬಂಧಮೋಕ್ಷಗಳು ಕೇವಲ ಜೀವನಿಗೇ ಇರುತ್ತದೆ. ಆದರಿಂದ ಜೀವನಲ್ಲಿಯೇ ದೇಹಾಭಿಮಾನ, ದೇಹಾಭಿಮಾನನಿವೃತ್ತಿಗಳನ್ನು ಹೇಗೆ ತಿಳಿಯಬೇಕು ಎಂಬ ಪ್ರಶ್ನೆಗೆ ಜೀವರೊಳಗೆ ಪರಸ್ಪರ ವೈಲಕ್ಷಣ್ಯವನ್ನು ಹೇಳಬೇಕಾಗಿತ್ತು, ಜೀವೇಶ್ವರರ ವೈಲಕ್ಷಣ್ಯವನ್ನು ಶ್ರೀಕೃಷ್ಣ ಹೇಳು ತ್ತಿದ್ದಾನೆ ಏಕೆ?

ಆದರಿಂದ, ಹಿಂದೆ ಹೇಳಿದಂತೆ, ಏಕಜೀವವಾದವನ್ನು ನಿರಾಕರಿಸುವುದಕ್ಕಾಗಿ ಜೀವೇಶ್ವರರ ಭೇದವನ್ನು ಅವರೊಳಗಿನ ವೈಲಕ್ಷಣ್ಯಗಳಿಂದ ಸಮರ್ಥನೆ ಮಾಡುತ್ತಿದ್ದಾನೆ ಶ್ರೀಕೃಷ್ಣ. ಆದರೆ ಮುಕ್ತಬದ್ಧರ ವೈಲಕ್ಷಣ್ಯವನ್ನು ಏಕೆ ಹೇಳುತ್ತಾನೆ ಎನ್ನುವ ಪ್ರಶ್ನೆ ಬರುವುದು ಸಹಜ. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ ಇಲ್ಲಿ ಮುಕ್ತ ಎಂಬುದು ಶ್ರೀಹರಿಯ ನಾಮ, ಬದ್ಧ ಎನ್ನುವುದು ಜೀವರ ನಾಮ. ಬದ್ಧ-ಮುಕ್ತ ವೈಲಕ್ಷಣ್ಯವೆಂದರೆ ಇಲ್ಲಿ ಜೀವೇಶ್ವರ ವೈಲಕ್ಷಣ್ಯವೆ ವಿವಕ್ಷಿತವಾಗಿದೆ.

ಮುಕ್ತಸ್ಯ ವಿಷ್ಣೋಃ। ನಿತ್ಯ ಶುದ್ಧ ಬುದ್ಧ ಮುಕ್ತ ಸತ್ಯ ಸುಖಾದ್ವಯ
ಪ್ರತ್ಯಗೇಕ ಪೂರ್ಣ ಇತ್ಯತಃ ಪದಾನ್ವಯಾದಿತ್ಯಾದಿವಚನಾತ್ ।
ಬದ್ಧೋ ಜೀವಃ।

ಬದ್ಧಾ ಜೀವಾ ಇಮೇ ಸರ್ವೇ ಪೂರ್ವಬಂಧಸಮನ್ವಯಾತ್ ।
ನಿತ್ಯಮುಕ್ತತ್ವತೋ ವಿಷ್ಣುರ್ಮುಕ್ತನಾಮಾ ಸದೋದಿತಃ।

ಅಬದ್ಧತ್ವಾದಮೋಕ್ಷೋಽಪಿ ದೀಪ್ಯತೇಽಸೌ ರವಿರ್ಯಥಾ ।
ಇತಿ ಬ್ರಹ್ಮಸಂಹಿತಾಯಾಂ ॥

'ಮುಕ್ತಸ್ಯ' ಎಂದರೆ ವಿಷ್ಣುವಿಗೆ ಎಂದರ್ಥ. ಏಕೆಂದರೆ ಸಂಕರ್ಷಣ ಸೂತ್ರದಲ್ಲಿ ಹೀಗೆ ಹೇಳಿದೆ– ನಿತ್ಯ ಶುದ್ಧ ಬದ್ಧ ಮುಕ್ತ ಸತ್ಯ ಸುಖ ಅದ್ವಯ ಪ್ರತ್ಯಕ್ ಏಕ ಪೂರ್ಣ ಎಂಬ ಈ ಶಬ್ದಗಳೆಲ್ಲವೂ ಹರಿಯ ನಾಮಗಳು. 'ಅತಃ' ಈ ಹರಿಯಲ್ಲಿಯೇ 'ಪದಾನ್ವಯಾತ್' ಪದಸಮನ್ವಯವಿರುವುದರಿಂದ.

ಬದ್ಧನೆಂದರೆ ಜೀವ. ಬ್ರಹ್ಮಸಂಹಿತೆಯಲ್ಲಿ ಹೀಗೆ ಹೇಳಿದೆ. ಈ ಮುಕ್ತ–ಅಮುಕ್ತ ಜೀವರು ಎಲ್ಲರೂ ಬದ್ಧರೆಂದು ಕರೆಸಿಕೊಳ್ಳುತ್ತಾರೆ. ಏಕೆಂದರೆ ಬದ್ಧಮುಕ್ತ ಜೀವರಿಬ್ಬರೂ ಕದಾಚಿತ್ ಬಂಧ ಸಂಬಂಧಉಳ್ಳವರೆ. ಮುಕ್ತರು ಹಿಂದೆ ಬಂಧವಿದ್ದವರು. ಬದ್ಧರು ಈಗ ಬಂಧ ಉಳ್ಳವರು. ವಿಷ್ಣು ನಿತ್ಯಮುಕ್ತನಾದ್ದರಿಂದ ಮುಕ್ತನೆಂದು ಸದಾ ಕರೆಸಿಕೊಳ್ಳುತ್ತಾನೆ. ಎಂದೂ ಬಂಧವಿಲ್ಲದವನಾದ್ದರಿಂದ ಅವನಲ್ಲಿ ಬಂಧನಾಶವಿಲ್ಲದಿದ್ದರೂ ಮುಕ್ತ ಎಂಬ ನಾಮ ಯುಕ್ತವೆ. ಸೂರ್ಯ ಪ್ರಕಾಶಿಸುತ್ತಾನೆ ಎಂದರೆ ಸದಾ ಪ್ರಕಾಶಿಸುತ್ತಾನೆ ಎಂದು ಅರ್ಥ. ಹಾಗೆಯೇ ವಿಷ್ಣು ಮುಕ್ತನಾಗಿದ್ದಾನೆ ಎಂದರೆ ಸದಾ ಮುಕ್ತನಾಗಿದ್ದಾನೆ ಎಂದೇ ಅರ್ಥ' ಎಂದು.

❖❖❖

ದ್ವಾಸುಪರ್ಣಾ ಶ್ರುತ್ಯರ್ಥವನ್ನು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಸುಪರ್ಣಾವೇತೌ ಸದೃಶೌ ಸಖಾಯೌ
ಯದೃಚ್ಛಯಾ ಕೃತನೀಡೌ ಚ ವೃಕ್ಷೇ ।
ಏಕಸ್ತಯೋಃ ಖಾದತಿ ಪಿಪ್ಪಲಾನ್ನ
ಮನ್ಯೋ ನಿರನ್ನೋಽಪಿ ಬಲೇನ ಭೂಯಾನ್ ॥ ೬ ॥

ಜೀವೇಶ್ವರರಿಬ್ಬರೂ ಆನಂದಸ್ವರೂಪರು. ಪರಸ್ಪರ ಸದೃಶರು. ಸ್ನೇಹಿತರು. ಈಶ್ವರೇಚ್ಛೆಯಿಂದ ದೇಹವೆಂಬ ಒಂದೇ ವೃಕ್ಷದಲ್ಲಿ ವಾಸಮಾಡುವ ಪಕ್ಷಿಗಳಾಗಿರು ವರು. ಅವರಲ್ಲಿ ಒಬ್ಬನು, ಜೀವ, ಕರ್ಮಫಲವನ್ನು ಉಣ್ಣುತ್ತಾನೆ ಇನ್ನೊಬ್ಬ ಪರಮಾತ್ಮ, ಉಣದಿದ್ದರೂ ಬಲದಿಂದ ಪುಷ್ಟನಾಗಿದ್ದಾನೆ.

ಇಲ್ಲಿ 'ಅನ್ಯೋ ನಿರನ್ನಃ' ಪರಮಾತ್ಮ ವಿಷಯಸುಖವನ್ನು ಉಣುವುದಿಲ್ಲ ಎಂದು ಹೇಳಿದೆ. ಆದರೆ ಶ್ರುತಿ ಸೂತ್ರ ಗೀತೆ ಮುಂತಾದ ಪ್ರಮಾಣಗಳ ವಿರೋಧ ಬರುವುದರಿಂದ ಸರಿಯಾದ ವಿವರಣೆ ಆವಶ್ಯಕ. ಬೇರೆ ವ್ಯಾಖ್ಯಾನಕಾರರು ನೀಡಿಲ್ಲ.

ಅನತ್ತೃತ್ವಂ ಹರೇರ್ದುಃಖಾನತ್ತೃತ್ವಾದುಚ್ಯತೇ ಸದಾ ।
ವಿಷಯಾನ್ ವಿನಾಽಪಿ ಪೂರ್ಣತ್ವಾತ್ ಸ್ವರೂಪಾನಂದಭೋಗಿನಃ ।
ಸುಖಮತ್ತ್ಯೇವ ಹಿ ಸದಾ ಸರ್ವತ್ರಾಪಿ ಸ್ಥಿತಂ ವಿಭುಃ ।
ಸ್ವಾದೋರದನವದ್ಧ್ಯತ್ತಿ ಜೀವೋಽಸ್ವಾದ್ವಪಿ ಯತ್ ಸದಾ ।
ಅನಾರತಂ ಪಾರವಶ್ಯಾತ್ ಸ್ವಾದ್ವತ್ತೀತಿ ತತಃ ಶ್ರುತಿಃ ।
ಇತಿ ಭೋಗನಿರ್ಣಯೇ ॥

ಅಸ್ವಾದು ಸ್ವಾದುವದ್ಧ್ಯತ್ತಿ ಜೀವೋ ನೈವಂ ಜನಾರ್ದನಃ ।
ಅತೋ ನಾತ್ತೀತಿ ವಚನಮಶ್ನತೋಽಪಿ ಸುಖಂ ಸದಾ ॥
ಇತಿ ಪರಭೋಗೇ ॥

ಸಾಶನಾನಶನತ್ವೇನ ನರದೇವೌ ಯಥೋದಿತೌ ।
ಅತ್ತಿಂ ವಿನಾಪ್ಯದೌರ್ಬಲ್ಯಾತ್ ತಥಾಽನತ್ತಿರ್ಹರೇರ್ಭುಜಃ ॥
ಇತಿ ಸ್ವಾಭಾವ್ಯೇ ॥

('ಅನ್ಯೋ ನಿರನ್ನಃ' ಎಂಬುದನ್ನು ಮೂರು ಪ್ರಮಾಣ ವಚನಗಳಿಗನುಸಾರ ನಾಲ್ಕು ಬಗೆಯಿಂದ ಶ್ರೀಮದಾಚಾರ್ಯರು ವ್ಯಾಖ್ಯಾನಿಸುತ್ತಾರೆ) ಎಂದೂ ದುಃಖವನ್ನು ಉಣದಿರುವುದರಿಂದ ಶ್ರೀಹರಿ ಉಣದವನೆಂದು ಶ್ರುತಿಸ್ಮೃತಿಗಳಲ್ಲಿ ಹೇಳಲ್ಪಡುತ್ತಾನೆ. ವಿಷಯಭೋಗವಿಲ್ಲದೆಯೂ ಸ್ವರೂಪಾನಂದ ಭೋಗದಿಂದ ಪೂರ್ಣನಾದ್ದರಿಂದಲೂ ಉಣದವನೆನಿಸುತ್ತಾನೆ. ವಸ್ತುತಃ ಎಲ್ಲ ವಿಷಯಗಳಲ್ಲಿರುವ ಸುಖವನ್ನು ಸರ್ವಶಕ್ತನಾದ ಶ್ರೀಹರಿ ಅಚಿಂತ್ಯಶಕ್ತಿಯಿಂದ ಉಣ್ಣುತ್ತಾನೆ. ಜೀವನು ಸದಾ ಅಸ್ವತಂತ್ರನಾದ್ದರಿಂದ ಅಸಾರವಾದ ವಿಷಯವನ್ನು ಕೂಡ ಸಾರವೆಂದು ತಿಳಿದು ಸದಾ ಉಣ್ಣುತ್ತಾನೆ. ಅದರಿಂದ ಶ್ರುತಿಯು 'ಸ್ವಾದ್ವತ್ತಿ' ಎಂದು ಹೇಳುತ್ತದೆ' ಎಂದು ಭೋಗನಿರ್ಣಯಗ್ರಂಥದಲ್ಲಿದೆ.

'ಜೀವನು ಅಸಾರವಾದ ಕರ್ಮಫಲವನ್ನು ಸಾರವೆಂದು ಬಗೆದು ಉಣ್ಣುತ್ತಾನೆ. ಹೀಗೆ ಶ್ರೀಹರಿ ಉಣ್ಣುವುದಿಲ್ಲ. ಅದರಿಂದ ಅವನು ಸದಾ ಸುಖ ಉಣ್ಣುತ್ತಿದ್ದರೂ ಉಣ್ಣುವುದಿಲ್ಲ ಎಂದು ಶ್ರುತಿಯು ಹೇಳುತ್ತದೆ' ಎಂದು ಪರಭೋಗದಲ್ಲಿದೆ.

'ಉಣದಿದ್ದರೆ ಮನುಷ್ಯರಿಗೆ ದೌರ್ಬಲ್ಯ ಉಂಟಾಗುತ್ತದೆ. ಅದರಿಂದ ಪುರುಷಸೂಕ್ತದಲ್ಲಿ ಅವರನ್ನು 'ಸಾಶನ'ರು, ಉಣ್ಣುವವರು ಎಂದಿದೆ. ದೇವತೆಗಳು ಅಮೃತವನ್ನು ಉಣ್ಣುತ್ತಿದ್ದರೂ ಉಣದಿದ್ದರೆ ಅವರಿಗೆ ದೌರ್ಬಲ್ಯ ಉಂಟಾಗುವುದಿಲ್ಲ. ಅದರಿಂದ ಅವರನ್ನು ಪುರುಷಸೂಕ್ತವು 'ಅನಶನ'ರೆಂದು

ಕೊಂಡಾಡಿದೆ. ಹಾಗೇ ಶ್ರೀಹರಿ ವಿಷಯ ಸುಖವನ್ನು ಉಣುತ್ತಿದ್ದರೂ ಉಣದಿದ್ದರೆ ದೌರ್ಬಲ್ಯ ಉಂಟಾಗುವ ಪ್ರಸಂಗವಿಲ್ಲದಿರುವುದರಿಂದ 'ನಿರನ್ನಃ' ಉಣ್ಣುವುದಿಲ್ಲ ಎಂದು ಭಾಗವತದಲ್ಲಿ 'ಅನಶ್ನನ್' ಎಂದು ವೇದದಲ್ಲಿ ಹೇಳಿದೆ' ಎಂದು ಸ್ವಾಭಾವ್ಯ ಎಂಬ ಗ್ರಂಥದಲ್ಲಿ ಹೇಳಿದೆ.

ತದೇವ ಪ್ರೋಕ್ತಂ–ನಿರನ್ನೋಽಪಿ ಬಲೇನ ಭೂಯಾನಿತಿ'
ಸ್ವಯಂ ತ್ವತ್ತ್ಯೇವ ತಥಾಪಿ ನಾದನನಿಬಂಧನಂ ತಸ್ಯ ಬಲಮಿತ್ಯರ್ಥಃ ॥

ಉಣದಿದ್ದರೂ ಹರಿಗೆ ದೌರ್ಬಲ್ಯ ಉಂಟಾಗುವುದಿಲ್ಲ ಎಂಬುದನ್ನೇ ಇಲ್ಲಿ ಭಾಗವತದಲ್ಲಿ 'ನಿರನ್ನೋಽಪಿ ಬಲೇನ ಭೂಯಾನ್' 'ಉಣದಿದ್ದರೂ ಪರಮಾತ್ಮ ಬಲಪೂರ್ಣನಾಗಿರುತ್ತಾನೆ' ಎಂದಿದೆ ಹೊರತು ಅವನು ಉಣ್ಣುವುದಿಲ್ಲ ಎಂದಲ್ಲ.

ಸ್ವತಃ ಪರಮಾತ್ಮ ತಪ್ಪದೆ ವಿಷಯಸುಖಹನ್ನು ಉಣ್ಣುತ್ತಾನೆ, ಆದರೆ ಅವನ ಬಲ ಉಣ್ಣುವುದರಿಂದಲ್ಲ ಎಂದರ್ಥ.

ಯತ್ರಾ ಸುಪರ್ಣಾ ಅಮೃತಸ್ಯ ಭಾಗಂ
ಅನಿಮೇಷಂ ವಿದಥಾಽಭಿಸ್ವರಂತಿ ।
ಇನೋ ವಿಶ್ವಸ್ಯ ಭುವನಸ್ಯ ಗೋಪಾಃ
ಸ ಮಾ ಧೀರಃ ಪಾಕಮತ್ರಾ ವಿವೇಶ ॥
ಯಸ್ಮಿನ್ ವೃಕ್ಷೇ ಮಧ್ವದಃ ಸುಪರ್ಣಾ
ನಿವಿಶಂತೇ ಸುವತೇ ಚಾಧಿ ವಿಶ್ವೇ ।
ತಸ್ಯೇದಾಹುಃ ಪಿಪ್ಪಲಂ ಸ್ವಾದ್ವಗ್ರೇ
ತನ್ನೋನ್ನಶದ್ ಯಃ ಪಿತರಂ ನ ವೇದ ॥ (ಋಗ್ವೇದ ೧.೧೬೪.೨೧)
ಇತ್ಯಾದಿ ವಾಕ್ಯಶೇಷಾತ್ ॥

'ಯತ್ರಾ ವಿದಥಾ' ಯಾರಲ್ಲಿ ಅರ್ಪಿತವಾಗುವ ಯಜ್ಞಗಳಲ್ಲಿ ಮಾತ್ರ 'ಸುಪರ್ಣಾ' ದೇವತೆಗಳು 'ಅಮೃತಸ್ಯ ಭಾಗಂ' ತಮ್ಮ ಹವಿರ್ಭಾಗವನ್ನು ಸ್ವೀಕರಿಸಲು 'ಅನಿಮೇಷಂ' ಒಂದು ನಿಮಿಷವೂ ತಡಮಾಡದೆ 'ಅಭಿಸ್ವರಂತಿ' ಬರುವರೋ 'ವಿಶ್ವಸ್ಯ ಭುವನಸ್ಯ ಗೋಪಾ ಧೀರಃ ಸ ಇನಃ' ಸಮಸ್ತ ಜಗದ್ರಕ್ಷಕನಾದ ಸರ್ವಜ್ಞನಾದ ಆ ಸ್ವಾಮಿ ಶ್ರೀಹರಿಯು 'ಅತ್ರ ಪಾಕಂ' ನಾನು ಯಜ್ಞದಲ್ಲಿ ನೀಡುವ ಹವಿಸ್ಸನ್ನು ಉಣಲು 'ಮಾ ಆವಿವೇಶ' ನನ್ನ ಬಳಿಗೆ ಬಂದನು.

'ವೃಕ್ಷೇ ಮಧ್ವದಃ ಸರ್ವೇ ಸುಪರ್ಣಾಃ' ದೇಹವೆಂಬ ವೃಕ್ಷದಲ್ಲಿದ್ದು ಕರ್ಮಫಲವನ್ನು ಉಣ್ಣುವ ಎಲ್ಲ ಯೋಗ್ಯಜೀವರು 'ಯಸ್ಮಿನ್ನಶ್ನತಿ ನಿವಿಶಂತೇ' ಸ್ವಾದುರಸ ಉಣ್ಣುವ

ಯಾರಲ್ಲಿ ಆಶ್ರಯಿಸುವರೋ 'ಅಗ್ರೇ ಯಸ್ಮಿನ್ನಧಿ ಸುವತೇ ಚ' ಸರ್ವೋತ್ತಮನಾದ ಯಾರಲ್ಲಿ ಯಜ್ಞವನ್ನು ಅರ್ಪಿಸುವರೋ 'ತಸ್ಯ ಸುಪರ್ಣಸ್ಯ ಇತ್' ಆ ಪರಮಾತ್ಮನಿಗೇ 'ಸ್ವಾದು ಪಿಪ್ಪಲಂ' ಸ್ವಾದುವಾದ ಕರ್ಮ ಫಲರಸವೆಂದು 'ಆಹುಃ' ಹೇಳುತ್ತಾರೆ. 'ಯಃ ಪಿತರಂ ನ ವೇದ ತಸ್ಯ' ಯಾರು ಜಗಜ್ಜನಕನನ್ನು ತಿಳಿಯುವುದಿಲ್ಲವೋ ಅವನಿಗೆ 'ತತ್' ಆ ಕರ್ಮಫಲವು 'ನೋತ್' ಸ್ವಾದು ಇರುವುದಿಲ್ಲ, ಸ್ವಾದುವಿನಂತೆ ಇರುತ್ತದೆ. 'ಸ ನಶತ್' ಅವನು ನರಕಾದ್ಯನರ್ಥರೂಪವಾದ ನಾಶವನ್ನೇ ಹೊಂದುತ್ತಾನೆ. ಎಂದು ಮುಂತಾಗಿ 'ದ್ವಾಸುಪರ್ಣ' ಶ್ರುತಿಗೆ ವಾಕ್ಯಶೇಷವಾಗಿರುವ ಎರಡು ಮಂತ್ರಗಳು 'ಶ್ರೀಹರಿ ಸ್ವಾದು ಕರ್ಮಫಲರಸವನ್ನು ಉಣ್ಣುತ್ತಾನೆ' ಎಂದು ಸ್ಪಷ್ಟವಾಗಿ ಹೇಳುವುದರಿಂದ 'ಅನಶ್ನನ್' ಎಂದರೆ ದುಃಖವನ್ನು ಉಣ್ಣುವುದಿಲ್ಲ ಎಂದು ಮುಂತಾಗಿಯೇ ನಾಲ್ಕು ಬಗೆಯ ಅರ್ಥವನ್ನು ತಿಳಿಯಬೇಕು.

ವೃಕ್ಷೇ ಸ್ಥಿತ್ವಾ ಮಧ್ವದಃ ಸುಪರ್ಣಾಃ ಯಸ್ಮಿನ್ನಶ್ನತಿ ನಿವಿಶಂತೇ, ತದಾಧಾರತ್ವೇನ ಸುವತೇ ಚ, ತಸ್ಯೈವ ಸುಪರ್ಣಸ್ಯ ಸ್ವಾದು ಪಿಪ್ಪಲಂ । ~~ಅನ್ಯಸ್ತು ಸ್ವಾದುವದಶ್ನಾತಿ, ನ ಸ್ವಾದು । ಯಾವತ್ ಪಿತರಂ~~ ಪರಮಾತ್ಮನಂ ನ ವೇದೇತ್ಯರ್ಥಃ ।

'ಯಸ್ಮಿನ್ ವೃಕ್ಷೇ' ಎಂಬ ಮಂತ್ರಕ್ಕೆ 'ದೇಹದಲ್ಲಿದ್ದು ಕರ್ಮಫಲವನ್ನು ಉಣ್ಣುವ ಜೀವರು ಯಾರು ಕರ್ಮಫಲದ ಸ್ವಾದುರಸವನ್ನು ಉಣ್ಣುವಾಗ ಅವನನ್ನು ಆಶ್ರಯಿಸುವರೋ, ಅವನ ಆಶ್ರಯದಲ್ಲಿದ್ದು ಯಜ್ಞಮಾಡುವರೋ ಆ ಹರಿಗೇ ಸ್ವಾದುವಾದ ಶುಭಫಲರಸ, ಜೀವನು ಅಸ್ವಾದುರಸವನ್ನೇ ಸ್ವಾದುವೆಂದು ಉಣ್ಣುತ್ತಾನೆ, ಸ್ವಾದುವನ್ನಲ್ಲ, ಅವನು ತಂದೆಯಾದ ಪರಮಾತ್ಮನನ್ನು ಎಂದಿನವರೆಗೆ ತಿಳಿಯುವುದಿಲ್ಲವೋ ಅಂದಿನವರೆಗೆ ಸ್ವಾದು ರಸವನ್ನು ಉಣ್ಣುವುದಿಲ್ಲ' ಎಂದರ್ಥ.

ಸುಪರ್ಣೌ ದ್ವೌ ಶರೀರಸ್ಥೌ ಜೀವಶ್ಚ ಪರಮಸ್ತಥಾ ।
ಪಾರವಶ್ಯಾದನಾಜ್ಜೀವಸ್ತತ್ರಾತ್ತೀತಿ ಶ್ರುತೌ ಶ್ರುತಃ ।
ಸ್ವವಶೇನಾದನಾದ್ ವಿಷ್ಣುರ್ನಾತ್ತೀತ್ಯತ್ತಾಽಪಿ ಸನ್ ಶ್ರುತಃ ।
ಸ ಏವ ಹಿ ಶುಭಸ್ಯಾತ್ತಾ ಜೀವೋಽತ್ತಾಽಸ್ಯೈವ ವೇದನಾತ್ ।
ಇತಿ ಕೂರ್ಮಸಂಹಿತಾಯಾಂ ॥

ಸರ್ವಂ ವಾ ಅತ್ತೀತಿ ತದದಿತೇರದಿತಿತ್ವಂ ।
ಯಸ್ಯ ಬ್ರಹ್ಮ ಚ ಕ್ಷತ್ರಂ ಚೋಭೇ ಭವತ ಓದನಃ ।

ಅತ್ತಾ ಚರಾಚರಗ್ರಹಣಾತ್ ।
ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।
ಇತ್ಯಾದೇಶ್ಚ ॥

('ಯಸ್ಮಿನ್ ವೃಕ್ಷೇ' ಎಂಬ ಮಂತ್ರಕ್ಕೆ ಇದೇ ಅರ್ಥವೆಂದು ಕೂರ್ಮಸಂಹಿತಾ ವಚನವು ಸ್ಪಷ್ಟವಾಗಿ ಹೇಳಿದೆ)—

ಶರೀರವೆಂಬ ವೃಕ್ಷದಲ್ಲಿ ಜೀವೇಶ್ವರರು ಇಬ್ಬರು ಹಕ್ಕಿಗಳಂತಿದ್ದಾರೆ. ಈಶ್ವರನ ಅಧೀನವಾಗಿ ಕರ್ಮಫಲ ಒಳ್ಳೆಯದಿರಲಿ ಕೆಟ್ಟದಿರಲಿ ಉಣ್ಣುವುದರಿಂದ ಜೀವ ಎಂಬ ಹಕ್ಕಿ ಉಣ್ಣುವ ಹಕ್ಕಿ ಎಂದು ದ್ವಾಸುಪರ್ಣಾಶ್ರುತಿ ಯಸ್ಮಿನ್‌ವೃಕ್ಷೇಶ್ರುತಿಗಳು ಹೇಳುತ್ತವೆ. ಸ್ವತಂತ್ರವಾಗಿ ಶುಭಫಲ ರಸವನ್ನೇ ಹರಿ ಉಣ್ಣುವುದರಿಂದ, ಉಣ್ಣುವ ಹಕ್ಕಿಯಾಗಿದ್ದರೂ ಉಣ್ಣದ ಹಕ್ಕಿ ಎಂದು ಶ್ರುತಿಯು ಹೇಳಿದೆ. ಶ್ರೀಹರಿಯೇ ಸ್ವತಂತ್ರವಾಗಿ ಶುಭಫಲವನ್ನು ಉಣ್ಣುವವನು. ಜೀವನು ಹರಿಯನ್ನು ತಿಳಿದು ಅವನ ಅನುಗ್ರಹದಿಂದಲೆ ಶುಭಫಲವನ್ನು ಉಣಲು ಶಕ್ತನಾಗುವನು' ಎಂದು ಕೂರ್ಮಸಂಹಿತೆಯಲ್ಲಿ ಹೇಳಿದೆ.

(ಮುಂದೆ (೧೨ಅ.೨೩ಶ್ಲೋ.) 'ಹಂಸ' ಜೀವರು ಕೇವಲ ಶುಭಫಲ ಉಣ್ಣುವರೆಂದಿದೆ. ಆದರೆ ಅವರು ಸ್ವತಂತ್ರವಾಗಿ ಹಾಗೆ ಮಾಡುವುದಿಲ್ಲ. ಮತ್ತು ಅವರು ಜಗದ್‌ವೃಕ್ಷದಲ್ಲಿ ಪಕ್ಷಿಗಳು. ಶರೀರವೃಕ್ಷದಲ್ಲಿ ಅಲ್ಲ. ಹೀಗಾಗಿ ಶರೀರ ವೃಕ್ಷದಲ್ಲಿ ಕೇವಲ ಶುಭಫಲ ಉರುವ ಹಕ್ಕಿ ಎಂದರೆ ಪರಮಾತ್ಮನೆ. ಆದರೆ 'ಅನಶ್ನನ್' ಸರ್ವಥಾ ಉಣುವ ಶ್ರೀಹರಿ ಎಂದರೆ ಶ್ರುತಿಸೂತ್ರಾದಿ ವಿರೋಧ ಬರುತ್ತದೆ)

'ಎಲ್ಲವನ್ನೂ ಉಣ್ಣುವುದರಿಂದಲೇ ಅದಿತಿನಾಮಕನಾದ ಶ್ರೀಹರಿಗೆ ಅದಿತಿನಾಮ ಕೂಡುತ್ತದೆ. 'ಬ್ರಾಹ್ಮಣ ಕ್ಷತ್ರಿಯ ಜಾತಿಗಳ ಅಭಿಮಾನಿಗಳಾದ ಬ್ರಹ್ಮವಾಯು ಗಳನ್ನು ಕೂಡ ಅನ್ನದಂತೆ ಪ್ರಳಯಕಾಲದಲ್ಲಿ ನುಂಗುವವನು ಶ್ರೀಹರಿ'. (ಎಂದು ಶ್ರುತಿಗಳು ಹೇಳುತ್ತವೆ)

ಲಯದಲ್ಲಿ ಚರಾಚರಗಳನ್ನು ನುಂಗುವುದರಿಂದ 'ಉಣ್ಣುವವನೆಂ'ದು ಶ್ರುತಿಯಲ್ಲಿ ಉಕ್ತನಾದವನು ಶ್ರೀಹರಿಯೇ. (ಎಂದು ಬ್ರಹ್ಮಸೂತ್ರವೂ ಹೇಳಿದೆ)

ನಾನೇ ಎಲ್ಲ ಯಜ್ಞಫಲವನ್ನೂ ಉಣ್ಣುವ ಸರ್ವಶಕ್ತ(ಎಂದು ಗೀತೆಯೂ ಹೇಳಿದೆ)

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪ ಸೇವತೇ ॥

ಎಂದು ಗೀತೆ ಹೇಳುವಂತೆ ಶ್ರೀಹರಿ ಜೀವನ ಇಂದ್ರಿಯಗಳಲ್ಲಿದ್ದು ಶುಭ ಕರ್ಮ

ಫಲರೂಪವಾದ ವಿಷಯ ಪದಾರ್ಥಗಳನ್ನು ಉಣ್ಣುತ್ತಾನೆ, ತನ್ನ ಸ್ವರೂಪ ಸುಖವನ್ನು ಲೀಲೆಯಿಂದ ವ್ಯಕ್ತಗೊಳಿಸುತ್ತಾನೆ. ಈ ಬಿಂಬಕ್ರಿಯೆಯಿಂದ ಪ್ರತಿಬಿಂಬನಾದ ಜೀವನಲ್ಲಿ ವಿಷಯಾನುಭವವೂ ಅದರಿಂದ ಸುಖವೂ ಉಂಟಾಗುವುದು. ಇದು ಗುಹಾಧಿಕರಣ ತತ್ವಪ್ರಕಾಶಿಕೆಯಲ್ಲಿ ಸ್ಪಷ್ಟವಿದೆ. ಮತ್ತು 'ಸುಖರೂಪಸ್ಯ ಭೋಕ್ತೃತ್ವಾತ್' ಸುಖಕಾರಣವಾದ ಎಲ್ಲವನ್ನು ನಾನು ಉಣ್ಣುವುದರಿಂದ ನಾನು 'ಸರ್ವ' ಎನಿಸಿದ್ದೇನೆ (ಗೀತಾಭಾಷ್ಯ 7.6) ಎಂಬಲ್ಲಿ ಸುಖರೂಪ ಎಂದರೆ ಸುಖಕಾರಣ ವಿಷಯಪದಾರ್ಥ ಎಂದು ಪ್ರಮೇಯದೀಪಿಕೆಯಲ್ಲಿಯೂ ಹೇಳಿದೆ.

❖❖❖

ಅಜ್ಞಾನದಿಂದ ಅಂಧನಾದ ಜೀವ ನಿತ್ಯಬದ್ಧ, ಸರ್ವಜ್ಞನಾದ ಪರಮಾತ್ಮ ನಿತ್ಯ ಮುಕ್ತನೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಆತ್ಮಾನಮನ್ಯಂ ಚ ಸ ವೇದ ವಿದ್ವಾ-
ನಪಿಪ್ಪಲಾದೋ ನ ತು ಪಿಪ್ಪಲಾದಃ।
ಯೋಽವಿದ್ಯಯಾಂಧಃ ಸ ತು ನಿತ್ಯಬದ್ಧೋ
ವಿದ್ಯಾಮಯೋ ಯಃ ಸ ತು ನಿತ್ಯಮುಕ್ತಃ ॥ ೭ ॥

ಕರ್ಮಫಲವನ್ನು ಉಣದ ಸರ್ವಜ್ಞನಾದ ಶ್ರೀಹರಿ ತನ್ನನ್ನೂ ಜೀವನನ್ನೂ ಪೂರ್ಣ ತಿಳಿದಿದ್ದಾನೆ. ಉಣ್ಣುವ ಜೀವ ತಿಳಿಯುವುದಿಲ್ಲ. ಅಜ್ಞಾನದಿಂದ ಕುರುಡನಾದ ಜೀವ ಸದಾ ಈಶ್ವರನ ಅಧೀನ, ನಿತ್ಯಬದ್ಧ. ಸರ್ವಜ್ಞನಾದ ಶ್ರೀಹರಿ ನಿತ್ಯಮುಕ್ತ.

[1]ಅವಿದ್ಯೆಯಿಂದ ಯುಕ್ತನಾದ ಜೀವ ಅನಾದಿಬದ್ಧ. ಬ್ರಹ್ಮನಿಗೆ ಅವಿದ್ಯೆಯ ಆವರಣವಿಲ್ಲದ್ದರಿಂದ ಅದು ಆಶ್ರಯನಾದ ಅವನಿಗೆ ವ್ಯಾಮೋಹ ಉಂಟು ಮಾಡದಿರುವುದರಿಂದ ಬ್ರಹ್ಮ ನಿತ್ಯಮುಕ್ತ ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ. ಆದರೆ,

ಆಶ್ರಯತ್ವ ವಿಷಯತ್ವ ಭಾಗಿನೀ ನಿರ್ವಿಶೇಷಚಿತಿರೇವ ಕೇವಲಾ
ಪೂರ್ವಸಿದ್ಧ ತಮಸೋ ಹಿ ಪಶ್ಚಿಮೋ ನಾಶ್ರಯೋ ಭವತಿ ನಾಪಿ ಗೋಚರಃ

'ನಿರ್ವಿಶೇಷ ಬ್ರಹ್ಮನೇ ಅವಿದ್ಯೆಗೆ ಆಶ್ರಯ, ಅವನೇ ಅವಿದ್ಯೆಯಿಂದ

---

1. ಯೋಽವಿದ್ಯಯಾ ಯುಗ್ ಯುಕ್ತಃ ಸ ತು ನಿತ್ಯಬದ್ಧೋಽನಾದಿಬದ್ಧಃ। ಯಸ್ತು ವಿದ್ಯಾಪ್ರಧಾನಃ ಸ ತು ನಿತ್ಯಮುಕ್ತಃ। ಮಾಯಾಯಾ ಅನಾವರಕತ್ವಾತ್, ಆಶ್ರಯಾವ್ಯಾಮೋಹಕತ್ವಾಚ್ಚ।
-ಶ್ರೀಧರಃ

ಆವೃತನಾಗಿರುತ್ತಾನೆ. ಜೀವ ಅವಿದ್ಯೆಯ ಸಂಪರ್ಕದಿಂದ ಉಂಟಾಗುವುದರಿಂದ ಅವನಿಗಿಂತ ಮೊದಲೇ ಇರುವ ಅವಿದ್ಯೆಯು ಅನಂತರ ಉಂಟಾಗುವ ಜೀವನನ್ನು ಆಶ್ರಯಿಸುವುದಾಗಲೀ ಆವರಿಸುವುದಾಗಲೀ ಶಕ್ಯವಿಲ್ಲ' ಎಂದು ಅದ್ವೈತಿಗಳೇ ಹೇಳಿರುವುದರಿಂದ ಜೀವ ಅವಿದ್ಯೆಯಿಂದ ಯುಕ್ತನಲ್ಲ. ಆದರಿಂದ ಸರ್ವಜ್ಞ ಬ್ರಹ್ಮನೇ ಅವಿದ್ಯೆಯಿಂದ ಯುಕ್ತನಾಗಿದ್ದು ಅವಿದ್ಯೆಯಿಂದ ಅಂಧನಾಗಿದ್ದಾನೆ ಎನ್ನಬೇಕಾಗಿತ್ತು. ಶ್ರೀಧರ ವ್ಯಾಖ್ಯಾನ ತಿರುವುಮುರುವಾಗಿ ಹೇಳುತ್ತಿದೆ. ಜೀವ ನಿತ್ಯಬದ್ಧನಾದರೆ ಮೋಕ್ಷವಿಲ್ಲ ಎಂದಾದೀತೆಂದು ಭಯದಿಂದ ಅನಾದಿಬದ್ಧ ಎಂದು ವ್ಯಾಖ್ಯಾನ ಮಾಡಿದ್ದಾರೆ. ಅದೂ ಸರಿಯಲ್ಲ. ಮಾಯೆಯ ಸಂಪರ್ಕದಿಂದಾಗಿರುವ ಈಶ್ವರನೂ ಮಾಯೆಗೆ ಆಶ್ರಯವೆನಿಸುವುದೂ ಹಿಂದೆ ಹೇಳಿದಂತೆ ಅಸಂಭವ.

ಅವಿದ್ಯಾಖ್ಯ ಕಾಮಧೇನೋರ್ವತ್ಸೌ ಜೀವೇಶ್ವರಾವುಭೌ ॥

ಅವಿದ್ಯೆ ಎಂಬ ಕಾಮಧೇನುವಿನ ಎರಡು ಕರುಗಳು ಜೀವ ಈಶ್ವರರು. ಅದರಿಂದ, ಜೀವ ಅವಿದ್ಯೆಯಿಂದ ಅಂಧ, ಈಶ್ವರ ಮಾತ್ರ ಅಂಧನಲ್ಲ ಎನ್ನುವುದೂ ಕೂಡುವುದಿಲ್ಲ.

ಜೀವೋ ಮುಕ್ತೋಽಪಿ ನೋ ಜೀವಾನ್ ಪರಮಾತ್ಮನಮೇವ ಚ ।
ವೇತ್ತಿ ಸರ್ವಾತ್ಮನಾ ವಿಷ್ಣುರ್ವೇತ್ತ್ಯೇಕಃ ಪುರುಷೋತ್ತಮಃ ।
ತಸ್ಯ ಪ್ರಸಾದತಃ ಕಿಂಚಿದ್ ಬ್ರಹ್ಮಾದ್ಯಾ ಅಪಿ ಜಾನತೇ ।
ಅನ್ಯಜೀವಾನಪೇಕ್ಷ್ಯೈಕೋ ಜಾನಾತಿ ಚ ಚತುರ್ಮುಖಃ ।
ಸಾಮಸ್ತ್ಯೇನ ತದನ್ಯೇ ತು ಲೇಶಜ್ಞಾನಾಃ ಕ್ರಮಾತ್ ಸ್ಮೃತಾಃ ।
ಇತಿ ವಿನಿರ್ಣಯೇ ॥

ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ।
ಇತ್ಯಾದಿ ಚ ॥

ಅಜ್ಞಾ ಜೀವಾಸ್ತು ಕಥ್ಯಂತೇ ಮುಕ್ತಾ ಅಪ್ಯಲ್ಪವೇದನಾತ್ ।
ಜ್ಞ ಇತ್ಯೇವೋಚ್ಯತೇ ನಿತ್ಯಂ ಸರ್ವ ವೇತ್ತ್ಯುತತ್ತ್ವತೋ ಹರಿಃ ।
ಇತಿ ವೈಶೇಷ್ಯೇ ॥

ಮುಕ್ತ ಜೀವನೂ ಕೂಡ ಜೀವರನ್ನೂ ಪರಮಾತ್ಮನನ್ನೂ ಪೂರ್ತಿ ತಿಳಿಯುವುದಿಲ್ಲ. ಪುರುಷೋತ್ತಮ ವಿಷ್ಣು ಒಬ್ಬನೇ ಪೂರ್ತಿಯಾಗಿ ತನ್ನನ್ನೂ ಜೀವರನ್ನೂ ತಿಳಿಯುತ್ತಾನೆ. ಅವನ ಅನುಗ್ರಹದಿಂದ ಬ್ರಹ್ಮಾದಿಗಳೂ ಸ್ವಲ್ಪ ತಿಳಿಯುತ್ತಾರೆ. ಬೇರೆ

ಜೀವರಿಗೆ ಹೋಲಿಸಿದರೆ, ಬ್ರಹ್ಮನೊಬ್ಬನೇ ಪೂರ್ತಿ ತಿಳಿಯುತ್ತಾನೆ. ಇತರರು ಕ್ರಮವಾಗಿ ಕಡಿಮೆ ಜ್ಞಾನವುಳ್ಳವರೆಂದು ವಿನಿರ್ಣಯ ಎಂಬ ಗ್ರಂಥದಲ್ಲಿ ಹೇಳಿದೆ.

ಅರ್ಜುನ, ನಾನು ಮಾತ್ರ ನನ್ನ ನಿನ್ನ ಎಲ್ಲ ಹಿಂದಿನ ಜನ್ಮಗಳನ್ನು ತಿಳಿದಿದ್ದೇನೆ ನೀನು ತಿಳಿದಿಲ್ಲ ಎಂದು ಮುಂತಾಗಿ ಗೀತೆಯಲ್ಲಿಯೂ ಇದೆ.

ಜೀವರು ಅಜ್ಞರೆನಿಸಿದ್ದಾರೆ ಏಕೆಂದರೆ ಅವರು ಮುಕ್ತರಾದರೂ ಸ್ವಲ್ಪವೇ ತಿಳಿಯುತ್ತಾರೆ. ಶ್ರೀಹರಿ ಜ್ಞ ಎನಿಸಿದ್ದಾನೆ. ಏಕೆಂದರೆ ಅವನು ಎಲ್ಲವನ್ನೂ ಪೂರ್ತಿಯಾಗಿ ತಿಳಿಯುತ್ತಾನೆ ಎಂದು ವೈಶೇಷ್ಯ ಎಂಬ ಗ್ರಂಥದಲ್ಲಿದೆ.

ಅನಾದ್ಯವಿದ್ಯಯಾಽಂಧತ್ವಂ ಜೀವಸ್ಯ ಯದಿ ಯೋಗ್ಯತಾ ।
ಪ್ರಯತ್ನಶ್ಚಾನುಕೂಲಃ ಸ್ಯಾದಂತವದ್ ಭವತಿ ಧ್ರುವಂ ।
ನಿತ್ಯಮೇವಾನ್ಯಥಾಽಂಧತ್ವಮಯೋಗ್ಯಾ ಮಾನುಷಾದಯಃ ।
ಬದ್ಧತ್ವಂ ಸರ್ವಜೀವಾನಾಂ ನಿಯಮಾನ್ನಿತ್ಯಮೇವ ತು ।
ಬದ್ಧತ್ವಂ ವಿಷ್ಣ್ವಧೀನತ್ವಮಂಧತ್ವಂ ತದದರ್ಶನಂ ।
ಅತಃ ಕ್ವಚಿದನಿತ್ಯತ್ವಮಂಧತಾಯಾ ಭವಿಷ್ಯತಿ ।
ಮುಕ್ತಸ್ಯಾಪಿ ತು ಬದ್ಧತ್ವಮಸ್ತಿ ಯತ್ ಸ ಹರೇರ್ವಶಃ ।
ಮುಕ್ತಾಖ್ಯಾ ದುಃಖಮೋಕ್ಷಾತ್ ಸ್ಯಾದ್ ಬದ್ಧಾಖ್ಯಾ ಹರ್ಯಧೀನತಃ ।
ನಿತ್ಯಬದ್ಧಾ ಅಪಿ ತತೋ ಮುಕ್ತಾ ದುಃಖವಿಮೋಕ್ಷತಃ ।
ನಿತ್ಯಮುಕ್ತಸ್ತ್ವೇಕ ಏವ ಹರಿರ್ನಾರಾಯಣಃ ಪ್ರಭುಃ ।
ಸ್ವತಂತ್ರತ್ವಾತ್ ಸ್ವತಂತ್ರತ್ವಂ ತಸ್ಯೈಕಸ್ಯ ನ ಚಾಪರೇ ॥
ಇತಿ ಮುಕ್ತಿವಿವೇಕೇ ॥

ಜೀವನಿಗೆ ಅವಿದ್ಯೆಯಿಂದ ಅಂಧತ್ವ ಅನಾದಿ. ಆದರೂ ಯೋಗ್ಯತೆ ಇದ್ದರೆ ಅನುಕೂಲ ಪ್ರಯತ್ನವನ್ನೂ ಮಾಡಿದರೆ ಅಂಧತ್ವ ನಿವಾರಣೆಯಾಗುತ್ತದೆ. ಯೋಗ್ಯತೆಯಿಲ್ಲದಿದ್ದರೆ ಅಂಧತ್ವವು ಶಾಶ್ವತವೆ. ಅಯೋಗ್ಯರು ನಿತ್ಯ ಸಂಸಾರಿಗಳು ಮತ್ತು ತಮೋಯೋಗ್ಯರು. ಬದ್ಧತ್ವವು ಎಲ್ಲ ಜೀವರಿಗೂ ನಿಯಮೇನ ಶಾಶ್ವತವಾಗಿಯೇ ಇರುವುದು. ಏಕೆಂದರೆ ಈ ಬದ್ಧತ್ವವು ವಿಷ್ಣುವಿನ ಅಧೀನತ್ವ ರೂಪವಾದುದು. ಅಂಧತ್ವವೂ ಭಗವಂತನ ದರ್ಶನದ ಅಭಾವರೂಪವಾದುದು. ಅದರಿಂದ ಮೋಕ್ಷಕಾಲದಲ್ಲಿ ಭಗವಂತನ ದರ್ಶನದಿಂದ ಅಂಧತ್ವ ನಿವಾರಣೆಯಾಗಿರುತ್ತದೆ. ಆದರೆ ಮುಕ್ತನೂ ಕೂಡ ಹರಿಗೆ ವಶನಾಗಿರುವುದರಿಂದ ಅವನಲ್ಲಿ ಬದ್ಧತ್ವವಿದೆ. ಅವನನ್ನು ಮುಕ್ತನೆನ್ನುವುದು ದುಃಖಮೋಕ್ಷವಿರುವುದರಿಂದ.

ಬದ್ಧನೆನ್ನುವುದು ಹರ್ಯಧೀನತ್ವವಿರುವುದರಿಂದ. ಹೀಗಾಗಿ ದುಃಖಮೋಕ್ಷದಿಂದ ಮುಕ್ತರೆನಿಸಿದವರೂ ಕೂಡ ನಿತ್ಯಬದ್ಧರೆ. ನಿತ್ಯಮುಕ್ತನು ಪ್ರಭು ಹರಿನಾರಾಯಣ ನೊಬ್ಬನೇ, ಅವನೊಬ್ಬನೇ ಸ್ವತಂತ್ರನಾದ್ದರಿಂದ. ಸ್ವಾತಂತ್ರ್ಯ ಅವನಿಗೊಬ್ಬನಿಗೇ ಇರುತ್ತದೆ. ಬೇರೆಯವರಿಗೆ ಸ್ವಾತಂತ್ರ್ಯವಿಲ್ಲ ಎಂದು ಮುಕ್ತಿವಿವೇಕ ಎಂಬ ಗ್ರಂಥದಲ್ಲಿದೆ.

ಶತಂ ಸಹಸ್ರಾಣಿ ಚತುರ್ದಶೇಹ
ಪರಾ ಗತಿರ್ಜೀವಗಣಸ್ಯ ದೈತ್ಯ ।
ಆರೋಹಣಂ ತತ್ ಕೃತಮೇವ ವಿದ್ಧಿ
ಸ್ಥಾನಂ ತಥಾ ನಿಃಸರಣಂ ಚ ತೇಷಾಂ ॥
ಕೃಷ್ಣೋ ಮುಕ್ತೈ ರಿಜ್ಯತೇ ವೀತಮೋಹೈಃ ॥
ಮುಕ್ತಾನಾಂ ಪರಮಾ ಗತಿಃ ॥

ಇತ್ಯಾದಿ ಭಾರತೇ ॥

~~ಕಲಾಃ ಪಂಚದಶ ತ್ಯಕ್ತ್ವಾ ಶ್ವೇತದ್ವೀಪನಿವಾಸಿನಾಂ ।~~
ಮುಕ್ತಾಖ್ಯಾ ವಿಷ್ಣ್ವಧೀನಾಸ್ತೇ ಸ್ವಾಧಿಕಾನಾಂ ವಶೇ ಸ್ಥಿತಾಃ ।
ನ ಚಾಸ್ಮಾದಧಿಕಂ ಕಿಂಚಿತ್ ಸುಖಮಸ್ತಿ ಹರೇರ್ವಿನಾ ।
ನಿತ್ಯಮುಕ್ತಃ ಸ ಏವೈಕಃ ಸ್ವತಂತ್ರಃ ಸ ಯತಃ ಸದಾ ॥

ಇತಿ ಮಾಹಾತ್ಮ್ಯೇ ।

'ದೈತ್ಯ ಪ್ರಹ್ಲಾದನೆ, ಮುಕ್ತಜೀವಸಮೂಹಕ್ಕೆ ವಿಷ್ಣುಲೋಕದಲ್ಲಿ ಹದಿನಾಲ್ಕು ಲಕ್ಷ ಬೇರೆಬೇರೆ ಉತ್ತಮ ಗತಿಗಳು ಪದವಿಗಳಿವೆ. ಆ ಕಾರಣದಿಂದ ಮೇಲೇರುವುದು, ವಾಸಮಾಡಿ ಕೆಳಗಿಳಿಯುವುದು ಮುಕ್ತರಿಗೂ ಇದೆ, ಅವರು ಸ್ವತಂತ್ರರಲ್ಲ'. 'ಮೋಹರಹಿತರಾದ ಮುಕ್ತರೂ ಕೂಡ ಶ್ರೀಹರಿಯನ್ನು ಯಜ್ಞಗಳಿಂದ ಆರಾಧಿಸುವರು' 'ಮುಕ್ತರಿಗೆ ಪರಗತಿ ನೀಡುವವನು ವಿಷ್ಣು' ಎಂದು ಮುಂತಾಗಿ ಮಹಾಭಾರತ ವಚನಗಳಿವೆ.

ಪ್ರಾಣಾದಿ ಹದಿನೈದು ಕಲೆಗಳನ್ನು ಬಿಟ್ಟು ಶ್ವೇತದ್ವೀಪಕ್ಕೆ ಹೋಗಿ ವಾಸಮಾಡುವ ಜೀವರನ್ನು ಮುಕ್ತರೆಂದು ಕರೆಯುತ್ತಾರೆ. ಅವರು ವಿಷ್ಣುವಿಗೆ ಅಧೀನರಾಗಿರುತ್ತಾರೆ ಸ್ವೋತ್ತಮ ಮುಕ್ತರಿಗೂ ವಶದಲ್ಲಿರುತ್ತಾರೆ. ಇದಕ್ಕಿಂತ ಹೆಚ್ಚಿನ ಸುಖ ಇನ್ನೊಂದಿಲ್ಲ. ಶ್ರೀಹರಿಗೆ ಮಾತ್ರ ಈ ಬಗೆಯ ಪರಾಧೀನತ್ವದ ಸುಖವಿರುವುದಿಲ್ಲ. ಸ್ವಾತಂತ್ರ್ಯದ ಪರಮಸುಖ ಅವನದು. ಏಕೆಂದರೆ ಅವನು ನಿತ್ಯಮುಕ್ತ ಸರ್ವೋತ್ತಮ ಸದಾ ಸ್ವತಂತ್ರ ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿದೆ.

ಮುಕ್ತರಿಗೆ ಮುಕ್ತಿಲೋಕದಲ್ಲಿ ಹದಿನಾಲ್ಕು ಲಕ್ಷ ಪರಗತಿಗಳು ಮುಕ್ತಿಪದವಿಗಳಿವೆ. ಲಯಕಾಲದಲ್ಲಿ ಹರಿಯುದರದಲ್ಲಿರುವ ಮುಕ್ತರು ಸೃಷ್ಟಿಕಾಲದಲ್ಲಿ ಹೊರಗೆ ಮುಕ್ತಿಲೋಕಗಳು ವ್ಯಕ್ತವಾದಾಗ ಹೊರಗೆ ಬಂದು ಈ ಲೋಕಗಳಲ್ಲಿ ಪದವಿಗಳಿಗೆ ಏರುತ್ತಾರೆ, ವಾಸಮಾಡುತ್ತಾರೆ, ತಿರುಗಿ ಲಯಕಾಲದಲ್ಲಿ ಇಳಿದು ಹರಿಯ ಉದರವನ್ನೇ ಪ್ರವೇಶಿಸುತ್ತಾರೆ. ಮತ್ತು ಸಾಯುಜ್ಯ ಮುಕ್ತರು ಮುಕ್ತಿಲೋಕ ದಲ್ಲಿ ಹರಿಯ ಅಂಗಗಳಿಗೆ ಏರಿ ಅಲ್ಲಿ ವಾಸಮಾಡುತ್ತಾರೆ. ಹೊರಗೆ ವಿಹಾರಕ್ಕಾಗಿ ಬೇಕೆನಿಸಿದಾಗ ಕೆಳಗಿಳಿದು ಬರುತ್ತಾರೆ. ಇದೆಲ್ಲವೂ ಹರಿಯ ಅಧೀನ. ಇದು ಭಾಗವತದಲ್ಲಿ (3.33.12) ಮತ್ತು ಬ್ರಹ್ಮಸೂತ್ರದಲ್ಲಿ (4.4.14) ಉಕ್ತವಾಗಿದೆ.

ಜ್ಞಾನಿಗಳು ಜಡವಾದ ಹದಿನಾರು ಕಲೆಗಳನ್ನು ಬಿಟ್ಟು ಅವುಗಳ ಅಭಿಮಾನಿದೇವತೆಗಳೊಂದಿಗೆ ಶ್ವೇತದ್ವೀಪದಲ್ಲಿ ವಾಸ ಮಾಡುತ್ತಾರೆ. ಆಗ ಅವರು ಮುಕ್ತರೆನಿಸುತ್ತಾರೆ. ಕಲೆಗಳು ಹದಿನಾರು ಇದ್ದರೂ 'ಗತಾಃ ಕಲಾಃ ಪಂಚದಶ ಪ್ರತಿಷ್ಠಾ' (ಅ.1.7) ಎಂದು ಆಥರ್ವಣದಲ್ಲಿ ಕರ್ಮವನ್ನು ಬಿಟ್ಟು ಉಳಿದ ಕಲೆಗಳನ್ನು ಹದಿನೈದು ಎಂದಿದೆ. ಹಾಗೇ ಇಲ್ಲಿಯೂ ಎಂದು ತಿಳಿಯಬೇಕು. ಅದರಿಂದ ಕರ್ಮವನ್ನು ಸೇರಿಸಿ ಹದಿನಾರು ಕಲೆಗಳನ್ನು ಅಂದರೆ ಹದಿನಾರು ಕಲೆಗಳುಳ್ಳ ಪ್ರಾಕೃತ ಶರೀರವನ್ನು ತೊರೆದು ಆ ಕಲೆಗಳ ಅಭಿಮಾನಿ ದೇವತೆಗಳೊಂದಿಗೆ ಅವರ ಅಧೀನದಲ್ಲಿರುತ್ತಾರೆ. ಪ್ರೀತಿಯಿಂದ ಅವರ ಒಡನಾಟದಲ್ಲಿದ್ದು ಆ ಪಾರತಂತ್ರ್ಯದ ಸುಖವನ್ನು ಅನುಭವಿಸುತ್ತಾರೆ. ಶ್ರೀಹರಿ ಸ್ವಾತಂತ್ರ್ಯದ ಸುಖವನ್ನು ಅನುಭವಿಸುತ್ತಾನೆ.

❖❖❖

ದೇಹಾಭಿಮಾನವಿರುವ ಪ್ರಯುಕ್ತ ಜೀವನು ದುಃಖಿ. ದೇಹಾಭಿಮಾನ ರಹಿತನಾದ್ದರಿಂದ ಪರಮಾತ್ಮ ದುಃಖಿಯಲ್ಲ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ದೇಹಸ್ಥೋಽಪಿ ನ ದೇಹಸ್ಥೋ ವಿದ್ವಾನ್ ಸ್ವಪ್ನಾದ್ ಯಥೋತ್ಥಿತಃ।
ಅದೇಹಸ್ಥೋಽಪಿ ದೇಹಸ್ಥಃ ಕುಮತಿಃ ಸ್ವಪ್ನದೃಗ್ ಯಥಾ ॥೮॥

ಸರ್ವಜ್ಞನಾದ ಶ್ರೀಹರಿ ಜೀವನ ದೇಹದಲ್ಲಿದ್ದೂ ಅಭಿಮಾನವಿಲ್ಲದ್ದರಿಂದ ದೇಹದಲ್ಲಿರುವವನೆಂದೆನಿಸುವುದಿಲ್ಲ. ಕನಸಿನಿಂದ ಎಚ್ಚೆತ್ತವನಂತೆ ದೇಹದಲ್ಲಿ ಉಂಟಾಗುವ ದುಃಖದಿಂದ ದೂರವಿರುತ್ತಾನೆ. ಅಜ್ಞಾನಿಯಾದ ಜೀವ ಕನಸು ಕಾಣುವವನಂತೆ ದೇಹಾಭಿಮಾನ ಪ್ರಯುಕ್ತ ದುಃಖಿ ಮತ್ತು ದೇಹಸ್ಥನೆನಿಸುತ್ತಾನೆ.

ಬೇರೆ ವ್ಯಾಖ್ಯಾನಕಾರರು ಇಲ್ಲಿ ಜ್ಞಾನಿ ಅಜ್ಞಾನಿಗಳ ವೈಲಕ್ಷಣ್ಯವನ್ನು ಹೇಳಿದೆ ಎನ್ನುತ್ತಾರೆ. ಜ್ಞಾನಿಯ ಚರ್ಯೆ ಹೇಗಿರುತ್ತದೆ ಎಂದಿದೆ ಎನ್ನುತ್ತಾರೆ. ವಸ್ತುತಃ ಪರಮಾತ್ಮ ಜೀವರ ವೈಲಕ್ಷಣ್ಯವನ್ನೇ ಇಲ್ಲಿ ಹೇಳಿದೆ ಎಂದು ವಿವೇಕ ಎಂಬ ಗ್ರಂಥವಚನದಿಂದ ಸ್ಪಷ್ಟವಾಗುತ್ತದೆ.

ಶರೀರಸ್ಥೋಽಪಿ ವಿದ್ವತ್ತ್ವಾನ್ನ ವಿಷ್ಣುರ್ಬಧ್ಯತೇ ಕ್ವಚಿತ್ ।
ಅವಿದ್ವತ್ತ್ವಾತ್ತು ತತ್ರೈವ ದೇಹೇ ಜೀವಸ್ತು ಬಧ್ಯತೇ ।
ಸ್ವಪ್ನದೃಗ್ವದಿಮೇ ಜೀವಾ ಹರಿಃ ಸ್ವಪ್ನೋತ್ಥಿತೋ ಯಥಾ ।
ಸದಾ ತಮೋವಿಹೀನೋಽಪಿ ಜ್ಞಾಪನಾರ್ಥಮುದೀರ್ಯತೇ ।
ಇತಿ ವಿವೇಕೇ ॥

ಜೀವಶರೀರದಲ್ಲಿ ಶ್ರೀಹರಿ ಇದ್ದರೂ ಜ್ಞಾನಿಯಾದ್ದರಿಂದ ಎಂದೂ ಬಂಧಿತನಾಗುವುದಿಲ್ಲ. ಅದೇ ದೇಹದಲ್ಲಿರುವ ಜೀವನು ಮಾತ್ರ ಅಜ್ಞಾನಿಯಾದ್ದರಿಂದ ಬದ್ಧನಾಗುತ್ತಾನೆ. ಸ್ವಪ್ನ ಕಾಣುವವರಂತೆ ಜೀವರು, ಸ್ವಪ್ನದಿಂದ ಎಚ್ಚೆತ್ತವನಂತೆ ಶ್ರೀಹರಿ. ಶ್ರೀಹರಿ ಸದಾ ಅಜ್ಞಾನರಹಿತನಾದರೂ, ಕನಸು ಕಂಡು ಎಚ್ಚೆತ್ತವನಿಗೆ ಹೇಗೋ ಹಾಗೆ ಶ್ರೀಹರಿಗೆ ಅಜ್ಞಾನವಿಲ್ಲ ಎಂದು ಮಾತ್ರ ತಿಳಿಸುವ ಉದ್ದೇಶದಿಂದ ಉದಾಹರಣೆ ಉಕ್ತವಾಗಿದೆ ಎಂದು ವಿವೇಕ ಎಂಬ ಗ್ರಂಥದಲ್ಲಿದೆ.

❖❖❖

ಇಂದ್ರಿಯಗಳಿಂದ ವಿಷಯಪದಾರ್ಥಗಳನ್ನು ಜೀವನು ಅನುಭವಿಸುವಾಗ ಪರಮಾತ್ಮ ಅದನ್ನು ತನ್ನದೆಂದು ಅಭಿಮಾನಪಡುವುದಿಲ್ಲ. ಅದರಿಂದ ಅವನಿಗೆ ದುಃಖವಿಲ್ಲವೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಇಂದ್ರಿಯೈರಿಂದ್ರಿಯಾರ್ಥೇಷು ಗುಣೈರಪಿ ಗುಣೇಷು ಚ ।
ಗೃಹ್ಯಮಾಣೇಷ್ವಹಂಕುರ್ಯಾನ್ನ ವಿದ್ವಾನ್ ಯಸ್ತ್ವವಿಕ್ರಿಯಃ ॥೯॥

ಹರಿಯ ಅಧೀನರಾದ ಜೀವರು ಹರಿಯ ಅಧೀನವಾದ ವಿಷಯ ಪದಾರ್ಥಗಳನ್ನು ಇಂದ್ರಿಯಗಳಿಂದ ಗ್ರಹಿಸುವಾಗ ಅಭಿಮಾನಪಡುತ್ತಾರೆ. ಅವಿಕಾರಿಯಾದ ಹರಿ ಅಭಿಮಾನಪಡುವುದಿಲ್ಲ. ಏಕೆಂದರೆ ಅವನು ಸರ್ವಜ್ಞ ವಿಕಾರವಿಲ್ಲದವ. ಜೀವ ಅಜ್ಞ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಜ್ಞಾನಿಜೀವನು ಅಭಿಮಾನಪಡುವುದಿಲ್ಲ ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಸ್ವಾತಂತ್ರ್ಯ ಎಂಬ ಗ್ರಂಥ ಇದನ್ನು ಜೀವೇಶ್ವರ ಭೇದ ಸಮರ್ಥನೆ ಎಂದಿದೆ.

ಗುಣ್ಯೈರಪಿ ಗುಣೇಷು ಅಪ್ರಧಾನ್ಯೈರ್ಜೀವೈರಪ್ರಧಾನೇಷು ವಿಷಯೇಷು।
ಆತ್ಮನೋ ವಶಗೈರ್ಜೀವೈರಾತ್ಮನೋ ವಶಗೇಷು ಚ ।
ದುಃಖೇಷು ಗೃಹ್ಯಮಾಣೇಷು ಮನಆದಿಭಿರಿಂದ್ರಿಯೈಃ ।
ಅಹಂ ದುಃಖೀತಿ ನೈವೇಶಸ್ತ್ವಹಂಕುರ್ಯಾತ್ ಪರಃ ಪುಮಾನ್ ।
ಜೀವಗಂ ತ್ವೇವ ತದ್ ದುಃಖಂ ವಿಷ್ಣುಃ ಪಶ್ಯತಿ ಸರ್ವದಾ ।
ಅತೋ ನ ದುಃಖಭಾಗ್ ವಿಷ್ಣುಃ ಸ್ವಾತಂತ್ರ್ಯಾತ್ ಪುರುಷೋತ್ತಮಃ
ಪಾರತಂತ್ರ್ಯಾದಹಂ ದುಃಖೀತ್ಯೇವಂ ಜೀವಃ ಪ್ರಪಶ್ಯತಿ ।
ತಸ್ಮಾತ್ ಸ ದುಃಖಭಾಗುಕ್ತೋ ಯಾವದೀಶಃ ಪ್ರಸೀದತಿ ॥
ಇತಿ ಸ್ವಾತಂತ್ರ್ಯೇ ॥

'ಗುಣ್ಯೈರಪಿ ಗುಣೇಷು' ಎಂದರೆ 'ತನ್ನ ಅಧೀನರಾದ ಜೀವರು ತನ್ನ ಅಧೀನವಾದ ವಿಷಯಗಳನ್ನು ಅನುಭವಿಸುತ್ತಿರುವಾಗ' ಎಂದರ್ಥ.

ತನ್ನ ಅಧೀನರಾದ ಜೀವರು ತನ್ನ ಅಧೀನವಾದ ವಿಷಯಪದಾರ್ಥ ಜನ್ಯ ದುಃಖಾದಿಗಳನ್ನು ಮನಸು ಮೊದಲಾದ ಇಂದ್ರಿಯಗಳಿಂದ ನಾನು ದುಃಖಿ ಎಂದು ಅಭಿಮಾನದಿಂದ ಗ್ರಹಿಸುತ್ತಿದ್ದರೂ ಸರ್ವಶಕ್ತನಾದ ಪರಮಪುರುಷನು ಹಾಗೆ ನಾನು ನನ್ನದೆಂದು ಅಭಿಮಾನಪಡುವುದಿಲ್ಲ. ವಿಷ್ಣು ಸ್ವತಂತ್ರನಾದ್ದರಿಂದ ಆ ದುಃಖವನ್ನು ಜೀವನಲ್ಲಿರುವುದೆಂದೇ ಸದಾ ಕಾಣುತ್ತಾನೆ. ಅದರಿಂದ ಅವನು ದುಃಖಭಾಗಿಯಾಗುವುದಿಲ್ಲ. ಜೀವನು ಪರತಂತ್ರನಾದ್ದರಿಂದ 'ನಾನು ದುಃಖ ಉಳ್ಳವನೆಂ'ದು ತಿಳಿಯುತ್ತಾನೆ. ಅದರಿಂದ ಅವನು ಹರಿಯ ಅನುಗ್ರಹವಾಗುವವರೆಗೆ ದುಃಖಭಾಗಿಯಾಗಿರುತ್ತಾನೆ ಎಂದು ಸ್ವಾತಂತ್ರ್ಯ ಎಂಬ ಗ್ರಂಥದಲ್ಲಿದೆ.

❖❖❖

ಜೀವನು ಕರ್ಮಮಾಡುವಾಗ ಪರಮಾತ್ಮನಲ್ಲಿರುವ ಸ್ವಾತಂತ್ರ್ಯವನ್ನು ತನ್ನಲ್ಲಿ ಆರೋಪ ಮಾಡಿಕೊಳ್ಳುವುದರಿಂದ ದುಃಖಾದಿ ಬಂಧಕ್ಕೊಳಗಾಗುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ದೈವಾಧೀನೇ ಶರೀರೇಽಸ್ಮಿನ್ ಗುಣಭಾವ್ಯೇನ ಕರ್ಮಣಾ ।
ವರ್ತಮಾನೋಽಬುಧಸ್ತತ್ರ ಕರ್ತಾಽಸ್ಮೀತಿ ನಿಬದ್ಧ್ಯತೇ ॥ ೧೦ ॥

ಹರಿಯ ಅಧೀನವಾದ ಶರೀರದಲ್ಲಿರುವ ಅಜ್ಞನಾದ ಜೀವ ತಾನು 'ಗುಣ'

ಅಸ್ವತಂತ್ರ ಎಂಬ ಭಾವನೆಯಿಂದ ಮಾಡಬೇಕಾಗಿರುವ ಕರ್ಮವನ್ನು ತಾನು ಸ್ವತಂತ್ರ ಎಂಬ ಭಾವನೆಯಿಂದ ಮಾಡಿ ಶರೀರದಲ್ಲಿ ಬದ್ಧನಾಗುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಗುಣ ಭಾವ್ಯವಾದ ಕರ್ಮ' ಎಂದರೆ 'ಇಂದ್ರಿಯಗಳಿಂದಾಗುವ ಕರ್ಮ' ಎಂದು ವಿವರಣೆ ನೀಡುತ್ತಾರೆ. 'ಇಂದ್ರಿಯ ಜನ್ಯವಾದ ಕರ್ಮವನ್ನು ತನ್ನದೆಂದು ಅಭಿಮಾನಪಡುವವನು ಬದ್ಧನಾಗುತ್ತಾನೆ' ಎಂದು ಈ ಶ್ಲೋಕವೂ ಹೇಳಿದರೆ ಹಿಂದೆ ಅನೇಕ ಬಾರಿ ಹೇಳಿದ್ದನ್ನೇ ತಿರುಗಿ ಹೇಳಿದಂತಾಗುತ್ತದೆ. ಶ್ರೀಮದಾಚಾರ್ಯರು ವಿಶೇಷಾರ್ಥವನ್ನು ಹೇಳುತ್ತಾರೆ.

'ಈ ಕರ್ಮ ಮಾಡುವಲ್ಲಿ ನಾನು ಸ್ವತಂತ್ರನಲ್ಲ, ಪರಮಾತ್ಮನೇ ಸ್ವತಂತ್ರ, ನಾನು ಅವನಿಗೆ 'ಗುಣ' 'ಅವನಿಗೆ ಅಧೀನ' ಎಂದು ಭಾವನೆ ಬೇಕು. ಇದು 'ಗುಣಭಾವ್ಯ'ವೆನಿಸುವ ಕರ್ಮ. ಪರಮಾತ್ಮನಲ್ಲಿರುವ ಸ್ವಾತಂತ್ರ್ಯವೆಂಬ ಮಹಾಗುಣ ವನ್ನು ತನ್ನಲ್ಲಿ ಆರೋಪಿಸಿ ಕೊಂಡು 'ನಾನು ಈ ಕರ್ಮ ಮಾಡುತ್ತಿದ್ದೇನೆ' 'ನಾನು ಕರ್ತ' ಎಂದುಕೊಂಡರೆ ಅಪರಾಧವಾಗುವುದು ಅದಕ್ಕೆ ಶಿಕ್ಷೆಯೇ ಕರ್ಮಫಲವಾಗಿ ದೊರಕುವ ದುಃಖ, ಸಂಸಾರ. ಸ್ವಾತಂತ್ರ್ಯ ಎಂಬ ಗ್ರಂಥ ಅಪೂರ್ವವಾದ ಈ ಅರ್ಥವನ್ನು ಹೇಳುತ್ತದೆ.

'ಗುಣಭಾವ್ಯೇನ ಕರ್ಮಣಾ' ಗುಣಭೂತಃ ಅಸ್ವತಂತ್ರೋಽಹಮಸ್ಮಿನ್ ಕರ್ಮಣೀತಿ ಭಾವನೀಯೇನ ।

ಅಸ್ವತಂತ್ರಃ ಸ್ವತಂತ್ರೋಽಸ್ಮೀತ್ಯೇವಂ ಜೀವಃ ಪ್ರಭಾವಯನ್ ।
ಬಧ್ಯತೇ ಹೀಶಕೋಪೇನ ರಾಜಭಾವೇನ ಭೃತ್ಯವತ್ ॥

ಇತಿ ಚ ॥

'ಗುಣಭಾವ್ಯೇನ ಕರ್ಮಣಾ' ಎಂದರೆ 'ಗುಣ' ನಾನು, ಅಸ್ವತಂತ್ರನು ನಾನು ಈ ಕರ್ಮ ಮಾಡುವಲ್ಲಿ ಎಂದು ತಿಳಿದುಕೊಂಡು ಮಾಡಬೇಕಾಗಿರುವ ಕರ್ಮವನ್ನು ನಾನು ಕರ್ತನೆಂದು ಅಹಂಕಾರದಿಂದ ಮಾಡುವುದರಿಂದ ಜೀವನು ಬದ್ಧನಾಗುತ್ತಾನೆ ಎಂದರ್ಥ.

ಅಸ್ವತಂತ್ರನಾದ ಜೀವನು ತಾನು ಸ್ವತಂತ್ರನಾಗಿರುವೆನೆಂಬ ಭಾವನೆಯಿಂದ ಕರ್ಮ ಮಾಡಿದರೆ, ಸೇವಕನು ತಾನೇ ರಾಜನೆಂದು ಭಾವಿಸಿದರೆ ಅವನ ಕೋಪಕ್ಕೆ ಈಡಾಗುವಂತೆ, ಪರಮಾತ್ಮನ ಕೋಪಕ್ಕೀಡಾಗಿ ಬದ್ಧನಾಗುತ್ತಾನೆ ಎಂದೂ ಸ್ವಾತಂತ್ರ್ಯ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

❖❖❖

ತಾನು ಅಸ್ವತಂತ್ರ, ಹರಿಯೇ ಸ್ವತಂತ್ರನೆಂದು ತಿಳಿದು ಏನೇ ಕರ್ಮ ಮಾಡಿದರೂ ಏನೇ ಭೋಗ ಮಾಡಿದರೂ ಜೀವನು ದುಃಖಭಾಗಿಯಾಗುವುದಿಲ್ಲ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಏವಂ ವಿರಕ್ತಃ ಶಯನ ಆಸನಾಟನಮಜ್ಜನೇ ।
ದರ್ಶನಸ್ಪರ್ಶನಘ್ರಾಣಭೋಜನಶ್ರವಣಾದಿಷು ॥ ೧೧ ॥

ನ ತಥಾ ಬಧ್ಯತೇ ವಿದ್ವಾಂಸ್ತತ್ರ ತತ್ರಾದದನ್ ಗುಣಾನ್ ।
ಪ್ರಕೃತಿಸ್ಥೋಽಪ್ಯಸಂಸಕ್ತೋ ಯಥಾ ಖಂ ಸವಿತಾಽನಿಲಃ ॥ ೧೨ ॥

ಅಸ್ವತಂತ್ರನಾದ ಜೀವನು ಶಯನ ಆಸನ ಅಟನ ಮಜ್ಜನ ದರ್ಶನ ಸ್ಪರ್ಶನ ಆಘ್ರಾಣನ ಭೋಜನ ಶ್ರವಣ ಮುಂತಾದ ಕ್ರಿಯೆಗಳಲ್ಲಿ ಹರಿಯೆ ಸ್ವತಂತ್ರ ತಾನು ಅಸ್ವತಂತ್ರ ಎಂದು ತಿಳಿಯಬೇಕು ಕರ್ಮಫಲದಲ್ಲಿ ವೈರಾಗ್ಯ ತಾಳಬೇಕು. ಆಗ ಆತ ವಿಷಯಗಳನ್ನು ಅನುಭವಿಸುತ್ತಿದ್ದರೂ ಅಜ್ಞಾನಿಯಂತೆ ದುಃಖಭಾಗಿಯಾಗುವುದಿಲ್ಲ. ಬದ್ಧನಾಗುವುದಿಲ್ಲ. ಆಕಾಶದಂತೆ ಸೂರ್ಯಕಿರಣದಂತೆ ಗಾಳಿಯಂತೆ ನಿರ್ಲಿಪ್ತನಾಗಿರುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರಿಗೆ 'ತತ್ರತತ್ರಾದಯನ್ ಗುಣಾನ್' ಎಂದು ಪಾಠ.

[1]'ಅನ್ಯತ್ರ ಇರುವ ಕರ್ಮ ನನ್ನನ್ನು ಬಂಧಿಸುತ್ತಿದೆ' ಹೀಗೆ ವೈರಾಗ್ಯ ತಾಳುವ ಜ್ಞಾನಿ ಅಜ್ಞಾನಿಯಂತೆ ಬದ್ಧನಾಗುವುದಿಲ್ಲ. ವಿಷಯಭೋಗವನ್ನು ತತತ್ರಾದಯನ್ ಇಂದ್ರಿಯಗಳಿಗೆ ಅವನು ಉಣಿಸುತ್ತಾನೆ ಹೊರತು ತಾನು ಉಣುವುದಿಲ್ಲ'–ಎಂದು ಇಲ್ಲಿ ಶ್ರೀಧರವ್ಯಾಖ್ಯಾನ.

ಅನ್ಯತ್ರ ದೇಹಇಂದ್ರಿಯಗಳಲ್ಲಿ ಆಗುವ ಕರ್ಮಗಳಿಗೆ ಆ ದೇಹೇಂದ್ರಿಯಗಳೇ ಕರ್ತೃ. ದೇಹಾತ್ಮೈಕ್ಯಭ್ರಾಂತಿಯಿಂದ ತನ್ನನ್ನು ಕರ್ತನೆಂದುಕೊಳ್ಳುವವನು ಅಜ್ಞಾನಿ— ಈ ಮಾತು ಭಾಗವತಕ್ಕೆ ತೀರ ವಿರುದ್ಧ. ಅವಧೂತಮುನಿ ತನ್ನ ದೇಹದಿಂದ ವಿರಕ್ತಿ ವಿವೇಕಗಳನ್ನು ಸಂಪಾದಿಸಿದವನು, ಕೊನೆಗೆ ಹೇಳುವ ಮಾತು, 'ವಿಚರಾಮ್ಯಸಂಗಃ' 'ನಾನು ಅಸಂಗನಾಗಿ ಸಂಚರಿಸುತ್ತಿದ್ದೇನೆ' ಎಂದು ಹೊರತು 'ನನ್ನ ದೇಹ ನನ್ನ ಕಾಲು ಅಸಂಗವಾಗಿ ಸಂಚರಿಸುತ್ತಿದೆ' ಎಂದಲ್ಲ.

---

1. ಅನ್ಯಗತಮೇವ ಕರ್ಮ ಮಾಂ ಬಧ್ನಾತೀತ್ಯೇವಂ ವಿರಕ್ತೋ ವಿದ್ವಾನ್ ತಥಾ ಅವಿದ್ವಾನಿವ ಶಯನಾಸನಾದಿಷು ನ ಬಧ್ಯತೇ । ಕುತಃ ತತ್ರತತ್ರ ವಿಷಯೇಷು ಗುಣಾನಿಂದ್ರಿಯಾಣ್ಯಾದಯನ್ ಭೋಜಯನ್ ತತ್‌ಸಾಕ್ಷಿತ್ವೇನ ವರ್ತಮಾನೋ ನತು ಸ್ವಯಮದನ್ । -ಶ್ರೀಧರಃ

'ಪ್ರಕೃತಿಃ ಕರ್ತ್ರೀ ಪುರುಷಸ್ತು ಪುಷ್ಕರಪಲಾಶವನ್ನಿರ್ಲಿಪ್ತಃ'

'ಜಡಪ್ರಕೃತಿಯೇ ಎಲ್ಲ ಕಾರ್ಯ ಮಾಡುತ್ತದೆ. ಜೀವನು ಸುಮ್ಮನೆ ನೋಡುತ್ತಾನೆ' ಎಂದು ಸಾಂಖ್ಯಮತ. ಸಾಂಖ್ಯಮತವನ್ನು ಬಹಳವಾಗಿ ಖಂಡಿಸುವ ಅದ್ವೈತವೂ ಜಡಕರ್ತೃತ್ವವನ್ನು ಹೇಳುತ್ತಿರುವುದು ವಿಪರ್ಯಾಸ. ಭಾಗವತವೂ ಹಾಗೇ ಹೇಳುತ್ತದೆ ಎನ್ನುವುದು ಇನ್ನೊಂದು ವಿಪರ್ಯಾಸ. ಶ್ರೀಮದಾಚಾರ್ಯರು ಸ್ವತಂತ್ರ ಕರ್ತೃತ್ವ ಶ್ರೀಹರಿಯಲ್ಲೇ ಇರುತ್ತದೆ ಎಂದರೂ ಅಧೀನಕರ್ತೃತ್ವ ಜೀವನಲ್ಲಿದೆ ಎಂದೇ ಹೇಳಿದ್ದಾರೆ.

ಜ್ಞಾನಿಯು ಇಂದ್ರಿಯಗಳಿಗೆ ವಿಷಯಭೋಗವನ್ನು ಉಣಿಸುತ್ತಾನೆ, ತಾನು ಉಣ್ಣುವುದಿಲ್ಲ ಎನ್ನುವುದನ್ನು ಸಾಂಖ್ಯರೂ ಕೂಡ ಒಪ್ಪುವುದಿಲ್ಲ. ಇಂದ್ರಿಯಗಳಿಗೆ ಕರ್ತೃತ್ವವನ್ನು ಅವರು ಒಪ್ಪುತ್ತಾರೆ. ಭೋಕ್ತೃತ್ವವನ್ನು ಒಪ್ಪುವುದಿಲ್ಲ. ಭೋಕ್ತೃತ್ವ ಚೇತನಧರ್ಮ ಎನ್ನುತ್ತಾರೆ. ಅದ್ವೈತದಲ್ಲಿಯೂ ಗುಹಾಧಿಕರಣದಲ್ಲಿ ಕರ್ಮಫಲ ಭೋಕ್ತೃತ್ವ ಜೀವನಿಗೇ ಹೊರತು ಬುದ್ಧಿಗೆ ಅಲ್ಲ ಎಂದಿದ್ದಾರೆ. ಇಂಥ ಜಡಭೋಕ್ತೃತ್ವವನ್ನು ಭಾಗವತ ಇಲ್ಲಿ ಹೇಳುತ್ತಿದೆ ಎನ್ನಬಹುದೆ?

'ಏವಂ ವಿರಕ್ತಃ ಶಯನೇ' ಏವಮಸ್ವಾತಂತ್ರ್ಯೇಣ ನಿತ್ಯಬದ್ಧೋऽಪಿ ।
ಏವಮಾತ್ಮನೋಃ ಸ್ವಾತಂತ್ರ್ಯಪಾರತಂತ್ರ್ಯಯೋರ್ವಿದ್ವಾನ್
ಜೀವೋऽಪ್ಯವಿದ್ವಜ್ಜೀವವನ್ನ ಬಧ್ಯತೇ । ಏವಂ ವಿದ್ವಾನಿತ್ಯನ್ವಯಃ ॥

'ಏವಂ ವಿರಕ್ತಃ ಶಯನೇ' ಎಂಬಲ್ಲಿ 'ಏವಂ ವಿರಕ್ತಃ' ಎಂದು ಅನ್ವಯವಲ್ಲ. 'ಹೀಗೆ ವಿರಕ್ತ' ಎನ್ನಲು ಹಿಂದೆ ವಿರಕ್ತಿ ಹೀಗೆ ಎಂದು ಹೇಳಲಿಲ್ಲವಾದ್ದರಿಂದ ಅನ್ವಯ ಕೂಡುವುದಿಲ್ಲ. 'ಏವಂ ವಿದ್ವಾನ್ ವಿರಕ್ತಃ' 'ಹೀಗೆ ತಿಳಿದು ವಿರಕ್ತನಾದ ಜ್ಞಾನಿ' ಎನ್ನಬೇಕು. ಅದರಿಂದ 'ಏವಂ ವಿದ್ವಾನ್' ಎಂದು ಅನ್ವಯ. 'ಜೀವನು ಅಸ್ವತಂತ್ರನಾದ್ದರಿಂದ ನಿತ್ಯಬದ್ಧ' ಎಂದು ಹಿಂದೆ ಹೇಳಿದ್ದರಿಂದ 'ಏವಂ' ಶಬ್ದವನ್ನು ಆವೃತ್ತಿ ಮಾಡಿಕೊಂಡು 'ಏವಂಭೂತಃ' ಹೀಗಿರುವವನು ಅಂದರೆ, ಅಸ್ವತಂತ್ರನಾದ್ದರಿಂದ ನಿತ್ಯಬದ್ಧನಾಗಿರುವವನು ಎಂದೂ ಅರ್ಥವಿಟ್ಟುಕೊಳ್ಳಬೇಕು. 'ಹೀಗೆ ತಿಳಿದವನು', ಪರಮಾತ್ಮ ಜೀವಾತ್ಮರ ಸ್ವಾತಂತ್ರ್ಯಪಾರತಂತ್ರ್ಯಗಳನ್ನು ತಿಳಿದವನು, 'ವಿದ್ವಾನ್' ಎಂದರೆ ಜೀವನೇ. ಏನೂ ವಿಶೇಷಣ ಕೊಡದೆ 'ವಿದ್ವಾನ್' ಎಂದರೆ, ಹಿಂದಿನ ಶ್ಲೋಕಗಳಲ್ಲಿ, ಸರ್ವಜ್ಞನಾದ ಪರಮಾತ್ಮನೇ. ಆದರೆ 'ಏವಂ' ಎಂದು ವಿಶೇಷಣವನ್ನು ಇಲ್ಲಿ ಕೊಟ್ಟದ್ದರಿಂದ 'ಹೀಗೆ ತಿಳಿದ ಜ್ಞಾನಿ ಜೀವನೆನ್ನುವುದೇ ಯುಕ್ತ. ಜ್ಞಾನಿಯಾದ ಜೀವ ವಿರಕ್ತನಾಗುವುದರಿಂದ ಅಜ್ಞಾನಿ

ಜೀವನಂತೆ ಬದ್ಧನಾಗಿರುವುದಿಲ್ಲ. 'ನ ತಥಾ ಬಧ್ಯತೇ' ಎಂದು ಶ್ರೀಕೃಷ್ಣ ಹೇಳುತ್ತಿದ್ದಾನೆ.

ನಿತ್ಯಬದ್ಧೋಽಪಿ ಜೀವೋ ಯ ಆತ್ಮನೋ ನಿತ್ಯಬದ್ಧತಾಂ ।
ವಿಷ್ಣುನಾ ನಿತ್ಯಮುಕ್ತತ್ವಂ ತಸ್ಯ ವೇತ್ತಿ ಸ ಮುಚ್ಯತೇ ।
ತದಧೀನತ್ವಬಂಧೇ ತು ವಿದ್ಯಮಾನೇಽಪ್ಯದುಃಖಭಾಕ್ ।
ದೇಹಸ್ಥೋಽಪಿ ನ ದುಃಖೀ ಸ್ಯಾದನ್ಯವತ್ ಕಿಮು ಮುಕ್ತಿಗಃ ॥

ಇತಿ ಪ್ರಾಥಮ್ಯೇ ॥

ಜೀವನು ನಿತ್ಯಬದ್ಧನಾಗಿದ್ದರೂ ತಾನು ಶ್ರೀಹರಿಯಿಂದ ನಿತ್ಯಬದ್ಧನಾಗಿರುವೆನು. ಅವನು ನಿತ್ಯಮುಕ್ತನೇ ಎಂದು ತಿಳಿದರೆ ಮುಕ್ತನಾಗುತ್ತಾನೆ. ಮುಕ್ತಿಯಲ್ಲಿ ಪರಮಾತ್ಮನ ಅಧೀನನಾಗಿರುವುದೆಂಬ ಬಂಧವಿದ್ದರೂ ಅವನು ದುಃಖ ಭಾಗಿಯಾಗುವುದಿಲ್ಲ. ಜೀವನ್ಮುಕ್ತನೂ ಕೂಡ ಪರಮಾತ್ಮಾಧೀನತ್ವರೂಪ ಬಂಧದಿಂದ ಅಜ್ಞಾನಿಯಂತೆ ದುಃಖಿಯಾಗುವುದಿಲ್ಲವೆಂದ ಮೇಲೆ ಮುಕ್ತನು ದುಃಖಿಯಾಗುವುದಿಲ್ಲವೆಂದು ಬೇರೇನು ಹೇಳಬೇಕು ಎಂದು ಪ್ರಾಥಮ್ಯ ಎಂಬ ಗ್ರಂಥದಲ್ಲಿದೆ.

❖❖❖

ಪರಮಾತ್ಮಾ ಪರೋಕ್ಷಿಯು ಎಲ್ಲ ಸಂಶಯವನ್ನೂ ಮಿಥ್ಯಾಜ್ಞಾನವನ್ನೂ ಪರಿಹರಿಸಿ ಕೊಂಡು ಮುಕ್ತನಾಗುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ವೈಶಾರದ್ಯೇಕ್ಷಯಾಽಸಂಗಶಿತಯಾ ಛಿನ್ನಸಂಶಯಃ ।
ಪ್ರತಿಬುದ್ಧ ಇವ ಸ್ವಪ್ನಾನ್ನಾನಾತ್ವಾದ್ ವಿನಿವರ್ತತೇ ॥ ೧೩ ॥

ನಿರ್ಲಿಪ್ತನಾಗಿರುವ ಜೀವನು ವೈರಾಗ್ಯದಿಂದ ಹರಿತಗೊಂಡ ಪರಮಾತ್ಮಾ ಪರೋಕ್ಷದಿಂದ ಎಲ್ಲ ಸಂಶಯಗಳನ್ನು ಕಡಿದುಕೊಂಡು ಕನಸಿನಿಂದ ಎಚ್ಚೆತ್ತವನಂತೆ ಮಿಥ್ಯಾಜ್ಞಾನದಿಂದ ನಿವೃತ್ತನಾಗುತ್ತಾನೆ, ಬಂಧಮುಕ್ತನಾಗುತ್ತಾನೆ.

ನಾನಾತ್ವವೆಂದರೆ ಭೇದವೆಂದರ್ಥ ಪ್ರಸಿದ್ಧವಾಗಿದೆ. ಬೇರೆ ವ್ಯಾಖ್ಯಾನಕಾರರು ತಮ್ಮ ತಮ್ಮ ಮತಾನುಸಾರವಾಗಿ ಭೇದನಿವೃತ್ತಿಯನ್ನು ಹೇಳುತ್ತಾರೆ. ದೇಹಾದಿ ಭೇದನಿವೃತ್ತಿ ಎಂದು ಶ್ರೀಧರ ವ್ಯಾಖ್ಯಾನ, ದೇವಾದಿದೇಹಭೇದ ನಿವೃತ್ತಿ ಎಂದು ವೀರರಾಘವ ವ್ಯಾಖ್ಯಾನ, ಪರಮಾತ್ಮ ನಿರಪೇಕ್ಷ ಸತ್ವರೂಪವಾದ ಭೇದ ನಿವೃತ್ತಿ ಎಂದು ಶುಕದೇವ ವ್ಯಾಖ್ಯಾನ ಹೇಳುತ್ತಿವೆ.

ಆದರೆ ಅಪರೋಕ್ಷದಿಂದ ಭೇದ ನಿವೃತ್ತವಾಗುವುದಿಲ್ಲ. ಮೊದಲೇ ಇಲ್ಲದಿದ್ದ, ಭ್ರಾಂತಿಯಲ್ಲಿ ಕಂಡ ಭೇದಕ್ಕೆ ನಿವೃತ್ತಿ ಹೇಗೆ ಸಾಧ್ಯ? ಭ್ರಾಂತಿಗೇ ನಿವೃತ್ತಿ ಎನ್ನಬೇಕು. ಆದರೆ ಭಾಗವತ ಭೇದಕ್ಕೆ ನಿವೃತ್ತಿಯನ್ನು ಹೇಳುತ್ತದೆ. ಈ ಸಮಸ್ಯೆಗೆ ಬೇರೆ ವ್ಯಾಖ್ಯಾನಕಾರರಲ್ಲಿ ಪರಿಹಾರವಿಲ್ಲ. ಶ್ರೀಮದಾಚಾರ್ಯರು ವಾಲ್ಲಭ್ಯಗ್ರಂಥದ ಆಧಾರವನ್ನು ತೋರಿಸುತ್ತ 'ನಾನಾತ್ವ'ವೆಂದರೆ ಭೇದವೆಂದೇ ಪ್ರಸಿದ್ಧವಾದರೂ ಕೆಲವು ಕಡೆ ಮಿಥ್ಯಾಜ್ಞಾನವು ನಾನಾತ್ವವೆಂದು ಕರೆಸಿಕೊಳ್ಳುತ್ತದೆ ಎಂದು ಹೇಳುತ್ತಾರೆ.

ನಾನಾತ್ವಮಿತಿ ವೈ ಮಿಥ್ಯಾಜ್ಞಾನಂ ಕುತ್ರಚಿದುಚ್ಯತೇ ।
ವಸ್ತುಯಾಥಾತ್ಮ್ಯತೋಽನ್ಯತ್ವಾಜ್ಜ್ಞಾನಸ್ಯೋಽಜ್ಞೋ ವಿವಕ್ಷಿತಃ ॥
ಇತಿ ವಾಲ್ಲಭ್ಯೇ ॥

ನಾನಾತ್ವವೆಂದು ಕೆಲವು ಕಡೆ ಮಿಥ್ಯಾಜ್ಞಾನವು ಉಕ್ತವಾಗುತ್ತದೆ. ಏಕೆಂದರೆ ನಾನಾತ್ವವೆಂದರೆ ಅನ್ಯತ್ವವೆಂಬುದು ಪ್ರಸಿದ್ಧವಾಗಿದೆ. ವಸ್ತುವಿನ ಯಾಥಾತ್ಮ್ಯವನ್ನು ಬಿಟ್ಟು ಅನ್ಯಾಕಾರವನ್ನು ಉಲ್ಲೇಖಿಸುವುದು ಮಿಥ್ಯಾಜ್ಞಾನವೆ. ಜ್ಞಾನವು ಅನ್ಯ, ಬೇರೆಯಾಗಿರುವುದೆಂದರೆ ಜ್ಞಾನವು ವಾಸ್ತವ ವಿಷಯವನ್ನು ಬಿಟ್ಟು ಬೇರೆಯಾಗಿ ಉಲ್ಲೇಖಿಸುವುದು ವಿವಕ್ಷಿತವಾಗಿದೆ. ಎಂದು ವಾಲ್ಲಭ್ಯಗ್ರಂಥದಲ್ಲಿ ಉಕ್ತವಾಗಿದೆ.

ಅಪರೋಕ್ಷಜ್ಞಾನಿ ಎಲ್ಲ ಸಂಶಯ ಮಿಥ್ಯಾಜ್ಞಾನಗಳಿಂದ ಮುಕ್ತನಾಗುತ್ತಾನೆ. ಮಿಥ್ಯಾಜ್ಞಾನವೆಂದರೆ ಜೀವಬ್ರಹ್ಮಾಭೇದಜ್ಞಾನ, ಜೀವಸ್ವಾತಂತ್ರ್ಯಜ್ಞಾನ ಮುಂತಾದವು ಹೊರತು ಬೇರೆ ವ್ಯಾಖ್ಯಾನಕಾರರು ಹೇಳುವ ಜೀವೇಶ್ವರ ಭೇದಜ್ಞಾನಾದಿಗಳಲ್ಲ. ಭಾಗವತ ಭೇದಜ್ಞಾನನಿವೃತ್ತಿಯನ್ನು ಹೇಳುತ್ತಿಲ್ಲ. ಭೇದನಿವೃತ್ತಿಯನ್ನು ಹೇಳುತ್ತಿದೆ. ಭೇದನಿವೃತ್ತಿ ನಾನಾತ್ವನಿವೃತ್ತಿ ಎಂದರೆ ಮಿಥ್ಯಾಜ್ಞಾನ ನಿವೃತ್ತಿ ಎನ್ನುವುದು ವಾಲ್ಲಭ್ಯ ಗ್ರಂಥದಿಂದ ತಿಳಿದು ಬರುತ್ತದೆ.

❖❖❖

ಜೀವನ್ಮುಕ್ತನು ತನ್ನ ಬಗ್ಗೆ ಯಾರಾದರೂ ಹೊಗಳಿದರೆ ಹೊಗಳುವುದಿಲ್ಲ ನಿಂದಿಸಿದರೆ ನಿಂದಿಸುವುದಿಲ್ಲ ನಿರ್ವಿಕಾರನಾಗಿರುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ನ ಸ್ತುವೀತ ನ ನಿಂದೇತ ಕುರ್ವತಃ ಸಾಧ್ವಸಾಧು ವಾ ।
ವದತೋ ಗುಣದೋಷಾಭ್ಯಾಂ ವರ್ಜಿತಃ ಸಮದೃಙ್ಮುನಿಃ ॥ ೧೬ ॥

ಸರ್ವತ್ರ ನಿರ್ದೋಷನಾಗಿ ಸಮನಾದ ಹರಿಯನ್ನು ತಿಳಿದು ಲೌಕಿಕ ಗುಣದೋಷಗಳಿಂದ ದೂರನಾದ ಜೀವನ್ಮುಕ್ತನು, ತನಗೆ ಯಾರಾದರೂ ಒಳ್ಳೆಯದನ್ನು

ಮಾಡಲಿ ನುಡಿಯಲಿ, ಅಥವಾ ಕೆಟ್ಟದನ್ನು ಮಾಡಲಿ ನುಡಿಯಲಿ ಅದನ್ನು ಹೊಗಳುವುದೂ ಇಲ್ಲ, ನಿಂದಿಸುವುದೂ ಇಲ್ಲ.

ನ ಕುರ್ಯಾನ್ನ ವದೇತ್ಕಿಂಚಿನ್ನ ಧ್ಯಾಯೇತ್ಸಾಧ್ವಸಾಧು ವಾ ।
ಆತ್ಮಾರಾಮೋಽನಯಾ ವೃತ್ತ್ಯಾ ವಿಚರೇಜ್ಜಡವತ್ ಸ್ಥಿತಃ ॥ ೧೭ ॥

ಪರಮಾತ್ಮನಲ್ಲಿಯೇ ಸುಖಕಾಣುವ ಅಪರೋಕ್ಷಜ್ಞಾನಿ ತನಗಾಗಿ ಒಳ್ಳೆಯದನ್ನಾಗಲಿ ಕೆಟ್ಟದನ್ನಾಗಲಿ ಮಾಡುವುದಿಲ್ಲ ನುಡಿಯುವುದಿಲ್ಲ. ನೆನೆಯುವುದಿಲ್ಲ. ಪರಮಾತ್ಮನ ಪ್ರೀತಿಗಾಗಿ ಮಾಡುತ್ತಾನೆ ನುಡಿಯುತ್ತಾನೆ. ನೆನೆಯುತ್ತಾನೆ. ಜಡನಂತೆ ಇರುತ್ತಾನೆ.

ಜೀವನ್ಮುಕ್ತನಲ್ಲಿ ದೋಷದಂತೆ ಗುಣವೂ ಸರ್ವಾತ್ಮನಾ ನಿವೃತ್ತಿ ಹೊಂದುತ್ತದೆ. ಅವನು ಯಾರನ್ನೂ ಹೊಗಳುವುದೂ ಇಲ್ಲ ತೆಗಳುವುದೂ ಇಲ್ಲ. ಒಳ್ಳೆಯ ಅಥವಾ ಕೆಟ್ಟಕಾರ್ಯಗಳನ್ನೂ ಯಾವುದನ್ನೂ ಮಾಡುವುದಿಲ್ಲ. ಜಡನಂತಿರುತ್ತಾನೆ ಎಂದು ಭಾಗವತ ಹೇಳುತ್ತಿರುವಂತೆ ಕಾಣುತ್ತದೆ. ಹಾಗೆಯೇ ಬೇರೆ ವ್ಯಾಖ್ಯಾನಕಾರರೂ ವಿವರಣೆ ನೀಡಿದ್ದಾರೆ.

ವಸ್ತುತಃ ಜೀವನ್ಮುಕ್ತನು ಮಹಾದೈವೀಗುಣಗಳಿಂದ ಯುಕ್ತನಾಗಿರುತ್ತಾನೆ. ಭಗವಂತನನ್ನು ಭಕ್ತರನ್ನು ಹೊಗಳುತ್ತಾನೆ. ಅಭಕ್ತರನ್ನು ತೆಗಳುತ್ತಾನೆ. ಭಗವಂತನು ಮೆಚ್ಚುವಂತೆ ಒಳ್ಳೆಯ ಕಾರ್ಯಗಳನ್ನು ಮಾಡುತ್ತಾನೆ. ಭಗವಂತನ ವಿರೋಧಿಗಳ ಬಗ್ಗೆ ತಿರಸ್ಕಾರ ಭಾವನೆಯಿಂದ ಜಡನಂತೆ ವರ್ತಿಸುತ್ತಾನೆ. ತನ್ನ ಪ್ರಯೋಜನಕ್ಕಾಗಿ ಏನೂ ಮಾಡದೆ ಸುಮ್ಮನಿರುತ್ತಾನೆ. ಇದು ಪ್ರಾಥಮ್ಯ ಎಂಬ ಗ್ರಂಥದಲ್ಲಿ ಸ್ಪಷ್ಟವಾಗುತ್ತದೆ.

ದೋಷಶ್ಚೈವ ಗುಣಶ್ಚೋಭಾವೀಶತಂತ್ರೌ ನ ಮೇ ವಶೌ ।
ಇತಿ ಜಾನನ್ನದೋಷಃ ಸ್ಯಾದ್ ವರ್ಜಿತೋಽಲ್ಪಗುಣೇನ ಚ ॥
ಇತಿ ಪ್ರಾಥಮ್ಯೇ ॥

ದೋಷವಾಗಲಿ ಗುಣವಾಗಲಿ ಎರಡೂ ಪರಮಾತ್ಮನ ಅಧೀನ. ನನ್ನ ಅಧೀನವಲ್ಲ. ಹೀಗೆ ತಿಳಿದು ಜೀವನ್ಮುಕ್ತನು ದೋಷಗಳನ್ನು ಹರಿಪ್ರೀತಿಗೋಸ್ಕರ ಸರ್ವಾತ್ಮನಾ ಬಿಡುತ್ತಾನೆ. ಗುಣಗಳಲ್ಲಿ ಅಲ್ಪವಾದ ಲೌಕಿಕ ಗುಣಗಳನ್ನು ಬಿಡುತ್ತಾನೆ. ಮಹಾಗುಣಗಳನ್ನು ತನ್ನಲ್ಲಿ ಬೆಳೆಸಿಕೊಳ್ಳುತ್ತಾನೆ ಎಂದು ಪ್ರಾಥಮ್ಯ ಎಂಬ ಗ್ರಂಥದಲ್ಲಿ ಹೇಳಿದೆ.

❖❖❖

ವೇದ ಓದುವುದರಲ್ಲಿ ನಿಷ್ಠೆ ಇದೆ, ವೇದವೇದ್ಯನಾದ ಪರಮಾತ್ಮನ ವಿಷಯದಲ್ಲಿ ನಿಷ್ಠೆ ಇಲ್ಲ ಎಂದರೆ ಅದು ವ್ಯರ್ಥಶ್ರಮ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಶಬ್ದಬ್ರಹ್ಮಣಿ ನಿಷ್ಣಾತೋ ನ ನಿಷ್ಣಾಯಾತ್ಪರೇ ಯದಿ ।
ಶ್ರಮಸ್ತಸ್ಯ ಭ್ರಮಫಲೋ ಹ್ಯಧೇನುಮಿವ ರಕ್ಷತಃ ॥ ೧೮ ॥

ಪರೋಕ್ಷಜ್ಞಾನ ಸಂಪಾದಿಸಿದವನು ವೇದಾಧ್ಯಯನವನ್ನು ಆದರಿಸಿ ಪರಬ್ರಹ್ಮನನ್ನು ಆದರಿಸದಿದ್ದರೆ ಅವನ ಶ್ರಮಕ್ಕೆ ಅಜ್ಞಾನ ತಮಸ್ಸುಗಳೇ ಫಲ. ಹಾಲು ಕೊಡದ ಹಸುವನ್ನು ಸಾಕುವಂತೆ ವ್ಯರ್ಥವಾಗುವುದು.

[1]ಯಾರು ವೇದದಲ್ಲಿ ಪಂಡಿತನಾಗಿದ್ದಾನೆ, ತಾನು ಪಂಡಿತನೆಂದು ಹೊಗಳಿಕೊಳ್ಳುತ್ತಾನೆ, ವೇದದಲ್ಲಿ ಹೇಳಿದ ಪರಮಾತ್ಮನಲ್ಲಿ ಮಾತ್ರ ನಿಷ್ಠೆ ಇಲ್ಲ ಅವನು ತಾನು ಮಾಡಿದ ಶ್ರಮವೆಲ್ಲ ವ್ಯರ್ಥ' ಎಂದು ಬೇರೆ ವ್ಯಾಖ್ಯಾನಕಾರರು ವಿವರಣೆ ನೀಡಿದ್ದಾರೆ.

ನಿಷ್ಣಾತ ಶಬ್ದಕ್ಕೆ ಇವರು ಎರಡು ಅರ್ಥಗಳನ್ನು ತೋರಿಸಿದ್ದಾರೆ. ವೇದದಲ್ಲಿ ಪಾಂಡಿತ್ಯ, ಅದರ ಅರ್ಥದಲ್ಲಿ ನಿಷ್ಠೆ ಎಂದು. ನಿಷ್ಠೆ ಎಂದರೆ 'ಬ್ರಹ್ಮಚರ್ಯದಲ್ಲಿ ನಿಷ್ಠೆ' ಎಂಬಂತೆ ನಿಯಮ ಎಂದರ್ಥ. 'ನಿಷ್ಣಾತ' ಶಬ್ದದ ಅವಯವಾರ್ಥ 'ನಿ–ಸ್ನಾತ' ಚೆನ್ನಾಗಿ ಮುಳುಗಿರುವುದು. ಆದರೆ ಪ್ರವೀಣ ಕುಶಲ ಮುಂತಾದ ಶಬ್ದಗಳಂತೆ ನಿರೂಢ ಲಕ್ಷಣಾವೃತ್ತಿಯಿಂದ ಪಂಡಿತ ಎಂದು ಅರ್ಥ ಬಂದಿದೆ. ವೇದದಲ್ಲಿ ಪಂಡಿತ, ಆದರೆ ವೇದೋಕ್ತವಾದ ಭಗವದಾರಾಧನೆಯಲ್ಲಿ ನಿಷ್ಠೆ ಉಳ್ಳವನಲ್ಲ, ನಿಯಮೇನ ಅನುಷ್ಠಾನ ಮಾಡುವವನಲ್ಲ, ಅಂಥವನಿಗೆ ವೇದಾಭ್ಯಾಸದಲ್ಲಿ ಮಾಡಿದ ಶ್ರಮಕ್ಕೆ ತಕ್ಕಫಲ ಸಿಕ್ಕಿಲ್ಲ. ಸಿಕ್ಕಿದ್ದು ವಿಪರೀತವಾಗಿ ನರಕಾದಿ ಫಲವೇ. ಭಗವಂತಲ್ಲಿ ನಿಷ್ಠೆಯನ್ನು ಹೊಂದುವುದೇ ನಿಜವಾದ ಫಲ ಎಂದು ಶ್ಲೋಕವು ಹೇಳುತ್ತಿದೆ 'ನ ನಿಷ್ಣಾಯಾತ್ ಪರೇ ಯದಿ' ಎಂದು.

ವಸ್ತುತಃ ಶ್ಲೋಕದಲ್ಲಿ 'ನಿಷ್ಣಾತಃ' 'ನಿಷ್ಣಾಯಾತ್' ಎಂಬಲ್ಲಿ ಪಾಂಡಿತ್ಯ ನಿಷ್ಠೆಗಳೆಂದು ಬೇರೆಬೇರೆ ಅರ್ಥಗಳನ್ನು ಬೇರೆ ವ್ಯಾಖ್ಯಾನಕಾರರು ತೋರಿಸಿದ್ದು

1. ಯಸ್ತು ಕೇವಲಂ ಶಬ್ದಬ್ರಹ್ಮಣ್ಯಭಿಜ್ಞಃ ಪಾಂಡಿತ್ಯಮಾತ್ರಶ್ಲಾಘೀ ನ ತೂಕ್ತೈಃ ಸಾಧನೈಸ್ತದರ್ಥನಿಷ್ಠೋ ಭವೇತ್ ತಂ ನಿಂದತಿ । -ಶ್ರೀಧರಃ

ತದರ್ಥನಿಷ್ಠಸ್ತಸ್ಯ ವೇದಸ್ಯ ಪ್ರತಿಪಾದ್ಯೋಽರ್ಥೋ ಯಃ ಪರಮಾತ್ಮಾ ತನ್ನಿಷ್ಠೋ ನ ಭವೇತ್ ।
-ರಾಧಾರಮಣದಾಸಃ

ಅನಾವಶ್ಯಕ. ನಿಷ್ಠೆ ಸ್ಥಿತಿ ಎಂಬ ಒಂದೇ ಅರ್ಥ ವೇದದಲ್ಲಿಯೂ ವೇದೋಕ್ತಕರ್ಮದಲ್ಲಿಯೂ ಕೂಡುತ್ತದೆ. ವೇದದಲ್ಲಿಯೂ ವೇದೋಕ್ತಕರ್ಮದಲ್ಲಿಯೂ ಸ್ಥಿತಿ ಎಂದರೆ ನಿಯಮವೆ. ವೇದದಲ್ಲಿ ಅಧ್ಯಯನ ನಿಯಮ. ವೇದೋಕ್ತಕರ್ಮದಲ್ಲಿ ಅನುಷ್ಠಾನ ನಿಯಮ. ಅದರಿಂದ ನಿಷ್ಣಾತತ್ವ, ನಿಷ್ಠೆ, ಸ್ಥಿತಿ, ನಿಯಮ ಇವೆಲ್ಲವೂ ಪರ್ಯಾಯ ಶಬ್ದಗಳಾಗುತ್ತವೆ. ಸ್ಥಿತಿ ಶಬ್ದಕ್ಕೆ ಇನ್ನೂ ಬೇರೆ ಅರ್ಥಗಳೂ ಉಂಟೆಂದು ಶ್ರೀಮದಾಚಾರ್ಯರು ಹೇಳುತ್ತಾರೆ.

ಸ್ಥಿತಿಶಬ್ದೇನ ನಿಯಮಃ ಕ್ವಚಿಜ್ಜೀವನಮುಚ್ಯತೇ ।
ಉತ್ಥಿತತ್ವಂ ಕ್ವಚಿಚ್ಚೈವ ಕ್ವಚಿದ್ ಗತಿವಿರೋಧಿತಾ ॥
ಇತಿ ಶಬ್ದನಿರ್ಣಯೇ ॥

ಸ್ಥಿತಿ ಶಬ್ದಕ್ಕೂ (ಅದರ ಪರ್ಯಾಯವಾದ ನಿಷ್ಣಾತ ಮುಂತಾದ ಶಬ್ದಕ್ಕೂ) ನಿಯಮ ಜೀವನ ಉತ್ಥಿತತ್ವ ಗತಿನಿವೃತ್ತಿ ಎಂದು ಬೇರೆಬೇರೆ ಕಡೆ ಬೇರೆಬೇರೆ ಅರ್ಥಗಳಿರುತ್ತವೆ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.

'ಆತ್ಮಾರಾಮೋऽನಯಾ ವೃತ್ತ್ಯಾ ವಿಚರೇಜ್ಜಡವನ್ಮುನಿಃ'

ಎಂದು ಹಿಂದಿನ ಶ್ಲೋಕದಲ್ಲಿ 'ಅನಯಾ ವೃತ್ತ್ಯಾ' ಎಂದರೆ, ತನಗಾಗಿ ಏನನ್ನು ಮಾಡದಿರುವ ನುಡಿಯದಿರುವ ಚಿಂತಿಸದಿರುವ ನಿಯಮದಿಂದ ಎಂದರ್ಥ. 'ವೃತ್ತಿ' 'ನಿಷ್ಠೆ' 'ಸ್ಥಿತಿ'ಗಳು ಪರ್ಯಾಯ ಪದಗಳು, ಇಲ್ಲಿ ನಿಯಮಾರ್ಥಕಗಳು. 'ಜಡವತ್‌ಸ್ಥಿತಃ' ಎಂದೂ ಪಾಠವಿದೆ. ಆಗ ಜಡನಂತಿರುವ ನಿಯಮ ಉಳ್ಳವನೆಂದರ್ಥ.

'ಪ್ರಕೃತಿಸ್ಥೋऽಪ್ಯಸಂಸಕ್ತಃ' (ಶ್ಲೋಕ.೧೨)
ದೇಹಸ್ಥೋऽಪಿ ಹಿ ತದ್ಗುಣೈಃ (ಶ್ಲೋಕ ೧೪)

ಇತ್ಯಾದಿ ಸ್ಥಾಧಾತು ಪ್ರಯೋಗಗಳಲ್ಲಿ 'ಸ್ವರ್ಗಸ್ಥ' ಮುಂತಾದವುಗಳಂತೆ ವಾಸಮಾಡುವುದು ಜೀವನ ಮಾಡುವುದು ಎಂದರ್ಥ.

ಸ್ಥಿತ್ಯುದ್ಭವತ್ರಾಣ ನಿರೋಧಮಸ್ಯ (ಶ್ಲೋಕ ೨೦)

ಎಂಬಲ್ಲಿಯೂ ಸ್ಥಿತಿ ಎಂದರೆ ಜೀವನ ಎಂದರ್ಥವಿಟ್ಟುಕೊಂಡರೆ ತ್ರಾಣ ಎಂಬುದು ರಕ್ಷಣಾರ್ಥವಾಗಿರುವುದರಿಂದ ಪುನರುಕ್ತಿ ಅಲ್ಲ.

❖❖❖

ಹಾಲು ಮಾರುವವನು ಹಾಲುಕೊಡದ ಗೊಡ್ಡು ಹಸುವನ್ನು ಸಾಕುವಂತೆ ಭಗವಂತನ ಕುರಿತಲ್ಲದ ಶಾಸ್ತ್ರವನ್ನು ಅಧ್ಯಯನ ಮಾಡುವುದು ವ್ಯರ್ಥಶ್ರಮ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಗಾಂ ದುಗ್ಧದೋಹಾಮಸತೀಂ ಚ ಭಾರ್ಯಾಂ
ದೇಹಂ ಪರಾಧೀನಮಸತ್‌ಪ್ರಜಾಂ ಚ ।
ವಿತ್ತಂ ತ್ವತೀರ್ಥೀಕೃತಮಂಗ ವಾಚಂ
ಹೀನಾಂ ಮಯಾ ರಕ್ಷತಿ ದುಃಖದುಃಖೀ ॥ ೧೯ ॥

'ಅಂಗ' ಪ್ರೀತಿಯ ಉದ್ಧವನೆ, ನನ್ನ ಸ್ತುತಿಪರವಲ್ಲದ ಶಾಸ್ತ್ರವನ್ನು ಮೋಹದಿಂದ ಅಧ್ಯಯನ ಮಾಡುತ್ತ ರಕ್ಷಿಸಿಟ್ಟುಕೊಳ್ಳುವುದು, ಹಾಲು ಮಾರುವವನು ಹಾಲು ಕೊಡದ ಹಸುವನ್ನು ಸಾಕುವಂತೆ, ಪತಿವ್ರತೆಯಾಗದ ಹೆಂಡತಿಯನ್ನು ಸಾಕುವಂತೆ, ತನಗೆ ಉಪಯೋಗವಿಲ್ಲದೆ ಅನ್ಯರ ಸೇವೆಗಾಗಿರುವ ತನ್ನ ಶರೀರವನ್ನೂ ದುಷ್ಟರಾದ ಮಕ್ಕಳನ್ನೂ ಸತ್ಪಾತ್ರರಿಗೆ ಸಲ್ಲದ ಹಣವನ್ನೂ ಕಾಪಾಡಿಕೊಳ್ಳುವಂತೆ, ಆತ ವ್ಯರ್ಥವಾಗಿ ಬಲು ದುಃಖ ಭಾಗಿಯಾಗುತ್ತಾನೆ.

[1]'ಮೊದಲು ಚೆನ್ನಾಗಿ ಹಾಲು ಕರೆದಿದ್ದ ಹಸು ಇನ್ನೂ ಕರುಹಾಕಿ ಹಾಲು ಕರೆಯಬಹುದೆಂಬ ನಿರೀಕ್ಷೆಯಿಂದ ಸಾಕಿದರೂ ಕರು ಹಾಕಲಿಲ್ಲ, ಹಾಲು ಕರೆಯಲಿಲ್ಲ. ಐಹಿಕ ದುಃಖಕ್ಕೆ ಕಾರಣವಾಯಿತು. ಅದರಿಂದ ಆತ ಉಪೇಕ್ಷೆ ಮಾಡಿ ಪಾಪ ಕಟ್ಟಿಕೊಂಡು ಪಾರತ್ರಿಕ ದುಃಖಕ್ಕೂ ಭಾಗಿಯಾದ'ನೆಂದು ವಿಶ್ವನಾಥ ವ್ಯಾಖ್ಯಾನ ಹೇಳಿದೆ.

ಗೋರಕ್ಷಣೆ ಪಾರತ್ರಿಕ ದುಃಖಕ್ಕೆ ಕಾರಣವಾಗುತ್ತದೆ ಎಂದು ಭಾಗವತ ಹೇಳಿದಂತೆ ಕಾಣುತ್ತದೆ. ಅದಕ್ಕೆ ಹೀಗೆ ವಿವರಣೆ ಕೊಡಬೇಕೆಂದಿದೆ ವಿಶ್ವನಾಥ ವ್ಯಾಖ್ಯಾನ. ಇದು ಸರಿಯಾದ ವಿವರಣೆಯಲ್ಲ. ಪಾರತ್ರಿಕ ದುಃಖ ಅವರೇ ಹೇಳುವಂತೆ ರಕ್ಷಣೆಯಲ್ಲಿ ಉಪೇಕ್ಷೆ ಮಾಡಿದ್ದರ ಫಲ ಹೊರತು ರಕ್ಷಣೆ ಮಾಡಿದ್ದರ ಫಲವಲ್ಲ. ಭಾಗವತ 'ರಕ್ಷತಿ ದುಃಖದುಃಖೀ' ಎಂದು ರಕ್ಷಣೆಗೇ ಪಾರತ್ರಿಕದುಃಖ ಫಲವೆಂದು ಹೇಳಿದಂತೆ ಕಾಣುತ್ತದೆ.

1. ಗೌರಿಯಂ ಮದ್ದತ್ತ ಬಹುತರಘಾಸಾದಿ ಚಾರಣೈರ್ದುಗ್ಧವತೀ ಪುನಃ ಪ್ರಸೂತಿಮತೀ ಚ ಭವಿಷ್ಯತೀತಿ ಬುದ್ಧ್ಯಾದುಗ್ಧಲೋಭೀ ದುಃಖದುಃಖೀ ಐಹಿಕ ದುಃಖವಾನ್ ಆಯತ್ಯಾಂ ತಸ್ಯಾ ಗೋ ದುರ್ಗ್ಧಾಲಾಭದರ್ಶನಾದುಪೇಕ್ಷಣ ಜನ್ಯಪಾಪಾತ್ ಪಾರತ್ರಿಕಂ ಚ ಯದ್‌ದುಃಖಂ ತದ್ವಾನ್ । - ವಿಶ್ವನಾಥಃ

ಮುಂದೆ ಕರುಹಾಕಿ ಹಾಲು ಕರೆಯಬಹುದೆಂಬ ನಿರೀಕ್ಷೆಯಿಂದ ಹಸುವನ್ನು ಸಾಕಿದಾಗ ಐಹಿಕದುಃಖಕ್ಕೆ ಕಾರಣವಾಗುವುದೂ ಸುಳ್ಳು. ಸ್ವರ್ಗಸುಖದ ನಿರೀಕ್ಷೆಯಿಂದ ಯಾಗ ಮಾಡಿದಾಗ ಯಾಗ ಐಹಿಕ ದುಃಖಕ್ಕೆ ಕಾರಣವೆನಿಸುವುದಿಲ್ಲ ತಾನೆ? ಶ್ರಮಕ್ಕೆ ಕಾರಣವಾಗಬಹುದು. ಆದರೆ ಆ ಶ್ರಮವು ದುಃಖವೆನಿಸುವುದಿಲ್ಲ.

ಶ್ರೀಮದಾಚಾರ್ಯರು ಹರಿವಂಶವಚನದ ಆಧಾರದೊಂದಿಗೆ ಸರಿಯಾದ ವಿವರಣೆ ನೀಡುತ್ತಾರೆ. 'ಹಾಲು ಮಾರುವವನು ಹಾಲಿಲ್ಲದ ಹಸುವನ್ನು ಸಾಕಿದರೆ ಐಹಿಕವಾಗಿ ಏನೂ ಸುಖವಿಲ್ಲ. ಐಹಿಕ ದುಃಖವೇ. ಏಕೆಂದರೆ ಸ್ವರ್ಗಸುಖದ ನಿರೀಕ್ಷೆ ಇಟ್ಟುಕೊಳ್ಳದಿರುವುದರಿಂದ ಶ್ರಮವೂ ದುಃಖಕರವೇ ಆಗುವುದು' ಎಂದು.

ಗೋರಕ್ಷಣೆಯಿಂದ ಪಾರತ್ರಿಕ ದುಃಖವಿಲ್ಲ. ಅದರಿಂದ ಭಾಗವತ ಗೋರಕ್ಷಣೆಯಿಂದ ಪಾರತ್ರಿಕ ದುಃಖವಿದೆ ಎಂದಿಲ್ಲ. ದುಃಖವಿದೆ ಎಂದು ಮಾತ್ರ ಹೇಳಿದೆ. ಯದ್ಯಪಿ ನಾಸ್ತಿಕ ಗ್ರಂಥವನ್ನು ಮೋಹದಿಂದ ಅಧ್ಯಯನ ಮಾಡಿ ರಕ್ಷಿಸಿಟ್ಟುಕೊಳ್ಳುವುದು ನರಕಾದ್ಯನರ್ಥ ಸಾಧನ. ಅದಕ್ಕೆ ಹಾಲ್ಲಿಲ್ಲದ ಹಸುವಿನ ಸಾಕಣೆ ದೃಷ್ಟಾಂತವಾಗಿ ಬಂದಿದೆ. ಆದರೂ 'ನಹಿ ದೃಷ್ಟಾಂತೇ ಸರ್ವಸಾಮ್ಯಂ' ಎಂಬ ನ್ಯಾಯದಂತೆ ದುಃಖಕಾರಣವಾಗುತ್ತದೆ ಎನ್ನುವಲ್ಲಿ ಮಾತ್ರ ಈ ದೃಷ್ಟಾಂತವನ್ನು ಗ್ರಹಿಸಬೇಕು. ಇದು ವಿಜಯಧ್ವಜೀಯದಲ್ಲಿ ಸ್ಪಷ್ಟವಿದೆ. 'ಶಬ್ದಬ್ರಹ್ಮಣಿ ನಿಷ್ಣಾತಃ' ಎಂಬ ಹಿಂದಿನ ಶ್ಲೋಕದ ಟೀಕೆ ಹೀಗಿದೆ—

[1]"ಪರಬ್ರಹ್ಮನಲ್ಲಿ ನಿಷ್ಠೆ ಹೊಂದದಿದ್ದರೆ ವೇದಾಭ್ಯಾಸದಿಂದ ಶ್ರಮ ಮಾತ್ರವಲ್ಲದೆ, ಅಜ್ಞಾನ ಮಿಥ್ಯಾಜ್ಞಾನ ತಮಸ್ಸುಗಳಿಗೂ ಆ ವೇದಾಭ್ಯಾಸವೇ ಕಾರಣವಾಗುತ್ತದೆ. ಹಾಲಿಲ್ಲದ ಹಸುವನ್ನು ಸಾಕಿದರೆ ಕೇವಲ ಶ್ರಮವೇ ಹೊರತು ಅದು ಜೀವನಾಧಾರವಾಗುವುದಿಲ್ಲ ಹೇಗೋ ಹಾಗೆ' ಎಂದು.

ಇಲ್ಲಿ 'ಗೋರಕ್ಷಣೆಯು ಕೇವಲ ಶ್ರಮದಾಯಕವಾಗುತ್ತದೆ ಹೊರತು ಜೀವನಾಧಾರವಾಗುವುದಿಲ್ಲ' ಎಂದಿದೆ ನರಕಾದಿ ಅನರ್ಥಕಾರಣತ್ವವನ್ನು ಹೇಳಿಲ್ಲ.

'ಗಾಂ ದುಗ್ಧದೋಹಾಂ' ಎಂಬ ಶ್ಲೋಕಕ್ಕೆ–'ಯಸ್ತ್ವೇವಂವಿಧಂ ಗವಾದಿಕಂ ರಕ್ಷತಿ ಸ ದುಃಖದುಃಖೀ ದುಃಖೇಽಂಧೇ ತಮಸಿ ನಿತ್ಯದುಃಖಾನುಭವವಾನ್ ವರ್ತತ

---

1. ಪರೇ ಬ್ರಹ್ಮಣಿ ನ ನಿಷ್ಣಾಯಾತ್ ನಿಷ್ಠಿತೋ ನಿಯತೋ ನ ಸ್ಯಾತ್ ಯದಿ ತರ್ಹಿ ತಸ್ಯ ಪುಂಸಃ ಶ್ರಮಃ ವೇದಾಧ್ಯಯನಾಯಾಸೋ ಭ್ರಮೋಽಜ್ಞಾನಂ ತಮಸಿ ಪರಿಭ್ರಮಣಂ ವಾ ಫಲಮಸ್ಯೇತಿ ಭ್ರಮಫಲಃ ಸ್ಯಾತ್ । ಅಧೇನುಮದೋಗ್ಧ್ರೀಂ ಗಾಂ ರಕ್ಷತಃ ಇವ ಯಥಾಽಸ್ಯ ತದಾರ್ಜನ ಪರಿಭ್ರಮ ಏವಾವಶಿಷ್ಯತೇ ನತು ಜೀವನ ಫಲಮಿತಿ ಭಾವಃ ।

-ವಿಜಯಧ್ವಜೀಯಂ

ಇತ್ಯರ್ಥಃ।' ಎಂದು ಹೇಳುತ್ತಿದ್ದರೂ ಅಲ್ಲಿ 'ಗವಾದಿಕಂ' ಎಂಬುದು ಅತದ್ಗುಣ ಸಂವಿಜ್ಞಾನ ಬಹುವ್ರೀಹಿ. ಅಥವಾ 'ಸ ದುಃಖದುಃಖೀ' ಎಂದಾದ ಮೇಲೆ ದಂಡಹಾಕಬೇಕು. ಇದು ಅನ್ವಯಪ್ರದರ್ಶನ. 'ದುಃಖದುಃಖೀ ರಕ್ಷತಿ' ಎಂದು ಅನ್ವಯವಲ್ಲ. 'ಯಃ ರಕ್ಷತಿ ಸ ದುಃಖದುಃಖೀ' ಎಂದು ಅನ್ವಯ. ಬಳಿಕ 'ದುಃಖದುಃಖೀ' ಎಂಬ ಶಬ್ದಕ್ಕೆ ನಿತ್ಯದುಃಖಭಾಗಿ ಎಂದು ಅರ್ಥ ಹೇಳಿದೆ. ಇದು ಗೋರಕ್ಷಕನನ್ನು ಹೊರತುಪಡಿಸಿ ಉಳಿದೆಲ್ಲರಿಗೂ ಅನ್ವಯಿಸಬಹುದಾದ 'ದುಃಖದುಃಖಿ' ಶಬ್ದಾರ್ಥ. ಗೋರಕ್ಷಕನನ್ನು ಹೊರತುಪಡಿಸಬೇಕೆನ್ನುವ ಅಂಶವನ್ನು ಟೀಕೆಯಲ್ಲಿ ಏಕೆ ಸ್ಪಷ್ಟ ಹೇಳಿಲ್ಲ ಎಂದರೆ ಹಿಂದಿನ ಶ್ಲೋಕದ ಟೀಕೆಯಲ್ಲಿ ಅದು ಸ್ಪಷ್ಟವಿದೆ ಎಂದು ಅಭಿಪ್ರಾಯ.

ದುಗ್ಧದೋಹಾಂ ತು ಗಾಂ ರಕ್ಷೇತ್ ಕ್ಷೀರಮಾತ್ರಪ್ರಯೋಜನಃ।
ಯಥಾ ತದ್ವದ್ಧರೇರನ್ಯದ್ ವಾಚೋ ಧಾರಣಮಿಷ್ಯತೇ ॥
ಇತಿ ಹರಿವಂಶೇಷು ॥

ಪುಣ್ಯದ ಉದ್ದೇಶವಿಲ್ಲದೆ ಕೇವಲ ಹಾಲಿಗಾಗಿ ಹಸು ಕಟ್ಟುವವನು ಗೊಡ್ಡು ಹಸುವನ್ನು ಕಟ್ಟುವುದು ಹೇಗೋ ಹಾಗೇ ಹರಿಯನ್ನು ಹೊಗಳದ ಶಾಸ್ತ್ರ ಓದುವುದೂ ದುಃಖಕ್ಕೇ ಕಾರಣ ಎಂದು ಹರಿವಂಶದಲ್ಲಿ ಹೇಳಿದೆ.

❖❖❖

ಅನ್ಯಥಾಜ್ಞಾನವನ್ನು ದೂರಮಾಡಿಕೊಂಡು ಭಗವಂತನನ್ನು ಆರಾಧಿಸಬೇಕು ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಏವಂ ಜಿಜ್ಞಾಸಯಾಽಪೋಹ್ಯ ನಾನಾತ್ವಭ್ರಮಮಾತ್ಮನಿ।
ಉಪಾರಮೇತ ವಿರಜಂ ಮನೋ ಮಯ್ಯರ್ಪ್ಯ ಸರ್ವಗೇ ॥ ೨೧ ॥

ಹೀಗೆ ವಿಚಾರಮಾಡಿ ನೀನು ನಿನ್ನ ಅನ್ಯಥಾಜ್ಞಾನವನ್ನು ನೀಗಿಕೊಂಡು ನಿರ್ಮಲ ವಾದ ಮನಸ್ಸನ್ನು ಸರ್ವವ್ಯಾಪಿಯಾದ ನನ್ನಲ್ಲಿ ನೆಲೆ ನಿಲ್ಲಿಸಿ ಕಾಮ್ಯಕರ್ಮಗಳಿಂದ ದೂರವಿರು.

ಇಲ್ಲಿ 'ನಾನಾತ್ವಭ್ರಮಮಾತ್ಮನಿ ಅಪೋಹ್ಯ' ಆತ್ಮನಲ್ಲಿ ನಾನಾತ್ವಭ್ರಮವನ್ನು ದೂರಮಾಡಿಕೊಳ್ಳಬೇಕೆಂದು ಭಾಗವತ ಹೇಳುತ್ತಿದೆ. ಬೇರೆ ವ್ಯಾಖ್ಯಾನಕಾರರು ಜೀವಾತ್ಮನಲ್ಲಿ ನಾನಾದೇಹಗಳ ಐಕ್ಯವನ್ನು ಆರೋಪಿಸಿಕೊಂಡು ಒಬ್ಬ ಆತ್ಮನನ್ನು ನಾನಾ ಆತ್ಮಗಳೆಂದು ಭ್ರಮಿಸುವುದನ್ನು ಬಿಡಬೇಕೆಂದು ವಿವರಣೆ ನೀಡುತ್ತಾರೆ.

ವಸ್ತುತಃ ಆತ್ಮನಲ್ಲಿ ದೇಹದ ಐಕ್ಯವನ್ನು ಯಾರೂ ಆರೋಪಿಸಿಕೊಳ್ಳುವುದಿಲ್ಲ, ಪರಮಾತ್ಮನ ಐಕ್ಯವನ್ನು ಆರೋಪಿಸಿಕೊಳ್ಳುತ್ತಾರೆ. ಸ್ವತಂತ್ರನಾದ ಪರಮಾತ್ಮನ ಐಕ್ಯವನ್ನು ಆರೋಪಿಸಿಕೊಂಡು ತಾವು ಸ್ವತಂತ್ರರೆಂದು ಭ್ರಮಿಸುತ್ತಾರೆ. ಆದರೂ ಇಲ್ಲದ ದೇಹೈಕ್ಯ ಭ್ರಮವನ್ನು ದೂರಮಾಡಿಕೊಳ್ಳಲು ಉಪದೇಶಿಸುತ್ತಾರೆ. ಇರುವ ಪರಮಾತ್ಮೈಕ್ಯ ಭ್ರಮವನ್ನು ಬಿಡಿರಿ ಎನ್ನುವುದಿಲ್ಲ, ಜೀವರಲ್ಲಿಯೂ ಒಬ್ಬನೇ ಜೀವನೆನ್ನುವ ಭ್ರಮ, ಜಗನ್ಮಿಥ್ಯಾತ್ವಭ್ರಮ, ಪರಮಾತ್ಮರು ಅನೇಕರೆನ್ನುವ ಭ್ರಮ ಮುಂತಾದುವನ್ನು ಬಿಡಿರಿ ಎನ್ನುವುದಿಲ್ಲ, ಆದರಿಂದ ಅವರ ವ್ಯಾಖ್ಯಾನಗಳು ಅಸಮರ್ಪಕವಾಗಿವೆ.

ನಾನಾತ್ವವೆಂದರೆ ಮಿಥ್ಯಾಜ್ಞಾನವೆಂದು ಹಿಂದೆ (ಶ್ಲೋಕ 13) ಶ್ರೀಮದಾಚಾರ್ಯರು ಹೇಳಿದ್ದಾರೆ. ಆದರೆ ಈ ಶ್ಲೋಕದಲ್ಲಿ 'ನಾನಾತ್ವಭ್ರಮ' ಎಂದಿದೆ. ಕೇವಲ 'ನಾನಾತ್ವ' ಎಂದಿಲ್ಲ, ಆದರಿಂದ ವ್ಯಾಖ್ಯಾನ ಮಾಡುತ್ತಾರೆ–

ಅರ್ಥಾದನ್ಯಥಾತ್ವೇನ ಮನಸಃ ಪರಿವರ್ತನಂ ನಾನಾತ್ವ ಭ್ರಮಃ ।
ಜೀವಸ್ಯೇಶತ್ವವಿಜ್ಞಾನಂ ಜೀವಾನಾಮೇಕತಾ ತಥಾ ।
ಈಶಸ್ಯ ಬಹುತಾಜ್ಞಾನಮೀಶಸ್ಯಾನೀಶತಾ ತಥಾ ।
ಜಗತೋಽಸತ್ಯತಾಜ್ಞಾನಂ ನಾನಾತ್ವಭ್ರಮ ಉಚ್ಯತೇ ॥
ಇತಿ ವಿವೇಕೇ ॥

ವಿಷಯ ಹೇಗಿರುವುದೋ ಅದನ್ನು ಬಿಟ್ಟು ಬೇರೆ ನಾನಾ ಪ್ರಕಾರವಾಗಿ ಮನಸ್ಸು ಪರಿಣಾಮ ಹೊಂದುವುದು, ಅಂದರೆ ಅನ್ಯಥಾಜ್ಞಾನವು ನಾನಾತ್ವಭ್ರಮವೆನಿಸುತ್ತದೆ.

ಮನಸ್ಸು ಬೇರೆ ನಾನಾ ಪ್ರಕಾರವಾಗಿ ಹೇಗೆ ಪರಿಣಮಿಸುವುದೆಂಬುದನ್ನು ವಿವೇಕ ಎಂಬ ಗ್ರಂಥದಲ್ಲಿ ಹೇಳಲಾಗಿದೆ—'ಜೀವನನ್ನು ಪರಮಾತ್ಮನೆಂದು ತಿಳಿಯುವುದು, ಜೀವರೆಲ್ಲರೂ ವಸ್ತುತಃ ಒಬ್ಬನೇ ಜೀವನೆನ್ನುವುದು. ಪರಮಾತ್ಮರು ಬ್ರಹ್ಮವಿಷ್ಣು ಶಿವ ಸ್ಕಂದ ವಿನಾಯಕ ಮುಂತಾಗಿ ಅನೇಕರಿದ್ದಾರೆ ಎಂದುಕೊಳ್ಳುವುದು, ಶ್ರೀಹರಿಯನ್ನು ಪರಮಾತ್ಮನೆನ್ನದೆ ಒಬ್ಬ ಸಾಮಾನ್ಯ ದೇವನೆನ್ನುವುದು, ಜಗತ್ತನ್ನು ಸುಳ್ಳೆಂದು ತಿಳಿಯುವುದು ಇವೆಲ್ಲವೂ ನಾನಾತ್ವ ಭ್ರಮವೆನಿಸಿವೆ' ಎಂದು.

❖❖❖

ಭಗವಂತನು ಅವತರಿಸುವುದೆಂದರೆ ಸ್ವೇಚ್ಛೆಯಿಂದ ತನ್ನ ಚಿನ್ಮಯಶರೀರದಿಂದ ಪ್ರಕಟನಾಗುವುದೇ ಹೊರತು ಜಡಶರೀರವನ್ನು ಸ್ವೀಕರಿಸುವುದಲ್ಲ ಎಂದು ಉದ್ಧವ ಶ್ರೀಕೃಷ್ಣನನ್ನು ಹೊಗಳುತ್ತಾನೆ.

ತ್ವಂ ಬ್ರಹ್ಮ ಪರಮಂ ವ್ಯೋಮ ಪುರುಷಃ ಪ್ರಕೃತೇಃ ಪರಃ।
ಅವತೀರ್ಣೋಽಸಿ ಭಗವನ್ ಸ್ವೇಚ್ಛೋಪಾತ್ತಪೃಥಗ್ವಪುಃ ॥ ೨೮ ॥

ನೀನು ನಿರವಧಿಕಪೂರ್ಣ. ಪೂರ್ಣಷಡ್ಗುಣಉಳ್ಳವನು ಆಕಾಶದಲ್ಲಿರುವವನು ಪ್ರಕೃತಿಬಂಧನವಿಲ್ಲದವನು. ಹೇ ಭಗವಂತ, ನೀನು ಸ್ವೇಚ್ಛೆಯಿಂದ ಬೇರೆ ವಸುದೇವಾದಿ ಶರೀರಗಳನ್ನು ಪ್ರವೇಶಿಸಿ ಸ್ವರೂಪಭೂತ ಚಿನ್ಮಯ ಶರೀರದಿಂದಲೆ ಅವತರಿಸಿರುವೆ.

ಇಲ್ಲಿ 'ಸ್ವೇಚ್ಛೋಪಾತ್ತ ಪೃಥಗ್‌ವಪುಃ' ಎಂದರೆ ಪರಮಾತ್ಮ ರಾಮಕೃಷ್ಣಾದಿ ಅವತಾರಗಳಲ್ಲಿ ಪೃಥಗ್ ತನ್ನ ಸ್ವರೂಪ ಶರೀರಕ್ಕಿಂತ ಬೇರೆಯಾದ ಜಡಶರೀರ ಗಳನ್ನು ಸ್ವೇಚ್ಛೆಯಿಂದ ಮತ್ತು ಸ್ವಭಕ್ತರ ಇಚ್ಛೆಯಿಂದ ಪರಿಗ್ರಹಿಸುವನೆಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಇದನ್ನು ನಿರಾಕರಿಸುವುದಿಲ್ಲ.

ವಸ್ತುತಃ ಬೇರೆ ಜಡಶರೀರದಲ್ಲಿ ಭಗವಂತ ಅವತಾರ ಮಾಡುವುದಿಲ್ಲ. ಆವೇಶಾವತಾರಗಳಲ್ಲಿ ಬೇರೆ ಜೀವರು ಕರ್ಮದಿಂದ ಸಂಪಾದಿಸಿದ ಶರೀರಗಳಲ್ಲಿ ~~ಆವೇಶಗೊಳ್ಳುವುದುಂಟು. ಸ್ವರೂಪಾವತಾರದಲ್ಲಿ ಅದೂ ಇಲ್ಲ. ಅದರಿಂದ ಪೃಥಗ್~~ ವಪುಃ ಎಂದರೆ ದಶರಥ ವಸುದೇವಾದಿ ಬೇರೆಬೇರೆ ಶರೀರಗಳನ್ನು ಪಿತೃಶರೀರ ವೆಂದು ಪರಿಗ್ರಹಿಸುತ್ತಾನೆ ಎಂದು ಅಪೂರ್ವವಾದ ಅರ್ಥವನ್ನು ಶ್ರೀಮದಾ ಚಾರ್ಯರು ಹೇಳುತ್ತಾರೆ.

ದಶರಥ ವಸುದೇವಾದಿ ಶರೀರಗಳಲ್ಲಿ ಭಗವಂತ ಪ್ರವೇಶಿಸಿ ಮೂರುತಿಂಗಳ ಕಾಲ ಅಲ್ಲಿದ್ದು ಬಳಿಕ ಋತುಕಾಲದಲ್ಲಿ ಕೌಸಲ್ಯೆ ದೇವಕಿ ಮುಂತಾದ ತಾಯಂದಿರ ಶರೀರಕ್ಕೆ ಬಂದು ನವಮಾಸಪರ್ಯಂತ ಕ್ರಮೇಣ ಬೆಳೆದವನಂತೆ ತೋರಿಕೊಂಡು ಪ್ರಸವಕಾಲದಲ್ಲಿ ಹೊರಗೆ ಬಂದು ಜನಿಸಿದಂತೆ ತೋರಿಕೊಳ್ಳುತ್ತಾನೆ. ಇದರಿಂದ ಲೋಕಕ್ಕೆ, ದಶರಥ ವಸುದೇವಾದಿಗಳು ತಂದೆತಾಯಿಗಳೆಂಬ ಭ್ರಮೆ, ಅದರಂತೆ ವ್ಯವಹಾರಗಳುಂಟಾಗುತ್ತವೆ. ಹೀಗೆ ಬೇರೆ ಪಿತೃಶರೀರಗಳಲ್ಲಿ ಲೀಲೆಯಿಂದ ಪ್ರವೇಶ ನಿರ್ಗಮನಗಳನ್ನು ಮಾಡುವುದೇ ಆ ಶರೀರಗಳ ಉಪಾದಾನ. 'ಸ್ವೇಚ್ಛೋಪಾತ್ತ ಪೃಥಗ್‌ವಪುಃ । ಎನ್ನುವುದಕ್ಕೆ ಈ ಅಪೂರ್ವ ಅರ್ಥವು ಪ್ರಕಾಶಸಂಹಿತಾ ಗ್ರಂಥದಲ್ಲಿದೆ.

'ಸ್ವೇಚ್ಛೋಪಾತ್ತ ಪೃಥಗ್‌ವಪುಃ।'
ವಸುದೇವಾದಿಶರೀರಂ ಸ್ವೇಚ್ಛಯಾಽನೇನ ಸ್ವೀಕೃತಮಿತಿ ।

ಕೃಷ್ಣಾದಿ ಅವತಾರಗಳಲ್ಲಿ ವಸುದೇವಾದಿ ಪಿತೃಶರೀರವು ಸ್ವೇಚ್ಛೆಯಿಂದಲೇ

ಭಗವಂತನಿಂದ ಪ್ರವಿಷ್ಟವಾಯಿತು. ಅದರಿಂದ ಸ್ವೇಚ್ಛೋಪಾತ್ತ ಪೃಥಕ್ ಶರೀರನೆಂದು ಭಗವಂತ ಕರೆಸಿಕೊಂಡಿದ್ದಾನೆ.

ಪ್ರಕಾಶಸಂಹಿತಾ ಗ್ರಂಥದಲ್ಲಿ ಇದರ ಬಗ್ಗೆ ವಿವರಗಳು ಹೀಗಿವೆ–

ನಿತ್ಯಾನಂದ ಶರೀರೋಽಪಿ ವಸುದೇವಾದಿ ದೇಹಗಃ ।
ಪ್ರದರ್ಶಯೇಜ್ಜನಿಂ ಸ್ವಸ್ಯ ನಿತ್ಯಂ ದೇಹವಿವರ್ಜಿತಃ ।
ವಸುದೇವಾದಿ ದೇಹೇಷು ಪ್ರವೇಶಸ್ತಸ್ಯ ಭಣ್ಯತೇ ।
ದೇಹೋಪಾದಾನಮಿತಿ ತು ನ ಹ್ಯನ್ಯೋ ದೇಹ ಇಷ್ಯತೇ ।
ಅನ್ಯಾಭಿಮತದೇಹೇಷು ಪ್ರವಿಷ್ಟಃ ಸರ್ವದಾ ಹರಿಃ ।
ನಾನ್ಯಾನಭಿಮತೋ ದೇಹೋ ವಿಷ್ಣೋರಸ್ತಿ ಕದಾಚನ ।
ಅತೋಽಶರೀರೋ ಭಗವಾನ್ ಪುತ್ರತಾಭಿಮತಿಸ್ತು ಯಾ ।
ವಸುದೇವಾದಿಕಾನಾಂ ತು ಸೈವ ಮಿಥ್ಯಾಮತಿ ರ್ಭವೇತ್ ॥

ನಿತ್ಯಾನಂದ ಶರೀರಿಯಾಗಿದ್ದು ಎಂದೂ ಜಡದೇಹ ರಹಿತನಾಗಿದ್ದರೂ ಶ್ರೀಹರಿ ~~ವಸುದೇವಾದಿ ಪಿತೃಶರೀರಗಳನ್ನು ಪ್ರವೇಶಿಸಿ ತನಗೆ ಜನನವಿದೆ ಎಂಬಂತೆ~~ ತೋರಿಕೊಳ್ಳುತ್ತಾನೆ. ಸ್ವೇಚ್ಛೋಪಾತ್ತಪೃಥಗ್‌ವಪುಃ ಎನ್ನುವಲ್ಲಿ ಹೇಳುವ ದೇಹೋಪಾದಾನವೆಂದರೆ ವಸುದೇವಾದಿ ಶರೀರಗಳಲ್ಲಿ ಪ್ರವೇಶವೇ ಹೊರತು ಬೇರೆ ಜಡದೇಹ ಭಗವಂತನಿಗೆ ಇಲ್ಲ. ಅನ್ಯಜೀವರದಾಗಿರುವ ಶರೀರಗಳಲ್ಲಿಯೇ ಸದಾ ಹರಿ ಪ್ರವೇಶ ಮಾಡುತ್ತಾನೆ ಹೊರತು ಅನ್ಯಜೀವರದಲ್ಲದ ಶರೀರ ಎಂದೂ ವಿಷ್ಣುವಿಗೆ ಇಲ್ಲ. ಅದರಿಂದಲೇ ಭಗವಂತನು ಅಶರೀರನೆನಿಸಿದ್ದಾನೆ. ವಸುದೇವಾದಿಗಳಿಗೆ ತಮ್ಮ ಶರೀರದಿಂದ ಶರೀವನ್ನು ಹೊಂದಿ ಜನಿಸಿದ ಪುತ್ರ ಶ್ರೀಕೃಷ್ಣ ಎಂದು ಅಭಿಮಾನ ಉಂಟಾದರೆ ಅದು ಮಿಥ್ಯಾಜ್ಞಾನವೆ. ತನ್ನ ಚಿನ್ಮಯ ಶರೀರದಿಂದಲೆ ನಮ್ಮ ಶರೀರದೊಳಗೆ ಹೊಕ್ಕು ಹೊರಗೆ ವ್ಯಕ್ತನಾಗಿದ್ದಾನೆ ಎನ್ನುವ ಅರ್ಥದಲ್ಲಿ ಭಗವಂತನನ್ನು ಪುತ್ರನೆಂದು ತಿಳಿದರೆ ಅದು ಯಥಾರ್ಥಜ್ಞಾನವೆ.

ಅನ್ಯಾಹಂಭಾವಯುಗ್‌ದೇಹ ಏವಾಸೌ ಹರಿರಾಸ್ಥಿತಃ ।
ನ ತದನ್ಯೇಷು ದೇಹೇಷು ಕ್ವಚಿತ್ ತಸ್ಯ ಪ್ರವೇಶನಂ ।
ಮಮ ಪುತ್ರಸ್ತ್ವಯಮಿತಿ ಭ್ರಾಮಣಾಯ ಯದಾ ಹರಿಃ ।
ವಸುದೇವಾದಿ ದೇಹೇಷು ತನೂಪಾತ್ತಿಸ್ತು ಸಾ ಗತಿಃ ।
ಅನುಪಾತ್ತಶರೀರಸ್ಯ ತನೂಪಾತ್ತಿರಿತೀಷ್ಯತೇ ।
ತದ್ದೇಹಂ ಪಿತೃದೇಹತ್ವ ಉಪಾದತ್ತೇ ಯತೋ ಹರಿಃ ॥

ಇತಿ ಪ್ರಕಾಶಸಂಹಿತಾಯಾಂ ॥

ಆವೇಶಾವತಾರಗಳಲ್ಲಿ ಇನ್ನೊಬ್ಬರ ಅಭಿಮಾನಕ್ಕೊಳಪಟ್ಟಿರುವ ಜಡದೇಹದಲ್ಲಿ ಮಾತ್ರ ಹರಿ ಪ್ರವೇಶಿಸುತ್ತಾನೆ ಹೊರತು ಬೇರೆ ದೇಹಗಳಲ್ಲಿ ಎಂದೂ ಅವತಾರಕ್ಕಾಗಿ ಪ್ರವೇಶಿಸುವುದಿಲ್ಲ. ಸ್ವರೂಪಾವತಾರಗಳಲ್ಲಿ ಇವನು ನನ್ನ ಮಗನೆಂದು ವಸುದೇವಾದಿಗಳಿಗೆ ಭ್ರಮೆ ಹುಟ್ಟಿಸುವುದಕ್ಕಾಗಿ ಅವರ ದೇಹಗಳಲ್ಲಿ ಪ್ರವೇಶಿಸುತ್ತಾನೆ. ಇದೇ 'ಸ್ವೇಚ್ಛೋಪಾತ್ತವಪುಃ' ಎಂದು ವ್ಯವಹಾರ ಗೋಚರವಾಗುವ ಶರೀರೋಪಾದಾನ. ವಸ್ತುತಃ ಜಡಶರೀರವನ್ನು ಸ್ವರೂಪಾವತಾರದಲ್ಲಿ ಸ್ವೀಕರಿಸುವುದಿಲ್ಲ. ಆಗ ವಸುದೇವಾದಿ ಶರೀರಗಳನ್ನು ಪಿತೃದೇಹವಾಗಿ ಸ್ವೀಕಾರ ಮಾಡುವುದರಿಂದಲೇ ಅದು ಶರೀರೋಪಾದಾನವೆನಿಸುತ್ತದೆ ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

❖❖❖

ಮೊದಲಿಗೆ ನನ್ನನ್ನು ಸಾಮಾನ್ಯವಾಗಿ ತಿಳಿದರೂ ಮತ್ತೆ ಹೆಚ್ಚುಹೆಚ್ಚಾಗಿ ವಿಶೇಷವಾಗಿ ತಿಳಿದು ನನ್ನನ್ನು ಆರಾಧಿಸುವವರು ಅತ್ಯಂತ ಶ್ರೇಷ್ಠ ಭಕ್ತರೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಜ್ಞಾತ್ವಾ ಜ್ಞಾತ್ವಾಽಥ ಯೇ ವೈ ಮಾಂ ಯಾವಾನ್ ಯಶ್ಚಾಸ್ಮಿ ಯಾದೃಶಃ ।
ಭಜಂತ್ಯನನ್ಯಭಾವೇನ ತೇ ಮೇ ಭಕ್ತತಮಾ ಮತಾಃ ॥ ೩೩ ॥

ನಾನು ಯಾವ ಸ್ವರೂಪದವನು ಎಷ್ಟು ಪರಿಮಾಣದವನು, ಯಾವ ಗುಣಲಕ್ಷಣಗಳಿಂದ ಕೂಡಿದವನೆಂದು ಮೊದಲಿಗೆ ಸಾಮಾನ್ಯವಾಗಿ ತಿಳಿದು ಮತ್ತೆ ಅದರಲ್ಲಿ ಉತ್ಸಾಹದಿಂದ ಹೆಚ್ಚುಹೆಚ್ಚು ವಿಶೇಷವಾಗಿ ತಿಳಿದು ಅನನ್ಯಭಕ್ತಿಯಿಂದ ಆರಾಧಿಸುವವರು ಅತ್ಯಂತ ಶ್ರೇಷ್ಠ ಭಕ್ತರು.

[1]ಈ ಶ್ಲೋಕದಲ್ಲಿ 'ಜ್ಞಾತ್ವಾ ಅಜ್ಞಾತ್ವಾ' ಎಂದು ವಿಭಾಗ ಮಾಡಬಹುದು ಇಲ್ಲವೇ ಜ್ಞಾತ್ವಾ ಜ್ಞಾತ್ವಾ ಎಂದು ವೀಪ್ಸೆಯನ್ನೂ ಇಟ್ಟುಕೊಳ್ಳಬಹುದೆಂದು ಶ್ರೀಧರವ್ಯಾಖ್ಯಾನ ಹೇಳಿದೆ.

[2]ಮೊದಲನೇ ಪಕ್ಷದಲ್ಲಿ ಅಜ್ಞಾನ ಹೇಯ, ಜ್ಞಾನ ಉಪಾದೇಯ ಎನ್ನುವುದು ನಿಷಿದ್ಧ. ಜ್ಞಾನವಿರಲಿ ಇಲ್ಲದಿರಲಿ ಅನನ್ಯ ಭಾವದಿಂದ ಭಜಿಸಿದರೆ ಆತ ಉತ್ತಮ

1. ಮಾಂ ಜ್ಞಾತ್ವಾಽಜ್ಞಾತ್ವಾಽಪಿ । ಯದ್ವಾ ವಿಶೇಷತಃ ಪುನಃಪುನರ್ಜ್ಞಾತ್ವಾ ಏಕಾಂತಭಾವೇನ ಯೇ ಭಜಂತೀತಿ । -ಶ್ರೀಧರಃ

2. ಜ್ಞಾತ್ವಾಽಜ್ಞಾತ್ವೇತ್ಯತ್ರಾಜ್ಞಾನಜ್ಞಾನಯೋರ್ಹೇಯೋಪಾದೇಯತ್ವಂ ನಿಷಿದ್ಧಂ । ಜ್ಞಾತ್ವಾ ಅಜ್ಞಾತ್ವಾ ವಾ ಯೇ ಕೇವಲಮನನ್ಯಭಾವೇನ ಶ್ರೀವ್ರಜರಾಜನಂದನತ್ವಾದ್ಯಾಲಂಬನೋ ಯಃ

ಭಕ್ತನೆಂದು ಅಭಿಪ್ರಾಯವೆಂದು ಜೀವಗೋಸ್ವಾಮಿ ವ್ಯಾಖ್ಯಾನ ಹೇಳುತ್ತದೆ.

[3]ಕರ್ಮಮಿಶ್ರವಾದಭಕ್ತಿ ಕೆಳಮಟ್ಟದ್ದು, ಪ್ರಾರಂಭಿಕ, ಜ್ಞಾನಮಿಶ್ರಭಕ್ತಿ ಅನಂತರದ್ದು. ಕೊನೆಯದಾದ ಉತ್ತಮ ಭಕ್ತಿ ಕರ್ಮದಿಂದಾಗಲಿ ಜ್ಞಾನದಿಂದಾಗಲೀ ಆವೃತ ವಾಗಿರದೆ ಶುದ್ಧವಾಗಿರುತ್ತದೆ. ಜ್ಞಾತ್ವಾಜ್ಞಾತ್ವಾ ಎಂದು ವೀಪ್ಸಾ ಎನ್ನುವ ಪಕ್ಷದಲ್ಲಿ ಭಕ್ತಿಯು ಜ್ಞಾನಮಿಶ್ರ ಎನ್ನುವ ಅಭಿಪ್ರಾಯವಿಲ್ಲ. ಭಕ್ತಿ ಹೆಚ್ಚಿದಂತೆಲ್ಲ ಭಗವನ್ಮಾಧುರ್ಯಾನುಭವ ಹೆಚ್ಚುತ್ತದೆ ಎಂದೇ ಅಭಿಪ್ರಾಯ ಎಂದು ವಿಶ್ವನಾಥ ವ್ಯಾಖ್ಯಾನ ಹೇಳುತ್ತಿದೆ. ಸಾಧಕಾವಸ್ಥೆಯಲ್ಲಿ ಜ್ಞಾನಮಿಶ್ರವಾದ ವೈಧೀ ಭಕ್ತಿ ಪ್ರಚುರ ವಾಗಿರುತ್ತದೆ. ಆಗ ರಾಗ ದುರ್ಲಭವಾಗಿರುವುದರಿಂದ ಎಂದು ರಾಧಾರಮಣದಾಸ ವ್ಯಾಖ್ಯಾನ ಹೇಳುತ್ತದೆ.

[4]ಇವರೆಲ್ಲರೂ ಜ್ಞಾನಭಕ್ತಿಗಳನ್ನು ಬೇರೆಬೇರೆಯಾಗಿಸಿದ್ದಾರೆ. ಜ್ಞಾನವೆಂದರೆ ಅದ್ವೈತದ ನಿರಾಕಾರ ಬ್ರಹ್ಮನ ಜ್ಞಾನ. ಅದು ಇರುವಾಗ ರಾಗವಿಲ್ಲ, ಮಾಧುರ್ಯಾನು ಭವವಿರುವುದಿಲ್ಲ. ಅವೆರಡೂ ಸಾಕಾರಬ್ರಹ್ಮನಲ್ಲಿ ಮಾತ್ರ ಲಭ್ಯ. ಅವನಲ್ಲಿ ಮಾಡುವ ಭಕ್ತಿ ಕರ್ಮ ಸಹಿತವಾದರೆ ಅಧಮ. ಜ್ಞಾನಸಹಿತವಾದರೆ ಮಧ್ಯಮ. ಕರ್ಮ ಜ್ಞಾನಗಳಿಂದ ರಾಗರೂಪವಾದ ಮಾಧುರ್ಯಾನುಭವ ರೂಪವಾದ ಭಕ್ತಿ ಆವೃತವಾಗದೆ ಶುದ್ಧವಾದರೆ ಅದು ಉತ್ತಮಭಕ್ತಿ ಎನಿಸುತ್ತದೆ ಎಂದು ಹೇಳುತ್ತಾರೆ.

ವಸ್ತುತಃ ಕರ್ಮಜ್ಞಾನಭಕ್ತಿ ಇವು ಮೂರು ಮುಪ್ಪುರಿಗೊಂಡು ಒಂದೇ ಭಕ್ತಿಯೆನಿಸುವುದು. ಜ್ಞಾನಪೂರ್ವಕವಾದ ಗಾಢವಾದ ಪ್ರೀತಿಯಿಂದ ಎಲ್ಲ ಜ್ಞಾನ ಕರ್ಮೇಂದ್ರಿಯಪ್ರವೃತ್ತಿಗಳೂ ಭಗವಂತನ ಕಡೆಗೇ ಹರಿಯುತ್ತಿದ್ದರೆ ಮಾತ್ರ ಅದು ನಿರ್ಮಲವಾದ ಉತ್ತಮ ಭಕ್ತಿ. ಅದಕ್ಕೇ ಪ್ರೀತಿಯಿಂದ ಮತ್ತೆಮತ್ತೆ ಭಗವನ್ಮಹಿಮೆಗಳ

ಸ್ವಾಭೀಪ್ಸಿತೋ ದಾಸ್ಯಾದೀನಾಮೇಕತರೋ ಭಾವಃ ತೇನೈವ ಭಜಂತಿ । ನ ಕದಾಚಿದ ನ್ಯೇನೇತ್ಯರ್ಥಃ॥ -ಜೀವಗೋಸ್ವಾಮೀ

3. ಸಿದ್ಧಭಕ್ತಃ ಅಯಂ ಸ್ವಪೂರ್ವದಶಾಯಾಂ ಜ್ಞಾನಮಿಶ್ರಭಕ್ತಿಮಾನ್ ತತ್ಪೂರ್ವದಶಾಯಾಂ ಕರ್ಮಮಿಶ್ರಭಕ್ತಿಮಾನಾಸೀತ್ ಅತಸ್ತದಾತದಾಽಸ್ಯ ಭಕ್ತೇಃ ಪ್ರಾಧಾನ್ಯಂ । ಸಿದ್ಧಿದಶಾಯಾಂ ತು ಕರ್ಮಜ್ಞಾನಾದ್ಯನಾದರಣಾತ್ ಶುದ್ಧಭಕ್ತ ಏವಾಯಮುಚ್ಯತೇ...ಜ್ಞಾತ್ವಾಜ್ಞಾತ್ವೇತಿ ವೀಪ್ಸಾ ಭಕ್ತ್ಯಾಽಹಮೇಕಯಾ ಗ್ರಾಹ್ಯ ಇತಿ ಮದುಕ್ತೇಃ ಭಕ್ತಿತಾರತಮ್ಯೇನ ಮನ್ಮಾಧುರ್ಯಂ ಅಧಿಕಾಧಿ ಕಂ ಪ್ರತಿಕ್ಷಣಮನುಭವಗೋಚರೀಕೃತ್ಯೇತ್ಯರ್ಥಃ । -ವಿಶ್ವನಾಥಃ

4. ಯದ್ವೇತಿ ತಥಾಚ ವೈಧೀ ಭಕ್ತಿರೇವ ಸಾಧಕಾವಸ್ಥಾಯಾಂ ಪ್ರಚುರೇತಿ ವ್ಯಂಜಿತಂ ರಾಗಸ್ಯ ದೌರ್ಲಭ್ಯಾದಿತಿ ಜ್ಞೇಯಂ । -ರಾಧಾರಮಣದಾಸಃ

ವಿಶೇಷವಾದ ಜ್ಞಾನ ಸಂಪಾದಿಸಿ ವಿಶೇಷವಾಗಿ ಅವನ ಪ್ರೀತ್ಯರ್ಥವಾಗಿ ಕರ್ಮ ಮಾಡಬೇಕೆಂದು ತಿಳಿಸಲು ಶ್ರೀಕೃಷ್ಣ 'ಜ್ಞಾತ್ವಾಜ್ಞಾತ್ವಾ' ಎಂದು ವೀಪ್ಸೆಯನ್ನು ಹೇಳಿದ್ದಾನೆ.

ಅಜ್ಞಾನ ಜ್ಞಾನಗಳು ಹೇಯ ಉಪಾದೇಯಗಳೇ ಆಗಿವೆ. ಅದರಿಂದ 'ಜ್ಞಾತ್ವಾ ಅಜ್ಞಾತ್ವಾಽಪಿ ಭಜಂತಿ' ಎನ್ನುವುದು ಶ್ಲೋಕದಲ್ಲಿ ಸರ್ವಥಾ ವಿವಕ್ಷಿತವಲ್ಲ. ಜ್ಞಾನವು ಉತ್ತಮವಾದ ಶುದ್ಧಭಕ್ತಿಗೆ ವಿರೋಧಿ ಎಂಬ ಭ್ರಮೆಯಿಂದ ಬೇರೆ ವ್ಯಾಖ್ಯಾನಕಾರರು 'ಅಜ್ಞಾತ್ವಾಽಪಿ' 'ಅಜ್ಞಾನವಿದ್ದರೂ ಚಿಂತೆಯಿಲ್ಲ' ಎಂದು ವಿವರಣೆ ನೀಡಿದ್ದಾರೆ. ಜ್ಞಾನ ವಸ್ತುತಃ ಉತ್ತಮ ಭಕ್ತಿಗೆ ಉತ್ತಮ ಸಾಧನವಾಗಿರುವುದರಿಂದ 'ಜ್ಞಾತ್ವಾ ಜ್ಞಾತ್ವಾ' ಮತ್ತೆ ಮತ್ತೆ ಒಳ್ಳೆಯ ವಿಶೇಷಜ್ಞಾನ ಸಂಪಾದಿಸಿಯೇ ಉತ್ತಮಭಕ್ತಿಯಿಂದ ಭಜಿಸಿದರೆ ಆತ ಅತ್ಯುತ್ತಮ ಭಕ್ತನೆನಿಸುತ್ತಾನೆ ಎಂದು ಶ್ರೀಮದಾಚಾರ್ಯರು ವಿವರಣೆ ನೀಡುತ್ತಾರೆ.

ಜ್ಞಾತ್ವಾಜ್ಞಾತ್ವೇತಿ ವೀಪ್ಸಾ ।
ಜ್ಞಾತ್ವಾಽಪಿ ಮಮ ಮಾಹಾತ್ಮ್ಯಂ ತತ್ರೋತ್ಸುಕತಯಾ ಪುನಃ ।
ವಿಶೇಷಾಚ್ಚ ವಿಶೇಷೇಣ ಜ್ಞಾತ್ವಾ ಮಾಮಶ್ನುತೇಽಧಿಕಂ ।
ಇತಿ ವಿಜ್ಞಾನೇ ॥

ಶ್ಲೋಕದಲ್ಲಿ 'ಜ್ಞಾತ್ವಾಜ್ಞಾತ್ವಾ' ಎಂದು ಪುನಃ ಪುನಃ ಹೇಳಿದೆ. ಹಾಗೆ ಹೇಳುವುದರ ಅಭಿಪ್ರಾಯವನ್ನು ವಿಜ್ಞಾನ ಎಂಬ ಗ್ರಂಥದಲ್ಲಿ ಹೇಳಿದಂತೆ ತಿಳಿಯಬೇಕು.

'ಭಕ್ತನು ನನ್ನ ಮಹಿಮೆಯನ್ನು ತಿಳಿದೂ ಕೂಡ ಅದರ ಬಗ್ಗೆ ಉತ್ಸುಕತೆಯಿಂದ ಪುನಃ ಪುನಃ ಇನ್ನೂ ವಿಶೇಷವಾಗಿ ತಿಳಿದರೆ ಹೆಚ್ಚು ಹೆಚ್ಚಾಗಿ ನನ್ನ ಸಮೀಪಕ್ಕೆ ಬರುತ್ತಾನೆ' ಎಂದು.

❖ ❖ ❖

ಮುಖ್ಯಪ್ರಾಣನನ್ನು ಸರ್ವದೇವೋತ್ತಮನೆಂದು ಆದರಿಸಿದರೆ ಅದಕ್ಕಿಂತ ಹೆಚ್ಚು ಪ್ರಿಯ ಶ್ರೀಹರಿಗೆ ಬೇರೆ ಇಲ್ಲವೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ವೈಷ್ಣವೇ ಬಂಧುಸತ್ಕೃತ್ಯಾ ಹೃದಿ ಖೇ ಧ್ಯಾನನಿಷ್ಠಯಾ ।
ವಾಯೌ ಮುಖ್ಯಧಿಯಾ ತೋಯೇ ದ್ರವ್ಯೈಸ್ತೋಯಪುರಸ್ಕೃತೈಃ ॥ ೪೪ ॥

ವಿಷ್ಣುಭಕ್ತನಲ್ಲಿ ನನಗೆ ಅಳಿಯನಂತೆ ಉಪಚಾರ ಮಾಡಬೇಕು. ಹೃದಯಾಕಾಶ ದಲ್ಲಿ ಧ್ಯಾನನಿಷ್ಠೆಯಿಂದ, ಮುಖ್ಯಪ್ರಾಣನಲ್ಲಿ ಅವನು ಜೀವೋತ್ತಮನೆಂಬ ಭಾವನೆಯಿಂದ, ಜಲದಲ್ಲಿ ಜಲಗಂಧ ಪುಷ್ಪಾದಿಗಳಿಂದ ನನ್ನನ್ನು ಆರಾಧಿಸ ಬೇಕು.

[1]ಬೇರೆ ವ್ಯಾಖ್ಯಾನಕಾರರು 'ವಾಯೌ ಮುಖ್ಯಧಿಯಾ' ಎನ್ನುವುದಕ್ಕೆ ವಾಯುವನ್ನು ಜಡಮುಖ್ಯಪ್ರಾಣವೆಂದು ಅದಕ್ಕೆ ಎಲ್ಲರನ್ನೂ ಬದುಕಿಸುವ ಶಕ್ತಿ ಅಂತರ್ಯಾಮಿಯಾದ ಹರಿಯಿಂದ ಬಂದಿದೆ ಎಂದು ಆರಾಧಿಸಬೇಕು ಎಂದು ವಿವರಣೆ ನೀಡಿದ್ದಾರೆ.

ಗಾಳಿ ಇಲ್ಲದೆ ಯಾವ ಪ್ರಾಣಿಯೂ ಬದುಕುವುದಿಲ್ಲ. ಗಾಳಿಗೆ ಈ ಸಾಮರ್ಥ್ಯ ಅಂತರ್ಯಾಮಿಯಾದ ಭಗವಂತನಿಂದ ಬಂದಿದೆ ಎಂದರೆ ಪಾಂಚಭೌತಿಕ ಶರೀರ ಬದುಕಲು ಪಂಚಭೂತಗಳೂ ಬೇಕು. ಗಾಳಿಯಂತೆ ಅನ್ನನೀರು ಶಾಖಗಳೂ ಬೇಕು. ಅವುಗಳಿಗೂ ಅಂತರ್ಯಾಮಿಯಿಂದಲೇ ಅಂಥ ಸಾಮರ್ಥ್ಯ. ಗಾಳಿಯನ್ನು ಮಾತ್ರ ಎಲ್ಲರ ಬದುಕಿಗೆ ಬೇಕೆಂದು ವಿಶೇಷವಾಗಿ ಏಕೆ ಹೇಳಬೇಕು? ಜಡವಾಯುವನ್ನು ಆರಾಧಿಸುವುದರಿಂದ ಫಲವಾದರೂ ಏನು? ಮುಖ್ಯಪ್ರಾಣನ ಮಾಹಾತ್ಮ್ಯವನ್ನು ಬೇರೆ ವ್ಯಾಖ್ಯಾನಕಾರರು ಆದರಿಸುವುದಿಲ್ಲ. ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಮಹಾಭಾರತದಲ್ಲಿಯೂ ಕೂಡ ಮುಖ್ಯಪ್ರಾಣನ ಮಹಿಮೆ ವರ್ಣಿತವಾಗಿದೆ.

ಸರ್ವದೇವೋತ್ತಮೋ ವಾಯುರಿತಿ ಜ್ಞಾನಾನ್ನ ಚಾಪರಂ ।
ಪ್ರಿಯಮಸ್ತಿ ಹರೇಃ ಕಿಂಚಿತ್ ತಥಾ ವಾಯೋರ್ಹರೇರ್ವಿದಃ ॥
ಭಾರತೀವಾಯುಲಕ್ಷ್ಮೀಶಾಮಾತ್ಮನಶ್ಚ ಯಥಾಕ್ರಮಂ ।
ಆಧಿಕ್ಯಜ್ಞಾನತೋ ವಿಷ್ಣುಃ ಸರ್ವತಃ ಸಂಪ್ರಸೀದತಿ ॥
ಇತಿ ಮಾಹಾತ್ಮ್ಯೇ ॥

ವಾಯು ದೇವತೆಗಳಲ್ಲಿ ಸರ್ವೋತ್ತಮ ಎನ್ನುವ ಜ್ಞಾನಕ್ಕಿಂತ ಹೆಚ್ಚು ಪ್ರಿಯ ಹರಿಗೆ ಏನೂ ಇಲ್ಲ. ಹಾಗೆಯೇ ಹರಿಯನ್ನು ಸರ್ವದೇವೋತ್ತಮನೆಂದು ತಿಳಿಯುವ ಜ್ಞಾನಿಗಿಂತ ಬೇರೆ ವಾಯುವಿಗೂ ಪ್ರಿಯನಿಲ್ಲ. ಭಾರತೀ ವಾಯು ಲಕ್ಷ್ಮೀ ಪರಮಾತ್ಮರಿಗೆ ಕ್ರಮವಾಗಿ ಸರ್ವೋತ್ತಮತ್ವವನ್ನು ತಿಳಿಯುವುದರಿಂದಲೇ ವಿಷ್ಣು ಬಲು ಪ್ರೀತನಾಗುತ್ತಾನೆ ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿದೆ.

---

1. ಮುಖ್ಯಧಿಯಾ ಪ್ರಾಣದೃಷ್ಟ್ಯಾ । -ಶ್ರೀಧರಃ
ಮುಖ್ಯಧಿಯಾ ಮುಖ್ಯಪ್ರಾಣ ಇತಿ ಬುದ್ಧ್ಯಾ । -ಸುದರ್ಶನಃ
ಮುಖ್ಯಧಿಯಾ ಪ್ರಾಣೋಽಯಂ ಮುಖ್ಯ ಇತಿ ಬುದ್ಧ್ಯಾ । -ವಿಶ್ವನಾಥಃ
ವಾಯೋರ್ಯತ್ ಸರ್ವಜೀವನ ಹೇತುತ್ವಂ ತತ್ತು ತದಂತರ್ಯಾಮಿಶಕ್ತ್ಯೈತಿ ಭಾವನಯೇತ್ಯರ್ಥಃ । -ಜೀವಗೋಸ್ವಾಮೀ

ವಾಯುರ್ಭೀಮೋ ಭೀಮನಾದೋ ಮಹೌಜಾಃ
ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ ।
ಅನಾವೃತ್ತಿರ್ದೇಹಿನಾಂ ದೇಹಪಾತೇ
ತಸ್ಮಾದ್ ವಾಯುರ್ದೇವದೇವೋ ವಿಶಿಷ್ಟಃ ॥

ಇತಿ ಮೋಕ್ಷಧರ್ಮೇಷು ॥

ವಾಯು ಅಸುರರಿಗೆ ಭಯಂಕರ ಯಮಭಟರಿಗೂ ಭೀತಿಹುಟ್ಟಿಸುವ ಧ್ವನಿ ಉಳ್ಳವ. ಮಹಾಬಲಿಷ್ಠ. ಎಲ್ಲ ಪ್ರಾಣಿಗಳಿಗೂ ಶ್ವಾಸಾಭಿಮಾನಿ. ಚೇಷ್ಟಾಪ್ರದ. ಪ್ರಾಣಿಗಳಿಗೆ ದೇಹಪಾತವಾಗಲು ವಾಯು ತೊಲಗುವುದೇ ಕಾರಣ. ಚರಮ ದೇಹಪಾತವಾದ ಬಳಿಕ ಜೀವನು ತಿರುಗಿ ಸಂಸಾರಕ್ಕೆ ಬಾರದಿರಲೂ ಅವನ ಅನುಗ್ರಹ ಕಾರಣ. ಅದರಿಂದ ಅವನು ದೇವತೆಗಳಿಗೂ ದೇವತೆ, ಸರ್ವೋತ್ಕೃಷ್ಟ ಎಂದು ಮೋಕ್ಷಧರ್ಮದಲ್ಲಿದೆ.

ತಸ್ಮಾದ್ವಾಯುರೇವ ವ್ಯಷ್ಟಿರ್ವಾಯುಃ ಸಮಷ್ಟಿ-
ರಪ ಪುನರ್ಮೃತ್ಯುಂ ಜಯತಿ ಯ ಏವಂ ವೇದ ॥

ಇತಿ ಚ ॥

'ಅದರಿಂದ ವಾಯುದೇವನೆ ವ್ಯಷ್ಟಿ ಅವನೇ ಸಮಷ್ಟಿಯೂ ಹೌದು. ಹೀಗೆ ತಿಳಿದವನು ಅಪಮೃತ್ಯುವನ್ನು ದೂರಮಾಡಿಕೊಳ್ಳುವನು ಮುಕ್ತಿ ಹೊಂದುವನು ಎಂದು ಬೃಹದಾರಣ್ಯಕ ಭುಜ್ಯುಬ್ರಾಹ್ಮಣದಲ್ಲಿದೆ.

ಪಂಚಭೂತಮನೋಬುದ್ಧಿರುದ್ರಾಣಾಂ ಪ್ರತಿದೇಹಕಂ ।
ಬಾಹ್ಯತಶ್ಚಾಪಿ ನೇತೃತ್ವಾದ್ ವಾಯುರ್ವ್ಯಷ್ಟಿಃ ಸಮಷ್ಟಿಕಃ ।

ಇತಿ ಪ್ರಭಂಜನೇ ॥

ಪಂಚಭೂತಾಭಿಮಾನಿಗಳಾದ ವಿನಾಯಕ ಪ್ರವಹವಾಯು ಅಗ್ನಿ ವರುಣ ಧರಾ ದೇವಿಯರು ಮತ್ತು ಮನೋಬುದ್ಧ್ಯಹಂಕಾರಾಭಿಮಾನಿಗಳಾದ ಇಂದ್ರ ಉಮಾ ರುದ್ರರು ಹೀಗೆ ನಿಯಾಮಕರಾಗಿ ವಿವಿಧ ದೇಹಗಳಲ್ಲಿ ವ್ಯಾಪಿಸಿರುವ ಅಷ್ಟದೇವತೆಗಳಿಗೆ ವಾಯು ನಿಯಾಮಕನಾದ್ದರಿಂದ ವಿ ಅಷ್ಟ ಇ, 'ವ್ಯಷ್ಟಿ' ಎನಿಸುತ್ತಾನೆ. ಈ ಅಷ್ಟದೇವತೆಗಳನ್ನು ಹೊರಗೆ ಅಧಿದೈವದಲ್ಲಿಯೂ 'ಸಂ ಅಷ್ಟ ಇ' ನಿಯಾಮನ ಮಾಡುವುದರಿಂದ 'ಸಮಷ್ಟಿ' ಎನಿಸುತ್ತಾನೆ ಎಂದು ಪ್ರಭಂಜನ ಎಂಬ ಗ್ರಂಥದಲ್ಲಿದೆ.

ಬೃಹದಾರಣ್ಯಕ ಭಾಷ್ಯದಲ್ಲಿ ಪರಮಸಂಹಿತಾ ವಚನಾನುಸಾರವಾಗಿ ವ್ಯಷ್ಟಿ

ಸಮಷ್ಟಿ ನಾಮಗಳಿಗೆ ಇನ್ನೊಂದು ಬಗೆಯಿಂದ ವಿವರಣೆ ನೀಡಿದ್ದಾರೆ. 'ದೇವ ಋಷಿ ಪಿತೃ ಯಕ್ಷ ಗಂಧರ್ವ ಮಾನುಷ ಉರಗ ಅಸುರ ಎಂದು ವಿವಿಧ ಅಷ್ಟವರ್ಗಗಳ ಜೀವರನ್ನು ಮುಕ್ತಿಗೊಯ್ಯುವುದರಿಂದ 'ವ್ಯಷ್ಟಿ'. ಗರುಡ ರುದ್ರ ಶೇಷ ಇಂದ್ರ ಇವರು ನಾಲ್ವರು ಮತ್ತು ಇವರ ಪತ್ನಿಯರು ನಾಲ್ವರು ಎಂದು ಸಂಪೂರ್ಣ ಅಷ್ಟದೇವತೆಗಳನ್ನು ಮೋಕ್ಷಕ್ಕೆ ಒಯ್ಯುವುದರಿಂದ 'ಸಮಷ್ಟಿ' ಎಂದು.

❖❖❖

ದೇವರಪೂಜೆಯಾದ ಬಳಿಕ ಭೋಜನದಿಂದ ತನ್ನ ಉದರದಲ್ಲಿರುವ ಆತ್ಮನಾಮಕ ಭಗವಂತನನ್ನೂ ತೃಪ್ತಿಪಡಿಸಬೇಕೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಸ್ಥಂಡಿಲೇ ಮಂತ್ರಹೃದಯೈರ್ಭೋಗೈರಾತ್ಮಾನಮಾತ್ಮನಿ ।
ಕ್ಷೇತ್ರಜ್ಞಂ ಸರ್ವಭೂತೇಷು ಸಮತ್ವೇನ ಯಜೇತ ಮಾಮ್ ॥ ೪೫ ॥

ನೆಲದಲ್ಲಿ ಚಕ್ರಾಬ್ಜಾದಿ ಮಂಡಲ ಬರೆದು, ಆಯಾ ಇಷ್ಟಮಂತ್ರದೊಂದಿಗೆ ನಮಃಶಬ್ದ ಸೇರಿಸಿ, ಗಂಧಾದಿ ದ್ರವ್ಯಗಳಿಂದ ನನ್ನನ್ನು ಅರ್ಚಿಸಬೇಕು. ತನ್ನ ಶರೀರದಲ್ಲಿ ಆತ್ಮನಾಮಕನಾದ ನನ್ನನ್ನು ಅನ್ನಾದಿ ಭೋಗಪದಾರ್ಥಗಳಿಂದ ಆರಾಧಿಸಬೇಕು, ಅಂದರೆ ಹರಿಯಾರಾಧನೆ ಎಂಬ ಭಾವದಿಂದ ಉಣಬೇಕು, ಉಡಬೇಕು. ಎಲ್ಲ ಪ್ರಾಣಿಗಳಲ್ಲಿ ನಿರ್ದೋಷನಾಗಿ ಏಕಪ್ರಕಾರನಾಗಿ ಕ್ಷೇತ್ರಜ್ಞನಾಮಕನಾದ ನಾನಿರುವೆ ನೆಂದು ಆದರ ತೋರಬೇಕು.

[1]'ತನ್ನ ದೇಹದಲ್ಲಿ ಜೀವಾತ್ಮವು ಪರಮಾತ್ಮನಿಗೆ ಅಧಿಷ್ಠಾನವಾಗಿದೆ, ವ್ರತಾನುಷ್ಠಾನ ನಿಮಿತ್ತವಿಲ್ಲದೆ ಉಪವಾಸಾದಿಗಳಿಂದ ಕ್ಲೇಶಪಡಿಸಬಾರದು ಎಂಬ ಅಭಿಪ್ರಾಯದಿಂದ ಅನಿಷಿದ್ಧ ಭೋಗಪದಾರ್ಥಗಳಿಂದ ತೃಪ್ತಿಪಡಿಸಬೇಕು' ಎಂದು ಬೇರೆ ವ್ಯಾಖ್ಯಾನ ಕಾರರು ಹೇಳುತ್ತಾರೆ.

ಆದರೆ ತಾನು ಪರಮಾತ್ಮನ ಅಧಿಷ್ಠಾನನೆಂದು ತನ್ನಲ್ಲಿ ಪ್ರೀತಿ ಬರಬಹುದು, ಭಕ್ತಿ ಬರಲಾರದು, ಅದರಿಂದ ಭಕ್ತಿಯಿಂದ ತನ್ನಾರಾಧನೆಯಾಗದು. ಜಡವಾದ ಮುಖ್ಯಪ್ರಾಣದ ಆರಾಧನೆಯೂ ಹೀಗೆ ಭಕ್ತಿರಹಿತ, ವ್ಯರ್ಥ. ಅದರಿಂದ ಬೇರು ನೀರುಂಡರೆ

1. ಆತ್ಮನಿ ದೇಹೇ ಆತ್ಮಾನಂ ತ್ವಂಪದಾರ್ಥಂ ಅಯಂ ಮಮಾತ್ಮಾ ತದಧಿಷ್ಠಾನಮಿತಿ ಬುದ್ಧ್ಯಾ ಭೋಗೈರ್ಯಜೇತ । -ರಾಧಾರಮಣದಾಸಃ

ಭೋಗೈರಾತ್ಮಾನಮಾತ್ಮನೇತಿ ವ್ರತಂ ವಿನಾ ನಾತ್ಮಾ ಕ್ಲೇಶಯಿತವ್ಯ ಇತ್ಯರ್ಥಃ । -ಸುದರ್ಶನಃ

ಮಾತ್ರ ಕೊಂಬೆಗಳಿಗೆ ತೃಪ್ತಿ. ಹಾಗೇ ಅಂತರ್ಯಾಮಿ ತೃಪ್ತನಾದರೆ ತನ್ನಾತ್ಮಕ್ಕೆ ತೃಪ್ತಿ ಎನ್ನುವ ಅನುಸಂಧಾನದಿಂದ ಅಂತರ್ಯಾಮಿಗೇ ತೃಪ್ತಿಯಾಗಲೆಂದು ಭಕ್ತಿಯಿಂದಲೇ ಭೋಜನ ಮಾಡಬೇಕು. 'ಸಕಲ ಜಗದಧೀಶಃ ಪ್ರೀಯತಾಂ ಶೌರಿರಿತ್ಥಂ' ಎಂದು ಶ್ರೀಮದಾಚಾರ್ಯರು ಪರಮಾನ್ನ ಉಣ್ಣುತ್ತಿದ್ದರು. ಹಾಗೆ ತನ್ನೊಳಗಿರುವ ಆತ್ಮನಾಮಕ ಪರಮಾತ್ಮನಿಗೇ ಅನ್ನಾದಿ ಭೋಗದಿಂದ ಆರಾಧನೆ ಮಾಡಬೇಕು. ತಾನು ಪರಮಾತ್ಮನ ಅಧಿಷ್ಠಾನವೆಂದು ತನ್ನನ್ನು ತೃಪ್ತಿಪಡಿಸುತ್ತಿದ್ದೇನೆ ಎನ್ನುವ ಭಾವನೆ ತಪ್ಪಲ್ಲದಿದ್ದರೂ, ಸರಿಯಲ್ಲ!

ಸ್ವಾತ್ಮನಿಸ್ಥೋ ಹರಿಃ ಪೂಜ್ಯ ಆತ್ಮನಾಮಾಽಶನಾದಿಕೈಃ ।
ತತ್‌ಸಂಬಂಧಾದಾತ್ಮ ಶಬ್ದೋ ಜೀವೇ ಸ್ಯಾದುಪಚಾರತಃ ॥
ಇತ್ಯಾತ್ಮಸಂಹಿತಾಯಾಂ ॥

'ತನ್ನಲ್ಲಿ ತನ್ನ ಶರೀರದಲ್ಲಿ ತನ್ನ ಮನಸಿನಲ್ಲಿರುವ ಹರಿಯನ್ನು ಅನ್ನವಸ್ತ್ರಾದಿಗಳಿಂದ ಉಪಚರಿಸಬೇಕು. 'ಆತ್ಮಾನಮಾತ್ಮನಿ ಯಜೇತ' ಎಂದು ಹೇಳುವ 'ಆತ್ಮ' ನಾಮಕನು ಮುಖ್ಯವಾಗಿ ಈ ಹರಿಯೆ. ಅವನ ಸಂಬಂಧವಿರುವ ಪ್ರಯುಕ್ತ ತನಗೂ ತನ್ನ ಶರೀರ ಮನಸುಗಳಿಗೂ 'ಆತ್ಮಾ' ಎಂದು ಹೆಸರು ಬಂದಿದೆ. ಇದು ಔಪಚಾರಿಕ ಹೊರತು ಮುಖ್ಯವಲ್ಲ' ಎಂದು ಆತ್ಮಸಂಹಿತೆಯಲ್ಲಿ ಹೇಳಿದೆ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್‌ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ಏಕಾದಶೋಽಧ್ಯಾಯಃ ॥

❖❖❖

ಅಧ್ಯಾಯ–೧೨

ಅಧ್ಯಾಯ ಸಾರಾಂಶ

ಯೋಗ ಜ್ಞಾನ ಅಹಿಂಸಾದಿ ಧರ್ಮ ವೇದಾಧ್ಯಯನ ತಪಸ್ಸು ದಾನ ಯಜ್ಞ ಲೋಕಸೇವೆ ವ್ರತಗಳಾಗಲಿ ಶೌಚಾದಿ ನಿಯಮ ಇಂದ್ರಿಯ ನಿಗ್ರಹಾದಿ ಯಮಗಳಾಗಲಿ ಯಾವುವೂ ಭಕ್ತಿಯಂತೆ ನನ್ನನ್ನು ವಶಪಡಿಸಿಕೊಳ್ಳಲಾರವು. ಭಕ್ತಿಯಿಂದಲೆ ಪ್ರಹ್ಲಾದಾದಿ ದೈತ್ಯರು ವಿಭೀಷಣ ಮುಂತಾದ ರಾಕ್ಷಸರು ನನ್ನ ಲೋಕವನ್ನು ಪಡೆದರು. ವೃತ್ರಾಸುರ ಅವಧೂತಮುನಿ ವೃಷಪರ್ವದಾನವ ಬಲಿಚಕ್ರವರ್ತಿ ಬಾಣಾಸುರ ಮಯದಾನವ ಸುಗ್ರೀವ ಹನುಮಾನ್ ಗಜೇಂದ್ರ

ಜಟಾಯು ವ್ಯಾಸಾನುಗ್ರಹಿಯಾದ ಕೃಮಿ ಕುಬ್ಜೆ ಗೋಕುಲದ ಗೋಪಗೋಪಿಯರು ಯಜ್ಞಪತ್ನಿಯರು ಮುಂತಾದವರು ಕೇವಲ ಭಕ್ತಿಯಿಂದ ನನ್ನನ್ನು ಪಡೆದರು. ಕೇವಲ ಯೋಗ ತಪಸ್ಸು ಮುಂತಾದವುಗಳಿಂದ ಎಷ್ಟು ಪ್ರಯತ್ನಿಸಿದರೂ ನನ್ನನ್ನು ಹೊಂದಲಾಗದು.

ಗೋಪಿಯರು ನನ್ನ ಮೇಲಿನ ಗಾಢವಾದ ಭಕ್ತಿಯಿಂದ ತೀವ್ರ ವಿಯೋಗದುಃಖ ಹೊಂದಿ ನನ್ನ ಹೊರತು ಇನ್ನಾವ ವಿಷಯ ದಲ್ಲಿಯೂ, ಸುಖ ಕಾಣದೆ ಹೋದರು. ಅವರಿಗೆ ನನ್ನ ಒಡನಾಟ ದಲ್ಲಿ ರಾತ್ರಿಗಳೆಲ್ಲವೂ ಅರೆಕ್ಷಣದಂತೆ ಕಳೆದಿದ್ದುವು. ನಾನು ಮಥುರೆಗೆ ಹೋದಾಗ ಆ ರಾತ್ರಿಗಳೇ ಅವರಿಗೆ ಕಲ್ಪಸಮಾನವಾದುವು. ಅಸಂಪ್ರಜ್ಞಾತ ಸಮಾಧಿಯಲ್ಲಿ ಯೋಗಿಗಳಂತೆ, ಸಮುದ್ರದಾಲಿಂಗನ ದಲ್ಲಿ ನದಿಗಳಂತೆ ಗೋಪಿಯರು ನನ್ನ ಧ್ಯಾನದಲ್ಲಿ ತಮ್ಮನ್ನೇ ಮರೆತರು. ಅವರು ನನ್ನ ಸ್ವರೂಪವನ್ನು ಅರಿಯದಿದ್ದರೂ ಭಕ್ತಿಯಿಂದಲೇ ನನ್ನನ್ನು ಹೊಂದಿದರು. ಅದರಿಂದ, ಉದ್ಧವ, ನೀನೂ ವಿಧಿನಿಷೇಧಗಳ ಅನುಸರಣೆಯನ್ನು ಪ್ರವೃತ್ತ ನಿವೃತ್ತ ಕರ್ಮಾಚರಣೆಗಳನ್ನು ಶಾಸ್ತ್ರಶ್ರವಣ ಮಾಡಿದ್ದನ್ನು, ಮಾಡಬೇಕಾಗಿರುವುದನ್ನು ಎಲ್ಲವನ್ನೂ ಭಕ್ತಿಯಿಂದ ನನಗೆ ಅರ್ಪಿಸು. ನನ್ನೊಬ್ಬನನ್ನೇ ಸರ್ವೇಶನೆಂದು ಶರಣುಹೊಂದು.

ಉದ್ಧವ ನುಡಿದ— ಪ್ರಭು, ನಿನ್ನ ಭಕ್ತರಲ್ಲಿ ಮುಖ್ಯಪ್ರಾಣ ಮುಖ್ಯನೋ ಅಥವಾ ಗೋಪಿಯರೋ ಎಂಬ ಸಂಶಯ ಈಗ ನನಗೆ ಬರುತ್ತಿದೆ. ಏಕೆಂದರೆ ಗೋಪಿಯರನ್ನು ಬಹಳ ಪ್ರಶಂಸೆ ಮಾಡಿರುವಿ.

ಶ್ರೀಕೃಷ್ಣ ನುಡಿದ—

ಹಿಂದಿನ ಕಲ್ಪದಲ್ಲಿ ವಾಯುಪದವಿಯಲ್ಲಿದ್ದ ಋಜುಯೋಗಿಯೆ ಈ ಕಲ್ಪದಲ್ಲಿ ಚತುರ್ಮುಖಪದವಿಯಲ್ಲಿದ್ದಾನೆ. ಅವನು ಗರುಡ ಶೇಷರುದ್ರಾದಿ ಸರ್ವಜೀವರಿಗೆ ಜನಕ. ಸರ್ವಪ್ರೇರಕ. ಗೋಪಿಯರು ನನ್ನ ಉತ್ತಮ ಭಕ್ತರೆಂದಮೇಲೆ ಇಂಥ ಮಹಿಮೆಉಳ್ಳ ವಾಯುವಿನ ಬಗ್ಗೆ ಏನು ಹೇಳಬೇಕು ಎನ್ನುವುದಕ್ಕಾಗಿ ಗೋಪಿಯರನ್ನು ಪ್ರಶಂಸಿಸಿದೆನಷ್ಟೆ.

ಈ ಜಗದ್‌ವೃಕ್ಷ ಚತುರ್ಮುಖನನ್ನು ಆಶ್ರಯಿಸಿದೆ. ಕರ್ಮವೆಂಬ ಬೀಜದಿಂದ ಅಂಕುರಿಸಿದೆ. ಐಹಿಕ ಪಾರತ್ರಿಕವೆಂದು ಎರಡು ಬಗೆ

ಸುಖಗಳೆ ಅದರ ಹೂ ಹಣ್ಣುಗಳು. ಬ್ರಹ್ಮ ಸರಸ್ವತಿಯರು ಮಣ್ಣು ನೀರುಗಳಂತೆ ಆಧಾರವಾಗಿದ್ದಾರೆ. ಅಸಂಖ್ಯ ಕರ್ಮಗಳು ಬೇರುಗಳು. ಅಹಂಕಾರ ಬುದ್ಧಿ ಮನೋಭಿಮಾನಿಗಳಾದ ರುದ್ರ ಇಂದ್ರ ಚಂದ್ರರು ಕಾಂಡಗಳು. ಪಂಚಭೂತಗಳು ಶಾಖೆಗಳು. ಏಕಾದಶೇಂದ್ರಿಯಗಳು ರೆಂಬೆಗಳು. ಪ್ರವೃತ್ತಿ ಮಾರ್ಗಿಗಳು ಮತ್ತು ನಿವೃತ್ತಿಮಾರ್ಗಿಗಳೇ ಎರಡು ಪಕ್ಷಿಗಳಾಗಿ ಈ ವೃಕ್ಷದಲ್ಲಿ ವಾಸವಾಗಿದ್ದಾರೆ. ಈ ಪಕ್ಷಿಗಳಿಗೆ ಪುಣ್ಯಪಾಪಗಳೆ ಎರಡು ರೆಕ್ಕೆಗಳು. ತ್ರಿಗುಣಗಳು ಈ ವೃಕ್ಷದ ಮೂರು ತೊಗಟೆಗಳು. ಪ್ರವೃತ್ತಕರ್ಮ ನಿವೃತ್ತಕರ್ಮಗಳಿಗೆ ಸ್ವರ್ಗ ಮೋಕ್ಷಗಳು ಫಲಗಳು. ವಿಷ್ಣುವೆಂಬ ಆಕಾಶದಲ್ಲಿ ಈ ವೃಕ್ಷ ತಲೆಯೆತ್ತಿ ನಿಂತಿದೆ. ಇದರ ಸ್ವರ್ಗಫಲವನ್ನು ವಿಷಯಲೋಲುಪರೂ ಮೋಕ್ಷಫಲವನ್ನು ವಿರಕ್ತರೂ ಉಣ್ಣುತ್ತಾರೆ. ಹೀಗೆ ಬಹು ರೂಪಗಳಿಂದ ಬಹು ಫಲ ನೀಡುವ ಈ ವೃಕ್ಷ ಭಗವಂತನ ಇಚ್ಛೆಯಿಂದ ಪ್ರಕೃತಿಯಿಂದ ಜನಿಸಿದೆ ಎಂದು ತಿಳಿದವನೆ ವೇದಾರ್ಥ ಬಲ್ಲವನೆನಿಸುತ್ತಾನೆ.

ಈ ವೃಕ್ಷದ ಜ್ಞಾನದಿಂದ ವಿಷಯಾಸಕ್ತಿಯನ್ನು ತೊರೆದು ಭಕ್ತಿ ತುಂಬಿದ ಸಾತ್ವಿಕ ಅಂತಃಕರಣದಲ್ಲಿ ಅಪರೋಕ್ಷವನ್ನು ಪಡೆದು ಸ್ವರೂಪಭೂತ ಅಪರೋಕ್ಷ ಬಲದಿಂದ ಹರಿತವಾದ ಆ ಜಡ ಅಪರೋಕ್ಷವೆಂಬ ಕೊಡಲಿಯಿಂದ ತಾಮಸವಾದ ಬಾಹ್ಯ ಅಂತಃಕರಣವನ್ನು ಛೇದಿಸ ಬೇಕು. ವಿರಜಾಸ್ನಾನದಲ್ಲಿ ಆ ಅಪರೋಕ್ಷವೆಂಬ ಶಸ್ತ್ರವನ್ನೂ ಲಿಂಗಶರೀರದೊಂದಿಗೇ ಪರಿತ್ಯಾಗ ಮಾಡಬೇಕು. ಕೇವಲ ಸ್ವರೂಪಭೂತ ಅಪರೋಕ್ಷಜ್ಞಾನದಿಂದ ಮೋಕ್ಷದಲ್ಲಿ ಸದಾ ಭಗವಂತನನ್ನು ಕಾಣುತ್ತ ಸುಖಿಸಬೇಕು.

❖❖❖

ಪರಮಾತ್ಮನನ್ನು ವಶಪಡಿಸಿಕೊಳ್ಳಲು ಭಕ್ತಿಗೆ ಸಮವಾದ ಸಾಧನ ಇನ್ನೊಂದಿಲ್ಲವೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ನ ರೋಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಏವ ಚ ।
ನ ಸ್ವಾಧ್ಯಾಯಸ್ತಪಸ್ತ್ಯಾಗೋ ನೇಷ್ಟಾಪೂರ್ತೇ ನ ದಕ್ಷಿಣಾಃ ॥೧॥

ವ್ರತಾನಿ ಯಜ್ಞಾಶ್ಛಂದಾಂಸಿ ತೀರ್ಥಾನಿ ನಿಯಮಾ ಯಮಾಃ ।
ಯಥಾಽವರುಂಧೇ ಮತ್ಸಂಗಃ ಸರ್ವದುಃಖಾಪಹೋ ಹಿ ಮಾಮ್ ॥೨॥

ಜೀವರ ಎಲ್ಲ ದುಃಖಗಳನ್ನು ಕಳೆವ ನನ್ನ ಭಕ್ತಿ ನನ್ನನ್ನು ವಶಪಡಿಸಿಕೊಳ್ಳುವಂತೆ, ಯೋಗ ಜ್ಞಾನ ಅಹಿಂಸಾದಿಧರ್ಮ ವೇದಾಧ್ಯಯನ ತಪಸ್ಸು ದಾನ ಯಜ್ಞ ಲೋಕಸೇವೆ ದಕ್ಷಿಣೆಗಳಾಗಲಿ ವ್ರತ ಯಜ್ಞ ವೇದ ತೀರ್ಥ ಶೌಚಾದಿನಿಯಮ ಇಂದ್ರಿಯನಿಗ್ರಹಾದಿ ಯಮಗಳಾಗಲಿ ವಶಪಡಿಸಿಕೊಳ್ಳಲಾರವು.

ಇಲ್ಲಿ 'ಯಥಾವರುಂಧೇ ಮತ್ಸಂಗಃ' ಎಂಬಲ್ಲಿ 'ಯಥಾವರುಂಧೇ ಸತ್ಸಂಗಃ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. ಮುಂದೆ 'ಮತ್ಸಂಗೇನ ಹಿ ದೈತೇಯಾ' ಎಂಬಲ್ಲಿಯೂ 'ಸತ್ಸಂಗೇನ ಹಿ ದೈತೇಯಾ' ಎಂದೇ ಅವರ ಪಾಠ. ಹೀಗಾಗಿ ಇದು ಸತ್ಸಂಗವನ್ನು ಹೇಳುವ ಪ್ರಕರಣ ಎಂದು ತೀರ್ಮಾನಿಸಿದ್ದಾರೆ. ಶ್ರೀಮದಾಚಾರ್ಯರ ಅಭಿಪ್ರಾಯದಲ್ಲಿ ಇದು ಭಕ್ತಿಪ್ರಕರಣ. ಭಗವದ್‌ಭಕ್ತಿಯನ್ನೇ ಶ್ರೀಕೃಷ್ಣ ಮತ್ಸಂಗ ಎಂದು ಕರೆದಿದ್ದಾನೆ. ಪಾಠವೂ ಮತ್ಸಂಗ ಎಂದೇ ಇದೆ.

ಮುಂದೆ ಏಳನೇ ಶ್ಲೋಕದಲ್ಲಿ—

'ಗೋಪಿಯರು ಯಜ್ಞಪತ್ನಿಯರು ಗೋವುಗಳು ಮರಗಿಡಗಳು ಮುಂತಾದವರು ಯಾರೂ ವೇದಾಧ್ಯಯನ ಮಾಡಿದವರಲ್ಲ, ಸಾಧುಸಂಗ ಮಾಡಿದವರಲ್ಲ, ವ್ರತ ತಪಸ್ಸುಗಳನ್ನೂ ಮಾಡಲಿಲ್ಲ, ನನ್ನ ಸಂಗದಿಂದ ನನ್ನನ್ನು ಪಡೆದರು' ಎಂದು ಶ್ರೀಕೃಷ್ಣ ಹೇಳುತ್ತಾನೆ. 'ನೋಪಾಸಿತ ಮಹತ್ತಮಾಃ' ಎಂದರೆ 'ನ ಉಪಾಸಿತಾ ಮಹತ್ತಮಾಃ ಸಾಧವೋ ಯೈಸ್ತೇ' 'ಸಾಧುಸಂಗ ಮಾಡಿದವರಲ್ಲ' ಎಂದೇ ವೀರರಾಘವ ವ್ಯಾಖ್ಯಾನವಿದೆ.

'ನನ್ನ ಸಂಗದಿಂದ ನನ್ನನ್ನು ಪಡೆದರು' ಎಂದು ಸ್ಪಷ್ಟವಾಗಿ ಶ್ರೀಕೃಷ್ಣ ಭಕ್ತಿಯನ್ನೇ ಹೊಗಳುತ್ತಾನೆ. ಕೊನೆಯಲ್ಲಿ 14ನೇ 15ನೇ ಶ್ಲೋಕಗಳಲ್ಲಿ ಭಕ್ತಿಯ ಪ್ರಭಾವವನ್ನು ಹೇಳಿ ಈ ಪ್ರಕರಣವನ್ನು ಮುಗಿಸುತ್ತಾನೆ. ಅಲ್ಲಿ

'ತಸ್ಮಾತ್ ತ್ವಮುದ್ಧವೋತ್ಸೃಜ್ಯ ಚೋದನಾಂ ಪ್ರತಿಚೋದನಾಂ'

ಎಂಬಲ್ಲಿ 'ಯಸ್ಮಾದೇವಂಭೂತೋ ಮದ್ಭಜನ ಪ್ರಭಾವಃ ತಸ್ಮಾತ್' 'ನನ್ನ ಭಕ್ತಿಯ ಪ್ರಭಾವ ಹೀಗಿರುವುದರಿಂದ' ಎಂದು ಶ್ರೀಧರವ್ಯಾಖ್ಯಾನವಿದೆ. ಭಕ್ತಿಯೋಗದಲ್ಲಿಯೇ ಮುನ್ನಡೆಯಲು ಉದ್ಧವನಿಗೆ ಶ್ರೀಕೃಷ್ಣ ಆದೇಶಿಸುತ್ತಾನೆ ಎಂದು ವಿಶ್ವನಾಥವ್ಯಾಖ್ಯಾನ. ಶರಣಾಗತಿ ಹೀಗೆ ಮಹಾಫಲಪ್ರದ ಎಂದು ಶುಕದೇವ ವ್ಯಾಖ್ಯಾನ. ಹೀಗೆ ಭಕ್ತಿ ಪ್ರಶಂಸೆಯಲ್ಲಿ ಪ್ರಕರಣ ಮುಕ್ತಾಯಗೊಳ್ಳುತ್ತಿದೆ ಎಂದು ಈ ವ್ಯಾಖ್ಯಾನಕಾರರಿಗೂ ಸಮ್ಮತವೆ.

'ಮತ್ಸಂಗಾನ್ಮಾಮುಪಾಗತಾಃ' ಎಂಬಲ್ಲಿ ಶ್ರೀಕೃಷ್ಣ ಹೇಳಿದ 'ನನ್ನ ಸಂಗ' ತಾವು ಹೇಳುವ ಸತ್ಸಂಗ ಪ್ರಕರಣಕ್ಕೆ ಹೊಂದಿಕೆಯಾಗುವುದಿಲ್ಲವೆಂದು ಆಲೋಚಿಸಿ ಈ ವ್ಯಾಖ್ಯಾನಕಾರರು ಸಾಧುಗಳ ಸಂಗವೂ ನನ್ನ ಸಂಗದಲ್ಲಿಯೇ ಪರ್ಯವಸಾನ ವಾಗುವುದೆಂದು ಕೃಷ್ಣನ ಅಭಿಪ್ರಾಯ ಎಂದಿದ್ದಾರೆ. ಇದು ಅವರಿಗೇ ಕ್ಲಿಷ್ಟವೆನಸಿತು. 'ನಾನೂ ಒಬ್ಬ ಸಾಧುವೇ ಆಗಿರುವುದರಿಂದ ನನ್ನ ಸಂಗವು ಸಾಧುಸಂಗವೇ' ಎಂದರು. ಅಥವಾ ನನ್ನ ಸಂಗವೆಂದರೆ ನನ್ನ ಭಕ್ತರ ಸಂಗ, ಭಕ್ತರು ಸಾಧುಗಳೆ ತಾನೆ? ಅಥವಾ ನನ್ನ ಸಂಗವೆಂದರೆ ನನ್ನ ಪ್ರಾಪ್ತಿಗೆ ಸಾಧನವಾದ ಸಂಗ. ಅದು ಸಾಧುಗಳ ಸಂಗವೆ, ಎಂದರು. ಕೊನೆಗೆ ಈ ಯಾವ ವಿವರಣೆಯೂ ಬೇಡವೆಂದುಕೊಂಡು, 'ನನ್ನ ಸಂಗ' ಎಂಬಲ್ಲಿ 'ಸಾಧುಸಂಗದಿಂದ ಲಭ್ಯವಾಗುವ ನನ್ನ ಸಂಗ' ಎಂದು ಸೇರಿಸೋಣ ಎಂದರು. ಹೀಗೆ ಇದನ್ನು ಸತ್ಸಂಗ ಪ್ರಕರಣವೆಂದು ನಿರೂಪಿಸಿದರು.

ಆದರೆ ಗೋಪಿಯರು ಹಿಂದೆ ಹೇಳಿದಂತೆ ಸಾಧು ಸಂಗಮಾಡಿದವರಲ್ಲ. ಆದರೂ ಸಾಧುಸಂಗದಿಂದ ಲಭ್ಯವಾಗುವ ನನ್ನ ಸಂಗವನ್ನು ಪಡೆದರೆನ್ನಬಹುದೆ?

ಶ್ರೀಮದಾಚಾರ್ಯರ ಪಾಠದಲ್ಲಿ ಇದು ಭಕ್ತಿಪ್ರಕರಣ. ಹಾಗೇ ಹೇಳುವಲ್ಲಿ ಯಾವ ಅನುಪಪತ್ತಿ ಇಲ್ಲ. 'ಸಾಧುಸಂಗದಿಂದ ಲಭ್ಯವಾಗುವ ನನ್ನ ಸಂಗ' ಎಂದು ಶ್ರೀಕೃಷ್ಣ ಹೇಳಬೇಕಾದ ಆವಶ್ಯಕತೆ ಇಲ್ಲ. ವಾಸ್ತವದಲ್ಲಿ ಸಾಧುಸಂಗದಿಂದಲೇ ಹರಿಯಸಂಗ ಲಭ್ಯವಾಗುವುದರಿಂದ ಹಾಗೆ ಹೇಳುವುದು ಇಷ್ಟವೆ.

ಸಾಧುಸಂಗವೆಂದರೆ ಕೇವಲ ಅವರ ಲೌಕಿಕ ಒಡನಾಟವಲ್ಲ. ಯಜ್ಞಪತ್ನಿಯರಿಗೆ ಶ್ರೀಕೃಷ್ಣನ ಗುಣಗಳ ಬಗ್ಗೆ ಪರಸ್ಪರ ಹೇಳಿಕೊಳ್ಳುತ್ತಿದ್ದ ಜನರ ಒಡನಾಟದಿಂದಲೇ ಕೃಷ್ಣನಲ್ಲಿ ಭಕ್ತಿ ಉಂಟಾಯಿತೆಂದು ರಾಧಾರಮಣದಾಸ ವ್ಯಾಖ್ಯಾನ ಹೇಳುತ್ತಿದೆ. ಸ್ವೋತ್ತಮರಲ್ಲಿ ಭಕ್ತಿಯೇ ಹರಿಭಕ್ತಿಗೆ ಕಾರಣವಾಗುವ ಸಾಧುಸಂಗ. ಗೋಪಿಯರು ಕಾತ್ಯಾಯನಿ ವ್ರತ ಮಾಡಿದವರು ದೇವಾದಿ ಭಕ್ತಿ ಮಾಡಿದವರು. ಸ್ವೋತ್ತಮರಲ್ಲಿ ಭಕ್ತಿ ಉಳ್ಳವರು. ಸಾಧುಗಳೊಂದಿಗೆ ಲೌಕಿಕ ಒಡನಾಟ ಮಾಡಿದವರಲ್ಲ.

ಇಲ್ಲಿ ಶ್ರೀಕೃಷ್ಣನು ಹೇಳುವ 'ಮತ್ಸಂಗ' 'ನನ್ನ ಸಂಗ'ವೆಂದರೇನು ಎನ್ನುವುದಕ್ಕೆ ಶ್ರೀಮದಾಚಾರ್ಯರು ವಿವರಣೆ ನೀಡುತ್ತಾರೆ—

ಸಂಗಸ್ತು ಗುಣಸಂಪ್ರೀತಿರ್ಗುಣವತ್ಸ್ವೇಽತಿ ನಿಶ್ಚಯಾತ್ ।
ಸ ಚೇದ್ಧರೌ ಭವೇತ್ ತೇನ ಮುಚ್ಯತೇ ನಾತ್ರ ಸಂಶಯಃ ।
ಅಪರೋಕ್ಷದೃಶೇರ್ಹೇತುರ್ಭವೇತ್ ಸ ಸ್ಯಾದ್ ಯದಿ ಕ್ಷಮಃ ।

ಅನ್ಯಥಾ ಸುಖಭಾಗೇವ ಯದ್ ದೃಶಿರ್ಮೋಕ್ಷಕಾರಣಂ ॥

ಇತಿ ದರ್ಶನೇ ॥

ಶ್ರೀಹರಿಯ ಗುಣಪೂರ್ಣತ್ವದ ವಿಷಯದಲ್ಲಿ ದೃಢನಿಶ್ಚಯ ಮಾಡಿಕೊಂಡು ಅವನಲ್ಲಿ ಮಾಡುವ ಗಾಢಪ್ರೇಮರೂಪವಾದ ಭಕ್ತಿಯೇ ಸಂಗವೆನಿಸುತ್ತದೆ. ಅದು ಹರಿಯಲ್ಲಿ ಉಂಟಾದರೆ ಮುಕ್ತಿಹೊಂದುತ್ತಾನೆ. ಇದರಲ್ಲಿ ಸಂಶಯವಿಲ್ಲ. ಅದು ಅತ್ಯಂತ ಪಕ್ವವಾದರೆ ಅಪರೋಕ್ಷ ಜ್ಞಾನಕ್ಕೆ ಕಾರಣವಾಗುವುದು. ಅಪಕ್ವವಾಗಿದ್ದರೆ ಅವನು ಪರಲೋಕಸುಖಭಾಗಿಯಾಗುತ್ತಾನೆ ಹೊರತು ಮುಕ್ತನಾಗುವುದಿಲ್ಲ. ಏಕೆಂದರೆ ಅಪರೋಕ್ಷಜ್ಞಾನವೇ ಮೋಕ್ಷಕಾರಣ ಎಂದು ದರ್ಶನವೆಂಬ ಗ್ರಂಥದಲ್ಲಿ ಹೇಳಿದೆ.

ಜ್ಞಾತ್ವಾಽಪಿ ಹರಿವಿದ್ವೇಷೀ ತಮೋ ಯಾತಿ ನ ಸಂಶಯಃ ।
ವಿಶೇಷರೂಪಸ್ಯಾಜ್ಞೋಽಪಿ ಗುಣವತ್ತ್ವೇಽತಿ ನಿಶ್ಚಿತಃ ।
ಗುಣಸಂಪ್ರೀತಿಮಾನ್ ನಿತ್ಯಂ ತಂ ದೃಷ್ಟ್ವಾ ಮುಕ್ತಿಮೇಷ್ಯತಿ ।
ಅಥವಾ ಸುಖಭಾಗೇವ ಸ್ಯಾದ್ ಯಾವದ್ ದರ್ಶನೋಪಗಃ ॥

ಇತಿ ವ್ಯಕ್ತೇ ॥

ಹರಿಯನ್ನು ತಿಳಿದೂ ದ್ವೇಷಮಾಡುವವನು ತಮಸ್ಸನ್ನು ಹೊಂದುತ್ತಾನೆ, ಸಂಶಯವಿಲ್ಲ, ಯೋಗ್ಯ ವಿಶೇಷರೂಪದ ಅಪರೋಕ್ಷ ಜ್ಞಾನವಿಲ್ಲದಿದ್ದರೂ ಗುಣಪೂರ್ಣತ್ವ ವಿಷಯದಲ್ಲಿ ದೃಢನಿಶ್ಚಯ ಉಳ್ಳವನು ಸದಾ ಹರಿಯಲ್ಲಿ ಗಾಢವಾದ ಭಕ್ತಿ ಉಳ್ಳವನು ಯೋಗ್ಯ ಅಪರೋಕ್ಷವನ್ನು ಪಡೆದು ಮುಕ್ತಿಹೊಂದುವವನು. ಅಥವಾ ಭಕ್ತಿ ವ್ಯರ್ಥವಾಗುವುದಿಲ್ಲ. ಅದರಿಂದ ಯೋಗ್ಯ ಅಪರೋಕ್ಷ ಲಭಿಸುವವರೆಗೆ ಸುಖಭಾಗಿಯೇ ಆಗುತ್ತಾನೆ, ದುಃಖಹೊಂದುವುದಿಲ್ಲ ಎಂದು ವ್ಯಕ್ತವೆಂಬ ಗ್ರಂಥದಲ್ಲಿದೆ.

ಹರಿಸಂಗವಿಹೀನಸ್ತು ಹರೇರ್ದರ್ಶನವಾನಪಿ ।
ನ ಮುಚ್ಯತೇಽಖಿಲಜ್ಞೋಽಪಿ ತಮೋ ಯಾತಿ ವಿನಿಶ್ಚಯಾತ್ ।
ಗುಣೈರನ್ಯೈರ್ವಿಹೀನೋಽಪಿ ತದ್‌ಭಕ್ತೇಷ್ವಪಿ ಚ ಕ್ರಮಾತ್ ।
ಸಂಗವಾನ್ ಸುಖಭಾಗೇವ ಸ್ಯಾದ್ ಗುಣೈರ್ಮುಕ್ತಿಮೇತಿ ಚ ।
ಸ್ವಭಕ್ತಸಂಗಹೀನಸ್ಯ ವ್ಯುತ್ಕ್ರಮಾತ್ ಸಂಗಿನೋಽಪಿ ವಾ
ಸ್ವಸಂಗವಿಘ್ನಕೃದ್ ವಿಷ್ಣುಸ್ತತ್ ಸಜ್ಜೇತ್ ತೇಷು ತತ್ರ ಚ ॥

ಇತಿ ಸತ್‌ಸಂಗೇ ॥

ಹರಿಭಕ್ತಿ ಇಲ್ಲದವನು ಹರಿಯ ಅಪರೋಕ್ಷ ಉಳ್ಳವನಾದರೂ ಸರ್ವಜ್ಞನೇ ಆದರೂ ಮುಕ್ತಿ ಹೊಂದುವುದಿಲ್ಲ. ನಿಶ್ಚಯವಾಗಿ ತಮಸ್ಸನ್ನೇ ಹೊಂದುತ್ತಾನೆ. (ದ್ವೇಷಿಗೆ ಭ್ರಮಾತ್ಮಕವಾದ ನಿರ್ಗುಣಾಪರೋಕ್ಷ ಅಥವಾ ನಿರ್ಗುಣಧ್ಯಾನ ಪರಿಪಾಕ ಮಾತ್ರವೇ ಹೊರತು ಗುಣಪೂರ್ಣಾಪರೋಕ್ಷವಿಲ್ಲ. ಅದರಿಂದ 'ಪಶ್ಯತೋ ಬ್ರಹ್ಮನಿರ್ದ್ವಂದ್ವಂ' 'ನ ಮೇ ಗುರೋರಪ್ಯಪರೋಕ್ಷತಾಂ ಗತಂ' ವಾಕ್ಯಗಳಿಗೆ ವಿರೋಧವಿಲ್ಲ.) ವೈರಾಗ್ಯ ಮುಂತಾದ ಬೇರೆ ಗುಣಗಳಿಲ್ಲದಿದ್ದರೂ ಹರಿಭಕ್ತರಲ್ಲಿ ತಾರತಮ್ಯಾನುಸಾರ ಭಕ್ತಿಉಳ್ಳವನು ಸುಖಭಾಗಿಯೇ ಆಗುತ್ತಾನೆ, ಕ್ರಮವಾಗಿ ಬೇರೆ ಗುಣಗಳನ್ನು ಸಂಪಾದಿಸಿ ಅಪರೋಕ್ಷ ಪಡೆದು ಮುಕ್ತನಾಗುತ್ತಾನೆ. ಹರಿಭಕ್ತರಲ್ಲಿ ಭಕ್ತಿ ಇಲ್ಲದವನು ಅಥವಾ ತಾರತಮ್ಯಕ್ಕೆ ವ್ಯತಿರಿಕ್ತವಾಗಿ ಭಕ್ತಿಉಳ್ಳವನಾದರೆ ಶ್ರೀಹರಿ ಅವನಲ್ಲಿ ತನ್ನ ಭಕ್ತಿಯನ್ನು ನಾಶಪಡಿಸುತ್ತಾನೆ. ಅದರಿಂದ ವಿಷ್ಣುಭಕ್ತರಲ್ಲಿಯೂ ವಿಷ್ಣುವಿನಲ್ಲಿಯೂ ಭಕ್ತಿ ಮಾಡಬೇಕು ಎಂದು ಸತ್ಸಂಗ ಎಂಬ ಗ್ರಂಥದಲ್ಲಿ ಹೇಳಿದೆ.

❖ ❖ ❖

ಅಧ್ಯಯನ ತಪಸ್ಸು ಮುಂತಾದುವಿಲ್ಲದೆಯೂ ಕೇವಲ ಭಕ್ತಿಯಿಂದಲೇ ಗೋಪಿಯರು ಮುಂತಾದವರು ಪರಮಾತ್ಮನನ್ನು ಹೊಂದಿದರೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ತೇ ನಾಧೀತಶ್ರುತಿಗಣಾ ನೋಪಾಸಿತಮಹತ್ತಮಾಃ ।
ಅವ್ರತಾತಪ್ತತಪಸೋ ಮತ್ಸಂಗಾನ್ಮಾಮುಪಾಗತಾಃ ॥ ೭ ॥

ವೃತ್ರಾಸುರ ಅವಧೂತಮುನಿ ವೃಷಪರ್ವದಾನವ ಬಲಿಚಕ್ರವರ್ತಿ ಬಾಣಾಸುರ ಮಯದಾನವ ವಿಭೀಷಣ ಸುಗ್ರೀವ ಹನುಮಂತ ಜಾಂಬವ ಗಜೇಂದ್ರ ಜಟಾಯು ಸಾವಿರ ಕಾಲಿನ ವೇದವ್ಯಾಸಾನುಗ್ರಹಪಾತ್ರವಾದ ಕೃಮಿ, ಬೇಟೆಗಾರ ಕುಬ್ಜೆ ಗೋಕುಲದ ಗೋಪಗೋಪಿಯರು ಯಜ್ಞಪತ್ನಿಯರು ಮುಂತಾದವರು ವೇದಾಧ್ಯಯನ ಮಾಡಿದವರಲ್ಲ. ಉತ್ತಮಗುರುಗಳನ್ನು ಸೇವಿಸಿದವರಲ್ಲ. ವ್ರತ ತಪಸ್ಸುಗಳನ್ನು ಮಾಡಿದವರಲ್ಲ. ಆದರೂ ನನ್ನ ಭಕ್ತಿಯಿಂದ ನನ್ನನ್ನು ಹೊಂದಿದ್ದಾರೆ.

ಇವರೆಲ್ಲರೂ ವೇದಾಧ್ಯಯನ ಗುರುಕುಲವಾಸ ವ್ರತತಪಸ್ಸುಗಳನ್ನು ಮಾಡಿದವರೆ. ಈ ಜನ್ಮದಲ್ಲಿ ಮಾಡಿರದಿದ್ದರೂ ಪೂರ್ವಜನ್ಮಗಳಲ್ಲಿ ಮಾಡಿರುತ್ತಾರೆ. ಪರಮಾತ್ಮಪ್ರಾಪ್ತಿಗೆ ವೇದಾಧ್ಯಯನ ಮುಂತಾದುವು ಮಾತ್ರವೆ ಸಾಲದು, ಭಕ್ತಿಯೇ ಮುಖ್ಯಸಾಧನ ಎನ್ನುವ ವಿವಕ್ಷೆಯಿಂದ ಹಾಗೆ ಹೇಳಿದೆ. ಭಕ್ತಿಯಿಲ್ಲದೆ ಮಾಡಿದರೆ ಎಲ್ಲವೂ ವ್ಯರ್ಥ.

ಕೇವಲೇನ ಹಿ ಭಾವೇನ ಗೋಪ್ಯೋ ಗಾವಃ ಖಗಾ ಮೃಗಾಃ।
ಯೇಽನ್ಯೇ ಮೂಢಧಿಯೋ ನಾಗಾಃ ಸಿದ್ಧಾ ಮಾಮೀಯುರಂಜಸಾ ॥ ೮ ॥

ಅಧ್ಯಯನ ಮುಂತಾದುವನ್ನು ಮಾಡದೆಯೂ ಕೇವಲ ಭಕ್ತಿಯಿಂದಲೇ ಗೋಪಿಯರು ಗೋವುಗಳು ಮರಗಿಡಗಳು ಮೃಗಗಳು ಸರ್ಪಗಳು ಇನ್ನೂ ಬೇರೆ ಜಾತಿ ಸ್ವಭಾವದಿಂದ ಅಜ್ಞಾನಿಗಳಾದ ಭಕ್ತರೂ ಸಂಸಾರಮುಕ್ತರಾಗಿ ನನ್ನನ್ನು ಚೆನ್ನಾಗಿ ಪಡೆದಿದ್ದಾರೆ.

ಯಂ ನ ಯೋಗೇನ ಸಾಂಖ್ಯೇನ ದಾನವ್ರತತಪೋಽಧ್ವರೈಃ।
ವ್ಯಾಖ್ಯಾಸ್ವಾಧ್ಯಾಯಸಂನ್ಯಾಸೈಃ ಪ್ರಾಪ್ನುಯಾದ್ಯತ್ನವಾನಪಿ ॥ ೯ ॥

ಕೇವಲ ಯೋಗ ಜ್ಞಾನ ದಾನ ತಪಸ್ಸು ಯಜ್ಞ ಪ್ರವಚನ ವೇದಾಧ್ಯಯನ ಸಂನ್ಯಾಸಗಳಿಂದಲೇ ಎಷ್ಟು ಪ್ರಯತ್ನ ಮಾಡಿದರೂ ನನ್ನನ್ನು ಹೊಂದಲಾಗದು.

ಮತ್ಕಾಮಾ ರಮಣಂ ಜಾರಮಸ್ವರೂಪವಿದೋಽಬಲಾಃ।
ಬ್ರಹ್ಮ ಮಾಂ ಪರಮಂ ಪ್ರಾಪುಃ ಶತಶೋಽಥ ಸಹಸ್ರಶಃ ॥ ೧೩ ॥

ನನ್ನನ್ನು ಕಾಮಿಸಿದ ಗೋಪಸ್ತ್ರೀಯರು ನನ್ನನ್ನು ಉಪಪತಿಯೆಂಬ ಭಾವನೆಯಿಂದ ಆರಾಧಿಸಿದರು. ನೂರಾರು ಸಾವಿರಾರು ಮಂದಿ ಆ ಅಬಲೆಯರು ಯೋಗ್ಯಾಪರೋಕ್ಷದಿಂದ ನನ್ನ ಸ್ವರೂಪವನ್ನು ಅರಿಯದಿದ್ದರೂ ಭಕ್ತಿಯಿಂದಲೇ ಪರಬ್ರಹ್ಮನಾದ ನನ್ನನ್ನು ಹೊಂದಿದರು.

ತಸ್ಮಾತ್ತ್ವಮುದ್ಧವೋತ್ಸೃಜ್ಯ ಚೋದನಾಂ ಪ್ರತಿಚೋದನಾಮ್।
ಪ್ರವೃತ್ತಂ ಚ ನಿವೃತ್ತಂ ಚ ಶ್ರೋತವ್ಯಂ ಶ್ರುತಮೇವ ಚ ॥ ೧೪ ॥

ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಮ್।
ಯಾಹಿ ಸರ್ವಾತ್ಮಭಾವೇನ ಯಸ್ಮಿನ್ನಸ್ಯಕುತೋಭಯಮ್ ॥ ೧೫ ॥

ಅದರಿಂದ, ಉದ್ಧವ, ನೀನು ವಿಧಿನಿಷೇಧಗಳ ಅನುಸರಣೆಯನ್ನು ಸಕಾಮ ನಿಷ್ಕಾಮಕರ್ಮಗಳನ್ನು ಕೇಳಬೇಕಾಗಿರುವ ಕೇಳಿರುವ ಎಲ್ಲವನ್ನೂ ಸುಮ್ಮನೆ ಪರಿತ್ಯಾಗ ಮಾಡದೆ ಭಕ್ತಿಯಿಂದ ಮಾಡಿ ನನ್ನಲ್ಲಿ ಅರ್ಪಿಸು. ಎಲ್ಲ ಶರೀರಿಗಳಿಗೂ ಸ್ವಾಮಿಯಾದ ನನ್ನೊಬ್ಬನನ್ನೇ ಸರ್ವೇಶನೆಂದು ಭಕ್ತಿಯಿಂದ ಶರಣುಹೊಂದು. ನನ್ನನ್ನೇ ಆಶ್ರಯಿಸಿರುವವನಿಗೆ ಯಾರಿಂದಲೂ ಭಯವಿರುವುದಿಲ್ಲ.

[1]ವೀರರಾಘವ ವ್ಯಾಖ್ಯಾನದಲ್ಲಿ ಗೋಪಿಯರಿಗೆ ಭಕ್ತಿ ಇರಲಿಲ್ಲ. ಕೇವಲ ಕಾಮಭಾವನೆ ಇದ್ದಿತು ಎಂದಿದ್ದಾರೆ. ಯಮಳಾರ್ಜುನರಿಗೆ ಕೇವಲ ದ್ವೇಷವಿದ್ದಿತು ಎಂದಿದ್ದಾರೆ. ಇದು ದಶಮಸ್ಕಂಧಕ್ಕೆ ವಿರುದ್ಧವಾಗಿದೆ. ಅಲ್ಲಿ (10.27.37) ಲಕ್ಷ್ಮೀದೇವಿಯು ಸೇವಿಸುವ ನಿನ್ನ ಪಾದಧೂಳಿಯನ್ನು ಅವಳಂತೆ ನಾವೂ ಸೇವಿಸಲು ಶರಣು ಹೊಂದಿದ್ದೇವೆ' ಎಂದು ಗೋಪಿಯರು ಹೇಳುತ್ತಾರೆ. ನಾರದರ ಅನುಗ್ರಹದಿಂದ ನಮಗೆ ನಿನ್ನ ದರ್ಶನ ಲಭಿಸಿತೆಂದು ಯಮಳಾರ್ಜುನರು ಹೇಳುತ್ತಾರೆ (10.11.37) ಶ್ರೀಧರವ್ಯಾಖ್ಯಾನ ವಿಶ್ವನಾಥವ್ಯಾಖ್ಯಾನಗಳಲ್ಲಿ ಉತ್ತಮ ಭಕ್ತಿ ಇತ್ತೆಂದೇ ಹೇಳಿದ್ದಾರೆ.

[2]ಜ್ಞಾನಕರ್ಮಾದಿಗಳಿಂದ ಮಿಶ್ರವಲ್ಲದ ನಿಷ್ಕಾಮಭಕ್ತಿಯೇ ಗೋಪಿಯರು ಮುಂತಾದವರಿಗಿದ್ದಿತ್ತೆಂದು ವಿಶ್ವನಾಥ ವ್ಯಾಖ್ಯಾನವಿದೆ. ಆದರೆ, ಗೋಪಿಯರ ಭಕ್ತಿಯಲ್ಲಿ ಶೃಂಗಾರರಸ, ಗೋವುಗಳ ಭಕ್ತಿಯಲ್ಲಿ ವಾತ್ಸಲ್ಯರಸ, ಗೋವರ್ಧನಾದಿ ಪರ್ವತಗಳ ಭಕ್ತಿಯಲ್ಲಿ ಸಖ್ಯರಸ ಮರಗಿಡಗಳ ಕಾಲಿಯ ಮುಂತಾದ ನಾಗರ ಭಕ್ತಿಯಲ್ಲಿ ದಾಸ್ಯರಸಗಳಿದ್ದುವು ಎಂದಿದ್ದಾರೆ. ಭಕ್ತಿಯಲ್ಲಿ ಶೃಂಗಾರಸವಿದೆ ಎಂದರೆ ಅದು ಕಾಮಯುಕ್ತವಾದ ಭಕ್ತಿಯೇ ಆಯಿತು. ಅದು ಶುದ್ಧಭಕ್ತಿ ಹೇಗಾಗುತ್ತದೆ? ಜಾರಬುದ್ಧಿಯಾಗುತ್ತದೆ ತಾನೆ?

ಗೋಪಿಕಾದ್ಯಾ ದಿವಂ ಗತ್ವಾ ಹರಿಂ ಜ್ಞಾತ್ವಾ ಯಥಾತಥಂ ।
ಪರಂ ಪದಂ ಯಯುಃ ಪೂರ್ವಸಂಗಾದೇವ ಶುಭೋಚಿತಾಃ ॥
ಇತಿ ಚ ॥

---

1. ಭಾವೋಽತ್ರ ಕಾಮಭಯದ್ವೇಷಾದಿರೂಪಾಭಿಪ್ರಾಯವಿಶೇಷಪರಃ । ಗೋಪ್ಯಃ ಕೇವಲೇನ ತೀವ್ರೇಣ ಭಾವೇನ ಕಾಮಾತ್ಮಕೇನ, ಗಾವೋ ನಗಾ ಮೃಗಾಶ್ಚ ತಸ್ಯ ಸಾದರಂ ಮದೀಕ್ಷಣ ಸ್ಪರ್ಶನಾದಿರೂಪೇಣ ಭಾವೇನ ಯೇ ಚಾನ್ಯೇ ಮೂಢಧಿಯಃ ಕೇವಲೇನ ಭಾವೇನ ಭಗವದ್‌ದ್ವೇಷಾತ್ಮಕೇನ ನಗಾ ಯಮಲಾರ್ಜುನಾದಯಃ ನಾಗಾಃ ಕಾಲಿಯಾದಯಃ ತೇಽಪಿ ಸಿದ್ಧಾ ಮುಕ್ತ್ಯರ್ಹಾ ಮದೀಕ್ಷಣಸ್ಪರ್ಶನಾದಿಭಿರ್ನಿರಸ್ತಾಖಿಲಮುಕ್ತಿಪ್ರತಿಬಂಧಕಾಃ ಸಂತೋಽಂಜಸಾಽನಾಯಾಸೇನ ಮಾಮೀಯುಃ ಪ್ರಾಪುಃ । -ವೀರರಾಘವಃ
2. ಕೇವಲೇನ ಜ್ಞಾನಕರ್ಮಾದ್ಯಮಿಶ್ರೇಣ ನಿಷ್ಕಾಮೇಣ ಭಾವೇನ ಶೃಂಗಾರ ವಾತ್ಸಲ್ಯ ಸಖ್ಯ ದಾಸ್ಯಭಾವಶಾಲಿನಾ ಭಕ್ತಿಯೋಗೇನ, ಗೋಪ್ಯಃ ಶೃಂಗಾರರಸೇನ ಗಾವೋ ವಾತ್ಸಲ್ಯರಸೇನ ನಗಾ ಗೋವರ್ಧನಾದಿ ಪರ್ವತಾಃ ಸಖ್ಯರಸೇನ... ಮಾಮೀಯುಃ । ಅತ್ರ ಗೋಪ್ಯಾದಯಃ ಸಿದ್ಧಾ ಏವ ಪೂರ್ವರಾಗಾದ್ಯನಂತರಂ ಮಾಮೀಯುರಿತಿ ಕೇವಲೇನ ಭಾವೇನ ತೇಷಾಂ ಮತ್‌ಪ್ರಾಪ್ತಿಮತ್ತ್ವಂ ಅನಾದಿತೋ ನಿತ್ಯಸಿದ್ಧಮೇವೇತ್ಯರ್ಥೋಽವಸೀಯತೇ ಅನ್ಯಥಾ ಸಿದ್ಧಾ ಇತಿಪದಸ್ಯ ವೈಯರ್ಥ್ಯಂ ಸ್ಯಾತ್ । -ವಿಶ್ವನಾಥಃ

ಗೋಪಿಯರು ಮುಂತಾದವರು (ತ್ರಿವಕ್ರೆ, ಹದಿನಾರು ಸಾವಿರದ ನೂರು ಮಂದಿ ಮಹಿಷಿಯರು) ಹಿಂದೆ ಪರಮಾತ್ಮನ ಅಪರೋಕ್ಷವನ್ನು ಪಡೆದು ಭಕ್ತಿ ಮಾಡಿ ರಮಾವೇಶದಿಂದ ಭಗವದಂಗಸಂಗರೂಪವಾದ ಶುಭಫಲಕ್ಕೆ ಯೋಗ್ಯರೇ ಆಗಿದ್ದರು. ಬಳಿಕ ಸ್ವರ್ಗಕ್ಕೂ ಹೋಗಿ ಯೋಗ್ಯತಾನುಸಾರ ಯೋಗ್ಯಾಪರೋಕ್ಷವನ್ನೂ ಸಂಪಾದಿಸಿ ಮೋಕ್ಷರೂಪ ಶುಭಫಲಕ್ಕೂ ಯೋಗ್ಯರಾಗಿ ಮುಕ್ತಿ ಪಡೆದರು ಎಂದೂ ಸತ್ಸಂಗಗ್ರಂಥದಲ್ಲಿದೆ.

❖❖❖

ಭಕ್ತನು ಎಲ್ಲ ವಿಧಿನಿಷೇಧಗಳನ್ನು ಅನುಸರಿಸಿ ಭಗವಂತನ ಆರಾಧನೆ ಮಾಡಬೇಕೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ತಸ್ಮಾತ್ತ್ವಮುದ್ಧವೋತ್ಸೃಜ್ಯ ಚೋದನಾಂ ಪ್ರತಿಚೋದನಾಮ್ ।
ಪ್ರವೃತ್ತಂ ಚ ನಿವೃತ್ತಂ ಚ ಶ್ರೋತವ್ಯಂ ಶ್ರುತಮೇವ ಚ ॥ ೧೪ ॥

~~ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಮ್ ।~~
ಯಾಹಿ ಸರ್ವಾತ್ಮಭಾವೇನ ಯಸ್ಮಿನ್ನಸ್ಯಕುತೋಭಯಮ್ ॥ ೧೫ ॥

ಅದರಿಂದ, ಉದ್ಧವ, ನೀನು ವಿಧಿನಿಷೇಧಗಳ ಅನುಸರಣೆಯನ್ನು ಸಕಾಮ ನಿಷ್ಕಾಮಕರ್ಮಗಳನ್ನು ಕೇಳಬೇಕಾಗಿರುವ ಕೇಳಿರುವ ಎಲ್ಲವನ್ನೂ ಸುಮ್ಮನೆ ಪರಿತ್ಯಾಗ ಮಾಡದೆ ಭಕ್ತಿಯಿಂದ ಮಾಡಿ ನನ್ನಲ್ಲಿ ಅರ್ಪಿಸು. ಎಲ್ಲ ಶರೀರಿಗಳಿಗೂ ಸ್ವಾಮಿಯಾದ ನನ್ನೊಬ್ಬನನ್ನೇ ಸರ್ವೇಶನೆಂದು ಭಕ್ತಿಯಿಂದ ಶರಣುಹೊಂದು. ನನ್ನನ್ನೇ ಆಶ್ರಯಿಸಿರುವವನಿಗೆ ಯಾರಿಂದಲೂ ಭಯವಿರುವುದಿಲ್ಲ.

[1]'ಭಗವದ್ ಭಕ್ತಿಯ ಪ್ರಭಾವ ಎಷ್ಟೆಂದರೆ, ಭಕ್ತನು ವಿಹಿತಕರ್ಮವನ್ನು ಬಿಡಬೇಕು, ನಿಷಿದ್ಧಕರ್ಮವನ್ನೂ ಬಿಡಬೇಕು ಎಂದು ಶ್ರೀಧರವ್ಯಾಖ್ಯಾನ ಹೇಳಿದೆ.

[2]ಗೃಹಸ್ಥಧರ್ಮವನ್ನೂ ಬಿಡಬೇಕು, ಸಂನ್ಯಾಸಧರ್ಮವನ್ನೂ ಬಿಡಬೇಕು. ಮುಂದೆ ಶಾಸ್ತ್ರಶ್ರವಣ ಮಾಡುವುದನ್ನೂ ಬಿಡಬೇಕು. ಹಿಂದೆ ಮಾಡಿದ್ದನ್ನೂ ಮರೆತು

1. ಯಸ್ಮಾದೇವಂಭೂತೋ ಮದ್‌ಭಜನಪ್ರಭಾವಸ್ತಸ್ಮಾತ್ತ್ವಂ ಚೋದನಾಂ ಶ್ರುತಿಂ ಚ ಪ್ರತಿಚೋದನಾಂ ಸ್ಮೃತಿಂ ಚ । ಯದ್ವಾ ವಿಧಿಂ ಚ ನಿಷೇಧಂ ಚೋತ್ಸೃಜ್ಯ ಮಾಂ ಶರಣಂ ಯಾಹಿ । -ಶ್ರೀಧರಃ

2. ಚೋದನಾಂ ವಿಧಿಂ ಪ್ರತಿಚೋದನಾಂ ಪ್ರತಿಷೇಧಂ ಚ ವಿಹಿತಂ ಕರ್ಮ ನಿಷಿದ್ಧಂ ಚ ಕರ್ಮ ತ್ಯಕ್ತ್ವೇತ್ಯರ್ಥಃ। ತರ್ಹಿ ಕಿಂ ಸನ್ಯಾಸಂ ಕುರ್ವೇನ ಪ್ರವೃತ್ತಂ ಗೃಹಸ್ಥಾನಾಂ ಧರ್ಮಂ ಚ ನಿವೃತ್ತಂ

ಬಿಡಬೇಕು. ಮನಸ್ಸಿನಲ್ಲಿ ಮೂಡುವ ದಾಸ್ಯಸಖ್ಯಾದಿ ಸಕಲ ಭಾವಗಳಿಂದಲೂ ನನ್ನೊಬ್ಬನನ್ನೇ ಶರಣು ಹೊಂದಬೇಕು. ಕರ್ಮವನ್ನು ಬಿಟ್ಟಿದ್ದರಿಂದ ಪಾಪ ಭಯವಾಗಲಿ ಶ್ರವಣವನ್ನು ಬಿಟ್ಟಿದ್ದರಿಂದ ಸಂಸಾರಭಯವಾಗಲಿ ಬೇಡ. ಎರಡನ್ನೂ ಕಳೆಯಲು ನಾನಿದ್ದೇ ಇರುತ್ತೇನೆ' ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ ಎನ್ನುತ್ತಿದೆ ವಿಶ್ವನಾಥ ವ್ಯಾಖ್ಯಾನ. ಇದು ಸರ್ವಪ್ರಮಾಣವಿರುದ್ಧ. ಅಸಂಬದ್ಧ. ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ–

ಶ್ರೋತವ್ಯಂ ಚ ಶ್ರುತಂ ಚೈವ ವಕ್ತವ್ಯಂ ಕಾರ್ಯಮೇವ ಚ
ನಿವರ್ತ್ಯಂ ಚ ಹರೇಃ ಪೂಜೇತ್ಯೇವಂ ಕುರ್ಯಾನ್ನ ಚಾಕ್ರಮಾತ್
ಏವಂ ಕರ್ತಾ ತು ಸಂನ್ಯಾಸೀ ಸರ್ವೋತ್ಸರ್ಗಾದ್ಧರೌ ಸ್ಮೃತಃ
ಅನ್ಯಥಾ ನೈವ ಸಂನ್ಯಾಸೀ ನಿಷ್ಕ್ರಿಯೋಽಪಿ ಶಿಲಾ ಯಥಾ
ಇತಿ ಕರ್ಮವಿವೇಕೇ ॥
ನಾಹಂ ಕರ್ತಾ ತು ಸರ್ವಸ್ಯ ಕರ್ತೈಕೋ ವಿಷ್ಣುರವ್ಯಯಃ ।
ಇತಿ ವಿತ್ವಾತು ಸಂನ್ಯಾಸೀ ನಾನ್ಯಥಾ ತು ಕಥಂಚನ ॥
ಇತಿ ನಿವೃತ್ತೇ ।
ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮ ಚೇತಸಾ
ನಿರಾಶೀರ್ನಿರ್ಮಮೋ ಭೂತ್ವಾ ಯುದ್ಧ್ಯಸ್ವ ವಿಗತಜ್ವರಃ ॥
ಇತಿ ಚ ॥

ಕೇಳಬೇಕಾದ್ದನ್ನು ಕೇಳಿದ್ದನ್ನು ಹೇಳಬೇಕಾದ್ದನ್ನು ಮಾಡಬೇಕಾದ್ದನ್ನು ಬಿಡಬೇಕಾದ್ದನ್ನು ಹರಿಪೂಜೆಯೆಂದು ಮಾಡುವುದು. ಬಿಡುವುದನ್ನು ಮಾಡಬೇಕು ಇದು ಕ್ರಮ. ಅಕ್ರಮವಾಗಿ ಮಾಡಬಾರದು. ಹೀಗೆ ಮಾಡುವವನು ಎಲ್ಲವನ್ನೂ ಹರಿಗೆ ಅರ್ಪಿಸುವುದರಿಂದ ಸಂನ್ಯಾಸಿ ಎನಿಸುತ್ತಾನೆ ಹೊರತು ಕಲ್ಲು ಬಂಡೆಯಂತೆ ನಿಷ್ಕ್ರಿಯನಾಗಿರುವವನು ಸಂನ್ಯಾಸಿಯಲ್ಲ ಎಂದು ಕರ್ಮವಿವೇಕಗ್ರಂಥದಲ್ಲಿದೆ.

ಸನ್ಯಾಸಿನಾಂ ಧರ್ಮಂ ಚ ತ್ಯಕ್ತ್ವಾ । ತತ್ರಾಪಿ ಶ್ರೋತವ್ಯಂ ಶ್ರುತಂಚ ತ್ಯಕ್ತ್ವೇತಿ ಭಾವಿ ಧರ್ಮ ಶ್ರವಣ ಮನಾಕಾಂಕ್ಷ್ಯ ಭೂತಶ್ರವಣಂ ಚ ವಿಸ್ಮೃತ್ಯೇತ್ಯರ್ಥಃ ಸರ್ವಾತ್ಮ ಭಾವೇನ ಸರ್ವೋಯ ಆತ್ಮನೋ ಮನಸೋ ಭಾವೋ ದಾಸ್ಯ ಸಖ್ಯಾದಿ ಸ್ತೇನೈಕಮೇವ ಮಾಮಾಲಂಬನೀಕೃತ್ಯ ಶರಣಂ ಯಾಹಿ । ಮಯ್ಯೈವಾಕುತೋಭಯಃ ಸ್ಯಾ ಇತಿ । ತವ ನಾಸ್ತಿ ಕರ್ಮಾಧಿಕಾರೋ ನಾಪಿ ಜ್ಞಾನಾಧಿಕಾರಸ್ತದಪಿ ತಂತಮಾತ್ಮನ್ಯಾರೋಪ್ಯ ಪ್ರತ್ಯವಾಯಭಯಂ ಸಂಸಾರಭಯಂ ಚ ಮನ್ಯಸೇ ಚೇತ್ತದಾ ತದ್‌ಭಯದ್ವಯಾತ್ ತ್ರಾತಾಽಹಂ ವಿದ್ಯಮಾನ ಏವಾಸ್ಮೀತ್ಯರ್ಥಃ ।

-ವಿಶ್ವನಾಥಃ

ನಾನು ಕರ್ತನಲ್ಲ. ಎಲ್ಲಕ್ಕೂ ಅವ್ಯಯನಾದ ವಿಷ್ಣು ಒಬ್ಬನೇ ಸ್ವತಂತ್ರಕರ್ತ. ಎಂದು ತಿಳಿದರೆ ಕರ್ತೃತ್ವಾಭಿಮಾನವನ್ನು ಬಿಡುವುದರಿಂದ ಸಂನ್ಯಾಸಿ ಎನಿಸುತ್ತಾನೆ. ಕರ್ತೃತ್ವಾಭಿಮಾನವನ್ನು ಬಿಡದಿದ್ದರೆ ಸರ್ವಥಾ ಸಂನ್ಯಾಸಿ ಎನಿಸುವುದಿಲ್ಲ ಎಂದು ನಿವೃತ್ತ ಎಂಬ ಗ್ರಂಥದಲ್ಲಿದೆ.

ನನ್ನಲ್ಲಿ ಸರ್ವಕರ್ಮಗಳನ್ನು ಸಮರ್ಪಿಸಿ ಶರೀರೇಂದ್ರಿಯ ಪ್ರೇರಕನು ನಾನೆಂಬ ಬುದ್ಧಿಯಿಂದ ಫಲದಾಸೆ ಬಿಟ್ಟು ಕರ್ತೃತ್ವಾಭಿಮಾನವನ್ನೂ ತೊರೆದು ಬಂಧುಗಳಿಗಾಗಿ ಶೋಕಿಸದೆ ಯುದ್ಧಮಾಡು ಎಂದು ಗೀತೆಯಲ್ಲಿಯೂ ಹೇಳಿದೆ.

ಎಲ್ಲ ಕರ್ಮಗಳನ್ನು ಪರಿತ್ಯಾಗ ಮಾಡಿ ನಿಷ್ಕ್ರಿಯನಾಗಿ ಭಗವಂತನನ್ನು ಶರಣು ಹೊಂದುವುದೆಂದರೆ ಅದು ಸ್ವವ್ಯಾಹತವಾದ ಮಾತು. ಏಕೆಂದರೆ ಶರಣಾಗತಿ—

ಸರ್ವೋತ್ತಮತ್ವ ವಿಜ್ಞಾನಪೂರ್ವಂ ತತ್ರ ಮನಃ ಸದಾ ।
ಸರ್ವಾಧಿಕಪ್ರೇಮಯುಕ್ತಂ ಸರ್ವಸ್ಯಾತ್ರ ಸಮರ್ಪಣಂ ।
ಅಖಂಡಾ ತ್ರಿವಿಧಾ ಪೂಜಾ ತದ್ರತ್ಯೈವ ಸ್ವಭಾವತಃ ।
ರಕ್ಷತೀತ್ಯೇವ ವಿಶ್ವಾಸಸ್ತದೀಯೋಽಹಮಿತಿ ಸ್ಮೃತಿಃ ।
ಶರಣಾಗತಿರೇಷಾ ಸ್ಯಾದ್ ವಿಷ್ಣೌ ಮೋಕ್ಷಫಲಪ್ರದಾ ॥

ಶ್ರೀಹರಿಯ ಸರ್ವೋತ್ತಮತ್ವ ಜ್ಞಾನಪೂರ್ವಕವಾಗಿ ಸದಾ ಸರ್ವಾಧಿಕ ಪ್ರೇಮಯುಕ್ತವಾಗಿರುವ ಮನಸ್ಸು, ಎಲ್ಲವನ್ನೂ ಹರಿಯಾರಾಧನೆ ಎಂದು ಅರ್ಪಿಸುವುದು, ಅವನ ಮೇಲಿನ ಪ್ರೀತಿಯಿಂದಲೇ ಬೇರೆ ಫಲದಾಸೆ ಇಲ್ಲದೆ ನಿರಂತರ ತ್ರಿಕರಣಗಳಿಂದ ಪೂಜೆಮಾಡುವುದು, ಅವನು ಅವಶ್ಯ ರಕ್ಷಿಸುವನೆಂಬ ವಿಶ್ವಾಸ, ಅವನ ದಾಸ ನಾನೆನ್ನುವ ಪ್ರಜ್ಞೆ ಈ ಐದು ಅಂಶಗಳಿಂದ ಕೂಡಿರುವ ಶರಣಾಗತಿ ಮೋಕ್ಷಫಲಪ್ರದ ಎಂದು ವಿಷ್ಣುಪುರಾಣವಚನ. ನಿಷ್ಕ್ರಿಯನಾದರೆ ನಿರಂತರ ತ್ರಿಕರಣಗಳಿಂದ ಪೂಜೆ ಮಾಡುವುದು ಹೇಗೆ ಸಾಧ್ಯ?

❖❖❖

'ವಾಯುಜೀವೋತ್ತಮತ್ವವನ್ನು ತಿಳಿಯುವುದಕ್ಕಿಂತ ಹರಿಗೆ ಪ್ರಿಯವಾದುದು ಇನ್ನೊಂದಿಲ್ಲ'ವೆಂದು ವಾಯುವಿನ ಪ್ರಶಂಸೆ ಮಾಡಿದ ಶ್ರೀಕೃಷ್ಣ ಗೋಪಿಯರನ್ನು ವಿಶೇಷ ಪ್ರಶಂಸೆ ಮಾಡಿದ್ದು ಏಕೆಂದು ಉದ್ಧವನಿಗೆ ಅರ್ಥವಾಗಲಿಲ್ಲ. ಕೇಳುತ್ತಾನೆ.

ಸಂಶಯಃ ಶೃಣ್ವತೋ ವಾಚಂ ತವ ಯೋಗೇಶ್ವರೇಶ್ವರ ।
ನ ನಿವರ್ತತ ಆತ್ಮಸ್ಥೋ ಯೇನ ಭ್ರಾಮ್ಯತಿ ಮೇ ಮನಃ ॥ ೧೬ ॥

ಯೋಗನಿಯಾಮಕರಾದ ಬ್ರಹ್ಮಾದಿ ದೇವತೆಗಳಿಗೂ ನಿಯಾಮಕನಾದ ಶ್ರೀಕೃಷ್ಣನೆ, ಭಕ್ತರಲ್ಲಿ ವಾಯು ಮುಖ್ಯನೆಂದು ಹೇಳಿಯೂ ಕೂಡ ವಿಶೇಷವಾಗಿ ಗೋಪಿಯರನ್ನು ಹೊಗಳುವ ನಿನ್ನ ಮಾತನ್ನು ಕೇಳುತ್ತಿದ್ದರೆ ನನಗೆ ಮನಸಿನಲ್ಲಿದ್ದ ಸಂಶಯ ನಿವೃತ್ತಿಯಾಗುತ್ತಿಲ್ಲ. ಭಕ್ತರಲ್ಲಿ ವಾಯು ಹೆಚ್ಚೋ ಅಥವಾ ಗೋಪಿಯರೊ? ಎಂಬ ಸಂಶಯದಲ್ಲಿ ನನ್ನ ಮನಸು ತೊಳಲಾಡುತ್ತಿದೆ.

[1]'ಮೊದಲಿಗೆ ಮಯೋದಿತೇಷ್ವವಹಿತಃ (11.10.1) ಎಂದು ಮುಂತಾಗಿ ಕರ್ಮ ಮಾಡೆಂದು ಶ್ರೀಕೃಷ್ಣ ಉಪದೇಶಿಸಿದ್ದಾನೆ. ಈಗ ಎಲ್ಲವನ್ನೂ ಬಿಟ್ಟು ನನ್ನನ್ನು ಶರಣುಹೊಂದು ಎಂದು ಹೇಳುತ್ತಿದ್ದಾನೆ. ಹಾಗಾದರೆ ಆತ್ಮನಿಗೆ ಕರ್ತೃತ್ವವಿದೆ ಅಥವಾ ಇಲ್ಲ ಎಂಬಲ್ಲಿ ಆತ್ಮವಿಷಯದಲ್ಲಿ ನನಗೆ ಸಂಶಯ ನಿವೃತ್ತಿಯಾಗಿಲ್ಲ. ಅಥವಾ ಕರ್ಮ ಮಾಡಬೇಕೆ? ತ್ಯಜಿಸಬೇಕೆ? ಎಂದು ಮನಸಿಲ್ಲಿರುವ ಸಂಶಯ ನಿವೃತ್ತಿಯಾಗಿಲ್ಲ ಎಂದು ಶ್ರೀಧರವ್ಯಾಖ್ಯಾನ ಹೇಳಿದೆ.

ಆದರೆ ರಾಧಾರಮಣ ವ್ಯಾಖ್ಯಾನ ಹೇಳುವಂತೆ ಆತ್ಮನಿಗೆ ಕರ್ತೃತ್ವವಿದೆ ಎಂದು ಮೀಮಾಂಸಕರು ಹೇಳುತ್ತಾರೆ, ಅದು ಸರಿಯಲ್ಲ ಎಂದು 'ವಿಲಕ್ಷಣಃ ಸ್ಥೂಲ ಸೂಕ್ಷ್ಮಾದ್ (11.10.8) ಎಂಬಲ್ಲಿ ಪ್ರತಿಪಾದಿಸಿಯಾಗಿದೆ. ಪುನಃ ಪ್ರಶ್ನೆಗೆ ಅವಕಾಶವಿಲ್ಲವೆಂದು ಬಗೆದು, 'ಅಥವಾ ಏಕಾಂತಭಕ್ತನು ಕರ್ಮ ಮಾಡಬೇಕೆ, ತ್ಯಜಿಸಬೇಕೆ? ಎಂದು ಪ್ರಶ್ನೆ, ಸಂಶಯ' ಎಂದು ಶ್ರೀಧರವ್ಯಾಖ್ಯಾನದಲ್ಲಿ ಹೇಳಿದೆ.

ವಸ್ತುತಃ ಈ ಪ್ರಶ್ನೆಗೂ ಮುಂದೆ ಶ್ರೀಕೃಷ್ಣ ಉತ್ತರ ಹೇಳುವುದಿಲ್ಲ. ಜ್ಞಾನದಿಂದ ಸಂಸಾರವೃಕ್ಷವನ್ನು ತರಿಯಬೇಕೆನ್ನುತ್ತಾನೆ.

---

1. ಪೂರ್ವಂ ತಾವನ್ಮಯೋದಿತೇಷ್ವವಹಿತಃ ಸ್ವಧರ್ಮೇಷ್ವಿತ್ಯಾದಿನಾ ಕರ್ಮ ಕರ್ತವ್ಯಮಿತ್ಯುಕ್ತಮಿದಾನೀಂ ತು ಸರ್ವಂ ತ್ಯಕ್ತ್ವಾ ಮಾಂ ಶರಣಂ ಯಾಹೀತ್ಯುಚ್ಯತೇ ತತ್ರ ಕಿಮಾತ್ಮನಃ ಕರ್ತೃತ್ವಾದ್ಯಸ್ತಿ ನಾಸ್ತಿ ವೇತ್ಯಾತ್ಮಸ್ಥ ಆತ್ಮ ವಿಷಯಃ ಸಂಶಯೋ ನ ನಿವರ್ತತೇ । ಯದ್ವಾ ಕರ್ಮಕಾರ್ಯಂ ತ್ಯಾಜ್ಯಂ ವೇತ್ಯಾತ್ಮಸ್ಥೋ ಹೃದಿಸ್ಥಃ ಸಂಶಯೋ ನ ನಿವರ್ತತ ಇತಿ ಪೃಚ್ಛತಿ ಸಂಶಯ ಇತಿ ಯೇನ ಸಂಶಯೇನ । -ಶ್ರೀಧರಸ್ವಾಮೀ

2. ಮೀಮಾಂಸಕ ಮತ ಪ್ರತ್ಯಾಖ್ಯಾನ ಪೂರ್ವಕಂ ಕರ್ತೃತ್ವಾದ್ಯಭಾವಃ ವಿಲಕ್ಷಣಃ ಸ್ಥೂಲಸೂಕ್ಷ್ಮಾದ್ದೇಹಾದಾತ್ಮೇಕ್ಷಿತಾ ಪೃಥಗಿತ್ಯಾದಿ ಪ್ರಘಟ್ಟಕೇನ ಪೂರ್ವಮೇವೋಪಪಾದಿತ ಇತಿ ತದ್ವಿಷಯಕ ಪ್ರಶ್ನೋ ವಿಜ್ಞಸ್ಯೋದ್ಧವಸ್ಯ ನ ಯುಕ್ತ ಇತ್ಯತೋ ಯದ್ವೇತಿ । ತಥಾಚೈಕಾಂತ ಭಕ್ತೇನ ಕರ್ಮ ಕರ್ತವ್ಯಂ ವಾ ತ್ಯಾಜ್ಯಮಿತಿ ಪ್ರಶ್ನಸ್ಯ ಪೂರ್ವಮಕೃತತ್ವಾದಪೂರ್ವತ್ವಮಿತಿ ಜ್ಞೇಯಂ । -ರಾಧಾರಮಣದಾಸಃ

ಗೀತೆಯಲ್ಲಿ 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂದು ಹೇಳಿದ್ದಕ್ಕೂ ಇಲ್ಲಿ 'ತಸ್ಮಾತ್ತ್ವಮುದ್ಧವೋತ್ಸೃಜ್ಯ ಚೋದನಾಂ ಪ್ರತಿಚೋದನಾಂ ಮಾಮೇವ ಶರಣಂ ಯಾಹಿ' ಎನ್ನುವುದಕ್ಕೂ ಏನೂ ವೈಲಕ್ಷಣ್ಯವಿಲ್ಲ. ಗೀತೆಯಲ್ಲಿ ಅರ್ಜುನ 'ಸ್ಥಿತೋಽಸ್ಮಿ ಗತಸಂದೇಹಃ' ಎಂದಿದ್ದಾನೆ. ಇಲ್ಲಿ ಉದ್ಧವನು ಮಾತ್ರ 'ಸಂಶಯೋ ನ ನಿವರ್ತತೇ' ಎನ್ನುತ್ತಾನೆ, ಏಕೆ?

[3]ವೀರರಾಘವ ವ್ಯಾಖ್ಯಾನದಲ್ಲಿ 'ಮೋಕ್ಷೋಪಾಯ ವಿಷಯದಲ್ಲಿ ಸಂಶಯ ನಿವೃತ್ತಿಯಾಗಿದೆ, ಆದರೆ, ಈ ಸಂಸಾರ ಯಾರಿಗೆ ಜೀವನಿಗೋ ಶರೀರಕ್ಕೋ ನಿನಗೋ? ಇದರ ನಿವೃತ್ತ್ಯುಪಾಯ ಏನು?' ಎಂದು ಸ್ವವ್ಯಾಹತವಾದ ಪ್ರಶ್ನೆಯನ್ನು ಉದ್ಧವ ಮಾಡುತ್ತಿದ್ದಾನೆ !

[4]ಜೀವಗೋಸ್ವಾಮಿಯ ವ್ಯಾಖ್ಯಾನದಲ್ಲಿ 'ಹೇ ಕೃಷ್ಣ ನೀನು ಕೇವಲ ಸತ್ಸಂಗ ಒಂದೇ ಮೋಕ್ಷಸಾಧನ ಎಂದು ಹೇಳಿ 'ತಸ್ಮಾತ್ ತ್ವಮುದ್ಧವೋತ್ಸೃಜ್ಯ' ಎಂದು ಕರ್ಮಜ್ಞಾನಗಳೆರಡನ್ನೂ ಚೆನ್ನಾಗಿ ನಿರಾಕರಿಸಿರುವಿ. ಹೀಗಾಗಿ ಇಲ್ಲಿ ಸಂಶಯಕ್ಕೇ ಅವಕಾಶವಿಲ್ಲ. ಆದರೂ 'ಮಯೋದಿತೇಷ್ವವಹಿತಃ' ಎಂದು ಮುಂತಾಗಿ ಮೂರು ಅಧ್ಯಾಯಗಳಲ್ಲಿ ನೀನು ಹೇಳಿದ್ದನ್ನು ಒಟ್ಟಾಗಿ ಕ್ರೋಡೀಕರಿಸಿ ತಿಳಿದುಕೊಳ್ಳಲು ನನ್ನ ಬುದ್ಧಿಗೆ ಸಾಮರ್ಥ್ಯ ಸಾಲದಾಗಿದೆ ಎಂದು ಉದ್ಧವ ಹೇಳುತ್ತಿದ್ದಾನೆ. ಅದಕ್ಕೆ ಶ್ರೀಕೃಷ್ಣ ಇನ್ನೂ ಹೆಚ್ಚು ಬೇರೆ ಜಗದ್ವೃಕ್ಷ ಮುಂತಾದವುಗಳ ವಿವರಗಳನ್ನು ಪ್ರವಚನ ಮಾಡುತ್ತಾನೆ. ಸಂಶಯವೂ ಇಲ್ಲ, ಸಮಾಧಾನವೂ ಇಲ್ಲ.

---

3. ತವ ವಾಚಂ ಶೃಣ್ವತೋ ಮಮ ಉಪಾಯ ವಿಷಯಃ ಸಂಶಯೋ ನಿವೃತ್ತಃ । ಆತ್ಮಸ್ಥ ಆತ್ಮವಿಷಯಸ್ತು ನ ನಿವರ್ತತೇ । ಕಿಂ ಸರ್ವೇಂದ್ರಿಯ ಪ್ರಾಣ ನಿಯಮನಾದಿಕಂ ಜೀವಕರ್ತೃಕಮುತ ತ್ವತ್ಕರ್ತೃಕಂ? ತ್ವತ್ಕರ್ತೃಕತ್ವೇಽಪಿ ಕಸ್ಯ ದೇವಮನುಷ್ಯಾದಿ ಭಾವಾತ್ಮಕಃ ಸಂಸಾರಃ ಕಶ್ಚೇಂದ್ರಿಯಾದೀನಾಮಾಧಾರಃ ಕಿಂ ಜೀವ ಉತ ಶರೀರಂ ಕಿಂವಾ ತ್ವಂ? ಕಶ್ಚ ಸುಖದುಃಖಹೇತು ಪುಣ್ಯಾಪುಣ್ಯಾರಂಭಕಃ? ಕಶ್ಚ ಸುಖ ದುಃಖಯೋರ್ಭೋಕ್ತಾ ಕಶ್ಚ ಸಂಸಾರನಿವೃತ್ತ್ಯುಪಾಯ ಇತ್ಯೇವಂವಿಧ ಆತ್ಮಸ್ಥಃ ಸಂಶಯಃ। -ವೀರರಾಘವಃ

4. ಪ್ರಾಯೇಣ ಭಕ್ತಿ ಯೋಗೇನೇತ್ಯಾದಿನಾ ಕೇವಲಃ ಸತ್ಸಂಗ ಏವ ದೃಢೀಕೃತೋಽತಿಶಾಯಿತಶ್ಚ। ತಸ್ಮಾತ್ತ್ವಮುದ್ಧವೇತ್ಯಾದಿನಾ ಕರ್ಮ ಚ ಜ್ಞಾನಂ ಚ ಸಮ್ಯಗೇವ ತ್ಯಾಜಿತಂ । ತದೇವಂ ಯದ್ಯಪಿ ಸಂಶಯಾವಸರೋ ನಾಸ್ತಿ । ತಥಾಪ್ಯಾಹ ಸಂಶಯ ಇತಿ । ತವ ವಾಚಂ ಶೃಣ್ವತೋಽವಧಾರಯತೋ ಮಮಾತ್ಮಸ್ಥಃ ಸಂಶಯಃ ಮಯೋದಿತೇಷ್ವವಹಿತ ಇತ್ಯಾದಿಕಾಧ್ಯಾಯತ್ರಯ ಗತಮಹಾವಾಕ್ಯಾರ್ಥ ಪರ್ಯಾಲೋಚನಾಸಾಮರ್ಥ್ಯಂ ನ ನಿರ್ವತತೇ। -ಜೀವಗೋಸ್ವಾಮಿ

[5]ವಿಶ್ವನಾಥ ವ್ಯಾಖ್ಯಾನದಲ್ಲಿ 'ಕೃಷ್ಣ ನೀನು 'ಮಯಿ ಸರ್ವಾಣಿ ಕರ್ಮಾಣಿ ನಿರಪೇಕ್ಷಃ ಸಮಾಚರೇತ್' ಎಂದು ಕರ್ಮವನ್ನು ನನಗೆ ಉಪದೇಶಿಸಿರುವೆ. ಬಳಿಕ 'ಯದಿದಂ ಮನಸಾ ವಾಚಾ' ಎನ್ನುತ್ತ ಕರ್ಮಾಧಿಕಾರವನ್ನು ಕಿತ್ತುಕೊಂಡು, ಜ್ಞಾನಾಧಿಕಾರ ನೀಡಿರುವೆ. ಈಗ ಅದನ್ನೂ ಬಿಟ್ಟು ನನ್ನನ್ನು ಶರಣಾಗೆನ್ನುವೆ. ಮುಂದೆ ಇನ್ನೇನು ಹೇಳುವೆ ಎಂದು ಸಂಶಯ ನನ್ನ ತಲೆ ತಿನ್ನುತ್ತಿದೆ ಎಂದು 'ಸಖ್ಯರಸ'ದ ಗುಂಗಿನಲ್ಲಿ ಅಣಕವಾಡುತ್ತಾನೆ, ಉದ್ಧವ! ಗಂಭೀರವಾದ ತತ್ತ್ವೋಪದೇಶದ ನಡುವೆ ಇದು ಬಂದು, ಶಿವಪೂಜೆಯಲ್ಲಿ ಕರಡಿ ಬಿಟ್ಟಂತಾಗಿದೆ!

'ವಾಯೌ ಮುಖ್ಯಧಿಯಾ' ಇತ್ಯುಕ್ತ್ವಾ ವಿಶೇಷತೋ ಗೋಪಿಕಾ ಪ್ರಶಂಸನಾತ್ 'ಸಂಶಯಃ ಶೃಣ್ವತಃ' ಇತಿ ಚೋದಯತಿ ।

ವಾಯೌ ಮುಖ್ಯಧಿಯಾ (೧೧.೧೧.೪೪) ಎಂದು ಹಿಂದೆ ವಾಯುವನ್ನು ಮುಖ್ಯಭಕ್ತನೆಂದು ಹೇಳಿ ಗೋಪಿಯರನ್ನು ಶ್ರೀಕೃಷ್ಣ ವಿಶೇಷವಾಗಿ ಹೊಗಳಿದ್ದರಿಂದ ಮುಖ್ಯಭಕ್ತ ಯಾರು ವಾಯುವೆ ಗೋಪಿಯರೆ ಎನ್ನುವುದನ್ನು ನಿಶ್ಚಯಿಸಲಾಗದೆ 'ನಿನ್ನ ಮಾತನ್ನು ಕೇಳಿ ಸಂಶಯ ಉಂಟಾಗಿದೆ. ಅದು ನಿವೃತ್ತಿಯಾಗುತ್ತಿಲ್ಲ' ಎಂದು ಪ್ರಶ್ನೆ ಮಾಡುತ್ತಾರೆ, ಉದ್ಧವ.

'ಗುಹಾಂ ಪ್ರವಿಷ್ಟಃ' ಎಂದು ಮುಂದಿನ ಶ್ಲೋಕದಲ್ಲಿ ಹೇಳುವಂತೆ ಗೋಪಿಯರೂ ಸೇರಿದಂತೆ ಎಲ್ಲ ಭಕ್ತರ ಹೃದಯದಲ್ಲಿಯೂ ವಾಯು ಅಂತರ್ಯಾಮಿಯಾಗಿದ್ದು ಜ್ಞಾನಭಕ್ತ್ಯಾದಿ ಪ್ರೇರಣೆ ಮಾಡುವುದರಿಂದ ಅವರು ಉತ್ತಮ ಭಕ್ತರೆನಿಸಿದರು ಎಂದಮೇಲೆ ವಾಯು ಅವರಿಗಿಂತಲೂ ಹೆಚ್ಚು ಉತ್ತಮ ಭಕ್ತನೆಂದು ಬೇರೆ ಹೇಳಬೇಕಾಗಿಲ್ಲ ಎಂದು ಶ್ರೀಕೃಷ್ಣ ಸಮಾಧಾನ ಹೇಳುತ್ತಾನೆ.

❖❖❖

ಜ್ಞಾನಾದಿ ಸಕಲಗುಣಗಳಲ್ಲಿಯೂ ಸರ್ವೋತ್ತಮ ಹರಿಭಕ್ತನು ವಾಯುವೆ, ಅವನೆ ಬ್ರಹ್ಮ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

---

5. ಮಯಿ ಸರ್ವಾಣಿ ಕರ್ಮಾಣಿ ನಿರಪೇಕ್ಷಃ ಸಮಾಚರೇದಿತಿ ವದತಾ ತ್ವಯಾ ಮಹ್ಯಂ ಕರ್ಮಾಧಿಕಾರೋ ದತ್ತಃ ತತ್‌ಪೂರ್ವಂತು ಯದಿದಂ ಮನಸಾ ವಾಚೇತೀ ತ್ಯುಕ್ತವತಾ ಮಹ್ಯಂ ಜ್ಞಾನಾಧಿಕಾರ ಏವ ದತ್ತಃ । ಅಧುನಾ ತು ಸರ್ವಂ ತ್ಯಕ್ತ್ವಾ ಮಾಂ ಶರಣಂಯಾಹೀತಿ ಭಕ್ತ್ಯಧಿಕಾರಂ ದದಾಸಿ । ನ ಜಾನೇ ಪುನರಗ್ರೇ ಕಮಧಿಕಾರಂ ಮಹ್ಯಂ ದದಾಸೀತಿ ಸಖ್ಯರಸೋದ್ಭೂತಾ ವಕ್ರೋಕ್ತಿ ರ್ದ್ಯೋತಿತಾ । —ವಿಶ್ವನಾಥಃ

ಯ ಏಷ ಜೀವೋ ವಿವರಪ್ರಸೂತಿಃ
ಪ್ರಾಣೇನ ಘೋಷೇಣ ಗುಹಾಂ ಪ್ರವಿಷ್ಟಃ।
ಮನೋಮಯಂ ಸೂಕ್ಷ್ಮಮುಪೈತಿ ರೂಪಂ
ಮಾತ್ರಾ ಸ್ವರೋ ವರ್ಣ ಇತಿ ಸ್ಥವಿಷ್ಠಮ್ ॥ ೧೭ ॥

ಹಿಂದೆ ವಾಯುವಾಗಿದ್ದವನೆ ಈಗ 'ಜೀವ' ಅಂದರೆ ಜೀವೋತ್ತಮ ಚತುರ್ಮುಖನಾಗಿ ಹುಟ್ಟಿದ್ದಾನೆ. 'ವಿ-ವರ' ವಿಶೇಷವಾಗಿ 'ವರ' ಶ್ರೇಷ್ಠರೆನಿಸಿದ ಗರುಡ ರುದ್ರ ಪಾರ್ವತಿ ಮುಂತಾದವರಿಗೆ 'ಪ್ರಸೂತಿ' ಜನಕನೆನಿಸಿದ್ದಾನೆ. 'ಪ್ರಾಣ' ಸರ್ವಪ್ರೇರಕನಾದ ಶ್ರೀಹರಿ ಮತ್ತು 'ಘೋಷ' ವೇದಾಭಿಮಾನಿನಿ ರಮಾದೇವಿಯ ರೊಂದಿಗೆ ಗರುಡ ಶೇಷ ಮುಂತಾದವರ 'ಗುಹೆ'ಯನ್ನು ಹೃದಯಗುಹೆಯನ್ನು ಪ್ರವೇಶಿಸಿ ಅವರೊಳಗೆ 'ಮನೋಮಯ' ಮನಃಪ್ರೇರಕ ಸೂಕ್ಷ್ಮರೂಪವನ್ನು ಹೊಂದುತ್ತಾನೆ. ಹ್ರಸ್ವಾದಿ ಮಾತ್ರೆ ಉದಾತ್ತಾದಿ ಸ್ವರ ಅಕಾರಾದಿ ವರ್ಣರೂಪದ ವೇದ ಗಳಿಗೆ ಅಭಿಮಾನಿಯಾಗಿ 'ಸ್ಥವಿಷ್ಠ' ಸ್ಥೂಲರೂಪವನ್ನೂ ಹೊಂದುತ್ತಾನೆ. ಗೋಪಿಯರೂ ~~ನನ್ನನ್ನು ಹೊಂದಿದರೆಂದಮೇಲೆ ಇಷ್ಟು ಮಹಿಮೆಯುಳ್ಳ ವಾಯು ನನ್ನನ್ನು~~ ಹೊಂದುವುದೇನಾಶ್ಚರ್ಯ? ಎನ್ನುವುದಕ್ಕಾಗಿ ನಾನು ಗೋಪಿಯರನ್ನು ಹೊಗಳಿದೆನಷ್ಟೆ.

[1]'ಜೀವಿಗಳನ್ನು ಜೀವಿಸುವಂತೆ ಮಾಡುವುದರಿಂದ ಜೀವನೆನಿಸುವ ಪರಮಾತ್ಮ ಪ್ರತ್ಯಕ್ಷ ಕಾಣುತ್ತಾನೆ, ನಾನಾ ವೇದರೂಪ ವರ್ಣಗಳ ರೂಪದಿಂದ. ಹೇಗೆಂದರೆ ಅವನು ಮೂಲಾಧಾರಾದಿ ಷಟ್ಚಕ್ರಗಳಲ್ಲಿ ವರ್ಣರೂಪದಿಂದ ಪ್ರವಿಷ್ಟನಾಗಿ ಪರಾ ನಾಮಕ ಘೋಷದೊಂದಿಗೆ ನಾದಉಳ್ಳ ಪ್ರಾಣವಾಯುವಿನೊಂದಿಗೆ ಇದ್ದು ಮನೋ ಮಯವಾದ ಪಶ್ಯಂತೀ ಮಧ್ಯಮಾನಾಮಕ ಸೂಕ್ಷ್ಮರೂಪಗಳನ್ನು ಮಣಿಪೂರ ವಿಶುದ್ಧಿ ಚಕ್ರಗಳಲ್ಲಿ ಪಡೆದು ಮುಖದಲ್ಲಿ ಕಕಾರಾದಿ ವರ್ಣರೂಪದ ವೈಖರೀ ಶಬ್ದವಾಗಿ ಪರಿಣಮಿಸಿ ನಾನಾ ವೇದರೂಪನಾಗುತ್ತಾನೆ' ಎಂದು ಶ್ರೀಧರವ್ಯಾಖ್ಯಾನವಿದೆ.

---

1. ಸ ಏಷೋಽಪರೋಕ್ಷಃ ಜೀವಯತೀತಿ ಜೀವಃ ಪರಮೇಶ್ವರಃ ಅಪರೋಕ್ಷತ್ವೇ ಹೇತುಃ ವಿವರೇಷ್ವಾಧಾರಾದಿ ಚಕ್ರೇಷು ಪ್ರಸೂತಿ ರಭಿವ್ಯಕ್ತಿರ್ಯಸ್ಯ ಸಃ । ತಾಮೇವಾಭಿವ್ಯಕ್ತಿಮಾಹ ಘೋಷೇಣೇತಿ। ಘೋಷೇಣ ಪರಾಖ್ಯೇನ ನಾದವತಾ ಪ್ರಾಣೇನ ಸಹ ಗುಹಾಮಾಧಾರಚಕ್ರಂ ಪ್ರವಿಷ್ಟಃ ಸನ್ ಮನೋಮಯಂ ಸೂಕ್ಷ್ಮಂ ರೂಪಂ ಪಶ್ಯಂತ್ಯಾಖ್ಯಂ ಮಧ್ಯಮಾಖ್ಯಂ ಚ ಮಣಿಪೂರ ಚಕ್ರೇ ವಿಶುದ್ಧಿಚಕ್ರೇ ಚೋಪೇತ್ಯ ಪ್ರಾಪ್ಯ ವಕ್ತ್ರೇ ಮಾತ್ರಾ ಹ್ರಸ್ವಾದಿಃ ಸ್ವರ ಉದಾತ್ತಾದಿಃ ವರ್ಣಃ ಕಕಾರಾದಿರಿತ್ಯೇವಂ ವೈಖರ್ಯಾಖ್ಯಃ ಸ್ಥ ವಿಷ್ಠೋಽತಿಸ್ಥೂಲೋ ನಾನಾ ವೇದಶಾಖಾತ್ಮಕೋ ಭವತಿ । -ಶ್ರೀಧರಃ

ಇಲ್ಲಿ ನಿತ್ಯವಾದ ವರ್ಣಗಳನ್ನು ಅನಿತ್ಯ ಎಂದಿದ್ದಾರೆ. ವರ್ಣರೂಪದಿಂದ ಪರಮಾತ್ಮನೆ ವ್ಯಕ್ತನಾಗಿ ಪ್ರತ್ಯಕ್ಷನಾಗುತ್ತಾನೆ ಎಂದಿದ್ದಾರೆ. ಪರಮಾತ್ಮನನ್ನು ಜೀವನೆಂದಿದ್ದಾರೆ. 'ಗುಹಾಂಪ್ರವಿಷ್ಟಃ' ಹೃದಯಾಕಾಶದಲ್ಲಿರುವವನೆಂದು ಪ್ರಸಿದ್ಧ ನಾದ ಪರಮಾತ್ಮನನ್ನು ಗುದದ್ವಾರದ ಬಳಿ ಇರುವ ಮೂಲಾಧಾರಚಕ್ರದಲ್ಲಿ ಪ್ರವಿಷ್ಟ ನೆಂದಿದ್ದಾರೆ. ಚಕ್ರಗಳಲ್ಲಿ ಪರಮಾತ್ಮನಿರುವನೆಂದರೆ ತಪ್ಪೇನೂ ಇಲ್ಲ. ಆದರೆ 'ಗುಹಾಂ ಪ್ರವಿಷ್ಟಃ' ಎಂಬುದು 'ಯೋ ವೇದ ನಿಹಿತಂ ಗುಹಾಯಾಂ' 'ಗುಹಾಂ ಪ್ರವಿಷ್ಟಾವಾತ್ಮಾನೌ' ಎಂದು ಶ್ರುತಿಸೂತ್ರಗಳಲ್ಲಿ ಹೃದಯಗುಹೆಯಲ್ಲಿರುವುದೆಂದು ಪ್ರಸಿದ್ಧ ವಾದರೂ ಅದನ್ನು ಬಿಟ್ಟು ಬೇರೆ ಅರ್ಥಮಾಡಿದ್ದಾರೆ. ವರ್ಣಗಳು ಷಟ್ ಚಕ್ರಗಳಲ್ಲಿ ಉತ್ಪನ್ನವಾಗುವುದು ಪ್ರಮಾಣ ವಿರುದ್ಧ. ವರ್ಣಗಳಿಗೆ ಮೊದಲು ಮನೋಮಯ ರೂಪವಿರುವುದೂ ವಿರುದ್ಧ.

ಶ್ರೀಮದಾಚಾರ್ಯರು ತಂತ್ರಭಾಗವತ ವಚನದ ಆಧಾರದೊಂದಿಗೆ ಮುಖ್ಯಪ್ರಾಣ ಎಲ್ಲ ಜೀವರ ಹೃದಯದಲ್ಲಿ ಅಂತರ್ಯಾಮಿಯಾಗಿರುವನೆಂಬ ಪ್ರಮೇಯವನ್ನು ಈ ಶ್ಲೋಕದಲ್ಲಿ ತೋರಿಸುತ್ತಾರೆ.

ಗೋಪಿಕಾ ಅಪಿ ಮಾಮೀಯುಃ ಕಿಮು ವಾಯ್ವಾದ್ಯಾ ಇತಿ ದರ್ಶಯಿತುಂ ಗೋಪಿಕಾಪ್ರಶಂಸನಂ। ಸರ್ವಗುಣೈಃ ಸರ್ವೋತ್ತಮಸ್ತು ವಾಯುರೇವ, ಸ ಏವ ಚ ಹಿರಣ್ಯಗರ್ಭ ಇತಿ ದರ್ಶಯಿತುಮಾಹ–'ಯ ಏಷ ಜೀವೋ ವಿವರ ಪ್ರಸೂತಿರಿತ್ಯಾದಿ ।

ಗೋಪಿಯರೂ ಸಹ ನನ್ನನ್ನು ಹೊಂದಿದರು, ವಾಯು ಮುಂತಾದವರು ಹೊಂದಿದರೆಂದು ಬೇರೇನು ಹೇಳಬೇಕು ಎಂದು ತೋರಿಸಲು ಗೋಪಿಯರ ಪ್ರಶಂಸೆ. ಎಲ್ಲ ಗುಣಗಳಲ್ಲಿ ಸರ್ವೋತ್ತಮ ಭಕ್ತನು ವಾಯುವೇ. ಅವನೇ ಬ್ರಹ್ಮಪದವಿಗೆ ಬರುವವನು ಎಂದು ಹೇಳಲು 'ಯ ಏಷ ಜೀವೋ ವಿವರಪ್ರಸೂತಿ–' ಇತ್ಯಾದಿ ಶ್ಲೋಕಗಳು ಹೊರಟಿವೆ.

ವಿಶೇಷೇಣ ವರಾಣಾಮಹಂಕಾರಾದೀನಾಮಪಿ ಪ್ರಸೂತಿಃ ಉತ್ಪತ್ತಿ ಕರ್ತಾ । ಪ್ರಾಣೇನ ವಿಷ್ಣುನಾ । ಘೋಷೇಣ ವೇದಾತ್ಮಕ ಪ್ರಕೃತ್ಯಾ ।

'ವಿವರಪ್ರಸೂತಿಃ' ಎಂದರೆ 'ವಿ' ವಿಶೇಷವಾಗಿ 'ವರ' ಉತ್ತಮರಾದ ಅಹಂಕಾರಾದಿ ತತ್ವಾಭಿಮಾನಿ ರುದ್ರಾದಿಗಳಿಗೂ ಜನಕನು ಚತುರ್ಮುಖನು

'ಪ್ರಾಣೇನ' ಪ್ರಾಣನಿಗೂ ಪ್ರಾಣನಾದ ವಿಷ್ಣುವಿನೊಂದಿಗೆ ಮತ್ತು ಘೋಷೇಣ ವೇದಘೋಷಾಭಿಮಾನಿಯಾದ ರಮೆಯೊಂದಿಗೆ ರುದ್ರಾದಿಗಳ ಹೃದಯ ಗುಹೆಯಲ್ಲಿರುತ್ತಾನೆ.

ಮನೋ ಮಾತ್ರಾದಯಶ್ಚ ಹಿರಣ್ಯಗರ್ಭಸ್ಯ ದೇವ್ಯಾಃ ಪರಮಾತ್ಮನಶ್ಚ ವ್ಯಕ್ತಿಸ್ಥಾನಾನೀತ್ಯುಕ್ತಂ ಪ್ರಾಣೇನ ಘೋಷೇಣ ಚ ಸಹ ವಿವರ ಪ್ರಸೂತಿರ್ಮನೋಮಯಂ ರೂಪಮುಪೈತೀತ್ಯಾದಿನಾ ।

ಮನಸ್ಸು ಮತ್ತು ಮಾತ್ರಾ ಮುಂತಾದುವುಗಳು ಚತುರ್ಮುಖ ಲಕ್ಷ್ಮೀ ಪರಮಾತ್ಮರಿಗೆ ಅಭಿವ್ಯಕ್ತಿ ಸ್ಥಾನಗಳೆಂದು ಅಭಿಪ್ರಾಯದಿಂದ 'ಪ್ರಾಣ ಮತ್ತು ಘೋಷರೊಂದಿಗೆ ವಿವರ ಪ್ರಸೂತಿಯು ಮನೋಮಯರೂಪವನ್ನು ಸ್ವೀಕರಿಸುತ್ತಾನೆ' ಎಂದು ಮುಂತಾಗಿ ಶ್ಲೋಕದಲ್ಲಿ ಹೇಳಿದೆ.

❖❖❖

~~ಅಗ್ನಿಗೆ ಅರಣಿಕಾಷ್ಠದಂತೆ ಪರಮಾತ್ಮನಿಗೆ ವೇದವು ಅಭಿವ್ಯಕ್ತಿ ಸ್ಥಾನವೆಂದು~~ ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಯಥಾऽನಲಃ ಖೇऽನಿಲಬಂಧುರೂಷ್ಮಾ
ಬಲೇನ ದಾರುಣ್ಯಧಿಮಥ್ಯಮಾನಃ।
ಅಣುಃ ಪ್ರಜಾತೋ ಹವಿಷಾ ಸಮಿಧ್ಯತೇ
ತಥೈವ ಮೇ ವ್ಯಕ್ತಿರಿಯಂ ಹಿ ವಾಣೀ ॥ ೧೮ ॥

ಬೆಂಕಿ ತನಗೆ ಆಶ್ರಯವಾದ ಅರಣಿಕಾಷ್ಠದಲ್ಲಿ ಬಲವಾಗಿ ಕಡೆದಾಗ ಚಿಕ್ಕದಾಗಿ ಜನಿಸಿದರೂ ಹವಿಸ್ಸನ್ನು ಹಾಕಿದಷ್ಟೂ ಗಾಳಿಯ ಸಹಾಯದಿಂದ ಆಕಾಶದಲ್ಲಿ ಹೆಚ್ಚುಹೆಚ್ಚು ಚೆನ್ನಾಗಿ ಬೆಳಗುತ್ತದೆ. ಪಾಪದಾಹಕವಾಗುತ್ತದೆ. ಹಾಗೇ ಉಪಕ್ರಮಾದಿ ಗಳನ್ನು ಪರಿಶೀಲಿಸಿದಾಗ ವೇದದಲ್ಲಿ ನಾನು ಸ್ವಲ್ಪವಾಗಿ ಅಭಿವ್ಯಕ್ತನಾದರೂ ಗುರೂಪದೇಶ ದೊರೆತಷ್ಟೂ ಹೆಚ್ಚುಹೆಚ್ಚಾಗಿ ವೇದದಲ್ಲಿ ಅಭಿವ್ಯಕ್ತನಾಗುತ್ತೇನೆ. ಪಾಪದಾಹಕ ನಾಗುತ್ತೇನೆ. ಅಂತೂ ವೇದವಾಣಿ ವಿಶೇಷವಾಗಿ ನನ್ನ ಅಭಿವ್ಯಕ್ತಿ ಸ್ಥಾನವಾಗಿದೆ.

ಈ ಶ್ಲೋಕದಲ್ಲಿ 'ಇಯಂ ವಾಣೀ ಮೇ ವ್ಯಕ್ತಿಃ' ಈ ವೇದವಾಣಿ ನನಗೆ ಅಭಿವ್ಯಕ್ತಿ ಸ್ಥಾನವಾಗಿದೆ, ಎಂದಿದೆ. ಹಿಂದಿನ ಶ್ಲೋಕದಲ್ಲಿ ಮನಸ್ಸು ಮತ್ತು ವೇದಗಳು ಪ್ರಾಣ ಘೋಷ ವಿವರಪ್ರಸೂತಿಗಳೆನಿಸಿದ ಹರಿ ಲಕ್ಷ್ಮಿ ಚತುರ್ಮುಖರಿಗೆ ಮೂವರಿಗೂ

ಅಭಿವ್ಯಕ್ತಿ ಸ್ಥಾನಗಳೆಂದಿದ್ದರೂ ಈ ಶ್ಲೋಕದಲ್ಲಿ 'ಮೇ ವ್ಯಕ್ತಿಃ' 'ನನಗೆ ಅಭಿವ್ಯಕ್ತಿ ಸ್ಥಾನವು ವೇದವಾಣಿ' ಎಂದು ಶ್ರೀಕೃಷ್ಣ ಹೇಳಿದಾಗ 'ವೇದವಾಣಿ ಪರಮಾತ್ಮನಿಗೆ ಮಾತ್ರ ವ್ಯಕ್ತಿ ಸ್ಥಾನ' ಎಂದು ತಿಳಿಯಬಾರದು. ವೇದಗಳಲ್ಲಿ ಲಕ್ಷ್ಮೀ ಚತುರ್ಮುಖರೂ ವ್ಯಕ್ತರಾಗುತ್ತಾರೆ. ಮುಖ್ಯವಾಗಿ ಪರಮಾತ್ಮನೇ ವ್ಯಕ್ತನಾಗುತ್ತಾನೆ ಎಂಬ ಅಭಿಪ್ರಾಯದಿಂದ ಶ್ರೀಕೃಷ್ಣ 'ನನಗೆ ವ್ಯಕ್ತಿಸ್ಥಾನ' ಎನ್ನುತ್ತಿದ್ದಾನೆ.

ತತ್ರಾಪಿ ವಿಶೇಷತೋ ಭಗವತ ಏವ ವ್ಯಕ್ತಿಸ್ಥಾನಮಿತ್ಯಾಹ
ಯಥಾಽನಲ ಇತ್ಯಾದಿನಾ ॥

ಅವರಲ್ಲಿಯೂ ವಿಶೇಷವಾಗಿ ಭಗವಂತನಿಗೇ ವೇದವಾಣಿ ಅಭಿವ್ಯಕ್ತಿಸ್ಥಾನವೆಂದು 'ಯಥಾನಲಃ' ಇತ್ಯಾದಿ ಶ್ಲೋಕದಲ್ಲಿ ಶ್ರೀಕೃಷ್ಣ ಹೇಳುತ್ತಿದ್ದಾನೆ.

❖ ❖ ❖

ಚತುರ್ಮುಖಬ್ರಹ್ಮ ಸೃಷ್ಟಿಕರ್ತನಾಗಿದ್ದು ಎಲ್ಲರ ಇಂದ್ರಿಯಗಳಲ್ಲಿಯೂ ಎಲ್ಲೆಡೆಯಲ್ಲೂ ನಿಯಾಮಕನಾಗಿ ವ್ಯಾಪಿಸಿದ್ದಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಏವಂ ಗತಿಃ ಕರ್ಮ ರತಿರ್ವಿಸರ್ಗೋ
ಘ್ರಾಣೋ ರಸೋ ದೃಕ್ ಸ್ಪರ್ಶಃ ಶ್ರುತಿಶ್ಚ।
ಸಂಕಲ್ಪವಿಜ್ಞಾನಮಥಾಭಿಮಾನಃ
ಸೂತ್ರಂ ರಜಃ ಸತ್ತ್ವತಮೋ ವಿಕಾರಃ ॥ ೧೯ ॥

ನುಡಿಯುವುದು ನಡೆಯುವುದು ಕೈಕೆಲಸ ಸ್ತ್ರೀಸಂಗ ಮಲವಿಸರ್ಜನೆಗಳೂ, ಅವುಗಳನ್ನು ಮಾಡುವ ವಾಕ್ಕು ಪಾದ ಹಸ್ತ ಉಪಸ್ಥ ಪಾಯುಗಳೂ, ಮೂಗು ನಾಲಿಗೆ ಕಣ್ಣು ತೊಗಲು ಕಿವಿಗಳೂ, ಅವುಗಳಿಂದಾಗುವ ಮೂಸಿತಿಳಿಯುವುದು ಸವಿಯು ವುದು ಕಾಣುವುದು ಸ್ಪರ್ಶಿಸುವುದು ಕೇಳುವುದೆಂಬ ಕ್ರಿಯೆಗಳೂ, ಮನಸ್ಸು ಬುದ್ಧಿ ಅಹಂಕಾರ ಮತ್ತು ಅವುಗಳ ಕಾರ್ಯಗಳು, ಅವುಗಳ ಅಭಿಮಾನಿದೇವತೆಗಳು ಮಹತ್ತತ್ತ್ವ ಹಾಗೂ ಅದರ ಅಭಿಮಾನಿ ವಾಯುವೂ, ಸತ್ವರಜತಮ ಎಂಬ ತ್ರಿಗುಣಗಳು, ಅವುಗಳ ಅಭಿಮಾನಿಗಳಾದ ಶ್ರೀಭೂದುರ್ಗೆಯರು, ಇವರೆಲ್ಲ ಸೇರಿ ಆಗಿರುವ ಸಮಸ್ತ ಬ್ರಹ್ಮಾಂಡವೂ ಎಲ್ಲವೂ ನನಗೆ ವೇದದಂತೆಯೇ ವಿಶೇಷವಾಗಿ ಅಭಿವ್ಯಕ್ತಿ ಸ್ಥಾನಗಳಾಗಿವೆ.

ಅಯಂ ಹಿ ಜೀವಸ್ತ್ರಿವೃದಬ್ಜಯೋನಿ-
ರವ್ಯಕ್ತ ಏಕೋ ಜಗತಾಮಥಾದ್ಯಃ।
ವಿಶ್ಲಿಷ್ಟಶಕ್ತಿರ್ಬಹುಧೇವ ಭಾತಿ
ಬೀಜಾನಿ ಯೋನಿಂ ಪ್ರತಿಪದ್ಯ ಯದ್ವತ್ ॥ ೨೦ ॥

ಸಕಲಶಬ್ದವಾಚ್ಯನಾದ ಈ 'ಅಬ್ಜಯೋನಿ' ಚತುರ್ಮುಖಬ್ರಹ್ಮ 'ಜೀವ'ನಾಗಿದ್ದಾನೆ, ರುದ್ರಾದಿ ಸಕಲ ಜೀವರಿಗೆ ಪ್ರಾಣಧಾರಕನಾಗಿದ್ದಾನೆ. 'ತ್ರಿವೃತ್' ಜ್ಞಾನ ಆನಂದ ಬಲ ಎಂದು ಮೂರರ ಸ್ವರೂಪನಾಗಿದ್ದಾನೆ. 'ಅವ್ಯಕ್ತ' ಸೂಕ್ಷ್ಮರೂಪದಿಂದ ಎಲ್ಲರೊಳಗಿದ್ದಾನೆ. 'ಏಕ ಏವ' ಜೀವೋತ್ತಮ. 'ಜಗತಾಂಆದ್ಯಃ' ಜಗತ್ತಿಗೆ 'ಆದ್ಯ' ಸೃಷ್ಟಿಕರ್ತ. 'ಯದ್ವತ್ ವಿಶ್ಲಿಷ್ಟಶಕ್ತಿಃ' ತಾನು ಸೃಜಿಸಿದ ವಸ್ತುಗಳಲ್ಲಿ ಎಲ್ಲಿಯೂ ತನ್ನ ಸಾಮರ್ಥ್ಯಕ್ಕೆ ಚ್ಯುತಿಯಿಲ್ಲದಂತೆ, 'ಬಹುಧೇವ ಭಾತಿ' ವಿವಿಧ ವಸ್ತುಗಳಲ್ಲಿ ವಿವಿಧ ರೂಪದಿಂದ ತೋರುತ್ತಾನೆ. ಹೊಲದಲ್ಲಿ ಬಿತ್ತಿದ ಸಣ್ಣ ಕಾಳುಗಳು ಮೊಳೆದು ದೊಡ್ಡದಾಗುವಂತೆ ಇಂದ್ರಿಯಾದಿ ಸಕಲ ವಸ್ತುಗಳಲ್ಲಿ ಅವುಗಳ ಅಭಿಮಾನಿಗಳಲ್ಲಿ ~~ನಿಯಾಮಕನಾಗಿ ಬಹುರೂಪಗಳಿಂದ ವ್ಯಕ್ತನಾಗುತ್ತಾನೆ.~~

ಯಸ್ಮಿನ್ನಿದಂ ಪ್ರೋತಮಶೇಷಮೋತಂ
ಪಟೇ ಯಥಾ ತಂತುವಿತಾನಸಂಸ್ಥಾ।
ಯ ಏಷ ಸಂಸಾರತರುಃ ಪುರಾಣಃ
ಕರ್ಮಾತ್ಮಕಃ ಪುಷ್ಪಫಲೇ ಪ್ರಸೂತೇ ॥ ೨೧ ॥

ದಾರಗಳಿಂದ ಹಾಕಿದ ಕಸೂತಿಯು ಬಟ್ಟೆಯಲ್ಲಿ ಹರಡಿರುವಂತೆ ಎಲ್ಲ ಜಗತ್ತು ಚತುರ್ಮುಖನಲ್ಲಿಯೇ ಓತಪ್ರೋತವಾಗಿ ಹರಡಿದೆ. ಅನಾದಿಯಾದ ಈ ಜಗದ್‌ವೃಕ್ಷ ಕರ್ಮವೆಂಬ ಬೀಜದಿಂದ ಅಂಕುರಿಸಿ ಐಹಿಕ ಫಲವೆಂಬ ಹೂವನ್ನೂ ಆಮುಷ್ಮಿಕಫಲವೆಂಬ ಹಣ್ಣನ್ನೂ ಉಂಟುಮಾಡುತ್ತದೆ.

ವಿಶೇಷೇಣ ಶ್ಲಿಷ್ಟಶಕ್ತಿಃ ಅನಪಗತಸಾಮರ್ಥ್ಯಃ । ಯಥೈಕಂ ಕಲಮಾದಿಬೀಜಂ ಭೂಮಾವುಪ್ತಂ ಬಹ್ವಂಕುರಂ ಭವತಿ ಏವಂ ಪರಮಾತ್ಮಾನುಗೃಹೀತೋ ಬ್ರಹ್ಮಾ ಅಹಂಕಾರಾದಿಷು ಬಹುಧಾ ವ್ಯಕ್ತೀಭವತಿ ।

'ವಿಶ್ಲಿಷ್ಟಶಕ್ತಿರ್ಬಹುಧೈವ ಭಾತಿ' ಎಂಬಲ್ಲಿ ವಿ–ಶ್ಲಿಷ್ಟ–ಶಕ್ತಿಃ ವಿಶೇಷವಾಗಿ ಸಾಮರ್ಥ್ಯಯುಕ್ತನಾಗಿರುವವನು, ಸಾಮರ್ಥ್ಯ ಕಳೆದುಕೊಳ್ಳದವನು ಎಂದರ್ಥ.

ಬತ್ತದ ಕಾಳು ಒಂದು, ಹೊಲದಲ್ಲಿ ಬಿತ್ತಿದಾಗ, ಅನೇಕ ಮೊಳಕೆಯಾಗುವುದು. ಹಾಗೇ ಪರಮಾತ್ಮನ ಅನುಗ್ರಹದಿಂದ ಬ್ರಹ್ಮನು ಅಹಂಕಾರಾದಿಗಳಲ್ಲಿ ನಿಯಾಮಕನಾಗಿ ಬಹುರೂಪಗಳಿಂದ ವ್ಯಕ್ತನಾಗುತ್ತಾನೆ. (ಅಹಂಕಾರಾದಿಗಳಾಗಿ ತಾನೇ ಪರಿಣಮಿಸುವುದಿಲ್ಲ)

ಒಂದು ಬತ್ತದಕಾಳು ಮೊಳೆತಾಗ ಒಂದು ಮುಖ್ಯವಾದ ಸಸಿ, ಪಕ್ಕದಲ್ಲಿ ಚಿಕ್ಕ ಸಸಿಗಳು. ಹೀಗೆ ಬ್ರಹ್ಮನು ಒಂದು ಮೂಲರೂಪದಿಂದ ಮಹತ್ತತ್ವದಲ್ಲಿ, ಬೇರೆ ಅಂಶರೂಪಗಳಿಂದ ಅಹಂಕಾರಾದಿ ಸರ್ವಪದಾರ್ಥಗಳಲ್ಲಿ ವ್ಯಕ್ತನಾಗುತ್ತಾನೆ. 'ಬೀಜಾನಿ ಯೋನಿಂ' ಎಂದು ಬಹುವಚನದಿಂದ ಶ್ಲೋಕದಲ್ಲಿ 'ಬೀಜಗಳು' ಎಂದಿದ್ದರೂ ಬೀಜಗಳು ಒಂದೊಂದು ಅನೇಕ ಅಂಕುರಗಳನ್ನು ಹುಟ್ಟಿಸುವಂತೆ ಎಂದು ಉದಾಹರಣೆ ಇಟ್ಟುಕೊಳ್ಳಬೇಕು. ಅಥವಾ ಒಂದು ಬೀಜ ಒಂದು ಅಂಕುರವನ್ನು ಹುಟ್ಟಿಸಿದರೂ ಆ ಅಂಕುರದಿಂದ ಅನೇಕ ಬೀಜಗಳು ಉಂಟಾಗುವುವು. ಅನೇಕ ಬೀಜಗಳು ಅನೇಕ ಅಂಕುರವನ್ನುಂಟುಮಾಡುವುವು. ~~ಹೀಗೆ ಒಂದು ಬೀಜ ಅನೇಕ ಅಂಕುರಗಳಿಗೆ ಕಾರಣವಾಗುತ್ತದೆ ಎನ್ನುವಲ್ಲಿ ಮಾತ್ರ~~ ಉದಾಹರಣೆ ಎಂದಿಟ್ಟುಕೊಳ್ಳಬೇಕು.

ಸುಪರ್ಣಶೇಷರುದ್ರಾದಿ ಪ್ರಸೂತಿಶ್ಚ ಚತುರ್ಮುಖಃ ।
ಸರ್ವಜೀವೋತ್ತಮೋ ಜೀವೋ ಗುಣೈರ್ಜ್ಞಾನ ಸುಖಾದಿಭಿಃ ।
ವಿಷ್ಣುಭಕ್ತ್ಯಾದಿಭಿಃ ಸರ್ವೈ ರ್ನಿಯಮಾತ್ ಸಾರ್ವಕಾಲಿಕಂ ।
ಮುಕ್ತಾವಪಿ ನ ಸಂದೇಹಃ ಸ ಹಿ ದೇವೇನ ವಿಷ್ಣುನಾ ।
ಪ್ರಾಣಪ್ರಾಣೇನ ಜಗತಾಮೀಶೇನ ರಮಯಾ ತಥಾ ।
ವೇದಾತ್ಮಿಕ್ಯಾ ಚ ಸಹಿತಃ ಸೂಕ್ಷ್ಮಃ ಸನ್ ಮನಸಿ ಸ್ಥಿತಃ ।
ವೀಂದ್ರಾದೀನಾಂ ತು ಸರ್ವೇಷಾಂ ಮಾತ್ರಾವರ್ಣಸ್ವರೇಷು ಚ ।
ಸ್ಥೂಲರೂಪೀ ಸದಾ ತಿಷ್ಠನ್ನೇವಂ ಶ್ರೋತ್ರಾದಿಖೇಷು ಚ ॥
ಸರ್ವೇಷಾಂ ಪ್ರೇರಕೋ ಹ್ಯೇಕೋ ಜ್ಞಾನಾನಂದಬಲೈಸ್ತ್ರಿವೃತ್ ।
ನಿತ್ಯಶಕ್ತಿಃ ಸರ್ವಗಃ ಸನ್ ಬಹುಧೈವ ಪ್ರತೀಯತೇ ॥

ಚತುರ್ಮುಖನು 'ವಿವರ ಪ್ರಸೂತಿಃ' ಗರುಡ ಶೇಷ ರುದ್ರಾದಿಗಳಿಗೆ ಜನಕನು. 'ಜೀವಃ' ಜೀವನಾದ ಅವನೇ ಜ್ಞಾನಾನಂದಾದಿ ವಿಷ್ಣುಭಕ್ತ್ಯಾದಿ ಸರ್ವಗುಣಗಳಿಂದಲೂ ಎಲ್ಲ ಕಾಲದಲ್ಲಿಯೂ ಮುಕ್ತಿಯಲ್ಲಿಯೂ ಕೂಡ ನಿಯಮೇನ ಸರ್ವಜೀವೋತ್ತಮನು ಇದರಲ್ಲಿ ಸಂಶಯವಿಲ್ಲ. (ಗೋಪಿಯರ

ಪ್ರಶಂಸೆ ಮಾಡಿದ್ದನ್ನು ಕೇಳಿ 'ವಾಯೌ ಮುಖ್ಯಧಿಯಾ' ಎಂದು ಹೇಳಿದ ವಿಷಯದಲ್ಲಿ ಸಂಶಯ ಪಡಲು ಕಾರಣವಿಲ್ಲ) 'ಪ್ರಾಣೇನ' ಪ್ರಾಣನಿಗೂ ಪ್ರಾಣನಾದ ಜಗದೀಶನಾದ ಹರಿಯಿಂದಲೂ 'ಘೋಷೇಣ' ವೇದಾಭಿಮಾನಿ ಲಕ್ಷ್ಮೀದೇವಿಯಿಂದಲೂ ಕೂಡಿಕೊಂಡು 'ಗುಹಾಂ ಪ್ರವಿಷ್ಟಃ' ಗರುಡಾದಿ ಸರ್ವಜೀವರ ಹೃದಯದಲ್ಲಿದ್ದು 'ಮನೋಮಯಂ ಸೂಕ್ಷ್ಮಂ ರೂಪಂ ಉಪೈತಿ' ಮನೋನಿಯಾಮಕವಾದ ಸೂಕ್ಷ್ಮರೂಪವನ್ನು ಹೊಂದಿರುತ್ತಾನೆ. 'ಮಾತ್ರಾ ಸ್ವರೋ ವರ್ಣ ಇತಿ ಸ್ಥವಿಷ್ಠಂ' ಮಾತ್ರಾಸ್ವರವರ್ಣಗಳಲ್ಲಿಯೂ ಸ್ಥೂಲರೂಪಿಯಾಗಿ ಸದಾ ಇರುತ್ತಾನೆ. ಎಲ್ಲರಿಗೂ ಪ್ರೇರಕನಾಗಿರುತ್ತಾನೆ. 'ತ್ರಿವೃತ್' ಜ್ಞಾನ ಆನಂದ ಬಲಗಳೆಂಬ ಮೂರುಗುಣಗಳಿಂದ ಕೂಡಿದವನು. 'ವಿಶ್ಲಿಷ್ಟಶಕ್ತಿಃ' ನಿತ್ಯಶಕ್ತಿ ಉಳ್ಳವನು 'ಬೀಜಾನಿ ಯೋನಿಂ ಪ್ರತಿಪದ್ಯ ಯದ್ವತ್' ಹೊಲದಲ್ಲಿ ಬಿತ್ತಿದ ಬತ್ತದ ಕಾಳುಗಳು ಪ್ರತಿಯೊಂದೂ ಅನೇಕ ಮೊಳಕೆಗಳನ್ನು ಹುಟ್ಟಿಸುವಂತೆ 'ಏಕೋ ಬಹುಧೈವ ಭಾತಿ' ಒಬ್ಬನೇ ಎಲ್ಲೆಡೆ ಇದ್ದು ಬಹುರೂಪನಾಗಿ ವ್ಯಕ್ತನಾಗುತ್ತಾನೆ.

ತಸ್ಮಿನ್ನೋತಮಿದಂ ಸರ್ವಂ ಪಟೇ ಲಕ್ಷಣತಂತುವತ್ ।
ಸ ಏವ ವಾಯುರುದ್ದಿಷ್ಟೋ ವಾಯುರ್ಹಿ ಬ್ರಹ್ಮತಾಮಗಾತ್ ।
ವಿಶೇಷತೋ ಹರೇರ್ವ್ಯಕ್ತಿಸ್ಥಾನಾನ್ಯೇತಾನಿ ಸರ್ವಶಃ ।
ಮನಆದೀನ್ಯಹಂಕಾರೋ ಬ್ರಹ್ಮಾ ವೇದಾತ್ಮಿಕಾ ರಮಾ ।
ತ್ರಿಗುಣಾತ್ಮಿಕಾ ಚ ಸೈವ ಶ್ರೀಃ ಸೈವೋಕ್ತಾ ಸಂವಿದಾತ್ಮಿಕಾ ।
ತಸ್ಯಾ ಅಪಿ ನಿಯಂತೈಕೋ ವಿಷ್ಣುಃ ಸರ್ವೇಶ್ವರೇಶ್ವರಃ ।

'ಯಸ್ಮಿನ್ನಿದಂ ಪ್ರೋತಮಶೇಷಮೋತಂ ಪಟೇ ಯಥಾ ತಂತುವಿತಾನ ಸಂಸ್ಥಾ' ಬಟ್ಟೆಯಲ್ಲಿ ಕಸೂತಿ ಹಾಕಿದಾಗ ಚಿತ್ರಾಕಾರವಾಗಿ ತಂತುಗಳು ಬಟ್ಟೆಯಲ್ಲಿ ಆಶ್ರಯಿಸಿರುವಂತೆ ಆ ಚತುರ್ಮುಖನಲ್ಲಿ ಈ ಪ್ರಪಂಚವೂ ಆಶ್ರಯಿಸಿರುತ್ತದೆ. ಚತುರ್ಮುಖನೇ ವಾಯು. ಏಕೆಂದರೆ ವಾಯುವೇ ಬ್ರಹ್ಮನಾಗಿದ್ದಾನೆ. (ಅದರಿಂದ 'ವಾಯೌ ಮುಖ್ಯಧಿಯಾ' ಎನ್ನಲಾಗಿದೆ.) 'ಸಂಕಲ್ಪ' ಮನಸ್ಸು ಮುಂತಾದುವು 'ಅಭಿಮಾನ' ಅಹಂಕಾರ, 'ವಿಕಾರಃ' ಬ್ರಹ್ಮ, 'ವಾಣೀ' ವೇದಾಭಿಮಾನಿಯಾದ ರಮೆ, 'ರಜಃ ಸತ್ವ ತಮಸ್' ಆ ದೇವಿಯೆ ತ್ರಿಗುಣಾಭಿಮಾನಿನಿ, 'ವಿಜ್ಞಾನಂ' ಜ್ಞಾನಸ್ವರೂಪಳೆಂದು ಅವಳೇ ಉಕ್ತಳಾಗಿದ್ದಾಳೆ. ಇವರೆಲ್ಲರೂ ವಿಶೇಷವಾಗಿ 'ಮೇ ವ್ಯಕ್ತಿಃ' ನನಗೆ ಶ್ರೀಹರಿಗೆ ಅಭಿವ್ಯಕ್ತಿ ಸ್ಥಾನಗಳು. ಏಕೆಂದರೆ 'ಸೂತ್ರ' 'ವಿಕಾರ'ಗಳೆನಿಸಿದ ವಾಯುಬ್ರಹ್ಮರಿಗೆ ಮಾತ್ರವಲ್ಲದೆ

'ವಿಜ್ಞಾನ'ವೆನಿಸಿದ 'ವಾಣಿ' ವೇದಾಭಿಮಾನಿನಿಯೂ ಆದ ಆ ಲಕ್ಷ್ಮಿಗೂ ನಿಯಾಮಕನು ಸರ್ವೇಶ್ವರರಿಗೂ ಈಶ್ವರನು ಒಬ್ಬನೇ ವಿಷ್ಣು.

ಯಥಾ ದಾರುಷು ಸೂಕ್ಷ್ಮಃ ಸನ್ ಮಥಿತೋಽಗ್ನಿಃ ಸಮಿಧ್ಯತೇ ।
ತಥಾ ವೇದಾದಿಷು ಹರಿರ್ಮಥಿತಃ ಸಂಪ್ರದೃಶ್ಯತೇ ।
ವ್ಯಕ್ತಿಸ್ಥಾನಾನ್ಯಥೈತಾನಿ ವೇದಾದೀನಿ ಹರೇರ್ವಿದುಃ ॥
ಇತಿ ತಂತ್ರಭಾಗವತೇ ॥

ಮನಸಿ ವ್ಯಕ್ತತಾಂ ಯಾಮಿ ತಸ್ಮಾದ್ ವ್ಯಕ್ತಿರ್ಹಿ ಮೇ ಮನಃ ॥
ಇತಿ ಭಾರತೇ ॥

ಕಟ್ಟಿಗೆಯಲ್ಲಿ ಸೂಕ್ಷ್ಮವಾಗಿ ಅಡಗಿರುವ ಅಗ್ನಿ ಕಡೆದಾಗ ಹೇಗೆ ಪ್ರಜ್ವಲಿಸುವುದೋ ಹಾಗೆ ವೇದಾದಿಗಳಲ್ಲಿ ವಿಚಾರ ಮಾಡಿದರೆ ಶ್ರೀಹರಿ ಚೆನ್ನಾಗಿ ಜ್ಞಾನಗೋಚರವಾಗುತ್ತಾನೆ. ಅದರಿಂದ ವೇದಾದಿಗಳೆಲ್ಲವೂ ಹರಿಗೆ ಅಭಿವ್ಯಕ್ತಿ ಸ್ಥಾನಗಳೆನಿಸಿವೆ ಎಂದು ತಂತ್ರಭಾಗವತದಲ್ಲಿ ಹೇಳಿದೆ.

(ವೇದಾದಿಗಳು ಹರಿಯನ್ನು ಬೋಧಿಸುವುದರಿಂದ ವ್ಯಂಜಕಗಳಾದರೂ ಮನಇಂದ್ರಿಯಗಳು ಅತೀಂದ್ರಿಯನಾದ ಹರಿಯನ್ನು ತಿಳಿಸಲಾರವು. ಆದರೂ ಅವುಗಳಲ್ಲಿ ಹರಿ ನಿಯಾಮಕನಾಗಿ ಆಯಾರೂಪಗಳಿಂದ ವ್ಯಕ್ತನಾಗಿ ಇರುವುದರಿಂದ ಹರಿ ತಾನೆ ಹೇಳುತ್ತಾನೆ—) 'ಮನಸ್ಸಿನಲ್ಲಿ ಅಭಿವ್ಯಕ್ತಿಯನ್ನು ಹೊಂದುತ್ತೇನೆ. ಅದರಿಂದ ಅದು ನನಗೆ ವ್ಯಕ್ತಿಸ್ಥಾನ' ಎಂದು. ಇದು ಭಾರತದಲ್ಲಿ ಉಕ್ತವಾಗಿದೆ.

ಯಥೈವ ವಸ್ತ್ರೇ ದೀರ್ಘಂ ಚ ತಿರ್ಯಕ್ ಚಾಪಿ ಸುಸಂಶ್ರಿತಾ ।
ತಂತುಭಿಃ ಕ್ರಿಯಮಾಣೈವ ಪದ್ಮಾದ್ಯಾಕಾರ ಸಂಸ್ಥಿತಿಃ ।
ಯಥಾ ಜೀರ್ಣಾನಿ ವಸ್ತ್ರಾಣಿ ತಂತ್ವಾಧಾರಾಣಿ ವಾ ಪುನಃ ।
ಕಂಥಾವಯವಭೂತಾನಿ ತದ್ವದೇತಚ್ಚತುರ್ಮುಖೇ ।
ಸೋಽಪಿ ತದ್ವದ್ಧರೌ ನಿತ್ಯಂ ಸಂಶ್ರಿತಾ ಶ್ರೀರಪಿ ಸ್ಫುಟಂ ॥
ಇತಿ ಪ್ರಾತಿಸ್ವಿಕೇ ॥

ಬಟ್ಟೆಯಲ್ಲಿ ಕಸೂತಿ ಹಾಕಿದಾಗ ಪದ್ಮಾದಿ ಆಕಾರದಲ್ಲಿ ತಂತುಗಳು ಓತಪ್ರೋತವಾಗಿ ಆಶ್ರಯಿಸಿರುವಂತೆ ಅಥವಾ ಹಳೆಯ ತುಂಡುಬಟ್ಟೆಗಳನ್ನು ಹೊಲಿದು ಜೋಡಿಸಿದಾಗ ಅವು ತಂತುಗಳಲ್ಲಿ ಆಧರಿಸಿರುವಂತೆ ಈ ಪ್ರಪಂಚವು ಚತುರ್ಮುಖನಲ್ಲಿ ಆಶ್ರಯಿಸಿದೆ. ಚತುರ್ಮುಖನೂ ಹಾಗೇ ಹರಿಯಲ್ಲಿ ಸದಾ

ಆಶ್ರಯಿಸಿದ್ದಾನೆ. ಹಾಗೇ ಶ್ರೀದೇವಿಯೂ ಅವನನ್ನೇ ಆಶ್ರಯಿಸಿದ್ದಾಳೆ ಎಂದು ಪ್ರಾತಿಸ್ವಿಕ ಎಂಬ ಗ್ರಂಥದಲ್ಲಿದೆ.

❖❖❖

ಇಷ್ಟಾರ್ಥಪ್ರದವಾದ ಈ ಜಗತ್ತೆಂಬ ವೃಕ್ಷವು ಭಗವದಿಚ್ಛೆಯಿಂದ ಪ್ರಕೃತಿಯಿಂದಾಗಿದೆ ಎಂದು ತಿಳಿಯಬೇಕು. ತತ್ವಜ್ಞಾನವನ್ನು ಸಂಪಾದಿಸಿ ಮೋಕ್ಷವನ್ನು ಪಡೆಯಬೇಕು ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಯಸ್ಮಿನ್ನಿದಂ ಪ್ರೋತಮಶೇಷಮೋತಂ
ಪಟೇ ಯಥಾ ತಂತುವಿತಾನಸಂಸ್ಥಾ।
ಯ ಏಷ ಸಂಸಾರತರುಃ ಪುರಾಣಃ
ಕರ್ಮಾತ್ಮಕಃ ಪುಷ್ಪಫಲೇ ಪ್ರಸೂತೇ ॥ ೨೧ ॥
ದ್ವೇ ಅಸ್ಯ ಬೀಜೇ ಶತಮೂಲಸ್ತ್ರಿನಾಲಃ
ಪಂಚಸ್ಕಂಧಃ ಪಂಚರಸಪ್ರಸೂತಿಃ।
ದಶೈಕಶಾಖೋ ದ್ವಿಸುಪರ್ಣನೀಡ-
ಸ್ತ್ರಿವಲ್ಕಲೋ ದ್ವಿಫಲಃ ಖಂ ಪ್ರವಿಷ್ಟಃ ॥ ೨೨ ॥

ಈ ಜಗದ್ವೃಕ್ಷಕ್ಕೆ ಬ್ರಹ್ಮವಾಣಿಯರು ಮಣ್ಣು ನೀರುಗಳಂತೆ ಮೂಲಗಳು. ನೂರಾರು ಅಸಂಖ್ಯ ಕರ್ಮಗಳು ಬೇರುಗಳು, ಅಹಂಕಾರ ಬುದ್ಧಿ ಮನಸುಗಳಿಗೆ ಅಭಿಮಾನಿಗಳಾದ ರುದ್ರ ಇಂದ್ರ ಚಂದ್ರರೇ ಕಾಂಡಗಳು. ಪಂಚಭೂತಗಳು ಕವಲುಗಳು. ಶಬ್ದಾದಿ ಪಂಚ ವಿಷಯಗಳನ್ನು ಉಂಟುಮಾಡುವುವು. ಪಂಚ ಜ್ಞಾನೇಂದ್ರಿಯ ಪಂಚ ಕರ್ಮೇಂದ್ರಿಯ ಮನಸುಗಳೆಂಬ 'ದಶೈಕ' ಹನ್ನೊಂದು ಶಾಖೆಗಳು. ಪ್ರವೃತ್ತಿ ನಿವೃತ್ತಿ ಮಾರ್ಗಿಗಳೆಂಬ ಎರಡು ಹಕ್ಕಿಗಳು ಇಲ್ಲಿ ಗೂಡು ಕಟ್ಟಿಕೊಂಡಿವೆ. ಇವುಗಳಿಗೆ ಪುಣ್ಯ ಪಾಪಗಳು ಎರಡು ರೆಕ್ಕೆಗಳು. ತ್ರಿಗುಣಗಳು ಈ ವೃಕ್ಷಕ್ಕೆ ಮೂರು ತೊಗಟೆಗಳು. ಸ್ವರ್ಗ ಮೋಕ್ಷಗಳೆಂದು ಎರಡು ಫಲಗಳು. ವಿಷ್ಣು ಎಂಬ 'ಖಂ' ಆಕಾಶವನ್ನು ಆಶ್ರಯಿಸಿದೆ.

ಅದಂತಿ ಚೈಕಂ ಫಲಮಸ್ಯ ಗೃಧ್ರಾ
ಗ್ರಾಮೇಚರಾ ಏಕಮರಣ್ಯವಾಸಾಃ।
ಹಂಸಾ ಯ ಏವಂ ಬಹುರೂಪಮಿಷ್ಟಂ
ಮಾಯಾಮಯಂ ವೇದ ಸ ವೇದ ವೇದಮ್ ॥ ೨೩ ॥

ಈ ವೃಕ್ಷದಿಂದ ದೊರೆಯುವ ಸ್ವರ್ಗವೆಂಬ ಒಂದು ಫಲವನ್ನು ಗ್ರಾಮವಾಸಿ

ಹದ್ದುಗಳಂಥ ವಿಷಯಲೋಲುಪರು ಉಣ್ಣುತ್ತಾರೆ. ಮೋಕ್ಷವೆಂಬ ಇನ್ನೊಂದು ಫಲವನ್ನು ಅರಣ್ಯವಾಸಿ ಹಂಸಗಳಂಥ ಜ್ಞಾನಿಗಳು ಅನುಭವಿಸುತ್ತಾರೆ. ಹೀಗೆ ಬಹುರೂಪವಾದ ಇಷ್ಟಾರ್ಥಪ್ರದವಾದ ಈ ಜಗದ್ವೃಕ್ಷವನ್ನು ಭಗವದಿಚ್ಛೆಯಿಂದ ಮೂಲಪ್ರಕೃತಿಯಿಂದ ಹುಟ್ಟಿದ್ದೆಂದು ಯಾರು ತಿಳಿಯುವನೋ ಅವನೇ,

'ಯತಃ ಪ್ರಸೂತಾ ಜಗತಃ ಪ್ರಸೂತೀ'

ಇತ್ಯಾದಿ ವೇದಾರ್ಥವನ್ನು ಬಲ್ಲವನೆನಿಸುತ್ತಾನೆ.

ಏವಂ ಗುರೂಪಾಸನಯೈಕಭಕ್ತ್ಯಾ
ವಿದ್ಯಾಕುಠಾರೇಣ ಶಿತೇನ ಧೀರಃ ।
ವಿವೃಶ್ಚ್ಯ ಜೀವಾಶಯಮಪ್ರಮತ್ತಃ
ಸಂಪದ್ಯ ಚಾತ್ಮಾನಮಥ ತ್ಯಜಾಸ್ತ್ರಮ್ ॥ ೨೪ ॥

ಹೀಗೆ ವಿಷಯಾಸಕ್ತಿಯನ್ನು ತೊರೆದು ಜ್ಞಾನಾರ್ಜನೆಯಲ್ಲಿ ಜಾಗರೂಕನಾಗಿ ಗುರುಸೇವೆಯಿಂದ ಬರುವ ಗಾಢವಾದ ಭಕ್ತಿಯಿಂದ ಹರಿತವಾದ ಸಾತ್ವಿಕವಾದ ಅಪರೋಕ್ಷಜ್ಞಾನವೆಂಬ ಕೊಡಲಿಯನ್ನು ಸಂಪಾದಿಸು. ಅದರಿಂದ 'ಜೀವಾಶಯಂ' ತಾಮಸವಾದ ಜೀವನ ಬಾಹ್ಯಾಂತಃಕರಣವನ್ನು ಕತ್ತರಿಸಿ ತೆಗೆದು ಬಳಿಕ 'ಅಸ್ತ್ರಂ ತ್ಯಜ' ಆ ಅಸ್ತ್ರವನ್ನೂ ಕೂಡ ಎಸೆದುಬಿಡು. ಆ ಅಸ್ತ್ರದಿಂದಲೆ ಅಭಿವ್ಯಕ್ತವಾಗುವ ನಿನ್ನ ಸ್ವರೂಪಜ್ಞಾನದಿಂದ ಮುಂದೆ ಮುಕ್ತಿಯಲ್ಲಿ ಪರಮಾತ್ಮನನ್ನು ಕಂಡು ಸುಖಿಸುತ್ತಿರು.

ಜಗದ್ವೃಕ್ಷಸ್ಯ ಬೀಜೇ ದ್ವೇ ಬ್ರಹ್ಮಾ ಚೈವ ಸರಸ್ವತೀ ।
ಮೂಲಭೂತಾನಿ ಕರ್ಮಾಣಿ ಮನೋ ಬುದ್ಧಿರಹಂಕೃತಿಃ ।
ನಾಲತ್ವೇನ ಸಮುದ್ದಿಷ್ಟಾಃ ಖಮಾದ್ಯಾಃ ಸ್ಕಂಧಸಂಜ್ಞಿತಾಃ ।
ಏಕಾದಶೇಂದ್ರಿಯಾಣ್ಯೇವ ಶಾಖಾಸ್ತು ತ್ರಿಗುಣಾಸ್ತ್ವಚಃ ।
ಪ್ರವೃತ್ತಂ ಚ ನಿವೃತ್ತಂ ಚ ಫಲೇ ಅಸ್ಯ ಪ್ರಕೀರ್ತಿತೇ ।
ಪುಷ್ಪಮೈಹಿಕಮುದ್ದಿಷ್ಟಂ ರಸಾಃ ಶಬ್ದಾದಯಸ್ತಯೋಃ ।
ಪ್ರವೃತ್ತಾಶ್ಚ ನಿವೃತ್ತಾಶ್ಚ ಪಕ್ಷಿಣಸ್ತತ್ರ ಸಂಸ್ಥಿತಾಃ ।
ವೃಕ್ಷಸ್ಯ ಪೃಥಿವೀವಚ್ಛ್ರೀರ್ವಿಷ್ಣು ರಾಕಾಶವಾಯುವತ್ ।
ತಸ್ಯಾ ಅಪಿ ಸದಾಽಽಧಾರ ಏವಂ ಜ್ಞಾತ್ವಾ ವಿಮುಚ್ಯತೇ ॥

ಇತಿ ನಿವೃತ್ತೇ ॥

ಜಗತ್ತೆಂಬ ವೃಕ್ಷಕ್ಕೆ ಬ್ರಹ್ಮನೂ ಸರಸ್ವತಿಯೂ ಇಬ್ಬರು ಕಾರಣರು. ಕರ್ಮಗಳು

ಅಸಂಖ್ಯ ಬೇರುಗಳು. ಮನಸ್ಸು ಬುದ್ಧಿ ಅಹಂಕಾರಾಭಿಮಾನಿಗಳು ಕಾಂಡಗಳು ಆಕಾಶ ಮುಂತಾದ ಭೂತಗಳು ಕವಲುಗಳು. ಏಕಾದಶ ಇಂದ್ರಿಯಗಳು ರೆಂಬೆಗಳು. ತ್ರಿಗುಣಗಳು ತೊಗಟೆಗಳು. ಪ್ರವೃತ್ತ ನಿವೃತ್ತ ಕರ್ಮಫಲಗಳಾದ ಸ್ವರ್ಗ ಮೋಕ್ಷಗಳು ಫಲಗಳು. ಐಹಿಕ ಸುಖಗಳು ಹೂಗಳು. ಶಬ್ದಾದಿ ವಿಷಯಗಳು ಹಣ್ಣುಗಳ ಸಾರಭಾಗಗಳು. ಪ್ರವೃತ್ತ ನಿವೃತ್ತ ಕರ್ಮಿಗಳು ಹಕ್ಕಿಗಳು ಈ ವೃಕ್ಷದಲ್ಲಿ ಇವೆ. ವೃಕ್ಷಕ್ಕೆ ನೆಲದಂತೆ ಆಧಾರ ಲಕ್ಷ್ಮೀದೇವಿ. ಆ ದೇವಿಗೂ ಸದಾ ಆಧಾರನು ಬ್ರಹ್ಮಾಂಡಾವರಣಭೂತವಾದ ಆಕಾಶವಾಯುಗಳಂತೆ ವಿಷ್ಣು. ಹೀಗೆ ತಿಳಿದವನು ಮುಕ್ತನಾಗುವನೆಂದು ನಿವೃತ್ತ ಎಂಬ ಗ್ರಂಥದಲ್ಲಿದೆ.

ಪ್ರಾಕೃತಾಂತಃಕರಣಜಂ ಜ್ಞಾನಮಸ್ತ್ರಂ ಸೃತಿಚ್ಛಿದಂ
ತದೇವ ತೇನ ಸಂಭೇದ್ಯಂ ಚಿತ್ತಂ ಪ್ರಕೃತಿಸಂಭವಂ ।
ತೇನೈವ ಸಹ ಸಂತ್ಯಾಜ್ಯಂ ನೈವ ಪೂರ್ವಂ ಕಥಂಚನ ।
ಜ್ಞಾನಂ ಪ್ರಕೃತಿಜಂ ಚಾಪಿ ಮೂಲನಾಶೇ ವಿನಶ್ಯತಿ ।
ತತಃ ಪರಂ ಸ್ವರೂಪೇಣ ಜ್ಞಾನೇನೈವ ಜನಾರ್ದನಂ ।
ವೇತ್ತಿ ಮುಕ್ತಸ್ತಥಾऽऽತ್ಮಾನಂ ಜೀವಾನನ್ಯಾಂಶ್ಚ ಸರ್ವಶಃ ॥
ಇತಿ ಮಾಹಾತ್ಮ್ಯೇ ॥

ಪ್ರಾಕೃತ ಅಂತಃಕರಣದಲ್ಲಿ ಉಂಟಾಗುವ ಅಪರೋಕ್ಷಜ್ಞಾನವು ಸಂಸಾರ ನಾಶ ಮಾಡಬಲ್ಲ ಶಸ್ತ್ರವಾಗಿದೆ. ಆ ಜ್ಞಾನದಿಂದ ಸ್ವತಃ ಆ ಜ್ಞಾನವೂ ನಾಶಮಾಡಲ್ಪಡಬೇಕು. ಆ ಅಂತಃಕರಣವೂ ನಾಶಮಾಡಲ್ಪಡಬೇಕು. ಏಕೆಂದರೆ ಅಂತಃಕರಣವೂ ಪ್ರಕೃತಿಯಿಂದಾಗಿರುವುದರಿಂದ ಜ್ಞಾನದ ಜೊತೆಗೇ ಅಂತಃಕರಣವನ್ನೂ ಜ್ಞಾನಿಯು ತ್ಯಾಗಮಾಡಬೇಕು. ಅನಾದಿಕಾಲದಿಂದಿರುವ ಸ್ವರೂಪಭೂತವಾದ ಅಂತಃಕರಣವನ್ನು ಮಾತ್ರ ಸರ್ವಥಾ ಬಿಡಲಾಗದು. ಪ್ರಾಕೃತಜ್ಞಾನವು ಅದಕ್ಕೆ ಮೂಲವಾದ ಪ್ರಾಕೃತ ಅಂತಃಕರಣ ನಾಶವಾದಾಗ ತಾನಾಗಿಯೇ ಆಶ್ರಯವಿಲ್ಲದೆ ನಾಶವಾಗುವುದು. ಅನಂತರ ಮುಕ್ತಿಯಲ್ಲಿ ಸ್ವರೂಪಭೂತ ಜ್ಞಾನದಿಂದಲೇ ಮುಕ್ತನು ಜನಾರ್ದನನನ್ನೂ ತನ್ನನ್ನೂ ಬೇರೆ ಜೀವರನ್ನೂ ಎಲ್ಲರನ್ನೂ ತಿಳಿಯುತ್ತಾನೆ ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಹೇಳಿದೆ.

ಬೀಜಭೂತಾವಪಿ ಹ್ಯಸ್ಯ ಬ್ರಹ್ಮಾ ಚೈವ ಸರಸ್ವತೀ ।
ನ ರಿಷ್ಯತೋ ಜಗತ್ಸೃಷ್ಟೌ ವಟವೃಕ್ಷಾದಿಬೀಜವತ್ ।
ಸ್ವಕಾರ್ಯತೋ ಮಹಾಂತೌ ಚ ಗುಣತೋ ರೂಪತಸ್ತಥಾ ।

ಪೃಥಿವ್ಯುದಕವತ್ ತಸ್ಮಾದ್ ಬೀಜತ್ವಂ ನ ತು ಬೀಜವತ್ ।
ವ್ಯಂಜಕತ್ವಾನ್ನ ಚಾಲ್ಪತ್ವಾತ್ ಮಹಾಕ್ಷ್ಮಾವದ್ ರಮಾ ಸ್ಮೃತಾ ।
ಅಂಡೋ ಮಹಾಕ್ಷ್ಮಾ ಸಂಪ್ರೋಕ್ತಸ್ತತಃ ಪೃಥ್ವ್ಯುದಕಂ ತಥಾ ।
ಜಾಯತೇ ನಿತ್ಯಶಸ್ತಸ್ಮಾದ್ಭುಕ್ತಂ ಭುಕ್ತಂ ನ ಹೀಯತೇ ।

ಬ್ರಹ್ಮ ಸರಸ್ವತಿಯರು ಈ ಜಗದ್‌ವೃಕ್ಷಕ್ಕೆ ಬೀಜದಂತಿದ್ದರೂ ಆಲದಮರದ ಬೀಜದಂತೆ ಮೊಳೆತ ಬಳಿಕ ನಾಶವಾಗುವುದಿಲ್ಲ. ಜಗತ್‌ಸೃಷ್ಟಿಯಾದಾಗಲೂ ತಮ್ಮ ಕಾರ್ಯವಾದ ಜಗತ್ತಿಗಿಂತ ಗುಣದಿಂದಲೂ ಸ್ವರೂಪದಿಂದಲೂ ಇವರು ದೊಡ್ಡವರೆ. (ಅಂಕುರಕ್ಕಿಂತ ಬೀಜ ಚಿಕ್ಕದಿರುವಂತೆ ಇವರು ಚಿಕ್ಕವರಾಗಿರುವುದಿಲ್ಲ) ಮಣ್ಣು ನೀರುಗಳು ಗಿಡಕ್ಕೆ ಹೇಗೆ ಮೂಲ ವ್ಯಂಜಕವೋ ಹಾಗೇ ಇವರು ಪ್ರಾಣಿಗಳಿಗೆ ಮೂಲವ್ಯಂಜಕರಾದ್ದರಿಂದ ಬೀಜಗಳೆನಿಸುತ್ತಾರೆ. ಹೊರತು ಚಿಕ್ಕವರಾಗಿರುವುದರಿಂದಲ್ಲ. ರಮಾದೇವಿ ಗಿಡಕ್ಕೆ ನೆಲದಂತೆ ಆಶ್ರಯಳು. ಜಗದ್‌ವೃಕ್ಷಕ್ಕೆ ಬ್ರಹ್ಮಾಂಡವೇ ನೆಲ. ನೆಲದಿಂದ ಮಣ್ಣು ನೀರುಗಳು ಸದಾ ದೊರಕುತ್ತವೆ. ಎಷ್ಟು ಉಂಡರೂ ಮುಗಿಯುವುದಿಲ್ಲ.

ತತ್ರಾಪ್ಯುದಕವದ್ ಬ್ರಹ್ಮಾ ಮೃದ್ವಚ್ಚಾಪಿ ಸರಸ್ವತೀ ।
ಜಲಾಧಾರಾ ಯತೋ ಮೃಚ್ಚ ಸರ್ವತ್ರಾಪಿ ವ್ಯವಸ್ಥಿತಾ ।
ಅನ್ಯಥಾ ತು ರಜೋಭೂತಾ ನೀಯತೇ ವಾಯುನಾಽಖಿಲಾ ।
ಅಥವಾ ಸರ್ವನಾಶಃ ಸ್ಯಾತ್ ಜಲಾಧಾರಾ ತತಃ ಸ್ಮೃತಾ ।
ವಟಾದಿಬೀಜವತ್ ತಸ್ಯ ಪುಣ್ಯಾಪುಣ್ಯಮುದೀರಿತಂ ।
ಬಾಹ್ಯೋದವಚ್ಚಾಗ್ನಿವಚ್ಚ ವಿಷ್ಣುರೇವ ಪ್ರಕೀರ್ತಿತಃ ।
ಇತಿ ಸತ್ಯಸಂಹಿಂತಾಯಾಂ ॥

ಬ್ರಹ್ಮ ಸರಸ್ವತಿಯರಲ್ಲಿ ಬ್ರಹ್ಮನು ನೀರಿನಂತೆ, ಸರಸ್ವತಿ ಮಣ್ಣಿನಂತೆ. ಏಕೆಂದರೆ ಮಣ್ಣಿಗೆ ನೀರು ಆಧಾರವಾಗಿ ಎಲ್ಲೆಡೆ ಕಂಡಿದೆ. ನೀರಿಲ್ಲದಿದ್ದರೆ ಮಣ್ಣು ಧೂಳಾಗಿ ಎಲ್ಲವೂ ಗಾಳಿಯಲ್ಲಿ ಹಾರಿಹೋಗುವುದು ಅಥವಾ ಒಣಗಿ ನಾಶವಾಗುದು. ಆದರಿಂದ ನೀರು ಆಧಾರ ಎನ್ನಬೇಕು. ಆಲದ ಬೀಜದಂತೆ ಈ ಜಗದ್‌ವೃಕ್ಷಕ್ಕೆ ಪುಣ್ಯಪಾಪಗಳು ಬೀಜಗಳು. ಅಂಕುರಿಸಿದಾಗ ಬೀಜ ನಾಶವಾಗುವುದು. ಬಾಹ್ಯ ಜಲಾಗ್ನಿ ಆವರಣಗಳಂತೆ ವಿಷ್ಣು ಎಂದು ಸತ್ಯಸಂಹಿತೆಯ್ಲಲಿದೆ.

ಶ್ರಿಯಾದೇರಪ್ಯಾಪ್ಯಾಯನತ್ವಾದ್ ಬಾಹ್ಯೋದವತ್ ।
ಬ್ರಹ್ಮಾದೇರಪಿ ಲಯಕರ್ತೃತ್ವಾದಗ್ನಿವತ್ ।

ಆಧಾರತ್ವಾತ್ ಸುಖದತ್ವಾಚ್ಚ ವಾಯುವತ್ ।
ಅವಕಾಶಪ್ರದತ್ವಾದ್ ವ್ಯೋಮವದ್ ವಿಷ್ಣುಃ ॥

ರಮಾದಿಗಳಿಗೂ ಬಲಪ್ರದನಾದ್ದರಿಂದ ಬಾಹ್ಯಜಲಾವರಣದಂತೆ. ಬ್ರಹ್ಮಾದಿಗಳಿಗೂ ಲಯಕಾರಕನಾದ್ದರಿಂದ ಬಾಹ್ಯ ಅಗ್ನಿಯಾವರಣದಂತೆ, ಧಾರಕನೂ ಶ್ರಮ ಪರಿಹಾರಕ ಸುಖದಾಯಕನೂ ಆದ್ದರಿಂದ ವಾಯು ಆವರಣದಂತೆ. ಅವಕಾಶಪ್ರದನಾದ್ದರಿಂದ ಆಕಾಶಾವರಣದಂತೆ ವಿಷ್ಣು. (ಸತ್ಯಸಂಹಿತೆಯಲ್ಲಿ ವಾಯುಆಕಾಶಾವರಣ ಸಾಮ್ಯವನ್ನೂ ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕು.)

ವ್ರೀಹ್ಯಾದಿವತ್ತು ಮೂಲತ್ವಂ ಕರ್ಮಣಾಂ ಜಗತಃ ಸ್ಮೃತಂ ।
ಉದವತ್ ಪೃಥಿವೀವಚ್ಚ ಬ್ರಹ್ಮಣೋ ವಾಚ ಏವ ಚ ।
ಮೂಲಭೂವಚ್ಚ್ರಿಯಶ್ಚೈವ ಮೂಲಭೂರಂಡಮುಚ್ಯತೇ ।
ಬಾಹ್ಯೋದಾಗ್ನೀರಖಂವತ್ತು ವಿಷ್ಣೋರ್ಬೀಜತ್ವಮಿಷ್ಯತೇ ॥

ಇತಿ ವಿಶ್ವಸಂಹಿತಾಯಾಂ ॥

ಅಂಕುರವನ್ನು ಹುಟ್ಟಿಸಿ ಬೀಜವು ನಾಶವಾಗುವಂತೆ ಫಲವನ್ನು ಹುಟ್ಟಿಸಿ ಕರ್ಮವು ನಾಶವಾಗುವುದರಿಂದ ಜಗದ್ವೃಕ್ಷಕ್ಕೆ ಕರ್ಮಗಳೇ ಬೀಜಗಳು. ನೀರು ಮಣ್ಣುಗಳು ಅಂಕುರವನ್ನು ವ್ಯಕ್ತಮಾಡುವಂತೆ ಬ್ರಹ್ಮವಾಣಿಯರು ಜಗದ್ವೃಕ್ಷವನ್ನು ವ್ಯಕ್ತಮಾಡುವುದರಿಂದ ಅವರೂ ಬೀಜಗಳೆನಿಸಿದ್ದಾರೆ. ನೆಲವು ಮಣ್ಣು ನೀರು ಕೊಟ್ಟು ಮರಕ್ಕೆ ಆಶ್ರಯವಾಗುವಂತೆ ರಮಾದೇವಿಯೂ ನೆಲದಂತೆ ಜಗದ್ವೃಕ್ಷಕ್ಕೆ ಆಶ್ರಯಳಾಗಿದ್ದಾಳೆ. ಜಗದ್ವೃಕ್ಷಕ್ಕೆ ನೆಲವು ಬ್ರಹ್ಮಾಂಡ. ಶ್ರೀಹರಿ ಬಾಹ್ಯ ಜಲಅಗ್ನಿ ವಾಯುಆಕಾಶಾವರಣಗಳಂತೆ. ಬ್ರಹ್ಮಾಂಡಕ್ಕೂ ಜಗದ್ವೃಕ್ಷಕ್ಕೂ ಮೂಲ ಬೀಜದಂತಿರುವವನು ಶ್ರೀಹರಿ ಎಂದು ವಿಶ್ವಸಂಹಿತೆಯಲ್ಲಿ ಹೇಳಿದೆ.

ದೇಹೇಂದ್ರಿಯಮನೋವಾಕ್ಷು ಸ್ಥಿತೋ ಭಕ್ತ್ಯಾದಿ ಸಾಧಕಃ ।
ಸುಪರ್ಣಶೇಷರುದ್ರಾದೇರಪಿ ಬ್ರಹ್ಮಾ ಚತುರ್ಮುಖಃ ।
ಅತೋ ಭಕ್ತ್ಯಾದಿಕಾಃ ಸರ್ವೇ ಗುಣಾಸ್ತಸ್ಯೈವ ಸರ್ವಗಾಃ ।
ಅತಿರಿಕ್ತಾಶ್ಚ ಸಂಪೂರ್ಣಾಃ ಸುಪರ್ಣಾದೇಃ ಶತಾಧಿಕಾಃ ।
ಸುಪರ್ಣಾದಿಭಿರಜ್ಞಾತಾಸ್ತದಭೀಮಾನವರ್ಜಿತಾಃ ।
ಬ್ರಹ್ಮಣಸ್ತು ಪುನಃ ಸಂತಿ ತೇಷಾಂ ಕರ್ತಾ ಜನಾರ್ದನಃ ।
ತಸ್ಮಾತ್ ಸರ್ವಾಧಿಕೋ ಬ್ರಹ್ಮಾ ಗುಣೈಃ ಸರ್ವೈರ್ನ ಸಂಶಯಃ ।

ಗರುಡಶೇಷರುದ್ರಾದಿಗಳಿಗೂ ಕೂಡ ಅವರ ದೇಹ ಇಂದ್ರಿಯ ಮನಸ್ಸು ವಾಕ್ಕುಗಳಲ್ಲಿ ನಿಯಾಮಕನಾಗಿ ನಿಂತು ಭಕ್ತ್ಯಾದಿ ಸಾಧಕನಾಗಿರುವವನು ಚತುರ್ಮುಖ ಬ್ರಹ್ಮ. ಅದರಿಂದ ಎಲ್ಲರಲ್ಲಿರುವ ಭಕ್ತಿ ಮುಂತಾದ ಸರ್ವಗುಣಗಳೂ ಸ್ವಾಮಿಯಾದ್ದರಿಂದ ಹೆಚ್ಚಾಗಿ ಅವನಲ್ಲಿ ಇದ್ದೇ ಇವೆ. ಗರುಡಾದಿಗಳಿಗಿಂತ ನೂರುಪಟ್ಟು ಹೆಚ್ಚಾಗಿರುವ ಗುಣಗಳೂ ಪೂರ್ತಿಯಾಗಿ ಪುನಃ ಬೇರೆ ಅವನಲ್ಲಿ ಇವೆ. ಅವುಗಳಲ್ಲಿ ಗರುಡಾದಿಗಳಿಗೆ ಸ್ವಾಮಿತ್ವವಿಲ್ಲ, ಅವುಗಳ ಬಗ್ಗೆ ಅವರಿಗೆ ವಿಶೇಷಜ್ಞಾನವೂ ಉಂಟಾಗುವುದಿಲ್ಲ. ಅವುಗಳನ್ನು ಬ್ರಹ್ಮನಿಗೆ ಅನುಗ್ರಹಿಸುವವನು ಜನಾರ್ದನ. ಅದರಿಂದ ಎಲ್ಲ ಗುಣಗಳಿಂದ ಸರ್ವೋತ್ತಮನು ಬ್ರಹ್ಮ. ಇದರಲ್ಲಿ ಸಂಶಯವಿಲ್ಲ.

ವರ್ಣಸ್ಥೋ ವರ್ಣನಾಮಾಽಸೌ ಸ್ವರಸ್ಥಃ ಸ್ವರನಾಮಕಃ ।
ಮನಃಸ್ಥಶ್ಚ ಮನೋನಾಮಾ ತನ್ನಾಮಾ ಚಕ್ಷುರಾದಿಗಃ ।
ತಸ್ಯ ಸರ್ವಾಣಿ ನಾಮಾನಿ ಮುಖ್ಯತಃ ಕವಯೋ ವಿದುಃ ।
ತತ್ಸ್ಥಾನತ್ವಾದಿಂದ್ರಿಯಾದೇರ್ವರ್ಣಾದೇಶ್ಚೋಪಚಾರತಃ ।
ಏವಮಸ್ಯೋಪಚಾರೇಣ ವಿಷ್ಣೋಃ ಸಾಕ್ಷಾತ್ತು ಮುಖ್ಯತಃ ।
ಇತಿ ಶಬ್ದನಿರ್ಣಯೇ ॥

ಚತುರ್ಮುಖಬ್ರಹ್ಮನು ಅಕಾರಾದಿ ವರ್ಣಗಳಲ್ಲಿದ್ದು ಅವುಗಳ ನಾಮ ಉಳ್ಳವನಾಗಿದ್ದಾನೆ. ಸ್ವರಗಳಲ್ಲಿದ್ದು ಸ್ವರನಾಮಗಳಿಂದ ಕರೆಸಿಕೊಳ್ಳುತ್ತಾನೆ. ಮನಸಿನಲ್ಲಿ ನಿಯಾಮಕನಾಗಿದ್ದು ಮನೋನಾಮಕನಾಗಿದ್ದಾನೆ. ಚಕ್ಷುರಾದಿ ಗಳಲ್ಲಿದ್ದು ಚಕ್ಷುರಾದಿ ನಾಮಕನೂ ಆಗದ್ದಾನೆ. ಎಲ್ಲ ನಾಮಗಳೂ ಅವನಿಗೇ ಮುಖ್ಯವಾಗಿ ಸಲ್ಲುವುದೆಂದು ಜ್ಞಾನಿಗಳು ತಿಳಿಯುತ್ತಾರೆ. ಅವನಿಗೆ ಸ್ಥಾನಗಳಾಗಿರುವುದರಿಂದ ಇಂದ್ರಿಯಾದಿಗಳಿಗೂ ವರ್ಣಾದಿಗಳಿಗೂ ಅಮುಖ್ಯವಾಗಿ ಆಯಾ ನಾಮಗಳುಂಟಾಗಿವೆ. ಹೀಗೇ ಅವನಿಗೂ ವಿಷ್ಣುವಿಗಿಂತ ಅಮುಖ್ಯವಾಗಿ ಆ ನಾಮಗಳು ಸಲ್ಲುತ್ತವೆ. ವಿಷ್ಣುವಿಗೆ ಪರಮಮುಖ್ಯವೃತ್ತಿಯಿಂದ ಎಲ್ಲ ನಾಮಗಳಿವೆ ಎಂದು ಶಬ್ದನಿರ್ಣಯದಲ್ಲಿದೆ.

ಕೃಷ್ಣಪ್ರಿಯಾಭ್ಯೋ ಗೋಪೀಭ್ಯೋ ಭಕ್ತಿತೋ ದ್ವಿಗುಣಾಧಿಕಾಃ ।
ಮಹಿಷ್ಯೋಽಷ್ಟೌ ವಿನಾ ಯಾಸ್ತಾಃ ಕಥಿತಾಃ ಕೃಷ್ಣವಲ್ಲಭಾಃ ।
ತಾಭ್ಯಃ ಸಹಸ್ರಸಮಿತಾ ಯಶೋದಾ ನಂದಗೇಹಿನೀ ।
ತತೋಽಪ್ಯಭ್ಯಧಿಕಾ ದೇವೀ ದೇವಕೀ ಭಕ್ತಿತಸ್ತತಃ ।
ವಸುದೇವಸ್ತತೋ ಜಿಷ್ಣುಸ್ತತೋ ರಾಮೋ ಮಹಾಬಲಃ ।

ನ ತತೋऽಭ್ಯಧಿಕಃ ಕಶ್ಚಿದ್ ಭಕ್ತ್ಯಾದೌ ಪುರುಷೋತ್ತಮೇ ।
ವಿನಾ ಬ್ರಹ್ಮಾಣಮೀಶೇಶಂ ಸ ಹಿ ಸರ್ವಾಧಿಕಃ ಸ್ಮೃತಃ ।
ಇತ್ಯಂತರ್ಯಾಮಿಸಂಹಿತಾಯಾಂ ॥

ಕೃಷ್ಣನಿಗೆ ಕೃಷ್ಣಪ್ರಿಯರಾದ ಗೋಪಿಯರಿಗಿಂತ ಎರಡು ಪಟ್ಟು ಹೆಚ್ಚು ಪ್ರಿಯರು, ರುಕ್ಮಿಣೀ ಮುಂತಾದ ಅಷ್ಟಮಹಿಷಿಯರನ್ನು ಬಿಟ್ಟು ಉಳಿದ ಹದಿನಾರು ಸಾವಿರದ ನೂರು ಕೃಷ್ಣಪತ್ನಿಯರು. ಅವರಿಗಿಂತ ನಂದಗೋಪನ ಮಡದಿಯಾದ ಯಶೋದೆಯು ಸಾವಿರಗುಣ ಅಧಿಕಳು. ಯಶೋದೆಗಿಂತಲೂ ದೇವಕೀದೇವಿ, ಅವಳಿಗಿಂತಲೂ ವಸುದೇವ, ಅವನಿಗಿಂತ ಅರ್ಜುನ, ಅವನಿಗಿಂತಲೂ ಮಹಾಬಲಿಷ್ಠನಾದ ಬಲರಾಮ ಹೆಚ್ಚು ಪ್ರಿಯ. ಹರಿಭಕ್ತ್ಯಾದಿಗುಣದಲ್ಲಿ ಅವನಿಗಿಂತ ಹೆಚ್ಚಿನವನು, ರುದ್ರನಿಗೂ ನಿಯಾಮಕನಾದ ಬ್ರಹ್ಮನನ್ನು ಬಿಟ್ಟು ಬೇರೆ ಯಾರೂ ಇಲ್ಲ. ಬ್ರಹ್ಮನೇ ಎಲ್ಲರಿಗಿಂತ ಉತ್ತಮ ಎಂದು ಅಂತರ್ಯಾಮಿ ಸಂಹಿತೆಯಲ್ಲಿ ಹೇಳಿದೆ.

ಪಾಪದ್ವೇಷಾದಿಕಾ ದೋಷಾ ಅವರಾಣಾಂ ನ ಸಂಶಯಃ ।
ಭಕ್ತ್ಯಾದಿಗುಣಪೂಗಸ್ತು ಪರಾಣಾಮಾ ವಿರಿಂಚತಃ ।
ಸ್ವಾತಂತ್ರ್ಯಾತ್ ಸರ್ವದೇಹೇಷು ಸ್ಥಿತಾನಾಮಪಿ ಸರ್ವಶಃ ।
ಸ್ಪೃಶ್ಯಂತೇ ನೈವ ದೋಷೈಸ್ತೇ ಗುಣಾದಾನೈಕತತ್ಪರಾಃ ।
ಇತಿ ವಿವೇಕೇ ॥

ಎಲ್ಲರ ಶರೀರಗಳಲ್ಲಿದ್ದು ಪಾಪದ್ವೇಷಾದಿ ಪ್ರೇರಕರಾದ ಅಧಮಾಭಿಮಾನಿಗಳಾದ ನೀಚದೈತ್ಯರಿಗೆ ಮಾತ್ರ ಪಾಪದ್ವೇಷಾದಿ ದೋಷಗಳು ಅವಶ್ಯ ಬರುವುವು. ಇದರಲ್ಲಿ ಸಂಶಯವಿಲ್ಲ. ಆದರೆ ಭಕ್ತ್ಯಾದಿ ಗುಣಸಮೂಹವೇ, ಅವುಗಳನ್ನು ಪ್ರೇರಿಸುವ ಉತ್ತಮಾಭಿಮಾನಿಗಳಾದ ವಿರಿಂಚಪರ್ಯಂತ ಉತ್ತಮ ದೇವತೆಗಳಿಗೆ ಕ್ರಮವಾಗಿ ಹೆಚ್ಚು ಹೆಚ್ಚು ಬರುತ್ತವೆ. ಏಕೆಂದರೆ ಅವರು ಎಲ್ಲರೂ ಎಲ್ಲ ದೇಹಗಳಲ್ಲಿ ಅಭಿಮಾನಿಗಳಾಗಿ ಇದ್ದರೂ ಭಕ್ತ್ಯಾದಿಗುಣ ಮಾತ್ರ ಸ್ವೀಕಾರ ಮಾಡಿ ದೋಷತ್ಯಾಗ ಮಾಡುವಲ್ಲಿ ತತ್ಪರರಾಗಿದ್ದು ಅದರಲ್ಲಿ ಸ್ವತಂತ್ರರೂ ಆಗಿದ್ದಾರೆ. ಅವರಿಗೆ ಸರ್ವಥಾ ದೋಷಗಳ ಸ್ಪರ್ಶವಿಲ್ಲ ಎಂದು ವಿವೇಕ ಎಂಬ ಗ್ರಂಥದಲ್ಲಿದೆ.

ಯದು ಕಿಂಚೇಮಾಃ ಪ್ರಜಾಃ ಶೋಚಂತ್ಯಮೈವಾಸಾಂ
ತದ್ ಭವತಿ ಪುಣ್ಯಮೇವಾಮುಂ ಗಚ್ಛತಿ
ನ ಹವೈ ದೇವಾನ್ ಪಾಪಂ ಗಚ್ಛತಿ । ಇತಿ ಚ ॥

ಈ ಜೀವಿಗಳು ಏನು ದುಃಖಸಾಧನವಾದ ಪಾಪಕರ್ಮವನ್ನು ಆಚರಿಸುವರೋ ಅದು ಅವರ ಬಳಿಯೇ ಇರುತ್ತದೆ. ದೇವತೆಗಳಿಗೆ ಪುಣ್ಯವೇ ಬರುತ್ತದೆ. ಅವರಿಗೆ ಪಾಪ ಬರುವುದಿಲ್ಲ ಎನ್ನುವುದು ಪ್ರಸಿದ್ಧವೇ ಇದೆ ಎಂದು ಬೃಹದಾರಣ್ಯಕೋಪನಿಷತ್ತು ಹೇಳಿದೆ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್‌ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ದ್ವಾದಶೋಽಧ್ಯಾಯಃ ॥

❖❖❖

ಅಧ್ಯಾಯ–೧೩

ಅಧ್ಯಾಯ ಸಾರಾಂಶ

ಸತ್ವ ರಜ ತಮವೆಂಬ ಮೂರು ಗುಣಗಳು ಜೀವಸ್ವರೂಪದಲ್ಲಿಲ್ಲ. ಅವು ಲಿಂಗಶರೀರದಲ್ಲಿರುವ ಬಾಹ್ಯ ಜಡ ಅಂತಃಕರಣಕ್ಕೆ ಸಂಬಂಧಿಸಿದುದು. ಭಕ್ತಿಭರಿತವಾದ ಸಾತ್ವಿಕ ಅಂತಃಕರಣದಿಂದ ಸತ್ವಜನ್ಯ ಅಪರೋಕ್ಷಜ್ಞಾನವನ್ನು ಸಂಪಾದಿಸಿ ರಾಜಸತಾಮಸ ಅಂತಃಕರಣಗಳನ್ನು ನಾಶಪಡಿಸಿಕೊಳ್ಳಬೇಕು. ಕೊನೆಯಲ್ಲಿ ಆ ಸಾತ್ವಿಕ ಅಂತಃಕರಣವನ್ನೂ ಕೂಡ ವಿರಜಾಸ್ನಾನದಲ್ಲಿ ನಾಶಪಡಿಸಿಕೊಳ್ಳಬೇಕು.

ಅಂತಃಕರಣದಲ್ಲಿ ಸತ್ವ ರಜ ತಮ ವೃದ್ಧಿಗೆ ಕಾರಣವಾಗುವ ಆಗಮ ಯಜ್ಞಮುಂತಾದವು ಒಂಬತ್ತು ಇವು—

ಆಗಮಗಳಲ್ಲಿ ವೈಷ್ಣವ ಬ್ರಾಹ್ಮ ಮತ್ತು ಶೈವ ಆಗಮಗಳು. ಯಜ್ಞಗಳಲ್ಲಿ ನಿಷ್ಕಾಮ ಕಾಮ್ಯ ಮತ್ತು ಪರಹಿಂಸಾರ್ಥವಾದ ಯಜ್ಞಗಳು. ದೇಶಗಳಲ್ಲಿ ನದೀತೀರ ಸರೋವರತೀರ ಮ್ಲೇಚ್ಛಾದಿವಾಸವಿರುವ ದೇಶಗಳು. ಕಾಲಗಳಲ್ಲಿ ಕರ್ಮಕಾಲ ಭೋಗಕಾಲ ಮತ್ತು ನಿದ್ರಾಕಾಲಗಳು. ಕರ್ಮಗಳಲ್ಲಿ ನಿತ್ಯನೈಮಿತ್ತಿಕ ಕರ್ಮಗಳು ಇತರ ದೇವತೋಪಾಸನೆಗಳು ಮತ್ತು ಪರಹಿಂಸಾಕರ್ಮಗಳು. ಜನ್ಮಗಳಲ್ಲಿ ಬ್ರಾಹ್ಮಣಜನ್ಮ, ಕ್ಷತ್ರಿಯ–ವೈಶ್ಯಜನ್ಮಗಳು ಮತ್ತು ಶೂದ್ರಾದಿಜನ್ಮ. ಧ್ಯಾನಗಳಲ್ಲಿ ಹರಿಧ್ಯಾನ, ವಿಷಯಭೋಗಧ್ಯಾನ ಮತ್ತು ಪಾಪಕರ್ಮಧ್ಯಾನ. ಮಂತ್ರಗಳಲ್ಲಿ ನಿಷ್ಕಾಮ, ಕಾಮ್ಯ ಮತ್ತು ಪರಹಿಂಸಾಜನಕ ಮಂತ್ರಗಳು. ಸಂಸ್ಕಾರಗಳಲ್ಲಿ ಹರಿಗುರುಗಳ ಸನ್ನಿಧಿ

ಯಲ್ಲಿ, ಲೌಕಿಕರ ಸನ್ನಿಧಿಯಲ್ಲಿ ಮತ್ತು ತಾಮಸಜನರ ಬಳಿಯಲ್ಲಿ ಮಾಡಿದ ಉಪನಯನಾದಿ ಸಂಸ್ಕಾರಗಳು.

ಈ ಒಂಬತ್ತರಲ್ಲಿ ಸಾತ್ವಿಕವಾದ ಒಂಬತ್ತನ್ನು ಸಾತ್ವಿಕಜನರು ಆದರಿಸುತ್ತಾರೆ. ತಾಮಸವಾದ ಒಂಬತ್ತನ್ನು ನಿಂದಿಸುತ್ತಾರೆ. ರಾಜಸ ವಾದ ಒಂಬತ್ತರ ಬಗ್ಗೆ ಉದಾಸೀನರಾಗಿರುತ್ತಾರೆ. ಸಾತ್ವಿಕವಾದ ಒಂಬತ್ತರಿಂದಲೇ ಭಕ್ತಿ ಜ್ಞಾನಾದಿ ವೃದ್ಧಿಯಾಗುವುದು, ಅಪರೋಕ್ಷ ಲಭಿಸುವುದು. ಬಾಹ್ಯ ಸಾತ್ವಿಕ ಅಂತಃಕರಣದಲ್ಲಿ ಉಂಟಾಗುವ ಅಪ ರೋಕ್ಷವು ಸ್ವರೂಪಾಂತಃಕರಣದಲ್ಲಿ ಉಂಟಾಗುವ ಅಪರೋಕ್ಷದ ಜೊತೆ ಸೇರಿ ಅವಿದ್ಯೆಯನ್ನು ನಾಶಪಡಿಸಿದ ಬಳಿಕ ಆ ಬಾಹ್ಯ ಅಂತಃಕರಣವನ್ನೂ ಸುಟ್ಟು ತಾನೂ ಆರಿಹೋಗುತ್ತದೆ. ಕಾಡಿನಲ್ಲಿ ಏಳುವ ಕಾಳ್ಗಿಚ್ಚು ಕಾಡನ್ನು ಸುಟ್ಟು ತಾನೂ ಆರಿಹೋಗುವಂತೆ.

ಉದ್ಧವ ನುಡಿದ— ಅತಿಯಾದ ವಿಷಯಭೋಗ ವಿನಾಶಕರವೆಂದು ~~ತಿಳಿದೂ ಕೂಡ ಕತ್ತೆನಾಯಿಗಳಂತೆ ಅದರಲ್ಲೇ ಮಗ್ನರಾಗುತ್ತಾರೆ~~ ಅಜ್ಞಾನಿಗಳು. ಅದಕ್ಕೆ ಏನು ಕಾರಣ?

ಶ್ರೀಕೃಷ್ಣ ನುಡಿದ— 'ವಿಷಯಪದಾರ್ಥಗಳನ್ನು ಸೇವಿಸುವಾಗ ಪರಮಾತ್ಮನನ್ನು ಮರೆಯುವುದೇ ಕಾರಣ. ನಾನೇ ಸ್ವತಂತ್ರನೆಂಬ ಭಾವನೆಯಿಂದ ರಜೋಗುಣ ತಮೋಗುಣ ವೃದ್ಧಿಯಾಗುತ್ತದೆ ಮನಸಿನಲ್ಲಿ ನಾನಾ ಹಗಲುಗನಸುಗಳು ಅಸಹನೀಯ ಭೋಗಲಾಲಸೆಗಳು ಮೂಡುತ್ತವೆ, ಇಂದ್ರಿಯ ನಿಯಂತ್ರಣ ತಪ್ಪಿ ಹೋಗುತ್ತದೆ. ಅದರಿಂದ ವಿಷಯಭೋಗ ದುಃಖಕಾರಣವೆಂದು ತಿಳಿದೂ ಅದನ್ನು ಬಿಡಲಾರದವನಾಗುತ್ತಾನೆ. ಪರಮಾತ್ಮನ ಸ್ಮರಣೆ ಬಂದರೆ ವಿಷಯದಲ್ಲಿ ಆಸಕ್ತಿ ದೂರವಾಗುವುದು. ಬದುಕಲು ಎಷ್ಟು ಬೇಕೋ ಅಷ್ಟೇ ಉಣ್ಣುತ್ತಾನೆ. ಅದರಿಂದ ಅಪಾಯವಿಲ್ಲ, ಜ್ಞಾನ ಸಾಧನೆಯಾಗುತ್ತದೆ.

ಪರಮಾತ್ಮನ ಸ್ಮರಣೆ ಬರಬೇಕೆಂದರೆ ಸ್ಥಿರವಾದ ಆಸನದಲ್ಲಿ ಕುಳಿತು ಪ್ರಾಣಾಯಾಮ ಮಾಡಿ ಪರಮಾತ್ಮನ ಒಂದೊಂದು ಅವಯವವನ್ನು ಮೊದಲು ಚಿಂತನೆ ಮಾಡಬೇಕು. ಬಳಿಕ ಸಮಗ್ರ ಆಕೃತಿ ಧ್ಯಾನ ನಡೆಸಬೇಕು. ಇದು ಹೇಗೆ ಸಾಧ್ಯವೆಂಬುದನ್ನು ನನ್ನ ಶಿಷ್ಯರಾದ

ಸನಕಾದಿ ಮುನಿಗಳು ಉಪದೇಶಿಸುತ್ತಾರೆ.

ಉದ್ಧವ ನುಡಿದ— 'ಪ್ರಭು, ನೀನು ಸನಕಾದಿ ಮುನಿಗಳಿಗೆ ಯಾವಾಗ ಉಪದೇಶ ಮಾಡಿದೆ?'

ಶ್ರೀಕೃಷ್ಣ ನುಡಿದ— 'ಸನಕಾದಿ ಮುನಿಗಳು ಒಮ್ಮೆ ಚತುರ್ಮುಖನ ಬಳಿ ಮನಸಿಗೆ ವಿಷಯ ಪದಾರ್ಥಗಳ ಸೆಳೆತವನ್ನು ತಪ್ಪಿಸುವ ಉಪಾಯ ಏನೆಂದು ಕೇಳಿದರು. ಪರಮಾತ್ಮನೆ ಅವನ ಸಂಕಲ್ಪದಂತೆ ಉಪದೇಶಿಸಲಿ ಎಂದು ಚತುರ್ಮುಖ ನನ್ನನ್ನು ನೆನೆದಾಗ ನಾನು ಹಂಸರೂಪದಿಂದ ಪ್ರಕಟನಾದೆ. ಬ್ರಹ್ಮನು ಹಂಸನಿಗೆ ಪಾದವಂದನೆ ಗೈದ. ಬಳಿಕ ಮುನಿಗಳು ಹಂಸನನ್ನು ನೀನಾರೆಂದು ಕೇಳಿದರು !

ಶ್ರೀಹಂಸ ನುಡಿದ— 'ಮುನಿಗಳೇ ನೀವು ಮಾಡಿದ ಪ್ರಶ್ನೆ ಉಚಿತವಲ್ಲ. ಬ್ರಹ್ಮನಿಗೂ ಪೂಜ್ಯನೆನಿಸಿದವ ಪರಮಾತ್ಮನೊಬ್ಬನೇ ಎಂದು ನೀವು ಒಪ್ಪಿರುವುದಾದರೆ, ಪರಮಾತ್ಮವಸ್ತು ಅನೇಕ ಇಲ್ಲದಿರುವಾಗ, ಅದು ನಾನೆಂಬುದು ನಿಮಗೆ ಈಗಾಗಲೆ ತಿಳಿದಿದೆ ತಾನೆ? ದೇವ ಮನುಷ್ಯ ಪಿತೃ ಗಂಧರ್ವ ಅಸುರರೆಂಬ ಐದು ಬಗೆಯ ಚೇತನರೆಲ್ಲರೂ ಬ್ರಹ್ಮನಿಗಿಂತ ಕಡಿಮೆಯವರು. ಯಾರೂ ಬ್ರಹ್ಮನಿಗೆ ವಂದ್ಯರಲ್ಲ. ಅವರಲ್ಲಿ ಒಬ್ಬನು ನಾನಾಗಿರಲು ಶಕ್ಯವಿಲ್ಲ. ನಿಮ್ಮ ಮನಸಿಗೆ ಮಾತಿಗೆ ಅಥವಾ ಯಾವುದೇ ಇಂದ್ರಿಯಕ್ಕೆ ನಿಲುಕುವ ವಸ್ತು ಯಾವುದೂ ನಾನಲ್ಲ, ನನಗಿಂತ ಬೇರೇ ಎಂದು ತಿಳಿಯಿರಿ.

ಮನಸ್ಸಿಗೆ ವಿಷಯ ಪದಾರ್ಥಗಳ ಕಡೆಗೆ ಆಕರ್ಷಣೆ ಏಕೆ, ಅದನ್ನು ಪರಿಹರಿಸುವುದು ಹೇಗೆ ಎಂದು ಕೇಳಿರಿ. ನನ್ನಲ್ಲಿ ಮನಸ್ಸಿಟ್ಟರೆ ವಿಷಯಾಸೆ ಸುಟ್ಟುಹೋಗುತ್ತದೆ. ನನ್ನನ್ನು ಮರೆತರೆ ಮನಸು ವಿಷಯಪದಾರ್ಥಗಳಲ್ಲಿ ಸೇರಿಹೋಗುವುದು. ವಿಷಯ ಮನಸು ಗಳೆರಡನ್ನೂ ನನ್ನಲ್ಲೇ ಅರ್ಪಿಸಿರಿ. ಇದೇ ಬಂಧ ತ್ಯಾಗ. ಮಡದಿ ಮಕ್ಕಳ ಮನೆ ಮಠಗಳ ಮೋಹರೂಪವಾದ ಈ ವಿಷಯ ಬಂಧವೆ ಅವಸ್ಥಾತ್ರಯರೂಪವಾಗಿ ಮೋಕ್ಷವಿರೋಧಿಯಾಗಿ ಕಾಡುತ್ತದೆ. ಅದನ್ನು ನನ್ನಲ್ಲಿ ಅರ್ಪಿಸಬೇಕು. ಅಶಕ್ತವಾದ ಜೀವಜಡಗಳಿಗಿಂತ ವಿಲಕ್ಷಣನಾದ ಸರ್ವಶಕ್ತ ಪರಮಾತ್ಮನೆ ಅವಸ್ಥಾತ್ರಯವನ್ನು ಉಂಟುಮಾಡುವನೆಂದು ತಿಳಿದು ಅರ್ಪಿಸಿದರೆ ಈ ನಿಶ್ಚಿತ ಜ್ಞಾನವೆಂಬ

ಕತ್ತಿ ಮನಸಿನ ಎಲ್ಲ ಸಂಶಯಗಳನ್ನು ತರಿದು ಮನಸನ್ನು ನನ್ನಲ್ಲಿ ಸ್ಥಿರವಾಗಿ ನಿಲ್ಲಿಸುವುದು.

ಅವಸ್ಥಾತ್ರಯ ನಿಯಾಮಕ ವಿಶ್ವಾದಿ ಭಗವದ್ರೂಪಗಳಲ್ಲಿ ಭೇದವನ್ನು ತಿಳಿಯುವುದು ಭ್ರಾಂತಿ. ಉರಿವ ಬೆಂಕಿಕೊಳ್ಳಿಯನ್ನು ಸುತ್ತಲೂ ತಿರುಗಿಸಿದರೆ ಬೆಂಕಿಯ ಚಕ್ರವೆಂಬ ಭ್ರಾಂತಿ ಬರುತ್ತದೆ. ಹಾಗೇ ಇದು. ಈ ಭ್ರಾಂತಿ ಪಾಪಜನ್ಯವಾದ್ದರಿಂದ ನಿಷಿದ್ಧ ಕರ್ಮಾಚರಣೆಯನ್ನು ಬಿಡಬೇಕು. ಹರಿಧ್ಯಾನ ಮಾಡಬೇಕು. ಅದರಿಂದ ಅಪರೋಕ್ಷ ಲಾಭವಾಗುತ್ತದೆ.

ಭಗವಂತನ ರೂಪಗಳಲ್ಲಿ ಭೇದವಿದೆ ಎಂದು ಭ್ರಾಂತಿಯಿಂದ ಅಜ್ಞರು ಹೇಳಿದ ಮಾತ್ರಕ್ಕೆ ಜ್ಞಾನಿಗಳು ಮೋಸಹೋಗುವುದಿಲ್ಲ. ಅಭೇದಜ್ಞಾನ ಮೋಕ್ಷಕ್ಕೂ, ಮಿಶ್ರಜ್ಞಾನ ಸಂಸಾರಕ್ಕೂ ಭೇದಜ್ಞಾನ ತಮಸ್ಸಿಗೂ ಕಾರಣವೆಂದು ಅವರು ತಿಳಿದಿರುತ್ತಾರೆ.

ಕುಡಿದು ಮತ್ತೇರಿದವನಿಗೆ ಉಟ್ಟಬಟ್ಟೆ ಜಾರಿದರೂ ತಿಳಿಯುವು ದಿಲ್ಲ. ಹಾಗೇ ಜೀವನ್ಮುಕ್ತನಿಗೆ ತನ್ನ ದೇಹದ ಪರಿವೆ ಇರುವುದಿಲ್ಲ. ದೇಹ ತನಗೆ ಕಾರಣವಾದ ಪುಣ್ಯಪಾಪ ತೀರುವ ವರೆಗೆ ಕಾದು ಅವು ತೀರಿದೊಡನೆ ಬಿದ್ದು ಹೋಗುವುದು. ಆಗಾಗ ಸಮಾಧಿಯ ಅವಸ್ಥೆಗೆ ಏರುವ ಜೀವನ್ಮುಕ್ತನು ತನ್ನ ದೇಹ ಇಂದ್ರಿಯ ಮನಸ್ಸುಗಳು ತನ್ನ ಕಾರ್ಯ ನಡೆಸಲಿ ಎಂದು ಬಯಸುವುದಿಲ್ಲ. ವಿಷಯಭೋಗ ಮಾಡಲಿ ಎನ್ನುವುದಿಲ್ಲ. ಸ್ವಪ್ನದಿಂದ ಎಚ್ಚೆತ್ತವನು ಸ್ವಪ್ನದಲ್ಲಿ ಕಂಡ ಪದಾರ್ಥವನ್ನು ಹೇಗೋ ಹಾಗೇ ಇದು.''

ಶ್ರೀಹಂಸನ ಉಪದೇಶದಿಂದ ಸನಕಾದಿ ಮುನಿಗಳು ತಮ್ಮ ಸಂಶಯಗಳನ್ನು ಪರಿಹರಿಸಿಕೊಂಡು ಅವನನ್ನು ಭಕ್ತಿಯಿಂದ ಪೂಜಿಸಿ ಸ್ತುತಿಸಿದರು. ಭಗವಂತ ತನ್ನ ಧಾಮಕ್ಕೆ ತೆರಳಿದ.

❖❖❖

ಅಂತಃಕರಣದಲ್ಲಿ ಸತ್ವಗುಣವನ್ನು ಬೆಳೆಸಿಕೊಂಡು ರಜ-ತಮಗಳನ್ನು ನಾಶಪಡಿಸಿಕೊಳ್ಳೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಸತ್ತ್ವಾದ್ಧರ್ಮೋ ಭವೇದ್ವೃದ್ಧಾತ್ಪುಂಸೋ ಮದ್ಭಕ್ತಿಲಕ್ಷಣಃ ।
ಸಾತ್ತ್ವಿಕೋಪಾಸ್ತಯಾ ಜ್ಞಾನಂ ತತೋ ಧರ್ಮಃ ಪ್ರವರ್ತತೇ ॥ ೨ ॥

ಶುದ್ಧ ಸತ್ವದಿಂದ ಮಾನವನಿಗೆ ನನ್ನಲ್ಲಿ ಭಕ್ತಿ ಉಂಟಾಗುವುದು. ಭಕ್ತಿಯಿಂದ ಅಪರೋಕ್ಷಜ್ಞಾನ ಬರುವುದು. ಆ ಜ್ಞಾನದಿಂದ ಸತ್ವೋದ್ರೇಕ, ಅದರಿಂದ ಪುನಃ ಹೆಚ್ಚಿನ ಭಕ್ತಿ ಉಂಟಾಗುವುದು.

ಭಕ್ತಿಪೂರ್ವಕ ನಿಷ್ಕಾಮಕರ್ಮದಿಂದ ಅಂತಃಕರಣಶುದ್ಧಿ ಶಾಸ್ತ್ರಶ್ರವಣ ಮನನಗಳುಂಟಾಗಿ ಸತ್ವಗುಣವನ್ನು ವೃದ್ಧಿಗೊಳಿಸುವುವು. ಜ್ಞಾನ ದೃಢವಾಗುವುದು, ಭಕ್ತಿ ಪಕ್ವವಾಗುವುದು. ಸತ್ವಗುಣವಿನ್ನೂ ಹೆಚ್ಚುವುದು. ಅದರಿಂದ ಧ್ಯಾನ ಕೈಗೂಡುವುದು. ಭಕ್ತಿ ಹೆಚ್ಚು ಪಕ್ವವಾಗುವುದು. ಸತ್ವಗುಣ ಪುನಃ ಹೆಚ್ಚುವುದು. ಅದರಿಂದ ಅಪರೋಕ್ಷ, ಅಪರೋಕ್ಷದಿಂದ ಮತ್ತೆ ಭಕ್ತಿ ಹೆಚ್ಚುವುದು. ಅದರಿಂದ ಮುಕ್ತಿ ಲಭಿಸುವುದು. ಮುಕ್ತಿಯಲ್ಲಿ ಶಾಶ್ವತವಾಗಿ ಆನಂದರೂಪದಿಂದ ಭಕ್ತಿ ಅನುಭವಕ್ಕೆ ಬರುವುದು. ಇದು ಶ್ಲೋಕದ ಅಭಿಪ್ರಾಯ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ—

ಸತ್ವಾದ್ಧರ್ಮೋ ಭವೇದ್ ವೃದ್ಧಾತ್ ಪುಂಸೋ ಮದ್ಭಕ್ತಿಲಕ್ಷಣಃ ।
ಸಾತ್ವಿಕೋಪಾಸಯಾ ಸತ್ವಂ ತತೋ ಧರ್ಮಃ ಪ್ರವರ್ತತೇ ॥

'ಸತ್ವಗುಣ ಬೆಳೆದರೆ ವರ್ಣಾಶ್ರಮ ಧರ್ಮಪ್ರವೃತ್ತಿ ಉಂಟಾಗುತ್ತದೆ. ಸಾತ್ವಿಕ ಪುರುಷರಲ್ಲಿ ಸಾತ್ವಿಕ ಆಹಾರಾದಿಗಳ ಸೇವನೆಯಿಂದ ಸತ್ವವೃದ್ಧಿಯಾಗುತ್ತದೆ. ಅದರಿಂದ ಧರ್ಮಪ್ರವೃತ್ತಿ ಉಂಟಾಗುತ್ತದೆ'.

ಇಲ್ಲಿ ಶ್ಲೋಕದ ನಾಲ್ಕನೆಪಾದ 'ತತೋ ಧರ್ಮಃ ಪ್ರವರ್ತತೇ' 'ಸತ್ವವೃದ್ಧಿಯಿಂದ ಧರ್ಮಪ್ರವೃತ್ತಿ ಉಂಟಾಗುತ್ತದೆ' ಎನ್ನುವುದು ಮೊದಲನೇ ಪಾದದಲ್ಲಿ ಹೇಳಿದ್ದನ್ನೇ ವ್ಯರ್ಥವಾಗಿ ಪುನಃ ಹೇಳುತ್ತಿದೆ. ಮೂರನೇ ಪಾದವೂ 'ಸಾತ್ವಿಕ ಆಹಾರಾದಿಗಳ ಸೇವನೆಯಿಂದ ಸತ್ವವೃದ್ಧಿ' ಎನ್ನುವುದು ಈಗ ಪ್ರಸ್ತುತವಲ್ಲ. ಮುಂದೆ ಆರನೇ ಶ್ಲೋಕದಲ್ಲಿ 'ಸಾತ್ವಿಕಾನೇವ ಸೇವೇತ ಪುಮಾನ್ ಸತ್ವವಿವೃದ್ಧಯೇ' 'ಸತ್ವವೃದ್ಧಿಯಾಗಲು ಸಾತ್ವಿಕ ಕರ್ಮ ಮುಂತಾದುವನ್ನೇ ಆದರಿಸಬೇಕೆಂ'ದು ಶ್ರೀಕೃಷ್ಣ ಹೇಳುತ್ತಾನೆ. ಆಗಲೇ ಅದನ್ನು ಹೇಳುವುದು ಯುಕ್ತ.

ಅದರಿಂದ ಈ ಪಾಠ ಸರಿಯಲ್ಲ, ವ್ಯಾಖ್ಯಾನವೂ ಸಮರ್ಪಕವಾಗಿಲ್ಲ.

ಮುಂದಿನ ಮೂರನೇ ಶ್ಲೋಕದಲ್ಲಿ 'ಧರ್ಮದಿಂದ ಸತ್ವವೃದ್ಧಿ' ಎಂದು ಹೇಳುವುದರಿಂದ, ಸತ್ವದಿಂದ ಧರ್ಮಪ್ರವೃತ್ತಿ, ಧರ್ಮಪ್ರವೃತ್ತಿಯಿಂದ ಸತ್ವವೃದ್ಧಿ ಎಂದರೆ ಇದು ಅನ್ಯೋನ್ಯಾಶ್ರಯದೋಷ.

ನಮ್ಮ ಪಾಠದಲ್ಲಿ 'ಸತ್ವಗುಣದಿಂದ ಧರ್ಮವೃದ್ಧಿ, ಧರ್ಮವೃದ್ಧಿಯಿಂದ ಸತ್ವ ಇನ್ನೂ ಹೆಚ್ಚು ಬೆಳೆಯುತ್ತದೆ. ಆಗ ಹೆಚ್ಚಿನ ಧರ್ಮವೃದ್ಧಿಯಿಂದ ಜ್ಞಾನ ಉಂಟಾಗುತ್ತದೆ, ಜ್ಞಾನದಿಂದ ಇನ್ನೂ ಹೆಚ್ಚು ಸತ್ವವೃದ್ಧಿಯಾಗುವುದರಿಂದ ಇನ್ನೂ ಹೆಚ್ಚಿನ ಧರ್ಮವೃದ್ಧಿಯಾಗುತ್ತದೆ. ಧರ್ಮವೆಂದರೆ, 'ಮದ್ಭಕ್ತಿ ಲಕ್ಷಣಃ' ಎನ್ನುವಂತೆ ಪರಮಾತ್ಮನಲ್ಲಿ ಭಕ್ತಿ, ಭಕ್ತಿಯೇ ಸುಖ. ಮುಕ್ತಿಯಲ್ಲಿ ಅದು ಪರಮ ಸುಖವಾಗಿ ಅನುಭವಕ್ಕೆ ಬರುತ್ತದೆ.

ಶ್ಲೋಕಕ್ಕೆ ಹೀಗೇ ವ್ಯಾಖ್ಯಾನಮಾಡಬೇಕೆಂದು ಶ್ರೀಮದಾಚಾರ್ಯರು ಹೇಳುತ್ತಾರೆ.

ಧರ್ಮಾತ್ ಪುನಃ ಸತ್ವೋದ್ರೇಕಃ । ಸತ್ವೋದ್ರಿಕ್ತಯಾ ಬುದ್ಧ್ಯಾ
ಪುನಃ ಸತ್ವೋದ್ರೇಕಾತ್ ಪುನರ್ಧರ್ಮೋದ್ರೇಕಃ ॥

ಸತ್ವದಿಂದ ಧರ್ಮ ಮೊದಲಿಗೆ ಉಂಟಾಗುತ್ತದೆ. ಆ ಧರ್ಮದಿಂದ ಪುನಃ ಸತ್ವವೃದ್ಧಿಯುಂಟಾಗುತ್ತದೆ. ಆ ಸತ್ವವೃದ್ಧಿಯಿಂದ ಜ್ಞಾನ, ಜ್ಞಾನದಿಂದ ಪುನಃ ಇನ್ನೂ ಹೆಚ್ಚು ಸತ್ವವೃದ್ಧಿ ಉಂಟಾದಾಗ ಪುನಃ ಇನ್ನೂ ಹೆಚ್ಚಿನ ಧರ್ಮವೃದ್ಧಿಯುಂಟಾಗುತ್ತದೆ.

❖ ❖ ❖

ಜೀವನಿಗೆ ಬಾಹ್ಯ ಜಡ ಅಂತಃಕರಣವೇ ಸಂಸಾರಕ್ಕೆ ಕಾರಣ. ಅದರ ನಾಶವೇ ಮೋಕ್ಷ. ಅದರಲ್ಲಿ ಅಪರೋಕ್ಷಜ್ಞಾನ ಉಂಟಾಗಿ ಅದನ್ನೇ ಅದು ನಾಶಮಾಡಿ ತಾನೂ ನಾಶ ವಾಗುತ್ತದೆ. ಹೀಗೆ ಮುಕ್ತನಾದ ಜೀವ ಮುಂದೆ ಮುಕ್ತಿಯಲ್ಲಿ ಸ್ವರೂಪಾಂತಃಕರಣ ದಿಂದಲೆ ಸುಖಭೋಗ ಮಾಡುವನೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ವೇಣುಸಂಘರ್ಷಜೋ ವಹ್ನಿರ್ದಗ್ಧ್ವಾ ಶಾಮ್ಯತಿ ತದ್ವನಮ್ ।
ಏವಂ ಗುಣವ್ಯತ್ಯಯಜೋ ವೇದಃ ಶಾಮ್ಯತಿ ತದ್ಯಥಾ ॥ ೭ ॥

ಬಿದಿರುಗಳ ತಿಕ್ಕಾಟದಿಂದ ಉಂಟಾಗುವ ಕಾಳ್ಗಿಚ್ಚು ಕಾಡನ್ನು ಸುಟ್ಟು ತಾನು ಆರಿಹೋಗುವಂತೆ ರಜಸ್ತಮೋಗುಣ ನಾಶಕವಾದ ಸತ್ವಗುಣಜನ್ಯವಾದ 'ವೇದ' ಅಂದರೆ ಸಾತ್ವಿಕ ಅಂತಃಕರಣವೃತ್ತಿಜ್ಞಾನವು ಅಂತಃಕರಣವನ್ನು ಸುಟ್ಟು ತಾನೂ ನಾಶವಾಗುವುದು.

ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ 'ದೇಹಃ ಶಾಮ್ಯತಿ' ಎಂದಿದೆ. ಸುದರ್ಶನ

ಸೂರಿಯ ಪಾಠ 'ವೇದಃ ಶಾಮ್ಯತಿ' ಎಂದೇ ಇದೆ. 'ದೇಹಃ ಶ್ಯಾಮತಿ' ಪಾಠ ಸರಿಯಲ್ಲ.

'ಗುಣಗಳಿಂದಾಗಿರುವ ದೇಹ ತನ್ನಿಂದಾದ ಜ್ಞಾನದಿಂದ ತನಗೆ ಆಶ್ರಯವಾದ ಗುಣಗಳನ್ನು ನಾಶಮಾಡಿ ತಾನೂ ನಾಶ ಹೊಂದುತ್ತದೆ' ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ.

ಆದರೆ ಅದ್ವೈತದಲ್ಲಿ ಅಂತಃಕರಣದಲ್ಲಿ ಹುಟ್ಟುವ ಜ್ಞಾನವು ಅಂತಃಕರಣವನ್ನೂ ಅದಕ್ಕೆ ಮೂಲವಾದ ಅಜ್ಞಾನವನ್ನೂ ನಾಶಪಡಿಸಿ ತಾನು ಸ್ವತಃ ನಾಶವಾಗುತ್ತದೆ. ಹೀಗಾಗಿ ಅಂತಃಕರಣದೊಂದಿಗೆ ದೇಹವನ್ನೂ, ಏಕೆ, ಅಜ್ಞಾನದಿಂದಾಗುವ ಸಮಸ್ತ ಪ್ರಪಂಚವನ್ನೂ ಜ್ಞಾನವು ನಾಶಮಾಡುವುದು ಸರಿಯೆ. ಆದರೆ ಜ್ಞಾನವು ನಾಶಕ ಹೊರತು, ದೇಹವು ನಾಶಕ ಎನ್ನಲಾಗದು. ಹಾಗೆ ಹೇಳಿದರೆ ಪ್ರಪಂಚವೇ ಪ್ರಪಂಚಕ್ಕೆ ನಾಶಕ ಎನ್ನಬೇಕಾಗುತ್ತದೆ. ದೇಹದಿಂದ ಹುಟ್ಟಿದ ಜ್ಞಾನವು ನಾಶಕವಾಗುವುದರಿಂದ ದೇಹವು ನಾಶಕ ಎನ್ನುವ ಪಕ್ಷದಲ್ಲಿ ಮಗನು ಮಾಡಿದ ಅಪರಾಧಕ್ಕೆ ತಂದೆಗೆ ಶಿಕ್ಷೆಯಾಗಬೇಕಾದೀತು. ಅದರಿಂದ 'ದೇಹ'ವು ನಾಶಕವಲ್ಲ. 'ವೇದ' ಅಂದರೆ ಜ್ಞಾನವೇ ನಾಶಕ. 'ವೇದಃ' ಎಂದೇ ಪಾಠ, 'ದೇಹಃ' ಎಂದಲ್ಲ.

ಅಪರೋಕ್ಷಜ್ಞಾನದಿಂದ ಬಾಹ್ಯ ಅಂತಃಕರಣ ನಾಶವಾದರೆ ಮುಕ್ತಿಯಲ್ಲಿ ಸ್ವರೂಪಾಂತಃಕರಣದಿಂದಲೇ ಸುಖಭೋಗ ಸಾಧ್ಯವಾಗುತ್ತದೆ. ಮುಕ್ತನು ಕಲ್ಲುಬಂಡೆಯಂತೆ ಜಡನಾಗಿ ಬಿದ್ದಿರುವುದಿಲ್ಲ ಎಂದು ತಾತ್ತ್ವಿಕ ಎಂಬ ಗ್ರಂಥದ ಆಧಾರ ಕೊಟ್ಟು ಶ್ರೀಮದಾಚಾರ್ಯರು ವ್ಯಾಖ್ಯಾನ ಮಾಡುತ್ತಾರೆ—

ವೇದೋ ವೃತ್ತಿಜ್ಞಾನಂ ।

ಮುಕ್ತಾಶ್ಚಾಧೀಯತೇ ವೇದಾನ್ ಜಡಜ್ಞಾನಬಹಿಷ್ಕೃತಾಃ ।
ಸ್ವರೂಪಭೂತಜ್ಞಾನೇನ ಪಶ್ಯಂತಃ ಸರ್ವಮಂಜಸಾ ॥

ಇತಿ ತಾತ್ತ್ವಿಕೇ ॥

'ವೇದ' ಎಂದರೆ ಇಲ್ಲಿ ಶ್ರುತಿಯಲ್ಲ, 'ವೇದನ' ಎಂದು ಭಾವವ್ಯುತ್ಪತ್ತಿಯಿಂದ ಅಂತಃಕರಣದಲ್ಲಿ ಮೂಡುವ ಜ್ಞಾನವು ವೇದ ಎನಿಸುತ್ತದೆ.

ಜಡ ಅಂತಃಕರಣದ ಜ್ಞಾನವಿಲ್ಲದಿರುವ ಮುಕ್ತರು ಸ್ವರೂಪಾಂತಃಕರಣ ಜ್ಞಾನದಿಂದಲೇ ವೇದಾಧ್ಯಯನ ಮಾಡುತ್ತಾರೆ. ಎಲ್ಲವನ್ನೂ ಚೆನ್ನಾಗಿ ತಿಳಿಯುತ್ತಾರೆ ಎಂದು ತಾತ್ವಿಕ ಎಂಬ ಗ್ರಂಥದಲ್ಲಿದೆ.

❖❖❖

ಒಮ್ಮೆ ಚತುರ್ಮುಖನ ಬಳಿ ಸನಕಾದಿಗಳು ಮನಸಿಗೆ ವಿಷಯಪದಾರ್ಥಗಳ ಸೆಳೆತವನ್ನು ತಪ್ಪಿಸುವ ಬಗೆ ಹೇಗೆಂದು ಕೇಳಿದರು. ಇದಕ್ಕೆ ಉತ್ತರವನ್ನು ಕರ್ಮನಾಮಕ ಭಗವಂತನೆ ಹೇಳಲು ಸಂಕಲ್ಪಿಸಿದ್ದಾನೆ ಎಂದು ತಿಳಿದ ಬ್ರಹ್ಮ ಭಗವಂತನನ್ನೇ ಧ್ಯಾನಿಸಿದನೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಅಪ್ರಮತ್ತೋ ಹಿ ಯುಂಜೀತ ಮನೋ ಮಯ್ಯರ್ಪಯನ್ ಶನೈಃ ।
ಅನಿರ್ವಿಣ್ಣೋ ಯಥಾಕಾಲಂ ಜಿತಶ್ವಾಸೋ ಜಿತಾಸನಃ ॥ ೧೩ ॥

ಆದರಿಂದ ಮಾನವನೆಚ್ಚೆತ್ತು ಸ್ಥಿರ ಆಸನದಲ್ಲಿ ಕುಳಿತು ಪ್ರಾಣಾಯಾಮ ಮಾಡಿ ಮನಸ್ಸನ್ನು ನನ್ನಲ್ಲಿ ನಿಲ್ಲಿಸಬೇಕು. ಮೊದಲಿಗೆ ನನ್ನ ಪಾದಾದಿ ಒಂದೊಂದೇ ಅವಯವದಲ್ಲಿ ಮನಸ್ಸನ್ನು ನಿಲ್ಲಿಸಿ ಬಳಿಕ ನಿಧಾನವಾಗಿ ಆಲಸ್ಯಮಾಡದೆ ನನ್ನ ಸಮಗ್ರ ಆಕಾರದಲ್ಲಿ ಮನಸ್ಸನ್ನಿಡಬೇಕು.

ಏತಾವಾನ್ ಯೋಗ ಆದಿಷ್ಟೋ ಮಚ್ಛಿಷ್ಯೈಃ ಸನಕಾದಿಭಿಃ ।
ಸರ್ವತೋ ಮನ ಆಕೃಷ್ಯ ಮಯ್ಯದ್ಧಾಽಽವೇಶ್ಯತೇ ಯಥಾ ॥ ೧೪ ॥

ಮನಸ್ಸನ್ನು ಎಲ್ಲ ಬೇರೆ ವಿಷಯಗಳಿಂದ ಈಚೆಗೆ ಸೆಳೆದು ನನ್ನಲ್ಲಿ ಸ್ಥಿರವಾಗಿ ಹೇಗೆ ನಿಲ್ಲಿಸಲು ಸಾಧ್ಯವೆಂಬುದನ್ನು ನನ್ನ ಶಿಷ್ಯರಾದ ಸನಕಾದಿ ಮುನಿಗಳು ಹೇಳುತ್ತ ಈ ಮೋಕ್ಷೋಪಾಯವನ್ನು ಉಪದೇಶಿಸಿದ್ದಾರೆ.

ಯದಾ ತ್ವಂ ಸನಕಾದಿಭ್ಯೋ ಯೇನ ರೂಪೇಣ ಕೇಶವ ।
ಯೋಗಮಾದಿಷ್ಟವಾನೇತದ್ ರೂಪಮಿಚ್ಛಾಮಿ ವೇದಿತುಮ್ ॥ ೧೫ ॥

ಕೇಶವ, ನೀನು ಸನಕಾದಿಮುನಿಗಳಿಗೆ ಯಾವಾಗ ಯಾವ ರೂಪದಿಂದ ಮೋಕ್ಷೋಪಾಯವನ್ನು ಉಪದೇಶಿಸಿರುವೆ? ಆ ರೂಪವನ್ನು ತಿಳಿಯಲು ಬಯಸುತ್ತೇನೆ.

ಪುತ್ರಾ ಹಿರಣ್ಯಗರ್ಭಸ್ಯ ಮಾನಸಾಃ ಸನಕಾದಯಃ ।
ಪಪ್ರಚ್ಛುಃ ಪಿತರಂ ಸೂಕ್ಷ್ಮಾಂ ಯೋಗಸ್ಯೈಕಾಂತಿಕೀಂ ಗತಿಮ್ ॥ ೧೬ ॥

ಚತುರ್ಮುಖನ ಮಾನಸಪುತ್ರರಾದ ಸನಕಾದಿಗಳು ಒಮ್ಮೆ ತಂದೆಯಲ್ಲಿ ಸೂಕ್ಷ್ಮವಾದ ಗುರಿ ತಪ್ಪದಂತಹ ಯೋಗಸಾಧನೆಯ ಬಗ್ಗೆ ಕೇಳಿದರು.

ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಭೋ ।
ಕಥಮನ್ಯೋನ್ಯಸಂತ್ಯಾಗೋ ಮುಮುಕ್ಷೋಃ ಸಂತಿತೀರ್ಷೋಃ ॥ ೧೭ ॥

ಏವಂ ಪೃಷ್ಟೋ ಮಹಾನ್ದೇವಃ ಸ್ವಯಂಭೂರ್ಭೂತಭಾವನಃ ।
ಧ್ಯಾಯಮಾನಃ ಪ್ರಶ್ನಬೀಜಂ ನಾಭ್ಯಪದ್ಯತ ಕರ್ಮಧೀಃ ॥ ೧೮ ॥

ಸೃಷ್ಟಿಕರ್ತನಾದ ದೇವೋತ್ತಮನಾದ ಚತುರ್ಮುಖ ಸನಕಾದಿಗಳ ಈ ಪ್ರಶ್ನೆಯನ್ನು ಕೇಳಿದಾಗ ಪರಿಹಾರವನ್ನು ಮನಸಿನಲ್ಲಿ ವಿಚಾರಮಾಡಿ, 'ಕರ್ಮಧೀಃ' ವಿಷಯ ಮನಸ್ಸುಗಳ ಪರಸ್ಪರ ಸಂಬಂಧವಾಗುವುದಕ್ಕೆ ದುಷ್ಕರ್ಮ ಕಾರಣವೆಂದು ತಿಳಿದಿದ್ದರೂ ಕೂಡ, ಇನ್ನೂ ಒಂದು ಬೇರೆ ಕಾರಣವಿದೆ. 'ಕರ್ಮಧೀಃ' ಕರ್ಮನಾಮಕನಾದ ಭಗವಂತನೇ ಅದನ್ನು ಹೇಳಲು ಸಂಕಲ್ಪಿಸಿದ್ದಾನೆ, ತಾನು ಹೇಳಬಾರದು ಎಂದುಕೊಂಡು. 'ನಾಭ್ಯಪದ್ಯತ' ತಾನು ತಿಳಿದಿಲ್ಲವೆಂಬಂತೆ ತೋರಿಕೊಂಡ.

ಸ ಮಾಮಚಿಂತಯದ್ದೇವಃ ಪ್ರಶ್ನಪಾರವಿನಿಶ್ಚಯಮ್ ।
ತಸ್ಯಾಹಂ ಹಂಸರೂಪೇಣ ಸಕಾಶಮಗಮಂ ತದಾ ॥ ೧೯ ॥

ಬಳಿಕ ಪ್ರಶ್ನಪರಿಹಾರ ಮಾಡಲಿರುವ ನನ್ನನ್ನು ಧ್ಯಾನಿಸಿದ. ನಾನು ಹಂಸರೂಪದಿಂದ ಅವನ ಬಳಿಗೆ ಹೋದೆ.

ಇಲ್ಲಿ 'ಕರ್ಮಧೀಃ ಪ್ರಶ್ನಬೀಜಂ ನಾಭ್ಯಪದ್ಯತ' ಬ್ರಹ್ಮನಿಗೆ 'ಕರ್ಮಮಾತ್ರ ಗೊತ್ತು. ಅದರಿಂದ ಪ್ರಶ್ನೆಗೆ ಉತ್ತರ ಅವನಲ್ಲಿರಲಿಲ್ಲ' ಎಂದು ಮೇಲುನೋಟಕ್ಕೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರೆಲ್ಲರೂ ಹಾಗೇ ವ್ಯಾಖ್ಯಾನ ಮಾಡಿದ್ದಾರೆ. [1]'ಮಹಾನ್‌ದೇವಃ ಸ್ವಯಂಭೂಃ ಭೂತಭಾವನಃ ಧ್ಯಾಯಮಾನಃ' ದೇವೋತ್ತಮನಾಗಿದ್ದಾನೆ ಪರಮಾತ್ಮನ ಪುತ್ರನಾಗಿದ್ದಾನೆ ಸೃಷ್ಟಿಕರ್ತನಾಗಿದ್ದಾನೆ. ವಿಚಾರ ಮಾಡಿದ್ದಾನೆ. ಆದರೂ ಕರ್ಮವನ್ನು ಮಾತ್ರ ತಿಳಿದಿದ್ದಾನೆ. ಇದು ಹೇಗೆ ಕೂಡುತ್ತದೆ?

ಈ ಪ್ರಶ್ನೆ ಮಾಡಿಕೊಂಡು ಶ್ರೀಧರವ್ಯಾಖ್ಯಾನ ಹೇಳುತ್ತದೆ— 'ಕರ್ಮವಿಕ್ಷಿಪ್ತಧೀಃ' ಕರ್ಮವನ್ನೇ ಆಲೋಚಿಸಿ ಜಡವಾಗಿತ್ತು ಅವನ ಬುದ್ಧಿ ಎಂದು. ರಾಧಾರಮಣ ದಾಸ ವ್ಯಾಖ್ಯಾನ ಹೇಳುತ್ತದೆ— ಅವನಿಗೆ ಆತ್ಮಸ್ವರೂಪ ಜ್ಞಾನವಿರಲಿಲ್ಲ. ವೀರರಾಘವ ವ್ಯಾಖ್ಯಾನ ಹೇಳುತ್ತದೆ— ಕರ್ಮಬದ್ಧನಾದ್ದರಿಂದ ಅವನ ಜ್ಞಾನ ಸಂಕುಚಿತವಾಗಿತ್ತು. ಅವನು ಅಸರ್ವಜ್ಞನಾಗಿದ್ದ.

---

1. ಮಹಾನ್ ದೇವೋಽಪಿ ಸ್ವಯಂಭೂರಪಿ ಭೂತಾನಾಂ ಸ್ರಷ್ಟಾಽಪಿ ಧ್ಯಾಯಮಾನೋ ವಿಚಾರಯನ್ನಪಿ ಪ್ರಶ್ನಸ್ಯ ಬೀಜಂ ಯದಜ್ಞಾನಾದಯಂ ಪ್ರಶ್ನಸ್ತನ್ನಾವಿಂದತ್ ಯತಃ ಕರ್ಮವಿಕ್ಷಿಪ್ತಧೀಃ । -ಶ್ರೀಧರಃ

ಯದಜ್ಞಾನಾತ್ ಯಸ್ಯಾತ್ಮಸ್ವರೂಪಸ್ಯಾಜ್ಞಾನಾತ್ । -ರಾಧಾರಮಣದಾಸಃ

[2]ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ— ಸೃಷ್ಟಿಕಾರ್ಯದಲ್ಲೇ ವ್ಯಗ್ರನಾಗಿದ್ದರಿಂದ ಬೇರೇನೂ ತಿಳಿಯಲಿಲ್ಲ. [3]ಶುಕದೇವ ವ್ಯಾಖ್ಯಾನ ಹೇಳುತ್ತದೆ— ಕರ್ಮದ ಚಿಂತೆಯಲ್ಲಿ ವ್ಯಾಕುಲ ಚಿತ್ತನಾಗಿದ್ದ ಎಂದು. [4]ಜೀವಗೋಸ್ವಾಮಿ ವ್ಯಾಖ್ಯಾನ ಹೇಳುತ್ತದೆ— ಪರಮಾತ್ಮ ತತ್ಕಾಲದಲ್ಲಿ ತನ್ನ ಮಹಿಮೆಯನ್ನು ಪ್ರದರ್ಶನ ಮಾಡುವುದಕ್ಕಾಗಿ ಬ್ರಹ್ಮನ ಬುದ್ಧಿಸ್ತಂಭನ ಮಾಡಿದನೆಂದು.

ಈ ವ್ಯಾಖ್ಯಾನಕಾರರು ಹೇಳಿದ್ದು ಯಾವುದೂ ತಾವೇ ಎತ್ತಿಕೊಂಡ ಪ್ರಶ್ನೆಗೆ ಸರಿಯಾದ ಉತ್ತರವಲ್ಲ. ಯಾವುದೂ ನಿಜವಲ್ಲ. ನಿಜವಾದ ಸಂಗತಿ ಭಾವವಿವೇಕ ಎಂಬ ಗ್ರಂಥದಲ್ಲಿದೆ. ಅದರಿಂದ ಶ್ರೀಮದಾಚಾರ್ಯರು ವ್ಯಾಖ್ಯಾನ ಮಾಡುತ್ತಾರೆ—

ಪ್ರಶ್ನೋ ಬೀಜಮಸ್ಯೇತಿ ಪ್ರಶ್ನಬೀಜಂ ಪರಿಹಾರಂ ।
ಗುಣಾನಾಂ ಚೇತಸಶ್ಚ ಕರ್ಮ ಕಾರಣಮಿತಿ ಮನ್ವಾನಃ ಕರ್ಮಧೀಃ ।

ಪ್ರಶ್ನಬೀಜವೆಂದರೆ ಪ್ರಶ್ನೆಗೆ ಕಾರಣವಲ್ಲ. ಪ್ರಶ್ನೆ ಕೇಳುವುದು ಪರಿಹಾರ ಹೇಳಲು ಕಾರಣವಾಗಿರುತ್ತದೆ. ಅಂಥ ಪರಿಹಾರವನ್ನು ತಿಳಿಯದವನಂತಿದ್ದ ಬ್ರಹ್ಮದೇವ. ವಿಷಯಗಳಿಗೂ ಮನಸಿಗೂ ಸಂಬಂಧ ಉಂಟಾಗಲು ಕರ್ಮ ಕಾರಣವೆಂದು ತಿಳಿದಿರುವುದರಿಂದ ಬ್ರಹ್ಮ 'ಕರ್ಮಧೀ' ಎನಿಸಿದ್ದಾನೆ ಹೊರತು ಕರ್ಮಠನಾಗಿ ಕರ್ಮಚಿಂತೆಯಲ್ಲಿ ಮಗ್ನನಾದ್ದರಿಂದ ಅಲ್ಲ.

ಬ್ರಹ್ಮಾ ಪೃಷ್ಟಸ್ತು ಯೋಗೀಂದ್ರೈಃ ಸನಕಾದ್ಯೈರ್ಮನೋಗತೇಃ ।
ಕಾರಣಂ ವಿಷಯೇಷ್ವದ್ಧಾ ಕರ್ಮೇತಿ ಪ್ರತ್ಯಪದ್ಯತ ।
ಹೇತುರನ್ಯೋಽಪಿ ತತ್ರಾಸ್ತಿತ್ಯೇವಂ ಜಾನನ್ನಪಿ ಪ್ರಭುಃ ।
ವಿಶೇಷತೋ ಮನಸತ್ತ್ರ ನಾಧಾಜ್ಞಾನನ್ ಹರೇಃ ಪ್ರಿಯಂ ।
ಸ್ವಾತ್ಮನಾ ಪರಿಹಾರೋಕ್ತಿಸ್ತದಾ ಹ್ಯಾಸೀದ್ಧರೇಃ ಪ್ರಿಯಾ ।
ಅತಃ ಸ ತತ್ ಪ್ರಿಯಂ ಜಾನನ್ ನಾಕರೋತ್ ತದ್ವಿಚಾರಣಂ ।
ತಮೇವಾಚಿಂತಯದ್ ದೇವಃ ಪ್ರಶ್ನನಿರ್ಣಯಕಾರಣಾತ್ ।

---

2. ಕರ್ಮಧೀಃ ಕರ್ಮಣಾ ಸಂಕುಚಿತಜ್ಞಾನಃ ಅಸರ್ವಜ್ಞ ಇತ್ಯರ್ಥಃ । -ವೀರರಾಘವಃ
ಕರ್ಮಧೀಃ ಸ್ವೀಯ ಸೃಷ್ಟಿಮಾತ್ರಕರ್ಮಾಸಕ್ತಬುದ್ಧಿಃ । -ವಿಶ್ವನಾಥ
3. ಕರ್ಮಧೀಃ ಕರ್ಮಸು ಧೀರ್ಯಸ್ಯ ತಥಾಭೂತತ್ವಾತ್ ಚಿಂತಾವ್ಯಾಕುಲಚಿತ್ತ ಏವಾಸೀದಿತ್ಯರ್ಥಃ । -ಶುಕದೇವಃ
4. ಬ್ರಹ್ಮಣಃ ಕರ್ಮಧೀತ್ವಂ ಸಂಪ್ರತಿ ಸ್ವಮಹಿಮವ್ಯಂಜನಾಯ ಶ್ರೀಭಗವದಿಚ್ಛಯೈವ ಜ್ಞೇಯಂ । ಹಂಸೋಪನಿಷದಿ ವಾಯ್ವಾದಿಶಕ್ತಿಸ್ತಂಭನೇತಿಹಾಸವತ್ । -ಜೀವಗೋಸ್ವಾಮೀ

ಯೋಗೀಂದ್ರರಾದ ಸನಕಾದಿಗಳು ಕೇಳಿದಾಗ ಬ್ರಹ್ಮದೇವರು ವಿಷಯಗಳಲ್ಲಿ ಮನಸು ಮನಸಿನಲ್ಲಿ ವಿಷಯಗಳು ಪ್ರವೇಶ ಮಾಡುವುದಕ್ಕೆ ಅನಾದಿಕರ್ಮ ಕಾರಣವೆಂದು ಚೆನ್ನಾಗಿ ತಿಳಿದಿದ್ದರು. ವಿಷಯಪದಾರ್ಥಗಳ ಸಂಪರ್ಕವೂ ಇನ್ನೊಂದು ಹೇತುವೆಂದೂ ಅವರು ಸಾಮಾನ್ಯವಾಗಿ ತಿಳಿದಿದ್ದರು. ಆದರೂ ವಿಶೇಷವಾಗಿ ತಿಳಿಯಲು ಆಲೋಚನೆ ಮಾಡಲಿಲ್ಲ. (ಆಲೋಚನೆ ಮಾಡಿದರೆ ಎಲ್ಲವನ್ನೂ ತಿಳಿಯಬಲ್ಲ ಸರ್ವಜ್ಞರು ಬ್ರಹ್ಮದೇವರು.) ಆದರೆ ಹರಿಗೆ ಏನು ಪ್ರಿಯವೆಂದು ತಿಳಿದವರಾದ್ದರಿಂದ ಆಲೋಚನೆ ಮಾಡಲಿಲ್ಲ. ಹಂಸನಾಮಕ ಅವತಾರರೂಪದಿಂದಲೇ ತಾನು ಸನಕಾದಿಗಳ ಪ್ರಶ್ನೆಗೆ ಪರಿಹಾರ ಹೇಳುವುದು ಹರಿಗೆ ಪ್ರಿಯವಾಗಿತ್ತು. ಅದರಿಂದ ಹರಿಗೆ ಪ್ರಿಯವೇನೆಂಬುದನ್ನು ತಿಳಿದಿದ್ದ ಬ್ರಹ್ಮದೇವರು ಪ್ರಶ್ನಪರಿಹಾರವನ್ನು ಆಲೋಚನೆ ಮಾಡಲಿಲ್ಲ. ಕರ್ಮನಾಮಕನಾದ ಆ ಹರಿಯನ್ನೇ ಪ್ರಶ್ನಪರಿಹಾರಕ್ಕಾಗಿ ಆಲೋಚಿಸಿದರು.

(‘ಧ್ಯಾಯಮಾನಃ’ ಎಂದು ಭಾಗವತ ಹೇಳಿದ್ದು ಪ್ರಶ್ನ ಪರಿಹಾರವನ್ನು ಬ್ರಹ್ಮನು ಆಲೋಚನೆ ಮಾಡಿದನೆಂಬ ಅರ್ಥದಲ್ಲಿ ಅಲ್ಲ. ಪ್ರಶ್ನ ಪರಿಹಾರವನ್ನು ಹರಿಯೇ ಮಾಡಲಿ ಎಂದು ಹರಿಯನ್ನೇ ಕುರಿತು ಆಲೋಚನೆ ಮಾಡಿದನೆಂದರ್ಥ.)

ಭ್ರಮತೀವ ಮನಃ ಕ್ವಾಪಿ ಬ್ರಹ್ಮಣೋ ವಿಷ್ಣುಮಾಯಯಾ ।
ಸರ್ವಜ್ಞಸ್ಯಾಪಿ ತತ್ರಾತ್ಮಾ ವಕ್ತುಮಿಚ್ಛೇಜ್ಜನಾರ್ದನಃ ।
ತಜ್ಜ್ಞಾತ್ವಾ ಚಿಂತಿತಂ ತಸ್ಯ ಚಿಂತಯತ್ಯಮುಮೇವ ತು ।
ನ ಸ್ವಯಂ ಚಿಂತಯತ್ಯರ್ಥಂ ಸ ಹಿ ತದ್ಭಾವವಿತ್ ಸದಾ ।
ಅನ್ಯೇ ತ್ವಜ್ಞಾನಸಂಯುಕ್ತಾ ಮೋಹಮೀಯುರ್ಯಥಾಕ್ರಮಂ ।
ತಸ್ಯ ಮಧ್ಯಂದಿನೇ ಸೂರ್ಯೇ ಕ್ಷೋಭವತ್ ಕ್ಷೋಭಮಾತ್ರಕಂ ।
ನೈವಾಜ್ಞಾನಂ ಯಥಾ ಸೂರ್ಯೇ ತಮೋ ನಾಸ್ತಿ ಕದಾಚನ ॥
ಇತಿ ಭಾವವಿವೇಕೇ ॥

ಸನಕಾದಿಗಳು ಬ್ರಹ್ಮನಲ್ಲಿ ಮಾಡಿದ ಪ್ರಶ್ನೆಗೆ ಉತ್ತರ ಹೇಳಲು ಪರಮಾತ್ಮ ಜನಾರ್ದನ ತಾನೇ ಬಯಸಿದ್ದರಿಂದ ಅವನ ಇಚ್ಛೆಯಿಂದ ಬ್ರಹ್ಮನ ಮನಸ್ಸು ಪ್ರಶ್ನಪರಿಹಾರದ ವಿಷಯವನ್ನು ಬಿಟ್ಟು ಪರಮಾತ್ಮನ ಇಚ್ಛೆಯ ಬಗ್ಗೆಯೇ ಸ್ವಲ್ಪ ಮಾತ್ರ ಆಲೋಚನೆ ಮಾಡಿತು. ಆಗ ಪರಮಾತ್ಮನ ಸಂಕಲ್ಪವನ್ನು ತಿಳಿದ ಬಳಿಕ ಬ್ರಹ್ಮದೇವರು ಅವನನ್ನು ಕುರಿತೇ ಆಲೋಚನೆ ಮಾಡುತ್ತಾರೆ. ಪ್ರಶ್ನಪರಿಹಾರದ ಕುರಿತು ಆಲೋಚಿಸುವುದಿಲ್ಲ. ಏಕೆಂದರೆ ಹರಿಯ ಸಂಕಲ್ಪವನ್ನು ಅವರು ಸದಾ ತಿಳಿದಿರುತ್ತಾರೆ. ಬೇರೆ ರುದ್ರಾದಿ ದೇವತೆಗಳು ಅಜ್ಞಾನ ಉಳ್ಳವರಾದ್ದರಿಂದ

ಯೋಗ್ಯತಾಕ್ರಮಾನುಸಾರ ಮೋಹಕ್ಕೊಳಗಾಗುತ್ತಾರೆ. ಸೂರ್ಯಬಿಂಬದಲ್ಲಿ ತಮಸ್ಸು ಎಂದೂ ಇಲ್ಲ. ಹಾಗೇ ಬ್ರಹ್ಮದೇವರಲ್ಲಿ ಅಜ್ಞಾನ ಎಂದೂ ಇಲ್ಲ. ಮಧ್ಯಾಹ್ನದ ಸೂರ್ಯನಲ್ಲಿ ನೋಡುವವರ ಕಣ್ಣಿನ ಅಸಾಮರ್ಥ್ಯದಿಂದ ಸಂಚಲನೆ ಕಾಣುತ್ತದೆ. ಹಾಗೇ ಬ್ರಹ್ಮದೇವರಲ್ಲಿ ಸ್ವಲ್ಪ ಮನಸ್ಸಿನ ವ್ಯಗ್ರತೆ ನೋಡುವವರ ಅಸಾಮರ್ಥ್ಯದಿಂದ ತೋರುತ್ತದೆ ಎಂದು ಭಾವವಿವೇಕ ಗ್ರಂಥದಲ್ಲಿದೆ.

❖❖❖

ಹಂಸನಾಮಕ ಪರಮಾತ್ಮ ಪ್ರಾದುರ್ಭವಿಸಿದಾಗ ಬ್ರಹ್ಮದೇವರು ವಂದಿಸಿದರು. ಬಳಿಯಲ್ಲಿದ್ದ ಸನಕಾದಿಗಳು ಅವನನ್ನು ನೀನಾರೆಂದು ಕೇಳಿದರು. ಈ ಪ್ರಶ್ನೆ ಮಾಡಿದ್ದೇ ಸರಿಯಲ್ಲವೆಂದು ಪರಮಾತ್ಮ ನುಡಿಯುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಹೇಳುತ್ತಾನೆ.

ವಸ್ತುನೋ ಯದ್ಯನಾನಾತ್ವಮಾತ್ಮನಃ ಪ್ರಶ್ನ ಈದೃಶಃ ।
ಕಥಂ ಘಟೇತ ವೋ ವಿಪ್ರಾ ವಕ್ತುಂ ವಾಽನೇಕ ಆಶ್ರಯಃ ॥ ೨೨ ॥

ಮುನಿಗಳೆ, ಬ್ರಹ್ಮನಿಗೂ ಪೂಜ್ಯವಾದ ಸರ್ವಶಕ್ತ ವಸ್ತುವಾದ ಪರಮಾತ್ಮತತ್ತ್ವ ಒಂದೇ ಎಂದು ನೀವು ತಿಳಿದಿರುವುದಾದರೆ ಅದು ನಾನೇ ಎಂಬುದು ಇದೀಗ ನಿಮಗೆ ತಿಳಿದಿರಬೇಕು. ತಿರುಗಿ ಪ್ರಶ್ನೆ ಮಾಡುವುದು ಹೇಗೆ ಕೂಡುತ್ತದೆ? ಪರಮಾತ್ಮರು ಅನೇಕರು ಎಂದು ಯಾರೂ ಒಪ್ಪಿಲ್ಲ. ಪರಮಾತ್ಮ ಅದ್ವಿತಿಯ. ಅದರಿಂದ 'ನೀನು ಯಾವ ಪರಮಾತ್ಮ?' ಎಂದು ಕೇಳುವ ಪ್ರಸಕ್ತಿ ಇಲ್ಲ.

[1]'ನೀವು ಆತ್ಮನ ಬಗ್ಗೆ ಕೇಳುತ್ತಿರುವಿರೋ? ದೇಹದ ಬಗ್ಗೆ ಕೇಳುತ್ತಿರುವಿರೋ? ಆತ್ಮ ಒಂದೇ. ಬಹಳ ಇರುತ್ತಿದ್ದರೆ 'ಯಾವ ಆತ್ಮ ನೀನೆಂ'ದು ಕೇಳಬಹುದಾಗಿತ್ತು. ಆತ್ಮನಲ್ಲಿ ಜಾತಿ ಗುಣ ಮುಂತಾದುವು ಯಾವುದೂ ಇಲ್ಲ. ಯಾವ ಜಾತಿಯವನು ಯಾವ ಗುಣದವನೆಂದು ನಾನು ಉತ್ತರ ಕೊಡುವುದೂ ಕೂಡುವುದಿಲ್ಲ' ಎಂದು ಶ್ರೀಧರವ್ಯಾಖ್ಯಾನ ಹಂಸನ ಅಭಿಪ್ರಾಯವನ್ನು ಹೇಳುತ್ತಿದೆ.

---

1. ಕಿಮಾತ್ಮನೋಽಯಂ ಪ್ರಶ್ನ ಸ್ತದುಪಾಧೇರ್ಭೂತಸಂಘಸ್ಯ ವಾ? ಯದ್ಯಾತ್ಮನಸ್ತರ್ಹಿ ತಸ್ಯ ವಸ್ತುನಃ ಪರಮಾರ್ಥರೂಪಸ್ಯಾನಾನಾತ್ವೇ ಸತಿ ಹೇ ವಿಪ್ರಾ ವೋ ಯುಷ್ಮಾಭಿಃಕೃತಃ ಪ್ರಶ್ನ ಈದೃಶೋ ಬಹುಷು ನಿರ್ಧಾರಣರೂಪಃ ಕಥಂ ಘಟತೇ? ವಕ್ತುರುತ್ತರದಾತುರ್ವಾ ಮೇ ಮಮ ಕ ಆಶ್ರಯಃ? ಅವಿಶೇಷ ಆತ್ಮನಿ ಕಂ ಜಾತಿಗುಣಾದಿ ವಿಶೇಷಮಾಶ್ರಿತ್ಯೋತ್ತರಂ ವಕ್ಷ್ಯಾಮೀತ್ಯರ್ಥಃ । -ಶ್ರೀಧರಃ

ಅದ್ವೈತದಲ್ಲಿ ಆತ್ಮ ಒಂದೇ. ಅದರಲ್ಲಿ ಯಾವ ಗುಣಧರ್ಮವೂ ಇಲ್ಲ, ಆಕಾರವಿಲ್ಲ, ಮೊಲದ ಕೊಂಬಿನಂತೆ. ಅದಕ್ಕೆ ಸತ್ಯತ್ವವಿಲ್ಲ. ಆದರೆ ಅದು ಸತ್ಯ ಎನ್ನುತ್ತಾರೆ. ಹಾಗಾದರೆ ಲೋಕವ್ಯವಹಾರ ಹೇಗೆ ಎಂದರೆ ಪಾರಮಾರ್ಥಿಕವಾಗಿ ಆತ್ಮ ಒಂದೇ ಆದರೂ ಅವಿದ್ಯೆಯಿಂದ ಅದು ಅನೇಕವಾಗಿ ಕಾಣುತ್ತದೆ. ವ್ಯವಹಾರಗಳು ಕೂಡುತ್ತವೆ ಎಂದು ಅವರು ಒಪ್ಪುತ್ತಾರೆ. ಆದರೂ ಹಂಸ ಅದ್ವೈತಿಯಾಗಿ ಸನಕಾದಿಗಳ ಈ ಪ್ರಶ್ನವ್ಯವಹಾರವನ್ನು ತಪ್ಪೆನ್ನುತ್ತಾನೆ! ವ್ಯವಹಾರದಲ್ಲಿ ಅನೇಕತ್ವವಿರುವುದರಿಂದ ಸನಕಾದಿಗಳು ಏಕೆ ಪ್ರಶ್ನೆ ಮಾಡಬಾರದು? ಅವರು ಸಂಸಾರಿಜೀವರಾದ್ದರಿಂದ ವ್ಯಾವಹಾರಿಕ ಅನೇಕತ್ವವನ್ನು ಆಧರಿಸಿ ವ್ಯವಹಾರ ಮಾಡುವುದು ಸಹಜ ತಾನೆ?

ಆದರೆ ಹಂಸ ಸಂಸಾರಿಯಲ್ಲ. ಆದರೂ 'ಮುನಿಗಳೇ, ನಿಮ್ಮ ಪ್ರಶ್ನೆ ಕೂಡುವುದಿಲ್ಲ, ಅಂಥ ಪ್ರಶ್ನೆ ಏಕೆ ಮಾಡುವಿರಿ?' ಎಂದು ಪ್ರಶ್ನೆ ಮಾಡುತ್ತಾನೆ! 'ನೀವು' ಎಂದು 'ಮುನಿಗಳು' ಎಂದು ಅನೇಕತ್ವವನ್ನು ಆಧರಿಸಿ ತಾನು ವ್ಯವಹಾರ ಮಾಡುತ್ತಾನೆ, ಸಂಸಾರಿಗಳಾದ ಮುನಿಗಳು ಮಾಡಬಾರದೆನ್ನುತ್ತಾನೆ. ಇದು ಸ್ವವ್ಯಾಹತ, 'ನಾನು ಮೂಕ' ಎಂದು ಸ್ಪಷ್ಟ ಹೇಳುವಂತೆಯೆ.

ಆತ್ಮನಲ್ಲಿ ಗುಣಧರ್ಮಗಳಾಗಲಿ ಆಕಾರಗಳಾಗಲಿ ಇಲ್ಲ ಎಂದರೂ ಅವಿದ್ಯೆಯಿಂದ ಎಲ್ಲವೂ ಇದೆ. ಅವಿದ್ಯೆಯಿಂದ ಮುನಿಗಳು ವ್ಯವಹಾರ ಮಾಡುವಾಗ ಹಂಸ ಹೇಳಬೇಕಾಗಿತ್ತು, ನಾನು ಪರಮಾತ್ಮ, ನನ್ನ ಹೆಸರು ಹಂಸ ಎಂದು ಮುಂತಾಗಿ. ಹಾಗೆ ಹೇಳದೆ, ನೀನು ಯಾರೆಂದು ಪ್ರಶ್ನೆ ಮಾಡಿದ್ದೇ ತಪ್ಪೆನ್ನಬಹುದೆ? ತಪ್ಪೆನ್ನುವುದೇ ತಪ್ಪು. 'ಹಂಸನು ಪರಮಾತ್ಮ' ಎಂದು ತಿಳಿದಿದ್ದರೆ ಮುನಿಗಳು ಅವನನ್ನು ನೀನಾರೆಂದು ಪ್ರಶ್ನಿಸುತ್ತಲೇ ಇರಲಿಲ್ಲ, ಅವರು ತಿಳಿದಿರಲಿಲ್ಲ, ಪ್ರಶ್ನೆ ಮಾಡಿದ್ದಾರೆ, ತಪ್ಪೇನಿದೆ?

[2]'ಜೀವ-ಜಡ ಪದಾರ್ಥವೆಲ್ಲವೂ ಪರಮಾತ್ಮನ ಶರೀರ. ಅವನ ಅಧೀನ. ಸ್ವತಂತ್ರವಾಗಿ ಯಾರೂ ಇಲ್ಲ, ಯಾವುದೂ ಇಲ್ಲ, ಇದು ನಿಮಗೆ ತಿಳಿದಿದ್ದರೆ, ಮುನಿಗಳೆ, ಪರಮಾತ್ಮನಾದ ನನ್ನನ್ನು 'ನೀನು ಯಾರು' ಎಂದು ಹೇಗೆ ಪ್ರಶ್ನಿಸುವಿರಿ?

---

2. ತತ್ರ ತಾವತ್ ಸರ್ವಾಂತರಾತ್ಮಾನಮೀಶ್ವರಂ ಜಾನತಾಂ ಜ್ಞಾನಿನಾಂ ಕೇವಲಮಚಿನ್ಮಾತ್ರಮೇವ ಪಶ್ಯತಾಮಜ್ಞಾನಿನಾಂ ಚ ನೈವಂವಿಧಃ ಪ್ರಶ್ನೋ ಘಟತೇ । ವಸ್ತುನಶ್ಚಿದಚಿದ್‌ವಸ್ತುನಃ ಅನಾನಾತ್ವಂ ಮದಪೃಥಕ್‌ಸಿದ್ಧತ್ವಂ ತೇನಾತ್ಮಾಯತ್ತ ಸತ್ತಾಸ್ಥಿತಿಪ್ರವೃತ್ತಿತ್ವಂ ಶರೀರತ್ವಂ ಚಾಭಿಪ್ರೇತಂ ಯುಷ್ಮಾಭಿರ್ಯದಿ ಜ್ಞಾತಮಿತ್ಯರ್ಥಃ ತರ್ಹ್ಯಾತ್ಮನೋ ಮಮ ಮದ್ವಿಷಯಕ ಇತ್ಯರ್ಥಃ ಈದೃಶಃ ಕೋ ಭವಾನಿತ್ಯೇವಂವಿಧೋ ವೋ ಯುಷ್ಮಾಕಂ ಪ್ರಶ್ನಃ ಕಥಂ ಘಟೇತ? ಯದಿ ಕಸ್ಯಚಿದಪಿ ಚಿದಚಿದ್‌ವಸ್ತುನೋ ಮತ್‌ಪೃಥಕ್‌ತ್ವಂ ತದೈವ ಪ್ರಶ್ನಃ ಸ್ಯಾತ್। ಪ್ರಷ್ಟಾರೋ

ಸ್ವತಂತ್ರವಾಗಿ ಬೇರೆ ವ್ಯಕ್ತಿಗಳೂ ಇರುತ್ತಿದ್ದರೆ ನೀನಾರೆಂದು ಕೇಳಬಹುದಿತ್ತು. ಪ್ರಶ್ನೆ ಮಾಡುತ್ತಿರುವ ನೀವೂ ನನ್ನ ಶರೀರಗಳೆ ಎಂದಮೇಲೆ ನೀವು ಪ್ರಶ್ನೆ ಮಾಡಲೆ ಇಲ್ಲ. ಪ್ರಶ್ನೆ ಮಾಡಿದವನು ನಾನೆ. ಏಕೆಂದರೆ ಶರೀರ ಏನೂ ಮಾಡುವುದಿಲ್ಲ. ಶರೀರದಿಂದ ಆತ್ಮನು ತಾನೆ ಎಲ್ಲ ಕೆಲಸ ಮಾಡುತ್ತಾನೆ? ಹೀಗಾಗಿ ಪ್ರಶ್ನೆ ಮಾಡಿದವನು ನಾನೆ, ಉತ್ತರ ಹೇಳಬೇಕಾದವನೂ ನಾನೆ. ಹೇಳುವ ಮಾತುಗಳೂ ನಾನೆ. ಇದು ಹೇಗೆ ಕೂಡುತ್ತದೆ? ಅದರಿಂದ ನೀವು ಪ್ರಶ್ನೆ ಮಾಡಿದ್ದು ಸರಿಯಲ್ಲ. ನಾನು ಉತ್ತರ ಕೊಡುವುದು ಸರಿಯಲ್ಲ' ಎಂದು ಹಂಸನ ಮಾತಿಗೆ ವಿವರಣೆ ವೀರರಾಘವ ವ್ಯಾಖ್ಯಾನದಲ್ಲಿದೆ.

ಈ ವಿವರಣೆಯೂ ಅಸಂಗತವೆ. ಮುನಿಗಳು ಹಂಸನ ಶರೀರಗಳೇ ಆಗಿರುವುದರಿಂದ ಅವರು ಪ್ರಶ್ನೆ ಮಾಡಲೇ ಇಲ್ಲ. ಹಂಸನೆ ಪ್ರಶ್ನೆ ಮಾಡಿದ್ದಾನೆ ಎಂದು ಹಂಸನೆ ಹೇಳುತ್ತಾನೆ, ಆ ಪ್ರಶ್ನೆ ಸರಿಯಲ್ಲ ಎಂದೂ ಹಂಸನೇ ಹೇಳುತ್ತಾನೆ! ಸರಿಯಲ್ಲವಾದರೆ ನೀನಾರೆಂದು ನೀನೆ ಏಕೆ ಪ್ರಶ್ನೆ ಮಾಡಿದೆ ಎಂದು ಮುನಿಗಳು ಪ್ರಶ್ನೆ ಮಾಡಬಹುದು.

'ಮುನಿಗಳು ಶರೀರಗಳು, ಶರೀರಗಳು ಪ್ರಶ್ನೆ ಮಾಡುವುದಿಲ್ಲ' ಎಂದು ಹಂಸನು ಹೇಳುವುದೂ ಅಸಂಗತ. ಜಡಶರೀರ ಏನೂ ಮಾಡುವುದಿಲ್ಲ, ಜಡಶರೀರದಿಂದ ಆತ್ಮನೇ ಏನಾದರೂ ಮಾಡುತ್ತಾನೆ ಎಂದ ಮಾತ್ರಕ್ಕೆ ಚೇತನಶರೀರವೂ ಹಾಗೇ ಸುಮ್ಮನಿರಬೇಕೆ? ಹಾಗಿದ್ದರೆ ಜಡಚೇತನಗಳಿಗೆ ಏನು ವ್ಯತ್ಯಾಸವಿದೆ?

ಹಂಸನನ್ನು ಪರಮಾತ್ಮನೆಂದು ಮುನಿಗಳು ತಿಳಿದಿರಲಿಲ್ಲ. ತಿಳಿದಿದ್ದರೆ ನೀನಾರೆಂದು ಪ್ರಶ್ನೆ ಮಾಡುತ್ತಿರಲಿಲ್ಲ. ಅದರಿಂದ ಹಂಸನು 'ನಾನು ಪರಮಾತ್ಮ' ಎನ್ನಬೇಕಿತ್ತು. ಹಾಗೆ ಹೇಳದೆ 'ನಿಮ್ಮ ಪ್ರಶ್ನೆ ಸರಿಯಲ್ಲ, ತಪ್ಪು' ಎನ್ನುವುದು ತಪ್ಪಲ್ಲವೆ?

ಚೇತನರೆಲ್ಲರೂ ಪರಮಾತ್ಮನ ಶರೀರಗಳಾಗಿರುವುದರಿಂದ ಯಾರೂ ಯಾವ ಕಾರ್ಯವನ್ನೂ ಮಾಡುವುದಿಲ್ಲ, ಪರಮಾತ್ಮನೇ ಮಾಡುತ್ತಾನೆ ಎನ್ನುವುದಾದರೆ

ಭವಂತೋಽಪ್ಯಸ್ಮದವಿನಾಭೂತಾಃ ಮಮ ಸರ್ವಜೀವಶರೀರಕತ್ವಾತ್ ತದಾ ಯುಷ್ಮಚ್ಛರೀರಕೋಽಹಮೇವ ಪೃಷ್ಟವಾನಸ್ಮಿ। ಶರೀರ ಮಾತ್ರಸ್ಯ ವಕ್ತೃತ್ವಾದರ್ಶನಾತ್। ತತಶ್ಚ ಪ್ರತಿವಕ್ತೃತಯಾಽಭಿಮತೋಽಹಮೇವ ಪ್ರಷ್ಟೇತ್ಯನುಪಪನ್ನಮಿತಿ । ಕಿಂಚ ವಕ್ತುರ್ಮೇ ಕ ಆಶ್ರಯಃ ವಿಷಯಃ? ವಕ್ತವ್ಯಸ್ಯ ಸರ್ವಸ್ಯ ಮದಾತ್ಮಕತ್ವಾತ್ ಅಹಮೇವ ವಕ್ತವ್ಯಃ ಸ್ಯಾಂ। ಅತಃ ಪ್ರಷ್ಟಾ ಪ್ರತಿವಕ್ತಾ ಚ ವಕ್ತವ್ಯಶ್ಚೈಕ ಏವೇತಿ ಪ್ರಶ್ನಪ್ರತಿವಚನೇ ಅನುಪಪನ್ನೇ ಇತ್ಯರ್ಥಃ।

-ವೀರರಾಘವಃ

ಪರಮಾತ್ಮನೇ ಕರ್ಮಫಲಗಳಿಗೆ, ಭಾಗಿಯಾಗಬೇಕಾಗುತ್ತದೆ. ಹಾಗಾದಲ್ಲಿ ಪರಮಾತ್ಮ ಪರಮಾತ್ಮನೇ ಅಲ್ಲ ಎಂದಾಗುತ್ತದೆ.

[3]'ಆತ್ಮರೆಲ್ಲರೂ ಜ್ಞಾನಸ್ವರೂಪರು ಕೇದಗೆ ಹೂವಿನ ಪರಾಗ ಧೂಳಿನ ಕಣಗಳಂತೆ ಒಂದೇ ರೀತಿ ಇರುವುದರಿಂದ ಪ್ರತ್ಯೇಕವಾಗಿ ತಿಳಿಯುವುದು ಶಕ್ಯವಿಲ್ಲ. ಅದರಿಂದ ಅನೇಕ ಆತ್ಮರ ಮಧ್ಯದಲ್ಲಿ ಒಬ್ಬನನ್ನು ಗುರುತಿಸಲಾಗುವುದಿಲ್ಲ. ನೀನಾರೆಂದು ಪ್ರಶ್ನೆ ಮಾಡುವುದಾಗಲಿ ಉತ್ತರ ಹೇಳುವುದಾಗಲಿ ಕೂಡುವುದಿಲ್ಲ'. ಎಂದು ಶುಕದೇವ ವ್ಯಾಖ್ಯಾನದಲ್ಲಿ ವಿವರಣೆ ಇದೆ.

ಆದರೆ ಆತ್ಮರು ಸ್ವತಃ ಎಲ್ಲರೂ ಒಂದೇರೀತಿ ಇದ್ದರೂ ಅವರನ್ನು ಗುರುತಿಸಬಹುದು. ಅವರು ಮಾಡುವ ವ್ಯವಹಾರಗಳು ಕರ್ಮಗಳು ಅವುಗಳ ಫಲಗಳು ಮುಂತಾದುವು ಬೇರೆಬೇರೆ ರೀತಿಯವುಗಳಿರುವುದರಿಂದ ಅವುಗಳ ಮೂಲಕವೂ ಅವರನ್ನು ಗುರುತಿಸಲು ಶಕ್ಯವಿದೆ. ಇವರು ಮುನಿಗಳು, ಇವರು ರಾಜರು ಎಂದು ಮುಂತಾಗಿ ಉತ್ತರ ಹೇಳಲು ಸಾಧ್ಯವಿದೆ. ಇಲ್ಲದಿದ್ದರೆ ಲೋಕವ್ಯವಹಾರ ನಡೆಯುವುದಾದರೂ ಹೇಗೆ ?

ವಸ್ತುತಃ ಸನಕಾದಿಗಳು ಪ್ರಶ್ನೆ ಮಾಡಿದ್ದು ಏಕೆ ತಪ್ಪು ಎನ್ನುವುದು, ಇಪ್ಪತ್ತನೇ ಶ್ಲೋಕದಲ್ಲಿ 'ಕೃತಪಾದಾಭಿವಂದನಂ ಬ್ರಹ್ಮಾಣಮಗ್ರತಃ ಕೃತ್ವಾ' ಬ್ರಹ್ಮದೇವರು ಹಂಸನಿಗೆ ನಮಸ್ಕಾರ ಮಾಡಿದರು. ಅದನ್ನು 'ದೃಷ್ಟ್ವಾ' ನೋಡಿಯೂ ಸನಕಾದಿಗಳು ಪ್ರಶ್ನೆ ಮಾಡಿದರು! ಎಂದು ಭಾಗವತವೇ ಹೇಳಿದ್ದರಿಂದ, ಸೂಚಿತವಾಗಿದೆ. ಬ್ರಹ್ಮದೇವರು ಪರಮಾತ್ಮನನ್ನು ಹೊರತು ಬೇರೆ ರುದ್ರಾದಿ ದೇವತೆಗಳನ್ನು ಯಾರನ್ನೂ ನಮಸ್ಕರಿಸುವವರಲ್ಲ. ಅದರಿಂದಲೇ ಹಂಸನು ಪರಮಾತ್ಮ ಎನ್ನುವುದು ಸುಲಭವಾಗಿ ತಿಳಿಯಲು ಶಕ್ಯವಿತ್ತು. ತಿಳಿದರೂ ಕೂಡ. ಆದರೂ ಪ್ರಶ್ನೆಮಾಡಿದರು. ತಿಳಿದ ವಿಷಯದ ಬಗ್ಗೆ ಪ್ರಶ್ನೆ ಮಾಡುವುದು ತಪ್ಪು. ಅದರಿಂದ ಹಂಸನು ತಾನು ಯಾರೆಂಬುದನ್ನು ಹೇಳದೆ 'ನೀವು ನನ್ನ ಮುಂದೆ ಈ ಪ್ರಶ್ನೆ ಮಾಡಬಾರದಿತ್ತು, ಬ್ರಹ್ಮನಲ್ಲಿ ಮಾಡಿದ ಪ್ರಶ್ನೆಯನ್ನೇ ನನ್ನಲ್ಲಿ ಮಾಡಬೇಕಾಗಿತ್ತು' ಎನ್ನುತ್ತಾನೆ.

---

3. ಪ್ರಶ್ನಃ ಕಿಂ ಚೇತನಾತ್ಮವಿಷಯಃ ಪ್ರಕೃತಿಕಾರ್ಯಭೂತ ದೇವತಿರ್ಯಙ್‌ಮನುಷ್ಯರೂಪ ಭೌತಿಕದೇಹಾತ್ಮವಿಷಯೋ ವೇತಿ ವಿಕಲ್ಪ ದ್ವಯೇನ ಪ್ರತಿಪಾದಯತಿ ಯದೀತಿ। ಯದ್ಯಾತ್ಮನ ಶ್ಚೇತನಸ್ಯ ತರ್ಹಿ ವಸ್ತುನಃ ಸದೈಕರಸಸ್ಯ ಜ್ಞಾನಸ್ವರೂಪತ್ವೇನಾವಿಕಾರತ್ವೇನ ಚಾನಾನಾತ್ವೇ ಏಕಜಾತೀಯತ್ವೇ ಸತಿ ಕಥಂ ಘಟೇತ ಯುಕ್ತಃ ಸ್ಯಾತ್ ವಕ್ತುರುತ್ತರ ದಾತುರ್ವಾ ಮೇ ಮಮ ಕ ಆಶ್ರಯಃ ಕೇತಕೀಪುಷ್ಪರೇಣೂನಾಮಿವ ವಿಶೇಷಾಭಾವಾತ್ ಕಂ ವಿಶೇಷಮಾಶ್ರಿತ್ಯೋತ್ತರಂ ವಕ್ಷ್ಯಾಮೀತಿ ಭಾವಃ। -ಶುಕದೇವಃ

ಬ್ರಹ್ಮನಿಗೂ ವಂದ್ಯನಾದ ತಾನು ಪರಮಾತ್ಮನ ಅವತಾರವೇ ಎಂದು ಹಂಸನು ತಾನೇ ಲೋಕಕ್ಕೆ ತಿಳಿಸಲಿ ಎಂಬ ಉದ್ದೇಶದಿಂದ ಸನಕಾದಿಗಳು ತಿಳಿದೂ ಪ್ರಶ್ನೆ ಮಾಡಿದ್ದರು.

ಆತ್ಮನೋ ವಸ್ತುನಃ ಪರಮಾತ್ಮವಸ್ತುನಃ ಏಕತ್ವಂ ಯದ್ಯಂಗೀಕೃತಂ ತದಾ ಕಥಂ ಪ್ರಶ್ನೋ ಘಟೇತ? ನ ಹಿ ಪರಮಾತ್ಮನೋಽನ್ಯೋ ಬ್ರಹ್ಮಣಾ ಪೂಜ್ಯಃ ಸ್ಯಾದಭಿವಂದನಾದಿನಾ । ತಸ್ಮಾದ್ ಬ್ರಹ್ಮಣೋ ವಂದ್ಯಃ ಪರಮಾತ್ಮೈವ । ಸ ಚೈಕ ಏವ । ಅತಃ ಕಥಂ ಪ್ರಶ್ನಃ ಪರಿಹಾರೋ ವಾ?

'ಆತ್ಮನಃ ವಸ್ತುನಃ ಏಕತ್ವಂ' ಅಂದರೆ ಪರಮಾತ್ಮನೆಂಬ ವಸ್ತು ಏಕಮಾತ್ರ ಎಂದು ನೀವು ಒಪ್ಪಿರುವುದಾದರೆ ಆಗ 'ನೀನು ಯಾರು, ಯಾವ ಪರಮಾತ್ಮ?' ಎಂದು ಪ್ರಶ್ನಿಸುವುದು ಹೇಗೆ ಕೂಡುತ್ತದೆ? ನಾನು ಪರಮಾತ್ಮನೆಂಬುದು ಸ್ಪಷ್ಟವಾಗಿದೆ. ಏಕೆಂದರೆ ಬ್ರಹ್ಮನು ನನ್ನನ್ನು ವಂದಿಸಿರುವುದನ್ನು ನೀವು ಕಣ್ಣಾರೆ ಕಂಡಿರುವಿರಿ. ಬ್ರಹ್ಮನು ಪರಮಾತ್ಮನನ್ನು ಹೊರತು ಬೇರೆಯವರನ್ನು ನಮಸ್ಕಾರಾದಿಗಳಿಂದ ಪೂಜಿಸುವುದಿಲ್ಲ ಎಂಬುದೂ ನಿಮಗೆ ಗೊತ್ತು. ಅದರಿಂದ ಬ್ರಹ್ಮನಿಂದ ವಂದ್ಯನಾಗುವವನು ಪರಮಾತ್ಮನೆ. ಅವನು ಒಬ್ಬನೆ. ಎಂದಮೇಲೆ ಪ್ರಶ್ನೆಯಾಗಲಿ ಪರಿಹಾರವಾಗಲಿ ಹೇಗೆ ಕೂಡುತ್ತದೆ?

❖❖❖

ಹಂಸನು ತಾನು ಜೀವವರ್ಗದವರಲ್ಲಿ ಒಬ್ಬನಾಗಿರಲು ಶಕ್ಯವಿಲ್ಲ. ಜೀವೋತ್ತಮನಿಂದ ವಂದ್ಯನಾದ್ದರಿಂದ ಪರಮಾತ್ಮನೇ ಎಂದು ಸನಕಾದಿಗಳಿಗೆ ಹೇಳಿದನೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಪಂಚಾತ್ಮಕೇಷು ಭೂತೇಷು ಸಮಾನೇಷು ಚ ವಸ್ತುತಃ ।
ಕೋ ಭವಾನಿತಿ ವಃ ಪ್ರಶ್ನೋ ವಾಚಾರಬ್ಧೋ ನಿರರ್ಥಕಃ ॥ ೨೩ ॥

ದೇವ ಮನುಷ್ಯ ಪಿತೃ ಗಂಧರ್ವ ಅಸುರರೆಂದು ಐದು ಬಗೆಯಾದ ಜೀವರಲ್ಲಿ ನಾನೊಬ್ಬನಾಗಿರುವುದು ಶಕ್ಯವಿಲ್ಲ. ಅವರೆಲ್ಲರೂ ಬ್ರಹ್ಮನಿಗಿಂತ ಕಡಿಮೆಯವರು. ಅವನಿಂದ ಪೂಜಿಸಲ್ಪಡಲು ಅನರ್ಹರು. ಈ ವಿಷಯದಲ್ಲಿ ಅವರೆಲ್ಲರೂ ಸಮಾನರು. ಹೀಗಾಗಿ ಬ್ರಹ್ಮನಿಗೆ ಪೂಜ್ಯರಾದ ವ್ಯಕ್ತಿಗಳು ಅನೇಕರಿಲ್ಲ, ಅದು ನಾನೊಬ್ಬನೆ ಎಂದಮೇಲೆ ನೀನಾರೆಂದು ನನ್ನನ್ನು ಕೇಳುವುದು ಯುಕ್ತವಲ್ಲ, ವ್ಯರ್ಥ.

[1]ಹಂಸರೂಪದಿಂದ ನಿಂತಿರುವ ನನ್ನನ್ನು ನೋಡಿದಾಗಲೆ ನಾನು ಹಂಸಜಾತಿಗೆ ಸೇರಿದವನೆಂದು ಗೊತ್ತಾಗುವುದು. ಯಾವ ಜಾತಿ ಎಂದು ಪ್ರಶ್ನೆಗೆ ಅವಕಾಶವಿಲ್ಲ. ಈ ರೂಪ ಪಾಂಚಭೌತಿಕವಾದ್ದರಿಂದ ಪಂಚಭೂತಗಳಿಂದಾದುದೆಂದು ಕಾರಣವೂ ಗೊತ್ತಾಗುವುದು. ಅದರಿಂದ ನನ್ನ ಶರೀರದ ಬಗ್ಗೆಯೂ ನಿಮ್ಮ ಪ್ರಶ್ನೆ ಕೂಡುವುದಿಲ್ಲ' ಎಂದು ವೀರರಾಘವ ವ್ಯಾಖ್ಯಾನ ಹೇಳಿದೆ.

ಪರಮಾತ್ಮನಿಗೆ ಪಾಂಚಭೌತಿಕ ಶರೀರವನ್ನು ವಿಶಿಷ್ಟಾದ್ವೈತದಲ್ಲಿ ಪರ ವ್ಯೂಹ ವಿಭವ ಅಂತರ್ಯಾಮಿ ಅರ್ಚಾ ಎಂಬ ಐದು ಬಗೆಯ ರೂಪಗಳಲ್ಲಿ ಒಂದಾದ ವಿಭವರೂಪವಾದ ಈ ಹಂಸನಿಗೆ ಒಪ್ಪಿದ್ದಾರೆ. ಇದು ಪ್ರಮಾಣ ವಿರುದ್ಧ. ಹಂಸ ತಾನೇ ತನ್ನ ಶರೀರ ಪಾಂಚಭೌತಿಕ ಎನ್ನುತ್ತಾನೆ ಎನ್ನಲಾಗದು. ಪಾಂಚಭೌತಿಕವೆನ್ನುವ ಪಕ್ಷದಲ್ಲಿಯೂ 'ಯಾರು ನೀನು?' ಎನ್ನುವ ಪ್ರಶ್ನೆಗೆ ಯಾವ ಊರಿನವನು, ಯಾವ ತಂದೆತಾಯಿಗಳಿಂದ ಹುಟ್ಟಿರುವೆ ಎಂದು ಮುಂತಾಗಿ ಕೇಳುವ ಅಭಿಪ್ರಾಯವಿರುತ್ತದೆ. ನನ್ನ ಶರೀರ ಪಂಚಭೂತಗಳಿಂದಾಗಿದೆ ಎಂದು ಯಾರೂ ಪರಿಚಯ ಹೇಳುವುದಿಲ್ಲ. ~~ಅದನ್ನು ಹೇಳಬೇಕಾಗಿಯೂ ಇಲ್ಲ. ಅದು ಸಿದ್ಧವೆ.~~

[2]'ದೇವ ಮನುಷ್ಯ ಮುಂತಾದ ಶರೀರಗಳು ಎಲ್ಲವೂ ಪಂಚಭೂತಗಳಿಂದಾದವುಗಳೆಂದ ಮೇಲೆ ಅವು ಪಂಚಭೂತಾಭಿನ್ನ, ಪ್ರಕೃತಿಯಿಂದಾದುದರಿಂದ ಪ್ರಕೃತಿಯಿಂದ ಅಭಿನ್ನ, ಬ್ರಹ್ಮನಿಂದಾದುದರಿಂದ ಬ್ರಹ್ಮಾಭಿನ್ನ. ಅದರಿಂದ ದೇಹದ ಬಗ್ಗೆಯೂ ಯಾವ ದೇಹದವನೆಂದು ಪ್ರಶ್ನೆ ಮಾಡಲು ಅವಕಾಶವಿಲ್ಲ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ. 'ವಾಚಾರಂಭೋ ನಿರರ್ಥಕಃ' ಎಂದು 'ವಾಚಾರಂಭಣಂ ವಿಕಾರೋ ನಾಮಧೇಯಂ' ಎಂಬ ಶ್ರುತಿಯೂ ಈ ವಿಷಯದಲ್ಲಿ ಪ್ರಮಾಣವೆಂದು ಹಂಸನು ಹೇಳುತ್ತಿದ್ದಾನೆ ಎಂದಿದ್ದಾರೆ. ಅದರಿಂದ ಶರೀರಗಳೆಲ್ಲವೂ ಹಗ್ಗದಲ್ಲಿ ಕಾಣುವ ಹಾವಿನಂತೆ ಭ್ರಾಂತಿಯಲ್ಲಿ ಕಾಣುವಂಥವು, ಮಿಥ್ಯೆ. ಅದರಿಂದ ಶರೀರದೃಷ್ಟಿಯಿಂದ ಯಾರು ನೀನೆಂದು ಪ್ರಶ್ನಿಸುವುದು ನಿರರ್ಥಕ ಎಂದು

---

1. ಅಚೇತನಂ ಶರೀರಮೇವ ಜಾನತಾಮಪ್ಯೇವಂ ಪ್ರಶ್ನೋಽನುಪಪನ್ನ ಇತ್ಯಾಹ । ಅಹಂ ತಾವದ್ಧಂಸರೂಪೇಣ ಪ್ರತ್ಯಕ್ಷಃ । ಅತೋ ನ ಜಾತಿಃ ಪ್ರಷ್ಟವ್ಯಾ। ಮತ್ಸಜಾತೀಯಾನಾಂ ಸರ್ವೇಷಾಂ ಪಾಂಚಭೌತಿಕತ್ವೇನ ಸಮಾನಾನಾಂ ಸತಾಂ ನ ಕಾರಣಮಪಿ ಪ್ರಷ್ಟವ್ಯಂ। ತಸ್ಮಾದ್ ವಃ ಪ್ರಶ್ನಃ ಪ್ರತಿವಚನನಿರಪೇಕ್ಷತ್ವಾದನರ್ಥಕ ಇತ್ಯರ್ಥಃ। -ವೀರರಾಘವ

2. ಭೂತೇಷು ದೇವಮನುಷ್ಯಾದಿ ದೇಹೇಷು ಪಂಚಭೂತಾತ್ಮಕೇಷು। ಅತಃ ಸಮಾನೇಷ್ವಭಿನ್ನೇಷು ಪುನಶ್ಚ ವಸ್ತುತಃ ಪರಮಕಾರಣಾತ್ಮನಾ ಅಭಿನ್ನೇಷು। ವಾಚಾರಂಭಣಮಿತಿ ಶ್ರುತೇಃ। -ಶ್ರೀಧರಃ

ಅಭಿಪ್ರಾಯ. ಆದರೆ ವ್ಯಾವಹಾರಿಕ ಸತ್ಯತ್ವವನ್ನು ಅಂಗೀಕರಿಸಿರುವುದರಿಂದ ಪ್ರಶ್ನೆಮಾಡುವುದು ಅಯುಕ್ತವಾಗುವುದಿಲ್ಲ. ಅಪರಿಚಿತನಾದ ಒಬ್ಬ ವ್ಯಕ್ತಿಯನ್ನು ಕಂಡಾಗ ಯಾರು ನೀನೆಂದು ಕೇಳಿದರೆ, 'ನಾನು ಪರಬ್ರಹ್ಮ, ನನ್ನ ಶರೀರ ಮಿಥ್ಯೆ' ಎಂದು ಪರಿಚಯ ಹೇಳುವುದೂ ಹಾಸ್ಯಾಸ್ಪದವಾಗುವುದು.

[3]'ದೇಹದೃಷ್ಟಿಯಿಂದ ನೀನು ಯಾರೆಂದು ಕೇಳುವುದೂ ದೇಹದೃಷ್ಟಿಯಿಂದಲೆ ಹೆಸರು ಕುಲಗೋತ್ರ ಮುಂತಾದುವನ್ನು ಹೇಳುವುದೂ ಉಂಟು. ಜ್ಞಾನಿಗಳೂ ಇಂಥ ವ್ಯವಹಾರ ಮಾಡುತ್ತಾರೆ. ನೀನೂ ಮಾಡಿರುವೆ. ಅದರಿಂದ ನಾವು ಮಾಡಿದ ಪ್ರಶ್ನೆ ಅಸಂಗತವಲ್ಲ' ಎಂದು ಮುನಿಗಳು ಹೇಳಿದರೆ ಹಂಸನು ಹೇಳುತ್ತಾನೆ, 'ನಾನು ಇಂಥ ವ್ಯವಹಾರ ಮಾಡಿದ್ದು, ನಿಮ್ಮಗಳ ವ್ಯವಹಾರ ಹೀಗಿರುತ್ತದೆ ಎಂದು ತೋರಿಸಿ ಅದು ಸರಿಯಲ್ಲ ಎಂದು ತಿಳಿಸುವ ಉದ್ದೇಶದಿಂದ ಹೊರತು ನನಗೆ ಅದು ಸಮ್ಮತವೆಂದು ತಿಳಿಯಬಾರದು. ಇದಕ್ಕೆ ನೀವು 'ನಾವು ಇಂಥ ವ್ಯವಹಾರ ಮಾಡಿದ್ದು ಕೂಡ ನಿನ್ನಂತೆಯೇ' ಎನ್ನುವಿರಾದರೆ ನೀವು ತತ್ವವನ್ನು ತಿಳಿದವರೇ ಎಂದಂತಾಯಿತು. ಮತ್ತೇಕೆ ಈ ಪ್ರಶ್ನೆಯನ್ನು ಕೇಳುತ್ತಿರುವಿರಿ? ಅದು ಸರಿಯಲ್ಲ ಎಂದು ಹಂಸ ಹೇಳುತ್ತಿದ್ದಾನೆ–ಇದು ಜೀವಗೋಸ್ವಾಮಿಯ ವ್ಯಾಖ್ಯಾನ.

ಆದರೆ ದೇಹದೃಷ್ಟಿಯಿಂದ ಪರಿಚಯವನ್ನು ಕೇಳುವುದು ಹೇಳುವುದು ಏಕೆ ಸರಿಯಲ್ಲ ಎನ್ನುವುದು ಮುಂದೆ ಎಲ್ಲಿಯೂ ಹಂಸನ ಮಾತಿನಲ್ಲಿ ತಿಳಿಯುವುದಿಲ್ಲ. ಪಾಂಚಭೌತಿಕ, ಪ್ರಾಕೃತ, ಪರಬ್ರಹ್ಮನಲ್ಲಿ ಆರೋಪಿತವಾದ ಮಿಥ್ಯಾವಸ್ತು ಎಂದು ಮುಂತಾಗಿ ಶರೀರಗಳನ್ನು ತಿಳಿದವರು ಕೂಡ ಶರೀರದ ಊರು ಕುಲಗೋತ್ರ ಮುಂತಾದುವನ್ನು ಏಕೆ ವಿಚಾರಿಸಬಾರದು?

[4]'ಬಹುಪುಣ್ಯಲಭ್ಯವಾದ, ಹಸಿವು ಬಾಯಾರಿಕೆ ಮುಂತಾದ ದುಃಖವಿಲ್ಲದ ದೇವಶರೀರಕ್ಕೂ ಮನುಷ್ಯಶರೀರಕ್ಕೂ ಬಹಳ ವೈಲಕ್ಷಣ್ಯವಿದ್ದರೂ ಎರಡೂ ಪ್ರಕೃತಿ ಜನ್ಯ ಎನ್ನುವ ಅಂಶದಲ್ಲಿ ಸಮಾನವೇ ಆಗಿರುವುದರಿಂದ ಪ್ರಶ್ನೆ ಮಾಡುವುದು

3. ನನು ವಿದುಷಾಮಪಿ ವ್ಯವಹಾರೋಽಯಂ ದೃಶ್ಯತೇ ಯತೋ ಭವತಾಪಿ ವಿಪ್ರಾ ಇತಿ ವ ಇತಿ ಚೋಕ್ತಮಿತ್ಯಾಶಂಕ್ಯಾಹ ವಾಚಾರಂಭ ಇತಿ। ವಾಚಮಾತ್ರೇಣಾರಭ್ಯತೇ ಮದ್ವಿಧೇನ ತದಪೋಹಾರ್ಥಮೇವ ತದನುವಾದಃ ಕ್ರಿಯತೇ ಭವದ್ಭಿಶ್ಚ ಮದ್ವಿಧವದಿತಿ ಚೇತ್ ಜ್ಞಾತಮೇವ ತತ್ವಂ ಕಿಂ ಪೃಚ್ಛ್ಯ ತ ಇತಿ ಭಾವಃ। -ಜೀವಗೋಸ್ವಾಮೀ

4. ಭೂತೇಷು ದೇವತಿರ್ಯಗಾದಿ ದೇಹೇಷು ಪಂಚಾತ್ಮಕೇಷು ಪಂಚಮಹಾಭೂತ ಕಾರ್ಯೇಷು ಸತ್ಸು ಆತ ಏವ ಸಮಾನೇಷು ಸತ್ಸು ವಿಶೇಷಾಭಾವಾದಿತ್ಯರ್ಥಃ। ನನು ಬಹುಪುಣ್ಯಲಭ್ಯ ಕ್ಷುತ್‌ಪಿಪಾಸಾ ಜರಾದಿ ದೋಷವರ್ಜಿತ ಬ್ರಹ್ಮೇಂದ್ರಾದಿ ದೇಹಾನಾಂ ಮನುಷ್ಯಾದಿ ದೇಹೇಭ್ಯೋಽತ್ಯಂತ ವೈಲಕ್ಷಣ್ಯಾತ್ ಕಥಂ ಸಮಾನತ್ವಮತ ಆಹ ವಸ್ತುತಇತಿ। ವಸ್ತುಶಬ್ದೇನ

ಸರಿಯಲ್ಲ ಎಂದು ಶುಕದೇವ ವ್ಯಾಖ್ಯಾನವೂ ಹೇಳುತ್ತದೆ. 'ಸಾಮ್ಯವಿದ್ದರೂ ವೈಲಕ್ಷಣವಿರುವುದರಿಂದಲೆ ಪ್ರಶ್ನೆ ಮಾಡುವುದು ಸರಿ' ಎಂದು ಇದಕ್ಕೆ ಉತ್ತರ ಹೇಳಬೇಕು.

ವಸ್ತುತಃ 'ಪಂಚಾತ್ಮಕೇಷು ಭೂತೇಷು' ಎಂದರೆ ಶರೀರಗಳು ಪಾಂಚಭೌತಿಕ ವೆಂದರ್ಥವಲ್ಲ. ಭೂತಗಳೆಂದರೆ ಶರೀರಿಗಳಾದ ಜೀವಿಗಳು. ಭೂತದಯಾ ಎಂದರೆ ಜೀವಿಗಳಲ್ಲಿ ದಯೆ. ಶರೀರಗಳಲ್ಲಿ ಅಲ್ಲ. ಪಂಚಾತ್ಮಕ ಎಂದರೆ, 'ನವೈವ ದ್ರವ್ಯಾಣಿ' 'ದ್ರವ್ಯಗಳು ನವ, ನವಾತ್ಮಕ' ಎಂದರೆ ನವವಿಧ ಎನ್ನುವಂತೆ, ಪಂಚವಿಧ. ದೇವ ಮನುಷ್ಯ ಪಿತೃ ಗಂಧರ್ವ ಅಸುರ ಎಂದು ಐದು ಬಗೆ ಜೀವಿಗಳು. ಅವರು ಸಮಾನರೆಂದರೆ ಎಲ್ಲರೂ ಜೀವೋತ್ತಮನಾದ ಬ್ರಹ್ಮನ ಅಧೀನರು, ಅವನಿಗೆ ಪೂಜ್ಯರಲ್ಲ ಎನ್ನುವ ಅಂಶದಲ್ಲಿ ಸಮಾನರು. ಅವರಲ್ಲಿ ಯಾರೊಬ್ಬನೂ ಹಂಸ ಎನ್ನಲಾಗದು. ಏಕೆಂದರೆ ಹಂಸ ಬ್ರಹ್ಮನಿಗೆ ಪೂಜ್ಯ ಎಂದು ಭಾಗವತದ ಅಭಿಪ್ರಾಯ ಮುಂದಿನ ಶ್ಲೋಕದ ತಾತ್ಪರ್ಯದಲ್ಲಿ ಹೇಳುವ ತಂತ್ರಭಾಗವತ ವಚನದಿಂದ ತಿಳಿದುಬರುತ್ತದೆ.

ವಸ್ತುತಃ ಸಮಾನೇಷು ಹಿರಣ್ಯಗರ್ಭಾವರತ್ವಾತ್ ತದ್ವಂದ್ಯತ್ವಾಭಾವಾಪೇಕ್ಷಯಾ । ತಸ್ಮಾದ್ ಬ್ರಹ್ಮಣೋ ವಂದನಾನಂತರಂ ವಿಚಾರೋ ನ ಘಟತೇ । ತಸ್ಮಾತ್ ಕೋ ಭವಾನಿತಿ ವಾಚಾ ಪ್ರಾರಬ್ಧಃ ಪ್ರಶ್ನೋ ನಿರರ್ಥಕಃ ॥

'ವಸ್ತುತಃ ಸಮಾನೇಷು' ಎಂದರೆ ಜೀವಿಗಳು ಚತುರ್ಮುಖನಿಗಿಂತ ಯೋಗ್ಯತೆಯಲ್ಲಿ ಕಡಿಮೆಯವರಾದುದರಿಂದ ಚತುರ್ಮುಖನಿಗೆ ಪೂಜ್ಯರಲ್ಲ ಎನ್ನುವ ಅಂಶದಲ್ಲಿ ಸ್ವಭಾವತಃ ಸಮಾನರು ಎಂದರ್ಥ. ಅದರಿಂದ ಬ್ರಹ್ಮ ಹಂಸನಿಗೆ ವಂದನೆ ಮಾಡಿದ್ದನ್ನು ಕಂಡಮೇಲೆ ಹಂಸ ಯಾರೆನ್ನುವ ಪ್ರಶ್ನೆ ಕೂಡುವುದಿಲ್ಲ. ಪರಮಾತ್ಮನೇ ಆಗಿರಬೇಕು. ಅದರಿಂದ ಹಂಸನನ್ನು ಯಾರು ನೀನೆಂದು ಮಾತಿನಿಂದ ಹೇಳಿದ ಪ್ರಶ್ನೆ ನಿರರ್ಥಕ, ಅಂದರೆ ಪ್ರಶ್ನೆಗೆ ಯೋಗ್ಯವಾದ ವಿಷಯವಿಲ್ಲ.

❖❖❖

ಗೌರನಾದ್ಯಂತವತೀ ಜನಿತ್ರೀ ಭೂತಭಾವಿನೀತ್ಯಾದಿ ಶ್ರುತಿಸ್ಮೃತಿ ಪ್ರತಿಪಾದಿತ ಸರ್ವವಿಕಾರೋಪಾದಾನಭೂತಾ ಭಗವಚ್ಛಕ್ತಿಃ ಪ್ರಕೃತಿರುಚ್ಯತೇ ಅತಃ ಪ್ರಾಕೃತತ್ವಾತ್ತೇಷಾಮಪಿ ಸಮಾನತ್ವಮೇವ । ತಸ್ಮಾತ್ ವಸ್ತುತೋ ವಿಶೇಷಾಭಾವಾತ್ ಪ್ರಶ್ನೋಽನುಪಪನ್ನ ಇತ್ಯರ್ಥಃ॥
-ಶುಕದೇವಃ

ಮನಸಿಗೆ ಮಾತಿಗೆ ಇಂದ್ರಿಯಗಳಿಗೆ ನಿಲುಕುವ ವಸ್ತು ಯಾವುದೂ ಪರಮಾತ್ಮ ಸ್ವರೂಪವಲ್ಲ ಎಂದು ಹಂಸನ ಉಪದೇಶವನ್ನು ಶ್ರೀಕೃಷ್ಣ ಉದ್ಧವನಿಗೆ ಹೇಳುತ್ತಾನೆ.

ಮನಸಾ ವಚಸಾ ದೃಷ್ಟ್ಯಾ ಗೃಹ್ಯತೇಽನ್ಯೈರಪೀಂದ್ರಿಯೈಃ।
ಅಹಮೇವ ನ ಮತ್ತೋಽನ್ಯದಿತಿ ಬುಧ್ಯಧ್ವಮಂಜಸಾ ॥ ೨೪ ॥

ಮನಸಿನಿಂದ ಮಾತಿನಿಂದ ಕಣ್ಣಿಂದ ಅಥವಾ ಬೇರೆ ಯಾವುದೇ ಇಂದ್ರಿಯದಿಂದ ಸ್ವಾಭಾವಿಕವಾಗಿ ನಿಮಗೆ ಗೋಚರವಾಗುವ ವಸ್ತು ನಾನಲ್ಲ. ಅದು ನನಗಿಂತ ಬೇರೆ ಎಂದು ಚೆನ್ನಾಗಿ ತಿಳಿಯಿರಿ. ಅದರಲ್ಲಿ ನಿಮಗೆ ಸಂಶಯಬೇಡ. ನಿಮಗೆ ತಿಳಿದಿರುವ ವಸ್ತುಗಳಲ್ಲಿ ನಾನಾರೆಂದು ಪ್ರಶ್ನೆ ಮಾಡುವುದೇ ಬೇಡ. ಅದರಿಂದ ಈಗ ಇಲ್ಲಿ ಪ್ರಕೃತವಾಗಿರುವ ಮನಸ್ಸು ವಿಷಯಗಳ ಸಂಬಂಧದ ಬಗ್ಗೆ ಕೇಳಿರಿ.

[1]'ಮನಸಿಗೆ ಮಾತಿಗೆ ಇಂದ್ರಿಯಗಳಿಗೆ ಗೋಚರವಾಗುವುದೆಲ್ಲವೂ ಪಂಚಭೂತಾತ್ಮಕ ಎನ್ನುವುದು ಪ್ರತ್ಯಕ್ಷಸಿದ್ಧ. ಬ್ರಹ್ಮಾತ್ಮಕ ಎಂಬುದು ಯುಕ್ತಿಯಿಂದ ಸಿದ್ಧವಾಗುತ್ತದೆ. 'ರಜ್ಜುವಿನಲ್ಲಿಲ್ಲದ ಸರ್ಪ ರಜ್ಜುವಿನಲ್ಲಿ ಕಾಣುವುದು ಸರ್ಪವು ರಜ್ಜ್ವಾತ್ಮಕ ವಾದ್ದರಿಂದ ಹೇಗೋ ಹಾಗೇ ಬ್ರಹ್ಮನಲ್ಲಿಲ್ಲದ ಜಡಪ್ರಪಂಚ ಬ್ರಹ್ಮನಲ್ಲಿ ಕಾಣುವುದು. ಪ್ರಪಂಚ ಬ್ರಹ್ಮಾತ್ಮಕವಾಗಿರುವುದರಿಂದ ಎಂದೇ ಹೇಳಬೇಕು' ಎಂದು. ಹೀಗೆ 'ಎಲ್ಲ ಶರೀರಗಳೂ ಬ್ರಹ್ಮಾತ್ಮಕ'ವಾಗಿರುವಾಗ ಯಾರು ನೀನೆಂದು ಶರೀರದೃಷ್ಟಿಯಿಂದ ಹಂಸನನ್ನು ಕೇಳಿದರೆ ತಪ್ಪಾಗುತ್ತದೆ. ಎಲ್ಲ ಶರೀರಗಳೂ ಬ್ರಹ್ಮವೆ ತಾನೆ? ಪ್ರಶ್ನೆಗೆ ಅವಕಾಶವೇ ಇಲ್ಲ. ಹೀಗೆ ಸನಕಾದಿಗಳ ಪ್ರಶ್ನೆಯನ್ನು ನಿರಾಕರಿಸುವ ನೆಪದಿಂದ ಎಲ್ಲ ಪ್ರಪಂಚ ಬ್ರಹ್ಮಾತ್ಮಕ ಅಂದರೆ ನಾನೇ ಎಂಬ ಅದ್ವೈತತತ್ವವನ್ನು ತಿಳಿಸುತ್ತಿದ್ದಾನೆ ಹಂಸ' ಎನ್ನುತ್ತದೆ ಶ್ರೀಧರವ್ಯಾಖ್ಯಾನ.

ಆದರೆ ಹಂಸವು ಹಂಸಪಕ್ಷಿಯ ಆಕಾರದ್ದು. ಸಾಕಾರವಾಗಿದೆ. ಪ್ರಪಂಚಕ್ಕೆ ಅಧಿಷ್ಠಾನ ನಿರಾಕಾರ. ಅದರಿಂದ ಅದು ನಿರಾಕಾರ ಬ್ರಹ್ಮಾತ್ಮಕ. ಹಂಸನು ಎಲ್ಲವೂ ನಾನೇ

---

1. ತತ್ರ ಪಂಚಾತ್ಮಕತ್ವಂ ಪ್ರತ್ಯಕ್ಷ ಸಿದ್ಧಮೇವೇತಿ ಪರಮಕಾರಣಾಭೇದಮೇವೋಪಪಾದಯತಿ ಮನಸೇತಿ । ಮನಆದಿಭಿರ್ಯದ್ ಗೃಹ್ಯತೇ ತದಹಮೇವೇತ್ಯರ್ಥಃ । ಅಂಜಸಾ ತತ್ವವಿಚಾರೇಣ। ಏತೇನೈವ ಸರ್ವಾತ್ಮಕೋಽಹಮಿತ್ಯಂಜಸಾಪ್ಯುತ್ತರಮುಕ್ತಂ ಭವತಿ।
-ಶ್ರೀಧರಃ

ಉಪಪಾದಯತಿ ಯುಕ್ತ್ಯಾ ಸಾಧಯತಿ । ಯುಕ್ತಿಶ್ಚಾತ್ರಾರ್ಥಾಪತ್ತಿರೂಪಾ ಮನಆದಿ ಗ್ರಾಹ್ಯಸ್ಯಾಧಿಷ್ಠಾನಾಭೇದಮಂತರಾ ಪ್ರತೀತ್ಯನುಪಪತ್ತ್ಯಾ ಕಲ್ಪಿತಸ್ಯಾಧಿಷ್ಠಾನಾಭೇದಃ ಕಲ್ಪ್ಯತೇ ಇತಿ।
-ರಾಧಾರಮಣದಾಸಃ

ಎಂದು ಸಾಕಾರ ಬ್ರಹ್ಮಾತ್ಮಕತ್ವವನ್ನು ಹೇಳುತ್ತಿದ್ದಾನೆ. ಇದು ಅದ್ವೈತೋಪದೇಶವಲ್ಲ. ಹಂಸಪಕ್ಷಿಯಾಕಾರದ ಆರೋಪಕ್ಕೆ ಅದಿಷ್ಠಾನವಾದ ಬ್ರಹ್ಮವನ್ನು ಹಂಸನು 'ನಾನೇ' ಎನ್ನುತ್ತಾನೆ ಎನ್ನುವುದಾದರೆ ಮುನಿಗಳು ಆಕ್ಷೇಪ ಮಾಡಬಹುದು, ನಾವು ನಿನ್ನ ಹಂಸಪಕ್ಷಿಯಾಕಾರವನ್ನೇ ನೀನು ಯಾರು ಎಂದು ಕೇಳಿದ್ದೇವೆ, ನಿನ್ನ ಆ ಆಕಾರದ ಆರೋಪಾಧಿಷ್ಠಾನವಾದ ಬ್ರಹ್ಮನ ಪರಿಚಯವನ್ನು ಕೇಳುತ್ತಿಲ್ಲ ಎಂದು. ಹೀಗೆ ಮುನಿಗಳ ಪ್ರಶ್ನೆಯನ್ನು ತಪ್ಪಾಗಿ ತಿಳಿದು ತಪ್ಪಾದ ಉತ್ತರವನ್ನು ಹಂಸ ನೀಡುತ್ತಾನೆ ಎಂದಂತಾಯಿತು. 'ಅಂಜಸಾ' ಚೆನ್ನಾಗಿ ಅದ್ವೈತ ಬೋಧನೆ ಮಾಡಿದಂತಾಗುವುದಿಲ್ಲ.

[2]'ಕಣ್ಣಿಗೆ ಕಾಣುವುದೆಲ್ಲ ನನ್ನ ಶರೀರವಾಗಿರುವುದರಿಂದ ನಾನೇ ಆಗಿದ್ದೇನೆ. ನಾನೇ ಸರ್ವಶಬ್ದಗಳಿಗೂ ವಾಚ್ಯ ಎಂದು ವಿಶಿಷ್ಟಾದ್ವೈತವನ್ನು ಹಂಸನು ಮುನಿಗಳಿಗೆ ಬೋಧಿಸುತ್ತಿದ್ದಾನೆ' ಎಂದು ಸುದರ್ಶನಸೂರಿ ವೀರರಾಘವ ವ್ಯಾಖ್ಯಾನಗಳು ಹೇಳುತ್ತಿವೆ.

ಆದರೆ 'ಎಲ್ಲವೂ ಪರಮಾತ್ಮನ ಶರೀರ'ವಾದರೆ 'ಎಲ್ಲವೂ ಅವನೇ' ಆಗುವುದು ಹೇಗೆ? ಎಲ್ಲವೂ ಅವನೇ ಆದರೆ ಅವನ ಶರೀರವಾಗುವುದು ಹೇಗೆ? ಇದು ಪರಸ್ಪರ ವಿರುದ್ಧ. ತನಗೆ ತಾನೇ ಶರೀರ ಎಂದು ವಿಶಿಷ್ಟಾದ್ವೈತದಲ್ಲಿ ಒಪ್ಪಿಲ್ಲ. ಪರ ವ್ಯೂಹ ಅಂತರ್ಯಾಮಿಗಳಿಗೆ ಶುದ್ಧ ಸತ್ವಾತ್ಮಕ ಶರೀರವನ್ನೂ, ವಿಭವ ಅರ್ಚಾವತಾರ ರೂಪಗಳಿಗೆ ಪಾಂಚಭೌತಿಕ ಶರೀರವನ್ನೂ ಸ್ವರೂಪಕ್ಕಿಂತ ಬೇರೆಯಾಗಿಯೇ ಅಂಗೀಕರಿಸಿದ್ದಾರೆ, ಏಕೆಂದರೆ ಪರಮಾತ್ಮ ಆಕಾಶದಂತೆ ಸರ್ವವ್ಯಾಪಕ. ಸ್ವರೂಪದಿಂದ ಮಹತೋಮಹೀಯ, ಅವನೇ ಸ್ವರೂಪದಿಂದ ಅಣೋರಣೀಯನೆನಿಸಲು ಅಚಿಂತ್ಯಶಕ್ತಿ ಅವನಲ್ಲಿಲ್ಲ. ವಿಶಿಷ್ಟಾದ್ವೈತದಲ್ಲಿ ಅದನ್ನು ಒಪ್ಪಿಲ್ಲ. ಹೀಗಾಗಿ ಮುನಿಗಳು 'ನೀನು ಯಾರು, ಶರೀರಿಯಾದ ಪರಮಾತ್ಮನೆ? ಅಥವಾ ಶರೀರಭೂತರಾದ ಬೇರೆ ವ್ಯಕ್ತಿಗಳೆ?' ಎಂದು ಪ್ರಶ್ನೆ ಮಾಡಬಹುದು. ಆ ಪ್ರಶ್ನೆ ಸರಿಯೇ ಇರುವುದರಿಂದ ತಪ್ಪೆನ್ನಬಾರದು. ನಾನು ಸರ್ವಶರೀರಿಯಾದ ಪರಮಾತ್ಮನೆಂದು ಉತ್ತರಿಸಬೇಕು. 'ಕಣ್ಣಿಗೆ ಕಾಣುವುದೆಲ್ಲ ಪರಮಾತ್ಮನ ಶರೀರ ಸರ್ವಶಬ್ದ ವಾಚ್ಯನು ಅವನೇ' ಎನ್ನುವುದನ್ನು ಮುನಿಗಳಿಗೆ ಬೋಧಿಸಬೇಕಾಗಿಲ್ಲ. ಹಾಗೆ ಹಂಸ ಬೋಧಿಸಲೂ ಇಲ್ಲ. 'ನಾನು' ಸರ್ವಶರೀರಿ, ಸರ್ವಶಬ್ದವಾಚ್ಯ ಎನ್ನುತ್ತಿದ್ದಾನೆ. ಶರೀರವಾಚಕ ಶಬ್ದಗಳು

---

2. ಸರ್ವಂ ಮಚ್ಛರೀರತಯಾ ಮದಾತ್ಮಕಂ, ನತು ಸ್ವನಿಷ್ಠಂ ಅತಃ ಸರ್ವಾಂತರಾತ್ಮಾऽಹಮೇವ ಸರ್ವಶಬ್ದವಾಚ್ಯ ಇತಿ ಬುದ್ಧ್ಯಧ್ವಮಿತ್ಯರ್ಥಃ। ಸುದರ್ಶನ

ಶರೀರಿವಾಚಕವಾಗುತ್ತವೆ ಎಂದ ಮಾತ್ರಕ್ಕೆ ಅವು ಶರೀರವಾಚಕವಲ್ಲ ಎಂದಾಗುವುದಿಲ್ಲ. ಅದರಿಂದ ನಾನೇ ಎಲ್ಲ ಶಬ್ದಗಳಿಗೂ ವಾಚ್ಯನೆನ್ನುವುದು ವ್ಯಾಹತವೂ ಆಗಿದೆ.

[3]"ಪ್ರಪಂಚವೆಲ್ಲವೂ ನಾನೇ. ಪರಮ ಕಾರಣನಾದ ನನ್ನನ್ನು ಬಿಟ್ಟು ಸ್ವತಂತ್ರವಾಗಿ ಏನೂ ಇಲ್ಲ. ಆದ್ದರಿಂದಲೂ ನಿಮ್ಮ ಪ್ರಶ್ನೆ ಸರಿಯಲ್ಲ ಎನ್ನುತ್ತಾನೆ ಹಂಸ' ಎಂದು ಜೀವಗೋಸ್ವಾಮಿ ವ್ಯಾಖ್ಯಾನವಿದೆ. ಆದರೆ ಎಲ್ಲರೂ ಅಸ್ವತಂತ್ರರಾದ್ದರಿಂದ ಯಾರನ್ನೂ ಯಾರೆಂದು ಕೇಳಬಾರದು. ಪರಮಾತ್ಮ ಸ್ವತಂತ್ರನಾದ್ದರಿಂದ ಅವನನ್ನೂ ಯಾರೆಂದೂ ಕೇಳಬಾರದೆಂದರೆ ಲೋಕವ್ಯವಹಾರ ಹೇಗೆ? ಲೋಕದಲ್ಲಿ ಹೊಸಮುಖವೊಂದು ಕಂಡು ಬಂದರೆ ಪರಿಚಯ ಕೇಳುವುದು ಹೇಳುವುದಿದೆ ತಾನೆ?

[3]ವಿಶ್ವನಾಥ ವ್ಯಾಖ್ಯಾನ ಪ್ರಕಾರ ಪರಮಾತ್ಮನಿಗೆ ಇನ್ನೊಬ್ಬ ಪರಮಾತ್ಮ ನಿಲ್ಲದ್ದರಿಂದ ಸಜಾತೀಯ ಭೇದವಿಲ್ಲ. ಮನ ಇಂದ್ರಿಯಗಳಿಗೆ ಗೋಚರವಾಗುವ ~~ಬೇರೆ ಚೇತನಾಚೇತನ ಪ್ರಪಂಚವೆಲ್ಲವೂ ಅವನೇ ಸೃಷ್ಟಿ ಮಾಡಿದ್ದರಿಂದ ಅವನೇ~~ ಆಗಿದ್ದಾನೆ. ಹೀಗಾಗಿ ವಿಜಾತೀಯ ಭೇದವೂ ಇಲ್ಲ. ಒಬ್ಬನೆ ಪರಮಾತ್ಮನಿದ್ದಾನೆ ಅವನನ್ನು ನೀನಾರೆಂದು ಕೇಳುವುದು ಸರಿಯಲ್ಲ ಎನ್ನುತ್ತಾರೆ.

ಆದರೆ ಪರಮಾತ್ಮ ಸೃಷ್ಟಿಸಿದ ಪ್ರಪಂಚ ಪರಮಾತ್ಮನೇ ಹೊರತು ಕಾರಣ ಕಾರ್ಯಗಳಿಗೆ ಭೇದವೆ ಇಲ್ಲವೆಂದರೆ 'ಪರಮಾತ್ಮನೇ ಕಾರಣ ಪ್ರಪಂಚವೇ ಕಾರ್ಯ' ಎನ್ನುವುದು ಹೇಗೆ? ಹೀಗಾಗಿ ನೀನು ಕಾರಣನಾದ ಪರಮಾತ್ಮನೆ ಅಥವಾ ಕಾರ್ಯನಾದ ಒಬ್ಬ ವ್ಯಕ್ತಿಯೆ ಎಂದು ಪ್ರಶ್ನೆ ಮಾಡಬಹುದು.

ಹೀಗೆ ಭಾಗವತ ಶ್ಲೋಕದಲ್ಲಿ 'ಅಹಮೇವ, ನ ಮತ್ತೋನ್ಯತ್' 'ಈ ಪ್ರಪಂಚವು ನಾನೇ ಹೊರತು ನನಗಿಂತ ಬೇರೆಯಲ್ಲ' ಎಂದು ಬೇರೆ ವ್ಯಾಖ್ಯಾನಕಾರರು ವ್ಯಾಖ್ಯಾನಿಸಿರುವುದು ಸಮಪರ್ಕವಾಗಿಲ್ಲ. ಭಾಗವತ ಅದ್ವೈತವನ್ನಾಗಲಿ

---

3. ಮನಆದಿಭಿರ್ಯದ್ ಗೃಹ್ಯತೇ ತತ್ ಸರ್ವಮಹಮೇವ। ಕುತಃ ಯತೋ ನ ಮತ್ತೋಽನ್ಯತ್ ಪರಮಕಾರಣಂ ಮಾಂ ವಿನಾ ತನ್ನಾಸ್ತ್ಯೇವೇತ್ಯರ್ಥಃ ತಥಾಪಿ ಪ್ರಶ್ನೋಽಯಂ ನ ಘಟತ ಇತಿ ಭಾವಃ। - ಜೀವಗೋಸ್ವಾಮೀ

ಪರಮೇಶ್ವರಾಂತರಾಭಾವಾನ್ಮಮ ಸಜಾತೀಯಭೇದೋ ನಾಸ್ತ್ಯೇವ। ಯಚ್ಚ ಮನ ಆದಿಭಿರ್ಗೃಹ್ಯತೇ ತದಹಮೇವ ನತು ಮತ್ತೋಽನ್ಯತ್ ಮಚ್ಛಕ್ತಿಕಾರ್ಯತ್ವಾದಿತಿ ವಿಜಾತೀಯ ಭೇದೋಽಪಿ ನಾಸ್ತ್ಯತಃ ಕೋ ಭವಾನಿತಿ ಪ್ರಶ್ನೋ ನ ಘಟತ ಇತಿ ಭಾವಃ। - ವಿಶ್ವನಾಥಃ

ವಿಶಿಷ್ಟಾದ್ವೈತವನ್ನಾಗಲಿ ಭೇದಾಭೇದ ಮತವನ್ನಾಗಲಿ ಹೇಳುತ್ತಿಲ್ಲ. ಅದರಿಂದ 'ಅಹಮೇವ ನ' ಎಂಬಲ್ಲಿ ಸ್ವಲ್ಪ ನಿಲ್ಲಿಸಿ, 'ಮತ್ತೋಽನ್ಯತ್' ಅಂದರೆ, 'ಈ ಪ್ರಪಂಚ ನಾನು ಸರ್ವಥಾ ಅಲ್ಲ, ನನ್ನಿಂದ ಬೇರೆಯೇ' ಎಂದೇ ಹೇಳುತ್ತಿದೆ.

ಯಸ್ಮಾನ್ಮನಆದಿಭಿರ್ಗೃಹ್ಯಮಾಣಮಹಂ ನ ಭವಾಮ್ಯೇವ । ಸ್ವಯಮಪಿ ಪ್ರಸಾದಾತ್ ಕಥಂಚಿದ್ ಗೃಹ್ಯತ ಇತ್ಯತ ಆಹ ಮತ್ತೋಽನ್ಯದಿತಿ । ಯನ್ಮನಆದಿಭಿರ್ವಿಚಾರ್ಯ ಮತ್ತೋಽನ್ಯತ್ವೇನ ಜ್ಞಾಯತೇ ತದಹಂ ನ ಭವಾಮ್ಯೇವೇತಿ ಬುಧ್ಯಧ್ವಂ । ವಿಚಾರಿತಸ್ಯಾಪಿ ಪುನಃ ಸಂಶಯಕಾರಣಂ ಪರಿಕಲ್ಪ್ಯ ಸಂಶಯೋ ನ ಕರ್ತವ್ಯಃ । ಅತಃ ಕೋ ಭವಾನಿತಿ ನಾರಬ್ಧವ್ಯಃ । ಗುಣೇಷ್ವಾವಿಶತೇ ಚೇತ ಇತ್ಯೇವ ಪ್ರಶ್ನ ಆರಬ್ಧವ್ಯಃ ।

ಮನಸ್ಸು ಮುಂತಾದವುಗಳಿಂದ ತಿಳಿಯುವ ವಸ್ತು ನಾನು ಸರ್ವಥಾ ಆಗಿರುವುದಿಲ್ಲ. ಭಗವಂತ ತಾನು ಕೂಡ ಅನುಗ್ರಹ ಮಾಡಿ ಹೇಗೋ ಗೋಚರವಾಗುತ್ತಾನೆ ತಾನೆ? ಎಂದರೆ ಹೇಳುತ್ತಾನೆ 'ಮತ್ತೋಽನ್ಯತ್' ಎಂದು. ಮನಸ್ಸು ಮುಂತಾದವುಗಳಿಂದ ವಿಚಾರ ಮಾಡಿದರೆ ನನಗಿಂತ ಬೇರೆ ಎಂದು ಯಾವುದನ್ನು ತಿಳಿಯುವಿರೋ ಅದು ನಾನೇ ಸರ್ವಥಾ ಆಗಿರುವುದಿಲ್ಲವೆಂದು ಚೆನ್ನಾಗಿ ತಿಳಿಯಿರಿ. ವಿಚಾರಮಾಡಿ ಹೀಗೆ ತಿಳಿದಿದ್ದರೂ ಪುನಃ ನಾನು ಬೇರೆಯೆ ಬೇರೆಯಲ್ಲವೆ ಎಂಬ ಸಂಶಯಕ್ಕೆ ಕಾರಣವನ್ನು ಕಲ್ಪಿಸಿಕೊಂಡು ಸಂಶಯ ಮಾಡಬಾರದು. ಹೀಗೆ, ಮನಸ್ಸು ಮುಂತಾದವುಗಳಿಗೆ ಗೋಚರವಾಗುವ ವಸ್ತು ನಾನಾಗಿರುವುದಿಲ್ಲವಾದ್ದರಿಂದಲೂ, ವಿಚಾರ ಮಾಡಿ ನಿಶ್ಚಯಿಸಿಕೊಂಡ ವಿಷಯದಲ್ಲಿ ಸಂಶಯವು ಯುಕ್ತವಾಗುವುದಿಲ್ಲವಾದ್ದರಿಂದಲೂ ಯಾರು ನೀನೆಂದು ಪ್ರಶ್ನೆ ಮಾಡಬಾರದು. ('ಯಸ್ಮಾನ್ ಮನಆದಿಭಿಃ' ಎಂಬಲ್ಲಿರುವ 'ಯಸ್ಮಾತ್' ಎಂಬುದನ್ನು 'ಅತಃ ಕೋ ಭವಾನಿತಿ ನಾರಬ್ಧವ್ಯಃ' ಎಂಬಲ್ಲಿ ಅನ್ವಯಿಸಬೇಕು) 'ವಿಷಯಭೋಗಪದಾರ್ಥಗಳಲ್ಲಿ ಮನಸ್ಸು ಆಕರ್ಷಿತ ವಾಗುತ್ತದೆ' ಎನ್ನುವ ವಿಷಯದಲ್ಲಿಯೇ ಪ್ರಶ್ನೆ ಮಾಡಬೇಕು.

ನ ಯುಷ್ಮಾಕಂ ಮಯಿ ಪ್ರಶ್ನೋ ಘಟತೇಽಯಂ ಕಥಂಚನ ।
ಮಾಮೃತೇ ನಹಿ ವಂದ್ಯೋಽಸ್ತಿ ವಿರಿಂಚೇಃ ಕ್ವಾಪಿ ಕಶ್ಚನ ।
ಅಭಿವಂದಿತಪಾದಂ ಮಾಂ ವಿರಿಂಚೇನ ಕಥಂ ಪುನಃ ।
ಪೃಚ್ಛಥಾನ್ಯೇ ಸಮಾ ಯಸ್ಮಾದವರತ್ವೇ ಚತುರ್ಮುಖಾತ್ ।

ದೇವಾ ಮನುಷ್ಯಾಃ ಪಿತರೋ ಗಂಧರ್ವಾ ಅಸುರಾಸ್ತಥಾ ।
ಇತಿ ಪಂಚಾತ್ಮಕಂ ಸರ್ವಂ ಬ್ರಹ್ಮಣಸ್ತ್ವವರಂ ಯತಃ ।
ಯನ್‌ಮದನ್ಯದ್‌ವಿಚಾರೇಣ ಗೃಹ್ಯತೇ ತನ್ನ ಚಾಸ್ಮ್ಯಹಂ ।
ಇತಿ ಜಾನೀಧ್ವಮದ್ಧೈವ ಮತ್‌ಪ್ರಸಾದಾದ್ಧಿ ಮದ್‌ದೃಶಿಃ ।
ಅನ್ಯತ್ ಸ್ವಭಾವತೋ ದೃಶ್ಯಂ ಮಮ ಪ್ರೇರಣಯೈವ ತು ।
ತಸ್ಮಾದ್ ವಿವಕ್ಷಿತಾರ್ಥೇ ತು ಪ್ರಶ್ನಾರಂಭೋ ನ ಮದ್ಗತಃ ।
ಇತಿ ತಂತ್ರಭಾಗವತೇ ॥

ನೀನಾರೆಂದು ನನ್ನಲ್ಲಿ ನೀವು ಪ್ರಶ್ನೆ ಮಾಡಿದ್ದು ಸರ್ವಥಾ ಕೂಡುವುದಿಲ್ಲ. ಏಕೆಂದರೆ ನನ್ನ ಹೊರತು ಬ್ರಹ್ಮನಿಗೆ ವಂದ್ಯನು ಎಂದೂ ಯಾರೂ ಇಲ್ಲ. ಬ್ರಹ್ಮನು ನನ್ನ ಪಾದವಂದನೆ ಮಾಡಿದ್ದನ್ನು ಕಂಡೂ ಕೂಡ ನೀವು ಪುನಃ ನನ್ನನ್ನು ನೀನಾರೆಂದು ಹೇಗೆ ಪ್ರಶ್ನೆ ಮಾಡುವಿರಿ?

ಏಕೆಂದರೆ, ದೇವ ಮನುಷ್ಯ ಪಿತೃ ಗಂಧರ್ವ ಅಸುರರೆಂದು ಐದು ಬಗೆಯಾದ ಎಲ್ಲ ಜೀವವರ್ಗವೂ ಬ್ರಹ್ಮನಿಗಿಂತ ಕೆಳಗಿನದು. ಅದರಿಂದ ನನಗಿಂತ ಬೇರೆ ಎಲ್ಲರೂ ಬ್ರಹ್ಮನಿಗಿಂತ ಕಡಿಮೆಯವರೆನ್ನುವ ವಿಷಯದಲ್ಲಿ ಸಮಾನರು. ನನಗಿಂತ ಬೇರೆ ಎಂದು ವಿಚಾರದಿಂದ ಏನನ್ನು ತಿಳಿದುಕೊಂಡಿರುವಿರೋ ಅದು ನಾನಾಗಿರುವುದಿಲ್ಲ ಎಂದು ನಿಶ್ಚಯವಾಗಿ ತಿಳಿದುಕೊಳ್ಳಿರಿ. ನಾನು ನಿಮಗೆ ಗೋಚರನಾಗುವುದು ಸ್ವಭಾವತಃ ಅಲ್ಲ. ನನ್ನ ಅನುಗ್ರಹದಿಂದ. ಬೇರೆ ವಸ್ತುವು ನನ್ನ ಅನುಗ್ರಹದಿಂದಲೇ ಸ್ವಾಭಾವಿಕವಾಗಿ ನಿಮಗೆ ಗೋಚರವಾಗುವುದು. ಅದರಿಂದ ನಿಮಗೆ ವಿವಕ್ಷಿತವಾದ ವಿಷಯಪದಾರ್ಥ ಮತ್ತು ಮನಸುಗಳ ಪರಸ್ಪರ ಆಕರ್ಷಣೆಯ ಬಗ್ಗೆ ಮಾತ್ರ ಪ್ರಶ್ನೆ ಮಾಡಬೇಕು ಹೊರತು ನನ್ನಲ್ಲಿ ನೀನಾರೆಂದು ಪ್ರಶ್ನೆ ಮಾಡುವುದು ಯುಕ್ತವಲ್ಲ. ಎಂದು ಭಾಗವತದ ಈ ಮೂರು ಶ್ಲೋಕಗಳ ಅರ್ಥವಿವರಣೆ ತಂತ್ರಭಾಗವತದಲ್ಲಿದೆ.

'ಇದಂ ಹಿ ವಿಶ್ವಂ ಭಗವಾನಿವೇತರ' ಇತಿ ಚ ।
'ಪ್ರಕೃತೇರ್ವ್ಯತಿರಿಕ್ತೋ ಯಃ ಪುರುಷಶ್ಚೇತಿ ಕಥ್ಯತೇ ।
ತಂ ವಿದ್ಯಾತ್ ಪರಮಾತ್ಮಾನಂ ವಾಸುದೇವೇತಿ ಯಂ ವಿದುಃ ॥''
ಇತಿ ಭಾರತೇ ॥

'ಪ್ರಕೃತೇಃ ಪ್ರಾಕೃತಾಚ್ಚೈವ ವ್ಯತಿರಿಕ್ತಂ ಗುಣಾಧಿಕಂ ।
ಯೇ ವಿದುಃ ಪರಮಾತ್ಮಾನಂ ತೇ ಯಾಂತಿ ಪರಮಂ ಪದಂ'
ಇತಿ ಚ ॥

'ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ ।
ಬಹೂನಾಂ ಪುರುಷಾಣಾಂ ಹಿ ಯಥೈಕಾ ಯೋನಿರುಚ್ಯತೇ ।
ತಥಾ ತಂ ಪುರುಷಂ ವಿಶ್ವಮಾಖ್ಯಾಸ್ಯಾಮಿ ಗುಣಾಧಿಕಂ ॥''

ಇತಿ ಚ ॥

'ಪರಮಾತ್ಮ ಜಗತ್ತಿಗಿಂತ ಭಿನ್ನ ವಿಲಕ್ಷಣನೇ ಆಗಿದ್ದರೂ ಜಗತ್ತು ಅವನಿಗೆ ಅಧೀನವಾದ್ದರಿಂದ 'ಸರ್ವಂಖಲ್ವಿದಂ ಬ್ರಹ್ಮ' 'ಈ ಎಲ್ಲ ಜಗತ್ತು ಪರಬ್ರಹ್ಮನೆ' ಎಂದು ಮುಂತಾಗಿ ಮೇಲುನೋಟಕ್ಕೆ ಅಭೇದವನ್ನು ಹೇಳುವಂತೆ ಕಾಣುತ್ತದೆ' ಎಂದು ಮುಂತಾಗಿ ಭಾಗವತವೇ (೧.೫.೨೦) ಹೇಳಿದೆ.

'ಪುರುಷಸೂಕ್ತದಲ್ಲಿ 'ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಂ' 'ಪುರುಷನು ಪ್ರಕೃತಿಗಿಂತ ವಿಲಕ್ಷಣನೆಂ'ದು ಹೇಳಿದೆ. ಆ ಪರಮಾತ್ಮನನ್ನೇ ಮುಮುಕ್ಷುವು ತಿಳಿಯಬೇಕು. ಅವನನ್ನು ವಾಸುದೇವನೆಂದು ಜ್ಞಾನಿಗಳು ತಿಳಿಯುತ್ತಾರೆ' ಎಂದು ಭಾರತದಲ್ಲಿದೆ.

'ಪ್ರಕೃತಿಗಿಂತಲೂ ಪ್ರಾಕೃತವಸ್ತುವಿಗಿಂತಲೂ ವಿಲಕ್ಷಣನೂ ಗುಣದಿಂದ ಸರ್ವೋತ್ತಮನೂ ಆದ ಪರಮಾತ್ಮನನ್ನು ಯಾರು ತಿಳಿಯುವರೋ ಅವರು ವೈಕುಂಠವನ್ನು ಹೊಂದುವರು' ಎಂದೂ ಭಾರತದಲ್ಲಿ ಹೇಳಿದೆ.

'ಪುರುಷರು ಬಹುಮಂದಿ ಇರುವರೋ ಅಥವಾ ಒಬ್ಬನೊ, ಬಹುಮಂದಿ ಇರುವುದಾದರೆ ಅವರಲ್ಲಿ ಶ್ರೇಷ್ಠನು ಯಾರು ಎನ್ನುವ ಜನಮೇಜಯರಾಜನ ಪ್ರಶ್ನೆಗೆ ಭಾರತದಲ್ಲಿ ವೈಶಂಪಾಯನರು ಹೇಳುತ್ತಾರೆ—

'ಜನಮೇಜಯ, ಪುರುಷನು ಒಬ್ಬನೆ ಎನ್ನುವುದು ಜ್ಞಾನಿಗಳಿಗೆ ಸಮ್ಮತವಲ್ಲ. ಬಹುಮಂದಿ ಇದ್ದಾರೆ. ಬಹುಪುತ್ರರಿಗೆ ಒಬ್ಬಳು ಮಾತೆ ಇರುವಂತೆ ಬಹುಪುರುಷರಿಗೆ ಒಬ್ಬನೇ ಪುರುಷನು ಕಾರಣನಾಗಿದ್ದಾನೆ, ಅವನು ಗುಣಪೂರ್ಣ, ಗುಣಗಳಿಂದ ಸರ್ವೋತ್ತಮನು ಎಂದು ನಾನು ಹೇಳುವೆನು' ಎಂದೂ ಭಾರತದಲ್ಲಿ ಜೀವಜೀವಭೇದ ಜೀವೇಶ್ವರಭೇದಗಳು ಸ್ಪಷ್ಟವಾಗಿ ಉಕ್ತವಾಗಿದೆ. ಅದರಿಂದ ಭಾಗವತವೂ ಭೇದವನ್ನೇ ಹೇಳಿದೆ.

❖❖❖

ಮನಸ್ಸನ್ನು ಭಗವಂತನಲ್ಲಿರಿಸಿದರೆ ವಿಷಯಾಕರ್ಷಣೆ ತಪ್ಪುವುದೆಂದು ಹಂಸನಾಮಕ ಪರಮಾತ್ಮ ಸನಕಾದಿಗಳಿಗೆ ಉಪದೇಶಿಸುವನೆಂದು ಶ್ರೀಕೃಷ್ಣ ಉದ್ಧವನಿಗೆ ಹೇಳುತ್ತಾನೆ.

ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಜಾಃ।
ಜೀವಸ್ಯ ದೇಹ ಉಭಯಂ ಗುಣಾಶ್ಚೇತೋ ಮದಾತ್ಮನಃ ॥ ೨೫ ॥

ಮುನಿಗಳೆ, ವಿಷಯಗಳಲ್ಲಿ ಮನಸ್ಸು ಮನಸಿನಲ್ಲಿ ವಿಷಯಗಳು ಪರಸ್ಪರ ಸೇರಿಹೋಗುವುದು ನಿಜ. ಆದರೆ ನನ್ನಲ್ಲಿ ಮನಸ್ಸಿಟ್ಟವನಿಗೆ ವಿಷಯಾಸೆ ತತ್ವಜ್ಞಾನದಿಂದ 'ದೇಹೇ' ಸುಟ್ಟುಹೋಯಿತು ಎಂದೇ ತಿಳಿಯಿರಿ ಅಂದರೆ, ಮುಂದೆ ನಿಶ್ಚಿತವಾಗಿ ಸುಟ್ಟೇಹೋಗುವುದು, ವಿಷಯ ಮನಸ್ಸುಗಳು ಒಂದಾಗುವುದಿಲ್ಲ ಎಂದು ತಿಳಿಯಿರಿ.

[1]ಕರ್ತೃತ್ವಭೋಕ್ತೃತ್ವಾದಿ ರೂಪವಾಗಿ ವಿಷಯಗಳಲ್ಲಿ ಸಿಲುಕಿಕೊಂಡಿರುವ ಅಂತಃಕರಣವು ಜೀವಸ್ವರೂಪವಲ್ಲ, ಜೀವನು ಬ್ರಹ್ಮಸ್ವರೂಪ. ಅವನಲ್ಲಿ ಅಂತಃಕರಣದ ಅಧ್ಯಾಸವಾಗಿದೆ. ಅಂತಃಕರಣ ಸ್ವಾಭಾವಿಕವಾಗಿ ವಿಷಯಗಳನ್ನು ಅರಸಿ ಹೋಗುತ್ತದೆ. ಅದರಿಂದ ಜೀವನು ತಾನು ಬ್ರಹ್ಮಸ್ವರೂಪನೆಂದೂ ವಿಷಯಗಳು ಮಿಥ್ಯೆ ಎಂದೂ ತಿಳಿದು ವಿರಕ್ತನಾಗಿ ಭಗವಂತನನ್ನು ಭಜಿಸಿದರೆ ವಿಷಯಗಳೂ ಅವುಗಳ ಕಡೆಗೆ ಓಡುವ ಅಂತಃಕರಣವೂ ಎರಡೂ ದೂರವಾಗುವುವು. ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ.

ಆದರೆ ಶ್ಲೋಕದಲ್ಲಿ 'ಮದಾತ್ಮನಃ' ಎಂದರೆ ಭಗವಂತನನ್ನು ಭಜಿಸುವ ಜೀವನೆಂದು ಶ್ರೀಮದಾಚಾರ್ಯರು ವ್ಯಾಖ್ಯಾನಿಸಿದ್ದಾರೆ. ಶ್ರೀಧರವ್ಯಾಖ್ಯಾನ 'ಮದಾತ್ಮನಃ' ಎಂದರೆ ಬ್ರಹ್ಮಸ್ವರೂಪನಾದ ಜೀವನೆಂದು ವ್ಯಾಖ್ಯಾನಿಸಿದೆ. 'ಮದಾತ್ಮ' ಎಂದರೆ ನನ್ನ ಸ್ವರೂಪ ಎಂದು ಹಂಸನು ಹೇಳುತ್ತಿದ್ದಾನೆ ಎಂದಿಟ್ಟುಕೊಂಡರೆ ಹಂಸನು ಪರಬ್ರಹ್ಮನಲ್ಲ, ಅವನು ಭಗವಂತ, ಜೀವನು ಭಗವತ್ ಸ್ವರೂಪನಲ್ಲ, ಇಬ್ಬರೂ ಪರಬ್ರಹ್ಮಸ್ವರೂಪರಷ್ಟೆ. ಅದರಿಂದ ಮದಾತ್ಮ ಶಬ್ದಕ್ಕೆ ಬ್ರಹ್ಮಸ್ವರೂಪನೆಂದು ವ್ಯಾಖ್ಯಾನ ಮಾಡಿದ್ದು ಸರಿಯಲ್ಲ.

---

1. ಯದಿ ಕರ್ತೃತ್ವ ಭೋಕ್ತೃತ್ವಾದಿ ರೂಪತಯಾ ವಿಷಯೈಃ ಸಂಗ್ರಥಿತಂ ಚಿತ್ತಂ ಬುದ್ಧ್ಯಾದಿ ಶಬ್ದವಾಚ್ಯಮೇವ ಜೀವಸ್ಯ ಸ್ವರೂಪಂ ಭವೇತ್ ತದ್ವಿಯೋಗೋ ನ ಘಟೇತ । ತಸ್ಯತು ಸ್ವರೂಪಮಹಂ ಬ್ರಹ್ಮೈವ । ಚಿತ್ತಾಧ್ಯಾಸೇನ ತು ತತ್‌ಸ್ವಭಾವತಯಾ ವಿಷಯೈಃ ಸಂಗ್ರಥಿತಂ । ಅತಃ ಸ್ವಸ್ಯ ಬ್ರಹ್ಮತ್ವಭಾವನಯಾ ವಿಷಯಾಣಾಂ ಚ ಮಿಥ್ಯಾತ್ವಾನುಸಂಧಾನೇನ ಸರ್ವತೋ ನಿರ್ವಿದ್ಯ ಭಗವಂತಂ ಭಜತೋ ಭವತ್ಯೇವ ಪರಿಪೂರ್ಣ ಸ್ವರೂಪಾವಸ್ಥಾನಮಿತಿ। ಹೇ ಪ್ರಜಾಃ ಪುತ್ರಕಾಃ, ಸತ್ಯಂ ಗುಣೇಷು ಚೇತ ಆವಿಶತಿ ಗುಣಾಶ್ಚ ಚೇತಸಿ, ಏವಂ ಗುಣಾಶ್ಚೇತಶ್ಚೋಭಯಂ ಗ್ರಥಿತಂ ಮದಾತ್ಮನೋ ಬ್ರಹ್ಮರೂಪಸ್ಯ ಜೀವಸ್ಯ ದೇಹೋಽಧ್ಯಸ್ತ ಉಪಾಧಿರ್ನ ತು ಸ್ವರೂಪಂ ॥ -ಶ್ರೀಧರಃ

'ಭಗವಂತನನ್ನು ಭಜಿಸುವ ಜೀವನಿಗೆ ವಿಷಯಸಂಬದ್ಧವಾದ ಅಂತಃಕರಣ ದೂರವಾಗುತ್ತದೆ' ಎಂದು ಹೇಳುವ ಅಭಿಪ್ರಾಯವನ್ನು ಸ್ವತಃ ಹೇಳುವ ಶ್ರೀಧರವ್ಯಾಖ್ಯಾನ 'ಮದಾತ್ಮ' ಶಬ್ದಕ್ಕೇ ಭಗವಂತನ ಭಜನೆ ಮಾಡುವ ಜೀವನೆಂದೇಕೆ ಅರ್ಥ ಹೇಳಿಲ್ಲ? ಕೇವಲ ಅದ್ವೈತ ತತ್ವವನ್ನು ಶ್ಲೋಕದಲ್ಲಿ ತುಂಬಿಸುವುದಕ್ಕಾಗಿ 'ಮದಾತ್ಮ' ಶಬ್ದಕ್ಕೆ ಕಷ್ಟದಿಂದ ಬ್ರಹ್ಮಸ್ವರೂಪ ಎಂದು ವ್ಯಾಖ್ಯಾನಿಸುವುದು ಸಮಂಜಸ ವಾಗುವುದಿಲ್ಲ.

ಶ್ಲೋಕದ ಉತ್ತರಾರ್ಧಕ್ಕೆ ಶ್ರೀಧರವ್ಯಾಖ್ಯಾನ ಅನ್ವಯ ಹೇಳುವಲ್ಲಿ ಸೋತಿದೆ. ಅಲ್ಲಿ 'ಮದಾತ್ಮನಃ ಜೀವಸ್ಯ ದೇಹಃ' 'ಬ್ರಹ್ಮಸ್ವರೂಪನಾದ ಜೀವನಿಗೆ ದೇಹವು' ಏನಾಗಿದೆ ಎಂದರೆ, 'ಅಧ್ಯಸ್ತ ಉಪಾಧಿಯಾಗಿದೆ' ಎಂದು ಸೇರಿಸಿ ವಾಕ್ಯಪೂರ್ತಿ ಮಾಡಿದೆ. 'ಗುಣಾಶ್ಚೇತ ಉಭಯಂ' 'ವಿಷಯಗಳು ಮತ್ತು ಮನಸ್ಸು ಈ ಎರಡು' ಏನಾಗಿವೆ ಎಂದರೆ, 'ಗ್ರಥಿತಂ' ಪರಸ್ಪರ ತಗುಲಿಕೊಂಡಿವೆ ಎಂದು ಸೇರಿಸಿ ವಾಕ್ಯ ಪೂರ್ತಿ ಮಾಡಿದೆ. ಶ್ಲೋಕದ ಪೂರ್ವಾರ್ಧದಲ್ಲಿ ಹೇಳಿದ್ದನ್ನೇ ತಿರುಗಿ ವ್ಯರ್ಥವಾಗಿ ಉತ್ತರಾರ್ಧದಲ್ಲಿ ಹೇಳಿದಂತಾಗಿದೆ. ಮತ್ತು ಒಂದು ವಾಕ್ಯ ಮಾಡಲು ಬರುವಂತಿದ್ದರೆ ಎರಡಾಗಿ ಸೀಳುವುದೂ ದೋಷವೇ.

ಶ್ರೀಮದಾಚಾರ್ಯರು 'ದೇಹೇ' ಎಂದು ಬಿಡಿಸಿ ಒಂದೇ ವಾಕ್ಯ ಮಾಡಿದ್ದಾರೆ. ವಾಕ್ಯಪೂರ್ತಿಯೂ ಆಗಿದೆ. 'ಮದಾತ್ಮನಃ ಜೀವಸ್ಯ' 'ಭಗವಂತನನ್ನು ಭಜಿಸುವ ಜೀವನಿಗೆ' 'ಗುಣಾಶ್ಚೇತ ಉಭಯಂ' 'ವಿಷಯಗಳು ಮತ್ತು ಮನಸ್ಸು ಈ ಎರಡು' 'ದೇಹೇ' ದಹಿಸಲ್ಪಟ್ಟಿತು, ಅಂದರೆ ನಿಶ್ಚಯವಾಗಿ ದಹಿಸಲ್ಪಡುತ್ತದೆ. ಯಾವಾಗ ಎಂದರೆ ಮುಂದೆ ಅಪರೋಕ್ಷಜ್ಞಾನ ಬಂದಾಗ ಅದು ದಹಿಸುತ್ತದೆ. ಅದನ್ನು ಬೇರೆ ಹೇಳಬೇಕಾಗಿಲ್ಲ. ದೇಹೇ ಎಂಬುದು ದಹ ಭಸ್ಮೀಕರಣೇ ಧಾತುವಿನ ಕರ್ಮಣಿಲಿಟ್ ರೂಪ.

ಮಯ್ಯೇವ ಮನೋ ಯಸ್ಯ ಸ ಮದಾತ್ಮಾ।
ತಸ್ಯೋಭಯಂ ದೇಹೇ ದಗ್ಧಮಭವತ್ ।

ನನ್ನಲ್ಲೇ ಮನಸ್ಸಿಟ್ಟವನು ಮದಾತ್ಮ. ಅವನಿಗೆ ಮನಸ್ಸು ಮತ್ತು ವಿಷಯ ಎರಡು ದಗ್ಧವಾಯಿತು.

❖❖❖

ನಾನು ವಿಷಯಸುಖ ಉಣ್ಣುವೆನೆಂದುಕೊಂಡು ಮನಸಿನಿಂದ ವಿಷಯಗಳ ಆಲೋಚನೆ ಮಾಡುವುದನ್ನು ಬಿಡಬೇಕು. ಪರಮಾತ್ಮನೆ ನನ್ನ ಮನಸಿನಲ್ಲಿ ನಿಂತು

ವಿಷಯಗಳನ್ನು ಉಂಡು ಉಣಿಸುತ್ತಾನೆ ಎಂದು ಚಿಂತಿಸಬೇಕು. ಆಗ ಮನಸಿನಲ್ಲಿ ವಿಷಯಾಸೆ ಅಳಿಯುವುದೆಂದು ಹಂಸನು ಸನಕಾದಿಗಳಿಗೆ ಉಪದೇಶಿಸುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಗುಣೇಷು ಚಾವಿಶೇಚ್ಚಿತ್ತಮಭೀಕ್ಷ್ಣಂ ಗುಣಸೇವಯಾ ।
ಗುಣಾಶ್ಚ ಚಿತ್ತಪ್ರಭವಾ ಮದ್ರೂಪ ಉಭಯಂ ತ್ಯಜೇತ್ ॥ ೨೬ ॥

ನಿರಂತರ ಮನಸಿನಿಂದ ವಿಷಯಗಳನ್ನು ಸೇವಿಸುವುದರಿಂದಲೇ ಮನಸು ವಿಷಯಗಳಲ್ಲಿ ಸೇರಿಹೋಗುವುದು, ಆಸಕ್ತವಾಗುವುದು. ವಿಷಯಗಳೂ ಮನಸಿನಲ್ಲಿ ಸೇರಿಹೋಗುವುವು, ಸಂಸ್ಕಾರರೂಪದಿಂದ ಮನಸ್ಸಿನಲ್ಲಿ ಸ್ಥಿರವಾಗಿರುವುವು. ಅದಕ್ಕೆ ಎರಡನ್ನೂ ನನ್ನ ಅಧೀನಗಳೆಂದು ನನ್ನ ಸ್ವರೂಪದಲ್ಲಿ ಆಶ್ರಯಿಸಿಕೊಂಡಿರುವುವೆಂದು ಸಮರ್ಪಿಸಬೇಕು.

[1]'ವಿಷಯಸುಖ ಮತ್ತು ಮನಸು ಇವೆರಡನ್ನೂ ಬ್ರಹ್ಮಾಭೇದ ಭಾವನೆಯಿಂದ ದೂರಮಾಡಿಕೊಳ್ಳಬೇಕು' ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. ಆದರೆ ಅದ್ವೈತ ಭಾವನೆ ಪ್ರಾಯೋಗಿಕವಲ್ಲ. ಹಸಿವಾದಾಗ ನಾನು ನಿರ್ಗುಣ ಬ್ರಹ್ಮ, ನನಗೆ ಹಸಿವಿಲ್ಲ ಅನ್ನವೂ ಮಿಥ್ಯೆ ಅದರಿಂದ ಹಸಿವು ಹಿಂಗುವುದೂ ಇಲ್ಲ ಎಂದು ಭಾವಿಸಿ ಉಣದಿರಲು ಯಾರಿಗೂ ಸಾಧ್ಯವಿಲ್ಲ. ಆನೆ ಬಂದಾಗ ಭಯದಿಂದ ಓಡಿದವನನ್ನು ಅವನ ಮಿತ್ರ ಕೇಳಿದ, ಆನೆ ಮಿಥ್ಯೆ, ಏಕೆ ಓಡಿದೆ? ಅದಕ್ಕೆ ಆತ ಆನೆಯೂ ಮಿಥ್ಯೆ ನಾನು ಓಡಿದ್ದೂ ಮಿಥ್ಯೆಯೇ 'ಗಜೋಽಪಿ ಮಿಥ್ಯಾ ಪಲಾಯನಮಪಿ ಮಿಥ್ಯಾ' ಎಂದನಂತೆ. 'ಮದ್ರೂಪಃ' ಎಂದು ಪ್ರಥಮಾಂತವಾಗಿ ಇಟ್ಟುಕೊಂಡು ಬ್ರಹ್ಮಸ್ವರೂಪನಾಗಿ, ಅಂದರೆ ತಾನು ತನ್ನನ್ನು ಬ್ರಹ್ಮಸ್ವರೂಪನೆಂದು ಭಾವಿಸುತ್ತ ವಿಷಯಪದಾರ್ಥವನ್ನು ಮಿಥ್ಯೆ ಎಂದುಕೊಂಡು ವಿಷಯಾಸೆಯನ್ನು ತೊರೆಯಬೇಕು ಎಂದು ವ್ಯಾಖ್ಯಾನಿಸಿದ್ದಾರೆ.

[2]ಸುದರ್ಶನಸೂರಿ ಮತ್ತು ವೀರರಾಘವ ವ್ಯಾಖ್ಯಾನಗಳಲ್ಲಿ 'ಮದ್ರೂಪೇ' ಎಂದು ಸತಿಸಪ್ತಮಿ ಎಂದಿಟ್ಟುಕೊಳ್ಳಬೇಕು. 'ಮದ್ರೂಪೇ ಚಿಂತ್ಯಮಾನೇ' ಭಗವಂತನ ರೂಪವನ್ನು ಧ್ಯಾನಿಸುತ್ತಿದ್ದರೆ ವಿಷಯಗಳ ಕಡೆಗೆ ಮನಸ್ಸು

1. ಗುಣಾಶ್ಚೇತಶ್ಚ ಏವಂ ಯದುಭಯಂ ತನ್ಮದ್ರೂಪಃ ಸಂತ್ಯಜೇತ್ । -ಶ್ರೀಧರಃ

2. ಮದ್ರೂಪ ಇತಿ ಸಪ್ತಮೀ ಮದ್ರೂಪೇ ಚಿಂತ್ಯಮಾನೇ ಉಭಯಂ ತ್ಯಜೇತ್ ಚಿತ್ತಂ ಗುಣಾಂಸ್ತ್ಯಜತಿ ಗುಣಾಶ್ಚ ಚಿತ್ತಂ ತ್ಯಜಂತೀತ್ಯರ್ಥಃ ।ಕಥಮನ್ಯೋನ್ಯ ಸಂತ್ಯಾಗ ಇತ್ಯುಪಕ್ರಮ ವಶಾದಯಮೇವಾರ್ಥಃ । -ಸುದರ್ಶನಃ

ಹೋಗುವುದಿಲ್ಲ' ಎಂದಿದ್ದಾರೆ. ಭಗವಂತ ಒಲಿದು ವಿಷಯ ಸುಖದುಃಖಗಳಿಗೆ ಕಾರಣವಾದ ಪುಣ್ಯಪಾಪಗಳನ್ನು ನಾಶಮಾಡಿ ವಿಷಯಾಸೆಯನ್ನು ಕಳೆಯುತ್ತಾನೆ ಎನ್ನುವ ವಿಶ್ವಾಸದಿಂದ ಧೈರ್ಯದಿಂದ ವಿಷಯಸೇವನೆಯನ್ನು ತ್ಯಜಿಸುವುದು ಶಕ್ಯವಿರುವುದರಿಂದ ಈ ವ್ಯಾಖ್ಯಾನ ಸಮರ್ಪಕವೇ. ಆದರೂ 'ಮದ್ರೂಪೇ ಚಿಂತ್ಯಮಾನೇ' ಎಂದು ಅಧ್ಯಾಹಾರ ಇಲ್ಲಿ ದೋಷ. ಮತ್ತು ಭಗವಂತನ ಧ್ಯಾನ ಮಾಡಿದಾಗ ವಿಷಯ ಮತ್ತು ಮನಸುಗಳು ಎರಡೂ ತ್ಯಾಗ ಮಾಡುತ್ತವೆ, 'ಉಭಯಂ ತ್ಯಜೇತ್' ಎನ್ನುವಾಗ ಎರಡೂ ಏನನ್ನು ತ್ಯಾಗ ಮಾಡುತ್ತವೆ? ಎಂಬ ಪ್ರಶ್ನೆ ಬರುವುದರಿಂದ ವಾಕ್ಯಪೂರ್ತಿಗೆ 'ಒಂದು ಇನ್ನೊಂದನ್ನು ತ್ಯಾಗ ಮಾಡುತ್ತವೆ ಎಂದೂ ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ.'

'ಕಥಮನ್ಯೋನ್ಯ ಸಂತ್ಯಾಗಃ' ವಿಷಯ ಮತ್ತು ಮನಸುಗಳು ಒಂದು ಇನ್ನೊಂದನ್ನು ತ್ಯಜಿಸಬೇಕಾದರೆ ಏನು ಮಾಡಬೇಕು ಎಂದು ಹಿಂದೆ ಸನಕಾದಿಗಳು ಪ್ರಶ್ನೆ ಮಾಡಿದ್ದರು (ಶ್ಲೋಕ 17) ಅದಕ್ಕೆ ಈ ಶ್ಲೋಕದಲ್ಲಿ ಉತ್ತರ ಸಿಗಬೇಕಾದರೆ 'ಉಭಯಂ ಅನ್ಯೋನ್ಯಂ ತ್ಯಜೇತ್' ಎಂದು ಅಧ್ಯಾಹಾರ ಮಾಡಿಯೇ ಅನ್ವಯ ಹೇಳಬೇಕು ಎಂದು ಈ ವ್ಯಾಖ್ಯಾನಕಾರರು ವಿವರಣೆ ನೀಡಿದ್ದಾರೆ. ಆದರೆ 'ವಿಷಯ ಮನಸ್ಸುಗಳು ಒಂದು ಇನ್ನೊಂದನ್ನು ಬಿಡಬೇಕಾದರೆ ಏನು ಮಾಡಬೇಕು?' ಎಂಬ ಪ್ರಶ್ನೆ ಮನಸಿನಲ್ಲಿ ಜಾಗೃತವಾಗಿರುವಾಗ 'ಭಗವಂತನ ರೂಪವನ್ನು ಧ್ಯಾನಮಾಡ ಬೇಕು' ಎಂದು ಉತ್ತರ ಹೇಳಿದರೆ ಸಾಕು. 'ಧ್ಯಾನ ಮಾಡಿದಾಗ ಒಂದು ಇನ್ನೊಂದನ್ನು ಬಿಡುತ್ತವೆ' ಎಂದು ಬೇರೆ ಹೇಳಬೇಕಾಗಿಲ್ಲ.

ಅದರಿಂದ ಶ್ರೀಮದಾಚಾರ್ಯರು ಅಧ್ಯಾಹಾರ ಕ್ಲೇಶವಿಲ್ಲದಂತೆ ಸುಲಭವಾದ ವ್ಯಾಖ್ಯಾನ ನೀಡುತ್ತಾರೆ, 'ಉಭಯಂ ತ್ಯಜೇತ್' ಎಂದರೆ 'ಎರಡೂ ತ್ಯಾಗ ಮಾಡುತ್ತವೆ' ಎಂದರ್ಥವಲ್ಲ, ಎರಡನ್ನೂ ತ್ಯಾಗಮಾಡಬೇಕು, ಅಂದರೆ ಸಮರ್ಪಿಸ ಬೇಕು, ಎಲ್ಲಿ ಎಂದರೆ 'ಮದ್ರೂಪೇ' ಭಗವಂತನ ಸ್ವರೂಪದಲ್ಲಿ ಎಂದು.

ಭಗವಂತನೇ ನನ್ನ ಮನಸ್ಸಿನಲ್ಲಿಯೂ ವಿಷಯದಲ್ಲಿಯೂ ನಿಂತು ಎರಡರ ಸಂಬಂಧ ಉಂಟುಮಾಡಿ ವಿಷಯಸುಖವನ್ನು ಉಂಡು ಉಣಿಸುತ್ತಾನೆ ಎಂದು ಚಿಂತಿಸಬೇಕು. ನಾನು ವಿಷಯಸುಖವನ್ನು ಉಣ್ಣುತ್ತೇನೆ ಎನ್ನುವ ಭ್ರಾಂತಿಯನ್ನು ಬಿಡಬೇಕು, ಭಗವಂತನನ್ನು ಹೀಗೆ ಧ್ಯಾನಿಸುವುದೇ, ಅವನಲ್ಲಿ ಉಭಯ ಸಮರ್ಪಣೆ ಅದೇ ಉಭಯತ್ಯಾಗ ಎಂದು ಹೇಳಿದಂತಾಗುವುದು.

ಇದರಿಂದ ಧ್ಯಾನದ ಆಕಾರವನ್ನೂ ತಿಳಿಸಿದಂತಾಯಿತು. 'ಉಭಯವೂ ನಿನ್ನ ಅಧೀನ' ಎಂದು ಧ್ಯಾನಿಸುವುದೇ ಉಭಯ ತ್ಯಾಗ. ಸುದರ್ಶನಸೂರಿ ವ್ಯಾಖ್ಯಾನದಲ್ಲಿ

'ಮದ್ರೂಪೇ ಚಿಂತ್ಯಮಾನೇ' ಭಗವಂತನ ಧ್ಯಾನ ಮಾಡುತ್ತಿದ್ದರೆ ಉಭಯವೂ ಪರಸ್ಪರ ತ್ಯಾಗ ಮಾಡುವುವು ಎಂದಂತಾಗುವುದು. ಧ್ಯಾನದ ಆಕಾರ ಏನೆಂದು ಹೇಳಿದಂತಾಗುವುದಿಲ್ಲ.

[3]ಜೀವಗೋಸ್ವಾಮಿ ವಿಶ್ವನಾಥವ್ಯಾಖ್ಯಾನಗಳಲ್ಲಿ ಶ್ರೀಧರವ್ಯಾಖ್ಯಾನವೂ ಸರಿ. ಸುದರ್ಶನಸೂರಿವ್ಯಾಖ್ಯಾನವೂ ಸರಿಯೆ ಎಂದಿದ್ದಾರೆ. ಜೊತೆಗೆ, ಶ್ರೀಧರ ವ್ಯಾಖ್ಯಾನದಲ್ಲಿ ಹೇಳುವ ನಿರ್ಗುಣಬ್ರಹ್ಮಧ್ಯಾನದಿಂದ ನಿರ್ಗುಣಬ್ರಹ್ಮಸ್ವರೂಪತ್ವ ಲಭಿಸುತ್ತದೆ, ಅದು ನಮಗೆ ಭಕ್ತರಿಗೆ ಇಷ್ಟವಲ್ಲ, ಬೇಡ. ನಮಗೆ ಭಗವಂತನ ಧ್ಯಾನದ ಆನಂದ ಬೇಕೆಂದಿದ್ದಾರೆ. ಇದು ಸರಿಯಲ್ಲ, ನಿರ್ಗುಣೋಪಾಸನೆಯಿಂದ ನಿರ್ಗುಣ ಬ್ರಹ್ಮಸ್ವರೂಪಪ್ರಾಪ್ತಿ ಇದೆ ಎಂದು ಅವರು ಒಪ್ಪುವುದು ಪ್ರಮಾಣಸಮ್ಮತವಲ್ಲ, ದುಃಖಸ್ವರೂಪತಮಃಪ್ರಾಪ್ತಿ ಎಂದು ಪ್ರಮಾಣಗಳು ಹೇಳುತ್ತವೆ.

ಮತ್ಸ್ವರೂಪೇ ತದುಭಯಂ ತ್ಯಜೇತ್
ಮಯಿ ಸ್ಥಿತಾಶ್ಚೇತೋ ಗುಣಾಶ್ಚೇತಿ ।

ವಿಷ್ಣುಸ್ಥಾ ವಿಷಯಾಃ ಸರ್ವೇ ವಿಷ್ಣಾವೇವ ಮನೋ ಮಮ ।
ಇತಿ ಮಯ್ಯರ್ಪಯೇತ್ ಸರ್ವಂ ತ್ಯಜೇತ್ ತತ್ ತಂ ನ ಬಾಧತೇ ॥
ಇತಿ ಸಾಮ್ಯೇ ॥

ನನ್ನ ಸ್ವರೂಪದಲ್ಲಿ ಮನಸು ಮತ್ತು ವಿಷಯಗಳೆರಡನ್ನೂ ಸಮರ್ಪಿಸಬೇಕು. ಅಂದರೆ, ಮನಸ್ಸು ಮತ್ತು ವಿಷಯಗಳು ನನ್ನ ಅಧೀನವಾಗಿವೆ ಎಂದು ಚಿಂತಿಸಬೇಕು.

ಹೀಗೆ ವ್ಯಾಖ್ಯಾನ ಮಾಡುವುದು ಸಾಮ್ಯ ಎಂಬ ಗ್ರಂಥಕ್ಕೆ ಅನುಸಾರಿಯಾಗಿದೆ, ಅಲ್ಲಿ ಹೇಳಿದೆ— 'ವಿಷಯಗಳೆಲ್ಲವೂ ವಿಷ್ಣುವಿನ ವಶದಲ್ಲಿವೆ. ವಿಷ್ಣುವಿನ ವಶದಲ್ಲಿಯೇ ನನ್ನ ಮನಸ್ಸೂ ಇದೆ.' ಹೀಗೆ ನನ್ನಲ್ಲಿ ಎಲ್ಲವನ್ನೂ ಅರ್ಪಿಸಬೇಕು. ಆಗ ಅವು ಭಕ್ತನನ್ನು ಬಾಧಿಸಲಾರವು' ಎಂದು ಭಗವಂತನ ಮಾತು.

❖❖❖

---

3. ಜ್ಞಾನಿನಾಂ ಕಷ್ಟೇನ ಪರಸ್ಪರ ತದುಭಯತ್ಯಾಜನಾ ಚ ನಿಷ್ಪ್ರಯೋಜನೈವ । ತೈರುಭಯೈರಪಿ ಪ್ರಾಯಸ್ತೇಷಾಂ ಪ್ರಯೋಜನಂ ನಾಸ್ತೀತ್ಯಾಹ ಮದ್ರೂಪಃ ಮದಭೇದ ಭಾವನಾವೇಶಾನ್ಮನ್ಮಯಃ ಸನ್ ಜ್ಞಾನೀ ಉಭಯಂ ತ್ಯಜೇತ್ ಭಕ್ತಾನಾಂ ತು ಮತ್ಸೇವಾಮೇವ ಪರಮಪುರುಷಾರ್ಥತ್ವೇನ ನಿಶ್ಚಿತವತಾಂ ಮದ್ರೂಪಗುಣ ಲೀಲಾರಸನಿಮಗ್ನಾಚ್ಚೇತಸಃ ಸಕಾಶಾತ್ ಸ್ವತ ಏವ ಗುಣಾ ಅಪಯಾಂತೀತಿ ನ ತೇಷಾಂ ಚೇತೋಗುಣಯೋಃ ಪರಸ್ಪರ ಸಂತ್ಯಾಗೋ ದುರ್ಘಟೋ ಮನ್ಮಯೀಭಾವಸ್ತು ತೇಷಾಂ ನೇಷ್ಟ ಇತಿಜ್ಞೇಯಂ । -ವಿಶ್ವನಾಥಃ

ಅವಸ್ಥಾತ್ರಯ ರೂಪವಾದ ಬಂಧದ ಸಮರ್ಪಣವೇ ವಿಷಯ ಮನಸುಗಳ ಸಂಬಂಧದ ಸಮರ್ಪಣ. ಅದಕ್ಕೆ ಒಲಿದು ಬಂಧಕಾರಣವಾದ ಪುಣ್ಯಪಾಪಗಳನ್ನು ಪರಿಹರಿಸಿ ಮುಕ್ತಿ ನೀಡುತ್ತಾನೆ ಇದು ಹಂಸನ ಉಪದೇಶವೆಂದು ಶ್ರೀಕೃಷ್ಣ ಉದ್ಧವನಿಗೆ ಹೇಳುತ್ತಾನೆ.

ಯರ್ಹಿ ಸಂಸೃತಿಬಂಧೋಽಯಮಾತ್ಮನೋ ಗುಣವೃತ್ತಿತಃ ।
ಮಯಿ ತುರ್ಯೇ ಸ್ಥಿತೋ ಜಹ್ಯಾತ್ತ್ಯಾಗಸ್ತುಗುಣಚೇತಸಾಮ್ ॥ ೨೮ ॥

ಹೀಗೆ ಅವಸ್ಥಾತ್ರಯ ರೂಪವಾದ ಬಂಧವು ಜೀವನಿಗೆ ಸ್ವಾಭಾವಿಕವಾಗಿರದೆ ಮನಸಿನಲ್ಲಿ ಸತ್ವಾದಿಗುಣತ್ರಯದಿಂದಾಗಿರುವುದರಿಂದ, ಗುಣತ್ರಯಾತೀತನಾಗಿ ಗುಣ ತ್ರಯ ಪ್ರೇರಕನಾಗಿರುವ ನನ್ನನ್ನೇ ಬಂಧಮುಕ್ತಿಗಾಗಿ ಜೀವನು ಆಶ್ರಯಿಸಬೇಕು. ನನ್ನನ್ನು ಉಪಾಸನೆ ಮಾಡುತ್ತಿರಬೇಕು. ಅಂದರೆ ಮನಸಿನಲ್ಲಾಗುವ ಅವಸ್ಥಾತ್ರಯ ರೂಪ ಬಂಧವನ್ನು ನನ್ನಲ್ಲಿ ಅರ್ಪಿಸಬೇಕು. 'ಮದ್ರೂಪ ಉಭಯಂ ತ್ಯಜೇತ್ (ಶ್ಲೋ.26) ವಿಷಯ ಮನಸುಗಳೆರಡನ್ನೂ ನನ್ನ ಸ್ವರೂಪದಲ್ಲಿ ಆಶ್ರಯಿಸಿ ಕೊಂಡಿರುವುದೆಂದು ಸಮರ್ಪಿಸಬೇಕು' ಎಂದು ನಾನು ಹೇಳಿದ ಉಭಯತ್ಯಾಗವೇ ಈ ಬಂಧತ್ಯಾಗ. ಬೇರೆಯಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಶ್ಲೋಕಪಾಠ—

ಯರ್ಹಿ ಸಂಸೃತಿಬಂಧೋಽಯಮಾತ್ಮನೋ ಗುಣವೃತ್ತಿದಃ ।
ಮಯಿ ತುರ್ಯೇ ಸ್ಥಿತೋ ಜಹ್ಯಾತ್ ತ್ಯಾಗಸ್ತದ್‌ಗುಣಚೇತಸಾಂ ॥

[1]ಇದಕ್ಕೆ ಶ್ರೀಧರವ್ಯಾಖ್ಯಾನ ಹೀಗಿದೆ— 'ಸಂಸೃತಿ ಎಂದರೆ ಅಂತಃಕರಣವನ್ನು ನಾನೆಂದು ಅಭೇದಾರೋಪ ಮಾಡಿಕೊಳ್ಳುವುದು. ಈ ಅಭೇದಾರೋಪದಿಂದ ಗುಣವೃತ್ತಿಗಳು ಅಂದರೆ ಅವಸ್ಥಾತ್ರಯ ಉಂಟಾಗುತ್ತವೆ. ಅಭೇದಾರೋಪವನ್ನು ಬಿಟ್ಟು ತುರ್ಯ ಅವಸ್ಥೆ ಅಂದರೆ ಆತ್ಮನ ಉಪಾಧಿರಹಿತ ಶುದ್ಧಸ್ವರೂಪದ ಅನುಸಂಧಾನ ಮಾಡುತ್ತಿದ್ದರೆ ವಿಷಯ ಮನಸ್ಸುಗಳ ಪರಸ್ಪರ ಸಂಬಂಧ

---

1. ಸಂಸೃತಿರ್ಬುದ್ಧಿಸ್ತಯಾ ಬಂಧೋಽಯಂ ಗುಣವೃತ್ತೀರ್ದದಾತಿ ತಸ್ಮಾನ್ ಮಯಿ ತುರ್ಯೇ ಸ್ಥಿತಃ ಸನ್ನಿಮಂ ಸಂಸೃತಿಬಂಧಂ ಜಹ್ಯಾತ್ ತತ್ ತದಾ ಗುಣಚೇತಸಾಂ ಗುಣಾನಾಂ ಚೇತಸಶ್ಚಾನ್ಯೋನ್ಯಂ ತ್ಯಾಗೋ ಭವತಿ । -ಶ್ರೀಧರಃ

ತಯಾ ಬುದ್ಧ್ಯಾಽಧ್ಯಸ್ತಯಾ ಅಯಮಧ್ಯಾಸ ನಿಬಂಧನೋ ಬಂಧ ಆತ್ಮನೋ ಜೀವಸ್ಯ ಗುಣವೃತ್ತೀರ್ಜಾಗ್ರದಾದ್ಯವಸ್ಥಾ ಆತ್ಮನ್ಯಸತೀರಪಿ ದದಾತಿ ಪ್ರತ್ಯಾಪಯತಿ ತದಾ ಸ್ವರೂಪಾನುಸಂಧಾನೇನಾಧ್ಯಾಸ ಪರಿತ್ಯಾಗ ಕಾಲೇ ಸ್ವತ ಏವಾಚೇತನಾನಾಂ ತೇಷಾಂ ಮಿಥಸ್ತ್ಯಾಗೋ ಭವತೀತ್ಯರ್ಥಃ । -ರಾಧಾರಮಣದಾಸಃ

ಬಿಟ್ಟುಹೋಗುತ್ತದೆ' ಎಂದು.

[2]'ತುರ್ಯ' ಎಂದರೇನೆಂದು ಜೀವಗೋಸ್ವಾಮಿವ್ಯಾಖ್ಯಾನ ಹೇಳಿದೆ.

ಈ ವಿವರಣೆ ಭಾಗವತಕ್ಕೇ ವಿರುದ್ಧವಾಗಿದೆ. ಹಿಂದೆ ಅಂತರಿಕ್ಷ ಮುನಿಯ ಉಪದೇಶ (11.3.5)ದಲ್ಲಿ 'ಅಂತರ್ಯಾಮಿಯು ನಿರ್ಮಿಸಿಕೊಟ್ಟ ದೇಹ ಇಂದ್ರಿಯ ಅಂತಃಕರಣಾದಿಗಳನ್ನು 'ನಾನೇ' ಎಂದು ಜೀವನು ಅಭೇದಾರೋಪ ಮಾಡಿಕೊಂಡು ತನ್ನಲ್ಲಿ ಕರ್ತೃತ್ವಭೋಕ್ತೃತ್ವವನ್ನೂ ಆರೋಪಿಸಿಕೊಂಡು ಕರ್ಮ ಮಾಡಿ ಫಲವನ್ನು ಭೋಗಿಸುತ್ತಾನೆ. ಪರಮಾತ್ಮನನ್ನು ಮರೆಯುತ್ತಾನೆ, ಅದರಿಂದ ನರಕಭಾಗಿಯಾಗುತ್ತಾನೆ. ತತ್ರ ಭಾಗವತಾನ್ ಧರ್ಮಾನ್ ಶಿಕ್ಷೇತ್(11.3.23) ಭಾಗವತಧರ್ಮಗಳನ್ನು ಹರಿಯು ಮೆಚ್ಚುವಂತೆ ಆಚರಿಸಿದರೆ ಮಾತ್ರ ಅವನ ಈ ಮಾಯೆಯನ್ನು ದಾಟಬಹುದು' ಎಂದಿದೆ. ಅದಕ್ಕೆ ವಿರುದ್ಧವಾಗಿ ಇಲ್ಲಿ ಶ್ರೀಧರವ್ಯಾಖ್ಯಾನ 'ಜೀವನು ತಾನೇ ಅಂತಃಕರಣಾಧ್ಯಾಸವನ್ನು ಬಿಟ್ಟರೆ ಸಾಕು, ವಿಷಯಗಳಿಗೂ ಮನಸ್ಸಿಗೂ ಸಂಬಂಧ ಬಿಟ್ಟುಹೋಗುತ್ತದೆ' ಎನ್ನುತ್ತಿದೆ.

ಅಂತಃಕರಣಾಧ್ಯಾಸ ಪ್ರಾರಬ್ಧಕರ್ಮಾಧೀನ. ಪ್ರಾರಬ್ಧಕರ್ಮವನ್ನು ~~ಪರಮಾತ್ಮನ ಅನುಗ್ರಹದಿಂದ ನಾಶಮಾಡಿಕೊಳ್ಳದೆ ಅಧ್ಯಾಸವನ್ನು ಸ್ವತಃ ಬಿಟ್ಟು~~ ಬಿಡಲಾಗದು. ಅದರಿಂದ ಬಂಧರೂಪವಾದ ಅಂತಃಕರಣವನ್ನೂ ವಿಷಯ ಪದಾರ್ಥಗಳನ್ನೂ ಹರಿಯ ಅಧೀನವೆಂದು ಅನುಸಂಧಾನ ಮಾಡಿದಾಗಲೇ ಮನಸ್ಸು ವಿಷಯಗಳ ಸಂಬಂಧ ಕಡಿದುಹೋಗುವುದು. ಏಕೆಂದರೆ ಹರಿಯ ಅನುಗ್ರಹದಿಂದ ಅಂತಃಕರಣಾಧ್ಯಾಸಕ್ಕೂ ವಿಷಯಸಂಬಂಧಕ್ಕೂ ಕಾರಣವಾದ ಪುಣ್ಯಪಾಪಗಳು ನಾಶವಾಗುತ್ತವೆ. ಅದರಿಂದ ಶ್ರೀಮದಾಚಾರ್ಯರು ಬಂಧತ್ಯಾಗವೇ ಉಭಯತ್ಯಾಗ. ಅಂದರೆ ಅಂತಃಕರಣ ಬಂಧದ ಅಧ್ಯಾಸವನ್ನು ಹರಿಯ ಅಧೀನವೆಂದು ಸಮರ್ಪಿಸುವುದೇ ಬಂಧತ್ಯಾಗ. ವಿಷಯವನ್ನು ಹರಿಯ ಅಧೀನವೆಂದು ತಿಳಿಯುವುದೇ ವಿಷಯತ್ಯಾಗ. ಏಕಕಾಲದಲ್ಲಿ ಅಂತಃಕರಣ ವಿಷಯಗಳೆರಡರ ಸಮರ್ಪಣೆಯೇ ಈ ಬಂಧತ್ಯಾಗ ವಿಷಯತ್ಯಾಗರೂಪವಾಗಿದೆ ಎಂದು.

[3]ವೀರರಾಘವ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ. ಆತ್ಮನಲ್ಲಿ ದೇಹಾಧ್ಯಾಸವೇ ಸಂಸಾರಬಂಧ. ಅದು ಗುಣವೃತ್ತಿಯನ್ನು ಅಂದರೆ ಮನಸಿಗೆ ಶಬ್ದಾದಿ ಗುಣಗಳ

---

2. ಮಯಿ ತುರ್ಯ ಇತಿ । ವಿರಾಟ್ ಹಿರಣ್ಯಗರ್ಭಶ್ಚ ಕಾರಣಂ ಚೇತ್ಯುಪಾಧಯಃ । ಈಶಸ್ಯ ಯತ್ತ್ರಿಭಿರ್ಹೀನಂ ತುರೀಯಂ ತತ್ಪದಂ ವಿದುಃ । ಇತಿನ್ಯಾಯೇನ । -ಜೀವಗೋಸ್ವಾಮೀ

3. ದೇಹಸಂಬಂಧರೂಪ ಸಂಸಾರಬಂಧಃ ಆತ್ಮನೋ ಜೀವಸ್ಯ ಗುಣವೃತ್ತಿದಃ ಆತ್ಮನೋ ಮನಸಃ ಗುಣೇಷು ಶಬ್ದಾದಿಷು ವೃತ್ತೀಃ ಭೋಗ್ಯತಾದಿ ಬುದ್ಧ್ಯಾತ್ಮಿಕಾ ದದಾತಿ । ತುರ್ಯೇ ಅವಸ್ಥಾ

ಸಂಬಂಧವನ್ನು ಉಂಟುಮಾಡುತ್ತದೆ. ಅವಸ್ಥಾತ್ರಯ ರಹಿತನಾದ ಜೀವಶರೀರಕನಾದ ಪರಮಾತ್ಮನ ಧ್ಯಾನ ಮಾಡುತ್ತ ಮನಸ್ಸು ವಿಷಯಾಸೆಯನ್ನು ತ್ಯಾಗಮಾಡಬೇಕು. ಆಗ ಮನಸ್ಸು ವಿಷಯಗಳ ಸಂಬಂಧ ಬಿಟ್ಟು ಹೋಗುವುದು ಎಂದು. ಇಲ್ಲಿ ಮನಸ್ಸು ವಿಷಯಾಸೆಯನ್ನು ತ್ಯಾಗ ಮಾಡಿದರೆ ಮನಸಿನ ವಿಷಯ ಸಂಬಂಧ ಇಲ್ಲವಾಗುವುದು ಎನ್ನುವುದು ಆತ್ಮಾಶ್ರಯ, ವಿಷಯಾಸೆಯನ್ನು ಬಿಟ್ಟರೆ ವಿಷಯಾಸೆ ಬಿಟ್ಟುಹೋಗುವುದು ಎಂದು. ಆದರೂ ಇವರ ವ್ಯಾಖ್ಯಾನದಲ್ಲಿ 'ತುರ್ಯೇ ಸ್ಥಿತಃ' ಎಂದರೆ ಅವಸ್ಥಾತ್ರಯರಹಿತನಾದ ಜೀವ ಶರೀರಕನಾದ ಪರಮಾತ್ಮನ ಧ್ಯಾನ ಬೇಕೆಂದಿದೆ. ಶ್ರೀಧರವ್ಯಾಖ್ಯಾನಕ್ಕೆ 'ತುರ್ಯ' ಎಂದರೆ ಜೀವಸ್ವರೂಪವೇ ವಿವಕ್ಷಿತವಾಗಿದೆ.

ಗುಣಚೇತಸಾಂ ತ್ಯಾಗ ಏವ ಬಂಧತ್ಯಾಗಃ ।

'ತದುಭಯಂ ತ್ಯಜೇತ್' 'ತುರ್ಯೋಪಾಸನಾಫಲವು ವಿಷಯ ಮನಸುಗಳ ತ್ಯಾಗವೆಂದು ಹಿಂದೆ (ಶ್ಲೋಕ.೨೬) ಹೇಳಿದೆ. ಈ ಶ್ಲೋಕದಲ್ಲಿ ಸಂಸೃತಿಬಂಧತ್ಯಾಗವು ತುರ್ಯೋಪಾಸನಾಫಲವಾಗಿ ಉಕ್ತವಾಗುತ್ತಿದೆ. ಆದರೂ ವಿರೋಧವಿಲ್ಲ. ಏಕೆಂದರೆ ಹಿಂದೆ ಹೇಳಿದ ಸತ್ವಾದಿಗುಣಜನ್ಯ ವಿಷಯಮನಸ್ಸುಗಳ ತ್ಯಾಗವೇ ಈಗ ಹೇಳುವ ಗುಣಜನ್ಯ ಅವಸ್ಥಾತ್ರಯರೂಪಬಂಧ ತ್ಯಾಗ. ಅವುಗಳಿಗೆ ಭೇದವಿಲ್ಲ.

ಜಾಗರವು ಗುಣಜನ್ಯ ಬಾಹ್ಯವಿಷಯ ಭೋಗ. ಸ್ವಪ್ನವು ಗುಣಜನ್ಯ ಆಂತರವಿಷಯಭೋಗ. ಜೀವನಿಗೆ ಇವೆರಡೂ ಗುಣಜನ್ಯ ಬಂಧರೂಪವಾದ್ದರಿಂದ ಅದನ್ನು ಪರಮಾತ್ಮನಲ್ಲಿ ತ್ಯಾಗ ಮಾಡಿದರೆ, ಅಂದರೆ ಅರ್ಪಿಸಿದರೆ, ಹಿಂದೆ ಹೇಳಿದ ಎಲ್ಲ ಗುಣಜನ್ಯ ವಿಷಯಭೋಗವನ್ನು ಅರ್ಪಿಸಿದಂತಾಯಿತು.

❖❖❖

ಜೀವ ಪರಮಾತ್ಮರ ವಿಷಯದಲ್ಲಿ ಅನ್ಯಥಾಜ್ಞಾನವನ್ನು ದೂರ ಮಾಡಿಕೊಳ್ಳದೆ ಸಂಸಾರ ನಿವೃತ್ತಿಯಾಗುವುದಿಲ್ಲ ಎಂದು ಹಂಸನಾಮಕ ಪರಮಾತ್ಮನ ಉಪದೇಶವಿದೆ ಎಂದು ಶ್ರೀಕೃಷ್ಣ ಉದ್ಧವನಿಗೆ ಹೇಳುತ್ತಾನೆ.

ಯಾವನ್ನಾನಾರ್ಥಧೀಃ ಪುಂಸೋ ನ ನಿವರ್ತೇತ ಯುಕ್ತಿಭಿಃ ।
ಜಾಗ್ರತ್ಯಪಿ ಸ್ವಪನ್ನಜ್ಞಃ ಸ್ವಪ್ನೇ ಜಾಗರಣಂ ಯಥಾ ॥ ೩೦ ॥

ತ್ರಯರಹಿತೇ ಜೀವಶರೀರಕೇ ಮಯಿ ಸ್ಥಿತಃ ಆತ್ಮಾ ಮನಃ ಜಹ್ಯಾತ್ । ಗುಣವೃತ್ತೀರ್ಜಹ್ಯಾದಿತ್ಯರ್ಥಃ । ಗುಣವೃತ್ತಿತ್ಯಾಗಾದ್ ಗುಣಚೇತಸಾಂ ತ್ಯಾಗಃ ಸ್ಯಾತ್ ।
-ವೀರರಾಘವಃ

ಎಂದಿನವರೆಗೆ ಮನುಷ್ಯನಿಗೆ ಜೀವಪರಮಾತ್ಮರ ವಿಷಯದಲ್ಲಿ ಅನ್ಯಥಾಜ್ಞಾನವು ಯುಕ್ತಿವಿಚಾರಗಳಿಂದ ದೂರವಾಗುವುದಿಲ್ಲವೋ ಅಂದಿನವರೆಗೂ ಅವನು ಎಚ್ಚರವಿದ್ದೂ ನಿದ್ರಿಸುವ ಅಜ್ಞಾನಿ ಎನಿಸುತ್ತಾನೆ. ಸ್ವಪ್ನದಲ್ಲಿ ಜಾಗರವಸ್ತುಜ್ಞಾನದಂತೆ ಅದು ದುಃಖಕರವಾದ ಭ್ರಮೆಯಾಗಿರುತ್ತದೆ.

[1]'ಪ್ರಮಾಣಭೂತವಾದ ವೇದದಲ್ಲಿ ಹೇಳಿದ ವರ್ಣ ಆಶ್ರಮ ಧರ್ಮಗಳೂ ಅವುಗಳ ಆಚರಣೆಯಿಂದ ಸಿಗುವ ಫಲವಾದ ಸ್ವರ್ಗಾದಿಗಳೂ ನಾನಾ ವಿಧವಾಗಿವೆ. ಎಲ್ಲಿಯವರೆಗೆ ಅವುಗಳ ಬಗ್ಗೆ ಅಜ್ಞಾನಿಗಳಿಗೆ ಇರುವ ನಂಬಿಕೆಯು 'ಯೋ ಜಾಗರೇ ಬಹುವಿಧಾನ್' ಎಂದು ಮುಂದೆ ಹೇಳುವ ಯುಕ್ತಿಗಳಿಂದ ಸಡಿಲಗೊಳ್ಳುವುದಿಲ್ಲವೋ ಅಂದಿನವರೆಗೆ ಸಂಸಾರ ಬಂಧನವಿದ್ದೇ ಇರುತ್ತದೆ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ.

ಶುಕದೇವವ್ಯಾಖ್ಯಾನ ಇದನ್ನು ವಿರೋಧಿಸುತ್ತಿದೆ. 'ವರ್ಣಾಶ್ರಮ ಧರ್ಮವೆಲ್ಲವನ್ನೂ ಬಿಟ್ಟು ಬಿಡುವುದೇ ಮೋಕ್ಷಸಾಧನವೆನ್ನುವುದು ವೇದವಿರುದ್ಧ. ವೇದದಲ್ಲಿ 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ' ತತ್ವಜ್ಞಾನಾರ್ಥಿಗಳು ವೇದವಿಹಿತಕರ್ಮ ಮಾಡಬೇಕು' ಎಂದಿದೆ. ಎಲ್ಲ ಜ್ಞಾನಿಗಳೂ ಇದನ್ನು ಅಂಗೀಕರಿಸಿದ್ದಾರೆ. ವೇದವಿಹಿತಕರ್ಮವೆಲ್ಲವೂ ಮಿಥ್ಯೆಯಾಗಿದ್ದು ಕೇವಲ ಅಜ್ಞಾನಿಗಳಿಗೇ ಅವು ವಿಹಿತವಾಗಿವೆ ಎನ್ನುವುದಾದರೆ ಆ ಕರ್ಮಗಳಲ್ಲಿ ಸೇರಿರುವ ಸನ್ಯಾಸಧರ್ಮ ಭಿಕ್ಷಾಟನೆ ವೇದಾಂತಾಧ್ಯಯನ ಮಂತ್ರಜಪವೆಲ್ಲವೂ ಮುಮುಕ್ಷುಗಳಿಗೆ ಹೇಯವೆನ್ನಬೇಕಾದೀತು. ಶ್ರವಣಮನನಾದಿಗಳು ಜ್ಞಾನಭಕ್ತಿವೈರಾಗ್ಯಗಳು ಎಲ್ಲವೂ ವೇದೋಕ್ತವಾಗಿದ್ದು ಹೇಯವಾಗಬೇಕಾದೀತು. ಸಕಲಶಾಸ್ತ್ರಗಳೂ ಮಿಥ್ಯೆ ಎಂದರೆ ಸಕಲಶಾಸ್ತ್ರವಿರೋಧವೂ ಉಂಟಾಗುವುದು. ಪಶುಪುತ್ರಾದಿ ನಶ್ವರ ಫಲಕ್ಕಾಗಿ ಕರ್ಮಗಳನ್ನು ವಿಧಿಸುವ ವೇದಭಾಗವನ್ನು ಮಾತ್ರ ಅಜ್ಞಾನಿಗಳಿಗಾಗಿ ಇದೆ ಎಂದು ಬಿಟ್ಟರೂ ಎಲ್ಲ ವೇದವೂ ಅಜ್ಞಾನಿಗಳಿಗಾಗಿ ಇದೆ ಎನ್ನುವುದು ತಪ್ಪು' ಎಂದು.

ನಶ್ವರಫಲವನ್ನು ಹೇಳುವ ವೇದಭಾಗವೂ ಕೂಡ ವಸ್ತುತಃ ಮೋಕ್ಷದಲ್ಲಿ ಪಶುಪುತ್ರಾದಿ ಫಲ ಲಭ್ಯವಾಗುವುದೆಂದೇ ಹೇಳಿರುವುದರಿಂದ ಮೋಕ್ಷಫಲವನ್ನೇ ಹೇಳುತ್ತಿದೆ. ಅದರಿಂದ ವೇದದಲ್ಲಿ ಒಂದು ಅಕ್ಷರವೂ ಕೂಡ ಮುಮುಕ್ಷುಗಳಿಗೆ ಹೇಯವಲ್ಲ ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ.

---

1. ವೇದಪ್ರಮಿತ ವರ್ಣಾಶ್ರಮಕರ್ಮಾದಿ ನಾನಾಧೀಃ। -ಶ್ರೀಧರಃ

[2]ಸುದರ್ಶನಸೂರಿ ವೀರರಾಘವ ವ್ಯಾಖ್ಯಾನಗಳು 'ನಾನಾರ್ಥಧೀ' ಎಂದರೆ 'ದೇವ ಮನುಷ್ಯತ್ವಾದಿ ಧರ್ಮಗಳನ್ನು ಆತ್ಮನಲ್ಲಿ ಆರೋಪಿಸಿಕೊಳ್ಳುವುದು' ಎಂದಿವೆ. ದೇವಮನುಷ್ಯಾದಿ ಶರೀರಗಳಲ್ಲಿ ಆ ಧರ್ಮಗಳಿವೆ. ಆತ್ಮನಲ್ಲಿ ಇಲ್ಲ, ಆತ್ಮಕ್ಕೆ ಜಾತಿ ಇಲ್ಲ, ಅದರಿಂದ ದೇಹಗಳಲ್ಲಿರುವ ನಾನಾ ಜಾತಿಗಳನ್ನು ಆತ್ಮನಲ್ಲಿ ಆರೋಪಿಸಿ ಕೊಳ್ಳದಿರುವುದು ಮೋಕ್ಷಸಾಧನ ಎಂದಂತಾಯಿತು. ಆದರೆ ಬ್ರಾಹ್ಮಣತ್ವಾದಿ ಜಾತಿಗಳನ್ನು ಆತ್ಮನಲ್ಲಿ ಆರೋಪಿಸಿಕೊಳ್ಳದಿದ್ದರೆ ವರ್ಣಾಶ್ರಮ ಧರ್ಮಾಚರಣೆಗೆ ಅಧಿಕಾರವೇ ಇಲ್ಲವಾಗುತ್ತದೆ. ಅದು ನರಕ ಸಾಧನವೇ ಆಗುತ್ತದೆ. ಮೋಕ್ಷಸಾಧನ ವಾಗುವುದು ದೂರದ ಮಾತು.

[3]ನಾನಾ ವಿಷಯಪದಾರ್ಥಗಳ ಬುದ್ಧಿಯೇ ನಾನಾರ್ಥಧೀ ಎಂದು ವಿಶ್ವನಾಥ ಶುಕದೇವ ಮುಂತಾದವರ ವ್ಯಾಖ್ಯಾನಗಳು ಹೇಳುತ್ತವೆ. ಆದರೆ ವಿಷಯ ಪದಾರ್ಥಗಳು ಸ್ವತಃ ಪುರುಷಾರ್ಥವಲ್ಲದಿದ್ದರೂ ಪರಮಪುರುಷಾರ್ಥವಾದ ಮೋಕ್ಷಕ್ಕೆ ಸಾಧನವಾಗಬಲ್ಲವು. ವಿಷಯಪದಾರ್ಥಜ್ಞಾನವು ಮೋಕ್ಷ ವಿರೋಧಿಯೇ ಆಗಿದ್ದರೆ ಪರಮಾತ್ಮ ಅವುಗಳನ್ನೇಕೆ ಸೃಷ್ಟಿ ಮಾಡಬೇಕಾಗಿತ್ತು? ಪರಮಾತ್ಮ ಜೀವರಿಗಾಗಿ,

'ಸಸರ್ಜೋಚ್ಚಾವಚಾನ್ಯಾದೌ ಸ್ವಯಮಾತ್ಮಪ್ರಸಿದ್ಧಯೇ' (11.3.3)

ತನ್ನ ಜ್ಞಾನ ಉಂಟುಮಾಡಲೆಂದೇ ಪಂಚಭೂತಗಳಿಂದ ಶರೀರಾದಿ ಸೃಷ್ಟಿ ಮಾಡಿದನೆಂದು ಅಂತರಿಕ್ಷ ಮುನಿಯ ಉಪದೇಶದಲ್ಲಿ ಭಾಗವತವೇ ಹೇಳಿದೆ. ವಿಷಯಪದಾರ್ಥಗಳಿಂದ ಭಗವಂತನ ಆರಾಧನೆ ಮಾಡುವುದು ಭಾಗವತಧರ್ಮ. ಅದರಿಂದ ಮೋಕ್ಷ ವಿರೋಧಿಯಾದ ನಾನಾರ್ಥಧೀ ಎಂದರೆ ಏನೆಂದು ಶ್ರೀಮದಾಚಾರ್ಯರು ಬ್ರಹ್ಮತರ್ಕ ವಚನದ ಮೂಲಕ ತಿಳಿಸುತ್ತಾರೆ.

ಭಿನ್ನಸ್ಯ ತ್ವೇಕಭಾವೇನ ತಥೈಕಸ್ಯ ಚ ಭೇದತಃ ।
ಜ್ಞಾನಂ ನಾನಾರ್ಥಧೀಃ ಪ್ರೋಕ್ತಾ ನಾನಾತ್ವಾದರ್ಥತದ್ಧಿಯೋಃ ॥

ಇತಿ ಬ್ರಹ್ಮತರ್ಕೇ ॥

ಭಿನ್ನವಾಗಿರುವುದನ್ನು ಅಭಿನ್ನವೆಂದು ಅಭಿನ್ನವಾಗಿರುವುದನ್ನು ಭಿನ್ನವೆಂದು

2. ನಾನಾರ್ಥಧೀರ್ದೇವಮನುಷ್ಯಾದ್ಯಭಿಮಾನಬುದ್ಧಿಃ ಯುಕ್ತಿಭಿಃ ದೇಹಾತ್ಮಭೇದ ಪ್ರತಿಪಾದಕಯುಕ್ತಿಭಿಃ । -ಸುದರ್ಶನಃ

3. ನಾನಾರ್ಥಧೀರ್ನಾನಾ ವಿಷಯಗ್ರಹಣಂ । -ವಿಶ್ವನಾಥಃ

ತಿಳಿಯುವುದು 'ನಾನಾರ್ಥಧೀ' ಎನಿಸುತ್ತದೆ. ಏಕೆಂದರೆ ನಾನಾ ಎಂದರೆ ಭಿನ್ನ. ವಸುಸ್ಥಿತಿಗೆ ಭಿನ್ನವಾಗಿ ವಿಷಯವನ್ನು ಗ್ರಹಿಸುವುದರಿಂದ ಈ ಬಗೆಯ ಜ್ಞಾನವು ನಾನಾರ್ಥಧೀ ಎನಿಸುತ್ತದೆ. ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಜೀವ ಪರಮಾತ್ಮರ ವಿಷಯದಲ್ಲಿ ಇಂಥಹ 'ನಾನಾರ್ಥಧೀ' ಸಂಭವವಿದೆ. ಜೀವಪರಮಾತ್ಮರು ಭಿನ್ನರು. ಅಭಿನ್ನರೆಂದು ಅದ್ವೈತವು ಹೇಳುತ್ತದೆ. ಪರಮಾತ್ಮನ ಅವತಾರರೂಪಗಳು ಪರಸ್ಪರ ಅಭಿನ್ನಗಳು. ಭಿನ್ನವೆಂದು ಅಜ್ಞರು ತಿಳಿಯುತ್ತಾರೆ. ಇಂಥ ನಾನಾರ್ಥಧೀ ಎಂದಿನವರೆಗೆ ದೂರವಾಗುವುದಿಲ್ಲವೋ ಅಂದಿನವರೆಗೂ ಅವನು ಅಜ್ಞಾನಿ ಎನಿಸುತ್ತಾನೆ, ಅವನ ಸಂಸಾರ ನಿವೃತ್ತಿಯಾಗುವುದಿಲ್ಲ.

❖❖❖

ಜೀವೇಶ್ವರರ ಐಕ್ಯಜ್ಞಾನ ಏಕೆ ನಾನಾರ್ಥಧೀ ಎನ್ನುವುದನ್ನು ಹಂಸನಾಮಕ ಪರಮಾತ್ಮ ಸನಕಾದಿಗಳಿಗೆ ಉಪದೇಶಿಸುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಅಸತ್ವಾದಾತ್ಮನೋಽನ್ಯೇಷಾಂ ಭಾವಾನಾಂ ಕಿಂಕೃತಾ ಽಭಿದಾ ।
ಗತಯೋ ಹೇತವಶ್ಚಾಸ್ಯ ಮೃಷಾ ಸ್ವಪ್ನದೃಶೋ ಯಥಾ ॥ ೩೦ ॥

ಪರಮಾತ್ಮನಿಗಿಂತ ಬೇರೆಯಾಗಿರುವ ಜೀವ ಜಡವೆಲ್ಲವೂ 'ಅಸತ್' ಅಶಕ್ತವಾದ್ದರಿಂದ ಇದ್ದೂ ಇಲ್ಲದಂತೆ. ಅವುಗಳಿಗೆ ಪರಮಾತ್ಮನಿಂದ ಅಭೇದ ಯಾವ ಪ್ರಮಾಣದಿಂದ ಸಿದ್ಧವಾಗುತ್ತದೆ? ಅಭೇದಸಾಧಕವಾಗಿ ಆಗಮ ಯುಕ್ತಿಗಳನ್ನೆನಾದರೂ ಹೇಳಿದರೆ ಅದು ಜೀವನ ಸ್ವಾಪ್ನಪದಾರ್ಥಗಳಿಗೆ ಜಾಗರದ ಅಭೇದಸಾಧಕವನ್ನು ಹೇಳುವಂತೆ ಅಸಂಗತವಾಗುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಶ್ಲೋಕಪಾಠವನ್ನು ಬೇರೆ ಇಟ್ಟುಕೊಂಡಿದ್ದಾರೆ—

'ಅಸತ್ವಾದಾತ್ಮನೋಽನ್ಯೇಷಾಂ ಭಾವಾನಾಂ ತತ್ಕೃತಾ ಭಿದಾ ।
ಗತಯೋ ಹೇತವಶ್ಚಾಸ್ಯ ಮೃಷಾ ಸ್ವಪ್ನದೃಶೋ ಯಥಾ॥'

[1]'ಆತ್ಮನಿಗಿಂತ ಬೇರೆಯಾದ ದೇಹಾದಿಗಳು ಮಿಥ್ಯೆಯಾದ್ದರಿಂದ ಆತ್ಮನಲ್ಲಿ

---

1. ನನು ಕಥಂ ವೇದಪ್ರಮಿತ ವರ್ಣಾಶ್ರಮಕರ್ಮಾದಿ ನಾನಾಧೀರ್ನಿವರ್ತೇತ ತತ್ರಾಹ ಅಸತ್ವಾದಿತಿ । ಭಾವಾನಾಂ ದೇಹಾದೀನಾಂ ತತ್ಕೃತಾ ಭಿದಾ ವರ್ಣಾಶ್ರಮಾದಿರೂಪಾ ಗತಯಃ ಸ್ವರ್ಗಾದಿಫಲಾನಿ ಹೇತವಃ ಕರ್ಮಾಣಿ ಚಾಸ್ಯಾತ್ಮನೋ ಮೃಷಾ । ಅವಿದ್ಯಾವದ್ವಿಷಯೋ ವೇದ ಇತಿಭಾವಃ। -ಶ್ರೀಧರಃ

ದೇಹಪ್ರಯುಕ್ತವಾದ ವರ್ಣಾಶ್ರಮಾದಿ ಭೇದಗಳಾಗಲಿ, ಕರ್ಮ ಫಲವಾದ ಸ್ವರ್ಗಾದಿಗಳಾಗಲಿ ಕರ್ಮಗಳಾಗಲಿ ಎಲ್ಲವೂ ಮಿಥ್ಯೆ. ಅವನ್ನು ವೇದಗಳು ಅಜ್ಞಾನಿಗಳಿಗಾಗಿ ಹೇಳುತ್ತವೆ. ಕನಸಿನಲ್ಲಿ ಕಾಣುವ ರಾಜಾದಿ ಭೇದಗಳಂತೆ ಅವು ಮಿಥ್ಯೆಯಾದ್ದರಿಂದ ಗೀತೆಯೂ 'ತ್ರೈಗುಣ್ಯವಿಷಯಾ ವೇದಾಃ' ತ್ರಿಗುಣಾತ್ಮಕವಾದ ಕರ್ಮ ಕರ್ಮಜನ್ಯಫಲ ಮುಂತಾದುವನ್ನು ವೇದದ ಕರ್ಮಕಾಂಡ ಹೇಳುತ್ತದೆ. ಅದನ್ನು ಅರ್ಜುನ, ನೀನು ಪರಿತ್ಯಾಗ ಮಾಡು' ಎಂದು ಹೇಳುತ್ತಿದೆ. ಆತ್ಮಾನುಭವ ಹೊಂದಿದ ಜ್ಞಾನಿಗೆ ಕರ್ಮದಲ್ಲಿ ಅಧಿಕಾರವಿಲ್ಲ' ಎಂದು ಶ್ರೀಧರ ರಾಧಾರಮಣ ವ್ಯಾಖ್ಯಾನಗಳು ಹೇಳುತ್ತಿವೆ.

ಇವರು ಇಟ್ಟುಕೊಂಡಿರುವ ಪಾಠ ತಪ್ಪು, ವ್ಯಾಖ್ಯಾನವೂ ಗೀತೆಗೆ ವಿರುದ್ಧ, ಬ್ರಹ್ಮಸೂತ್ರಕ್ಕೂ ವಿರುದ್ಧ. ಬ್ರಹ್ಮಸೂತ್ರದಲ್ಲಿ 'ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್' ಎಂದಿದೆ. ಸ್ವಪ್ನಕ್ಕೆ ಎಚ್ಚರದಲ್ಲಿ ಬಾಧವಿದೆ. ಹಾಗೆ ಆತ್ಮನಿಗಿಂತ ಬೇರೆಯಾದ ದೇಹಾದಿಗಳಿಗೆ ಎಂದೂ ಬಾಧವಿಲ್ಲ. ಹೀಗಾಗಿ ಅವುಗಳನ್ನು ಸ್ವಪ್ನದಂತೆ ಮಿಥ್ಯೆ ~~ಎಂದು ಹೇಳಲಾಗದೆಂದು ಬ್ರಹ್ಮಸೂತ್ರ ಹೇಳುತ್ತಿರುವಾಗ 'ಅರ್ಥೋಽಯಂ~~ ಬ್ರಹ್ಮಸೂತ್ರಾಣಾಂ' 'ಭಾಗವತವೆಂದರೆ ಬ್ರಹ್ಮಸೂತ್ರಾರ್ಥವೇ' ಎಂದು ಗರುಡ ಪುರಾಣದಲ್ಲಿ ಪ್ರಶಂಸೆ ಮಾಡಿರುವ ಭಾಗವತ ಸ್ವಪ್ನದೃಷ್ಟಾಂತದಿಂದ ದೇಹಾದಿ ಮಿಥ್ಯಾತ್ವವನ್ನು ಹೇಳುವುದೆ? ಭಗವದ್ಗೀತೆಯಲ್ಲಿ—

ನಿಯತಸ್ಯ ತು ಸನ್ನ್ಯಾಸಃ ಕರ್ಮಣೋ ನೋಪಪದ್ಯತೇ ।
ಮೋಹಾತ್ ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥(18.7)

ವರ್ಣಾಶ್ರಮ ವಿಹಿತವಾದ ನಿತ್ಯನೈಮಿತ್ತಿಕ ಕರ್ಮವನ್ನು ತ್ಯಾಗ ಮಾಡುವುದು ಯುಕ್ತವಲ್ಲ. ಕರ್ಮವನ್ನು ಬಂಧಕವೆಂದು ಅನ್ಯಥಾ ತಿಳಿದು ತ್ಯಾಗಮಾಡುವುದು ತಾಮಸವೆನಿಸುವುದು' ಎಂದು ಮುಮುಕ್ಷುಗಳಿಗೆ ಎಚ್ಚರ ನೀಡಲಾಗಿದೆ.

ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।
ಶರೀರಯಾತ್ರಾಽಪಿ ಚ ತೇ ನ ಪ್ರಸಿಧ್ಯೇದಕರ್ಮಣಃ ॥ (3.8)

'ಕರ್ಮತ್ಯಾಗಕ್ಕಿಂತ ಕರ್ಮಾಚರಣೆಯೇ ಹೆಚ್ಚು ಪ್ರಶಸ್ತ. ಮತ್ತು ಕರ್ಮ

ಆತ್ಮನಃ ಸಂಬಂಧೇ ಮೃಷೈವ ಸ್ವಪ್ನದ್ರಷ್ಟುಃ ಸ್ವಪ್ನೇ ದೃಶ್ಯಮಾನ ರಾಜಾದಿ ಭೇದವತ್। ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನೇತಿವದ್ ಆತ್ಮಾನುಭವಿನೋ ನ ತತ್ರಾಧಿಕಾರ ಇತ್ಯರ್ಥಃ। -ರಾಧಾರಮಣಃ

ಮಾಡದಿದ್ದರೆ ಬದುಕಿರುವುದೇ ಅಶಕ್ಯವಾಗುವುದು. ಅದರಿಂದ ನಿತ್ಯನೈಮಿತ್ತಿಕ ಕರ್ಮಗಳನ್ನು ತಪ್ಪದೆ ಮಾಡುತ್ತಿರು' ಎಂದೂ ಭಗವದ್ಗೀತೆ ಹೇಳಿದೆ. ಹೀಗೆ ಅರ್ಜುನನಿಗೆ ಉಪದೇಶಿಸಿದ ಶ್ರೀಕೃಷ್ಣನೆ ಉದ್ಧವನಿಗೆ ಬೇರೆ ರೀತಿ ಉಪದೇಶಿಸುವನೆ? ಅದರಿಂದ ಭಾಗವತಕ್ಕೆ ಬೇರೆ ರೀತಿಯೇ ವ್ಯಾಖ್ಯಾನ ಮಾಡಬೇಕು.

ಜ್ಞಾನಿಗೆ ಕರ್ಮದಲ್ಲಿ ಅಧಿಕಾರವಿಲ್ಲದ್ದರಿಂದ ಅದನ್ನು ಬಿಟ್ಟರೂ ವಿಷಯಭೋಗವನ್ನು ಏಕೆ ಬಿಡಬೇಕು? ವಿಷಯಪದಾರ್ಥ ಮಿಥ್ಯೆಯಾದರೂ ಸುಖ ಸಾಧನವೆ ತಾನೆ? ವ್ಯವಹಾರಕಾಲದಲ್ಲಿ ಅದು ಸತ್ಯವೇ ಹೊರತು ಮೊಲದ ಕೊಂಬಿನಂತೆ ಅಸತ್ಯವಲ್ಲ. ಅದರಿಂದ ವಿಷಯಪದಾರ್ಥ ಮಿಥ್ಯೆ ಎಂದು ಭಾಗವತ ಹೇಳಿದರೆ ಅದು ವ್ಯರ್ಥವಾಗುವುದು. ವಿಷಯ ಮನಸುಗಳ ಸಂಬಂಧವನ್ನು ತ್ಯಾಗಮಾಡಬೇಕೆನ್ನಲು ಅದು ಸಾಧಕವಾಗುವುದಿಲ್ಲ.

[2]ವೀರರಾಘವ ಸುದರ್ಶನಸೂರಿ ಶುಕದೇವ ವಿಶ್ವನಾಥ ವ್ಯಾಖ್ಯಾನಗಳೆಲ್ಲವೂ ವಿಷಯಪದಾರ್ಥ ಸ್ವಪ್ನದಂತೆ ಅನಿತ್ಯವಾದ್ದರಿಂದ ತ್ಯಾಗ ಮಾಡಬೇಕೆಂದು ಶ್ಲೋಕದ ಅಭಿಪ್ರಾಯವನ್ನು ಹೇಳುತ್ತಿವೆ. ಆದರೆ ಅನಿತ್ಯವೆಂದ ಮಾತ್ರಕ್ಕೆ ವಿಷಯ ಪದಾರ್ಥ ಹೇಯವೆನಿಸುವುದಿಲ್ಲ. ಭಗವಂತನ ಪೂಜೆಗಾಗಿ 'ಭೋಗೈರಾತ್ಮಾನಮಾತ್ಮನಿ' (11.11.45) ಎಂದು ಹಿಂದೆ ಭಾಗವತದಲ್ಲಿ ಹೇಳಿದಂತೆ ಆತ್ಮಪೂಜೆಗಾಗಿ ಇರುವ ವಿಷಯ ಪದಾರ್ಥವನ್ನು ತನ್ನ ಇಂದ್ರಿಯ ತೃಪ್ತಿಗೆಂದೇ ಉಂಡರೆ 'ಭುಂಜತೇ ತೇ ತ್ವಘಂ ಪಾಪಾಃ ಯೇ ಪಚಂತ್ಯಾತ್ಮಕಾರಣಾತ್(ಗೀತಾ 3.13) ಎಂದು ಗೀತೆ ಹೇಳುವಂತೆ ಅದು ಪಾಪಸಾಧನವಾಗಿ ಅನರ್ಥಕಾರಣವಾಗುವುದು. ಅದರಿಂದ ಅದು ಹೇಯ ಎನ್ನಬೇಕು.

---

2. ಭಾವಾನಾಂ ದೇವಮನುಷ್ಯಾದ್ಯಾಕಾರಾಣಾಮಾತ್ಮನ್ಯಸತ್ವಾತ್ ಕಿಂಕೃತಾ ಭಿದಾ ದೇವಾದಿ ಭೇದಃ ಕಿಂಕೃತ ಇತ್ಯರ್ಥಃ। ತತ್‌ಕೃತೇತಿ ಪಾಠೇ ದೇವಾದಿ ಶರೀರಕೃತೋ ಭೇದಃ ಗತಯಸ್ತದ್‌ಬುದ್ಧಯಃ ತದ್ಧೇತವೋ ದೋಷಾಶ್ಚ ಮೃಷಾ ಸ್ವಪ್ನಜ್ಞಾನಾದಯ ಇವ ವಿನಾಶಿನ ಇತ್ಯರ್ಥಃ। -ಸುದರ್ಶನಃ

ಆತ್ಮನಃ ಸತತಂ ಜ್ಞಾನೈಕರೂಪಸ್ಯಾನ್ಯೇಷಾಂ ಭಾವಾನಾಂ ದೇವ ಮನುಷ್ಯಾದ್ಯಾಕಾರಾಣಾಮೌಪಾಧಿಕತ್ವೇನ ನಿತ್ಯಮಸತ್ವಾದಭಾವಾತ್ ಮುಕ್ತಾತ್ಮಸ್ವದರ್ಶನಾದಿತಿ ಭಾವಃ ಮೃಷಾಭೂತಾ ಇವಾನಿತ್ಯಾಃ। ಯದ್ವಾ ಮೃಷಾ ಆತ್ಮಸ್ವರೂಪೇ ನ ಸಂತಿ। ಮಿಥ್ಯಾತ್ವಮತ್ರೋಚ್ಯತ ಇತಿ ನ ಭ್ರಮಿತವ್ಯಂ। -ವೀರರಾಘವಃ

ಮುಮುಕ್ಷೋರ್ವಿದುಷಃ ಪರಮಾರ್ಥೋಪಯೋಗಿತ್ವಾಭಾವಾತ್ ಸ್ವಯಮೇವ ನಶ್ವರತ್ವಾಚ್ಚಾಕಿಂಚಿತ್‌ಕರತ್ವೇನ ಮೃಷೈವ। -ಶುಕದೇವಃ

ಶ್ರೀಮದಾಚಾರ್ಯರು ಜೀವೇಶ್ವರೈಕ್ಯವು ಹೇಗೆ ನಾನಾರ್ಥಧೀ ಎನಿಸಿ ತ್ಯಾಜ್ಯವಾಗುತ್ತದೆ ಎಂಬುದನ್ನು ತೋರಿಸುತ್ತಾರೆ—

ಅಭಿದಾ ಕಿಂಕೃತೈತೇಷಾಂ ಭಾವಾನಾಂ ಪರಮೇಶ್ವರೇ ।
ಯತೋಽಸತ್ವಮಶಕ್ತತ್ವಾದ್ ಭಾವಾನಾಂ ತಸ್ಯ ಶಕ್ತತಾ ।
ತತಃ ಸತ್ವಂ ಸಾಧುಭಾವಃ ಸತ್ವಮಿತ್ಯುಚ್ಯತೇ ಬುಧೈಃ ।
ಸಾಧುಭಾವಶ್ಚ ಶಕ್ತಿಃ ಸ್ಯಾದತೋಽನ್ಯಾಽಸಾಧುತಾ ತತಃ ।
ಅಭೇದೇ ಜಗತೋ ವಿಷ್ಣೋರ್ಯಾ ವಾಚೋ ಯೇ ಚ ಹೇತವಃ ।
ಸ್ವಪ್ನಜಾಗ್ರತ್‌ಕಲ್ಪಕವತ್ ಸರ್ವೇ ತೇ ಭ್ರಮದರ್ಶಿನಃ ॥
ಇತಿ ಶಶ್ವತ್‌ಸಂಹಿತಾಯಾಂ ॥

ಈ ಬ್ರಹ್ಮಾದಿ ದೇವತೆಗಳಿಗೆ ಪರಮಾತ್ಮನ ಅಭೇದ ಯಾವ ಪ್ರಮಾಣದಿಂದ ಸಿದ್ಧವಾದೀತು? ಏಕೆಂದರೆ ಬ್ರಹ್ಮಾದಿ ದೇವತೆಗಳು ಅಶಕ್ತರಾದ್ದರಿಂದ ಅಸತ್ ಎನಿಸಿಕೊಳ್ಳುವರು. ಪರಮಾತ್ಮ ಶಕ್ತ, ಅದರಿಂದ ಅವನು ಸತ್. ಮತ್ತು ನಿರ್ದೋಷತ್ವವನ್ನು ಸತ್ವ ಎಂದು ಜ್ಞಾನಿಗಳು ಹೇಳುತ್ತಾರೆ. ಶಕ್ತಿಯು ನಿರ್ದೋಷನಲ್ಲಿಯೇ ಮತ್ತು ಅಶಕ್ತಿ ದೋಷಿಯಲ್ಲಿಯೇ ಕಂಡಿದೆ. ಜಗತ್ತಿಗೆ ವಿಷ್ಣುವಿನ ಅಭೇದವನ್ನು ಹೇಳುವ ವಚನಗಳಾಗಲೀ, ಸಾಧಿಸುವ ಯುಕ್ತಿಗಳಾಗಲಿ, ಎಲ್ಲವೂ ಸ್ವಪ್ನಪದಾರ್ಥಕ್ಕೆ ಜಾಗರದ ಅಭೇದವನ್ನು ಹೇಳುವ ವಚನಗಳಂತೆ, ಸಾಧಿಸುವ ಯುಕ್ತಿಗಳಂತೆ ಭ್ರಮದರ್ಶಕಗಳಾಗಿವೆ ಎಂದು ಶಶ್ವತ್‌ಸಂಹಿತೆಯಲ್ಲಿ ಹೇಳಿದೆ.

❖❖❖

ಭಗವಂತನ ರೂಪಗಳಲ್ಲಿ ಅಭೇದವೆ, ಜೀವೇಶರಿಗೆ ಭೇದವೇ ಎಂಬುದನ್ನು ಹಂಸನಾಮಕ ಪರಮಾತ್ಮ ಸನಕಾದಿಗಳಿಗೆ ಉಪದೇಶಿಸುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಯೋ ಜಾಗರೇ ಬಹುವಿಧಾನ್ ಕ್ಷಣಧರ್ಮಿಣೋಽರ್ಥಾನ್
ಭುಂಕ್ತೇ ಸಮಸ್ತಕರಣೋ ಹೃದಿ ತತ್ಸದೃಕ್ಷಾನ್ ।
ಸ್ವಪ್ನೇಽಥ ಸುಪ್ತ ಉಪಸಂಹರತೇ ಸ ಏಕಃ
ಸ್ಮೃತ್ಯನ್ವಯಾತ್ ತ್ರಿಗುಣವೃತ್ತಿದೃಗಿಂದ್ರಿಯೇಶಃ ॥ ೩೨ ॥

ಜಾಗರದಲ್ಲಿ ಜೀವನ ಬಲಗಣ್ಣಿನಲ್ಲಿರುವ ವಿಶ್ವನು ಎಲ್ಲ ಇಂದ್ರಿಯಗಳಲ್ಲಿಯೂ

ಇದ್ದು ಅನಿತ್ಯವಾದ ನಾನಾ ಬಗೆಯ ಪದಾರ್ಥಗಳನ್ನು ತಾನು ನೋಡುತ್ತಾನೆ. ಜೀವನಿಗೂ ತೋರಿಸುತ್ತಾನೆ. ಸ್ವಪ್ನದಲ್ಲಿ ಕಂಠದಲ್ಲಿರುವ ತೈಜಸನು ಮನಸಿನಲ್ಲಿದ್ದು ಜಾಗರಸದೃಶವಾದ ಸ್ವಾಪ್ನವಾಸನಾಮಯ ಪದಾರ್ಥಗಳನ್ನು ನೋಡುತ್ತಾನೆ. ಜೀವನಿಗೂ ತೋರಿಸುತ್ತಾನೆ. ಬಳಿಕ ಸುಷುಪ್ತಿಯಲ್ಲಿ ಹೃದಯದಲ್ಲಿರುವ ಪ್ರಾಜ್ಞನು ಮನ ಇಂದ್ರಿಯಗಳನ್ನು ವಿಷಯದಿಂದ ಸೆಳೆದು ಜೀವನ ಸ್ವರೂಪಾನಂದವನ್ನು ನೋಡುತ್ತಾನೆ. ಜೀವನಿಗೆ ಅನುಭವ ಮಾಡಿಸುತ್ತಾನೆ. ಸರ್ವೇಂದ್ರಿಯ ನಿಯಾಮಕ ನಾದ ವಿಶ್ವತೈಜಸ ಪ್ರಾಜ್ಞರೂಪಿಯಾದ ಆ ಹರಿಯೊಬ್ಬನೆ ತ್ರಿಗುಣಕಾರ್ಯವಾದ ಜಾಗರ ಸ್ವಪ್ನ ಸುಷುಪ್ತಿಗಳನ್ನು ಸ್ವತಂತ್ರವಾಗಿ ನೋಡುವವನು ಜೀವನಿಗೆ ಅನುಭವ ಮಾಡಿಸುವವನು ಎಂದು ಶ್ರುತಿಸ್ಮೃತಿಗಳು ಸಾರುತ್ತಿವೆ.

[1]'ಜೀವನು ಜಾಗರದಲ್ಲಿ ಸ್ಥೂಲವಾದ ದೇಹಾದಿ ಪದಾರ್ಥಗಳನ್ನು ಎಲ್ಲ ಇಂದ್ರಿಯಗಳಿಂದಲೂ ಅನುಭವಿಸುವನು. ಅವನೇ ಸ್ವಪ್ನದಲ್ಲಿ ಜಾಗರದಲ್ಲಿ ಕಂಡಿರುವುದಕ್ಕೆ ಸಮಾನವಾದ ವಾಸನಾಮಯ ಪದಾರ್ಥಗಳನ್ನು ಅನುಭವಿಸುವನು. ಅವನೇ ಸುಷುಪ್ತಿಯಲ್ಲಿ ಎಲ್ಲ ವಿಷಯಭೋಗವನ್ನೂ ಬಿಟ್ಟುಬಿಡುವನು. ಈ ಮೂರು ಅವಸ್ಥೆಗಳನ್ನೂ ಅನುಭವಿಸುವವನು ಒಬ್ಬನೇ ಎನ್ನುವುದು ನಿದ್ದೆಯಿಂದ ಎದ್ದವನಿಗೆ 'ತಾನೇ ಮಲಗಿದ್ದು ಎದ್ದವನೆಂ'ಬ ಸ್ಮೃತಿಯಿಂದ ಸಿದ್ಧವಾಗುವುದು. ಈ ಮೂರು ಅವಸ್ಥೆಗಳನ್ನು ಅನುಭವಿಸುವ ವಿಶ್ವ ತೈಜಸ ಪ್ರಾಜ್ಞರು ಬೇರೆಯಲ್ಲ, ಬಾಲಕ ಯುವಕ ವೃದ್ಧರೂ ಬೇರೆಯಲ್ಲ, ತಾನೇ ಮೂರೂ ಅವಸ್ಥೆಗಳನ್ನು ಹೊಂದಿದವನೆಂಬ ಸ್ಮೃತಿಯಿಂದಲೇ ಇದೂ ಸಿದ್ಧವಾಗುವುದು' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ.

ಆದರೆ ಜಾಗರಾದಿ ಬಾಲ್ಯಾದಿ ಅವಸ್ಥೆಗಳಲ್ಲಿರುವವನೊಬ್ಬನೇ ಜೀವನೆನ್ನುವುದು ಎಲ್ಲರ ಅನುಭವ. ಆ ಅನುಭವದ ಆಧಾರದಿಂದಲೇ ಪುನಃ ಒಬ್ಬನೇ ಜೀವನೆಂದು ಸಾಧಿಸುವುದು ಪಿಷ್ಟಪೇಷಣ, ವ್ಯರ್ಥ. ಜೀವೇಶರಿಗೆ ಅಭೇದವನ್ನು ಅವರು ಸಾಧಿಸ ಬೇಕಾಗಿತ್ತು. ಅದನ್ನು ಸಾಧಿಸಲಿಲ್ಲ, ಶ್ಲೋಕವನ್ನು ವ್ಯರ್ಥಗೊಳಿಸಿದ್ದಾರೆ.

---

1. ಯಃ ಅರ್ಥಾನ್ ಸ್ಥೂಲಾನ್‌ದೇಹಾದೀನ್ ಸಮಸ್ತಕರಣೈಶ್ಚಕ್ಷುರಾದಿಭಿರ್ಭುಂಕ್ತೇ ಯಶ್ಚ ಸ್ವಪ್ನೇ ಹೃದಿ ಜಾಗರದೃಷ್ಟಸದೃಶಾನ್ ವಾಸನಾಮಯಾನ್ ಭುಂಕ್ತೇ ಯಶ್ಚ ಸುಷುಪ್ತೇ ತಾನ್ ಸರ್ವಾನ್ ಉಪಸಂಹರತಿ ಸ ಏಕಃ ಕುತಃ ತ್ರಿಗುಣವೃತ್ತಿದೃಕ್ ಅವಸ್ಥಾತ್ರಯ ದ್ರಷ್ಟಾ। ನನು ಜಾಗ್ರದವಸ್ಥಾಂ ಸರ್ವೇಂದ್ರಿಯಾಣಿ ಪಶ್ಯಂತಿ ಸ್ವಪ್ನಂ ಮನಃ ಸುಷುಪ್ತಿಂ ತತ್‌ಸಂಸ್ಕಾರಶೇಷಾ ಬುದ್ಧಿಃ ಕಥಮಾತ್ಮಾ ತದ್‌ದ್ರಷ್ಟಾ ತತ್ರಾಹ ಇಂದ್ರಿಯೇಶಃ। ನನು ಇಂದ್ರಿಯೇಶಾ ಅಪಿ ವಿಶ್ವತೈಜಸ ಪ್ರಾಜ್ಞಾ ಭಿನ್ನಾಃ ನ ಕುತಃ ಸ್ಮೃತ್ಯಾ ಪ್ರತಿಸಂಧಾನೇನ ಸರ್ವಾವಸ್ಥಾಸ್ವನ್ವಯಾತ್ । ಏತೇನ ಬಾಲಯುವಾದ್ಯವಸ್ಥಾಸ್ವಪಿ ಪ್ರತಿಸಂಧಾನೇನಾತ್ಮೈಕ್ಯಂ ದ್ರಷ್ಟವ್ಯಂ ॥ -ಶ್ರೀಧರಃ

ವಸ್ತುತಃ 'ಇಂದ್ರಿಯೇಶಃ' ಎಂದರೆ 'ಹೃಷೀಕೇಶ' ನಾಮಕನಾದ ಪರಮಾತ್ಮ. ಹೃಷೀಕ ಎಂದರೆ ಇಂದ್ರಿಯಗಳು. ಇಂದ್ರಿಯಗಳಿಗೆ ಈಶನು ಜೀವನಲ್ಲ, ಪರಮಾತ್ಮ. ಜೀವ ಇಂದ್ರಿಯಗಳಿಗೆ ದಾಸ. ಇಂದ್ರಿಯನಿಗ್ರಹದಲ್ಲಿ ಅಸಮರ್ಥ. ಹೀಗಾಗಿ ಈ ಶ್ಲೋಕ ಪರಮಾತ್ಮನ ವಿಶ್ವ ತೈಜಸ ಪ್ರಾಜ್ಞ ಎಂಬ ಅವಸ್ಥಾತ್ರಯ ನಿಯಾಮಕ ರೂಪಗಳಿಗೆ ಐಕ್ಯವನ್ನು ಹೇಳಲು ಹೊರಟಿದೆ. ಅವಸ್ಥಾತ್ರಯಗಳಲ್ಲಿ ವಿಷಯಭೋಗ ಮಾಡುವವನು ಅವನೇ. ಸ್ವತಃ ಅವಸ್ಥಾತ್ರಯ ರಹಿತನು. ಅವನೇ ಉಂಡು, ಜೀವನಿಗೆ ಉಣಿಸುತ್ತಾನೆ. ಜೀವನಿಗೆ ಉಣಿಸಲೆಂದೇ ತಾನು ಲೀಲೆಯಿಂದ ಉಣ್ಣುತ್ತಾನೆ. ಪರಮಾತ್ಮನ ರೂಪಗಳಿಗೆ ಅಭೇದವೇ ಜೀವೇಶರಿಗೆ ಭೇದವೇ ಎಂಬುದನ್ನು ಈ ಶ್ಲೋಕವು ಸ್ಪಷ್ಟವಾಗಿ ಹೇಳುತ್ತ ಇದಕ್ಕೆ ವಿಪರೀತವಾಗಿ ತಿಳಿಯುವುದೇ ಹಿಂದೆ ಹೇಳಿದ 'ನಾನಾರ್ಥಧೀ' ಎಂದಿದೆ.

ದಕ್ಷಿಣಾಕ್ಷಿಸ್ಥಿತೋ ವಿಷ್ಣುರ್ಭುಂಕ್ತೇಽರ್ಥಾನ್ ಜಾಗ್ರದಾಸ್ಥಿತಾನ್ ।
ಕಂಠಸಂಸ್ಥಸ್ತಥಾ ಸ್ವಪ್ನಾನ್ ಜೀವಾನಂದಂ ಚ ಸುಪ್ತಿಗಃ ।
ಶ್ರುತ್ಯನ್ವಯಾತ್ ಸ್ಮೃತಿಭ್ಯಶ್ಚ ಸ ಏಕಃ ಪರಮೇಶ್ವರಃ ।
ಅಸ್ವತಂತ್ರಸ್ಯ ಜೀವಸ್ಯ ಸ್ವತಂತ್ರೋ ಜಾಗ್ರದಾದಿದಃ ।
ಸ್ವಯಂ ಸ್ವಪ್ನಾದಿಹೀನಃ ಸನ್ ಕ್ರೀಡತೇ ಪುರುಷೋತ್ತಮಃ ॥
ಇತಿ ಸತತ್ತ್ವೇ ।

'ಸ್ವಪ್ನೇನ ಶಾರೀರಮಭಿ ಪ್ರಹತ್ಯಾಸುಪ್ತಃ
ಸುಪ್ತಾನಭಿ ಚಾಕಶೀತಿ' ಇತ್ಯಾದಿ ಚ ॥

ಜೀವನ ಬಲಗಣ್ಣಿನಲ್ಲಿರುವ ವಿಶ್ವನಾಮಕ ವಿಷ್ಣು ಜಾಗರದಲ್ಲಿರುವ ಪದಾರ್ಥಗಳನ್ನು ಲೀಲೆಯಿಂದ ಉಣ್ಣುತ್ತ ಜೀವನಿಗೆ ಉಣಿಸುತ್ತಾನೆ. ಕಂಠದಲ್ಲಿರುವ ತೈಜಸನು ಸ್ವಾಪ್ನ ಪದಾರ್ಥಗಳನ್ನು ಉಂಡು ಉಣಿಸುತ್ತಾನೆ. ಸುಷುಪ್ತಿಯಲ್ಲಿ ಹೃದಯದಲ್ಲಿರುವ ಪ್ರಾಜ್ಞನು ಜೀವಸ್ವರೂಪಾನಂದವನ್ನು ಉಂಡು ಉಣಿಸುತ್ತಾನೆ. ಇದು ಶ್ರುತಿಗಳಲ್ಲಿ ಉಕ್ತವಾಗಿದೆ. ಭಾರತ ಪಂಚರಾತ್ರಾದಿ ಸ್ಮೃತಿಗಳಿಂದಲೂ ಇದು ಸಿದ್ಧವಾಗುತ್ತದೆ. ಆ ಪರಮಾತ್ಮನೇ ಸ್ವತಂತ್ರ, ಅನೇಕ ಸ್ಥಾನಗಳಲ್ಲಿ ಅನೇಕರೂಪಗಳಿಂದ ಒಬ್ಬನೇ ಇರುತ್ತಾನೆ. ಸ್ವತಂತ್ರನಾಗಿದ್ದು ಅಸ್ವತಂತ್ರನಾದ ಜೀವನಿಗೆ ಜಾಗರಾದಿ ಅವಸ್ಥೆಗಳನ್ನು ನೀಡುತ್ತಾನೆ. ತಾನು ಸ್ವಪ್ನಾದಿ ಅವಸ್ಥೆಗಳಿಲ್ಲದವನಾಗಿ ಕ್ರೀಡಿಸುತ್ತಾನೆ ಎಂದು ಸತತ್ತ್ವ ಎಂಬ ಗ್ರಂಥದಲ್ಲಿದೆ.

ಶ್ರುತ್ಯನ್ವಯಕ್ಕೆ ಒಂದು ಉದಾಹರಣೆ—ಶ್ರೀಹರಿ ಜೀವನಿಗೆ ಸ್ವಪ್ನ ಸುಷುಪ್ತಿಗಳನ್ನಿತ್ತು,

ತಾನು ಸ್ವಪ್ನ ಸುಷುಪ್ತಿ ರಹಿತನಾಗಿದ್ದು ಸುಪ್ತರಾದ ಜೀವರನ್ನು ನೋಡುತ್ತಾನೆ' ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ(೬.೩.೧೧) ಹೇಳಿದೆ.

❖❖❖

ಪರಮಾತ್ಮನ [1] ರೂಪಗಳಿಗೆ ಸ್ಥಾನಭೇದ ಆಕಾರಭೇದ ಮುಂತಾದವುಗಳಿಂದ ಭೇದವಿಲ್ಲವೆಂದು ಹಂಸನಾಮಕ ಪರಮಾತ್ಮ ಸನಕಾದಿಗಳಿಗೆ ಉಪದೇಶಿಸುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಹೇಳುತ್ತಾನೆ.

ವೀಕ್ಷೇತ ವಿಭ್ರಮಮಿಮಂ ಮನಸೋ ವಿಲಾಸಂ
ದೃಷ್ಟಂ ವಿನಷ್ಟಮತಿಲೋಲಮಲಾತಚಕ್ರಮ್ ।
ವಿಜ್ಞಾನಮೇಕಮುರುಧೇವ ವಿಭಾತಿ ಮಾಯಾ
ಸ್ವಪ್ನೇ ಯಥಾ ತ್ರಿಗುಣಸರ್ಗಕೃತೋ ವಿಕಲ್ಪಃ ॥ ೩೪ ॥

ಮುಮುಕ್ಷುವು 'ಜಾಗರಾದಿ ಸ್ಥಾನಭೇದದಿಂದ ಅಲ್ಲಿ ನಿಯಾಮಕನಾಗಿರುವ ಪರಮಾತ್ಮನ ರೂಪಗಳಲ್ಲಿ ಭೇದ ತೋರುವುದು ತನ್ನ ಮನಸಿನಲ್ಲಿ ಉಂಟಾಗುವ ಭ್ರಾಂತಿ' ಎಂದು ತಿಳಿಯಬೇಕು. ಉರಿಯುವ ಕೊಳ್ಳಿಯನ್ನು ಸುತ್ತು ತಿರುಗಿಸಿದರೆ ಬೆಂಕಿಯ ಚಕ್ರವೆಂದು ಭ್ರಾಂತಿ ಬರುತ್ತದೆ. ಹಾಗೇ ಇದು. ಗುರೂಪದೇಶದಿಂದ ಚೆನ್ನಾಗಿ ಪರೀಕ್ಷಿಸಿ ನೋಡಿದರೆ ಈ ಭ್ರಾಂತಿ ಇಲ್ಲವಾಗುವುದು. ಈ ಭ್ರಾಂತಿ ಸ್ಥಿರವೇನಲ್ಲ, ಬಹು ಚಂಚಲವಾದುದು. ಜ್ಞಾನಸ್ವರೂಪಿಯಾದ ಹರಿಯೊಬ್ಬನೇ ನಾನಾ ಅವತಾರಗಳಲ್ಲಿ ಅನೇಕನಾಗಿ ಕಾಣಿಸುತ್ತಾನೆ. ಸ್ವಪ್ನದಲ್ಲಿ ವಾಸನಾಮಯವಾದ ಒಂದು ವಸ್ತು ಒಮ್ಮೆ ಆನೆ ಮತ್ತೊಮ್ಮೆ ಮರ ಮಗದೊಮ್ಮೆ ಮನುಷ್ಯನಾಗಿ ತೋರುವಂತೆ ತ್ರಿಗುಣಗಳಿಂದ ಉಂಟಾಗುವ ಪಾಪದಿಂದ ಈ ಬಗೆಯ ಭ್ರಮೆ ಉತ್ಪನ್ನವಾಗಿರುತ್ತದೆ.

ಬೇರೆ ವ್ಯಾಖ್ಯಾನಕಾರರಿಗೆ 'ವಿಭ್ರಮಮಿದಂ' ಎಂದು ಪಾಠ.

[1]'ಈ ಜಗತ್ತು ಮಿಥ್ಯೆ, ಏಕೆಂದರೆ ಅದು ಮನಸಿನ ಕಲ್ಪನೆಯಾಗಿದೆ. ಅನುಭವದಲ್ಲಿ ಕಂಡಿದೆ, ಮತ್ತು ವಿನಾಶಿಯಾಗಿದೆ, ಸ್ವಪ್ನದಂತೆ. ಚಂಚಲವಾಗಿದೆ, ವೇಗವಾಗಿ ತಿರುಗುವ ಕೊಳ್ಳಿಯ ಚಕ್ರಾಕಾರದಂತೆ. ಜಗತ್ತಾಗಿ ಭ್ರಮದಲ್ಲಿ

---

1. ಇದಂ ಜಗದ್ ವಿಭ್ರಮಮೀಕ್ಷೇತ ತತ್ರ ಹೇತವಃ ಮನೋವಿಜೃಂಭಿತತ್ವಾತ್ ದೃಷ್ಟತ್ವಾತ್ ವಿನಾಶಿತ್ವಾಚ್ಚ ಸ್ವಪ್ನವತ್ । ಅತಿಚಂಚಲತ್ವಾಚ್ಚಾಲಾತಚಕ್ರವತ್। ಭ್ರಮೋಽಪಿ ನಿರ್ವಿಷಯಃ ಕಥಂ ಸ್ಯಾತ್ ತತ್ರಾಹ ವಿಜ್ಞಾನಮಿತಿ। ನಿಗಮನಂ ತಸ್ಮಾತ್ ತ್ರಿಧಾ ಯೋಽಯಂ ಗುಣ ಪರಿಣಾಮಕೃತೋ ವಿಕಲ್ಪೋ ಭೇದಃ ಸ ಮಾಯೇತಿ। -ಶ್ರೀಧರಃ

ಕಾಣುವುದು ಪರಬ್ರಹ್ಮ. ಅದರಿಂದ ತ್ರಿಗುಣಾತ್ಮಕವಾದ ಭೇದವು ಮಾಯೆ' ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ.

ಆದರೆ ಮನಸಿನ ಕಲ್ಪನೆ ಎಂದರೇ ಮಿಥ್ಯೆ. ಹೀಗಾಗಿ ಮಿಥ್ಯೆಯಾದ್ದರಿಂದ ಮಿಥ್ಯೆ ಎಂದಂತಾಗುತ್ತದೆ. ದೃಷ್ಟ, ಅನುಭವದಲ್ಲಿ ಕಂಡಿದೆ ಎಂದರೆ ಸತ್ಯವಾಗಬೇಕು, ಮಿಥ್ಯೆ ಎಂದು ವಿರುದ್ಧವಾಗಿ ಹೇಳಿದೆ. ವಿನಾಶಿ ಎನಿಸಬೇಕಾದರೂ ಸತ್ಯವೇ ಆಗಬೇಕು. ಮನಸಿನಲ್ಲಿ ಕಲ್ಪಿಸಿಕೊಂಡಿರುವ ಅವಾಸ್ತವಕ್ಕೆ ಉತ್ಪತ್ತಿ ನಾಶಗಳಿಲ್ಲ. ಮಿಂಚು ಚಂಚಲವಾಗಿದೆ. ಮಿಥ್ಯೆಯಲ್ಲ. ಅದರಿಂದ ಈ ಅನುಮಾನಗಳು ಯಾವುದೂ ಸರಿಯಿಲ್ಲ. ಭೇದವು ಗುಣಪರಿಣಾಮವಾಗಿರುವುದಾದರೆ ಗುಣವು ಸತ್ಯವಾಗಿರುವುದರಿಂದ ಭೇದವೂ ಸತ್ಯವೇ ಆಗಬೇಕಾಗುತ್ತದೆ. ಅದು ಮಾಯೆ ಎನ್ನಲು ಕಾರಣವಿಲ್ಲ.

[1]'ದೇವಮನುಷ್ಯಾದಿ ಶರೀರಗಳು, ಅವುಗಳಿಂದ ಅನುಭವಗೋಚರವಾಗುವ ವಿಷಯಗಳು ಮುಂತಾದ ಈ ಜಗತ್ತು ವಿನಾಶಿಯಾಗಿದೆ. ಅನುಭವಗೋಚರವಾದ್ದರಿಂದ' ತಿರುಗುವ ಕೊಳ್ಳಿಯ ಚಕ್ರಾಕಾರದಂತೆ. ಒಬ್ಬ ಜೀವನೆ ದೇವಮನುಷ್ಯಾದಿ ರೂಪದಿಂದ ಅನೇಕನಾಗಿ ಕಾಣುತ್ತಾನೆ' ಎಂದು ವೀರರಾಘವ ವ್ಯಾಖ್ಯಾನ ಹೇಳುತ್ತದೆ.

ಜೀವನಿಗೆ ದೇವಮನುಷ್ಯಾದಿ ಶರೀರಗಳು ಬಂದರೆ ಜೀವ ದೇವಮನುಷ್ಯಾದಿ ರೂಪದಿಂದ ಕಾಣುತ್ತಾನೆ ಎನ್ನುವುದು ಅಸಂಗತ. ಹಾಗೆ ಭ್ರಮ ಯಾರಿಗೂ ಬರುವುದಿಲ್ಲ. ಶರೀರ ಅನಿತ್ಯ, ಆತ್ಮ ನಿತ್ಯ ಎನ್ನುವುದು ಎಲ್ಲರಿಗೂ ಗೊತ್ತು. ಅನುಭವಗೋಚರವಾಗುವುದರಿಂದ ಜಗತ್ತು ವಿನಾಶಿ ಎನ್ನುವುದೂ ಸರಿಯಲ್ಲ. ಆತ್ಮನೂ ಅನುಭವಗೋಚರನಾಗುತ್ತಾನೆ. ಆದರೂ ವಿನಾಶಿಯಲ್ಲ.

ಹಿಂದಿನ ಶ್ಲೋಕದಲ್ಲಿ 'ಮಾ ಭಜತ' ನನ್ನನ್ನು ಭಜಿಸಿರಿ ಎನ್ನುತ್ತ ಹಂಸನು ಜೀವನಿಗೆ ಅವಸ್ಥಾತ್ರಯವನ್ನು ನಾನು ನನ್ನಿಚ್ಛೆಯಿಂದ ಕೊಡುವೆನೆಂದಿದ್ದಾನೆ. ಅದರಿಂದ ಮೂರು ಸ್ಥಾನಗಳಲ್ಲಿ ಮೂರು ರೂಪಗಳಿಂದ ನಿಂತು ಮೂರು ಅವಸ್ಥೆಗಳನ್ನು ಕೊಡುವುದರಿಂದ ಆ ಮೂರು ರೂಪಗಳು ಬೇರೆಬೇರೆ ಎಂದು ಅಜ್ಞಾನಿಗಳು ತಿಳಿಯುವ ಸಂಭವವಿದೆ. ಆ ಭೇದವನ್ನು ಭ್ರಮೆ ಎಂದು 'ಇಮಂ

1. ಇದಂ ದೇವಾದಿಶರೀರ ತದುಪಭೋಗ್ಯ ವಿಷಯಾದಿಕಂ ಸರ್ವಮಿತಿ ಧರ್ಮಿಣೋ ನಿರ್ದೇಶಃ, ವಿನಷ್ಟಮಿತಿ ಸಾಧ್ಯಸ್ಯ, ದೃಷ್ಟಮಿತಿ ಸಾಧನಸ್ಯ। ಅಲಾತಚಕ್ರಮಿತಿ ದೃಷ್ಟಾಂತಸ್ಯ। ತದ್ವಿಶೇಷಣಮತಿ ಲೋಲಮಿತಿ। ಈಕ್ಷೇತ ಇತ್ಥಮನುಮಿನುಯಾದಿತ್ಯರ್ಥಃ। ವಿಜ್ಞಾನಮೇಕಂ ದೇವಮನುಷ್ಯಾದಿರೂಪೇಣ ಬಹುಧೇವ ವಿಭಾತಿ। -ವೀರರಾಘವ

ವಿಭ್ರಮಮಂ ವೀಕ್ಷೇತ' ಎಂಬ ಮಾತಿನಿಂದ ಹಂಸನು ಹೇಳುತ್ತಿರುವುದು ಸ್ಪಷ್ಟವಾಗುತ್ತದೆ. 'ವಿಜ್ಞಾನಮೇಕಂ' ಏಕಮಾತ್ರ ಅದ್ವಿತೀಯನಾದ ಜ್ಞಾನಮಯನಾದ ಪರಮಾತ್ಮನೂ ಶ್ಲೋಕದಲ್ಲಿ ಸ್ಪಷ್ಟವಾಗಿ ಉಕ್ತನಾಗುತ್ತಿದ್ದಾನೆ. ವಿಜ್ಞಾನಮಾನಂದಂ ಬ್ರಹ್ಮ ಎಂದು ಪರಮಾತ್ಮನೇ ಜ್ಞಾನಮಯನೆಂದು ವೇದದಲ್ಲಿ ಪ್ರಸಿದ್ಧ. ಜೀವನು ಏಕ ಅದ್ವಿತೀಯನೂ ಅಲ್ಲ, ಎಲ್ಲ ಜೀವರೂ ಜ್ಞಾನಸ್ವರೂಪರೂ ಅಲ್ಲ. ಬ್ರಹ್ಮತರ್ಕದಲ್ಲಿ ಈ ಶ್ಲೋಕವನ್ನು ಪರಮಾತ್ಮ ಪರವಾಗಿಯೇ ಸ್ಪಷ್ಟವಾಗಿ ವ್ಯಾಖ್ಯಾನಮಾಡಲಾಗಿದೆ.

ಜಾಗ್ರದಾದಿಷು ಪರಮಾತ್ಮ ಭೇದಂ ವಿಭ್ರಮಮಂ ವೀಕ್ಷೇತ ।
ಜಾಗ್ರದಾದಿಕರೋ ದೇವಃ ಪರಮಾತ್ಮೈಕ ಏವ ತು ।
ಇತಿ ವೀಕ್ಷೇತ ಸತತಂ ಮುಚ್ಯತೇ ಸಂಸೃತೇರತಃ ॥
ಇತಿ ಪ್ರಕಾಶಸಂಹಿತಾಯಾಂ ॥

ಜಾಗರ ಮುಂತಾದ ಅವಸ್ಥೆಗಳನ್ನು ಉಂಟುಮಾಡುವಲ್ಲಿಯೂ ಬೇರೆ ಮತ್ಸ್ಯಾದಿ ಅವತಾರ ಕಾರ್ಯಗಳಲ್ಲಿಯೂ ಪ್ರಕಟವಾಗುವ ಪರಮಾತ್ಮರೂಪಗಳಲ್ಲಿ ಪರಸ್ಪರ ಭೇದವನ್ನು ತಿಳಿದರೆ ಅದನ್ನು ಭ್ರಮವೆಂದೇ ತಿಳಿಯಬೇಕು. ಏಕೆಂದರೆ ಪ್ರಕಾಶಸಂಹಿತೆಯಲ್ಲಿ, ಜಾಗರ ಮುಂತಾದ ಅವಸ್ಥೆಗಳನ್ನು ಉಂಟುಮಾಡುವವನು ವಿಶ್ವಾದಿರೂಪಿಯಾದ ಪರಮಾತ್ಮನು ಒಬ್ಬನೆ ಎಂದು ಸದಾ ಚಿಂತಿಸಬೇಕು, ಅದು ಮೋಕ್ಷಸಾಧನ ಯಥಾರ್ಥಜ್ಞಾನವಾಗುವುದೆಂದು ಹೇಳಿದೆ.

ಯದಾ ವಿಭ್ರಮೋಽಯಮಿತಿ ದೃಷ್ಟಸ್ತದೈವ ವಿನಷ್ಟಃ ।
ಶ್ರುತಿಯುಕ್ತಿಭಿರ್ವಿಚಾರಿತೇಽತಿಲೋಲಃ ಕ್ಷಿಪ್ರಂ ವಿನಶ್ಯತೀತ್ಯರ್ಥಃ ।
ಅಲಾತಸ್ಯ ಚಕ್ರಾಕಾರತ್ವಭ್ರಮವತ್ ಪರಮಾತ್ಮಭೇದಭ್ರಮಃ ।
ತ್ರಿಗುಣೈಸ್ತತ್ಕಾರ್ಯೈಃ ಪಾಪಾದಿಭಿಶ್ಚ ಬದ್ಧಃಸನ್ ।
ವಿಜ್ಞಾನರೂಪಂ ಪರಮಾತ್ಮಾನಂ ಭ್ರಾಂತ್ಯಾ ಬಹುಧಾ ಪಶ್ಯತಿ ॥

ಪರಮಾತ್ಮನ ರೂಪಗಳಲ್ಲಿ ಪರಸ್ಪರ ಭೇದಜ್ಞಾನವು ಭ್ರಮವೆಂದು ಯಾವಾಗ ತಿಳಿಯುವುದೊ ಆಗ ಆ ಭೇದಭ್ರಮವು ನಾಶವಾಗುವುದು. 'ನೇಹ ನಾನಾಸ್ತಿ ಕಿಂಚನ' ಮುಂತಾದ ಶ್ರುತಿಗಳಿಂದಲೂ 'ನ ಸ್ಥಾನತೋಽಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ' ಎಂದು ಸೂತ್ರೋಕ್ತಯುಕ್ತಿಗಳಿಂದಲೂ ವಿಚಾರಮಾಡಿದಾಗ ಆ ಭೇದಭ್ರಮ 'ಅತಿಲೋಲಃ' ಶೀಘ್ರದಲ್ಲಿಯೆ ನಾಶವಾಗುವುದು ಎಂದರ್ಥ. ಕೊಳ್ಳಿಯ ಚಕ್ರಾಕಾರ ಭ್ರಮದಂತೆ ವಿಶ್ವಾದಿರೂಪಿಯಾದ ಪರಮಾತ್ಮನ ಭೇದ ಭ್ರಮ. ಏಕೆಂದರೆ ತ್ರಿಗುಣಗಳಿಂದಲೂ

ಅವುಗಳಿಂದಾಗುವ ಅಹಂಕಾರಾದಿ ದೋಷಗಳಿಂದಲೂ ಪಾಪಾದಿಗಳಿಂದಲೂ ಬದ್ಧನಾಗಿ ಜೀವನು ಭ್ರಾಂತಿಯಿಂದ ವಿಜ್ಞಾನರೂಪಿಯಾದ ಪರಮಾತ್ಮನನ್ನು ಭಿನ್ನನೆಂದು ತಿಳಿಯುತ್ತಾನೆ.

ದೇಹಭೇದೇಷ್ವವಸ್ಥಾಸು ಪ್ರಾದುರ್ಭಾವೇಷು ಚೈಕಲಂ ।
ಜ್ಞಾನಾನಂದೈಕಸದ್ರೂಪಂ ಭ್ರಾಂತ್ಯಾ ಭಿನ್ನಂ ಪ್ರಪಶ್ಯತಿ ।
ಸಾ ಚ ಭ್ರಾಂತಿರ್ವಿನಶ್ಯೇತ ಯದಾ ಭ್ರಾಂತಿತ್ವವೇದನಂ ।
ಅತಿಕ್ಷಿಪ್ರಂ ವಿನಶ್ಯೇಚ್ಚ ನ ಸ್ಥಿರಂ ದಿಗ್‌ಭ್ರಮಾದಿವತ್ ।
ತ್ರಿಗುಣೈರ್ಬಂಧಿತಾ ಜೀವಾ ಜ್ಞಪ್ತಿಮಾತ್ರಂ ಜನಾರ್ದನಂ ।
ಪಶ್ಯಂತಿ ಬಹುಧಾ ಸ್ವಪ್ನೇ ಯಥೈಕಂ ಬಹುಧಾ ಕ್ವಚಿತ್ ।
ಅಭಿನ್ನೋಽಪಿ ವಿಭಿನ್ನೇಷು ವ್ಯವಹಾರೋ ಯಥಾ ಭವೇತ್ ।
ತಥೈವ ವ್ಯವಹಾರಾಯ ಶಕ್ತತ್ವಾನ್ನೈವ ದೂಷಣಂ ।
ಈಶಸ್ಯ ತು ತದನ್ಯೇಷಾಮಪಿ ಯಚ್ಛಕ್ತಿದಾಯಕಃ ॥

ಇತಿ ಬ್ರಹ್ಮತರ್ಕೇ ॥

'ಬೇರೆ ಬೇರೆ ದೇಹಗಳಲ್ಲಿ ಬೇರೆಬೇರೆ ಅವಸ್ಥೆಗಳಲ್ಲಿ ಬೇರೆಬೇರೆ ಅವತಾರಗಳಲ್ಲಿ ಭೇದರಹಿತನಾದ ಜ್ಞಾನಾನಂದಮಯ ನಿರ್ದೋಷ ಶರೀರನಾದ ಶ್ರೀಹರಿಯನ್ನು ಭ್ರಾಂತಿಯಿಂದ ಭೇದ ಉಳ್ಳವನೆಂದು ಅಜ್ಞಾನಿಯು ತಿಳಿಯಬಹುದು. ಆದರೆ ಅದು ಯಾವಾಗ ಭ್ರಾಂತಿಯೆಂದು ತಿಳಿಯುವುದೋ ಆಗ ಬಲು ಬೇಗನೆ ಅದು ನಾಶವಾಗುವುದು. ಅದು ದಿಗ್‌ಭ್ರಮ ಮುಂತಾದವುಗಳಂತೆ ಸ್ಥಿರವಲ್ಲ. (ಪಶ್ಚಿಮವನ್ನು ಪೂರ್ವವೆಂದು ತಿಳಿದಾಗ ಇದು ಪಶ್ಚಿಮವಲ್ಲ ಎಂದು ಉಪದೇಶಿಸಿದರೂ ಸೂರ್ಯೋದಯವನ್ನು ಕಣ್ಣಾರೆ ಕಾಣದತನಕ ಆ ದಿಗ್‌ಭ್ರಮವು ಹೋಗುವುದಿಲ್ಲ. ಅದು ಸ್ಥಿರ. ಅದೇ ರೀತಿ ಚಂದ್ರನು ಒಂದು ಗೇಣಳತೆಯವನೆಂದು ಭ್ರಮಬಂದಾಗ ಶಾಸ್ತ್ರ ಐವತ್ತು ಕೋಟಿ ಯೋಜನಗಾತ್ರದವನು ಚಂದ್ರನೆಂದು ಹೇಳಿದರೂ ಆ ಭ್ರಮವು ಸ್ಥಿರವಾಗಿರುವುದು) ಸತ್ವರಜಸ್ತಮೋಗುಣಗಳಿಂದ ಪಾಪಾದಿಗಳ ಮೂಲಕ ಬದ್ಧರಾದ ಜೀವರು ಸ್ವಪ್ನದಲ್ಲಿ ಒಂದು ವಸ್ತುವನ್ನು ಮರವೆಂದು ತಿಳಿದು ಮತ್ತೊಂದು ಕ್ಷಣದಲ್ಲಿ ಮನುಷ್ಯನೆಂದು ಪಶುವೆಂದು ಮುಂತಾಗಿ ನಾನಾ ರೀತಿಯಾಗಿ ತಿಳಿಯುತ್ತ ಹೋಗುವಂತೆ ಜ್ಞಾನರೂಪನಾದ ಒಬ್ಬನೇ ಪರಮಾತ್ಮನನ್ನು ಬೇರೆಬೇರೆ ಸ್ಥಾನಗಳಲ್ಲಿ ಬೇರೆಬೇರೆ ರೀತಿಯಾಗಿ ತಿಳಿಯುತ್ತಾರೆ. ಪರಮಾತ್ಮ ಒಬ್ಬನೆ ಆದರೂ ಬೇರೆಬೇರೆ ಸ್ಥಾನಗಳಲ್ಲಿ ಬೇರೆಬೇರೆ ರೀತಿಯಾಗಿ ವ್ಯವಹಾರಗೋಚರನಾಗುತ್ತಾನೆ. ಹಾಗೇ ವ್ಯವಹಾರ ಗೋಚರನಾಗಲು ಅವನು

ಶಕ್ತನೇ ಆದ್ದರಿಂದ ದೋಷವಿಲ್ಲ. ಏಕೆಂದರೆ ಬೇರೆ ತತ್ತ್ವಾಭಿಮಾನಿ ದೇವತೆಗಳಿಗೂ ಆ ಶಕ್ತಿಯನ್ನು ಕೊಡುವವನು ಅವನೇ' ಎಂದು ಬ್ರಹ್ಮತರ್ಕ ಹೇಳಿದೆ.

ಅಲಾತಭ್ರಾಮಕೋ ಯದಾ ನಿವರ್ತತೇ ತದೈವ ಭ್ರಮೋ
ನಿವರ್ತತೇ । ತದ್ವದ್ ಯದಾ ಭ್ರಮನಿವೃತ್ತಿಮಿಚ್ಛತಿ ತದೈವ
ಗುರೂಪಸದನಾನ್ನಿವರ್ತಯಿತುಂ ಶಕ್ಯಃ ।
ಅಶಕ್ಯೋಽಪ್ಯತಿಶಕ್ಯೋಽಯಂ ವಿನಿವರ್ತಯಿತುಂ ಭ್ರಮಃ ।
ಈಶಸ್ಥೋ ಗುರುಸಂಪತ್ತ್ಯಾಯದಿ ಶುದ್ಧಮನಾಃ ಪುಮಾನ್ ॥
ಇತಿ ಸಮ್ಯಗ್ಜ್ಞಾನೇ ॥

ಕೊಳ್ಳಿಯನ್ನು ಚಕ್ರಾಕಾರವಾಗಿ ತಿರುಗಿಸುವವನು ಅದನ್ನು ಯಾವಾಗ ನಿಲ್ಲಿಸುವನೋ ಆಗಲೆ ಕೊಳ್ಳಿಯಲ್ಲಿ ಆರೋಪಿತವಾದ ಚಕ್ರಾಕಾರಭ್ರಮ ನಿವೃತ್ತಿಯಾಗುವುದು. ಹಾಗೆಯೇ ಭಗವದ್ರೂಪಗಳಲ್ಲಿ ಭೇದಭ್ರಮ ದೂರವಾಗಲಿ ಎಂದು ಭಗವಂತನು ಯಾವಾಗ ಇಚ್ಛಿಸುವನೋ ಆಗಲೆ ಗುರುಸೇವೆಯಿಂದ ಅದನ್ನು ನಿವೃತ್ತಿ ಮಾಡಲು ಶಕ್ಯವಾಗುವುದು.

ಭಗವದ್ರೂಪಗಳಲ್ಲಿ ಭೇದಭ್ರಮವು ಅನಾದಿ ಭೇದಭ್ರಮವಾಸನಾ ಜನ್ಯವಾಗಿದ್ದು ದೂರಮಾಡಿಕೊಳ್ಳಲು ಅಶಕ್ಯವೇ ಆದರೂ ನಿಷ್ಕಾಮಕರ್ಮದಿಂದ ಅಂತಃಕರಣ ಶುದ್ಧಿ ಮಾಡಿಕೊಂಡು ಗುರುಸೇವೆ ಮಾಡುವುದರಿಂದ ಮುಮುಕ್ಷುವು ಆ ಭ್ರಮವನ್ನು ಅತಿ ಸುಲಭವಾಗಿ ದೂರಮಾಡಿಕೊಳ್ಳಲು ಶಕ್ಯವಾಗುವುದು ಎಂದು ಸಮ್ಯಗ್ಜ್ಞಾನ ಎಂಬ ಗ್ರಂಥದಲ್ಲಿದೆ.

ವೇದೈಕ ಗಮ್ಯನಾದ ಭಗವಂತನ ರೂಪಗಳ ಬಗ್ಗೆ ಬರುವ ಭೇದಭ್ರಮವು ಬೇರೆ ಯಾವ ಉಪಾಯದಿಂದಲೂ ನಿವಾರಣೆ ಮಾಡಿಕೊಳ್ಳಲು ಅಶಕ್ಯವೆ. ಭಗವದನುಗ್ರಹದಿಂದ ನಿರ್ಮಲಚಿತ್ತನಾಗಿ ಗುರೂಪದೇಶ ಪಡೆದರೆ ಮಾತ್ರ ವೇದದಿಂದ ನಿವಾರಣೆ ಶಕ್ಯವಾಗುವುದು. ಕೇವಲ ಬುದ್ಧಿಬಲದಿಂದ ವೇದ ಓದಿದರೂ ಗುರೂಪದೇಶವಿಲ್ಲದೆ ಭ್ರಮನಿವೃತ್ತಿಯಾಗಲಾರದು.

❖❖❖

ಪರಮಾತ್ಮನ ರೂಪಗಳಲ್ಲಿ ಭೇದಭ್ರಮವನ್ನು ದೂರಮಾಡಿಕೊಳ್ಳುವುದು ಮುಮುಕ್ಷುವಿಗೆ ಅವಶ್ಯಕರ್ತವ್ಯವೆಂದು ಹಂಸನಾಮಕ ಪರಮಾತ್ಮ ಸನಕಾದಿಗಳಿಗೆ ಉಪದೇಶಿಸುವನೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ದೃಷ್ಟಿಂ ತತಃ ಪ್ರತಿನಿವರ್ತ್ಯ ನಿವೃತ್ತತರ್ಷ-
ಸ್ತೂಷ್ಣೀಂ ಭವೇನ್ನಿಜಸುಖಾನುಭವೋ ನಿರೀಹಃ ।
ಸಂದೃಶ್ಯತೇ ಕ್ವಚ ಯದೀದಮವಸ್ತುಬುದ್ಧ್ಯಾ
ತ್ಯಕ್ತಂ ಭ್ರಮಾಯ ನ ಭವೇತ್ ಸ್ಮೃತಿರಾ ನಿಪಾತಾತ್ ॥ ೩೫ ॥

ಪರಮಾತ್ಮನ ರೂಪಗಳಲ್ಲಿ ಭೇದಭ್ರಮೆ ಪಾಪ ಜನ್ಯವಾದ್ದರಿಂದ ಅದನ್ನು ಹೋಗಲಾಡಿಸಿಕೊಂಡು ವಿಷಯಾಸಕ್ತಿಯನ್ನು ತೊರೆದು ನಿಷಿದ್ಧಾಚರಣೆ ಬಿಟ್ಟು ಸುಮ್ಮನೆ ಹರಿಧ್ಯಾನ ನಿರತನಾಗಬೇಕು. ಬಳಿಕ ಸ್ವರೂಪಾನಂದಾನುಭವರೂಪನಾದ ಹರಿಯ ಸಾಕ್ಷಾತ್ಕಾರಾನುಭವವನ್ನು ಪಡೆದ ಜ್ಞಾನಿ ತನ್ನ ಸ್ವರೂಪಾನಂದಾನುಭವವನ್ನು ಪಡೆಯುತ್ತಾನೆ. ಕೆಲವು ಅಜ್ಞಜನರಿಗೆ ಪರಮಾತ್ಮರೂಪಗಳಲ್ಲಿ ಭೇದಭ್ರಮ ಕಂಡುಬಂದ ಮಾತ್ರಕ್ಕೆ ಜ್ಞಾನಿಗಳು ಮೋಸಹೋಗುವುದಿಲ್ಲ. ಅದು ಸರಿಯಲ್ಲ ಎಂಬ ತಿಳುವಳಿಕೆಯಿಂದ ಅದನ್ನು ಬಿಟ್ಟಿರುತ್ತಾರೆ. ಏಕೆಂದರೆ ಪರಮಾತ್ಮ ರೂಪಗಳಲ್ಲಿ ಅಭೇದವನ್ನು ಸರಿಯಾಗಿ ತಿಳಿಯುವುದು ಮೋಕ್ಷಸಾಧನ. ಮಿಶ್ರಜ್ಞಾನ ಸಂಸಾರಕಾರಣ. ವಿಪರೀತಜ್ಞಾನ ಅಂಧಂತಮಸ್ಸಿಗೆ ಕಾರಣವೆಂದು 'ಆನಿಪಾತಾತ್' ಮೋಕ್ಷಕ್ಕೆ ಏರುವುದರಿಂದ ತೊಡಗಿ ಅಂಧಂತಮಸ್ಸಿನಲ್ಲಿ ಬೀಳುವವರೆಗಿನ ಫಲಗಳ ಸ್ಮರಣೆ ಜ್ಞಾನಿಗಳಿಗೆ ಇರುತ್ತದೆ.

[1]ದೇಹ ಉಳ್ಳವನಿಗೆ ದ್ವೈತದೃಷ್ಟಿಯನ್ನು ಸರ್ವಥಾ ದೂರಮಾಡಿಕೊಳ್ಳುವುದು ಶಕ್ಯವಾಗದು ಅದರಿಂದ ಜೀವನ್ಮುಕ್ತನಿಗೂ ಪುನಃ ಸಂಸಾರಪ್ರಾಪ್ತಿಯಾಗುವ ಸಂಭವವಿದೆ ಎಂದು ಭಯಪಡುವ ಕಾರಣವಿಲ್ಲ. ಏಕೆಂದರೆ ಆವಶ್ಯಕವಾದ ಆಹಾರ ಸ್ವೀಕಾರ ಮುಂತಾದವುಗಳಲ್ಲಿ ದ್ವೈತದೃಷ್ಟಿ ಕಂಡುಬಂದರೂ ಮಿಥ್ಯೆಯೆಂದು ತ್ಯಾಗ ಮಾಡಿರುವ ವಸ್ತುಗಳಲ್ಲಿ ಹಿಂದಿನಂತೆ ಜ್ಞಾನಿಯು ಮೋಹಕ್ಕೊಳಗಾಗುವುದಿಲ್ಲ. ದೇಹ ಬಿದ್ದು ಹೋಗುವವರೆಗೆ ದ್ವೈತದ ಸಂಸ್ಕಾರ ಮಾತ್ರವಿರುತ್ತದೆ' ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ.

---

1. ನನು ದೇಹವತಃ ಸರ್ವಥಾ ದ್ವೈತದೃಷ್ಟಿ ಪ್ರತಿನಿವರ್ತನಾಯೋಗಾತ್ ಪುನಃ ಸಂಸಾರಃ ಸ್ಯಾದೇವ ತತ್ರಾಹ ಸಂದೃಶ್ಯತ ಇತಿ । ಕ್ವಚಿದಾವಶ್ಯಕಾಹಾರಾದಿಷು ಯದ್ಯಪೀದಂ ದೃಶ್ಯತೇ ತಥಾಪಿ ಪೂರ್ವಮವಸ್ತು ಬುದ್ಧ್ಯಾ ಯತ್‌ತ್ಯಕ್ತಂ ತತ್‌ಪುನರ್ಮೋಹಾಯ ನ ಭವೇದೇವ ಕಿಂತು ದೇಹ ಪಾತ ಪರ್ಯಂತಂ ಸ್ಮೃತಿರಿವ ಸ್ಮೃತಿಃ ಸಂಸ್ಕಾರಮಾತ್ರೇಣಾವಭಾಸೋ ಭವೇದಿತ್ಯರ್ಥಃ । -ಶ್ರೀಧರಃ

ಪ್ರಾರಬ್ಧಜ ಸಂಸ್ಕಾರ ಮಾತ್ರೇಣ ಜೀವನ್ಮುಕ್ತಸ್ಯ ದಗ್ಧಪಟವತ್ ದ್ವಿದಲಾದಿವದವಭಾಸೋ ಬಾಧಿತಾನುವೃತ್ತಿ ಮಾತ್ರಂ ಭವೇದಿತ್ಯರ್ಥಃ । -ರಾಧಾರಮಣ

ಆದರೆ ಇದು ಭಾಗವತಕ್ಕೇ ವಿರುದ್ಧ. ನವಮಸ್ಕಂಧ 11ನೇ ಅಧ್ಯಾಯ (ಶ್ರೀಧರೀಯ ಪಾಠದಲ್ಲಿ 13ನೇ ಅಧ್ಯಾಯ)ದಲ್ಲಿ ಜೀವನ್ಮುಕ್ತರೆಂದು ಪ್ರಸಿದ್ಧರಾದ ವಸಿಷ್ಠವಾಮದೇವಾದಿಗಳೂ ಕೆಲವೊಮ್ಮೆ ಮೋಹಕ್ಕೊಳಗಾಗುತ್ತಾರೆ. ನಿಮಿರಾಜನ ಯಜ್ಞದಲ್ಲಿ ಪೌರೋಹಿತ್ಯ ಸಿಗದಿದ್ದುದಕ್ಕೆ ವಸಿಷ್ಠರು ಕುಪಿತರಾಗಿ ಸಾಯುವಂತೆ ಶಪಿಸಿದರು. 'ಆನಿಪಾತಾತ್' ಶರೀರ ಬೀಳುವವರೆಗೆ ಮಾತ್ರವಲ್ಲದೆ ಇನ್ನೊಂದು ಶರೀರ ಬಂದಾಗಲೂ ಹಿಂದಿನಂತೆ ಈ ರೀತಿಯ ಮೋಹ ಜೀವನ್ಮುಕ್ತರಲ್ಲಿ ಕಂಡುಬರುತ್ತದೆ. ಸೌಭರಿಮುನಿಗೆ ಐವತ್ತು ಜನ್ಮಗಳಲ್ಲಿ ಸ್ತ್ರೀಸುಖ ಅನುಭವಿಸುವ ಪ್ರಾರಬ್ಧವಿದ್ದುದರಿಂದ ಒಂದೇ ಜನ್ಮದಲ್ಲಿ ಅದನ್ನು ತೀರಿಸುವುದಕ್ಕೆ ಏಕಕಾಲದಲ್ಲಿ ಐವತ್ತು ಶರೀರ ಸ್ವೀಕಾರ ಮಾಡಿ ಮಾಂಧಾತರಾಜನ ಐವತ್ತು ಮಂದಿ ಕುಮಾರಿಯರನ್ನು ಮದುವೆಯಾಗಿ ವೈಭವದ ಗೃಹಸ್ಥ ಜೀವನವನ್ನು ನಡೆಸಿದ್ದು ನವಮಸ್ಕಂಧ ಆರನೇ ಅಧ್ಯಾಯದಲ್ಲಿ ಬರುತ್ತದೆ. ಭರತಚಕ್ರವರ್ತಿಗೆ ಜಿಂಕೆಯ ಮೇಲೆ ಮೋಹ ಉಂಟಾದುದು ಪಂಚಮಸ್ಕಂಧ ಎಂಟನೇ ಅಧ್ಯಾಯದಲ್ಲಿದೆ. ಹೀಗೆ ~~ಭಾಗವತ ಇಡೀ ಜೀವನ್ಮುಕ್ತರು ಮೋಹಪರವಶರಾದುದರ ಕಥೆಯೇ ಆಗಿರುವಾಗ~~ ಜೀವನ್ಮುಕ್ತನಿಗೆ ಮೋಹ ಬರುವುದಿಲ್ಲ ಎನ್ನುವ ಮಾತು ಸರ್ವಥಾ ಸಮಂಜಸವಾಗ ಲಾರದು. ಜೀವನ್ಮುಕ್ತರಿಗೆ ಈ ಮೋಹವು ಪ್ರಾರಬ್ಧಕ್ಷಯಕ್ಕೆ ಸಾಧನವಾಗುತ್ತದೆ ಹೊರತು ಸಂಸಾರಕ್ಕೆ ಕಾರಣವಾಗುವುದಿಲ್ಲ ಎನ್ನಬೇಕು.

[2]ವೀರರಾಘವ ವ್ಯಾಖ್ಯಾನದಲ್ಲಿ ಜೀವನ್ಮುಕ್ತರಿಗೂ ಭೋಜನಶಯನಾದಿಗಳಲ್ಲಿ ದೇಹಾತ್ಮೈಕ್ಯಬುದ್ಧಿ ಕಂಡುಬರುತ್ತದೆ. ಆದರೆ ಅದು ಸಮಾಧಿಗೆ ಭಂಗ ತರುವುದಿಲ್ಲ ಎಂದಿದ್ದಾರೆ. ಆದರೆ ಕಂಡು ಎಂಬ ಮುನಿ ಪ್ರಮ್ಲೋಚೆ ಎಂಬ ಅಪ್ಸರೆಯೊಡನೆ ನೂರಾರು ವರ್ಷಕಾಲ ಮೋಹದಿಂದ ಮೈಮರೆತು ಬಳಿಕ ಒಂದು ದಿನ ಎಚ್ಚೆತ್ತು ಸಂಧ್ಯಾಕಾಲ ಬಂದಿತೆಂದು ಅನುಷ್ಠಾನಕ್ಕೆ ಹೊರಟ. ಒಂದೇ ದಿನ ಬೆಳಗಿನಿಂದ ಸಂಜೆವರೆಗೆ ಮಾತ್ರ ರಮಿಸಿದ್ದೇನೆ ಎಂದುಕೊಂಡಿದ್ದನಂತೆ. ಜೀವನ್ಮುಕ್ತರಿಗೆ ಹೀಗೆ ಸಮಾಧಿಗೆ ಭಂಗ ಬಂದುದು ವಿಷ್ಣುಪುರಾಣದಲ್ಲಿದೆ. ಅದರಿಂದ ಬೇರೆ ವ್ಯಾಖ್ಯಾನಕಾರರು ಈ ಭಾಗವತ ಶ್ಲೋಕಕ್ಕೆ ನೀಡಿದ ವಿವರಣೆ ಸಮರ್ಪಕವಲ್ಲ. ಶ್ರೀಮದಾಚಾರ್ಯರು ವ್ಯಾಖ್ಯಾನಿಸುತ್ತಾರೆ—

---

2. ಅವಸ್ತುಬುದ್ಧ್ಯಾ ಅನಾತ್ಮಬುದ್ಧ್ಯಾ ತ್ಯಕ್ತಮಿದಂ ದೇಹಾದಿಕಂ ಕ್ವಚ ಸಮಾಧಿ ವ್ಯತಿರಿಕ್ತ ಶಯನಾಸನಭೋಜನಾದಿ ದಶಾಸು ಯದ್ಯಪಿ ಸಂದೃಶ್ಯತೇ । ತಥಾಪಿ ತದ್ ಭ್ರಮಾಯ ಸಮಾಧಿತಶ್ಚಾಲನಾಯ ನ ಭವೇತ್ । -ವೀರರಾಘವಃ

ನಿಪಾತಮಂಧಂತಮಃ । ಮೋಕ್ಷಮಾರಭ್ಯ ತಾವತ್‌ಪರ್ಯಂತಂ ಸ್ಮೃತಿರ್ಯಸ್ಮಾಜ್ಜ್ಞಾನಿನೋ ವಿದ್ಯತೇ ಅತೋ ಮೂಢೇಷು ಸ್ಥಿತೋ ಭ್ರಮೋ ಯದ್ಯಪಿ ಸಂದೃಶ್ಯತೇ ತೇನ । ತಥಾಪಿ ಭ್ರಮಾಯ ನ ಭವತಿ । ಫಲಂ ಹಿ ನಿಪಾತಂ ಸ್ಮರತಿ ॥

'ನಿ–ಪಾತ'ವೆಂದರೆ ಮಹಾ ಅಧಃಪತನ, ಅಂಧಂತಮಸ್ಸು. ಮೋಕ್ಷಕ್ಕೆ ಏರುವುದರಿಂದ ತೊಡಗಿ ಅಂಧಂತಮಸ್ಸಿನಲ್ಲಿ ಬೀಳುವವರೆಗಿನ ಫಲಗಳ ಸ್ಮರಣೆಯು ಜ್ಞಾನಿಗೆ ಇರುತ್ತದೆ. ಅದರಿಂದ ಯದ್ಯಪಿ ಅಜ್ಞಾನಿ ವಿಪರೀತಜ್ಞಾನಿಗಳಿಗೆ ಪರಮಾತ್ಮರೂಪಗಳಲ್ಲಿ ಭೇದಭ್ರಮವಿರುವುದು ಜ್ಞಾನಿಗೆ ಕಂಡುಬರುತ್ತದೆ. ಆದರೂ ಅವನಿಗೆ ಅದು ಭ್ರಮಕ್ಕೆ ಕಾರಣವಾಗುವುದಿಲ್ಲ. ಏಕೆಂದರೆ ಆ ಭ್ರಮದ ಫಲವು ಅಂಧಂತಮಸ್ಸೆಂದು ಅವನು ಸ್ಮರಣೆಗೆ ತಂದುಕೊಳ್ಳುತ್ತಾನೆ.

❖ ❖ ❖

ಜ್ಞಾನಿಗೆ ತ್ರಿಗುಣಜನ್ಯ ದೇಹಾಭಿಮಾನವಿಲ್ಲದಿರುವುದರಿಂದ ತ್ರಿಗುಣಜನ್ಯ ಭ್ರಮವೂ ಇರುವುದಿಲ್ಲವೆಂದು ಹಂಸನಾಮಕ ಪರಮಾತ್ಮ ಸನಕಾದಿಗಳಿಗೆ ಉಪದೇಶಿಸುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ದೇಹಂ ಚ ನಶ್ವರಮವಸ್ಥಿತಮುಜ್ಝಿತಂ ವಾ
ಸಿದ್ಧೋ ನ ಪಶ್ಯತಿ ಯತೋಽಧ್ಯಗಮತ್ಸ್ವರೂಪಮ್ ।
ದೈವಾದುಪೇತಮಥ ದೈವವಶಾದಪೇತಂ
ವಾಸೋ ಯಥಾ ಪರಿಕೃತಂ ಮದಿರಾಮದಾಂಧಃ ॥ ೩೬ ॥

ಮದ್ಯಪಾನ ಮಾಡಿ ಮತ್ತೇರಿದವನು ಉಟ್ಟ ಬಟ್ಟೆ ದೈವಾತ್ ಜಾರಿದರೂ ಮೈಮೇಲೇ ಇದ್ದರೂ ಅದನ್ನು ಗಮನಿಸುವುದಿಲ್ಲ. ಹಾಗೇ ಸ್ವತಂತ್ರನಾದ ಭಗವಂತನನ್ನು ಕಂಡ ಜೀವನ್ಮುಕ್ತನು ತನ್ನ ಸ್ವರೂಪದೇಹವನ್ನು ತಿಳಿದಿರುವುದರಿಂದ ನಶ್ವರವಾದ ಬಾಹ್ಯ ಸ್ಥೂಲಶರೀರವನ್ನು ಅದು ಇರಲಿ ಬಿಡಲಿ, ಆತ ಗಮನಿಸುವುದಿಲ್ಲ.

[1]'ಜೀವನ್ಮುಕ್ತನು ಹೊರಗಿನ ಪ್ರಪಂಚವನ್ನೂ ತನ್ನ ಶರೀರವನ್ನೂ ಮಿಥ್ಯೆ ಎಂದು ತಿಳಿದು ಗಮನಿಸುವುದಿಲ್ಲ. ಸಮಾಧಿಯಲ್ಲಿ ಕುಳಿತು ಸ್ವರೂಪಾನಂದಾನುಭವದಲ್ಲಿಯೇ ಮಗ್ನನಾಗುತ್ತಾನೆ. ಆವಶ್ಯಕವಾದ ಆಹಾರ ಸೇವನೆ ಮುಂತಾದವುಗಳಲ್ಲಿ

---

1. ಏತದೇವೋಪಪಾದಯತಿ ದೇಹಮಿತಿ । - ಶ್ರೀಧರಃ
ಏತದೇವ ಸಂಸ್ಕಾರಮಾತ್ರೇಣಾವಭಾಸನಮೇವ । - ರಾಧಾರಮಣದಾಸಃ

ದ್ವೈತ ಪ್ರಪಂಚವನ್ನು ಕಂಡರೂ ಹಿಂದೆಯೇ ಅದನ್ನು ಮಿಥ್ಯೆ ಎಂದು ತಿಳಿದಿರುವುದರಿಂದ ಮೋಹಕ್ಕೊಳಗಾಗುವುದಿಲ್ಲ ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದ್ದನ್ನೇ ಮುಂದೆ, ಕುಡಿದು ಮೈಮೇಲೆ ಪ್ರಜ್ಞೆ ಇಲ್ಲದೆ ತೂರಾಡುವ ಕುಡುಕನ ದೃಷ್ಟಾಂತ ಕೊಟ್ಟು ವಿವರಿಸುತ್ತಾನೆ, ಹಂಸ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ.

ಆದರೆ ಕುಡುಕನ ದೃಷ್ಟಾಂತವನ್ನು ಪೂರ್ತಿಯಾಗಿ ತೆಗೆದುಕೊಳ್ಳಬಾರದು. ಜೀವನ್ಮುಕ್ತನು ಮತಿಭ್ರಮಣೆಯಿಂದ ಬಿದ್ದಿರುವುದಿಲ್ಲ. ಶರೀರವು ತನ್ನದು, ತನಗೆ ಇಷ್ಟವಾದ ವಿಷಯ ಸುಖಭೋಗಕ್ಕೆ ಸಾಧನವಾಗಿದೆ ಎಂಬ ಅಭಿಮಾನವಿಟ್ಟುಕೊಳ್ಳದೆ ಅದರ ರಕ್ಷಣೆಗಾಗಿ ಬಟ್ಟೆ ಧರಿಸುವ ಕಡೆಗೂ ಗಮನ ಕೊಡದೆ ಸಂಚರಿಸುತ್ತಾನೆ. 'ಪಾರಕ್ಯಮಿತ್ಯವಸಿತೋ ವಿಚರಾಮ್ಯಸಂಗಃ' (9.25) ಎಂದು ಅವಧೂತನು ಹಿಂದೆ ಹೇಳಿದ್ದಾನೆ. ಪರಮಾತ್ಮ ತಂದುಕೊಟ್ಟಿದ್ದು ಈ ಶರೀರ, ಅವನ ಪೂಜೆಗಾಗಿ ಇರುವುದು ಅವನೇ ಕಾಪಾಡುತ್ತಾನೆ ಎಂದು ದೃಢವಾದ ವಿಶ್ವಾಸದಿಂದ ಶರೀರ ರಕ್ಷಣೆಯ ಕಡೆಗೆ ವಿಶೇಷವಾಗಿ ಗಮನ ಕೊಡದೆ, 'ತ್ವಯೋಪಭುಕ್ತ ಸ್ರಗ್ಗಂಧವಾಸೋಲಂಕಾರ ~~ಚರ್ಚಿತಾಃ ಉಚ್ಛಿಷ್ಟ ಭೋಜಿನೋ ದಾಸಾಃ' (6.47) ಎಂಬಂತೆ ದೇಹದೊಳಗೆ~~ ಹೃದಯ ಮಂಟಪದಲ್ಲಿ ಭಗವಂತನನ್ನು ಆರಾಧಿಸುತ್ತ ಅವನ ಉಚ್ಛಿಷ್ಟವೆಂದು ಆಹಾರ ಸೇವನೆ ಮಾಡುತ್ತಾನೆ. 'ಲೋಕಾನಾಂ ಪಾವನಾಯ ಚರಂತಿ' (2.28) ಅಜ್ಞಲೋಕಕ್ಕೆ ಜ್ಞಾನನೀಡಿ ಉದ್ಧಾರಮಾಡಲೆಂದೇ ಸಂಚರಿಸುತ್ತಾನೆ. ಏಕೆಂದರೆ 'ಯತೋಽಧ್ಯಗಮತ್ ಸ್ವರೂಪಂ' ಎಂದು ಈ ಶ್ಲೋಕದಲ್ಲಿ ಹಂಸನೇ ಹೇಳುತ್ತಾನೆ. 'ಸ್ವ=ರೂಪ' ಎಂದರೆ ಸ್ವತಂತ್ರನಾದ ಭಗವಂತನ ಬಿಂಬರೂಪ ಸಾಕ್ಷಾತ್ಕಾರ ಮಾಡಿಕೊಂಡಿರುತ್ತಾನೆ. ಆ ಬಿಂಬರೂಪ ಬೇರೆಯಲ್ಲ, ಬೇರೆಬೇರೆ ಕಡೆ ಬೇರೆಬೇರೆ ಕಾರ್ಯಗಳನ್ನು ನಡೆಸುವ ಬೇರೆ ರೂಪಗಳೂ ವಸ್ತುತಃ ಬೇರೆಯಲ್ಲ. ಅಚಿಂತ್ಯ ಶಕ್ತಿರೂಪವಾದ ವಿಶೇಷ ಬಲದಿಂದ ಆತ ಒಬ್ಬನೇ ಅನೇಕನಾಗಿದ್ದಾನೆ. ಏಕಮೇವಾ ದ್ವಿತೀಯನೆನಿಸಿದ್ದಾನೆ ಎಂದು ಆತ ತಿಳಿದಿದ್ದಾನೆ. ಆ ರೂಪಗಳ ವಿಷಯದಲ್ಲಿ ಅವನಿಗೆ ಭೇದಭ್ರಮವಿರುವುದಿಲ್ಲ. ಅಜ್ಞ ಜನರೆಲ್ಲರೂ ಸೇರಿ ಒಕ್ಕೊರಲಿನಿಂದ ಭೇದವನ್ನು ಹೇಳುವುದನ್ನು ಕಂಡರೂ ಆತ ಮೋಸಹೋಗುವುದಿಲ್ಲ. ಏಕೆಂದರೆ ತ್ರಿಗುಣಾತ್ಮಕ ವಾದ ದೇಹದಲ್ಲಿ ಅಭಿಮಾನವನ್ನು ಬಿಟ್ಟಿರುವುದರಿಂದ ತ್ರಿಗುಣಜನ್ಯವಾದ ಪಾಪ ಅವನನ್ನು ಸುತ್ತಿಕೊಳ್ಳುವುದಿಲ್ಲ. ಪಾಪದಿಂದ ಉಂಟಾಗಬಹುದಾದ ಭೇದಭ್ರಮಕ್ಕೆ ಅವನಲ್ಲಿ ಅವಕಾಶವಿರುವುದಿಲ್ಲ. ಇದನ್ನು ತಿಳಿಸಲೆಂದೇ ಈ ಶ್ಲೋಕ ಮತ್ತು ಮುಂದಿನ ಶ್ಲೋಕಗಳು ಹೊರಟಿವೆ. ಈ ಶ್ಲೋಕದಲ್ಲಿ ದೇಹಾಭಿಮಾನರಹಿತನಾದ ಜ್ಞಾನಿ ಮೋಹದಿಂದ ದೇಹರಕ್ಷಣೆಯ ಕಡೆಗೆ ವಿಶೇಷ ಗಮನಕೊಡುವುದಿಲ್ಲ ಎಂದು

ಹೇಳುತ್ತಿದೆ. ಮುಂದಿನ ಶ್ಲೋಕವು ದೇಹದ ರಕ್ಷಣೆಯ ಭಾರ ಪರಮಾತ್ಮನಿಗೆ ಸೇರಿದ್ದು ಪ್ರಾರಬ್ಧವಿರುವಷ್ಟೂ ಕಾಲ ಅದನ್ನು ಅವನೇ ಕಾಪಾಡುತ್ತಾನೆ ಎಂದು ಹೇಳುತ್ತದೆ.

[2]ಆತ್ಮಸ್ವರೂಪವನ್ನು ತಿಳಿದಿರುವುದರಿಂದ ಸಮಾಧಿಯ ಅವಸ್ಥೆಯಲ್ಲಿ ಆತ್ಮನಲ್ಲಿ ದೇಹಾಭೇದಚಿಂತನೆ ಮಾಡುವುದಿಲ್ಲ, ಮಾಡಬಾರದು, ದೇಹವನ್ನು ಚಿಂತಿಸಬಾರದೆಂದ ಮೇಲೆ ಬೇರೆ ವಸ್ತುಗಳನ್ನು ಚಿಂತಿಸಬಾರದೆಂದು ಬೇರೇನು ಹೇಳಬೇಕು ಎನ್ನುವುದು ಶ್ಲೋಕದ ತಾತ್ಪರ್ಯ ಎಂದು ವೀರರಾಘವ ಶುಕದೇವ ಮುಂತಾದವರು ಹೇಳುತ್ತಾರೆ.

ದೇಹದಲ್ಲಿ ಭಗವಂತನನ್ನು ಆರಾಧಿಸುವಾಗ ದೇಹಾಭೇದವನ್ನು ಆತ್ಮನಲ್ಲಿ ಚಿಂತಿಸುವ ಪ್ರಸಕ್ತಿಯೇ ಇಲ್ಲ. ಪರಮಾತ್ಮನಲ್ಲಿಯೂ ಚಿಂತಿಸುವ ಪ್ರಸಕ್ತಿ ಇಲ್ಲ. ದೇಹಕ್ಕಿಂತಲೂ ಆತ್ಮಕ್ಕಿಂತಲೂ ಭಿನ್ನನು ಅಂತರ್ಯಾಮಿಯಾದ ಪರಮಾತ್ಮ ಎನ್ನುವುದನ್ನು ಸಾಕ್ಷಾತ್ಕಾರದಿಂದ ಜ್ಞಾನಿ ಕಂಡಿರುತ್ತಾನೆ.

ತ್ರಿಗುಣಸರ್ಗಕೃತೋ ವಿಕಲ್ಪ ಇತ್ಯುಕ್ತಂ । ಜ್ಞಾನಿನೋಽಪಿ ದೇಹವತ್ತ್ವೇನ ತ್ರಿಗುಣಿತ್ವಾದ್ ವಿಕಲ್ಪೋ ಭವತೀತ್ಯತ್ರಾಹ ದೇಹಂ ಚ ನಶ್ವರಮಿತಿ ।

ತ್ರಿಗುಣಜನ್ಯ ಪಾಪದಿಂದ ಭಗವದ್ರೂಪಗಳಲ್ಲಿ ಭೇದಭ್ರಮ ಎಂದು ಹಿಂದೆ ಹೇಳಿದೆ. ಇದೀಗ ಜ್ಞಾನಿಗೂ ಕೂಡ ತ್ರಿಗುಣಾತ್ಮಕ ದೇಹವಿರುವುದರಿಂದ ತ್ರಿಗುಣಜನ್ಯ ಪಾಪವಿದೆ. ಅದರಿಂದ ಭ್ರಮ ಬರಬಹುದು ಎಂಬ ಶಂಕೆಯ ಪರಿಹಾರಕ್ಕಾಗಿ 'ದೇಹಂ ಚ ನಶ್ವರಂ' ಎನ್ನುವ ಶ್ಲೋಕ ಹೊರಟಿದೆ. ದೇಹಾಭಿಮಾನವಿಲ್ಲದಿರುವುದರಿಂದ ತ್ರಿಗುಣಜನ್ಯ ಪಾಪಕ್ಕೆ ಅವಕಾಶವಿಲ್ಲ ಎಂದು ಪರಿಹಾರ ಮಾಡುತ್ತಿದೆ.

❖❖❖

ಜ್ಞಾನಿಗೆ ದೇಹಾಭಿಮಾನವಿರುವುದಿಲ್ಲವೆಂದು ಹಂಸನು ಸನಕಾದಿಗಳಿಗೆ ಉಪದೇಶಿಸುತ್ತಿದ್ದಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ದೇಹೋಽಪಿ ದೈವವಶಗಃ ಖಲು ಕರ್ಮ ಯಾವತ್

2. ಸಮಾಧಿದಶಾಯಾಂ ದೇಹಾಕಾರೋ ನ ಪ್ರತಿಭಾತೀತ್ಯಾಹ ದೇಹಂ ಚೇತಿ । -ಸುದರ್ಶನಃ
ಯತಃ ಸ್ವರೂಪಂ ನಿಷ್ಕೃಷ್ಟಾತ್ಮಸ್ವರೂಪಮಧ್ಯಗಮತ್ ಸಾಕ್ಷಾತ್ಕೃತವಾನ್ ಅತಃ ಸಮಾಧಿ ದಶಾಯಾಂ ದೇಹೋ ನ ಪ್ರತ್ಯೇತವ್ಯ ಇತ್ಯರ್ಥಃ । -ವೀರರಾಘವಃ
ಯದ್ಯೈವಂಭೂತೋ ದೇಹಮಪಿ ನಾನುಸಂಧತ್ತೇ ತರ್ಹ್ಯನ್ಯಂ ನ ಪಶ್ಯತೀತಿ ಕಿಮು ವಕ್ತವ್ಯಂ । -ಶುಕದೇವಃ

ಸ್ವಾರಂಭಕಂ ಪ್ರತಿ ಸಮೀಕ್ಷತ ಏವ ಸಾಸುಃ ।
ತಂ ಸಪ್ರಪಂಚಮಧಿರೂಢಸಮಾಧಿಯೋಗಃ
ಸ್ವಾಪ್ನಂ ಪುನರ್ನ ಭಜತೇ ಪ್ರತಿಬುದ್ಧವತ್ ಸಃ ॥ ೩೭ ॥

ಅಪರೋಕ್ಷಜ್ಞಾನಿಯ ದೇಹ ಅದೃಷ್ಟಾಧೀನವಾಗಿ ಅಪ್ರಯತ್ನವಾಗಿ ಇಂದ್ರಿಯ ಚಟುವಟಿಕೆಗಳನ್ನು ನಡೆಸುತ್ತ ತನಗೆ ಕಾರಣವಾದ ಪ್ರಾರಬ್ಧ ಪುಣ್ಯಪಾಪ ಗಳಿರುವವರೆಗೆ ಕಾದುನೋಡಿ ಅದು ತೀರಿದಾಗ ಬಿದ್ದು ಹೋಗುತ್ತದೆ. ಅಸಂಪ್ರಜ್ಞಾತ ಸಮಾಧಿಯ ಅವಸ್ಥೆಯನ್ನು ತಲುಪಿರುವ ಆ ಅಪರೋಕ್ಷಜ್ಞಾನಿ ತನ್ನ ಸ್ಥೂಲದೇಹ ಕಾರ್ಯ ಮಾಡುವುದನ್ನು ಬಿಡುವುದನ್ನು ಆದರಿಸುವುದಿಲ್ಲ. ಕನಸು ಕಂಡು ಎಚ್ಚೆತ್ತವನು ಕನಸಿನಲ್ಲಿ ಕಂಡ ವಸ್ತುವನ್ನು ಹೇಗೆ ಆದರಿಸುವುದಿಲ್ಲವೋ ಹಾಗೆ.

[1]"ಕನಸಿನಲ್ಲಿ ತನಗೆ ಬಂದಿರುವ ಶರೀರವನ್ನು ಎಚ್ಚೆತ್ತ ಬಳಿಕವೂ ಧರಿಸುವುದಿಲ್ಲ ಹೇಗೋ ಹಾಗೆ ಪರಮಾತ್ಮಸಾಕ್ಷಾತ್ಕಾರವಾದ ಬಳಿಕವೂ ಜ್ಞಾನಿ ತನ್ನ ಶರೀರವನ್ನು ನನಗೆ ಸುಖಸಾಧನವೆಂದು ಮೋಹದಿಂದ ಕಾಪಾಡಿಕೊಳ್ಳುವುದಿಲ್ಲ' ಎಂದು ಶುಕದೇವ ವ್ಯಾಖ್ಯಾನದಲ್ಲಿ ಹೇಳಿದೆ.

ಭಗವಂತನ ಸಾಕ್ಷಾತ್ಕಾರವಾಗಿರುವುದರಿಂದ ಮನಸ್ಸು ಅವನಲ್ಲೇ ಕೇಂದ್ರೀಕರಿಸಿರುವುದರಿಂದ ಶರೀರದ ಕಡೆಗೆ ಗಮನವೇ ಇರುವುದಿಲ್ಲ, ಅದರಿಂದ ಶರೀರ ರಕ್ಷಣೆಯಲ್ಲಿ ಪ್ರವೃತ್ತಿ ಮಾಡುವುದಿಲ್ಲ ಎಂದು ಈ ವ್ಯಾಖ್ಯಾನಕಾರರು 'ಆರೂಢ ಸಮಾಧಿಯೋಗಃ' ಎಂಬ ಶಬ್ದದ ಅಭಿಪ್ರಾಯವನ್ನು ಹೇಳಿದ್ದಾರೆ. ವಸ್ತುತಃ 'ಪಾರಕ್ಯಮಿತ್ಯವಸಿತೋ ವಿಚರಾಮ್ಯಸಂಗಃ' (ಶ್ಲೋ.9.25) ಈ ಶರೀರ ನನ್ನದಲ್ಲ, ಭಗವಂತನದು, ಅವನು ಕೊಟ್ಟಿದ್ದು ಪ್ರಾರಬ್ಧವಿರುವಷ್ಟು ಕಾಲ ಅವನೇ ಕಾಪಾಡುತ್ತಾನೆ ಎಂಬ ದೃಢವಿಶ್ವಾಸವಿರುವುದರಿಂದ ಶರೀರ ರಕ್ಷಣೆಯಲ್ಲಿ ಪ್ರವೃತ್ತಿ ಮಾಡುವುದಿಲ್ಲ. ಏಕೆಂದರೆ ಆ ಭಗವಂತನನ್ನು ಆತ ಪ್ರತ್ಯಕ್ಷಕಂಡಿದ್ದಾನೆ ಎನ್ನಬೇಕು.

ಈ ವ್ಯಾಖ್ಯಾನಕಾರರ ಪ್ರಕಾರ ಸ್ವಪ್ನದೃಷ್ಟಾಂತವೂ ಕೂಡುವುದಿಲ್ಲ. ಎಚ್ಚೆತ್ತವನು

---

1. ತಂ ದೇಹಂ ಸಪ್ರಪಂಚಂ ಪುನರ್ನ ಭಜತೇ ಮಮ ಸುಖಹೇತುರಯಮಿತ್ಯೇವಂ ನ ಪಾಲಯತಿ। ಕುತಃ ಅಧಿರೂಢಸಮಾಧಿಯೋಗಃ ಅಧಿರೂಢಃ ಪ್ರಾಪ್ತಃ ಸಮಾಧಿನಾ ಯೋಗೋ ಧ್ಯೇಯಭೂತ ಪರಮಾತ್ಮನಃ ಸಂಯೋಗೋ ಯೇನ ಸಃ ಸರ್ವ ವ್ಯವಹಾರ ಹೇತುತ್ವೇನ ತಸ್ಯ ಚ ಧ್ಯೇಯವಸ್ತುನಿ ಲಗ್ನತ್ವಾನ್ನ ಬಾಹ್ಯವಸ್ತುನಿ ಪ್ರವೃತ್ತಿರಿತ್ಯರ್ಥಃ । ತತ್ರ ದೃಷ್ಟಾಂತಃ ಯಥಾ ಪ್ರತಿಬುದ್ಧಃ ಪುನಃ ಸ್ವಾಪ್ನಂ ವಸ್ತು ನ ಭಜತೇ ತಥೇತ್ಯರ್ಥಃ ।-ಶುಕದೇವಃ

ಬಾಹ್ಯ ಪ್ರಪಂಚದಲ್ಲಿ ಆಸಕ್ತನಾದ್ದರಿಂದ ಸ್ವಾಪ್ನ ಶರೀರ ರಕ್ಷಣೆಗೆ ಪ್ರವೃತ್ತಿ ಮಾಡುವುದಿಲ್ಲ ಎನ್ನಲಾದೀತೆ? ಸ್ವಾಪ್ನವಸ್ತು ಎಚ್ಚರದಲ್ಲಿ ಇರುವುದೇ ಇಲ್ಲ ನಾಶವಾಗಿರುತ್ತದೆ.

[2]ಈ ದೋಷವನ್ನು ಆಲೋಚಿಸದೆ ವಿಶ್ವನಾಥ ವ್ಯಾಖ್ಯಾನವೂ 'ಎಚ್ಚತ್ತವನು ಸ್ವಾಪ್ನ ಶರೀರವನ್ನು ಪುನಃ ಧರಿಸುವುದಿಲ್ಲ' ಎಂದಿದೆ. [3]ವೀರರಾಘವ ವ್ಯಾಖ್ಯಾನವು 'ಸ್ವಪ್ನದಂತೆ ನಶ್ವರವಾದ ಅನಿತ್ಯವಾದ ದೇಹವನ್ನು ಜ್ಞಾನಿ ಪುನಃ ಹೊಂದುವುದಿಲ್ಲ, ಅಜ್ಞಾನಿ ಹೊಂದುತ್ತಾನೆ' ಎಂದಿದೆ. ಜ್ಞಾನಿಗೂ ಪ್ರಾರಬ್ಧಕರ್ಮದಿಂದ ಅದಿರುವಷ್ಟು ಕಾಲ ಶರೀರಗಳು ಬಂದೇ ತೀರುವುದರಿಂದ ಈ ವ್ಯಾಖ್ಯಾನವೂ ಯುಕ್ತವಾಗುವುದಿಲ್ಲ.

ಅದಕ್ಕೆ ಶ್ರೀಮದಾಚಾರ್ಯರ ವ್ಯಾಖ್ಯಾನವನ್ನೇ ಆದರಿಸಬೇಕು. 'ಎಚ್ಚತ್ತವನಿಗೆ ಸ್ವಾಪ್ನ ಶರೀರದಲ್ಲಿ ಅಭಿಮಾನವಿರುವುದಿಲ್ಲ. ಹಾಗೇ ಅಪರೋಕ್ಷಿಗೆ ತನ್ನ ಶರೀರದಲ್ಲಿ ಅಭಿಮಾನವಿರುವುದಿಲ್ಲ' ಎಂದು. ಆದರೆ 'ನ ಭಜತೇ' ಎಂದರೆ ಹೊಂದುವುದಿಲ್ಲ ಎಂದರ್ಥವಾಗುತ್ತದೆ. ಅಭಿಮಾನಪಡುವುದಿಲ್ಲ ಎಂಬ ಅರ್ಥ ಹೇಗೆ ಎಂಬ ~~ಸಂಶಯ ಬರುತ್ತದೆ. ಅದಕ್ಕೆ ಶ್ರೀಮದಾಚಾರ್ಯರು ಶಬ್ದನಿರ್ಣಯವಚನವನ್ನು~~ ಉದಾಹರಿಸಿ ಸಂಶಯ ಪರಿಹಾರ ಮಾಡುತ್ತಾರೆ.

ಆದರೋ ಭಜನಂ ಭಕ್ತಿರ್ಬಹುಮಾನಂ ಚ ಸೇವನಂ ।
ಪರ್ಯಾಯವಾಚಕಾಃ ಸರ್ವೇ ಸ್ಮೃತಿಸ್ತಜ್ಜನ್ಯ ಕರ್ಮ ಚ ॥
ಇತಿ ಶಬ್ದನಿರ್ಣಯೇ ॥

ಆದರ ಭಜನ ಭಕ್ತಿ ಬಹುಮಾನ ಸೇವನ ಸ್ಮೃತಿ ಈ ಎಲ್ಲ ಶಬ್ದಗಳೂ, ಸ್ಮೃತಿ ಜನ್ಯ ಕ್ರಿಯಾವಾಚಕ ಶಬ್ದಗಳೂ ಪರ್ಯಾಯ ಶಬ್ದಗಳೆಂದು ಶಬ್ದನಿರ್ಣಯದಲ್ಲಿ ಹೇಳಿದೆ.

❖❖❖

---

2. ತಂ ದೇಹಂ ಸಪ್ರಪಂಚಂ ಇಂದ್ರಿಯ ವಿಷಯ ಭೋಗಾದಿ ಸಹಿತಮಪಿ ನ ಭಜತೇ ಯಥಾ ಪ್ರತಿಬುದ್ಧವಸ್ತುಃ ಪ್ರಾಪ್ತಜಾಗರೋ ಜನಃ ಸ್ವಾಪ್ನಂ ದೇಹಂ ಪುನರ್ನ ಭಜತೇ । –ವಿಶ್ವನಾಥಃ

3. ಸಪ್ರಪಂಚಂ ಸಾನುಬಂಧಿನಂ ಸ್ವಾಪ್ನಂ ಸ್ವಾಪ್ನಾರ್ಥವದನಿತ್ಯಂ ತಂ ದೇಹಮಧಿರೂಢಸಮಾಧಿ ಯೋಗಃ ಅಧಿರೂಢಃ ಪ್ರಾಪ್ತಃ ಸಮಾಧ್ಯಾತ್ಮಕೋ ಯೋಗೋ ಯೇನ ಸಃ ಅತ ಏವ ಪ್ರತಿಬುದ್ಧವಸ್ತುಃ ಸಾಕ್ಷಾತ್ಕೃತವಸ್ತುಃ ಪುಮಾನ್ ಪುನರ್ನ ಭಜತೇ ಇತರಸ್ತು ಪುನರ್ದೇಹಾಂತರಂ ಪ್ರತಿಪದ್ಯತ ಇತಿಭಾವಃ । -ವೀರರಾಘವಃ

ಸಮಸ್ತ ದೇವತೆಗಳೂ ಶ್ರೀಹರಿಯನ್ನೇ ಭಜಿಸುವರೆಂದು ಹಂಸನಾಮಕ ಪರಮಾತ್ಮ ಸನಕಾದಿಗಳಿಗೆ ಉಪದೇಶಿಸುತ್ತಾನೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಮಾಂ ಭಜಂತಿ ಗುಣಾಃ ಸರ್ವೇ ನಿರ್ಗುಣಂ ನಿರಪೇಕ್ಷಕಮ್ ।
ಸುಹೃದಂ ಪ್ರಿಯಮಾತ್ಮಾನಂ ಸಾಮ್ಯಾಸಂಗಾದಯೋ ಗುಣಾಃ ॥ ೪೦ ॥

ಗುಣತ್ರಯ ರಹಿತನೂ ಯಾರ ಅಪೇಕ್ಷೆಯೂ ಇಲ್ಲದವನೂ ಅನಿಮಿತ್ತೋಪಕಾರಕನೂ ನಿರವಧಿಕ ಗುಣಪೂರ್ಣನೂ ಆದ ನನ್ನನ್ನೇ 'ಗುಣಾಃ' ಅಸ್ವತಂತ್ರರಾದ ಬ್ರಹ್ಮಾದಿ ದೇವತೆಗಳೆಲ್ಲರೂ ಭಜಿಸುತ್ತಾರೆ. ಅವರ ಯೋಗ್ಯತೆಗೆ ಅನುಗುಣವಾಗಿ ಫಲ ಕೊಡುವ ಸ್ವಭಾವ ನನ್ನಲ್ಲಿದೆ. ಪದಾರ್ಥಗಳ ಸಂಬಂಧವನ್ನು ಹೊಂದಿದರೂ ಗಾಳಿಯಂತೆ ನಿರ್ಲಿಪ್ತನಾಗಿರುವುದು ಮುಂತಾದ ಗುಣಗಳು ನನ್ನಲ್ಲಿವೆ.

ಇಲ್ಲಿ ನಿರ್ಗುಣ, ನಿರಪೇಕ್ಷಕ ಸುಹೃತ್ ಪ್ರಿಯ ಆತ್ಮನೆನಿಸಿದ ನನ್ನನ್ನು ಎಲ್ಲ ಗುಣಗಳೂ 'ಭಜಂತಿ' ಆಶ್ರಯಿಸುತ್ತವೆ. ಯಾವ ಎಲ್ಲ ಗುಣಗಳೆಂದರೆ ಸಾಮ್ಯ ಅಸಂಗ ಮುಂತಾದುವೇ ಆ ಗುಣಗಳು ಎಂದು ಎರಡು ವಾಕ್ಯಗಳಾಗಿ ಅನ್ವಯ ಮಾಡಬಹುದು. ಆದರೆ ಒಂದೇ ಮಾತಿನಲ್ಲಿ 'ನಿರ್ಗುಣ ನಿರಪೇಕ್ಷಕ ಸುಹೃತ್‌ಪ್ರಿಯ ಆತ್ಮನಾದ ನನ್ನನ್ನು ಸಾಮ್ಯ ಅಸಂಗ ಮುಂತಾದ ಗುಣಗಳು ಆಶ್ರಯಿಸಿವೆ' ಎನ್ನಬಹುದಿತ್ತು ತಾನೆ ಎಂಬ ಪ್ರಶ್ನೆ ಬರುತ್ತದೆ. ಆಗ 'ಗುಣಾಃ ಗುಣಾಃ' ಎಂದು ಪುನರುಕ್ತಿಯಾಗುತ್ತದೆ. ಸಾಮ್ಯಾಸಂಗಾದಯೋ ಗುಣಾಃ ಎಂಬಲ್ಲಿ 'ಅಗುಣಾಃ' ಎಂದು ಪದವಿಭಾಗ ಮಾಡಿ ಪ್ರಾಕೃತಗುಣ ಭಿನ್ನವಾದ ದಿವ್ಯಗುಣ ಎಂದು ಹೇಳಿದರೂ 'ನಿರ್ಗುಣಂ' ಪ್ರಾಕೃತಗುಣರಹಿತನಾದ ಪರಮಾತ್ಮನನ್ನು ಎಂದು ಹೇಳಿರುವುದರಿಂದ ಪುನರುಕ್ತಿಯಾಗುತ್ತದೆ.

ಅದಕ್ಕೆ ಶ್ರೀಮದಾಚಾರ್ಯರು 'ಮಾಂ ಭಜಂತಿ ಗುಣಾಃ' ನನ್ನ ಪರಿವಾರದವರಾದ ಬ್ರಹ್ಮಾದಿ ದೇವತೆಗಳು ನನ್ನನ್ನು ಭಜಿಸುತ್ತಾರೆ ಎಂದು ಸುಂದರವಾದ ವ್ಯಾಖ್ಯಾನ ಮಾಡುತ್ತಾರೆ. ಕಾಲಸಂಹಿತಾ ವಚನವು ಈ ವ್ಯಾಖ್ಯಾನವನ್ನು ಮನ್ನಿಸುತ್ತದೆ. ಹಿಂದೆ ಹೇಳಿದ ಶಬ್ದನಿರ್ಣಯವಚನವೂ ಇದಕ್ಕೆ ಪುಷ್ಟಿ ನೀಡುತ್ತದೆ. ಆದರದಿಂದ ಅಭಿಮಾನದಿಂದ ಕಾಣುವುದೇ ಮುಖ್ಯವಾಗಿ ಭಜನ ಎಂದು ಶಬ್ದನಿರ್ಣಯ ಹೇಳುತ್ತದೆ. ಬ್ರಹ್ಮಾದಿ ದೇವತೆಗಳು ಪರಮಾತ್ಮನನ್ನು ಆದರದಿಂದ ಭಜಿಸುತ್ತಾರೆ. ಈಗ 'ಸಾಮ್ಯಾಸಂಗಾದಯೋ ಗುಣಾಃ' ಎಂಬುದು ಪ್ರತ್ಯೇಕ ವಾಕ್ಯ. 'ಆತ್ಮಾನಂ' ಎಂದರೆ ಗುಣಪೂರ್ಣನಾದ ಪರಮಾತ್ಮನನ್ನು ಎಂದರ್ಥ. ಆ ಗುಣಗಳು ಯಾವುವು ಎಂದರೆ ಸಾಮ್ಯ ಅಸಂಗ ಮುಂತಾದುವು ಎಂದು ಈ ವಾಕ್ಯ ಹೇಳುತ್ತದೆ.

ಅಪೂರ್ಣಗುಣರೂಪಾಸ್ತು ಸಂಪೂರ್ಣಗುಣರೂಪಕಂ ।
ಭಜಂತಿ ಪರಮಂ ಬ್ರಹ್ಮ ದೇವಾಸ್ತ್ರಿಗುಣವರ್ಜಿತಂ ॥
ಇತಿ ಕಾಲಸಂಹಿತಾಯಾಂ ॥

'ಅಪೂರ್ಣ ಗುಣಸ್ವರೂಪರಾದ ಬ್ರಹ್ಮಾದಿದೇವತೆಗಳು ಪೂರ್ಣಗುಣ ಸ್ವರೂಪನೂ ತ್ರಿಗುಣವರ್ಜಿತನೂ ಆದ ಪರಬ್ರಹ್ಮನಾರಾಯಣನನ್ನು ಭಜಿಸುತ್ತಾರೆ' ಎಂದು ಕಾಲಸಂಹಿತಾವಚನವಿದೆ.

ಈ ಕಾಲಸಂಹಿತಾವಚನವು ಅಪೂರ್ಣಗುಣರೂಪರೆಂದು 'ಗುಣಾಃ' ಎಂಬ ಶಬ್ದವನ್ನೂ, ಸಂಪೂರ್ಣಗುಣರೂಪನೆಂದು 'ಆತ್ಮ'ಶಬ್ದವನ್ನೂ. ತ್ರಿಗುಣವರ್ಜಿತನೆಂದು 'ನಿರ್ಗುಣ' ಶಬ್ದವನ್ನೂ ವ್ಯಾಖ್ಯಾನಿಸಿದೆ. ಪ್ರಕೃತ ಹಂಸನಾಮಕ ಪರಮಾತ್ಮ ಬ್ರಹ್ಮವಂದಿತನಾಗಿ ತಾನು ಪರಮಾತ್ಮನೆಂದು ಸನಕಾದಿಗಳಿಗೆ ತೋರಿಸಿಕೊಟ್ಟಿರುವುದರಿಂದ, ಬೇರೆ ಬೇರೆ ಸ್ಥಾನಗಳಲ್ಲಿರುವ ತನ್ನ ರೂಪಗಳು ಸಮವಾಗಿವೆ, ಅಸಂಗವಾಗಿವೆ ಎಂದು ಬೋಧಿಸಿರುವುದರಿಂದ ಶ್ರೀಮದಾಚಾರ್ಯರ ವ್ಯಾಖ್ಯಾನದ ಪ್ರಕಾರ ನೋಡಿದರೆ ಈ ಶ್ಲೋಕ ಹಂಸಗೀತೆಯ ಉಪಸಂಹಾರರೂಪವಾಗಿ ಬಹಳ ಅರ್ಥಪೂರ್ಣವಾಗುತ್ತದೆ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್ ಭಾಗವತ ತಾತ್ಪರ್ಯನಿರ್ಣಯೇ ಏಕಾದಶಸ್ಕಂಧೇ ತ್ರಯೋದಶೋಽಧ್ಯಾಯಃ ॥

❖❖❖

ಅಧ್ಯಾಯ–೧೪

ಅಧ್ಯಾಯ ಸಾರಾಂಶ

ಉದ್ಧವ ನುಡಿದ— ಭಕ್ತಿಯಿಂದ ಸರ್ವಸಂಗ ಪರಿತ್ಯಾಗ ಮಾಡಿದರೆ ಮನಸ್ಸು ಭಗವಂತನಲ್ಲಿ ಸ್ಥಿರವಾಗಿ ನಿಲ್ಲುವುದು. ಇದೇ ಪರಮ ಶ್ರೇಯಃ ಸಾಧನ. ಆದರೆ ವೇದವಾದಿಗಳು ಯಜ್ಞದಾನಾದಿ ಬೇರೆ ಸಾಧನಗಳನ್ನು ಹೇಳುತ್ತಾರೆ. ದುರ್ಮತಗಳು ಲೋಕದಲ್ಲಿ ಬಲವಾಗಿ ಹಬ್ಬಿವೆ. ಇದಕ್ಕೇನು ಕಾರಣ?

ಶ್ರೀಕೃಷ್ಣ ನುಡಿದ—

ಕಲ್ಪದ ಆದಿಯಲ್ಲಿ ವೇದಗಳನ್ನು ಭಗವಂತ ಬ್ರಹ್ಮನಿಗೆ ಉಪದೇಶಿ ಸಿದ.

ಬ್ರಹ್ಮನು ಸ್ವಾಯಂಭುವಮನು ಮುಂತಾದ ಮಕ್ಕಳಿಗೆ ಉಪದೇಶಿಸಿದ. ಅವರು ತಮ್ಮ ಮಕ್ಕಳಾದ ದೇವದಾನವಾದಿ ಸಮಸ್ತರಿಗೆ ಉಪದೇಶಿಸಿದರು. ಆದರೆ ದೇವದಾನವಾದಿಗಳ ಬುದ್ಧಿ ಸತ್ವ ರಜ ತಮ ಪ್ರಭಾವಗಳಿಂದ ನಾನಾರೀತಿ ಇರುವುದರಿಂದ ನಾನಾ ರೀತಿಯಿಂದಲಿ ಗ್ರಹಿಸಿದರು. ಸಾತ್ವಿಕರು ಪರಂಪರೆಯಿಂದ ಬಂದ ಶುದ್ಧ ತತ್ವಜ್ಞಾನವನ್ನೇ ಪಡೆದರು. ರಾಜಸರು ತಾಮಸರು ತಮ್ಮ ಬುದ್ಧಿಗಳಿಗನುಗುಣವಾಗಿ ಆಗ್ರಹದಿಂದ ದುರ್ಮತಗಳನ್ನೇ ಕಲಿತರು. ಇದು ಪರಮಾತ್ಮನ ಇಚ್ಛೆ. ಅದಕ್ಕನುಸಾರವಾಗಿ ದುರ್ಗಾದೇವಿಯ ಮೋಹನಶಕ್ತಿಯೂ ಕೆಲಸಮಾಡಿತ್ತು. ಹೀಗಾಗಿ ಜನರು ತಮ್ಮ ಸ್ವಭಾವ ಪೂರ್ವಕರ್ಮಗಳಿಗನುಸಾರ ಶ್ರೇಯಃ ಸಾಧನವನ್ನು ನಾನಾ ರೀತಿಯಾಗಿ ನಿರೂಪಿಸುತ್ತಿದ್ದಾರೆ. ಅವರಲ್ಲಿ ಸ್ವಲ್ಪವಾದರೂ ವಿಷ್ಣುಭಕ್ತಿ ಉಳ್ಳವರು ಕರ್ಮಗಳಿಂದ ಲಭ್ಯವಾದ ಅನಿತ್ಯಲೋಕಗಳನ್ನು ಪಡೆಯುತ್ತಾರೆ. ಭಕ್ತಿಲೇಶವಿಲ್ಲದವರು ಸ್ವಲ್ಪ ಕರ್ಮಫಲವಾದ ಸುಖವನ್ನು ಉಂಡು ಬಳಿಕ ಕೇವಲ ದುಃಖವನ್ನು ಉಣ್ಣುತ್ತಾರೆ. ಇವರೆಲ್ಲರೂ ವಿಷಯಾಸಕ್ತರು.

ವಿಷಯಾಸಕ್ತಿ ರಹಿತರಾದ ಭಕ್ತರು ಶಾಶ್ವತವಾದ ಮೋಕ್ಷಸುಖ ಉಣ್ಣುವರು. ಅವರಿಗೆ ಸಂಸಾರದಲ್ಲಿ ಬದುಕಲು ಎಷ್ಟು ಬೇಕೋ ಅಷ್ಟೇ ಧನದ ಅಪೇಕ್ಷೆ. ಭಗವಧ್ಧ್ಯಾನದಲ್ಲಿಯೇ ಮನಸಿಗೆ ತೃಪ್ತಿ. ವಿಷಯ ಭೋಗಕ್ಕಾಗಿ ಅವರಿಗೆ ಬ್ರಹ್ಮ ಪದವಿಯಾಗಲಿ ಸ್ವರ್ಗವಾಗಲಿ ಭೂಮಿಯಲ್ಲಿ ಸಾರ್ವಭೌಮ ಪದವಿಯಾಗಲಿ ಪಾತಾಳಗಳ ಒಡೆತನವಾಗಲಿ ಯೋಗ ಸಿದ್ಧಿಯಾಗಲಿ, ಏಕೆ, ಮೋಕ್ಷವೂ ಕೂಡ ಬೇಡ. ಪ್ರಿಯನಾದ ಭಗವಂತನ ಸಾನ್ನಿಧ್ಯ ಹೊರತು ಇನ್ನಾವುದೂ ಬೇಕಿಲ್ಲ. ಭಗವಂತನಿಗೂ ಇಂಥ ಭಕ್ತರು ಹೊರತು ತಾನಾಗಲಿ ಬ್ರಹ್ಮರುದ್ರರಾಗಲಿ ಲಕ್ಷ್ಮಿಯಾಗಲಿ ಪ್ರಿಯರೆನಿಸುವುದಿಲ್ಲ. ಭಕ್ತ ನಡೆಯುವಾಗ ನಾನು ಅವನ ಹಿಂದೆಹಿಂದೇ ನಡೆಯುವೆನು, ಅವನನ್ನು ನನ್ನ ಪಾದಧೂಳಿಯಿಂದ ಪಾವನ ಮಾಡಲೆಂದು. ವಿಷಯಾಸಕ್ತಿ ರಹಿತನಾಗಿ ನನ್ನನ್ನೇ ಭಜಿಸುವ ಭಕ್ತನಿಗೆ ತನಗೆ ವಿಷಯನಿರಪೇಕ್ಷವಾದ ಸ್ವರೂಪಸುಖ ಲಭಿಸುವುದೆಂದು ತಿಳಿದಿರುತ್ತದೆ.

ನನ್ನ ಭಕ್ತ ಪ್ರಾರಬ್ಧದಿಂದ ವಿಷಯಾಸಕ್ತನಾಗಿ ಇಂದ್ರಿಯಗಳಿಂದ

ಪೀಡಿತನಾದರೂ ಅಧಃಪತನ ಹೊಂದುವುದಿಲ್ಲ. ಚೆನ್ನಾಗಿ ಉರಿಯುವ ಬೆಂಕಿ ಕಟ್ಟಿಗೆಗಳನ್ನು ಸುಟ್ಟು ಬೂದಿ ಮಾಡುವಂತೆ, ಅವನು ನನ್ನಲ್ಲಿಟ್ಟಿರುವ ಭಕ್ತಿ ಎಲ್ಲ ಪಾಪಗಳನ್ನೂ ಸುಟ್ಟು ಬೂದಿಮಾಡುತ್ತದೆ. ಭಕ್ತಿ ಉತ್ಪತ್ತಿಯಾಗುವ ಕ್ಷಣದಿಂದಲೆ ಭಕ್ತನ ಲೌಕಿಕ ಕಾಮನೆಗಳನ್ನು ಸುಟ್ಟು ಅವನನ್ನು ಪವಿತ್ರಗೊಳಿಸಬಲ್ಲದು.

ಹರಿಕಥಾಶ್ರವಣಕಾಲದಲ್ಲಿ ಮೈನವಿರೇಳದಿದ್ದರೆ ಕಣ್ಣಲ್ಲಿ ನೀರೂರದಿದ್ದರೆ ಮನ ಕರಗದಿದ್ದರೆ ಭಕ್ತಿ ಇದೆ ಊಹಿಸಲಾಗದು. ಭಕ್ತಿ ಇದ್ದರೆ ಕಂಠ ಬಿಗಿದು ಬರುವುದು. ಅಳುವುದು ನಗುವುದು ಲಜ್ಜೆಯಿಲ್ಲದೆ ಗಟ್ಟಿಯಾಗಿ ಭಗವಂತನನ್ನು ಹೊಗಳುತ್ತ ಕುಣಿಯುವುದು ಇವು ಸಹಜ. ಇವು ಯಾರಲ್ಲಿ ಸಹಜವಾಗಿ ಕಂಡುಬರುವುದೋ ಅವರು ಭಕ್ತರು ಲೋಕಪಾವನರು.

ಪುಟಕ್ಕೆ ಹಾಕಿದ ಚಿನ್ನ ಶುದ್ಧವಾಗುವಂತೆ ಭಕ್ತಿಭರಿತವಾದ ಅಂತಃಕರಣ ~~ಅವಿದ್ಯಾ ಕಾಮ ಕರ್ಮ ಮಲಗಳನ್ನು ನೀಗಿಕೊಂಡು ಶುದ್ಧವಾಗು~~ವುದು. ಅಂತಃಕರಣ ಭಕ್ತಿಯಿಂದ ಎಷ್ಟೆಷ್ಟು ಶುದ್ಧವಾಗುವುದೋ ಅಷ್ಟಷ್ಟು ಭಗವಂತನ ಸೂಕ್ಷ್ಮ ತತ್ವಗಳನ್ನು ಕಾಣಬಲ್ಲದು. ಅಂಜನ ಹಾಕಿಕೊಂಡರೆ ಕಣ್ಣು ಹೇಗೆ ಸೂಕ್ಷ್ಮವಸ್ತು ಗಳನ್ನು ಕಾಣುವುದೋ ಹಾಗೆ.

ಮನೋಬಲವುಳ್ಳ ಭಕ್ತ ಮಿಥ್ಯಾಜ್ಞಾನಿಗಳ ಮತ್ತು ಪರಸ್ತ್ರೀಲಂಪಟರ ಸಹವಾಸ ತೊರೆದು ಮಂಗಳಕರವಾದ ಏಕಾಂತ ಪ್ರದೇಶದಲ್ಲಿ ಕುಳಿತು ಭಗವಂತನನ್ನು ಧ್ಯಾನಿಸಬೇಕು. ಮಿಥ್ಯಾಜ್ಞಾನಿಯ ಸಂಗದಿಂದಾಗುವ ದುಃಖ ಪಂಚ ಮಹಾಪಾತಕಗಳಿಂದಲೂ ಉಂಟಾಗದು.

ಅತಿ ಎತ್ತರವೂ ಅಲ್ಲದ ಅತಿ ಕೆಳಗಿನದೂ ಅಲ್ಲದ ಆಸನದಲ್ಲಿ ನೆಟ್ಟಗೆ ಕುಳಿತು ತೊಡೆಗಳ ಮೇಲೆ ಕೈಗಳನ್ನಿರಿಸಿ ಮೂಗಿನ ತುದಿಗೇ ದೃಷ್ಟಿ ಹರಿಸಿ ಪೂರಕ ರೇಚಕ ಕುಂಭಕಗಳಿಂದ ಅಥವಾ ರೇಚಕ ಪೂರಕ ಕುಂಭಕಗಳಿಂದ ಸಬೀಜ ಪ್ರಾಣಾಯಾಮ ಮಾಡಬೇಕು. ಹೃದಯದಲ್ಲಿ ಮುಖ್ಯಪ್ರಾಣ ನಿರಂತರ ಉಚ್ಚರಿಸುತ್ತಿರುವ ಓಂಕಾರವನ್ನು ಘಂಟಾ ನಾದದಂತೆ ಇಂಪಾಗಿ ಕಮಲದ ದೇಟಿನ ಎಳೆಯಂತೆ ನಿರಂತರ ಪ್ರಾಣವಾಯುಶಕ್ತಿಯಿಂದ ವ್ಯಕ್ತಗೊಳಿಸಿ, ಹೃದಯ

ದಲ್ಲಿರುವ ಪ್ರಾಣಶಕ್ತಿಗೆ ವಾಚಕವೆಂದು ಉದಾತ್ತಸ್ವರವನ್ನು ಅನುಸಂಧಾನ ಮಾಡಿ ಮೂರೂ ಹೊತ್ತು ಹತ್ತು ಪ್ರಾಣಾಯಾಮ ಮಾಡಬೇಕು. ಇದರಿಂದ ಒಂದು ತಿಂಗಳೊಳಗೆ ಪ್ರಾಣನ ಅನುಗ್ರಹ ವಾಗುವುದು.

ಬಾಳೆ ಹೂವಿನಾಕಾರದಲ್ಲಿ ದೇಟು ಮೇಲಿದ್ದು ಕೆಳಮುಖವಾಗಿರು ವಂತೆ ಕಾಣುವ ಅಷ್ಟದಳ ಹೃದಯಕಮಲವನ್ನು ಮೇಲ್ಮುಖವಾಗಿ ಅರಳಿರುವಂತೆ ಧ್ಯಾನಿಸಬೇಕು. ಕರ್ಣಿಕೆಯಲ್ಲಿ ಸೂರ್ಯಮಂಡಲ ಚಂದ್ರಮಂಡಲ ಅಗ್ನಿಮಂಡಲಗಳನ್ನು ಒಂದರ ಮೇಲೊಂದರಂತೆ ಧ್ಯಾನಿಸಿ ಅಗ್ನಿಮಂಡಲದಲ್ಲಿ ಲಕ್ಷ್ಮೀಸಮೇತನಾದ ಭಗವಂತನ ಮಂಗಳ ಮೂರ್ತಿಯನ್ನು ಧ್ಯಾನಿಸಬೇಕು. ಇಂದ್ರಿಯಗಳೆಂಬ ಕುದುರೆಗಳಿಗೆ ಮನಸ್ಸಿನ ಕಡಿವಾಣ ಹಾಕಿ ಬುದ್ಧಿ ಎಂಬ ಸಾರಥಿಯ ಮೂಲಕ ವಿಷಯ ಪದಾರ್ಥಗಳಿಂದಾಚೆಗೆ ತಂದು ಭಗವಂತನಲ್ಲಿ ನಿಲ್ಲಿಸಬೇಕು.

ಒಮ್ಮೆಲೆ ಭಗವಂತನ ಸರ್ವಾಂಗಧ್ಯಾನ ಕೈಗೂಡದಿದ್ದಲ್ಲಿ ಒಂದೊಂದೇ ಅವಯವ ಧ್ಯಾನ ಮಾಡಿ ಅದು ಸುಲಭವೆನಿಸಿದ ಬಳಿಕ ಸರ್ವಾಂಗ ಧ್ಯಾನಕ್ಕೆ ಯತ್ನಿಸಬೇಕು. ಮನಸ್ಸು ತಾನಾಗಿಯೆ ಅಲ್ಲಿ ನಿಲ್ಲುವಂತಾದರೆ ಮುಂದೆ, ನಿಲ್ಲಿಸುವ ಯತ್ನವನ್ನು ಕೈಬಿಡಬೇಕು. ಬೇರೇನೂ ಚಿಂತಿಸಬಾರದು. ತನ್ನ ಸ್ವರೂಪವು ಸ್ವರೂಪಹೃದಯ ದಲ್ಲಿಯೂ ಬಾಹ್ಯಹೃದಯದಲ್ಲಿಯೂ ಭಗವಂತನನ್ನು ಆಶ್ರಯಿಸಿರು ವುದಾಗಿ ಚಿಂತಿಸುತ್ತಿರಬೇಕು. ಆಗ ಅಂತಃಕರಣದಲ್ಲಿ ಅಹಂಕಾರ ಮಮಕಾರಗಳು ಅಳಿಯುವುವು.

❖ ❖ ❖

ಕಲ್ಪದ ಆದಿಯಲ್ಲಿ ವೇದಗಳನ್ನು ಭಗವಂತ ಬ್ರಹ್ಮನಿಗೆ ಉಪದೇಶಿಸಿದ. ಬ್ರಹ್ಮನು ಸ್ವಾಯಂಭುವಮನು ಮುಂತಾದ ಮಕ್ಕಳಿಗೆ ಉಪದೇಶಿಸಿದನೆಂದು ಮುಂತಾಗಿ ಶ್ರೀಕೃಷ್ಣ ಉದ್ಧವನಿಗೆ ವೇದೋಪದೇಶ ಪರಂಪರೆ ಬಂದ ರೀತಿಯನ್ನು ಉಪದೇಶಿಸುತ್ತಾನೆ.

ತೇನ ಪ್ರೋಕ್ತಾ ಚ ಪುತ್ರಾಯ ಮನವೇ ಪೂರ್ವಜಾಯ ಸಾ ।
ತತೋ ಭೃಗ್ವಾದಯೋಽಗೃಹ್ಣನ್ ಸಪ್ತ ಬ್ರಹ್ಮಮಹರ್ಷಯಃ ॥ ೪ ॥

ಚತುರ್ಮುಖನು ತನ್ನ ಹಿರಿಯ ಮಗನಾದ ಸ್ವಾಯಂಭುವಮನುವಿಗೆ ಅದನ್ನು ಉಪದೇಶಿಸಿದ. ಮನುವಿನಿಂದ ಭೃಗು ಮರೀಚಿ ಅತ್ರಿ ಅಂಗಿರ ಪುಲಸ್ತ್ಯ ಪುಲಹ ಕ್ರತು ಎಂಬ ಏಳುಮಂದಿ ಪ್ರಜಾಪತಿಗಳೂ ಮತ್ತು ಇನ್ನೂ ಅನೇಕ ಮಹರ್ಷಿಗಳೂ ಉಪದೇಶವನ್ನು ಪಡೆದರು.

ಆದಿಸೃಷ್ಟಿಯಲ್ಲಿ ಬ್ರಹ್ಮನಿಂದ ಮೊದಲು ಜನಿಸಿದವರು ರುದ್ರಾದಿಗಳು. ಅವರೇ ಪೂರ್ವಜರು. ಮನುವನ್ನು 'ಪೂರ್ವಜ' ಮೊದಲು ಜನಿಸಿದವನು ಎಂದುದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ಸ್ಕಾಂದವಚನವು ಇಲ್ಲಿ ನಿರ್ಣಯವನ್ನು ಹೇಳುತ್ತದೆ.

ರುದ್ರಮಿಂದ್ರಂ ಕುಮಾರಂ ಚ ವಿನೈವಾನ್ಯಾಗ್ರಜೋ ಮನುಃ ।
ಬ್ರಹ್ಮಪುತ್ರೇಷ್ವಾದಿಸೃಷ್ಟಾವನ್ಯಥಾತ್ವಂ ಪುನರ್ಜನೇಃ ॥

ಇತಿ ಸ್ಕಾಂದೇ ॥

ಆದಿಸೃಷ್ಟಿಯಲ್ಲಿ ರುದ್ರ ಇಂದ್ರ ಕಾಮರನ್ನು ಬಿಟ್ಟು ಉಳಿದ ಬ್ರಹ್ಮಪುತ್ರರಲ್ಲಿ ಮೊದಲಿಗೆ ಜನಿಸಿದವನು ಸ್ವಾಯಂಭುವಮನು. ಪುನಃ ಜನಿಸುವಾಗ ಈ ಕ್ರಮ ವ್ಯತ್ಯಾಸವಾಗಬಹುದು ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

ಪೂರ್ವಸೃಷ್ಟೌ ಪೂರ್ವಜಾ ಯೇ ತೇಽಧಿಕಾಃ ಸರ್ವತೋಗುಣೈಃ ।
ಅನಾದ್ಯನಂತಕಾಲೇಷು ಮುಕ್ತಾವಪಿ ಯಥಾಕ್ರಮಂ ॥

ಇತಿ ನಿಬಂಧೇ ॥

'ಆದಿಸೃಷ್ಟಿಯಲ್ಲಿ ಮೊದಲು ಜನಿಸಿದವರು ಎಲ್ಲ ಗುಣಗಳಿಂದಲೂ ಉತ್ತಮರು. ಅನಾದಿ ಅನಂತಕಾಲದಲ್ಲಿಯೂ ಇದೇ ನಿಯಮವಿರುವುದು. ಮುಕ್ತಿಯಲ್ಲಿಯೂ ಈ ಆದಿಸೃಷ್ಟಿ ಕ್ರಮಾನುಸಾರವೇ ತಾರತಮ್ಯವಿರುವುದು' ಎಂದು ನಿಬಂಧ ಎಂಬ ಗ್ರಂಥದಲ್ಲಿದೆ.

❖❖❖

ದೇವಾದಿಗಳಿಗೆ ಮಾತ್ರ ಪರಂಪರೆಯಿಂದ ವೇದವಿದ್ಯೆ ಬರುತ್ತದೆ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಏವಂ ಪ್ರಕೃತಿವೈಚಿತ್ರ್ಯಾದ್ಭಿದ್ಯಂತೇ ಮತಯೋ ನೃಣಾಮ್ ।
ಪಾರಂಪರ್ಯೇಣ ಕೇಷಾಂಚಿತ್ಪಾಖಂಡಮತಯೋಽಪರೇ ॥ ೮ ॥

ಜನರ ಸ್ವಭಾವ ವೈಚಿತ್ರ್ಯದಿಂದ ಬುದ್ಧಿ ಬೇರೆಬೇರೆ ರೀತಿಯಾಗುವುದರಿಂದ, ಕೆಲವರು ಸಾತ್ವಿಕರು ದೇವತೆಗಳು ಮಾತ್ರ ಪರಂಪರೆಯಿಂದ ಶುದ್ಧತತ್ವವನ್ನು ಅರಿತುಕೊಂಡರು. ಬೇರೆ ರಾಜಸತಾಮಸರು ಆಗ್ರಹದಿಂದ ಬಂದ ಮತಗಳನ್ನು ಆದರಿಸಿದರು.

[1]ಇಲ್ಲಿ 'ಕೇಷಾಂಚಿತ್ ಪಾರಂಪರ್ಯೇಣ' ಕೆಲವರ ದುಷ್ಟ ಉಪದೇಶಪರಂಪರೆಯಿಂದ ಅವರ ಅನುಯಾಯಿಗಳು ಪಾಖಂಡಿಗಳಾಗಿರುವರೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಶುದ್ಧವಾದ ವೇದವ್ಯಾಖ್ಯಾನ ಪರಂಪರೆಯೊಂದು ಇಲ್ಲ, ತಮ್ಮ ವ್ಯಾಖ್ಯಾನಗಳು ಕೂಡ ಹಾಗೇ ಪಾಖಂಡಿಗಳ ಪರಂಪರೆಯಿಂದಲೇ ಬಂದಿವೆ ಎಂದು ಹೇಳಿದಂತಾಗುವುದರಿಂದ ಇದು ಸ್ವವ್ಯಾಹತ.

ಅದರಿಂದ 'ಕೇಷಾಂಚಿತ್ ಪಾರಂಪರ್ಯೇಣ' ಎಂದು ನಿಲ್ಲಿಸಿ, 'ಪಾಖಂಡಮತಯೋಽಪರೇ' ಎಂದು ಓದಬೇಕು. ಕೆಲವರು ಅಂದರೆ ದೇವಾದಿಗಳು ನನ್ನ ಶುದ್ಧವಾದ ಪರಂಪರೆಯಿಂದ ತಿಳಿಯುತ್ತಾರೆ. ಇತರರು ಪಾಖಂಡಮತಿಗಳಾಗುತ್ತಾರೆ ಎಂದು ವಿಭಾಗ ಮಾಡಬೇಕು. ಕೆಲವರು ಇತರರೆಂದು ಸ್ಪಷ್ಟವಾಗಿ ವಿಭಾಗ ಶ್ಲೋಕದಲ್ಲಿ ಕಾಣುತ್ತದೆ. 'ಅಪರೇ' ಇತರರು ಎಂಬ ಶಬ್ದ ಸ್ವರಸವಾಗಿ ವಿರೋಧಿಗಳನ್ನು ಹೇಳುತ್ತದೆ.

ಅನೇನ ಪಾರಂಪರ್ಯೇಣ ಕೇಷಾಂಚಿದೇವ ದೇವಾದೀನಾಂ ||

ಶುದ್ಧ ವೇದೋಪದೇಶ ಪರಂಪರೆಯಿಂದ ಕೆಲವರಿಗೆ ಅಂದರೆ ದೇವಾದಿಗಳಿಗೆ ತತ್ವಜ್ಞಾನ ಉಂಟಾಯಿತು.

ಕೆಲವರು ಎಂದರೆ ದೇವಾದಿಗಳೇ. ಏಕೆಂದರೆ 'ಅಪರೇ' ಇತರರು ಪಾಷಂಡಿಗಳೆಂದು ಹೇಳಿದ್ದರಿಂದ 'ಕೆಲವರು' ವೈದಿಕರಾದ ದೇವತೆಗಳೇ ಎನ್ನುವುದು ಸ್ಪಷ್ಟ.

❖❖❖

ವಿಷ್ಣುಭಕ್ತಿ ಒಂದಿಲ್ಲದೆ ಏನು ಧರ್ಮಾಚರಣೆ ಮಾಡಿದರೂ ಸುಖವಿಲ್ಲ, ಅನಿತ್ಯಫಲ ಮೊದಲಿಗೆ ಸಿಕ್ಕಿದರೂ ಕೊನೆಯಲ್ಲಿ ತಮಸ್ಸೇ ಪ್ರಾಪ್ತವಾಗುವುದೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

---

1. ಕೇಷಾಂಚಿತ್ತಮಃಸ್ವಭಾವಾನಾಂ ಸ್ವಸ್ವಭಾವಾನುಗುಣ ಬುದ್ಧ್ಯುತ್ಪ್ರೇಕ್ಷಿತ ವೇದಾರ್ಥ ವಿರುದ್ಧಾರ್ಥಸ್ಮರ್ತೃಣಾಂ ಮೂಲಪುರುಷಾಣಾಂ ಪಾರಂಪರ್ಯೇಣೋಪದೇಶ ಪರಂಪರಯಾ ಇತರೇ ತದನುಯಾಯಿನಃ ಕೇಚಿದರ್ವಾಚೀನಾಃ ಪುರುಷಾಃ । -ವೀರರಾಘವಃ

ಮನ್ಮಾಯಾಮೋಹಿತಧಿಯಃ ಪುರುಷಾಃ ಪುರುಷರ್ಷಭ ।
ಶ್ರೇಯೋ ವದಂತ್ಯನೇಕಾಂತಂ ಯಥಾಕರ್ಮ ಯಥಾರುಚಿ ॥ ೯ ॥

ಪುರುಷಶ್ರೇಷ್ಠನಾದ ಉದ್ಧವನೆ, ನನ್ನಿಚ್ಛೆಯಿಂದ ನನ್ನವಳಾದ ದುರ್ಗೆಯೂ ಅವರಿಗೆ ಬುದ್ಧಿ ಮೋಹ ಉಂಟುಮಾಡಿದಳು. ಹೀಗಾಗಿ ಅವರು ತಮ್ಮ ಪೂರ್ವ ಕರ್ಮಾನುಸಾರ ತಮ್ಮ ಅಭಿರುಚಿಯಂತೆ ಶ್ರೇಯಃ ಸಾಧನಗಳನ್ನು ನಾನಾ ಬಗೆಯಾಗಿ ಹೇಳುತ್ತ ಬಂದರು.

ಧರ್ಮಮೇಕೇ ಯಶಶ್ಚಾನ್ಯೇ ಕಾಮಂ ಸತ್ಯಂ ದಮಂ ಶಮಮ್ ।
ಅನ್ಯೇ ವದಂತಿ ಚಾರ್ಥಂ ವಾ ಐಶ್ವರ್ಯಂ ತ್ಯಾಗಭೋಜನೇ ॥
ಕೇಚಿದ್ಯಜ್ಞಂ ತಪೋ ದಾನಂ ವ್ರತಾನಿ ನಿಯಮಾನ್ ಯಮಾನ್ ॥ ೧೦ ॥

ಕೆಲವರು ಧರ್ಮ ಕೀರ್ತಿ ಕಾಮನೆ ಸತ್ಯ ದಮ ಶಮಗಳನ್ನು ಕೆಲವರು ದ್ರವ್ಯ ಐಶ್ವರ್ಯ ತ್ಯಾಗ ಭೋಗಗಳನ್ನೂ ಇನ್ನು ಕೆಲವರು ಯಜ್ಞ ತಪಸ್ಸು ದಾನ ವ್ರತ ನಿಯಮ ಯಮಗಳನ್ನೂ ಅವೇ ವೇದೋಕ್ತ ಶ್ರೇಯಃಸಾಧನವೆಂದು ಪ್ರತಿಪಾದಿಸುತ್ತಾರೆ.

ಆದ್ಯಂತವಂತ ಏವೈಷಾಂ ಲೋಕಾಃ ಕರ್ಮವಿನಿರ್ಮಿತಾಃ ।
ದುಃಖೋದರ್ಕಾಸ್ತಮೋನಿಷ್ಠಾಃ ಕ್ಷುದ್ರಾನಂದಾಃ ಶುಚಾರ್ಪಿತಾಃ ॥ ೧೧ ॥

ಈ ರಾಜಸ ತಾಮಸ ಜನರಿಗೆ ಕರ್ಮದಿಂದ ಲಭಿಸುವ ಲೋಕಗಳು ಉತ್ಪತ್ತಿ ನಾಶಉಳ್ಳವುಗಳು. ಅವರು ವಿಷ್ಣುಭಕ್ತಿ ಇಲ್ಲದವರಾದರೆ ಮೊದಲಿಗೆ ಕರ್ಮಫಲವಾಗಿ ಅಲ್ಪ ಆನಂದವನ್ನೂ ಹೆಚ್ಚು ದುಃಖವನ್ನೂ ಅನುಭವಿಸುತ್ತಾರೆ. ಬಳಿಕ ಮಹಾದುಃಖ ಉಣಲು ಅಂಧಂತಮದಲ್ಲಿ ಬೀಳುತ್ತಾರೆ.

[1]ಇಲ್ಲಿ ಬೇರೆ ವ್ಯಾಖ್ಯಾನಕಾರರು ಧರ್ಮಾಚರಣೆಯ ಫಲ ಅನಿತ್ಯ ಬೇಸಾಯದಿಂದ ಸಿಗುವ ಧಾನ್ಯಾದಿಗಳು ಅನಿತ್ಯ ಹೇಗೋ ಹಾಗೆ. ಭಕ್ತಿಯ ಫಲ ಮಾತ್ರ ಶಾಶ್ವತವಾದ ಮೋಕ್ಷ ಎಂದಿದ್ದಾರೆ. [2]ಧರ್ಮಾದಿಗಳೆಲ್ಲವೂ, ಶಮದಮ

1. ಏತೇಷಾಂ ಧರ್ಮಾದೀನಾಂ ಲೋಕ್ಯಂತ ಇತಿ ಲೋಕಾಃ ಫಲಾನಿ ಆದ್ಯಂತವಂತೋಽನಿತ್ಯಾ ಇತ್ಯರ್ಥಃ। ತತ್ರಹೇತುಃ ಕರ್ಮವಿನಿರ್ಮಿತಾಃ ಕರ್ಮಸಂಪಾದಿತಾಃ ಕೃಷ್ಯಾದಿ ಕರ್ಮಫಲವದಿತಿ ಭಾವಃ । -ವೀರರಾಘವಃ

2. ವಿಷಯೇಷು ಮಾಯಿಕ ವಸ್ತುಷು ಶಮಧಮಜ್ಞಾನಾದಿಷ್ವಪಿ ಮನೋ ಯೇಷಾಂ ತೇಷಾಂ ಜ್ಞಾನಾದೀನಾಮಪಿ ಸಾತ್ವಿಕತ್ವೇನ ಮಾಯಿಕತ್ವಾತ್ । -ವಿಶ್ವನಾಥಃ

ಜ್ಞಾನಾದಿಗಳೂ ಕೂಡ, ಮಾಯಿಕವಾದ್ದರಿಂದ, ಜ್ಞಾನಾದಿಗಳು ಸಾತ್ವಿಕವಾದ್ದರಿಂದ ಮಾಯೆಯ ಸತ್ವಗುಣದಿಂದಲೇ ಆದ್ದರಿಂದ ಮೋಕ್ಷಸಾಧನವಾಗುವುದಿಲ್ಲ ಎಂದು ವಿಶ್ವನಾಥ ವ್ಯಾಖ್ಯಾನ ಹೇಳಿದೆ.

ವಸ್ತುತಃ ಧರ್ಮಾಚರಣೆ ಕರ್ಮರೂಪವಾದರೂ ಮಾಯಿಕವಾದರೂ ಭಕ್ತಿಯುಕ್ತವಾದರೆ ಮೋಕ್ಷಸಾಧನವಾಗಬಹುದು. ಇಲ್ಲದಿದ್ದರೆ ಭಕ್ತಿಯೂ ಸಂಕೀರ್ತನಾದಿ ಕರ್ಮರೂಪವಾದ್ದರಿಂದ ಸತ್ವಗುಣದಿಂದಾಗಿದ್ದು ಮಾಯಿಕವೇ ಆಗಿರುವುದರಿಂದ ಮೋಕ್ಷ ಸಾಧನವಲ್ಲ ಎಂದಾದೀತು.

ಈ ವ್ಯಾಖ್ಯಾನಕಾರರು ಧರ್ಮಾಚರಣೆ ಭಕ್ತಿಗಳನ್ನು ಬೇರೆಬೇರೆಯಾಗಿ ಪರಿಗಣಿಸಿ ಬೇರೆಬೇರೆ ಫಲಗಳನ್ನು ಹೇಳುತ್ತಿದ್ದಾರೆ. ಧರ್ಮಾಚರಣೆ ಅನಿತ್ಯ ಸ್ವರ್ಗಾದಿಫಲಕ್ಕೂ, ಭಕ್ತಿ ನಿತ್ಯವಾದ ಮೋಕ್ಷಫಲಕ್ಕೂ ಸಾಧನ ಎನ್ನುತ್ತಾರೆ. [3]ಶುಕದೇವ ವ್ಯಾಖ್ಯಾನಮಾತ್ರ ಭಕ್ತಿಯುಕ್ತವಾದ ಕರ್ಮಾದಿಗಳು ಮೋಕ್ಷಸಾಧನವಾಗುತ್ತವೆ. ಭಕ್ತಿ ಇಲ್ಲದ ಕರ್ಮಾದಿಗಳು ಅನಿತ್ಯವಾದ ಕ್ಷುದ್ರ ಸುಖಮಾತ್ರಕ್ಕೆ ಸಾಧನವಾಗುತ್ತವೆ ಎಂದಿದೆ. ತಮೋದುಃಖಕ್ಕೆ ಸಾಧನವಾಗುತ್ತವೆ ಎನ್ನಲು ಅವರಿಗೆ ಇಷ್ಟವಾಗುವುದಿಲ್ಲ. ಅವರಿಗೆ ತಮಸ್ಸೆಂದರೆ ಮೂಲಪ್ರಕೃತಿ. ಅದರಲ್ಲಿ ಹೋಗಿ ಸೇರಿಕೊಂಡು ತಿರುಗಿ ಜನನ ಮರಣಗಳನ್ನು ಹೊಂದುವವರು ತಮೋನಿಷ್ಠರು. ಆದರೆ ಮಾನ್ಯಸಂಹಿತೆ ಘೋರವಾದ ನಿತ್ಯನರಕವನ್ನೇ ತಮಸ್ಸೆಂದು ಸ್ಪಷ್ಟ ಹೇಳಿದೆ.

ಮದ್‌ಭಕ್ತಿವರ್ಜಿತಂ ಶ್ರೇಯೋ ಯೇ ಮನ್ಯಂತೇ ದುರಾಶಯಾಃ ।
ತೇಷಾಮಂತೇ ತಮೋ ಘೋರಮನಂತಂ ಪ್ರಾಪ್ಯತೇ ಧ್ರುವಂ ॥
ಇತಿ ಮಾನ್ಯಸಂಹಿತಾಯಾಂ ॥

ನನ್ನ ಭಕ್ತಿ ಇಲ್ಲದ ಧರ್ಮಾದಿಗಳನ್ನು ಶ್ರೇಯಃಸಾಧನವೆಂದು ತಿಳಿಯುವ

---

3. ತ್ರಿಗುಣಯಾ ಮದೀಯಯಾ ಮಾಯಯಾ ಮೋಹಿತಾ ಮದಾತ್ಮಕ ಧರ್ಮದರ್ಶನಾದ್ ಬಹಿಃಕೃತಾ ಧೀರ್ಯೇಷಾಂ ತೇ ಅತ ಏವಾನೇಕಾಂತಂ ನೈಕಸ್ಮಿನ್ ಮಯ್ಯಂತಃ ಪರ್ಯವಸಾನಂ ಯಸ್ಯ ತನ್ಮಮ ಸಂಬಂಧಶೂನ್ಯಂ ಶ್ರೇಯೋ ವದಂತಿ । ಏತೇಷಾಂ ಧರ್ಮಾದಿ ಶ್ರೇಯೋ ವಾದಿನಾಂ ಕರ್ಮನಿರ್ಮಿತಾಃ ಸ್ವಸ್ವಧರ್ಮಾದ್ಯನುಷ್ಠಾನ ನಿರ್ಮಿತಾಃ ದುಃಖೋದರ್ಕಾಃ ದುಃಖಾವಸಾನಾ ಯತಃ ತಮಸಿ ಪ್ರಧಾನೇ ನಿಷ್ಠಾ ಸಮಾಪ್ತಿರ್ಯೇಷಾಮನಿತ್ಯಾ ಇತ್ಯರ್ಥಃ ಯತ್ ಸುಖಂ ಮೋಕ್ಷಾಖ್ಯಂ ತದ್ವಿಷಯೇಷು ಅನಾತ್ಮಸು ಆತ್ಮಾ ಮನೋ ಯೇಷಾಂ ತೇಷಾಂ ಧರ್ಮಾದಿ ಪರಾಣಾಂ ಕುತಃ ಸ್ಯಾತ್ ಮತ್ಸಂಬಂಧವರ್ಜಿತ ಧರ್ಮಾದಿಕಾರಿಣಾಂ ಕುತೋಽಪಿ ನ ಪರಮಂ ಸುಖಂ । -ಶುಕದೇವಃ

ದುರ್ಬುದ್ಧಿಯವರಿಗೆ ಕೊನೆಯಲ್ಲಿ ನಿಶ್ಚಿತವಾಗಿ ಶಾಶ್ವತವಾದ ಘೋರ ತಮಸ್ಸಾಗುತ್ತದೆ ಎಂದು ಮಾನ್ಯ ಸಂಹಿತೆಯಲ್ಲಿ ಹೇಳಿದೆ.

❖❖❖

ತಾನು ಭಕ್ತವತ್ಸಲ ಎಂಬುದನ್ನು ತಿಳಿಸಲು ಶ್ರೀಕೃಷ್ಣ ಉದ್ಧವನನ್ನು ತನಗೆ ಬ್ರಹ್ಮಾದಿಗಳಿಗಿಂತಲೂ ಹೆಚ್ಚು ಪ್ರೀತಿಪಾತ್ರನೆಂದು ಪ್ರಶಂಸೆ ಮಾಡುತ್ತಾನೆ.

ನ ತಥಾ ಮೇ ಪ್ರಿಯತಮ ಆತ್ಮಯೋನಿರ್ನ ಶಂಕರಃ ।
ನಚ ಸಂಕರ್ಷಣೋ ನ ಶ್ರೀರ್ನೈವಾತ್ಮಾ ಚ ಯಥಾ ಭವಾನ್ ॥ ೧೫ ॥

ನನಗೆ ನಿನ್ನಂತೆ ಪ್ರೀತಿಪಾತ್ರನು, ಬ್ರಹ್ಮನಾಗಲಿ ರುದ್ರನಾಗಲಿ ಬಲರಾಮನಾಗಲಿ ಲಕ್ಷ್ಮಿಯಾಗಲಿ ನಾನೇ ಆಗಲಿ ಅಲ್ಲ.

[1]ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ಭಗವಂತನು ಚತುರ್ಮುಖನನ್ನು ಪ್ರೀತಿಸುವುದು ಅವನು ಭಕ್ತನೆನ್ನುವ ಕಾರಣಕ್ಕಾಗಿ ಹೊರತು ಪುತ್ರನೆಂದಲ್ಲ. ಉದ್ಧವನಲ್ಲಿ ಆ ಭಕ್ತಿ ಚತುರ್ಮುಖನಿಗಿಂತಲೂ ಹೆಚ್ಚು ಇರುವುದರಿಂದ ಅವನಲ್ಲಿ ಹೆಚ್ಚು ಪ್ರೀತಿ ಮಾಡುತ್ತಾನೆ ಶ್ರೀಕೃಷ್ಣ ಎಂದಿದೆ.

ಹಿಂದೆ (12.17) 'ಸ ಏಷ ಜೀವೋ ವಿವರಪ್ರಸೂತಿಃ' ಎಂಬ ಶ್ಲೋಕದಲ್ಲಿ 'ಗುಹಾಂಪ್ರವಿಷ್ಟಃ' ಜೀವರ ಅಂತರ್ಯಾಮಿ ಎಂದು ಚತುರ್ಮುಖನನ್ನು ಶ್ರೀಕೃಷ್ಣ ಹೊಗಳಿದ್ದಾನೆ. ಶ್ರುತಿಸೂತ್ರಗಳಲ್ಲಿ ಎಲ್ಲೆಡೆ ಭಗವಂತನಲ್ಲಿ ಪ್ರಸಿದ್ಧವಾದ ಈ ಗುಹಾಂ ಪ್ರವಿಷ್ಟತ್ವವನ್ನು ಭಗವಂತನೆ ಪ್ರೀತಿಯಿಂದ ಚತುರ್ಮುಖನಲ್ಲಿ ಪ್ರಶಂಸೆ ಮಾಡುತ್ತಾನೆ ಎಂದರೆ ಚತುರ್ಮುಖನು ಎಷ್ಟು ಪ್ರಿಯತಮ ಎನ್ನುವುದನ್ನು ಊಹಿಸಬಹುದು. ಮತ್ತು ಅಂತರ್ಯಾಮಿಯಾಗಿ ಜ್ಞಾನ ಭಕ್ತಿ ವೈರಾಗ್ಯಗಳನ್ನು ಮುಮುಕ್ಷುಗಳ ಹೃದಯದಲ್ಲಿ ಉಂಟುಮಾಡುವವನು ಚತುರ್ಮುಖನೆಂದ ಮೇಲೆ ಅವನಲ್ಲಿ ಎಷ್ಟು ಭಕ್ತಿ ಇರಬಹುದು!

ಚತುರ್ಮುಖನಲ್ಲಿ ಪರಮಾತ್ಮ ಪುತ್ರನೆಂದು ಪ್ರೀತಿ ಮಾಡುವುದಕ್ಕಿಂತ ಮಿಗಿಲಾಗಿ ಭಕ್ತನೆಂದು ಪ್ರೀತಿ ಮಾಡುತ್ತಾನೆ ಎನ್ನಲು ಏನೂ ಆಧಾರವಿಲ್ಲ. 'ವಾಯೌ ಮುಖ್ಯಧಿಯಾ' (11.44) ಎನ್ನುವಂತೆ ಚತುರ್ಮುಖನು ಮುಖ್ಯಪುತ್ರನೂ ಹೌದು ಮುಖ್ಯಭಕ್ತನೂ ಹೌದು.

---

1. ಪುತ್ರತ್ವಾದಿನಾ ನ ತೇ ಪ್ರಿಯತಮಾಃ ಕಿಂತು ಭಕ್ತ್ಯೈವ । ಅತೋ ಭಕ್ತ್ಯಾಧಿಕ್ಯಾದ್ ಯಥಾ ಭವಾನ್ ಪ್ರಿಯತಮಸ್ತಥಾ ನ ತೇ ಇತ್ಯರ್ಥಃ । - ಜೀವಗೋಸ್ವಾಮೀ

[2]ವೀರರಾಘವ ವ್ಯಾಖ್ಯಾನದಲ್ಲಿ 'ಚತುರ್ಮುಖ ಮಹಾಭಕ್ತನೆ ಆದರೂ ಅವನಿಗಿಂತ ಹೆಚ್ಚಾಗಿ ಉದ್ಧವನನ್ನು ಹೊಗಳುವುದರ ಅಭಿಪ್ರಾಯ, ಚತುರ್ಮುಖನಿಗೂ ನನ್ನಲ್ಲಿ ಭಕ್ತಿ ಇಲ್ಲದಿರುತ್ತಿದ್ದರೆ ಉದ್ಧವನಷ್ಟು ಪ್ರೀತಿಪಾತ್ರನಾಗುತ್ತಿದ್ದಿಲ್ಲ' ಎಂದು. ಆದರೆ ಭಕ್ತಿ ಇಲ್ಲದಿರುತ್ತಿದ್ದರೆ ಪ್ರೀತಿಯನ್ನೇ ಮಾಡುತ್ತಿರಲಿಲ್ಲ. ಇನ್ನು ಅಷ್ಟು ಇಷ್ಟೆಂದು ಹೇಳುವುದಕ್ಕೆ ಅವಕಾಶವೆಲ್ಲಿ?

[3]ವಿಶ್ವನಾಥ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ— 'ಚತುರ್ಮುಖನಲ್ಲಿ ಭಕ್ತತ್ವವೂ ಪುತ್ರತ್ವವೂ ಜೊತೆಯಾಗಿದ್ದರೂ ಭಕ್ತತ್ವಕ್ಕಿಂತ ಪುತ್ರತ್ವ ಅಧಿಕ. ಅದರಿಂದ ಪರಮಾತ್ಮನ ಭಕ್ತ ಎನ್ನುವುದಕ್ಕಿಂತಲೂ ಹೆಚ್ಚಾಗಿ ಪರಮಾತ್ಮನ ಪುತ್ರನೆಂದೇ ಅವನನ್ನು ಕರೆಯುತ್ತಾರೆ. ನಂದಯಶೋದೆ ಮುಂತಾದವರಲ್ಲಿ ಅಗಾಧವಾದ ಪ್ರೀತಿ ಇರುವುದರಿಂದ ಪಿತೃತ್ವಕ್ಕಿಂತ ಅಧಿಕವಾಗಿ ಭಕ್ತತ್ವವೇ ಕಾಣುತ್ತದೆ. ಅದರಿಂದ ಅವರು ಕೃಷ್ಣನಿಗೆ ಪ್ರಿಯತಮರು. ಇಂಥ ಭಕ್ತರಲ್ಲಿ ಉದ್ಧವನೆ ಬಹಳ ಶ್ರೇಷ್ಠ ಎಂದು ಶ್ರೀಕೃಷ್ಣನೆ ಹೇಳುತ್ತಿದ್ದಾನೆ. ಉದ್ಧವನಿಗಿಂತಲೂ ಗೋಪಿಯರು ಶ್ರೇಷ್ಠರು. ಅವನು ಗೋಪಿಯರ ~~ಪಾದದೂಳಿಯನ್ನು ಬೇಡುವುದರಿಂದ ಇದು ಸ್ಪಷ್ಟವಿದೆ. ಇದು ವೈಷ್ಣವ ಸಿದ್ಧಾಂತ',~~ ಎಂದು.

ಆದರೆ 'ಇದು ವೈಷ್ಣವಸಿದ್ಧಾಂತ'ವೆಂದು ಏಕಪಕ್ಷೀಯವಾಗಿ ತೀರ್ಮಾನ ಮಾಡಿರುವುದು ಉಚಿತವಲ್ಲ, ಮತ್ತು ಇದು ಅವಸರದ ತೀರ್ಮಾನವಾಗಿದೆ. ಉದ್ಧವ ಗೋಪಿಯರ ಪಾದದೂಳನ್ನು ಧರಿಸುವವನಾದ್ದರಿಂದ ಗೋಪಿಯರಿಗಿಂತ ಕಡಿಮೆಯವನೆನ್ನುವುದಾದರೆ ಸ್ವತಃ ಶ್ರೀಕೃಷ್ಣನೇ 'ಭಕ್ತರ ಪಾದದೂಳಿಯನ್ನು ಧರಿಸುವ ಆಸೆಯಿಂದ ಭಕ್ತರ ಹಿಂದೆ ಹಿಂದೆ ನಡೆದು ಬರುತ್ತೇನೆ' ಎಂದು ಮುಂದಿನ

---

2. ಯದ್ಯಪ್ಯಾತ್ಮಯೋನ್ಯಾದೀನಾಮಪಿ ಜ್ಞಾನಿತ್ವಾನ್ನಿರತಿಶಯ ಪ್ರಿಯತ್ವಾನ್ನ ತಥಾ ಮೇ ಪ್ರಿಯತಮ ಇತ್ಯಸಂಗತಂ। ತಥಾಪಿ ತೇಷಾಮಪಿ ಯದಿ ಮಯಿ ಭಕ್ತಿರ್ನ ಸ್ಯಾನ್ನ ತಥಾ ಪ್ರಿಯಾ ಇತ್ಯರ್ಥಪರ್ಯವಸಾನೇನ ತಥೋಕ್ತಮಿತಿ ಬೋಧ್ಯಂ। -ವೀರರಾಘವಃ

3. ಬ್ರಹ್ಮಾದೀನಾಂ ಭಕ್ತತ್ವೇಽಪಿ ತೇಷು ಭಕ್ತತ್ವಾಂಶಾದಪಿ ಪುತ್ರತ್ವಾದ್ಯಂಶಾ ಅಧಿಕಾ ವರ್ತಂತೇ ಅತಃ ಪ್ರಾಧಾನ್ಯೇನ ವ್ಯಪದೇಶಾ ಭವಂತೀತಿ ನ್ಯಾಯೇನ ತೇ ಪುತ್ರಾದಿತ್ವೇನೈವ ವ್ಯಪದಿಶ್ಯಂತೇ ನ ತು ಭಕ್ತತ್ವೇನ । ನಂದಯಶೋದಾದಿಷು ತು ಮಹಾಪ್ರೇಮವತ್ವಾತ್ ಪಿತೃತ್ವಾದ್ಯಂಶೇಭ್ಯೋಽಪಿ ಭಕ್ತತ್ವಲಕ್ಷಣೋಽಂಶೋಽಧಿಕತರ ಇತಿ ತೇಷಾಂ ಭಕ್ತತ್ವಮೇವೇತಿ ತೇ ಕೃಷ್ಣಸ್ಯಾತಿ ಪ್ರಿಯತಮಾ ಏವ । ಏತಾದೃಶ ಭಕ್ತೇಷ್ವಪಿ ಮಧ್ಯೇ ಭವಾನ್ ಯಥಾ ಮೇ ಪ್ರಿಯತಮಸ್ತಥಾ ಮನ್ಮುಖಾದೇವ ಶೃಣ್ವಿತ್ಯಾಹ । ತೇನ ಸರ್ವಭಕ್ತೇಷು ಮಧ್ಯೇ ಉದ್ಧವಃ ಶ್ರೇಷ್ಠಸ್ತಸ್ಮಾದಪಿ ಗೋಪ್ಯಃ ಶ್ರೇಷ್ಠಾಃ । ತೇನಾಪಿ ತಾಸಾಂ ಚರಣಧೂಲಿಪ್ರಾರ್ಥನಾದಿತಿ ವೈಷ್ಣವಸಿದ್ಧಾಂತಃ। -ವಿಶ್ವನಾಥಃ

ಶ್ಲೋಕದಲ್ಲಿಯೇ ಹೇಳುವುದರಿಂದ (14.16) ಭಕ್ತರಿಗಿಂತ ಭಗವಂತ ಕಡಿಮೆಯವನೆ?

ಆಸಾಮಹೋ ಚರಣರೇಣುಜುಷಾಮಹಂ ಸ್ಯಾಂ
ವೃಂದಾವನೇ ಕಿಮಪಿ ಗುಲ್ಮಲತೌಷಧೀನಾಂ ।
ಯಾ ದುಸ್ತ್ಯಜಂ ಸ್ವಜನಮಾರ್ಯಪಥಂ ಚ ಹಿತ್ವಾ
ಭೇಜುರ್ಮುಕುಂದಪದವೀಂ ಶ್ರುತಿಭಿರ್ವಿಮೃಗ್ಯಾಂ ॥ (10.46.9)

'ಈ ಗೋಪಿಯರು ಬಂಧುಗಳ ಒಡನಾಟವನ್ನೂ ಪತಿಸೇವೆಯನ್ನೂ ಕೂಡ ತೊರೆದು ಶ್ರೀಕೃಷ್ಣನು ನಡೆದ ದಾರಿಯನ್ನು ಹಿಡಿದರು. ಅವರ ಪಾದಧೂಳಿಯನ್ನು ಹೊರಬಲ್ಲ ವೃಂದಾವನದ ಪೊದೆಯೊ ಬಳ್ಳಿಯೋ ಏನಾದರೂ ಆಗಿ ನಾನೇಕೆ ಜನಿಸಬಾರದು?' ಎಂದು ಉದ್ಧವ ಹೇಳಿದ್ದು ಗೋಪಿಯರು ಕೃಷ್ಣಭಕ್ತರೆಂಬ ಒಂದೇ ಕಾರಣಕ್ಕಾಗಿ ಹೊರತು ಅವರು ತನಗಿಂತ ಶ್ರೇಷ್ಠರೆಂಬ ಅಭಿಪ್ರಾಯವಿಲ್ಲ.

'ಕೃಷ್ಣನು ನಡೆಯುವ ದಾರಿಯನ್ನು ಹಿಡಿದು ಬಂದು ಅವನ ಪಾದಧೂಳಿಯನ್ನು ~~ಧರಿಸುವ ಈ ಗೋಪಿಯರ ವೃಂದಾವನದಲ್ಲಿ ನಾನೂ ಕೂಡ ಏಕೆ ಜನಿಸಬಾರದು,~~ ಪೊದೆಯೋ ಬಳ್ಳಿಯೋ ಏನಾದರೂ ಆಗಿ ಜನಿಸಿದರೂ ಕೂಡ ನನಗೆ ಕೃಷ್ಣನ ಪಾದಧೂಳಿಯನ್ನು ಧರಿಸುವ ಭಾಗ್ಯ ದೊರಕೀತು' ಎಂದೂ ಶ್ಲೋಕದ ಅರ್ಥವನ್ನು ಗ್ರಹಿಸಲು ಬರುತ್ತದೆ.

ದೇವಗುರು ಬೃಹಸ್ಪತ್ಯಾಚಾರ್ಯರ ಅವತಾರನಾದ ಉದ್ಧವನ ಪಾದಧೂಳಿಯನ್ನು ಅವರಿಗಿಂತ ಶ್ರೇಷ್ಠರಾದ ಇಂದ್ರಾದಿ ದೇವತೆಗಳು ಶಿಷ್ಯರಾದ್ದರಿಂದ ಹೊರುತ್ತಾರೆ. ಗೋಬ್ರಾಹ್ಮಣರ ಪಾದದೂಳಿಯನ್ನು ಧರಿಸಿದ ಮಾತ್ರಕ್ಕೆ ಯಾರೂ ಸಣ್ಣವರಾಗುವುದಿಲ್ಲ. ವಸ್ತುತಃ ಬೃಹಸ್ಪತ್ಯಾ ಚಾರ್ಯರ ಪಾದಧೂಳಿಯನ್ನು ಅವರೊಳಗೆ ಸನ್ನಿಹಿತನಾದ ಭಗವಂತನ ಪಾದಧೂಳಿ ಎಂದು ಇಂದ್ರಾದಿಗಳು ಧರಿಸುತ್ತಾರೆ, ಗೋಪಿಯರೊಳಗೆ ಸನ್ನಿಹಿತಳಾದ ರಮಾದೇವಿಯ ಪಾದಧೂಳಿ ಎಂದು ಬೃಹಸ್ಪತಿ ಏಕೆ ಧರಿಸಬಾರದು? ಗೋಪಿ ಯರಿಗೆ ಕೃಷ್ಣನ ಅಂಗಸಂಗ ದೊರಕಿದ್ದು ಅವರಲ್ಲಿ ರಮಾದೇವಿಯ ಆವೇಶವಿದ್ದುದ ರಿಂದ. ಅದರಿಂದ ಗೋಪಿಯರ ಪಾದಧೂಳಿ ರಮಾದೇವಿಯ ಪಾದಧೂಳಿಯೇ ಎಂದು ಉದ್ಧವ ಅದನ್ನು ಧರಿಸಲು ಬಯಸುವುದು ಸಂಭವನೀಯವೆ.

'ಭಕ್ತಿಯಲ್ಲಿ ರಮಾದೇವಿಗಿಂತಲೂ ಬ್ರಹ್ಮಾದಿ ದೇವತೆಗಳಿಗಿಂತಲೂ ಗೋಪಿಯರು ಹೆಚ್ಚೆಂ'ದು ಉದ್ಧವ ಹೇಳುವುದು (10.46.8) ಕೂಡ ಹೀಗೆಯೇ ಬರಿ ಪ್ರಶಂಸೆ. ಕೇವಲ, ವಿಷ್ಣುಭಕ್ತರೆಂದು ಪ್ರೀತಿವಾತ್ಸಲ್ಯದಿಂದ ಆಡಿದ ಮಾತು ಇದು.

ಆದರಿಂದ ವಿಶ್ವನಾಥ ವ್ಯಾಖ್ಯಾನವು ಹೇಳಿದ್ದು ಸರ್ವಥಾ ವೈಷ್ಣವಸಿದ್ಧಾಂತ ಎನ್ನಲಾಗದು.

ಕೃಪಾನಿಮಿತ್ತಾ ಯಾ ಪ್ರೀತಿರ್ನೀಚಭಕ್ತೇಷು ಸಾಽಧಿಕಾ ।
ಆಂತರ್ಯೈವ ತು ಯಾ ಪ್ರೀತಿಃ ಸಾ ತೂಚ್ಚೇಷು ಯಥಾಕ್ರಮಂ ।
ಯಥಾ ಕಶ್ಚಿತ್ ಸ್ವಮಾತ್ಮಾನಂ ಪ್ರಿಯಾಂ ಪುತ್ರಮಥಾಪಿ ವಾ ।
ಅತಿಹಾಯ ಕೃಪಾಯುಕ್ತೋ ಭಿಕ್ಷವೇಽನ್ನಂ ದದಾತ್ಯಪಿ ।
ಕದಾಚಿದೇವ ನ ಪುನಃ ಸ್ವಾತ್ಮಾದೇಃ ಸಾರ್ವಕಾಲಿಕಂ ।
ಯೋಗಕ್ಷೇಮವಹತ್ವಂ ಚ ನಿತ್ಯಂ ಸ್ವಾತ್ಮಾದಿಷು ಸ್ಫುಟಂ ।
ಏವಮೇವ ಪರೇಶಸ್ಯ ಭಕ್ತೇಷು ಶ್ರಿಯಜಾದಿಷು ॥
ಇತಿ ಪ್ರಿಯವಿವೇಕೇ ॥

ದಯೆಯಿಂದ ಸಣ್ಣ ಭಕ್ತರಲ್ಲಿ ಉಂಟಾಗುವ ತಾತ್ಕಾಲಿಕವಾದ ಪ್ರೀತಿ ಬಹಳ ಹೆಚ್ಚಾಗಿರುತ್ತದೆ, ಹಸಿದು ಬಂದು ಅನ್ನ ಬೇಡುವ ಭಿಕ್ಷುಕನಿಗೆ ಮನೆಯ ಯಜಮಾನನು ದಯೆಯಿಂದ ತನ್ನನ್ನೂ ಮಡದಿ ಮಕ್ಕಳನ್ನೂ ಬಿಟ್ಟು ಆ ಭಿಕ್ಷುಕನಿಗೇ ಅನ್ನ ನೀಡುವಂತೆ. ಒಳಗಿರುವ ಸ್ವಾಭಾವಿಕ ಪ್ರೀತಿ ಭಗವಂತನಿಗೆ ಉತ್ತಮಭಕ್ತರಲ್ಲಿಯೇ ಯೋಗ್ಯತಾನುಗುಣ ತಾರತಮ್ಯದಿಂದ ಅಧಿಕವಾಗಿರುತ್ತದೆ. ಭಿಕ್ಷುಕನಿಗೆ ಒಮ್ಮೆ ಹೀಗೆ ದಯೆಯಿಂದ ಅನ್ನ ನೀಡುತ್ತಾನೆ. ಪುನಃಪುನಃ ನೀಡುವುದಿಲ್ಲ, ತನಗೂ ಮಡದಿ ಮಕ್ಕಳಿಗೂ ಸರ್ವಕಾಲದಲ್ಲಿ ಅನ್ನವನ್ನು ಸಂಪಾದಿಸುತ್ತಾನೆ. ಯೋಗಕ್ಷೇಮಗಳನ್ನು ನೋಡಿಕೊಳ್ಳುವುದು ತನ್ನ ಮತ್ತು ಮಡದಿ ಮಕ್ಕಳ ವಿಷಯದಲ್ಲಿ ಸದಾ ಇರುತ್ತದೆ. ಹೀಗೆಯೇ ಪರಮಾತ್ಮನಿಗೆ ಲಕ್ಷ್ಮೀ ಬ್ರಹ್ಮಾದಿ ಭಕ್ತರಲ್ಲಿ ಶಾಶ್ವತವಾಗಿ ಪ್ರೀತಿ ಇರುತ್ತದೆ ಎಂದು ಪ್ರಿಯವಿವೇಕ ಎಂಬ ಗ್ರಂಥದಲ್ಲಿದೆ.

ಯಾದವೇಭ್ಯಸ್ತು ಸರ್ವೇಭ್ಯ ಉದ್ಧವೋ ಭಗವತ್ಪ್ರಿಯಃ ।
ಉದ್ಧವಾಚ್ಚ ಪ್ರಿಯತಮಃ ಪ್ರದ್ಯುಮ್ನಸ್ತು ಮಹಾರಥಃ ।
ತಸ್ಮಾದಪಿ ಪ್ರಿಯತಮೋ ರಾಮಃ ಕೃಷ್ಣಸ್ಯ ಸರ್ವದಾ ।
ನೈವ ತಸ್ಮಾತ್ ಪ್ರಿಯತಮೋ ವಿನ್ಯೈಕಂ ತು ಚತುರ್ಮುಖಂ ।
ಸರ್ವೇಭ್ಯೋಽಪಿ ಪ್ರಿಯತಮಾ ಹರೇಃ ಶ್ರೀರೇವ ವಲ್ಲಭಾ ।
ನೈವ ತಸ್ಯಾಃ ಪ್ರಿಯತಮೋ ವಿನಾ ಸ್ವಾತ್ಮಾನಮೇವ ತು ॥
ಇತಿ ಯಾದವಾಧ್ಯಾತ್ಮೇ ॥

ಎಲ್ಲ ಯಾದವರಿಗಿಂತ ಉದ್ಧವನು ಭಗವಂತನಿಗೆ ಹೆಚ್ಚು ಪ್ರಿಯ. ಉದ್ಧವನಿಗಿಂತ ಮಹಾರಥನಾದ ಪ್ರದ್ಯುಮ್ನ ಅತ್ಯಂತ ಪ್ರಿಯ. ಅವನಿಗಿಂತಲೂ ಯಾವಾಗಲೂ ಅತ್ಯಂತ ಪ್ರಿಯನು ಕೃಷ್ಣನಿಗೆ ಬಲರಾಮ. ಅವನಿಗಿಂತ ಅತ್ಯಂತ ಪ್ರಿಯನು ಒಬ್ಬ ಚತುರ್ಮುಖನನ್ನು ಬಿಟ್ಟರೆ ಇನ್ನಾರೂ ಇಲ್ಲ. ಎಲ್ಲರಿಗಿಂತಲೂ ಪತ್ನಿಯಾದ ಮಹಾಲಕ್ಷ್ಮಿ ಹರಿಗೆ ಪ್ರಿಯತಮೆಯಾಗಿರುವಳು. ಅವಳಿಗಿಂತ ಪ್ರಿಯತಮನು ತನ್ನನ್ನು ಬಿಟ್ಟರೆ ಇನ್ನಾರೂ ಇಲ್ಲ ಎಂದು ಯಾದವಾಧ್ಯಾತ್ಮದಲ್ಲಿ ಹೇಳಿದೆ.

❖❖❖

ಪ್ರೀತಿಯಿಂದ ಭಕ್ತರನ್ನು ಹಿಂಬಾಲಿಸುವವನು ಶ್ರೀಹರಿ ಎಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾರೆ.

ನಿರಪೇಕ್ಷಂ ಮುನಿಂ ಶಾಂತಂ ನಿರ್ವೈರಂ ಸಮದರ್ಶನಮ್ ।
ಅನುವ್ರಜಾಮ್ಯಹಂ ನಿತ್ಯಂ ಪೂಯೇಯೇತ್ಯಂಘ್ರಿರೇಣುಭಿಃ ॥ ೧೬ ॥

ಬೇರೆ ಅಪೇಕ್ಷೆಗಳಿಲ್ಲದವನು ಮನನಶೀಲ ಭಕ್ತಸಂಪನ್ನ ಪ್ರಾಣಿಗಳಲ್ಲಿ ವೈರವಿಲ್ಲದವನು ಎಲ್ಲೆಡೆ ಭಗವಂತನನ್ನು ನಿರ್ದೋಷನೆಂದು ತಿಳಿಯುವವನು ಇಂಥ ಭಕ್ತ ಮುಂದೆ ನಡೆಯುತ್ತಿದ್ದರೆ ಅವನನ್ನು ನನ್ನ ಪಾದದೂಳಿಯಿಂದ ಪವಿತ್ರೀಕರಿಸಲೆಂದು ನಾನು ಹಿಂಬಾಲಿಸುವೆನು.

[1]'ಸದಾ ಪವಿತ್ರನೇ ಆಗಿರುವ ತನ್ನನ್ನು ಭಕ್ತನ ಪಾದಧೂಳಿ ಪವಿತ್ರೀಕರಿಸುವುದು ಅಸಂಭವ. ತನ್ನೊಳಗಿರುವ ಬ್ರಹ್ಮಾಂಡಗಳನ್ನು ಅದು ಪವಿತ್ರೀಕರಿಸಬಲ್ಲುದು. ಆದರಿಂದ ಬ್ರಹ್ಮಾಂಡಗಳನ್ನು ಪವಿತ್ರೀಕರಿಸಲೆಂದೇ ಭಕ್ತನ ಪಾದಧೂಳಿಯನ್ನು ಧರಿಸಲು ಅವನ ಹಿಂದೆ ಹಿಂದೆ ಭಗವಂತ ಹೋಗುತ್ತಾನೆ' ಎಂದು ಶ್ರೀಧರವ್ಯಾಖ್ಯಾನವೂ ರಾಧಾರಮಣದಾಸ ವ್ಯಾಖ್ಯಾನವೂ ಹೇಳುತ್ತದೆ.

ಆದರೆ ಪಾತ್ರೆ ಬಿಸಿಯಾಗದೆ ಪಾತ್ರೆಯೊಳಗಿನ ನೀರು ಬಿಸಿಯಾಗದು, ಬೇರು ನೀರುಣದೆ ಗಿಡ ಚಿಗುರದು. ಹಾಗೆ ಭಗವಂತ ಭಕ್ತನ ಪಾದಧೂಳಿಯಿಂದ ಪವಿತ್ರನಾಗದಿದ್ದರೆ ಅವನೊಳಗಿರುವ ಬ್ರಹ್ಮಾಂಡ ಹೇಗೆ ಪವಿತ್ರವಾದೀತು?

[2]'ಭಕ್ತನು ನೋಡಿದ್ದನ್ನು ಮುಟ್ಟಿದ್ದನ್ನು ಭಗವಂತ ಪವಿತ್ರಗೊಳಿಸುತ್ತಾನೆ. ಹಾಗೆ

---

1. ಸದಾ ಪವಿತ್ರಸ್ಯಾತ್ಮನಃ ಪಾವಿತ್ರ್ಯಾಸಂಭವಾತ್ ಸ್ವಾಂತಃಸ್ಥಿತ ಬ್ರಹ್ಮಾಂಡಪವಿತ್ರೀಕರಣಮೇವೋಪಚಾರೇಣಾತ್ಮನಃ ಪವಿತ್ರೀಕರಣಮಿತಿ ಭಾವೇನಾಭಿಪ್ರಾಯೇಣ ಪೂಯೇಯೇತ್ಯುಕ್ತಂ । -ರಾಧಾರಮಣದಾಸಃ

2. ತದೀಕ್ಷಿತಂ ತತ್‌ಸ್ಪೃಷ್ಟಂ ಚ ಸರ್ವಮಪಿ ವಸ್ತು ಮದಂಘ್ರಿರೇಣುಭಿಃ ಪೂತಂ ಭವೇದಿತಿ ಬುದ್ಧ್ಯಾ ತಮನುಗಚ್ಛಾಮೀತ್ಯರ್ಥಃ। ಪೂಯೇಯೇತ್ಯುತ್ತಮ ಪುರುಷಪಾಠೇ

ಪವಿತ್ರಗೊಳಿಸಲೆಂದೇ ಭಕ್ತನ ಹಿಂದೆ ನಡೆಯುತ್ತಾನೆ 'ಪೂಯೇತ' ಎಂಬ ಪಾಠದಲ್ಲಿ ಹೀಗೆ ಅರ್ಥ. 'ಪೂಯೇಯ' ಎಂಬ ಪಾಠದಲ್ಲಿ ನನ್ನೊಳಗಿನ ಬ್ರಹ್ಮಾಂಡವನ್ನೂ ಭಕ್ತನ ಪಾದಧೂಳಿ ಪವಿತ್ರೀಕರಿಸಬಲ್ಲುದು, ಅದಕ್ಕೇ ಅವನ ಹಿಂದೆ ನಡೆಯುತ್ತೇನೆ ಎಂದು ಪ್ರಶಂಸೆಗಾಗಿ ಹೇಳಿದ ಅತಿಶಯೋಕ್ತಿ ಇಟ್ಟುಕೊಳ್ಳಬೇಕೆಂದು ವೀರರಾಘವ ವ್ಯಾಖ್ಯಾನ ಹೇಳಿದೆ.

ಆದರೆ ಪೂಯೇತ ಎಂಬ ಪಾಠದಲ್ಲಿ, ಭಕ್ತ ನೋಡಿದ್ದನ್ನು ಮುಟ್ಟಿದ್ದನ್ನು ಭಗವಂತ ತನ್ನ ಪಾದಧೂಳಿಯಿಂದ ಪವಿತ್ರೀಕರಿಸಲೆಂದು ಹಿಂದೆ ನಡೆದು ಬರುತ್ತಾನೆ ಏಕೆ? ಜೊತೆಗೆ ಬಂದರಾಗದೆ? 'ಅನುವ್ರಜಾಮಿ' ಹಿಂದೆ ಹಿಂದೆ ನಡೆದು ಬರುತ್ತೇನೆ ಎನ್ನುವುದು ಅರ್ಥಪೂರ್ಣವಾಗುವುದಿಲ್ಲ. ಪೂಯೇಯ ಎಂಬ ಪಾಠದಲ್ಲಿ 'ಪಾವಯೇಯಂ' ಎಂದು ಣಿಜರ್ಥವಿಟ್ಟುಕೊಂಡು 'ಬ್ರಹ್ಮಾಂಡವನ್ನೂ ಕೂಡ' ಎಂದು ಅಧ್ಯಾಹಾರ ಮಾಡಿಕೊಳ್ಳುವುದು ಕ್ಲೇಶ. 'ಬ್ರಹ್ಮಾಂಡವನ್ನು ಪವಿತ್ರಗೊಳಿಸ ಬಲ್ಲುದು ಎಂದು ಅತಿಶಯೋಕ್ತಿ' ಎನ್ನುವುದೂ ಅನಾವಶ್ಯಕ. 'ಭಗವಂತನನ್ನು ಪವಿತ್ರಗೊಳಿಸಬಲ್ಲುದೆಂ'ದರೆ ಅದು ಅತಿಶಯೋಕ್ತಿಯಾಗದೆ?

[3]'ಭಕ್ತನ ಭಕ್ತಿಗೆ ಸರಿಯಾದ ಫಲ ನೀಡದಿದ್ದಲ್ಲಿ ತನಗೆ ದೋಷ ಬಂದೀತೆಂದು ಭಕ್ತನ ಹಿಂದೆ ಭಗವಂತ ನಡೆದು ಬರುತ್ತಾನೆ' ಎಂದು ಜೀವಗೋಸ್ವಾಮಿ ಹೇಳುವುದು ಅಸಂಗತ. 'ನ ಕರ್ಮಣಾ ವರ್ಧತೇ ನೋ ಕನೀಯಾನ್' ಭಗವಂತ ನಿಗೆ ಕರ್ಮಮಾಡದಿದ್ದರೆ ದೋಷವಿಲ್ಲ. ಮಾಡಿದರೆ ಗುಣವಿಲ್ಲ' ಎಂದು ಮುಂತಾದ ಶ್ರುತಿಗಳ ವಿರೋಧ ಬರುತ್ತದೆ.

ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ—'ಭಗವಂತ ಆಲೋಚಿಸುತ್ತಾನೆ, 'ಭಕ್ತಿರಸಾನುಭವದಿಂದ ಭಕ್ತ ಆನಂದಿಸುವಂತೆ ತಾನೂ ಭಕ್ತನಲ್ಲಿ ಭಕ್ತಿಮಾಡಿ ಭಕ್ತಿರಸಾನುಭವದಿಂದ ಆನಂದಿಸುತ್ತೇನೆ' ಎಂದು. ಅದರಿಂದ ಭಗವಂತ ಭಕ್ತಿಯಿಂದಲೇ ಭಕ್ತನನ್ನು ಹಿಂಬಾಲಿಸುತ್ತಾನೆ' ಎಂದು. ಆದರೆ ಭಕ್ತಿ ಎಂದರೇನೆಂದೇ ಇವರಿಗೆ ಗೊತ್ತಿಲ್ಲ. ಭಗವಂತನಿಗಿಂತ ಭಕ್ತ ಉತ್ತಮನಾದರೆ ಅವನು ಭಕ್ತನಲ್ಲಿ ಭಕ್ತಿ

ಮದಂತರ್ವರ್ತಿ ಬ್ರಹ್ಮಾಂಡಮಪಿ ಪವಿತ್ರೀಕುರ್ಯಾಮಿತಿ ಭಾವೇನೇತಿ ತನ್ಮಾಹಾತ್ಮ್ಯಾತಿಶಯ ಸ್ತುತಿಃ। -ವೀರರಾಘವಃ

3. ತದ್‌ಭಕ್ತ್ಯ ನಿಷ್ಕೃತಿ ದೋಷಾತ್ ಪವಿತ್ರಿತಃ ಸ್ಯಾಮಿತಿ ಭಾವೇನೇತ್ಯರ್ಥ ಇತಿ ಸಂದರ್ಭಃ। ವಸ್ತುತಸ್ತು ಭಕ್ತಚರಣ ಧೂಲಿಗ್ರಹಣಂ ವಿನಾ ಭಕ್ತಿರ್ನ ಸ್ಯಾತ್ ಭಕ್ತ್ಯಾ ವಿನಾ ಮನ್ಮಾಧುರ್ಯರಸಾನುಭವೋ ನ ಸ್ಯಾದಿತಿ ಮಯ್ಯೈವ ಮರ್ಯಾದಾ ಸ್ಥಾಪಿತಾ। ಅತೋಽಹಮಪಿ ಭಕ್ತ ಇವ ಭಕ್ತ್ಯಾ ಪೂರ್ಣಮನ್ಮಾಧುರ್ಯರಸನಿಮಗ್ನೋ ಭವೇಯಮಿತಿ ಭಾವಃ। -ವಿಶ್ವನಾಥಃ

ಮಾಡುವುದು ಸರಿಯಾದೀತು. ಉತ್ತಮರಲ್ಲಿ ಭಕ್ತಿ ಹೊರತು ಸಮಾನಿಕರಲ್ಲಿಯೂ ಅಲ್ಲ, ಸಣ್ಣವರಲ್ಲಿಯೂ ಅಲ್ಲ.

ಹೀಗೆ ಬೇರೆ ವ್ಯಾಖ್ಯಾನಕಾರರು ಈ ಶ್ಲೋಕವನ್ನು ವ್ಯಾಖ್ಯಾನಿಸಿದ್ದು ಸಮರ್ಪಕ ವಲ್ಲ. ಶ್ರೀಮದಾಚಾರ್ಯರು 'ಪೂಯೇಯ' ಎಂಬಲ್ಲಿ ಣಿಜರ್ಥ ಇಟ್ಟುಕೊಂಡು ಸುಂದರವಾದ ವ್ಯಾಖ್ಯಾನ ಮಾಡಿದ್ದಾರೆ, ಮತ್ತು ಅದು ಸಂಖ್ಯಾನಗ್ರಂಥೋಕ್ತವಾಗಿದೆ ಎಂದೂ ತೋರಿಸಿದ್ದಾರೆ.

ಸ್ವಾಂಘ್ರಿರೇಣುಭಿಸ್ತಂ ಶೋಧಯಾಮೀತ್ಯನುವ್ರಜಾಮಿ ।
ಅನುಗಚ್ಛತಿ ವಿಷ್ಣುಸ್ತು ಸ್ವಭಕ್ತಂ ತಸ್ಯ ಶುದ್ಧಯೇ ।
ತಸ್ಯಾಂಘ್ರಿರೇಣುಭಿರ್ವಾತನೀತೈರಗ್ರೇಸರಃ ಶುಚಿಃ ।
ಅಗ್ರತೋ ಗಮನೇ ವಿಷ್ಣೋಃ ಪಾದಸ್ಪೃಷ್ಟಂ ರಜೋ ಭವೇತ್ ॥
ಅತಃ ಸ್ವಭಕ್ತಂ ಪೂಯೇಯೇತ್ಯನುವ್ರಜತಿ ಕೇಶವಃ ॥
ಇತಿ ಸಂಖ್ಯಾನೇ ॥

'ಅಂಘ್ರಿರೇಣುಭಿಃ' ಎಂದರೆ ತನ್ನ ಪಾದಧೂಳಿಯಿಂದ 'ಪೂಯೇಯ' ಭಕ್ತನನ್ನು ಪವಿತ್ರೀಕರಿಸುವೆನೆಂಬ ಅಭಿಪ್ರಾಯದಿಂದ ಹಿಂಬಾಲಿಸುತ್ತಾನೆ ಭಗವಂತ.

'ವಿಷ್ಣು ತನ್ನ ಭಕ್ತನನ್ನು ಹಿಂಬಾಲಿಸುತ್ತಾನೆ. ಅದು ಭಕ್ತನ ಶುದ್ಧಿಗಾಗಿ. ವಿಷ್ಣುವಿನ ಪಾದಧೂಳಿ ಗಾಳಿಯಲ್ಲಿ ಹಾರಾಡುವಾಗ ಮುಂದೆ ಹೆಜ್ಜೆ ಹಾಕುತ್ತಿರುವ ಭಕ್ತ ಪವಿತ್ರನಾಗುತ್ತಾನೆ. ವಿಷ್ಣು ತಾನೇ ಭಕ್ತನಿಗಿಂತ ಮುಂದೆ ನಡೆದರೆ ವಿಷ್ಣುಪಾದ ಧೂಳಿಗೆ ಭಕ್ತನ ಪಾದ ಸೋಕುತ್ತದೆ. ಅದರಿಂದ ಭಕ್ತನಿಗೆ ಮಹಾದೋಷ ಬರುತ್ತದೆ. ಅದು ಬಾರದಿರಲೆಂದು ಭಕ್ತನ ಹಿಂದೆ ನಡೆಯುತ್ತಾನೆ. ಎಂದು ಸಂಖ್ಯಾನ ಎಂಬ ಗ್ರಂಥದಲ್ಲಿದೆ.

❖❖❖

ಹೃದಯದೊಳಗೆ ಇರುವ ಭಕ್ತಿಗೆ ಬಾಹ್ಯ ಲಕ್ಷಣಗಳನ್ನು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ವಾಗ್ಗದ್ಗದಾ ದ್ರವತೇ ಯಸ್ಯ ಚಿತ್ತಂ
ರುದತ್ಯಭೀಕ್ಷ್ಣಂ ಹಸತಿ ಕ್ವಚಿಚ್ಚ ।
ವಿಲಜ್ಜ ಉದ್ಗಾಯತಿ ನೃತ್ಯತೇ ಚ
ಮದ್ಭಕ್ತಿಯುಕ್ತೋ ಭುವನಂ ಪುನಾತಿ ॥ ೨೪ ॥

ಭಗವಂತನ ಸ್ಮರಣೆಯಿಂದ ಯಾರ ಕಂಠ ಬಿಗಿದು ಬರುವುದೋ ಯಾರ ಮನ ಕರಗುವುದೋ ಯಾರು ಕೆಲವೊಮ್ಮೆ ಜೋರಾಗಿ ಅಳುವನೋ ನಗುವನೋ ಲಜ್ಜೆಬಿಟ್ಟು ಗಟ್ಟಿಯಾಗಿ ಸ್ತೋತ್ರಗೈವನೊ ಕುಣಿಯುವನೋ ಇಂಥ ನನ್ನ ಭಕ್ತ ಲೋಕವನ್ನೇ ಪಾವನಗೊಳಿಸುತ್ತಾನೆ.

'ಭಕ್ತನು ಭಕ್ತಿಯಿಂದ ತನ್ನನ್ನು ಮಾತ್ರವಲ್ಲದೆ ಲೋಕವನ್ನೇ ಪವಿತ್ರೀಕರಿಸಬಲ್ಲ' ಎನ್ನುವುದು ಶ್ಲೋಕದ ಅಭಿಪ್ರಾಯವೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಶ್ರೀಮದಾಚಾರ್ಯರು ಹೇಳುತ್ತಾರೆ, 'ಅಷ್ಟೇ ಅಲ್ಲ, ಭಕ್ತನ ಭಕ್ತಿಗೆ ಬಾಹ್ಯಲಕ್ಷಣಗಳನ್ನು ಹೇಳಿ ಕೇವಲ ಬಾಹ್ಯ ಲಕ್ಷಣವು ಡಾಂಭಿಕರಲ್ಲೂ ಇರಬಹುದಾದ್ದರಿಂದ ಆಂತರಿಕ ಲಕ್ಷಣದಿಂದ ಜನ್ಯವಾದ ಬಾಹ್ಯಲಕ್ಷಣವನ್ನೇ ಭಾಗವತಶ್ಲೋಕದಲ್ಲಿ ಗ್ರಹಿಸಬೇಕೆಂದು ತಿಳಿಸಲು ಆಂತರಿಕ ಲಕ್ಷಣವನ್ನು ಭಕ್ತಿವಿವೇಕ ಗ್ರಂಥದಿಂದ ತಿಳಿದುಕೊಳ್ಳಿರೆಂದು ಶ್ರೀಮದಾಚಾರ್ಯರು ಹೇಳುತ್ತಾರೆ–

ಚಿತ್ತದ್ರವಸ್ತಥಾ ಸ್ಥೈರ್ಯಂ ಪ್ರಸಾದೋ ಭಕ್ತಿಲಕ್ಷಣಂ ।
ಆಧಿಕ್ಯೇನ ತು ತತ್ರಾಪಿ ಸ್ಥೈರ್ಯಮೇವ ವಿಶೇಷತಃ ।
ದಂಭಸ್ಯ ಚಲಭಕ್ತೇಶ್ಚ ಯಸ್ಮಾದಶ್ರ್ವಾದಿಕಂ ಭವೇತ್ ।
ದಂಭಾದಿ ಪರಿಹಾರಾರ್ಥಂ ನಿಗೃಹ್ಣೀಯಾಚ್ಚ ಧೀರಧೀಃ ।
ಅತ ಆಧ್ಯಾತ್ಮಿಕೈಃ ಕ್ಲೇಶೈರಾಧಿಭೂತಾಧಿದೈವಿಕೈಃ ।
ವಾಕ್ಯೈಶ್ಚ ವೇದತಂತ್ರಾದ್ಯೈರುಪದೇಶೈಶ್ಚ ತಾದೃಶೈಃ ।
ಬಲವಚ್ಛಾಸನೈರ್ವಾಪಿ ಯಸ್ಯ ಭಕ್ತಿರ್ನ ಚಾಲ್ಯತೇ ।
ಸ ಏವ ಪರಮೋ ಭಕ್ತೋ ವಿಷ್ಣೋರ್ಹೃದಯವಲ್ಲಭಃ ॥

ಇತಿ ಭಕ್ತಿವಿವೇಕೇ ॥

ಮನಸ್ಸು ಭಗವಂತನ ಕಡೆಗೆ ಹರಿಯುವುದು, ಸ್ಥಿರತೆ, ಮುಖ ಅರಳುವುದು ಇವು ವಿಶೇಷವಾಗಿ ಕಂಡುಬರುವುದು ಭಕ್ತಿಯ ಆಂತರಿಕ ಲಕ್ಷಣವಾಗಿದೆ. ಈ ಮೂರರಲ್ಲಿಯೂ ಸ್ಥಿರತೆಯೇ ವಿಶೇಷವಾಗಿ ಲಕ್ಷಣವೆನಿಸುತ್ತದೆ. ಕಣ್ಣೀರು ಸುರಿಸುವುದು ಮುಂತಾದುವು ಬಾಹ್ಯಲಕ್ಷಣಗಳು ಹೆಚ್ಚಾಗಿ ದಾಂಭಿಕನಲ್ಲಿಯೂ ಚಲಭಕ್ತಿ ಉಳ್ಳವನಲ್ಲಿಯೂ ಇರುತ್ತವೆ. ಅದರಿಂದ ದಂಭ ಅಥವಾ ಚಲಭಕ್ತಿ ಇರಬಹುದೆಂದು ಸಜ್ಜನರಿಗೆ ಸಂದೇಹ ಬಾರದಂತೆ ಕಣ್ಣೀರು ಮುಂತಾದುವನ್ನು ಧೈರ್ಯದಿಂದ ನಿಯಂತ್ರಿಸಿಕೊಳ್ಳಬೇಕು. (ಇಲ್ಲದಿದ್ದರೆ ದಾಂಭಿಕ ಅಥವಾ ಚಲಭಕ್ತಿಯವನೆಂದು ಭಾವಿಸಿ ಸಜ್ಜನರು ತತ್ತ್ವೋಪದೇಶ ಮಾಡದೇ ಇರಬಹುದು.

ಸಜ್ಜನರು ಇವನ ಬಳಿ ಶ್ರವಣಕ್ಕೆ ಬಾರದಿರಲೂಬಹುದು.) ರೋಗಾದಿ ಆಧ್ಯಾತ್ಮಿಕ ತಾಪ, ರಾಜರ ಕಳ್ಳರ ಪೀಡೆ ಮುಂತಾದ ಭೌತಿಕ ತಾಪ, ಅತಿವೃಷ್ಟಿ ಅನಾವೃಷ್ಟಿ ಮುಂತಾದ ಆಧಿದೈವಿಕ ತಾಪಗಳಿಂದಾಗಲಿ, ಭಕ್ತಿವಿರೋಧಿಗಳ ಮಾತುಗಳಿಂದಾ ಗಲಿ, ಭಕ್ತಿ ನಿಷೇಧದಂತೆ ಮೇಲ್ನೋಟಕ್ಕೆ ಕಾಣುವ ವೇದ ಪಂಚರಾತ್ರಗಳಿಂದಾ ಗಲಿ, ಭಕ್ತಿ ನಿಷೇಧ ಮಾಡುವ ಉಪದೇಶದಿಂದಾಗಲಿ ಪ್ರಬಲ ರಾಜಶಾಸನ ಗಳಿಂದಾಗಲಿ ಯಾರ ಭಕ್ತಿಯು ವ್ಯತ್ಯಾಸವಾಗುವುದಿಲ್ಲವೋ ಅವನೇ ಪರಮಭಕ್ತ ವಿಷ್ಣುವಿಗೆ ಮನಸಿಗೆ ಪ್ರಿಯ ಎಂದು ಭಕ್ತಿವಿವೇಕ ಎಂಬ ಗ್ರಂಥ ಹೇಳಿದೆ.

❖❖❖

ಮಿಥ್ಯಾಜ್ಞಾನಿಗಳ ಮತ್ತು ಪರಸ್ತ್ರೀಲಂಪಟರ ಸಹವಾಸ ಕೂಡದೆಂದು ಶ್ರೀಕೃಷ್ಣ ಉಪದೇಶಿಸುತ್ತಾನೆ.

ಸ್ತ್ರೀಸಂಗಸಂಗಿನಾಂ ಸಂಗಂ ತ್ಯಕ್ತ್ವಾ ದೂರತ ಆತ್ಮವಾನ್ ।
ಕ್ಷೇಮೇ ವಿವಿಕ್ತ ಆಸೀನಶ್ಚಿಂತಯೇನ್ಮಾಮತಂದ್ರಿತಃ ॥ ೨೯ ॥

ಮನೋಬಲಉಳ್ಳ ಭಕ್ತ ಮಿಥ್ಯಾಜ್ಞಾನಿಗಳ ಪರಸ್ತ್ರೀ ಲಂಪಟರ ಅವರ ಸಹವಾಸಿಗಳ ಸಹವಾಸವನ್ನು ಕೂಡ ದೂರದಲ್ಲಿಬಿಟ್ಟು ಮಂಗಳಕರವಾದ ಏಕಾಂತ ಪ್ರದೇಶದಲ್ಲಿ ಕುಳಿತು ಆಲಸ್ಯ ಮಾಡದೆ ನನ್ನನ್ನು ಧ್ಯಾನಿಸಬೇಕು.

ನ ತಥಾಽಸ್ಯ ಭವೇತ್‌ಕ್ಲೇಶೋ ಬಂಧಶ್ಚಾನ್ಯಪ್ರಸಂಗತಃ ।
ಯೋಷಿತ್ಸಂಗಾದ್ಯಥಾ ಪುಂಸೋ ಯಥಾ ತತ್ಸಂಗಿಸಂಗತಃ ॥ ೩೦ ॥

ಮಿಥ್ಯಾಜ್ಞಾನಿಯ ಮತ್ತು ಪರಸ್ತ್ರೀಲಂಪಟನ ಸಂಗದಿಂದ ಮತ್ತು ಅವನ ಸಂಗವಿರುವವರ ಸಂಗದಿಂದ ಎಷ್ಟು ದುಃಖವೂ ತಮಸ್ಸೂ ಆಗುವುದೋ ಅಷ್ಟು ಬೇರೆ ಪಂಚಮಹಾಪಾತಕಿಯ ಸಂಗದಿಂದಾಗಲಿ ಅವನ ಸಂಗವಿರುವವರ ಸಂಗದಿಂದಾಗಲಿ ಆಗದು.

ಯಥಾ ತ್ವಾಮರವಿಂದಾಕ್ಷ ಯಾದೃಶಂ ವಾ ಯದಾತ್ಮಕಮ್ ।
ಧ್ಯಾಯೇನ್ಮುಮುಕ್ಷುರೇತನ್ಮೇ ಧ್ಯಾನಂ ತ್ವಂ ವಕ್ತುಮರ್ಹಸಿ ॥ ೩೧ ॥

ಹೇ ಅರವಿಂದನಯನ, ಧ್ಯೇಯನಾದ ನಿನ್ನನ್ನು ಮುಮುಕ್ಷು ಹೇಗೆ ಯಾವ ರೀತಿಯಿಂದ ಧ್ಯಾನಿಸಬೇಕು? ಯಾವ ಗುಣಲಕ್ಷಣ ಉಳ್ಳವನೆಂದು ಧ್ಯಾನಿಸಬೇಕು? ಈ ಪ್ರಶ್ನೆಗಳಿಗೆ ಪರಿಹಾರವನ್ನು ಹೇಳಲು ನೀನಲ್ಲದೆ ಬೇರೆಯವರು ಶಕ್ತರಾಗಲಾರರು.

ಇಲ್ಲಿ ಸ್ತ್ರೀಸಂಗವನ್ನು ಮಾಡುವವರ ಸಹವಾಸವನ್ನು ಮಾತ್ರವಲ್ಲ ಅವರ

ಸಹವಾಸಿಗಳ ಸಹವಾಸವನ್ನೂ ಕೂಡ ಮಾಡಬಾರದೆಂದರೆ ದೇವತೆಗಳು ಋಷಿಗಳು ಮುಂತಾದವರು ಗೃಹಸ್ಥರಾಗಿ ಸ್ತ್ರೀಸಂಗ ಮಾಡುವವರು, ಅವರ ಸಹವಾಸವನ್ನು ನಿಷೇಧಿಸಿದಂತಾಗುವುದು. ಆದರೆ ಅವರ ಸಹವಾಸ ಸೇವೆಗಳನ್ನು ಮಾಡದೆ ಯಾರಿಗೂ ಮೋಕ್ಷ ಸಿಗಲಾರದು. ಪರಸ್ತ್ರೀಸಂಗ ಮಾಡುವವರ ಸಹವಾಸವನ್ನು ನಿಷೇಧಿಸುವ ಅಭಿಪ್ರಾಯವೂ ಸರಿಯಲ್ಲ. ಪರಸ್ತ್ರೀಸಂಗದಿಂದ ನರಕಾದಿ ಅನರ್ಥವಿದೆಯಾದರೂ 'ಸ್ತ್ರೀಸಂಗದಿಂದಾಗುವಷ್ಟು ಅನರ್ಥ ಇನ್ನಾವ ಬ್ರಹ್ಮಹತ್ಯಾದಿ ಪಾಪಕೃತ್ಯದಿಂದಲೂ ಉಂಟಾಗುವುದಿಲ್ಲ' ಎನ್ನುವುದು ಧರ್ಮಶಾಸ್ತ್ರಗಳಿಗೆ ಸಮ್ಮತವಲ್ಲ. ಬೇರೆ ವ್ಯಾಖ್ಯಾನಕಾರರು ಈ ಬಗ್ಗೆ ಏನೂ ವಿಚಾರಮಾಡಿಲ್ಲ. ಶ್ರೀಮದಾಚಾರ್ಯರು ಹೇಳುತ್ತಾರೆ— 'ಸ್ತ್ರೀಸಂಗ ಎರಡು ಬಗೆ, ಮಿಥ್ಯಾಜ್ಞಾನದಲ್ಲಿ ಆಸಕ್ತಿ ಮತ್ತು ಪರಸ್ತ್ರೀಮೋಹ ಎಂದು. ಇವೆರಡೂ ಅನರ್ಥಕಾರಿಗಳು ಅವುಗಳಲ್ಲಿ ಮಿಥ್ಯಾಜ್ಞಾನಾಸಕ್ತಿ ಹೆಚ್ಚು ಅನರ್ಥಕಾರಿ' ಎಂದು.

ಕೇಶವೇ ತ್ವನ್ಯಥಾಬುದ್ಧಿಃ ಸೈವ ಸ್ತ್ರೀ ಸಂಪ್ರಕೀರ್ತಿತಾ ।
ತ್ರಿಕಾಲ ದುಃಖದತ್ವೇನ ಪುಂಸಾ ಸಹ ನಿವಾಸನಾತ್ ।
ಜುಷ್ಟತ್ವಾದ್ಯೋಷಿದಿತ್ಯುಕ್ತಾ ವನನಾತ್ ವನಿತೇತಿ ಚ ।
ಪ್ರಮಾದಕರಣತ್ವಾತ್ತು ಪ್ರಮದೇತಿ ಚ ಗೀಯತೇ ।
ತ್ಯಜೇತ್ ತತ್ಸಂಗಿನಾಂ ಸಂಗಂ ಬುಭೂಷುಃ ಪುರುಷಃ ಸದಾ ।
ನ ತಾದೃಶಃ ಕ್ವಚಿದ್ದೋಷಃ ಪುರುಷಸ್ಯಾಸುಖಾವಹಃ ।

ಕೇಶವನ ವಿಷಯದಲ್ಲಿ ಅನ್ಯಥಾ ತಿಳಿಯುವ ಬುದ್ಧಿಯು (ಬುದ್ಧಿಶ್ಚ ಪತ್ನೀ ಸಾ ದ್ವಿರೂಪಾ ಖಗೇಂದ್ರ ಎನ್ನುವ ಗರುಡಪುರಾಣ ವಚನವು ಹೇಳುವಂತೆ) ತ್ರಿಕಾಲದಲ್ಲಿಯೂ ದುಃಖದಾಯಕವಾಗಿ ಜೀವನ ಜೊತೆಗೇ ಇರುವುದರಿಂದ (ಸ್='ಸಹ' ಜೊತೆಗಿರುವುದು, ತ್ರಿ=ತ್ರಿಕಾಲದುಃಖದಾಯಕ, ಸ್ ತ್ರಿ='ಸ್ತ್ರೀ') ಸ್ತ್ರೀ ಎನಿಸುವುದು. 'ಯೋಷಿತ್' ಎಂದೂ ಈ ಅನ್ಯಥಾಬುದ್ಧಿಯು ಕರೆಸಿಕೊಳ್ಳುವುದು. ದೈತ್ಯರು ಮುಂತಾದವರಿಂದ ಅನ್ಯಥಾಬುದ್ಧಿಯು ಹೆಚ್ಚಾಗಿ ಸೇವಿತವಾಗುತ್ತದೆ. ('ಯ' 'ಜ'ಗಳಿಗೆ ಅಭೇದವಿಟ್ಟುಕೊಂಡು ಜುಷೀ ಪ್ರೀತಿ ಸೇವನಯೋಃ ಧಾತುವಿನಿಂದ ಯೋಷಿತ್ ಶಬ್ದ ನಿಷ್ಪತ್ತಿಯನ್ನು ತಿಳಿಯಬೇಕು. ಇದರಿಂದ 'ತಮೋದ್ವಾರಂ ಯೋಷಿತಾಂ ಸಂಗಿಸಂಗಂ' ಎಂದು ಪಂಚಮಸ್ಕಂಧ ವಚನವನ್ನೂ ವ್ಯಾಖ್ಯಾನಿಸಿದಂತಾಯಿತು) ದುರ್ಜನರು 'ವನನ' ಮಾಡುವುದರಿಂದ ಸೇವಿಸುವುದರಿಂದ ಅನ್ಯಥಾಬುದ್ಧಿಯು 'ವನಿತಾ' ಎನಿಸುವುದು. ದೊಡ್ಡವರಲ್ಲಿ ಪ್ರಮಾದ ಉಂಟುಮಾಡುವುದರಿಂದ ಪ್ರಮದಾ ಎಂದೂ ಕರೆಸಿಕೊಳ್ಳುವುದು. ('ಪ್ರ-ಮದ' ಬಹಳ ಅಹಂಕಾರವನ್ನು ಆಮೂಲಕ

ಪ್ರಮಾದವನ್ನು ಉಂಟುಮಾಡುತ್ತದೆ ಎಂದು ವ್ಯುತ್ಪತ್ತಿ) ಹೀಗೆ ಸ್ತ್ರೀ ಯೋಷಿತ್ ವನಿತಾ ಪ್ರಮದಾ ಎಂದು ಮುಂತಾಗಿ ಕರೆಸಿಕೊಳ್ಳುವ ದುರ್ಬುದ್ಧಿ ಎಂಬ ಸ್ತ್ರೀಯ ಸಂಗ ಮಾಡುವವರ ಸಂಗವನ್ನೂ ಕೂಡ ಜ್ಞಾನಸಾಧನೆ ಮಾಡಲು ಬಯಸುವ ಮುಮುಕ್ಷುವು ಯಾವಾಗಲೂ ಬಿಡಬೇಕು. ಜೀವನಿಗೆ ಅದರಷ್ಟು ದುಃಖಕರವಾದ ದೋಷ ಇನ್ನೊಂದಿಲ್ಲ.

ಕ್ಷುದ್ರಪಾಪಾನಿ ಪಾಪಾನಿ ಚೋಪಪಾತಕಪಾತಕೇ ।
ಮಹಾಪಾತಕನಾಮಾನಿ ಸುಮಹಾಪಾತಕಾನ್ಯಪಿ ।
ತಥಾ ಸ್ವತಿಮಹಾಂತಾನಿ ಪಾತಕಾನಿ ವಿದೋ ವಿದುಃ ।

ಕ್ಷುದ್ರ ಪಾಪಗಳು, ಪಾಪಗಳು, ಉಪಪಾತಕಗಳು, ಪಾತಕಗಳು, ಮಹಾಪಾತಕ ಗಳು, ಸುಮಹಾಪಾತಕಗಳು, ಸುಮಹತ್ತರ ಪಾತಕಗಳು, ಸುಮಹತ್ತರ ಮಹಾಪಾತಕಗಳು ಸುಮಹನ್ಮಹತ್ತರ ಮಹಾಪಾತಕಗಳೆಂದು ಒಂಬತ್ತು ಬಗೆಯ ಪಾಪಗಳೆಂದು ಜ್ಞಾನಿಗಳು ತಿಳಿಯುತ್ತಾರೆ.

ಪಿಪೀಲಿಕಾವಧಾದೀನಿ ಕ್ಷುದ್ರಪಾಪೋದಿತಾನಿ ಚ ।
ಪಾಪಮಸ್ಥಿಮತಾಂ ಹತ್ಯಾ ಫಲಚೌರ್ಯಾದಿರೇವ ವಾ ।
ಪರದಾರಾದಿಕಂ ಚಾಪಿ ಹ್ಯುಪಪಾತಕಸಂಜ್ಞಿತಂ ।
ಪಾತಕಂ ಶೂದ್ರಹತ್ಯಾದಿ ಬ್ರಹ್ಮಹತ್ಯಾದಿಕಂ ಮಹತ್ ।
ದೇವಸ್ವಹರಣಾದೀನಿ ಸುಮಹಾಂತಿ ವಿದೋ ವಿದುಃ ।
ದೇವಾವಜ್ಞಾ ಸತಾಂ ಚೈವ ತತೋಽಪಿ ಸುಮಹತ್ತರಾ ।
ಮಹನ್ಮಹತ್ತರಾ ತಸ್ಯಾ ಅವಜ್ಞಾ ಕೇಶವೇ ತು ಯಾ ।

ಇರುವೆ ಮುಂತಾದುವನ್ನು ಕೊಲ್ಲುವುದು. ಕ್ಷುದ್ರ ಪಾಪಗಳು. ಎಲುಬುಳ್ಳ ಪ್ರಾಣಿಗಳನ್ನು ಕೊಲ್ಲುವುದು ಹಣ್ಣು ಕದಿಯುವುದು ಮುಂತಾದವು ಪಾಪಗಳು. ಪರಸತಿಯರ ಸಂಗ ಮಾಡುವುದು ಮುಂತಾದುವು ಉಪಪಾತಕವೆನಿಸುತ್ತವೆ. ಶೂದ್ರಹತ್ಯಾದಿಗಳು ಪಾತಕವೆನಿಸುತ್ತವೆ. ಬ್ರಹ್ಮಹತ್ಯಾದಿಗಳು ಮಹಾಪಾತಕ ವೆನಿಸುತ್ತವೆ. ದೇವಾಲಯದ ಸೊತ್ತುಗಳನ್ನು ಅಪಹರಿಸುವುದು ಮುಂತಾದುವು ಸುಮಹಾಪಾತಕಗಳು. ಋಷ್ಯಾದಿ ಸಜ್ಜನರ ತಿರಸ್ಕಾರ ಸುಮಹತ್ತರಪಾತಕ. ದೇವತೆಗಳ ತಿರಸ್ಕಾರಗಳು ಅವುಗಳಿಗಿಂತ ಸುಮಹತ್ತರ ಮಹಾಪಾತಕವಾಗಿವೆ. ಕೇಶವನ ವಿಷಯದಲ್ಲಿ ತಿರಸ್ಕಾರ ಇನ್ನೂ ಸುಮಹನ್ಮಹತ್ತರ ಮಹಾಪಾತಕವೆನಿಸುತ್ತದೆ.

ಕೇಶವಸ್ಯ ಸಮೋಽಸ್ತೀತಿ ಕೇಶವೋಽಸ್ಮ್ಯಹಮಿತ್ಯಪಿ ।

ಬ್ರಹ್ಮಾದ್ಯಾಃ ಕೇಶವಾತ್ಮಾನಃ ಶ್ರೀರ್ವಾ ನಿರ್ಗುಣ ಇತ್ಯಪಿ ।
ಮುಕ್ತಸ್ಯ ತದ್ಭಾವಮತಿರರೂಪತ್ವಮತಿಸ್ತಥಾ ।
ತ್ರಿಗುಣಾತ್ಮಕದೇಹೋಽಸ್ಯಾಪ್ಯಸ್ತೀತ್ಯಪಿ ತು ಯಾ ಮತಿಃ ।
ಜನ್ಮಮೃತ್ಯಾದಿಬುದ್ಧಿರ್ವಾ ದುಃಖಾಜ್ಞಾನಾದಿಬೋಧನಂ ।
ತಸ್ಯಾಪಿ ಪರತಂತ್ರತ್ವ ವಿಜ್ಞಾನಂ ಚ ತದುತ್ತಮಃ ।
ಅಸ್ತೀತಿ ಯಾ ಮತಿಸ್ತಸ್ಯ ವಶಾದನ್ಯಸ್ಯ ಕಸ್ಯಚಿತ್ ।
ಅಸ್ತೀತಿ ಭಾವನೇತ್ಯಾದ್ಯಾ ಅವಜ್ಞಾಃ ಸಂಪ್ರಕೀರ್ತಿತಾಃ ॥

ಇತಿ ಧರ್ಮವಿವೇಕೇ ॥

ಕೇಶವನಿಗೆ ಸಮಾನನಿದ್ದಾನೆ, ಕೇಶವನು ನಾನೇ, ಬ್ರಹ್ಮಾದಿಗಳು ಕೇಶವ ಸ್ವರೂಪರು, ಲಕ್ಷ್ಮೀದೇವಿ ಕೇಶವ ಸ್ವರೂಪಳು. ಕೇಶವನು ನಿರ್ಗುಣ, ಎಂದು ತಿಳಿಯುವುದು, ಮುಕ್ತನು ಕೇಶವನಾಗುತ್ತಾನೆ ಎನ್ನುವುದು. ಭಗವಂತನಿಗೆ ~~ಆಕಾರವಿಲ್ಲ, ಅವನಿಗೂ ತ್ರಿಗುಣಾತ್ಮಕ ಶರೀರವಿದೆ ಎಂದು ತಿಳಿಯುವುದು,~~ ಅವನಿಗೆ ಜನನ ಮರಣಾದಿಗಳಿವೆ. ದುಃಖ ಅಜ್ಞಾನಾದಿಗಳಿವೆ. ಅವನಿಗೂ ಪಾರತಂತ್ರ್ಯವಿದೆ, ಅವನಿಗಿಂತ ಉತ್ತಮನಿದ್ದಾನೆ ಎನ್ನುವುದು ಅವನ ವಶನಲ್ಲದ ಇನ್ನೊಬ್ಬನ ವಿಷಯದಲ್ಲಿ ಅಂಥವನಿರುವನೆಂಬ ಭಾವನೆ ಇಟ್ಟುಕೊಳ್ಳುವುದು ಇತ್ಯಾದಿಗಳು ಕೇಶವನ ತಿರಸ್ಕಾರಗಳೆನಿಸುತ್ತವೆ ಎಂದು ಧರ್ಮವಿವೇಕ ವಚನವಿದೆ.

ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ ।
ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ॥

ಇತ್ಯಾದಿ ಚ ॥

'ಬಾಧ್ಯಮಾನೋಽಪಿ ಮದ್ಭಕ್ತಃ' ಇತ್ಯಾದಿ ಚ ।

'ನನ್ನ ಮಹಿಮೆಯನ್ನರಿಯದ ಮೂಢರು ನನ್ನನ್ನು ಮನುಷ್ಯ ಶರೀರಧಾರಿ ಎಂದು ತಿರಸ್ಕಾರ ಮಾಡುವರು' ಎಂದು ಗೀತೆಯಲ್ಲಿ ಭಗವಂತನ ವಿಷಯದಲ್ಲಿ ಮಿಥ್ಯಾಜ್ಞಾನವನ್ನಿಟ್ಟುಕೊಳ್ಳುವುದು ಅವನ ತಿರಸ್ಕಾರ ರೂಪವಾಗಿದೆ ಎಂದು ಸ್ಪಷ್ಟ ಹೇಳಿದೆ. ಏಕೆಂದರೆ ಅಲ್ಲಿಯೇ 'ತಾನಹಂ ದ್ವಿಷತಃ ಕ್ರೂರಾನ್' ಎಂದು ಅನರ್ಥ ಉಕ್ತವಾಗಿದೆ.

'ನ ತಥಾಽಸ್ಯ ಭವೇತ್ ಕ್ಲೇಶಃ' ಎಂದು ಭಾಗವತದಲ್ಲಿ ತಮೋಯೋಗ್ಯ ನೆಂದು ನಿಂದಿಸುವುದು ಪರಸ್ತ್ರೀಸಂಗಿಯ ವಿಷಯದಲ್ಲಿ ಅಲ್ಲ. ಏಕೆಂದರೆ 'ಅಪಿ ಚೇತ್ ಸುದುರಾಚಾರಃ' ಪರಸ್ತ್ರೀಸಂಗಾದಿ ದುರಾಚಾರ ಮಾಡಿದವನೂ ಕೂಡ ನನ್ನನ್ನು

ಅನನ್ಯ ಭಕ್ತಿಯಿಂದ ಆರಾಧಿಸಿದರೆ ಮೋಕ್ಷಭಾಗಿಯೇ ಆಗುತ್ತಾನೆ' ಎಂದು ಗೀತೆಯಲ್ಲಿ ಹೇಳಿದೆ. ಭಾಗವತದಲ್ಲಿಯೇ ಹಿಂದೆ 'ಬಾಧ್ಯಮಾನೋಽಪಿ ಮದ್ಭಕ್ತಃ' 'ಪರಸ್ತ್ರೀ ಮುಂತಾದ ವಿಷಯಗಳಿಂದ ಪೀಡಿತನಾಗುವವನೂ ಕೂಡ ನನ್ನಲ್ಲಿ ಒಳ್ಳೆಯ ಭಕ್ತಿ ಇದ್ದರೆ ಅಧಃಪತನ ಹೊಂದುವುದಿಲ್ಲ' ಎಂದು (೧೧.೧೪.೧೮) ಹೇಳಿರುವುದರಿಂದ, ಪರಸ್ತ್ರೀಸಂಗಕ್ಕೆ ತಮಃ ಪ್ರಾಪ್ತಿಫಲವನ್ನು ಈ ಶ್ಲೋಕ ಹೇಳುತ್ತಿಲ್ಲ.

ಪರದಾರದೃಶಿಃ ಪ್ರೋಕ್ತಾ ಕ್ಷುದ್ರಪಾತಕಸಂಜ್ಞಿತಾ ।
ಉಪಪಾತಕಂ ತದ್ಗತಿಶ್ಚ ವರ್ಣಬಾಹ್ಯೇಷು ಪಾತಕಂ ।
ಮಹಾಪಾತಕಸಂಜ್ಞಂ ತು ಪಿತ್ರಾದೇರ್ದಾರಧರ್ಷಣಂ ।
ದಾರದೃಷ್ಟಿಃ ಸ್ವೋತ್ತಮಾನಾಂ ಮಾನುಷಾಣಾಂ ಸ್ವಭಾವತಃ ।
ಸುಮಹಾಪಾತಕಂ ಪ್ರೋಕ್ತಂ ತದ್ಗತಿಃ ಸುಮಹತ್ತತಃ ।
ಋಷಿದಾರೇಷು ಮನಸೋ ಗತಿರೇವ ತತೋಽಧಿಕಾ ।
ದೇವದಾರಾಭಿಕಾಮಾನಾಂ ಸಂಗಿಸಂಗಸ್ತತೋಽಧಿಕಃ ।
ಕಿಮು ವಿಷ್ಣೋಸ್ತತೋ ಯೋಷಿತ್‌ಸಂಗಸ್ಯ ವ್ಯತ್ಯಯಸ್ಥಿತೇಃ ।
ನ ಸಮಂ ಪಾತಕಂ ಕ್ವಾಪಿ ನ ಹಿ ಸ್ವಸ್ತ್ರ್ಯಭಿಕಾಮತಃ ।
ಅವಜ್ಞಾತಾ ಮಾಧವಾದೇಸ್ತಸ್ಮಾತ್ತಂ ದೂರತಸ್ತ್ಯಜೇತ್ ।

ಪರಸ್ತ್ರೀಯರನ್ನು ಕೆಟ್ಟ ದೃಷ್ಟಿಯಿಂದ ನೋಡುವುದು ಕ್ಷುದ್ರಪಾತಕವೆನಿಸುವುದು. ಅವರ ಸಂಗ ಮಾಡುವುದು ಉಪಪಾತಕ. ಬ್ರಾಹ್ಮಣಾದಿ ವರ್ಣ ಬಾಹ್ಯಸ್ತ್ರೀಯರ ಸಂಗವು ಪಾತಕ. ತಂದೆ ಮುಂತಾದ ಹಿರಿಯರ ಪತ್ನಿಯರನ್ನು ಬಲಾತ್ಕರಿಸುವುದು ಮಹಾಪಾತಕ. ಸ್ವಭಾವತಃ ತನಗಿಂತ ಉತ್ತಮರಾದ ಮನುಷ್ಯೋತ್ತಮರ ಪತ್ನಿಯರನ್ನು ಕೆಟ್ಟದೃಷ್ಟಿಯಿಂದ ನೋಡುವುದು ಸುಮಹಾಪಾತಕ ಅವರ ಸಂಗ ಮಾಡುವುದು ಸುಮಹತ್ತರಪಾತಕ. ಋಷಿಪತ್ನಿಯರನ್ನು ಕಾಮಿಸುವುದು ಸುಮಹತ್ತರಮಹಾಪಾತಕ. ದೇವತಾಸ್ತ್ರೀಯರ ಕಾಮನೆ ಸುಮಹತ್ತರ ಮಹತ್ತರಪಾತಕ. ವಿಷ್ಣುಪತ್ನೀ ಕಾಮನೆ ಸುಮಹನ್‌ಮಹತ್ತರಮಹತ್ತರ ಪಾತಕವೆಂದು ಬೇರೇನು ಹೇಳಬೇಕು? ಹೀಗೆ ಶಾಸ್ತ್ರದಲ್ಲಿ ಪರಸ್ತ್ರೀಕಾಮನೆ ಪಾಪಜನಕವೆಂದು ಹೇಳಿರುವುದರಿಂದ ವಿಷ್ಣುಪತ್ನೀ ಕಾಮನೆಗೆ ಸಮಾನವಾದ ಪಾತಕವೆಲ್ಲಿಯೂ ಇಲ್ಲ. ಕೇವಲ ತನ್ನ ಪತ್ನಿಯನ್ನು ಕಾಮಿಸುವುದರಿಂದ ವಿಷ್ಣು ಮುಂತಾದ ಸ್ವೋತ್ತಮರ ತಿರಸ್ಕಾರ ಮಾಡಿದಂತಾಗುವುದಿಲ್ಲ, ಅದರಿಂದ ಪಾಪವಿಲ್ಲ. ಹೀಗಾಗಿ ಸ್ವೋತ್ತಮ ಸ್ತ್ರೀಸಂಗಿಯನ್ನು ದೂರದಿಂದಲೇ ಬಿಡಬೇಕು. ('ಕ್ಷೇಮೇ ವಿವಿಕ್ತೇ ಆಸೀನಃ' ಎಂದರೆ ಸ್ವೋತ್ತಮಸ್ತ್ರೀಸಂಗಿಗಳ ಸಂಗವನ್ನೂ ಅವರ

ಸಂಗಮಾಡುವವರ ಸಂಗವನ್ನೂ ಬಿಟ್ಟು ದೂರದ ಪ್ರದೇಶದಲ್ಲಿ ಕುಳಿತು ಪರಮಾತ್ಮನನ್ನು ಚಿಂತಿಸಬೇಕು ಎಂದಂತಾಯಿತು.)

ಮಾನುಷೇಷು ತು ದುಃಖಿತ್ವಂ ಕ್ಷುದ್ರಪಾಪಫಲಂ ಸ್ಮೃತಂ ।
ಪಾಪಾತ್ತು ವರ್ಣಬಾಹ್ಯತ್ವಂ ತಿರ್ಯಗ್‌ಯೋನಿಗತಿಸ್ತಥಾ ।
ಸಹಸ್ರವರ್ಷನರಕಂ ಕ್ಷುದ್ರಪಾತಕಜಂ ಫಲಂ ।
ಉಪಪಾತಕತಶ್ಚಾಪಿ ನರಕಂ ಯುಗಮಾತ್ರಕಂ ।
ಚತುರ್ಯುಗಾವಸಾನಂ ತು ಪಾತಕಸ್ಯ ಫಲಂ ಸ್ಮೃತಂ ।
ಮಹಾಪಾತಕಜನ್ಯಂ ಚ ಕಲ್ಪಾವಧಿ ಸಮೀರಿತಂ ।
ಸುಮಹಾಪಾತಕಾಚ್ಚಾಪಿ ಯಾವದ್‌ಬ್ರಹ್ಮಲಯೋ ಭವೇತ್ ।
ತತ್ಪರಾಣಾಂ ಪಾತಕಾನಾಂ ಫಲಮಂಧಂತಮಃ ಸ್ಮೃತಂ ।
ಅಧೋಽಧೋ ದುಃಖಬಹುಲಂ ವಿಷ್ಣುದಾರಾಭಿಮರ್ಶನಾತ್ ।
ವಧಾದಪಿ ಹಿ ದಾರಾಣಾಂ ಧರ್ಷಣಂ ಕೋಪಕಾರಣಂ ।
ತಸ್ಮಾದ್ದೇವ್ಯಃ ಸದಾ ವಂದ್ಯಾ ಅಗ್ನಿವನ್ನಾಭಿಕಾಮತಃ ।
ಇತಿ ಧರ್ಮತತ್ತ್ವೇ ॥

ಮನುಷ್ಯಲೋಕದಲ್ಲಿ ದುಃಖಪಡುವುದು ಕ್ಷುದ್ರ ಪಾಪದ ಫಲ. ವರ್ಣಬಾಹ್ಯತ್ವ ಪಶುಜನ್ಮಗಳು ಪಾಪದ ಫಲ. ಒಂದು ಸಾವಿರವರ್ಷ ಕಾಲ ನರಕದುಃಖ ಕ್ಷುದ್ರ ಪಾತಕದ ಫಲ. ಒಂದು ಯುಗಕಾಲ ನರಕ ಉಪಪಾತಕದ ಫಲ. ಚತುರ್ಯುಗ ಪರ್ಯಂತ ನರಕವು ಪಾತಕದ ಫಲ. ಒಂದು ದಿನಕಲ್ಪಕಾಲ ನರಕ ಮಹಾಪಾತಕದ ಫಲ. ಸುಮಹಾಪಾತಕದಿಂದ ಮತ್ತು ಸುಮಹತ್ತರಪಾತಕದಿಂದ ಬ್ರಹ್ಮಲಯ ಪರ್ಯಂತ ನರಕ ಫಲ. ಇದಕ್ಕಿಂತ ಹೆಚ್ಚಿನ ಪಾತಕಗಳಿಗೆ ಅಂಧಂತಮಸ್ಸು ಫಲ. ವಿಷ್ಣುಪತ್ನಿ ಸ್ಪರ್ಶದ ಬಯಕೆಯವರೆಗೆ ಪಾಪದ ಫಲವಾಗಿ ಅಂಧಂತಮಸ್ಸಿನಲ್ಲಿ ಕೆಳಕೆಳಗೆ ಹೋದಷ್ಟು ಹೆಚ್ಚು ದುಃಖವಿರುತ್ತದೆ. ತನ್ನ ಪತ್ನಿಯ ಮೇಲೆ ಬಲಾತ್ಕಾರ ಮಾಡುವುದು ತನ್ನ ವಧೆಗಿಂತಲೂ ಹೆಚ್ಚು ಕೋಪಕ್ಕೆ ಕಾರಣವಾಗುತ್ತದೆ. ಅದರಿಂದ ದೇವಿಯರನ್ನು ಅಗ್ನಿಯಂತೆ ಭಕ್ತಿಯಿಂದ ದೂರದಲ್ಲಿ ವಂದಿಸಬೇಕು ಹೊರತು ಕಾಮಭಾವನೆಯಿಂದ ನೋಡಬಾರದು ಸ್ಪರ್ಶಿಸಬಾರದು ಎಂದು ಧರ್ಮತತ್ವಗ್ರಂಥದಲ್ಲಿ ಹೇಳಿದೆ.

❖❖❖

ಪ್ರಾಣಾಯಾಮದಿಂದ ವಾಯುಜಯವನ್ನು ಸಂಪಾದಿಸುವ ವಿಧಾನವನ್ನು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಏವಂ ಪ್ರಣವಸಂಯುಕ್ತಂ ಪ್ರಾಣಸಂಯಮಮಭ್ಯಸೇತ್ ।
ದಶಕೃತ್ವಸ್ತ್ರಿಷವಣಂ ಮಾಸಾದರ್ವಾಗ್ಜಿತಾನಿಲಃ ॥ ೩೫ ॥

ಹೀಗೆ ಓಂಕಾರೋಚ್ಚಾರಣಯುಕ್ತವಾದ ಸಬೀಜಪ್ರಾಣಾಯಾಮವನ್ನು ಅಭ್ಯಾಸ ಮಾಡಬೇಕು. ಮೂರೂ ಹೊತ್ತು ಹತ್ತು ಪ್ರಾಣಾಯಾಮ ಮಾಡುವುದರಿಂದ ಒಂದು ತಿಂಗಳೊಳಗೆ ಪ್ರಾಣನ ಅನುಗ್ರಹ ಲಭಿಸುವುದು.

ಇಲ್ಲಿ ಜಡವಾದ ವಾಯುವಿನ ಮೇಲೆ ಜಯ ಸಂಪಾದಿಸುವುದೆಂದರೇನು? ಚೇತನವಾಯುವಾದ ಮಹಾಬಲಸ್ವರೂಪನಾದ ಮುಖ್ಯಪ್ರಾಣನ ವಶದಲ್ಲಿ ಅದು ಇದೆ ತಾನೆ? ಮುಖ್ಯಪ್ರಾಣನನ್ನು ವಶಪಡಿಸಿ ಕೊಳ್ಳುವುದಂತೂ ಅಸಾಧ್ಯ. ಈ ವಿಷಯದಲ್ಲಿ ಬೇರೆ ವ್ಯಾಖ್ಯಾನಕಾರರು ವಿಚಾರ ಮಾಡಿಲ್ಲ. ಶ್ರೀಮದಾಚಾರ್ಯರು ಪ್ರಭಂಜನಗ್ರಂಥದ ವಚನವನ್ನು ಉದಾಹರಿಸುತ್ತ ವಿವರಣೆ ನೀಡುತ್ತಾರೆ.

ಉಪಾಸ್ಯ ಪ್ರಾಣತೋಽನುಜ್ಞಾಂ ಹೃದಿಸ್ಥಾತ್ ಪ್ರಾಪ್ಯ ಸೇವತಃ ।
ಅನುಜ್ಞಾನಂತರಂ ಮಾಸಾದ್ ವಶೇ ಪ್ರಾಣೋ ಭವಿಷ್ಯತಿ ।
ಪ್ರಸಾದಭಾಕ್ತ್ವಂ ಸಂಪ್ರೋಕ್ತಂ ಪ್ರಾಣವಿಷ್ಣ್ವೋರ್ಜಯಸ್ತ್ವಿತಿ ।
ನ ಹಿ ಸರ್ವವಿಜೇತಾರೌ ವಿಜೇಯೌ ಕೇನಚಿತ್ ಕ್ವಚಿತ್ ।
ಅಪೇಕ್ಷಿತಂ ಫಲಂ ಯೇನ ದೀಯತೇ ತಜ್ಜಿತಂ ತ್ವಿತಿ ।
ಯಥಾ ಜಿತಾ ವಸುಮತೀ ಯಥಾ ಮೋಕ್ಷಪದಂ ಜಿತಂ ॥
ಇತಿ ಪ್ರಭಂಜನೇ ।

ಪ್ರಾಣಾಯಾಮದಿಂದ ನಿನ್ನನ್ನು ಜಯಿಸಲು ಅನುಜ್ಞೆ ನೀಡೆಂದು ಹೃದಯದಲ್ಲಿರುವ ಮುಖ್ಯಪ್ರಾಣನನ್ನು ಉಪಾಸನೆ ಮಾಡಿ ಪ್ರತ್ಯಕ್ಷವಾಗಿಯೋ ಸ್ವಪ್ನದಲ್ಲಿಯೋ ಅವನ ಅನುಜ್ಞೆ ಪಡೆದ ಬಳಿಕ ಪ್ರಣವ ಯುಕ್ತವಾಗಿ ಮೂರುಹೊತ್ತು ಹತ್ತು ಪ್ರಾಣಾಯಾಮಗಳನ್ನು ಮಾಡುವುದರ ಮೂಲಕ ಪ್ರಾಣನ ಸೇವೆ ಮಾಡುತ್ತಿದ್ದರೆ ತಿಂಗಳೊಳಗೆ ಅವನು ವಶಕ್ಕೆ ಬರುತ್ತಾನೆ. ಅವನು ವಶಕ್ಕೆ ಬರುವುದೆಂದರೆ ಅವನ ಅನುಗ್ರಹಪಾತ್ರನೆನಿಸುವುದೇ ಹೊರತು ಮುಖ್ಯಪ್ರಾಣನೂ ವಿಷ್ಣುವೂ ಸಮಸ್ತ ಪ್ರಪಂಚವನ್ನು ಆಳುವವರಾದ್ದರಿಂದ ಅವರು ಯಾರಿಗೂ ಯಾವಕಾಲಕ್ಕೂ ವಶಕ್ಕೆ ಬರುವವರಲ್ಲ. ಯಾವುದು ತನಗೆ ಇಷ್ಟವಾದ ಫಲವನ್ನು ಕೊಡುವುದೋ ಅದು ಆತನಿಂದ ಜಿತವಾಯಿತೆಂದು ವ್ಯವಹಾರವಿದೆ. ಭೂಮಿ ಜಿತವಾಯಿತೆಂದರೆ

ಭೂಮಿ ಇಷ್ಟವಾದುದನ್ನೆಲ್ಲ ಕೊಡುತ್ತಿದೆ ಎಂದರ್ಥ. ಮೋಕ್ಷಪದವಿ ಜಿತವಾಗುವುದೆಂದರೆ ಅದು ಇಷ್ಟವಾದ ಸ್ವರೂಪಾನಂದವನ್ನು ಕೊಡುವು ದೆಂದರ್ಥ. ಹಾಗೆಯೇ ವಾಯು ಜಿತನಾಗುವುದೆಂದರೆ ವಾಯುವು ಪ್ರೀತಿಯಿಂದ ಸೇವಕನಿಗೆ ಅವನಿಗಿಷ್ಟವಾದುದನ್ನು ಕೊಡುವುದೆಂದರ್ಥ ಎಂದು ಪ್ರಭಂಜನ ಗ್ರಂಥದಲ್ಲಿದೆ.

❖❖❖

ಧ್ಯಾನದಿಂದ ಸಮಾಧಿಯತ್ತ ಸಾಧಕನು ಹೋಗುವ ವಿಧಾನವನ್ನು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ತತ್ಸರ್ವಂ ವ್ಯಾಪಕಂ ಚಿತ್ತಮಾಕೃಷ್ಯೈಕತ್ರ ಧಾರಯೇತ್ ।
ನಾನ್ಯಾನಿ ಚಿಂತಯೇದ್ಭೂಯಃ ಸುಸ್ಮಿತಂ ಭಾವಯೇನ್ಮುಖಮ್ ॥ ೪೩ ॥

ಸರ್ವಾಂಗಧ್ಯಾನ ಅಶಕ್ಯವೆನಿಸಿದರೆ ಸರ್ವಾಂಗಗಳಲ್ಲಿ ವ್ಯಾಪಿಸಿದ ಮನಸ್ಸನ್ನು ಸೆಳೆದು ಒಂದೊಂದು ಅವಯವದಲ್ಲಿ ತಂದು ನಿಲ್ಲಿಸಬೇಕು. ಆಗ ಬೇರೆ ಅವಯವಗಳನ್ನು ಚಿಂತಿಸಬಾರದು. ಪುನಃಪುನಃ ಸುಂದರಮಂದಹಾಸವನ್ನು ಸೂಸುವ ನನ್ನ ಮುಖವನ್ನು ಧ್ಯಾನಿಸಬೇಕು.

ತತ್ರ ಲಬ್ಧಪದಂ ಚಿತ್ತಮಾಕೃಷ್ಯ ವ್ಯೋಮ್ನಿ ಧಾರಯೇತ್ ।
ತಚ್ಚ ತ್ಯಕ್ತ್ವಾ ಮದಾರೋಹೋ ನ ಕಿಂಚಿದಪಿ ಚಿಂತಯೇತ್ ॥ ೪೪ ॥

ಮುಖ ಮುಂತಾದ ಒಂದೊಂದು ಅವಯವಧ್ಯಾನ ಸುಲಭವಾದಾಗ ಮನಸ್ಸನ್ನು ಸೆಳೆದು 'ವ್ಯೋಮ್ನಿ' ಸರ್ವಾಂಗದಲ್ಲಿ ಇರಿಸಬೇಕು. ಮನಸ್ಸು ತಾನಾಗಿ ಅಲ್ಲಿಯೇ ನಿಲ್ಲುವಂತಾದರೆ ನಿಲ್ಲಿಸುವ ಪ್ರಯತ್ನವನ್ನು ಕೈಬಿಡಬೇಕು. ಬೇರೆ ಏನನ್ನೂ ಚಿಂತಿಸಬಾರದು.

[1]ಪರಮಾತ್ಮನ ಬೇರೆ ಅವಯವಗಳನ್ನು ಬಿಟ್ಟು ಮುಖ ಒಂದನ್ನೇ ಧ್ಯಾನ ಮಾಡಿದ ಬಳಿಕ ಅದನ್ನೂ ಬಿಟ್ಟು ಸರ್ವ ಕಾರಣನಾದ ಪರಮಾತ್ಮನಲ್ಲಿ ಮನಸ್ಸನ್ನು ನೆಲೆಗೊಳಿಸಬೇಕು. ಬಳಿಕ ಕಾರಣತ್ವವನ್ನೂ ಬಿಟ್ಟು ಶುದ್ಧಬ್ರಹ್ಮನನ್ನೇ ಚಿಂತಿಸಬೇಕು. ನಾನು ಧ್ಯಾನ ಮಾಡುವವನು ಬ್ರಹ್ಮ ಧ್ಯೇಯ ಎಂಬ ವ್ಯತ್ಯಾಸವನ್ನೂ ಚಿಂತಿಸಬಾರದು.

---

1. ವ್ಯೋಮ್ನಿ ಸರ್ವಕಾರಣರೂಪೇ । ತಚ್ಚ ಕಾರಣತ್ವಮಪಿ ತ್ಯಕ್ತ್ವಾ ಮದಾರೋಹೋ ಮಯಿ ಶುದ್ಧೇ ಬ್ರಹ್ಮಣ್ಯಾರೂಢಃ ಸನ್ ಕಿಂಚಿದ್ ಧ್ಯಾತೃಧ್ಯೇಯವಿಭಾಗಮಪಿ ನ ಚಿಂತಯೇತ್ ।
-ಶ್ರೀಧರಃ

ಎಂದು ಶ್ರೀಧರವ್ಯಾಖ್ಯಾನ ಹೇಳಿದೆ.

ಆದರೆ 'ನಿರ್ವಿಶೇಷಂ ಪರಂ ಬ್ರಹ್ಮ ಸಾಕ್ಷಾತ್‌ಕರ್ತುಮನೀಶ್ವರಾಃ' ಎಂದು ಶುದ್ಧವಾದ ನಿರಾಕಾರ ಬ್ರಹ್ಮನನ್ನು ಧ್ಯಾನಮಾಡಿ ಸಾಕ್ಷಾತ್ಕರಿಸಿಕೊಳ್ಳಲು ಕೈಲಾಗದವರು ಮೊದಲಿಗೆ ಸಾಕಾರ ಧ್ಯಾನ ಮಾಡಬೇಕು ಎಂದು ಅದ್ವೈತಮತ. ಅದರಿಂದ ಪರಮಾತ್ಮನ ಅವಯವ ಚಿಂತನೆ ಮಾಡಬೇಕು. ಕಾರಣತ್ವವನ್ನು ಚಿಂತನ ಮಾಡಬೇಕು ಬಳಿಕ ಎಲ್ಲವನ್ನೂ ಬಿಟ್ಟು ನಿರಾಕಾರ ಧ್ಯಾನ ಮಾಡಬೇಕು ಎಂದರೆ ಇದು ಅಶಕ್ಯ. ಆಕಾರಧ್ಯಾನ ಮಾಡಿ ಮಾಡಿ ಗಾಢವಾದ ಸಂಸ್ಕಾರವನ್ನು ಪಡೆದ ಬಳಿಕ ಆ ಸಂಸ್ಕಾರ ಬಲದಿಂದ ಆಕಾರವನ್ನೇ ಚಿಂತಿಸುತ್ತಾನೆ, ಹೊರತು, ಅದಕ್ಕೆ ವಿರುದ್ಧವಾದ ನಿರಾಕಾರವನ್ನು ಧ್ಯಾನ ಮಾಡುವುದು ಸಾಧ್ಯವಿಲ್ಲ.

[2]ಸುದರ್ಶನಸೂರಿಯ ವ್ಯಾಖ್ಯಾನವೂ ಅವಯವಧ್ಯಾನ ಮಾಡಿದ ಬಳಿಕ ಅದನ್ನು ಬಿಟ್ಟು ಆಕಾಶದಂತೆ ನಿರಾಕಾರವಾದ ಶುದ್ಧ ಸ್ವರೂಪಧ್ಯಾನ ಮಾಡಬೇಕೆನ್ನುತ್ತದೆ. ಅದು ಅಶಕ್ಯ. ಧ್ಯೇಯವಾದ ಆಕಾರವಿಲ್ಲದೆ ಧ್ಯಾನ ಎಂಬುದು ~~ಅಸಂಭವ. ಧ್ಯಾನಕ್ರಿಯೆಯನ್ನು ಚಿಂತಿಸಬಾರದೆನ್ನುತ್ತದೆ. ಅದು ಗಾಯತ್ರಿಗೆ,~~ ಗಾಯತ್ರಿಯ ಭಾಷ್ಯರೂಪವಾದ ಭಾಗವತಕ್ಕೇ ವಿರುದ್ಧ. ಗಾಯತ್ರಿಯಲ್ಲಿ 'ಧೀಮಹಿ' ಎಂದಿದೆ. ಧ್ಯಾನಕ್ರಿಯೆಯನ್ನೂ ಕೂಡ ಧ್ಯಾನಿಸಬೇಕು. ಅದಕ್ಕೇ 'ಸತ್ಯಂ ಪರಂ ಧೀಮಹಿ' ಎಂದು ಭಾಗವತವೂ ಮಂಗಳಾಚರಣೆಯಲ್ಲಿಯೇ ಹೇಳಿದೆ.

ಮುಂದಿನ ಶ್ಲೋಕದಲ್ಲಿ 'ಆತ್ಮಾನಮಾತ್ಮನಿ' ತನ್ನನ್ನೂ ತನ್ನ ಹೃದಯದಲ್ಲಿ ಪರಮಾತ್ಮನನ್ನೂ ಧ್ಯಾನಮಾಡಿ ಸಾಕ್ಷಾತ್ಕರಿಸಿಕೊಳ್ಳಬೇಕೆಂದು ಹೇಳಿರುವುದರಿಂದ ತನ್ನ ಹೃದಯವನ್ನೂ ಅವಶ್ಯ ಧ್ಯಾನಿಸಬೇಕು. ಬಿಡುವಂತಿಲ್ಲ.

[3]ಶುಕದೇವವ್ಯಾಖ್ಯಾನದಲ್ಲಿ 'ಆಕಾಶದಂತೆ ಸೂಕ್ಷ್ಮವಾದ ಭಗವಂತನ ಸ್ವರೂಪವನ್ನು ಧ್ಯಾನಮಾಡಬೇಕು. ಬಳಿಕ ಧ್ಯಾನವನ್ನೂ ಬಿಟ್ಟು ಏನನ್ನೂ ಚಿಂತಿಸದೆ ಧ್ಯಾನ ಜನ್ಯವಾದ ಆನಂದವನ್ನು ಅನುಭವಿಸಬೇಕು' ಎಂದಿದೆ. ಧ್ಯಾನವನ್ನು ಬಿಟ್ಟು ಧ್ಯಾನಾನಂದವನ್ನು ಅನುಭವಿಸುವುದೆಂದರೆ ನಿದ್ದೆಯನ್ನು ಬಿಟ್ಟು ನಿದ್ರಾಸುಖವನ್ನು

---

2. ತತ್ರವಿಗ್ರಹೇ ಲಬ್ಧ ಪದಮಿತ್ಯನ್ವಯಃ । ವ್ಯೋಮ್ನಿ ವ್ಯೋಮವದಪರಿಚ್ಛಿನ್ನೇ ದಿವ್ಯಾತ್ಮಸ್ವರೂಪೇ ಕಂ ಬ್ರಹ್ಮ ಖಂ ಬ್ರಹ್ಮೇತಿ ಹಿ ಶ್ರುತಿಃ ಮದಾರೋಹಃ ಮತ್ ಸ್ವರೂಪಾನುಸಂಧಾನ ನಿಷ್ಠಃ ತಚ್ಚ ಧಾರಣಮಪಿ ತ್ಯಕ್ತ್ವಾ ನ ಕಿಂಚಿದಪಿ ಚಿಂತಯೇತ್ । ಸಮಾಧೌ ಧ್ಯೇಯಮೇವ ಪಶ್ಯತಿ ಧ್ಯಾನ ಕ್ರಿಯಾಮಪಿ ನ ಜಾನಾತಿ ಕುತೋ ವಿಷಯಾಂತರ ಜ್ಞಾನ ಮಿತ್ಯರ್ಥಃ । -ಸುದರ್ಶನಃ
3. ಚಿತ್ತಂ ವ್ಯೋಮ್ನಿ ವ್ಯೋಮವತ್ ಸೂಕ್ಷ್ಮಸ್ವರೂಪೇ ಧಾರಯೇತ್ । ತಚ್ಚ ಸ್ವರೂಪಧ್ಯಾನಮಪಿ ತ್ಯಕ್ತ್ವಾ ಕಿಂಚಿದಪಿ ನ ಚಿಂತಯೇತ್ । ಧ್ಯೇಯದರ್ಶನ ಜನ್ಯಾನಂದ ಸಂಪ್ಲವೇ ನಿಮಗ್ನೋ ಭವೇದಿತ್ಯರ್ಥಃ । -ಶುಕದೇವಃ

ಅನುಭವಿಸುವಂತೆಯೇ ಅಸಂಭವ.

ಶ್ರೀಮದಾಚಾರ್ಯರು ಹೇಳುತ್ತಾರೆ. ಪ್ರಯತ್ನ ಪೂರ್ವಕವಾಗಿ ಏಕಾಗ್ರತೆಯಿಂದ ಚಿಂತಿಸುವುದು ಧ್ಯಾನ. ಅದರ ಅಭ್ಯಾಸದ ಬಲದಿಂದ ಮನಸ್ಸು ಅಪ್ರಯತ್ನವಾಗಿ ಧ್ಯೇಯದಲ್ಲಿ ಕೇಂದ್ರೀಕೃತವಾಯಿತೆಂದರೆ ಅದು ಸಮಾಧಿ ಎನಿಸುತ್ತದೆ. ನಿಶ್ಚಲವಾದ ಸಮಾಧಿ ಲಭಿಸಿರುವಾಗ ಮತ್ತೆ ನಿಶ್ಚಲತೆಗೆ ಪ್ರಯತ್ನಿಸ ಬಾರದು. ಪ್ರಯತ್ನಿಸಿದರೆ ಆ ಪ್ರಯತ್ನದಿಂದಲೆ ಮನಸ್ಸು ಚಲಿಸಬಹುದು. ಮತ್ತು ಈ ನಿಶ್ಚಲ ಸಮಾಧಿಯು ಕೆಡದಿರಬೇಕಾದರೆ ಮನಸಿನ ಏಕಾಗ್ರತೆಗೆ ಭಂಗ ತರುವಂಥ ಯಾವುದೇ ಪದಾರ್ಥ ಚಿಂತನೆ ಮಾಡುವುದನ್ನೂ ಬಿಡಬೇಕು ಎಂದು.

ವ್ಯೋಮ ಎಂದರೆ ಆಕಾಶದಂತೆ ನಿರಾಕಾರ ಎಂದರ್ಥವಲ್ಲ, ವ್ಯಾಪಕ ಎಂದರ್ಥ. ಪರಮಾತ್ಮನ ಒಂದೊಂದು ಅವಯವವೂ ಸ್ವತಃ ಅಪರಿಮಿತವಾಗಿ ವ್ಯಾಪಿಸಿದ್ದರೂ ಅಚಿಂತ್ಯಶಕ್ತಿಯಿಂದ ಪರಿಮಿತವಾಗಿಯೂ ಇರುತ್ತದೆ. ನಮ್ಮ ಒಂದು ಅವಯವಕ್ಕಿಂತ ಸರ್ವಾಂಗಯುಕ್ತವಾದ ನಮ್ಮ ಶರೀರ ಹೆಚ್ಚು ವ್ಯಾಪಕವಾಗಿರುವುದ ~~ರಿಂದ ವ್ಯಾಪಕ ಎಂಬ ಅರ್ಥದ ವ್ಯೋಮಶಬ್ದದಿಂದ ಸರ್ವಾಂಗಯುಕ್ತವಾದ~~ ಭಗವಂತನ ಶರೀರ ವಿವಕ್ಷಿತವಾಗಿದೆ. ಮನಸಿನ ಏಕಾಗ್ರತೆಯನ್ನು ಅಭ್ಯಾಸ ಮಾಡಲು ಒಂದೊಂದು ಅವಯವ ಧ್ಯಾನ ಮಾಡಿದರೂ ಆ ಏಕಾಗ್ರತೆ ಲಭಿಸಿದ ಬಳಿಕ ಅವಯವ ಧ್ಯಾನವನ್ನು ಬಿಟ್ಟು ಸರ್ವಾಂಗ ಧ್ಯಾನಕ್ಕೇ ತೊಡಗಬೇಕು. ಸರ್ವಾಂಗದಲ್ಲಿ ಸ್ಥಿರವಾದ ಏಕಾಗ್ರತೆ ಬಂದಿತೆಂದರೆ ಏಕಾಗ್ರತೆಗೆ ಪ್ರಯತ್ನ ಮಾಡುವುದನ್ನು ಕೈಬಿಡ ಬೇಕು. ಮತ್ತು ಏಕಾಗ್ರತೆಗೆ ಧ್ಯಾನಕ್ಕೆ ಭಂಗ ತರುವ ಯಾವುದನ್ನೂ ಚಿಂತಿಸಬಾರದು.

ಧ್ಯಾನಕ್ರಿಯೆಯನ್ನು ಚಿಂತಿಸಿದರೆ ಧ್ಯಾನಕ್ಕೆ ಭಂಗ ಬರುವುದಿಲ್ಲ.

ವ್ಯೋಮೇತಿ ವ್ಯಾಪ್ತಶಬ್ದಃ ಸ್ಯಾದ್ ವಿಶೇಷಾದೋತತಾ ಯತಃ ।

ಇತಿ ಶಬ್ದನಿರ್ಣಯೇ ।

ವ್ಯೋಮ್ನಿ ಧಾರಯೇತ್ ಸರ್ವಾಂಗೇಷು ಧಾರಯೇದಿತ್ಯರ್ಥಃ
ತಚ್ಚ ಧಾರಣಂ ತ್ಯಕ್ತ್ವಾ ಸ್ವತ ಏವ ಮನಸಸ್ತತ್ರೈವ
ಸಮಾಹಿತತ್ವಾದನ್ಯತ್ ಕಿಮಪಿ ನ ಚಿಂತಯೇತ್ ॥

'ವಿ–ಓಮ' ವಿಶೇಷವಾಗಿ ವ್ಯಾಪ್ತಿಯಿರುವ ಕಾರಣ ವ್ಯೋಮಶಬ್ದವು ವ್ಯಾಪ್ತ ಎಂದು ಅರ್ಥವನ್ನು ಹೇಳುತ್ತದೆ ಎಂದು ಶಬ್ದನಿರ್ಣಯದಲ್ಲಿದೆ. ಅದರಿಂದ 'ವ್ಯೋಮ್ನಿ ಧಾರಯೇತ್' ಎಂದರೆ ಏಕಾವಯವಕ್ಕಿಂತ ಹೆಚ್ಚು ವ್ಯಾಪ್ತವಾಗಿರುವ

ಸರ್ವಾಂಗದಲ್ಲಿ ಮನಸ್ಸಿಡಬೇಕೆಂದರ್ಥ. ಮನಸ್ಸಿಗೆ ಸ್ವತಃ ಸರ್ವಾಂಗದಲ್ಲಿ ಏಕಾಗ್ರತೆ ಹೊಂದುವ ಸಾಮರ್ಥ್ಯ ಬಂದಿತೆಂದರೆ ಅದಕ್ಕೆ ಪ್ರಯತ್ನ ಮಾಡುವುದನ್ನು ಕೈಬಿಡಬೇಕು, ಧ್ಯಾನಕ್ಕೆ ಭಂಗ ತರುವ ಬೇರೆ ವಿಷಯಗಳ ಚಿಂತನೆ ಮಾಡದಿರಬೇಕು.

ಯಾವತ್ ಸಮಗ್ರ ಸ್ಮರಣಮಚಲಂ ಕೇಶವೇ ಭವೇತ್ ।
ಸಮಗ್ರಂ ಚಿಂತಯೇತ್ ತಾವದ್ ಯದಾ ತು ವಿಚಲೇತ್ತತಃ ।
ಪ್ರತ್ಯಂಗಂ ಧಾರಣಂ ಕುರ್ಯಾನ್ಮನೋ ಯಾವತ್ ಸಮಗ್ರಗಂ ।
ಪ್ರತ್ಯಂಗಾಭ್ಯಾಸತೋ ಯಾವತ್ ಸಮಗ್ರೇ ಸುಸ್ಥಿರಂ ಮನಃ ।
ತದಾ ಪುನಃ ಸಮಗ್ರಂ ತು ಧಾರಯೇದ್ಯತ್ನತೋ ಬುಧಃ ।
ಯದಾ ತು ಧಾರಣೋತ್ಸಾಹಂ ವಿನಾ ತತ್ರಾಚಲಂ ಮನಃ ।
ತಿಷ್ಠೇತ್ ತ್ಯಕ್ತ್ವಾ ತಮುದ್ಯೋಗಂ ಶಂಖಚಕ್ರಾಂಬುಜಾಂಕಿತೇ ।
ಆರೂಢಚೇತಾಃ ಪರಮೇ ಶೃಂಗಾರಾದ್ಯೇಕಧಾಮನಿ ।
ನೈವಾನ್ಯಚ್ಚಿಂತಯೇತ್ ತಸ್ಮಾತ್ ಪೂರ್ಣಾನಂದಾಚ್ಚತುರ್ಭುಜಾತ್ ।
ಯತೋಽನ್ಯಸ್ಮರಣೇ ತಸ್ಮಾನ್ಮನಶ್ಚಲತಿ ಸುಸ್ಥಿರಂ ।
ಧಾರಣಾರ್ಥಪ್ರಯತ್ನೇನ ತಸ್ಮಾತ್ ತದುಭಯಂ ತ್ಯಜೇತ್ ।
ಯಾವತ್ಸ್ವಾರೂಢಚೇತಾಃ ಸ್ಯಾದ್ವಿಷ್ಣೋ ರೂಪೇ ಚತುರ್ಭುಜೇ ॥
ಇತಿ ಧ್ಯಾನಯೋಗೇ ॥

ಪರಮಾತ್ಮನಲ್ಲಿ ಎಷ್ಟು ಅವಯವಗಳನ್ನು ಪೂರ್ತಿಯಾಗಿ ನಿಶ್ಚಲವಾಗಿ ಚಿಂತಿಸಲು ಶಕ್ಯವಿದೆಯೋ ಅಷ್ಟು ಅವಯವಗಳನ್ನು ಪೂರ್ತಿಯಾಗಿ ಚಿಂತಿಸಬೇಕು. ಮನಸು ವಿಚಲಿತವಾದರೆ ಅದು ಎಲ್ಲಿಯವರೆಗೆ ಸಮಗ್ರ ಅವಯವಗಳಲ್ಲಿ ನೆಲೆನಿಲ್ಲಲು ಸಮರ್ಥವಾಗುವುದೋ ಅಲ್ಲಿಯವರೆಗೆ ಒಂದೊಂದು ಅವಯವ ಚಿಂತನೆಗೆ ಯತ್ನ ಮಾಡಬೇಕು. ಒಂದೊಂದು ಅವಯವ ಧ್ಯಾನದ ಅಭ್ಯಾಸದಿಂದ ಮನಸ್ಸು ಸಮಗ್ರ ಅವಯವದಲ್ಲಿ ಸ್ಥಿರವಾಗಿ ನಿಲ್ಲಲು ಶಕ್ತವಾದರೆ ಆಗ ಪುನಃ ಪ್ರಯತ್ನಪಟ್ಟು ಸಮಗ್ರ ಅವಯವ ಧ್ಯಾನ ಮಾಡಬೇಕು. ಯಾವಾಗ ಪ್ರಯತ್ನವಿಲ್ಲದೇ ಮನಸ್ಸು ಸಮಗ್ರಾವಯವದಲ್ಲಿ ಏಕಾಗ್ರತೆ ಹೊಂದುವುದೋ ಆಗ ಪ್ರಯತ್ನವನ್ನು ಕೈಬಿಡಬೇಕು. ಶಂಖ ಚಕ್ರ ಪದ್ಮ ಲಕ್ಷಣಗಳಿಂದೊಪ್ಪುವ ಸೌಂದರ್ಯ ಮುಂತಾದ ಗುಣಗಳಿಗೆ ಮುಖ್ಯ ಆಶ್ರಯನಾದ ಪರಮಾತ್ಮನಲ್ಲಿ ಮನಸ್ಸಿಟ್ಟು ಪೂರ್ಣಾನಂದನಾದ ಚತುರ್ಭುಜನಾದ ಆ ಪರಮಾತ್ಮನಿಗಿಂತ ಬೇರೇನನ್ನು ಚಿಂತಿಸಬಾರದು. ಏಕೆಂದರೆ ಬೇರೆ ವಿಷಯವನ್ನು ಚಿಂತಿಸಿದರೆ ಪರಮಾತ್ಮನಲ್ಲಿ

ಬಲು ಸ್ಥಿರವಾಗಿ ನಿಂತಿದ್ದ ಮನಸ್ಸು ಪುನಃ ಚಲಿಸುತ್ತದೆ. ಪರಮಾತ್ಮನಲ್ಲಿ ಮನಸ್ಸು ಸ್ಥಿರವಾಗಿ ನಿಂತಿರುವಾಗ ಪುನಃ ಏಕಾಗ್ರತೆಗೆ ಪ್ರಯತ್ನ ಮಾಡಿದರೂ ಆ ಪ್ರಯತ್ನದಿಂದ ಮನಸ್ಸು ವಿಚಲಿತವಾಗುತ್ತದೆ. ಅದರಿಂದ ಚತುರ್ಭುಜವಾದ ವಿಷ್ಣುರೂಪದಲ್ಲಿ ಏಕಾಗ್ರಮನಸ್ಸಿನವನಾಗಿರುವಷ್ಟು ಕಾಲ ಬೇರೆ ವಿಷಯಗಳ ಚಿಂತನೆಯನ್ನೂ ಏಕಾಗ್ರತೆಗೆ ಪ್ರಯತ್ನವನ್ನೂ ಎರಡನ್ನೂ ಬಿಟ್ಟುಬಿಡಬೇಕು ಎಂದು ಧ್ಯಾನಯೋಗದಲ್ಲಿ ಹೇಳಿದೆ.

❖❖❖

ಧ್ಯಾನದಿಂದ ಸಾಕ್ಷಾತ್ಕಾರ ಲಭಿಸುವುದೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಏವಂ ಸಮಾಹಿತಮತಿರ್ಮಾಮೇವಾತ್ಮಾನಮಾತ್ಮನಿ ।
ವಿಚಷ್ಟೇ ಮಯಿ ಸರ್ವಾತ್ಮನ್ ಜ್ಯೋತಿರ್ಜ್ಯೋತಿಷಿ ಸಂಯುತಮ್ ॥೪೫॥

ಹೀಗೆ ಧ್ಯಾನಪರಿಪಾಕವನ್ನು ಹೊಂದಿದವನು ಸ್ವಾಮಿಯಾದ ನನ್ನನ್ನೇ ಸ್ವರೂಪ ಹೃದಯ ಬಾಹ್ಯಹೃದಯಗಳಲ್ಲಿ ಪ್ರತ್ಯಕ್ಷ ಕಾಣುವನು. ಸ್ವಪ್ರಕಾಶವಾದ ತನ್ನ ಸ್ವರೂಪವು ಸರ್ವಾಂತರ್ಯಾಮಿ ಜ್ಯೋತಿರೂಪನಾದ ನನ್ನಲ್ಲಿ ಆಶ್ರಯಿಸಿರುವುದನ್ನು ನೋಡುವನು.

[1]ಪರಮಾತ್ಮಸ್ವರೂಪವನ್ನು ಜೀವಸ್ವರೂಪದಲ್ಲಿ ಜೀವಸ್ವರೂಪವನ್ನು ಪರಮಾತ್ಮ ಸ್ವರೂಪದಲ್ಲಿ ಒಂದು ಬೆಳಕು ಇನ್ನೊಂದು ಬೆಳಕಿನಲ್ಲಿ ಸೇರಿರುವಂತೆ ಕಾಣಬೇಕು ಎಂದು ಶ್ರೀಧರವ್ಯಾಖ್ಯಾನ ರಾಧಾರಮಣ ವ್ಯಾಖ್ಯಾನಗಳು ಹೇಳುತ್ತವೆ. ಹೀಗೆಯೇ ಸುದರ್ಶನಸೂರಿ ವೀರರಾಘವ ವ್ಯಾಖ್ಯಾನಗಳೂ ಹೇಳುತ್ತವೆ.

ಅದ್ವೈತದಲ್ಲಿ ಧ್ಯಾನದಿಂದ ಸಾಕ್ಷಾತ್ಕಾರವಾಗುವುದಿಲ್ಲ. ಧ್ಯಾನವಾದ ಬಳಿಕ ಪುನಃ ತತ್ವಮಸಿ ಮುಂತಾದ ಮಹಾವಾಕ್ಯಶ್ರವಣ ಮಾಡಿದರೆ ಆಗಲೆ ಸಾಕ್ಷಾತ್ಕಾರವಾಗುವುದು. ವಿಶಿಷ್ಟಾದ್ವೈತದಲ್ಲಿ ಪರಮಾತ್ಮನ ಸಾಕ್ಷಾತ್ಕಾರ ಎಂದೂ ಇಲ್ಲ. ಧ್ಯಾನದಿಂದಲೇ ಮುಕ್ತಿ. ಆದರೆ ಆ ಧ್ಯಾನವು ಸಾಕ್ಷಾತ್ಕಾರದಷ್ಟು ಸ್ಪಷ್ಟವಾಗಬೇಕು ಎನ್ನುತ್ತಾರೆ. ಹೀಗಾಗಿ ಈ ಶ್ಲೋಕದಲ್ಲಿ ಸಮಾಧಿವಿಚಾರವೇ ಮುಂದುವರಿದಿದೆ.

---

1. ಮಾಂ ತತ್ಪದಾರ್ಥಮೇವ ಚಿದ್ರೂಪತ್ವೇನಾನುಗತಮಾತ್ಮನಿ ತ್ವಂಪದಾರ್ಥೇ ವಿಚಷ್ಟೇ ಆತ್ಮಾನಂ ತ್ವಂಪದಾರ್ಥಂ ಚ ಮಯಿ ಜ್ಯೋತಿಃಕಿರಣಮಿವ ಜ್ಯೋತಿಷಿ ಕಿರಣಮಾಲಿನಿ ಸಂಯುತಂ ನಿತ್ಯಾಶ್ರಿತಂ ಚ ವಿಚಷ್ಟೇ । -ರಾಧಾರಮಣಃ
ಸಮಾಧಿದಶಾಯಾಂ ಪರಿಶುದ್ಧೇ ಜೀವಾತ್ಮನಿ ಅಂತರಾತ್ಮತಯಾಽವಸ್ಥಿತ ಏವ ಭಗವಾನನು ಸಂಧೇಯಃ ನತು ಕೇವಲ ಇತ್ಯಾಹ । -ಸುದರ್ಶನಃ

ಮುಂದಿನ ಶ್ಲೋಕದಲ್ಲಿ ಧ್ಯಾನದ ಫಲವಾಗಿ ಪ್ರಪಂಚಭ್ರಮ ನಿವೃತ್ತಿಯನ್ನು ಅದ್ವೈತವೂ, ದೇಹಾತ್ಮ ಭ್ರಮನಿವೃತ್ತಿಯನ್ನು ವಿಶಿಷ್ಟಾದ್ವೈತವೂ ಹೇಳುತ್ತದೆ. ಧ್ಯಾನದಲ್ಲಿ ಅದ್ವೈತವು ಜೀವ ಪರಮಾತ್ಮರಿಗೆ ಐಕ್ಯವನ್ನು ಹೇಳುವುದರಿಂದ ಅಖಂಡ ನಿರ್ವಿಶೇಷವನ್ನು ಮಾತ್ರ ಒಪ್ಪಿದೆ. ಪರಸ್ಪರ ವಿಶೇಷಣ ವಿಶೇಷ್ಯಭಾವವನ್ನು ಅಂದರೆ ಒಂದರಲ್ಲಿ ಇನ್ನೊಂದರಂತೆ ಆಶ್ರಯಿಸಿರುವುದನ್ನು ಒಪ್ಪಿಲ್ಲ. ಆದರೆ ಭಾಗವತವು ಅದನ್ನು ಹೇಳುತ್ತಿದೆ. ವಿಶಿಷ್ಟಾದ್ವೈತದಲ್ಲಿ ಜೀವನು ಅಪೃಥಕ್‌ಸಿದ್ಧ ವಿಶೇಷಣವೇ ಹೊರತು ವಿಶೇಷ್ಯನಲ್ಲ. ಪರಮಾತ್ಮ ವಿಶೇಷ್ಯನೇ ಹೊರತು ವಿಶೇಷಣವಲ್ಲ. ಅದರಿಂದ ಪರಸ್ಪರ ವಿಶೇಷಣ ವಿಶೇಷ್ಯಭಾವವಿಲ್ಲ. ಭಾಗವತ ಅದನ್ನು ಹೇಳುತ್ತದೆ.

ಪರಮಾತ್ಮಾನಂ ಮಾಂ ಸ್ವದೇಹೇ ಪಶ್ಯತಿ ।
ಜೀವಜ್ಯೋತಿರ್ಮಯಿ ಸಂಯುತಂ ಪಶ್ಯತಿ ॥

'ಸಮಾಧಿಯೋಗೇ ಸಂಪೂರ್ಣೇ ಹೃದಿ ಪಶ್ಯಂತಿ ಕೇಶವಂ ।
ಜೀವಂ ತತ್ಪ್ರತಿಬಿಂಬಂ ಚ ತೇನೈವ ಸಹ ಸಂಸ್ಥಿತಂ ।
ತದಾಧಾರಂ ತದಂತಸ್ಥಂ ತೇನೈವ ಸದೃಶಂ ತದಾ ।
ಆನಂದಜ್ಞಾನಶಕ್ತ್ಯಾದ್ಯೈಃ ಸದಾ ತದವರಂ ಗುಣೈಃ ।
ಜೀವನ್ಮುಕ್ತೌ ಚ ಮುಕ್ತೌ ವಾ ಸತತಂ ತದ್ವಶೇ ಸ್ಥಿತಂ'॥ ಇತಿ ।
'ಸ್ವಯಂಪ್ರಕಾಶರೂಪತ್ವಾಜ್ಜೀವೋಽಪಿ ಜ್ಯೋತಿರುಚ್ಯತೇ'
ಇತಿ ಚ ತತ್ವಪ್ರತಿಪತ್ತೌ ॥

ಜೀವನು ಪರಮಾತ್ಮನಾದ ನನ್ನನ್ನು ತನ್ನ ಸ್ವರೂಪದೇಹದಲ್ಲಿಯೂ ಬಾಹ್ಯದೇಹದಲ್ಲಿಯೂ ಅಪರೋಕ್ಷದಿಂದ ಕಾಣುತ್ತಾನೆ. ಚಿನ್ಮಯ ಜ್ಯೋತಿಯಾದ ತನ್ನನ್ನು ನನ್ನಲ್ಲಿ ಕೂಡಿರುವಂತೆಯೂ ಕಾಣುತ್ತಾನೆ ಎಂದರ್ಥ.

ಧ್ಯಾನಯೋಗವು ಪರಿಪಕ್ವವಾದಾಗ ಸ್ವರೂಪಹೃದಯ ಮತ್ತು ಬಾಹ್ಯಹೃದಯಗಳಲ್ಲಿ ಕೇಶವನನ್ನು ಅಪರೋಕ್ಷದಿಂದ ಜೀವರು ಕಾಣುತ್ತಾರೆ. ಅವನ ಪ್ರತಿಬಿಂಬನಾದ ಜೀವನನ್ನೂ ಅವನೊಂದಿಗಿರುವಂತೆ, ಅವನನ್ನಾಶ್ರಯಿಸಿ ಅವನೊಳಗೇ ಸೇರಿಹೋಗಿರುವಂತೆ, ಪ್ರಕಾಶರೂಪತ್ವವಿಷಯದಲ್ಲಿ ಅವನಿಗೆ ಸದೃಶನಾಗಿರುವಂತೆ, ಆನಂದ ಜ್ಞಾನ ಶಕ್ತಿ ಮುಂತಾದ ಗುಣಗಳಲ್ಲಿ ಅವನಿಗಿಂತ ಕಡಿಮೆಯವನಂತೆ ಜೀವನ್ಮುಕ್ತಿಯಲ್ಲಿಯೂ ಮುಕ್ತಿಯಲ್ಲಿಯೂ ಅವನಲ್ಲಿಯೆ, ಅಂದರೆ ಅವನಿಗೆ ಅಧೀನವಾಗಿರುವಂತೆ ಪ್ರತ್ಯಕ್ಷವಾಗಿ ಕಾಣುತ್ತಾನೆ, ಎಂದು ತತ್ವಪ್ರತಿಪತ್ತಿ ಗ್ರಂಥ ವಚನವಿದೆ.

ಸ್ವಯಂಪ್ರಕಾಶರೂಪನಾದ್ದರಿಂದ ಜೀವನೂ ಜ್ಯೋತಿ ಎನಿಸುತ್ತಾನೆ ಎಂದೂ ತತ್ವಪ್ರತಿಪತ್ತಿ ಗ್ರಂಥದಲ್ಲಿ ಹೇಳಿದೆ.

❖❖❖

ಪರಮಾತ್ಮಾಪರೋಕ್ಷದಿಂದ ಅಹಂಕಾರ ಮಮಕಾರ ಯುಕ್ತವಾದ ಬಾಹ್ಯ ಅಂತಃಕರಣ ಆ ದೋಷಗಳಿಂದ ಮುಕ್ತವಾಗುವುದೆಂದು ಶ್ರೀಕೃಷ್ಣ ಉದ್ಧವನಿಗೆ ಉಪದೇಶಿಸುತ್ತಾನೆ.

ಧ್ಯಾನೇನೇತ್ಥಂ ಸುತೀವ್ರೇಣ ಯುಂಜತೋ ಯೋಗಿನೋ ಮನಃ ।
ಸಂಯಾಸ್ಯತ್ಯಾಶು ನಿರ್ವಾಣಂ ದ್ರವ್ಯಜ್ಞಾನಕ್ರಿಯಾಭ್ರಮಃ ॥ ೪೬ ॥

ಹೀಗೆ ಮನಸ್ಸನ್ನು ನನ್ನಲ್ಲಿ ಸೇರಿಸಿ ಅತ್ಯಂತ ತೀವ್ರವಾದ ಅಸಂಪ್ರಜ್ಞಾತ ಸಮಾಧಿಯಿಂದ ಧ್ಯಾನಿಸುವವನಿಗೆ ದೇಹದಲ್ಲಿ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಲ್ಲಿ ನಾನು ನನ್ನದೆಂಬ ಅಹಂಕಾರ ಮಮಕಾರ ಭ್ರಮರೂಪದೋಷಗಳಾಗಿ ಪರಿಣಮಿಸುವ ಬಾಹ್ಯ ಅಂತಃಕರಣ ಬೇಗನೆ ನಾಶಹೊಂದುವುದು, ಅಂದರೆ ಆ ಎಲ್ಲ ದೋಷವಳಿಯುವುದು.

[1]ಧ್ಯಾನದ ಫಲವೇನೆಂದರೆ ಅಧಿಭೂತ ಅಧಿದೈವ ಅಧ್ಯಾತ್ಮರೂಪವಾದ, ದೃಶ್ಯದ್ರಷ್ಟೃ ದರ್ಶನ ರೂಪವಾದ, ದೇಹಾತ್ಮೈಕ್ಯಾಧ್ಯಾಸರೂಪವಾದ ಮತ್ತು ಸ್ವತಂತ್ರಾತ್ಮವಿಷಯಕವಾದ ಭ್ರಮ ನಿವೃತ್ತಿಯಾಗುವುದು ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ.

ಆದರೆ ಈ ಭ್ರಮಗಳು ಯಾವುವೂ ಸ್ಥಾಯಿಯಲ್ಲ, ಪ್ರವಾಹರೂಪದಿಂದ ಮತ್ತೆಮತ್ತೆ ಬರುವುವು. ಧ್ಯಾನಕಾಲದಲ್ಲಿ ಅವು ನಾಶ ಹೊಂದಿದರೂ ಧ್ಯಾನ ಬಿಟ್ಟು ಎದ್ದಾಗ ತಿರುಗಿ ಹುಟ್ಟಿಕೊಳ್ಳುತ್ತವೆ. ಹುಟ್ಟಿಕೊಳ್ಳದಂತಾಗುವುದೇ ಧ್ಯಾನದ; ಧ್ಯಾನದಿಂದ ಲಭಿಸುವ ಅಪರೋಕ್ಷದ ಫಲವೆನ್ನಬೇಕು. ಮನಸಿನಲ್ಲಿ ಈ ಭ್ರಮೆ ಹುಟ್ಟಿಕೊಳ್ಳಲು ಕಾರಣ ರಜಸ್ತಮೋಗುಣಗಳು, ಅವುಗಳನ್ನು ಮನಸಿನಿಂದ ತೊಲಗಿಸಬೇಕು. ಮನಸ್ಸನ್ನು ಸಾತ್ವಿಕವಾಗಿಸಬೇಕು. ಅದಕ್ಕೆ 'ದ್ರವ್ಯಜ್ಞಾನಕ್ರಿಯಾಭ್ರಮಃ ಮನಃ

---

1. ಮನೋ ಯುಂಜತಃ ಸಮಾದಧತಃ ದ್ರವ್ಯಜ್ಞಾನಕ್ರಿಯಾಭ್ರಮೋಽಧಿಭೂತಾಧಿದೈವಾಧ್ಯಾತ್ಮರೂಪೋ ದೃಶ್ಯದ್ರಷ್ಟೃದರ್ಶನ ರೂಪೋ ವಾ ಭ್ರಮೋ ನಿರ್ವಾಣಂ ಶಾಂತಿಂ ಸಮ್ಯಗ್ ಯಾಸ್ಯತೀತಿ । –ಶ್ರೀಧರಃ

ಭೂತೇಂದ್ರಿಯ ಸಂಘಾತ್ಮಕ ದೇಹ ಸಂಬಂಧ ಪ್ರಯುಕ್ತೋ ದೇಹಾತ್ಮಭ್ರಮಃ ಸ್ವತಂತ್ರಾತ್ಮಭ್ರಮಶ್ಚ ಸ ಆಶು ನಿರ್ವಾಣಂ ಲಯಂ ಸಂಯಾಸ್ಯತಿ । -ವೀರರಾಘವಃ

ನಿರ್ವಾಣಂ ಸಂಯಾಸ್ಯತಿ' ಎಂದು ಶ್ಲೋಕದಲ್ಲಿ ಅನ್ವಯ ಮಾಡಿಕೊಂಡು 'ದ್ರವ್ಯಜ್ಞಾನಕ್ರಿಯಾ ವಿಷಯಗಳಲ್ಲಿರುವ ಈ ಭ್ರಮರೂಪವಾದ ಮನಸ್ಸು ನಾಶ ಹೊಂದುತ್ತದೆ' ಅರ್ಥಾತ್ ಮನಸಿಗೆ ಭ್ರಮರೂಪತ್ವ ಇಲ್ಲದಂತಾಗುತ್ತದೆ, ರಜಸ್ತಮೋ ಗುಣರಹಿತವಾಗಿ ಭ್ರಮ ಉಂಟುಮಾಡುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಅಥವಾ ತ್ರಿಗುಣಾತ್ಮಕವಾದ ಪ್ರಾಕೃತ ಅಂತಃಕರಣವೇ ನಾಶವಾಗಿ ಸ್ವರೂಪಾಂತಕರಣ ಒಂದೇ ಕಾರ್ಯ ಮಾಡುತ್ತದೆ ಎಂದು ಅಭಿಪ್ರಾಯವನ್ನು ಹೇಳಬೇಕು.

ದ್ರವ್ಯಜ್ಞಾನಕ್ರಿಯಾವಿಷಯೇ ಭ್ರಮರೂಪಂ ಮನೋ ವಿಲಯಂ ಯಾತಿ ।

> **ಧ್ಯಾನದ ಫಲವಾಗಿ ಸಾಕ್ಷಾತ್ಕಾರವಾದಾಗ ದೇಹ-ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳ ವಿಷಯದಲ್ಲಿರುವ ಭ್ರಮರೂಪವಾದ ಪ್ರಾಕೃತ ಅಂತಃಕರಣವು ನಾಶವಾಗುವುದು ಎಂದರ್ಥ.**

ಕೆಲವೆಡೆ ತಾತ್ಪರ್ಯಪಾಠದಲ್ಲಿ ಹಿಂದಿನ ಶ್ಲೋಕದ ತಾತ್ಪರ್ಯದಲ್ಲಿರುವ ~~'ತತ್ತ್ವಪ್ರತಿಪತ್ತೌ' ಎಂಬುದು 'ದ್ರವ್ಯಜ್ಞಾನಕ್ರಿಯಾವಿಷಯೇ' ಎಂಬುದರೊಡನೆ ಸೇರಿ~~ ಒಂದೇ ವಾಕ್ಯವಾಗಿರುವಂತೆ ಕಾಣುತ್ತದೆ.

'ಜೀವೋಽಪಿ ಜ್ಯೋತಿರುಚ್ಯತೇ ಇತಿ ಚ ತತ್ತ್ವಪ್ರತಿಪತ್ತೌ'

ಎಂಬಲ್ಲಿ ವಾಕ್ಯಪೂರ್ತಿ ಎಂದು ಗ್ರಹಿಸುವ ಪಕ್ಷದಲ್ಲಿ 'ತತ್ತ್ವಪ್ರತಿಪತ್ತೌ' ಎಂದರೆ 'ತತ್ತ್ವಪ್ರತಿಪತ್ತಿ ಎಂಬ ಗ್ರಂಥದಲ್ಲಿ ಉಕ್ತವಾಗಿದೆ' ಎಂದರ್ಥ. 'ದ್ರವ್ಯಜ್ಞಾನಕ್ರಿಯಾ ವಿಷಯೇ' ಎಂಬುದರೊಡನೆ ಅನ್ವಯಿಸುವ ಪಕ್ಷದಲ್ಲಿ 'ತತ್ತ್ವಪ್ರತಿಪತ್ತೌ' ಎಂದರೆ ಜೀವನಿಗೆ ತತ್ತ್ವಜ್ಞಾನೋದಯವಾದಾಗ' ಎಂದರ್ಥ. 'ತಾನು ಅಸ್ವತಂತ್ರ, ಹರಿಯೇ ಸ್ವತಂತ್ರ' ಎನ್ನುವ ಸಾಕ್ಷಾತ್ಕಾರ ರೂಪವಾದ ಜ್ಞಾನ ಬಂದಾಗ ಮನಸಿನಲ್ಲಿರುವ ರಜಸ್ತಮೋಗುಣನಾಶದಿಂದ ಅಹಂಕಾರ ಮಮಕಾರ ರೂಪವಾದ ಭ್ರಮ ಶಾಶ್ವತವಾಗಿ ಅಳಿದುಹೋಗುವುದು ಎಂದರ್ಥ.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ಭಾಗವತ ತಾತ್ಪರ್ಯನಿರ್ಣಯೇ
ಏಕಾದಶಸ್ಕಂಧೇ ಚತುರ್ದಶೋಽಧ್ಯಾಯಃ ॥

॥ ಶ್ರೀಕೃಷ್ಣಾರ್ಪಣಮಸ್ತು ॥

❖❖❖